ಗೊರೂರು
ಗೌರವ ಗ್ರಂಥ



ಹಾಸನ ಜಿಲ್ಲೆಯ ಹೇಮಾವತಿ ತೀರದ ಗೊರೂರು ನಮ್ಮ ನಾಡಿನ ಇತರ ಎಷ್ಟೋ ಊರುಗಳಂತೆ ಒಂದು ಸಾಮಾನ್ಯ ಹಳ್ಳಿ. ಆದರೂ ಅದಕ್ಕೆ ದೊರೆತಿರುವ ಖ್ಯಾತಿ ಇತರ ಊರುಗಳು ಕರುಬು ವಂಥದು. ಈ ಖ್ಯಾತಿಗೆ ಕಾರಣರಾದವರು ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರು. ಒಬ್ಬ ವ್ಯಕ್ತಿಯಿಂದಾಗಿ ಒಂದು ಊರು ಹೀಗೆ ಪ್ರಸಿದ್ಧ ವಾಗಿರುವ ಉದಾಹರಣೆಗಳು ತುಂಬ ವಿರಳ. ಒಬ್ಬ ವೈಗಳಿಂದ ಒಂದು ಮಂಜೇಶ್ವರ; ಒಬ್ಬ ಕಾರಂತರಿಂದ ಒಂದು ಪುತ್ತೂರು. ಹಾಗೆಯೇ ಒಬ್ಬ ರಾಮಸ್ವಾಮಿ ಅಯ್ಯಂಗಾರರಿಂದ ಒಂದು ಗೊರೂರು. ಗೊರೂರು ರಾಮಸ್ವಾಮಿ ಅಯ್ಯಂಗಾರರು, ಗೊರೂರು ಎಂಬ ಸಂಕ್ಷಿಪ್ತನಾಮ ದಿಂದಲೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಪರಿಚಿತರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ-ವಿಸ್ತಾರ ಗಳನ್ನೂ, ವೈವಿಧ್ಯ-ವೈಶಿಷ್ಟ್ಯಗಳನ್ನೂ ತಂದು ಕೊಟ್ಟ ಕೆಲವೇ ಗಣ್ಯ ಲೇಖಕರಲ್ಲಿ ಗೊರೂರರೂ ಒಬ್ಬರು. ನಮ್ಮ ಸಾಹಿತ್ಯಕ್ಕೆ ಅವರು ಸೇರಿಸಿರುವ ಪ್ರಾದೇಶಿಕ ದನಿ ಬಣ್ಣಗಳು, ಸಾಹಿತ್ಯ ಚರಿತ್ರೆ ಯಲ್ಲಿ ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿವೆ. ಒಂದು ಪ್ರಾದೇಶಿಕ ಜೀವನದ ಸುಖದುಃಖ ಗಳನ್ನು ವಾಚಕಕೋಟಿಯ ಅನುಭವವನ್ನಾಗಿ ಸಿದ ನಿಪುಣ ಕಲಾವಿದರು ಗೊರೂರರು. ಹಳ್ಳಿಯ ಜೀವನವನ್ನು ಮೊದಲ ಬಾರಿಗೆ ನಮ್ಮ ಸಾಹಿತ್ಯಕ್ಕೆ ತಂದು ಹೊಸ ಪ್ರಕಾರ ವೊಂದನ್ನು ಸೃಷ್ಟಿಸಿದ ಕೀರ್ತಿಗೆ ಅವರು ಪಾತ್ರ ರಾಗಿದ್ದಾರೆ.


ಬೆಲೆ 30-00

ಹೊದಿಕೆಯ ಚಿತ್ರ :
ಹೇಮಾವತಿಯ ತೀರದಲ್ಲಿ

ಸಿಂಧುವಳ್ಳಿ ಅನಂತಮೂರ್ತಿ, ಹಾ. ಮಾ. ನಾಯಕ, ಜೀಶಂಪ ಮತ್ತು ಜಿ. ಹೆಚ್. ಕೃಷ್ಣ ಮೂರ್ತಿ ಅವರೊಡನೆ ಗೊರೂರರು

ಗೊರೂರು ಗೌರವಗ್ರಂಥ

ವಿ. ಗಾಯತ್ರಿದೇವಿ.
ರಾಷ್ಟ್ರೀಯ ವಿದ್ಯಾಲಯ
ಬೆಂಗಳೂರು
1996.




ಗೊರೂರು ಗೌರವಗ್ರಂಥ

ಡಾ. ಹಾ. ಮಾ. ನಾಯಕ, ಸಂಪಾದಕ

[illegible]

[illegible]



ಗೊರೂರು ಗೌರವಗ್ರಂಥ

ಡಾ. ಹಾ. ಮಾ. ನಾಯಕ, ಸಂಪಾದಕ

ಗೊರೂರು ಗೆಳೆಯರ ಬಳಗದ ಪ್ರಕಟಣೆ

ಜುಲೈ ೪, ೧೯೭೩

Goruru Gauravagrantha—Felicitation Volume presented to Sri Gorur Ramaswamy Iyengar, well-known Kannada author, on the occasion of his 70th birthday (Essays on his personality and literary achievements); Edited by Dr. H. M. Nayak; Published by the friends and admirers of Sri Gorur; First Edition 1973; pp. x + 540. Price Rs. 25 (Calico Rs. 35).

ಮೊದಲನೆಯ ಮುದ್ರಣ : ೧೯೭೩
ಹೊದಿಕೆಯ ಚಿತ್ರ : ಕೆ. ಆರ್. ಸುಂದರರಾಜ್
ಮುಖಚಿತ್ರ : ಕೆ. ಜಿ. ಸೋಮಶೇಖರ್

ಬೆಲೆ : ರೂ. ೨೫ (ಕ್ಯಾಲಿಕೊ : ರೂ. ೩೫)

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಗೊರೂರು
ರಾಮಸ್ವಾಮಿ ಅಯ್ಯಂಗಾರ್
ಅವರಿಗೆ
ಎಪ್ಪತ್ತನೆಯ ಹುಟ್ಟುಹಬ್ಬದ ಕಾಣಿಕೆ

ಪರಿವಿಡಿ

"ಶತಂ ಜೀವ ಶರದೋ ವರ್ಧಮಾನಃ"

ಮೊದಲ ಮಾತು

ಡಾ. ಹಾ. ಮಾ. ನಾಯಕ

ಹಾಸನ ಜಿಲ್ಲೆಯ ಹೇಮಾವತಿ ತೀರದ ಗೊರೂರು ನಮ್ಮ ನಾಡಿನ ಇತರ ಎಷ್ಟೋ ಊರುಗಳಂತೆ ಒಂದು ಸಾಮಾನ್ಯ ಹಳ್ಳಿ. ಆದರೂ ಅದಕ್ಕೆ ದೊರೆತಿರುವ ಖ್ಯಾತಿ ಇತರ ಊರುಗಳು ಕರುಬುವಂಥದು. ಈ ಖ್ಯಾತಿಗೆ ಕಾರಣರಾದವರು ಶ್ರೀ ರಾಮ ಸ್ವಾಮಿ ಅಯ್ಯಂಗಾರ್ ಅವರು. ಒಬ್ಬ ವ್ಯಕ್ತಿಯಿಂದಾಗಿ ಒಂದು ಊರು ಹೀಗೆ ಪ್ರಸಿದ್ಧವಾಗಿರುವ ಉದಾಹರಣೆಗಳು ತುಂಬ ವಿರಳ. ಒಬ್ಬ ಪೈಗಳಿಂದ ಒಂದು ಮಂಜೇಶ್ವರ; ಒಬ್ಬ ಕಾರಂತರಿಂದ ಒಂದು ಪುತ್ತೂರು. ಹಾಗೆಯೇ ಒಬ್ಬ ರಾಮ ಸ್ವಾಮಿ ಅಯ್ಯಂಗಾರರಿಂದ ಒಂದು ಗೊರೂರು. ಗೊರೂರು ರಾಮಸ್ವಾಮಿ ಅಯ್ಯಂ ಗಾರರು, ಗೊರೂರು ಎಂಬ ಸಂಕ್ಷಿಪ್ತನಾಮದಿಂದಲೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಪರಿಚಿತರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ-ವಿಸ್ತಾರಗಳನ್ನೂ, ವೈವಿಧ್ಯ-ವೈಶಿಷ್ಟ್ಯಗಳನ್ನೂ ತಂದುಕೊಟ್ಟ ಕೆಲವೇ ಗಣ್ಯ ಲೇಖಕರಲ್ಲಿ ಗೊರೂರರೂ ಒಬ್ಬರು. ನಮ್ಮ ಸಾಹಿತ್ಯಕ್ಕೆ ಅವರು ಸೇರಿಸಿರುವ ಪ್ರಾದೇಶಿಕ ದನಿ ಬಣ್ಣಗಳು, ಸಾಹಿತ್ಯ ಚರಿತ್ರೆಯಲ್ಲಿ ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿವೆ. ಒಂದು ಪ್ರಾದೇಶಿಕ ಜೀವನದ ಸುಖದುಃಖಗಳನ್ನು ವಾಚಕಕೋಟಿಯ ಅನುಭವವನ್ನಾಗಿಸಿದ ನಿಪುಣ ಕಲಾವಿದರು ಗೊರೂರರು. ಹಳ್ಳಿಯ ಜೀವನವನ್ನು ಮೊದಲ ಬಾರಿಗೆ ನಮ್ಮ ಸಾಹಿತ್ಯಕ್ಕೆ ತಂದು ಹೊಸ ಪ್ರಕಾರವೊಂದನ್ನು ಸೃಷ್ಟಿಸಿದ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ಕಥೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ವಿಚಾರಸಾಹಿತ್ಯ, ಅನುವಾದ ಮೊದಲಾದ ನಾನಾ ಪ್ರಕಾರಗಳಲ್ಲಿ ಅವರು ಮಹತ್ವಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಆಕರ್ಷಕವಾದ ಹಾಸ್ಯಮುಖವನ್ನು ಜೋಡಿಸಿದ್ದು ಗೊರೂರರ ಒಂದು ಅದ್ಭುತ ಸಾಧನೆ. 'ಮುಟ್ಟಿದರೆ ಮುನಿ'ಯುವ ನಮ್ಮ ಸಾಮಾಜಿಕ ಪರಿಸರ

ದಲ್ಲಿ ಗೊರೂರರು ಎಲ್ಲರನ್ನೂ ಕಂಡು ನಕ್ಕಿದ್ದಾರೆ. ಎಲ್ಲರೂ ಒಬ್ಬರನ್ನೊಬ್ಬರು ನೋಡಿಕೊಂಡು ನಗುವಂತೆ ಮಾಡಿದ್ದಾರೆ. ತಮ್ಮನ್ನೇ ಸಮಾಜವನ್ನು ಗೇಲಿಮಾಡಲು ಗೊರೂರರು ಹಿಂಜರಿಯಲಿಲ್ಲ. ತಿಳಿಹಾಸ್ಯಕ್ಕೆ ನಗುವಿಗೆ ಗೇಲಿಯೊಂದೇ ಕಾರಣವಲ್ಲ: ಅವರ ಹಿಂದೆ ಯಾವಾಗಲೂ ಸಹಾನುಭೂತಿ, ಮರುಕ, ಅನುಕಂಪೆಗಳಿರುತ್ತವೆ. ಅವರು ಸೃಷ್ಟಿಸಿರುವ ರಸಿಕ ಪ್ರಪಂಚದಲ್ಲಿನ ವ್ಯಕ್ತಿಗಳು ಒಗಟಾಗಿರುವವರು: ಹೆಂಗಸರು, ಹಾರವರು, ಜಿಪ್ಸರು, ಸಾಬರು, ದಾಸರು, ವಿದ್ಯಾವಂತರು, ಅನಕ್ಷರಸ್ಥರು, ಉದಾರಿಗಳು, ಲೋಭಿಗಳು. ಎಷ್ಟೊಂದು ಜನ. ಎಷ್ಟೊಂದು ಥರ. ಇವರೆಲ್ಲರನ್ನೂ ನಾವು ದಿನವೂ ನೋಡುತ್ತೇವೆ. ಪ್ರತಿಯೊಂದು ಊರಿನಲ್ಲೂ ಇಂಥವರು ಗುಂಪು ಗುಂಪಾಗಿದ್ದಾರೆ. ಆದರೆ ಅವರನ್ನು ನಾವು ಗೊರೂರರ ಕಣ್ಣಿಂದ ಕಾಣುವುದು ಸಾಧ್ಯವಾಗದಿರುವುದರಿಂದ ಅವರೆಲ್ಲ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತಾರೆ. 'ಗೊರೂರುತನ' ಒಂದು ಮಂತ್ರಶಕ್ತಿ. ಅದು ಸಾಮಾನ್ಯರನ್ನೂ ಅಸಾಮಾನ್ಯರನ್ನಾಗಿಸುತ್ತದೆ.

ಗೊರೂರರ ಶಕ್ತಿ ಸಾಮರ್ಥ್ಯಗಳು ಕೇವಲ ಸಾಹಿತ್ಯಸೃಷ್ಟಿಗೆ ಮೀಸಲಾದವಲ್ಲ. ಅವರು ಸಾಮಾಜಿಕ ಕ್ಷೇತ್ರದಲ್ಲಿ, ರಾಜಕೀಯ ರಂಗದಲ್ಲಿ ಸಾಕಷ್ಟು ಓಡಿಯಾಡಿದ್ದಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ; ಅಪಾರ ತ್ಯಾಗ ಮಾಡಿದ್ದಾರೆ. ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ರಾಜ್ಯದ ವಿಧಾನ ಪರಿಷತ್ತುಗಳಲ್ಲಿ ಅನೇಕ ವರ್ಷ ಸದಸ್ಯರಾಗಿದ್ದು ಅಲ್ಲಿನ ಚರ್ಚೆಗಳಿಗೆ ರಚನಾತ್ಮಕತೆಯನ್ನೂ, ಜೀವಕಳೆಯನ್ನೂ ನೀಡಿದ್ದಾರೆ. ವಯಸ್ಕರ ಶಿಕ್ಷಣ, ಗ್ರಾಮ ಸುಧಾರಣೆ, ಮದ್ಯಪಾನ ನಿರೋಧ, ಖಾದಿ ಪ್ರಚಾರ ಮೊದಲಾದ ವಿಚಾರಗಳಲ್ಲಿ ಅವರಿಗೆ ವಿಶೇಷವಾದ ಆಸಕ್ತಿ. ಈ ಕ್ಷೇತ್ರಗಳಲ್ಲಿ ಅವರು ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಎಳವೆಯಲ್ಲಿಯೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ, ಅವರ ಸನ್ನಿಧಿಯಲ್ಲಿ ಕೆಲ ಸಮಯವನ್ನು ಕಳೆದ ಗೊರೂರರು ಅಪ್ಪಟ ಗಾಂಧೀವಾದಿಯಾಗಿದ್ದಾರೆ. ಅವರಂಥ ಗಾಂಧೀವಾದಿಗಳು ಇಂದು ರಾಷ್ಟ್ರದಲ್ಲಿ ಅನೇಕರಿಲ್ಲ. ಗಾಂಧೀಜಿ ಗೊರೂರರಿಗೆ ಮುಖವಾಡವಾಗಲಿಲ್ಲ; ಗಾಂಧೀತತ್ವ ಗೊರೂರರ ಜೀವನದ ಉಸಿರಾಗಿದೆ.

ವ್ಯಕ್ತಿಯಾಗಿ ಗೊರೂರರು ಅದ್ವಿತೀಯರು. ಒಮ್ಮೆ ಅವರನ್ನು ಕಂಡರೆ ಮರೆಯುವುದು ಸಾಧ್ಯವಿಲ್ಲ. ಹಸುಳೆ ಹೃದಯದ ಈ ಸಾತ್ವಿಕರು ಈ ಲೋಕದ ಸಣ್ಣತನಗಳಿಂದ ದೂರಾದವರು. ಕರುಣೆ ಔದಾರ್ಯ ಹೃದಯವೈಶಾಲ್ಯ ಪರಿಶುದ್ಧ ಅಂತಃಕರಣಗಳು ಗೊರೂರರನ್ನು ಎತ್ತರದ ವ್ಯಕ್ತಿಯನ್ನಾಗಿಸಿವೆ.

ಇಂಥ ಬಹುಮುಖ ಪ್ರತಿಭೆಯ, ಉನ್ನತ ವ್ಯಕ್ತಿತ್ವದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಅವರ ಎಪ್ಪತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ನಾಡವರ ಕೃತಜ್ಞತೆಯ ಕುರುಹಾಗಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ, ಸಂಭಾವನಾ ಗ್ರಂಥವನ್ನು ಒಪ್ಪಿಸಬೇಕು ಎಂಬ ಕೆಲವು ಮಿತ್ರರ ಅಪೇಕ್ಷೆಯ ಫಲವಾಗಿ ಈ 'ಗೊರೂರು ಗೌರವಗ್ರಂಥ' ಪ್ರಕಟವಾಗುತ್ತಿದೆ. ಗೊರೂರರ ಜೀವನ, ಸಾಹಿತ್ಯ

ಮತ್ತು ವ್ಯಕ್ತಿತ್ವಗಳನ್ನು ಪರಿಚಯ ಮಾಡಿಕೊಡುವುದು ಈ ಗ್ರಂಥದ ಮುಖ್ಯ ಉದ್ದೇಶ. ಇದರಲ್ಲಿ ಮೂರು ಭಾಗಗಳಿವೆ: ಮೊದಲನೆಯ ಭಾಗ ಗೊರೂರರ ಜೀವನ-ಸಾಹಿತ್ಯಗಳನ್ನು ಕುರಿತದ್ದು. ಇಲ್ಲಿನ ಮೊದಲ ಲೇಖನ ಅವರ ಆತ್ಮಕಥೆಯ ಹೊರ ರೇಖೆಗಳನ್ನು ಒಳಗೊಂಡಿದೆ. ಅದು ಅವರ ಹೆಸರಿನಲ್ಲಿ ಪ್ರಕಟವಾಗಿದ್ದರೂ, ಅವರು ಕ್ರಮವಾಗಿ ಸಿದ್ಧಪಡಿಸಿದ ಲೇಖನವಲ್ಲ; ಅವರ ನೆನಪಿನ ಟಿಪ್ಪಣಿಗಳ ಆಧಾರದ ಮೇಲಿನ ನಿರೂಪಣೆಯಾಗಿದೆ. ಆದರೂ ಅದು ಗೊರೂರರ ಜೀವನವನ್ನು ಸ್ಥೂಲವಾಗಿಯಾದರೂ ಚಿತ್ರಿಸುತ್ತದೆಂದು ನಾವು ನಂಬಿದ್ದೇವೆ. ಮಿಕ್ಕ ಲೇಖನಗಳು ಗೊರೂರರ ಸಾಹಿತ್ಯಕೃತಿಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುತ್ತವೆ. ಒಟ್ಟಿನಲ್ಲಿ ಈ ಲೇಖನಗಳು ಅವರ ಸಾಹಿತ್ಯದ ಹರವನ್ನು ಗುರುತಿಸುತ್ತವೆ. ಎರಡನೆಯ ಭಾಗದಲ್ಲಿ, ಗೊರೂರರನ್ನು ಬಲ್ಲ ಹಿರಿಯರು ಮಿತ್ರರು ಅವರ ವ್ಯಕ್ತಿತ್ವವನ್ನು ಕುರಿತು ಬರೆದಿದ್ದಾರೆ; ಶುಭವನ್ನು ಕೋರಿದ್ದಾರೆ. ಈ ಬರಹಗಳಲ್ಲಿ ಗೊರೂರರ ವ್ಯಕ್ತಿತ್ವದ, ಬರವಣಿಗೆಯ ವಿವಿಧ ಮುಖಗಳು ಆತ್ಮೀಯವಾಗಿ ಪರಿಚಯವಾಗುತ್ತವೆ. ಮೂರನೆಯ ಭಾಗದಲ್ಲಿ, ಗೊರೂರರ ಜೀವನದ ಕೆಲವು ಮುಖ್ಯ ವರ್ಷಗಳ ಪಟ್ಟಿಯಿದೆ; ಅವರ ಗ್ರಂಥಗಳ ಪಟ್ಟಿಯಿದೆ. ಈ ಕೃತಿಗಳ ಪಟ್ಟಿಯಲ್ಲಿ ಅಲ್ಲಲ್ಲಿ ಪ್ರಕಟವಾದ ಗೊರೂರರ ಲೇಖನಗಳನ್ನೂ ಸೇರಿಸಬೇಕೆಂದು ಉದ್ದೇಶಿಸಲಾಗಿತ್ತು. ಆದರೆ ಅವುಗಳನ್ನು ಪತ್ತೆಮಾಡುವುದು ಸಾಧ್ಯವಾಗದಿದ್ದುದರಿಂದ ಕೇವಲ ಪುಸ್ತಕಗಳನ್ನು ಸೇರಿಸಿದೆ. ಪುಸ್ತಕಗಳ ಪಟ್ಟಿಯಾದರೂ ಸಂಪೂರ್ಣವಾದುದಲ್ಲ. ಸ್ವತಃ ಗೊರೂರರಿಗೇ ಅವರು ಬರೆದ ಪುಸ್ತಕಗಳ ನೆನಪಿಲ್ಲ; ಅವುಗಳ ಪ್ರತಿಗಳೂ ಅವರ ಬಳಿ ಇಲ್ಲ! ಉದಾಹರಣೆಗೆ, ಅವರ ಮೊದಲನೆಯ ಪುಸ್ತಕ 'ಭಾರತದ ಸ್ವಾತಂತ್ರ್ಯ' ಎಂಬುದು. ಇದನ್ನು ಮತ್ತು 'ಸಾಹಿತ್ಯಾನುಭವ', 'ಸರ್ವಜ್ಞನು ತೋರಿದ ದಾರಿ' ಎಂಬೆರಡು ಪುಸ್ತಕಗಳನ್ನು ನೋಡುವುದು ಕೂಡ ನಮಗೆ ಸಾಧ್ಯವಾಗಲಿಲ್ಲ. ತಾವು ಕೆಂಗೇರಿಯ ಗುರುಕುಲದಲ್ಲಿದ್ದಾಗ ನಾನಾ ವಿಷಯಗಳನ್ನು ಕುರಿತು ೧೬–೨೦ ಪುಟಗಳ ಸುಮಾರು ೪೦–೫೦ ಪುಸ್ತಿಕೆಗಳನ್ನು ಪ್ರಕಟಿಸಿದ್ದಾಗಿ ಗೊರೂರರು ಹೇಳುತ್ತಾರೆ. ಅವುಗಳಲ್ಲಿ ಒಂದೂ ನಮ್ಮ ಕೈಗೆ ಸಿಕ್ಕಲಿಲ್ಲ. ಈ ಪುಸ್ತಕಗಳ ಬಗೆಗೆ ಯಾವ ವಿವರವನ್ನೂ ಕೊಡುವುದು ಸಾಧ್ಯವಾಗದೆ ಹೋದುದಕ್ಕೆ ನಾವು ವಿಷಾದಿಸುತ್ತೇವೆ.

ಪ್ರಾಚೀನರ ಕೃತಿಗಳಂತೆ ಸಮಕಾಲೀನರ ಕೃತಿಗಳೂ ಕಾಲಗರ್ಭದಲ್ಲಿ ಅಡಗಿಹೋಗುತ್ತಿರುವುದು ಅತ್ಯಂತ ದೊಡ್ಡ ಸಾಂಸ್ಕೃತಿಕ ನಷ್ಟ. ಅಜ್ಞಾತ ಕೃತಿಗಳನ್ನು ಒಂದುಕಡೆಯಾದರೂ ಸಂಗ್ರಹಿಸಿ ಸಂರಕ್ಷಿಸುವ ಕೆಲಸ ಎಷ್ಟು ತ್ವರೆಯಿಂದ ನಡೆದರೆ ಅಷ್ಟೂ ಒಳ್ಳೆಯದು. ಗೊರೂರರ ಕೃತಿಗಳನ್ನು ಹುಡುಕುವಲ್ಲಿ ನಮಗಾದ ಅನುಭವ ಈ ಕೆಲಸದ ಜರೂರಿಯ ಅಗತ್ಯವನ್ನು ತೋರಿಸುತ್ತದೆ.

ಗೊರೂರರು ಬರೆದು ಮುಗಿಸಿರುವ, ಇಷ್ಟರಲ್ಲೇ ಪ್ರಕಟವಾಗಲಿರುವ ಕೃತಿಗಳ ವಿಷಯವನ್ನೂ ಈ ಸಂಪುಟದಲ್ಲಿ ಪ್ರಸ್ತಾಪಿಸುವುದು ಸಾಧ್ಯವಾಗಿಲ್ಲ. ಜನಪದ ಸಾಹಿತ್ಯವನ್ನು ಕುರಿತ ಅವರ ಮೂರು ವಿಶೇಷ ಉಪನ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯ

ಪ್ರಕಟಿಸುತ್ತಿದೆ; ಗೊರೂರಿನ ದೇವಸ್ಥಾನಗಳನ್ನು ಕುರಿತು ಅವರು ಬರೆದ ಪುಸ್ತಕ ಅಚ್ಚಾಗುತ್ತಿದೆ; ತಿರುಮಲಾರ್ಯನನ್ನು ಕುರಿತ ಹೊತ್ತಗೆ ಬಿಡುಗಡೆಯ ಹಂತದಲ್ಲಿದೆ; ಸಾಹಿತ್ಯ ಅಕಾಡೆಮಿಗಾಗಿ 'ಕಥಾಸಂಕಲನ'ದ ಹಸ್ತಪ್ರತಿ ಸಿದ್ಧವಾಗಿದೆ. ಹೀಗೆ ಗೊರೂರರ ಬರವಣಿಗೆ ಸಾಗಿದೆ. ಈ ಸಮೃದ್ಧಿಯನ್ನೆಲ್ಲ ಒಂದು ಕಡೆ, ಒಂದೇ ಸಲಕ್ಕೆ ತರುವುದು ತುಂಬ ಕಷ್ಟ. ಆದರೂ 'ಗೊರೂರು ಗೌರವಗ್ರಂಥ' ಹೊಸಗನ್ನಡ ಸಾಹಿತ್ಯ ಚರಿತ್ರೆಗೆ ಒಂದು ಗಮನಾರ್ಹವಾದ ಕೊಡುಗೆಯಾಗುತ್ತದೆಂದು ನಾವು ಭಾವಿಸಿದ್ದೇವೆ. ಈಚಿನ ವರ್ಷಗಳಲ್ಲಿ ನಮ್ಮ ಲೇಖಕರನ್ನು ಕುರಿತು ಈ ಬಗೆಯ ಗ್ರಂಥಗಳು ಹೆಚ್ಚು ಹೆಚ್ಚಾಗಿ ಪ್ರಕಟವಾಗುತ್ತಿರುವುದು ಸಂತೋಷದ, ಹೆಮ್ಮೆಯ ವಿಚಾರ.

ನಾಡಿನ ಗೌರವ ಕೃತಜ್ಞತೆಗಳನ್ನು ಗೊರೂರರಿಗೆ ಒಪ್ಪಿಸುತ್ತಿರುವ ಈ ಬಗೆಯ ಗ್ರಂಥದ ಪ್ರಕಟಣೆಯಲ್ಲಿ ಅನೇಕರು ನನಗೆ ಸಹಾಯಮಾಡಿದ್ದಾರೆ. ಅವರೆಲ್ಲರೂ ಗೊರೂರರ ವಿಷಯದಲ್ಲಿ ಪ್ರೀತಿ ಅಭಿಮಾನಗಳನ್ನು ಉಳ್ಳವರು. ಅವರೆಲ್ಲರ ನೆರವಿನಿಂದ ನನ್ನ ಈ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಗೊರೂರರು ನಾನು ಕೊಟ್ಟ ತೊಂದರೆಗಳನ್ನೆಲ್ಲ ಸಹಿಸಿಕೊಂಡು ನನಗೆ ಬೇಕಾದ ವಿವರಗಳನ್ನು, ಪುಸ್ತಕಗಳನ್ನು, ದಾಖಲೆಗಳನ್ನು, ಚಿತ್ರಗಳನ್ನು ಒದಗಿಸಿಕೊಟ್ಟಿದ್ದಾರೆ. ನನ್ನ ಪ್ರಾರ್ಥನೆಯನ್ನು ಮನ್ನಿಸಿ ಹಿರಿಯರು, ಮಿತ್ರರು ಲೇಖನಗಳನ್ನು ಸಕಾಲಕ್ಕೆ ಬರೆದುಕೊಟ್ಟು ಸಹಕರಿಸಿದ್ದಾರೆ. ಈ ಸಂದರ್ಭದಲ್ಲಿನ ಅನುಭವಗಳು ನನಗೆ ಜೀವನದ ಕೆಲವು ಹೊಸ ಪಾಠಗಳನ್ನು ಕಲಿಸಿವೆ; ಲೇಖಕರು ಲೇಖಕರಲ್ಲಿ ತೋರುವ ವಿಶ್ವಾಸದ ಬಗೆಗಳನ್ನು ಪರಿಚಯಿಸಿಕೊಟ್ಟಿವೆ. ಒಂದು ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಿದರೆ ತಪ್ಪಾಗಲಾರದೆಂದು ಭಾವಿಸಿದ್ದೇನೆ. ಗೊರೂರು ಗೌರವಗ್ರಂಥಕ್ಕೆ ಲೇಖನ ಕೇಳಿ ನಾನು ಕಾಗದ ಬರೆದಾಗ ಹಿರಿಯರಾದ ಡಾ. ಡಿ. ವಿ. ಗುಂಡಪ್ಪನವರ ಆರೋಗ್ಯ ಏನೂ ಸರಿಯಿರಲಿಲ್ಲ. ಅವರಿಗೆ ಲೇಖನ ಬರೆದು ಸಕಾಲದಲ್ಲಿ ಕಳುಹಿಸುವುದು ಬಹುಶಃ ಸಾಧ್ಯವಾಗಲಾರದೆಂದು ನಾನು ನಿರಾಶೆಗೊಂಡಿದ್ದೆ. ಆದರೆ ಅವರು ಹೊತ್ತಿಗೆ ಸರಿಯಾಗಿ ಲೇಖನ ಬರೆಸಿ ತಮ್ಮ ರುಜುಹಾಕಿ ಕಳಿಸಿಕೊಟ್ಟರು. ಅದರೊಂದಿಗೆ ಅವರ ಪರವಾಗಿ ಶ್ರೀ ಡಿ. ಆರ್. ವೆಂಕಟರಮಣನ್ ಎನ್ನುವವರು ಬರೆದ ಕಾಗದದಲ್ಲಿ (೨೭–೪–೭೩) ಹೀಗೆ ಬರೆದಿದ್ದರು :

> ಮಾನ್ಯ ಶ್ರೀಮಾನ್ ಹಾ. ಮಾ. ನಾಯಕ್ ಅವರಲ್ಲಿ ನಮಸ್ಕಾರಪೂರ್ವಕ ವಿಜ್ಞಾಪನೆ.
>
> ತಾವು ಶ್ರೀ ಡಿ. ವಿ. ಜಿ. ಅವರಿಗೆ ಶ್ರೀ ಗೊರೂರು ಗೌರವಗ್ರಂಥದ ವಿಷಯವಾಗಿ ಬರೆದ ಕಾಗದ ಅವರಿಗೆ ತಲುಪಿದೆ. ಅವರು ದೇಹಾಲಸ್ಯದ ಕಾರಣದಿಂದ ಆಸ್ಪತ್ರೆಯಲ್ಲಿ ಹದಿನೈದು ದಿನಗಳಿದ್ದು ಮನೆಗೆ ಹಿಂತಿರುಗಿ ಬಂದು ಹತ್ತು ದಿನಗಳಾದವು. ಅವರು ಇನ್ನೂ ನಿಶ್ಶಕ್ತರಾಗಿ ಹೆಚ್ಚು ಬರೆಯಲೂ ಓದಲೂ ಆಗದಿರುವುದರಿಂದ ಅವರ ಪರವಾಗಿ ನಾನು ಇದನ್ನು ಬರೆಯುತ್ತಿದ್ದೇನೆ.

ಶ್ರೀ ಡಿ. ವಿ. ಜಿ. ಅವರಿಗೆ ತಮ್ಮ ಕಾಗದ ಬಂದು ಸೇರಿದಾಗ, ಅದನ್ನು ಓದಿಕೊಂಡು, ಅದರ ಮೇಲೆ ಹೀಗೆ ಬರೆದು ನನಗೆ ಕಳುಹಿದರು :

"How can I say 'No' to a request from Dr. H. M. N.? I have great regard for him. I will say a few words as they occur to me."

ಈಗ್ಗೆ ಎರಡು ದಿನಗಳ ಹಿಂದೆ ಅವರು ಗೊರೂರು ಗೌರವಗ್ರಂಥಕ್ಕಾಗಿ ಹೇಳಿದ ಲೇಖನವನ್ನು ಬರೆದು, ಅವರ ಸಹಿ ಪಡೆದು, ಇದರೊಡನೆ ಇರಿಸಿದ್ದೇನೆ. ದಯವಿಟ್ಟು ಸ್ವೀಕರಿಸಬೇಕು.

ಈ ಗೌರವಗ್ರಂಥ ಸಮರ್ಪಣಾ ಸಮಯದಲ್ಲಿ ಗೊರೂರರಲ್ಲಿರುವ ಪ್ರೀತ್ಯಭಿಮಾನಗಳನ್ನು ವ್ಯಕ್ತಪಡಿಸಲು ಅವಕಾಶಕೊಟ್ಟ ತಮಗೆ, ತಮ್ಮ ವಿಶ್ವಾಸಕ್ಕೆ ಶ್ರೀ ಡಿ.ವಿ.ಜಿ. ಅವರು ಕೃತಜ್ಞತೆಗಳನ್ನೂ ವಂದನೆಗಳನ್ನೂ ತಿಳಿಸ ಹೇಳಿದ್ದಾರೆ.

ಇಂತು ತಮ್ಮ ವಿಧೇಯ
ಡಿ. ಆರ್. ವೆಂಕಟರಮಣನ್

ಇದು ದೊಡ್ಡವರ ದಾರಿ. ಸಣ್ಣವರ ದಾರಿಗೆ ಉದಾಹರಣೆಗಳು ಬೇಡ.

ಇಂಥ ಕೆಲಸಗಳಲ್ಲಿ ಯಾವಾಗಲೂ ನಮಗೆ ಮಾರ್ಗದರ್ಶನ ನೀಡುವ ಪ್ರೊ. ದೇ. ಜವರೇಗೌಡರು ಈಗಲೂ ಉತ್ಸಾಹವನ್ನು ತುಂಬಿದ್ದಾರೆ. ಗೊರೂರರಂಥ ಹಿರಿಯರನ್ನು ಗೌರವಿಸಬೇಕಾದ ರೀತಿಯನ್ನು ಹೇಳಿಕೊಟ್ಟಿದ್ದಾರೆ. ಗೊರೂರರ ಅಭಿಮಾನಿಗಳ ಮಿತ್ರರ ಪರವಾಗಿ ಈ ಗ್ರಂಥವನ್ನು ಪ್ರಕಟಿಸಲು ಪ್ರೊ. ಎಚ್. ಎಮ್. ಶಂಕರನಾರಾಯಣ ರಾಯರು ಮುಂದೆ ಬಂದಿದ್ದಾರೆ. ಅವರು ಇದನ್ನು ವ್ಯವಹಾರವನ್ನಾಗಿ ಭಾವಿಸದೆ, ಸ್ನೇಹಕಾರ್ಯವನ್ನಾಗಿ, ಹಿರಿಯರ ಪೂಜೆಯನ್ನಾಗಿ ಎಣಿಸಿದ್ದರಿಂದ ಈ ಗ್ರಂಥ ಇಷ್ಟು ಸುಂದರವಾಗಿ ಇಷ್ಟು ದೊಡ್ಡದಾಗಿ ಪ್ರಕಟವಾಗುವುದು ಸಾಧ್ಯವಾಯಿತು. ಪುಸ್ತಕ ಎಷ್ಟೇ ದೊಡ್ಡದಿರಲಿ ಬೇಕೆಂದ ಹೊತ್ತಿಗೆ ಮುಗಿಸಿಕೊಡುವ ಖ್ಯಾತಿಯ ಮುದ್ರಕರು 'ರಾಮ-ಕೃಷ್ಣ'ರು. ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್ ರಾಮರಾವ್ ಮತ್ತು ಅವರ ತಮ್ಮ ಶ್ರೀ ಜಿ. ಎಚ್. ಕೃಷ್ಣಮೂರ್ತಿ ಅವರ ಕಾರ್ಯದಕ್ಷತೆ ಯಾವ ಬಗೆಯದೆಂದರೆ ಈ ಗ್ರಂಥವನ್ನು ಒಂದೇ ತಿಂಗಳಿನಲ್ಲಿ ಸಿದ್ಧಪಡಿಸಿದ್ದಾರೆ. ನನ್ನ ಸಹೋದ್ಯೋಗಿಗಳಾದ ಪ್ರಧಾನ್ ಗುರುದತ್ತ, ಸಿ.ಪಿ.ಕೆ., ಡಾ. ಜೀಶಂಪ, ಪಿ. ಆರ್. ತಿಪ್ಪೇಸ್ವಾಮಿ ಅವರು ನಾನಾವಿಧದಲ್ಲಿ ಸಹಕರಿಸಿದ್ದಾರೆ. ಗುರುದತ್ತರಂತೂ ಈ ಪುಸ್ತಕವನ್ನು ಮೊದಲಿನಿಂದ ಕೊನೆಯತನಕ ನೋಡಿಕೊಂಡಿದ್ದಾರೆ. ತುಂಬ ಎಚ್ಚರಿಕೆಯಿಂದ ಕರಡುಗಳನ್ನು ತಿದ್ದಿದ್ದಾರೆ; ಲೇಖನಗಳಿಗೆ ಶಿಷ್ಟತೆಯನ್ನೊದಗಿಸಿದ್ದಾರೆ; ಲೇಖನಗಳಲ್ಲಿ ಉದ್ಧರಿತ ಭಾಗಗಳಿಗೆ ಮೂಲಗಳನ್ನು ಹುಡುಕಿ


ಹಾಕಿದ್ದಾರೆ. ಈ ಪುಸ್ತಕದ ಸಿದ್ಧತೆಯಲ್ಲಿ ಅವರು ತಮ್ಮ ಶಕ್ತಿ ಸಮಯಗಳ ಬಹು ಭಾಗವನ್ನು ವಿನಿಯೋಗಿಸಿದ್ದಾರೆ. ದಕ್ಷರಾದ ಇಂಥ ಮಿತ್ರರ ಜೊತೆಯಲ್ಲಿ ಕೆಲಸ ಮಾಡುವುದು ಯಾರಿಗೂ ಸಂತೋಷದ ಹೆಮ್ಮೆಯ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆದ ಶ್ರೀ ಡಿ. ವಿ. ಅರಸ್ ಅವರು ಸ್ನೇಹ ಹಸ್ತವನ್ನು ಚಾಚಿ ಗೊರೂರು ಸನ್ಮಾನ ಸಮಾರಂಭದ ವ್ಯವಸ್ಥೆಯಲ್ಲಿ ನೆರವಾಗಿದ್ದಾರೆ. ಈ ಎಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳು ಸಲ್ಲುತ್ತವೆ.

‘ಗೊರೂರು ಗೌರವಗ್ರಂಥ’ದ ಮಾರಾಟದಿಂದ ಬರುವ ಲಾಭವನ್ನೆಲ್ಲ ಗೊರೂರರ ಹೆಸರಿನಲ್ಲಿ ಅವರಿಗೆ ಪ್ರಿಯವಾದ ವಿಷಯವೊಂದರ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲು ಒಂದು ದತ್ತಿಯನ್ನು ಸ್ಥಾಪಿಸುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಲು ನಿರ್ಧರಿಸಲಾಗಿದೆ. ಇಂಥದೊಂದು ಅವಕಾಶ ಕಲ್ಪಿಸಿದ ಲೇಖಕ ಮಿತ್ರರಿಗೆಲ್ಲ ನಮ್ಮ ವಂದನೆಗಳು ಸಲ್ಲುತ್ತವೆ.

ಗೊರೂರರ ಎಪ್ಪತ್ತನೆಯ ಜನ್ಮದಿನವಾದ ಇಂದು ಈ ಪುಸ್ತಕ ಪ್ರಕಟವಾಗುತ್ತಿರುವುದು ನಮಗೆ ತುಂಬ ಸಂತೋಷವನ್ನುಂಟುಮಾಡಿದೆ. ಇದರೊಂದಿಗೆ ನಾಡಿನ ಕೃತಜ್ಞತೆ ಗೊರೂರರಿಗೆ ಸಲ್ಲುತ್ತಿದೆ; ನಾಡ ಜನರು ಅವರಿಗೆ ಶುಭಕೋರುತ್ತಾರೆ.

‘ಗೋಧೂಳಿ’, ಜಯಲಕ್ಷ್ಮೀಪುರಂ
ಮೈಸೂರು : ಜುಲೈ ೪, ೧೯೭೪

ಜೀವನ-ಸಾಹಿತ್ಯ



ಎಪ್ಪತ್ತರ ಉತ್ಸಾಹ : ಸಮಾರಂಭವೊಂದರಲ್ಲಿ ಗೊರೂರರು.



ಕಲಾವಿದ [illegible] ಚಿತ್ರಿಸಿದ [illegible] ಮನೆ



ಗೊರೂರು ದಂಪತಿ



ಮೂರು ತಲೆಮಾರುಗಳು : ಗೊರೂರು ದಂಪತಿ ಮಗ ಸೊಸೆ ಮೊಮ್ಮಕ್ಕಳು

ಹಿನ್ನೋಟ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಾನು ಹುಟ್ಟಿದ್ದು ೧೯೦೪ನೇ ಇಸವಿಯಲ್ಲಿ. ಆ ವೇಳೆಗೆ ನಮ್ಮ ತಂದೆಯವರಿಗೆ ಮೊದಲು ಒಬ್ಬಳು ಹೆಣ್ಣು, ಅನಂತರ ಒಂದು ಗಂಡು, ಅನಂತರ ಮೂರು ಹೆಣ್ಣು ಮಕ್ಕಳಾಗಿದ್ದರು. ಹೀಗೆ ಹೆಣ್ಣುಗಳು ಹೆಚ್ಚಾಗಿದ್ದ ಮನೆಯಲ್ಲಿ ನಾನು ಹುಟ್ಟಿದುದರಿಂದ ನನ್ನ ಮೇಲೆ ಸ್ವಲ್ಪ ಪ್ರೀತಿ ಹೆಚ್ಚಾಗಿತ್ತೆಂದು ನನ್ನ ಅತ್ಯಂತ ಬಾಲ್ಯದ ನೆನಪು. ಆಗ ನಮ್ಮ ಅಜ್ಜಿ (ನಮ್ಮ ತಂದೆಯವರ ದತ್ತುತಾಯಿ) ಇನ್ನೂ ಇದ್ದರು. ನನ್ನ ಬಾಲ್ಯದ ನೆನಪುಗಳಲ್ಲಿ ನಮ್ಮ ಅಜ್ಜಿ, ನಮ್ಮ ತಾಯಿಗೆ "ರಾಮುನಿಗೆ ಹೊಟ್ಟೆ ದೊಡ್ಡದು. ಅವನಿಗೆ ಸ್ವಲ್ಪ ಮಂದವಾಗಿ ದೋಸೆ ಹುಯಿದುಕೊಡು" ಎಂದು ಹೇಳುತ್ತಿದ್ದುದು ಚೆನ್ನಾಗಿ ಜ್ಞಾಪಕ.

ಆಗ ನಮ್ಮೂರಿನಲ್ಲಿ ಕನ್ನಡ ಸ್ಕೂಲು ಮಾತ್ರ ಇತ್ತು. ಆಗ ಬಾಲ್ಯದಲ್ಲಿಯೇ ಮನೆಯಲ್ಲಿ, ಸರಸ್ವತಿ ಪೂಜೆಮಾಡಿ, ಮರಳಿನ ಮೇಲೆ ಅ ಆ ಇ ಈ ಐವತ್ತೆರಡು ಅಕ್ಷರಗಳನ್ನೂ ತಿದ್ದಿಸುತ್ತಿದ್ದರು. ಚೆನ್ನಾಗಿ ಅಕ್ಷರ ಬರುವವರೆಗೆ ಬಿಡುತ್ತಿರಲಿಲ್ಲ. ನಮ್ಮ ತಂದೆಯವರು ಒಳ್ಳೆ ವೈದಿಕರು, ಸಂಸ್ಕೃತ ವಿದ್ವಾಂಸರು. ನಮ್ಮ ಪ್ರಾಂತಕ್ಕೆಲ್ಲ (ಸುತ್ತಮುತ್ತಲ ಅನೇಕ ಹಳ್ಳಿಗಳು) ಅವರೇ ಪುರೋಹಿತರು. ನಮ್ಮ ಮನೆಯಲ್ಲಿಯೇ ನಮ್ಮ ತಂದೆ ನನಗೂ, ನಿತ್ಯ ಪುರಾಣವನ್ನು ಹೇಳುವುದನ್ನು ಕೇಳಲು ಬರುತ್ತಿದ್ದ ರೈತನ ಮಗ ರಂಗೇಗೌಡನಿಗೂ ಒಟ್ಟಿಗೇ ಅಕ್ಷರಾಭ್ಯಾಸ ಮಾಡಿಸಿದರು. ಸರಿಯಾಗಿ ತಿದ್ದದಿದ್ದರೆ (ನಮ್ಮ ತಂದೆಯವರಿಂದ) ಏಟೂ ಬೀಳುತ್ತಿದ್ದಿತು. ಏಟು ತಿಂದು ನಮ್ಮ ಕೈ ಬೆರಳ ಮೇಲೆ ಕೊಪ್ಪಳ ಎದ್ದು ಜಡ್ಡುಗಟ್ಟಿತ್ತು. ಅಕ್ಷರ ಕಾಗುಣಿತ ಮಗ್ಗಿ ಬಾಯಿಪಾಠ— ಇದರಲ್ಲಿ ಬಾಯಿಲೆಕ್ಕ ವಾರದ ದಿನಗಳು ರಾಮಾಯಣ ಭಾರತ ಭಾಗವತ ಸಂಕ್ಷೇಪ ಕಥೆಗಳು, ಇಂಗ್ಲಿಷ್ ಮಾಸಗಳು ವಾರಗಳು, ಪ್ರಭವವಿಭವಾದಿ ಅರುವತ್ತು ಸಂವತ್ಸರ

ಗಳು, ಪಾಡ್ಯ ಬಿದಿಗೆ ಮುಂತಾದ ತಿಥಿಗಳು, ಹಬ್ಬಗಳು, ರೂಪಾಯಿ ಆಣೆ ಪೈ ಕೊಳ ಪಾವು ಸೇರು ಪಂಚೇರು ಮಣ ಲೆಕ್ಕ, ಅಂಗುಲ ಅಡಿ ಗಜ ಫರ್ಲಾಂಗ್ ಮೈಲಿ ಲೆಕ್ಕ. ಅಷ್ಟದಿಕ್ಪಾಲಕರು ಅವರ ವಾಹನ—ಒಟ್ಟಿನಲ್ಲಿ ಒಂದು ಗಂಟೆ ಕಾಲದಲ್ಲಿ ಬಾಯಿ ಪಾಠಿಸಿಂದ ಎಷ್ಟು ಜ್ಞಾನವನ್ನು ಬಾಲ್ಯದ ತಲೆಯಲ್ಲಿ ತುರುಕಬಹುದೋ ಅಷ್ಟನ್ನೂ ತುರುಕುತ್ತಿದ್ದರು. ನಿತ್ಯ ಸಂಧ್ಯಾಕಾಲ ಒಂದು ಗಂಟೆ ಬಾಯಿಪಾಠ ಇರಲೇ ಬೇಕಾಗಿತ್ತು. ಬಾಯಿಪಾಠಕ್ಕೆ ಕೈಕಾಲು ತೊಳೆದುಕೊಂಡು ದೇವರಿಗೆ ನಮಸ್ಕಾರ ಮಾಡಿ ಗಂಭೀರವಾಗಿ ಕುಳಿತುಕೊಳ್ಳಬೇಕಾಗಿತ್ತು. ಸ್ವಲ್ಪ ಚೇಷ್ಟೆ ಮಾಡಿದರೂ ನಮ್ಮ ತಂದೆ ಯವರಿಂದ ಏಟು ಬೀಳುತ್ತಿತ್ತು. ನಮ್ಮ ತಂದೆಯವರು ವೈದಿಕನಿಷ್ಠರು, ಒಳ್ಳೆಯ ನಿಯಮಬದ್ಧ ಜೀವನವನ್ನು ನಡೆಸಿದವರು, ಸಾಹಸಿಗಳು. ಬಡವರಾದರೂ ಸ್ವಾವಲಂಬಿ ಗಳು. ನನ್ನ ಬಾಲ್ಯ ಜೀವನದಲ್ಲಿ ಶಿಸ್ತು ಹೆಚ್ಚಾಗಿತ್ತು. ಆದರೆ ಕ್ರೌರ್ಯವಿರಲಿಲ್ಲ. ನನ್ನ ಅಕ್ಕತಂಗಿಯರು ಅಣ್ಣತಮ್ಮಂದಿರು ಒಟ್ಟು ಹನ್ನೊಂದು ಜನ. ಅಲ್ಲದೆ ಹಿಂದಲ ಕಾಲದ ಪದ್ಧತಿಯಂತೆ ಯಾರ್‍ಯಾರೋ ಯಾವಾಗಲೂ ಮನೆಯಲ್ಲಿ ತುಂಬಿರುತ್ತ ಪ್ರತಿ ಯೊಬ್ಬರೂ ತಮ್ಮ ಪಾಲಿಗೆ ದೊರೆತಷ್ಟು ಸುಖವನ್ನೂ ನೆಮ್ಮದಿಯನ್ನೂ ಹೇಗೋ ಅನುಭವಿಸಿಕೊಂಡು ಹೋಗುತ್ತಿದ್ದರು. ಒಟ್ಟಿನಲ್ಲಿ ನಾವು ಮುದ್ದಿನಲ್ಲಿ ಬೆಳೆದ ಮಕ್ಕಳಲ್ಲ.

ಆಗ ನಮ್ಮೂರಿನಲ್ಲಿ ಕನ್ನಡ ಲೋಯರ್ ಸೆಕೆಂಡರಿಗೆ ಮಾತ್ರ (ಇಂಗ್ಲಿಷು ಅಲ್ಲ) ಕಟ್ಟಿಸುವ ಪಾಠಶಾಲೆ ಇತ್ತು. ಆ ಶಾಲೆಗೆ ನನ್ನನ್ನು ಸೇರಿಸಿದರು. ಎ ಬಿ. ಒಂದು ಎರಡು ಮೂರು ನಾಲ್ಕು ಐದು ಎಂಬ ಏಳು ವರುಷದ ವಿದ್ಯಾಭ್ಯಾಸ ಅದು. ಐದನೆ ತರಗತಿಯಲ್ಲಿ ನಾವು ಲೋಯರ್ ಸೆಕೆಂಡರಿಗೆ ಕಟ್ಟುತ್ತಿದ್ದೆವು. ಬಾಲ್ಯದಲ್ಲಿ ನನ್ನ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದ ವಿಷಯವೆಂದರೆ, ನಮ್ಮ ತಂದೆಯವರು ಮನೆಯಲ್ಲಿ ನಮ್ಮ ಅಜ್ಜಿಗಾಗಿ ಹೇಳುತ್ತಿದ್ದ ಸಂಸ್ಕೃತ ಭಾರತ ಪುರಾಣ. ಅದನ್ನು ನಿತ್ಯ ಕೇಳಲು ನನಗೆ ಅವಕಾಶವಿರುತ್ತಿರಲಿಲ್ಲ. ಆಗ ಬೆಳಿಗ್ಗೆ ೭ತ್ತಿಯಿಂದ ೧೧ತ್ತಿಯವರೆಗೆ ಮಧ್ಯಾಹ್ನ ೩ರಿಂದ ೫ರ ವರೆಗೆ ಹೀಗೆ ನಮ್ಮ ಸ್ಕೂಲು ಪಾಠಗಳು ಇರುತ್ತಿದ್ದವು. ನಮ್ಮ ತಂದೆಯವರೂ ಮನೆಯಲ್ಲಿ ಪುರಾಣವನ್ನು ಮಧ್ಯಾಹ್ನ ೩–೩ತ್ತಿಗೆ ಪ್ರಾರಂಭಿಸಿ ೫ ಘಂಟೆಗಳವರೆಗೆ ಹೇಳುತ್ತಿದ್ದರು. ನನಗೆ ಯಾವಾಗಲೂ ಮಧ್ಯಾಹ್ನದ ಸ್ಕೂಲು ಎಂದರೆ ಬೇಸರಿಕೆ ದ್ವೇಷ. ಮನೆಯಲ್ಲಿ ಸುಖವಾಗಿ ಕುಳಿತು ನಮ್ಮ ತಂದೆಯವರು ಹೇಳುತ್ತಿದ್ದ ಅರ್ಜುನ ಭೀಮ ಅಭಿಮನ್ಯು ಘಟೋದ್ಗಜ ದುರ್ಯೋಧನರ ಸಾಹಸ, ಸುಭದ್ರಾ ಪರಿಣಯ, ಭೀಮನಿಂದ ಪಾರಿಜಾತಾಪಹರಣ ಇಂತಹ ಕಥೆಗಳು ಎಷ್ಟು ಕೇಳಿದರೂ ಇನ್ನೂ ಇನ್ನೂ ಕೇಳೋಣವೆನಿಸುತ್ತಿತ್ತು. ಆದರೆ ಮಧ್ಯಾಹ್ನದ ಪಾಠಶಾಲೆಯ ತೊಂದರೆ. ಮಧ್ಯಾಹ್ನ, ನಮ್ಮ ಉಪಾಧ್ಯಾಯರು ಯಾವ ಪಾಠವನ್ನೂ ಮಾಡುತ್ತಿರಲಿಲ್ಲ. ಅವರು ಕುರ್ಚಿಯ ಮೇಲೆ ಕುಳಿತು ಬಾಯಿಬಿಟ್ಟುಕೊಂಡು ಗೊರಕೆ ಹೊಡೆಯುತ್ತಿದ್ದರು. ನಮ್ಮ ಶಾಲೆಯಲ್ಲಿ ಆಗ ಇದ್ದವರೇ ಇಬ್ಬರು ಉಪಾಧ್ಯಾಯರು. ಶಾಲೆಯಲ್ಲಿ ಇದ್ದದ್ದು ಎರಡೇ ಕೊಠಡಿ.

ಒಂದರಲ್ಲಿ ೨ ಯಿಂದ ಮೂರನೆಯ ತರಗತಿ ಪೂರ್ತಿ. ಮತ್ತೊಂದರಲ್ಲಿ ನಾಲ್ಕು ಐದನೆಯ ತರಗತಿಗಳು. ಹೆಡ್ಮಾಸ್ಟರು ನಾಲ್ಕು ಐದನೆಯ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಉಳಿದ ಒಬ್ಬರೇ ಮಾಸ್ಟರು ಇನ್ನು ಐದು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ೨ ತರಗತಿಯಿಂದ ೬ನೆ ತರಗತಿಗೆ ಬರುವವರೆಗೆ ಐದು ವರುಷ ನಾನು ಹಾಗೂ ಹೀಗೂ ಮಧ್ಯಾಹ್ನದ ತರಗತಿಗೇ ಹೋಗದೆ ಪುರಾಣವನ್ನು ಕೇಳಲು ಮನೆಯಲ್ಲಿಯೇ ಕದ್ದು ಕೂರುತಿದ್ದೆ. ನಾನು ಬಂದು ಕೂರುವುದು ನಮ್ಮ ತಂದೆಯವರಿಗಾಗಲೀ ಇತರರಿಗಾಗಲೀ ತಿಳಿಯಕೂಡದಾಗಿತ್ತು. ಸ್ಕೂಲಿಗೆ ಹೋಗದೆ ಮನೆಯಲ್ಲಿ ಕುಳಿತರೆ ನಮ್ಮ ತಂದೆತಾಯಿಗಳೂ ಸುಮ್ಮನಿರುತ್ತಿರಲಿಲ್ಲ. ಹೊಡೆದು ಅಟ್ಟುತ್ತಿದ್ದರು. ನಮ್ಮ ಅಕ್ಕಂದಿರೂ ಸಹ ನಮ್ಮ ತಂದೆಗೆ ಚಾಡಿ ಹೇಳುತ್ತಿದ್ದರು. ಆದುದರಿಂದ ಮನೆಯೊಳಗೆ ಕೂರುವಂತಿರಲಿಲ್ಲ. ಜಗಲಿಯ ಮೇಲೆ ಕೂರುತ್ತಿದ್ದೆ. ಅಲ್ಲಿ ನನ್ನ ಸಹಪಾಠಿಯಾದ ರಂಗೇಗೌಡನ ತಂದೆಯೂ ಸಹ ಬಂದು ಪುರಾಣ ಕೇಳಲು ಕುಳಿತುಕೊಳ್ಳುತ್ತಿದ್ದನು. ನಮ್ಮ ತಂದೆಯವರು ಒಳಗೆ ಪುರಾಣ ಹೇಳುತ್ತಿದ್ದ ನೇರದಲ್ಲಿ ಜಗಲಿಯ ಕಡೆಗೆ ಒಂದು ಕಿಟಕಿ ಇದ್ದಿತು. ಅಲ್ಲಿ ಕುಳಿತರೆ ಪುರಾಣ ಚೆನ್ನಾಗಿ ಕೇಳುತ್ತಿದ್ದಿತು. ಅಲ್ಲಿ ರಂಗೇಗೌಡನ ತಂದೆ ಕೂರುತ್ತಿದ್ದನು. ನಾನೂ ರಂಗೇಗೌಡನೂ ಅಲ್ಲಿಯೇ ಬಂದು ಕೂರುತ್ತಿದ್ದೆವು. ಉಳಿದವರೆಲ್ಲ ಒಳಗಡೆ ಕೂರುತ್ತಿದ್ದರು. ರಂಗೇಗೌಡನ ತಂದೆಯ ವಿವೇಕ, ನನಗೆ ಇಂದಿಗೂ ಆಶ್ಚರ್ಯವನ್ನುಂಟುಮಾಡುತ್ತಿದೆ. ನಾವಿಬ್ಬರೂ ಸ್ಕೂಲಿಗೆ ಹೋಗುವುದನ್ನು ಕದ್ದು, ಅಲ್ಲಿ ಪುರಾಣ ಕೇಳುತ್ತ ಕುಳಿತರೂ ಅವನು ನಮ್ಮನ್ನು ಸ್ಕೂಲಿಗೆ ದಬ್ಬಲಿಲ್ಲ. ಅವನು ಅನೇಕ ಸಲ "ಸ್ಕೂಲಿಗೆ ಹೋಗಿ ಯಾವ ಮಗನೂ ಪಾಠ ಕಲಿಯಲಿಲ್ಲ" ಎಂದು ಹೇಳುವುದನ್ನು ನಾನು ಕೇಳಿದ್ದೆ. ಸ್ವಲ್ಪ ವಿವೇಕಿಯಾದ ಅವನು ಸ್ಕೂಲಿನಲ್ಲಿ ಇವರು ಕಲಿಯುವುದಕ್ಕಿಂತ ಈ ಭಾರತ ರಾಮಾಯಣ ಕೇಳಿದರೆ ಹೆಚ್ಚು ಕಲಿಯುತ್ತಾರೆ ಎಂದು ಭಾವಿಸಿರಬಹುದು. ನನಗಂತೂ ನನ್ನ ಬಾಲ್ಯದಲ್ಲಿ ಹಾಗೆಯೇ ಎನಿಸಿತ್ತು. ನಾನು ಅಷ್ಟೊಂದು ಬುದ್ಧಿವಂತನಲ್ಲದಿದ್ದರೂ ಮೇಷ್ಟರು ಹೇಳುವ ಪಾಠ, ನನಗೆ ಒಂದೇ ಸಲಕ್ಕೆ ಮನಸ್ಸಿಗೆ ಹತ್ತುತ್ತಿತ್ತು. ಉಳಿದ ಕಾಲವೆಲ್ಲ ಅಲ್ಲಿ ಕುಳಿತಿರುವುದು ವ್ಯರ್ಥವೆಂದು ತೋರಿತ್ತು. ಮಧ್ಯಾಹ್ನ ಮೇಷ್ಟರ ಕೈಯಿಂದ ತಪ್ಪಿಸಿಕೊಳ್ಳುವುದು ಕಷ್ಟವಾಗಿತ್ತು. ಅದಕ್ಕೆ ನಾನು ಒಂದು ಉಪಾಯವನ್ನು ಕಂಡುಹಿಡಿದಿದ್ದೆ. ಮೇಷ್ಟರಿಗೆ ಎಲೆ ಅಡಿಕೆ ಚಪಲ ಬಹಳ. ಅವರು ನಿತ್ಯ ಒಬ್ಬೊಬ್ಬ ಹುಡುಗನನ್ನು ಎಲೆ ಅಡಿಕೆಗೆ ಆ ಹುಡುಗನ ಮನೆಗೇ ಕಳುಹಿಸುತ್ತಿದ್ದರು. ಅನೇಕ ದಿನಗಳಲ್ಲಿ ಹುಡುಗರ ಮನೆಯಲ್ಲಿ ಎಲೆ ಅಡಿಕೆ ಇರುತ್ತಿರಲಿಲ್ಲ. ಇಲ್ಲ ಎಂದು ಬಂದು ಹೇಳಿದರೆ ಮೇಷ್ಟರು ಹೊಡೆಯುತ್ತಿದ್ದರು. ಹೀಗೆ ನಾನೂ ಎಷ್ಟೋ ದಿನ ಏಟು ತಿಂದಿದ್ದೇನೆ. ಅವರ ಈ ಚಟವನ್ನು ನೋಡಿ ಪುರಾಣಕ್ಕೆ ಬರಲು ನಾನು ಒಂದು ದಾರಿ ಕಂಡುಕೊಂಡೆ. ಮಧ್ಯಾಹ್ನ ಸ್ಕೂಲಿಗೆ ಹೋಗುವಾಗ, ಸ್ಕೂಲಿನ ಮಗ್ಗುಲಲ್ಲಿದ್ದ ಅಂಗಡಿಯಿಂದ ಮೂರು ಕಾಸಿಗೆ ಎಲೆ ಅಡಿಕೆ ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ಪುರಾಣಕ್ಕೆ ಬರುತ್ತಿದ್ದೆ

(ಮೂರು ಕಾಸು ಅಂದರೆ ಈಗಿನ ೧ತ್ರಿಪೈಸಾ. ಆಗ ೬೪ ಮೂರು ಕಾಸಿಗೆ ಒಂದು ರೂಪಾಯಿ). ಆಗ ಮೂರು ಕಾಸಿಗೆ ೮–೧೦ ವೀಳೆದೆಲೆ ೫–೬ ಅಡಿಕೆ ಧಾರಾಳವಾಗಿ ಸಿಕ್ಕುತ್ತಿತ್ತು. ಅದು ಈಗಿನಷ್ಟು ಮುಂದುವರಿದ ಕಾಲವಲ್ಲವಾದುದರಿಂದ ಪದಾರ್ಥಗಳೆಲ್ಲ ಅಗ್ಗವಾಗಿದ್ದವು. ಆದರೆ ಆ ಮೂರು ಕಾಸು ಸಹ ನನಗೆ ಸಿಕ್ಕುವಂತಿರಲಿಲ್ಲ. "ಒಂದು ರೂಪಾಯಿ ಮುರಿಸಿದರೆ ಒಬ್ಬನ ತಲೆ ಒಡೆದಂತೆ" ಎಂಬ ಕಾಲ ಅದು. ಆದುದರಿಂದ ನಾನು ಮನೆಯಲ್ಲಿ ಎಲ್ಲಿ ಕಾಸು ಬಿದ್ದಿದ್ದರೂ ಕದಿಯುತ್ತಿದ್ದೆ. ಎಲ್ಲಿಯೂ ಬಿದ್ದಿರುತ್ತಲೂ ಇರಲಿಲ್ಲ. ಅಂದಿನವರು (ಜನರಾಗಲಿ ಸರ್ಕಾರದವರಾಗಲೀ) ಒಂದು ಕಾಸನ್ನೂ ಎಲ್ಲಿಯೂ ಮರೆಯುತ್ತಿರಲಿಲ್ಲ. ಹೀಗೆ ದುಡ್ಡು ಕದ್ದು (ಮೂರು ಕಾಸು ಆರು ಕಾಸುಗಳಷ್ಟೆ) ನನಗೆ ಅನೇಕ ದಿನ ಏಟುಬಿದ್ದು ನನಗೆ ಮನೆಯಲ್ಲಿ ಕಳ್ಳ ಎಂಬ ಹೆಸರೇ ಬಂದಿತ್ತು. ಒಂದು ದಿನ ನನ್ನ ಮನೆಗೆ ಯಾರೋ ನೆಂಟರು ಬಂದಿದ್ದರು. ಅವರ ಜೇಬಿಗೆ ಕೈಹಾಕಿದಾಗ ಒಂದು ನಾಲ್ಕಾಣೆ (ಆಗ ಬೆಳ್ಳಿಯ ಪಾವಲಿ ಎಂದು ಹೆಸರು) ಕೈಗೆ ಸಿಕ್ಕಿತು. ಅದನ್ನು ತೆಗೆದುಕೊಂಡು ಹೋಗಿ ಅಂಗಡಿಯವನಿಗೆ ಕೊಟ್ಟು ಹದಿನಾರು ದಿನ ಎಲೆ ಅಡಿಕೆ ಕೊಡಬೇಕೆಂದು ಗೊತ್ತು ಮಾಡಿಕೊಂಡೆ. ಸ್ಕೂಲಿನಲ್ಲಿರುವಾಗಲೇ ನೆಂಟರು ನನ್ನ ಅಕ್ಕನೊಂದಿಗೆ ಸ್ಕೂಲು ಬಾಗಿಲಿಗೆ ಬಂದು ನನ್ನನ್ನು ಹೊರಕ್ಕೆ ಕರೆದು "ಒಳ್ಳೆ ಮಾತಿನಲ್ಲಿ ಕೊಡು. ಇಲ್ಲದಿದ್ದರೆ ನಿಮ್ಮ ತಂದೆ ನಿನಗೆ ತಕ್ಕ ಶಾಸ್ತಿ ಮಾಡುತ್ತಾರೆ. ಮನೆಗೆ ನಡೆ" ಎಂದರು. ನಾನು ಹೆದರಿ ಅಂಗಡಿಗೆ ಕೊಟ್ಟ ವಿಷಯ ಹೇಳಿದೆ. ಅವರು ನನ್ನ ಎದುರಿಗೇ ಅಂಗಡಿಗೆ ಹೋಗಿ ಅದನ್ನು ತೆಗೆದುಕೊಂಡು ಹೋದರು. ಮನೆಗೆ ಹೋದ ಮೇಲೂ ನನಗೆ ನನ್ನ ತಂದೆಯವರಿಂದ ಏಟುಬಿತ್ತು. ಅಲ್ಲಿಂದ ಮುಂದೆ ನನ್ನ ತಂದೆಯವರು "ಯಾವ ಅಂಗಡಿಗೆ ನೀನು ಕಾಸು ತೆಗೆದುಕೊಂಡು ಹೋಗಿ ಕೊಟ್ಟರೂ ನನಗೆ ಹೇಳಬೇಕೆಂದು ಹೇಳಿದ್ದೇನೆ. ನೀನು ದುಡ್ಡು ಕದಿಯುವುದು ಹೇಗೂ ಗೊತ್ತಾಗುತ್ತೆ" ಎಂದು ಹೆದರಿಸಿಬಿಟ್ಟರು. ಅಲ್ಲಿಂದ ಮುಂದೆಯೂ ನಾನು ದುಡ್ಡು ಕದ್ದೇ ಪುರಾಣಕ್ಕೆ ಹೋಗುತ್ತಿದ್ದೆ. ಆದರೆ ಉಪಾಧ್ಯಾಯರಿಗೆ ಎಲೆ ಅಡಿಕೆಯನ್ನು ಹೊಳೆ ಆಚೆ ಇರುವ ಒಡ್ಡರಹಳ್ಳಿ ಎಂಬ ಊರಿನ ಅಂಗಡಿಯಲ್ಲಿ ಹೋಗಿ ತರುತ್ತಿದ್ದೆ. ಒಂದು ಸಲ ಹೀಗೆ ನದಿ ಹಾಯ್ದುಕೊಂಡು ಹೋಗುತ್ತಿರುವಾಗ, ಮೊದಲ ದಿನ ಸ್ವಲ್ಪ ಮಳೆ ಬಂದಿದ್ದುದರಿಂದ ಆಳವಾದ ನೀರಿಗೆ ಬಿದ್ದೆ. ಆದರೆ ಈಜು ಬರುತ್ತಿದ್ದುದರಿಂದ ತೇಲಿಹೋಗಲಿಲ್ಲ.

ಹೀಗೆ ನಾನು ಕನ್ನಡ ಮೂರನೆಯ ತರಗತಿ ಮುಗಿಸುವವರೆಗೆ ನನಗೆ ಬಾಲ್ಯದ ನೆನಪು—ಸ್ಕೂಲಿನಲ್ಲಿ ಓದಿದ್ದು ಸಹ—ಸ್ವಲ್ಪವೂ ಇಲ್ಲ. ಆ ಬಾಲ್ಯದ ನೆನಪೆಲ್ಲ ಬರಿ ರಾಮಾಯಣ ಭಾರತಗಳೇ. ಹೇಗೋ ಆ ಬಾಲ್ಯದಲ್ಲಿಯೇ ನನಗೆ ಸ್ವಾಭಾವಿಕವಾಗಿ, ಮನುಷ್ಯನ ಜೀವನಕ್ಕೆ ಬೇಕಾದ ವಿವೇಕ ಬುದ್ಧಿಗಳಿಗೆ—ವೈಜ್ಞಾನಿಕ ಔದ್ಯೋಗಿಕ ಕರಣಗಳ ವಿಷಯಕ್ಕೆ ವಿನಾಯಿತಿ—ರಾಮಾಯಣ ಭಾರತಗಳಷ್ಟೇ ಸಾಕು ಎಂಬ ಭಾವನೆಯಿದ್ದಿರಬೇಕು.

ನನ್ನ ಬಾಲ್ಯದ ವಿಷಯದಲ್ಲಿ ನನಗೆ ಚೆನ್ನಾಗಿ ಜ್ಞಾಪಕವಿರುವುದು ನನ್ನ ಕನ್ನಡ ಐದನೆಯ ತರಗತಿಯ ವಿದ್ಯಾಭ್ಯಾಸ. ಅದಕ್ಕೆ ಹಿಂದಲ ನೆನಪು ಯಾವುದೂ ಇಲ್ಲ. ಆಗ ಕನ್ನಡ ಲೋಯರ್ ಸೆಕೆಂಡರಿಗೆ ನಾಲ್ಕು ರೂ. ಪರೀಕ್ಷೆ. ಇಂಗ್ಲಿಷ್ ಕನ್ನಡ ಸೇರಿ ಕಟ್ಟಿದರೆ ಐದು ರೂ. ಪರೀಕ್ಷೆ. ಆದರೆ ಆ ಸೌಲಭ್ಯ ಇಂಗ್ಲಿಷು ಪಾಠಶಾಲೆಗಳಿಲ್ಲದ ಹಳ್ಳಿಯ ಹುಡುಗರಿಗೆ ದೊರೆಯುತ್ತಿರಲಿಲ್ಲ. ಕನ್ನಡ ಭಾಷೆ, ಗಣಿತ, ಆರೋಗ್ಯ, ವ್ಯವಸಾಯ, ಚರಿತ್ರೆ, ಭೂಗೋಳ, ವ್ಯಾಕರಣ–ಇಷ್ಟು ಪ್ರಶ್ನೆ ಪತ್ರಿಕೆಗಳು ಇರುತ್ತಿದ್ದವು. ಭಾಷೆ ಎಂದರೆ ಸಾಹಿತ್ಯ ವಿಭಾಗ ಎನ್ನಬಹುದು. ಇದರಲ್ಲಿ ಗದ್ಯ ಪದ್ಯ ವ್ಯಾಕರಣ ಇರುತ್ತಿತ್ತು. ನಮ್ಮ ಕನ್ನಡ ಸ್ಕೂಲಿನ ಹೆಡ್ಮಾಸ್ಟರು ನಾಲ್ಕನೆಯ ತರಗತಿಯ ಪಾಠಗಳನ್ನೂ ಐದನೆ ತರಗತಿಯ (ಲೋಯರ್ ಸೆಕೆಂಡರಿಯ) ಪಾಠಗಳನ್ನೂ ಮಾಡುತ್ತಿದ್ದರು. ಅವರು ಬೆಳಗಿನ ಹೊತ್ತು ಉಳಿದ ಪಾಠಗಳನ್ನು ಪತ್ಯಕ್ರಮದಂತೆ ಮಾಡಿ, ಮಧ್ಯಾಹ್ನವೆಲ್ಲ ಗಣಿತವೊಂದನ್ನೇ ಮಾಡುತ್ತಿದ್ದರು. ನನಗೆ ಗಣಿತ ಬಹಳ ಕಷ್ಟವಾಗಿ ತೋರುತ್ತಿದ್ದಿತು. ಆಗ ಬರಿ ಅಂಕಗಣಿತವೊಂದೇ ಇರುತ್ತಿದ್ದಿತು. ಕೂಡುವುದು ಕಳೆಯುವುದು ಭಿನ್ನರಾಶಿ, ಲಾಭ ನಷ್ಟ ವಗ್ಯೆರೆ. ಭಾಷೆ ಎಂಬುದರಲ್ಲಿ ಪದ್ಯಭಾಗಗಳನ್ನು ಸೇರಿಸಿ ಸರ್ಕಾರದವರೇ ಒಟ್ಟಾಗಿ ಅಚ್ಚು ಮಾಡಿರುತ್ತಿದ್ದರು. ಗದ್ಯಕ್ಕೆ ಬೇರೆ ಲೇಖಕರ ಗ್ರಂಥ ಇರುತ್ತಿದ್ದಿತು. ನಾನು ಪರೀಕ್ಷೆಗೆ ಕಟ್ಟಿದ ವರುಷ ಮೈಸೂರು ಪಿತಾಮಹ ವೆಂಕಟ ಕೃಷ್ಣಯ್ಯನವರ ಗ್ರಂಥ 'ವಿದ್ಯಾರ್ಥಿ ಕರಭೂಷಣ' ನಮಗೆ ಗದ್ಯ ಪಠ್ಯಪುಸ್ತಕವಾಗಿತ್ತು. ನಾನು ಗಣಿತವೊಂದನ್ನು ಬಿಟ್ಟು ಉಳಿದ ಎಲ್ಲ ಪಾಠಗಳಲ್ಲಿಯೂ ಹೆಚ್ಚು ನಂಬರು ತೆಗೆಯುತ್ತಿದ್ದೆ. ಭಾಷೆ ಎಂಬುದರಲ್ಲಿ ತರಗತಿಯಲ್ಲಿ ನಾನೇ ಮೊದಲಿಗನಾಗಿದ್ದೆ. ನಮಗೆ, ಆಗ ಲೋಯರ್ ಸೆಕೆಂಡರಿಗೆ ಕಟ್ಟಿಸುವುದಕ್ಕೆ ಅರ್ಹತೆ ಕಂಡುಹಿಡಿಯಲು ಒಂದು "ಸೆಲೆಕ್ಷನ್ ಪರೀಕ್ಷೆ" ಮಾಡುತ್ತಿದ್ದರು. ಅದರಲ್ಲಿ ನನಗೆ ಭಾಷೆಯಲ್ಲಿ ತರಗತಿಗೆಲ್ಲ ಅತಿ ಹೆಚ್ಚಿನ ಅಂಕವೂ, ಗಣಿತದಲ್ಲಿ ತರಗತಿಗೆಲ್ಲ ಅತಿ ಕಡಿಮೆ ಅಂಕವೂ ಬಂದಿತು. ಅಷ್ಟು ಕಡಿಮೆ ಅಂಕ ಬಂದುದರಿಂದ ನನ್ನನ್ನು ಪರೀಕ್ಷೆಗೆ ಕಟ್ಟಿಸುವುದಿಲ್ಲವೆಂದು ಹೆಡ್ಮಾಸ್ಟರು ಮೊದಲು ಹೇಳಿದರು. ಅನಂತರ ಕಟ್ಟಿಸಿದರು. ನಾನು 'ವಿದ್ಯಾರ್ಥಿ ಕರಭೂಷಣ'ವೆಂಬ ಪಠ್ಯಪುಸ್ತಕದ ಎಲ್ಲ ಪದ್ಯಭಾಗಗಳನ್ನೂ ಮೊದಲಿನಿಂದ ಕೊನೆಯವರೆಗೆ ಬಾಯಲ್ಲಿಯೇ ಹೇಳುತ್ತಿದ್ದೆನೆಂದರೆ ಇಂದು ನನಗೇ ಆಶ್ಚರ್ಯವಾಗುವುದು. ಗಣಿತಕ್ಕೆ ನಾನು ಬಹಳ ಕಷ್ಟಪಟ್ಟಂತೆಯೂ ಜ್ಞಾಪಕವಿಲ್ಲ. ಲೋಯರ್ ಸೆಕೆಂಡರಿಯಲ್ಲಿ ಹೋಗಿ ಬರೆದು ಬಂದ ಮೇಲೆ ಉಪಾಧ್ಯಾಯರು ನನಗೆ "ಗಣಿತದಲ್ಲಿ ನಾನು ಹೇಳಿದಷ್ಟು ಕಡಿಮೆ ಅಂಕ ನಿನಗೆ ಬಂದಿರಲಿಲ್ಲ. ಇನ್ನೂ ಸ್ವಲ್ಪ ಹೆಚ್ಚಾಗಿಯೇ ಬಂದಿತ್ತು. ಆದರೆ ನೀನು ಗಣಿತವನ್ನು ಉದಾಸೀನ ಮಾಡುತ್ತಿರುವುದರಿಂದ, ಅದರ ಮೇಲೆ ನಿನಗೆ ಹೆಚ್ಚು ಶ್ರದ್ಧೆ ಉಂಟಾಗುತ್ತದೆಂದು ನಿನ್ನದು ತರಗತಿಯಲ್ಲೆಲ್ಲ ಅತೀ ಕಡಿಮೆ" ಎಂದು ಹೇಳಿದೆ ಎಂದರು. ಅಂತೂ ನನಗೆ ಆ ವರುಷ ಲೋಯರ್ ಸೆಕೆಂಡರಿ ಪಾಸು ಆಯಿತು. ಅನಂತರ ಎರಡು ವರುಷದಲ್ಲಿ ಇಂಗ್ಲಿಷ್ ಲೋಯರ್ ಸೆಕೆಂಡರಿಯೂ ಪಾಸು ಆಯಿತು.

ಕನ್ನಡ ಲೋಯರ್ ಸೆಕೆಂಡರಿ ಪಾಸು ಆದಮೇಲೆ ಸಾಧಾರಣವಾಗಿ ಇಂಗ್ಲಿಷ್ ಲೋಯರ್ ಸೆಕೆಂಡರಿಗೆ ಮೂರು ವರುಷಗಳು ಹಿಡಿಯುತ್ತಿದ್ದವು. ಫಸ್ಟ್ ಫಾರಂ. ಸೆಕೆಂಡ್ ಫಾರಂ, ಥರ್ಡ್ ಫಾರಂ ಎಂದು. ಎ. ವಿ. (ಆಂಗ್ಲೊ ವರ್ನಾಕುಲರ್) ಸ್ಕೂಲುಗಳ ವಿದ್ಯಾರ್ಥಿಗಳು ಪಾಸುಮಾಡಲು ತೆಗೆದುಕೊಳ್ಳುತ್ತಿದ್ದುದಕ್ಕಿಂತ ಇದು ಮೂರು ವರುಷ ಹೆಚ್ಚು. ಎ. ವಿ. ಸ್ಕೂಲು ಇಲ್ಲದೆ ಬರಿಯ ಕನ್ನಡ ಲೋಯರ್ ಸೆಕೆಂಡರಿಗೆ ಕಟ್ಟಲು ಅವಕಾಶವಿದ್ದ ಸ್ಕೂಲು ಹುಡುಗರ ಗತಿ ಎಲ್ಲ ಹೀಗೆಯೇ ಆಗಿತ್ತು. ತಾಲ್ಲೂಕು ಮುಖ್ಯ ಪಟ್ಟಣಗಳಲ್ಲಿ ಮಾತ್ರ ಆಗ ಎ. ವಿ. ಸ್ಕೂಲು ಇರುತ್ತಿದ್ದಿತು. ನನ್ನ ಬಾಲ್ಯದಲ್ಲಿ ಸಾಧಾರಣವಾಗಿ ಪ್ರತಿ ಜಿಲ್ಲೆಗೆ ಒಂದು ಹೈಸ್ಕೂಲು ಇರುತ್ತಿದ್ದಿತು. ಹೀಗೆ ಹೈಸ್ಕೂಲು ಇದ್ದ ಕಡೆ, ಎ. ವಿ. ಸ್ಕೂಲಿನ ಅಧಿಕಾರವೂ ಹೈಸ್ಕೂಲು ಹೆಡ್ಮಾಸ್ಟರಿಗೆ ಸೇರಿದ್ದಿತು. ಆಗ ಹಾಸನದ ಹೈಸ್ಕೂಲು ಹೆಡ್ಮಾಸ್ಟರ್ ಆಗಿದ್ದ ಶ್ರೀ ಆರ್. ವಿ. ಕೃಷ್ಣಸ್ವಾಮಿ ಅಯ್ಯರ್ (ಈಗ ಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರರಾದ ಶ್ರೀ ಆರ್. ಕೆ. ನಾರಾಯಣ್‌ರ ತಂದೆ) ಹಳ್ಳಿಯ ಸ್ಕೂಲುಗಳಿಂದ ಕನ್ನಡ ಲೋಯರ್ ಸೆಕೆಂಡರಿ ಪಾಸುಮಾಡಿಕೊಂಡು ಬಂದು ಎ. ವಿ. ಸ್ಕೂಲಿಗೆ ಬರಿಯ ಇಂಗ್ಲಿಷ್‌ಗಾಗಿ ಸೇರುತ್ತಿದ್ದ ಹುಡುಗರಲ್ಲಿ ಬುದ್ಧಿವಂತರಾದವರಿಗೆ ಡಬ್ಬಲ್ ಪ್ರಮೋಶನ್ ಕೊಡುತ್ತಿದ್ದರು. (ಫಸ್ಟ್ ಫಾರಂನಿಂದ ಮೂರನೆಯ ಫಾರಂಗೆ).

ನಾನು ಗೊರೂರು ಕನ್ನಡ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ನಡೆದ ಒಂದೆರಡು ವಿಷಯಗಳನ್ನು ಇಲ್ಲಿ ತಿಳಿಸಬಹುದು. ಮನೆಯಲ್ಲಿ ರಾಮಾಯಣ ಭಾರತಗಳ ಕಥೆಗಳನ್ನು ಕೇಳಿ ಕೇಳಿ ನನಗೆ ಕಥೆ ಓದುವ ಹುಚ್ಚು ಬಲು ಹೆಚ್ಚಾಗಿ ಹೋಗಿತ್ತು. ನಮ್ಮ ಎದುರು ಮನೆಯಲ್ಲಿದ್ದ ಶ್ಯಾನುಭೋಗ್ ದೇಶಿಕಾಚಾರ್ ಎಂಬುವರು ಗಳಗನಾಥರ ಭಕ್ತರು. ಅವರು ಗಳಗನಾಥರ ಅನೇಕ ಕಾದಂಬರಿಗಳನ್ನು ತರಿಸುತ್ತಿದ್ದರು. ಜೊತೆಗೆ ಬಿ. ವೆಂಕಟಾಚಾರ್ಯರ ಕಾದಂಬರಿಗಳೂ ದೊರಕುತ್ತಿದ್ದವು. ಆ ವೇಳೆಗೆ ಸಿಕ್ಕಿದ ಕಾದಂಬರಿಗಳನ್ನೆಲ್ಲ ನಾನು ಓದಿಯಾಗಿತ್ತು. ನಾನು ಕನ್ನಡ ನಾಲ್ಕನೆ ತರಗತಿಗೆ ಹೋಗುವ ವೇಳೆಗೆ–ಹಿಂದೆ ಹೇಳಿದ ಎಲೆ ಅಡಿಕೆ ಮೇಷ್ಟರು ಕೆಲವು ವರುಷ ಬೇರೆ ಸ್ಕೂಲಿಗೆ ಹೋಗಿದ್ದವರು ಮತ್ತೆ ನಮ್ಮ ಊರ ಕನ್ನಡ ಶಾಲೆಗೇ ವರ್ಗವಾಗಿ ಬಂದರು. ಆಗಲೂ ಅವರು ವಿದ್ಯಾರ್ಥಿಗಳಿಂದ ಎಲೆ ಅಡಿಕೆ ತರಿಸುವುದನ್ನು ಬಿಟ್ಟಿರಲಿಲ್ಲ. ಆಗಿನ ಕಾಲದಲ್ಲಿ ಮೈಸೂರಿನ ರಾಯಲ್ ಪ್ರೆಸ್ ಎಂಬುವದರಲ್ಲಿ ನರಸಿಂಹಯ್ಯಂಗಾರ್ ಎಂಬುವರು (ಅವರು ಬಿ. ವೆಂಕಟಾಚಾರ್ಯರ ಮಕ್ಕಳೋ ಸಮೀಪದ ಬಂಧುಗಳೋ ನೆನಪಿಲ್ಲ) ಬಿ. ವೆಂಕಟಾಚಾರ್ಯರ ಕಾದಂಬರಿಗಳನ್ನು ಅಚ್ಚುಹಾಕಿಸಿ ಮಾರುತ್ತಿದ್ದರು. ದುಪ್ಪಂ ಪ್ರತಿ (ಎಂದರೆ Rough paper ಅಥವಾ ಕತ್ತ ಕಾಗದ)ಗಳಿಗೆ ಬೆಲೆ ಅತಿ ಕಡಮೆ ಇಟ್ಟಿರುತ್ತಿದ್ದರು. ನಾನು ಟಪಾಲಿನಲ್ಲಿ ದುರ್ಗೇಶನಂದಿನಿ ಮತ್ತು ಇನ್ನೊಂದು ಪುಸ್ತಕ (ಈಗ ಚೆನ್ನಾಗಿ ನೆನಪಿಲ್ಲ) ತರಿಸಿದ್ದೆ. ಎರಡರಿಂದ ಸುಮಾರು ಒಂದು ರೂಪಾಯಿ ಬೆಲೆ. ಆ ದುಡ್ಡನ್ನು ನಾನು ಮನೆಯಲ್ಲಿ ಕದ್ದಿದ್ದೆನೆಂದು ಜ್ಞಾಪಕ. ಪುಸ್ತಕವನ್ನು ಅದು ಬಂದ ದಿನವೇ

ತರಗತಿಯ ಇತರ ಹುಡುಗರಿಗೆ ತೋರಿಸಬೇಕೆಂದು ನಾನು ಸ್ಕೂಲಿಗೆ ತೆಗೆದುಕೊಂಡು ಹೋಗಿದ್ದೆ. ಹತ್ತೂವರೆ ಗಂಟೆಗೆ ಬೆಳಗಿನ ಸ್ಕೂಲನ್ನು ಬಿಡುತ್ತಿದ್ದರು. ಸ್ಕೂಲು ಬಿಟ್ಟಾಗ ನಾನು ನನ್ನ ಪುಸ್ತಕಗಳೊಡನೆ ಮನೆಗೆ ಹೊರಟೆ. ನನ್ನ ಹಿಂದೆಯೇ ನಮ್ಮ ಎಲೆ ಅಡಿಕೆಯ ಉಪಾಧ್ಯಾಯರೂ ಬರುತ್ತಿದ್ದರು. ಊರ ಮುಂದೆ ನಿಂತಿದ್ದ ತೇರಿನ ಬಳಿ ಬಲಗಡೆಗೆ ಮೇಷ್ಟರ ಮನೆಗೆ ಹೋಗುವ ಬೀದಿ, ಎಡಗಡೆಗೆ ನಮ್ಮ ಮನೆ ಬೀದಿ. ಆ ವೇಳೆಗೆ ಅಲ್ಲಿ ಮತ್ತಾರೂ ಇರಲಿಲ್ಲ. ಮೇಷ್ಟರು ನನ್ನ ಕೈಯಲ್ಲಿದ್ದ ಪುಸ್ತಕಗಳನ್ನು ನೋಡಿ "ಅದಾವ ಪುಸ್ತಕ ಕೊಡಿಲ್ಲಿ ನೋಡೋಣ" ಎಂದರು. ನನಗೂ ಎಲ್ಲ ವಿದ್ಯಾರ್ಥಿಗಳಿಗೂ, ಆ ಮೇಷ್ಟರು ಅಪ್ರಮಾಣಿಕರು ಎಂಬುದು ಸ್ವಾಭಾವಿಕವಾಗಿಯೇ ಹೊಳೆದಿತ್ತು. ಕಾಗದದಲ್ಲಿ ಸುತ್ತಿದ್ದ ಪುಸ್ತಕ ಬಿಚ್ಚಿ, ನಾನು ಒಂದು ಪುಸ್ತಕವನ್ನು ಮೇಷ್ಟರಿಗೆ ಕೊಡಲು ಹೋದೆ. ಅವರು "ಅದನ್ನೂ ತತ್ತಾ" ಎಂದು ಎರಡನ್ನೂ ತೆಗೆದುಕೊಂಡು,ಪುಸ್ತಕಗಳ ಹೆಸರನ್ನು ನೋಡಿ "ಇದು ನಿನಗೆ ಎಲ್ಲಿ ಸಿಕ್ಕಿತು" ಎಂದು ಕೇಳಿದರು. ನಾನು "ಮೈಸೂರಿನಿಂದ ವಿ. ಪಿ. ತರಿಸಿದೆ" ಎಂದು ಹೇಳಿದೆ. ಅವರು "ನಿನಗ್ಯಾಕೆ ಇದು. ನಿನಗೇನು ಇದನ್ನ ಓದೋದಕ್ಕೆ ತಿಳಿಯುತ್ತೆ" ಎಂದು ಹೇಳಿ ಎರಡು ಪುಸ್ತಕಗಳನ್ನೂ ತೆಗೆದುಕೊಂಡು ಹೊರಟೇ ಹೋದರು. ನಾನು ನಾಲ್ಕಾರು ಹೆಜ್ಜೆ ಅವರನ್ನು ಅನುಸರಿಸಿ ಹೋದೆ. ಅವರು ನನ್ನ ಕಡೆ ತಿರುಗಿಯೂ ನೋಡಲಿಲ್ಲ. ನನಗೆ ಏನು ಮಾಡುವುದಕ್ಕೂ ತೋರಲಿಲ್ಲ. ಅವರು ಕ್ರೂರಿಗಳು, ಹುಡುಗರನ್ನು, ದನಗಳನ್ನು ಚಚ್ಚುವಂತೆ ಚಚ್ಚುವವರೂ ಆಗಿದ್ದರು. ನನಗೆ ತುಂಬ ಅಳು ಬಂದುಬಿಟ್ಟಿತು. ಮನೆಯಲ್ಲಿ ಹೇಳೋಣವೆಂದರೆ "ನಿನಗೆ ಪುಸ್ತಕ ತರಿಸಲು ದುಡ್ಡೆಲ್ಲಿತ್ತು ?" ಎಂದು ಬಯ್ಯುತ್ತಾರೆ. ಆದುದರಿಂದ ನಾನು ಮೌನವಾಗಿದ್ದೆ. ಪುಸ್ತಕವನ್ನಾದರೂ ಓದಿದ್ದರೆ ನನಗೆ ಅಷ್ಟು ದುಃಖವಾಗುತ್ತಿರಲಿಲ್ಲ.

ಹಾಸನದ ಹೈಸ್ಕೂಲಿನಲ್ಲಿ, ನಾನು ಹೋಗಿ ಸೇರಿದ ಮೊದಲನೆಯ ದಿನ ನಡೆದ ಸಂಗತಿಯೊಂದು ಜ್ಞಾಪಕವಿದೆ. ಅಂದಿನ ಕನ್ನಡ ತರಗತಿಯಲ್ಲಿ, ಕನ್ನಡ ಪಂಡಿತರು ತಮಗೆ ಪಾಠಮಾಡಲು ಬೇಸರಿಕೆಯಾದುದರಿಂದಲೋ ಅಥವಾ ವಿದ್ಯಾರ್ಥಿಗಳ ಯೋಗ್ಯತೆಯನ್ನು ಕಂಡು ಹಿಡಿಯುವುದಕ್ಕಾಗಿಯೋ ಪ್ರಬಂಧವನ್ನು ಬರೆಯಿರಿ ಎಂದು ಒಂದು ವಿಷಯವನ್ನು ಕೊಟ್ಟರು. "ಊರ ಮುಂದೆ ಒಂದು ದೊಡ್ಡ ಗಡಿಯಾರವನ್ನು ತೂಗು ಹಾಕಿದರೆ ಅದರಿಂದಾಗುವ ಪ್ರಯೋಜನಗಳೇನು ?" ಎಂಬ ಅರ್ಥದ ವಿಷಯವನ್ನು ಕೊಟ್ಟಂತೆ ಜ್ಞಾಪಕ. ಅಂದಿನ ನಾಲ್ಕನೆ ಫಾರಂನಲ್ಲಿ (ಫೋರ್ತ್) ಮುವತ್ತು ಜನ ಮಾತ್ರ ಹುಡುಗರಿದ್ದರು. ಒಬ್ಬಳೂ ವಿದ್ಯಾರ್ಥಿನಿ ಇರಲಿಲ್ಲ. ಎಲ್ಲರೂ ಪ್ರಬಂಧಗಳನ್ನು ಬರೆದರು. ನಾನೂ ಬರೆದುಕೊಟ್ಟೆ. ಮರುದಿನ ಉಪಾಧ್ಯಾಯರು ತರಗತಿಯಲ್ಲಿ ಬಂದು ಕುಳಿತಾಗ ನನ್ನ ಪ್ರಬಂಧಕ್ಕೆ ಎಲ್ಲರ ಪ್ರಬಂಧಕ್ಕಿಂತ ಹೆಚ್ಚು ಅಂಕಗಳು ಬಂದಿರುವುದಾಗಿಯೂ (ಹತ್ತಕ್ಕೆ ಎಂಟು) ಎಲ್ಲರೂ ಅದನ್ನು ಮಾದರಿಯಾಗಿ ಅನುಸರಿಸಬೇಕೆಂದೂ ಹೇಳಿ ನನ್ನಿಂದ ಪ್ರಬಂಧವನ್ನು ತರಗತಿಯಲ್ಲಿ ಓದಿಸಿದರು.

ನಾನು ೫ನೆ ಫಾರಂ (ಫಿಫ್ತ್)ನಲ್ಲಿರುವಾಗಲೇ ಗಾಂಧೀಜಿಯ ಹೆಸರನ್ನು ಕೇಳಿದೆ.

ಗಾಂಧೀಜಿ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿ ಮೂರು ನಾಲ್ಕು ವರುಷ ಕಳೆದಿದ್ದುವು. ಮೊದಲು ಗಾಂಧೀಜಿಯ ಹೆಸರು ನನ್ನ ಕಿವಿಗೆ ಬಿದ್ದುದು ಅವರೊಬ್ಬ ರಾಜಕೀಯ ಮಹಾ ಪುರುಷರೆಂಬುದಾಗಿಯೇ. ಅಲ್ಲಿಯವರೆಗೆ ನಾನು ಹೆಚ್ಚಾಗಿ ಕೇಳಿದ್ದುದು ಬಾಲಗಂಗಾಧರ ತಿಲಕರ ಹೆಸರನ್ನು ಮಾತ್ರ. ಬಾಲಗಂಗಾಧರ ತಿಲಕರೆಂದರೆ ಮೈ ರೋಮಾಂಚನವಾಗುತ್ತಿತ್ತು. ಅವರ ಮೇಲೆಯೂ ಬೇಕಾದಷ್ಟು ಪವಾಡಗಳು ಆಗಲೇ ಹುಟ್ಟಿಕೊಂಡಿದ್ದುವು. ಆಗ ನಿತ್ಯವೂ, ಜನತೆ ಬ್ರಿಟಿಷ್ ಸರ್ಕಾರವನ್ನು ಎದುರಿಸುವ, ಮತ್ತು ಬ್ರಿಟಿಷ್ ಸರ್ಕಾರ ನಡೆಸುತ್ತಿರುವ ದಬ್ಬಾಳಿಕೆಯ ಕಥೆಗಳಿಂದಲೇ ಪತ್ರಿಕೆಗಳು ತುಂಬಿರುತ್ತಿದ್ದುವು. ರೌಲೆಟ್ ಆಕ್ಟ್, ಜಲಿಯನ್‌ವಾಲಾಬಾಗ್ ಹತ್ಯಾಕಾಂಡ, ದಿನದಿನವೂ ಹರತಾಳ ಇದೇ ಎಲ್ಲೆಲ್ಲಿಯೂ ಸುದ್ದಿಯಾಗಿತ್ತು. ಗಾಂಧೀಜಿ ಕಾಂಗ್ರೆಸ್ಸನ್ನು ಕೈಯಲ್ಲಿ ತೆಗೆದುಕೊಂಡು, ಕಾಂಗ್ರೆಸ್ಸು ಅವರ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಒಪ್ಪಿಕೊಂಡಿತ್ತು. ಎಲ್ಲಿ ನೋಡಿದರೂ ಅಭೂತಪೂರ್ವ ಉತ್ಸಾಹ ಮೆರೆದಿತ್ತು. ೧೯೨೦ನೆ ಇಸವಿ ಆಗಸ್ಟ್ ಒಂದರಂದು ಲೋಕಮಾನ್ಯ ತಿಲಕರು ಸ್ವರ್ಗಸ್ಥರಾದರು. ಹಾಸನದ ಹೈಸ್ಕೂಲು ಒಳಗೆ ಪಾಠದ ಮಧ್ಯೆ ಈ ಸುದ್ದಿ ನಮಗೆ ತಿಳಿಯಿತು. ಇದ್ದಕ್ಕಿದ್ದಂತೆ ಯಾರ ಪ್ರೇರಣೆಯೂ ಇಲ್ಲದೆ ವಿದ್ಯಾರ್ಥಿಗಳೆಲ್ಲ ತರಗತಿ ಬಿಟ್ಟು ಮೆರವಣಿಗೆ ಹೊರಟರು. ಆ ಮೆರವಣಿಗೆಗೆ ಯಾರೂ ಹೇಳದೆ ಕೇಳದೆ ನನ್ನ ಪಾಡಿಗೆ ನಾನೇ ಮುಖಂಡನಾಗಿಬಿಟ್ಟೆ. ನಾವು ತಿಳಕರ ಮತ್ತು ಗಾಂಧೀಜಿಯ ಭಾವಚಿತ್ರಗಳನ್ನು ಹಿಡಿದುಕೊಂಡು ಊರೆಲ್ಲ ಮೆರವಣಿಗೆ ಹೋದೆವು. ಸಂಜೆಯ ವೇಳೆಗೆ ನಮ್ಮ "ಫಂಡಿಗೆ" ನೂರಾರು ರೂಪಾಯಿ ಸೇರಿತು. ಒಂದು ಗಾಡಿ ಪರದೇಶಿ ವಸ್ತ್ರಗಳು ಸಿಕ್ಕಿದುವು. ಜ್ಯೂಬಿಲಿ ಮೈದಾನದಲ್ಲಿ ದೊಡ್ಡ ಸಭೆ ಮಾಡಿ ಮನಃಪೂರ್ತಿಯಾಗಿ ಬ್ರಿಟಿಷ್ ಸರ್ಕಾರವನ್ನು ಬೈದು, ನಾವು ಸಂಗ್ರಹಿಸಿದ್ದ ಪರದೇಶಿ ಅರಿವೆಗೆ ಬೆಂಕಿ ಹತ್ತಿಸಿ ಹಿಂದಿರುಗಿದೆವು. ವಸೂಲಾಗಿದ್ದ ಫಂಡಿಗೆ ಖಾದಿ ಅರಿವೆಯನ್ನು ಕೊಂಡು ಟೋಪಿಗಳನ್ನು ಮಾಡಿಸಿ ಎಲ್ಲ ವಿದ್ಯಾರ್ಥಿಗಳಿಗೂ ಕೊಟ್ಟು ಅವರ ನಾನಾ ಬಣ್ಣದ ಹಾಸನ್ ಟೋಪಿ, ಫೆಲ್ಟ್ ಕ್ಯಾಪ್, ಲೆದರ್ ಕ್ಯಾಪ್ ಎಲ್ಲವನ್ನೂ ಅಗ್ನಿಪ್ರವೇಶ ಮಾಡಿಸಿದೆವು. ನಾನು ಹೈಸ್ಕೂಲಿನಲ್ಲಿದ್ದ ಮೂರು ವರುಷಗಳೂ ೧೯೧೯, ೨೦, ೨೧ ರಾಷ್ಟ್ರೀಯ ಚಳವಳಿಯ ಅತ್ಯಂತ ಪ್ರಮುಖ ಮತ್ತು ತೀವ್ರ ಬಿರುಗಾಳಿಯ ವರ್ಷಗಳಾಗಿದ್ದುವು. ದೇಶದ ಎಲ್ಲೆಡೆಯೂ ಚಳವಳಿ ಸಂಭ್ರಮ. ಗಾಂಧೀಜಿಯ ಸಂಪರ್ಕದಿಂದ ಚಳವಳಿಗೆ ಧಾರ್ಮಿಕ ಸ್ವರೂಪ ಬಂದಿದ್ದುದರಿಂದ ದೇಶವೆಲ್ಲ ಒಂದು ಧರ್ಮಯುದ್ಧದಲ್ಲಿ ತೊಡಗಿದಂತೆ ಭಾಸವಾಗುತ್ತಿದ್ದಿತು.

"ಒಂದು ವರ್ಷದಲ್ಲಿ ಸ್ವರಾಜ್ಯ" ಎಂದು ಗಾಂಧೀಜಿ ಘೋಷಿಸಿದ್ದ ವರ್ಷವದು. ಅದು ಅತ್ಯಂತ ತೀವ್ರ ಚಳವಳಿಯ ಕಾಲ. ಸರ್ಕಾರದೊಂದಿಗೆ ಪೂರ್ಣ ಅಸಹಕಾರ; ಲಾಯರುಗಳು ಅನ್ಯಾಯದ ಕೋರ್ಟುಗಳಲ್ಲಿ ಹೋಗಿ ವಾದಿಸಬಾರದು. ವಿದ್ಯಾರ್ಥಿಗಳೆಲ್ಲ ಶಾಲೆ ಕಾಲೇಜುಗಳನ್ನು ಬಿಟ್ಟು ಚಳವಳಿಯಲ್ಲಿ ಸೇರಬೇಕು. ರಾಷ್ಟ್ರೀಯ ಶಿಕ್ಷಣವನ್ನು ಕೊಡಲು ಬೇರೆ ಸಂಸ್ಥೆಗಳನ್ನು ಸ್ಥಾಪಿಸಬೇಕು. ಕೊನೆಗೆ ಪೋಲೀಸು ಮಿಲಿಟರಿ ಸಹ

ಸರ್ಕಾರದೊಂದಿಗೆ ಅಸಹಕರಿಸಬೇಕು. ಪೂರ್ಣ ಪಾನನಿರೋಧದ ಪರದೇಶಿವಸ್ತ್ರ ಪೂರ್ಣ ಬಹಿಷ್ಕಾರ, ಈ ಎಲ್ಲ ಕಾರ್ಯಗಳನ್ನೂ ಆ ವರುಷದಲ್ಲಿ ದೇಶ ಕೈಕೊಂಡಿತು. ಸಾಧ್ಯವಿರುವವರೆಲ್ಲ ಚಳವಳಿಯಲ್ಲಿ ಧುಮುಕಿದರು. ನನ್ನ ಮಟ್ಟಿಗೆ ಹೇಳುವುದಾದರೆ ನನಗೆ ಸ್ವಾತಂತ್ರ್ಯ ಸ್ವರಾಜ್ಯದ ಗುಂಗಿನ ಹುಚ್ಚೇ ಹತ್ತಿತ್ತು. ಯಾವಾಗಲೂ ಅದೇ ಯೋಚನೆ. ನಿದ್ರೆಯಲ್ಲಿಯೂ ಅದೇ ಕನಸು. ಯುವಕನಿಗೆ ಪ್ರಿಯ ಯುವತಿಯ ಮೇಲೆ ಎಷ್ಟು ತದೇಕ ಧ್ಯಾನವೋ ಸ್ವರಾಜ್ಯವನ್ನು ಕುರಿತ ಸಾಧನೆ ನನಗೆ ಅದಕ್ಕಿಂತ ಹೆಚ್ಚು ಪ್ರಿಯವಾಗಿತ್ತು. ಭಾರತದ ನಾನಾ ಕಡೆ ಚಳವಳಿ ಬಿಗಡಾಯಿಸಿ ಜನತೆ ಸಹಸ್ರ ಸಂಖ್ಯೆಯಲ್ಲಿ ಸೆರೆವಾಸವನ್ನು ಸೇರುತ್ತಿರುವ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುವಾಗಲೆಲ್ಲ "ನಾನು ಯಾಕೆ ಇಲ್ಲಿ ಹೀಗೆ ಈ ಇಂಗ್ಲಿಷು ಆಲ್ಜಿಬ್ರಾ ಸೈನ್ಸ್ ರಗಳುತ್ತ ಕುಳಿತಿದ್ದೀನಿ?" ಎನಿಸುತ್ತಿತ್ತು. "ಈಗ ಹೋರಾಟಕ್ಕಿಂತ ಪ್ರಿಯವಾದದ್ದು ಬೇರೇನೂ ಇಲ್ಲ. ಗುಲಾಮರನ್ನು ಸೃಷ್ಟಿಸುವ ಈ ವಿದ್ಯೆ ಯಾಕೆ?" ಎನಿಸಿತು. ಚಳವಳಿಯಲ್ಲಿ ಲಾಠಿ ಗುಂಡಿನೇಟು ಇವುಗಳಿಂದ ಮನಸ್ಸು ಹಿಂದೆಗೆಯಗಲಿಲ್ಲ. ಗುಲಾಮಗಿರಿಯಲ್ಲಿ ಬದುಕಿರುವುದಕ್ಕಿಂತ ಗುಂಡಿನೇಟು ತಿಂದು ಮಡಿಯುವುದು ಶ್ರೇಯಸ್ಕರವೆನಿಸಿತು. ಈ ಗುಲಾಮರ ಸಂತಾನ ಯಾಕೆ ವೃದ್ಧಿಯಾಗಬೇಕು? ಉಳಿದರೆ ಸ್ವತಂತ್ರ ಭಾರತ ಉಳಿಯಲಿ. ಇಲ್ಲವಾದರೆ ಭಾರತವೇ ನಾಶವಾಗಲಿ ಎಂಬ ತೀವ್ರ ಭಾವನೆಯುಂಟಾಯಿತು. ಹೇಗೆ ಮಾಡಿಯೂ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಆ ಅಶಾಂತಿಯಲ್ಲಿ, "ಗಾಂಧೀಜಿಯನ್ನು ಹೋಗಿ ಕಾಣುವುದು; ಅವರು ಏನಾದರೂ ರಾಷ್ಟ್ರಕಾರ್ಯವನ್ನು ಸೂಚಿಸಿದರೆ ಅದರಂತೆ ನಡೆಯುವುದು. ಗಾಂಧೀಜಿಯವರ ನೇತೃತ್ವದಲ್ಲಿಯೇ ನಡೆಯುತ್ತಿರುವ ಗುಜರಾತ್ ವಿದ್ಯಾಪೀಠವನ್ನು ಸೇರಿ ಆಶ್ರಮದಲ್ಲಿರುವುದು" ಎಂಬ ತೀರ್ಮಾನ ಮಾಡುವವರೆಗೆ ಮನಸ್ಸಿಗೆ ಸಮಾಧಾನವೇ ಉಂಟಾಗಲಿಲ್ಲ. ಒಂದು ದಿನ ನಾನು ಯಾರಿಗೂ ಹೇಳದೆ ಕೇಳದೆ ಅಹಮದಾಬಾದಿಗೆ ಹೊರಟೇಬಿಟ್ಟೆ.

ಎಲ್ಲೆಲ್ಲಿಯೂ ಚಳವಳಿ ಉಗ್ರವಾಗಿದ್ದಂತೆ ಧಾರವಾಡದಲ್ಲಿಯೂ ಇತ್ತು. ಧಾರವಾಡದಲ್ಲಿ ಕೆಲವು ದಿನಗಳಿಗೆ ಮುಂಚೆ ಸಭೆ ನಡೆಸುತ್ತಿದ್ದ ನಿರಾಯುಧ ಜನತೆಯ ಮೇಲೆ ಪೋಲಿಸಿನವರು ಗುಂಡು ಹಾರಿಸಿ ನಗರದಲ್ಲೆಲ್ಲ ಕ್ಷೋಭೆಯುಂಟುಮಾಡಿದ್ದರು. ಧಾರವಾಡದಲ್ಲಿ ಸಭೆಗಳು ನಡೆಯದಂತೆ ಪ್ರತಿಬಂಧಕಾಜ್ಞೆ ಸಹ ಇತ್ತು. ಆಗ ನನಗೆ ೧೭ ವರುಷವಿದ್ದಿರಬೇಕು. ಆದರೂ ಧಾರವಾಡದಲ್ಲಿ ಒಂದು ರಾಜಕೀಯ ಭಾಷಣ ಮಾಡಬೇಕೆಂಬುದು ನನ್ನ ಇಷ್ಟವಾಗಿತ್ತು. ಅದಕ್ಕೆ ಕಾರಣ ಚಳವಳಿಯಲ್ಲಿ ಪ್ರಮುಖವಾಗಿದ್ದ ಧಾರವಾಡದ ಮೇಲಿನ ಅಭಿಮಾನ. ಸ್ವಾತಂತ್ರ್ಯ ಬೇಕು ಎಂದು ಹೇಳುವುದಕ್ಕೂ ಬ್ರಿಟಿಷ್ ಸರ್ಕಾರವನ್ನು ಬಯ್ಯುವುದಕ್ಕೂ ಹೆಚ್ಚು ಕಷ್ಟವಿರಲಿಲ್ಲ. ಆದರೆ ಸಭೆಗೆ ಪ್ರತಿಬಂಧಕಾಜ್ಞೆಯೂ ಇತ್ತು. ಸಭೆಯ ಜಾಹಿರಾತನ್ನು ಪ್ರಕಟಿಸಲು ಯಾವ ಮುದ್ರಣಾಲಯಗಳಿಗೂ ಅವಕಾಶವಿರಲಿಲ್ಲ (ಸರ್ಕಾರ ಪ್ರತಿಬಂಧಿಸಿತ್ತು). ಆದರೂ ದಿವಂಗತ ಹುಕ್ಕೇರಿಕರ್‌ರವರು ರಹಸ್ಯವಾಗಿ ಒಂದು ಕಲ್ಲಚ್ಚಿನ ಕೆಲವು ನೋಟಿಸು

ಗಳನ್ನೂ, ಒಂದು ತಪ್ಪಿದರೆ ಒಂದು ಇರಲಿ ಎಂದು ಕಳ್ಳ ಮುದ್ರಣಾಲಯದಲ್ಲಿ ಕೆಲವು ನೋಟೀಸುಗಳನ್ನೂ ಪ್ರಿಂಟ್ ಹಾಕಿಸಿ ರಹಸ್ಯವಾಗಿಯೇ ಹಂಚಿಸಿದ್ದರು. ಸಭಾಸ್ಥಳ ಆಜಾದ್ ಬಯಲು. ಅಧ್ಯಕ್ಷರು ಶ್ರೀ ಹುಕ್ಕೇರಿಕರ್‌ವರೇ. ಕಾಲಕ್ಕೆ ಸರಿಯಾಗಿಯೇ ಸಭೆ ಪ್ರಾರಂಭವಾಯಿತು. ಆಹ್ವಾನ ತಲುಪಿದ್ದ ನೂರಾರು ಜನರು ಬಂದರು. ಸುತ್ತಮುತ್ತಲವರೆಲ್ಲ ಸೇರಿ ದೊಡ್ಡ ಸಭೆಯೇ ಆಯಿತು. ನಾನು ಆ ಸಭೆಯಲ್ಲಿ ಏನು ಹೇಳಿದೆ ಎಂಬುದು ಇಂದಿಗೂ ನೆನಪಿಲ್ಲ. ಬ್ರಿಟಿಷ್ ಸರ್ಕಾರವನ್ನು ಚೆನ್ನಾಗಿ ಬೈದುದು ನೆನಪಿದೆ. ಹುಕ್ಕೇರಿಕರ್‌ರವರದೂ ಅದೇ ಧಾಟಿ ಇತ್ತು. ಆ ವೇಳೆಗೆ ಸುದ್ದಿ ಪೋಲಿಸಿನವರಿಗೆ ತಿಳಿಯಿತು. ಆಗ ಅಲ್ಲಿದ್ದ ಪೋಲೀಸ್ ಸೂಪರಿಂಟೆಂಡೆಂಟರು ತುಂಬ ಕ್ರೂರಿಗಳು. ಅವರು ಪೋಲೀಸ್ ಪೇದೆಗಳೊಂದಿಗೆ ಸಭೆಯನ್ನು ಚದುರಿಸಲು ಬರುತ್ತಿದ್ದಾರೆ ಎಂಬುದು ತಿಳಿಯುವ ವೇಳೆಗೆ ನಮ್ಮ ಸಭೆ ಬರಕಾಸ್ತು ಆಗಿತ್ತು. ಪೋಲಿಸಿನವರಿಂದ ಏನಾದರೂ ಕಿರುಕುಳವಾಗಬಹುದೆಂದು ಚಿಂತಿಸಿ, ಧಾರವಾಡದ ಮಿತ್ರರು ಆ ರಾತ್ರಿಯೇ ನನ್ನನ್ನು ಬೊಂಬಾಯಿಗೆ ಟಿಕೆಟ್ಟು ತೆಗೆದುಕೊಟ್ಟು ಸಾಗಿಸಿದರು. ಬೊಂಬಾಯಿನಿಂದ ನಾನು ಅಹಮದಾಬಾದಿಗೆ ಹೋದೆ. ಗಾಂಧೀಜಿಯ ಆಶ್ರಮದಲ್ಲಿದ್ದುಕೊಂಡು ಗುಜರಾತ್ ವಿದ್ಯಾಪೀಠದಲ್ಲಿ ವ್ಯಾಸಂಗಕ್ಕೆ ಸೇರಿದೆ. ಅಹಮದಾಬಾದ್ ಕಾಂಗ್ರೆಸ್‌ನಲ್ಲಿ ಸ್ವಯಂಸೇವಕನಾಗಿ ಸೇರಿದೆ. ಆಗ ನಮಗೆ ದಿವಾಣಜಿ ಎಂಬುವರು ಸ್ವಯಂಸೇವಕರ ಕ್ಯಾಪ್ಟನ್ ಆಗಿದ್ದರು. ನಿರ್ಮಲೀಕರಣ, ಪ್ರೇಕ್ಷಕರಲ್ಲಿ ಶಿಸ್ತು–ಶಾಂತಿ ಇವಿಷ್ಟೆ ಸ್ವಯಂಸೇವಕರ ಕೆಲಸವಾಗಿತ್ತು. ಪ್ರಾರಂಭದ ದೆಶೆಯಲ್ಲಿ 'ನವಜೀವನ', 'ಯಂಗ್ ಇಂಡಿಯಾ' ಆಫೀಸಿನಲ್ಲಿ ಇಂಗ್ಲಿಷ್ ಕಂಪಾಸಿಟರ್ ಸಹ ಆಗಿದ್ದೆ. ವಿದ್ಯಾಪೀಠದಲ್ಲಿ ಆಚಾರ್ಯ ಕೃಪಲಾನಿ ಕಾಲೇಲ್ಕರ್ ಮುಂತಾದವರ ಸಂಪರ್ಕ ಸಹ ದೊರಕಿತು. ಆಶ್ರಮದಲ್ಲಿರುವಾಗಲೆಲ್ಲ ಗಾಂಧೀಜಿಯ ಪ್ರಾರ್ಥನೆಯಲ್ಲಿ ಹಗಲು ರಾತ್ರಿ ಇರುತ್ತಿದ್ದೆ. ಆಶ್ರಮ ಜೀವನ ಕಠಿಣವಾಗಿದ್ದರೂ ಅದೊಂದು ಬಗೆಯ ತರಪೇತಿ ಕೇಂದ್ರವೂ ಆಗಿತ್ತು. ಅಲ್ಲಿಂದ ಮುಂದೆ ನಾನು, ಗಾಂಧೀಜಿಯೊಂದಿಗೆ ನನ್ನ ಯೋಗ್ಯತೆಗೆ ಅರ್ಹವಾದಷ್ಟರಮಟ್ಟಿನ ನಿಕಟ ಸಂಬಂಧವನ್ನು ಇಟ್ಟುಕೊಂಡಿರುತ್ತಿದ್ದೆ. ಖಾದಿ, ಗ್ರಾಮೋದ್ಯೋಗ ಮುಂತಾದ ವಿಷಯಗಳಲ್ಲಿ ನಾನು ಅವರಿಗೆ ಅನೇಕ ಕಾಗದಗಳನ್ನು ಬರೆದು ಅನೇಕ ಸಂಶಯಗಳನ್ನು ಅರುಹಿ ಅವರಿಂದ ಉತ್ತರಗಳನ್ನು ಪಡೆಯುತ್ತಿದ್ದೆ. ನನ್ನ ಸ್ವಂತ ವಿಷಯಗಳಲ್ಲಿ ಸಹ ನಾನು ಗಾಂಧೀಜಿಯನ್ನು ಮಾರ್ಗದರ್ಶಕ ಗುರುವಾಗಿಟ್ಟುಕೊಂಡು ಅವರಿಗೆ ಸಮಸ್ಯೆಗಳನ್ನು ತಿಳಿಸಿ ಪರಿಹಾರಗಳನ್ನು ಕೇಳುತ್ತಿದ್ದೆ. ಗಾಂಧೀಜಿ ನನ್ನ ಹೃದಯದಲ್ಲಿಯೇ ಕುಳಿತಿದ್ದ ಜ್ಯೋತಿಯಾಗಿದ್ದರು. ನಾನು ಪ್ರತಿಯೊಂದು ಕಾರ್ಯ ಮಾಡುವಾಗಲೂ "ಗಾಂಧೀಜಿ ಇದಕ್ಕೆ ಏನು ಹೇಳಬಹುದು" ಎಂದು ಯೋಚಿಸುತ್ತಿದ್ದೆ. ಜಗತ್ತಿನ ದೀನದಲಿತರನ್ನೆಲ್ಲ ತಮ್ಮ ಸಂಸಾರದಲ್ಲಿ ಸೇರಿಸಿಕೊಂಡಿದ್ದ ಗಾಂಧೀಜಿ, ನನ್ನನ್ನು ಕುರಿತು ಅಷ್ಟು ಯೋಚಿಸಿದ್ದರೋ ಇಲ್ಲವೋ ತಿಳಿಯದು. ಆದರೆ ನನ್ನ ಮನೋಭಾವವಂತೂ ಹಾಗಿದ್ದಿತು. ಗಾಂಧೀಜಿಯ ದಕ್ಷಿಣ ದೇಶದ ಮತ್ತು ಮೈಸೂರಿನ ಎಲ್ಲ ಪ್ರವಾಸಗಳಲ್ಲಿಯೂ. ನಾನು

ಅವರ ಅಪ್ಪಣೆ ಪಡೆದು ಅವರ ಅನುಯಾಯಿಗಳ ಜೊತೆ ಹೋಗಿದ್ದೆ. ಅವರ ಕೊನೆಯ ದಕ್ಷಿಣದ ಪ್ರವಾಸವಾದ ೧೯೪೬ರಲ್ಲಿ ಮದರಾಸಿನಲ್ಲಿ ಅವರ ಕ್ಯಾಂಪ್‌ನಲ್ಲಿ ಹತ್ತು ದಿನಗಳಿದ್ದು ಅನಂತರ ಜೊತೆಯಲ್ಲಿಯೇ ಪಳನಿ ಮದುರೆ ಮುಂತಾದ ಕಡೆಗಳಿಗೂ ಹೋಗಿ ಗಾಂಧೀಜಿಯನ್ನು ದಕ್ಷಿಣದಿಂದ ಬೀಳ್ಕೊಟ್ಟು ಹಿಂದಿರುಗಿದೆ. ಆ ಪ್ರವಾಸವನ್ನು ಕುರಿತು 'ಗಾಂಧೀಜಿಯವರ ದಕ್ಷಿಣಯಾತ್ರೆ' ಎಂಬ ಪುಸ್ತಕವನ್ನು ಬರೆದೆ (ಮಿಂಚಿನ ಬಳ್ಳಿ ಗ್ರಂಥಮಾಲೆ). ನಾನು ಗಾಂಧೀಜಿಯನ್ನು ಕೊನೆಯದಾಗಿ ನೋಡಿದುದು ಆಗಲೆ. ಆದರೆ ಪತ್ರವ್ಯವಹಾರಕ್ಕೆ ಅದೇ ಕೊನೆಯಾಗಲಿಲ್ಲ. ನನ್ನ ಜೀವಿತದ ಮತ್ತೊಂದು ದುರ್ಭರ ದುಃಖ ಪ್ರಸಂಗದಲ್ಲಿ ಅವರಿಂದ ನನಗೆ ಮತ್ತೊಂದು ಸಾಂತ್ವನ ಪತ್ರ ಬರುವುದಾಗಿದ್ದಿತು.

ನನಗೆ ಗ್ರಂಥಗಳನ್ನು ಓದುವುದೇ ಒಂದು ಹುಚ್ಚು ಆಗಿದ್ದಿತು. ನನ್ನ ೨೫ನೆಯ ವಯಸ್ಸಿನ ವೇಳೆಗೆ ನಾನು ಅದುವರೆಗೆ ಲಭ್ಯವಾಗಿದ್ದ ಕನ್ನಡ ಕಥೆ ಕಾದಂಬರಿಗಳ ಜೊತೆಗೆ ಅನೇಕ ಕನ್ನಡ ಕಾವ್ಯಗಳನ್ನು ಓದಿದೆ. 'ಪಂಪಭಾರತ', 'ಆದಿಪುರಾಣ', 'ಗದಾಯುದ್ಧ' 'ಜೈಮಿನಿ', 'ಕುಮಾರವ್ಯಾಸ ಭಾರತ', 'ನೇಮಿನಾಥ ಪುರಾಣ' ಇವುಗಳಲ್ಲಿಯ ಅನೇಕ ವೃತ್ತ, ಪದ್ಯಗಳನ್ನು ಉರುಹಾಕಿದ್ದೆ. 'ರಾಜಶೇಖರ ವಿಳಾಸ'ದಲ್ಲಿ ಅನೇಕ ಭಾಗಗಳನ್ನು ಉರುಹಾಕಿದ್ದೆ. ನಾನು ರಾತ್ರಿ ಬಹಳ ಹೊತ್ತಿನವರೆಗೆ ಓದುತ್ತಿದ್ದೆ. ಆಗ ಇದ್ದದ್ದು ಸೀಮೆಎಣ್ಣೆ ಲಾಂದ್ರ. ಎಣ್ಣೆಯೂ ಬಹಳ ಅಗ್ಗವಾಗಿದ್ದಿತು. ಆದರೂ ಹಳ್ಳಿಯಲ್ಲಿದ್ದುದರಿಂದ ನಮ್ಮ ತಂದೆ ಸೀಮೆಎಣ್ಣೆ ಹೆಚ್ಚಾಗಿ ಉರಿಸಿದರೆ ಆಕ್ಷೇಪಣೆ ಮಾಡುತ್ತಿದ್ದರು. ಅಲ್ಲದೆ ಬಾಯಿನಲ್ಲಿಯೇ ರಾಮಾಯಣ ಭಾರತವನ್ನೆಲ್ಲ ಹೇಳುತ್ತಿದ್ದ ಅವರಿಗೆ, ಯಾವುದೋ ಕಾಡುಹರಟೆ ಓದಲು ನಾನು ಎಣ್ಣೆ ಖರ್ಚುಮಾಡುತ್ತಿದ್ದುದು ಸರಿ ತೋರಲಿಲ್ಲ. ಆದುದರಿಂದ ನಾನು ಒಂದು ಕೊಠಡಿಯಲ್ಲಿ ರಾತ್ರಿಯ ಹೊತ್ತು ಕುಳಿತು, ಹೊರಕ್ಕೆ ದೀಪ ಕಾಣದಂತೆ ಬಾಗಿಲುಗಳಿಗೆಲ್ಲ ಬಟ್ಟೆ ಗಿಡಿದು ಒಳಗೆ ವ್ಯಾಸಂಗಮಾಡುತ್ತಿದ್ದೆ. ಆ ವ್ಯಾಸಂಗದಲ್ಲಿ ಒಂದು ಕ್ರಮವಿರಲಿಲ್ಲ. ನನಗೆ ನಾನೇ ಉಪಾಧ್ಯಾಯ. ಅನೇಕ ಇಂಗ್ಲಿಷ್ ಕಾದಂಬರಿ ಕಥೆ ಪುಸ್ತಕಗಳು ಕೈಗೆ ಸಿಕ್ಕಿದುವನ್ನೆಲ್ಲ ನಾನು ಓದಿದೆ. ವರ್ತಮಾನ ಪತ್ರಿಕೆಗಳನ್ನೂ ಓದುವ ಚಟ ನನಗೆ ಬಹಳವಾಗಿತ್ತು. ಹೀಗಾಗಿ ಯಾವ ವಿಷಯದ ಮೇಲೆಯೂ ನಾನೂ ಬರೆಯಬಲ್ಲೆನೆಂಬ ನಂಬಿಕೆ ನನಗೆ ಇತ್ತು. ಅಂದಿನ ಕಾಲದಲ್ಲಿ ಪತ್ರಿಕೆಗಳನ್ನು ನಡೆಸುವುದು ದೇಶಹಿತದ ದೃಷ್ಟಿಯಿಂದ ಪವಿತ್ರಕಾರ್ಯವೆಂದು ಪರಿಗಣಿಸಲ್ಪಟ್ಟಿತ್ತು. ಅಲ್ಲದೆ ಅವು ಬರಿಯ ಹಣಸಂಪಾದನೆಯ ಮತ್ತು ದುಷ್ಪರಿಣಾಮಗಳನ್ನು ಉಂಟುಮಾಡುವ ಸಾಧನಗಳಾಗಿರಲಿಲ್ಲ. ಆಗ ಪತ್ರಿಕೆ ನಡೆಸುವವನೆಂದರೆ, ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ಸಮಾಜದ ಆರೋಗ್ಯ ಮತ್ತು ಒಳಿತಿಗಾಗಿ ಒಬ್ಬ ವ್ಯಕ್ತಿ ನಷ್ಟವನ್ನು ಸಹ ಅನುಭವಿಸಿಕೊಂಡು ಬರುವ ಗಂಭೀರ ವೃತ್ತಿಯಾಗಿತ್ತು. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯಬೇಕೆಂಬುದು ನನ್ನ ಆಸೆಯೂ ಆಗಿತ್ತು. ನಾನು ನನ್ನ ಮೊದಲನೆಯ ಒಂದು ಸಣ್ಣ ಲೇಖನವನ್ನು ಮೈಸೂರು ವೃದ್ಧ ಪಿತಾಮಹ ದಿವಂಗತ ವೆಂಕಟಕೃಷ್ಣಯ್ಯನವರು ನಡೆಸುತ್ತಿದ್ದ 'ಸಾಧ್ವಿ' ಪತ್ರಿಕೆಯಲ್ಲಿ ಬರೆದಿದ್ದೆ.

ಅದು ನಾನು ಐದನೆ ಫಾರಂನಲ್ಲಿದ್ದಾಗ ಬರೆದುದು. ಅದರ ವಿಷಯ ಸಹ ಗಾಂಧೀಜಿಯ ಕಾರ್ಯಕ್ರಮವಾದ ಖಾದಿಗೆ ಸಂಬಂಧಪಟ್ಟದು—ದೇಶದ ಜನತೆಯೆಲ್ಲ ಚರಕದಲ್ಲಿ ನೂತು, ಖಾದಿಯನ್ನು ತಯಾರಿಸಿ ಧರಿಸಿ, ನಿರುದ್ಯೋಗವನ್ನು ಕಡಿಮೆಮಾಡಿಕೊಳ್ಳಬೇಕೆಂಬುದು. ಅನಂತರ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಆಗ ನಡೆಸುತ್ತಿದ್ದ 'ಜಯಕರ್ಣಾಟಕ' ಮಾಸಪತ್ರಿಕೆಗೆ ಕೆಲವು ಲೇಖನಗಳನ್ನು ಬರೆದೆ. 'ಜಯ ಕರ್ಣಾಟಕ'ಕ್ಕೆ ಬರೆದ ಮೊದಲನೆಯ ಲೇಖನ, ಅಂದು ಆಂಗ್ಲೇಯರು ಪ್ರತಿಪಾದಿಸುತ್ತಿದ್ದ ಭಾರತ ಒಂದು ಜನಾಂಗವೆ (Nation) ಅಲ್ಲವೆಂಬ ನಿಲುವಿನ ಪ್ರತಿಭಟನೆ. ನನ್ನ ಲೇಖನ 'ಭಾರತ ಒಂದು ಜನಾಂಗವೇ?' ಎಂಬ ಹೆಸರಿನಲ್ಲಿದ್ದು ಭಾರತ ಒಂದು ಜನಾಂಗವೆಂದು ಪ್ರತಿಪಾದಿಸುವುದಾಗಿದ್ದಿತು. ಆ ಕಾಲದ ನಿಯತಕಾಲಿಕ ಪತ್ರಿಕೆಗಳಲ್ಲಿ 'ಜಯ ಕರ್ಣಾಟಕ'ವೂ ಒಂದು ಉತ್ತಮಮಟ್ಟದ ಪತ್ರಿಕೆಯೆಂದು ಪರಿಗಣಿತವಾಗಿತ್ತು. ಅದರಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರು 'ಕಿಶೋರ ಚಂದ್ರವಾಣಿ' ಎಂಬ ಕಾವ್ಯನಾಮದಿಂದ ಪದ್ಯಗಳನ್ನು ಪ್ರಕಟಿಸಿದ್ದರು. ಅದರಲ್ಲಿ ನನ್ನ ಲೇಖನ ಪ್ರಕಟವಾದಾಗ ನನಗೆ ತುಂಬ ಹೆಮ್ಮೆಯಾಯಿತು. ನಾನು ನನ್ನ ಹೆಸರನ್ನು 'ಸೀತಾಪತಿ' ಎಂದು (ಕಾವ್ಯನಾಮ) ಹಾಕಿದ್ದೆ. ಶ್ರೀ ಆಲೂರು ವೆಂಕಟರಾಯರು ಅದನ್ನು 'ಸೀತಾತನಯ' ಎಂದು ಮಾಡಿಬಿಟ್ಟಿದ್ದರು. ಅಚ್ಚಾಗಿ ಕೈಗೆ ಬಂದ ಪತ್ರಿಕೆಯಲ್ಲಿ ನನ್ನ ಹೆಸರು ಹಾಗೆ ಬದಲಾಗಿದ್ದುದನ್ನು ನೋಡಿ ನನಗೆ ಮಹದಾನಂದವಾಯಿತು. 'ಸೀತಾಪತಿ' ಎಂಬುದರಲ್ಲಿರುವ ಉದ್ಧತತನವನ್ನು 'ಸೀತಾತನಯ' ಎಂಬ ನಮ್ರತೆಗೆ ಇಳಿಸಿದುದಕ್ಕೆ ನಾನು ಶ್ರೀ ಆಲೂರು ವೆಂಕಟರಾಯರನ್ನು ಮನಸಾರೆ ವಂದಿಸಿದೆ (ವಾಸ್ತವವಾಗಿ ನಮ್ಮ ಮನೆಯವರೆಲ್ಲ ನಮ್ಮ ತಂದೆಯೂ ಸೇರಿ ತುಂಬ ರಾಮಭಕ್ತರು. ಮನೆಯಲ್ಲಿರುವ ದೇವರೂ ರಾಮದೇವರೆ). ಅಲ್ಲಿಂದ ಮುಂದೆ ನಾನು 'ಜಯ ಕರ್ಣಾಟಕ'ದಲ್ಲಿ ೫–೬ ಲೇಖನಗಳನ್ನು ಬರೆದೆ. ಅದರಲ್ಲಿ ಒಂದು ಲೇಖನ 'ಭಾರತದ ಆರ್ಥಿಕ ಅವನತಿಗೆ ಕಾರಣ' ಎಂಬ ತಲೆಬರಹದ್ದು. ಆಂಗ್ಲೇಯರ ಆಡಳಿತಕ್ಕೆ ವಿರೋಧವಾದುದು. ಒಂದೊ ಎರಡೋ ಶ್ರೀ ಅರವಿಂದರ ಲೇಖನದ ಅನುವಾದ. ಖಾದಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ದೃಷ್ಟಿಯಿಂದ ಅಳಿದು ಹೋಗಿರುವ ಡಕ್ಕ ಮಸ್ಲಿನ್ ಕೈಗಾರಿಕೆಯನ್ನು ಕುರಿತು ಒಂದು ಲೇಖನ ಬರೆದಿದ್ದೆ. ಇವನ್ನೆಲ್ಲ ಸಂಪಾದಕರು ನನ್ನ ಹೆಸರಿನಲ್ಲಿಯೇ (ಜಿ. ಕೆ. ರಾಮಸ್ವಾಮಿ) ಪ್ರಕಟಿಸಿದ್ದರು.

ಆ ಕಾಲದಲ್ಲಿಯೇ ನಾನು ಕೆಲವು ಕವನಗಳನ್ನೂ ಬರೆದೆ. ಕೆಲವು 'ಜಯ ಕರ್ಣಾಟಕ'ದಲ್ಲಿಯೂ ಒಂದೆರಡು, ಶ್ರೀ ಶಿವರಾಮ ಕಾರಂತರು ಪ್ರಕಟಿಸುತ್ತಿದ್ದ 'ವಸಂತ'ದಲ್ಲಿಯೂ ಅಚ್ಚಾದುವು. ಈಚೆಗೆ ಅವನ್ನು ಶ್ರೀ ಕೃಷ್ಣಕುಮಾರ್ ಕಲ್ಲೂರ್ ಅವರು ಒಂದೆರಡು ಕವನ ಸಂಗ್ರಹದಲ್ಲಿ ಪ್ರಕಟನೆ ಮಾಡಿದ್ದಾರೆ. ಸಂಕಲನದಲ್ಲಿ ನನ್ನದು ಒಂದೆರಡು ಬಿಡಿ ಕವನಗಳು.

ಪತ್ರಿಕೆಗಳಲ್ಲಿ ಬರೆಯುವ ಹುಚ್ಚು ನನಗೆ ಮೊದಲಿನಿಂದಲೂ ಇತ್ತು. ಒಂದು ಮಾಸ ಪತ್ರಿಕೆಯನ್ನು ಪ್ರಕಟಿಸಬೇಕೆಂದು ನಾನು ನನ್ನ ಯೌವನ ಕಾಲದಲ್ಲಿ ಪ್ರಯತ್ನಿಸಿದ

ದುಂಟು. ಆದರೆ ಹಣದ ಅಭಾವದಿಂದ ಅದು ಸಾಧ್ಯವಾಗಲಿಲ್ಲ. ನನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಮದರಾಸಿನಲ್ಲಿ ಒಬ್ಬರು 'ಲೋಕಮಿತ್ರ'–'ಜನಮಿತ್ರ' (ಹೆಸರು ಸರಿಯಾಗಿ ಜ್ಞಾಪಕವಿಲ್ಲ) ಎಂಬ ಹೆಸರಿನ ದಿನಪತ್ರಿಕೆಯನ್ನು ಪ್ರಕಟಿಸುವುದಾಗಿಯೂ, ಅದಕ್ಕೆ ಒಬ್ಬ ಉಪಸಂಪಾದಕರು ಬೇಕೆಂದೂ, ಸಂಬಳ ೪೦ರೂ. ಎಂದು ಪತ್ರಿಕೆಗಳಲ್ಲಿ ಜಾಹೀರು ಮಾಡಿದರು. ಆಗಿನ ಕಾಲಕ್ಕೆ ಅದು ಕಡಿಮೆ ಸಂಬಳವಲ್ಲ. ಆಗ ಹೋಟಲುಗಳಲ್ಲಿ ನಾಲ್ಕು ಆಣೆಗೆ ಹೊಟ್ಟೆತುಂಬ ಅನ್ನ ಹಾಕುತ್ತಿದ್ದರು. ನನಗೆ ಆ ಕೆಲಸ ಹೇಗೂ ಸಿಕ್ಕುವುದಿಲ್ಲ ಎಂದು ನಂಬಿಕೆಯಾಗಿದ್ದರೂ ನಾನು ಮೊಂಡು ಧೈರ್ಯದಮೇಲೆ ಒಂದು ಅರ್ಜಿ ಹಾಕಿದೆ. ಅವರಿಂದ ಪ್ರತ್ಯುತ್ತರವೂ ಬಂದಿತು.ನನ್ನನ್ನು ಯಾವುದೋ ವಿಷಯದ ಮೇಲೆ ಸಾವಿರ ಪದಗಳ ಒಂದು ಲೇಖನವನ್ನು ಬರೆದು ಕಳುಹಿಸುವಂತೆ ಕೇಳಿದರು. ನಾನು ಬರೆದು ಕಳುಹಿಸಿದೆ. ಒಂದು ವಾರದೊಳಗೆ ನನಗೆ ಉಪಸಂಪಾದಕನ ಕೆಲಸ ಕೊಟ್ಟಿರುವುದಾಗಿ ತಿಳಿಸಿ ಅವರಿಂದ ಕಾಗದವೂ ರೈಲುಖರ್ಚಿಗೆ ಹಣವೂ ಬಂದಿತು. ನಾನು ಮದರಾಸಿಗೆ ಹೋದೆ. ಆ ಪತ್ರಿಕೆ ಮದರಾಸಿನಲ್ಲಿ ಅಲ್ಲಿನ ಕನ್ನಡಿಗರ ಪ್ರೋತ್ಸಾಹದಿಂದ ಪ್ರಿಂಟ್ ಆಗಿ ನಿತ್ಯ ಬೆಂಗಳೂರಿಗೆ ಬಂದು ಇಲ್ಲಿಯ ಪತ್ರಿಕೆಗಳೊಂದಿಗೆ ಸ್ಪರ್ಧಿಸಬೇಕಾಗಿತ್ತು. ಅನಂತರ ನಾನು 'ಆಂಧ್ರ ಪತ್ರಿಕೆ' ಮತ್ತು 'ಭಾರತಿ' ಆಫೀಸನ್ನು ಸೇರಿದೆ. ಅವೆರಡೂ (ಒಂದು ದೈನಿಕ ಮತ್ತೊಂದು ಮಾಸಿಕ) ತೆಲುಗು ಪತ್ರಿಕೆಗಳು. ನನಗೆ ತೆಲುಗು ಬರುತ್ತಿರಲಿಲ್ಲ. ಆದರೆ ಆ ಪತ್ರಿಕೆಗಳ ಸಂಪಾದಕರಾದ ದೇಶೋದ್ಧಾರಕ ನಾಗೇಶ್ವರರಾವ್ ಪಂತಲು (ಅಮೃತಾಂಜನದ ಒಡೆಯರು) ನನಗೆ ರಾಷ್ಟ್ರೀಯ ಕಾರ್ಯದ ಸಂದರ್ಭದಲ್ಲಿ ಪರಿಚಿತರಾಗಿದ್ದರು. ನನ್ನ ಜೀವನ ನಿರ್ವಹಣೆಗಾಗಿ ನನಗೆ ಯಾವುದಾದರೂ ಉದ್ಯೋಗವನ್ನು ಕೊಡುವುದಕ್ಕಾಗಿಯೇ ಅವರು ನನಗೆ ತಮ್ಮ ಪತ್ರಿಕೆಯ ಆಫೀಸಿನಲ್ಲಿ ಒಂದು ಕೆಲಸ ಕೊಟ್ಟರು. ನಾನು ವಾರಕ್ಕೆ ಎರಡು ಸಲ "ಮೈಸೂರು ಸಮಾಚಾರ" ಎಂಬ ಹೆಸರಿನಲ್ಲಿ ನನಗೆ ತಿಳಿದ ಇಂಗ್ಲಿಷಿನಲ್ಲಿ ಮೈಸೂರು ದೇಶದ ಪತ್ರಿಕೆಗಳಿಂದಲೇ ಕ್ರೋಢೀಕರಿಸಿ ಎರಡು ಕಾಲಂಗಳ ಸುದ್ದಿ ಸಾರಾಂಶವನ್ನು ಬರೆದುಕೊಡುತ್ತಿದ್ದೆ. ಅದನ್ನು ಭಾಸ್ಕರ್ ಎಂಬುವರು ತೆಲುಗಿಗೆ ಭಾಷಾಂತರಿಸಿ ಹಾಕುತ್ತಿದ್ದರು.

ಸ್ವಲ್ಪ ಕಾಲದೊಳಗೆ ಬೆಂಗಳೂರಿಗೆ ಹಿಂದಿರುಗಿ ನಾನು ಕೆಂಗೇರಿಯ 'ಗುರುಕುಲಾಶ್ರಮ'ವೆಂಬ ಸಂಸ್ಥೆಗೆ ಸೇರಿದೆ. ಅದೊಂದು, ರಾಷ್ಟ್ರೀಯ ಭಾವನಾ ಶಿಕ್ಷಣಶಾಲೆ. ಅಲ್ಲಿ ಸಬರಮತಿ ಆಶ್ರಮದ ರೀತಿಯಲ್ಲಿ ಜೀವನ ನಡೆಸಲು ನಾವು ಪ್ರಯತ್ನಿಸುತ್ತಿದ್ದೆವು. ಅಲ್ಲಿ ಜಾತಿಮತಗಳ ವ್ಯತ್ಯಾಸವಿರಲಿಲ್ಲ. ಹರಿಜನರಿಗೆ ಅತ್ಯಂತ ಹೆಚ್ಚಿನ ಸೌಲಭ್ಯ ಮತ್ತು ಗೌರವಗಳನ್ನು ಕೊಡುತ್ತಿದ್ದೆವು. ಈ ಸಮಾನತೆ ಎಲ್ಲಿಯವರೆಗೆ ಹೋಗಿದ್ದಿತೆಂದರೆ, ಹರಿಜನರಿಗೆ ವೇದ ಉಪನಿಷತ್ತು ವಿಷ್ಣುಸಹಸ್ರನಾಮ ಇವುಗಳನ್ನೆಲ್ಲ ಹೇಳಿಕೊಡುತ್ತಿದ್ದೆವು. ಅವರನ್ನು ಹೋಮ ಹವನಗಳಿಗೆ ಸಹ ಸಹಭಾಗಿ ಮಾಡಿಕೊಂಡಿದ್ದೆವು. ಹರಿಜನರನ್ನೇ ಅಡಿಗೆಗೂ ಸೇರಿಸಿದ್ದೆವು. ಎಲ್ಲ ಕಾರ್ಯಗಳೂ ಸ್ವಯಂಸೇವಕತನದ ಪ್ರಣಾಳಿಕೆಯಲ್ಲಿ ನಡೆಯುತ್ತಿದ್ದವು. ಅನೇಕ ಹರಿಜನ ವಿದ್ಯಾರ್ಥಿಗಳು ವೇದಮಂತ್ರಗಳನ್ನು ಸ್ವಚ್ಛವಾಗಿ ಉಚ್ಚರಿ

ಸುತ್ತಿದ್ದರು. ಎಲ್ಲೆಲ್ಲಿಯೂ ಸ್ವದೇಶೀ ವಾತಾವರಣ ಪ್ರಬಲವಾಗಿದ್ದ ಆ ಕಾಲದಲ್ಲಿ (೧೯೩೦) ಕೆಂಗೇರಿಯ 'ಗುರುಕುಲ' ಗಾಂಧೀಜಿ ಘೋಷಿಸುತ್ತಿದ್ದ ನಿಜವಾದ "ಹಳ್ಳಿಗಳಿಗೆ ಹಿಂದಿರುಗಿ" ಜೀವನದ ಪ್ರತೀಕವಾಗಿದ್ದಿತು. ಆಶ್ರಮದಲ್ಲಿ ವಿದ್ಯಾರ್ಥಿಗಳಿಗೆ, ಉಳಿದ ಕಾಲವನ್ನೆಲ್ಲ ಗ್ರಾಮಸ್ಥರಿಗೆ ಹೀಗೆ ನಾವು ಕಾಲವನ್ನು ವಿನಿಯೋಗಿಸುತ್ತಿದ್ದೆವು.

ಭಾರತದ ರಾಷ್ಟ್ರೀಯ ಆಂದೋಳನದ ಇತಿಹಾಸದಲ್ಲಿ ಅದು ಅತ್ಯಂತ ಬಿರುಸಿನ ಬಿರುಗಾಳಿಯ ಕಾಲ. ಉಪ್ಪಿನ ಸತ್ಯಾಗ್ರಹದ ಹೋರಾಟ, ದೇಶದ ನೈತಿಕ ಮಟ್ಟಕ್ಕೆ ಅಭೂತಪೂರ್ವ ಮಹೋನ್ನತಿಯನ್ನು ಒದಗಿಸಿತ್ತು. ಸಾವಿರ ವರುಷಕ್ಕೊಮ್ಮೆಯೂ ಒಂದು ರಾಷ್ಟ್ರ ಅಂತಹ ಉಜ್ವಲ ತ್ಯಾಗ ಅಹಿಂಸೆ ಬಲಿದಾನಗಳನ್ನು ಕಾಣಲಾರದು. ಉಪ್ಪಿನ ಸತ್ಯಾಗ್ರಹದಲ್ಲಿ ಹೋಗಿ ಸೇರಲು ನನಗೆ ತೀವ್ರವಾದ ಆಸೆಯಿದ್ದಿತು. ಆದರೆ ಗಾಂಧೀಜಿ, ರಚನಾತ್ಮಕ ಕಾರ್ಯದಲ್ಲಿ ತೊಡಗಿರುವವರು ಅದನ್ನು ಬಿಟ್ಟು ಬರಕೂಡದೆಂದು ವಿಧಿಸಿದ್ದರು (ಮುಂದೆ ೧೯೩೨ರಲ್ಲಿ ಗಾಂಧೀಜಿ ಆ ನಿಯಮವನ್ನು ಸಡಲಿಸಿದರು). ಆದುದರಿಂದ ಚಳವಳಿಯಲ್ಲಿ ಹೋಗಿ ಸೇರದಿದ್ದರೂ ನನ್ನ ಮನಸ್ಸೆಲ್ಲ ಅಲ್ಲಿಯೇ ಇತ್ತು. ಚಳವಳಿಯ ಮತ್ತೊಂದು ರೂಪವಾಗಿಯೇ ನಾವು ಗ್ರಾಮಪುನರುಜ್ಜೀವನ ಕಾರ್ಯದಲ್ಲಿ ತೊಡಗಿದ್ದೆವು. ನನ್ನ ದೇಹದ ಪ್ರತಿಯೊಂದು ನಾಡಿಯೂ ಸ್ವಾತಂತ್ರ್ಯ ವೀಣೆಯನ್ನು ಬಾರಿಸುತ್ತಿರುವುದು ನನಗೆ ಅನುಭವವಾಗುತ್ತಿತ್ತು. ಇಂತಹ ಸ್ವಾತಂತ್ರ್ಯದ ತಾದಾತ್ಮ್ಯ ಭಾವನೆಗೆ ರೂಪಕೊಡಲು ನಾನು 'ಹಳ್ಳಿಯ ಚಿತ್ರಗಳನ್ನು' ಬರೆದೆ.

ಅದನ್ನು ಬರೆಯಲು ಮುಖ್ಯ ಕಾರಣ, ಭಾರತದ ಹಳ್ಳಿಗಳ ಮೇಲಿನ ಪ್ರೀತಿ. ಭಾರತ. ಇನ್ನೂ ಭಾರತವಾಗಿ ಉಳಿದಿದ್ದುದೇ ಹಳ್ಳಿಗಳಿಂದ. ೧೫೦ ವರುಷಗಳಿಂದ ಅದನ್ನು ಆಂಗ್ಲೇಯರ ದಾಸ್ಯದಲ್ಲಿರಿಸಿ ಆಂಗ್ಲೀಕರಿಸಲು ಪಟ್ಟಣಿಗರೂ ವಿದ್ಯಾವಂತರೂ ವ್ಯಾಪಾರಿಗಳೂ ಲೇವಾದೇವಿಗಾರರೂ ಇಂಗ್ಲಿಷ್ ಕಲಿತವರೂ ಕೋರ್ಟು ಕಛೇರಿ ಸ್ಕೂಲು ಕಾಲೇಜುಗಳೂ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿದ್ದರು. ಸ್ವರಾಜ್ಯ ಸಂಪಾದನೆಯ ಪ್ರಯತ್ನಗಳೆಲ್ಲ ಅವರಿಗೇ ಸೀಮಿತವಾಗಿದ್ದುದರಿಂದ ಅದಕ್ಕೆ ಜಯವೂ ಆಗಿರಲಿಲ್ಲ. ಭಾರತ ಸ್ವಾತಂತ್ರ್ಯದಲ್ಲಿ ಗಾಂಧೀಜಿಯ ಪ್ರವೇಶವಾದ ಕೂಡಲೇ ಹಳ್ಳಿಗರೂ ಸಾಧಾರಣ ಜನರೂ ಸ್ತ್ರೀಯರೂ ಅನಕ್ಷರಸ್ಥರೂ ತಮ್ಮ ಸಿಂಹಾಸನಕ್ಕೆ ಏರಿದರು. ಆಂಗ್ಲ ಮತ್ತು ಆಂಗ್ಲೇಯರ ವ್ಯಾಮೋಹವನ್ನು ಕಿತ್ತುಹಾಕಿದರು. ಪ್ರತಿ ಹಳ್ಳಿಯೂ ಸ್ವಾತಂತ್ರ್ಯ ಹೋರಾಟದ ಒಂದು ಕಾಳಗಕಣವೇ ಆಯಿತು. ಗಾಂಧೀಜಿಯ ಹೆಸರನ್ನು ಕೇಳದ ಹಳ್ಳಿಯಾಗಲಿ, ರಾಷ್ಟ್ರಧ್ವಜವನ್ನು ಹಾರಿಸದ, ಖಾದಿ ಧರಿಸದ, ಚರಕದಲ್ಲಿ ನೂಲದ, ಪಾನ ನಿರೋಧವನ್ನು ಪ್ರಚಾರಿಸದ, ಈಚಲು ಮರಗಳನ್ನು ಕಡಿಯದ ಜನಗಳಿಲ್ಲದ ಊರಾಗಲೀ ಇರಲಿಲ್ಲ. ನಿಜವಾದ ಚಳವಳಿ ವಿದ್ಯಾವಂತರೆನಿಸಿಕೊಂಡವರಿಂದ ಜಾರಿ ಹಳ್ಳಿಗಳ ಕೈಗೆ ಬಿದ್ದಿತ್ತು. ಆ ಹೊಣೆಗಾರಿಕೆಯನ್ನು ತಾವು ಚೆನ್ನಾಗಿ ನಿರ್ವಹಿಸಬಲ್ಲರೆಂಬುದನ್ನು ಜನತೆ ದೇಶಕ್ಕೆ ತೋರಿಸಿತ್ತು. ಎಂದಿನಿಂದಲೂ ಭಾರತದ ಸತ್ವವಾಗಿ ಅದನ್ನು ಉಳಿಸಿಕೊಂಡು ಬಂದಿರುವ ರೈತ. ಗ್ರಾಮೀಣ, ಮತ್ತೆ ತಲೆ ಎತ್ತಿ ಎದೆ ತಟ್ಟಿ

ನಿಂತನು. ಬಾರ್ಡೋಲಿ ಚಳವಳಿ, ಕರ್ಣಾಟಕದಲ್ಲಿ ಸಿರಸಿ ಸಿದ್ದಾಪುರದ ಕರನಿರಾಕರಣ, ಅಸಹಕಾರ ಉಪ್ಪಿನ ಸತ್ಯಾಗ್ರಹದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೆರೆ ಸೇರಿದ ಜನ ಸಾಮಾನ್ಯರು, ಹಳ್ಳಿಗಳ ಕರ್ತವ್ಯ ದೇಶಭಕ್ತಿ ಇವುಗಳ ಮಟ್ಟವನ್ನೇ ತುಂಬ ಎತ್ತರಕ್ಕೆ ಏರಿಸಿಬಿಟ್ಟರು. ಹಳ್ಳಿಯವನೇ ಆದ ನನಗೆ ಸಹ, ಹಳ್ಳಿಗಳವರು ಹೊಸದಾಗಿ ಮೆರೆದ ತ್ಯಾಗ ಧೈರ್ಯ ಸಾಹಸ ಕೆಚ್ಚು ಪ್ರಾಣದ ಮೇಲಿನ ನಿರ್ಲಕ್ಷ್ಯ ಇವನ್ನು ಕಂಡು “ಇಂತಹ ಜನತೆಗೆ ಸಾಧ್ಯವಿಲ್ಲದುದು ಏನೂ ಇಲ್ಲ. ಇವರು ಭಾರತದ ಸತ್ವ. ಈ ಸತ್ವ ಈಗ ಮತ್ತೆ ಎದ್ದಿದೆ. ಪರಕೀಯರ ಸತ್ತೆ ಇನ್ನು ನಿಲ್ಲುವುದಿಲ್ಲ” ಎನಿಸಿತು.

‘ಹಳ್ಳಿಯ ಚಿತ್ರಗಳು’ ವೀರಕಾವ್ಯವಾಗಲೀ ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸವಾಗಲೀ ಬಲಿದಾನ ಚರಮ ರಣಗೀತೆಗಳ ರುದ್ರವೀಣೆಯಾಗಲೀ ಅಲ್ಲವೆಂಬುದು ನನಗೆ ಗೊತ್ತು. ಅದರ ಪೂರ್ಣ ಇರುವಿಕೆಯು ಭಾರತ ಸ್ವಾತಂತ್ರ್ಯದಲ್ಲಿ ಲೀನವಾಗಿ ಕನಸು ಮನಸು ಎಚ್ಚರ ಜಾಗೃತ ಎಲ್ಲ ಅವಸ್ಥೆಗಳಲ್ಲಿಯೂ ಸ್ವಾತಂತ್ರ್ಯ ಏಕಮೇವ ಜಪವಾದಾಗ ಹುಟ್ಟಿದ ಕೃತಿ ‘ಹಳ್ಳಿಯ ಚಿತ್ರಗಳು.’ ಅದಕ್ಕೆ ಪ್ರತ್ಯಕ್ಷವಾಗಿಯೂ ರಾಷ್ಟ್ರೀಯ ಚಳವಳಿಯ ಸಂಪರ್ಕವುಂಟು. ಆ ಕಾಲದಲ್ಲಿಯೇ ಶ್ರೀ ಕೆ. ವಿ. ಪುಟ್ಟಪ್ಪನವರ ಕವನ ‘ನಡೆ ಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ’ ಆಗ ತಾನೇ ಪ್ರಕಟವಾಗಿ ನನ್ನ ಕಣ್ಣಿಗೆ ಬಿದ್ದಿತು. ನಾನು ಭಾರತ ಸ್ವಾತಂತ್ರ್ಯದ ಮೇಲೆ ೫೦–೬೦ ಪುಟಗಳ ಒಂದು ಸಣ್ಣ ಪುಸ್ತಿಕೆಯನ್ನು ಪುಟ್ಟಪ್ಪನವರ ಕವನಪಂಕ್ತಿಗಳನ್ನೇ ಉದಾಹರಿಸಿ ಅದಕ್ಕೆ ವ್ಯಾಖ್ಯಾನವೋ ಎಂಬಂತೆ ಬರೆದೆ. ಅದನ್ನೂ ಕೆಂಗೇರಿಯ ‘ಗುರುಕುಲ’ದಿಂದ ಪ್ರಕಟಿಸಿದೆವು. ಆ ಪುಸ್ತಕಕ್ಕೆ ಏನು ಹೆಸರಿಟ್ಟದ್ದೆ ಎಂಬುದೂ ಸಹ ನನಗೆ ಮರೆತುಹೋಗಿದೆ.

‘ಹಳ್ಳಿಯ ಚಿತ್ರಗಳ’ನ್ನು ನಾನು ೮–೧೦ ದಿನಗಳಲ್ಲಿ ಬರೆದು ಮುಗಿಸಿದ ಜ್ಞಾಪಕ. ಅದರಲ್ಲಿ ಅನೇಕ ಭಾಗಗಳನ್ನು ನಾನು ಶ್ರೀ ಪು. ತಿ. ನರಸಿಂಹಾಚಾರ್ಯರಿಗೆ ಪತ್ರಗಳ ರೂಪದಲ್ಲಿ ಬರೆದಿದ್ದುದನ್ನು ಅನಂತರ ನನಗೆ ಅವರು ಕೊಟ್ಟು, “ಇವುಗಳನ್ನು ಪ್ರಕಟಿಸಿದರೆ ಚೆನ್ನಾಗುತ್ತೆ” ಎಂತ ಹೇಳಿದ್ದರು. ಅವುಗಳನ್ನು ಒಂದು ರೂಪಕ್ಕೆ ತಂದು ಇನ್ನೂ ಕೆಲವು ಚಿತ್ರಗಳನ್ನು ಸೇರಿಸಿ ಸಿದ್ಧಮಾಡುವ ಕಾರ್ಯ ಸುಲಭದಲ್ಲಿ ಆಯಿತು. ನನಗಿಂತ ವಯಸ್ಸಿನಲ್ಲಿ ಚಿಕ್ಕವರಾದರೂ ಶ್ರೀ ಪು.ತಿ.ನ.ರವರು ನನ್ನ ಸಾಹಿತ್ಯದಲ್ಲಿ ತೋರಿದ ಆಸಕ್ತಿ ಪ್ರೀತಿಯಿಂದಲೇ ನನಗೆ ಅದನ್ನು ಪ್ರಕಟಿಸಬಹುದೆಂಬ ಧೈರ್ಯ ಉಂಟಾಯಿತು. ಅಂದಿನಿಂದ ಇಂದಿನವರೆಗೆ ಅವರು ನನ್ನಲ್ಲಿ ಒಂದೇ ಸಮನಾದ ಪ್ರೀತಿವಿಶ್ವಾಸಗಳನ್ನಿಟ್ಟು ನನ್ನ ಕೃತಿಗಳನ್ನು ಅವಲೋಕಿಸಿದ್ದಾರೆ. ನನ್ನ ಶಕ್ತಿದೌರ್ಬಲ್ಯ ಎಲ್ಲ ಅವರಿಗೆ ಗೊತ್ತು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಕೆಲವು ಸಣ್ಣಕಥೆಗಳು ಪ್ರಕಟವಾದಂದಿನಿಂದಲೂ ಅವರನ್ನು ನಾನು ಬಹಳ ಮೆಚ್ಚಿಕೊಂಡಿದ್ದೆ. ಅವರಿಂದ “ಪರವಾಯಿಲ್ಲ” ಎನಿಸಿಕೊಳ್ಳಬೇಕೆಂಬುದು ನನ್ನ ತೀವ್ರ ಆಸೆಯಾಗಿತ್ತು. ಇಷ್ಟಾದರೂ ನಾನು ‘ಹಳ್ಳಿಯ ಚಿತ್ರಗಳ’ನ್ನು, ಯಾವುದಾದರೂ ಒಂದು ಮಾದರಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಕಟ್ಟುಪಾಡುಗಳನ್ನು ಮಾಡಿಕೊಂಡು ತಂತ್ರಕೌಶಲವನ್ನು ಉಪಯೋಗಿಸಿ ಬರೆಯ

ಬೇಕೆಂದು ಬರೆದ ಕೃತಿಯಲ್ಲ. ಸ್ನೇಹಿತರೊಂದಿಗೆ ಮಾತನಾಡುವಂತೆ ಸರಾಗವಾಗಿ ತೋಚಿದುದನ್ನು ಬರೆದ ಸರಳ ಕೃತಿ ಅದು. ಅದು ಅಷ್ಟೊಂದು ಜನಪ್ರಿಯವಾಗುತ್ತೆ ಎಂದು ಸಹ ನಾನು ಭಾವಿಸಿದ್ದೆನೆಂದು ಹೇಳಲಾರೆ. ಈಚೆಗೆ ಯೋಚಿಸಿದಾಗ ಅದಕ್ಕಾಗಿ ಇನ್ನೂ ಅಷ್ಟು ಶ್ರಮ ತೆಗೆದುಕೊಂಡಿದ್ದರೆ ಇನ್ನೂ ಉತ್ತಮವಾಗುತ್ತಿತ್ತೇನೋ ಎಂದೂ ಎನಿಸಿದೆ. ನಾನು ಸಂಕೋಚದಿಂದಲೂ ಅಧೈರ್ಯದಿಂದಲೂ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರಲ್ಲಿ ಹೋದಾಗ ಅವರು ಅತ್ಯಂತ ಪ್ರೀತ್ಯಾದರಗಳಿಂದ ಗ್ರಂಥಕ್ಕೆ ಮುನ್ನುಡಿ ಬರೆದು ಕೊಟ್ಟರು. ಹೊಸ ಲೇಖಕರಿಗೆ ಅಂದಿನ ಕಾಲಕ್ಕೆ—ಅದರಲ್ಲಿಯೂ ಒಂದು ಹೊಸ ಬಗೆಯ ಸಾಹಿತ್ಯವನ್ನು ಪ್ರಾರಂಭಿಸುವವರಿಗೆ—ಅಂತಹ ಪ್ರೋತ್ಸಾಹ ಅಗತ್ಯವಾಗಿ ಬೇಕಾಗಿತ್ತು. ನನಗೆ ಅಂತಹ ಪ್ರೋತ್ಸಾಹ ದೊರೆಯದಿದ್ದರೆ ನಾನು ಅಲ್ಲಿಂದ ಮುಂದೆ ಇತರ ಗ್ರಂಥಗಳನ್ನು ಬರೆಯುತ್ತಿದ್ದೆನೋ ಇಲ್ಲವೋ ಹೇಳಲಾರೆ.

ಅಂದಿನ ನಮ್ಮ ದೇಶದ ಪರಿಸ್ಥಿತಿ ಮತ್ತು ಕನ್ನಡದ ಮೇಲಿನ ನಿರಭಿಮಾನಕ್ಕೆ ಈ ಗ್ರಂಥ ಪ್ರಕಟನೆಯ ಸಂಬಂಧದಲ್ಲಿ ನನಗೆ ಉಂಟಾದ ಅನುಭವವನ್ನು ಹೇಳಬಹುದು. ಗ್ರಂಥವನ್ನು ಪ್ರಕಟಿಸಲು ನನ್ನ ಕೈಯಲ್ಲಿ ಮೂರುಕಾಸೂ ಇರಲಿಲ್ಲ. ನಾವು ಗುರುಕುಲದಲ್ಲಿ ನಮ್ಮ ಜೀವನ ನಿರ್ವಹಣಕ್ಕೆ ಎಷ್ಟು ಆವಶ್ಯಕವೋ ಅಷ್ಟು ಮಾತ್ರ ಹಣವನ್ನು ತೆಗೆದುಕೊಳ್ಳುತ್ತಿದ್ದೆವು. (ನಾನು ತಿಂಗಳಿಗೆ ೩೦ ರೂ. ತೆಗೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಮತ್ತು ಒಬ್ಬ ಮಗ ಸಹ ಅಲ್ಲಿಯೇ ನನ್ನ ಜೊತೆ ಇರುತ್ತಿದ್ದರು.) ಗುರುಕುಲದಲ್ಲಿ ಕೊಡಗಿನ ಮಿತ್ರರೊಬ್ಬರು, ನನ್ನಂತೆಯೇ ಉದ್ಯೋಗಿಗಳಾಗಿ ಸೇರಿದ್ದರು. ಅವರಿಗೆ ಅದೇನು ಕಾರಣವೋ ಆ ಪುಸ್ತಕದ ವಿಷಯದಲ್ಲಿಯೂ ತುಂಬ ಪ್ರೀತಿ ಮತ್ತು ನನ್ನ ಭವಿಷ್ಯದ ವಿಷಯದಲ್ಲಿ ಸಹ ನನಗಿಂತ ಹೆಚ್ಚು ನಂಬಿಕೆ. ಬೆಂಗಳೂರು ಪ್ರೆಸ್, ಈಗಿನಂತೆ ಆಗಲೂ ಒಳ್ಳೆಯ ಮುದ್ರಣಕ್ಕೆ ಹೆಸರಾಗಿದ್ದಿತು. ಅಲ್ಲಿ ವಿಚಾರಿಸಿದಾಗ 'ಹಳ್ಳಿಯ ಚಿತ್ರಗಳು' ಸಾವಿರ ಪ್ರತಿ ಮುದ್ರಣಕ್ಕೆ (ಕಾಗದ ಸಹ ಸೇರಿ) ಇನ್ನೂರ ನಲವತ್ತು ರೂಪಾಯಿ ಆಗುವುದೆಂದರು. ನನ್ನ ಮಿತ್ರರು ನನ್ನೊಂದಿಗೆ "ಕೊಡಗಿನಲ್ಲಿ ನನ್ನ ಭಾವ ಒಬ್ಬ ಇದ್ದಾನೆ. ಅವನಿಂದ ನಿಮಗೆ ೨೫೦ ರೂ ಸಾಲ ಕೊಡಿಸುತ್ತೇನೆ. ಹಣ ಸಿಕ್ಕಿದ ಹಾಗೆ ತೀರಿಸಿಬಿಡೋಣ" ಎಂದರು. ನಾನೂ ಕಾತರನಾಗಿ ಒಪ್ಪಿದೆ. ಅವರು ನನ್ನ ವಿಷಯವನ್ನೆಲ್ಲ (ಗ್ರಂಥದ ವಿಷಯ ಸಹ) ಬರೆದು ಅವರ ಭಾವಂದಿರನ್ನು ಹಣ ಸಾಲ ಕೇಳಿದರು. ಇಬ್ಬರಿಗೂ ಎರಡು ಮೂರು ಬಾರಿ ಪತ್ರವ್ಯವಹಾರವಾದಮೇಲೆ, ನನ್ನ ಮಿತ್ರರು ನನ್ನಲ್ಲಿ ಬಂದು "ನೋಡಿ ಆ ಮನುಷ್ಯನಿಗೆ B.A., M.A., ಡಿಗ್ರಿಗಳ ವ್ಯಾಮೋಹ. ಬಿ.ಎ. ಆಗಿದ್ದರೆ ಹಣ ಸಾಲ ಕೊಡಬಹುದಿತ್ತು. ಇಲ್ಲದಿದ್ದರೆ ಕೊಡುವುದು ಸಾಧ್ಯವಿಲ್ಲ ಎಂದು ಬರೆಯುತ್ತಾರೆ. ಹೇಗೆ ಮಾಡೋಣ, ನಿಮಗೆ ಪರಿಚಿತರು ಯಾರಾದರೂ ಇದ್ದರೆ ಗ್ರಾಜುಯೇಟ್–ಹೇಳಿ. ಅವರೂ ನೀವೂ ಇಬ್ಬರೂ ಸೇರಿ ಜಂಟಿ ಸಾಲ ತೆಗೆದುಕೊಂಡರೆ ಕೊಡುತ್ತಾರೆ" ಎಂದರು. ನನ್ನ ಭಾವನೈದುನ ಒಬ್ಬರು ಇದ್ದರು. ಅವರು ಆಗತಾನೆ B.Sc ಮಾಡಿದ್ದರು. ಅವರು ನನ್ನೊಂದಿಗೆ ಜಂಟಿಯಾಗಲು ಒಪ್ಪಿದುದರಿಂದ ಇಬ್ಬರೂ

ಸೇರಿ ಪ್ರಾಮಿಸರಿ ನೋಟ್ ಬರೆದು ಸಾಲ ತರಿಸಿ ಗ್ರಂಥವನ್ನು ಅಚ್ಚಿಸಿದೆ.

'ಹಳ್ಳಿಯ ಚಿತ್ರ'ಗಳ ಹಿಂದೆಯೇ ಬಂದ ನನ್ನ 'ನಮ್ಮ ಊರಿನ ರಸಿಕರಿ'ಗೆ ಮೊದಲಿನ ಪುಸ್ತಕಕ್ಕಿಂತ ಹೆಚ್ಚಾಗಿ ಹಿರಿಯರ ಆಶೀರ್ವಾದಪೂರ್ವಕ ರಂಗವೇದಿಕಾಪ್ರವೇಶ ದೊರೆಯಿತು. ಅದನ್ನು ನಾನು ಪೂರ್ತ ಕೆಂಗೇರಿಯಲ್ಲಿಯೇ ಬರೆದೆ. ಅದರಲ್ಲಿ ಬರುವ "ಬೆಂಕಿ ಪಟ್ಟಣದಿಂದ ಪಂಕಿ ಬಳೆ ಬಂದೊ" ಎಂದು ಪ್ರಾರಂಭವಾಗುವ ತ್ರಿಪದಿಗಳೆಲ್ಲ ಕೆಂಗೇರಿ ಗ್ರಾಮದ ಹರಿಜನರು (ಮಹಿಳೆಯರು) ಹಾಡಿದುದು. ಒಂದು ಭಜನೆ ಮಂದಿರದಲ್ಲಿ ಅವರು ಗೋಡೆಯ ಆಚೆ ಕುಳಿತು ಹಾಡುವರು. ನಾನು ಬರೆದುಕೊಳ್ಳುತ್ತಿದೆ. ಆ ಭಜನೆ ಮಂದಿರದಲ್ಲಿ ನಿತ್ಯಾನಿತ್ಯಾತ್ಮಶುಕಯೋಗಿಯ 'ಕನ್ನಡ ಭಾಗವತ'ಕ್ಕೆ ಅರ್ಥ ಹೇಳುತ್ತಿದ್ದೆ. ಗಮಕವನ್ನು ಕಲಿಯುತ್ತಿದ್ದ ಊರಿನ ಒಬ್ಬ ಗೌಡರು ಓದುತ್ತಿದ್ದರು. ೧೯೨೦ ರಿಂದ ೪೦ರ ವರೆಗಿನ ಬೆಂಗಳೂರು ಮೈಸೂರುಗಳ ವಾತಾವರಣದಲ್ಲಿ ಕನ್ನಡ ಪ್ರೇಮ ಕುತೂಹಲದ ಹೊಸ ಗುಂಗು ಕಾಣುತ್ತಿತ್ತು. ಶ್ರೀಯುತರಾದ ಮಾಸ್ತಿ ವೆಂಕಟೇಶಯ್ಯಂಗಾರ್, ಬಿ. ಎಂ. ಶ್ರೀಕಂಠಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಡಿ. ವಿ. ಗುಂಡಪ್ಪ, ಬೆಳ್ಳಾವೆ ವೆಂಕಟನಾರಣಪ್ಪ ಮುಂತಾದವರೆಲ್ಲ ಬೆಂಗಳೂರಲ್ಲಿ ನೆಲೆಸಿದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರರ ಅನೌಪಚಾರಿಕ ನೇತೃತ್ವದಲ್ಲಿ ಅವರೆಲ್ಲ ಒಂದು ಸಾಹಿತ್ಯ ಸಹಾಯಕ ಸಂಘವನ್ನು ಸ್ಥಾಪಿಸಿಕೊಂಡಿದ್ದರು. ಅನುಕೂಲವುಳ್ಳವರೆಲ್ಲ ಆ ಸಂಘಕ್ಕೆ ತಿಂಗಳಿಗೆ ೧೦ ರೂನಂತೆ ಚಂದಾ ಕೊಟ್ಟು (ಅಂದಿನ ಕಾಲಕ್ಕೆ ಅದು ದೊಡ್ಡ ಮೊತ್ತವೆ) ಅದರಿಂದ ಉತ್ತಮವಾದ ಗ್ರಂಥಗಳಿಗೆ ಪ್ರಕಟನೆಗಾಗಿ ಸಹಾಯ ಮಾಡುತ್ತಿದ್ದರು. ಸಾಹಿತಿಗಳಲ್ಲದಿದ್ದವರೂ ಸಹ ಈ ಸಂಘದಲ್ಲಿದ್ದು ತಿಂಗಳ ಚಂದ ಕೊಡುತ್ತಿದ್ದುದು ನನಗೆ ಜ್ಞಾಪಕ. ಶ್ರೀ ವೆಂಕಟೇಶಯ್ಯಂಗಾರರೇ ಅದಕ್ಕೆ ಚಾಲಕರೂ ಆಗಿದ್ದರು. ರಾವ್‌ಸಾಹೇಬ್ ಎಂ. ರಾಮರಾವ್‌ರೂ ಒಬ್ಬ ಚಂದಾದಾರರಾಗಿದ್ದರು. ಶ್ರೀ ಸಿ. ಕೆ. ವೆಂಕಟರಾಮಯ್ಯನವರೂ ಸಹ ಚಂದಾದಾರರಾಗಿದ್ದರೆಂದು ನನಗೆ ನೆನಪು. ಒಬ್ಬ ಲೇಖಕ ಉತ್ತಮವಾದ ಗ್ರಂಥವೊಂದನ್ನು ಬರೆದಿದ್ದಾನೆ ಎಂದು ತಿಳಿದ ಕೂಡಲೇ ಯಾರಾದರೂ ಸದಸ್ಯರ ಮನೆಯಲ್ಲಿ ಭಾನುವಾರ ಅಥವಾ ರಜದದಿನ ಅದರ ವಾಚನಕ್ಕೆ ಏರ್ಪಡಿಸುತ್ತಿದ್ದರು. ಆ ದಿವಸ ಪುಷ್ಕಳವಾದ ಫಲಾಹಾರವೂ ಸದಸ್ಯರ ಖರ್ಚಿನಲ್ಲಿ ಆಹ್ವಾನಿತರಿಗೆಲ್ಲ ದೊರೆಯುತ್ತಿದ್ದಿತು. ವಾಚನ ಸರಳವಾಗಿ ಸರಾಗವಾಗಿ ಅತಿಯಾದ ಔಪಚಾರಿಕ ಆಡಂಬರವಿಲ್ಲದೆ ನಡೆಯುತ್ತಿದ್ದಿತು. ಸದಸ್ಯರೂ ವಿನೋದ ಹಾಸ್ಯ ಎಲ್ಲವನ್ನೂ ಮಾಡುತ್ತಿದ್ದರು. ಸ್ವಲ್ಪ ಹೆಚ್ಚು ಕಡಿಮೆ ಒಂದು ವಿಮರ್ಶೆಯೂ ನಡೆದು ಗುಣದೋಷಗಳೂ ಸಹ ತೀರ್ಮಾನವಾಗುತ್ತಿದ್ದವು.

'ನಮ್ಮ ಊರಿನ ರಸಿಕರು' ಪುಸ್ತಕದ ಹಸ್ತಪ್ರತಿಯನ್ನು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಮನೆಯಲ್ಲಿಯೇ ವಾಚಿಸಬೇಕೆಂದು ತೀರ್ಮಾನವಾಗಿತ್ತು. ಅಲ್ಲಿ ಅಂದು ಸುಮಾರು ನಲವತ್ತು ಜನ ವಿದ್ವಾಂಸರೂ ಹಿತೈಷಿಗಳೂ ಸೇರಿದ್ದರು. ಶ್ರೀ ಬಿ. ಎಂ. ಶ್ರೀಕಂಠಯ್ಯನವರೂ ಸಹ ಬಂದಿದ್ದರು. ನಾನು ಪ್ರಾರಂಭದಲ್ಲಿ ಹೆದರುತ್ತ ಹೆದರುತ್ತಲೇ ಓದಿದರೂ ಶ್ರೋತೃಗಳ ಪ್ರೋತ್ಸಾಹದಿಂದ ಮುಂದೆ ಧೈರ್ಯ

ವಾಗಿ ಓದಿದೆ. ಕೊನೆಯ ನಾಲ್ಕಾರು ಪುಟಗಳನ್ನು ಓದುವಾಗ ನನಗೆ ಗಂಟಲು ಕಟ್ಟಿಕೊಂಡಂತೆ ಭಾಸವಾಯಿತು. ಆಗ ಶ್ರೀ ಪು. ತಿ. ನರಸಿಂಹಾಚಾರ್ ಅವರೇ ಉಳಿದ ಕೆಲವು ಪುಟಗಳನ್ನು ಓದಿದರು. ಶ್ರೋತೃಗಳೆಲ್ಲ ತುಂಬ ಆನಂದದಿಂದ ಕುಳಿತು ಕೇಳಿದರೆಂದು ನನ್ನ ಭಾವನೆ. ವಿನೋದದ ವಾತಾವರಣದಲ್ಲಿ ಎಲ್ಲರ ನಾಲಿಗೆಗಳೂ ಸಡಿಲವಾಗಿ ಎಲ್ಲರೂ ತಮ್ಮ ತಮ್ಮ ಅನುಭವಗಳನ್ನು ಹೇಳತೊಡಗಿದರು. ಶ್ರೀ ಬಿ. ಎಂ. ಶ್ರೀಯವರೂ ತಮ್ಮ ಒಂದು ಅನುಭವವನ್ನು ಹೇಳಿದರು. ಯಾವಾಗಲೂ ಗಂಭೀರವಾದ ವಿಷಯಗಳ ಮೇಲೆ ಗಂಭೀರವಾಗಿ ಮಾತನಾಡುತ್ತಿದ್ದ ಅವರ ಬಾಯನ್ನೂ ನನ್ನ ಪುರಾಣ ಬಿಡಿಸಿಬಿಟ್ಟಿತಲ್ಲ ಎಂದು ನನಗೆ ಸ್ವಲ್ಪ ಆಶ್ಚರ್ಯ, ಸ್ವಲ್ಪ ಹೆಮ್ಮೆ. ಅವರು ತಮ್ಮ ಯೌವನದಲ್ಲಿ ಬೈಸಿಕಲ್ ಸವಾರಿ ಕಲಿತ ಪ್ರಾರಂಭದಲ್ಲಿ, ಚಾಮರಾಜಪೇಟೆಯ ತಿಟ್ಟಿನಲ್ಲಿ (up) ಬೈಸಿಕಲ್ ಮೇಲೆ ಕುಳಿತು ಇಳಿಜಾರಿನಲ್ಲಿ ಜೋರಾಗಿ ಬಂದಮೇಲೆ ಏನು ಮಾಡಿದರೂ ಇಳಿಯುವುದಕ್ಕೆ ಆಗದೆ, ಸುಸ್ತಾಗುವವರೆಗೆ ಅಲ್ಲಲ್ಲಿ ಬೈಸಿಕಲ್ ತಿರುಗಿಸಿ ಕೊನೆಗೆ ಒಂದು ಮರಕ್ಕೆ ದಿಡ್ಡಿಸಿ ಅರ್ಧ ಬಿದ್ದು ಇಳಿದರಂತೆ. ಶ್ರೀಕಂಠಯ್ಯನವರಂಥವರೂ ಇಂತಹ ಸಾಹಸ ಮಾಡಿದುದನ್ನು ಕೇಳಿ ಶ್ರೋತೃಗಳಿಗೆ ಆಶ್ಚರ್ಯವಾಯಿತು. ಶ್ರೀ ಡಿ. ವಿ. ಗುಂಡಪ್ಪನವರು 'ನಮ್ಮ ಊರಿನ ರಸಿಕರು'ಗೆ ಮುನ್ನುಡಿ ಬರೆದುಕೊಟ್ಟು ನನಗೆ ಮಹೋಪಕಾರ ಮಾಡಿದರು. ಅಂದಿನಿಂದ ಇಂದಿನವರೆಗೆ ಅವರು ನನ್ನಲ್ಲಿ ಒಂದೇ ಸಮನಾದ ವಾತ್ಸಲ್ಯವನ್ನೂ ಪ್ರೀತಿಯನ್ನೂ ತೋರಿಸುತ್ತಿದ್ದಾರೆ. ಈ ಗ್ರಂಥಗಳ ಅದೃಷ್ಟ ಒಳ್ಳೆಯದು. ಅವು ನನಗೆ ದೇಶ ವಿದೇಶಗಳಿಂದೆಲ್ಲ ಕನ್ನಡ ಮಿತ್ರರ ಪರಿಚಯ ಮಾಡಿಸಿದವು. ಸರ್. ಎಂ. ವಿಶ್ವೇಶ್ವರಯ್ಯ, ವಿದ್ಯಾ ಐ. ಜಿ. ರಾಮರಾವ್. ಎಸ್. ಎಸ್. ಸುಬ್ಬರಾವ್, ಎಂ. ಹಿರಿಯಣ್ಣ, ಎಂ. ಎಸ್. ಕೃಷ್ಣರಾವ್, ಸಿಟ್ಟೂರು ಶ್ರೀನಿವಾಸರಾವ್ (ಮುಂದೆ ನನ್ನ ಪ್ರಕಾಶಕರೂ, ಆಪ್ತಮಿತ್ರರೂ ಆದವರು) ಎಲ್ಲ ಸಾಹಿತ್ಯ ಮಿತ್ರರೂ ಪ್ರಕಾಶಕರೂ ನನ್ನಲ್ಲಿ ಅವ್ಯಾಜ ಪ್ರೇಮವನ್ನು ತೋರಿದರು.

'ನಮ್ಮ ಊರಿನ ರಸಿಕರು' ಎಳೆಯರ ಮನಸ್ಸನ್ನೂ ಆಕರ್ಷಿಸಿದ್ದಿತು. ಡಾ. ಹಾ. ಮಾ. ನಾಯಕರು, ತಾವು V form ದಲ್ಲಿ ಓದುತ್ತಿರುವಾಗ, ಆ ಪುಸ್ತಕ ತಮಗೆ ತುಂಬ ಹಿತವಾಗಿ ತೋರಿತೆಂದೂ, ಅಂತಹ ಪುಸ್ತಕಗಳನ್ನು ಬರೆಯಲು ತಮಗೂ ಬಹಳ ಆಸೆಯೆಂದೂ ಬರೆದಿದ್ದರು.

ಕೆಂಗೇರಿ 'ಗುರುಕುಲಾಶ್ರಮ'ದಿಂದ ನಾನು ಬೆಂಗಳೂರಿಗೆ ಬಂದು ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯದ ಜವಾಬ್ದಾರಿಯನ್ನು ವಹಿಸಿಕೊಂಡೆ. ಆ ಕಾರ್ಯ ನನಗೆ ತುಂಬ ಪ್ರಿಯವೂ ಆಗಿತ್ತು. ರಾಷ್ಟ್ರದ ಕೆಲಸವನ್ನು ಹೇಗೋ ಮಾಡುತ್ತಿದ್ದೇನೆ ಎಂಬ ಭಾವನೆ ದೇಹಕ್ಕೂ ಮನಸ್ಸಿಗೂ ನೆಮ್ಮದಿ ತಂದ ಕಾರ್ಯ ಅದು. "ನ್ಯಾಯ ಸಾಯದ ಕೂಲಿಯವಾದರೂ ಆಗಬಲ್ಲೆ. ಆದರೆ ವ್ಯಾಪಾರಿಯಾಗಲೀ ಕಾರ್ಖಾನೆಯ ಕೂಲಿಯಾಗಲೀ ಆಗುವುದು ಸಾಧ್ಯವಿಲ್ಲ"ವೆಂಬುದು ನನ್ನ ಅನುಭವವಾಗಿತ್ತು. ಆದರೆ ಖಾದಿಯನ್ನು ನಾನು ಅಳೆಯುತ್ತಿದ್ದರೂ ಮಾರುತ್ತಿದ್ದರೂ ನಾನೆಂದೂ ವ್ಯಾಪಾರಿ

ಎಂಬ ಭಾವನೆ ಬರುತ್ತಿರಲಿಲ್ಲ. ಅಲ್ಲಿಗೆ ಎಲ್ಲ ಮಿತ್ರರೂ ಖಾದಿ ಕೊಳ್ಳಲು ಬರುತ್ತಿದ್ದರು. ನನ್ನೊಂದಿಗೆ ಹರಟೆ ಹೊಡೆಯುವುದಕ್ಕೂ ಕೆಲವರು ಬರುತ್ತಿದ್ದರೆಂದು ನನ್ನ ಸಂಶಯ. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಶರಟುಗಳನ್ನು ಹೊಲಿಸಿಕೊಳ್ಳಲು ಬರುತ್ತಿದ್ದರು (ನಮ್ಮಲ್ಲಿ ಒಳ್ಳೆಯ ಬುದ್ಧಿವಂತ ದರ್ಜಿಯಿದ್ದ). ಶ್ರೀ ಬಿ. ಎಂ. ಶ್ರೀಕಂಠಯ್ಯನವರೂ ಬಂದು ನಾಲ್ಕು ಷರಾಯಿಗಳಿಗೆ ಆರ್ಡರ್ ಕೊಟ್ಟರು. ಷೇಕ್ಸ್‌ಪಿಯರ್‌ನನ್ನು ಎದೆಯಲ್ಲಿ ಧರಿಸಿ, ವಾರ್‌ಕಮಿಟಿ ಅಧ್ಯಕ್ಷರಾಗಿದ್ದ ಬಿ.ಎಂ.ಶ್ರೀಯವರು ಖಾದಿ ಭಕ್ತರಲ್ಲವೆಂದು ಕೆಲವರು ಭಾವಿಸುವುದುಂಟು. ಆದರೆ ಗಾಂಧಿ ಮಂತ್ರ ಯಾರಾರನ್ನು ಹೇಗೆ ಹೇಗೆ ಆಡಿಸಿತೋ ಬಲ್ಲವರಾರು. ನೀಲನಾಗಿಣಿ ಎಂಬ ಆಂಗ್ಲ ಮಹಿಳೆ ತನ್ನ ಸುಂದರವಾದ ಕೂದಲನ್ನು ಬೋಳಿಸಿ ಪರಕೆ ಮಂಕರಿ ಹಿಡಿದು ಹರಿಜನ ಕೇರಿಗಳನ್ನೆಲ್ಲ ಗುಡಿಸಿದಳು. ಅವಳಿಗೆ ಮರುಳಾದ ಅನೇಕ ಖಾದಿ ಭಕ್ತರು, ಅವಳೊಂದಿಗೆ ತಾವೂ ಮಂಕರಿ ಪರಕೆಗಳೊಡನೆ ಕೆಲಸಮಾಡಿದರು. ಶ್ರೀ ಡಿ. ವಿ. ಗುಂಡಪ್ಪನವರೂ ಸಹ ಖಾದಿ ತೊಟ್ಟು, ಶ್ರೀ ವೆಂಕಟಪತಯ್ಯನವರ ನೇತೃತ್ವದಲ್ಲಿ ಒಂದು ಹರತಾಳದ ಮೆರವಣಿಗೆಯಲ್ಲಿ ಭಾಗವಹಿಸಿದುದು ನನಗೆ ಜ್ಞಾಪಕ. ಶ್ರೀ ವಿ. ಸೀತಾರಾಮಯ್ಯನವರು, ತುಂಬ ಬೆಲೆ ಕೊಟ್ಟು ಖಾದಿಯಲ್ಲೆಲ್ಲ ಅತ್ಯಂತ ತೆಳುವಾದ ಮಲ್‌ನ್ನು ತೆಗೆದುಕೊಂಡು ಹೋಗಿ, ಕೊನೆಗೆ "ಉಡುವುದು ಸಾಧ್ಯವಿಲ್ಲ. ಹಾಸಿಗೆಗೆ ಹಾಕಿದ್ದೀನಿ" ಎಂದರು.

ಖಾದಿ ವಸ್ತ್ರಾಲಯದಲ್ಲಿ ನಾನು ಕೆಲಸ ಮಾಡಿದಾಗ ನಡೆದ ಎರಡು ವಿಷಯ ಉಲ್ಲೇಖನಾರ್ಹವಾದುದು. ಆಗ "ಗಾಂಧೀ ಜಯಂತಿ"ಯ ಕಾಲದಲ್ಲಿ, ಒಂದು ರೂಪಾಯಿ ಖಾದಿ ಕೊಂಡವರಿಗೆ ಒಂದು ಆಣೆ ರಿಯಾಯ್ತಿ ಕೊಡುತ್ತಿದ್ದೆವು. ಈ ರಿಯಾಯ್ತಿ ರೂಪಾಯಿ ಪೂರ್ತ ಕೊಂಡದ್ದಕ್ಕೆ ಅನ್ವಯಿಸುತ್ತಿದ್ದಿತೇ ಹೊರತು ಅರ್ಧ ರೂಪಾಯಿಗೆ ಅರ್ಧಾಣೆ, ಮುಕ್ಕಾಲು ರೂಪಾಯಿಗೆ ಮುಕ್ಕಾಲಾಣೆ ಹೀಗೆ ಅಲ್ಲ. ಹದಿನೈದು ಮುಕ್ಕಾಲಾಣೆ ತೆಗೆದುಕೊಂಡರೂ ಕಮೀಶನ್ ಇರಲಿಲ್ಲ. "ಅರ್ಧ ರೂಪಾಯಿಗೆ ಅರ್ಧಾಣೆ ಕಮಿಶನ್ ಕೊಡಬೇಕು; ಮುಕ್ಕಾಲು ರೂಪಾಯಿಗೆ ಮುಕ್ಕಾಲಾಣೆ ಕಮೀಶನ್ ಕೊಡಬೇಕು" ಎಂದು ಗಿರಾಕಿಗಳು ಸಕಾರಣವಾಗಿಯೇ ವಾದಿಸುತ್ತಿದ್ದರು. ಅದು ನಮ್ಮ ನಿಯಮವಲ್ಲ ಎಂದು ನಾನು ಹೇಳಿದರೂ ಅವರು "ಅದು ಸರಿಯಲ್ಲ" ಎಂದೇ ವಾದಿಸುತ್ತಿದ್ದರು. ಒಂದು ದಿನ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಖಾದಿ ಕೊಳ್ಳಲು ಅಂಗಡಿಗೆ ಬಂದರು. ಅವರು ಕೊಂಡದ್ದು ಎಷ್ಟೋ ರೂಪಾಯಿಗಳ ಮೇಲೆ ಮುಕ್ಕಾಲು ರೂಪಾಯಿ ಆಯಿತು. ನಾವು ಪೂರ್ಣ ರೂಪಾಯಿಗೆ, ರೂಪಾಯಿಗೆ ಒಂದಾಣೆಯಂತೆ ಕಮೀಶನ್ ಕೊಟ್ಟೆವು. ಮುಕ್ಕಾಲು ರೂಪಾಯಿಗೆ ಇಲ್ಲ. ಬುದ್ಧಿವಂತರ ಬುದ್ಧಿ ಅವರನ್ನು ಸುಮ್ಮನೆ ಇರಗೊಡುತ್ತದೆಯೆ ? ಅವರು "ಇದು ಸಕಾರಣವಲ್ಲ. ಒಂದು ನಿಯಮ ಎಂದ ಮೇಲೆ ನಿಯಮ ಪಾಲನೆ ಸರಿಯಾಗಿರಬೇಕು. ರೂಪಾಯಿಗೆ ಒಂದಾಣೆ ಕಮೀಶನ್ ಎಂದಮೇಲೆ ಅರ್ಧ ರೂಪಾಯಿಗೆ ಅರ್ಧಾಣೆ, ಮುಕ್ಕಾಲು ರೂಪಾಯಿಗೆ ಮುಕ್ಕಾಲಾಣೆ ಇರಬೇಕು" ಎಂದರು. ನಾನು "ನಮ್ಮ ನಿಯಮ ರೂಪಾಯಿಗೆ ಒಂದಾಣೆಯೇ ಹೊರತು

ಅರ್ಧ ರೂಪಾಯಿಗೆ ಅರ್ಧಾಣೆ ಅಲ್ಲ" ಎಂದೆ. "ಅದೇ ನಿಮ್ಮ unreasonableness" ಎಂದರು. ನಿಯಮವನ್ನು ಹೇಳುವುದರ ಹೊರತು, ಅವರ ವಾದಕ್ಕೆ ಸರಿಯಾದ ಉತ್ತರ ನನ್ನಲ್ಲಿ ಇರಲಿಲ್ಲ. ಆ ವೇಳೆಗೆ ಗೋಡೆ ಮೇಲೆ ನೇತುಹಾಕಿದ್ದ ದೊಡ್ಡ ಗಡಿಯಾರ ಘಂಟೆ ಹೊಡೆಯಿತು. ಕೂಡಲೇ ನನಗೊಂದು ಸಂಗತಿ ಹೊಳೆಯಿತು. "ಒಂದು ರೂಪಾಯಿಗೆ ಒಂದು ಪೈಸ ಕಡಿಮೆಯಾದರೂ ಕಮೀಶನ್ ಇಲ್ಲ. ಒಂದು ಸೆಕೆಂಡು ಕಡಿಮೆಯಾದರೂ ಗಂಟೆ ಹೊಡೆಯುವುದಿಲ್ಲ. The clock does not strike, till the last second is complete'' ಎಂದೆ. ಉತ್ತರ ತೃಪ್ತಿಕರವಾಗಿತ್ತು. ವೆಂಕಟೇಶ ಅಯ್ಯಂಗಾರರು "ಅಲ್ಕಿಣ್ರಿಸ್ಯ ಎಷ್ಟು ಜನಕ್ಕೆ ಜವಾಬು ಹೇಳಿ ನಿಮಗೆ ಇದು ಹೊಳೆದಿರಬಹುದು ?" ಎಂದರು.

ಹೀಗೆಂದ ಮಾತ್ರಕ್ಕೆ ಆಗಿಂದಾಗ್ಗೆ ನನಗೆ ಕಪಾಳಮೋಕ್ಷವಾಗಿಲ್ಲ ಎಂದು ಅರ್ಥವಲ್ಲ. ವಸ್ತ್ರಾಲಯದಲ್ಲಿ ಗಿರಾಕಿಗಳಿಗೆ ಖಾದಿಬಟ್ಟೆಯನ್ನು ಕಟ್ಟಲು ನಾವು ನಮ್ಮ ಬುದ್ಧಿಯನ್ನೆಲ್ಲ ಉಪಯೋಗಿಸುತ್ತಿದ್ದೆವು. ಆಗಿನ ಕಾಲದಲ್ಲಿ ಆಂಧ್ರದಲ್ಲಿ ದೇಶಭಕ್ತ ಕೊಂಡ ವೆಂಕಪ್ಪಯ್ಯನವರೆಂಬುವರು ಇದ್ದರು. ಅವರು ಗಾಂಧೀಜಿಯ ಪ್ರಾಮಾಣಿಕ ಅನುಯಾಯಿ. ಅವರು ಆಂಧ್ರದಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆದಿದ್ದರು. ಭಾರತದಲ್ಲೆಲ್ಲ ನವಿರಾದ ಖಾದಿ ಅರಿವೆ ಅಲ್ಲಿ ತಯಾರಾಗುತ್ತಿದ್ದಿತು. ಆ ಕೇಂದ್ರ ಆಂಧ್ರದ ಚಿಕಾಕೋಲ್ (ಚಿಕಾಗೊ ಅಲ್ಲ) ಎಂಬಲ್ಲಿ ಇತ್ತು. ಖಾದಿಗಳಲ್ಲೆಲ್ಲ ಆ ಕೇಂದ್ರದ ಖಾದಿಗೆ ಬೆಲೆ ಬಹಳ ಹೆಚ್ಚಾಗಿತ್ತು. ಎಷ್ಟಾದರೂ ಕೈರಾಟಿಯ ನೂಲು. ಆದುದರಿಂದ ಅದು ನಲವತ್ತನೇ ನಂಬರನ್ನು ಮೀರಿ ಹೋಗಲು ಸಾಧ್ಯವಾಗಿರಲಿಲ್ಲ. "ಖಾದಿ ತೆಳುವಾಗಿಲ್ಲ, ದಪ್ಪ" ಎಂದು ಹೇಳಿದ ಖಾದಿ ಭಕ್ತರಿಗೆಲ್ಲ ನಾವು ಚಿಕಾಕೋಲ್ ಖಾದಿಯನ್ನು ಅದರ ದುಬಾರಿ ಬೆಲೆಗೇ ಮಾರುತ್ತಿದ್ದೆವು.

ಒಂದು ದಿನ ವಸ್ತ್ರಾಲಯಕ್ಕೆ, ಪೂರ್ಣ ಖಾದಿ ಧರಿಸಿದ್ದ ವಯಸ್ಸಾದ ಗಂಭೀರ ಮುಖಮುದ್ರೆಯ ಗೃಹಸ್ಥರೊಬ್ಬರು ಬಂದರು. ಅವರು ಯಾಕೆ ಬಂದರು ಎಂಬುವನ್ನು ಸಹ ಕೇಳದೆ, ಬರುವವರೆಲ್ಲ ಖಾದಿ ಕೊಳ್ಳಲು ಬರುವವರಾದುದರಿಂದ, ಅವರ ಮುಂದೆ ಅನೇಕ ನಮೂನೆಯ ಅರಿವೆಗಳನ್ನು ಹರಡಿದೆವು. ಅವರು ಅವುಗಳನ್ನೆಲ್ಲ ಎಚ್ಚರಿಕೆಯಿಂದ ಪರಿಶೀಲಿಸಿ "ಇದಕ್ಕಿಂತ ನವಿರಾದ ವಸ್ತ್ರ ನಿಮ್ಮಲ್ಲಿದೆಯೆ ?" ಎಂದು ಕೇಳಿದರು. ನಾನು ಉತ್ಸಾಹದಿಂದ "ಓಹೋ ಅದಕ್ಕೇನು? ೮೦ನೆ ನಂಬರು ೧೦೦ನೆ ನಂಬರು ಎಲ್ಲ ಇದೆ" ಎಂದೆ. ಚಿಕಾಕೋಲ್ ಬಟ್ಟೆಯ ಥಾನು ಒಂದನ್ನು ಅವರ ಮುಂದೆ ಹರಡಿದೆ. ಅವರು ಅದನ್ನು ನೋಡಿ "ಇದು ನಲವತ್ತನೆ ನಂಬರು ಬಟ್ಟೆ" ಎಂದರು. ನಾನು "ಯಾರು ಸಾರ್ ನಿಮಗೆ ಹೇಳಿದ್ದು. ಇದು ನೂರನೆ ನಂಬರ್ ನೂಲಿನ ಬಟ್ಟೆ. ಇನ್ನೂ ಇನ್ನೂರು ಮುನ್ನೂರು ನಂಬರುಗಳದೂ ಇದೆ" ಎಂದೆ. ಆ ವ್ಯಕ್ತಿ ಸ್ವಲ್ಪ ಹೊತ್ತು ಗಂಭೀರವಾಗಿ ಚಿಂತಿಸಿ "ಇದು ನೂರನೆಯ ನಂಬರ್ ನೂಲಿನ ಬಟ್ಟೆ ಎಂದು ಹೇಳಿದವನು ನಿಮಗೆ ಮೋಸ ಮಾಡಿದ್ದಾನೆ" ಎಂದರು. ನಾನು "ಛೀ ಛೀ ಖಂಡಿತ ಸರ್. ದೇಶಭಕ್ತ ಕೊಂಡ ವೆಂಕಪ್ಪಯ್ಯನವರ ಕೇಂದ್ರದ ಖಾದಿ" ಇದು ಎಂದೆ. ಅವರು ಕೂಡಲೇ "ನಿಮಗೆ ಅವರು

ಇದು ೧೦೦ನೆ ನಂಬರ್ ಖಾದಿ ಎಂದು ಹೇಳಿದರೆ ?" ಎಂದು ಕೇಳಿದರು. ನಾನು ನಿಸ್ಸಂಕೋಚವಾಗಿ "ಹೌದು ಹೇಳಿದರು. ನೂರು ಸಲ ಹೇಳಿದರು" (ವ್ಯಾಪಾರಿ ಬುದ್ಧಿ !) ಎಂದೆ. ಅವರು ಆ ಮಾತನ್ನು ಕೇಳಿ ಕಪಾಳಕ್ಕೆ ಏಟು ಬಿದ್ದಂತೆ ಬೆಚ್ಚಿಬಿದ್ದರು. ನಿಧಾನವಾಗಿ ಚೇತರಿಸಿಕೊಂಡು "ನೀವು ಕೊಂಡ ವೆಂಕಪ್ಪಯ್ಯನವರನ್ನು ನೋಡಿದ್ದಿರಾ ?" ಎಂದು ಕೇಳಿದರು. ನಾನು "ನೋಡದೆ ಉಂಟೆ ? ಖಾದಿ ಕಾರ್ಯಕರ್ತರೆಲ್ಲ ಒಬ್ಬರನ್ನೊಬ್ಬರು ನೋಡಿಯೇ ಇರುತ್ತಾರೆ" ಎಂದೆ. ಅವರು ಸ್ವಲ್ಪ ಹೊತ್ತು ಮಾತನಾಡದೆ ಸುಮ್ಮನೆ ಕುಳಿತರು. ನಾನು ಬೇರೆ ಗಿರಾಕಿಗಳ ನಿಗ ನೋಡುತ್ತ ಅವರಿಗೆ ವಸ್ತ್ರಗಳನ್ನು ತೋರಿಸುತ್ತಿದ್ದೆ. ಸ್ವಲ್ಪ ಹೊತ್ತಾದ ಮೇಲೆ ಆ ಮುದುಕರು, ಯಾವ ಬಟ್ಟೆಯನ್ನೂ ತೆಗೆದುಕೊಳ್ಳದೆ ಹೊರಟರು. ಬಾಗಿಲಿನವರೆಗೆ ಬಂದು, ನನ್ನನ್ನು ನೋಡಿ ಮೃದುವಾಗಿ "ನಾನೇ ಕೊಂಡ ವೆಂಕಪ್ಪಯ್ಯ" ಎಂದು ಹೇಳಿ ಹೊರಟು ಹೋದರು. ಒಂದು ನಿಮಿಷ ನಾನು ಸತ್ತವನೂ ಅಲ್ಲ ಬದುಕಿದವನೂ ಅಲ್ಲ.

ಆಗ ಬೆಂಗಳೂರಿನಲ್ಲಿ ಗಾಂಧೀ ಎಂಬ ಹೆಸರಿನ ಗುಜರಾತಿ ಒಬ್ಬರಿದ್ದರು. ಅವರು ರಾಷ್ಟ್ರೀಯ ಕೆಲಸಗಾರರಿಗೂ ಖಾದಿ ಕೆಲಸಗಾರರಿಗೂ ಗೊತ್ತು. ಅವರು ನನ್ನ ಪುಸ್ತಕಗಳ ಕೆಲವು ಆರಿಸಿದ ಭಾಗಗಳನ್ನು ಹಿಂದಿಗೆ ತರ್ಜುಮೆಮಾಡಿ ಗಾಂಧೀಜಿಗೆ ಕಳುಹಿಸಿದಾಗ ಅವರಿಂದ ಈ ಕೆಲಸ ಮುಂದುವರಿಸಿಕೊಂಡು ಹೋಗು ಎಂಬ ಸಂದೇಶ ಬಂದಿತ್ತು. ಅದು ಪುಸ್ತಕದ ಯೋಗ್ಯತೆಗಾಗಿಯೋ ನನ್ನಲ್ಲಿದ್ದ ವಾತ್ಸಲ್ಯಕ್ಕಾಗಿಯೋ ಹೇಳಲಾರೆ.

ಹೀಗೆ ಎಂಟು ಹತ್ತು ವರುಷ ಬೆಂಗಳೂರಿನಲ್ಲಿ ಕಳೆದು, ಸಂಸಾರದ ಕಾರಣದಿಂದ (ನನ್ನ ತಮ್ಮ ಒಬ್ಬ ತೀರಿಕೊಂಡ. ವೃದ್ಧರಾದ ತಂದೆ ತಾಯಿಗಳಿದ್ದರು. ಅವರ ರಕ್ಷಣೆ ನೋಡುವವರೂ ಇರಲಿಲ್ಲ.) ನಮ್ಮೂರಿಗೇ ಹಿಂದಿರುಗಿದೆ. 'ಹಳ್ಳಿಯ ಹಾಡಿನ' ಮೊದಲನೆಯ ಮುದ್ರಣ ಅಚ್ಚಾದುದು ೧೯೩೪ರಲ್ಲಿ. ಇಲ್ಲಿ ಬಂದ ನಂತರ ಗೊರೂರಿನ ಯುವಕರನ್ನೇ ಸೇರಿಸಿಕೊಂಡು "ಮೈಸೂರು ಗ್ರಾಮ ಸೇವಾಸಂಘ"ವೆಂಬುವನ್ನು ಸ್ಥಾಪಿಸಿಕೊಂಡು, ಗಾಂಧೀಜಿಯ ರಚನಾತ್ಮಕ ಕಾರ್ಯಗಳಾದ ಖಾದಿ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ ಗ್ರಾಮಕೈಗಾರಿಕೆ (ಎಣ್ಣೆಗಾಣ, ಕೈಕಾಗದ, ಮೂಳೆಪುಡಿ, ಬೆಲ್ಲ, ಕೊಟ್ಟಣದ ಅಕ್ಕಿ, ಜೇನುಸಾಕಣೆ, ಕತ್ತಾಳೆ ನಾರಿನ ಪ್ಯಾಕಿಂಗ್‌ದಾರ, ತಾಟಿ ಬೆಲ್ಲ, ಚಾಪೆ) ಮುಂತಾದುವುಗಳನ್ನೆಲ್ಲ ಸ್ಥಾಪಿಸಿದೆವು. ಇದರಲ್ಲಿ ಗೊರೂರು ಸಂಪತ್ ಅಯ್ಯಂಗಾರ್ ಇವರು ನನಗೆ ಮುಖ್ಯ ಬೆಂಬಲಿಗರಾಗಿದ್ದರು. ಪ್ರಾರಂಭ ದೆಸೆಯಲ್ಲಿ ಖಾದಿ ಬಟ್ಟೆ ಗೋಣಿಚೀಲದಂತೆ ಸಹ ಆಗಿ ನೂಲಿನಿಂದ ದನಗಳ ಹಗ್ಗವನ್ನು ಉಡಿಸಿದುದೂ ಉಂಟು. ನಮ್ಮ ಎಲ್ಲ ಕಾರ್ಯಗಳಿಗೂ ಬೆಂಗಳೂರಿನ ಸಂಪಿಗೆ ವೆಂಕಟಪತಯ್ಯನವರು ನಮಗೆ ಹೆಚ್ಚು ಪ್ರೋತ್ಸಾಹ ನೀಡಿದರು. ನಾವು ತಯಾರಿಸಿದ ಮಂದವಾದ ಬಿಳಿಯ ಕಾಗದವನ್ನು ಕೋರ್ಟುಗಳಲ್ಲಿ ಅರ್ಜಿ ಸಲ್ಲಿಸಲು ಸಹ ಉಪಯೋಗಿಸಬಹುದೆಂದು ಹೈಕೋರ್ಟು ಒಂದು ಆದೇಶ ಸಹ ಇತ್ತಿತು (ಕೋರ್ಟಿನ ಅರ್ಜಿಗೆ ವಿಶಿಷ್ಟವಾದ ದಪ್ಪ ಕಾಗದ ಬೇಕಾಗುತ್ತೆ). ಆಗ ನಾವು ಗೊರೂರಿನಲ್ಲಿ ೪೦ ದಿನಗಳ ವಯಸ್ಕರ ಶಿಕ್ಷಣ ಶಿಬಿರವನ್ನು ನಡೆಸಿದೆವು.

ಆಗ ಶ್ರೀ ಪು.ತಿ.ನ, ಶಿವರಾಮಶಾಸ್ತ್ರಿ, ತೀ. ನಂ. ಶ್ರೀಕಂಠಯ್ಯ, ಬಿ. ಎಂ. ಶಿವರಾಮಯ್ಯ, ನಾ. ಕಸ್ತೂರಿ ಮುಂತಾದವರೆಲ್ಲ ಬಂದು ಭಾಗವಹಿಸಿದರು. ಸರ್ಕಾರದವರು ಆಗ ನನ್ನನ್ನು ಡಿಸ್ಟ್ರಿಕ್ಟ್ ಬೋರ್ಡಿಗೂ, ಲೋಕಲ್ ಎಜುಕೇಶನ್ ಬೋರ್ಡ್ ಎಂಬುದಕ್ಕೂ ನಾಮಕರಣ ಮಾಡಿದರು. ಆಗ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ, ಸರ್ಕಾರದ ಯಾವ ನಾಮಕರಣವನ್ನೂ ಜನ ಅಂಗೀಕರಿಸಕೂಡದೆಂದು ನಿರ್ಣಯ ಮಾಡಿದ್ದರು. ಸರ್ಕಾರದ ಸತ್ಕಾರ ಕೂಟಗಳಿಗೆ ಸಹ ಯಾರೂ ಹೋಗುವಂತಿರಲಿಲ್ಲ. ಆದುದರಿಂದ ನಾನು ಈ ನಾಮಕರಣವನ್ನು ಒಪ್ಪಿಕೊಳ್ಳಬಹುದೇ? ಎಂದು ಗಾಂಧೀಜಿಗೆ ಬರೆದು ಕೇಳಿದೆ. ಅವರು "ದೇಶೀಯ ಸಂಸ್ಥಾನಗಳಲ್ಲಿ ಅಂತಹ ಕೆಲಸಗಳಲ್ಲಿದ್ದು ಉಪಯುಕ್ತವಾದ ಕೆಲಸಗಳನ್ನು ಮಾಡಲು ಅಡ್ಡಿಯಿಲ್ಲ. I do not see any objection to your acceptance" ಎಂದು ಬರೆದರು. ನಾನು ಆ ಎರಡೂ ಸಭೆಗಳ ನಾಮಕರಣವನ್ನು ಅಂಗೀಕರಿಸಿದೆ.

ನಾವು ಖಾದಿ ಮತ್ತು ಗ್ರಾಮೋದ್ಯೋಗ ಸಂಘದ (All India Village Industries Association) ಎಲ್ಲ ಕಾರ್ಯಕ್ರಮಗಳನ್ನೂ ನಮ್ಮ ಶಕ್ತ್ಯನುಸಾರ ನಡೆಸುತ್ತಿದ್ದೆವು. ಮೈಸೂರು ಕಾಂಗ್ರೆಸ್‌ನ ಎಲ್ಲ ಅಧಿವೇಶನಗಳಲ್ಲಿಯೂ—ಶಿವಮೊಗ್ಗ, ಚನ್ನಪಟ್ಣ, ಹರಿಹರ—ಗ್ರಾಮಕೈಗಾರಿಕೆಯ ಈ ವಿಭಾಗಗಳ ಪ್ರದರ್ಶನವನ್ನು ನಾವೇ ಏರ್ಪಡಿಸುತ್ತಿದ್ದೆವು. ಗಾಣ ಎತ್ತು ಎಲ್ಲವನ್ನೂ ನೂರಾರು ಮೈಲಿ ಸಾಗಿಸಿಕೊಂಡು ಹೋಗುತ್ತಿದ್ದೆವು. ಗಾಂಧೀಜಿ, ಕುಮಾರಪ್ಪ ಮುಂತಾದವರು ಬರೆದಿದ್ದ 'ಪೂರ್ಣ ಸ್ವದೇಶಿ' ಎಂಬ ಗ್ರಂಥವನ್ನು (Cent per Cent Swadeshi) ನಾನೇ ಅನುವಾದಿಸಿದೆ. ನಮ್ಮ ಸಂಘದ ವತಿಯಿಂದ ನಾಮಮಾತ್ರದ ಬೆಲೆಗೆ ಮಾರಿದೆವು. ಈ ಪುಸ್ತಕದ ಬಿಡುಗಡೆಯನ್ನು ಡಾ. ರಾಜೇಂದ್ರ ಪ್ರಸಾದರು ಹರಿಹರದ (ವಿನೋಬ ನಗರ) ಕಾಂಗ್ರೆಸ್‌ನಲ್ಲಿ ಮಾಡಿದರು. ಈ ನಡುವೆ ನಾನು ಶ್ರೀ ಜೆ. ಸಿ. ಕುಮಾರಪ್ಪನವರು ನಡೆಸುತ್ತಿದ್ದ 'ಗ್ರಾಮೋದ್ಯೋಗ ಪತ್ರಿಕೆ' ಎಂಬ ಮಾಸಪತ್ರಿಕೆಯನ್ನು ಪ್ರತಿ ತಿಂಗಳೂ ಕನ್ನಡಕ್ಕೆ ಅನುವಾದಿಸಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದೆನು. ಕೆಲವು ಕಾಲ ಕುಮಾರಪ್ಪನವರ ಸಲಹೆಯ ಮೇಲೆ ಕನ್ನಡದಲ್ಲಿಯೂ ಅದನ್ನು ಬೇರೆಯಾಗಿ ಪ್ರಕಟಿಸುತ್ತಿದ್ದೆ. ಅದು ಫೂಲ್‌ಸ್ಕೇಪ್ ಅರ್ಧಗಜದ ಒಂದೇ ಹಾಳೆ. ಅಂದಿನ ಕಾಲದಲ್ಲಿ ಪ್ರತಿ ಪ್ರಾಂತಕ್ಕೂ ಗ್ರಾಮ ಕೈಗಾರಿಕೆಗಳ ವಿಷಯದಲ್ಲಿ ಕೆಲಸ ಮಾಡಲು ಸಲಹೆ ಕೊಡಲು ಒಬ್ಬೊಬ್ಬ ಅನುಭವಿ ಕಾರ್ಯಕರ್ತನನ್ನು ನಿಯಮಿಸುತ್ತಿದ್ದರು. ಅವನಿಗೆ ಏಜೆಂಟ್ ಎಂದು ಹೆಸರು. ಏಜೆಂಟ್ ಎಂದರೆ ವ್ಯಾಪಾರೀ ಏಜೆಂಟಲ್ಲ. ಪ್ರತಿನಿಧಿ ಕಾರ್ಯಕರ್ತ. ಮೈಸೂರು ಸೀಮೆಗೆ ನನ್ನನ್ನು ಏಜೆಂಟನನ್ನಾಗಿ ನಿಯಮಿಸಿದ್ದರು. ೧೯೪೦ನೆಯ ಇಸವಿಯ ವ್ಯಕ್ತಿ ಸತ್ಯಾಗ್ರಹದ ಕಾಲದಲ್ಲಿ ಸಲಹೆ ಕೊಡಲು ನಾನೂ ಒಬ್ಬ ಸದಸ್ಯನಾಗಿ ನಿಯಮಿತನಾಗಿದ್ದೆ. ೧೯೪೨ನೆ ಇಸವಿಯಲ್ಲಿ ವಾರ್ಧಾದಲ್ಲಿ ನಡೆದ ಎ.ಐ.ಸಿ.ಸಿ. ಸಭೆಗೆ ನಾನೂ ಹೋಗಿದ್ದೆ.

ಕೆಲವು ಕಾಲದಿಂದ ನಿಧಾನವಾಗಿ ಕಿವಿಗೆ ಕೇಳುತ್ತಿದ್ದ "Quit India" (ಭಾರತದಿಂದ

ತೊಲಗಿ) ಘೋಷಣೆ, ಸರ್ವವ್ಯಾಪಿ ಮೇಘ ಗರ್ಜನೆಯಂತೆ ಮೊಳಗಿತು. ಬೊಂಬಾಯಿ ಎ.ಐ.ಸಿ.ಸಿ. (೧೯೪೨ನೇ ಆಗಸ್ಟ್ ೪)ಯಂತಹ ಒಂದು ಸಭೆ, ಬಹುಶಃ ಹತ್ತುಸಾವಿರ ವರುಷಕ್ಕೆ ಒಂದು ಸಲ ಒಂದು ದೇಶದಲ್ಲಿ ನಡೆಯಲಾರದು. ಇಂಗ್ಲೆಂಡ್ ಅಮೆರಿಕ ಇಂಡಿಯಾ ಇರಲಿ, ಪ್ರಪಂಚದ ಕಣ್ಣೆಲ್ಲ ಆ ಸಭೆಯ ಮೇಲೆ ಇದ್ದಿತು. ಅದು ದೇವತೆಗಳಿಗೆ ಸಹ ಅಲಭ್ಯವಾಗುವ ನೋಟ. ವಾತಾವರಣದಲ್ಲಿ ಒಂದು ಅಪೂರ್ವ ಕೆಚ್ಚು ತೇಜಸ್ಸು ಆತ್ಮಶಕ್ತಿ ಧಾರ್ಮಿಕ ಮನೋಭಾವ ತೋರುತ್ತಿದ್ದಿತು. ಕುರುಕ್ಷೇತ್ರದ ಯುದ್ಧಭೂಮಿಯ ಭಾವನೆಯೂ ಬರುತ್ತಿದ್ದಿತು. ಶ್ರೀಕೃಷ್ಣನ ವಿಶ್ವರೂಪದರ್ಶನ, ಸೀತಾಮಾತೆಯ ಅಗ್ನಿಪರೀಕ್ಷೆ ಇವುಗಳ ನೆನಪು ಜನರಿಗೆ ಅನಿವಾರ್ಯವಾಗಿ ಬರುತ್ತಿದ್ದಿತು. ಹರಿಶ್ಚಂದ್ರನಿಗೆ ಈಶ್ವರ ಪ್ರತ್ಯಕ್ಷ. ಆ ವಿಶಾಲ ಜನಸ್ತೋಮದ ಉತ್ಸಾಹ ನಿರೀಕ್ಷಣೆಯ ಸಭಾಂಗಣದಲ್ಲಿ ಗಾಂಧೀಜಿ, ಭಾರತ ಸಂಸ್ಕೃತಿಯ ಸಮಸ್ತ ಜ್ಞಾನ ಶಕ್ತಿ ವೈಭವಗಳೆಲ್ಲ ಮೂರ್ತಿವೆತ್ತು "ಧಿಕ್ ಬಲಂ ಕ್ಷತ್ರಿಯ ಬಲಂ ! ಬ್ರಹ್ಮತೇಜೋ ಬಲಂ ಬಲಂ" ಎಂಬಂತೆ ಸಮಸ್ತ ಭಾರತದ ಧ್ವನಿಯನ್ನೂ ತಮ್ಮಲ್ಲಿ ಒಂದುಗೂಡಿಸಿ ಮಂತ್ರೋಚ್ಚಾರಣೆ ಮಾಡಿದರು. ರಾವಣ ಇಂದ್ರಜಿತುಗಳ ಸಮಸ್ತ ಮಾಯಾಜಾಲವನ್ನೂ ಏಕಾಂಗಿಯಾಗಿ ರಾಮನೊಬ್ಬನೇ ಜಯಿಸಿದಂತೆ, ಸೂರ್ಯನು ಮುಳುಗದ ಬ್ರಿಟಿಷ್ ಚಕ್ರಾಧಿಪತ್ಯದ ಕರ್ಣಮಂತ್ರವನ್ನು ಒಬ್ಬ, ದೇಹದಿಂದ ನಿಶ್ಶಕ್ತನಾದರೂ ಆತ್ಮದಿಂದ ಸರ್ವಶಕ್ತನಾದ ಸಂತ ಉಚ್ಚರಿಸಿದ. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದರು. ಬೊಂಬಾಯಿ ಸಭೆಯನ್ನು ನೋಡಿದ ಯಾವನೊಬ್ಬನಿಗೂ ಚಳವಳಿಯಲ್ಲಿ ಭಾಗವಹಿಸದಿರಲು ಸಾಧ್ಯವೇ ಇರಲಿಲ್ಲ.

ಆದರ ಆದಮ್ಯ ಆಕರ್ಷಣೆಯನ್ನು ಗಾಂಧೀ ಅನುಯಾಯಿಯಾದ ಯಾವನು ತಾನೇ ತಪ್ಪಿಸಿಕೊಳ್ಳಬಲ್ಲನು ? ನಾನು ನನ್ನ ಜಿಲ್ಲಾ ಬೋರ್ಡ್ ಮತ್ತು ಲೋಕಲ್ ವಿದ್ಯಾ ಸಮಿತಿಯ ಸದಸ್ಯತನಕ್ಕೆ ರಾಜೀನಾಮೆಕೊಟ್ಟು ಸರ್ಕಾರಕ್ಕೆ ಒಂದು ಪ್ರತಿಭಟನೆಯ ಪತ್ರವನ್ನೇ ಬರೆದೆ. ಹಾಸನದಲ್ಲಿ ಹೋಗಿ ನಾನು, ಗೊರೂರು ಸಂಪತ್ತಯ್ಯಂಗಾರ್ರು, ಎಲ್. ಟಿ. ಕಾರ್ಲೆ, ಕೋಣನೂರು ಕೇಶವಮೂರ್ತಿ ಪ್ರತಿದಿನವೂ ಜೂಬಿಲಿ ಮೈದಾನದಲ್ಲಿ ಸರ್ಕಾರದ ವಿರುದ್ಧ ಭಾಷಣಗಳನ್ನು ಮಾಡಿ ಜನಜಾಗೃತಿಯನ್ನುಂಟು ಮಾಡಿದೆವು. ಅಷ್ಟೇ ಅಲ್ಲ ರಾಜಾಜಿಗೆ ಸಹ ಒಂದು ಪತ್ರ ಬರೆದೆ. ಅದು ನನ್ನ ಅಧಿಕ ಪ್ರಸಂಗಿತನವೆಂದು ಈಚೆಗೆ ತೋರಿದೆ. ಆದರೆ ಅಂದಿನ ಸಂದರ್ಭದಲ್ಲಿ "ಬ್ರಿಟಿಷ್ ಸರ್ಕಾರವನ್ನು ಎದುರಿಸುವುದರ ಹೊರತು ಯಾವ ಭಾರತೀಯನಿಗೂ ಬೇರೆ ಏನೂ ಕೆಲಸವಿಲ್ಲ" ಎಂಬುದು ನನ್ನ ಭಾವನೆಯಾಗಿತ್ತು. ರಾಜಾಜಿ ಆಗ ಕಾಂಗ್ರೆಸಿನಿಂದ ಬೇರೆಯಾಗಿದ್ದುದರಿಂದ ಅವರು ಅದರಲ್ಲಿ ಭಾಗವಹಿಸಲಿಲ್ಲ. ಮಹಾತ್ಮಾ ಗಾಂಧೀಜಿಯ ಬಲಭುಜವೂ ವಿವೇಕವಾಣಿಯೂ (conscience keeper) ಆದ ಅವರು, ಗಾಂಧೀಜಿ ಹೂಡಿರುವ ಈ ಅಂತಿಮ ಹೋರಾಟದಲ್ಲಿ ದೇಶದ ನಾಯಕರಾಗಿ ಅದನ್ನು ನಡೆಸಬೇಕೆಂದು ನಾನು ಬರೆದಿದ್ದೆ. ರಾಜಾಜಿ ನನಗೆ ಜವಾಬು ಕೊಡಲಿಲ್ಲ. ಅಂದಿನ ಕಾಲದಲ್ಲಿ ನಮ್ಮ ಕಾಗದಗಳನ್ನು ಸಹ ಸರ್ಕಾರದವರು ಮೊದಲು ನೋಡಿಸಿ ಕೊಡುತ್ತಿದ್ದುದ

ರಿಂದಲೂ ನಾನು ಕಾಗದ ಬರೆದ ೪-೬ ದಿನಗಳಲ್ಲಿಯೇ ಸರ್ಕಾರದವರು ನನ್ನನ್ನು ಬಂಧಿಸಿದುದರಿಂದಲೂ ಆ ವಿಷಯ ಅಲ್ಲಿಗೆ ಮರೆಯಿತು. ಆದರೆ ಅನಂತರ ರಾಜಾಜಿಯವರನ್ನು ಸಂಧಿಸಿದಾಗ ಅವರು ಆ ಕಾಗದವನ್ನು ಕುರಿತು ನನ್ನೊಂದಿಗೆ ವಿನೋದವಾಗಿ ಮಾತನಾಡಿದರು.

"ಭಾರತದಿಂದ ತೊಲಗಿ" ಚಳವಳಿಯಲ್ಲಿ ನನ್ನನ್ನು ಆಗಸ್ಟನಲ್ಲಿ ಪೋಲೀಸ್ ಇನಿಸ್ಪೆಕ್ಟರು ಬಂದು ಬಂಧಿಸಿದಾಗ ನಾನು ನಮ್ಮ ತಾಯಿಯ ಎಂಟನೆಯ ತಿಂಗಳ ಮಾಸಿಕ ಶ್ರಾದ್ಧವನ್ನು ಮಾಡುತ್ತಿದ್ದೆ. ನಮ್ಮ ತಂದೆ ಪಾರ್ಶ್ವವಾಯುವಿನಿಂದ ಮೂರು ವರುಷಗಳಿಂದ ನರಳುತ್ತಿದ್ದರು. ನಾನು ಹಾಸನ ಶಿವಮೊಗ್ಗ ಸಾಗರ ಬೆಂಗಳೂರು ಸೆರೆಮನೆಗಳಲ್ಲಿ ೧೪ ತಿಂಗಳು ಕಳೆದೆ. ಬೆಂಗಳೂರು ಜೈಲಿನಲ್ಲಿ ಲಾಠಿಚಾರ್ಜು ಆಗುವುದನ್ನು ಅಕಸ್ಮಾತ್ ತಪ್ಪಿಸಿಕೊಂಡೆ. ಹಾಸನದ ಸೆರೆಮನೆಯಲ್ಲಿರುವಾಗ ನನ್ನ 'ಹಳ್ಳಿಯ ಬಾಳು' ಎಂಬ ಪುಸ್ತಕ ಅಚ್ಚಾಗುತ್ತಿತ್ತು. ಪ್ರಕಾಶಕರಾದ ಶ್ರೀ ಚಿದಂಬರಂ ಅವರು ಪ್ರೂಫನ್ನು ಹಾಸನದ ಸೆರೆಮನೆಗೇ ಕಳುಹಿಸಿಬಿಟ್ಟರು. ಅದು ರಾಜಕೀಯ ಗ್ರಂಥವಲ್ಲವಾದುದರಿಂದ ಪ್ರೂಫನ್ನು ನೋಡಲು ನನಗೆ ಜೈಲರ್ ಸಾಹೇಬರು ಅವಕಾಶ ಕೊಟ್ಟರು. ಹಾಸನದ ಸೆರೆಮನೆಯಲ್ಲಿರುವಾಗ ಭಾಷ್ಯಂ, ಚಂಗಲರಾಯರೆಡ್ಡಿ. ಸಿದ್ದಯ್ಯ. ಮರಿಯಪ್ಪ, ಸುಬ್ರಹ್ಮಣ್ಯಂ, ಚನ್ನಬಸವಪ್ಪ, ಎಂ. ವಿ. ರಾಮರಾವ್, ನಾಗಿರೆಡ್ಡಿ, ತಗಡೂರು ರಾಮಚಂದ್ರರಾವ್, ಚೆನ್ನಯ್ಯ, ಮಾಲಿ ಮರಿಯಪ್ಪ, ಕೆ. ಆರ್. ಮಾಧವರಾವ್ ಮುಂತಾದ ಕಾಂಗ್ರೆಸ್ ಪ್ರಮುಖರಿಲ್ಲ ನನ್ನ ಜೊತೆ ಇದ್ದರು.

ನಾನು ಸೆರೆಮನೆಗೆ ಹೋದ ಮೂರು ವಾರಗಳೊಳಗೆ, ನನಗೆ ಬಹುಕಾಲದಿಂದ ಪ್ರಿಯವಾಗಿದ್ದ ಟಾಲಸ್ಟಾಯ್‌ರವರ 'ಕಾಸಕ್ಸ್' ಕಾದಂಬರಿಯನ್ನು ('ಮಲೆನಾಡವರು') ಅನುವಾದಿಸಿದೆ. ಇದಕ್ಕೆ ನನಗೆ ೨೨ ದಿನಗಳಷ್ಟೆ ಹಿಡಿದವು. ಅನಂತರ ಒಂದು ವಾರದೊಳಗೆ 'ಪುನರ್ಜನ್ಮ' ಎಂಬ ಒಂದು ಉದ್ದವಾದ ಸಣ್ಣಕಥೆ (ಕಿರು ಕಾದಂಬರಿ) ಬರೆದೆ. ಅದನ್ನು ನನ್ನ ಜೊತೆಯಲ್ಲಿ ಸೆರೆವಾಸ ಅನುಭವಿಸುತ್ತಿದ್ದ ಎಸ್. ವಿ. ಕೃಷ್ಣಮೂರ್ತಿರಾಯರು ಶಿವಮೊಗ್ಗದ ಕರ್ಣಾಟಕ ಸಂಘದಿಂದ ಪ್ರಕಟಿಸಲು ತೆಗೆದುಕೊಂಡರು. ಮದರಾಸಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆ ಪುಸ್ತಕದ ಬಿಡುಗಡೆಯಾಯಿತು. 'ಸ್ವಾತಂತ್ರ್ಯವೇ ಧರ್ಮ' ಎಂಬ ಪುಸ್ತಕದ ಬಹುಭಾಗವನ್ನು ನಾನು ೪೨ರ ಸೆರೆಮನೆಯಲ್ಲಿ ಬರೆದೆ. ದಶೋಪನಿಷತ್ತುಗಳನ್ನು ಸ್ವಂತ ವ್ಯಾಸಂಗಕ್ಕಾಗಿಯೇ ಅನುವಾದಿಸಬೇಕೆಂದು ಈಶ, ಕೇನ ಕಠ ಮುಂಡಕ ಮಾಂಡೂಕ್ಯ ತೈತ್ತಿರೀಯ ಇವಿಷ್ಟನ್ನು (ಕೊನೆಯದು ಅರ್ಧ ಮಾತ್ರ) ಅನುವಾದಿಸಿದೆ. ಈಚೆಗೆ ಮುಂದುವರಿಸಿಲ್ಲ.

ನಾನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸಂಪಾದಿಸಿದ ಇನ್ನೊಂದು ಮುಖ್ಯವಾದ ಆಸ್ತಿಯೂ ಇತ್ತು. ಆ ಕಾರಣಕ್ಕಾಗಿಯೂ ನಾನು ಜೈಲಿಗೆ ಹೋದದ್ದು ಒಳ್ಳೆಯದಾಯಿತು. ಜೈಲಿನಲ್ಲಿ ಕ್ರಿಮಿನಲ್ ಖೈದಿಗಳ ವಿಭಾಗ ಬೇರೆ ಇತ್ತು. ಅವರಿಗೆಲ್ಲ ವಾರಕ್ಕೊಂದು ದಿನ ಬಿಡುವು (ಭಾನುವಾರವಲ್ಲ) ಇರುತ್ತಿದ್ದಿತು. ಆ ದಿನ ಅವರಿಗೆ

ಜೈಲಿನ ಸಾಮಾನ್ಯ ಕಠಿಣ ನಿಯಮಗಳು ಅನ್ವಯವಾಗುತ್ತಿರಲಿಲ್ಲ. ಅವರು ಅಂದು ಚೆನ್ನಾಗಿ ಸ್ನಾನಮಾಡಿ ವಸ್ತ್ರಗಳನ್ನು ಒಗೆದು ಶುಭ್ರಮಾಡಿಕೊಂಡು, ಹಣೆಗೆ ಇಟ್ಟುಕೊಂಡು ಶ್ರೀರಾಮದೇವರ ಪಟದ ಪೂಜೆ, ಭಜನೆ ಕೀರ್ತನೆ ಹಾಡುಗಳು ಕೋಲಾಟ ಇವುಗಳನ್ನೆಲ್ಲ ಆಡುತ್ತಿದ್ದರು. ಪೂಜೆ ಮಂಗಳಾರತಿ ಚರಪಿನ ವಿನಿಯೋಗ ಎಲ್ಲವನ್ನೂ ಅವರೇ ಮುಡಿಯಾಗಿ ಮಾಡುತ್ತಿದ್ದರು. ಆ ದಿನ ಅವರನ್ನು ನೋಡುವವರಿಗೆ ಅವರ ಶಿಸ್ತು ಒಳ್ಳೆಯ ಮಾತುಗಳು ಇವನ್ನೆಲ್ಲ ಕಂಡು "ಇಂಥವರು ಎಂದಿಗಾದರೂ ತಕ್ಸೀರುದಾರ(ತಪ್ಪಿತಸ್ಥ)ರಾಗಬಲ್ಲರೆ" ಎಂಬ ಸಂಶಯವುಂಟಾಗುತ್ತಿದ್ದಿತು. ಅವರು ಆ ದಿನಗಳಲ್ಲಿ ಕೋಲಾಟವಾಡುತ್ತಿದ್ದರು. ಕೋಲಿನ ಸದ್ದು ಕೇಳಿದರೆ ಸಾಧಾರಣವಾಗಿ ನನ್ನ ಕಿವಿ ನೆಟ್ಟಗಾಗುತ್ತದೆ. ನಾವು ಬೆಂಗಳೂರು ಸೆರೆಮನೆಯಲ್ಲಿರುವವರೆಗೆ ಆ ದಿನಗಳಲ್ಲಿ ಹೋಗಿ ಅವರ ಕಾರ್ಯದಲ್ಲಿ ಸೇರುತ್ತಿದ್ದೆ. ಒಂದು ದಿನ ಕೋಲಾಟವಾಡುವಾಗ ಇದ್ದಕ್ಕಿದ್ದಂತೆ ಅವರು ಆಂಜನೇಯ ಲಂಕೆಗೆ ಹಾರಿದ ಒಂದು ಹಾಡನ್ನು ಹಾಡಿದರು. ಅಪೂರ್ವವಾದ ಹಾಡು. ನಾನು ಅದನ್ನು ಕೇಳಿದೆ. ಆ ವೇಳೆಗೆ ಪ್ರಕಟವಾಗಿದ್ದ ಅನೇಕ ಹಾಡುಗಳನ್ನು ನಾನು ಆಗಲೇ ನೋಡಿದ್ದೆ. ಈ ಹಾಡನ್ನು ಕೇಳಿರಲಿಲ್ಲ. ಅದರ ಧಾಟಿ, ಒಳಪ್ರಾಸಗಳು, ಛಂದಸ್ಸು, ಕೋಲಾಟದ ನಿಧಾನ ಮತ್ತು ತೀವ್ರ ಗತಿಗಳಿಗೆ ಅದು ಹೊಂದಿಕೊಳ್ಳುತ್ತಿದ್ದುದು, ಅದರ ನಾಟಕೀಯತೆ, ಹಾಡಿನೊಳಗೆ ಹಾಡಿಗೆ ಸೇರಿದಂತೆ ಬರುತ್ತಿದ್ದ ಪ್ರಶ್ನೋತ್ತರ ಎಲ್ಲವನ್ನೂ ಕೇಳಿ, ನನ್ನ ಮುಂದೆ ಒಂದು ಹೊಸ ಪ್ರಪಂಚವೇ ತೆರದಂತೆ ಆಯಿತು. ರಾಮದೇವರ ಸಾನ್ನಿಧ್ಯ, ಹೂವು ಹಾರ ಗಂಧದ ಕಡ್ಡಿಗಳ ರಾಶಿ, ಭಕ್ತರಾಗಿ ನಿಂತಿದ್ದ ಜನ ಇವನ್ನೆಲ್ಲ ನೋಡಿ, ಅವರು ಖೈದಿಗಳೆಂಬುದೇ ಮರೆತು, ಆ ವಿದ್ಯುತ್ ದೀಪದ ಕಾಂತಿಯಲ್ಲಿ ಅವರೆಲ್ಲ ಅಮರಲೋಕದ ಗಾಯಕರಾಗಿ ನನಗೆ ತೋರಿದರು. ಹಾಡು, ನನ್ನ ಸರ್ವೇಂದ್ರಿಯಗಳನ್ನೂ ಅಪಹರಿಸಿ ಅದರ ಗುಂಗಿನಲ್ಲಿ ನನ್ನನ್ನು ತೇಲಿಸಿತು. ಖೈದಿಗಳಾದರೂ ಅವರ ಸ್ವಭಾವದ ಈ ಮತ್ತೊಂದು ಅಂಶ ನನ್ನನ್ನು ಚಕಿತನನ್ನಾಗಿ ಮಾಡಿತು. ಪ್ರತಿಯೊಬ್ಬನಲ್ಲಿಯೂ—ಅವನು ಎಷ್ಟೇ ದುಷ್ಟ ಅಥವಾ ಅಲ್ಪನಾಗಲೀ—ಅವನನ್ನು ಉದ್ಧಾರಮಾಡುವ ಅಂಶವಿದೆ. ಅನಂತರ ನಾನು ನಾಲ್ಕಾರು ವಾರ ಅವರನ್ನು ಆಶ್ರಯಿಸಿ, ಆ ಹಾಡನ್ನು ಬರೆದುಕೊಂಡೆ. ಇನ್ನೂ ನಾಲ್ಕಾರು ಸಲ ಕೋಲಾಟವನ್ನೇ ಆಡಿಸಿ ಅದರ ಮಟ್ಟನ್ನು ತಿಳಿದುಕೊಂಡೆ. ಆಮೇಲೆಯೂ, ಹಾಡಿನ ಅರ್ಥದಲ್ಲಿ ಸ್ವಲ್ಪ ಅಸಂಬದ್ಧತೆ ಅಸ್ಪಷ್ಟತೆ ತೋರಿತು. ಮತ್ತೊಂದು ದಿನ ಅದೇ ಕೋಲಾಟಗಾರರು ಬೇರೆ ಹಾಡುಗಳನ್ನು ಹಾಡುತ್ತಿರುವಾಗ ಈ ಹಾಡಿನಲ್ಲಿಯ ಅಸ್ಪಷ್ಟತೆಗೆ ಅಲ್ಲಿ ಉತ್ತರ ದೊರೆಯಿತು. ಎರಡು ಹಾಡುಗಳನ್ನೂ ಸೇರಿಸಿದರೆ ಒಂದು ಸೊಗಸಾದ ಕಥೆ. ಯಾವ ವಿಜ್ಞಾನಿಗೂ, ತನ್ನ ಪರಿಶೋಧನೆಯಲ್ಲಿ ಜಯವನ್ನು ಹೊಂದಿದಾಗ ಆಗದಷ್ಟು ಸಂತೋಷ ನನಗೆ ಉಂಟಾಯಿತು. ಅಂದಿನಿಂದ ಇಂದಿನವರೆಗೆ ಸಹ ಆ ಹಾಡುಗಳನ್ನು ನಾನು ಮತ್ತಾವ ಜಾನಪದ ಸಂಗ್ರಹದಲ್ಲಿಯೂ ನೋಡಲಿಲ್ಲ. ಆದುದರಿಂದ ಅದೊಂದು ಅಪೂರ್ವ ಶೇಖರಣೆ ಎಂಬುದು ನನ್ನ ಮತ.

ಸೆರೆಮನೆಯಲ್ಲಿ ಇಂತಹ ಸುಖ ದೊರಕುವುದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ.

ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಜನಜಾಗೃತಿಗಾಗಿ ರಾಷ್ಟ್ರೀಯ ಗ್ರಂಥಗಳನ್ನು ಅಗ್ಗವಾಗಿ ಮಾರಬೇಕೆಂಬ ಉದ್ದೇಶದಿಂದ "ರಾಷ್ಟ್ರೀಯ ಸಾಹಿತ್ಯ ಸಮಿತಿ" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದೆ. ಇದರ ಸಂಪಾದಕ ಮಂಡಲಿಯಲ್ಲಿ ಚೆಂಗಲರಾಯರೆಡ್ಡಿ, ಕೆ. ಟಿ. ಭಾಷ್ಯಂ, ಎಚ್. ಸಿದ್ದಯ್ಯ, ರತ್ನಮ್ಮ. ಮಾಧವರಾವ್, ಗೊರೂರು ಸಂಪತ್ತಯ್ಯಂಗಾರ್, ಎಲ್. ಟಿ. ಕಾರ್ಲೆ ಇವರು ಇದ್ದರು. ಆ ಮಾಲೆಯಲ್ಲಿ 'ಸತೀ ಕಸ್ತೂರಿ ಬಾ', 'ಮಹದೇವ ದೇಸಾಯಿಯವರ ಕೃತಿಗಳು', 'ಮೌಲಾನಾ ಅಬುಲ್ ಕಲಾಂ ಆಜಾದ್', 'ಸ್ವಾತಂತ್ರ್ಯವೇ ಧರ್ಮ', 'ತಾಯ್ನುಡಿಯಲ್ಲಿ ಶಿಕ್ಷಣ' ಮುಂತಾದ ಗ್ರಂಥಗಳನ್ನೆಲ್ಲ ನಾನೇ ರಚಿಸಿ ಪ್ರಕಟಿಸಿದೆ. 'ಸತೀ ಕಸ್ತೂರಿ ಬಾ' ಗ್ರಂಥದಿಂದ ದೊರೆತ ೫೦೦ರೂ. ಲಾಭವನ್ನು ಕಸ್ತೂರಿ ಬಾ ಫಂಡಿಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಕೊಟ್ಟೆವು. ಸೆರೆಮನೆಯಿಂದ ಬಂದಮೇಲೆ 'ಮೆರವಣಿಗೆ' ಎಂಬ ಗ್ರಂಥವನ್ನು ಪ್ರಕಟಿಸಿದೆ. ಇದರ ಪ್ರತಿಗಳು ಬಹು ಬೇಗ ಖರ್ಚಾಗಿ ಹೋದವು. ಜನರಲ್ಲಿ ಕುಡಿತದ ಅಭ್ಯಾಸವನ್ನು ತಪ್ಪಿಸಲು 'ಮದ್ಯಪಾನದಿಂದ ವಿಮೋಚನೆ' ಎಂಬ ಗ್ರಂಥವನ್ನೂ ರಚಿಸಿದೆ (ಆದರೆ ಹಣದ ಅಭಾವದಿಂದ ಅದು ಪ್ರಕಟವಾಗಲು ೧೦ ವರುಷ ನಿಧಾನವಾಯಿತು).

ಆ ವೇಳೆಗೆ ನಾನು ಗಾಂಧೀಜಿಯ ಮೇಲೆ 'ಭಾರತ ಭಾಗ್ಯವಿಧಾತ' ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದೆ. ಈ ಗ್ರಂಥಕ್ಕೆ ಗಾಂಧೀ ಅನುಯಾಯಿಗಳೂ ಆಧ್ಯಾತ್ಮ ಸಾಹಿತ್ಯ ಸೃಷ್ಟಿಕರ್ತರೂ ಆದ ಶ್ರೀ ಆರ್. ಆರ್. ದಿವಾಕರ್ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಹರಿಜನೋದ್ಧಾರದ ದೃಷ್ಟಿಯಿಂದ ನಾನು ಬರೆದ 'ಹೇಮಾವತಿ' ಎಂಬ ಒಂದು ಕಾದಂಬರಿಯನ್ನು ಉಷಾ ಸಾಹಿತ್ಯಮಾಲೆಯವರು ಪ್ರಕಟಿಸಿದರು. 'ಸಾಹಿತ್ಯದ ಜೀವಾಳ' (ಷೋಪನ್ ಹೌರನ ಪ್ರಬಂಧಗಳು), 'ಬಿಸ್ತರ ಕರಿಯ', 'ಶಿವರಾತ್ರಿ' ಎಂಬ ಕಥಾಸಂಕಲನಗಳನ್ನು ಕಾವ್ಯಾಲಯದವರು ಪ್ರಕಟಿಸಿದರು. ಅನಂತರ ಗಾಂಧೀಜಿ ದಕ್ಷಿಣ ಭಾರತದ ಹಿಂದುಸ್ಥಾನೀ ಪ್ರಚಾರ ಸಭೆಯ ರಜತೋತ್ಸವಕ್ಕಾಗಿ ಮದರಾಸಿಗೆ ಬಂದು ಅಲ್ಲಿ ೧೦ ದಿನ ಇದ್ದರು. ಆಗ ರಚನಾತ್ಮಕ ಕಾರ್ಯಕರ್ತರ ಒಂದು ಸಭೆಯೂ ನಡೆಯಿತು. ಆ ಸಭೆಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿಯೇ ನನ್ನ ಅನುಭವಗಳನ್ನೂ ಕನ್ನಡದಲ್ಲಿ ಹೇಳುವ ಸುಯೋಗ ನನಗೆ ದೊರೆಯಿತು. ಆ ಅಪೂರ್ವ ಸಾನ್ನಿಧ್ಯದ ದಿವ್ಯಸ್ಮರಣೆ ಇಂದಿಗೂ ನನ್ನ ಜೀವನವನ್ನು ಪವಿತ್ರವಾಗಿ ಮಾಡುತ್ತಿದೆ. ಅದು ಈ ಭೌತ ಆನಂದಕ್ಕಿಂತ ಮೀರಿದ ಒಂದು ಆನಂದ.

ಭಾರತಕ್ಕೆ ಸ್ವಾತಂತ್ರ್ಯ ಬಂದರೂ ದೇಶೀಯ ಸಂಸ್ಥಾನಗಳ ಮಹಾರಾಜರು ತಮ್ಮ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಡಲಿಲ್ಲ. ಅದಕ್ಕಾಗಿ ಬೇರೆ ಚಳವಳಿ ಬೇರೆ ಬಲಿದಾನಗಳೇ ಬೇಕಾದವು. ಆರ್ಕಾಟ್ ರಾಮಸ್ವಾಮಿ ಮುದಲಿಯಾರರು ಮತ್ತೆ ನಮ್ಮನ್ನೆಲ್ಲ ಸೆರೆಮನೆಗೆ ಅಟ್ಟಿದರು. ನನ್ನ ಹಿರಿಯ ಮಗ ರಾಮಚಂದ್ರನೂ (೧೭) ತುಮಕೂರಿನಲ್ಲಿ "ಚಲೊ ಪ್ಯಾಲೇಸ್" ಚಳವಳಿಯಲ್ಲಿ ಪೋಲಿಸಿನವರ ಗುಂಡಿಗೆ ಸಿಕ್ಕಿ ಮೃತನಾದನು.

ಇನ್ನು ಐದೇ ತಿಂಗಳಿನಲ್ಲಿ ಹತ್ಯಾಕಾರಿಯ ಗುಂಡಿನಿಂದ ಗಾಂಧೀಜಿ ಸಹ ಮಡಿಯುವವರಾಗಿದ್ದರು. ಆಗಲೂ ಅವರು ನನಗೆ, "ನಿನ್ನ ಮಗ ಹುತಾತ್ಮನಾಗಿದ್ದಾನೆ. ಮುಂದಲ ತಲೆಮಾರು ಅವನನ್ನು ನೆನೆಯುತ್ತದೆ" ಎಂದು ತಿಳಿಸಿದರು. ಆ ಗಳಿಗೆಯಲ್ಲಿ ನನಗೆ ಬಿದ್ದ ಪೆಟ್ಟು ಎಂಥದೆಂಬುದು ನನಗೆ ಗೊತ್ತಾಗಲಿಲ್ಲ. ಈಗ ವಯಸ್ಸಾಗುತ್ತ ಆಗುತ್ತ ಅದು ತನ್ನ ತೀವ್ರತೆಯನ್ನು ತೋರುತ್ತಿದೆ. ೧೯೪೭ರ ಆನಂತರ ಸ್ವರಾಜ್ಯಪ್ರಾಪ್ತಿಯಾದುದರಿಂದ, ನಾವು ಅದೇ ಉದ್ದೇಶಕ್ಕಾಗಿ ನಡೆಸುತ್ತಿದ್ದ "ಗ್ರಾಮಸೇವಾ ಸಂಘ"ವನ್ನು ಮುಕ್ತಾಯಗೊಳಿಸಿ ಕಟ್ಟಡವನ್ನು ಹೈಸ್ಕೂಲಿಗೆ ಕೊಟ್ಟೆವು. ಇನ್ನು ಮುಂದೆ ಎಲ್ಲ ಕಾರ್ಯವನ್ನೂ ಸರ್ಕಾರವೇ ಮಾಡುತ್ತದೆ; ನಮಗೆ ಈ ಕೆಲಸವಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿತ್ತು. ಈಗಲೂ ಸರ್ಕಾರವೇ ಎಲ್ಲ ಕೆಲಸಗಳನ್ನೂ ಮಾಡುತ್ತಿದೆ; ಆದರೆ ನಾವು ನಿರೀಕ್ಷಿಸಿದ ಅರ್ಥದಲ್ಲಿ ಅಲ್ಲ.

೧೯೫೨ರಲ್ಲಿ ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು, ಮೈಸೂರು ವಿಧಾನ ಪರಿಷತ್ತಿಗೆ ನನ್ನನ್ನು ನಾಮಕರಣ ಮಾಡಿದರು. ಹನುಮಂತಯ್ಯನವರನ್ನು ಕಂಡರೆ ನನಗೆ ಯಾವಾಗಲೂ ತುಂಬ ವಿಶ್ವಾಸ ಮತ್ತು ಗೌರವ. ಅವರ ದೇಶಪ್ರೇಮ ದಕ್ಷತೆ ದೂರದೃಷ್ಟಿ ಇವುಗಳನ್ನು ನಾನು ಮೆಚ್ಚಿಕೊಂಡಿದ್ದೆ. ಸ್ವಾತಂತ್ರ್ಯ ಬಂದು, ಚುನಾವಣೆ ನಡೆದ ನಂತರದ ಮೊದಲ ಶಾಸನಸಭೆಯಲ್ಲಿ ಸದಸ್ಯನಾಗುವ ಗೌರವ ನನಗೆ ದೊರಕಿದುದಕ್ಕೆ ನನಗೆ ತುಂಬ ತೃಪ್ತಿಯುಂಟಾಗಿತ್ತು. ಶ್ರೀ ಕೆ. ಟಿ. ಭಾಷ್ಯಂರವರು ನಮ್ಮ ಸಭೆಯ ಮೊದಲಿನ ಅಧ್ಯಕ್ಷರಾಗಿದ್ದರು. ಅಂತಹ ಅಧ್ಯಕ್ಷರು ಸಿಕ್ಕಿದ್ದು ಸಭೆಯ ಅದೃಷ್ಟ. ಅವರು ತುಂಬ ದಕ್ಷರೂ ಮೇಧಾವಿಗಳೂ ವಿನೋದ ಪ್ರಕೃತಿಯುಳ್ಳವರೂ ಬಹುಶ್ರುತರೂ ಬಹು ಕುತೂಹಲಿಗಳೂ ಆಗಿದ್ದವರು. ಸದಸ್ಯರು ಎಬ್ಬಿಸಬಹುದಾದ ಯಾವ ಸಮಸ್ಯೆಯ ಬಿರುಗಾಳಿಯನ್ನೂ ಅವರು ಸುಲಭವಾಗಿ ಪರಿಹರಿಸುತ್ತಿದ್ದರು. ಅಂಥವರ ನೇತೃತ್ವದಲ್ಲಿ ಕೆಲಸ ಮಾಡುವುದೇ ಒಂದು ಸಂತೋಷವಾಗಿತ್ತು. ಅವರು ಸದಸ್ಯರೆಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ಸಭೆಯ ಮೊದಲನೆಯ ದಿನವೇ ನಾನು ಸಭೆಯ ಕಾರ್ಯಕಲಾಪಗಳೆಲ್ಲ ಕನ್ನಡದಲ್ಲಿಯೇ ನಡೆಯಬೇಕೆಂದು ಭಾಷಣ ಮಾಡಿದೆ. ನಾನು ಸಭೆಯ ಎಲ್ಲ ಕಾರ್ಯಗಳಲ್ಲಿಯೂ ಶ್ರದ್ಧೆಯಿಂದ ಭಾಗವಹಿಸುತ್ತಿದ್ದೆ. ಎಲ್ಲ ವಿಷಯಗಳ ಮೇಲೆಯೂ ಭಾಷಣ ಮಾಡುತ್ತಿದ್ದೆ. ನನ್ನ ಟೀಕೆಗಳು ರಚನಾತ್ಮಕವಾಗಿರುತ್ತಿದ್ದವು. ಭಾಷಣಗಳಲ್ಲಿ ಅನಾವಶ್ಯಕ ಉದ್ವೇಗವಿರುತ್ತಿರಲಿಲ್ಲ. ನಾನು ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣಗಳಲ್ಲಿ ಮುಖ್ಯವಾದುವು ಬಳ್ಳಾರಿ ಸೇರ್ಪಡೆಯಾದಾಗ ಮತ್ತು ಕರ್ನಾಟಕದ ಏಕೀಕರಣದ ಮಸೂದೆಯ ಮೇಲೆ. ಏಕೀಕರಣಕ್ಕಾಗಿ ಶ್ರೀ ಹನುಮಂತಯ್ಯನವರು ಎಲ್ಲ ಬೆಂಬಲವನ್ನೂ ಕೊಟ್ಟರು. ಆಗ ಅವರು ಅಷ್ಟು ಮಾಡದಿದ್ದರೆ ಏಕೀಕರಣವಾಗುತ್ತಿರಲಿಲ್ಲ. ಏಕೀಕರಣದಿಂದ ನಮಗೆ ಆಗಬಹುದಾದ ಶುಭಗಳು ಅವರಿಗೆ ಸಲ್ಲಬೇಕು. ನಾನು ಮೈಸೂರು ಶಾಸನ ಸಭೆಗಳಿಂದ ವಿಶ್ವವಿದ್ಯಾಲಯದ ಸೆನೆಟ್‌ಗೆ ಆರಿಸಲ್ಪಟ್ಟೆ. ಸೆನೆಟನಲ್ಲಿ ಕವಿವರ್ಯ ಶ್ರೀ

ಕುವೆಂಪುರವರಿಗೆ ಡಾಕ್ಟರೇಟ್ ಪದವಿ ನೀಡಬೇಕೆಂಬ ಸಲಹೆಗೆ ನಾನು ಅನುಮೋದನೆ ಯಿತ್ತಾಗ (second) ಕವಿಗಳ ಕೃತಿಗಳು ಕನ್ನಡನಾಡಿನ ಮೇಲೆ ಅವರ ಪ್ರಭಾವ ಇವುಗಳನ್ನು ಕುರಿತು ವಿಶೇಷ ವಿಷಯಗಳನ್ನೊಳಗೊಂಡ ಭಾಷಣ ಮಾಡಿದೆ. ಸೆನೆಟ್‌ನಲ್ಲಿ ನಾನು ಮಾಡಿದ ಕಾರ್ಯಗಳ ಪೈಕಿ ಕನ್ನಡ ನಿಘಂಟು, ಕನ್ನಡ ವಿಶ್ವಕೋಶ ಇವುಗಳ ರಚನೆಗಾಗಿ ಮಸೂದೆಯನ್ನು ಇಟ್ಟು ಪಾಸು ಮಾಡಿಸಿದುದು ಮುಖ್ಯವಾದುದು.

ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದಾಗಲೂ ನನ್ನನ್ನು ಒಂದು ಅವಧಿಗಾಗಿ ವಿಧಾನ ಪರಿಷತ್ತಿಗೆ ನಾಮಕರಣ ಮಾಡಿದರು. ಅವರಿಗೂ ನನಗೂ ದೀರ್ಘ ಕಾಲದಿಂದ ಮಿತ್ರತ್ವವಿದ್ದು ಅವರ ಕೆಲಸಗಳನ್ನು ನಾನು ಬಹುವಾಗಿ ಮೆಚ್ಚುತ್ತೇನೆ. ನನ್ನ ಮನಸ್ಸಿನಲ್ಲಿ ಅವರು ಏಕತಂತ್ರ ಕರ್ಣಾಟಕದ ಪ್ರತೀಕವಾಗಿದ್ದರು. ಕಾಂಗ್ರೆಸ್ ಶಾಸನ ಪಕ್ಷದ ಕಾರ್ಯಕಾರಿ ಸಮಿತಿಗೂ ನಾನು ಆಯ್ಕೆಯಾಗಿದ್ದೆ. ಈ ಅವಧಿಯಲ್ಲಿ ನಾನು 'ಊರ್ವಶಿ', 'ಸಾಹಿತ್ಯ ರಶ್ಮಿ', 'ಉಸಬು', 'ಕಮ್ಮಾರ ವೀರಭದ್ರಾಚಾರಿ', 'ಮದ್ಯಪಾನ ದಿಂದ ವಿಮೋಚನೆ' ಈ ಪುಸ್ತಕಗಳನ್ನು ಪ್ರಕಟಿಸಿದೆ. 'ಹೇಮಾವತಿ' ಹರಿಜನೋ ದ್ಧಾರದ ಉದ್ದೇಶವುಳ್ಳದುದಾಗಿದ್ದರೆ, 'ಊರ್ವಶಿ' ಆಕಸ್ಮಾತ್ತು ಒಬ್ಬ ಮುದಿಳೆ ಕಾಲು ಜಾರಿದರೂ, ಉತ್ತಮ ನಾರಿಯ ಎಲ್ಲ ಗುಣಗಳನ್ನೂ ದೌರ್ಬಲ್ಯಗಳನ್ನೂ ಹೇಗೆ ಪ್ರದರ್ಶಿಸಿದಳು ಎಂಬುದರ ಸಹಾನುಭೂತಿ ಪೂರ್ಣ ಕಥೆಯಾಗಿದೆ. ಸಾಧಾರಣವಾಗಿ ವಿನೋದ ದಿಂದ ಆಕರ್ಷಿತನಾಗುವ ಸ್ವಭಾವವುಳ್ಳವನಾದ ನಾನು ಮದರಾಸಿನ "ಕೊನಷ್ಟೈ" ಎಂಬ ಕಾವ್ಯನಾಮದ ಲೇಖಕರು ಬರೆದ ಕೆಲವು ವಿನೋದ ಕಥೆಗಳನ್ನೂ ('ಕೊನಷ್ಟೈ ಕಥೆಗಳು') ಕನ್ನಡಿಸಿ ಪ್ರಕಟಿಸಿದೆ. ಈ ಮಧ್ಯೆ, ನನ್ನ ನಾನಾ ಚಟುವಟಿಕೆಗಳ ಸಂದರ್ಭದಲ್ಲಿ ನನ್ನೊಂದಿಗೆ ಆತ್ಮೀಯ ಗೆಳೆತನವನ್ನು ಹೊಂದಿದ ಕೆಲವರ ಒಂದೊಂದು (ನನಗೆ ಉತ್ತಮ ವೆಂದು ತೋರಿದ) ಗ್ರಂಥಗಳನ್ನೂ ಕನ್ನಡಕ್ಕೆ ತರ್ಜುಮೆ ಮಾಡಿದೆ. ಇದರ ಫಲವಾಗಿ ಖಾಂಡೇಕರ್‌ರವರ 'ಕ್ರೌಂಚವಧ', ಕೆ. ಎಂ. ಮುನಿಶಿಯವರ 'ಭಗವಾನ್ ಕೌಟಿಲ್ಯ', ರಾಮಚಂದ್ರ ಠಾಕೂರರ 'ರಾಜನರ್ತಕಿ' ಈ ಗ್ರಂಥಗಳು ಪ್ರಕಾಶಿತವಾದವು. ನನ್ನ ಕೆಲವು ಕಥೆಗಳು ತಮಿಳಿಗೂ ಹಿಂದಿಗೂ ಅನುವಾದಿತವಾಗಿ 'ಕಲೈಮಗಳ್', 'ಸಾರಿಕಾ', 'ಮಾರ್ಗಬಂಧು' ಮುಂತಾದ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬಹು ಹಿಂದೆಯೇ ಒಬ್ಬರು ನನ್ನ 'ನಮ್ಮ ಊರಿನ ರಸಿಕರನ್ನು' ತಮಿಳಿಗೂ ಮತ್ತೊಬ್ಬರು ತೆಲುಗಿಗೂ ಅನುವಾದಿಸಿದರು. ಅವರ ಪ್ರಕಟವಾಗಲಿಲ್ಲವೆಂದು ನನ್ನ ನಂಬಿಕೆ. ನನ್ನ ಒಂದು ಕಥೆ ಇಂಗ್ಲಿಷಿಗೂ ಸಹ ತರ್ಜುಮೆಯಾಗಿ ಅಚ್ಚಾಗಿದೆ. ಎರಡು ಕಥೆಗಳು ಜರ್ಮನ್ ಭಾಷೆಗೂ, ಎರಡು ರಷ್ಯನ್ ಭಾಷೆಗೂ ತರ್ಜುಮೆಯಾಗಿರುವ ವಿಷಯ ನನಗೆ ಗೊತ್ತಾಗಿದೆ. 'ನಮ್ಮ ಊರಿನ ರಸಿಕರು' ಗ್ರಂಥಕ್ಕೆ ದೇವರಾಜ ಬಹಾದುರ್ ಪಾರಿತೋಷಕ ಬಹಳ ಹಿಂದೆಯೇ ದೊರಕಿತು. ನನ್ನ 'ಸಾಹಿತ್ಯ ರಶ್ಮಿ' ಮತ್ತು 'ಕಮ್ಮಾರ ವೀರಭದ್ರಾಚಾರಿ' ಗ್ರಂಥಗಳಿಗೆ ಈಚೆಗೆ ಮೈಸೂರು ಸರ್ಕಾರದ ಪುರಸ್ಕಾರವೂ ದೊರಕಿತು. ೧೯೬೯ರಲ್ಲಿ ನನಗೆ ಮೈಸೂರು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ದೊರೆಯಿತು.

೧೯೫೨ರಿಂದ ಈಚೆಗೆ ನಾನು ಮೈಸೂರು ಸರ್ಕಾರದ Basic Education Committee, Secondary Education Board, Tagore Centenary Memorial Committee, ಮೈಸೂರು ರಾಜ್ಯದ ಸಾಹಿತ್ಯ ಅಕಾಡೆಮಿ (ಪ್ರಥಮ ಮೂರು ವರುಷ)ಗಳ ಸದಸ್ಯನಾಗಿದ್ದೆ. ಸಮಗ್ರ ಕನ್ನಡ ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿಯ ಸದಸ್ಯನಾಗಿದ್ದೆ. ಗಾಂಧೀಜಿಯವರ 'ಆತ್ಮಕಥೆ', 'ಸತ್ಯ ಮತ್ತು ಅಹಿಂಸೆ', 'ಭಾಷಣಗಳು ಮತ್ತು ಹೇಳಿಕೆಗಳು' ಮುಂತಾದ ನಾಲ್ಕು ಗ್ರಂಥಗಳನ್ನು ಅನುವಾದಿಸಿದ್ದೇನೆ. ೧೯೬೭ರ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ ನಾಗಿದ್ದೆ.

ನನ್ನ ಬಾಳನ್ನು ನಾನು ಈಗ ಹಿಂದಿರುಗಿ ನೋಡುವಾಗ ನಾನು ಸಾಹಿತಿಗಿಂತ ಹೆಚ್ಚಾಗಿ ಜನಸಾಮಾನ್ಯರ ಮನುಷ್ಯ. ರಾಜಕೀಯದಲ್ಲಿ ಗಾಂಧೀಜಿಯವರ ಅದಮ್ಯ ಚೇತನಶಕ್ತಿ ತ್ಯಾಗ ಆದರ್ಶಗಳಿಂದ ಪ್ರೇರಿತನಾಗಿ (ರಾಜಕೀಯದ ಆಸೆ ಅಧಿಕಾರ ಜನಗಳಿಗೆ ಒಳ್ಳೆಯದನ್ನು ಮಾಡಲಾರದು ಎಂಬ ಸಂಶಿಕೆ, ಓಟಿನಲ್ಲಿ ಗೆದ್ದರೆ ಪ್ರಜಾ ಪ್ರಿಯನಾದಂತೆ ಅಲ್ಲವೆಂಬ ನಂಬಿಕೆಯುಳ್ಳವನಾಗಿ) ಆ ಕ್ಷೇತ್ರದಲ್ಲಿ ನನ್ನಿಂದಾದ ಸೇವೆ ಸಲ್ಲಿಸಲು ಹೊರಟವ. ನಮ್ಮ ದೇಶದ ಜನಸಾಮಾನ್ಯ ಜಾನಪದರೆಂದರೆ ನನಗೆ ಅವರಲ್ಲಿ ಅತ್ಯಂತ ಪ್ರೇಮ ಮತ್ತು ಅತೀವ ನಂಬಿಕೆ. ಇತರರಲ್ಲಿ ಇಲ್ಲವೆಂದಲ್ಲ. ಜಾನಪದರ ಗುಣಗಳನ್ನೂ ಶಕ್ತಿಯನ್ನೂ ಹೆಚ್ಚು ಹೆಚ್ಚು ನೋಡಿದಂತೆ, ಭಾರತವನ್ನು ಆಧುನಿಕ ನಾಗರಿಕತೆಯ ಸರ್ವನಾಶದಿಂದ ತಪ್ಪಿಸಬಲ್ಲುದು ಅದೊಂದೆ ಎಂಬ ನನ್ನ ನಂಬಿಕೆ ದೃಢವಾಗುತ್ತಿದೆ.

ಕೊನೆಯಲ್ಲಿ ನನ್ನ ಸಾಹಿತ್ಯಸೇವೆಗೆ ಸಹಾಯಕರಾದ ನನ್ನ ಎಲ್ಲ ವಾಚಕರನ್ನೂ ಪ್ರಕಾಶಕರನ್ನೂ ಮುಖ್ಯವಾಗಿ ಸತ್ಯಶೋಧನ, (ಬೆಂಗಳೂರು) ಕಾವ್ಯಾಲಯ, ಶಾರದಾ ಮಂದಿರ, ಉಷಾ ಗ್ರಂಥಮಾಲೆ (ಮೈಸೂರು), ಪೂರ್ಣಿಮಾ ಸಾಹಿತ್ಯಮಾಲೆ (ಹಾಸನ) ಇವರೆಲ್ಲರ ಉಪಕಾರವನ್ನೂ ಸ್ಮರಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯ ನನಗೆ ತುಂಬ ಪ್ರಿಯವಾಗಿದೆ. ಇದಕ್ಕೆ ಕಾರಣ ಈ ವಿಶ್ವವಿದ್ಯಾನಿಲಯ ನಿಜವಾಗಿ ಕನ್ನಡದ ವಿಶ್ವವಿದ್ಯಾನಿಲಯವಾಗಿರುವುದೂ, ಈ ಪೀಠದಲ್ಲಿ ಜಾನಪದಕ್ಕೆ ಅರ್ಹವಾದ ಸ್ಥಾನವೂ ದೊರೆತಿರುವುದು ಮಾತ್ರವೇ ಅಲ್ಲ. ಇಲ್ಲಿಯ ಕುಲಪತಿಗಳಾದ ಶ್ರೀ ದೇ. ಜವರೇಗೌಡರು ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕರು, ಇತರ ಎಲ್ಲ ಅಧ್ಯಾಪಕರೂ ತರುಣ ವಿದ್ವಾಂಸರೂ ನನ್ನಲ್ಲಿ ಅತ್ಯಂತ ವಾತ್ಸಲ್ಯವನ್ನಿಟ್ಟಿರುವುದು ಮತ್ತು ನನ್ನ ಕೃತಿಗಳಿಗೆ ಅವಶ್ಯಕವಾದ ಪ್ರೋತ್ಸಾಹವನ್ನು ಕೊಡುತ್ತಿರುವುದೂ ಆಗಿದೆ. ಇವರೆಲ್ಲರಿಗೂ ದೇವರು ಸದಾ ಶುಭವನ್ನು ಕರುಣಿಸಲೆಂದು ಹಾರೈಸುತ್ತೇನೆ.[1]

[1] ಕೆಲವು ನೆನಪಿನ ಟಿಪ್ಪಣಿಗಳಿಂದ ಸಂಗ್ರಹಿತವಾದ ಲೇಖನ.

‘ಹಳ್ಳಿಯ ಚಿತ್ರಗಳು’

ಎಂ. ವಿ. ಸೀತಾರಾಮಯ್ಯ

೧

ಗೊರೂರು ರಾಮಸ್ವಾಮಿ ಅಯ್ಯಂಗಾರರು ಮೈಸೂರು ರಾಜ್ಯದ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಗೊರೂರು ಗ್ರಾಮದಲ್ಲಿ ಹುಟ್ಟಿ ಬೆಳೆದವರು; ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡಿದ್ದರೂ ಅದರ ವ್ಯಾಮೋಹಕ್ಕೆ ಒಳಗಾಗದೆ, ತಮ್ಮ ನಡೆ ನುಡಿ ಆಚಾರ ವಿಚಾರಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಕಾಯ್ದುಕೊಂಡವರು; ಆ ಮೂಲಕ ನಮ್ಮ ಹಳ್ಳಿಗಾಡಿನ ಜನಪದದ ಸಂಸ್ಕೃತಿಯ ಜೀವಂತ ಪ್ರತಿನಿಧಿಗಳು. ಈ ಕಾರಣದಿಂದಾಗಿ, ಅವರ ಮೊತ್ತಮೊದಲ ಸಾಹಿತ್ಯ ಕೃತಿ ‘ಹಳ್ಳಿಯ ಚಿತ್ರಗಳಿ’ಂದ ಮೊದಲ್ಗೊಂಡು ಆಮೇಲಿನ ಚಿತ್ರ, ಕಥೆ, ಕಾದಂಬರಿಗಳಲ್ಲಿ ಜಾನಪದ ಜೀವನದ ಸರಳತೆ, ಮುಗ್ಧ ಸೌಂದರ್ಯ, ಸಹಜ ರಸಿಕತೆ, ವಿನೋದಪರತೆ, ಸಜ್ಜನಿಕೆ, ನಿರಾಡಂಬರತೆ, ಜೀವನ ಶ್ರದ್ಧೆ, ಪಾರಮಾರ್ಥಿಕತೆ, ಈ ಸದ್ಗುಣಗಳ ಪರಿಣಾಮ ರಮಣೀಯತೆ—ನಾಗರಿಕ ಜೀವನದ ಕೃತಕ ನಯನಾಜೂಕುಗಳ ಮೆರುಗಿಲ್ಲದ ದೇಸಿತನದ ಚೆಲುವು—ಜೀವನೋಲ್ಲಾಸವನ್ನು ಬೀರುತ್ತವೆ. ಗೊರೂರರ ಸಾಹಿತ್ಯ ನಂದನದಲ್ಲಿ ಸಹೃದಯನು ಕೇಳಬಹುದಾದ ಜೀವನ ಸಂಗೀತದ ಮುನ್ನವಿಯನ್ನು ಸಿಂಪಡಿಸುವ ಪಲ್ಲವಿಯಂತಿದೆ ಅವರ ಚೊಚ್ಚಲು ಕೃತಿ ‘ಹಳ್ಳಿಯ ಚಿತ್ರಗಳು’; ಈ ಬಗೆಯ “ಚಿತ್ರ” ಸಾಹಿತ್ಯ ಪ್ರಕಾರಕ್ಕೆ ನಾಂದಿ ಕೂಡ. ಈ ಕೃತಿ ೧೯೫೭ರವರೆಗೆ ಏಳು ಮುದ್ರಣಗಳನ್ನು ಕಂಡಿರುವುದೇ ಇದರ ಜನಪ್ರಿಯತೆಗೆ ಸಾಕಾಗುವ ಸಾಕ್ಷ್ಯ. ವರ್ಷಗಳುರುಳಿದರೂ ಜನಪ್ರಿಯತೆಯನ್ನು ಕಳೆದುಕೊಳ್ಳದ ಈ ಕೃತಿ ಹೊಸಗನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿ ನಿಂತಿದೆ; ನಿಲ್ಲುತ್ತದೆ. ಕನ್ನಡ ಜನಮನದಲ್ಲಿ ಒಂದು ನಲ್ಮೆಯ ನಿಲ್ಮೆಯನ್ನು ಗಳಿಸಿಕೊಂಡಿರುವ ಈ ಕೃತಿಯ “ಚಿತ್ರಗಾರಿಕೆ”ಯ ಚೆಲುವನ್ನು—ನಾವು ಮೊತ್ತಮೊದಲಿಗೆ, ಸುಮಾರು ೧೯೩೩ರಲ್ಲಿ—ಕಂಡು ಸಂತೋಷಪಟ್ಟು ನಾಲ್ಕು ದಶಕ

ಗಳಾದ ಮೇಲೆ, "ಕಾಲದಿಂದ ಮಾಸದ" ಆ ಚಿತ್ರಗಳ ಚೆಲುವು ಎಂಥದು ಎಂಬುದನ್ನು ನಾಲ್ಕು ಮಾತಿನಲ್ಲಿ ಇಂದಿನ—ಎಂದರೆ, ಎಲ್ಲ ಕಾಲದ ಬರವಣಿಗೆಯ ಗುಣವನ್ನು ಒಪ್ಪಿಕೊಂಡು ಮೆಚ್ಚಬಲ್ಲ ತೆರೆದ ಹೃದಯದ—ಓದುಗರಿಗೆ ಪರಿಚಯ ಮಾಡಿಕೊಡ ಬಯಸುತ್ತೇನೆ.

೨

ಮೊತ್ತಮೊದಲನೆಯದಾಗಿ, ಈ 'ಹಳ್ಳಿಯ ಚಿತ್ರಗಳ'ಲ್ಲಿ ನಾವು ಕಾಣುವ ಹಳ್ಳಿಯ ಬದುಕು ನಾಲ್ಕು ದಶಕಗಳ ಹಿಂದಿನದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಲೇಖಕರು ಸ್ಪಷ್ಟವಾಗಿ ಹೇಳದಿದ್ದರೂ, ಅನೇಕ ಚಿತ್ರಗಳು ವರ್ಣಿಸುವ ಸಂಗತಿಗಳೆಲ್ಲ ಅವರ ಹುಟ್ಟೂರಾದ ಗೊರೂರಿನ ಪರಿಸರಕ್ಕೆ ಸಂಬಂಧಪಟ್ಟವು. ಅರಕಲಗೂಡು ನನ್ನ ತಾಯಿಯ ತವರೂರು. ಗೊರೂರು ಅಲ್ಲಿಗೆ ಹತ್ತಿಪ್ಪತ್ತು ಮೈಲುಗಳ ಫಾಸಲೆಯಲ್ಲಿದೆ. ಅಲ್ಲಿನ ಕೋಟೆ-ಪೇಟೆಯ ಮನೆಗಳು, ದೇವಾಲಯ, ಹೇಮಾವತಿ ನದಿ—ಇವುಗಳ ಹಾಯ್ನೋಟವನ್ನು ಅರಕಲಗೂಡು–ಹಾಸನ ಮಾರ್ಗದ ಬಸ್ಸು ಪ್ರಯಾಣದ ಕಾಲದಲ್ಲಿ ಪಡೆದಿದ್ದೇನೆ. (ಗೊರೂರಿಗೆ ಹೋಗಬೇಕಾದರೆ ಈಗಲೂ ಬಸ್ಸಿನಲ್ಲಿಯೇ ಪ್ರಯಾಣ ಮಾಡಬೇಕು.) ಹೀಗೆ, ಈ ಪುಸ್ತಕದಲ್ಲಿ ಬರುವ ಪ್ರಕೃತಿ ವರ್ಣನೆಗಳೂ ಜನಜೀವನದ ವರ್ಣನೆಗಳೂ ವಾಸ್ತವ ಸೌಂದರ್ಯದಿಂದ ಕಂಗೊಳಿಸುತ್ತವೆ. ಕೆಲವು ಹಾಸ್ಯ ಸಂದರ್ಭಗಳಲ್ಲಿ ಅನಿವಾರ್ಯವಾದ ಅತ್ಯುಕ್ತಿ ವಾಸ್ತವಿಕತೆಯ ರಂಗನ್ನು ದಟ್ಟವಾಗಿ ಸುತ್ತದೆಯೇ ಹೊರತು, ಅವು ಅಸಹಜ ಅಥವಾ ಅಸಂಭವ ಎನ್ನಿಸುವಂತೆ ಮಾಡುವುದಿಲ್ಲ. ತನ್ನ ಸುತ್ತಮುತ್ತಣ ಲೋಕದ ನಿರೀಕ್ಷಣದ ಫಲವಾದ ಸ್ವಂತ ಅನುಭವಗಳನ್ನು ಒಳ್ಳೆಯ ಬರವಣಿಗೆಯ ಮೂಲಕ ತಿಳಿಯಪಡಿಸಿದರೆ ಅದು ಉತ್ತಮ ಸಾಹಿತ್ಯವಾಗಬಲ್ಲದು ಎಂದು ನಮ್ಮ ಸಾಹಿತ್ಯದ ನವಯುಗ ನಿರ್ಮಾಣ ಕಾಲದಲ್ಲಿ ತೋರಿಸಿಕೊಟ್ಟ ಲೇಖಕ ವರ್ಗದಲ್ಲಿ ಗೊರೂರರು ಅಗ್ರಗಣ್ಯರು.

ಈ ಹಿನ್ನೆಲೆಯಲ್ಲಿ 'ಹಳ್ಳಿಯ ಚಿತ್ರಗಳ' ಸ್ವಾರಸ್ಯವನ್ನು ಅರಿಯಲು ಪ್ರಯತ್ನಿಸಬೇಕು. ಆ ಕೃತಿ ಎಷ್ಟರಮಟ್ಟಿಗೆ ಸಮಕಾಲೀನ ಜನಜೀವನವನ್ನು ಪ್ರತಿನಿಧಿಸುತ್ತದೆ—ಲೇಖಕನ ಅನುಭವದ ವ್ಯಾಪ್ತಿಗೆ ಒಳಪಡುವಮಟ್ಟಿಗೆ—ಎಂಬುದನ್ನು ಗುರುತಿಸಬೇಕು. ಏಕೆಂದರೆ, ಯಾವ ಸಾಹಿತ್ಯ ಕೃತಿಯಲ್ಲಿ ಸಮಕಾಲೀನ ಜನಜೀವನದ ಹೃದಯಸ್ಪಂದನ ಪ್ರತಿಧ್ವನಿಸುವುದಿಲ್ಲವೋ ಅದು ಜೀವಂತಕೃತಿ ಎನಿಸುವುದಿಲ್ಲ. 'ಹಳ್ಳಿಯ ಚಿತ್ರಗಳ'ಲ್ಲಿ ಜೀವಂತ ಸಮಾಜವೊಂದರ ಪರಿಚಯ ನಮಗೆ ದೊರಕುತ್ತದೆ. ಆ ಸಮಾಜ ಯಾವ ಕಾಲಕ್ಕೆ ಸೇರಿದ್ದು, ಯಾವ ಪರಿಸರದಲ್ಲಿ ಅದು ಬದುಕಿ ಬಾಳಿತು, ಜನದ ಮನೋಧರ್ಮ ಹೇಗಿತ್ತು ಎಂಬುದರ ಸ್ಪಷ್ಟ ಮುದ್ರೆ ಈ ಕೃತಿಯಲ್ಲಿ ಅಂಕಿತವಾಗಿದೆ.

'ಹಳ್ಳಿಯ ಚಿತ್ರಗಳ'ಲ್ಲಿ ನಮಗೆ ಗೋಚರವಾಗುವ ಜನದ ಬದುಕಿನ ನೋಟದಲ್ಲಿ ಮುಖ್ಯ ಅಮುಖ್ಯ ಎನ್ನದೆ ಎಲ್ಲ ವಿವರಗಳೂ ಪ್ರಕೃತವಾಗುತ್ತವೆ. ಪ್ರಯಾಣ

ಸೌಕರ್ಯ. ವರ್ಣಾಶ್ರಮ ಪದ್ಧತಿಯಲ್ಲಿ ಜನರ ನಿಷ್ಠೆ, ಜಾತಿಭೇದಗಳನ್ನು ಮೆಟ್ಟಿನಿಂತ ಮಾನವೀಯ ದೃಷ್ಟಿ, ಜೀವನದ ಸರಳತೆ ಮತ್ತು ಶ್ರದ್ಧೆ, ಮುಂತಾಗಿ ಜನಜೀವನದ ಪ್ರಧಾನ ರೂಪರೇಖೆಗಳಲ್ಲದೆ ಅದರ ಒಳಪದರಗಳನ್ನು ಬಿಡಿಸಿ ತೋರುವ ವಿವರಗಳೂ ವಿಪುಲವಾಗಿ ಕಾಣಸಿಕ್ಕುತ್ತವೆ. ಇಲ್ಲಿ ಕೆಲವನ್ನು ಮಾತ್ರ ಗಮನಿಸುವುದು ಸಾಧ್ಯ.

ಈ ಚಿತ್ರಗಳ ಕಾಲದಲ್ಲಿ ಗೊರೂರಿಗೆ—ಒಟ್ಟಿನ ಮೇಲೆ ಹಳ್ಳಿಗಾಡಿನಲ್ಲಿ—ಬಸ್ ಪ್ರಯಾಣ ಸೌಕರ್ಯ ವ್ಯವಸ್ಥಿತವಾಗಿ ಏರ್ಪಟ್ಟಿರಲಿಲ್ಲ. ಜೋಡೆತ್ತಿನ ಗಾಡಿಯಲ್ಲಿಯೇ ಪ್ರಯಾಣ ಮಾಡಬೇಕಾಗಿತ್ತು. (ನನ್ನ ಬಾಲ್ಯದಲ್ಲಿ ಒಮ್ಮೆ ಮೈಸೂರಿನಿಂದ ಅರಕಲಗೂಡಿಗೆ ನನ್ನ ತಾಯಿ ತಂದೆಗಳೊಡನೆ ಒಂಟೆತ್ತಿನ ಗಾಡಿಯಲ್ಲಿ ಪ್ರಯಾಣ ಮಾಡಿದ್ದು ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿದೆ. ಒಂಟೆತ್ತಿನ ಗಾಡಿಯಲ್ಲಿ ದೂರ ಪ್ರಯಾಣಮಾಡುವುದು ಅಪರೂಪವಾಗಿತ್ತು.) ಗೊರೂರಿಗೆ ಬಸ್ಸು ಬಂದು, ಅದರಲ್ಲಿ ಮೊದಲ ಸಲ ಕುಳಿತು ಪ್ರಯಾಣಮಾಡಿದ ಸಂಗತಿಯನ್ನು 'ನಮ್ಮ ಊರ ಬಸ್ಸು' ಎಂಬ ಚಿತ್ರದಲ್ಲಿ ಬಹು ಸ್ವಾರಸ್ಯವಾಗಿ ವರ್ಣಿಸಿದ್ದಾರೆ: "ನಮ್ಮೂರಿಗೂ ಒಂದು ಬಸ್ ಬಂದಿತು. ನಾಗರಿಕತೆಯ ತುದಿಯನ್ನು ಏರಿಬಿಟ್ಟೆವು ನಾವು" (ಪುಟ ೧೧೧) ಎಂದು ನಮ್ಮ ಲೇಖಕರಂಥವರು ಕುಣಿದಾಡಿಬಿಟ್ಟರಂತೆ. ಅವರ "ಹಳ್ಳಿಯಲ್ಲಿ ಯಾರಾದರೂ ಗಟ್ಟಿಯಾಗಿ ಕಿರಚಿದರೆ "ಬಸ್ಸು ಕಿರಚಿದಂತೆ ಅವನು ಕಿರಚುತ್ತಾನೆ" (ಪುಟ ೧೧೩) ಎನ್ನುತ್ತಿದ್ದರಂತೆ! ಆಗಿನ ದಿನಗಳಲ್ಲಿ, ಒಂದು ಸನ್ನಿವೇಶದಲ್ಲಿ, 'ಶ್ರೀನಿವಾಸ'ರ 'ಸಣ್ಣಕಥೆ'ಗಳನ್ನು (೧೯೨೦) ಆಸಕ್ತಿಯಿಂದ ಓದಿದ ಸಂಗತಿಯನ್ನು ಲೇಖಕರು ಸ್ಮರಿಸಿದ್ದಾರೆ. ಆ ಪುಸ್ತಕ ಪ್ರಕಟವಾಗಿ ಜನಪ್ರಿಯವಾಗತೊಡಗಿದ್ದು ೧೯೩೫ರ ಸುಮಾರಿನಲ್ಲಿ. ಹೊಸ ಸಾಹಿತ್ಯದ ಒಂದು ಪ್ರಕಾರ ಎಷ್ಟು ಬೇಗ ಹಳ್ಳಿಯ ಮನಸ್ಸನ್ನೂ ಸೆರೆಹಿಡಿದಿತ್ತು ಎನ್ನುವುದಕ್ಕೆ ಇದು ನಿದರ್ಶನ. ೧೯೨೪ರಲ್ಲಿ ಕಾವೇರಿ ನದಿಯಲ್ಲಿ ದೊಡ್ಡ ಪ್ರವಾಹ ಬಂದಿತ್ತು: ಕನ್ನಂಬಾಡಿಯ (ಕೃಷ್ಣರಾಜಸಾಗರದ) ಕಟ್ಟೆ ಆಗ ಇನ್ನೂ ಪೂರ್ತಿಯಾಗಿರಲಿಲ್ಲ. ಅರೆವಾಸಿಯಾಗಿದ್ದ ಕಟ್ಟೆಯ ಮೇಲೆ ಪ್ರವಾಹದ ನೀರು ಜಲಪಾತದ ಹಾಗೆ ಧುಮುಕುತ್ತಿತ್ತು. ಈ ಪ್ರವಾಹದ ವರ್ಣನೆ 'ರತ್ನಳ ಮದುವೆಗೆ ಹೋದದ್ದು' ಎಂಬ ಚಿತ್ರದಲ್ಲಿ ಬರುತ್ತದೆ. ಶಿವರಾಮ ಕಾರಂತರ 'ಔದಾರ್ಯದ ಉರುಳಿನಲ್ಲಿ' ಕಾದಂಬರಿಯಲ್ಲಿನ ನೆರೆಯ ವರ್ಣನೆ, ಎಂ. ಆರ್. ಶ್ರೀಯವರ 'ಮಹಾತ್ಯಾಗ' ಕಾದಂಬರಿಯಲ್ಲಿ ಬರುವ ತುಂಗಾ ಪ್ರವಾಹದ ವರ್ಣನೆ—ಇವು ಕನ್ನಡ ಸಾಹಿತ್ಯ ಲೋಕದಲ್ಲಿ ಕಾಣಸಿಕೊಳ್ಳುವುದಕ್ಕೆ ಎಷ್ಟೋ ವರ್ಷ ಮುಂಚೆ ಗೊರೂರರ ವರ್ಣನೆ ನಿರೂಪಣೆಗೊಂಡಿರುವುದು ಗಮನಾರ್ಹ. ಕಾಲ ದೇಶನಿಷ್ಠವಾದ ಇಂಥ ವರ್ಣನೆಗಳು ಸಾಹಿತ್ಯಕೃತಿಗೆ ಐತಿಹಾಸಿಕ ಮೌಲ್ಯವನ್ನು ನೀಡುತ್ತವೆ. (ಇಲ್ಲಿ, ಇತಿಹಾಸ ಎಂದರೆ ಕೇವಲ ರಾಜಮಹಾರಾಜರ, ಪ್ರಭುತ್ವಗಳ, ರಾಜಕೀಯ ಘಟನೆಗಳ, ಎಂಬ ಸಾಂಪ್ರದಾಯಿಕ ಅರ್ಥ ಮಾತ್ರವಲ್ಲ: ಜನಜೀವನದ ಯಥಾರ್ಥ ನಿರೂಪಣೆ ಎಂಬ ಅರ್ಥ ಕೂಡ.) 'ಹಳ್ಳಿಯ ಚಿತ್ರಗಳ'ಲ್ಲಿ ವರ್ಣಿತವಾಗಿರುವ ಪ್ರವಾಹದ ಹಿಂಚು ಮುಂಚಿನ ಕಾಲದಲ್ಲಿ ಹಳ್ಳಿಗಾಡಿನ ಎಷ್ಟೋ ಕಡೆ ನದಿ

ಗಳಿಗೆ ಅಡ್ಡವಾಗಿ ಸಣ್ಣ ಸೇತುವೆಗಳ ನಿರ್ಮಾಣವಾಗಿರಲಿಲ್ಲ. ನದಿಗಳನ್ನು ದಾಟಬೇಕಾದರೆ ಹರಿಗೋಲೇ[1] ಗತಿ. ಪ್ರವಾಹ ಬಂದು ಹುಚ್ಚು ಹೊಳೆಯಾಗಿ ಹರಿಯುತ್ತಿದ್ದ ಕಾವೇರಿ ನದಿಯನ್ನು (ಬನ್ನೂರ ಬಳಿ) ಹರಿಗೋಲಿನಲ್ಲಿ ದಾಟಿದ ವರ್ಣನೆ ಪ್ರವಾಹದ ವರ್ಣನೆಗೆ ಸೇರಿಕೊಂಡಂತೆ ಬಂದಿದೆ. ಈಗಿನವರ ಮಾತು ಹಾಗಿರಲಿ. ಮನೆಬಿಟ್ಟು, ಊರು ಬಿಟ್ಟು ಹೊರಕ್ಕೆ ಹೊರಡದಿದ್ದ ಆಗಿನ ಕಾಲದ ಮುದುಕರಿಗೇ ‘ಹರಿಗೋಲು’ ಅಪರಿಚಿತ ವಸ್ತುವಾಗಿತ್ತು. ಲೇಖಕರ ಜೊತೆಯಲ್ಲಿ ಪ್ರಯಾಣ ಮಾಡಿದ ಅಂತಹ ಮುದುಕರು— “ಏನಯ್ಯ ಹರಿಗೋಲು ಹೇಗಿದೆ ? ಅದರಲ್ಲಿ ದುರ್ಮರಣವುಂಟಾಗಿ ಗತಿಯಿಲ್ಲದೆ ಅಂತರ ಪಿಶಾಚಿಯಾಗಿ ತಿರುಗಬೇಕಾದೀತು” (ಪುಟ ೨೪) ಎಂದು ಭಯಗ್ರಸ್ತರಾಗಿ ಕೇಳಿದರು.

ಹಳ್ಳಿಯ ಚಿತ್ರಗಳ ಕಾಲ, ಆರು ಕಾಸಿನ ದೊಡ್ಡ ತಾಮ್ರದ ಬಿಲ್ಲೆ, ಬೆಳ್ಳಿಯ ಎರಡಾಣೆ (ದೊಡ್ಡಾಣೆ)ಯ ಚಿಕ್ಕ ಬಿಲ್ಲೆ ಚಲಾವಣೆಯಲ್ಲಿದ್ದ ಕಾಲ; ಈಗ ನಾಣ್ಯಕ್ಕೆ ತಾಮ್ರವೂ ಇಲ್ಲ, ಬೆಳ್ಳಿಯೂ ಇಲ್ಲ! ಎರಡಾಣೆಗೆ ೫ ಬಾಳೆಯಹಣ್ಣು ಆಗ; ಈಗ ಒಂದು! ಬ್ರಾಹ್ಮಣ ವರ್ಗದವರಲ್ಲಿ ಮಡಿ ಮೈಲಿಗೆಗಳ ಭಾವನೆ ಬಹು ಬಿಗಿಯಾಗಿದ್ದ ಕಾಲ. ಗ್ರಂಥದ ಅನೇಕ ಹಾಸ್ಯ ಪ್ರಸಂಗಗಳಿಗೆ ಈ ‘ಮಡಿ’ಯ ಗಡಿಬಿಡಿಯ ವಿಚಾರ ಲೇಖಕರಿಗೆ ಪೂರ್ಣ ಗ್ರಾಸವನ್ನು ಒದಗಿಸಿದೆ. ಮಣ್ಣಿನ ಹೂಜಿಯ ನೀರನ್ನು ವೈದಿಕ ಬ್ರಾಹ್ಮಣ ಮನೆತನದ ಯುವಕ ಕುಡಿದರೆ, “ಇದೇನು ಸಾಬರಂತೆ ನೀವು ಹೂಜಿಯಿಂದ ನೀರು ಕುಡೀತೀರಾ ?” (ಪುಟ ೯೮–೯೯) ಎಂಬ ಬೈಗುಳನ್ನು ಹಿರಿಯರಿಂದ ತಿನ್ನಬೇಕಾಗಿತ್ತು. ಬ್ರಾಹ್ಮಣ “ಬ್ರಾಹ್ಮಣರ ಹೋಟಲಿ”ಗೆ ಹೋದರೂ ಅವನ ಜಾತಿ ಕೆಡುತ್ತದೆ ಎಂಬ ಹಿರಿಯರ ಬೆದರಿಕೆಯ ಮಾತುಗಳಿಗೆ ಅಂದಿನ ಯುವಕರು ಮೌನದ ಗೌರವ ಸಲ್ಲಿಸಿದರೂ, ಹಾಸನದಂತಹ ಪಟ್ಟಣಗಳಲ್ಲಿ ಹೋಟಲುಗಳು ಅಭಿವೃದ್ಧಿ ಹೊಂದಲು ಅವರು ಕಾರಣರಾಗಿದ್ದರು. ಹೋಟಲಿನಲ್ಲಿ ಜಾತಿಗಳ ಬೆರಕೆಯಾಗುತ್ತಿದ್ದರೂ, ಬ್ರಾಹ್ಮಣ–ಬ್ರಾಹ್ಮಣೇತರ ಎಂಬ ಭೇದಭಾವನೆಯ ನಂಜು ನೆಮ್ಮದಿಯಾಗಿದ್ದ ಜನ ಜೀವನದ ಕ್ಷೀರಸಾಗರದಲ್ಲಿ ಆವೇ ತಾನೆ ಉಕ್ಕಿತ್ತು—(ಹಳೆಯ) ಮೈಸೂರು ಪ್ರಾಂತದಲ್ಲಿ. ಲೇಖಕರ ಈ ಉಕ್ತಿಯನ್ನು ಗಮನಿಸಿ : “ಬ್ರಾಹ್ಮಣರನ್ನು ಕಂಡರೆ ಸೊಳ್ಳೆಗಳಿಗೂ ದ್ವೇಷ. ಬ್ರಾಹ್ಮಣೇತರರನ್ನು ಅವುಗಳೂ ಮುಟ್ಟುವುದಿಲ್ಲವೇನೊ.” (ಪುಟ ೩೫) ಇದು ನೊಂದ ಮನಸ್ಸಿನ ಮಾತು. ಇದೇ ಚಿತ್ರದಲ್ಲಿ (‘ನಾವು ಮಾಡಿದ ಒಂದು ಯಾತ್ರೆ’) ೨೦ ಮಂದಿಯಿದ್ದ ಸ್ಕೌಟ್ ದಳದ ಕ್ಯಾಂಪ್‌ಫೈರ್‌ನ (camp-fire) ವರ್ಣನೆ ಬರುತ್ತದೆ. (ಸ್ಕೌಟ್ ಚಳವಳಿಗೆ ಅಪಾರ ಪ್ರೋತ್ಸಾಹ ಇದ್ದ ಕಾಲವದು.[2]) ಸ್ಕೌಟುಗಳು ತಮ್ಮ

[1] ಈ ಶಬ್ದರೂಪ ‘ಹರಿದೋಲು’ ಇರಬಹುದೆ? ತೊಗಲು, ತೊವಲು, ತೋಲು = ಚರ್ಮ. ಹರಿ + ತೋಲು = ಹರಿದೋಲು. (ಹರಿಗೋಲನ್ನು ಚರ್ಮದಿಂದ ಮಾಡುತ್ತಾರೆ.) ಇದು ವಿಚಾರಾರ್ಹ. ಕಿಟೆಲ್‌ರವರ ಕೋಶದಲ್ಲಿ ಈ ಶಬ್ದವಿಲ್ಲ.

[2] ಕೈಲಾಸಂ ಅವರ ‘ಪೋಲಿ ಕಿಟ್ಟಿ’ಯ ನಾಯಕ ಕಿಟ್ಟಿ ಒಬ್ಬ ಆದರ್ಶ ಸ್ಕೌಟ್ ಎಂಬುದನ್ನು ಇಲ್ಲಿ ನೆನೆಯಬಹುದು.

ಅಡಿಗೆಯನ್ನು ತಾವು ಮಾಡಿಕೊಳ್ಳಬೇಕಾಗಿ ಬಂದಿತು: "...ನಾನೂ ನನ್ನ ಸ್ನೇಹಿತ ಮತ್ತೊಬ್ಬ ಬ್ರಾಹ್ಮಣನೂ, 'ಬ್ರಾಹ್ಮಣೇತರರು' ಬೇರೆ ಅಡಿಗೆ ಮಾಡಿಕೊಳ್ಳಲಿ ಎಂದೆವು. ಆದರೆ ಬೇರೆ ಅಡಿಗೆಗೆ ಬೇರೆ ಪಾತ್ರೆಗಳು ಬೇಕಲ್ಲ. ನಮ್ಮ ಬಳಿ ಪಾತ್ರೆಗಳಿಗೆ ಗತಿ ಇರಲಿಲ್ಲ. ಕೊನೆಯಲ್ಲಿ ನಮ್ಮ ಜಾತಿಯನ್ನು ಉಳಿಸಿಕೊಳ್ಳುವುದಕ್ಕಾಗಿ, ನಾವೇ ಎಲ್ಲರಿಗೂ ಅಡಿಗೆ ಮಾಡಲು ಒಪ್ಪಿಕೊಂಡೆವು...ನಮ್ಮನ್ನು ಸ್ವಾರ್ಥಪರರೆಂದು ತಿಳಿಯಬಾರದೆಂದು ನಾವೇ ಅವರಿಗೆಲ್ಲ ಬಡಿಸಿದೆವು." (ಪುಟ ೩೬) ಈ ಚಿತ್ರಗಳಲ್ಲಿ ಇಂತಹ ಪ್ರಸಕ್ತಿಗಳು ಬಂದು ಬರವಣಿಗೆಗೆ ಸಮಸಾಮಯಿಕತೆಯ ಬಣ್ಣವನ್ನು ಕಟ್ಟಿವೆ; ಸಹಜತೆಯ ಸ್ವರೂಪವನ್ನು, ಪ್ರಾಮಾಣಿಕತೆಯ ಬೆಲೆಯನ್ನು ತಂದುಕೊಟ್ಟಿವೆ. ಚಿತ್ರಗಳ ತುಂಬ ಬಡ ವೈದಿಕ ಬ್ರಾಹ್ಮಣ ವರ್ಗದ–ಅದರಲ್ಲಿಯೂ ವಿಶೇಷತಃ ಅಯ್ಯಂಗಾರರ ಪಂಗಡದ–ಚಿತ್ರಣ ಪ್ರಧಾನವಾಗಿರುವುದರಲ್ಲಿ ಯಾವ ಅನೌಚಿತ್ಯವಾಗಲಿ ಸಮಾಜದ ಇತರ ವರ್ಗಗಳವರ ಬಗೆಗೆ ಅಗೌರವದ ಭಾವನೆಯ, ಮನನೋಯಿಸಬಹುದಾದಂತಹ ಅಂಶದ, ಲವಲೇಶವಾಗಲಿ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಸಿಕ್ಕದು.

೩

'ಹಳ್ಳಿಯ ಚಿತ್ರಗಳು' ಯಾವ ಕಾಲದಲ್ಲಿ ಹುಟ್ಟಿದ್ದು ಎಂಬುದನ್ನು ಇನ್ನೊಂದು ದೃಷ್ಟಿಯಿಂದಲೂ ಇಂದಿನ ಓದುಗರ ಗಮನಕ್ಕೆ ತರಬೇಕಾದದ್ದು ಅಗತ್ಯ. ಅದು ಅಂದಿನ ಸಾಹಿತ್ಯದ ಸ್ಥಿತಿಗತಿಗೆ ಸಂಬಂಧಪಟ್ಟದ್ದು.

ಈ ಮೊದಲೇ ಶ್ರೀನಿವಾಸರ ಸಣ್ಣಕಥೆಗಳ ಪ್ರಸ್ತಾಪ ಬಂದಿದೆ. ಸುಮಾರು ಅದು ಪ್ರಕಟವಾದ ಕಾಲದಲ್ಲಿಯೇ ಬಿ.ಎಂ.ಶ್ರೀ.ಯವರ 'ಇಂಗ್ಲಿಷ್ ಗೀತಗಳು', ಡಿ.ವಿ.ಜಿ.ಯವರ 'ನಿವೇದನ' ಮುಂತಾದ ಕೆಲವು ಕೃತಿಗಳು ಆಧುನಿಕ ಕನ್ನಡ ಸಾಹಿತ್ಯದ 'ನವೋದಯ' ಕಾಲದ ಮಾರ್ಗದರ್ಶಿಗಳಾಗಿದ್ದುವು. ಈ ಹಿರಿಯರೊಂದಿಗೆ ಕೈಗೂಡಿಸಿ ಪಂಜೆ ಮಂಗೇಶರಾಯರು, ಆಲೂರ ವೆಂಕಟರಾಯರು, ಟಿ. ಎಸ್. ವೆಂಕಣ್ಣಯ್ಯನವರು, ಎ. ಆರ್. ಕೃಷ್ಣಶಾಸ್ತ್ರಿಗಳು, ಮುಂತಾದ ಹಿರಿಯರು ಹೊಸದಾಗಿ ಪ್ರಕಟವಾದ ಕಿರಿಯರ ಕೃತಿಗಳನ್ನು ಕೈಗೆತ್ತಿಕೊಂಡು ಕೊಂಡಾಡುತ್ತಿದ್ದರು. ಹಾಗೆ ಹೊಗಳುವಾಗ ಗುಣದೋಷ ವಿವೇಕ ಇರಲಿಲ್ಲ ಎನ್ನುವುದು ತಪ್ಪಾಗುತ್ತದೆ. ಹೊಸಗನ್ನಡ ಸಾಹಿತ್ಯದ ಭವಿಷ್ಯದ ಮೇಲೆ ಕಣ್ಣಿಟ್ಟು, ಕೃತಿಗಳ ದೋಷಗಳ ಕಡೆಗೆ ಬಹುಶಃ ಉದ್ದೇಶಪೂರ್ವಕವಾಗಿ ಕಣ್ಣುಮುಚ್ಚಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡುವವರೇ ಇಲ್ಲದಿದ್ದಾಗ, ತರುಣರು ಲೆಕ್ಕಣಿಕೆ ಹಿಡಿದು ಮುಂದೆ ಬಂದಾಗ ಅವರಿಗೆ ಉತ್ತೇಜನ ಕೊಡುವುದು ತಮ್ಮ ಕರ್ತವ್ಯ ಎಂದು ಭಾವಿಸಿದ್ದರು. ಇತ್ತ. ಹೊಸತಕ್ಕಾಗಿ ಹಾತೊರೆಯುತ್ತಿದ್ದ ಹೊಸ ಪೀಳಿಗೆಯ ವಾಚಕವರ್ಗ ತಕ್ಕಮಟ್ಟಿಗೆ ಒಳ್ಳೆಯದಾಗಿ ಕಂಡ ಹೊಸ ಕೃತಿಗಳನ್ನು ತಲೆಯ ಮೇಲೆ ಹೊತ್ತು ಮೆರೆಯಿತು. ಅಲ್ಲದೆ, ಒಂದು ಕೃತಿಯನ್ನು ತಾರತಮ್ಯ ವಿವೇಕದಿಂದ ವಿಮರ್ಶಾಪೂರ್ವಕವಾಗಿ ಸ್ವೀಕರಿಸಲು ಆ ಸಾಹಿತ್ಯ ಪ್ರಕಾರದಲ್ಲಿ

ಪೂರ್ವ ಕೃತಿಗಳಾಗಲಿ ಒಡಹುಟ್ಟಿನ ಕೃತಿಗಳಾಗಲಿ ಆಗ ಇರಲಿಲ್ಲ. ಚೊಚ್ಚಲು ಮಕ್ಕಳು ಹಡೆದವರಿಂದ ಪಡೆಯುವ ಆದರೋಪಚಾರಗಳನ್ನೆಲ್ಲವನ್ನೂ ಪಡೆದುವು, ಆಗಿನ ಕಾಲದ ಕೆಲವು ಕೃತಿಗಳು; ಅಂಥ ಭಾಗ್ಯಶಾಲಿ ಕೃತಿಗಳಲ್ಲಿ 'ಹಳ್ಳಿಯ ಚಿತ್ರ'ಗಳೂ ಒಂದು.

ಶ್ರೀನಿವಾಸರು ಈ ಗ್ರಂಥಕ್ಕೆ ಸಹೃದಯರಾಗಿ ಒಂದು ಮುನ್ನುಡಿ ಬರೆದಿದ್ದಾರೆ; ಅದನ್ನು ಈ ಹಿನ್ನೆಲೆಯಲ್ಲಿ ಗಮನಿಸುವುದು ಯುಕ್ತ. ಅವರು ಗ್ರಂಥದ ಹಲವಾರು ಗುಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಸಹೃದಯರಾದ ವಾಚಕರ ಗಮನಕ್ಕೆ ತಂದಿದ್ದಾರೆ. ಮುನ್ನುಡಿ ಕೇವಲ ಪ್ರಶಸ್ತಿಯಾಗದೆ ವಿಮರ್ಶೆ ಎನ್ನಿಸಿದಾಗ ಕೂಡ ಗುಣ ಮಂಡನಕ್ಕೆ ಪ್ರಾಧಾನ್ಯವಿರಬೇಕು ಎನ್ನುವುದು ಒಪ್ಪಬೇಕಾದ ಮಾತು. ಇಲ್ಲಿ, ಶ್ರೀನಿವಾಸರು ಎತ್ತಿ ಹೇಳುವ ಕೆಲವು ಗುಣಗಳನ್ನು ಪ್ರಸ್ತಾವಿಸಿ, ತಮ್ಮ ಹೇಳಿಕೆಗಳಿಗೆ ಅವರು ಸೂಚಿಸಿರುವ ಗ್ರಂಥದ ನಿದರ್ಶನಗಳಲ್ಲಿ ಕೆಲವನ್ನು ಆಯ್ದು ಪರಿಚಯ ಮಾಡಿಕೊಟ್ಟರೆ, ಅಂದಿನ ಸಹೃದಯರಿಗೆ ಗ್ರಂಥ ಹೇಗೆ ಹಿಡಿಸಿತು ಎನ್ನುವುದು ಗೊತ್ತಾಗುತ್ತದೆ.

ಗ್ರಂಥದ ಹೆಸರು 'ಹಳ್ಳಿಯ ಚಿತ್ರಗಳು' ಎಂದಿರುವುದರಿಂದ—ಹಳ್ಳಿಯ ಪರಿಸರದ ಮತ್ತು ಅಲ್ಲಿನ ಜನರ ವರ್ಣನೆ ಗ್ರಂಥದ ವಿಷಯ ಎಂಬುದು ಸ್ವಯಂ ಸ್ಪಷ್ಟ. ಇದರ ಬಗೆಗೆ—"ಇವರು ಸುಲಭವಾಗಿ ಮಾಡುವ ವರ್ಣನೆಗಳು, ನಾವು ಕನಸಿನಲ್ಲಿ ಕಂಡು ನಿಜವಾದೀತೇ ಎಂದು ಆಶಿಸುವ ಒಂದು ಪ್ರಪಂಚವನ್ನು ನಮ್ಮ ಎಚ್ಚರದ ದೃಷ್ಟಿಯ ಮುಂದೆ ತಂದು ನಿಲ್ಲಿಸುತ್ತವೆ. ಈ ಊರುಗಳು, ಊರುಗಳ ಈ ಜನಗಳು, ಈ ಹೊಲ ಗದ್ದೆ ಪೈರುಗಳು, ಹೊಳೆ ಕೆರೆ ದೇವಾಲಯಗಳು, ಸರಳವಾದ ಸುಂದರವಾದ ಈ ನಡೆ ನುಡಿ, ಈ ಬಾಳು—ಇವೆಲ್ಲಾ ನಮಗೆ ಹೊಸವಲ್ಲದಿದ್ದರೂ ಹೊಸವಾಗಿ ಕಂಡು ಮನಸ್ಸನ್ನು ಮುಗ್ಧವಾಗಿ ಮಾಡುತ್ತವೆ. ಗ್ರಂಥಕರ್ತರು ಸುತ್ತಣ ಪ್ರಪಂಚವನ್ನು ಚೆನ್ನಾಗಿ ನೋಡಿ ಅದರ ಅಂದಚೆಂದಕ್ಕೆ ಮನಸ್ಸಿನಲ್ಲಿ ಎಡೆಗೊಟ್ಟು ಅದರ ಬದುಕಿನಲ್ಲಿ ತಮ್ಮ ಬದುಕನ್ನು ಬೆರೆಸಿ ತಾವೇ ಅದು ಎಂಬಂತೆ ಅದರೊಂದಿಗೆ ಸೇರಿಹೋಗಿದ್ದಾರೆ" (ಮುನ್ನುಡಿ, ಪುಟ ೩) ಎಂದು ಶ್ರೀನಿವಾಸರು ಆಡಿರುವ ಮೆಚ್ಚಿಗೆಯ ಮಾತಿನಲ್ಲಿ ಸಾಹಿತ್ಯದ ತತ್ತ್ವವೇ ಅಡಗಿದೆ. ಇಂದ್ರಿಯಗಳಿಗೆ ವಿಷಯವಾದ ವಸ್ತುವಿನಲ್ಲಿ "ತಾನೇ ಅದು ಎಂಬಂತೆ ಅದರೊಂದಿಗೆ ಸೇರಿಹೋಗುವುದೇ" "ತನ್ಮಯತೆ"; ತಾನು ಅದರಲ್ಲಿ ಬೆರೆತು, ಅದು ತನ್ನಲ್ಲಿ ಬಂದು ಮರುಹುಟ್ಟು ಪಡೆಯುವುದೇ "ಅನು-ಭವ." ಸಾಮಾನ್ಯರ ಅನುಭವ ಸಾಹಿತಿಯ ಅನುಭವದಷ್ಟು "ಆಳ"ವಾಗಿ, "ತನ್ಮಯ"ವಾಗಿ, ಇರುವುದಿಲ್ಲ; ಸಾಮಾನ್ಯರೂ ತಮ್ಮ ಅನುಭವವನ್ನು ಇತರರಿಗೆ ಹೇಳಿಕೊಳ್ಳಬಲ್ಲರಾದರೂ, ಸಾಹಿತಿ ಹೇಳುವ ಹಾಗೆ "ಹೊಸದಲ್ಲದಿದ್ದರೂ ಹೊಸದಾಗಿ ಕಾಣುವಂತೆ" ಹೇಳಲಾರರು. 'ಹಳ್ಳಿಯ ಚಿತ್ರಗಳ'ಲ್ಲಿ ಲೇಖಕರ ಬೇರೆ ಬೇರೆ ಮಟ್ಟಗಳ ಗ್ರಾಮಜೀವನಾನುಭವಗಳ ನಿರೂಪಣೆ, ನಿರಾಳವಾಗಿ ಉಸಿರಾಡಬಹುದಾದ ಸಹಜ ಸುಂದರ ಲೋಕದಲ್ಲಿ ಸಂಚರಿಸಿದ ಅನುಭವವನ್ನು ನಮಗೆ ದೊರಕಿಸುತ್ತದೆ. ಕಿರುಗತೆಗಳ ಛಾಯೆಯುಳ್ಳ 'ಕಾಳಿಯ

ಹೃದಯ', 'ಒಲುಮೆಯ ಒರೆಗಲ್ಲು' ಎಂಬೆರಡು ಚಿತ್ರಗಳಲ್ಲಿ ಮಿಡಿಯುವ ಮಂದ್ರದ ತಂತಿಯ ನಾದವನ್ನು ಬಿಟ್ಟರೆ, ಉಳಿದೆಡೆಗಳಲ್ಲಿ ನಮಗೆ ಕೇಳಿಬರುವುದು ಹೃದಯವನ್ನು ಹಸುರಮಾಡುವ ಮಧುರ ಧ್ವನಿಗಳೇ ಹೆಚ್ಚು. 'ಹಳ್ಳಿಯ ಚಿತ್ರಗಳ'ನ್ನು ಓದಿದಾಗ ನಮಗಾಗುವುದು, ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ಮಾಡಿದವನ ಕೊಳಲು ಕಚೇರಿಯ ಅನುಭವವಲ್ಲ; ತನ್ನ ಸಂತೋಷಕ್ಕೆ ನುಡಿಸುವ ಗೊಲ್ಲನ ಕೊಳಲಿನ ವಾದನವು.

ಲೇಖಕರ ಅನುಭವ ಸ್ಥೂಲವಾಗಿ ಹಳ್ಳಿಯ ಬದುಕು, ಮತ್ತು ಹಳ್ಳಿಯ ಸುತ್ತಮುತ್ತಣ ಪ್ರಕೃತಿಯ ನೋಟ—ಇದಕ್ಕೆ ಸಂಬಂಧಪಟ್ಟದ್ದು. ಹಳ್ಳಿಯ ಬದುಕಿಗೆ ಸಂಬಂಧಪಟ್ಟ ತನ್ನ ಅನುಭವವನ್ನು ಓದುಗರಿಗೆ ತಿಳಿಯಪಡಿಸುವಲ್ಲಿ ಲೇಖಕರು ಸಾಧಾರಣವಾಗಿ—(೧) (ಪ್ರಕೃತಿ ವರ್ಣನೆಗಳಲ್ಲಿ ಕಂಡುಬರುವಂತೆ) ನೇರವಾದ ಸರಳವಾದ ನಿರೂಪಣೆ, (೨) (ಘಟನೆ ಮತ್ತು ಸನ್ನಿವೇಶಗಳ ವರ್ಣನೆಗಳಲ್ಲಿ ಕಂಡುಬರುವಂತೆ) ಹಾಸ್ಯ ಅಥವಾ ವಿನೋದದ ಉಕ್ತಿಕ್ರಮ—ಈ ವಿಧಾನಗಳನ್ನು ಅನುಸರಿಸಿದ್ದಾರೆ. ಸ್ವಾಭಾವಿಕವಾಗಿ ಹಾಸ್ಯದ ಸೋಂಕು (ಸೋಂಕು ಜಾಡ್ಯದಂತೆ) ವ್ಯಾಪಕವಾದ್ದರಿಂದ, ಅದು ತನ್ನ ಪ್ರಭಾವವನ್ನು ಅತ್ತ ಇತ್ತ ಸರಳವಾದ ಬರವಣಿಗೆಯ ಮೇಲೂ ಬೀರಿ, ಇಡಿಯ ಬರಹವನ್ನೇ ಹಾಸ್ಯಮಯ ಎನ್ನುವಂತೆ ಮಾಡುತ್ತದೆ. ಒಂದು ಉದಾಹರಣೆ:

ಪ್ರವಾಹ ಬಂದ ನದಿಯನ್ನು ಹರಿಗೋಲಿನಲ್ಲಿ ದಾಟಿದ ಪ್ರಸಂಗದ ವರ್ಣನೆಯ ಪ್ರಸ್ತಾಪ ಹಿಂದೆಯೇ ಬಂದಿದೆ. ವಾಸ್ತವವಾಗಿ, ಹುಚ್ಚುಹೊಳೆಯಲ್ಲಿ ನದಿಯನ್ನು ಹಾಯಲು ಹರಿಗೋಲಿಗೆ ಆಗಲೇ ಇಲ್ಲ; ಅಂಬಿಗರ ಸಾಹಸದ ಪರಿಣಾಮವಾಗಿ, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದರು: "ಈ ಅಪಾಯದಿಂದ ತಪ್ಪಿಸಿಕೊಂಡುದರೊಡನೆ, ಅಂಬಿಗರಿಗೆ ಮತ್ತೆ ಜೀವದ ಆಸೆಯುಂಟಾಯಿತು. ಅವರು ಮನಸ್ಸುಮಾಡಿ ಹುಟ್ಟಿಹೊಡೆದರು. ನೀರಿನಲ್ಲಿ ಮುಚ್ಚಿಹೋಗಿದ್ದ ಗಿಡಗಳ ಮೇಲೆ ಕುಣಿಯುತ್ತಾ ಹರಿಗೋಲು ದಡವನ್ನು ಸೇರಿತು. ದಡವನ್ನು ಎಂದರೆ ಎದುರು ದಡವನ್ನಲ್ಲ, ನಾವು ಯಾವ ದಡದಿಂದ ಹೊರಟಿದ್ದೆವೋ ಆ ದಡವನ್ನು!" (ಪುಟ ೨೯) ಈ ಸಂದರ್ಭದಲ್ಲಿ ಹಾಸ್ಯ ಗಮ್ಯವಾಗಿರುವುದು, ಸನ್ನಿವೇಶದಲ್ಲಿಯೇ ಅಡಗಿರುವ ಹಾಸ್ಯಸ್ಥಿತಿ ಪ್ರಕಾಶಕ್ಕೆ ಬಂದಿರುವುದು, (ಇಲ್ಲಿನ) ಕೊನೆಯ ವಾಕ್ಯದಲ್ಲಿ. "ಭೂಮಿಯು ಗುಂಡಾಗಿದೆ ಎಂಬ ಮಾತು ಅನುಭವಕ್ಕೆ ಬಂದಂತಾಯಿತು" (ಪುಟ ೨೯) ಎಂಬ ವಾಕ್ಯವೂ ಸೇರಿದಾಗ ಹಾಸ್ಯ ಆಸ್ಫೋಟವಾಗುತ್ತದೆ.

ಹೊರಟ ಸ್ಥಳಕ್ಕೇ ಬಂದು ಮುಟ್ಟಿದ ಮೇಲೆ, ಪ್ರವಾಹ ಇದ್ದಕ್ಕಿದ್ದಂತೆ ತಗ್ಗಿಹೋಗುತ್ತದೆ. ನದಿ ಶಾಂತವಾದುದನ್ನು ಕಂಡು ಅಂಬಿಗರಿಗೆ ನೆಮ್ಮದಿಯಾಗುತ್ತದೆ. ಅವರು ಪ್ರಯಾಣಿಕರನ್ನು ಈಗ ಮತ್ತೆ ಹರಿಗೋಲಿನಲ್ಲಿ ಕೂರಿಸಿಕೊಂಡು ಹೋಗಲು ಸಿದ್ಧರಾಗಿದ್ದಾರೆ; "ಬನ್ನಿ" ಎಂದು ಕರೆಯುತ್ತಾರೆ. ಪ್ರಯಾಣಿಕರ ತಂಡದಲ್ಲಿದ್ದ "ಮುದುಕರು ಹರಿಗೋಲನ್ನು ಕಂಡುದು ಇದೇ ಮೊದಲು. ಈ ಮೊದಲಿನ ಅನುಭವವೇ ಅವರಿಗೆ

ಸಾಕಾಗಿತ್ತು. ಮಧ್ಯಾಹ್ನದ ಭಯವೂ, ನೀರಿನ ಅಪಮೃತ್ಯುವೂ, ಅಂತರಪಿಶಾಚಿ-ದೃಶ್ಯವೂ ಅವರ ಕಣ್ಣಿನಿಂದ ಮರೆಯಾಗಿರಲಿಲ್ಲ. ಅವರು ಅದನ್ನು ನೆನಸಿಕೊಂಡೇ ಇನ್ನೂ ನಡುಗುತ್ತಿದ್ದರು. ಅವರು “ಇಗೋ ಪುಣ್ಯಾತ್ಮ ನಿನಗೆ ದೊಡ್ಡ ನಮಸ್ಕಾರ. ಈ ಕಾವೇರಿ ತಾಯಿಯ ತಂಟೆ ಬೇಡ, ಹರಿಗೋಲಿನ ಸಹವಾಸ ಮೊದಲೇಬೇಡ. ಮದುವೆಯ ಸುಖವನ್ನು ಇಲ್ಲಿಯೇ ಕಂಡಂತೆ ಆಯಿತು....ವಧೂವರರಿಗೆ ಇಲ್ಲಿಂದಲೇ ಆಶೀರ್ವಾದ ಮಾಡಿ ಹಿಂದಿರುಗುತ್ತೇನೆ” ಎಂದರು. (ಪುಟ ೩೦) ಈ ಸನ್ನಿವೇಶದ ಸರಳ ನಿರೂಪಣೆಯಲ್ಲಿ ಹಾಸ್ಯವನ್ನು ಹೊರಡಿಸಬೇಕೆಂಬ ಕೃತಕ ಪ್ರಯತ್ನವಿಲ್ಲ. ಹಾಸ್ಯ ತಾನಾಗಿ ಅರಳಿದಂತಿದೆ.

‘ಹಳ್ಳಿಯ ಚಿತ್ರಗಳ’ಲ್ಲಿ ಚಿತ್ರಿತವಾಗಿರುವ ವಿನೋದ ಪ್ರಸಂಗಗಳಲ್ಲಿ ಹೊಮ್ಮುವ ಲೇಖಕರ ಹಾಸ್ಯದೃಷ್ಟಿಗೆ ಒಂದು ಸಂದರ್ಭದಲ್ಲಿ ಅವರು ಹೇಳಿರುವ ಮಾತೇ ವಿವರಣೆಯನ್ನು ಒದಗಿಸಿದೆ: “ಯಾವುದಾದರೂ ವಿನೋದವು ನಡೆದರೆ ನಗುವುದನ್ನು ನಾನು ನೋಡಿದೇನೆ. ಇತರರಿಗೆ ಕಷ್ಟ ಬಂದಾಗ ಕೂಡ ಒಂದೊಂದು ಸಲ ನಗು ಬಂದು ಬಿಡುತ್ತದೆ. ಹಾಗೆಂದಮಾತ್ರಕ್ಕೆ ಅವರ ಕಷ್ಟಗಳನ್ನು ಕಂಡು ನಾವು ಸಂತೋಷ ಪಡುವೆವೆಂದಲ್ಲ; ಆದರೆ ನಮಗೆ ನಗುವನ್ನು ತಡೆಯುವುದಕ್ಕೆ ಆಗುವುದಿಲ್ಲವೆಂದು ಮಾತ್ರ ಅರ್ಥ.” (ಪುಟ ೭೩) ಹೀಗೆ, ನಿತ್ಯದ ಬದುಕಿನಲ್ಲಿ ಕಂಡ ವಿನೋದ ಪ್ರಸಂಗಗಳನ್ನು ಓದುಗರಿಗೂ ನಗು ಬರುವಂತೆ ನಿರೂಪಿಸಬೇಕಾದರೆ ಹಾಸ್ಯದ ಮನೋಧರ್ಮದ ಜೊತೆಗೆ ಹಾಸ್ಯಕರವಾಗುವಂತೆ ನಿರೂಪಿಸುವ ಮಾತುಗಾರಿಕೆಯೂ ಬೇಕು. ಇದು ‘ಹಳ್ಳಿಯ ಚಿತ್ರಗಳ’ಲ್ಲಿ ಸಮೃದ್ಧವಾಗಿದೆ. ಎಲ್ಲರಿಗೂ ಈ ಹಾಸ್ಯಸೃಷ್ಟಿಯ ಮಾತುಗಾರಿಕೆ ಇರುವುದಿಲ್ಲ. ‘ಹಳ್ಳಿಯ ಚಿತ್ರಗಳು’ ಗ್ರಂಥದ ವೈಶಿಷ್ಟ್ಯ ಸಿದ್ಧಿಸಿರುವುದು ಈ ಹಾಸ್ಯದೃಷ್ಟಿ–ಸೃಷ್ಟಿಗಳ ಕೂಟದಿಂದ. ಈ ಹಾಸ್ಯಗಾರಿಕೆ ಗ್ರಂಥದ ಬಹುಭಾಗಗಳಲ್ಲಿ ಹೂಬಿಸಿಲಿನಂತೆ ಹಿತಕರವಾಗಿ ಹರಡಿಕೊಂಡಿರುವುದಾದರೂ, ಅದು ವಿಶೇಷವಾಗಿ ಪ್ರಕಾಶಕ್ಕೆ ಬಂದಿರುವುದು ಕೆಲವು ಚಿತ್ರಗಳಲ್ಲಿ ಮಾತ್ರ (ಉದಾ : ‘ನಮ್ಮ ಜೋಡಿದಾರರ ಕೆಲವು ಚಿತ್ರಗಳು’, ‘ನಮ್ಮ ಊರ ಬಸ್ಸು’, ‘ನಗೆಯ ನೀತಿ’) ಮಡಿವಂತ ಆಚಾರಶೀಲ ಅಯ್ಯಂಗಾರರು ಭಾಷ್ಯಕಾರರ ತಿರುನಕ್ಷತ್ರದಂದು ನಾಮಧಾರಿಗಳಾಗುವುದಕ್ಕೆ “ಹತ್ತು ಉಂಡೆ ನಾಮ, ಒಂದು ಸೇರು ಕುಂಕುಮ ವೆಚ್ಚ” (ಪುಟ ೪೭) ಎಂದು ಅತ್ಯುಕ್ತಿಯಾಗಿ ಹೇಳುವುದಕ್ಕೂ ಹಾಸ್ಯದೃಷ್ಟಿ ಬೇಕು. ಆದರೆ, “ಮಕ್ಕಳು ಚಿಟ್ಟನೆ ಚೀರುವಂತೆ” ಕೆಂಪು ಬಿಳುಪು ನಾಮಗಳನ್ನು—ಇಟ್ಟುಕೊಳ್ಳುವುದಲ್ಲ. ಬಳಿದುಕೊಳ್ಳುವುದನ್ನು ಮನಗಾಣಿಸಬೇಕಾದರೆ, ನಾಮಧಾರಣ ಪ್ರಕರಣವನ್ನು “ಇದು ಅಯ್ಯಂಗಾರಿಗಳಿಗೆ ಒಂದು ವಿಧವಾದ ಮೊಹರಂ” (ಅದೇ) ಎಂದು ಗಮ್ಯೋಪಮೆಯ ಮೂಲಕ ಹುಲಿಯ ವೇಷಗಳನ್ನು ಸ್ಮರಣೆಗೆ ತಂದು ನಗೆಬರಿಸುವ ಮಾತುಗಾರಿಕೆಯೂ ಬೇಕು. ಜೋಡಿದಾರ ಚಿಕ್ಕ ವಯಸ್ಸಿನಲ್ಲಿ ಬೀದಿಯಲ್ಲಿ ಮೇಯುತ್ತಿದ್ದ ಕುದುರೆಯ ಮೇಲೆ ಸವಾರಿ ಮಾಡುವುದಕ್ಕೆ ಹೊರಟು, ಅದು ಅವನ ಮನೆಯ ಬಾಗಿಲ ಮುಂದೆಯೇ ನೆಗೆದು ನಿಂತುದನ್ನು

ಸಂಧ್ಯಾವಂದನೆ ಮಾಡುತ್ತ ಕುಳಿತಿದ್ದ ಆತನ ತಂದೆ ಕಂಡು ಬೆರಗಾದುದನ್ನು—"ಮಗನ ಈ ಕಲ್ಕ್ಯವತಾರದ ವೈಭವವನ್ನು ನೋಡಿದರು" (ಪುಟ ೬೩) ಎಂದು ಹೇಳುವಲ್ಲಿ ಹಾಸ್ಯ ಶಕ್ತಿ ಪ್ರಕಟವಾಗಿದೆ. ಕಪ್ಪು-ಬಿಳುಪು, ಕೆಂಪು-ಹಳದಿ, ಹೀಗೆ ವಿರುದ್ಧ ವರ್ಣಗಳನ್ನು ಬಳಸಿ ಚಿತ್ರದ ಬಣ್ಣಗಾರಿಕೆ ಎದ್ದು ಕಾಣುವಂತೆ ಮಾಡುವ ಚಿತ್ರಕಾರನ ವರ್ಣಕ ವಿಧಾನ ಈ ಬಗೆಯ ಹಾಸ್ಯಗಾರಿಕೆ. "ಇಮಾಮ್ ಸಾಹೇಬರಿಗೂ ಗೋಕುಲಾಷ್ಟಮಿಗೂ ಎಲ್ಲಿಯ ಸಂಬಂಧ?" ಎಂಬ ಹಾಸ್ಯೋಕ್ತಿ ಪ್ರಸಿದ್ಧವಾದುದು. ನಾಮಧಾರಿಗಳಿಗೂ ಮೊಹರಮ್ಮಿನ ಹುಲಿಯ ವೇಷಕ್ಕೂ ಸಂಬಂಧವನ್ನು ಕಲ್ಪಿಸಿ, ಸಂಬಂಧವಿಲ್ಲದ ಕಡೆ ಸಂಬಂಧ ಉಂಟುಮಾಡಿರುವುದರಲ್ಲಿಯೂ ಹಾಸ್ಯ ಧ್ವನಿತವಾಗಿದೆ. ಕಲ್ಕ್ಯವತಾರದ ಪ್ರಸಂಗವೂ ಇದೇ ಜಾತಿಯದು : ಬಡಕಲ ಬೀದಿ ಕುದುರೆಯ ಮೇಲೆ ಸವಾರಿಮಾಡುವ ಬಡಹಾರುವ ಎಲ್ಲಿ ? ಪ್ರಳಯಕಾಲ ಸ್ವರೂಪಿಯೂ ಯುಗಾವತಾರಿಯೂ ಶಕ್ತಿದ್ಯೋತಕ ವಾದ ಕುದುರೆಯ ಆರೋಹಿಯೂ ಆದ ಕಲ್ಕಿ ಎಲ್ಲಿ? ಎಲ್ಲಿಂದೆಲ್ಲಿಗೆ ?

ಲೇಖಕರ ಸ್ನೇಹಿತ ಶೀನಪ್ಪ, ಬಿ.ಎ. ಪ್ಯಾಸ್ ಮಾಡಿದ್ದವನು; ೧೨ ಸೂಟ್ ಇಟ್ಟಿದ್ದವನು, ನಿತ್ಯ ಮುಖ ಕ್ಷೌರಮಾಡಿಕೊಳ್ಳುತ್ತಿದ್ದವನು—ಒಮ್ಮೆ ಅವರ ಊರಿಗೆ ಭೇಟಿಕೊಟ್ಟು, ಲೇಖಕರು ಹಸುರು ಪಯಿರಿನಿಂದ ಸೊಂಪಾಗಿದ್ದ ತಮ್ಮ ಗದ್ದೆಯನ್ನು ನೋಡಲು ಗೆಳೆಯನನ್ನು ಆಹ್ವಾನಿಸಿದ್ದರು; ಕೆಸರಿನ ಗದ್ದೆ ; ಗುದ್ದಲಿ ಹಿಡಿದು ತಾವೇ ಕೆಸರು ಎಳೆದು ಹಾಕುತ್ತಿದ್ದರು. ಆಗ ಶೀನಪ್ಪ ಹಾಜರಾದ. "ಅವನ ಡ್ರೆಸ್ಸನ್ನು ನೋಡಿ. ಇವನೇನು ವರಪೂಜೆಗೆ ಹೊರಟಿದ್ದಾನೋ ಅಥವಾ 'ಕಾನ್ವೊಕೇಶನ್ ಡಿಗ್ರಿ' ತೆಗೆದು ಕೊಳ್ಳುವುದಕ್ಕೆ ಹೊರಟಿದ್ದಾನೋ" (ಪುಟ ೮೪) ಎಂದು ಲೇಖಕರಿಗೆ ಸಂದೇಹ. ಶೀನಪ್ಪ ಕಿರಿದಗಲದ ಗದ್ದೆಯ ಬದುವಿನ ಮೇಲೆ ಬಲು ಹುಷಾರಾಗಿ ನಡೆದು ಬರುತ್ತಿದ್ದ. ಶೀನಪ್ಪ ಗದ್ದೆಯ ಕೆಸರಿನಲ್ಲಿ ಬಿದ್ದು ಅವನ ದಿರಸು ಹಾಳಾಗುತ್ತದೆ ಎಂದು ಇಲ್ಲಿ ಓದುಗರು ಸುಲಭವಾಗಿ ಊಹಿಸುವಂತೆಯೇ ವರ್ಣನೆ ಸಾಗುತ್ತದೆ. ಈ ಸನ್ನಿವೇಶದಲ್ಲಿ, ಓದುಗರು ಲೇಖಕರೊಂದಿಗೆ ಪ್ರೇಕ್ಷಕರಾಗಿದ್ದರೂ "ಈ ಅತಿ ಜಂಬಗಾರನಿಗೆ ತಕ್ಕ ಶಿಕ್ಷೆ ಆಗಬೇಕು" ಎಂದು ಬಯಸುವುದು ಸ್ವಾಭಾವಿಕ. ಲೇಖಕರಿಗೂ ಹಾಗೆನ್ನಿಸಿದ್ದರಿಂದಲೇ ಅವರು ಶೀನಪ್ಪನಿಗೆ ಮುನ್ನೆಚ್ಚರಿಕೆ ಕೊಡಬಹುದಾಗಿದ್ದರೂ ಕೊಡಲಿಲ್ಲ: "ಅವನು ಕೆಳಕ್ಕೆ ಬೀಳಬಹುದೆಂದು ನನಗೆ ಗೊತ್ತಾಯಿತು. ಬರಬೇಡವೆಂದು ಕೂಗಿ ಹೇಳಿದರೆ ಅವನು ಅಲ್ಲಿಯೇ ನಿಲ್ಲುತ್ತಿದ್ದನು. ಆದರೆ ಸುಲಭವಾಗಿ ದೊರಕಬಹುದಾದ ವಿನೋದವನ್ನು ಕಳೆದುಕೊಳ್ಳಬಾರದೆಂದು ನನ್ನ ಮನದಲ್ಲಿ ಯಾವುದೋ ಒಂದು ಒಳ ಧ್ವನಿಯು ಹೇಳು ತ್ತಿದ್ದುದರಿಂದ ಸುಮ್ಮನಾದೆ." (ಪುಟ ೮೫) ನಿರೀಕ್ಷಿಸಿದ್ದಂತೆ, "ಒಂದೇ ರೈಲುಕಂಬಿಯ ಮೇಲೆ ನಡೆಯುವಂತೆ ಓಲಾಡುತ್ತ" (ಅದೇ) ನಡೆದುಬರುತ್ತಿದ್ದ "ಸಾಹೇಬ" ಒಂದು ಸಲ ಸ್ವಲ್ಪ ಹೆಚ್ಚಾಗಿ ಒಂದು ಕಡೆಗೆ ಬಾಗಿದ್ದರಿಂದ, "ಮರೆಯಾದನು." "ಎಡಗಡೆಯ ಗದ್ದೆಯಿಂದ ನೀರೂ ಕೆಸರೂ ಮೇಲಕ್ಕೆ ಹಾರಿತು. ಪೈರಿನ ಸಾಲು ಎರಡು ಕಡೆಗೂ ಬಾಗಿ ಶೀನಪ್ಪನನ್ನು ಬಾಚಿ ತಬ್ಬಿಕೊಂಡಿತು." (ಅದೇ) ಶೀನಪ್ಪನಿಗೆ ಒದಗಿದ ಸ್ಥಿತಿಯನ್ನು

ಕಂಡು ಪೈರು ತಬ್ಬಿಕೊಂಡು ಮರುಕತೋರಿದಂತೆ ಉತ್ಪ್ರೇಕ್ಷೆ ಮಾಡಿರುವುದರಲ್ಲಿ ಧ್ವನಿತ ವಾಗಿರುವುದು ಕರುಣೆಯಲ್ಲ; ಕರುಣೆಯ “ಆಭಾಸ”ದಲ್ಲಿ ಅಂತರ್ಗತವಾಗಿರುವ ಹಾಸ್ಯವೇ. ಈ ಸನ್ನಿವೇಶದ ಮುಗಿತಾಯದ ವರ್ಣನೆಯಲ್ಲಿ ಹಾಸ್ಯ ಪರಾಕಾಷ್ಠೆಯನ್ನು ಮುಟ್ಟಿ, ‘ನಗೆಯ ನೀತಿ’ಯನ್ನು (ಈ “ಚಿತ್ರ”ದ ಶೀರ್ಷಿಕೆಯೂ ಅದೇ) ಸಾರುತ್ತದೆ:

“ಬಿದ್ದವನ ಸಹಾಯಕ್ಕೆ ನಾನೂ ಹೋಗಲಿಲ್ಲ; ಬೋರನೂ ಹೋಗಲಿಲ್ಲ. ನಗುವನ್ನು ಮಾತ್ರ ತಡೆಯಲು ಸಾಧ್ಯವಾಗಲಿಲ್ಲ. ಶೀನಪ್ಪನು ಮೇಲಕ್ಕೆ ಎದ್ದು ನಿಂತುಕೊಂಡನು. ಆಗ ಅವನ ರೂಪು ದೇವರೇ ಗತಿ. ಇಸ್ತ್ರಿ ಮಾಡಿ ಗರಿಗರಿಯಾಗಿದ್ದ ಷರಾಯಿ ಕೆಸರಿನಲ್ಲಿ ತೊಯ್ದು ಹೋಗಿತ್ತು. ‘ಹ್ಯಾಟ್’ ಗದ್ದೆಯಲ್ಲಿ ಅರ್ಧ ಮುಳುಗಿಹೋಗಿತ್ತು. ಅವನು ಎದ್ದು ನಿಂತುಕೊಂಡು ಕಣ್ಣು ಕಿವಿ ಮೂಗು ಎಲ್ಲವನ್ನೂ ಒಂದಾಗಿ ಮಾಡಿದ್ದ ಜೇಡಿ ಮಣ್ಣನ್ನು ಕೈಯಿಂದ ತೆಗೆದುಹಾಕಿ ಕಿವಿಯನ್ನೂ ಕಣ್ಣನ್ನೂ ಹುಡುಕುತ್ತಿದ್ದನು. ಬಗೆಬಗೆಯ ಸುಗಂಧಯುಕ್ತವಾದ ಎಣ್ಣೆಗಳನ್ನು ಹಾಕಿ ಬಾಚಿಕೊಂಡಿದ್ದ ಅವನ ಮುಂಜುಟ್ಟೆಲ್ಲವೂ ದಿಕ್ಕಾಪಾಲಾಗಿತ್ತು. ಅವನ ಕಿವಿಯಲ್ಲಿ ಒಂದು ಗಜ್ಜುಗದ ಗಾತ್ರ ಮಣ್ಣು ತುಂಬಿತ್ತು. ಗದ್ದೆಯಲ್ಲಿ ಅರ್ಧ ಮಣ್ಣಿನಲ್ಲಿ ಹೂಳಿಹೋಗಿದ್ದ ಅವನ ‘ಹ್ಯಾಟು’ ಮುರುಕು ಮಡಕೆಯ ಚೂರಿನಂತೆ ಕಾಣುತ್ತಿದ್ದಿತು. ಅವನಿಗೇನೂ ಅಪಾಯ ವಾಗಿರಲಿಲ್ಲ. ಅವನ ಕನ್ನಡಕ ಕೂಡ ಸರಿಯಾಗಿಯೇ ಇತ್ತು. ನಾವು ನಕ್ಕುದನ್ನು ಕಂಡು ಶೀನಪ್ಪ ಬೋರನನ್ನು ಚೆನ್ನಾಗಿ ಬಯ್ದ. ಅವನು ಬೈದಷ್ಟೂ ಬೋರನು ನಗುತ್ತಲೇ ಇದ್ದ. ನಗೆಯ ಹೆಣ್ಣು ಔಚಿತ್ಯವನ್ನೇ ಅರಿಯಳು.” (ಪುಟ ೮೫-೬)

“ನಗೆಯ ಹೆಣ್ಣು ಔಚಿತ್ಯವನ್ನೇ ಅರಿಯಳು”—ಇದೇ ಗೊರೂರು ರಾಮಸ್ವಾಮಿ ಯ್ಯಂಗಾರರ ‘ಹಳ್ಳಿಯ ಚಿತ್ರಗಳ’ ಪುಟಗಳ ವೇದಿಕೆಯ ಮೇಲೆ ನಾವು ಕಾಣುವ ಹಾಸ್ಯದ ಲಾಸ್ಯ; ‘ನಗೆಯ ನೀತಿ.’

೪

ಬೆಂಗಳೂರಿನ ಪ್ರಮುಖ ಕಾಲೇಜೊಂದರ ಕರ್ಣಾಟಕ ಸಂಘದ ಮುಕ್ತಾಯ ಭಾಷಣದ ಸಭೆ. ಗೊರೂರು ರಾಮಸ್ವಾಮಿ ಅಯ್ಯಂಗಾರರು ಅಂದಿನ ಮುಖ್ಯ ಅತಿಥಿ ಗಳು. ಸಂಘದ ಕಾರ್ಯದರ್ಶಿಗಳು ಗೊರೂರರನ್ನು ಹಾಸ್ಯಗಾರರು, ಹಾಸ್ಯ ಬರಹ ಗಾರರು ಎಂದು ಸಭೆಗೆ ಪರಿಚಯಮಾಡಿಕೊಟ್ಟರು. “ಜೀವಮಾನವೆಲ್ಲಾ ಹಾಸ್ಯ ಮಾಡುತ್ತಿರುವುದೇ ನನ್ನ ಉದ್ಯೋಗ ಎಂದು ಜನ ತಿಳಿದಿರುವಂತಿದೆ, ಇದು ತಪ್ಪು ಭಾವನೆ” ಎಂದು ಗೊರೂರರು ಸ್ವಲ್ಪ ಅಸಮಾಧಾನದಿಂದಲೇ ತಮ್ಮ ಭಾಷಣವನ್ನು ಪ್ರಾರಂಭಮಾಡಿ, ಅಂದಿನ ಭಾಷಣವನ್ನು ಬಹುಮಟ್ಟಿಗೆ ಗಂಭೀರವಾದ ಧಾಟಿಯಲ್ಲೇ ಮಾಡಿದರು. ವಾಸ್ತವವಾಗಿ, ಗಂಭೀರವಾದ ಲೇಖನ ಕಾರ್ಯವನ್ನು (serious writing) ಅವರು ಗಣ್ಯ ಪ್ರಮಾಣದಲ್ಲಿ ಮಾಡಿದ್ದಾರೆ. ಅವರ ಹಾಸ್ಯಪ್ರಮುಖವಾದ ಬರಹಗಳಲ್ಲಿ ಕೂಡ, ಜೀವನದ ಗಾಂಭೀರ್ಯವನ್ನು ಗ್ರಹಿಸಬಲ್ಲವನಿಗೆ ಮಾತ್ರ ದಕ್ಕುವ

ಜೀವನದರ್ಶನದ ಹೊಳಪು ಮುಂಜಾನೆಯ ವಾತಾವರಣದಂತೆ ಆಹ್ಲಾದಕರವಾಗಿ ಮಿಂಚಿ ಮಿಂಚಿ ಮರೆಯಾಗುತ್ತದೆ. ಗೊರೂರರು ತಮ್ಮ ಸುತ್ತಮುತ್ತಣ ಜೀವನವನ್ನು ವಿಡಂಬನಕಾರನ ದೃಷ್ಟಿಯಿಂದ ನೋಡುವುದಿಲ್ಲ. ಅವರ ಹಾಸ್ಯದೃಷ್ಟಿಯಲ್ಲಿ ಸೊಸೆಯುಮ್ಮ ಹಾ. ಹೊಸೆಯಿಲ್ಲ. ಅವರ ಹಾಸ್ಯ ಚೇಳಿನ ಕೊಂಡಿಯಂತೆ ಕುಟುಕುವುದಿಲ್ಲ, ಮುಳ್ಳುಹಂದಿಯಂತೆ ಮುಳ್ಳುಬಿಚ್ಚಿ ಬೆದರಿಸುವುದಿಲ್ಲ. ಅವರ ಹಾಸ್ಯದ್ದು ಕರಡಿನುಡಿಯ ಕಚಗುಳಿಯಲ್ಲ; ಸ್ನೇಹದ ಚೇಷ್ಟೆಯದು. ಅವರ ಹಾಸ್ಯಪ್ರಸಂಗ ಕಾಮನ ಹುಣ್ಣಿಮೆಯ ರಂಗಿನ ಓಕುಳಿಯಾಟದಂತೆ; ಓಕುಳಿ ಚೆಲ್ಲುವವರಿಗೆ ಹೇಗೆ ವಿನೋದವೋ, ಚೆಲ್ಲಿಸಿಕೊಂಡವರಿಗೂ ಅಷ್ಟೇ ವಿನೋದ. ಮುನ್ನುಡಿಕಾರರಾದ ಮಾಸ್ತಿಯವರ ಮಾತಿನಲ್ಲಿ ಹೇಳುವುದಾದರೆ, ಇಂಥ ತಿಳಿಯಾದ ಹಾಸ್ಯದ ಮೂಲಕ, "ಜನರ ವಿಷಯದಲ್ಲಿ, ನಾಡವಿಷಯದಲ್ಲಿ ತಮಗಿರುವ ಪ್ರೇಮವನ್ನು ಸೂಚಿಸಿ ಅದೇ ಪ್ರೇಮವನ್ನು ಓದುವವರಲ್ಲಿ ಉಂಟುಮಾಡಲು" (ಮುನ್ನುಡಿ, ಪುಟ ೬) ಇವರು 'ಹಳ್ಳಿಯ ಚಿತ್ರಗಳ'ಲ್ಲಿ ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ನಾಗರಿಕ ಜೀವನದ ಹೊರ ವ್ಯಾಮೋಹಕ್ಕೆ ಮರುಳಾಗಿ ಹಳ್ಳಿಯ ಮುಗ್ಧ ಜನ ಪಟ್ಟಣಗಳಿಗೆ ಧಾವಿಸಿ ಜೀವನವೇ ಏರುಪೇರಾಗುತ್ತಿರುವ ಇಂದಿನ ಸನ್ನಿವೇಶದಲ್ಲಿ ಹಳ್ಳಿಯ ಬದುಕನ್ನು ಪ್ರಿಯವಾಗಿ ಮಾಡುವ ಈ 'ಹಳ್ಳಿಯ ಚಿತ್ರಗಳು'—ಇಂಥ ಇತರ ಗ್ರಂಥಗಳು ಎಲ್ಲ ಕಾಲಕ್ಕೂ ಪ್ರಿಯವಾಗತಕ್ಕವು.

'ಹಳ್ಳಿಯ ಚಿತ್ರಗಳ'ಲ್ಲಿ 'ಶ್ರೀನಿವಾಸ'ರ ಗಮನವನ್ನು ಸೆಳೆದಿರುವ, ಸಹೃದಯರೆಲ್ಲರ ಗಮನವನ್ನು ಸೆಳೆಯುವ, ಇನ್ನೊಂದು ಮುಖ್ಯ ಗುಣ ಎಂದರೆ, ಲೇಖಕರು ಹಳ್ಳಿಗಾಡಿನ ಪ್ರಕೃತಿಸೌಂದರ್ಯವನ್ನು ಕವಿದೃಷ್ಟಿಯಿಂದ ಕಂಡು ಅನುಭವಿಸಿ ಮಾಡುವ ವರ್ಣನೆ. ಹಳ್ಳಿಯ ಬದುಕು ಪಟ್ಟಣಿಗರಿಗೆ ಬಹುಶಃ ಪ್ರಿಯವಾಗದೆ ಹೋಗಬಹುದು. ಆದರೆ, ಹಳ್ಳಿಯ ಪ್ರಕೃತಿಸೌಂದರ್ಯ ಅವರನ್ನು ಸೆಳೆಯದೆ ಇರದು. ಲೇಖಕರ ಪ್ರಕೃತಿಸೌಂದರ್ಯದ ವರ್ಣನೆಗಳಲ್ಲಿ "ಭಾಷೆ ಆ ಕೆಲಸಕ್ಕೆ ತಕ್ಕದ್ದಾಗಿ ಸುಂದರವಾಗಿದೆ." (ಮುನ್ನುಡಿ, ಪುಟ ೭) ಹಳ್ಳಿಯ ಜನ ಸಾಧಾರಣವಾಗಿ ಪ್ರಕೃತಿಯ ಮಡಿಲಲ್ಲಿ ಹುಟ್ಟಿ ಬೆಳೆಯುವವರು. ಗೊರೂರು ರಾಮಸ್ವಾಮಯ್ಯಂಗಾರರೂ ಹಳ್ಳಿಯ ಮಗುವೆ. ಪ್ರಕೃತಿಸೌಂದರ್ಯಾನುಭೂತಿ ಅವರ ನಿತ್ಯದ ಬದುಕಿನ ವಿಷಯ; ಎಂದೋ ಪ್ರವಾಸಕಾಲದಲ್ಲಿ ಕಂಡು ಮೆಲುಕುಹಾಕುವ ನೆನಪಿನ ವಿಷಯವಲ್ಲ. ಆದ್ದರಿಂದ, ಪ್ರಕೃತಿವರ್ಣನೆ (ಕೆಲವರ ಕಥೆ ಕಾದಂಬರಿಗಳಲ್ಲಿ ಬರುವಂತೆ) "ವರ್ಣನೆಗಾಗಿ ಮಾಡುವ ವರ್ಣನೆ"ಯಾಗಿ, ಕರೆಯದೆ ಬರುವ ಅತಿಥಿಯಂತೆ, ಆಗಂತುಕನಾಗಿ ಬರುವುದಿಲ್ಲ. ಬಹುಕಾಲ ಒಡನಾಡಿದ ಸ್ನೇಹಿತರನ್ನು ಪರಿಚಯಮಾಡಿಕೊಡುವಂತೆ—ಕೆಲವು ಸಲ ಸ್ವಲ್ಪ ದೀರ್ಘವಾಗಿ, ಒಮ್ಮೊಮ್ಮೆ ಒಂದೆರಡು ವಾಕ್ಯಗಳಲ್ಲಿ, ಒಂದು ಚಿಕ್ಕ 'ಪ್ಯಾರಾ'ದಲ್ಲಿ—ಆತ್ಮೀಯವಾಗಿ ವರ್ಣಿಸುತ್ತಾರೆ. ಚಿಕ್ಕ ವರ್ಣನೆಗಳು ಒಂದೆರಡನ್ನು ಗಮನಿಸಬಹುದು:

ಕಾವೇರೀ ನದಿಯ ಪ್ರವಾಹದ ಪ್ರಸ್ತಾಪ ಹಿಂದೆಯೇ ಬಂದಿದೆಯಷ್ಟೆ. ಅದರ ರುದ್ರ ಸೌಂದರ್ಯ, ಪ್ರವಾಹ ತಗ್ಗಿದಮೇಲೆ ಅದರ ಸೌಮ್ಯಸೌಂದರ್ಯ—ಇವುಗಳ ವಿರುದ್ಧವಾದ

ಎರಡು ರೂಪಗಳ ವರ್ಣನೆ ಮನೋಹರವಾಗಿದೆ. ಶಾಂತಳಾದ ಕಾವೇರಿಯ ಮೋಹಕತೆಯನ್ನು ಒಂದೇ ಉಪಮಾನವಾಕ್ಯದ ಮೂಲಕ ಹೇಗೆ ಸೆರೆಹಿಡಿದಿದ್ದಾರೆ!—“ಕಾವೇರೀ ನದಿಯು ಕೋಪವಡಗಿದ ಹೆಂಡತಿಯ ನಗೆಯಂತೆ ಈ ಸೌಮ್ಯರೂಪದಿಂದ ಸರಸದಿಂದ ಕರೆಯುವಾಗ ಯಾರು ತಾನೇ ಅದರ ಪ್ರಭಾವವನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುತ್ತದೆ!” (ಪುಟ ೩೦)

ಈ ವರ್ಣನೆ ಎಷ್ಟು ಹೃದಯಂಗಮವಾಗಿದೆ:

“ಯಗಚಿ ಹೊಳೆಗೆ ಕಳ್ಳ ಹೊಳೆಯೆಂದು ಹೆಸರು ಬಂದಿದೆ. ಭಗವಂತನ ‘ಕ್ರಿಮಿನಲ್ ಕೋರ್ಟು’ ಅಪರಾಧಿಗಳ ಪೈಕಿ ಇದೂ ಸೇರಿದೆಯೋ ಏನೋ? ಇಬ್ಬನಿ ಬಂದರೆ ತುಂಬಿ ಹೋಗುತ್ತದೆ; ಬೆಳದಿಂಗಳಿಗೆ ಆರಿಹೋಗುತ್ತದೆ.” (ಪುಟ ೭೭)

ಪ್ರಕೃತಿ ಮಾತ್ರವಲ್ಲ, ಇತರ ಸಂಗತಿಗಳನ್ನೂ ಸೂಚ್ಯವಾಗಿ ತಿಳಿಸುವ ಶಕ್ತಿ ಲೇಖಕರಿಗುಂಟು:

ಸಂಜೆಯ ವೇಳೆ ತಡವಾಗಿ ಊರಿಗೆ ಬಂದ ಬಸ್ಸಿನ “ಮುಂದಲ ಎರಡು ಬೆಳಕುಗಳೂ ಸೂರ್ಯನ ಮರಿಗಳಂತೆ ಪ್ರಕಾಶಿಸುತ್ತಾ ರಸ್ತೆಯನ್ನು ಫರ್ಲಾಂಗ್ ದೂರ ಬೆಳಗುತ್ತಿದ್ದವು” (ಪುಟ ೧೭) ಎಂಬುದು ಬಸ್ಸಿನ ತಲೆದೀಪದ ಚಿತ್ರ; ಇದರ ಮುಂದಿನ ವಾಕ್ಯದಲ್ಲಿ “ಸ್ವಾಮಿ ಬಸ್ಸು ನಿಂತಿದೆ, ಅದರ್ಬೆಳಕಿನಲ್ಲಿ ಮನೆ ಸೇರ್ಕೊಂಡ್ಬಿಡ್ತೇನೆ” ಎಂದು ಜೀತದಾಳು ತಿಳಿಸಿದಾಗ ಹಳ್ಳಿಗನೊಬ್ಬನ ಅಂಜಿಕೆಯ ಸ್ವಭಾವ, ಹಳ್ಳಿಯಲ್ಲಿ ಬಸ್ಸು ಓಡಾಡುವ ಹೆದ್ದಾರಿಯಲ್ಲೂ ದಾರಿದೀಪಗಳ ಅಭಾವ—ಈ ಸಂಗತಿಗಳು ಸೂಚಿತವಾಗುತ್ತವೆ. “ಈಶಾನ್ಯ ದಿಕ್ಕಿನಲ್ಲಿ ಮಿಂಚು ಸಹಸ್ರ ನಾಲಗೆಯ ಹಾವುಗಳಂತೆ ಮೋಡಗಳನ್ನು ಕಚ್ಚುತ್ತಿದ್ದಿತು” (ಪುಟ ೨೭); ತುಂಬು ಪ್ರವಾಹದಲ್ಲಿ ಹರಿಗೋಲಿನಲ್ಲಿ ಹೊಳೆ ದಾಟುವಾಗ ಅಲೆಗಳ ಗರ್ಜನೆಯ ಗಾನ, ತೇಲುವ ನೊರೆ, ನೀರಿನ ರಾಶಿಯ ರುದ್ರರಮಣೀಯತೆ “ಉಳಿದ ವೇಳೆಯಲ್ಲಾದರೆ ನಮಗೆ ಅತ್ಯಂತ ಆನಂದವನ್ನೇ ಕೊಡುತ್ತಿದ್ದುವು. ಆದರೆ ಆಗ ಅವುಗಳನ್ನು ಕುರಿತು ಯೋಚಿಸುವುದು, ಮರಣದಂಡನೆಗೆ ಗುರಿಮಾಡಲ್ಪಟ್ಟವನು ತನ್ನ ಆಯುಷ್ಯದ ವಿಷಯದಲ್ಲಿ ಜ್ಯೋತಿಷ್ಯವನ್ನು ಕೇಳಿದಂತೆಯೇ” (ಪುಟ ೨೮) ಎಂಬಂಥ ಸ್ಥಿತಿಯನ್ನು ಸೂಚಿಸುವುದು; “ಹರಿಗೋಲು ಎದುರು ದಡದಲ್ಲಿ ಚಿಕ್ಕ ಹಕ್ಕಿಯಂತೆ ಕಾಣುತ್ತಿದ್ದಿತು” (ಪುಟ ೨೫)—ಇಂಥ ಸಾರ್ಥಕವಾದ ಉಪಮಾನಗಳು ಅಲ್ಲಲ್ಲಿ ಕಾಣಿಸಿಕೊಂಡು, ಬರವಣಿಗೆಯ ಚೆಲುವನ್ನು ಹೆಚ್ಚಿಸಿವೆ.

‘ಹಳ್ಳಿಯ ಚಿತ್ರಗಳ’ನ್ನು ಮೇಲ್ಮಟ್ಟದ ಬರವಣಿಗೆಯನ್ನಾಗಿ ಮಾಡಿರುವ ಇನ್ನೊಂದು ಮುಖ್ಯ ಗುಣ, ಲೇಖಕರ ಲೋಕಾನುಭವವನ್ನು ವ್ಯಕ್ತಪಡಿಸುವ, ಸುಭಾಷಿತಗಳಂತಹ ಮಾತುಗಳು. ಇವು ಕೆಲವು ಉದಾಹರಣೆಗಳು: “ಹರಿಗೋಲಿನಲಿರುವಾಗ ಅಂಬಿಗನ ಹತ್ತಿರ, ಕೇಸು ನಡೆಯುತ್ತಿರುವಾಗ ಲಾಯರ ಹತ್ತಿರ, ಕ್ಷೌರಮಾಡುತ್ತಿರುವಾಗ ಹಜಾಮನ ಹತ್ತಿರ ವಿರೋಧವನ್ನು ಕಟ್ಟಿಕೊಳ್ಳುವುದು ತರವಲ್ಲ” (ಪುಟ ೨೭); “ಅಪಾಯವು ಸನ್ನಿಹಿತವಾದಾಗ ಉಪಾಯವು ತಾನಾಗಿಯೇ ತೋರುತ್ತದೆ” (ಪುಟ ೮೨);

"ನಗೆಗೆ ನೀತಿಯೇ ಇಲ್ಲ" (ಪುಟ ೯೧); ಇಂಥ ಅಪೂರ್ವ ಹೋಲಿಕೆಗಳ ಜೊತೆಗೆ, ಸಂದರ್ಭೋಚಿತವಾಗಿ, ಎಲ್ಲರಿಗೂ ಪರಿಚಿತವಾದ ಗಾದೆಮಾತುಗಳೂ ಕೂಡಿಕೊಂಡು, "ನೀತಿಯೇ ಇಲ್ಲ"ದ ನಗೆಯ ಬರಹಕ್ಕೂ ಒಂದು ನೀತಿಯ ದಿಕ್ಕನ್ನು ತೋರಿಸಿವೆ.

✻

ಕೊನೆಯದಾಗಿ, ಈ ಗ್ರಂಥದಲ್ಲಿ "ವಿಷಯದ ಸೊಗಸಿನಂತೆ ಈ ಭಾಷೆಯ ಸೊಗಸೂ ಜನಜೀವನದ ಸಾಮೀಪ್ಯದಿಂದ ಬಂದಿದೆ" (ಮುನ್ನುಡಿ, ಪುಟ ೫) ಎಂಬ ಅಂಶವು ಗಮನಾರ್ಹ. ಶ್ರೀನಿವಾಸರು ಎತ್ತಿ ಕಾಣಿಸಿರುವ ಈ ಗುಣವೇನೂ ಮೆಚ್ಚುಗೆಗೆ ಅರ್ಹವಾದದ್ದೆ. ಜನಸಾಮಾನ್ಯರ ಭಾಷೆಗೂ ಅದರದ್ದೇ ಆದ ಸಹಜವಾದ ನಿಯಮಗಳುಂಟು. ಕಿಟ್ಟುವನ್ನ, ಗಾಳಿಯು, ಎಮ್ಮೆಯು, ಎಳೆಗರುವು—ಹೀಗೆ ಅನಗತ್ಯವಾಗಿ ಪ್ರಥಮಾ ವಿಭಕ್ತಿಪ್ರತ್ಯಯಗಳನ್ನು ಸೇರಿಸುವುದು; ತರಲ್ಪಟ್ಟು, ಇಡಲ್ಪಟ್ಟ ಎಂಬಂತಹ ಕರ್ಮಣಿ ಪ್ರಯೋಗಗಳು; ಇದ್ದಕ್ಕಿದ್ದ ಹಾಗೆ ಬಳಕೆಗನ್ನಡದಿಂದ ಗ್ರಾಂಥಿಕ ರೀತಿಯ ಭಾವುಕ ಶೈಲಿಗೆ ಹೊರಳುವುದು, ಇತ್ಯಾದಿ ಭಾಷಾಪ್ರಯೋಗಗಳೂ ಶೈಲಿಯ ಏರುಪೇರೂ ಶಿಷ್ಟಶೈಲಿಗೆ ಹೇಗೋ ಹಾಗೆ ದೇಸಿ ಶೈಲಿಗೂ ಹೊರತಾದುವು. ಈ ಬಗೆಯ ಭಾಷಾ ಶೈಲಿಗಳ ದೋಷಗಳು ಕೃತಿಯ ಆಂತರಿಕ ಸೌಂದರ್ಯವನ್ನು ಕುಗ್ಗಿಸುವ ಮಟ್ಟಿಗೆ ಹೋಗಿಲ್ಲವೆಂಬುದು ಸಂತೋಷದ ಸಂಗತಿ.

'ನಮ್ಮ ಊರಿನ ರಸಿಕರು'

ದೇ. ಜವರೇಗೌಡ

ಹಳ್ಳಿಯ ಬಾಳು ಸಪ್ಪೆಯಲ್ಲ, ಸ್ವಾರಸ್ಯಕರವಾದದ್ದು ; ಅದು ಅನಾಗರಿಕವಾದದ್ದಲ್ಲ, ಸುಸಂಸ್ಕೃತವಾದದ್ದು ; ಅದು ಅಪ್ರಯೋಜಕವಾದದ್ದಲ್ಲ, ಲೋಕಕ್ಷೇಮಾಕಾಂಕ್ಷಿಯಾದದ್ದು ; ಹಳ್ಳಿಯ ಜನ ಕ್ಷುದ್ರ ಜಂತುಗಳಲ್ಲ, ಸಾಹಿತ್ಯ ವಸ್ತುವಾಗುವ ಹಿರಿಯ ಚೇತನವುಳ್ಳವರು ; ನೋಡುವ ಕಣ್ಣಿದ್ದರೆ ಗ್ರಾಮ ಸಮಾಜದಲ್ಲಿ ರಾಮಾಯಣ ಭಾರತಗಳನ್ನು ಹೋಲುವ ವಿಸ್ತಾರವೂ ವೈವಿಧ್ಯಮಯವೂ ಆದ ವಸ್ತುವನ್ನೂ, ರಾಮ ಸೀತೆ ಪಾಂಡವರಂಥ ವ್ಯಕ್ತಿಗಳನ್ನೂ ಗುರುತಿಸಬಹುದೆಂಬ ಸತ್ಯವನ್ನು ಪ್ರಯೋಗದ ಮೂಲಕ ಸುಸ್ಪಷ್ಟವಾಗಿ ತೋರಿಸಿಕೊಟ್ಟ ಇಬ್ಬರು ಮೂವರು ಸಾಹಿತಿಗಳಲ್ಲಿ ಗೊರೂರರು ಅಗ್ರಗಣ್ಯರು. ಅವರ ಸಾಹಿತ್ಯಕ್ಕೆ ಪ್ರೇರಣೆ ಸ್ಫೂರ್ತಿ ಸತ್ವವನ್ನೊದಗಿಸಿದ್ದು ಹಳ್ಳಿಯ ಜೀವನ ಮತ್ತು ಅಲ್ಲಿಯ ಜನ. ಕ್ಷುದ್ರದಲ್ಲಿಯೂ ಮಹಿಮೆಯನ್ನು ಕಾಣುವ ವಾತ್ಸಲ್ಯ ಸಹಾನುಭೂತಿ ನಿರಸೂಯತೆಗಳು ಇವರಿಗೆ ಮೀಸಲೆಂಬಂತೆ ಭಾಸವಾಗುತ್ತದೆ. ಅಸಂಖ್ಯಾತ ವಿದ್ವಾಂಸರು ಮತ್ತು ವಿದ್ಯಾವಂತರು ಹಳ್ಳಿಯನ್ನು ಕಂಡಿದ್ದಾರೆ, ಹಳ್ಳಿಯಲ್ಲಿ ಬಾಳಿದ್ದಾರೆ. ಆದರೆ ಹಳ್ಳಿಯ ಬಾಳನ್ನು ಇವರಂತೆ ಅರ್ಥಮಾಡಿಕೊಂಡವರು, ಅರ್ಥಮಾಡಿಕೊಂಡ ಫಲವಾಗಿ ಮೂಡಿದ ಭಾವನೆಗಳಿಗೆ ರೂಹು ಕೊಟ್ಟವರು ತೀರ ಕಡಮೆ. ಹಳ್ಳಿಯ ಬಾಳಿನಲ್ಲಿ ತಾದಾತ್ಮ್ಯವಾಗಲಿ, ಅನುಭವ ಕ್ಷೇತ್ರದಲ್ಲಿ ಪ್ರಾಮಾಣಿಕತೆಯಾಗಲಿ ಇಲ್ಲದಿದ್ದರೆ ಬಹು ಪ್ರಮಾಣದ ವೈವಿಧ್ಯಮಯವಾದ ಸಾಹಿತ್ಯವನ್ನವರು ಸೃಷ್ಟಿಸುವುದು ಕಷ್ಟವಾಗುತ್ತಿತ್ತು.

ಗೊರೂರರ ದೃಷ್ಟಿಯಲ್ಲಿ ಹಳ್ಳಿಯ ಜೀವನ ಎಷ್ಟು ಮೊಗೆದರೂ ಅರೆಯಾಗದ ಅಕ್ಷಯ ನಿಧಿಯಾಗಿದೆ. ಅದನ್ನು ಕುರಿತಾದ ಅವರ ಹಲವು ಗ್ರಂಥಗಳಲ್ಲಿ 'ನಮ್ಮ ಊರಿನ ರಸಿಕರು' ಅಪೂರ್ವವಾದದ್ದು. ಹಳ್ಳಿಯ ಜೀವನದ ಬಗೆಗೆ ಅವರಿಗೆಷ್ಟು ಶ್ರದ್ಧೆಯಿದೆ,

ಅನುಕಂಪೆಯಿದೆ, ವಾತ್ಸಲ್ಯವಿದೆ ಎನ್ನುವುದಕ್ಕೆ ಈ ಕೃತಿಗೆ ಅವರಿಟ್ಟಿರುವ ಹೆಸರೇ ಸಾಕ್ಷಿಯಾಗಿದೆ. ಹಳ್ಳಿಯ ಜನ ಜೀವನಶ್ರದ್ಧೆಯುಳ್ಳವರು ಸರಸಿಗಳು ಸ್ನೇಹಪರರು ಮುಗ್ಧರು ನಿಷ್ಕಪಟಿಗಳು ಎನ್ನುವುದನ್ನವರು ಮರೆತಿಲ್ಲ. ಇಲ್ಲಿ ಬರುವ ವ್ಯಕ್ತಿಗಳೆಲ್ಲರೂ ಓದುಗರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂಥವರು. ಅವರ ನಡೆನುಡಿಗಳಲ್ಲಿ ಕಾಣುವ ಅರೆ ಕೊರೆ ಕಲೆಗಳನ್ನೆತ್ತಿ ತೋರಿಸುವಾಗಲೂ ಓದುಗರಲ್ಲಿ ಸಹಾನುಭೂತಿ ಮೂಡುವಂತೆ ಚಿತ್ರಿಸುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಯೂ ಆಯಾಯ ಪರಿಸರದಿಂದೊಗೆದ ಮೊಗ್ಗೆನ್ನುವುದು ಸಹಜ. ಆದ್ದರಿಂದಲೇ ವ್ಯಕ್ತಿ ಚಿತ್ರಣಕ್ಕೆ ಹಿನ್ನೆಲೆಯಾಗಿ ಗೊರೂರಿನ ಪರಿಸರವನ್ನು ವಿವರಿಸುತ್ತಾರೆ—ವಿವರಿಸುತ್ತಾರೆನ್ನುವುದಕ್ಕಿಂತ ಚಿತ್ರಿಸುತ್ತಾರೆನ್ನುವುದೇ ಮೇಲು. ನಲವತ್ತು ವರ್ಷ ಹಿಂದಿನ ಆ ಊರು ಧರೆಗಿಳಿದ ನಂದನದಂತಿತ್ತೆಂಬುದನ್ನು ಹೆಮ್ಮೆಯಿಂದ ತಿಳಿಸುತ್ತಾರೆ. ಬೆಳಗಿನ ವರ್ಣನೆಯನ್ನೋದುವಾಗ ವರ್ಣ ಶಿಲ್ಪಿಯ ಚಿತ್ರಕಲಾ ಶಾಲೆ ನೆನಪಿಗೆ ಬರುತ್ತದೆ. ತಲೆ ಮುಸುಕಿನ ಮೂರ್‍ನಾಲ್ಕು ಮಂದಿ ಸೋಮಾರಿಗಳ ನಡುವೆ ನಶ್ಯ ತೀಡುತ್ತ ಕುಳಿತಿರುವ ನರಸಿಂಹಾಚಾರ್ಯರ ಕಡೆಗೆ ತಿರುಗಿದರೆ ಸಾಕು ನಗು ಬುಗ್ಗೆಯಾಗುತ್ತದೆ. ಮಲಗಿದ್ದವರನ್ನೆಬ್ಬಿಸುವ ಕಾಫಿ ದೋಸೆಗಳ ವಾಸನೆ ನೆಗಡಿಯ ಮೂಗನ್ನಾದರೂ ಅರಳಿಸದಿರದು. ಹೊಳೆಯ ದಡದಲ್ಲಿ ಜಮಾಯಿಸಿರುವ ಹೆಂಗಸರ ತಂಡ. “ಗುಡಾಣದಂತಹ ಹೊಟ್ಟೆಗೆ, ಸಡಿಲವಾಗಿ ಕೆಳಕ್ಕೆ ಜಾರುತ್ತಿರುವಂತೆ ಪಂಚೆಯನ್ನು ಬಿಗಿದುಕೊಂಡು, ಕಿವಿಗೆ ಹೂವಿನ ಎಲೆಯನ್ನೂ ಜನಿವಾರವನ್ನೂ ಸುತ್ತಿಕೊಂಡು ನದಿಯ ಕಡೆಗೆ ಹೋಗುತ್ತಿರುವ” (ಪುಟ ೧೪೭) ಶಾಸ್ತ್ರಿಗಳು, ಊರ ಮುಂದಿನ ಚಾವಡಿಯಲ್ಲಿ ಹರಟುತ್ತ ಕುಳಿತಿರುವ ಬೋರೇಗೌಡ ಶಾನುಭೋಗರು, ಹೆಗಲ ಮೇಲೆ ನೇಗಿಲು ಹಾಕಿಕೊಂಡು ಎತ್ತುಗಳ ಜತೆಯಲ್ಲಿ ಹೊಲ ಗದ್ದೆಗಳಿಗೆ ಹೊರಟಿರುವ ರೈತರು. ಸೂರ್ಯನ ಕಡೆಗೆ ಕೈಮುಗಿಯುತ್ತಿರುವ ರಂಗೇಗೌಡ, ದೇವಾಲಯದ ಘಂಟಾನಾದ, ರೂಟರ್ ಏಜೆನ್ಸಿ ಎಂದು ಹೆಸರಾಗಿರುವ ತಿರುಮಲಯ್ಯ, ಜೆನ್ನಿಯೊಡನೆ ಚುನ್ನಾಟವಾಡುವ ಸಿಂಗ, ಮನೆಗಳ ಮೇಲೆ ಕಾಣುವ ಹೊಗೆ, ಇವು ನಿತ್ಯ ಕಾಣುವ ದೃಶ್ಯಾವಳಿಗಳು. ಪ್ರಶಾಂತವಾದ ಗ್ರಾಮೀಣ ಜೀವನವನ್ನು ತುಸು ಕದಡುವ, ಆದರೆ ಹಳ್ಳಿಗರಿಗೆ ಗಡಿಯಾರದಂತಿರುವ, ವಸ್ತುವೆಂದರೆ ಬಸ್ಸು. ಅದು ಬಂತೆಂದರೆ ಎಲ್ಲರೂ ತಂತಮ್ಮ ಕೆಲಸ ಮರೆತು ಆ ಕಡೆಗೆ ಕಣ್ಣಾಗುತ್ತಾರೆ: ಹುಡುಗರ ಸಡಗರವಂತು ಹೇಳತೀರದು. ಚಾಲಕ ರಾಜಯ್ಯಂಗಾರಿಯಂತು ನೀತಿ ನಡತೆ ಸಲುಗೆಗಳಿಂದ ಹೆಂಗಸರು ಮಕ್ಕಳಿಗೆಲ್ಲ ವಾತ್ಸಲ್ಯದ ವ್ಯಕ್ತಿಯಾಗಿದ್ದಾನೆ.

ಇಲ್ಲಿ ವರ್ಣನೆಗೊಂಡಿರುವ ವ್ಯಕ್ತಿಗಳ ಮೆರೆವಣಿಗೆಯಲ್ಲಿ ಎದ್ದು ಕಾಣುವ ಜನರೆಂದರೆ ರಂಗೇಗೌಡ ಮತ್ತು ಶೀನಪ್ಪ. ರಂಗೇಗೌಡನ ಬಾಳು, ಅವನ ಕಷ್ಟ ಸಹಿಷ್ಣುತೆ, ಅವನ ಪತ್ನೀ ಪ್ರೇಮ, ಅವನ ಕರ್ತವ್ಯ ಶ್ರದ್ಧೆ ಪಟ್ಟಣಿಗರು ಕರುಬುವಂಥವು. ಅವನು ಲೋಯರ್ ಸೆಕೆಂಡರಿ ಪರೀಕ್ಷೆಗೆ ಏಳು ಸಲ ಕಟ್ಟಿ, ಕೊನೆಯ ಸಲ ತೇರ್ಗಡೆಯಾದವನಂತೆ.

ಆರನೆಯ ಸಲ ಕಟ್ಟಿದಾಗ ಅವನು ಪಾಸಾಗಿದ್ದಂತೆ ಶೀನಪ್ಪ ಸುಳ್ಳು ಸುದ್ದಿ ಹುಟ್ಟಿಸಿದ್ದರ ಪರಿಣಾಮವಾಗಿ ಅವನು ಅನೇಕ ದಿನ ಬೀದಿಗೆ ತಲೆಹಾಕಲಿಲ್ಲವಂತೆ. ಕೊನೆಗೆ ಕತೆಗಾರರೇ ಅವನಿಗೆ ಉಪಾಧ್ಯಾಯರಾಗಿ ಪಾಠ ಹೇಳಿಕೊಟ್ಟು ಪಾಸು ಮಾಡಿಸಿದರು. ಇಷ್ಟು ಸಾರಿ ಪರೀಕ್ಷೆ ಕಟ್ಟಿ ಫೇಲಾದ್ದರಿಂದಲೋ ಏನೋ ಅವನ ಭಾಷೆ ವ್ಯಾಕರಣ ಬದ್ಧವಾಗುತ್ತದೆ. ಶೀನಪ್ಪ ಮೊದಲುಗೊಂಡು ಎದುರಿನ ಜನರ ಗ್ರಾಮ್ಯ ಭಾಷೆಯನ್ನು ತಿದ್ದುತ್ತಾನೆ. ಶೀನಪ್ಪನೇ ಒಮ್ಮೆ "ಇಳ್ಳಿನಾಗ" ಎಂದಾಗ "ಇರುಳಿನಲ್ಲಿ" (ಪುಟ ೨೧೬) ಎಂದು ತಿದ್ದಿಬಿಟ್ಟನಂತೆ. ಹಳ್ಳಿಯ ಜನ ಮಾತನಾಡಿದಾಗಲೆಲ್ಲ ವಿಷಯ ಮರೆತು ಕರ್ತೃ ಕರ್ಮ ಕ್ರಿಯೆಗಳ ಸ್ಥಾನ ನಿರ್ಧಾರದ ಆಲೋಚನೆಯಲ್ಲಿ ತಲ್ಲೀನನಾಗಿರುತ್ತಿದ್ದನಂತೆ. ಅವನ ವ್ಯಾಕರಣದ ಹುಚ್ಚು ನಗೆಪಾಟಲಿನ ವಿಷಯವಾಗುತ್ತದೆ. ಆ ನಗೆಯಲ್ಲಿ ಸರಸ ಕನಿಕರಗಳು ತೋರುತ್ತವೆಯೇ ಹೊರತು ಕಹಿ ಕಾಣುವುದಿಲ್ಲ. ಮದುವೆಯ ಸಮಯದಲ್ಲಿ ಆಲೆಯ ಮನೆಯಲ್ಲಿ ಅವನು ತೋರಿಸುವ ಔದಾರ್ಯದಿಂದ ಪಟ್ಟಣದ ಗುಂಡನೂ ಆಶ್ಚರ್ಯಚಕಿತನಾಗುತ್ತಾನೆ. ಒಟ್ಟಿನಲ್ಲಿ ರಂಗೇಗೌಡ ಹಳ್ಳಿಯ ರೈತರ ಆದರ್ಶ ಪ್ರತಿನಿಧಿಯಾಗಿದ್ದಾನೆ.

ಈ ಕೃತಿಯಲ್ಲಿ ಬರುವ ವ್ಯಕ್ತಿಗಳು ಬಿಡಿಬಿಡಿಯಾಗಿ ಕಂಡರೂ ಅವರೆಲ್ಲರೂ ವಿಶಿಷ್ಟ ಜೀವನದ ಪರಸ್ಪರ ಸಂಬಂಧವುಳ್ಳ ಗ್ರಾಮ ಸಮಾಜದ ಅವಯವಗಳಾಗಿ, ಈ ಎಲ್ಲ ಅವಯವಗಳನ್ನು ಸೂತ್ರೀಕರಿಸಿರುವ ಚೇತನಗಳಾಗಿ ಶೀನಪ್ಪ ಮತ್ತು ಕತೆಗಾರರಿದ್ದಾರೆ. ಈ ಸಂಬಂಧ ಶಿಥಿಲವಾದದ್ದಾದರೂ ಈ ವ್ಯಕ್ತಿಗಳ ಕತೆಯಲ್ಲೆಲ್ಲ ವ್ಯಾಪಿಸಿಕೊಂಡಿರುವುದರಿಂದ ಇದೊಂದು ಚಿತ್ರ ಕಾದಂಬರಿಯೆಂಬ ಅನಿಸಿಕೆಗೆ ಕಾರಣವಾಗಿದೆ. ಕತೆಗಾರರು ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಳ್ಳುವರಾದರೂ ಶೀನಪ್ಪ ಮಾತ್ರ ಇಡೀ ಹಳ್ಳಿಯ ಯಜಮಾನನೆಂಬಂತೆ ತೋರಿಸಿಕೊಳ್ಳುತ್ತಾನೆ. ಅವನು ಪ್ರವೇಶಿಸದ ಮನೆಯಿಲ್ಲ, ಹೊಗದ ಜಾಗವಿಲ್ಲ, ತಲೆಹಾಕದ ಪ್ರಸಂಗವಿಲ್ಲ; ಅವನಿಲ್ಲದೆ ಮದುವೆ ಮುಂಜಿ ನಡೆಯುವಂತಿಲ್ಲ, ಸ್ಮಶಾನ ಕಾರ್ಯ ಮುಗಿಯುವಂತಿಲ್ಲ; ಕೊನೆಗೆ ಅವನು ಸತ್ತೆಮ್ಮೆಯನ್ನೂ ಹೊತ್ತಾನು; ಅವನು ವಿನೋದಕ್ಕೂ ಸರಿ, ರಾಜಿಮಾಡಲಿಕ್ಕೂ ತಯಾರಿ. ಅವನ ತುಂಟತನವನ್ನೆಲ್ಲರೂ ಅರ್ಥಮಾಡಿಕೊಂಡಿರುವುದರಿಂದ ಯಾರಿಗೂ ಅವನ ಮೇಲೆ ಖಾರವಿಲ್ಲ. "ಹೌದಯ್ಯ ಮಂಗಳಾರತಿಗೆ ಬರುವುದಕ್ಕೆ ತಡವಾಯಿತು. ಹುಳಿಯನ್ನಕ್ಕೆ ಬರುವುದಕ್ಕೆ ತಡವಾಗಲಿಲ್ಲ" (ಪುಟ ೧೬೨) ಎಂದು ಹಂಗಿಸಿದ ಪುರೋಹಿತನ ಮೇಲೆ ಮುಯ್ಯಿ ತೀರಿಸಿಕೊಳ್ಳುವಾಗ, ರಂಗೇಗೌಡನನ್ನು ಪರೀಕ್ಷೆಯ ಸಂಬಂಧವಾಗಿ ಕೀಟಲೆ ಮಾಡುವಾಗ, ಎಂಜಲೆಲೆಗಳನ್ನು ಗುಡಿಸುವಾಗ ಅಥವಾ ಗುಡಿಸುವಂತೆ ಎಲ್ಲ ಬ್ರಾಹ್ಮಣರಿಗೆ ಸಲಹೆ ನೀಡುವಾಗ, ಆದಿಕರ್ನಾಟಕರ ನಿಂಗನನ್ನು ಗುಡಿಸಲು ನೇಮಿಸುವಾಗ, ಸತ್ತ ಎಮ್ಮೆಯನ್ನು ಹೊರುವಾಗ, ಹೆಂಡತಿಯನ್ನು ಹೊಡೆದು ಸಮಾಧಾನಪಡಿಸಲು ದಮ್ಮಯ್ಯಗುಡ್ಡೆ ಹಾಕಿದ ರಾಮಸ್ವಾಮಿಯನ್ನು ಗೇಲಿ ಮಾಡುವಾಗ, ಜೋಡಿದಾರರ ಮಗ ಕಿಟ್ಟುವಿಗೆ ಮದುವೆ ಮಾಡುವಾಗ, ಸುತ್ತಮುತ್ತಣವರಿಗೆಲ್ಲ ಡಂಗುಬಡಿಯು

ವಂತೆ ಮಂತ್ರವಾದಿಯ ವೇಷ ಹಾಕುವಾಗ, ತಪ್ಪಲೆಗಟ್ಟಲೆ ಕಬ್ಬಿನರಸ ಹಿಸುಕುವಾಗ, ರಂಗೇಗೌಡ ಹೊನ್ನಾರು ಕಟ್ಟುವಾಗ ಶೀನಪ್ಪನ ನಿಷ್ಕಾಪಟ್ಯ, ಹುಸಾರುತನ, ಹುಮ್ಮಸ್ಸು, ವಿನೋದಶೀಲತೆ, ಒರಟುತನ, ಸೇವಾ ಮನೋಭಾವನೆ, ಕ್ರಾಂತಿದೃಷ್ಟಿ ಮೊದಲಾದ ಎಲ್ಲ ಸದ್ಗುಣಗಳನ್ನು ನೋಡಬಹುದು. ಅವನ ಪ್ರಭಾವಕ್ಕೊಳಗಾಗದ ಜನರಿಲ್ಲ; ಅವನಿಲ್ಲದೆ ಬೇರೆಯವರ ವ್ಯಕ್ತಿತ್ವ ಮಿಂಚುವುದಿಲ್ಲ. ಅವನಿದ್ದೆಡೆ ಜಾತ್ರೆ, ಅವನಿಲ್ಲದೆಡೆ ಹಾಳು. ಅವನು ಹಂಗಿಸಲಿ ಭಂಗಿಸಲಿ ಪ್ರಶಂಸಿಸಲಿ ಎಲ್ಲರೂ ಅವನ ಸಂಗ ಸುಖವನ್ನು ಬಯಸುವವರೇ. ಒಂದು ರೀತಿಯಲ್ಲಿ ಅವನಿಗೂ ಕತೆಗಾರರಿಗೂ ಅವಿನಾಭಾವವಿದ್ದು ಈ ಕತೆಯ ಸೂತ್ರಧಾರನೆಂಬಂತೆ ಕಾಣುತ್ತಾನೆ.

ಹಿಂದೂ ಮುಸ್ಲಿಮ್ ಬಾಂಧವ್ಯಕ್ಕೆ ಸಾಕ್ಷಿಯಂತಿರುವ ಶಾಲುಸಾಬಿ ವಾಚಕರ ಆಕರ್ಷಣೆಗೆ ಪಾತ್ರನಾಗುವ ಮತ್ತೊಬ್ಬ ವ್ಯಕ್ತಿ. ಹಳ್ಳಿಯ ಅನೇಕ ಜನರಿಗೆ ಎರಡೆರಡು ಹೆಸರಿರುವುದುಂಟು! ಒಂದು ತಂದೆ ತಾಯಿಯರು ಇಟ್ಟದ್ದು, ಮತ್ತೊಂದು ಸಮಾಜ ಕೊಟ್ಟದ್ದು. ಕೊನೆಗುಳಿಯುವ ಹೆಸರು ಸಮಾಜ ಕೊಟ್ಟದ್ದು. ಅವನು ಬೇಸಗೆಯಾಗಲಿ ಮಳೆಗಾಲವಾಗಲಿ ಶಾಲು ಹೊದೆಯುತ್ತಿದ್ದುದರಿಂದ ಹುಡುಗರು ಅವನಿಗೆ ಹಾಗೆ ನಾಮಕರಣ ಮಾಡಿದ್ದುಂಟು. ಹಬ್ಬ ಹರಿದಿನಗಳಾದರೆ—ಅವು ಹಿಂದೂಗಳವೇ ಆಗಲಿ, ಮುಸ್ಲಿಮರವೇ ಆಗಲಿ—ಅವನಲ್ಲಿ ಹಾಜರು. ಅವನಿಲ್ಲದೆ ಊರ ಪಂಚಾಯಿತಿ ನಡೆಯುವಂತಿಲ್ಲ. ಅವನ ದೈತ್ಯಾಕೃತಿಗೆ ಹೆದರುವ ಜನ ಹಾಗೂ ಹುಡುಗರು ಎಲ್ಲಿಯೇ ಆಗಲಿ ಅವನ ಮಾತಿಗೆ ಬೆಲೆ ಕೊಡುತ್ತಾರೆ. ಅವನು ಪಾಳೆಯಗಾರನಂತಿದ್ದರೂ ನಿಷ್ಪಕ್ಷಪಾತತೆಗೂ ನ್ಯಾಯಕ್ಕೂ ಹೆಸರಾದವನು. ಊರಿನ ವ್ಯಾಜ್ಯ ಯಾವುದೂ ಕೋರ್ಟಿನ ತನಕ ಹೋಗಗೊಡುವುದಿಲ್ಲವೆಂಬ ಪ್ರತಿಜ್ಞೆ ಅವನದು. ಬಯಲಾಟ ಸದ್ದುಗದ್ದಲಗಳಿಲ್ಲದೆ ನಿರಾತಂಕವಾಗಿ ನಡೆಯಬೇಕಾದರೆ ಶಾಲುಸಾಬಿಯ ಹಾಜರಿ ಅತ್ಯಗತ್ಯ. ಇಂಥ ಜನ ಎಲ್ಲೆಲ್ಲೂ ಇರುವುದಾದರೆ ಭಾರತದ ಭಾಗ್ಯಕ್ಕೆ ಎಣೆಯಿಲ್ಲವಾಗುತ್ತದೆ.

ಇಂಥ ವಿನೋದಪ್ರಿಯರಾದ ರಸಿಕರ ನಡುವೆ ಮೂರ್ತಿರಾಯರಂಥ ಗಂಭೀರ ಸ್ವಭಾವದ ಸಿಡುಕರೂ ಇಲ್ಲದಿಲ್ಲ. ದೀಪಾವಳಿ ಹಬ್ಬದ ದಿನ ಹುಡುಗರು ಪಟಾಸು ಹೆತ್ತಿಸಿ ಸಂತೋಷಪಡುವ ಪ್ರಸಂಗ ಅವರಿಗೆ ಅವಾಂತರವಾಗಿ ಪರಿಣಮಿಸುತ್ತದೆ. ಅವರು ಹುಡುಗರನ್ನು ಸಿಕ್ಕಾಬಟ್ಟೆ ಬಯ್ಯುತ್ತಾರೆ. ಈ ಬಯ್ಗುಳಕ್ಕೆ ಪ್ರತಿಯಾಗಿ ಜೊಜ್ಜ ತೀರಿಸಿಕೊಳ್ಳಬೇಕೆಂದು ಮನಸ್ಸು ಮಾಡಿದ ಹುಡುಗರಲ್ಲೊಬ್ಬ ಅವರೊಂದಿಗೆ "ಸ್ವಾಮಿ, ನಿಮ್ಮ ಹಳ್ಳದ ಗದ್ದೆಗೆ ಯಾರೋ ನೀರು ಕಟ್ಟಿದ್ದಾರೆ" (ಪುಟ ೧೬೧) ಎನ್ನುತ್ತಾನೆ. ಕೊಯ್ಲಿಗಾಗಿ ಎರಡು ಮೂರು ದಿನಗಳಿಂದ ನೀರು ತಪ್ಪಿಸಿಹಾಕಿದ್ದ ಮೂರ್ತಿರಾಯರಿಗೆ ಹಿಡಿಸದಷ್ಟು ಕೋಪ. ಹಿಂದಕ್ಕೆ ನಡೆದು ಹೋಗಿ ಗದ್ದೆಯನ್ನು ನೋಡುವಾಗ ಅದರಲ್ಲಿ ನೀರಿರಲಿಲ್ಲ. ಹುಡುಗರ ಕುಚೇಷ್ಟೆಗಾಗಿ ಕುದಿ ಕುದಿದ ಮೂರ್ತಿರಾಯರು ಆ ನಾಟಕದ ಹಿನ್ನೆಲೆಯಲ್ಲಿ ಶೀನಪ್ಪನೂ ಸೇರಿಕೊಂಡಿರಬೇಕೆಂದು ಹಾರಾಡುತ್ತಾರೆ. ಮತ್ತೊಬ್ಬರನ್ನು ಹಾಸ್ಯಕ್ಕೆ ಕಾರಣ ಮಾಡಿಕೊಂಡು ನಕ್ಕು ನಗಿಸುವ ಸಂದರ್ಭಕ್ಕೆ

ಇದೊಂದು ಒಳ್ಳೆಯ ಉದಾಹರಣೆ.

ದೇವರನ್ನು ಮಾತಾಡಿಸುವ ಕರಡಿ ಬೆಟ್ಟದ ಪೂಜಾರಿ ಸಾತಾನಿ ನಾರಾಯಣಯ್ಯ, ಎಲೆಯಡಿಕೆಗಾಗಿ ಎಂಥ ಕೆಲಸವನ್ನಾದರೂ ಬಿಟ್ಟು ಅರ್ಧ ಮೈಲಿಯಾದರೂ ಓಡಿ ಹೋಗುವ ಮಾದ, ಬಿಸಿನೀರು ಹುಡುಕಲಿಕ್ಕಾಗಿ ಕೋಲಿನ ತುದಿಗೆ ಚೌಕವನ್ನು ಸಿಕ್ಕಿಸಿಕೊಂಡು ಮನೆಯಿಂದ ಮನೆಗೆ ತಿರುಗುವ ನಿಶಾನೆ ಮುಶೇಗಾರಪ್ಪ, ನಾಗರಿಕ ಜೀವನದ ಕೃತಕತೆಗೆ ರೋಸಿ ಹೋಗಿ ಹಳ್ಳಿಯ ನಿರ್ಮಲ ಜೀವನಕ್ಕೆ ಬೆರಗಾಗಿ ಮೇಲಿಂದ ಮೇಲೆ ಹಳ್ಳಿಗೆ ಬರುತ್ತಿರುವ ಪದವೀಧರ ಗುಂಡ, ಆತಿಥ್ಯಕ್ಕೆ ಮತ್ತು ಔದಾರ್ಯಕ್ಕೆ ಹೆಸರಾದ ವಂಶದಲ್ಲಿ ಹುಟ್ಟಿದ ಜೋಡಿದಾರರು, ಸದಾ ತೃಪ್ತನೂ ವಿನೋದಶೀಲನೂ ಪರೋಪಕಾರ ಬುದ್ಧಿಯುಳ್ಳವನೂ ಪ್ರಾಸಪ್ರಿಯನೂ ವಿಧುರನೂ ಆದ ನಾಣಿ. "ನಾವು ಕಟ್ಕೊಂಡ ಮನೆಗೆ ನಾವೇ ಬಾಡಿಗೆ ಕಂದಾಯ ಎಲ್ಲಾ ಕೊಡಬೇಕಾ?" (ಪುಟ ೧೯೩): ಬೀದಿ, ಗುಡಿಸೋ ಆಳು ನಮಗೆ ಬೇಡ, ಕಂದಾಯಾನೂ ಕೊಡೋದಿಲ್ಲ ಎಂದು ಪಂಚಾಯ್ತಿಯಲ್ಲಿ ಪ್ರತಿಭಟಿಸುವ ಬೋರೇಗೌಡ, ಮದುವೆಯಾದ ಕೆಲವು ತಿಂಗಳಲ್ಲಿಯೇ ವಿಧವೆಯಾಗಿ, ಊರಿನ ಅನಾಥೆಯಾಗಿ ಊರವರ ಕಷ್ಟಕ್ಕೆಲ್ಲ ಬೇಕಾದವಳಾಗಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರಳಾಗಿರುವ ಕಮಲಮ್ಮ—ಈ ಒಂದೊಂದು ವ್ಯಕ್ತಿಯೂ ಹಳ್ಳಿಯ ಬಾಳಿನ ಒಂದೊಂದು ಮುಖವನ್ನು ಪ್ರತಿನಿಧಿಸುವ, ಪ್ರತಿಬಿಂಬಿಸುವ ಹಿರಿಯ ಚೇತನ. ಅವರ ಮನಸ್ಸು ತಿಳಿ. ಅವರ ನಡೆ ತನಿ, ಅವರ ನುಡಿ ತಂಪು. ಅವರಲ್ಲಿ ಕಪಿ ಬಗೆಗಾಗಲಿ, ಕಪ್ಪು ನುಡಿಗಾಗಲಿ, ತಪ್ಪು ನಡೆಗಾಗಲಿ ಅವಕಾಶವಿಲ್ಲ. ರಾಜಕೀಯ ಇನ್ನೂ ಹಳ್ಳಿಗಳಿಗೆ ತಲೆ ಹಾಕದ ಕೃತಯುಗದ ಜನ ಅವರು. ಸಿರಿಯಲ್ಲಿ ಹಿರಿಯನ್ನು ಬಡತನದಲ್ಲಿ ಸುಖವನ್ನು ಕಂಡ ಜನ ಅವರು. ಹಳ್ಳಿಯಲ್ಲಿಯೂ ಹೆಂಗಸರ ಸಭೆ ನಡೆಯುವುದುಂಟು. ಆದರೆ ಅದು ನಗರದಲ್ಲಿ ನಡೆಯುವಂಥದಲ್ಲ. ಪತಿವ್ರತಾಧರ್ಮದ ಸ್ವರೂಪವನ್ನು ಹೆಂಗಸರಿಗೆ ತಿಳಿಸುವುದೇ ಆ ಸಭೆಯ ಉದ್ದೇಶ.

ಹಳ್ಳಿಯ ಕಂದಾಚಾರದ ಪದ್ಧತಿಗಳು, ಓಬೀರಾಯನ ಕಾಲದ ಭಾವನೆಗಳು, ಹಬ್ಬಹರಿದಿನಗಳಲ್ಲಿ ಆಚರಿಸುವ ರೂಢಿಗಳು, ಬ್ರಾಹ್ಮಣರ ಹಾಗೂ ಬ್ರಾಹ್ಮಣೇತರರ ಮನೆಗಳಲ್ಲಿ ನಡೆಯುವ ಮದುವೆಯ ಸಂಪ್ರದಾಯಗಳು, ಜಾತ್ರೆಯಲ್ಲಿ ನಡೆಯುವ ಹರಿಸೇವೆ ಹಾಗೂ ಮಣೆ ಹಾಕುವುದು, ಬಯಲಾಟದ ವಿವರಗಳು, ಕಾಫಿ ಕುಡಿಯುವುದರ ದೊಡ್ಡಸ್ತಿಕೆ, ಉಪಾಧ್ಯರಿಗೆ ಶಿಷ್ಯರು ಕೊಡುವ ಉಪದ್ರ, ರೈತನ ಮನೆಯ ಉಪ್ಪಿಟ್ಟಿನ ಅಂದಚೆಂದಗಳು ಹಾಗೂ ಅವನ ಬಾಳು ಬದುಕು—ಈ ಎಲ್ಲ ಸಂಗತಿಗಳು ತದ್ವತ್ತಾಗಿ ಸಂಕ್ಷೇಪವಾಗಿಯಾದರೂ ವಿಶದವಾಗಿ ಚಿತ್ರಣಗೊಂಡಿವೆ. ಮರೆಮಾಚಿಕೆಯಾಗಲಿ, ಉತ್ಪ್ರೇಕ್ಷೆಯಾಗಲಿ, ಹಳಿಕೆಯಾಗಲಿ, ತಳುಕಾಗಲೀ ಗೊರೂರವರ ಜಾಯಮಾನಕ್ಕೆ ಹೊರಗು. ಅವರ ಕತೆಗಳನ್ನಾಗಲಿ ಚಿತ್ರಗಳನ್ನಾಗಲಿ ಪ್ರಬಂಧಗಳನ್ನಾಗಲಿ ಓದುವಾಗ ವಾಸ್ತವ ಚಿತ್ರ ನಮ್ಮ ಕಣ್ಣಿಗೆ ಕಟ್ಟಿದಂತಾಗುತ್ತದೆ. ವಿವಿಧ ಜಾತಿಯ ಜನರನ್ನು ವರ್ಣಿಸುವಾಗ ಅವರಲ್ಲಿ ಅಂಧಾಭಿಮಾನಕ್ಕಾಗಲಿ ಪೂರ್ವಾಗ್ರಹಕ್ಕಾಗಲಿ ಜುಗುಪ್ಸೆ

ಗಾಗಲಿ ಎಳ್ಳಷ್ಟೂ ಎಡೆಯಿಲ್ಲ; ಎಲ್ಲರಲ್ಲಿಯೂ ಒಳ್ಳೆಯದನ್ನೇ ಕಾಣುವ ಹಿರಿತನ ಮತ್ತು ಸಜ್ಜನಿಕೆ ಅವರ ಸ್ವಭಾವವಾಗಿದೆ.

ಮೊದಲೇ ತಿಳಿಸಿದಂತೆ ಗ್ರಾಮ ಜೀವನವೇ ಹತ್ತಾರು ಮಹಾಭಾರತಗಳಿಗೆ ವಸ್ತುವಾಗುತ್ತದೆ: ನೂರಾರಲ್ಲ ಸಾವಿರಾರು ಸಮಾಜ ವಿಜ್ಞಾನದ ವಿದ್ಯಾರ್ಥಿಗಳಿಗೆ ಗ್ರಾಸವಾಗುತ್ತದೆ. ಅದೊಂದು ಅಕ್ಷಯ ನಿಧಿ. ಆದರೆ ಅದನ್ನು ನೋಡುವ ಕಣ್ಣಿರಬೇಕು, ಗ್ರಹಿಸುವ ಮನಸ್ಸಿರಬೇಕು, ಜತೆಗೆ ಸಹಾನುಭೂತಿ ಬೇಕು. ಗೊರೂರರ ಗರುಡದೃಷ್ಟಿಗೆ ಗೋಚರವಾಗದ ವಸ್ತುವಿಲ್ಲ, ಸಂಗತಿಯಿಲ್ಲ, ರೂಢಿಯಿಲ್ಲ. ಆದ್ದರಿಂದ ಅವರ ಹಳ್ಳಿಗೆ ಸಂಬಂಧಿಸಿದ ಈ ಕೃತಿ ಸಮುದಾಯ ಮಹಾ ವಿಶ್ವಕೋಶವಾಗುತ್ತದೆ.

ಅವರ ಶೈಲಿಯ ಬಗೆಗೆ ಒಂದು ಮಾತು ಹೇಳಲೇಬೇಕು. ವಸ್ತುವಿಗೆ ತಕ್ಕಂಥ ಹಿತಮಿತವಾದ ಮೃದು ಶೈಲಿ; ಪ್ರಸಾದ ಮಾಧುರ್ಯಗಳು ಅದರ ಗುಣಗಳು, ದ್ರಾಕ್ಷಾಪಾಕ ಅದರ ಜೀವಾಳ. ಅವರ ಕಣ್ಣಿನ ಅನುಭವ ಇಲ್ಲಿ ಮಾತಿನ ಅನುಭವವಾಗಿ ಪರಿಣಮಿಸುವುದರಿಂದ ಅದು ಸಕಲರಿಗೂ ಹೃದ್ಯ. ಅವರ ಯಾವ ಕೃತಿಯಲ್ಲಾದರೂ ಸಂಯಮ. ಎಲ್ಲಿಯಾದರೂ ಸಂಯಮ, ಗುಲ್ಲುಗೊಂದಲಗಳಾಗಲಿ ವೇಗ ರಭಸಗಳಾಗಲಿ ಗುಡುಗು ಸಿಡಿಲುಗಳಾಗಲಿ ಇಲ್ಲ. ಯಾರನ್ನಾದರೂ ವಶಪಡಿಸಿಕೊಳ್ಳುವಂಥ ಸುಕೋಮಲವಾದ ಕಾಂತ ಗುಣ ಸರ್ವತ್ರ ಪರಿಮಳಿಸುತ್ತದೆ.

ಗೊರೂರರ ಅನುಭವ ಸಂಪತ್ತು ಅಕ್ಷಯವಾದದ್ದು, ಅವರ ಹಾಸ್ಯರಸ ಎಂದೂ ಬತ್ತದುದು ಎಂಬ ಸಂಗತಿ ಅವರನ್ನು ಹತ್ತಿರದಿಂದ ಬಲ್ಲವರಿಗೆಲ್ಲ ತಿಳಿದಿದೆ: ಅದೆಲ್ಲ ಸಾರಸ್ವತ ಕ್ಷೇತ್ರಕ್ಕಿಳಿದು, ಕನ್ನಡದ ಆಸ್ತಿಯಾಗಲೆಂದು, ಕನ್ನಡ ಜನತೆ ಬಯಸುತ್ತದೆ. ಆ ಬಯಕೆ ಈಡೇರಲೆಂದು ನಾನು ಹಾರೈಸುತ್ತೇನೆ.

'ಬೈಲಹಳ್ಳಿ ಸರ್ವೆ'

ಪ್ರಭುಶಂಕರ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮ ಹಾಸ್ಯಲೇಖಕರ ಅಗ್ರಪಂಕ್ತಿಯಲ್ಲಿ ಇದ್ದಾರಷ್ಟೆ. ಅವರ ಯಶಸ್ಸಿಗೆ ಕಾರಣವಾಗಿರುವ ಅಂಶಗಳು ಹಲವು: ನಿಷ್ಕಪಟವಾದ, ಎಂದರೆ ಯಾವ ಕೊಂಕೂ ಇಲ್ಲದ ಹಾಸ್ಯ. ಎರಡನೆಯದು ಅಪ್ರಯತ್ನಪೂರ್ವಕವಾದ ಹಾಸ್ಯ. ಎಂದರೆ ಕಲಾತ್ಮಕವಾಗಿ ಅವರು ಹಾಸ್ಯ ಸಂದರ್ಭಗಳನ್ನು ಸೃಷ್ಟಿಸದೆ, ಸಹಜವಾಗಿಯೇ ಹಾಸ್ಯಮಯವಾಗಿರುವ ಸಂದರ್ಭಗಳನ್ನು ಯಥಾವತ್ತಾಗಿ ದೃಷ್ಟಿಸುವುದು. ಮೂರನೆಯದು ಕಾಲ ಮತ್ತು ಪರಿಸರಗಳ ದೃಷ್ಟಿಯಿಂದ ಸಂಪ್ರದಾಯಸ್ಥರಾಗಿರಬೇಕಾದವರು ಪ್ರಾಚೀನ ಮತ್ತು ಅರ್ವಾಚೀನ ನಡೆವಳಿಕೆಗಳೆಲ್ಲವನ್ನೂ ನಿಷ್ಪಾಕ್ಷಿಕವಾಗಿ ನೋಡಿರುವುದು. ಎಂದರೆ ಅವರಿಗೆ ಯಾವ "ಕಮಿಟ್‌ಮೆಂಟೂ" ಇಲ್ಲ. ನಾಲ್ಕನೆಯದು, ತುಂಬ ಮುಖ್ಯವಾದದ್ದು, ಕಂಡದ್ದನ್ನು ಅಥವಾ ಕಲ್ಪಿಸಿಕೊಂಡಿದ್ದನ್ನು, ಮೊದಲನೆಯದೇ ಹೆಚ್ಚು, ಸ್ವಾರಸ್ಯವಾಗಿ ನಿರೂಪಿಸುವುದು. ಈ ನಿರೂಪಣೆಯಲ್ಲೂ ಸಹಜತೆಯಿದೆಯೇ ಹೊರತು ಕಲೆಯ ಸೃಷ್ಟಿಗೆ ಇರಬೇಕಾದ ಕೃಷಿಯಿಲ್ಲ. ಇತರರಲ್ಲಿ ಅರಕೆಯಾಗಬೇಕಾದ ಈ ಅಂಶ ಗೊರೂರರ ಬರವಣಿಗೆಗೆ ಭೂಷಣವಾಗಿದೆ ಎಂಬುದು ಗಮನಿಸಬೇಕಾದ ವಿಷಯ. ಐದನೆಯದು, ಕಥೆಯ ಓಟಕ್ಕೆ ಭಂಗತರುತ್ತದೆ ಎಂಬ ಭಯವು ಕಿಂಚಿತ್ತೂ ಇಲ್ಲದೆ ಉಪಕಥೆಗಳನ್ನೂ, ಇತರ ವೃತ್ತಾಂತಗಳನ್ನೂ ಹೇಳುತ್ತಾ ಹೋಗುವುದು.

'ಬೈಲಹಳ್ಳಿ ಸರ್ವೆ'ಯಲ್ಲಿ ಮೇಲಿನ ಈ ಎಲ್ಲ ಅಂಶಗಳೂ ಯಥೇಷ್ಟವಾಗಿವೆ. ಆದ್ದರಿಂದಲೇ ಅದು ಅವರ ಇತರ ಬರಹಗಳಂತೆ ನಮ್ಮ ಆಸಕ್ತಿಯನ್ನು ಕೊನೆಯವರೆಗೆ ಸೆಳೆದುಕೊಳ್ಳುತ್ತದೆ. 'ಹಳ್ಳಿಯ ಚಿತ್ರಗಳು' ಕೃತಿಯ ಪ್ರಮಾಣದ ಯಶಸ್ಸು ಇಲ್ಲಿ ಲೇಖಕರಿಗೆ ದೊರಕದೇ ಹೋಗಿರಬಹುದು. ಆದರೆ ಓದದೇ ಹೋದರೆ ಏನೂ ನಷ್ಟವಿಲ್ಲ ಎನ್ನುವಂಥ ಕೃತಿಯಲ್ಲ ಇದು.

ಬೈಲಹಳ್ಳಿ ಒಂದು ಸಣ್ಣ ಗ್ರಾಮ. ಲೇಖಕರ ಊರಿನಿಂದ ಪೂರ್ವಕ್ಕೆ ಏಳು ಮೈಲಿ ದೂರದಲ್ಲಿದೆ. ಅಲ್ಲಿ ನಡೆದ ಸರ್ವೆ (ಭೂಮಿಯ ಅಳತೆ) ಈ ಕೃತಿಯ ವಸ್ತು. ಆ ಹಳ್ಳಿಯವರನ್ನೂ ಅದನ್ನು ಅಳೆಯಲು ಬಂದ ಮೋಜಣಿದಾರರನ್ನೂ ಕನ್ನಡಿಗರ ಸ್ಮೃತಿಯಲ್ಲಿ ಅಮರರನ್ನಾಗಿ ಮಾಡಿದ್ದಾರೆ ಗೊರೂರರು.

ಆ ಹಳ್ಳಿಯು ನರಸಿಂಹಾಚಾರ್ಯರಿಗೆ ಜೋಡಿಯಾಗಿ ದೊರೆತದ್ದೇ ಎಂದೂ ಮರೆಯಲು ಸಾಧ್ಯವಿಲ್ಲದ ಪ್ರಸಂಗ. ಇಂಥದನ್ನೆಲ್ಲ ನಾವು ಲೇಖಕರ ಮಾತುಗಳಲ್ಲೇ ಕೇಳಬೇಕು :

> ಬೈಲಹಳ್ಳಿಯಂತಹ ಉಪಯೋಗವಿಲ್ಲದ ಗ್ರಾಮವು ದೊಡ್ಡಮನೆ ಶಾಮೈಯಂಗಾರ್ರ ವಂಶದವರಿಗೆ ದೊರೆಯುವುದಕ್ಕೆ ಆ ಗ್ರಾಮವನ್ನು ಜೋಡಿಯಾಗಿ ಪಡೆದ ಆ ವಂಶದ ಮೂಲಪುರುಷರು ಕಾರಣವೇ ಹೊರತು ಮಹಾರಾಜರ ದಯೆ ಕಡಿಮೆಯಾಗಿದ್ದಿತೆಂದಲ್ಲ. ಶ್ಯಾಮಯ್ಯಂಗಾರ್ರ ಮುತ್ತಜ್ಜಂದಿರು ನರಸಿಂಹಾಚಾರ್ಯರಿಗೆ ಆ ಗ್ರಾಮವು ಜೋಡಿಯಾಗಿ ದೊರೆಯಿತೆಂದು ಸರ್ಕಾರಿ ಲೆಕ್ಕಗಳಲ್ಲಿ ಇದೆ. ನಮ್ಮ ಊರಿನವರು ಈ ನರಸಿಂಹಾಚಾರ್ಯರನ್ನು ಕುರಿತು, 'ನರಸಯ್ಯ' ಎಂದು ಹೇಳುವುದೇ ವಾಡಿಕೆ. ಮುಮ್ಮಡಿ ಕೃಷ್ಣರಾಜ ಒಡೆಯರು ಅರಮನೆಯನ್ನು ಕಟ್ಟಿಸುತ್ತಿರುವಾಗ, ನರಸಯ್ಯನವರು, ರಾಜಭಕ್ತಿಪ್ರೇರಿತರಾಗಿ ನಮ್ಮ ಮಲೆನಾಡಿನಿಂದ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಸಾಗಿಸಿಕೊಂಡು ಹೋಗಿ ಮಹಾರಾಜರಿಗೆ ಒಪ್ಪಿಸಿದರು. ಮಹಾರಾಜರು ಸಂತುಷ್ಟರಾಗಿ "ನಿಮಗೆ ಏನು ಬೇಕು ?" ಎಂದು ಕೇಳಿದರು. ನರಸಯ್ಯನವರು ಬಹಳ ವೈದಿಕರು. ನಿತ್ಯ ನೈಮಿತ್ತಿಕ ಕರ್ಮಗಳನ್ನೂ ವ್ರತಾದಿಗಳನ್ನೂ ಚಾಚೂ ತಪ್ಪದೆ ಮಾಡುತ್ತಿದ್ದವರು. ಆ ಕರ್ಮಗಳಿಗೆಲ್ಲ ಅವರಿಗೆ ದರ್ಭೆ ಅಗತ್ಯವಾಗಿ ಬೇಕಾಗಿದ್ದಿತು. ಅರಮನೆಗೆ ಮರದ ದಿಮ್ಮಿಗಳನ್ನು ಸಾಗಿಸುವಾಗ ದಾರಿಯಲ್ಲಿ ಬೈಲಹಳ್ಳಿಯಲ್ಲಿ ಒಂದು ಹೊಲದ ಬೇಲಿಯಲ್ಲಿ ಬೇಕಾದಂತೆ ದರ್ಭೆ ಬೆಳೆದಿದ್ದುದನ್ನು ಅವರು ನೋಡಿದ್ದರು. ವೈದಿಕ ಕರ್ಮಗಳಿಗೆ ಬೇಕಾದ ದರ್ಭೆಗಾಗಿ ಹೊಲದ ಯಜಮಾನನಾದ ರೈತನನ್ನು ಯಾಚಿಸಲು ಅವರಿಗೆ ಇಷ್ಟವಿರಲಿಲ್ಲ. ಆ ದಾರಿಯಲ್ಲಿ ಹೋಗುವಾಗ ಅನೇಕ ಸಲ 'ಈ ಹೊಲವು ನನ್ನದಾದರೆ' ಎಂದುಕೊಂಡಿದ್ದರು. ಮಹಾರಾಜರು "ಏನು ಬೇಕು ?" ಎಂದು ಕೇಳಿದ ಕೂಡಲೆ ನರಸಯ್ಯನವರು "ಬೈಲಹಳ್ಳಿಯ ಊರ ಮುಂದಲ ಹೊಲ ಅಪ್ಪಣೆಯಾಗಬೇಕು" ಎಂದರು. ಮಹಾರಾಜರಿಗೆ ಕತೆಯೆಲ್ಲಾ ತಿಳಿಯಿತು. ಅವರು ನಗುತ್ತಾ "ಬೈಲಹಳ್ಳಿಯನ್ನು ನಿಮಗೆ ಜೋಡಿ ಹಾಕಿಕೊಟ್ಟಿದ್ದೇನೆ" ಎಂದು ಹೇಳಿದರು. ನರಸಯ್ಯನವರು ಊರಿಗೆ ಬಂದ ಮೇಲೆ ನಮ್ಮವರೆಲ್ಲಾ ಅವರನ್ನು ಚೆನ್ನಾಗಿ ಹಾಸ್ಯಮಾಡಿ "ಮಹಾರಾಜರು ಪ್ರಸನ್ನರಾಗಿದ್ದಾಗ ಯಾವುದಾದರೂ ಫಲವತ್ತಾದ ದೊಡ್ಡ ಗ್ರಾಮವನ್ನು ತೆಗೆದುಕೊಳ್ಳಬಾರದಾಗಿತ್ತೆ. ಶುದ್ಧ ವೈದಿಕ ಗೊಡ್ಡು" ಎಂಬುದಾಗಿ

ಹಾಸ್ಯಮಾಡಿದರು. ನರಸಯ್ಯನವರು "ನನಗೆ ಬೇಕಾಗಿದ್ದುದು ದರ್ಭೆ ಹುಲ್ಲು ದೊಡ್ಡ ಗ್ರಾಮವಲ್ಲ. ಮಹಾರಾಜರು ಕೃಪೆಮಾಡಿ ಗ್ರಾಮವನ್ನೇ ಕೊಟ್ಟರು" ಎಂದರು. (ಪುಟ ೨೯–೩೦)

ಆ ಗ್ರಾಮದ ವರ್ಣನೆ ಸೊಗಸಾಗಿದೆ.

ಬೈಲಹಳ್ಳಿಯಲ್ಲಿರುವ ಮನೆಗಳು ಮುವ್ವತ್ತು. ಹುಲ್ಲಿನ ಮನೆಗಳು ಇಪ್ಪತ್ತಾರು. ಹಂಚಿನ ಮನೆಗಳು ಮೂರು. ಉಳಿದ ಒಂದು ಮನೆಗೆ ಹಂಚೂ ಇಲ್ಲ, ಹುಲ್ಲೂ ಇಲ್ಲ. ಅದು ಬರಿಯ ನಾಲ್ಕು ಗೋಡೆಗಳ ನಿವೇಶನವೂ ಅಲ್ಲ. ಹುಲ್ಲಿನ ಸೂರು ಯಾವಾಗಲೋ ಹೋಗಿಬಿಟ್ಟಿದೆ. ಆ ಮನೆ ಕಾಳಿಯದು. ಕಾಳಿಯು ಒಂದು ಹಳೆಯ ಗಾಡಿ ಕಮಾನನ್ನು ಆ ನಾಲ್ಕು ಗೋಡೆಗಳಿಂದ ಕೂಡಿದ ಆವರಣದಲ್ಲಿ ಇಟ್ಟುಕೊಂಡು ಅದರಲ್ಲಿ ವಾಸ ಮಾಡುತ್ತಾಳೆ. ಬೇಸಿಗೆ ಕಾಲದಲ್ಲಿ ಅವಳು ಕಮಾನಿನ ಹೊರಗಡೆ ಅಡಿಗೆ ಮಾಡಿಕೊಳ್ಳುತ್ತಾಳೆ. ಆದರೆ ಮಳೆಗಾಲದಲ್ಲಿ ಮಳೆ ನೀರೆಲ್ಲಾ ಕಮಾನಿನ ಮೂಲಕ ಒಳಕ್ಕೆ ನುಗ್ಗುವಾಗ ಅವಳೆಲ್ಲಿ ಅಡಿಗೆಮಾಡಿಕೊಳ್ಳುತ್ತಾಳೊ ದೇವರೇ ಬಲ್ಲ! ಗಾಡಿಯ ಕಮಾನಿಗೆ ಯಾವತ್ತು ಬೆಂಕಿಯ ಕಿಡಿ ತಗುಲಿ ಅದು ಉರಿದು ಬೂದಿಯಾಗುತ್ತದೊ ಎಂಬುದಾಗಿ ನನಗೆ ಹೆದರಿಕೆಯುಂಟಾಗಿದೆ. (ಪುಟ ೨೧)

ಇಂಥ ಗ್ರಾಮವನ್ನೂ ಅಳೆಯಲು ಸರ್ಕಾರದ ಹುಕುಮ್ಮಿನಂತೆ ಮೋಜಿನಿದಾರರು ಬಂದರು. ಅವರು ಬಂದ ರೀತಿ ಅವರ ಉದ್ಯೋಗಕ್ಕೆ ಸ್ವಲ್ಪವಾದರೂ ಗೌರವ ತರುವಂಥದಾಗಿರಲಿಲ್ಲ. ಏಕೆಂದರೆ ಅವರು ಬಂದದ್ದು ಹೀಗೆ:

ನಾಲ್ಕು ಐದು ದಿನಗಳ ನಂತರ ಒಂದು ಬೆಳಿಗ್ಗೆ ಆರು ಗಂಟೆಗೆ ಮೋಜಿನಿದಾರರೂ ಅವರ ಸ್ನೇಹಿತರೊಬ್ಬರೂ ನಮ್ಮ ಊರಿಗೆ ಹತ್ತು ಮೈಲಿ ಇರುವ ಮಾವಿನಕೆರೆ ಸ್ಟೇಷನ್ನಿನಿಂದ ನಡೆದುಕೊಂಡು ಬಂದರು.

ಜೋಡಿದಾರರ ಮನೆಯ ಮುಂದೆ ದೇವಸ್ಥಾನವಿದೆ. ಸ್ವಲ್ಪ ಬಿಸಿಲು ಹತ್ತಿದ ಕೂಡಲೇ ಮೋಜಿನಿದಾರರೂ ಅವರ ಜತೆಯಲ್ಲಿ ಬಂದಿದ್ದ ಅವರ ಸ್ನೇಹಿತರೂ ದೇವಸ್ಥಾನದ ಮುಂದೆ ಬಿಸಿಲಿನಲ್ಲಿ ಕುಳಿತು ತಮ್ಮ ಬಟ್ಟೆಗಳಲ್ಲಿ ಜೇನುಹುಳುಗಳ ಮುಳ್ಳುಗಳಂತೆ ಸೇರಿಕೊಂಡಿದ್ದ ಪಾಪಾಸುಕಳ್ಳಿಯ ಮುಳ್ಳುಗಳನ್ನೆಲ್ಲಾ ಆಯುತ್ತಿದ್ದರು. ಮಧ್ಯೆ ಮಧ್ಯೆ ಮೋಜಿನಿದಾರರು ತಮ್ಮ ದೇಹಕ್ಕೆ ಚುಚ್ಚಿಕೊಂಡಿದ್ದ ಪಾಪಾಸು ಕಳ್ಳಿಯ ಮುಳ್ಳುಗಳನ್ನು ಕೀಳುತ್ತಿದ್ದರು. ಆಗಿನ ಅವರ ಮುಖಭಾವವು ಬಹಳ ವಿನೋದಕರವಾಗಿತ್ತು. (ಪುಟ ೨೪)

ಹಾಗೆ ಬಂದದ್ದಕ್ಕೆ ಕಾರಣ ಇನ್ನೂ ಸ್ವಾರಸ್ಯವಾಗಿದೆ. ನಡೆಯುತ್ತ ನಡೆಯುತ್ತ ಇವರು ರಾತ್ರಿಯಲ್ಲಿ ತಿಳಿಯದೆ ಆದಿಕರ್ನಾಟಕರ ಕೇರಿಗೆ ಹೋಗಿ "ಬೈಲಹಳ್ಳಿಗೆ ದಾರಿ ಯಾವುದಯ್ಯ" ಎಂದು ಕೇಳಿದರು. ಆದಿಕರ್ನಾಟಕರೆಲ್ಲ "ಅಯ್ಗೋಳು ಹಟ್ಟಿಗೆ ಬಂದವ್ರೆ,

ಹಿಡ್ಕೊಳಿರ್ಲಿ" (ಪುಟ ೨೯) ಎಂಬುದಾಗಿ ಹೇಳಿಕೊಂಡು ಎದ್ದರು. ಇವರ ಪಲಾಯನ ಪರ್ವ ಪ್ರಾರಂಭವಾಯಿತು. ಒಂದಾಳುದ್ದದ ಬೇಲಿ ಅಡ್ಡ ಬಂದು ಪ್ರಾಣಭೀತಿಯಿಂದ ಇವರು ಅದನ್ನು ಹಾರಿದರು. ಬಚಾವಾಗಿ ಬಂದರು.

ಇಷ್ಟು ಕಷ್ಟಪಟ್ಟುಕೊಂಡು ಬಂದರೂ ಮೋಜಿನಿದಾರರಿಗೆ ಸರ್ಕಾರಿ ಕೆಲಸವನ್ನು ನಿರ್ವಹಿಸುವುದು ಸಾಧ್ಯವಾಗಲಿಲ್ಲ. ಕಟಾವಿನ ಕಾಲವಾದ್ದರಿಂದ ರೈತರಿಗೆ ಬಿಡುವಿಲ್ಲ ಎಂದು ಕುಂಟು ನೆಪ ಹೇಳಿ ಅವರನ್ನು ಸಾಗಹಾಕಲಾಯಿತು. ಆದರೆ ನಿಜವಾದ ಕಾರಣ ಬೇರೆ. ಅದರ ಕಾರಣವನ್ನು ಸುಬ್ಬೇಗೌಡನು ನಾಣಿಯೊಂದಿಗೆ ಗುಟ್ಟಾಗಿ ಹೇಳಿದನು :

"ಮೋಜಿನಿದಾರ್ರು, ಉಪಯೋಗಿಲ್ಲ, ಪುಳ್ಚಾರು. ಇಜಾರ, ಬೂಟ್ಸು, ಕೆಂಪು ತಲೆಯೋನ ಟೋಪಿ ಇವ್ರುಗಳನ್ನೆಲ್ಲಾ ಹಾಕಿಕೊಂಡು ಜಬರಾಗಿ ಬಂದಿದ್ರೆ ರೈತ್ರು ಹೆದರ್ಕೊಳ್ಳೋರು. ಇವರು ನಮ್ಮೂರ ಪೂಜಾರಿ ಹಂಗೆ ಪಟ್ಟೆ ಸುತ್ಕೊಂಡು ಮೆತ್ತಗವ್ರೆ. ಇವರ್ನ ಕರ್ಕೊಂಡು ಹೋದ್ರೆ ನಮ್ಮ ರೈತರು ಸುತರಾಂ ಬಗ್ಗೋಕಿಲ್ಲ. ಇವರು ಆಫೀಶ್‌ನಲ್ಲಿ ಬಿಳಿ ಕಾಜಿಗದ ಮೇಲೆ ಕಪ್ಪು ಹಚ್ಚೋಕೆ ಲಾಯಕ್ಕು. ಮೋಜಿನಿದಾರ್ರು ಮೀಸೆ ಕೂಡ ಬಿಟ್ಟಿಲ್ವಲ್ಲ. ಮುಂದಲ ಸಲ ಸ್ವಲ್ಪ ಜೋರಾದ ಆಫೀಸರ್ನ ಕರತನ್ನಿ ಸ್ವಾಮಿ" ಎಂದನು. ಅಂತೂ ಮೋಜಿನಿದಾರರು ಇನ್ನೂ ಸ್ವಲ್ಪ ಹೆಚ್ಚು ಜೋರಾಗಿದ್ದಿದ್ದರೆ ಆಗಲೇ ಪೈರು ಕಟಾವಿನ ಕಾಲವಾಗಿದ್ದರೂ ಸರ್ವೆ ನಡೆಸಬಹುದಾಗಿದ್ದಿತೆಂತಲೂ, ಅವರ ಜರ್ಬಿನ ಅಭಾವವೇ ತನಗೆ ನಿರುತ್ಸಾಹವನ್ನು ಉಂಟುಮಾಡಿತೆಂಬುದೂ ಸುಬ್ಬೇಗೌಡನ ಅಭಿಪ್ರಾಯವಾಗಿತ್ತು. (ಪುಟ ೩೦)

ಎರಡನೆಯ ಸಲ ಬಂದ ಮೋಜಿನಿದಾರರು ಬಹು ಜೋರಾದ ಇಸಮು :

ಅವರನ್ನ ನೋಡಿದ ಕೂಡಲೆ ಯಾರಿಗಾದರೂ ಭಯವುಂಟಾಗುತ್ತಿದ್ದಿತು. ಪುಷ್ಟವಾದ ದೇಹ, ಶಕ್ತಿಯು ಉಕ್ಕಿಬರುತ್ತಿದ್ದ ಅಂಗಾಂಗಗಳು, ಮುಖದ ಮೇಲೆ ತೋರುತ್ತಿದ್ದ ಒಂದು ಬಗೆಯ ಜರ್ಬು ಇವುಗಳನ್ನೆಲ್ಲಾ ನೋಡಿ ಪಟೇಲ್ ಸುಬ್ಬೇಗೌಡನಿಗೆ ಬಹಳ ಸಂತೋಷವಾಯಿತು. ಸುಬ್ಬೇಗೌಡನು ಜೋಡಿದಾರರೊಂದಿಗೆ "ಈ ಸಲ ಸರ್ವೆ ನಡಿತವೆ. ಈ ಹೊಸ ಸಾಹೇಬರನ್ನು ನೋಡಿದ ಕೂಡಲೆ ರೈತರೆಲ್ಲಾ ಹೆದರಿಕೊಂಡು ಒತ್ತಾಸೆ ಆಗ್ತಾರೆ" ಎಂದನು.

ಹೊಸದಾಗಿ ಬಂದಿದ್ದ ಅಧಿಕಾರಿಯ ಹೆಸರು ವಿನಾಯಕರಾಯ. ರೈತರು ಅವರನ್ನು ಸಾಹೇಬರೆಂದು ಕರೆಯುತ್ತಿದ್ದರು. ನಾಣಿಯು ಅವರನ್ನು 'ರಾಯರು' ಎನ್ನುತ್ತಿದ್ದನು. ರಾಯರು ಷರಾಯಿ ಕೋಟುಗಳನ್ನು ಧರಿಸುತ್ತಿದ್ದರು. ಬಿಸಿಲಿಗೆ ತಲೆ ಮರೆಯಾಗಿರಲೆಂದು ಫರಂಗಿಯವರ 'ಹ್ಯಾಟ'ನ್ನು ಧರಿಸುತ್ತಿದ್ದರು. ಅವರ ಬಳಿ ಗಡಿಯಾರ, ಫೌಂಟನ್‌ಪೇನಾ, ಕ್ಯಾಂಪುಕಾಟು ಮುಂತಾದುವುಗಳೆಲ್ಲ ಇದ್ದುವು.

> ಸಾಹೇಬರ ಕೈಕಾಲುಗಳು ಕುಳ್ಳು, ಹೊಟ್ಟೆ ಮುಂದಕ್ಕೆ ಬಂದಿದ್ದರೂ, ಅವರ ದೇಹದಲ್ಲಿ ಒಂದು ಬಗೆಯ ಗಾಂಭೀರ್ಯವೂ ಮುಖದಲ್ಲಿ ಒಂದು ವಿಧವಾದ ಗತ್ತೂ ಇದ್ದುವು. ಎಲ್ಲದಕ್ಕಿಂತ ಹೆಚ್ಚಾಗಿ ಪಟೇಲನಿಗೆ ಸಾಹೇಬರಲ್ಲಿ ಮೆಚ್ಚಿಕೆಯಾಗಿ ತೋರಿದುದು ಅವರ ಮೀಸೆ. ಸಾಹೇಬರ ಮೀಸೆಯನ್ನು ವರ್ಣಿಸುವುದಕ್ಕೆ ಆದಿಶೇಷನಿಗೂ ಅಸಾಧ್ಯವಾಗಿತ್ತು. ಮೀಸೆಯ ಮೇಲೆ ನಿಂಬೆಯ ಹಣ್ಣನ್ನು ಕುಣಿಸುವುದೇ ಮೀಸೆಯ ಪ್ರಾಶಸ್ತ್ಯದ ತುದಿ ಎಂದು ತಿಳಿದಿರುವವರನ್ನು ನೋಡಿ ಸಾಹೇಬರು "ಅದೇನು ಮಹಾ" ಎನ್ನುತ್ತಿದ್ದರು. (ಪುಟ ೩೦೪-೫)

ಇನ್ನು ಮುಂದಕ್ಕೆ ಬೈಲಹಳ್ಳಿಯ ಗ್ರಾಮಸ್ಥರ ವರ್ಣನೆ. ಕುಡುಕ ಕಮ್ಮಾರ ಸುಬ್ಬಾಚಾರಿ, ಬೈಲಹಳ್ಳಿಗೇ ರಾಣಿಯಾದ ಅವನ ಮಗಳು, ಅವಳಿಗೆ ಸಮಾನವಾದ ಅವಳ ನಾಯಿ, ಪಟೇಲ ಸುಬ್ಬೇಗೌಡ, ಕುರಿ ತಿಮ್ಮ, ವೇಷ್ಟಿ ಕುಬ್ಜ, ಇಂಜನ್ ಯಾಲಕ್ಕಿ, ಫಾರಿನ್ ಕಂಟ್ರಿ, ಬ್ಲಾಕ್ ಬರ್ಡ್—ಕೊನೆಯ ಐವರಿಗೆ ಆಯಾ ಹೆಸರು ಬರಲು ಕಾರಣಗಳು—ಇವೆಲ್ಲಾ ಕಥೆಗೆ ಜೀವ ತುಂಬತಕ್ಕ ಅಂಶಗಳು. ಒಂದನ್ನು ನೋಡಿ: "ಫಾರಿನ್ ಕಂಟ್ರಿ ಎನ್ನುವುದು ಪರದೇಶಿಗೌಡ ಎಂಬ ಹೆಸರಿನ ಇಂಗ್ಲಿಷ್ ತರ್ಜುಮೆ. ಹೆಸರುಗಳನ್ನು ಹೀಗೆ ಇಂಗ್ಲಿಷಿಗೂ ಸಂಸ್ಕೃತಕ್ಕೂ ಬದಲಾಯಿಸುವುದು ನಮ್ಮ ಊರಿನವರ ವಾಡಿಕೆ. ನಮ್ಮ ಊರ ಬಳಿ ಇರುವ ಸೆಟ್ಟಿಹಳ್ಳಿ ಸಂತೆಗೆ 'ವರ್ತಕ ಪಲ್ಲಿ ಜನಸ್ತೋಮ'ವೆಂದೂ ನೊಣವಿನ ಕೆರೆಗೆ 'ಮಕ್ಷಿಕ ತಟಾಕ'ವೆಂದೂ ನಮ್ಮವರು ಹೇಳುತ್ತಾರೆ." (ಪುಟ ೩೧೬)

ಈ ಎಲ್ಲ ಮಹನೀಯರನ್ನೂ ಒಂದು ಕಡೆ ಸೇರಿಸಿ ಸರ್ವೆ ಕೆಲಸಕ್ಕೆ ಒಪ್ಪಿಸಲು ಸಾಕುಬೇಕಾಯಿತು. ಅವರನ್ನೆಲ್ಲಾ ಒಂದು ಕಡೆ ಕಷ್ಟಪಟ್ಟು ಸೇರಿಸಿದ ಅನಂತರ ನಾಣಿಯು ಉಪನ್ಯಾಸ ಮಾಡಬೇಕಾಯಿತು:

> ಊರಿನ ಎಲ್ಲಾ ಮುಖಂಡರೂ ಅಂತೂ ಸೇರಿದನಂತರ ನಾಣಿಯು ಮೋಜಿನಿದಾರ ಸಾಹೇಬರು ಜೋಡಿಗ್ರಾಮವನ್ನು ಅಳೆಯುವುದಕ್ಕೆ ಬಂದಿದ್ದಾರೆಂದೂ, ರೈತರೆಲ್ಲಾ ದಿವಸಕ್ಕೆ ಒಂದಾಳಿನಂತೆ ಹದಿನೈದು ದಿನ ಅಳೆಯುವುದಕ್ಕೆ ಬೇಕಾದ ಶಂಕು ಸರಪಣಿ ಗೂಟಗಳು ಬಾವುಟ ಸುಣ್ಣದ ಮಡಕೆ ಹಾರೆ ಪಿಕಾಸಿ ಮುಂತಾದ ಸಲಕರಣೆಗಳೊಂದಿಗೆ ಸಿದ್ಧವಾಗಿ ಬರಬೇಕೆಂದೂ ಹೇಳಿದನು. ಮೋಜಿಸಿದಾರರು ಸರ್ವೆ ನಡೆಸಲು ಬಂದಿರುವ ಸಮಾಚಾರವನ್ನು ಕೇಳಿದೊಡನೆಯೆ ರೈತರಲ್ಲಿ ಗುಜುಗುಜು ಪ್ರಾರಂಭವಾಯಿತು. ಫಾರಿನ್ ಕಂಟ್ರಿಯು "ನಮ್ಗೆ ಸರ್ವೆನೂ ಬೇಡ ಗಿರ್ವೆನೂ ಬೇಡ. ಸರ್ವೆಮಾಡಿದ್ರೆ ಜಮೀನು ಹೆಚ್ಚೋಕಿಲ್ಲ. ಇದೆಲ್ಲಾ ಜೋಡಿದಾರ್ರು ಕಂದಾಯ ಹೆಚ್ಚಿಸೋಕೆ ಮಾಡಿರೊ ಉಪಾಯ" ಎಂದನು. ಇಂಜನ್ ಯಾಲಕ್ಕಿಯು "ನಮ್ಮ ನಮ್ಮ ಜಮೀನ್ನ ನಾವೇ ಅಳೆದು ಇಷ್ಟೆ ಆರು ಉಕ್ಕಿ ನೆಲ ಆಯ್ತೆ ಅಂತ ಹೇಳ್ತೀವಿ. ನಮಗೆ ಸರಪಣಿನೂ ಬೇಡ, ಶಂಕೂ ಬೇಡ, ನಿಶಾನೆನೂ

ಬೇಡ" ಎಂದನು. ಕುರಿ ತಿಮ್ಮನು "ಜಮೀನು ಯಾಕ್ಸ್ವಾಮಿ ಅಳೆಯೋದು. ಭೂಮಿತಾಯಿ ಅಳೆಯೋದು ಪಾಪ ಸ್ವಾಮಿ. ಆಯಸ್ಸು ಕ್ಷೀಣಿಸ್ತದೆ. ಮಾಡಬಾರ್ದ ಕೆಲ್ಸ ಮಾಡಿದ್ರೆ ಆಗ್ಬಾರ್ದ್ದು ಆಯ್ತದೆ" ಎಂದನು. ಇವರ ಮಾತುಗಳನ್ನು ಕೇಳಿ ಮೋಜಿನಿದಾರರಿಗೆ ಬಹಳ ಸಿಟ್ಟು ಹತ್ತಿತು. ಅವರು ಮೀಸೆಯನ್ನು ಹುರಿ ಮಾಡುತ್ತಾ ಒಂದು ಸಲ ಘರ್ಜಿಸಿದರು. ನಾಣಿಯು ರೈತರ ಮನಸ್ಸಿಗೆ ಹಿಡಿಯು ವಂತೆ ಬಹಳ ಚೆನ್ನಾಗಿ ಉಪನ್ಯಾಸ ಮಾಡಿದನು. ಇನ್ನು ಸ್ವಲ್ಪ ಹೊತ್ತು ಚರ್ಚೆ ನಡೆದನಂತರ ರೈತರೆಲ್ಲಾ ಸರ್ವೆಗೆ ಸಹಾಯ ಮಾಡಲು ಒಪ್ಪಿಕೊಂಡರು. ನಾಣಿಯು—

ಮನೆಗೊಂದಾಳು
ಅಳೀಬೇಕು ಪಾಳು
ಇಲ್ದಿದ್ರೆ ಗೋಳು
ನಾ ಹೇಳೋದು ಕೇಳು.

ಎಂದನು.

ರೈತರೆಲ್ಲಾ ನಕ್ಕುದನ್ನು ಕಂಡು ನಾಣಿಯು ಪುತ್ತೆ—

ಈಗ್ಯಾಕೆ ನಗು
ಅಳೀಬೇಕು ಲಗು
ಅಳದ್ಮೇಲೆ ನಗು
ನಾ ಹೇಳ್ತೇನೆ ಮಗು

ಎಂದನು.

ರೈತರೆಲ್ಲಾ ಸರದಿಯಂತೆ ಅಳೆಯುವುದಕ್ಕೆ ಬರಬೇಕೆಂದೂ ಬರದವರಿಗೆ ದಿನಕ್ಕೆ ಮೂರು ಆಣೆ ದಂಡವನ್ನು ವಿಧಿಸಬೇಕೆಂದೂ ರೈತರ ಅನುಮತಿಯಿಂದಲೇ ತೀರ್ಮಾನವಾಯಿತು. (ಪುಟ ೩೧೭-೮)

ಹೀಗೆ ಸರ್ವೆ ಕೆಲಸ ಪ್ರಾರಂಭವಾದದ್ದು ಸುಸೂತ್ರವಾಗಿ ಮುಂದುವರಿಯಿತು, ನಿಜ. ಆದರೆ ಅದು ಬರೀ ಸಾತ್ವಿಕವಾದುದಾಗಿರಲಿಲ್ಲ. ರಜಸ್ಸು, ತಮಸ್ಸುಗಳೂ ಅಲ್ಲಿ ಯಥೇಚ್ಛವಾಗಿದ್ದುವು. ಆದರೆ ನೋಡುವ ಕಣ್ಣು ಹಾಸ್ಯವನ್ನೇ ಹುಡುಕುವಂಥದಾಗಿ ಅಲ್ಲಿಯೂ ಸ್ವಾರಸ್ಯಕ್ಕೆ ಅಭಾವವಿರಲಿಲ್ಲ, ಕೇಳಿ :

ರಾಯರು (ಮೋಜಿನಿದಾರರು) ಸಿಟ್ಟಿನ ಸ್ವಭಾವದವರಾದುದರಿಂದ ಭಯಂಕರವಾಗಿ ರಾವಣನಂತೆ ಕೂಗುತ್ತಿದ್ದರು. ಎಷ್ಟೋ ಮಂದಿ ರೈತರಿಗೆ "ಗಳು ಸರಿಯಾಗಿ ಹಿಡಿ ಯಲಿಲ್ಲ. ನವಪಣಿ ಸರಿಯಾಗಿ ಎಳೆಯಲಿಲ್ಲ, ಸುಣ್ಣ ಚೆನ್ನಾಗಿ ಬಳಿಯಲಿಲ್ಲ" ಎಂಬ ಕಾರಣದಿಂದ ಏಟುಗಳು ಬೀಳುತ್ತಲೇ ಇದ್ದವು. ಒಂದು ದಿನ ಮೂಡ್ಲಗಿರಿಯು ಹೆಂಡತಿಯನ್ನು ಮನೆಯಲ್ಲಿ ಚೆನ್ನಾಗಿ ಹೊಡೆದಿದ್ದನು. ಅವೇ ಮಧ್ಯಾಹ್ನ ಅವನು

ಸರಪಣಿ ಸರಿಯಾಗಿ ಎಳೆಯಲಿಲ್ಲವೆಂದು ಸಾಹೇಬರು ಕೈಯಲ್ಲಿದ್ದ ಬೆತ್ತದಿಂದ ಅವನ ಆ ದೊಡ್ಡ ದೇಹಕ್ಕೆ ನಾಲ್ಕು ಬಿಟ್ಟರು. ಸಮೀಪದ ಹೊಲದ ಬದುವಿನಲ್ಲಿ ಸಗಣಿ ತಟ್ಟುತ್ತಿದ್ದ ಅವನ ಹೆಂಡತಿಯು ನಗುತ್ತಾ ನಾಣಿಯೊಂದಿಗೆ "ಅವಂಗೆ ಇನ್ನೆರಡು ಬಿಡಿ. ದಾಕ್ಷಿಣ್ಯ ಮಾಡಬೇಡಿ. ಮೈ ಕೊಬ್ಬಿದೆ" ಎಂದಳು. (ಪುಟ ೩೨೬-೭)

ಇನ್ನು, ಇಲ್ಲಿ ಬರುವ ನಾಣಿಯ ಪಾತ್ರ. ಅವನು ಲೇಖಕರ ಮಿತ್ರ. ಇಲ್ಲಿ ಹಳ್ಳಿಯವರಿಗೆಲ್ಲ ರಿಂಗ್‌ಮಾಸ್ಟರ್. ತಾನು ಮಿಲಿಟರಿ ಕಮಾಂಡರ್ ಎಂಬಂತೆ ಅವನ ವರ್ತನೆ. ಜೊತೆಗೆ ಆಶು ಕವಿ, ಸಹಜ ಹಾಸ್ಯಗಾರ. ಅವನು ರೈತರನ್ನೆಲ್ಲಾ ಕಲೆ ಹಾಕಿ ಅವರನ್ನು ದಿನದಿನದ ಸರ್ವೆಗೆ ಹೊರಡಿಸುತ್ತಿದ್ದುದೇ ಒಂದು ಮೋಜು :

ಕೆಲಸಕ್ಕೆ ಎಲ್ಲರನ್ನೂ ಹೊರಡಿಸುವ ಭಾರ ನಾಣಿಯ ಮೇಲೆ ಬೀಳುತ್ತಿತ್ತು. ನಾಣಿಯು ನಿತ್ಯ ಪ್ರತಿಯೊಬ್ಬ ರೈತನ ಮನೆಗೂ ಹೋಗಿ ಅವರನ್ನೆಲ್ಲಾ ಬೈದು, ಕೊನೆಗೆ ಎಲ್ಲರನ್ನೂ ಹೊರಡಿಸುತ್ತಿದ್ದನು. ನಾಣಿಗೂ ಕೂಡ ಎಷ್ಟೋ ದಿವಸ ರೈತರಿಂದ ಬೈಗಳವುಂಟಾಗುತ್ತಿದ್ದಿತು. ಆದರೆ ಅವನು ಅವುಗಳನ್ನೆಲ್ಲಾ ಗಣನೆಯಲ್ಲಿಟ್ಟರಲಿಲ್ಲ. ಅನಂತರ ಸುಮಾರು ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಸುಣ್ಣದ ಮಡಕೆ, ಸರಪಣಿ, ಗೂಟಗಳು, ಹಾರೆ ಪಿಕಾಶಿ, ಗುದ್ದಲಿ ಬಾವುಟಗಳ ಈ ಮೆರವಣಿಗೆಯು ಸೈನಿಕರಂತೆ ಬಯಲಿನ ಕಡೆಗೆ ಹೊರಡುತ್ತಿದ್ದಿತು. ರೈತರಿಗೆ ಉತ್ಸಾಹವನ್ನುಂಟುಮಾಡಲು ನಾಣಿಯು ಅವರನ್ನೆಲ್ಲಾ ಸಾಲಾಗಿ ನಿಲ್ಲಿಸಿ "ಲೆಫ್ಟ್ ರೈಟ್ ಫಾಲ್ ಇನ್ ಮಾರ್ಚ್" ಎಂದೂ ಮುಂತಾಗಿ ದೇವಸ್ಥಾನದ ಎದುರಿಗೆ ಕೂಗುತ್ತಿದ್ದನು. ಅವನ ಅಪ್ಪಣೆಗಳನ್ನು ಕೇಳಿ ರೈತರು ತಬ್ಬಿಬ್ಬಾಗಿ ಮನಸ್ಸು ಬಂದ ಕಡೆ ಸುತ್ತಾ ತಿರುಗುತ್ತಿದ್ದರು. ಸುಣ್ಣದ ಮಡಕೆಯವನು ತಿರುಗುವ ಭರದಲ್ಲಿ ಸುಣ್ಣವನ್ನು ಸುತ್ತಾ ಇದ್ದವರ ಮೇಲೆ ಚೆಲ್ಲುತ್ತಿದ್ದನು. ಬಾವುಟದವನು ತಿರುಗುವಾಗ ಆ ಬಾವುಟದ ಗಳವು ಎಲ್ಲರನ್ನೂ ಒಂದೇ ಏಟಿಗೆ ಬಾಗಿಸುತ್ತಿದ್ದಿತು. ಒಂದು ಸಲ ಮೂಡ್ಲಗಿರಿಯ ಕುವಾಲಿಯು ಬಾವುಟದ ಗಳುವಿಗೆ ಸಿಕ್ಕಿಕೊಂಡು ಮೇಲಕ್ಕೆ ಹೊರಟೇಹೋಯಿತು. ಪ್ರತಿದಿಸವೂ ಏಳು ಗಂಟೆಗೆ ಮುಂಚೆ ಈ ಮೆರವಣಿಗೆಯನ್ನೂ ಡ್ರಿಲ್ಲನ್ನೂ ನೋಡಲು ಹಳ್ಳಿಯ ಹೆಂಗಸರೂ ಮಕ್ಕಳೂ ದೇವಸ್ಥಾನದ ಬಳಿ ಸೇರಿಬಿಡುತ್ತಿದ್ದರು. ಕೆರೆಗೆ ನೀರಿಗೆ ಹೊರಟಿದ್ದ ರೈತರ ಹೆಂಗಸರು ಹೆರವಿಗಳನ್ನು ತಲೆಯ ಮೇಲಿಟ್ಟುಕೊಂಡು ಎಲೆ ಅಡಿಕೆಯನ್ನು ಅಗಿಯುತ್ತಾ ತಮ್ಮ ಗಂಡಂದಿರು ತಬ್ಬಿಬ್ಬಾಗಿ ಲೆಫ್ಟ್-ರೈಟ್ ತಿರುಗುವುದನ್ನು ನೋಡಿಕೊಂಡು ನಗುತ್ತಿದ್ದರು. ಹಳ್ಳಿಯನ್ನು ಅಳೆದು ಮುಗಿಯುವವರೆಗೆ ರೈತರಿಗೆ ಈ ಡ್ರಿಲ್ಲಿನ ಉತ್ಸಾಹ ಕಡಿಮೆಯಾಗಲೇ ಇಲ್ಲ. ಬೈಲಿನಲ್ಲಿ, ಕೆಲಸಕ್ಕಾಗಿ ರೈತರಲ್ಲಿ ಯಾವುದಾದರೂ ಚರ್ಚೆ ಬದ್ದಾಗ, ಕೋಪವು ಮಿತಿಮೀರಿ ಕೈಗೆ ಕೈಹತ್ತುವ ಸಂದರ್ಭ ತೋರಿದಾಗ

ನಾಣಿಯು ಕೂಡಲೆ "ಫಾಲ್ ಇನ್" (Fall in) ಎಂದು ಕೂಗುತ್ತಿದ್ದನು. ರೈತರು ಹೊಡೆದಾಟವನ್ನು ಅಲ್ಲಿಗೇ ನಿಲ್ಲಿಸಿ ಸಾಲಾಗಿ ಬಂದು ನಿಂತುಕೊಳ್ಳುತ್ತಿದ್ದರು. ಬರಬರುತ್ತಾ ರೈತರು ನಿತ್ಯ ಕರೆಯಿಸಿಕೊಳ್ಳುವುದನ್ನು ಬಿಟ್ಟರು. "ಫಾಲ್ ಇನ್" ಎಲ್ಲಿ ತಮಗೆ ತಪ್ಪಿಹೋಗುವುದೊ ಎಂಬುದಾಗಿ ಬೇಗ ಬೇಗ ದೇವಸ್ಥಾನದ ಬಳಿಗೆ ಬರುತ್ತಿದ್ದರು. ಐವತ್ತು ವರ್ಷದ ಹನುಮನೂ ಕೂಡ ಡ್ರಿಲ್ಲನ್ನು ಸರಿಯಾಗಿ ಶಿಸ್ತಿನಿಂದಲೂ ಉತ್ಸಾಹದಿಂದಲೂ ಮಾಡುತ್ತಿದ್ದನು. ಸರ್ವೆ ಮುಗಿಯುವವರೆಗೆ ಬೆಳಗಿನ ಈ ಡ್ರಿಲ್ಲು ಬೈಲಹಳ್ಳಿಗೆ ಒಂದು ಹಬ್ಬವೇ ಆಗಿತ್ತು. ಅರಜೀವದಲ್ಲಿ ನರಳುತ್ತಿದ್ದ ಆ ಬಡಪಾಯಿಗಳು ಅಂತಹ ಉತ್ಸವವನ್ನೂ ವಿನೋದವನ್ನೂ ಖುಷಿಯನ್ನೂ ಎಂದೂ ಅನುಭವ ಮಾಡಿರಲಿಲ್ಲ. ಪ್ರಾತಃಕಾಲದ ಆ ನಗುವಿನೊಂದಿಗೆ ದಿನದ ಕಷ್ಟವೆಲ್ಲವೂ ಹಗುರವಾಗಿ ತೋರುತ್ತಿದ್ದಿತು. ಸಾಹೇಬರು ನಾಣಿಯನ್ನು "ನೀನು ಗಟ್ಟಿಗನಯ್ಯ, ಮರಳು ಕಾಡಿನಲ್ಲಿ ಬೇಕಾದರೂ ನೀರನ್ನು ಹುಟ್ಟಿಸುತ್ತೀಯೆ. ನೀನು ಬಂದಿರುವ ಉದ್ದೇಶವೂ ನಮ್ಮ ಉದ್ದೇಶವೇ ಆದರೂ ರೈತರು ನಿನ್ನ ಮಾತನ್ನು ಉತ್ಸಾಹದಿಂದ ಕೇಳುತ್ತಾರೆ" ಎಂದರು. ನಾಣಿಯು "ಸ್ವಾಮಿ, ನನಗೆ ರೈತರನ್ನು ಕಂಡರೆ ಬಹಳ ವಿಶ್ವಾಸ. ಆದುದರಿಂದಲೇ ನನ್ನನು ಕಂಡರೆ ಅವರಿಗೂ ಪ್ರೀತಿ" ಎಂದನು. (ಪುಟ ೩೭೫–೬)

ಇಂಥ ಅನೇಕ ಚಿತ್ರಗಳು, ಬೇಕಾದಷ್ಟು ಹಾಸ್ಯ ಸಂದರ್ಭಗಳು ಈ ಬರಹದ ತುಂಬ ಹರಡಿಕೊಂಡಿವೆ. ಗೊರೂರರ ಇತರ ಕೃತಿಗಳಂತೆ ಕಳೆದುಹೋದ ಒಂದು ಸಮಾಜದ, ಗ್ರಾಮಜೀವನದ ಯಥಾವತ್ತಾದ ಚಿತ್ರಣವನ್ನು ಈ ಕೃತಿಯೂ ನೀಡುತ್ತದೆ.

'ಪುನರ್ಜನ್ಮ'

ನಂ. ತಪಸ್ವೀಕುಮಾರ್

೧

ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೆಸರು ಇಪ್ರೋತ್ತು ನಾಡಿನಾದ್ಯಂತ ಸುಪರಿಚಿತ. ಅವರಂತೆ ಒಂದು ಪ್ರಾಂತ್ಯದ ಜನಜೀವನದೊಂದಿಗೆ ತಮ್ಮ ಬದುಕು, ವ್ಯಕ್ತಿತ್ವಗಳನ್ನು ಐಕ್ಯಗೊಳಿಸಿಕೊಂಡು, ಅದನ್ನು ಸಾಹಿತ್ಯದ ಮುಖಾಂತರ ಅಭಿವ್ಯಕ್ತಿಗೊಳಿಸಿರುವ ವಿಶಿಷ್ಟ ಸಾಹಿತಿಗಳ ಸಂಖ್ಯೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟಿಲ್ಲ. ಅಂಥ ವಿರಳ ಪಂಕ್ತಿಯಲ್ಲಿ ಗೊರೂರರದು ಮರೆಯಲಾಗದ ಹೆಸರು. ವಿಶೇಷವಾಗಿ ಕುವೆಂಪು ಅವರ ನಂತರ ಗೊರೂರರ ಗ್ರಾಮೀಣ ಚಿತ್ರಗಳೇ ಸಾರ್ಥಕವಾದಂಥವು; ಇಂದಿಗೂ ಮಾಸದಿರುವಂಥವು. ಈ ಲೇಖಕರ ಮುಖಾಂತರ ಹೇಮಾವತಿ ನದಿ ಮರುಹುಟ್ಟು ಪಡೆದು ರೋಮಾಂಚಕಾರಿ ವ್ಯಕ್ತಿತ್ವ ಪಡೆದುಕೊಂಡಿದೆ. ಗೊರೂರು ಹಾಸನ ಜಿಲ್ಲೆಯ ಒಂದೂರಾಗಿ ಹೋಗದೆ, ಜಿಸ್ತರ ಕರಿಯನೇ ಆದಿಯಾದ ವಿಶಿಷ್ಟತರ ವ್ಯಕ್ತಿಗಳಿಂದ ಕೂಡಿದ ಕನ್ನಡ ಸಂಸ್ಕೃತಿಯ ಬೀಡಾಗಿದೆ; ಗ್ರಾಮೀಣ ಬದುಕಿನ ಕಸುವು ತೋರುವ ಗೀಜಗನ ಗೂಡಾಗಿದೆ.

ಸಾಹಿತ್ಯ ಸಮಾಜದ ಪ್ರತಿಬಿಂಬ ಮಾತ್ರವಲ್ಲ, ಗತಿಬಿಂಬವೂ ಹೌದು ಎಂಬ ನುಡಿಗೆ ಗೊರೂರರ ಒಟ್ಟು ಸಾಹಿತ್ಯ ಉತ್ತಮ ನಿದರ್ಶನ ಒದಗಿಸುತ್ತದೆ. ತಾವು ಬದುಕುತ್ತಿರುವ ಸಮಾಜದ ನಾಲ್ಕೂ ಮಗ್ಗುಲುಗಳನ್ನು ತುಂಬ ಕಲಾತ್ಮಕವಾಗಿ, ಆದರೆ ಸತ್ಯಾಂಶಕ್ಕೆ ಎರವಾಗದೆ ರಸವತ್ತಾಗಿ ಚಿತ್ರಿಸುವ ವಿಶಿಷ್ಟ ಶಕ್ತಿ ಅವರಿಗೆ ಸಹಜವಾಗಿದೆ. ಪರಿಣಾಮವಾಗಿ ಯಾವೊಂದು ವಿಕೃತಿಯನ್ನೂ ಎತ್ತಿ ತೋರದೆ, ವಿಕಾರಗಳಿಗೆಡೆಗೊಡದೆ ಸಮುಚಿತ ವಿನ್ಯಾಸವುಳ್ಳ ನವರಸಪೂರ್ಣ ವರ್ಣಚಿತ್ರಗಳನ್ನು ಧಾರಾಳವಾಗಿ ನೀಡಿದ ಗೊರೂರರ ಕೊಡುಗೆ ಒಂದು ನಿಟ್ಟಿನಿಂದ ಅಪೂರ್ವ ತೆರನಾದುದು, ಎಂದಿಗೂ ಮೇಲ್ತರದ್ದಾಗಿದ್ದು, ಮಾನ್ಯವಾಗುವಂಥದು. ಈ ಇನ್ನೊಂದು ನಿಟ್ಟಿನಿಂದ

ಕೂಡ ಗೊರೂರರು ಧನ್ಯರು. ಹೀಗೆಂದ ಮಾತ್ರಕ್ಕೆ ಅವರ ಸಾಹಿತ್ಯ ಸೇವೆ ಮುಕ್ತಾಯ ವಾಯ್ತೆಂದು ಅರ್ಥಮಾಡಿಕೊಳ್ಳಬೇಕಾಗಿಲ್ಲ.

೧೯೩೩ರಷ್ಟು ಹಿಂದೆಯೇ 'ನಮ್ಮ ಊರಿನ ರಸಿಕರು' ಎಂಬ ವಿಶಿಷ್ಟ ವ್ಯಕ್ತಿಚಿತ್ರಣವುಳ್ಳ ಕೃತಿಯ ಎರಡನೆಯ ಮುದ್ರಣ ಕಂಡು ಹಿಗ್ಗಿದ ಗೊರೂರರು ೧೯೩೦ರಲ್ಲಿ 'ಹಳ್ಳಿಯ ಹಾಡುಗಳು' ಎಂಬ ತಮ್ಮ ಪ್ರಾಂತ್ಯದ ಪ್ರಸಿದ್ಧ ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಮುಂದೆ ೧೯೪೩ರಲ್ಲಿ ಶಿವಮೊಗ್ಗ ಸಬ್ ಜೈಲಿನಲ್ಲಿ ಕುಳಿತು 'ಹಳ್ಳಿಯ ಬಾಳು' ಎಂಬ ಪ್ರಬಂಧ ಸಂಕಲನವನ್ನು ಬೆಳಕಿಗೆ ತಂದು, ತಮ್ಮ ಪ್ರಾಂತ್ಯದ ಜಾನಪದರ ಬದುಕಿನ ಒಳಹೊರಗುಗಳನ್ನು ಕನ್ನಡಿಸಿ ತೋರಿದರು. ಅದಕ್ಕೂ ಮೊದಲು ೧೯೪೨ರ ಆಗಸ್ಟ್ ತಿಂಗಳಲ್ಲಿ ಅದೇ ಜೈಲಿನಲ್ಲಿ ಸತ್ಯಾಗ್ರಹಿಯಾಗಿ ಸೇರಿ, ಕೇವಲ ೨-೩ ದಿನಗಳಲ್ಲೇ ಬರೆದು ಮುಗಿಸಿದ ನೀಳ್ಗತೆ 'ಪುನರ್ಜನ್ಮ'ವನ್ನು ಅದೇ ವರ್ಷ ಪ್ರಕಾಶಪಡಿಸಿದರು. ಮುಂದೆಲ್ಲ ತಪ್ಪದೆ ಸಾಹಿತ್ಯ ಕೃತಿಗಳನ್ನು ರಚಿಸುತ್ತ ಬಂದಿರುವ ಅವರು ಉತ್ತಮ ಪ್ರಬಂಧಕಾರರಾಗಿರುವಂತೆಯೇ ಒಳ್ಳೆಯ ಕತೆಗಾರರೂ ಹೌದು. ಅವರ 'ಮೈಸೂರಾರಿ' ಎಂಬ ಕಥಾ ಸಂಕಲನದಲ್ಲಿರುವ ೩-೪ ಹೊಸ ಕಥೆಗಳನ್ನು ಬಿಟ್ಟರೆ, ಮಿಕ್ಕವೆಲ್ಲ ೧೯೩೦-೩೩ರಷ್ಟು ಹಿಂದೆಯೇ ವಿವಿಧ ಪತ್ರಿಕೆಗಳ ಮುಖಾಂತರ ಬೆಳಕಿಗೆ ಬಂದಿದ್ದುವು. ಹೀಗೆಯೇ ಇನ್ನಿತರ ಕೃತಿಗಳನ್ನೂ ಹೆಸರಿಸಬಹುದು.

೨

ಪ್ರಕೃತ ಲೇಖನದ ಮುಖ್ಯೋದ್ದೇಶ ಗೊರೂರರ 'ಪುನರ್ಜನ್ಮ' ಕಥೆಯು—ಲೇಖಕರು ಇದನ್ನು "ದೊಡ್ಡ, ಸಣ್ಣ ಕಥೆ" ಎಂದಿರುವುದು ಗಮನಾರ್ಹ—ಒಂದು ವಿವೇಚನೆ ಒದಗಿಸುವುದಷ್ಟೆ. ಕ್ರೌನ್ ಅಷ್ಟದಳಾಕೃತಿಯ ೧೧೩ ಪುಟಗಳಷ್ಟಿರುವ ಈ ಕಥೆಯಲ್ಲಿ ಒಟ್ಟು ಹನ್ನೊಂದು ಅಧ್ಯಾಯಗಳಿವೆ. ಒಂದೊಂದು ಅಧ್ಯಾಯವನ್ನೂ ವಿಶಿಷ್ಟವಾಗಿ ಹೆಸರಿಸುವುದನ್ನು ಕಂಡಾಗ, ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಹಾಗೂ 'ಮಲೆನಾಡಿನ ಚಿತ್ರಗಳು' ಗ್ರಂಥಗಳ ಅಧ್ಯಾಯಗಳ ಶೀರ್ಷಿಕೆಯ ನೆನಪು ಸಹಜವಾಗಿ ಬರುತ್ತದೆ. ಗೊರೂರರು ಮೊದಲು ಈ ಕೃತಿಗೆ 'ಪತ್ನಿ' ಎಂದು ಹೆಸರಿಟ್ಟಿದ್ದು, ಅನಂತರ ಕಥೆಯ ಮುಗಿವಿಗೆ ತಕ್ಕುದಾಗಿ 'ಪುನರ್ಜನ್ಮ' ಎಂದು ಪುನರ್ ನಾಮಕರಣ ಮಾಡಿದ್ದು ತುಂಬ ಉಚಿತವಾಗಿದೆ.

ಈ ಕಥೆಯನ್ನು ಗೊರೂರರು ಪೂರ್ವ ನಿಯೋಜಿತ ಚೌಕಟ್ಟಿನಲ್ಲೇ ವಸ್ತುಸ್ಥಿತಿಗೆ ಸಹಜವೆಂಬಂತೆ ಬೆಳೆಸಿಕೊಂಡು ಹೋಗಿರುವುದು ಥಟ್ಟನೆ ಕಾಣಬರುತ್ತದೆ. ಕಥೆ ಮಲ್ಲಿಗೆ ಹಳ್ಳಿ ಎಂಬ ಹೇಮಾವತಿ ತೀರದ ಒಂದು ಸುಸಂಸ್ಕೃತ ಹಳ್ಳಿಯಲ್ಲಿ ಆರಂಭಗೊಂಡು, ಮೈಸೂರು ನಗರದತ್ತ ಹಬ್ಬಿ, ಹೊತ್ತು ಕಾತು, ಅಲ್ಲೇ ಮುಗಿವನ್ನು ಕಂಡುಕೊಳ್ಳುತ್ತದೆ. ಅವರ ಇತರ ಹಳ್ಳಿಯ ಚಿತ್ರಗಳಲ್ಲಿ ಒಡೆದು ಕಾಣುವಂತೆ ಇಲ್ಲಿಯೂ ಮಣ್ಣಿನ

ಕಂಪು ಮನತಟ್ಟುತ್ತದೆ; ಸುಸಂಸ್ಕೃತರಿಂದ ಕೂಡಿದ ಗ್ರಾಮಜೀವನದ ಒಂದು ನೋಟ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಕಥೆ ಶರಾವತಿಯಂತೆ ಓಡುತ್ತದೆ. ಕಥಾನಾಯಕನ ತಂದೆಯ ಪರಿಚಯ ಮೂಡಿರುವುದು ಹೀಗೆ:

> ಮಲ್ಲಿಗೆಹಳ್ಳಿ ಅಗ್ರಹಾರದ ಸಣ್ಣ ಜಮೀನ್‌ದಾರರಾದ ರಂಗಪ್ಪನವರು ತಮ್ಮ ಹಳೆಯ ಮನೆಯ ಜಗುಲಿಯ ಮೇಲೆ ನಶ್ಯವನ್ನು ತೀಡುತ್ತಾ ಬಿಸಿಲು ಕಾಯಿಸಿ ಕೊಳ್ಳುತ್ತಿದ್ದರು....(ಪುಟ ೧)

ಇದಕ್ಕೆ ಪೋಷಕವಾಗಿ ಇನ್ನು ಕೆಲವು ವಿವರಗಳು ಬಂದಿದ್ದರೂ ಅನಾವಶ್ಯಕವಾದ ವರ್ಣನೆಗಳಿಗೆ ಎಡೆಯಿಲ್ಲ.

ಇಲ್ಲಿಯ ಮುಖ್ಯ ಪಾತ್ರಗಳೆಲ್ಲ ಒಂದೊಂದು ಆದರ್ಶಕ್ಕೆ ನಿದರ್ಶನವಾಗಿ ನಿಲ್ಲುವಂಥವು. ಉದಾಹರಣೆಗೆ ರಂಗಪ್ಪನವರು ದೊಡ್ಡ ಮನಸ್ಸಿನ ಧಾರಾಳ ಸ್ವಭಾವದ ವೈದಿಕರು. ಆ ಹಳ್ಳಿಯ ಹತ್ತೂ ಜನಕ್ಕೆ ಬೇಕಾದವರಾಗಿ, ಒಬ್ಬರ ಬಾಯಿಗೆ ಬರದಂತೆ ಬಾಳು ಸಾಗಿಸಿದವರು. ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಮಾರಿಯಾದರೂ ಸರಿ ಮರ್ಯಾದೆಯಿಂದ ಬಾಳಿದವರು. ಅವರ ಆಪ್ತ ಮಿತ್ರರಾಗಿದ್ದ ರಾಮಣ್ಣನವರ ಸ್ವಭಾವವೂ ಹೀಗೆಯೇ. ಇಂಥ ವಿವೇಕಿಗಳೂ ವಯಸ್ಕರೂ ಆದ ಗೃಹಸ್ಥರು ಸಮಯ ಸಂದರ್ಭಗಳಲ್ಲಿ ಜೀವನದುದ್ದಕ್ಕೂ ನೆರವಾಗಿ, ಪರಸ್ಪರ ಮರುಕ ವ್ಯಕ್ತಪಡಿಸುವುದನ್ನು ಕಥೆಯಲ್ಲಿ ಕಾಣುತ್ತೇವೆ. ಇಂಥ ಆದರ್ಶಪ್ರಾಯರಾದ ವ್ಯಕ್ತಿಗಳು ಕೇವಲ ಕಥೆಯಲ್ಲಿ ಬರುವಂಥವರಲ್ಲ; ಸ್ವಾತಂತ್ರ್ಯಪೂರ್ವ ದಶಕಗಳಲ್ಲಿ ಪ್ರತಿ ಹಳ್ಳಿಯಲ್ಲೂ ವಿರಳವಾಗಿಯಾದರೂ ಇದ್ದರೆಂಬುದನ್ನು ಮರೆಯಬಾರದು. ಇವೊತ್ತು ಅಂಥವರು ತೀರ ವಿರಳರಾಗಿರುವುದಕ್ಕೆ ಕಾರಣಗಳು ನೂರಾರು. ಅವುಗಳ ವಿವೇಚನೆ ಇಲ್ಲಿ ಅಪ್ರಕೃತ.

'ಪುನರ್ಜನ್ಮ' ಕಥೆಯ ಎರಡನೆಯ ಅಧ್ಯಾಯದಲ್ಲಿ ರಂಗಪ್ಪನವರ ಧರ್ಮಪತ್ನಿಯಾಗಿದ್ದ ಭಾಗ್ಯಲಕ್ಷ್ಮಮ್ಮನವರು ತಮ್ಮ ಕುಟುಂಬದ ಹಿತಕ್ಕಾಗಿ, ಗೌರವ ರಕ್ಷಣೆಗಾಗಿ ಹಾಗೂ ತಮ್ಮ ಮುದ್ದು ಮಗನ ವಿದ್ಯಾಭ್ಯಾಸದ ಸಲುವಾಗಿ ಮಾಡಿದ ಅಪಾರ ತ್ಯಾಗದ ಚಿತ್ರಣವಿದೆ. ಆಕೆ ಸಜ್ಜನೆ, ತ್ಯಾಗಮಯಿ: ಹೆಣ್ಣು ಹೆತ್ತ ತಾಯಿ. ಎಂತಲೇ ಎಂಥ ಸಂದರ್ಭ ಬಂದಾಗಲೂ ಸಂಸಾರದ ಭಾರವನ್ನು ಆತುಕೊಳ್ಳುವ ಶಕ್ತಿ, ಸಹನೆ ತೋರಿ, ಸರೀಕರಿಂದ, ಸ್ವಯಂ ಪತಿಯಿಂದ ಶಹಭಾಸ್‌ಗಿರಿ ಪಡೆದಿದ್ದರು. ಕಾಲಕ್ಕೆ ತಕ್ಕಂಥ ನಾಗರಿಕ ನಡಾವಳಿಯ ಹೊಡೆತದಿಂದಾಗಿ ಈ ದಂಪತಿಗಳು ಸಾಲಸೋಲಗಳಿಗೆ ತುತ್ತಾಗಬೇಕಾಯ್ತು. ಅಂಥ ಪರಿಸ್ಥಿತಿಯನ್ನು ಇವರು ಭರಿಸಿದ ವಿವರಗಳು ದಿಟಕ್ಕೂ ಸೊಗಸಾಗಿವೆ. ವಿಶೇಷವಾಗಿ ಗೊರೂರರ ಈ ವ್ಯಾಖ್ಯಾನಪರ ನುಡಿಗಳು ಗಮನಾರ್ಹ:

> ಸಾಲ ಪ್ರಾರಂಭವಾಗುವವರೆಗೆ ಇರುವ ಗಾಂಭೀರ್ಯ ದೊಡ್ಡಸ್ತಿಕೆಯೇ ಅವನ

ಆಸ್ತಿ: ಒಂದು ಸಲ ಸಾಲ ಪ್ರಾರಂಭವಾಗಿಬಿಟ್ಟರೆ ಆ ಗಾಂಭೀರ್ಯ ಹೊದ್ದಿಕೆ ಹಾಗೆಯೇ ಮಾಯವಾಗಿಬಿಡುತ್ತದೆ. ರಂಗಪ್ಪನವರು ತಮ್ಮ ಜೀವನಕ್ಕಾಗಿ ಒಂದು ಎಕರೆ ತರಿ ಜಮೀನು ಉಳಿಸಿಕೊಂಡು ಉಳಿದ ತಮ್ಮ ಎಲ್ಲಾ ಆಸ್ತಿಯನ್ನು ಸಾಹುಕಾರನಿಗೆ ಮಾರಿ ಋಣಮುಕ್ತರಾದರು. (ಪುಟ ೫)

ಈ ಗ್ರಂಥದ ಆರನೆಯ ಪುಟದಲ್ಲಿ ಕಥಾನಾಯಕ ಗೋಪಾಲನ ಸಂಕ್ಷಿಪ್ತ ಜೀವನ ಚಿತ್ರಣ ದೊರೆಯುತ್ತದೆ:

ಗೋಪಾಲ ರಂಗಪ್ಪನವರ ಒಬ್ಬನೇ ಮಗ. ಹೆಣ್ಣುಮಕ್ಕಳಿಲ್ಲ. ಅವನ ಅಕ್ಕ ವಿಧೀ. ಗೋಪಾಲ ಬಾಲ್ಯದಿಂದಲೂ ಬಹಳ ಚುರುಕಾದ ಬುದ್ಧಿಯುಳ್ಳವ. ಅವನು ಎಲ್ಲಾ ತರಗತಿಗಳಲ್ಲಿಯೂ ಮೊದಲನೆಯವನಾಗಿ ತೇರ್ಗಡೆ ಹೊಂದುತ್ತಾ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಾಂತಕ್ಕೆ ಎರಡನೆಯವನಾಗಿ ತೇರ್ಗಡೆ ಹೊಂದಿದ. ರಂಗಪ್ಪನವರ ಸಂಸಾರದಲ್ಲಿ ಗೋಪಾಲ ಹೀಗೆ ಪ್ರಸಿದ್ಧನಾಗುವುದಕ್ಕೂ ರಂಗಪ್ಪನವರ ಆಸ್ತಿಯೆಲ್ಲಾ ನಾಶವಾಗುವುದಕ್ಕೂ ಸರಿಹೋಯಿತು...(ಪುಟ ೬)

ಸ್ವಭಾವತಃ ಸೌಮ್ಯಸ್ವಭಾವದವರಾಗಿದ್ದರೂ ತಮ್ಮ ಮಗನ ವಿದ್ಯಾಭ್ಯಾಸದ ಬಗೆಗಿನ ಸಂಪೂರ್ಣನಿಷ್ಠೆ, ವಿಶ್ವಾಸದಿಂದ ತಮ್ಮೆಲ್ಲ ಒಡವೆ ವಸ್ತ್ರಗಳನ್ನು ಮಾರಿ ಮಾರಿ ಆತನ ವಿದ್ಯೆಯ ಪೂರ್ಣ ಜವಾಬ್ದಾರಿ ಹೊತ್ತು ನಿಭಾಯಿಸಿದ ಭಾಗ್ಯಲಕ್ಷ್ಮಮ್ಮನವರ ಪರವಾದ ಈ ವಿವರಣೆ ಉದ್ಧರಣಾರ್ಹ :

....ಗೋಪಾಲ ಎಸ್.ಎಸ್.ಎಲ್.ಸಿ. ಮಾಡುವ ಹೊತ್ತಿಗೆ ಭಾಗ್ಯಲಕ್ಷ್ಮಮ್ಮನವರು ಸುಮಾರು ಸಾವಿರ ರೂಪಾಯಿಗಳ ಒಡವೆಗಳನ್ನು ಮಾರಿದರು. ಮುಂದಿನ ನಾಲ್ಕು ವರ್ಷಗಳಲ್ಲಿ ಗೋಪಾಲನಿಗೆ ಬಿ.ಎ. ಆಗುವ ವೇಳೆಗೆ ಅವನ ಡ್ರೆಸ್ ಶೋಕಿ—ಕಾಲೇಜಿನ ಹುಡುಗರಿಗೆ ಇದು ಬೇಕು.—ಸಿಗರೇಟು, ಭಾರತದ ಮುಖ್ಯ ಮುಖ್ಯ ಸ್ಥಳಗಳನ್ನು ನೋಡಲು ಹೊರಟ ಪ್ರವಾಸದ ಖರ್ಚುಗಳು...ಎಲ್ಲಾ ಸೇರಿ ಭಾಗ್ಯಲಕ್ಷ್ಮಮ್ಮನವರ ಎಲ್ಲಾ ಒಡವೆಗಳೂ ಪೂರ್ಣವಾಗಿ ಅಂಗಡಿಯ ಪಾಲಾಗಿದ್ದುವು. ರಂಗಪ್ಪನವರಿಗೂ ಅವರ ಮಿತ್ರರಾದ ರಾಮಣ್ಣನವರಿಗೂ ಗೋಪಾಲನಿಗೆ ಬಿ.ಎ. ಮೊದಲನೆಯ ದರ್ಜೆಯಲ್ಲಿ ತೇರ್ಗಡೆಯಾದುದು ಆಶ್ಚರ್ಯ ಆಗಲಿಲ್ಲ...ಆದರೆ ಈ ಏಳು ಎಂಟು ವರುಷಗಳ ಕಾಲ ವರುಷ ಎರಡು ವರುಷಗಳಿಗೆ ಒಂದೊಂದು ಒಡವೆ ಮಾರುತ್ತಾ, ಎಂತಹ ಕಷ್ಟ ಬಂದರೂ ಆ ಹಣವನ್ನು ಬೇರೆ ಕಡೆ ತಿರುಗಿಸದೆ, ಒಂದು ಏಕಾಗ್ರವಾದ ತಪಸ್ವಿನಂತೆ, ತಿಂಗಳು ತಿಂಗಳೂ ಸರ್ಕಾರಿ ಸಂಬಳದ ಹಾಗೆ ಅದನ್ನು ಮಗನಿಗೆ ಕಳುಹಿಸಿ, ಅವನನ್ನು ಈ ಸ್ಥಿತಿಗೆ ತಂದ ಭಾಗ್ಯಲಕ್ಷ್ಮಮ್ಮನವರ ಸಾಹಸ ಕಂಡು ಅವರಿಗೆ ಆಶ್ಚರ್ಯವಾಯಿತು. ರಂಗಪ್ಪನವರಿಗೇ, ತಮ್ಮ ಹೆಂಡತಿಯು ಇಷ್ಟು ಶಕ್ತಳಾದ ಸ್ತ್ರೀ ಎಂಬುದು ಇದುವರೆಗೆ ಹೊಳೆದಿರಲಿಲ್ಲ. (ಪುಟ ೧೩)

ಆದರೆ ಕಥೆಗೆ ಹೊಸ ತಿರುವು ಮೂಡಲನುವಾಗುವಂತೆ, ಅಂಥ ತಾಯಿ ಮದುವೆಯ ಲಗ್ನ ಕಾಲಕ್ಕೆ ಒಂದು ತಿಂಗಳ ಮುಂಚೆ ಇಹಲೋಕ ತ್ಯಜಿಸಿದರು. ಗೋಪಾಲನ ಮಿಕ್ಕ ಮೂವರು ತಮ್ಮಂದಿರು ಚಿಕ್ಕವರಾಗಿದ್ದು ತಬ್ಬಲಿಯಾದರು. ರಂಗಪ್ಪನವರು ದಿಕ್ಕು ತೋರದಾದರು. ಅಂಥ ಸಮಯದಲ್ಲಿ ಗೋಪಾಲನ ಹಿರಿಯಕ್ಕ ಮನೆ ಆ ಮನೆಗೆ ಬಂದು ಸ್ವಲ್ಪ ಸಹಾಯ ಮಾಡಿ, ಸಾಂತ್ವನಗೊಳಿಸಿದಳು. ಗೋಪಾಲ ಮುಂದೆ ಬಂದು ಸಂಸಾರದ ಕಷ್ಟಸುಖಗಳಲ್ಲಿ ಭಾಗಿಯಾದಾನೆಂದು ಭಾವಿಸಿಕೊಂಡು, ತಂದೆಗೆ ಭರವಸೆ ನೀಡಿದಳು. ಗೋಪಾಲ ನೌಕರಿಗಾಗಿ ಬೊಂಬಾಯಿಗೆ ಹೋದರೂ ಪ್ರಯೋಜನವಾಗದೆ ಹಿಂದಿರುಗಿ ಮೈಸೂರು ಸೇರಿದ. ಮೈಸೂರಿನಲ್ಲಿ ಚಾಕರಿಗಾಗಿ ಅಲೆಯುತ್ತಿದ್ದ ಆತನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಹವಣಿಸುತ್ತ ಹಿಡಿಯಲು ಅನೇಕ ಕನ್ಯಾಪಿತೃಗಳು ಪ್ರಯತ್ನಮಾಡುತ್ತಿದ್ದರು. ರಂಗಪ್ಪನವರಿಗೂ ಮಗನ ಮದುವೆ ಮಾಡಿಬಿಡುವ ತವಕವಿತ್ತು. ಜೊತೆಗೆ ತನ್ನ ಹೆಂಡತಿಯ ತಮ್ಮನ ಮಗಳು ಜಯಾಳನ್ನು ಮಗನಿಗೆ ತಂದುಕೊಳ್ಳುವುದು ತುಂಬ ಸೂಕ್ತವೆಂಬ ಹಂಬಲವಿತ್ತು. ಆದರೆ ಅದೊಂದೂ ಕೈಗೂಡುವಂತಿರಲಿಲ್ಲ. ಕಾರಣ ಗೋಪಾಲ ಸಂಗೀತ ಬಲ್ಲಂಥ ಹುಡುಗಿ–ಅವಳು ಹೇಗಿದ್ದರೂ ಸರಿ—ಆಕೆಯನ್ನೇ ಮದುವೆಯಾಗುತ್ತೇನೆಂಬ ಗೀಳು ಹಚ್ಚಿಸಿಕೊಂಡು ಅರಸುತ್ತಿದ್ದ. ಆ ಯೋಗ್ಯತೆಯಿಲ್ಲದ, ಇನ್ನೆಲ್ಲ ಗುಣ, ಲಕ್ಷಣಗಳಿದ್ದ ಎಲ್ಲ ಯುವತಿಯರನ್ನೂ ತಿರಸ್ಕರಿಸುತ್ತಿದ್ದ. ಹಾಗೆ ತಿರಸ್ಕೃತಳಾದ ತರುಣಿಯರ ಪೈಕಿ ಜಯಾಳೂ ಒಬ್ಬಳು.

ಜಯಾಳನ್ನು ಒಲ್ಲೆನೆಂದ ಗೋಪಾಲನ ಮೇಲೆ ಬಂಧುಬಾಂಧವರೆಲ್ಲ ವಿಪರೀತ ಕೋಪಗೊಂಡಿದ್ದರು. ಅದೇ ಸಮಯಕ್ಕೆ ಬೆದರಿದವನ ಮೇಲೆ ಬರಸಿಡಿಲೆರಗಿದಂತೆ, ಗೋಪಾಲ ಮೈಸೂರಿನ ಡೆಪ್ಯುಟಿ ಕಮಿಷನರ್ ಸುಂದರರಾಜ ಎಂಬುವರ ಮಗಳನ್ನು ಮದುವೆಯಾಗುತ್ತಾನೆಂಬ ಸುದ್ದಿ ಹೊತ್ತ ಲಗ್ನಪತ್ರಿಕೆ ಕೈಸೇರಿದಾಗ ರಂಗಪ್ಪನವರಿಗೆ ದಿಕ್ಭ್ರಮೆಯಾಯ್ತು; ಮಿಕ್ಕವರಿಗೂ ದುಃಖ, ಕೋಪ ಉಂಟಾಯ್ತು. ಆದರೀಗ ಮಾಡುವುದೇನು? ಹುಲಿ ಬೋನಿಗೆ ಬಿದ್ದಿದೆ. ಗೋಪಾಲನ ಸಂಗೀತದ ಹುಚ್ಚಿನ ಬಗೆಗಿನ ವ್ಯಾಖ್ಯಾನ ಗಮನಾರ್ಹ :

> ವೀಣೆ, ಪಿಟೀಲನ್ನು ಅಷ್ಟು ಇಂಪಾಗಿ ನುಡಿಸುತ್ತಿರುವ ಹುಡುಗಿ ಮದುವೆಯಾಗಿ ಒಂದು ಮಗುವಾದ ಕೂಡಲೆ, ಆ ವೀಣೆಯನ್ನೂ ಪಿಟೀಲನ್ನೂ ಅಟ್ಟದ ಮೇಲಕ್ಕೆ ಎಸೆದುಬಿಡುತ್ತಾಳೆಂಬುದೂ, ಹುಡುಗಿಯರ ಆ ವೀಣೆ ಪಿಟೀಲು, ಗಂಡು ಎಂಬ ಮೃಗವನ್ನು ಮದುವೆಯ ಬಲೆಗೆ ಕೆಡವಿಕೊಳ್ಳುವುದಕ್ಕಾಗಿಯೇ ಎಂಬುದೂ ಆ ಬಡಪಾಯಿ ಅನುಭವವಿಲ್ಲದ ಗೋಪಾಲನಿಗೆ ಹೇಗೆ ಗೊತ್ತಾಗಬೇಕು....(ಪುಟ ೨೦)

'ವತ್ಸಲೆಯ ದರುಶನ' ಎಂಬ ಶೀರ್ಷಿಕೆಯಲ್ಲಿ ಗೊರೂರರು ಗೋಪಾಲ ಸಂಗೀತ ಬಲ್ಲಂಥ ಹುಡುಗಿ ವತ್ಸಲೆಯ ಬಲೆಗೆ ಹೇಗೆ ಸುಲಭವಾಗಿ ಬಿದ್ದನೆಂಬುವರ ಹಿನ್ನೆಲೆ

ಯನ್ನು ವಿವರಿಸಿದ್ದಾರೆ. ಸಂಗೀತ ಕಛೇರಿ ಮುಗಿದಾಗ ಮಳೆ ಹಿಡಿದಿತ್ತು. ಸಮಯ ಸಾಧಕ ಸುಂದರರಾಜ ಗೋಪಾಲನನ್ನು ತನ್ನ ಕಾರಿನಲ್ಲಿ ಪತ್ನಿಯೊಂದಿಗೆ ಕೂರಿಸಿಕೊಂಡು ಹೋಗುವುದರ ಮುಖಾಂತರ. ಅನಂತರ ಬಂದು ಮಾತುಕತೆಯಾಡುವುದರ ಮೂಲಕ ಆತನನ್ನು ಬುಟ್ಟಿಗೆ ಹಾಕಿಕೊಂಡಿದ್ದ. ಪತ್ನಿ ಅಂಥ ರೂಪವತಿಯೂ ಗುಣವತಿಯೂ ಆಗಿರದಿದ್ದುದು ಆಗ ಗೋಪಾಲನಿಗೆ ಅರಿವಾಗಲಿಲ್ಲ. ಸಾಲದ್ದಕ್ಕೆ ಸುಂದರರಾಜ ಅಧಿಕಾರದ ದರ್ಪ ದೌಲುಗಳನ್ನು ಮೆರೆಸುತ್ತಿದ್ದುದೂ ಮುಗ್ಧ ಯುವಕನಿಗೆ ಹೊಳೆಯಲಿಲ್ಲ. ಹಿಂದು ಮುಂದರಿಯದೆ ಗೋಪಾಲ ಅವರಿಗೆ ಶರಣಾಗತನಾಗಿದ್ದ. 'ಮೀನು ಬಲೆಗೆ ಬಿತ್ತು' ಎಂಬ ಅಧ್ಯಾಯದಲ್ಲಿ ಇದರ ಸ್ವಾರಸ್ಯಪೂರ್ಣ ಚಿತ್ರಣವಿದೆ.

'ವಿವಾಹ ಮಹೋತ್ಸವ' ನಡೆಯುವುದಕ್ಕೆ ಮುನ್ನ ಗಂಡಿನ ಕಡೆಯವರಿಗಾದ ತಳಮಳದ ಚಿತ್ರವೂ ಹೃದಯಂಗಮವಾಗಿ ಮೂಡಿ ಬಂದಿದೆ. ರಾಮಣ್ಣನವರು ಗೋಪಾಲನನ್ನು ನೆನೆದು ಮರುಗಿ,

> ಅಯ್ಯೋ ಮುಂಡೇದೆ. ಕೋಣನ್ನ ಹೊತ್ತು ಕುದುರೆ ಬಡವಾಯಿತು ಅನ್ನೋ ಹಾಗೆ, ನಿನ್ನ ಈ ಸ್ಥಿತಿಗೆ ತರೋಕೆ ಪಾಪ, ಆ ಭಾಗ್ಯ ತಾಲೀನ ಮರದ ತಾಲಿ ಮಾಡ್ಕೊಂಡ್ತು....ಚೆನ್ನಾಗಿ ಬೆಳಸಿಟ್ಟ ಪಾರಿವಾಳಾನ ಗಿಡಗ ಬಂದು ಹಾರಿಸಿಕೊಂಡು ಹೋಗೋ ಹಾಗೆ, ಅದಾವುದೋ ರಕ್ಕಸಿ ಬಂದು ಹಾರಿಸಿಕೊಂಡು ಹೋಗಿಬಿಟ್ಟಳಲ್ಲ ....(ಪುಟ ೩೭)

ಎಂದು ಮುಂತಾಗಿ ಆಡಿ ಮರುಗಿದರು. ಇತರರ ಅಭಿಪ್ರಾಯವೂ ಹಾಗೆಯೇ ಇತ್ತು ಎಂಬುದನ್ನೂ ಕಥೆಗಾರರು ಸೂಚಿಸಿದ್ದಾರೆ. ಆದರೆ ಮಾಡುವುದೇನು? ಒಲ್ಲದ ಮನಸ್ಸಿನಿಂದ ಅವರೆಲ್ಲ ಗೋಪಾಲನ ಮದುವೆಗೆಂದು ಮೈಸೂರಿಗೆ ಹೋದರು. ಡೆಪ್ಯುಟಿ ಕಮೀಶನರರ ಡಬ್ಬು ಡೌಲು ಕಂಡು ಬೇಸರಗೊಂಡರು. ಗೋಪಾಲನನ್ನು ಕಂಡು ವ್ಯಥೆಗೊಂಡರು. ಮದುವೆ ಮುಗಿಸಿ ಹಿಂದಿರುಗಿದರು.

ಕಥೆಯ ವಿವರಗಳನ್ನು ಇಲ್ಲಿ ವಿಸ್ತರಿಸುತ್ತ ಹೋಗುವ ಅಗತ್ಯವಿಲ್ಲ. ಬದಲಾಗಿ ಮುಂದಿನ ಅಧ್ಯಾಯಗಳ ಶೀರ್ಷಿಕೆಗಳೇ ಕಥೆಯ ವಿವಿಧ ಮಜಲುಗಳನ್ನು ಸೂಚಿಸುತ್ತವೆ. ಆನೆಯ ಅಧ್ಯಾಯ 'ಅನಾಥ' ಹೆಂಡತಿಯ ಮನೆ ಸೇರಿ ಅನಾಥನಂತೆ ಕಾಲ ಹಾಕುತ್ತಿದ್ದ ಕಥಾನಾಯಕನ ನೀರಸ ಬಾಳನ್ನು ಪಡಿನುಡಿಯುತ್ತದೆ. ಮುಂದಿನ ಅಧ್ಯಾಯದಲ್ಲಿ ಅನ್ಯೋನ್ಯತೆಯಿಲ್ಲದ ಗೋಪಾಲ ದಂಪತಿಗಳ ಬಾಳಿಗೂ ಆತನ ಸಹೋದ್ಯೋಗಿಯಾಗಿದ್ದ ಗಣಪತಿ ಎಂಬಾತನ ಪ್ರೇಮಾದರಪೂರ್ಣ ದಾಂಪತ್ಯ ಜೀವನಕ್ಕೂ ಇದ್ದ ಅಂತರವನ್ನು 'ಎರಡು ಜತೆ–ಎರಡು ಮಾದರಿ' ಎಂದು ಹೆಸರಿಸಿ ವಿವರಿಸಿರುವುದನ್ನು ಕಾಣುತ್ತೇವೆ. ಪಟ್ಟಣದ ಬಣ್ಣದ ಬದುಕು ಎಷ್ಟೊಂದು ಪೊಳ್ಳಿನಿಂದ ಕೂಡಿದ್ದೆಂಬುದು ಇಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ.

'ಹಳ್ಳಿಯಲ್ಲಿ ಬಣ್ಣದ ಬೀಸಣಿಗೆ' ಎಂಬ ಶೀರ್ಷಿಕೆ ಗಂಡನೊಂದಿಗೆ ಮಲ್ಲಿಗೆಹಳ್ಳಿಗೆ

ಬಂದು, ತನ್ನ ಜಿಂಕ, ಬಿಗುಮಾನ ಪ್ರದರ್ಶಿಸುತ್ತಿದ್ದ ವತ್ಸಲೆಯ ಗುಣ, ಸ್ವಭಾವಗಳನ್ನು ಬಯಲಿಗೆಳೆದಿದೆ. ಕೊನೆಯದಾದ ೧೧ನೆಯ ಅಧ್ಯಾಯದ ಹೆಸರು 'ಶತ್ರು ಯಾರು ಮಿತ್ರ ಯಾರು.' ಮುಗ್ಧ ಗೋಪಾಲನಿಗೆ ಪಟ್ಟಣಿಗರ ಮರೆ ಮೋಸಗಳು ಖಚಿತವಾಗಿ ತಿಳಿಯಬಂದು, ಹಳ್ಳಿಯಲ್ಲಿ ನೆಲಸಲು ಮನಸಮಾಡಿ, ವತ್ಸಲೆ ಹಾಗೂ ಆಕೆಯ ತಾಯ್ತಂದೆಯರಿಗೆ ಬುದ್ಧಿ ಕಲಿಸಲು ಪ್ರಯತ್ನಿಸಿದ. ಕೊನೆಗೆ ವಿಫಲನಾದರೂ ತನ್ನ ಮಿತ್ರನ ಮುಖಾಂತರ ಗಂಡಾಂತರದಿಂದ ಪಾರಾಗಿ, ಕೊನೆಗೊಮ್ಮೆ ೧೯೪೨ರ ಆಗಸ್ಟ್ ತಿಂಗಳಲ್ಲಿ ರಾಷ್ಟ್ರದಲ್ಲಿದ್ದ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ, ತನ್ನ ಮಡದಿ, ಮನೆ ಮಠಗಳೆಂಬ ಭಾವನೆ ತೊರೆದು, ಜನತೆಯ ನಾಯಕನಾದಾಗ ಬಂಧಿಸಿ ಜೈಲಿಗೆ ಹಾಕಲು ಕರೆದೊಯ್ಯುತ್ತಿರುವಾಗ, ಸ್ವಂತ ಅನುಭವಿಸಿ ವಿವೇಕ ಗಳಿಸಿಕೊಂಡ ವತ್ಸಲೆಯೂ ಒಡವೆಗಳನ್ನೆಲ್ಲ ತೆಗೆದು ಸ್ವಯಂಸೇವಕನ ಕೈಗಿತ್ತು, ವೀರ ರಮಣಿಯಾಗಿ ಗಂಡನೊಂದಿಗೆ ಜೈಲಿಗೆ ಹೋಗುತ್ತಾಳೆ. ಆಕೆಗಾದರೂ ಕೊನೆಗೆ ಯಾವುದು ಸತ್ಯ, ಶಾಶ್ವತ ಎಂಬುದರ ಅರಿವಾಯಿತು. "ಅಂದು ವತ್ಸಲೆಗೆ ಪುನರ್ಜನ್ಮವಾಯಿತು...." (ಪುಟ ೧೧೪) ಗೋಪಾಲನಿಗಾದರೂ ಅಷ್ಟೆ. ಹೀಗೆ ತ್ಯಾಗಪೂರ್ಣವಾಗಿ ಮುಗಿಯುವ ಕಥೆ ಮಂಗಳಾಂತ: ಆದರ್ಶಮಯ; ಮಿಗಿಲಾಗಿ ಕಾಲಧರ್ಮೋಚಿತ.

೩

ಈ ಮೊದಲು ಸೂಚಿಸಿರುವಂತೆ ಇದು ರಾಷ್ಟ್ರದ ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ರೂಪಗೊಂಡ ಆದರ್ಶಪೂರ್ಣ ಕಥೆ. ಅದರಿಂದಾಗಿ ಕಥೆಯಲ್ಲಿ ಆಶ್ಚರ್ಯ ಹುಟ್ಟಿಸುವ ಆಕಸ್ಮಿಕ ಘಟನೆಗಳಾಗಲಿ, ಹೊಸ ತಿರುವುಗಳಾಗಲಿ ಕಡಮೆ. ಬಳಕೆಯಾಗಿರುವ ಕಥನ ತಂತ್ರವೂ ನೇರ, ಸರಳ. ಇಂದಿನ ತಂತ್ರಮೂಲ ಕಥೆಗಾರರ ದೃಷ್ಟಿಯಿಂದ ಇದು ಹಳಸಲು ಕಥೆ: ಅತ್ಯಂತ ವಾಚ್ಯವಾದ, ಗೊಂದಲವಿಲ್ಲದ ಸರಗಥೆ. ಆದರೆ ಇದು ರೂಪಗೊಂಡದ್ದು ನಲವತ್ತರ ಸುಮಾರಿನಲ್ಲಿ ಎಂಬುದನ್ನೂ ಇಲ್ಲಿ ಕಥೆಯ ಕೌತುಕ, ಕೌಶಲಗಳಿಗಿಂತ ಮಿಗಿಲಾಗಿ ಕಥೆ ಹೇಳಿರುವುದರ ಮುಖ್ಯೋದ್ದೇಶವೇನೆಂಬುದನ್ನೂ ಸರಿಯಾಗಿ ಅರಿತುಕೊಂಡು ಆಲೋಚಿಸಿ ನೋಡಬೇಕು. ಆಗ ಇದೂ ಕೂಡ ಉತ್ತಮ ಕಥನ ಕಲೆ ಹೊಂದಿರುವುದು ಮನದಟ್ಟಾಗುತ್ತದೆ. ಗೊರೂರರು ಹುಟ್ಟು ಕಥೆಗಾರರೆಂಬುದು ಸ್ಪಷ್ಟವಾಗುತ್ತದೆ.

ಸಮಯೋಚಿತವಾಗಿ ಜನತೆಯ ಆಡುನುಡಿಗಳನ್ನು ಸಾರ್ಥಕವಾಗಿ ಬಳಸುವುದರಲ್ಲಿ ಗೊರೂರರದು ಎತ್ತಿದ ಕೈ; ತುಂಬ ಪಳಗಿದ ಲೇಖನಿ. 'ಪುನರ್ಜನ್ಮ' ಕೃತಿಯ ತುಂಬ ಇಂಥ ವಿಶಿಷ್ಟ ನುಡಿಗಟ್ಟುಗಳು, ಗಾದೆಗಳು ಮತ್ತು ಉಪಮಾನಗಳು ಬಳಕೆಗೊಂಡಿವೆ. ಕೆಲವು ವ್ಯಾಖ್ಯಾನಗಳಂತೂ ಎಂಥವರ ಮನವನ್ನೂ ಮುಟ್ಟಿ ಮುದಗೊಳಿಸಬಲ್ಲಂತಿವೆ. ನಿದರ್ಶನಕ್ಕೆ "ಮತ್ತೊಬ್ಬ ನಿರ್ಗತಿಕನಾಗುವುದರಲ್ಲಿಯೇ ಸಮಾಜಕ್ಕೆ ಸಂತೋಷ.... ಅದಕ್ಕೆ ಬೇಕಾದ ಎಲ್ಲಾ ಕೆಲಸಗಳನ್ನೂ ಪ್ರಯತ್ನಗಳನ್ನೂ ಸಮಾಜ ಮಾಡುವುದು.

ರಂಗಪ್ಪನವರು ಸ್ವಭಾವದಿಂದ ಒಳ್ಳೆಯವರು. ಅವರು 'ಪಾಸರ್' ಆಗುವುದಕ್ಕೆ ಬೇಕಾದ ವರೆಲ್ಲಾ ತಮತಮಗೆ ಸಾಧ್ಯವಾದ ರೀತಿಗಳಲ್ಲೆಲ್ಲಾ ತರದೂದುಮಾಡಿದರು...." (ಪುಟ ೬) ಎಂಬ ನುಡಿಯನ್ನಾಗಲಿ, 'ತಳಲಿರುವವನು', 'ಜವಾಯಿಸು', 'ಜರ್ಬ್', 'ಓದದೆ ಮನೆಯಲ್ಲಿ ಎಷ್ಟು ಕಾಯ್ದುಕೊಂಡಿರು', 'ಯಾವ ಹುತ್ತದಲ್ಲಿಯಾದರೂ ಕೈಹಾಕಿ ಹಣ ತಂದು ಒದಗಿಸು'. 'ಅವರು ವೈದಿಕ ಸಾಧು ಪ್ರಾಣಿ' ಇವೇ ಮೊದಲಾದ ಪದಗಳು ಹಾಗೂ ಪದಪುಂಜಗಳನ್ನಾಗಲಿ ಗಮನಿಸಬಹುದು. ತಮ್ಮ ಅಭಿಪ್ರಾಯಗಳನ್ನು ಸೂಚಿಸುವಲ್ಲಿ ಅವರು ತೋರುವ ಜಾಣ್ಮೆಯನ್ನು ನಾವು ಮೆಚ್ಚಬೇಕು.

ಗೊರೂರರು ಹಳ್ಳಿಯಲ್ಲಿ ನೆಲಸಿ, ಹಳ್ಳಿಯ ಬಾಳಿನ ಹೊರಒಳಗುಗಳನ್ನರಿತಿರುವಂತೆಯೇ ನಗರಗಳಲ್ಲಿ ಜೀವಿಸಿ, ನಾಗರಿಕರ ಬದುಕಿನ ಥಳುಕು ಬೆಳಕುಗಳನ್ನೆಲ್ಲ ಮನಗಂಡಿದ್ದಾರೆಂಬುದಕ್ಕೆ 'ಪುನರ್ಜನ್ಮ' ಕೃತಿಯಲ್ಲಿ ಉತ್ತಮ ಸಾಬಿತಿ ದೊರೆಯುತ್ತದೆ.

ನಾಗರಿಕವಾಗಿರಲಿ, ಗ್ರಾಮ್ಯವಾಗಿರಲಿ ಒಂದು ವಾತಾವರಣವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಜಾಣ್ಮೆ, ನಿಶಿತ ದೃಷ್ಟಿ ಗೊರೂರರ ವಿಶಿಷ್ಟ ಶಕ್ತಿ. ಅಪ್ರೋಕ್ತಿಗೆ ವಿಖ್ಯಾತವಾಗಿದ್ದ ಒಂದು ಕಾರಿನ ಒಳ ವಾತಾವರಣದ ವರ್ಣನೆ ಹೀಗಿದೆ:

> ಅದು ಒಳ್ಳೆಯ ಸಿಡನ್ ಕಾರು. ಒಳಗೆ ಹಸಿರು ಬಣ್ಣದ ಒಂದು ಸಣ್ಣ ಬಲ್ಬು ಹಾಕಿತ್ತು. ಮಳೆಯ ದೆಸೆಯಿಂದ ಎಲ್ಲಾ ಬಾಗಿಲುಗಳನ್ನೂ ಮುಚ್ಚಿತ್ತು. ಒಳಗೆ ಬೆಚ್ಚಗೆ ಬಹಳ ಹಿತವಾಗಿತ್ತು. ಕಾರು, ಕಾರೇ ಆದರೂ ಗಂಧರ್ವಮಾರ್ಗದಲ್ಲಿ ಹೋಗುತ್ತಿರುವ ಪುಷ್ಪಕದಂತೆ ತೋರಿತು. ಹಿಂದಲ ಸೀಟಿನಿಂದ ಅತಿ ಮನೋಹರವಾದ ಜಾಜಿಯ ಹೂವಿನ ವಾಸನೆಯೂ ಮತ್ತಾವುದೋ ಸೆಂಟಿನ ಗಮವೂ ತೇಲಿ ತೇಲಿ ಅಲೆಯ ಹಿಂದೆ ಅಲೆಯಾಗಿ ಬೀಸಿ, ಗೋಪಾಲನನ್ನು ಪ್ರಫುಲ್ಲಿತನನ್ನಾಗಿ ಮಾಡಿದುವು....(ಪುಟ ೨೫)

ಗೊರೂರರದು ಹಾಸ್ಯರಸ ಬೆರೆತ ಮಧುರ ಶೈಲಿ. ಅದಕ್ಕೆ ಒಂದು ನಿದರ್ಶನ ಎತ್ತಿ ಬರೆಯಬಹುದು. ಗೋಪಾಲ ತುಂಬ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದು ಸ್ನೇಹಿತರ ಬಳಿ ಗೋಗರೆದು ಸಹಾಯ ಯಾಚಿಸುತ್ತಿರುವಾಗ ಎನ್ನುತ್ತಾನೆ, "ಆದದ್ದಾಗಲಿ ನಿಮಗೆ ಕೈಮುಗಿಯುತ್ತೇನೆ...." (ಪುಟ ೮೮) ಆಗ ಆತನ ಸ್ನೇಹಿತ ಗಣಪತಿ ಗೋಪಾಲನ ಕೈಗೆ ಟೆಲಿಫೋನ್ ಕೊಟ್ಟು "ಆ ಮಾತನ್ನು ಅದರೊಳಕ್ಕೆ ಹೇಳಿ, ನನಗ್ಯಾಕೆ ಹೇಳುತ್ತೀರಿ" (ಪುಟ ೮೮) ಎಂದನಂತೆ. ಆ ಕಡೆ ತುದಿಯಲ್ಲಿ ರಿಸೀವರ್ ಹಿಡಿದಿದ್ದವಳು ಗೋಪಾಲನ ಹೆಂಡತಿ ವತ್ಸಲೆ ಎಂಬುದು ಗಣಪತಿಗೂ ಗೊತ್ತಿತ್ತು. ಇಂಥ ನುಡಿಗಳು ಹತ್ತಾರಿವೆ.

ಒಟ್ಟಾರೆ ಕಥನ ತಂತ್ರ, ಭಾಷಾಶೈಲಿ ಮತ್ತು ನಿರೂಪಣ ನಿಯಮಗಳಲ್ಲಿ ಇವೊತ್ತು ಬಹಳಷ್ಟು ಬದಲಾವಣೆಗಳು ತಲೆದೋರಿದ್ದರೂ ಕಥೆಯ ಸತ್ವದ ದೃಷ್ಟಿಯಿಂದ, ಪರಿಣಾಮದ ದೃಷ್ಟಿಯಿಂದ, ನುಡಿಗಟ್ಟುಗಳ ಸಾರ್ಥಕ ಪ್ರಯೋಗದ ದೃಷ್ಟಿಯಿಂದ ಗೊರೂರರು ಹಳಬರಾಗಿದ್ದರೂ ತೀರ ಸಪ್ಪೆ ಎನ್ನಿಸುವುದಿಲ್ಲ. ಹುಣಿಸೆಮರ

ಮುದಿಯಾದರೂ ಹುಲಿ ಮುಪ್ಪಾಗದ ಹಾಗೆ, ಕಾಲದ ದೃಷ್ಟಿಯಿಂದ ಹಳತಾದರೂ ಸತ್ವದ ದೃಷ್ಟಿಯಿಂದ ಇಂದಿಗೂ ಚೊಕ್ಕ ಬಂಗಾರದಂತಿರುವ ಇಂಥ ಹಿರಿಯ ಸಾಹಿತಿಗಳ ಕೃತಿಗಳನ್ನು ನಾನಾ ದೃಷ್ಟಿಕೋನದಿಂದ ಅರಿತುಕೊಳ್ಳುವುದು ಆವಶ್ಯಕ. ಗೊರೂರರ ಸಾಹಿತ್ಯ ಕನ್ನಡಕ್ಕೆ ವಿಶಿಷ್ಟವಾದ ಶಾಶ್ವತ ಕೊಡುಗೆ ಎಂಬುದರಲ್ಲಿ ಅನುಮಾನವಿಲ್ಲ.

‘ಮರೆವಣಿಗೆ’

ಎನ್. ಬೋರಲಿಂಗಯ್ಯ

೧

“ವೈಯಕ್ತಿಕವಾಗಿ ಪಾತ್ರ ಸನ್ನಿವೇಶಗಳು ಬದುಕಿನ ಲವಲವಿಕೆಯಿಂದ ತುಂಬಿಕೊಂಡು ಪ್ರತಿಕ್ಷಣಕ್ಕೂ ಬದುಕಿನ ಭೌತಿಕ ಅನಿಸಿಕೆಯನ್ನು ಹುಟ್ಟಿಸುತ್ತಿದ್ದರೂ ಒಟ್ಟು ಸಂವಿಧಾನ ದಲ್ಲಿ ಕಾದಂಬರಿ ಅರ್ಥಪೂರ್ಣತೆಯನ್ನೂ ಸಮಗ್ರ ದರ್ಶನವನ್ನೂ ಪ್ರಕಟಿಸದೆ ಹೋಗ ಬಹುದು. ಲೇಖಕ ಜೀವಂತ ಪಾತ್ರ ಸನ್ನಿವೇಶಗಳನ್ನು ಮುಂದಿಟ್ಟು—ಇದು ಜೀವನ. a slice of life—ಎಂದು ಹೇಳಿಬಿಡಬಹುದು. ಆಗ ಅಂತಹ ಕೃತಿಗಳ ಸಾಹಿತ್ಯಿಕ ಬೆಲೆಯೇನು? ತಾನು ಮುಂದಿಡುತ್ತಿರುವ ಅನುಭವವನ್ನು ಬೆಲೆಗಟ್ಟುವ ಕೆಲಸದಿಂದ ಲೇಖಕ ತಪ್ಪಿಸಿಕೊಳ್ಳುವುದು ಕಲೆಯ ದೃಷ್ಟಿಯಿಂದ ಸರಿಯಾದದ್ದೇ.”

“ಆದರೆ ಸಾಹಿತ್ಯ ಕೃತಿಯಿಂದ ನಾನು ಬಯಸುವುದು ಕೇವಲ ಜ್ಞಾನವಲ್ಲ, ವಿಷಯ ಗಳನ್ನು ಮತ್ತು ಅನುಭವಗಳನ್ನು ಅರ್ಥಪೂರ್ಣ ಬಂಧದಲ್ಲಿ ಹಿಡಿದಿಟ್ಟು ‘ಸತ್ಯ’ಗಳನ್ನು ಅನುಭವಗಳನ್ನಾಗಿ ಪರಿವರ್ತಿಸಬಲ್ಲ ಶಕ್ತಿ.”

ಈ ಬಗೆಯ ವಾದಗಳು ಆಧುನಿಕ ಕನ್ನಡ ವಿಮರ್ಶೆಯಲ್ಲಿ ಮೇಲಿಂದ ಮೇಲೆ ಕಾಣಿಸಿ ಕೊಳ್ಳುತ್ತಿರುವ ಮುಖ್ಯಾಂಶಗಳು ಎಂಬುದು ಇಲ್ಲಿ ನನಗೆ ಅವಶ್ಯಕ. ಒಂದು ದೃಷ್ಟಿ ಯಿಂದ ಇವು ಇಂದಿನ ವಿಮರ್ಶೆಯಲ್ಲಿ ಸಾವು ಬದುಕಿನ ಸಮಸ್ಯೆ ಎಂಬಂತೆ ಪರಿಗಣಿತ ವಾಗುತ್ತಿರುವ ಬಂಡವಾಳ ರೂಪವಾದ ಮೂಲತತ್ವ ಎಂಬುದೂ ಇಲ್ಲಿ ಗಮನಾರ್ಹ. ಯಾಕೆಂದರೆ ಇಂಥ ಸೂತ್ರಗಳಿಗೇ ಹೆಚ್ಚು ಪ್ರಾಧಾನ್ಯವಿತ್ತಾಗ ಆಗಬಹುದಾದ ಗಣ ನೀಯ ನಷ್ಟಗಳನ್ನು ಕುರಿತು ಒಂದು ಪ್ರಮುಖವಾದ ಕೃತಿಯ ಮೂಲಕ ಚರ್ಚಿಸುವ ಹಂಚಿಕೆ ಈ ಲೇಖನದ ಉದ್ದೇಶವಾಗಿದೆ.

ಸಾಹಿತ್ಯವೂ ಒಂದು ಕಲೆಯಾಗಿರುವುದರಿಂದ ಅದರ ಮುಖ್ಯ ಲಕ್ಷ್ಯ ರಸಯೋಗದ

ತನ್ಮೂಲಕ ಆನಂದದ ಕಡೆಗಿರುತ್ತವೆ ಎಂಬುದನ್ನು ಬಹುತೇಕ ಎಲ್ಲ ವಿಮರ್ಶಕರೂ ಒಂದಲ್ಲ ಒಂದು ದೃಷ್ಟಿಯಿಂದ ಒಪ್ಪಿಕೊಳ್ಳುತ್ತಾರೆ. ಭಾರತೀಯ ಕಾವ್ಯಮೀಮಾಂಸೆಯಂತೂ ಸಾಹಿತ್ಯದಲ್ಲಿ ರಸವೊಂದಿದ್ದರೆ ಸಾಕು ಉಳಿದದ್ದು ಇದ್ದರೆಷ್ಟು ಬಿಟ್ಟರೆಷ್ಟು ಎಂದು ಬಹಳಷ್ಟು ಹಿಂದೆಯೇ ಸಾರಿಬಿಟ್ಟಿತ್ತು. ಅದರ ವಿವಿಧ ಪ್ರಕಾರಗಳ ಸ್ವರೂಪಕ್ಕನುಗುಣವಾಗಿ ಸಾಹಿತ್ಯದ ರಸಭಾವಗಳು ಭಾಷೆ ರೀತಿ ಅಲಂಕಾರ ತಂತ್ರ ಪ್ರತಿಮೆ ಮುಂತಾದ ಪರಿಕರಗಳ ಮೂಲಕ ಪ್ರಕಾಶಿತವಾಗಬೇಕಾಗಿವೆ ಎಂಬ ಮಾತಿನ ಹಿಂದೆಯೂ ಈ ಎಲ್ಲದರ ಮುಡಿಮೆಯ ಫಲ ರಸಪರಿಪಾಕ ಎಂಬುದನ್ನು ತರ್ಕಿಸಿ ತೋರಿಸಬಹುದಾಗಿದೆ. ಅನುಭವ ಮತ್ತು ಅಭಿವ್ಯಕ್ತಿಗಳು ಭಾಷೆಯ ಮೂಲಕ ಪಡೆಯುವ ಸಂಬಂಧ, ಹುಟ್ಟಿಸುವ ಸ್ನೈಜತೆ ಸಮಾಜದ ಅಥವಾ ಜೀವನದ ಯಾವ ಮೌಲ್ಯವನ್ನು ರೂಪಿಸಲು ಸಮರ್ಥವಾಗಿದೆ ಎಂಬುದೇ ಅಲ್ಲಿ ಆಗುವ ಆನಂದದ ಪರಿಮಾಣವನ್ನು ಅಳೆಯುವ ಸಾಧನ. ಈ ಮಾತು ಕೃತಿಯ ಒಟ್ಟು ಪರಿಣಾಮಕ್ಕೆ ಹೇಗೋ ಹಾಗೆ ಅದರ ಬಿಡಿ ಭಾಗಗಳಿಗೂ ಅಷ್ಟೇ ಅನಿವಾರ್ಯವಾಗಿ ಸಂಬಂಧಿಸಿರುತ್ತದೆ ಎಂಬುದನ್ನು ನಾನಿಲ್ಲಿ ಒತ್ತಿ ಹೇಳಬೇಕಾಗಿದೆ. ಇಂದು ಬದುಕನ್ನು ಅದರ ವಾಸ್ತವ ಸತ್ಯದಲ್ಲಿ ಸಮಗ್ರವಾಗಿ ಕಲ್ಪಿಸಿಕೊಳ್ಳುವುದು, ಒಂದು ಶಿಲ್ಪಕ್ಕೆ ಅಳವಡಿಸಿಕೊಳ್ಳುವುದು ಎಂಬ ಮಾತೇ ಅಸಂಬದ್ಧ. ಒಬ್ಬ ಮನುಷ್ಯನ ಆಲೋಚನೆಯ ಮೂಲಕ ಜೀವನವನ್ನು ಒಂದು ಹದಕ್ಕೆ ಅಥವಾ ಅಭಿಪ್ರಾಯಕ್ಕೆ ಜಗ್ಗಬಹುದಾದರೂ ಅದು ಕಲೆಯ ದೃಷ್ಟಿಯಿಂದ ಎಷ್ಟೇ ಮುಖ್ಯವೆನಿಸಿದರೂ ಬಹುಶಃ ಅದೇ ಕೊನೆಯ ಮಾತಾಗಲಾರದು. ಆದ್ದರಿಂದ ವಿಮರ್ಶೆಯ ಅನುಕೂಲಕ್ಕಾಗಿ ಶಿಲ್ಪಕಲ್ಪನೆ ಎಷ್ಟೇ ಮುಖ್ಯವೆನಿಸಿದರೂ ಜೀವನಾನುಭವಗಳನ್ನೇ ನಚ್ಚಿ ಸಾಹಿತ್ಯ ರಚನೆಯ ಯಾವ ಸೂತ್ರಗಳಿಗೂ ತಮ್ಮನ್ನು ತಾವು ಒಪ್ಪಿಸಿಕೊಳ್ಳದೆ ರಚನೆಯಾಗುತ್ತಿರುವ ಕೃತಿಗಳ ವಿಷಯದಲ್ಲಿ ಅದನ್ನು ಪಟ್ಟು ಹಿಡಿದು ವಾದಿಸಿದರೆ ಹಲವು ವೇಳೆ ಅನ್ಯಾಯದ ತೀರ್ಪು ಕೊಡಬೇಕಾಗುತ್ತದೆ ಅಥವಾ ಅಂಥ ಕೃತಿಗಳನ್ನು ಅನಾಮಿಕವಾಗಿಯೆ ಉಳಿಸಬೇಕಾಗುತ್ತದೆ. ಒಳ್ಳೆಯ ರುಚಿ ಮತ್ತು ಶುಚಿಗಳನ್ನು ಉಳ್ಳ ಉದಾತ್ತ ಧ್ಯೇಯ ಧೋರಣೆಗಳ ಸಾಹಿತ್ಯ ಹೇಗೆಯೆ ಇದ್ದರೂ ಗಮನಾರ್ಹ ಎಂಬುದೇ ನನಗೆ ಸರಿಯಾಗಿ ತೋರುತ್ತದೆ.

ಹೀಗೆ ಹೇಳುವುದಕ್ಕೆ ಇನ್ನೊಂದು ಕಾರಣವೂ ಇದೆ. ಆಧುನಿಕ ವಿಮರ್ಶೆ ವಿನಾ ಕಾರಣ ಅಥವಾ ತನ್ನ ನಿರ್ದಿಷ್ಟ ಸೂತ್ರಗಳಿಗೆ ಒಳಪಡದ ಕಾರಣ ಕೆಲವು ಶಕ್ತಿಶಾಲಿ ಲೇಖಕರನ್ನು ಅನಾಮತ್ತಾಗಿ ಹೊರಗಿಟ್ಟುಬಿಟ್ಟಿದೆ. ಸಮನ್ವಯವಾದಿಗಳೆಂದು ಪ್ರಖ್ಯಾತರಾಗಿರುವ ಶಿವರುದ್ರಪ್ಪ, ಚನ್ನವೀರ ಕಣವಿ, ನಿಸಾರ್ ಅಹಮದ್ ಮುಂತಾದವರನ್ನು ಇಲ್ಲಿ ಉದಾಹರಿಸಬಹುದು. ಲೋಪ ದೋಷಗಳನ್ನು ಗುರುತಿಸುವ ಸಲುವಾಗಿ ಮಾತ್ರವೋ ವಿಮರ್ಶೆಯ ಹೊರಗಿನ ಕಾರಣಗಳಿಗಾಗಿಯೋ ಕೆಲವು ರೊಮ್ಯಾಂಟಿಕ್ ಸಂಪ್ರದಾಯದ ಲೇಖಕರನ್ನು ಲೆಕ್ಕಿಸುತ್ತಿದ್ದರೂ ನ್ಯಾಯನಿಷ್ಠುರ ಧೋರಣೆಯಿಂದ ಸಮಗ್ರ ಸಾಹಿತ್ಯವನ್ನು ನಮ್ಮ ವಿಮರ್ಶಕರು ಪ್ರತಿನಿಧಿಸುತ್ತಿಲ್ಲ ಎಂಬುದಕ್ಕೆ ಅನೇಕ

ಕಾರಣಗಳಿರಬಹುದು. ಅವು ವಿಮರ್ಶಾ ಕ್ಷೇತ್ರಕ್ಕೆ ಹೊರಗಿನ ಕಾರಣಗಳಾಗಿರುವುದರಿಂದ ಅವುಗಳನ್ನಿಲ್ಲಿ ಪಟ್ಟಿಮಾಡುವುದು ಅನಾವಶ್ಯಕ.

೨

ಅಂಥ—ವಿಷಾದದಿಂದಲೇ ಹೇಳಬೇಕಾಗಿದೆ—ಅಲಕ್ಷಿತ ಶ್ರೇಷ್ಠ ಬರಹಗಾರರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಒಬ್ಬರು. ಹಳ್ಳಿಯಲ್ಲಿಯೇ ಹುಟ್ಟಿ ಹಳ್ಳಿಯಲ್ಲಿಯೇ ಬೆಳೆದು ಹಳ್ಳಿಯಲ್ಲಿಯೇ ವಾಸಿಸಿ ಎಪ್ಪತ್ತರ ಹರೆಯದ ಶ್ರೀಮಂತ ಚಟುವಟಿಕೆಯನ್ನು ಪ್ರಕಟಿಸುತ್ತ ಸಾಹಿತ್ಯದ ಅನೇಕ ಮುಖಗಳಲ್ಲಿ ಆಸಕ್ತಿಗಳನ್ನು ಕೆರಳಿಸಿಕೊಂಡು ಜೀವಂತವಾಗಿರುವ ಇವರಲ್ಲಿ ಮಣ್ಣಿನ ವಾಸನೆ ಇಲ್ಲ ಎನ್ನುವುದಾದರೆ ಮತ್ತೆಲ್ಲಿ ಅದನ್ನು ಹುಡುಕುವುದು. ಮಣ್ಣಿನ ಮಕ್ಕಳ ನಡುವೆ ಪ್ರಕೃತಿಗೆ ತೀರ ಹತ್ತಿರವಾಗಿದ್ದುಕೊಂಡು ಬರೆಯುತ್ತಿರುವ ಗೊರೂರರಲ್ಲಿ ಹೊಡೆಯುತ್ತಿರುವ ಮಣ್ಣಿನ ವಾಸನೆ ಸಂಸ್ಕೃತಿಯ ಸಂಪನ್ನತೆಯಿಂದ ಅರ್ಥವತ್ತಾಗಿರುವುದರಿಂದ ಬಹುಶಃ ಅದು ಅಷ್ಟು ಗಮನಾರ್ಹ ಅಲ್ಲ ಎನಿಸಿರಬೇಕು ಎಷ್ಟೋ ಜನ ಹೊಸ ವಿಮರ್ಶಕರಿಗೆ. ಯಾಕೆಂದರೆ ಸಂಸ್ಕೃತಿ ಎನ್ನುವ ಪದವೇ ಅವರಿಗೆ ವಾಕರಿಕೆ ತರುವಂಥ ರೊಮ್ಯಾಂಟಿಕ್ ಸಂಪ್ರದಾಯದ ಸ್ಫೂರ್ತಿ ಕೇಂದ್ರವಾಗಿದೆ. ಹೊಲಸಿನ ಜತೆಯೇ ನೆಂಟಸ್ತಿಕೆಯನ್ನು ಸಾಧಿಸುವ ಸೊಣದ ಜಾತಿ ಇವರದ್ದು ಎಂದು ಹಿರಿಯರೊಬ್ಬರು ಬೈದದ್ದು ಕೊಂಚ ಕಟುವೆನಿಸಿದರೂ ವಿಮರ್ಶೆಯಲ್ಲಿ ಅನಾವಶ್ಯಕ ಪಕ್ಷಪಾತವನ್ನು ಕಂಡಾಗ, ಗೊರೂರರಂಥ ಲೇಖಕರನ್ನು ಕುರಿತು ವಿಚಾರ ನಡೆಸದೇ ಹೋದಾಗ ಅಸಮಾಧಾನ ಉಂಟಾಗುವುದು ಬಹುಶಃ ಸ್ವಾಭಾವಿಕ.

ಪರಂಪರೆ ಮತ್ತು ಸ್ವಾನುಭವಗಳ ಅದ್ಭುತ ಹೊಂದಾಣಿಕೆಯಿಂದ ಮೈತಳೆಯುವ ಗೊರೂರರ ರೀತಿ ಬಹುಶಃ ವಿಶಿಷ್ಟವಾದುದು ಎಂದೂ ಹೇಳಬಹುದಾಗಿದೆ. ಪರಂಪರೆಯನ್ನು ಅವರು ಎಂದೂ ಕಣ್ಣುಮುಚ್ಚಿಕೊಂಡು ಅನುಸರಿಸುತ್ತಿರುವಂತೆ ತೋರುತ್ತಿಲ್ಲ. ಅಲ್ಲಿರುವ ಅಶುದ್ಧವನ್ನು ತೀರ ಎಚ್ಚರಿಕೆಯಿಂದ ನಿವಾರಿಸಿಕೊಂಡು ತಮ್ಮದೇ ಆದ ಅರ್ಥಪೂರ್ಣವಾದ ಜೀವನ ಕಲ್ಪನೆಯನ್ನು ಓದುಗನಲ್ಲಿ ಮೂಡಿಸುತ್ತ ಹೋಗುವ ಕಲೆಗಾರಿಕೆ ಅವರಿಗೆ ಸಿದ್ಧಿಸಿದೆ. ಅಲ್ಪವಾದುದಕ್ಕೆ, ಉನ್ನತವಾದ ಮೌಲಿಕ ಅರ್ಥವಿಲ್ಲದುದಕ್ಕೆ ಗೊರೂರರ ಬರವಣಿಗೆ ಮಹತ್ವವನ್ನು ಕೊಡುವುದಿಲ್ಲ. 'ಮೆರವಣಿಗೆ'ಯಲ್ಲಿ ಬರುವ ಒಂದು ಸಂದರ್ಭದ ಉದ್ಧರಣೆಯಿಂದ ಈ ಅಭಿಪ್ರಾಯವನ್ನು ಮತ್ತಷ್ಟು ಗಟ್ಟಿಗೊಳಿಸಬಹುದು :

> ಹಳೆಯ ಮನೆಯನ್ನು ಕೆಡವಿ ಅದರ ಸ್ಥಳದಲ್ಲಿ ಹೊಸ ಮಂಗಳೂರು ಹೆಂಚಿನ ಮನೆ ಕಟ್ಟಿಸಿದರು. ಒಂದು ಸಲ ಅವರು ತಮ್ಮ ಅಣ್ಣಂದಿರು ಯಜಮಾನರೊಂದಿಗೆ "ಇಲ್ಲಿ ನೋಡಿ ನಾವೂ ನೀವೂ ಒಂದೇ ಸಮನಾಗಿ ಪ್ರಾರಂಭಿಸಿದೆವು. ನಿಮಗಿಂತ ಹೆಚ್ಚಾಗಿ

ನನಗೆ ಯಾರೂ ಏನನ್ನೂ ಪ್ರಾರಂಭದಲ್ಲಿ ಕೊಡಲಿಲ್ಲ. ಆದರೂ ಈಗ ನನ್ನ ಆಸ್ತಿ ಲಕ್ಷಕ್ಕೆ ಮೀರಿತು. ನಿಮ್ಮದು ಇದ್ದಂತೆಯೇ ಇದೆ” ಎಂದರು. ಯಜಮಾನರು “ನಿನ್ನ ಹಾಗೆ ಹಣವನ್ನು ವೃದ್ಧಿಮಾಡುವ ಶಕ್ತಿ ನನಗೆ ಇಲ್ಲ. ಆದರೆ ನೀನು ಹಣ ಸಂಪಾದಿಸಿದುದೇ ಅಂತಹ ಮಹತ್ಕಾರ್ಯವಾಗಲಿಲ್ಲ. ಇದಕ್ಕಿಂತ ಇನ್ನೂ ಎಷ್ಟೋ ಮಹತ್ಕಾರ್ಯಗಳಿಗೆ ನಿನ್ನ ಶಕ್ತಿಯನ್ನು ತಿರುಗಿಸಬಹುದಾಗಿದ್ದಿತು. ಇನ್ನು ಇರುವುದೇನು ? ಕೊನೆಯಲ್ಲಿ ನನಗೂ ಎರಡು ಗಾಡಿ ನಿನಗೂ ಎರಡು ಗಾಡಿ ಸೌದೆ. ನೀನು ಕೂಡಿಟ್ಟಿರುವ ಹಣದಿಂದ ನಿನ್ನ ನಂತರ ನಿನ್ನ ಮಗ ಅನಂತು ಮೋಜು ಮಾಡುವನು” ಎಂದರು. (ಪುಟ ೮೭)

ಈ ಪ್ಯಾರಾದ ಕೊನೆಯ ವಾಕ್ಯಕ್ಕೆ ತಕ್ಕಮಟ್ಟಿಗೆ ಉತ್ತಮವಾದ ಅರ್ಥವನ್ನು ಹೇಳಿ ಅದರ ಅಭಿಪ್ರಾಯವನ್ನು ವಿರೋಧಿಸಬಹುದಾದ ಸಾಧ್ಯತೆಗಳಿದ್ದರೂ ಒಟ್ಟು ಪ್ಯಾರಾದ ಆಶಯ ಪ್ರಕಟಿಸುತ್ತಿರುವ ಜೀವನ ಕಲ್ಪನೆ ನಿಜವಾಗಿಯೂ ಉನ್ನತವಾದುದು ಎಂಬುದು ಮಾತ್ರ ನಿಸ್ಸಂಶಯ. ಇಂಥ ಶುದ್ಧ ಅಭಿರುಚಿಯನ್ನೂ, ತಮ್ಮ ಸುತ್ತಮುತ್ತಣ ಬದುಕಿನ ಜತೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಮೂಲಕ ಪಡೆದು ಕೊಂಡ ಅರ್ಥಪೂರ್ಣವಾದ ಅನುಭವಗಳನ್ನೂ, ಈ ಅನುಭವಗಳನ್ನು, ಕರಾರುವಾಕ್ಕಾಗಿ ಪ್ರಕಟಿಸುವಂತಹ ಕಸುವಿನಿಂದ ಕೂಡಿರುವ ಭಾಷೆಯನ್ನೂ, ಈ ಎಲ್ಲಕ್ಕಿಂತ ಮಿಗಿಲಾಗಿ ಪರಂಪರೆಯನ್ನು ಮಥಿಸಿ ಸ್ವಾನುಭವಗಳನ್ನು ಶೋಧಿಸಿ ಹುಟ್ಟಿಸುವ ಸಂಶುದ್ಧ ವಾದ ಉನ್ನತವಾದ ಜೀವನ ಕಲ್ಪನೆಗಳನ್ನೂ ಅವರ ಬರವಣಿಗೆಗಳಲ್ಲಿ ಕಾಣುತ್ತೇವೆ ಎಂಬುದೇ ಅವರು ಶ್ರೇಷ್ಠ ಬರಹಗಾರರು ಎಂದು ನಾನು ಹೇಳುತ್ತಿರುವುದಕ್ಕೆ ಮುಖ್ಯ ಕಾರಣ.

ಗೊರೂರು ರಾಮಸ್ವಾಮಿ ಅಯ್ಯಂಗಾರರ ಪ್ರಾತಿನಿಧಿಕ ಕೃತಿಗಳಲ್ಲಿ ಒಂದಾದ ‘ಮೆರೆವಣಿಗೆ’ಯನ್ನು ಈ ಹಿನ್ನೆಲೆಯಲ್ಲಿ ಕೊಂಚ ವಿಶದವಾಗಿ ವಿಚಾರ ಮಾಡುವ ಹರು ವನ್ನು ನಾನಿಲ್ಲಿ ಹಾಕಿಕೊಂಡಿದ್ದೇನೆ.

ಗೊರೂರರ ‘ಮೆರೆವಣಿಗೆ’ಯನ್ನು ಕೃತಿನಿಷ್ಠವಾಗಿ ಗಂಭೀರ ವಿಮರ್ಶೆಯ ಮಟ್ಟ ದಲ್ಲಿ ಪರಿಗಣಿಸುವಾಗ ವಿಮರ್ಶಕನಿಗೆ ಎದುರಾಗುವ ಮೊದಲನೆಯ ಸವಾಲೆಂದರೆ ಈ ಕೃತಿಯನ್ನು ಪ್ರಚಲಿತವಾಗಿರುವ ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರಿಸಿ ವಿಚಾರ ಮಾಡಬೇಕು ಎಂಬುದು. ಲೇಖನದ ಆರಂಭದಲ್ಲಿಯೆ ಪ್ರಸ್ತಾಪಿಸಿರುವ ಆಧುನಿಕ ವಿಮರ್ಶಾತ್ಮಕ ಧೋರಣೆಯ ದೃಷ್ಟಿಯಿಂದ ಇದು ಸಾಹಿತ್ಯದ ಯಾವ ಪ್ರಕಾರಕ್ಕೂ ಖಚಿತವಾಗಿ ಸೇರದೇ ಹೋಗುವ ಸಂಭವವೇ ಹೆಚ್ಚು. ಆದರೆ ಕೃತಿಯಲ್ಲಿ ಚಿತ್ರಿತವಾಗಿ ರುವ ಬಿಡಿಬಿಡಿಯಾದ ಜೀವನಾನುಭವಗಳು ಓದುಗನನ್ನು ತನ್ನ ಹಿಡಿತಕ್ಕೆ ತೆಗೆದು ಕೊಂಡು ಓದಿಸಿಕೊಳ್ಳುವ ಗುಣವನ್ನು ದೊಡ್ಡ ಪ್ರಮಾಣದಲ್ಲಿಯೆ ಪಡೆದಿವೆ. ಅಷ್ಟು ಮಾತ್ರವಲ್ಲ ಉತ್ತಮ ಕೃತಿಗಳನ್ನು ಓದುವಾಗ ಉಂಟಾಗುವ ಆನಂದವೂ ಆಗುತ್ತದೆ.

ಸಾಹಿತ್ಯದ ನಿಜವಾದ ಉದ್ದೇಶ ರಸಯೋಗ ಮತ್ತು ಆನಂದ ಎಂಬುದು ನಿಜವಾದರೆ ಅದು ಇಲ್ಲಿ ದೊಡ್ಡ ಪ್ರಮಾಣದಲ್ಲಿಯೆ ಲಭ್ಯವಾಗುತ್ತದೆ. 'ಮೆರವಣಿಗೆ' ಎಂಬ ಹೆಸರಿನಲ್ಲಿರುವ ಧ್ವನಿಯು ಜೀವನದ ವಿವಿಧ ಅನುಭವಗಳನ್ನು ಅವರ ಜೀವಂತ ವಿಧಾನಗಳೊಡನೆ ಸಾಲು ಹಿಡಿದು ನಿಲ್ಲಿಸುವುದರ ಕಡೆಗಿರುವಂತೆಯೆ ತೋರುತ್ತದೆ. ಇಲ್ಲಿ ಲೇಖಕರು ಯಾವ ದೀರ್ಘವಾದ ರಮ್ಯವಾದ ಕತೆಯನ್ನೂ ಆಧರಿಸದೆ, ನಿತ್ಯ ರಚನೆಯಲ್ಲಿ ತಿರುವು ಮುರಿವುಗಳನ್ನು ಕಲ್ಪಿಸುವಂತಹ ಘಟನಾತ್ಮಕ ನಾಟಕೀಯ ಸನ್ನಿವೇಶಗಳನ್ನೂ ಇಟ್ಟುಕೊಳ್ಳದೆ, ಸಂವಿಧಾನ ಸನ್ನಿವೇಶ ನಿರ್ಮಾಣವೇ ಮುಂತಾದ ಕಲಾತ್ಮಕ ಅನ್ಯ ತಂತ್ರಗಳೊಂದನ್ನೂ ಅವಲಂಬಿಸದೆ ನಿರ್ಮಲವಾಗಿ–ಹಾಸ್ಯ ರೀತಿಯೊಂದು ಹೊರತು–ನಿರಾಭರಣವಾಗಿ ತೋರುವಂತೆ ಜಳಜಳನೆ ಹರಿಯುವ ಜೀವನಾನುಭವಗಳ ಸುಂದರ ಅಭಿವ್ಯಕ್ತಿಯ ಮೂಲಕವೆ ಸೊಗಸನ್ನು ಕುದುರಿಸುವ ಪರಿಪೂರ್ಣವಾದೊಂದು ಜೀವನ ದರ್ಶನವನ್ನು ರೂಪಿಸುವ ಈ ಕೃತಿಯನ್ನು ಸಾಹಿತ್ಯ ಕೃತಿಯಲ್ಲ ಎಂದು ಹೇಳಲಾದೀತೆ?

ಎಂಟುನೂರು ಪುಟಗಳ ದೊಡ್ಡ ವ್ಯಾಪ್ತಿಯಲ್ಲಿ ಚೆಲ್ಲಿಕೊಳ್ಳುವ, ಭೂಮಿಯಲ್ಲಿ ಬೇರು ಬಿಟ್ಟು ಗಟ್ಟಿ ನೆಲದಲ್ಲಿ ಕಾಲೂರಿ ನಿಂತು ಚೆಲುವಾಗಿ ರಂಜಿಸುತ್ತಿರುವ ಜೀವನಾನುಭವಗಳ ಅಗಾಧತೆ ಯಾರನ್ನೇ ಆದರೂ ಬೆರಗುಗೊಳಿಸುವಂಥದು. ಬದುಕಿನ ನಿಗೂಢ ತತ್ತ್ವಗಳನ್ನು ಚರ್ಚೆಗೆ ತೆಗೆದುಕೊಳ್ಳದಿದ್ದರೂ ಸಾಮಾನ್ಯ ಬದುಕಿನ ಸಾಮಾನ್ಯ ವಿಚಾರಗಳಲ್ಲಿಯೆ ಎಂಥ ಚೆಲುವಿದೆ ಮತ್ತು ಹೋರಾಟವಿದೆ ಎಂಬುದನ್ನು ಮೆರವಣಿಗೆ ರಮ್ಯವಾಗಿ ಬಿಚ್ಚುತ್ತದೆ. ಈ ಅನುಭವಗಳನ್ನು ಒಂದು ಸೂತ್ರಕ್ಕೆ ಕೋದು ಸಮಗ್ರ ದರ್ಶನವನ್ನು ರೂಪಿಸುವ ಕರ್ಷಣ ಕೇಂದ್ರ ಇಲ್ಲಿಲ್ಲ ಎಂಬುದು ನಿಜವಾದರೂ ಗ್ರಂಥ ಧ್ವನಿಯು ಅಥವಾ ಇಲ್ಲಿ ತಾನೇ ತಾನಾಗಿದ್ದರೂ ಗೊರೂರರ ಮೆರವಣಿಗೆ ಅದನ್ನೆಲ್ಲಾ ಮೀರಿ ನಿಲ್ಲಬಲ್ಲ ಸತ್ವಶೀಲ ಗ್ರಂಥವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಅಂದರೆ ಒಂದು ಕೃತಿಯು ಕಲಾತ್ಮಕ ಮಹತ್ವ ಅದರ ಶಿಲ್ಪಕ ಶಕ್ತಿಯನ್ನೇ ಅನುಸರಿಸಬೇಕಾದ ಅನಿವಾರ್ಯ ಪ್ರಮೇಯವೇನೂ ಇಲ್ಲ. ಬದುಕಿನ ಸ್ವಂತ ವಿವರಗಳನ್ನು ಉಚಿತವಾದ ಭಾಷಾ ಮಾಧ್ಯಮದಲ್ಲಿ ಅನುಕೂಲವಾದ 'ವಿಧಾನ'ಗಳ ಮೂಲಕ ಯಾವುದಾದರೊಂದು ಜೀವಂತ ಜೀವನ ಕಲ್ಪನೆಯನ್ನು ಒಡಲಿಗಿಟ್ಟುಕೊಂಡು ಅಭಿವ್ಯಕ್ತಗೊಳಿಸಿದರೂ ಸಾಕು ಉತ್ತಮ ಸಾಹಿತ್ಯ ಸೃಷ್ಟಿಯು ಬೆಳೆದು ಎದ್ದು ನಿಲ್ಲುತ್ತದೆ ಎಂಬುದಕ್ಕೆ 'ಮೆರವಣಿಗೆ' ನಿಜವಾಗಿಯೂ ಒಂದು ಉದಾಹರಣೆ.

ಈ ಕೃತಿಯಲ್ಲಿ ಅನುಭವಗಳು ಬಿಡಿಬಿಡಿಯಾಗಿ ಮಾಲೆಗೊಳ್ಳುತ್ತಿದ್ದರೂ ಅವೆಲ್ಲವೂ ಜೀವನದ ಗಂಭೀರ ಸಂದರ್ಭಗಳಿಗೆ ಸಂಬಂಧಿಸಿದಂತಿರುವುದರಿಂದ ಜನಕ್ಕೆ ಸಾಧ್ಯ ತೋರುವ ಪ್ರಜ್ಞೆ ಆಸಕ್ತಿಗಳನ್ನು ಇಂಥ ಕೃತಿಗಳಿಗೂ ತೋರಬೇಕಾಗುತ್ತದೆ. ವಾಸ್ತವ ಬದುಕಿನ ಶಿಲ್ಪವನ್ನು ಇಲ್ಲಿ ಅನುಸರಿಸಲಾಗಿದೆಯೇ ಹೊರತು ಕಲೆಯನ್ನು ಕೇವಲ ಕಲೆಯ ಮಟ್ಟಿಗಾಗಲಿ ಅಥವಾ ಅನುಭವಗಳನ್ನು ಯಾವುದಾದರೊಂದು ಸೂತ್ರವನ್ನು

ಅನುಸರಿಸಿ ಗೊತ್ತಾದ ಚೌಕಟ್ಟಿಗಾಗಲಿ ಜಗ್ಗುವ ಕೆಲಸಗಳಿಗೆ ಇಲ್ಲಿ ಕೈ ಹಾಕಿಲ್ಲ. ಆದ್ದರಿಂದಲೇ ಇಲ್ಲಿ ಅನುಭವಗಳನ್ನು, ಬದುಕಿನ ನಗ್ನ ಸತ್ಯಗಳನ್ನು ಕಲಾತ್ಮಕವಾಗಿ ಸೆರೆ ಹಿಡಿಯುವ ಸರಳ ಮಾರ್ಗವೊಂದನ್ನು ಅನುಸರಿಸುವುದು ಆವಶ್ಯಕವಾಗಿರುವಂತೆ ತೋರುತ್ತದೆ. ಕೃತಿಯ ಉದ್ದೇಶಕ್ಕೆ ಅದು ಬದ್ಧವಾಗಿರುವುದರಿಂದ ವಿಮರ್ಶಕ ಅದನ್ನು ಗಮನಿಸದಿರುವುದು ಸಾಧ್ಯವಿಲ್ಲ.

ಗೊರೂರರ ‘ಮೆರವಣಿಗೆ’ ಸ್ವಾತಂತ್ರ್ಯಪೂರ್ವ ಭಾರತದ ಪರಿಸ್ಥಿತಿಯನ್ನು ವಸ್ತುವಾಗಿ ಆರಿಸಿಕೊಂಡಿರುವುದು ಸ್ಪಷ್ಟವಾಗಿದೆ. ಅಂದಿನ ಬದುಕಿನ ಸಾಂಸ್ಕೃತಿಕ ಜೀವಿತದಲ್ಲಿ ಮುಖ್ಯವಾಗಿದ್ದ ಎರಡು ಪ್ರಮುಖ ವಿಚಾರಗಳನ್ನು ಎತ್ತಿಕೊಂಡು ಚರ್ಚಿಸಿ ತಮ್ಮ ಆಲೋಚನೆಗಳನ್ನು ಸಾರ್ವಜನಿಕ ಸಹೃದಯರ ಜೊತೆಯಲ್ಲಿ ಹಂಚಿಕೊಳ್ಳುವುದು ಅಂದಿನ ಯಾವುದೇ ಜವಾಬ್ದಾರಿಯುತ ಲೇಖಕನಿಗೆ ಅನಿವಾರ್ಯವಾಗಿದ್ದಂತೆ ಗೊರೂರರಿಗೂ ಆಗಿರುವುದು ಈ ಕೃತಿಯಲ್ಲಿ ವಿಶದವಾಗಿಯೇ ಕಂಡುಬರುತ್ತದೆ. ೧೯೪೭ಕ್ಕಿಂತ ಹಿಂದಿನ ಭಾರತೀಯ ಸಾರ್ವಜನಿಕ ಬದುಕಿನ ವ್ಯವಹಾರಗಳನ್ನು–ಸರ್ಕಾರ ಮತ್ತು ಕೃಷಿಕರ ಸಂಬಂಧ, ಪ್ರಾಥಮಿಕ ಶಾಲೆಯ ಅಧ್ಯಾಪಕರು ಮತ್ತು ಮೇಲಧಿಕಾರಿಗಳ ನಡುವಿನ ವ್ಯಾವಹಾರಿಕ ಸಂಬಂಧ, ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಂಬಂಧ, ವಿದ್ಯಾರ್ಥಿ ಜೀವನದ ಸಮಸ್ಯೆಗಳು, ಶಿಕ್ಷಣ ಕ್ರಮ ಮತ್ತು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದ ವಿಚಾರಗಳು, ಸಂಸ್ಕೃತಿ ಮತ್ತು ಜೀವಂತ ಜೀವನ ಸಮಸ್ಯೆಗಳು, ಆಧುನಿಕ ಜೀವನ ವಿಧಾನ ಮತ್ತು ಪರಂಪರಾಗತ ಜಾತಿ ವರ್ಗ ಹಾಗೂ ಧಾರ್ಮಿಕ ವಿಚಾರಗಳು ಇತ್ಯಾದಿ ಇತ್ಯಾದಿಗಳನ್ನು–ಕುರಿತ ಕಲಾತ್ಮಕ ಚರ್ಚೆ ಒಂದು. ಅಂದಿನ ಭಾರತೀಯ ಬದುಕು ಅನ್ಯದೇಶೀಯ ಮತ್ತು ಧರ್ಮೀಯ ದಾಸ್ಯದ ಹಿಡಿತಕ್ಕೆ ಸಿಕ್ಕಿ ಸ್ವಂತವಾದ ಆಲೋಚನೆ ಸಂಸ್ಕೃತಿ ವ್ಯವಹಾರ ಇತ್ಯಾದಿಯಾದ ಮಾನವೀಯ ವ್ಯಕ್ತಿತ್ವ ವಿಕಾಸದ ಹಾದಿಯಲ್ಲಿ ಎದುರಿಸಬೇಕಾಗಿದ್ದ ಭೀಕರವಾದ ತಡೆಗಳನ್ನೂ ಬಂಧನಗಳನ್ನೂ ಮೀರಿ ಬೆಳೆದು ನಿಸರ್ಗದತ್ತ ಹಕ್ಕುಗಳನ್ನು ತಿರುಗಿ ಪಡೆಯಲು ಆಂಗ್ಲ ಶಕ್ತಿಯ ವಿರುದ್ಧಕ್ಕೆ ಕೊಟ್ಟ ಧೀರವಾದ ಹೋರಾಟ ಇನ್ನೊಂದು. ಈ ಎರಡು ಬಹುಮುಖ್ಯ ವಿಚಾರಗಳನ್ನು ‘ಮೆರವಣಿಗೆ’ ಎರಡು ಭಾಗಗಳಲ್ಲಿ ಬೇರೆ ಬೇರೆಯಾಗಿ ಪ್ರಕಟಿಸುತ್ತಿದ್ದು ಅವುಗಳ ನಡುವೆ ಸಾವಯವ ಸಂಬಂಧವನ್ನು ಕುದುರಿಸಿಕೊಂಡು ಭವ್ಯವಾದೊಂದು ಜೀವನ ಕಲ್ಪನೆಯ ತಳಹದಿಯ ಮೇಲೆ ಎರಡೂ ಆಲೋಚನಾ ವಿಧಾನಗಳನ್ನು ಮುಖಾಮುಖಿಯಾಗಿಸಿ ಒಂದಕ್ಕೊಂದು ಪೂರಕ ಪ್ರೇರಕ ಸಾಮಗ್ರಿಯಾಗುವಂತೆ ಸಾಧಿಸಿಕೊಂಡಿದ್ದರೆ ಕನ್ನಡದ ಅತ್ಯಂತ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಬಹುದಾಗಿದ್ದ ಬಹು ಸೊಗಸಾದ ಒಂದು ಅವಕಾಶವನ್ನು, ಅನುಭವಗಳನ್ನು ಮಾಲೆಗೊಳಿಸುವ ಸರಳ ಮಾರ್ಗವನ್ನು ಕಂಡುಕೊಳ್ಳುವುದರ ಮೂಲಕ ಈ ಕೃತಿ ಸ್ವಲ್ಪದರಲ್ಲಿಯೆ ಕಳೆದುಕೊಂಡುಬಿಟ್ಟಿತು ಎನಿಸುತ್ತದೆ. ಬಹುಶಃ ಗೊರೂರರ ಹಾಸ್ಯ ಪ್ರವೃತ್ತಿ ಈ ಬಗೆಯ ಪ್ರಯತ್ನಗಳಿಗೆ ವಿರುದ್ಧವಾಗಿ ನಿಲ್ಲುವುದೇ ಇದಕ್ಕೆ ಮುಖ್ಯ ಕಾರಣವೂ ಇರಬಹುದು.

ಇನ್ನು ಕೆಲವು ಉದಾಹರಣೆಗಳ ಮೂಲಕ ಗೊರೂರರ ಬರವಣಿಗೆಯ ಸ್ವರೂಪವನ್ನು ಪ್ರಯೋಜನವನ್ನು ಕುರಿತು ವಿಚಾರ ಮಾಡಬಹುದು.

ಮನುಷ್ಯನು ತನ್ನ ಅನುಕೂಲಕ್ಕೆ ವಾತಾವರಣವನ್ನು ಹದಗೊಳಿಸಿಕೊಳ್ಳಲು ಹೋರಾಡುವುದು ಅಸ್ವಾಭಾವಿಕವಲ್ಲ. ಇದು ಪ್ರಕೃತಿಯ ಒಂದು ನಿಯಮವೂ ಆಗಿದೆ. ಹೀಗೆಯೇ ಹತ್ತಾರು ಸಲ ಹತ್ತಾರು ಕಾಲ ನಡೆದುಬಿಟ್ಟರೆ ಈ ಆಚರಣೆಯೇ ನಿಯಮಗಳಿಗಿಂತ ಬೇರೆಯಾದ ಒಂದು ವ್ಯವಹಾರ ಲೋಕವನ್ನು ಸೃಜಿಸುತ್ತದೆ. ಜಗತ್ತಿನ ಯಾವುದೇ ಕಾಲದಲ್ಲಿಯೂ ಯಾವುದೇ ಸಮಾಜವು ಇಂಥ ಪದ್ಧತಿಗಳಿಂದ ಮುಕ್ತಿಯನ್ನು ಪಡೆದಿರುವುದು ಸಾಧ್ಯವಾಗಿದ್ದರೆ ಅದೊಂದು ಮಹದಚ್ಚರಿಯಾಗುತ್ತಿತ್ತು. ಸಾಂಸ್ಕೃತಿಕ ಆದರ್ಶ ಮತ್ತು ನೀತಿಗಳನ್ನು ನೆಪಕ್ಕಿಟ್ಟುಕೊಂಡು ವೈಯಕ್ತಿಕ ಆಚರಣೆ ಮತ್ತು ಅನುಸರಣೆಗಳನ್ನು ಸೃಷ್ಟಿಸಿಕೊಳ್ಳುವುದರ ಮೂಲಕ ತಮ್ಮ ತಮ್ಮ ಉದ್ಯೋಗಗಳನ್ನು ಲಾಭದಾಯಕ ಮಾಡಿಕೊಳ್ಳುವುದು ಎಲ್ಲ ಕ್ಷೇತ್ರಗಳಿಗೂ ಸಾಧಾರಣ ಸಂಗತಿ ಎಂಬುದನ್ನು ಈ ಕೃತಿ ಅನೇಕ ಕಡೆ ಗುರುತಿಸುತ್ತದೆ. ಮಲ್ಲಿಗೆಹಳ್ಳಿಯ ಶ್ಯಾನುಭೋಗರು ಈ ದಿಕ್ಕಿನಲ್ಲಿ ನಿಷ್ಣಾತರು.

> ಮಲ್ಲಿಗೆಹಳ್ಳಿಯನ್ನು ಶ್ಯಾನುಭೋಗರ ಲಾಯವೆಂದೇ ಕರೆಯಬಹುದು. ಒಂದು ಹೋಬಳಿಯ ಇಪ್ಪತ್ತು ಶ್ಯಾನುಭೋಗರು ಅಲ್ಲಿ ಸೇರಾಯಿಸಿಕೊಂಡಿದ್ದಾರೆ. ಇವರಲ್ಲಿ ಒಬ್ಬೊಬ್ಬನೂ....ಪ್ರಚಂಡನೇ. ಪಾಪ, ಈ ಶಾನುಭೋಗರ ಮುಂದೆ, ಆ ತಾಲ್ಲೂಕು ಕಚೇರಿಯ ಕುರ್ಚಿಗಳನ್ನು ಸವೆಸುತ್ತಾ ಕಾಯಿಲೆಯನ್ನು ಹೀರುತ್ತ ಕುಳಿತಿರುವ ಗುಮಾಸ್ತರೂ ಶಿರಸ್ತೇದಾರರೂ ಅಮಲ್ದಾರರೂ ಏನು ತಾನೆ ಮಾಡಿಯಾರು? ಯಾವ ಯಾವ ಶ್ಯಾನುಭೋಗನ ಲೆಕ್ಕದಲ್ಲಿ ಯಾವ ಯಾವ ಭೂತ ಪ್ರೇತ ಪಿಶಾಚಿಗಳು ಇರುವುವೋ ಪರಮಾತ್ಮನಿಗೊಬ್ಬನಿಗೇ ಗೊತ್ತು. ತಾಲ್ಲೂಕಿನ ಅಧಿಕಾರಿಗಳೂ, ಮೊದ ಮೊದಲು ಬಂದಾಗ ಅತ್ಯಂತ ಜಬರ್ದಸ್ತಿನಿಂದಲೇ ಬರುವವರೂ, ಎರಡು ಮೂರು ಸಲ ಮಲ್ಲಿಗೆಹಳ್ಳಿಗೆ ಬಂದು ಹೋಗುವುದರೊಳಗೆ ಈ ಪ್ರಚಂಡ ಶ್ಯಾನುಭೋಗರ ಪ್ರಜ್ಞೆಗೂ, ಧೈರ್ಯಕ್ಕೂ, ತಿಳಿವಳಿಕೆಗೂ, ಒಗ್ಗಟ್ಟಿಗೂ ಮಲ್ಲಿಗೆಹಳ್ಳಿಯ ನದಿ, ದೇವಾಲಯ, ತೋಪು, ಹೊಳೆಯನ್ನಗಳಿಗೂ ಮರುಳಾಗಿ, ತಾವೂ ಮನುಷ್ಯರೇ ಆಗುತ್ತಾರೆ. (ಪುಟ ೨೩)

ಹಳ್ಳಿಯ ಮುಗ್ಧ ಜನರಿಗೆ ಅವರಲ್ಲಿಯೂ ಕೃಷಿಕರಿಗೆ ಶ್ಯಾನುಭೋಗರೆಂದರೆ ಎಲ್ಲಾ ಆಗಿರುತ್ತಾರೆ. ಅವರನ್ನು ಎದುರು ಹಾಕಿಕೊಂಡು ರೈತನಿರಲಿ ಅವರ ಮೇಲಧಿಕಾರಿಗಳೂ ಏನೂ ಮಾಡುವಂತಿರಲಿಲ್ಲ. ಅಂಥ ಒಂದು ವಿಷಮವ್ಯೂಹವನ್ನು ರಚಿಸುವುದರ ಮೂಲಕ ಬದುಕಿನ ವ್ಯವಹಾರ ಜೀವಿತದಲ್ಲಿ ಸಂಕೀರ್ಣಗಳನ್ನು ಸೃಷ್ಟಿಸುತ್ತಿದ್ದರು. ಈ ಉದಾಹರಣೆಯ ಒಂದೊಂದು ವಾಕ್ಯವೂ ಒಂದೊಂದು ದೊಡ್ಡ ಸತ್ಯವನ್ನು ಅಂತರ್ಗತ ಮಾಡಿಕೊಂಡಿರುವ, ಸಾಮಾಜಿಕ ಮೌಲ್ಯಗಳಿಗೇ ಸವಾಲನ್ನು ಹಾಕುತ್ತಿರುವ. ಕಾಣುವುದಕ್ಕೆ

ಹಾಸ್ಯತರವಾದರೂ ಅನುಭವಿಸುವುದಕ್ಕೆ ಕಷ್ಟಕರವಾಗಿರುವ ಸಹಜ ಮನುಷ್ಯನ ಸರಳ ಅಭಿವ್ಯಕ್ತಿ ಎನಿಸುತ್ತದೆ.

ಶ್ಯಾನುಭೋಗರ ಸ್ವಭಾವ ದರ್ಶನಗಳನ್ನು ಹೀಗೆ ಪರಿಚಯ ಮಾಡಿಕೊಡುವ ಈ ಕೃತಿ ಅವರ ವ್ಯವಹಾರದ ಸ್ವರೂಪವನ್ನು ಇನ್ನಷ್ಟು ವಿವರವಾಗಿ ಪರಿಚಯ ಮಾಡಿಕೊಡುವುದರಲ್ಲಿಯೂ ಯಶಸ್ಸು ಪಡೆದಿದೆ. ಶ್ಯಾನುಭೋಗ ಮತ್ತು ಅವರ ಮೇಲಧಿಕಾರಿಗಳನ್ನು ಸಮರ್ಥವಾಗಿ ಪರಿಚಯಮಾಡಿಕೊಡುವ ಇನ್ನೊಂದು ಉದಾಹರಣೆ :

> ಇವರಲ್ಲಿ ಕೆಲವರನ್ನು ನೋಡಿದರೆ ಅವರು ಶ್ಯಾನುಭೋಗರಂತೆ ಕಾಣುವುದೇ ಇಲ್ಲ. ದೊಡ್ಡ ದೇಶಸೇವಕರಾಗಿ ತೋರುತ್ತಾರೆ. ಇನ್ನು ಕೆಲವರ ಮಾತನ್ನು ಕೇಳಿದರೆ ಇವರು ಯಾವುದೋ ಕಾಲೇಜಿನ ಪಂಡಿತರಾಗಿರಬೇಕೆಂದು ತೋರುತ್ತದೆ. ಮತ್ತೆ ಕೆಲವರಲ್ಲಿ ಮಾತನಾಡುತ್ತಿದ್ದರೆ ಇವರಾರೋ ಪತ್ರಿಕಾಕರ್ತರು ಇಲ್ಲಿಬಂದು ಸೇರಿರಬಹುದೆಂದು ಅನುಮಾನ ಬರುತ್ತದೆ. ಶ್ಯಾನುಭೋಗರೂ ಪಟೇಲರೂ ರೈತರೂ ಮನುಷ್ಯರೇ ಅಲ್ಲ ಎಂಬ ಭಾವನೆ ಅನೇಕ ಅಧಿಕಾರಿಗಳಲ್ಲಿ ಇರುವುದುಂಟು. ಅದರಲ್ಲಿಯೂ ಹಳ್ಳಿಗಳಿಗೆ ಬರುವಾಗ ಅವರು ಮೀಸೆಗಳನ್ನು ಹೆಚ್ಚಾಗಿ ಹುರಿಮಾಡಿಕೊಂಡು ಜನರನ್ನು ದನಗಳಂತೆ ಆಡಿಸಬೇಕೆಂದು ಬರುತ್ತಾರೆ. ಈ ಜಬರ್‌ದಸ್ತಿನ ರೋಗ ರೆವಿನ್ಯೂ ಮತ್ತು ಪೋಲೀಸ್ ಅಧಿಕಾರಿಗಳಿಗೆ ಬಹಳ ಹೆಚ್ಚು. ಸಿವಿಲ್ ಲಿಸ್ಟ್ ಸೀನಿಯಾರಿಟಿ ಲಿಸ್ಟ್ ಈ ಒಂದು ಕಾವ್ಯವನ್ನು ಮಾತ್ರ ಯಾವಾಗಲೂ ವ್ಯಾಸಂಗ ಮಾಡುತ್ತಾ ತಮ್ಮ ಸಮಾನ ಪ್ರಾಜ್ಞರೇ ಇಲ್ಲವೆಂಬ ಪಿತ್ಥ ವಿಕಾರವನ್ನು ಹೊಂದಿದ ಅನೇಕ ಅಧಿಕಾರಿಗಳಿಗೆ. ಮಲ್ಲಿಗೆಹಳ್ಳಿಯನ್ನು ನೋಡಿದ ಮೇಲೆ ಇವರೂ ನಮ್ಮವರೇ, ನಮ್ಮ ಹಾಗೆಯೇ ಇವರಿಗೂ ಕಷ್ಟ ಸುಖಗಳಿವೆ ಎಂದು ಮನವರಿಕೆಯಾಗುತ್ತಿದ್ದಿತು. (ಪುಟ ೩–೪)

ಇಲ್ಲಿ ಲೇಖಕರು ಕೊಂಚ ಕಟುವಾಗಿರುವಂತೆ ತೋರುತ್ತಿದ್ದರೂ ಅಲ್ಲಿಯ ನೈಜ ಪರಿಸ್ಥಿತಿಗೆ ಹೋಲಿಸಿದರೆ ಅದೇನು ಕಟುವಲ್ಲ ಎಂಬ ಭಾವನೆ ಓದುಗನಿಗಾಗುವಂತೆ ಕೃತಿಯ ಮುಂದಿನ ಪುಟಗಳು ಸಾಬೀತು ಮಾಡುತ್ತವೆ. ಶ್ಯಾನುಭೋಗರ ಇಂಥ ಪ್ರಚಂಡತನಕ್ಕೆ ಹಾಗೂ ಧೂರ್ತತನಕ್ಕೆ ಮೇಲಧಿಕಾರಿಗಳ ಈ ಮನೋಭಾವನೇ ಕಾರಣ ಎಂಬುದನ್ನು ಚಿತ್ರಿಸುವುದು ಈ ಉದಾಹರಣೆಯ ಒಂದು ಮುಖ್ಯ ಗುರಿಯಾಗಿದೆ.

ಶ್ಯಾನುಭೋಗರು ಅಂಥ ದೊಡ್ಡ ವಿದ್ಯಾವಂತರಲ್ಲ. ಆದರೆ ಬಹು ಚತುರರಾದ ವ್ಯವಹಾರಜ್ಞಾನಿಗಳು. ಅವರ ಅಸಾಧಾರಣವಾದ ಕಾರ್ಯಸಾಧನೆ ಮತ್ತು ಚಾಣಾಕ್ಷ ಬುದ್ಧಿಗಳ ಮುಂದೆ ಸರ್ಕಾರದ ರೆವಿನ್ಯೂ ಹಾಗೂ ಪೋಲೀಸ್ ಅಧಿಕಾರಿಗಳು ಹಲವು ವೇಳೆ ಮೂಕರಾಗಬೇಕಾಗುತ್ತಿತ್ತು. ಇವರಿಗೆ ಈ ರೀತಿಯ ವ್ಯವಹಾರ ಕ್ಷಮತ್ವವನ್ನು ಕಲಿಸುವುದು ಮುಖ್ಯವಾಗಿ ಜನತೆಯ ಅಜ್ಞಾನ ಮತ್ತು ಮೇಲಧಿಕಾರಿಗಳ ದರ್ಪ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಇದರ ಅರ್ಥ ನಮಗೆ ಸ್ಪಷ್ಟವಾಗಬೇಕಾ

ದರೆ ಅಂದಿನ ಸಮಾಜದ ಜನತೆಯ ಅಜ್ಞಾನದ ಸ್ವರೂಪವನ್ನು ವರ್ಣಿಸುವ ಈ ಮಾತುಗಳ ಮೇಲೆ ನಿಗವಿಡಬೇಕಾಗುತ್ತದೆ:

> ಆ ನೆರೆದಿರುವ ವಿದ್ವಾಂಸರೆಲ್ಲಾ ಸರಸ್ವತಿಯ ಅವತಾರಗಳೇ. ಒಬ್ಬನು ಮಿತಾಕ್ಷರಿ, ಒಬ್ಬನು ಪತಾಕ್ಷರಿ, ಒಬ್ಬನು ಅಕ್ಷರ ಲಂಬಕ, ಒಬ್ಬನು ಅಕ್ಷರ ಲಂಘಕ, ಇನ್ನೊಬ್ಬನು ಅಕ್ಷರ ಭಕ್ಷಕ. ಯಾರ ಬಾಯಲ್ಲೂ ಮಾತುಗಳು ಸರಿಯಾಗಿ ಹೊರಡುವುದಿಲ್ಲ. ಒಬ್ಬನ ಕೈಯಲ್ಲಿ ರುಜು ಹಾಕು ಎಂದು ಕಡ್ಡಿ ಕೊಟ್ಟರೆ ತೀರಿತು. ಮುಖವನ್ನು ವಿಕಾರ ಮಾಡಿಕೊಂಡು ಕಾಗದ ಹರಿಯುವಂತೆ ಕಡ್ಡಿಯಿಂದ ಸದ್ದು ಮಾಡುತ್ತಾ ರೊಯ್ ಕಬ್ಬು ತೋರಿಸುತ್ತಾನೆ. (ಪುಟ ೭)

ಈ ವಾಕ್ಯಗಳನ್ನು ಬರಿಯ ಹಾಸ್ಯವನ್ನು ಪ್ರಕಟಿಸುವುದಕ್ಕಾಗಿ ಬರೆದುದಲ್ಲ. ಅದರ ಹಿಂದೆ ಇರುವ ದೊಡ್ಡ ನೋವು ಬದುಕಿನ ಒಂದು ದುರಂತವನ್ನು ವರ್ಣಿಸುವಷ್ಟು ಶಕ್ತಿಯುತವಾಗಿದೆ. ಶ್ಯಾನುಭೋಗರು ಇಂಥ ಅಜ್ಞಾನವನ್ನೇ ತಮ್ಮ ಬದುಕಿನ ಬಂಡವಾಳವಾಗಿಟ್ಟುಕೊಂಡು ಜನತೆಗೂ ಸರ್ಕಾರಕ್ಕೂ ನಡುವಿನ ಅನಿವಾರ್ಯ ಸೇತುವೆಯಾಗಿರುತ್ತಿದ್ದರು. ಸರ್ಕಾರ ಶ್ಯಾನುಭೋಗರ ಮೂಲಕವಲ್ಲದೆ ಮತ್ತಾವ ರೀತಿಯಿಂದಲೂ ಈ ಅಜ್ಞಾನದ ಕೋಟೆಯನ್ನು ಭೇದಿಸಿ ತಮ್ಮ ಕಾರ್ಯಪ್ರಯೋಜನವನ್ನು ಸಾಧಿಸುವುದು ಸಾಧ್ಯವಾಗುತ್ತಿರಲಿಲ್ಲ. ಶ್ಯಾನುಭೋಗರಿಗೂ ಅದು ಚೆನ್ನಾಗಿ ಗೊತ್ತಿತ್ತು. ಅಂತೆಯೇ ಅವರು ಒಬ್ಬೊಬ್ಬರೂ ಒಂದೊಂದು ಪ್ರಪಂಚವಾಗಿರುತ್ತಿದ್ದರು; ವಿಶಿಷ್ಟ ರೀತಿಯಿಂದ ಪ್ರಕಾಶಿಸುತ್ತಿದ್ದರು. ಗೊರೂರರ ಅನುಭವ ಇದನ್ನು ಹೀಗೆ ಹೇಳುತ್ತದೆ:

> ಊರಿನಲ್ಲಿ ಅವನ ಅಧಿಕಾರ ಸೈನ್ಯದಲ್ಲಿ ಕಮ್ಯಾಂಡರನ ಅಧಿಕಾರಕ್ಕಿಂತ ಹೆಚ್ಚು. ಅವನು ಕೆಲಸ ಮಾಡುವಾಗ ಶ್ಯಾನುಭೋಗನಿಗೆ ಮೇಲ್ಪಟ್ಟ ಅಧಿಕಾರಿಗಳು ಯಾರೂ ಇಲ್ಲವೆಂಬಂತೆಯೇ ನಡೆಯುತ್ತಾನೆ. ಅಮಲ್ದಾರರು ಎದುರಿಗೆ ಇರುವಾಗ ಅಮಲ್ದಾರರಿಗೆ ಇಷ್ಟವಿರಲಿ ಇಲ್ಲದಿರಲಿ ತಾನು ರೈತರಿಗೂ ಕುಳವಾಡಿಗಳಿಗೂ ಪಟೇಲರಿಗೂ ಹೇಳುವ ಮಾತುಗಳನ್ನೆಲ್ಲ "ಸಾಹೇಬರ ಅಪ್ಪಣೆಯಾಗುತ್ತೆ" ಎಂದು ಹೇಳಿ ತನ್ನ ಅಪ್ಪಣೆಯನ್ನೇ ಕೊಡುತ್ತಾನೆ. ಒಂದೊಂದು ಸಲ ಅಮಲ್ದಾರರು ಯಾವ ಅಪ್ಪಣೆಯನ್ನೂ ಮಾಡಿರುವುದೇ ಇಲ್ಲ. ಶ್ಯಾನುಭೋಗ ಹೇಳುತ್ತಿರುವುದು ಅವರ ಅಭಿಪ್ರಾಯಕ್ಕೆ ಪೂರ್ಣವಾಗಿ ವಿರೋಧವಾಗಿಯೆ ಇರುತ್ತದೆ. ಆದರೆ ರೈತರು ಶ್ಯಾನುಭೋಗರ ಮಾತಿನಲ್ಲಿ ತೋರಿಸುತ್ತಿರುವ ಗೌರವವನ್ನು, ಅವನು ಹೇಳುವುದು ಸರಿ ಎಂದು ಅವರು ತೋರಿಸುತ್ತಿರುವ ಮುಖಭಾವವನ್ನು ನೋಡಿ, ಶ್ಯಾನುಭೋಗನನ್ನು ಪ್ರತಿಭಟಿಸಬೇಕೆಂದಿರುವ ಅಮಲ್ದಾರರೂ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡು ತಾವೂ ರೈತರಂತೆ ಶ್ಯಾನುಭೋಗ ಹೇಳಿದ ಮಾತುಗಳನ್ನೇ ಒಪ್ಪುತ್ತಾರೆ. (ಪುಟ ೮–೯)

ಹೀಗೆ ಒಂದು ಬಗೆಯ ಸರ್ವಾಧಿಕಾರಿ ಮನೋವೃತ್ತಿಯನ್ನು ಪ್ರಕಟಿಸುತ್ತಿರುವ ಇಂಥ ಶ್ಯಾನುಭೋಗರು ಸಾಮಾನ್ಯ ಜನತೆಯ ಸಮಷ್ಟಿ ಹಿತವನ್ನು ಸಾಧಿಸುವುದು ಹೇಗೆ ಸಾಧ್ಯ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಅವರು ಯಾವಾಗಲೂ ತಂತ್ರ ಕುತಂತ್ರಗಳಲ್ಲಿಯೇ ಮೈಮರೆತು ಉನ್ನತವಾದ ಬದುಕಿನ ಆದರ್ಶಗಳನ್ನು ಪರಿನಿರ್ಮಿಸದೆ, ಹೊಸ ಮೌಲ್ಯಗಳನ್ನು ಹುಟ್ಟುಹಾಕದೆ, ಹೊಸ ಲೋಕದ ಕಲ್ಪನೆಗೆ ಅವಕಾಶವೇ ಆಗದಂತೆ ನೋಡಿಕೊಳ್ಳುತ್ತಾರೆ. ಅಂದಿನ ಇಂಥ ಸಾಮಾಜಿಕ ಪರಿಸ್ಥಿತಿಗಳಿಗೂ ನಾಡಿನ ಹಿರಿಯರು ಬೋಧಿಸುತ್ತಿದ್ದ ಆದರ್ಶಗಳಿಗೂ ಸಾಂಸ್ಕೃತಿಕವಾಗಿ ಅವರು ಆಡುತ್ತಿದ್ದ ದೊಡ್ಡ ದೊಡ್ಡ ಮಾತುಗಳಿಗೂ ಇರುವ ದೊಡ್ಡ ವ್ಯತ್ಯಾಸಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಮಗಿರುವ ಹಿರಿಯ ಪರಂಪರೆಯಂತೆಯೇ ಇವಕ್ಕೂ ಅಷ್ಟೇ ಹಿರಿದಾದ ಇತಿಹಾಸವಿದೆ ಎಂಬುದನ್ನು ಮರೆಯುವಂತಿಲ್ಲ.

ಜನತೆ ಇಂಥ ಶ್ಯಾನುಭೋಗರ ವ್ಯವಹಾರ ಚಾತುರ್ಯವನ್ನು ಕಂಡು ಅವರನ್ನು ಗುರುತಿಸುವ ರೀತಿಯಿಂದಲೂ ಒಂದು ದಾರುಣ ಪರಿಸ್ಥಿತಿ ಪ್ರಕಟವಾಗುವಂತಿದೆ :

> ಈ ಶ್ಯಾನುಭೋಗ ತೀಕ್ಷ್ಣ ಎಂಬುವನ್ನು ತೋರಿಸಲು ಜನರು ಇವನನ್ನು ತಮ್ಮ ಮನಸ್ಸಿಗೆ ತೋರಿದ ಹೆಸರಿನಲ್ಲಿ ಕರೆಯುತ್ತಾರೆ. ಮೊದಲು ಮೊದಲು ಈ ಹೆಸರು ರಾವಣ ಆಯಿತು. ಆಮೇಲೆ ಕೀಚಕನಾಯಿತು. ಅನಂತರ ಘಟೋದ್ಗಜನಾಯಿತು. ಈಚೆಗೆ ಜನರಲ್ ಡೈಯರ್ ಆಗಿ ಹಿಟ್ಲರ್ ಆಗಿ ಕೊನೆಗೆ ಈಗ ನಾದಿರ್‌ಷಾ ಎಂಬ ಹೆಸರು ಖಾಯಂ ಆಯಿತು. (ಪುಟ ೯)

ಈ ಪ್ರಚಂಡ ಶ್ಯಾನುಭೋಗರು ಮನಸ್ಸು ಮಾಡಿದರೆ ಏನೂ ಮಾಡಬಹುದು. ಮಲ್ಲಿಗೆಹಳ್ಳಿಗೆ ಮಂತ್ರಿಗಳ ಆಗಮನವಿದ್ದ ದಿನ ಚಪ್ಪರ ಹಾಕಿಸುವುದಕ್ಕೆ ಅಮಲ್ದಾರರು ಪಟ್ಟ ಪ್ರಯತ್ನವೆಲ್ಲಾ ಪೂರ್ತಿಯಾಗಿ ವಿಫಲವಾಯಿತು. ಹಳ್ಳಿಯಲ್ಲಿ ಶ್ಯಾನುಭೋಗರ ಅಪ್ಪಣೆಯಿಲ್ಲದೆ ಮಂತ್ರಿಗಳ ಅಪ್ಪಣೆಯೂ ನಡೆಯದೆಂಬುದನ್ನು ಅಮಲ್ದಾರರು ಮನಗಾಣಬೇಕಾಯಿತು. ‘ಬೆಣ್ಣೆ ಕರಗುವುದು ಬೆಂಕಿಗೇಯೆ’ ಎಂಬಂತೆ ನಾದಿರ್‌ಷಾನನ್ನು ಮರೆಹೊಕ್ಕ ಮೇಲೆ ಒಂದು ರಾತ್ರಿಯೊಳಗಾಗಿ ಮೂರು ಮೈಲಿಗಳವರೆಗೆ ಕಾಣುವ ಸುಂದರವಾದ ಪೆಂಡಾಲು ಸಿದ್ಧವಾಯಿತು. ಇಂಥ ಅನುಭವ ಸರ್ಕಾರಕ್ಕೆ ಒಂದು ಕಡೆ ಇದ್ದರೆ ಮತ್ತೊಂದು ಕಡೆ ಊರಿನ ಯಾವುದಾದರೂ ಒಂದು ಸಾರ್ವಜನಿಕ ಬದುಕು ಹಾಳಾಗುತ್ತಿದ್ದರೆ ಸರಕಾರ ಜನತೆಯ ಮೊರೆಗೆ ಕಿವಿಗೊಡುವಂತೆ ಮಾಡಲು ಈ ಶ್ಯಾನುಭೋಗರೇ ಒದಗಿ ಬರಬೇಕಾಗುತ್ತಿತ್ತು. ಸರಕಾರ ದರ್ಪ ಸ್ವಾರ್ಥಗಳಲ್ಲಿ ಮುಳುಗಿ ಸಾರ್ವಜನಿಕರ ಪ್ರಗತಿಗಾಗಿ ಚಿಂತಿಸುವ ಪರಿಪಾಟವೇ ಶೂನ್ಯವಾಗಿತ್ತು. ಹೀಗಾಗಿ, ಅವಕಾಶ ದೊರೆತಾಗ ಇಂಥ ವಿಚಾರಗಳನ್ನು ಮೇಲಧಿಕಾರಿಗಳಿಗೆ ಮನದಟ್ಟು ಮಾಡಿಸುವುದರ ಮೂಲಕ ಸತ್ಕಾರವನ್ನು ಒಲಿಸಿಕೊಳ್ಳುವ ಚಾಣಾಕ್ಷಬುದ್ಧಿಯನ್ನು ಶ್ಯಾನುಭೋಗರು ಪ್ರಕಟಿಸುತ್ತಿದ್ದರು. ಈ ಎರಡು ಸನ್ನಿವೇಶಗಳಿಂದ ನಮಗೆ ಒಂದು ಅಂಶ ಮನವರಿಕೆ

ಯಾಗುತ್ತದೆ. ಅಜ್ಞಾನ ಮತ್ತು ಮೂಢನಂಬಿಕೆಗಳ ನಡುವೆ ಅತಿ ಹೆಚ್ಚಿನ ವ್ಯವಹಾರ ಚಾತುರ್ಯವನ್ನು ಪ್ರಕಟಿಸುತ್ತಿದ್ದ ಈ ಶ್ಯಾನುಭೋಗನಂಥ ಊರಿನ ಸಮಾಜದ ಅತ್ಯಂತ ಮುಖ್ಯತಮ ಅಂಗವಾಗಿದ್ದಿತು. ಹೆಚ್ಚು ಕ್ರಿಯಾಶೀಲರಾಗಿದ್ದುಕೊಂಡು ಬೇರೆ ಕೆಡುಕುಗಳಿರುವನ್ನು ಮಾಡುತ್ತಿದ್ದವರೂ ಅವರೇಯೆ.

ಊರೊಟ್ಟಿನ ಕೆಲಸದಲ್ಲಿ ತೊಡಗಿದ್ದ ಜನರ ಒಂದು ರಮ್ಯ ವರ್ಣನೆ ಗಮನಾರ್ಹ ವಾಗಿದೆ :

> ಈ ಕೆಲಸ ಕೇವಲ ಸ್ವಾಭಾವಿಕವಾಗಿ ಗದ್ದಲವಿಲ್ಲದಂತೆ ನಡೆಯುತ್ತಿದ್ದಿತು. ಮಣ್ಣಿಗೆ ಹಳ್ಳಿಯವರು ಹೇಗೆ ನದಿಯ ಸುತ್ತ ಒಬ್ಬೊಬ್ಬರು ಒಂದೊಂದು ಸಸಿ ನೆಟ್ಟು ಅದಕ್ಕೆ ಬೇಲಿ ಕಟ್ಟಿ ನಿತ್ಯ ಬೆಳಿಗ್ಗೆ ಸಾಯಂಕಾಲ ಬಂದು ನೋಡಿಕೊಂಡು ನೀರು ಹಾಕಿ ಗದ್ದಲವಿಲ್ಲದಂತೆ ಆಳಿಗೊಂದು ಮರದಂತೆ ಏಳಿಸಿ ದೊಡ್ಡ ತೋಪನ್ನು ಎಬ್ಬಿಸುವರೋ ಹಾಗೆಯೇ ಕಟ್ಟೆಯ ಕೆಲಸವೂ ಸ್ವಾಭಾವಿಕವಾಗಿ ಹುಡುಗಾಟ ಮುದುಗಾಟವಾಗಿ ಸಾಗಿಹೋಯಿತು. ಅದನ್ನು ಕುರಿತು ಯಾರೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಹೊಳೆಗೆ ಮುಖ ತೊಳೆಯುವುದಕ್ಕೆ ಬಂದಂತೆ ಬಂದು ಎರಡು ಮೂರು ಗಂಟೆಗಳ ನಂತರ ಸ್ನಾನಮಾಡಿಕೊಂಡು ಮನೆಗೆ ಹೋಗಿಬಿಡುತ್ತಿದ್ದರು. ಗಂಗಾಶೆಟ್ಟಿಯ ಹೆಂಡತಿಯೂ ಸುಬ್ಬಾಭಟ್ಟರ ಹೆಂಡತಿಯೂ ತಮ್ಮ ಗಂಡಂದಿರು ಕಲ್ಲುಗಳನ್ನು ಹೊತ್ತುಕೊಂಡು ಹೋಗುತ್ತಿರುವುದನ್ನು ನೋಡಿ ಹಾಸ್ಯ ಮಾಡುತ್ತಿದ್ದರು. ಸುಬ್ಬಾಭಟ್ಟರ ಹೆಂಡತಿ "ಹಿತ್ತಲ ದಾರಿಯಲ್ಲಿ ಒಂದು ಸಣ್ಣ ಕಲ್ಲು ಎದ್ದು ನಿಂತಿದೆ. ಅದನ್ನು ಕಿತ್ತು ಹಾಕಿ ಅಂತ ನಿತ್ಯ ಹೇಳ್ತೀನಿ. ನನ್ನ ಮಾತೆಲ್ಲೂ ಅವರ ಜ್ಞಾನವೆಲ್ಲೋ. ಎಷ್ಟೋ ದಿನ ಅದರೇ ಎಡವಿದ್ದಾರೆ. ಅವರ ಇಲ್ಲಿ ನೋಡಿ ಹೊರುತಿದ್ದಾರೆ" ಎನ್ನುತ್ತಿದ್ದರು. ಈ ಕಷ್ಟದ ಎದುರಿಗೆ, ಊರು ಒಟ್ಟಿನ ಕೆಲಸದ ಎದುರಿಗೆ ಜನರ ಸಣ್ಣ ಸಣ್ಣ ವ್ಯಾಜ್ಯಗಳೂ ವ್ಯತ್ಯಾಸಗಳೂ ಮರೆಯಾದವು. ತಮ್ಮ ಗಂಡಂದಿರ, ತಂದೆಯರ, ಅಣ್ಣ ತಮ್ಮಂದಿರ ಈ ಸಾಹಸವನ್ನು ನೋಡುವುದಕ್ಕಾಗಿಯೂ, ಅವರು ಅಲ್ಲಿರುವಾಗಲೇ ತಮ್ಮ ಕೆಲಸವೂ ಆಗಿಹೋಗಲೆಂದೂ ಹೆಂಗಸರೂ ಪ್ರಾತಃಕಾಲವೇ ನದಿಗೆ ಬಂದು ಬಿಡುತ್ತಿದ್ದರು. ಹೊಳೆಯು ಸಂತೆಯಾಗಿ ಅವರ ಧ್ವನಿಗಳಿಂದಲೂ, ಬಳೆಗಳ ರವದಿಂದಲೂ ಬಣ್ಣ ಬಣ್ಣದ ಸೀರೆಗಳಿಂದಲೂ ಅರಿಸಿನ ಕುಂಕುಮದಿಂದಲೂ ನಗುವಿನಿಂದಲೂ ಆನಂದಸಾಗರವಾಗುತ್ತಿದ್ದಿತು. (ಪುಟ ೩೧–೩೩)

ಈ ವರ್ಣನೆಯನ್ನು ನೋಡಿ ಮನುಷ್ಯ ಸ್ವಭಾವದ ಸ್ಪಷ್ಟ ಪರಿಚಯವಿಲ್ಲದ ಆದರ್ಶದ ಕನಸುಗಾರರು ಮಾತ್ರ ಹೀಗೆ ಕಲ್ಪಿಸುತ್ತಾರೆ ಎಂದು ವಾದಿಸುವುದೇನೋ ಸುಲಭ. ಆದರೆ ಹಳ್ಳಿಯ ವಾತಾವರಣದ ಸಮಗ್ರ ಪರಿಚಯವಿರುವ ಮತ್ತು ಆ ಜೀವನ ವಿಕಾಸದ ಐತಿಹಾಸಿಕ ಪರಿವೆಯಿರುವ ಯಾರಿಗೇ ಆದರೂ ಅನ್ನಿಸುತ್ತದೆ ಇದು ಆದರ್ಶವಲ್ಲ ಉತ್ಪ್ರೇಕ್ಷೆಯಲ್ಲ ಕೇವಲ ಸತ್ಯ ಎಂದು. ಇಂಥ ಒಂದು ಸಾಂಘಿಕ ಸೌಖ್ಯ ಮರೆಯಾಗು

ತ್ತಿದೆ ಎಂಬ ಮಾತು ನಿಜವಾದರೂ ಅದನ್ನು ನೆನಪಿಟ್ಟುಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ. ಹಣದ ಆಧಾರದ ಮೇಲೆಯೆ ಬದುಕು ಸಾಗಿಸುವ ಪಟ್ಟಣಿಗರಿಗೆ ಇದರ ಅನುಭವ ಬರಿಯ ಕನಸಿನ ಅನುಭವದಂತೆ ಭಾಸವಾಗುವುದು ಸಹಜ. ಹಳ್ಳಿಯ ಜೀವನ ವಿಧಾನ ಭಾರತೀಯ ಪರಂಪರಾಗತ ಅವಿಭಕ್ತ ಕುಟುಂಬದ ಮಾದರಿಯದು. ಅವರು ಗ್ರಾಮದ ಕೆಲಸವನ್ನೂ ತಮ್ಮ ಕುಟುಂಬದ ಒಂದು ಅಂಗವಾಗಿಯೆ ಪರಿಗಣಿಸುವ ಬುದ್ಧಿಯನ್ನು ರಕ್ತಗತವಾಗಿಯೆ ಬೆಳಸಿಕೊಂಡಿರುತ್ತಾರೆ. ಇಂಥ ಹೊಸ ಅನುಭವಗಳನ್ನು ಕೃತಿ ನಮಗೆ ಕೊಡುತ್ತದೆಯಾದುದರಿಂದಲೇ 'ಮೆರವಣಿಗೆ'ಗೆ ವೈಶಿಷ್ಟ್ಯವಿದೆ ಎಂದೂ ಹೇಳಬೇಕು.

ಬಾವಿಯನ್ನು ತೆಗೆಸುವುದಕ್ಕೆ, ರಸ್ತೆಯನ್ನು ಮಾಡಿಸುವುದಕ್ಕೆ, ಸಾಲು ಮರಗಳನ್ನು ನೆಡಿಸುವುದಕ್ಕೆ ಸರ್ಕಾರದಿಂದ ಮುಫತ್ತಾಗಿ ಹಣ ಪಡೆಯುತ್ತಿದ್ದು ಆ ಹಣ ಹಾಳು ಬಾವಿ ಹಾಳು ರಸ್ತೆಗಳ ಒಣ ಮರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದರ ಮೂಲಕವಾಗಿಯೆ ಹೇಗೆ ಪೋಲಾಗುತ್ತಿತ್ತು, ಅದು ರೈತರ ಗಮನಕ್ಕೆ ಕೂಡ ಬಾರದಂತೆ ಹೇಗೆ ಕರಗುತ್ತಿತ್ತು ಎಂಬುದನ್ನು ತೋರಿಸುವಾಗ, ಮಕ್ಕಳ ನೈರ್ಮಲ್ಯ ಮತ್ತು ಆರೋಗ್ಯಗಳ ಸುಧಾರಣೆಗೆಂದು ಜೀವನದಲ್ಲಿ ಜಾಗೃತಿಯನ್ನು ಉಂಟುಮಾಡುವ ಸಲುವಾಗಿ ಏರ್ಪಡಿಸುತ್ತಿದ್ದ ಬೇಬಿ ಷೋಗಳ ಸ್ವರೂಪ ಮುಂತಾದ ಕಡೆ ಇರುವ ಕದೀಮತನ ಮತ್ತು ಕೃತ್ರಿಮತೆಗಳ ಜತೆಯಲ್ಲಿ ಹಳ್ಳಿಯ ಜನರ ಮುಗ್ಧ ಹಾಗೂ ಅವಿಭಕ್ತ ಮನೋವೃತ್ತಿಯಿಂದ ಪೋಷಿತವಾಗಿದ್ದ ಸಹೃದಯ ಸಹಕಾರಗಳನ್ನು ಹೋಲಿಸಿ ಹೊಸ ಜೀವನ ಕಲ್ಪನೆಗಳಲ್ಲಿ ಅಡಕವಾಗಿರುವ ಅವಾಸ್ತವತೆಯನ್ನು ಒಡೆದು ಕಾಣುವಂತೆ ಮಾಡುವಲ್ಲಿ ಗೊರೂರರು ಹಾಸ್ಯವನ್ನೂ ಭಾಷೆಯನ್ನೂ ಅತಿ ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಇವುಗಳ ಜತೆಗೆ ಇಂದಿಗೂ ಪ್ರಚಲಿತವಾಗಿರುವ ಮತ್ತೊಂದು ಜೀವನ ವಿಕಟತೆಯನ್ನು ಪ್ರಕಾಶಗೊಳಿಸಲು ಕೃತಿ ಮರೆಯುವುದಿಲ್ಲ. ತಮ್ಮ ತಮ್ಮ ಗಂಡಂದಿರ ಸಾಮಾಜಿಕ ಅಧಿಕಾರ ಅಂತಸ್ತುಗಳ ಮೇಲೆಯೆ ಸಮಾಜದಲ್ಲಿ ತಮ್ಮ ಅಂತಸ್ತುಗಳನ್ನು ಹೊಂದಿಸಿಕೊಳ್ಳಲು ಹೆಣಗುವ ಹೆಂಡತಿಯರ ಸ್ವಭಾವವನ್ನು ಗೊರೂರರು ಚೆನ್ನಾಗಿ ತೋರಿಸುತ್ತಾರೆ. ಒಂದು ಉದಾಹರಣೆ :

> ಸಬ್ ಡಿವಿಜನ್ ರಾಣಿಗೆ ಹೀಗೆ, ಮಹಿಳಾ ಸಮಾಜದಲ್ಲಿ ಅಮಲ್ದಾರಿಣಿಯನ್ನು ಪಾದಾಕ್ರಾಂತಳನ್ನಾಗಿ ಮಾಡಿಕೊಂಡುದು ಮಾತ್ರವೇ ಸಾಲಲಿಲ್ಲ. ತನ್ನ ಮನೆಯ ಎದುರಿಗೆ ಅಮಿಲ್ದಾರಿಣಿ ತನ್ನ ಸ್ವಂತ ಮನೆಯಲ್ಲಿ ಪ್ರಬಲವಾಗಿರುವುದೂ ಅವಳಿಗೆ ಒಪ್ಪಿಗೆಯಾಗಿರಲಿಲ್ಲ. ಅಮಿಲ್ದಾರಿಣಿ ತನ್ನ ಗಂಡನಿಗೆ ಹೆಂಡತಿಯಾಗಿ, ಮನೆಗೆ ಯಜಮಾನಿಯಾಗಿ ತನ್ನ ಮಕ್ಕಳಿಗೆ ತಾಯಿಯಾಗಿ ತಾಲ್ಲೂಕು ಕಛೇರಿಯ ಜವಾನರಿಗೆ "ಅಮ್ಮಾ ಅವ್ರು" ಆಗಿರುವುದು ಸಹ....ಸಹಿಸುತ್ತಿರಲಿಲ್ಲ. (ಪುಟ ೭೧)

ಸಾಮಾಜಿಕ ಸತ್ಯವೊಂದನ್ನು ಅತ್ಯಂತ ನಾಟಕೀಯವಾಗಿ ಶೋಧಿಸುತ್ತಿರುವ ಈ

ಉದಾಹರಣೆಯು ಸುತ್ತಮುತ್ತಲಿನ ಇಷ್ಟು ಕೆಲವು ಸಾಲುಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತಿರುವ ಅನುಭವ ತೀರ ಮಹತ್ವದ್ದು. ನಾನಾ ಗೊತ್ತುಗುರಿಗಳು, ಅವು ಕಾರಣಗಳನ್ನು ಪಡೆಯುವುದು ಬರಿಯ ಸಣ್ಣತನಗಳನ್ನು ಗುರಿಸುವ ಸಲುವಾಗಿ ಮಾತ್ರ ಇಲ್ಲಿ ಸ್ಪಷ್ಟವಾಗುತ್ತದೆ. ಮನೆಯ ಜವಾಬ್ದಾರಿ ಗೊತ್ತಾಗುವಂತಹ ಸಣ್ಣ ಕಥೆಗಳು ಬರಿಯ ಅಹಂಕಾರ ದೌಲತ್ತುಗಳಿಗಾಗಿ ಮಾತ್ರವೇ ಪ್ರೇರಿತವಾಗುತ್ತಿರುವುದು ನಮ್ಮನ್ನು ಎಂತಹ ದುರಂತದ ಕಡೆಗೆ ಕರೆದೊಯ್ಯುತ್ತದೆ ಎಂಬುದನ್ನು ತೋರಿಸುವುದೇ ಇಲ್ಲಿಯ ಮುಖ್ಯ ಉದ್ದೇಶ. ಗೊರೂರರು ಎಷ್ಟು ಸರಳವಾಗಿ ಹಾಗೂ ಸುಂದರವಾಗಿ ಎಂಥ ಕಥೆಯನ್ನು ಹುಟ್ಟಿಸುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ. ಎರಡು ಬಗೆಯ ಸ್ವಭಾವಗಳನ್ನು ಮುಖಾಮುಖಿಯಾಗಿಸಿ ಅವುಗಳಿಗಿಂತ ನಾಟಕೀಯವಾಗಿ ಕೆಳಗಿನಯಲ್ಲಿರುವ ಸ್ವಭಾವಗಳಿಂದ ಅವನ್ನು ವಿಮರ್ಶಿಸಿ ಅವುಗಳ ಮೂಲಕ ಪಡೆಯುತ್ತಿರುವ ಕಲಾನುಭವ ನಿಜಕ್ಕೂ ಶ್ರೇಷ್ಠವಾದದ್ದು.

೩

ಹಳ್ಳಿಗಾಡಿನ ಜೀವನದಲ್ಲಿ ಅನಿವಾರ್ಯವಾದ ಮತ್ತೊಂದು ಸಮಸ್ಯೆಯೆಂದರೆ ಮಕ್ಕಳು ಮತ್ತು ಮಕ್ಕಳ ಶಿಕ್ಷಣ ಶಾಲೆ. ಈ ಸ್ಕೂಲುಗಳ ವಾತಾವರಣ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಜೀವನ ಕ್ರಮವನ್ನು ಈ ಕೃತಿ ಯಥಾರ್ಥವಾಗಿ ಚಿತ್ರಿಸುತ್ತದೆ. ಈ ಶತಕದ ಆರಂಭದಲ್ಲಿ ವಿದ್ಯೆ ಸಾರ್ವಜನಿಕವಾಗಿ ಹರಡುತ್ತಿತ್ತು. ಆದರೆ ವಿದ್ಯೆ ಮತ್ತು ವಿದ್ಯೆಯನ್ನು ಕಲಿಸುವ ವಾತಾವರಣದ ವಿಷಯಕ್ಕೆ ಅಂಥ ಮಹತ್ವದ ಬೆಲೆಯೇನೂ ಸಲ್ಲುತ್ತಿರಲಿಲ್ಲ. ಮಲ್ಲಿಗೆಹಳ್ಳಿಯ ಸ್ಕೂಲಿನ ವಠಾರವನ್ನು ಪರಿಚಯಮಾಡಿಕೊಡುತ್ತಿರುವ ರೀತಿ ಈ ದೃಷ್ಟಿಯಿಂದ ಗಮನಾರ್ಹವಾಗಿದೆ: "ಸ್ಕೂಲು ಸುತ್ತಮುತ್ತಲ ಅನೇಕ ಮನೆಗಳ ಸಂಧಿಯಲ್ಲಿ ಅದೂ ಒಂದು ಹೆಂಚಿನ ಮನೆಯಾಗಿ ತೋರುತ್ತದೆ." (ಪುಟ ೮೯) ಬಾಲಕರ ಬೌದ್ಧಿಕ ಬೆಳವಣಿಗೆಗೆ ತಳಪಾಯವನ್ನು ಹಾಕುವ ಈ ಶಾಲೆಗಳ ಇಂಥ ವಾತಾವರಣ ಅನಂಗೆ ಮನೆಯ ವಾತಾವರಣ ಮರೆಯಾಗದಂತೆ ನೋಡಿಕೊಳ್ಳುತ್ತದೆ. ಒಂದು ಪ್ರಶಾಂತ ಆವರಣವೆ ಏರ್ಪಡದೆ ಹೋಗಿಬಿಡುವುದರಿಂದ ಬಾಲಕರ ಮನಸ್ಸು ವಿಕಾಸ ಹೊಂದುವುದರ ಬದಲು ಕುಬ್ಜಗೊಳ್ಳುವ ಸಾಧ್ಯತೆಗಳೆ ಹೆಚ್ಚು. ಶಾಲೆಯ ಸುತ್ತಮುತ್ತಣ ಮನೆಗಳಿಂದ ಕೇಳಿಬರುವ ವಿವಿಧ ರೀತಿಯ ಮಾತುಕತೆಗಳೂ ಅಡಿಗೆಯ ವಾಸನೆಗಳೂ ಹುಡುಗರ ಮನಸ್ಸನ್ನು ಅಭ್ಯಾಸದ ಕಡೆಗೆ ಹರಿಯದಂತೆ ನೋಡಿಕೊಳ್ಳುತ್ತವೆ. "ಇದ್ದಕ್ಕಿದ್ದಂತೆ ಒಂದು ಮನೆಯ ಹಿತ್ತಲಿನಲ್ಲಿ ಹಂದಿಯು ಕಿರ್ರೊ ಎಂದು ಕಿರುಚಲು ಪ್ರಾರಂಭಿಸುತ್ತದೆ. ಕೆಲವು ಹುಡುಗರು ಧ್ವನಿಯನ್ನು ಕೇಳಿ ಭಯದಿಂದ ಬರೆಯುತ್ತಿರುವುದನ್ನು ಮರೆಯುತ್ತಾರೆ. "ಹಂದಿ ಇರಿಯುತ್ತಾರೆ" ಎಂದು ಕೆಲವು ಹುಡುಗರು ಹೇಳುತ್ತಾರೆ. ಹಂದಿಯ ಕಿರಚಾಟವನ್ನು ಕೇಳಿದ ಕೂಡಲೆ ಉಪಾಧ್ಯಾಯರು ಕೆನ್ನೆ ಮೇಲೆ ಕೈಯಿಟ್ಟುಕೊಂಡು ಪಾಠ ಹೇಳುವುದನ್ನು ಬಿಟ್ಟು ಕುಳಿತುಕೊಳ್ಳುತ್ತಾರೆ."

(ಪುಟ ೯೦) ಇಂಥ ಪರಿಸರದಲ್ಲಿ ಹುಡುಗರು ಉಪಾಧ್ಯಾಯರ ಮಾತಿರಲಿ, ಭಗವಂತನೂ ತನ್ನ ಸೃಷ್ಟಿ ಕಾರ್ಯವನ್ನು ನಿಲ್ಲಿಸಿ ಸ್ತಬ್ಧನಾಗಬೇಕಾಗುತ್ತದೆ. ಸಾಲದೆಂಬುದಕ್ಕೆ ಕಬ್ಬಿಣ ಬಡಿಯುವ ಆಚಾರಿಯ ಕುಲುಮೆಯೂ ಶಾಲೆಗೆದುರಾಗಿಯೆ ಇದೆ. ಕೃಷಿಕರು ನಾನಾ ರೀತಿಯ ಆಯುಧಗಳನ್ನು ತೊಳಸಿ ಹಂತ ಮಾಡಿಕೊಳ್ಳುವುದಕ್ಕೂ ಗಾಡಿಗೆ ಪಟ್ಟೆ ಬಡಿಸಿಕೊಳ್ಳುವುದಕ್ಕೂ ಅಲ್ಲಿ ನೆರೆಯುತ್ತಾರೆ. ನಾನಾ ರೀತಿಯ ಮಾತುಕತೆಗಳೂ ಸಾಗುತ್ತವೆ. "ಇಪ್ಪತ್ನಾಲ್ಕು ಗಂಟೆಯೂ ಅವನ ಕೊಟಕೊಟ ಶಬ್ದದಿಂದ ಊರಿಗೆ ನಿದ್ದೆಯಿಲ್ಲ.... ಮೇಷ್ಟರಿಗೆ ಬೆನ್ನಿನ ಮೇಲೆ ಚೇಳು ಬಿಟ್ಟಂತೆ ಆಗುತ್ತದೆ. ಹುಡುಗರು ಪಾಠದ ಜ್ಞಾನವನ್ನು ಬಿಟ್ಟು ಆ ಕೊಟಕೊಟಕ್ಕೆ ತಾಳ ಹಾಕುತ್ತಾ ಕುಳಿತುಬಿಡುತ್ತಾರೆ....ಅಷ್ಟು ಹೊತ್ತಿಗೆ ಒಕ್ಕಲಗಿತ್ತಿಯೊಬ್ಬಳು ನಾಲೆಗೆ ಹೊರಟು, ಎಡಗೈಯಲ್ಲಿ ತೊಳೆಯಬೇಕಾಗಿರುವ ಪರಕೆಯನ್ನೂ ಬಲಗೈಯಲ್ಲಿ ಗಂಗಳವನ್ನೂ ಹಿಡಿದುಕೊಂಡು ಕಂಚುಗಾರನ ಎದುರಿಗೆ ನಿಂತು "ಏ ಸಾಬಯ್ಯ ಮಗೀಗೆ ರಾತ್ರಿಯಿಂದ ಜರ. ನಿದ್ರೆಯೆ ಇಲ್ಲ. ಸ್ವಲ್ಪ ಜೊಂಪು ಹತ್ತೋ ವೇಳ್ಗೆ ನಿನ್ನ ಕೊಟಕೊಟ. ಯಾಕೆ ಹಿಂಗೆ ಪ್ರಾಣ ತೆಗೀತೀಯ. ಹೊತ್ತಾರೆ ಸಂಜೆ, ಸಂಜೆ ಹೊತ್ತಾರೆ ಯಾಕೆ ಹಿಂಗೆ ಬಡ್ಕೋತೀಯ, ಸಟಾಗೆ ನಿದ್ರೆ ಬರ ಸ್ವಲ್ಪ ಸದ್ದು ನಿಲ್ಲಿಸು" (ಪುಟ ೯೦-೯೧) ಎನ್ನುತ್ತಾಳೆ ಒಬ್ಬಳು. ದರ್ಜಿ ಗಿರಾಕಿಯ ಜಗಳವೂ ನಡೆಯುತ್ತದೆ. ಮತ್ತೂ ಏನೇನೊ ಈ ಸ್ಕೂಲಿನ ಸುತ್ತಮುತ್ತ ಉಂಟು.

ಈ ಪರಿಸರ ಮತ್ತು ಆವರಣ ನಮ್ಮ ಸುತ್ತಮುತ್ತ ತುಂಬಿಕೊಂಡಿರುವ ಅಸಾಂಗತ್ಯಗಳಿಗೆ ಪ್ರತಿಮೆಯಾಗಬಹುದಾಗಿದೆ. ಜೀವನಕ್ಕೆ ಇದೆಲ್ಲ ವಾಸ್ತವವೆ ಆದರೂ ಸ್ಕೂಲಿನ ಆವರಣಕ್ಕೆ ಇದು ಎಷ್ಟು ಅಯೋಗ್ಯ ಎಂಬುದರ ಸೂಚನೆ ಇಲ್ಲಿ ಮುಖ್ಯ. ಇಂಥ ವೈವಿಧ್ಯವು ಬದುಕಿನ ಒಂದು ಅಂಗವಾಗಿ ಮಾತ್ರವೆಂಬಂತೆ ಬೆಳೆಯುತ್ತಿದ್ದ ನಮ್ಮ ಮಕ್ಕಳು 'ವಿದ್ಯೆಬುದ್ಧಿ'ಯನ್ನು ಕಲಿಯುವ ಸಲುವಾಗಿ ಶಾಲೆಗೆ ಬಂದು ಸೇರಿ ಜೀವನದ ಹೊಸ ಹೊಸ ಆಯಾಮಗಳನ್ನು ಅರ್ಥಮಾಡಿಕೊಳ್ಳಲೂ, ಪಡೆದುಕೊಳ್ಳಲೂ, ಬೇರೆ ಬೇರೆ ದೃಷ್ಟಿಕೋನಗಳನ್ನು ರೂಪಿಸಿಕೊಳ್ಳಲೂ ಹೆಣಗಬೇಕಾಗಿರುವುದರಿಂದ ಈ ಶಾಲೆಯಿರುವ ಸ್ಥಳದ ಸ್ವರೂಪದಿಂದ ಇದು ಯಾವುದೂ ಸಾಧ್ಯವಾಗುವುದಿಲ್ಲ. ಬೌದ್ಧಿಕ ಚಿಂತನೆಗೆ ತೊಡಗುವುದಕ್ಕೆ ಸಾಧ್ಯವೆ ಆಗದಂಥ ಅನಾನುಕೂಲವುಂಟಾಗಿದೆ. ನೂರು ಅಡಚಣೆ ಆಕರ್ಷಣೆಗಳನ್ನು ಇಟ್ಟು ಮಕ್ಕಳನ್ನು ಓದಲು ಕೂರಿಸುತ್ತೇವೆ. ಮಕ್ಕಳ ಶಾಲೆಯ ಮಾತಿರಲಿ ಕಾಲೇಜುಗಳ ಮಾತೂ ಇಲ್ಲಿಗೆ ಮುಟ್ಟುತ್ತಿದೆ. ಗೊರೂರರು ಈ ಅಂಶವನ್ನು ತುಂಬ ನಾಟಕೀಯವಾಗಿ ಇಲ್ಲಿ ಚಿತ್ರಿಸುತ್ತಾರೆ. ಹೊಸ ಸಮಾಜ ಹೊಸ ಆದರ್ಶಗಳು ಮನಸ್ಸಿನಲ್ಲಿ ಮೂಡಲಿಕ್ಕೆ ಹೊಸ ಆಲೋಚನೆಗಳನ್ನು ಕುದುರಿಸುವ ಹೊಸ ಆವರಣ ಬೇಕು ಎಂಬುದನ್ನು ನಾವು ಮರೆಯುವಂತಿಲ್ಲ. ಹಳೆಯ ಸಂಪ್ರದಾಯಗಳನ್ನು ಉಳಿಸಿಕೊಳ್ಳುವುದಾದರೆ ವಿದ್ಯೆಯ ಅಗತ್ಯವೂ ಇಲ್ಲ, ಬುದ್ಧಿಯ ಅಗತ್ಯವೂ ಇಲ್ಲ. ಅಂತೆಯೆ ಸ್ಕೂಲೂ ಎಲ್ಲರ ಮನೆಯಂತೆ ಹೆಂಚಿನ ಮನೆಯಲ್ಲಿಯೆ ಇದ್ದರೂ ನಡೆಯುತ್ತದೆ. ಅಭಿರುಚಿ ಪರಂಪರೆಯ ಕಡೆಗೇ ಇದ್ದರೂ ಪರಂಪರೆಯಲ್ಲಿ ಸೇರಿಕೊಂಡಿರುವ ಹೊಲಸನ್ನು

ಸೋಲಿಸುತ್ತು ತೆಗೆಯುವ ಕೆಲಸ ಶೀಘ್ರವಾಗಿ ಆಗಬೇಕಾಗಿದೆ. ಅದಕ್ಕೆ ಬೇಕಾದ ಶಿಕ್ಷೆ ನಮ್ಮ ಮಕ್ಕಳಿಗೆ ಅಗತ್ಯ. ಅದನ್ನು ಕೊಡುವ ಸ್ಥಳ ಮನಸ್ಸನ್ನು ಅರಳಿಸುವ ಶಕ್ತಿಯನ್ನು ಪಡೆದುಕೊಂಡಿರಬೇಕು.

ಮಕ್ಕಳು ಮತ್ತು ಅವರ ಶಾಲೆಯ ಆವರಣ ಇದಾದರೆ ಅಲ್ಲಿಯ ಅಧ್ಯಾಪಕರ ಕತೆ ಇನ್ನೊಂದು ಆಗಿರುತ್ತದೆ. ಅವರ ಬಡತನದ ಬದುಕಿನ ವಿವರಗಳನ್ನೂ ಅವರ ಮೇಲಧಿಕಾರಿಗಳಾದ ಇನ್ಸ್‌ಪೆಕ್ಟರುಗಳ ದರ್ಪ ದೌಲತ್ತುಗಳನ್ನೂ ಗೊರೂರರು ಚೆನ್ನಾಗಿ ಚಿತ್ರಿಸುತ್ತಾರೆ. ತಿಪ್ಪಯ್ಯ ಉಪಾದ್ರಿಯ ಪಾತ್ರ ಇಲ್ಲಿ ಕಣ್ಣುಕಟ್ಟಿ ನಿಲ್ಲುತ್ತದೆ. ಉಪಾದ್ರಿಯು ಬದುಕಿಗೆ ತೋರುತ್ತಿದ್ದ ತನ್ನದೇ ಆದ ವಿಶಿಷ್ಟ ಮಾದರಿಯ ಪ್ರತಿಕ್ರಿಯೆ ಗಮನಾರ್ಹವಾದುದು. ಉಪಾದ್ರಿಯ ಜೀವನಶ್ರದ್ಧೆ ಮತ್ತು ನಂಬಿಕೆಗಳು ತಮ್ಮ ಗಟ್ಟಿತನದಿಂದಲೂ ಸ್ವಾನುಭವದ ಕೆಚ್ಚಿನಿಂದಲೂ ಕೂಡಿದ್ದು, ಬರಿಯ ಭ್ರಮೆಯ ಹಾಗೂ ಲೆಕ್ಕಾಚಾರದ ಮೂಲಕವೆ ಪ್ರಗತಿಯನ್ನು ಸಾಧಿಸುತ್ತಿರುವ ವಸ್ತುಜಗತ್ತಿನ ವಿರುದ್ಧ ನಿಂತು ಸತ್ಯಸಂಗತಿಯೊಂದನ್ನು ಹೊರಗೆಡಹುತ್ತವೆ. ಇಲ್ಲೆಲ್ಲ ಅವರಿಗೆ ಉತ್ತೇಜನವನ್ನು ಕೊಡುತ್ತಿರುವುದು ಅಕೃತ್ರಿಮವಾದ ಜೀವನಶ್ರದ್ಧೆ, ಕೊಂಚ ಒರಟೆನಂತೆ ಭಾಸವಾದರೂ ಸುಸಂಸ್ಕೃತಿಯ ಪಕ್ಷಪಾತ. ಗೊರೂರರು ಚಿತ್ರಿಸುವ ಸಂಸ್ಕೃತಿ ಶಾಸ್ತ್ರಾಗಮಗಳಿಂದ ನೇರವಾಗಿ ಎದ್ದುಬಂದುದಲ್ಲ. ನಿಸರ್ಗಕ್ಕೆ ಹತ್ತಿರವಾಗಿದ್ದ ಬದುಕಿನ ಸಹಜಾನುಭವಗಳ ಹೊಟ್ಟೆಯಿಂದ ನೇರವಾಗಿ ಹುಟ್ಟಿಬಂದದ್ದು. ತಿಪ್ಪಯ್ಯ ಉಪಾದ್ರಿಯ ವಿಷಯಕ್ಕೆ ಲೇಖಕರು ಒಂದು ಕಡೆ ಬರೆಯುವ ಕೆಲವು ಮಾತುಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ:

> ತಮ್ಮ ಊರಿನ ಸ್ಕೂಲೇ ಆದರೂ ಉಪಾದ್ರಿಗೆ ಆ ಸ್ಕೂಲಿನಲ್ಲಿ ಹಿಂದೆ ಇದ್ದಷ್ಟು ಉತ್ಸಾಹವಿರಲಿಲ್ಲ. ಬರುತ್ತಿದ್ದ ೧೦ ರೂಪಾಯಿ ಸಂಬಳ ಸಾಕಾಗುತ್ತಿರಲಿಲ್ಲ. ಮನೆಯ ತುಂಬ ಮಕ್ಕಳಾಗಿದ್ದರು. ಸರ್ಕಾರದವರು ಒಂದು ರೂಪಾಯಿಯನ್ನು ಸಹ ಬಡ್ತಿ ಕೊಟ್ಟಿರಲಿಲ್ಲ. ಉಪಾದ್ರು ಮೊದಲಿನಂತೆ ಹುಡುಗರನ್ನು ಹೊಡೆಯುತ್ತಿದ್ದರು. ಮೊದಲಿನಂತೆ ಪಾಠ ಹೇಳುತ್ತಿದ್ದರು. ಆದರೆ ಆಗ ಅವರಿಗೆ ಇದ್ದ ಹುರುಪು ತಾನೇ ಸ್ಕೂಲೆಂಬ ತಾದಾತ್ಮ್ಯಭಾವವೂ ಈಗ ಇರಲಿಲ್ಲ.... ಈಗ ನಾಲ್ಕು ಹೆಣ್ಣು ಒಂದು ಗಂಡು. ಸಂಸಾರ ಹೆಚ್ಚಾಗಿದ್ದಿತು. ದೇವರು ಸಂಸಾರವನ್ನು ಒಂದಕ್ಕೆ ನಾಲ್ಕರಷ್ಟು ಹೆಚ್ಚಿಸಿ ಉತ್ಪತ್ತಿಯನ್ನು ಮಾತ್ರ ಮೊದಲಿದ್ದಂತೆಯೆ ಇಟ್ಟದ್ದರಿಂದ ಉಪಾದ್ರಿಗೆ ದೇವರ ಮೇಲೂ ಮನುಷ್ಯರ ಮೇಲೂ ಕೋಪ ಹೆಚ್ಚಾಗಿದ್ದಿತು. (ಪುಟ ೧೧೪)

ಇದರ ಜತೆಗೆ ತಿಪ್ಪಯ್ಯ ಉಪಾದ್ರಿ ತಮ್ಮ ತಿಂಗಳ ಆದಾಯದಲ್ಲಿ ಎಂಟಾಣೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಸಾದಿಲ್ವಾರು ಲೆಕ್ಕದ ಮೂಲಕ ಪಡುತ್ತಿದ್ದ ತಾಪತ್ರಯವನ್ನು ಗಮನಿಸಿದರೆ ಬದುಕಿಗೂ ಆರ್ಥಿಕ ಜೀವನಕ್ಕೂ ಎಂಥ ನಿಕಟ ಸಂಬಂಧವಿದೆ ಎಂಬುದು ಸ್ಪಷ್ಟವಾಗುತ್ತದೆ. ಮನುಷ್ಯನ ಆಲೋಚನಾಸ್ವರೂಪವನ್ನು ನಿರ್ಣಯಿಸುವ

ಅವನ ಜೀವನಾಸಕ್ತಿಗಳ ಮೇಲೆ ಅನನ್ಯ ರೀತಿಯ ಪರಿಣಾಮವನ್ನುಂಟುಮಾಡುವ ಶಕ್ತಿ ಹಣಕ್ಕಿದೆ ಎಂಬುದನ್ನು ಗೊರೂರರು ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ ಎನಿಸುತ್ತದೆ. ಒಟ್ಟಿನಲ್ಲಿ ಅಂದಿನ ಒಂದು ಸಾಮಾಜಿಕ ಪರಿಸ್ಥಿತಿಯನ್ನು ಇದು ಸುಂದರವಾಗಿ ಅಭಿವ್ಯಕ್ತಿಸುತ್ತದೆ.

ಆದರೆ ಉಪಾಧ್ರಿಯಂಥ ಪ್ರದ್ಧಾತ್ಮಕ ಬದುಕಿನಲ್ಲಿ ವಿತ್ತಕಲ್ಪನೆ ಅಂಥ ದೊಡ್ಡ ಪಾತ್ರವನ್ನೇನೂ ವಹಿಸುವುದಿಲ್ಲ. ಬಹುಶಃ ಭಾರತೀಯ ಬದುಕಿನ ರಚನೆಯಲ್ಲಿಯೆ ಸಾಂಸ್ಕೃತಿಕ ದೊಡ್ಡಸ್ತಿಕೆಗೆ ದೊರೆಯುವಂತೆ ಆರ್ಥಿಕ ದೊಡ್ಡಸ್ತಿಕೆಗೆ ಮನ್ನಣೆ ದೊರೆಯುವಂತೆ ತೋರುವುದಿಲ್ಲ. ಉಪಾಧ್ರಿಯ ಪಾಠ ಪ್ರವಚನ ವಿಧಾನದಲ್ಲಿಯೂ, ಹುಡುಗರಿಗೆ ಕೊಡುವ ಹಾಜರಿ ಗೈರುಹಾಜರಿಯ ಕ್ರಮದಲ್ಲಿಯೂ, ತಾವು ಪಡೆಯುವ ರಜೆಯ ರೀತಿಯಲ್ಲಿಯೂ ಅಸಾಧಾರಣವಾದ ಸ್ವಂತಿಕೆಯಿದೆ ಮತ್ತು ವಿಚಾರಪರತೆಯಿದೆ. ಲೆಕ್ಕಾಚಾರದ ಬದುಕನ್ನು ಅವರು ಪೂರ್ಣವಾಗಿ ವಿರೋಧಿಸುತ್ತಾರೆ. ನೀತಿ ನಿಯಮಗಳನ್ನು ಹೊರೆಹೊರೆಯಾಗಿ ಹೇರುವುದರ ಮೂಲಕ ಸರ್ಕಸ್ ಪ್ರಾಣಿಗಳನ್ನು ತಯಾರು ಮಾಡಬಹುದೆ ಹೊರತು ಆದರ್ಶ ಸಮಾಜವನ್ನು ಕಟ್ಟುವುದಕ್ಕಾಗುವುದಿಲ್ಲ. ಕೃತಿಯಲ್ಲಿ ಬರುವ ಒಂದು ನಾಟಕೀಯ ಸನ್ನಿವೇಶ ಈ ಮಾತನ್ನು ಸ್ಪಷ್ಟಪಡಿಸುತ್ತದೆ :

> ಚಾಮೇಗೌಡ ನೆಟ್ಟಗೆ ಒಳಗೆ ಬಂದುದನ್ನು ನೋಡಿ ಹೊಸ ಉಪಾಧ್ಯಾಯರು ಅಲ್ಲೇ ನಿಲ್ಲಿ ಎಂದರು. ಚಾಮೇಗೌಡ ಬೆಚ್ಚಿ ಬಾಗಿಲಿನಲ್ಲಿ ನಿಂತನು. ಹೊಸ ಉಪಾಧ್ಯಾಯರು ಅವನ ಹತ್ತಿರಕ್ಕೆ ಹೋಗಿ "ಅಲ್ಲಯ್ಯಾ ಇದು ಏನು ಸಂತೆ ಅಂತ ತಿಳ್ಕೊಂಡುಬಿಟ್ಟೆಯೊ? ಸ್ಕೂಲಿನೊಳಕ್ಕೆ ಬರಬೇಕಾದರೆ ಕೋಟು ರುಮಾಲು ಹಾಕಿಕೊಂಡು ಬರಬೇಕು" ಎಂದು ಗದರಿಸಿದರು. ಚಾಮೇಗೌಡ ಯಾವಾಗಲೂ ಹಾಗೆ ಸ್ಕೂಲಿಗೆ ಬರುತ್ತಿದ್ದವನಿಗೆ ಉಪಾಧ್ಯಾಯರ ಮಾತನ್ನು ಕೇಳಿ ಸಿಟ್ಟುಬಂದಿತು. ಅವನು "ಹೋಗಯ್ಯ ನಿನ್ನ ಚಂಚ್ಕೃತ ಊದಬೇಡ, ಕಂಡಿವ್ನಿ" ಎಂದುಕೊಂಡು ತನ್ನ ಹುಡುಗನೊಂದಿಗೆ ಮಾತಾಡಿಕೊಂಡು ಹೊರಟುಹೋದನು. ಹೊಸ ಉಪಾಧ್ಯಾಯರ ಈ ಸ್ಟ್ರಿಕ್ಟ್ ನೋಡಿ ಹೆಡ್ಮಾಸ್ಟರಾದ ತಿಪ್ಪಯ್ಯನವರಿಗೂ ಬೇಜಾರಾಯಿತು. ಅವರು "ಸ್ಟ್ರಿಕ್ಟ್ ಅಂತೆ ಸ್ಟ್ರಿಕ್ಟ್. ನಿನ್ನ ತಲೆ. ಕೋಟು ರುಮಾಲು ಗೌಡಗಳು ಎಲ್ಲಿಂದ ತರ್ತಾರೆ. ನೀನೆ ಮೂರು ವರ್ಷಕ್ಕೆ ಒಂದು ಕೋಟು ಹೊಲಿಸುತೀಯ. ನಾನು ಹನ್ನೊಂದು ವರ್ಷದಿಂದ ಈ ಕೋಟಿನಲ್ಲಿ ಕಾಲ ಹಾಕತೇನೆ" ಎಂದು ಗದರಿಸಿದರು. (ಪುಟ ೧೫೨–೧೫೩)

ಮಣ್ಣಿನಲ್ಲಿ ಬೇರುಬಿಟ್ಟ ಗಿಡದಂತೆ ಬದುಕೆಂಬುದು ಸ್ವಾಭಾವಿಕವಾಗಿ, ಎಲೆ ಹೂಗಳಂತೆ ಮೃದುತೆಯನ್ನೂ ನರುಗಂಪನ್ನೂ ಪಡೆದು ಅರಳಬೇಕು; ಪ್ರಗತಿಯನ್ನು ಸಾಧಿಸಬೇಕು. ಸಾಹಿತ್ಯದಲ್ಲಿ ವಾಸ್ತವತೆ ಎಂಬುದಕ್ಕೆ ಬಹುಶಃ ಇದೆ ಅರ್ಥ ಎಂದು ನನಗನಿಸುತ್ತದೆ. ವಾಸ್ತವ ಅನಿಸಿಕೆಗಳು ಅಭಿವ್ಯಕ್ತಿಯನ್ನು ಪಡೆಯಬೇಕು. ಈ ಮೇಲಿನ

ಉಪಾಧ್ಯರಿಗೆ ನಾಟಕೀಯವಾಗಿ ಅಭಿವ್ಯಕ್ತಿಸುತ್ತಿರುವ ತನ್ನ ಉದಾತ್ತವಾಗಿರುವ ಸಮಯದಲ್ಲಿಯೂ ಸ್ವಾಭಾವಿಕವಾದುದೂ ಆಗಿರುತ್ತದೆ. ತನ್ನ ಹಿರಿಯ ಶಕ್ತಿಯ ಎದುರಿ ನಲ್ಲಿಯೂ ತನ್ನ ಗಟ್ಟಿತನವನ್ನು ಪ್ರಕಟಗೊಳಿಸಿಕೊಳ್ಳುವ ಕಡೆಗೆ ಗೊರೂರರ ಆಸಕ್ತಿಯಿದೆ. ಉಪಾಧ್ಯರು ಓದಿ ಕಲಿತಿರುವುದೂ ಏನೇನೂ ಇಲ್ಲ. ಹಾಗೆ ನೋಡಿದರೆ ಅವರು ಸಾಧನೆಮಾಡಿರುವುದೇನು ಎಂಬುದು ಯಾರಿಗೂ ಗೊತ್ತಿಲ್ಲ. ಅಂಥ ಎಲೆ ಮರೆಯ ಕಾಯಿ. ಆದರೆ ಒಂದು ಪರಿಪೂರ್ಣವಾದ ಸರಳವಾದರೂ ಒಂದು ರಸ್ನಿಷ್ಠದ ಸಮಚಿತ್ತಯಿಂದ ಕೂಡಿದ ಜೀವನಕಲ್ಪನೆ ಓದುಗನ ಅನುಭವಕ್ಕೆ ಬರುತ್ತದೆ. ಯಾವ ಯುರೋಪ್ಯ ಬರವಣಿಗೆಯಿಂದಲೂ ಇದಕ್ಕಿಂತ ಹೆಚ್ಚಿನದೇನನ್ನೂ ಪಡೆಯಲಾರೆವು. ಯಾಕೆಂದರೆ ಇದು ಎಂಥದೆ ವಿಚಾರವಾದೀ ಸಂಕಲ್ಪಿತ ಜೀವನಾಸಕ್ತಿಗಳ ಎದುರಿಗೂ ದಯಾದಾಕ್ಷಿಣ್ಯಗಳ ಹಂಗಿಲ್ಲದೆ ತಲೆಯೆತ್ತಿ ನಿಲ್ಲಬಹುದಾಗಿದೆ. ತನ್ನ ಮಿತಿಯಲ್ಲಿಯೂ ಅತ್ಯುನ್ನತವಾದ ವಿಚಾರಪರತೆಯನ್ನು ಪ್ರಕಟಿಸುತ್ತಿರುವುದು ಇಲ್ಲಿಯ ಮಹತ್ವದ ಸಂಗತಿ. ಇಲ್ಲಿ ಎಲ್ಲಕ್ಕಿಂತ ಮುಖ್ಯವಾದುದು ಪ್ರಾಮಾಣಿಕತೆ. ತನ್ನ ಅನುಭವದ ಆಧಾರದ ಮೇಲೆಯೇ ಬದುಕನ್ನು ಒರೆಹಚ್ಚಿ ನೋಡುವ ಗುಣ ಮಾತಿಗೂ ಕೃತಿಗೂ ನಡುವೆ ಬಿರುಕು ಬೀಳದಂತೆ ನೋಡಿ ಕೊಳ್ಳುವುದೆ ಪ್ರಾಮಾಣಿಕತೆಯ ಲಕ್ಷಣ. ಉಪಾಧ್ಯರ ವಿಚಾರಪರತೆಯ ಜತೆಗೆ ಆಧುನಿಕ ರೀತಿನೀತಿಗಳನ್ನು ಮೀರಿಸಿ ಎಲ್ಲದರಲ್ಲಿಯೂ ಇರುವ ಪ್ರಾಮಾಣಿಕತೆಯ ಪ್ರಮಾಣವನ್ನು ನಿರೀಕ್ಷಿಸಿದಾಗ ಗೊರೂರರ ಬರವಣಿಗೆಯ ಹಿನ್ನೆಲೆಗೆ ಇರುವ ಧ್ವನಿ ಮಂದಟ್ಟಾಗುತ್ತದೆ.

ಬದುಕಿನ ಪ್ರಾಥಮಿಕ ಸ್ತರದಲ್ಲಿಯ ಮುಗ್ಧನ ಮಕ್ಕಳ ಜೀವನವಿಧಾನವನ್ನು ಅಕ್ಷರತೆಯ ಮೂಲಕ ಬದುಕಿನ ಅನುಭವಗಳನ್ನು ವಿಸ್ತೃತ ರೀತಿಯಿಂದ ಸಂಭಾವಿಸುವ ಅವಕಾಶಗಳನ್ನು ಕಲ್ಪಿಸುವ ಪ್ರಾಥಮಿಕ ಶಾಲಾಜೀವನದ ಸ್ವರೂಪವನ್ನು ವರ್ಣಿಸುವುದರ ಮೂಲಕವಾಗಿಯೂ ಭಾರತೀಯ ಜೀವನದ ನೆಲಗಟ್ಟನ್ನೆ ಮುಂದಿಡ ಬಯಸುತ್ತಿರುವ ಗೊರೂರರ ಬರವಣಿಗೆ ಮುಖ್ಯವಾಗಿ ಸಾಂಸ್ಕೃತಿಕವಾದುದು, ನೀತಿಪರವಾದುದು. ಇದಕ್ಕೆ ಆಧುನಿಕ ಬರವಣಿಗೆಯ ರೀತಿ ವಿರೋಧವಿಲ್ಲದಿದ್ದರೂ ಅನುಭವಗಳನ್ನು ಶೋಧಿಸುವ ರೀತಿ ಮತ್ತು ಅಭಿವ್ಯಕ್ತಿಸುವ ವಿಧಾನಗಳಲ್ಲಿ ವ್ಯತ್ಯಾಸವಿದೆ. ಗೊರೂರರಿಗೆ ಜೀವನ ಮುಖ್ಯ.

'ಮೆರವಣಿಗೆ'ಯಲ್ಲಿ ಶ್ಯಾನುಭೋಗರ ಕತೆಯಾಗಲಿ, ಉಪಾಧ್ಯರ ಕತೆಯಾಗಲಿ, ಸುದರ್ಶನನ ಸಾಹಸದ ಬದುಕಾಗಲಿ, ಈ ಎಲ್ಲದರ ಜತೆಗೆ ಸಮಯಾನುಸಾರವಾಗಿ ಸಂಬಂಧವನ್ನು ಕುದುರಿಸಿಕೊಳ್ಳುವ ಮೇಲಧಿಕಾರಿಗಳ ವಿಚಾರವಾಗಲಿ ಅನಿವಾರ್ಯ ಎಂಬಂತೆ ಶಿಲ್ಪದ ಬೆಸುಗೆಯಿಂದ ಪ್ರಬಂಧತ್ವವನ್ನು ಪಡೆಯಲಾರದು. ಆದರೆ ಅದೇ ಕೃತಿಯ ಮಹತ್ವದ ಸಂಗತಿಯಲ್ಲ. ಅದೇ ಕೃತಿಯನ್ನು ಅಲಕ್ಷಿಸುವುದಕ್ಕೆ ಕಾರಣವಲ್ಲ. ಬದುಕಿನ ಬಿಡಿಬಿಡಿ ಅನುಭವಗಳನ್ನು ಸನ್ನಿವೇಶಗಳನ್ನು ನಾಟಕೀಯವಾಗಿ ಅಭಿವ್ಯಂಜಿಸುವುದರ ಮೂಲಕ ಮಹಾಕೃತಿಯಲ್ಲಿ ಸಾಧಿತವಾಗುವ ಅನುಭವಗಳನ್ನು ಸಾಧಿಸ

ಬಹುದು ಎಂಬುದಕ್ಕೆ ಇಲ್ಲಿ ಅನೇಕ ಜೀವಂತ ಸಾಕ್ಷಿಗಳಿವೆ. ಉಪಾಧ್ಯಾಯ ಕತೆ ಅಂಥ ಒಂದು ಸನ್ನಿವೇಶ.

೪

ಗೊರೂರರಿಗೆ ದೊಡ್ಡ ಹೆಸರನ್ನು ತಂದುಕೊಡುವ ಇನ್ನೊಂದು ಮೌಲ್ಯವನ್ನು ಈ ಕೃತಿ ಪ್ರಕಟಿಸುತ್ತದೆ. ಶ್ರೀಯುತರ ರಾಷ್ಟ್ರೀಯ ಜಾಗೃತಿ ಅದ್ಭುತವಾದುದು. ಸ್ವಾತಂತ್ರ್ಯ ಸಂಗ್ರಾಮದ ಸ್ವರೂಪವನ್ನು ಇಷ್ಟು ಚೆನ್ನಾಗಿ ಮೈಗೂಡಿಸಿಕೊಂಡ ಕೃತಿ ನಮ್ಮಲ್ಲಿ ಬಹಳ ಅಪರೂಪ. ಅಲ್ಲಿ ಅವರು ತೋರಿಸುತ್ತಿರುವ ಧೈರ್ಯ, ಕೆಚ್ಚು, ನಿಷ್ಠೆ ಈ ಹೊತ್ತಿನ ಭಾರತೀಯ ಜನತೆಗೆ ಸಾಧ್ಯವೆ ಎಂಬಷ್ಟು ಅದ್ವಿತೀಯವಾಗಿದೆ. ನಿಸರ್ಗ ಕಲ್ಪಿತ ಸ್ವಾತಂತ್ರ್ಯಪ್ರೇರಣೆ ಈ ರಾಷ್ಟ್ರೀಯ ಜಾಗೃತಿಗೆ ಮೂಲಕಾರಣವಾಗಿರುವುದರಿಂದ ಅಕೃತ್ರಿಮ ಶ್ರದ್ಧೆ ಇಲ್ಲಿಯೂ ಪ್ರಬಲ ಶಕ್ತಿಯಾಗಿ ಕೆಲಸ ಮಾಡುತ್ತಿದೆ. ಇದು ಎಂದಿಗೂ ಅಧಿಕಾರಮತ್ತತೆಯ ರಾಜಕೀಯ ಪ್ರಜ್ಞೆಯಲ್ಲ. ಒಂದರ್ಥದಲ್ಲಿ ಇದನ್ನು ಆಧ್ಯಾತ್ಮ—ಬೇಕಾದರೆ ರಾಜಕೀಯ ಆಧ್ಯಾತ್ಮ—ಎಂದೆ ಕರೆಯಬಹುದು. ಗಾಂಧಿಯ ರಾಷ್ಟ್ರೀಯ ಜಾಗೃತಿ ಮತ್ತು ರಾಜಕೀಯ ಪ್ರಜ್ಞೆ ಅಧಿಕಾರ ಮತ್ತು ಸ್ವಾರ್ಥಕಾರಣಗಳಿಗಾಗಿ ಹೇಗೆ ಅಲ್ಲವೋ ಹಾಗೆಯೆ ಗೊರೂರರದ್ದೂ ಸ್ವಭಾವಜನ್ಯ. ಆದ್ದರಿಂದಲೆ ಅದು ಆ ತಲೆಮಾರಿಗೆ ಪ್ರಚಂಡ ಧೈರ್ಯವನ್ನು ತಂದುಕೊಟ್ಟದ್ದು. ಸ್ವತಃ ಗೊರೂರರೆ ಗಾಂಧಿಯ ಹಿರಿಯ ಅನುಯಾಯಿಗಳಲ್ಲಿ ಒಬ್ಬರು. ಅಪಾರವಾದ ಸಾಂಸಾರಿಕ ಕಷ್ಟ ನಷ್ಟಗಳಲ್ಲಿಯೂ ಜೈಲಿನಲ್ಲಿದ್ದುಕೊಂಡು ಅದ್ಭುತ ಧೈರ್ಯವನ್ನು ಪ್ರಕಟಿಸಿದವರು. ಧೈರ್ಯಶಾಲಿಗಳನ್ನು ಕಂಡವರು, ಅಪ್ಪಿಕೊಂಡವರು. ಅಂತೆಯೆ ‘ಮೆರವಣಿಗೆ’ಯ ಈ ಭಾಗ ಗಣನೀಯವಾಗುತ್ತದೆ :

> ನಮ್ಮ ದೇವರು, ನಮ್ಮ ಶಾಸ್ತ್ರ, ನಮ್ಮ ಸಂಸ್ಕೃತಿ ಇವುಗಳಲ್ಲಿ ನಂಬಿಕೆ ಕಡಿಮೆಯಾಗುತ್ತಿರುವುದರ ಜತೆಗೆ ನಮ್ಮ ಜನರ ಧೈರ್ಯವೂ ಕುಗ್ಗುತ್ತಿದೆ. ಜೀವನದೊಂದಿಗೆ ಕಾದಾಡುವ, ಬರುವ ಕಷ್ಟವನ್ನು ಎದುರುಗೊಳ್ಳುವ, ಬಂದುದನ್ನು ಅನಿವಾರ್ಯವೆಂದು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಬರಬೇಕಾದರೆ ನಮಗೆ ಜೀವನದಲ್ಲಿ ಒಂದು ನಂಬಿಕೆ ಒಂದು ಭಕ್ತಿ ಇರಬೇಕು. ಈ ಒಂದು ನಂಬಿಕೆ ಇಲ್ಲದಿದ್ದರೆ ನಮ್ಮ ಜೀವನಕ್ಕೆ ಅರ್ಥವಿಲ್ಲದುದಾಗುತ್ತದೆ. ನಮ್ಮ ಇಂದಿನವರ ಹೇಡಿತನವನ್ನೂ ಆಚರಣೆಗಳನ್ನೂ ನೋಡಿ ನಮ್ಮ ಪೂರ್ವಿಕರು ಎಂದಿಗೂ ಹೀಗೆ ಹೇಡಿಗಳಾಗಿರಲಿಲ್ಲವೆಂಬ ಭಾವ ನಮಗೆ ಬರುವುದಕ್ಕೆ ಇದೇ ಕಾರಣ. ಜೀವನಕ್ಕೆ ಅರ್ಥವನ್ನು ಕೊಡುವುವು ಕೆಲವು ಭಾವಗಳು, ಕೆಲವು ನಂಬಿಕೆಗಳು. ಆ ನಂಬಿಕೆಗಳಿಗೆ ಸರಿಯಾದ ಆಧಾರವಿದೆಯೇ ಇಲ್ಲವೇ ಎಂಬುದು ಬೇರೆ ಪ್ರಶ್ನೆ. ಆ ನಂಬಿಕೆಯನ್ನಿಟ್ಟುಕೊಂಡಿದ್ದ ನಮ್ಮ ಹಿರಿಯರು ಆ ನಂಬಿಕೆಯೇ ಇಲ್ಲದಿರುವ ನಮಗಿಂತ ಹೆಚ್ಚು

ಧೀರರೂ, ಶೂರರೂ ಆಗಿದ್ದರೆಂಬುದರಲ್ಲಿ ಸಂದೇಹವಿಲ್ಲ. (ಪುಟ ೧೩೬)

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವ ಪ್ರಾಣಾರ್ಪಣ ಮಾನಾರ್ಪಣಗಳೆಲ್ಲವೂ ಈ ಮೌಲ್ಯಪ್ರಜ್ಞೆಯಿಂದ ಪ್ರೇರಿತವಾದ ಧೈರ್ಯದಿಂದ ಸಾಧ್ಯವಾದುವು. ಈ ಹೊತ್ತಿನ ಸಮಾಜ ಅಂದಿನ ಸಮಾಜ ಅಲ್ಲ ಎಂಬುದು ನಿಜವಾದರೂ ನಮ್ಮ ವಿಚಾರಶೀಲತೆ ಯಲ್ಲಿಯೂ, ಅಭಿಪ್ರಾಯ ಪ್ರಕಟಣೆಯಲ್ಲಿಯೂ ಒಂದು ಬಗೆಯ ವಕ್ರತೆಯು ಜತೆಗೆ ಪುಕ್ಕಲುತನವೂ ಸೇರಿಕೊಂಡಂತಿರುವುದನ್ನು ಇಲ್ಲಿ ನೆನಪಿಟ್ಟುಕೊಳ್ಳಬೇಕು. ಇಂದು ತಲೆ ಗೊಂದು ಅಭಿಪ್ರಾಯಗಳು ಪ್ರಕಟವಾಗುತ್ತಿದ್ದು ಸತ್ಯ ಯಾವುದು ಎಂಬುದೆ ಸ್ಪಷ್ಟ ವಾಗುತ್ತಿಲ್ಲ.

ಅಂದಿನ ಕ್ರಾಂತಿಯ ಸ್ವರೂಪವನ್ನೂ ಪ್ರೇರಕ ವಿಧಾನವನ್ನೂ ಅರ್ಥ ಮಾಡಿ ಕೊಳ್ಳುವುದು ಆವಶ್ಯಕ. ಗಾಂಧಿಯು ನಾಡಿನಾದ್ಯಂತವಾಗಿ ಊದಿದ ಸ್ವಾತಂತ್ರ್ಯ ಕಹಳೆ ಯುವಕರ ಮನಸ್ಸಿನ ಮೇಲೆ ಮಹತ್ವದ ಪರಿಣಾಮವನ್ನುಂಟುಮಾಡಿತು. ಗಾಂಧಿಯ ಕರೆಯನ್ನು ದೇಶದ ಯುವಕರು ಅಸಾಮಾನ್ಯ ಸಾಧಾರಣವಾಗಿ ಸ್ವಾಗತಿಸಿ ಒಂದು ಬಗೆಯ ಸಮರ್ಪಣಭಾವದಿಂದಲೆ ಕ್ರಾಂತಿಗೆ ಸಿದ್ಧರಾದರು. ಆದರೆ ಯುವಕರ ಈ ಉತ್ಸಾಹವನ್ನು ಗಾಂಧೀವಾದದ ರಚನಾತ್ಮಕ ಧ್ಯೇಯಧೋರಣೆಗಳು ಪರೀಕ್ಷೆಗೊಡ್ಡಿ ದುವು. ಆ ಸಮಯದಲ್ಲಿ ಕೆಲಸಮಾಡುತ್ತಿದ್ದ ಎರಡು ಪ್ರಮುಖ ಶಕ್ತಿಗಳನ್ನೂ ನಾವು ನೆನಪಿಟ್ಟುಕೊಳ್ಳಬೇಕು.

"ಇಲ್ಲಿಗೆ ನೀವು ಬರಬೇಕೆಂದು ಗಾಂಧಿಯವರು ಬಯಸಲಿಲ್ಲ. ನಿಮ್ಮ ನಿಮ್ಮ ಊರು ಗಳಿಗೆ ಹೊರಟು ಹೋಗಿ. ಅಲ್ಲಿ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಿರಿ. ಖಾದಿಯ ತಯಾರಿಕೆ, ಅಸ್ಪೃಶ್ಯತೆಯ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯ, ಪಾನನಿರೋಧ, ಗ್ರಾಮ ನಿರ್ಮಲೀಕರಣ, ವಯಸ್ಕರ ವಿದ್ಯಾಭ್ಯಾಸ" ಇವುಗಳಲ್ಲಿ ತೊಡಗಿ ಎಂದು ಹೇಳುತ್ತಿದ್ದರು. ಸ್ಕೂಲು ಕಾಲೇಜುಗಳನ್ನು ಬಿಟ್ಟು ಬರುತ್ತಿದ್ದ ವಿದ್ಯಾರ್ಥಿಗಳಿಗೆ ಈ ಸಂದೇಶ ಬಹು ಸಣ್ಣದಾಗಿ ತೋರಿತು. ಹಾಗೆ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಿ ಕೆಲಸ ಮಾಡುವ ಶಕ್ತಿ ಅನೇಕ ವಿದ್ಯಾರ್ಥಿಗಳಿಗೆ ಇರಲಿಲ್ಲ. ನೆಟ್ಟಗೆ ಯುದ್ಧಭೂಮಿಗೆ ಹೋಗಿ ಸಿಪಾಯಿಯಾಗುವುದೂ, ಎದುರಾಳಿಯ ಗುಂಡಿಗೆ, ಗುಂಡಿಗೆ ಒಡ್ಡುವುದೂ ಸುಲಭ. ಆದರೆ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗು ವುದು ಬಹಳ ಸಾಹಸದ ಕೆಲಸ. ಅದಕ್ಕೆ ಬಹಳ ಸಹನೆಯೂ ಅನಾಸಕ್ತಿಯೂ, ಎಲೆಯ ಮರೆಯ ಹೂವಿನಂತೆ ಇದ್ದುಕೊಂಡು ಕೆಲಸಮಾಡುವ ನಮ್ರಭಾವವೂ ಬೇಕಾಗುತ್ತದೆ. ಪಾಪ ಉತ್ಸಾಹದಿಂದ, ಆಕಾಶಕ್ಕೆ ಹಾರಿಹೋಗುವ ಸುರುಬತ್ತಿ ಯಂತೆ ವಿದ್ಯುತ್‌ಚೈತನ್ಯವುಳ್ಳವರಾಗಿ ಗಾಂಧಿಯವರ ಬಳಿಗೆ ಬಂದ ವಿದ್ಯಾರ್ಥಿ ಗಳು ರಚನಾತ್ಮಕವಾದ 'ಸಾಧುವಾದ' ಸಂದೇಶಗಳನ್ನು ತೆಗೆದುಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿದರು. (ಪುಟ ೪೫)

ಇದು ಒಂದು.

> ಮರುದಿವಸ ಸಾಯಂಕಾಲ ಶ್ರೀಮತಿ ಸರೋಜಿನೀದೇವಿಯವರು ಯುವಕರನ್ನು ಕುರಿತು ಒಂದು ಭಾಷಣ ಮಾಡಿದರು...."ಯುರೋಪಿನಲ್ಲಿ ಯುದ್ಧ ಪ್ರಾರಂಭವಾಗಿ ಆಗಸ್ಟ್ ಆಕಾಶವು ಯುವಕರ ರಕ್ತದಿಂದ ಕೆಂಪಾಗಿದ್ದಾಗ ಅನೇಕ ಲಕ್ಷ ವಿದ್ಯಾರ್ಥಿಗಳು ಸ್ಕೂಲು ಕಾಲೇಜುಗಳಿಂದ ಹೊರಕ್ಕೆ ಬಂದು ದೇಶಕ್ಕಾಗಿ ಪ್ರಾಣ ಕೊಡುತ್ತಿದ್ದುದನ್ನು ನಾನು ನೋಡಲಿಲ್ಲವೆ? ನಮ್ಮ ವಿದ್ಯಾರ್ಥಿಗಳು ಅವರಿಗಿಂತ ಏನು ಕಡಿಮೆ? ಎಲ್ಲ ಬನ್ನಿ! ನೂರರ ಸಂಖ್ಯೆಯಲ್ಲಿ ಸಾವಿರದ ಸಂಖ್ಯೆಯಲ್ಲಿ ಲಕ್ಷದ ಸಂಖ್ಯೆಯಲ್ಲಿ ಕೋಟಿಯ ಸಂಖ್ಯೆಯಲ್ಲಿ ಬನ್ನಿ. ವೀರಭೂಮಿಯಾದ ಭಾರತದಲ್ಲಿ ವೀರರಿಗೆ ಏನು ಕಡಿಮೆ?" ಎಂದು ಗರ್ಜಿಸಿದರು. (ಪುಟ ೪೩೪)

ಇದು ಇನ್ನೊಂದು.

ಈ ಎರಡೂ ಕರೆಗಳು ಇಂದಿಗೆ ಅಳಿಸಿಹೋಗಿವೆ. ಅಂದಿನ ಪ್ರಖರತೆ ಅವುಗಳಲ್ಲಿ ಉಳಿದಿಲ್ಲ. ಆದರೆ ಅಂದು ಇವು ಮಾಡಿದ ಕೆಲಸ ಎಷ್ಟು ಉಜ್ವಲವಾದುದು ಎಂಬುದನ್ನು ಚರಿತ್ರೆ ಸಾರಿ ಹೇಳುತ್ತಿದೆ. ದುರಂತ ಏನೆಂದರೆ ಈ ಭಾಷಣಗಳನ್ನು ಇಂದಿಗೂ ಮಾಡುತ್ತಿದ್ದೇವೆ. ಬದುಕನ್ನು ಅರ್ಥಹೀನ ಮಾಡಿಕೊಳ್ಳುತ್ತಿದ್ದೇವೆ. ಅಂದು ಅವರು ರಚನಾತ್ಮಕ ಧ್ಯೇಯ ಸಾಧನೆಯಲ್ಲಿಯೂ ಆವೇಶಪೂರ್ಣ ಸಾಹಸಗಳಲ್ಲಿಯೂ ಅದ್ಭುತಗಳನ್ನು ಸಾಧಿಸಿದರೆಂದೆ ಹೇಳಬೇಕು. ಗೊರೂರರು ಹೇಳುತ್ತಿರುವುದೂ ಅದನ್ನೇ. ಇಂಥ ಉನ್ನತ ಮೌಲ್ಯಾವಲಂಬನದ ಬದುಕು ಯಾವುದೆ ದೇಶಕ್ಕೂ ಅಪರೂಪಕ್ಕೊಮ್ಮೆ ದೊರೆಯುತ್ತದೆ. ಮೈಯಲ್ಲಿ ಮಾಂಸ ನೆಣದ ಮಾತು ಹಾಗಿರಲಿ ಚೆಲ್ಲುವುದಕ್ಕೆ ಒಂದು ಹನಿ ರಕ್ತವೂ ಇಲ್ಲದ ಆ ಜನತೆ ತೋರಿದ ಈ ಪ್ರಚಂಡ ಧೈರ್ಯ ಬರಿಯ ಹುಂಬತನದಿಂದ ಬಂದುದಲ್ಲ, ಆವೇಶದಿಂದಲೂ ಸಾಧಿತವಾದುದಲ್ಲ. ಅತಿ ಎತ್ತರದ ಅನಾಸಕ್ತಿಯೋಗ ಹಾಗೂ ಸಹನೆಯಿಂದ ಸಾಧಿಸಿದ್ದು ಎಂಬುದನ್ನು ಗೊರೂರರ 'ಮೆರವಣಿಗೆ' ಘೋಷಿಸುತ್ತದೆ. ಇಂಥ ಕೃತಿಗಳ ಸಮಗ್ರ ಹಾಗೂ ಸುಸಂಬದ್ಧ ಅಭ್ಯಾಸವಾಗದ ಕಾರಣದಿಂದಾಗಿ ಗಾಂಧಿ ಮತ್ತು ಗಾಂಧಿ ಯುಗದ ವಿಷಯಕ್ಕೆ ಕೆಲವು ಆಧುನಿಕ ವಿಚಾರನೇತ್ತರು ಒಂದು ಬಗೆಯ ಲಘುತನದಿಂದ ಮಾತಾಡಲು ತೊಡಗಿಬಿಟ್ಟಿದ್ದಾರೆ. ಗಾಂಧಿ ತನ್ನ ಪರಿಸರದಲ್ಲಿ ಎಂಥ ಬೌದ್ಧಿಕ ಚಟುವಟಿಕೆಯನ್ನು ಮೆರೆಯಬೇಕಾಗಿತ್ತೋ ಅದನ್ನು ಮೆರೆದರು.

ಗಾಂಧಿಯುಗ ಬಯಸಿದ ಸ್ವಾತಂತ್ರ್ಯದ ಸ್ವರೂಪವೂ ಇಲ್ಲಿ ಗಮನಾರ್ಹ. ಗಾಂಧಿಯ ನಿಜವಾದ ಅನುಯಾಯಿಗಳಲ್ಲಿ ಬಹುಮಂದಿ ಅನಾಸಕ್ತಿಯನ್ನು ಚೆನ್ನಾಗಿ ಅರಗಿಸಿಕೊಂಡಿದ್ದಂತೆ ತೋರುತ್ತದೆ. ಆದ್ದರಿಂದ ಅವರಲ್ಲಿ ಯಾರೂ ಶ್ರೀಮಂತಿಕೆಯ ಕಡೆಗೆ ಕಣ್ಣೆತ್ತಿ ಕೂಡ ನೋಡಲಿಲ್ಲ. ಸಾಂಸಾರಿಕ ಇಕ್ಕಟ್ಟಿನಲ್ಲಿದ್ದ ಸುದರ್ಶನ ಕೊಂಚ ಹಣ

ಬರುವ ಉದ್ಯೋಗಪ್ರೇಮವನ್ನು ಹಿಡಿದು ಪಟ್ಟಣಕ್ಕೆ ಬಂದ ಕೆಲ ದಿನಗಳಲ್ಲಿಯೇ ಮನೋರೋಗಿಯಾಗುವ ಒಂದು ದೃಶ್ಯ ಈ ದೃಷ್ಟಿಯಿಂದ ಉಲ್ಲೇಖನೀಯವಾಗಿದೆ :

> ಅವನ ಸ್ಥಿತಿಯನ್ನು ನೋಡಿದ ವೈದ್ಯರು ಅವನಿಗೆ ರೋಗ ಹೇಳ್ಳಾಗಿಲ್ಲ. ಆದರೆ ಮನಸ್ಸಿಗೆ ಅಶಾಂತಿ. ಇಲ್ಲಿದ್ದರೆ ಅವನಿಗೆ ಖಂಡಿತ ಗುಣವಾಗುವುದಿಲ್ಲ. ಆದುದರಿಂದ ಇವನನ್ನು ಇವನ ಊರಿಗೆ ಕಳುಹಿಸಿಬಿಡಿ ಎಂದರು. ಸುದರ್ಶನನೂ ತನ್ನ ಯಜಮಾನ ವ್ಯಾಪಾರಿಗಳಿಗೆ—ಹೌದು ನನಗೆ ಇರುವುದು ಕಾಯಿಲೆ ಅಲ್ಲ. ನನಗೆ ಬೇಕಾದುದು ಔಷಧಿಯಲ್ಲ. ಇಲ್ಲಿ ಅಂಗಡಿಯಲ್ಲಿ ಸುಣ್ಣ ಹೇರುತ್ತಾ ಕುಳಿತಿರುವುದರ ಬದಲು ನನ್ನ ಹಳ್ಳಿಯಲ್ಲಿ ಹೊಲಗಳ ಬಯಲಿನಲ್ಲಿ ಹಸಿರು ಪೈರನ್ನು ನೋಡುತ್ತಾ ಕುಳಿತಿರಬೇಕು. ಈ ಮೋಟಾರುಗಳ ಧೂಳನ್ನು ಕುಡಿಯುವ ಬದಲು ನದಿಯ ಮೇಲೆ ಬೀಸಿ ಚೈತನ್ಯ ಜೀವ ಕಣಗಳನ್ನು ಹೊತ್ತುಕೊಂಡು ಬರುವ ತಂಗಾಳಿಯನ್ನು ಸೇವಿಸಬೇಕು. ಗಿರಣಿಗಳ ಈ ಕೂಗನ್ನು ಕೇಳುವ ಬದಲು ಅಲ್ಲಿಯ ಮರಗಳಲ್ಲಿ ಕುಳಿತು ಹಾಡುವ ಹಕ್ಕಿಗಳ ಗೀತವನ್ನು ಕೇಳಬೇಕು. ವಿಕಟವಾಗಿ ಕೃತಕವಾಗಿ ನಟನೆಗಾಗಿಯೇ ವರ್ತಿಸುವ ಈ ನಾಗರೀಕತೆಯ ಅಹಾಥಭೂತಿಗಳನ್ನು ಮರೆತು, ಮನುಷ್ಯನನ್ನು ನಿಜವಾದ ಮನುಷ್ಯತ್ವದಲ್ಲಿ ಅವನು ಇರುವಂತೆ ಸ್ವಾಭಾವಿಕವಾಗಿ ನೋಡಬೇಕು. ಈ ಪಟ್ಟಣದಿಂದ ಆ ಹಳ್ಳಿಗೆ ಹೋಗಬೇಕು. ಈ ನರಕದಿಂದ ಆ ಸ್ವರ್ಗಕ್ಕೆ ಹೋಗಬೇಕು. ಈ ಸಂಕುಚಿತದಿಂದ ಆ ವಿಸ್ತಾರಕ್ಕೆ ಹೋಗಬೇಕು. ಈ ಪಾರತಂತ್ರದಿಂದ ಆ ಸ್ವತಂತ್ರಕ್ಕೆ ಹೋಗಬೇಕು. ಹೌದು ಸ್ವತಂತ್ರ! (ಪುಟ ೫೫೭)

ಭಾರತೀಯ ಜೀವನದ ಒಂದು ಪ್ರಮುಖವಾದ ಅಂಶ ಈ ಉದಾಹರಣೆಯಿಂದ ಗೊತ್ತಾಗುತ್ತದೆ. ಒಂದು ಬಗೆಯ ಅಕ್ರಮದ ವಾತಾವರಣ ನಮ್ಮ ಬದುಕಿನಲ್ಲಿ ತುಂಬಿಕೊಂಡಿರುವಂತೆ ನೋಡಿಕೊಳ್ಳುತ್ತಿರುವುದೇ ಆ ಅಂಶ. ಒಂದು ಬಗೆಯ ಪರಂಪರೆ ಅದು. ನಮಗೆ ಬೇಕಾಗಿದ್ದ ಸ್ವಾತಂತ್ರ್ಯದ ಸ್ವರೂಪವೂ ಇದೇಯೆ. ಆದರೆ ಸಿಕ್ಕಿದ್ದು ಮಾತ್ರ ಬಯಸಿದ್ದಕ್ಕೆ ವಿರುದ್ಧ ಎಂಬುದನ್ನು ಗೊರೂರರು ಅಲ್ಲಲ್ಲಿ ಪ್ರಸ್ತಾಪಿಸುತ್ತಾರೆ. ಪ್ರಾಣಿ ಸಹಜವಾದ ಹಕ್ಕುಗಳ ಜತೆಗೆ ಮಾನವ ಸಹಜವಾದ ಹಕ್ಕುಗಳನ್ನೂ ಅವನು ಯಥೇಚ್ಛವಾಗಿ ಅನುಭವಿಸಬೇಕು. ಅಲ್ಲಿ ಅವನಿಗೆ ಬಲವಂತಬೇಡ ಎಂಬುದು ಸರಳವಾದರೂ ಕಾರ್ಯರೂಪದಲ್ಲಿ ಸಾಧ್ಯವಾಗುವುದು ಮಾತ್ರ ದುಸ್ತರದ ಮಾತು. ಇಂದು ಪಾರತಂತ್ರ್ಯದಿಂದ ಪಾರಾದರೂ ಅದು ಸಾಮಯಿಕ ಹೋರಾಟವಾದರೂ ಉಳಿದುದನ್ನು ಸಾಧಿಸುವಲ್ಲಿ ಅವನು ನಿರಂತರ ಹೋರಾಟದಲ್ಲಿ ಉಳಿಯಬೇಕಾಗುತ್ತದೆ.

ಆಂಗ್ಲರ ಹಿಡಿತದಿಂದ ಬಿಡಿಸಿಕೊಳ್ಳಲು ಭಾರತೀಯರು ಕೊಟ್ಟ ಹೋರಾಟ ಧೀರವಾದುದು ಎಂದು ಹೇಳಿಬಿಟ್ಟರೆ ಸಾಲದು. ಅದರ ಸ್ವರೂಪದ ಅನುಭವವನ್ನು ನಾವು—ಅದರಲ್ಲಿಯೂ ಮಾತೆತ್ತಿದರೆ ಅರ್ಥವಿಲ್ಲದೆ ಚಳುವಳಿಯಲ್ಲಿ ತೊಡಗಿ ತಮ್ಮ [illegible]

ತಾವೆ ಕೊಡಲಿ ಹಾಕಿಕೊಳ್ಳುತ್ತಿರುವ ಯುವಕರು--ಪಡೆದಿರಬೇಕಾದ ಅಗತ್ಯವಿದೆ. ಅಂಥ ಅನುಭವಗಳ ನಗ್ನ ಚಿತ್ರವನ್ನು ಗೊರೂರರ 'ಮೆರೆವಣಿಗೆ' ಅನನ್ಯವಾಗಿ ಸೆರೆ ಹಿಡಿದುಕೊಡುತ್ತದೆ. ಅದನ್ನೆಲ್ಲ ವಿವರವಾಗಿ ವಿವರಿಸುವ ಅವಕಾಶ ಇಲ್ಲಿಲ್ಲ. ಒಂದು ಉದಾಹರಣೆಯನ್ನು ಮಾತ್ರ ಕೊಡಬಹುದು. ಇದು ಒಂದು ಊರನ್ನು ಧ್ವಂಸ ಮಾಡುತ್ತಿರುವ ಚಿತ್ರ:

ಅನಂತರ ಸೇಡು ತೀರಿಸಿಕೊಳ್ಳುವುದು ಪ್ರಾರಂಭವಾಯಿತು. ಪಿಶಾಚಿ ನರ್ತನ ನರಮೇಧ ನರಕ ಲೀಲೆ ಅಮಾನುಷ ದೌರ್ಜನ್ಯ ದರ್ಪಸಾಮ್ರಾಜ್ಯ. ಕತೆಗಳಲ್ಲಿ ಶಾಕಿಣಿ ಡಾಕಿಣಿಯರು ನರರಕ್ತಪಾನಮಾಡಿಯೂ ತೃಪ್ತರಾಗಲಿಲ್ಲವೆಂದು ಕೇಳಿದ್ದೇವೆ. ಹೊಸೂರಿನಲ್ಲಿಯೂ ಹಾಗೆಯೇ ಪ್ರಾರಂಭವಾಯಿತು. ಸರ್ಕಾರ ತನ್ನ ಜವಾಬ್ದಾರಿಯನ್ನು ಮಿಲಿಟರಿಗೆ ವಹಿಸಿತು. ಅವರು ಶತ್ರುಗಳನ್ನು ಸುಟ್ಟುಹಾಕುವಂತೆ ಆ ಹಳ್ಳಿಯ ಬಡಪಾಯಿಗಳನ್ನು ಚಿತ್ರಹಿಂಸೆಗೊಳಿಸಿದರು. ಕೋಳಿ ಕುರಿ ಆಡು ಹಂದಿ ದನಗಳನ್ನು ಸುಲಿದು ತಿಂದರು....ಸ್ತ್ರೀಯರ ಮಾನಭಂಗ ಸಹ ಮಾಡಲ್ಪಟ್ಟಿತೆಂದು ಹೇಳೋಣವಾಯಿತು. ಊರು ಪೂರ್ಣವಾಗಿ ನಿರ್ನಾಮವಾಯಿತು.

ಅನಂತರ ಪೋಲೀಸರ ವಿಕಟ ನರ್ತನ ಪ್ರಾರಂಭವಾಯಿತು. ಒಂದು ಸ್ಪೆಷಲ್ ಕೋರ್ಟನ್ನು ಸ್ಥಾಪಿಸಿದರು....ಅಪರಾಧಿಗಳಿಗೆ ಸಾಕ್ಷಿ ಮುಂತಾದುವನ್ನು ಒದಗಿಸಿಕೊಳ್ಳುವ ಸೌಕರ್ಯಗಳು ಕೊಡಲ್ಪಡಲಿಲ್ಲ. ತಮ್ಮ ಪರವಾಗಿ ಸಾಕ್ಷಿ ಹೇಳಬೇಕಾದವರಿಗೆ ಪೋಲೀಸಿನವರು ಚೆನ್ನಾಗಿ ತರಪೇತು ಮಾಡುತ್ತಿದ್ದರು....ಪೋಲೀಸಿನವರು ಆ ಕಾಲದಲ್ಲಿ ಸಾಕ್ಷಿಗಳನ್ನೂ ಅಪರಾಧಿಗಳನ್ನೂ ಮನಸ್ಸಿಗೆ ತೃಪ್ತಿಯಾಗುವವರೆಗೆ ಬಡಿಯುತ್ತಿದ್ದರು. ಯಾರಾದರೂ ಸಾಕ್ಷಿ, ಸತ್ಯದ ಮೇಲೆ ದೃಷ್ಟಿಯಿಟ್ಟು ಇದ್ದದ್ದನ್ನು ಇದ್ದಂತೆ ಹೇಳಿದರೆ ಅವನಿಗೆ ಬಂತು! ಲಾಕಪ್ಪಿಗೆ ಬಂದಕೂಡಲೆ ಪೋಲೀಸಿನವರು ಅವನನ್ನು ಚೆನ್ನಾಗಿ ಬೂಟ್ಸಿನ ಕಾಲಿನಲ್ಲಿ ಒದ್ದು "ಕೋರ್ಟು ಅನ್ನೋದನ್ನ ಮರೆತು ಇದ್ದದ್ದನ್ನು ಇದ್ದಂತೆ ಹೇಳೋಕೆ ಹೋಗ್ತೀಯ?" ಎಂದು ಬಡಿಯುತ್ತಿದ್ದರು....ಅಪರಾಧಿಗಳಿಗೆ ಒಂದು ದಿನವೂ ದಿನಕ್ಕೆ 3–4 ಸಾರಿ ಲಾಠಿ ಏಟು ತಪ್ಪುತ್ತಿರಲಿಲ್ಲ. ಮಧ್ಯಾಹ್ನದ ಊಟಮಾಡುವಾಗ, ಸಾಯಂಕಾಲದ ಊಟಮಾಡುವಾಗ ಪೋಲೀಸಿನವರು ತಪ್ಪದೆ ಅಪರಾಧಿಗೆ ದೊಣ್ಣೆಯಲ್ಲಿ ಬಿಡುತ್ತಿದ್ದರು. (ಪುಟ ೬೮೨–೮೩)

ಕೈಗೆ ಸಿಕ್ಕಿದ ಒಂದು ಉದಾಹರಣೆಯನ್ನು ಇಲ್ಲಿ ಕೊಟ್ಟಿದ್ದೇನೆ. ಇದಕ್ಕಿಂತ ಭಯಂಕರ ಸಂದರ್ಭಗಳು ಬಹು ಗಂಭೀರವಾಗಿ ಚಿತ್ರಿತವಾಗಿವೆ. ನಮ್ಮ ಸ್ವಾತಂತ್ರ್ಯ ಎಂಥ ಹೋರಾಟದ ಫಲ ಎಂಬುದು ಸ್ವಲ್ಪಮಟ್ಟಿಗೆ ಮೂಡಿದರೂ ಇಲ್ಲಿಗೆ ಸಾಕು. ನಾನು ಮುಂಚೆಯೆ ಹೇಳಿರುವಂತೆ ಅಂದಿನ ನಮ್ಮ ರಾಜಕೀಯ ಖೈದಿಗಳು ಅನುಭವಿಸಿದ ಕಷ್ಟನಷ್ಟಗಳ ಕಲ್ಪನೆಯನ್ನು ತಂದುಕೊಡುವ ಈ ಕೃತಿಯನ್ನು ಇಂದು ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ನಮ್ಮ ಮುಖಂಡರೂ ವಿದ್ಯಾರ್ಥಿಗಳೂ ಪಠನ ಮಾಡುವುದ

ದಿಂದ ಪ್ರಯೋಜನವಿದೆ. ಇಂಥ ಭಾಗಗಳು ನಮ್ಮ ಪಠ್ಯಕ್ರಮದಲ್ಲಿ ಸೇರದೆ ಹೋಗುತ್ತಿರುವುದು ದುರದೃಷ್ಟಕರ. ದೇಶಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತಿರುವ ನಮ್ಮ ಯುವ ಜನಾಂಗಕ್ಕೆ ಸ್ವಾತಂತ್ರ್ಯಸಂಗ್ರಾಮದ ಕಲ್ಪನೆ ಕೂಡ ಬಾರದಂತೆ ನೋಡಿಕೊಂಡಿರುವುದು ಇಂದಿನ ಅನೇಕ ಅನರ್ಥಗಳಿಗೆ ಕಾರಣವಾಗುತ್ತಿದೆ. ಒಬ್ಬ ವಿದ್ಯಾರ್ಥಿ ತನ್ನ ದೇಶದ ಚರಿತ್ರೆಯೆ ಗೊತ್ತಿಲ್ಲದೆ ಒಬ್ಬ ದೊಡ್ಡ ಬುದ್ಧಿವಂತನೆನ್ನಿಸಿಕೊಳ್ಳುವುದಕ್ಕಿಂತ ದುರಂತ ಇನ್ನೊಂದಿದೆಯೆ ?

೫

ಕೆಲವು ಪ್ರಮುಖ ವಿಚಾರಗಳ ವಿಷಯದಲ್ಲಿ ಗೊರೂರರ ಅಭಿಪ್ರಾಯವನ್ನು ಸಂಗ್ರಹಿಸಿಕೊಳ್ಳುವುದರ ಮೂಲಕ ಈ ಪ್ರಬಂಧವನ್ನು ಮುಗಿಸಬಹುದೆಂದು ತೋರುತ್ತದೆ. ಈ ಮುಂಚೆಯೆ ಒಂದು ಕಡೆ ಹೇಳಿರುವಂತೆ ಗೊರೂರರು ಸಂಪ್ರದಾಯವಾದಿಗಳಾದರೂ ಅಂಧಾನುಕರಣೆ ಅವರಲ್ಲಿ ಯಾವ ಮಟ್ಟದಲ್ಲಿಯೂ ಕಂಡುಬರುವುದಿಲ್ಲ. ವಾಸ್ತವಗಳನ್ನೂ ಮತಧರ್ಮಗಳನ್ನೂ ಎದುರುಬದುರಾಗಿಸಿ ಅನುಭವಗಳನ್ನು ಶೋಧಿಸುವ ಕಲೆಗಾರಿಕೆಯನ್ನು ಗೊರೂರರು ಆಗಲೆ ಕಂಡುಕೊಂಡಿದ್ದರು. ಕ್ರಿಸ್ತಪಾದ್ರಿಗಳ ಮತಪ್ರಚಾರಕ್ಕೆ ಅಂದಿನ ಜನತೆ ಹೇಗೆ ಬಲಿಯಾಗುತ್ತಿತ್ತು ಎಂಬುದನ್ನೂ, ಹಿಂದೂಧರ್ಮದಲ್ಲಿ ಬದುಕು ಹೇಗೆ ಸ್ವಾರ್ಥಸಾಧಕರ ಹಿಡಿತಕ್ಕೆ ಸಿಕ್ಕಿ ಹೇಗೆ ಜಡವಾಗಿತ್ತು, ವಿಚಾರಹೀನವಾಗಿತ್ತು ಎಂಬುದನ್ನೂ ತುಂಬ ಚಿತ್ರವಾಗಿ ಒಂದು ರೋಮಾಂಚಕಾರಿ ಕತೆಯ—ಇದರ ಮೇಲೆ ಶರತ್‌ಚಂದ್ರರ ಪ್ರಭಾವವಿರುವಂತಿದೆ—ಮೂಲಕ ಚರ್ಚಿಸುತ್ತಾರೆ :

> ಕಾಲಾನುಕಾಲಕ್ಕೆ ಧರ್ಮವನ್ನೂ ಮತಪದ್ಧತಿಗಳನ್ನೂ ಬದಲಾಯಿಸಿ ಸಮಾಜವನ್ನು ಆಧುನಿಕವಾಗಿ ಮಾಡುತ್ತಿದ್ದ ಆ ಪೂರ್ವದ ಋಷಿಗಳೆಲ್ಲಿ? ಈಗಿನ ಈ ಮತಾಧಿಪತಿಗಳಾದರೂ ಏನು ಮಾಡುತಿದ್ದಾರೆ; ಸಂಸಾರಿಕರಂತೆ ತಾವೂ ಅರಮನೆಗಳ ಮುಂದೆಯೂ ಅಧಿಕಾರಿಗಳ ಮುಂದೆಯೂ ಬಾಲ ಬಡಿಯುತ್ತಾ, ಶಿಷ್ಯರೆನ್ನಿಸಿಕೊಳ್ಳುವ ಕುರಿಗಳ ತಲೆ ಒಡೆದು ಒಂದೊಂದು ಆಳು ಎತ್ತರದ ಕೊಳಗದಪ್ಪಲೆಗಳಲ್ಲಿ ಪಾಯಸ ಜಿಲೇಬಿ ಮಾಡಿಸಿ ಮೋಟಾರಿನಲ್ಲಿ ತಿರುಗುತ್ತಾ ತಮ್ಮ ಮೆರವಣಿಗೆಗಳನ್ನು ಮಾಡಿಸಿಕೊಳ್ಳುವ ಈ ಮಠದ ಪಾಳೆಯಗಾರರು, ಆಧುನಿಕ ಜಗತ್ತಿನ ಬದಲಾಯಿಸಿದ ಪರಿಸ್ಥಿತಿಗಳು ಎದುರಿಗೆ ಎದ್ದು ನಿಂತಾಗ ಯಾವ ಹಳೆಯ ಓಲೆಗರಿಯ ಧೂಳನ್ನು ಕೊಡವುತಿದ್ದಾರೆ ?.... ಈ ಸಮಾಜದ ಅಸ್ತಿತ್ವ ಉಳಿಯಬೇಕಾದರೆ ನಾವು ಅವಲಂಬಿಸಬೇಕಾದ ಆಧುನಿಕ ಮಾರ್ಗಗಳಾವುವು? ತ್ಯಜಿಸಬೇಕಾದ ಪ್ರಾಚೀನ ರೋಗಗಳಾವುವು ? ಧರ್ಮವನ್ನು ವಿಜ್ಞಾನವನ್ನೂ ಬೆರಸುವುದು ಹೇಗೆ ? ಇವುಗಳನ್ನೆಲ್ಲ ಈ ಗುರುಗಳು ಎನ್ನಿಸಿಕೊಳ್ಳುವವರು ತಮ್ಮ ಮಠಗಳನ್ನೆ ಪ್ರಯೋಗಕ್ಷೇತ್ರಗಳನ್ನಾಗಿ ಮಾಡಿಕೊಂಡು ತೋರಿಸಬೇಡವೆ? ಅದು ಬಿಟ್ಟು ಏನು ಬರಲಿ

ಏನು ನಡೆಯಲಿ ? ಯಾವ ಪ್ರಶ್ನೆ ಏಳಲಿ ? ಎಲ್ಲದಕ್ಕೂ ಸಾವಿರ ವರುಷದ ಕೆಳಗೆ ಹೇಳಿದ ಬುಕ್ಕಿನಲ್ಲಿ ಏನಿದೆ. ಅದಕ್ಕೆ ಸರಿಹೋಗುತ್ತದೆಯೋ, ಅದಕ್ಕೆ ಸರಿ ಹೋಗದಿದ್ದರೆ ಅದಕ್ಕೆ ಜಗತ್ತಿನಲ್ಲಿ ಜಾಗವೇ ಇಲ್ಲ. (ಪುಟ ೨೮೧–೨೮೨)

ಆಧುನಿಕರು ತುಂಬ ಇಷ್ಟಪಡುವ ಈ ಆಲೋಚನೆ ಸ್ವಾತಂತ್ರ್ಯಪೂರ್ವದಷ್ಟು ಹಳೆಯದು.

ಶಿಕ್ಷಣ ಮಾಧ್ಯಮದ ವಿಷಯಕ್ಕೂ ಅವರ ಅಭಿಪ್ರಾಯ ಗಮನಾರ್ಹವಾಗಿದೆ :

ನಮ್ಮ ದೇಶದಲ್ಲಿ ಲೋವರ್ ಸೆಕಂಡರಿಯಂತಹ ಸಣ್ಣ 8–10 ವಯಸ್ಸಿನ ಬಾಲಕರ ಪರೀಕ್ಷೆಗಳಲ್ಲಿಯೂ ಇಂದಿಗೂ ಇಂಗ್ಲೀಷಿಗೆ ಮೊದಲನೆಯ ಸ್ಥಾನ. ಇಂಗ್ಲೀಷು ಪ್ರಥಮ ಭಾಷೆ, ಕನ್ನಡ ದ್ವಿತೀಯ ಭಾಷೆ. ಆ ಪರಭಾಷೆಯಾದ ಪ್ರಥಮ ಭಾಷೆಯಲ್ಲಿ ತೇರ್ಗಡೆಯಾಗುವುದಕ್ಕೆ ನೂರಕ್ಕೆ 40 ನಂಬರು ಬರಬೇಕು. ಆದರೆ ಕನ್ನಡದಲ್ಲಿ ನೂರಕ್ಕೆ 35 ನಂಬರು ಬಂದರೆ ಸಾಕು. ಈ ಅಸ್ವಾಭಾವಿಕ ಪರಿಸ್ಥಿತಿ ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲ. (ಪುಟ ೨೦೪)

ಮಾಳವೀಯ, ಮಹಾತ್ಮಾ ಗಾಂಧಿ ಮುಂತಾದ 40–50 ವರುಷ ಇಂಗ್ಲೀಷ್ ಉಪಯೋಗಿಸಿದವರೆಲ್ಲ ಇಂದಿಗೂ ಕೂಡ ನಾವು ಹೇಳುವ ಅರ್ಥಕ್ಕೂ ಇಂಗ್ಲೀಷಿನಲ್ಲಿ ಇರುವ ಪದಕ್ಕೂ ಹೆಚ್ಚು ಕಡಮೆ ಆಗುತ್ತದೆ ಎನ್ನುವಾಗ ಆ ಬಡಪಾಯಿ ಉಪಾಧ್ಯಾಯರು ಅವರಿಗಿಂತ ಬಡಪಾಯಿಗಳಾದ 10–12 ವರುಷದ ಹುಡುಗರಿಗೆ ಇಂಗ್ಲೀಷಿನಲ್ಲಿ ತಿಳಿಯುವಂತೆ ಪಾಠ ಹೇಳುತ್ತಿದ್ದರೆಂಬ ಮಾತು ಕೇವಲ ಅಸಂಭವ. (ಪುಟ ೨೦೨–೨೦೩)

ವಿದ್ಯೆಯೆಂದರೇನು ? ಮತ್ತು ಅದರಿಂದಾಗುವ ಪ್ರಯೋಜನ :

ವಿದ್ಯೆ ಎಂಬುದು ಜೀವಕ್ಕೆ ಉಸಿರಿನಂತೆ; ಅದು ಕತ್ತಲೆಯಲ್ಲಿ ಹೋಗುವವನಿಗೆ ಬೇಕಾದ ಬೆಳಕಿನಂತೆ. ಅದು ಪ್ರೇಯಸಿಯ ಪ್ರೇಮದಂತೆ. ಅದಕ್ಕೆ ಅಂಗಡಿಯ ಬೀದಿಯಲ್ಲಿ ಜನ ಸರಿಯಾಗಿ ಅಳತೆ ತೂಕ ಮಾಡಿ ಬೆಲೆ ಕೊಡಲಿಲ್ಲ ಅಂತ ಅದನ್ನು ನಾವು ಉದಾಸೀನ ಮಾಡುವುದಕ್ಕಾಗುವುದೆ ? (ಪುಟ ೩೨೩)

* * *

ಗೊರೂರರ ಹಾಸ್ಯಪ್ರವೃತ್ತಿ ಇಲ್ಲಿ ಸ್ವಚ್ಛಂದವಾಗಿ ಅಭಿವ್ಯಕ್ತಿಯನ್ನು ಪಡೆದಿದೆ. ಇವರ ಬರವಣಿಗೆಯ ಹಿಂದೆ ಬದುಕಿನ-ಗಂಭೀರ ವಿವೇಚನೆಯಿದ್ದು ಕರುಳಿರಿಯುವಂಥ ನೋವಿನ ಅನುಭವಗಳಿದ್ದರೂ ಅದನ್ನು ಸಹಿಸಿಕೊಳ್ಳದೆ ಮನುಷ್ಯನಿಗೆ ಮುಕ್ತಿಯಿಲ್ಲ ಎಂಬುದನ್ನು ಬಹು ಮಾರ್ಮಿಕವಾಗಿ ಧ್ವನಿಸುತ್ತಾರೆ. ಆ ದಿಕ್ಕಿನಲ್ಲಿ ಹಾಸ್ಯ ಹೆಚ್ಚು ಸಹಕಾರಿಯಾಗಿದೆ. ಇದು ಕತೆಯಲ್ಲ, ಕಾದಂಬರಿಯಲ್ಲ, ಪ್ರಬಂಧವೂ ಅಲ್ಲ, ಸಾಚಾ ಅನುಭವಗಳ ಮೆರೆವಣಿಗೆ.

'ಹೇಮಾವತಿ'

ಪ. ವಿ. ಚಂದ್ರಶೇಖರ

ಹಳ್ಳಿಯನ್ನು ತೊರೆಯದೆ ದಿಳ್ಳಿಯ ಪ್ರಭಾವವನ್ನು ಹಳ್ಳಿಗಳಲ್ಲಿ ಬೀರುವ ಪ್ರಯತ್ನ ಮಾಡಿದ ವಿದ್ಯಾವಂತರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಒಬ್ಬರು. ಅವರ ಹೊಸ ಭಾವನೆಗಳ ಧ್ವನಿ ಕೊಂಬಿನ ಕೂಗಿನಂತೆ ನಿಶ್ಶಬ್ದವಾದ ಕತ್ತಲೆಯಲ್ಲಿ ಮಲಗಿದ್ದ ಹಳ್ಳಿಗಾಡಿನ ಜನರನ್ನು ಎಚ್ಚರಿಸಿತು. ಅಲ್ಲಿನ ಸತ್ವಶಾಲಿಗಳನ್ನು ಸುಸಂಸ್ಕೃತರನ್ನು ವಿನೋದಪರರನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಯಮಾಡಿಕೊಟ್ಟಿತು. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಗೊರೂರಿನದೊಂದು ಪುಟ. ಅದು ಗೊರೂರರ ಕೃತಿಗಳಲ್ಲಿ ಮಲ್ಲಿಗೆಹಳ್ಳಿ, ಹೊಸ ಅಗ್ರಹಾರ, ನಮ್ಮೂರು—ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಮೈತಾಳುತ್ತದೆ.

ಹೇಮಾವತಿ ನದಿಯ ತೀರದಲ್ಲಿ ವಾಸಮಾಡುವ ಇವರಲ್ಲಿ ರಸಿಕರು ಬೇಕೆ, ತುಂಟರು ಬೇಕೆ, ಅಂಧಸಂಪ್ರದಾಯವಾದಿಗಳು ಬೇಕೆ, ಉದಾರಚರಿತರು ಬೇಕೆ? ಒಟ್ಟಿನಲ್ಲಿ ಇವರು ಯಾವ ವಿಚಾರದಲ್ಲಿಯೂ ಉತ್ಸಾಹಶಾಲಿಗಳಾದ ಜನ. ಇವರಲ್ಲಿ ಆಶ್ಚರ್ಯಕರವಾದ ಸತ್ವ ಪುಟಿಯುತ್ತಿರುವುದು. ಒಮ್ಮೆ ಇವರನ್ನು ಭೇಟಿ ಮಾಡಿದರೆ ಮತ್ತೆ ಅವರನ್ನು ಮರೆಯುವಂತೆಯೇ ಇಲ್ಲ. ಹೀಗಾಗಿ ಗೊರೂರರ ಕೃತಿಗಳಿಗೆ ಹೇಮಾವತಿ ಹೊಳೆಯೂ ಅವಳ ದಡದಲ್ಲಿನ ಬದುಕೂ ಆಧಾರ ಮತ್ತು ಪ್ರೇರಕ. ಆದರೆ ಈ ಕಾದಂಬರಿಯಲ್ಲಿ ಹೇಮಾವತಿ ಎಂಬುವಳು ಒಬ್ಬ ಹುಡುಗಿ. ಅವಳೇ ಈ ಕಾದಂಬರಿಯ ಶ್ರುತಿ. ಅವಳ ಮೂಲಕ ಕಾದಂಬರಿಕಾರರು ಜೀವನದ ಹಾಡನ್ನು ರಸಮಯವಾಗಿ ಹಾಡಿದ್ದಾರೆ.

ಹೇಮಾವತಿ ಕಾವೇರಿ ಅಗ್ರಹಾರದ ರಾಮಣ್ಣ ಪೆರುಮಾಳರ ಮಗಳು. ತಾಯಿಯಿಲ್ಲದ ತಬ್ಬಲಿ. ಮಗುವಾದಾಗಿನಿಂದಲೇ ಅವಳ ಕಷ್ಟದ ಕಥೆ ಪ್ರಾರಂಭವಾಗಿ

ಮದುವೆಯಾಗಿ ಕೆಲವು ವರ್ಷಗಳವರೆಗೂ ಮುಂದುವರೆಯುತ್ತದೆ. ಕಷ್ಟ ಕೊನೆಗೊಂಡಾಗ ಕಾದಂಬರಿಯೂ ಮುಕ್ತಾಯವಾಗುತ್ತದೆ. ಈ ಎಳೆಗೆ ಹಿನ್ನೆಲೆಯಾಗಿ ಚಿತ್ರಿತವಾಗಿದೆ ಬಣ್ಣ ಬಣ್ಣದ ಹಳ್ಳಿಯ ಸಮಾಜ. ಅಲ್ಲಿ ಬೀಸಿದ ಸುಧಾರಣೆಯ ಗಾಳಿ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೊದಲು–ಗೋಖಲೆ, ತಿಲಕ್, ಗಾಂಧೀಜಿ ಮುಂತಾದ ಮಹನೀಯರ ಶಾಂತಿ ಸಮರದ ಕಾರ್ಯಕ್ಕೆ ಮೊದಲು—ನಮ್ಮ ಜನ ರಾಜಕೀಯ ಗುಲಾಮತನದ ಜೊತೆಗೆ ಹಲವು ಬಗೆಯ ಸಂಪ್ರದಾಯ ಕಂದಾಚಾರಗಳಿಗೆ ದಾಸರಾಗಿದ್ದರು. ಈಚೆಗೆ ರಾಜಕೀಯ ದಾಸ್ಯ ಹರಿಯಿತಾದರೂ ಉಳಿದವು ಹರಿಯತೊಡಗಿವೆ ಎನ್ನಬಹುದು ಅಥವಾ ಅವು ಕಂದಾಚಾರಗಳು, ಅಂಧಸಂಪ್ರದಾಯಗಳು ಎಂಬ ತಿಳುವಳಿಕೆ ಜನರಲ್ಲಿ ಮೂಡತೊಡಗಿದೆ ಎನ್ನಬಹುದು. ವಿದ್ಯಾಭ್ಯಾಸದ ನಡುವೆ ಹೊಸ ವಿಚಾರದ ಕಿಡಿಗಳನ್ನು ನುಂಗಿದ ನಮ್ಮ ಯುವಕರು ತಮ್ಮ ಊರುಗಳಲ್ಲಿ ತಂದ ಹೊಸ ವಾತಾವರಣವನ್ನು ಸೃಷ್ಟಿಸುವುದು ಈ ಕಾದಂಬರಿಯ ಮುಖ್ಯ ಗುರಿ.

ಪೆರುಮಾಳರದು ಸಂಗೀತಕ್ಕೆ ಪ್ರಸಿದ್ಧವಾದ ಮನೆತನ. ಅವರ ತಾತಂದಿರಾದ ಶ್ರೀನಿವಾಸ ಪೆರುಮಾಳರು ಸಂಗೀತ ಕಲೆಯನ್ನು ಚೆನ್ನಾಗಿ ಸಾಧಿಸಿಕೊಂಡವರು. ರೇಗಿ ಹುಚ್ಚೆದ್ದ ಜನರನ್ನೂ ಮರುಳು ಮಾಡುವಂತಹುದು ಅವರ ಗಾಯನ. ಗೊರೂರರು ಇಲ್ಲಿ ರಾಗತಾನಗಳ ವಿವರ, ಸಂಗೀತ ಶಾಸ್ತ್ರದಲ್ಲಿ ಅವರ ಸಾಧನೆ ಮುಂತಾದ ಜಟಿಲ ಪ್ರಪಂಚವನ್ನು ಬಣ್ಣಿಸ ಹೋಗದೆ ಕೇಳಿದವರನ್ನು ಮುಗ್ಧರನ್ನಾಗಿಸುವ ದಿವ್ಯವಾದ ಪ್ರಭಾವ ಅವರ ಹಾಡಿಕೆಯಲ್ಲಿತ್ತು ಎಂಬ ವಿಚಾರವನ್ನು ಮಾತ್ರ ಬೆಳಸಿದ್ದಾರೆ. ಇದಕ್ಕೆ ಕಾರಣ ಅವರ ದನಿ ಮತ್ತು ಸಂಗೀತದಲ್ಲಿರುವ ಪರಿಶ್ರಮ ಮಾತ್ರ ಅಲ್ಲ; ಅವರ ಮನೋಧರ್ಮವೇ ಅಂತಹದು. ಒಂದು ಎಕರೆಯಷ್ಟೇ ಇರುವ ತೋಟವನ್ನು ಸ್ವಂತ ದುಡಿಮೆಯಿಂದ ನಂದನವನವನ್ನಾಗಿ ಮಾಡಿಕೊಂಡಿದ್ದಕ್ಕೆ ಅವರ ಸ್ವಂತ ಪರಿಶ್ರಮ ಮಾತ್ರವಲ್ಲ ಆ ಭೂಮಿಯ ಮೇಲಣ ಪ್ರೀತಿಯೂ ಅಕ್ಕರೆಯೂ ಕಾರಣ. ಹಾಡಿಕೊಂಡೇ ಗಿಡಗಳಿಗೆ ನೀರು ಹಾಕುವುದು, ಪಾತಿ ಮಾಡುವುದು, ಹಗಲಿರುಳೂ ಅಲ್ಲೇ ಇರುತ್ತ, ಗಿಡಮರಗಳ ಪರಿಚರ್ಯೆ ನಡೆಸುತ್ತ ತಾಯಿ ಮಗುವನ್ನು ಮಗು ತಾಯಿಯನ್ನು ಸಾಕುವಂತೆ ಅವರ ಬೇಸಾಯವಿತ್ತು ಎನ್ನುವರು. ಪರಿಶುದ್ಧವಾದ ಮನಸ್ಸಿನಿಂದ ತೃಪ್ತರಾಗಿ ಲಾಭ ಲೋಭ ಕೀರ್ತಿ ಕಾಮನೆಗಳಿಲ್ಲದೆ ದೈವಭಕ್ತರಾಗಿ ಅತ್ಯುತ್ತಮವಾದ ಗೃಹಸ್ಥ ಜೀವನ ನಡೆಸುತ್ತಿದ್ದರು. ಆಕಸ್ಮಿಕವಾಗಿ ರಾಜಪೂಜೆ ದೊರೆತರೂ ನಾನು ಬೇಸಾಯಗಾರ, ಹಳ್ಳಿಯಲ್ಲೇ ಇರಬೇಕು, ಅದರಿಂದ ಅರಮನೆಯ ಸಂಬಳವೂ ಪಟ್ಟಣ ವಾಸವೂ ಎಲ್ಲಿ ಸಾಧ್ಯ ಎಂದುಕೊಂಡು ವಿನಯದಿಂದ ತಪ್ಪಿಸಿಕೊಂಡರು.

ಇವರಿಗೆ ವ್ಯತಿರಿಕ್ತವಾದುದು ಸಾಹುಕಾರ ಶಠಾರಿಯವರ ಬದುಕು. ಊರಿನ ಒಳ್ಳೆಯ ಜಮೀನೆಲ್ಲ ಇವರಿಗೆ ಬೇಕು. ಉಳುವವರು ಇಲ್ಲದೆ ಪಾಳು ಬಿದ್ದರೂ ಸಾಹುಕಾರಿಕೆಯ ಪ್ರದರ್ಶನಕ್ಕೆ ಅದು ಬೇಕು. ಹದಿನಾರು ಎಕರೆ ತೋಟವಿದ್ದರೂ ಆಳು

ಕಾಳಿಂಗನು ಭಯದಿಂದ ಗೇಯುತ್ತ ಇದ್ದರೂ ಶ್ರೀನಿವಾಸ ಪೆರುಮಾಳರ ಒಂದು ಎಕರೆ ತೋಟದಲ್ಲಿರುವ ಫಲಪುಷ್ಪ ಸಂಪತ್ತು ಅಲ್ಲಿ ಇಲ್ಲ. ಅದರಿಂದ ಅದನ್ನು ಕೊಂಡು ತಾನಿನ್ನೂ ಕೊಬ್ಬಬೇಕೆಂಬ ಆಸೆ. ಪೆರುಮಾಳರಿಗಿರುವ ಧಾರಾಳವನ್ನೂ, ಸ್ವಂತ ದುಡಿಮೆಯಿಂದ ಪರಿಶುದ್ಧ ಜೀವನದಿಂದ ಅವರು ಪಡೆದುಕೊಂಡಿರುವ ತೇಜಸ್ಸನ್ನೂ ಶಠಾರಿಯವರು ಕಂಡು ಕರುಬುತ್ತಾರೆ. ಅದರಿಂದ ಪೆರುಮಾಳರನ್ನು ಕೆಣಕಿ, ಅವರ ಪ್ರಭಾವಕ್ಕೆ ಬೆಚ್ಚಿ ತಮ್ಮ ಸಿರಿವಂತಿಕೆಯ ಸತ್ವ ಪರೀಕ್ಷೆಗೆ ತಾವೇ ಒಳಗಾಗುತ್ತಾರೆ. ಇದ್ದ ಹದಿನಾರು ಎಕರೆ ತೋಟವೂ ಮಹಾರಾಜರಿಗೆ ಬಿಕರಿಯಾಗಿ ಅಲ್ಲಿಂದ ಪೆರುಮಾಳರ ಮನೆತನಕ್ಕೆ ಸಂದುಹೋಗಿ ಮನಸ್ತಾಪ ಬೆಳೆಯುತ್ತದೆ. ಇಲ್ಲಿಂದ ಮುಂದಕ್ಕೆ ಸಂಗೀತ ಮಿಂಚಿನಂತೆ ಅಲ್ಲಲ್ಲಿ ಹೊಳೆಯುತ್ತ ವ್ಯಕ್ತಿಗಳನ್ನು ಬೆಳಗುತ್ತ ಸುಧಾರಣೆಗೆ ಸಹಾಯಕವಾಗಿದೆ.

ಇವರಲ್ಲದೆ ಅವರಿವರ ಲಾಭಗಳಲ್ಲಿ ಪಾಲ್ಗೊಂಡು, ಎಲ್ಲರಿಗೂ ಸಹಾಯ ಮಾಡುವವನಂತೆ ನಟಿಸುತ್ತ, ಏನೂ ಅರಿಯದ ಪರಿಶುದ್ಧ ಮನಸ್ಕರಾದ ರಾಮಣ್ಣ ಪೆರುಮಾಳರನ್ನು ತನ್ನ ಲೌಕಿಕವಾದ ಚಾಕಚಕ್ಯತೆಯಿಂದ ಮೋಸಗೊಳಿಸುವ ಸುಬ್ಬಾಭಟ್ಟನಿದ್ದಾನೆ. ಪೊಲತಿಯರಾದಿಯಾಗಿ ಊರ ದಿಕ್ಕೆಟ್ಟ ಹೆಂಗಸರಿಗೆಲ್ಲಾ ಬಾಯ್ಬಿಡುತ್ತ, ರಾಮಾನುಜಾಚಾರ್ಯರಿಗೇ ಏನು ಗೊತ್ತು ಎನ್ನುತ್ತ ಶ್ರೀವೈಷ್ಣವರೆಂದು ಮೆರೆಯುವ ರಾಮಕೃಷ್ಣನೂ ದೇವಕೀಪ್ರಿಯನೂ ಇದ್ದಾರೆ. ದುರಾಸೆಯಲ್ಲಿ ಅಂಧರಾದ ಬ್ರಾಹ್ಮಣರು ಇದ್ದರೆ ಶ್ರದ್ಧೆ ಭಕ್ತಿಗಳಿಂದ ನೀತಿ ನಿಯಮಕ್ಕೆ ಭಯಪಟ್ಟು ಬಾಳುವ ಹೊಲೆಯರಿದ್ದಾರೆ. ಸಂಬಳ ಕೊಡದಿದ್ದರೂ ಜೀತ ಮಾಡುವೆನೆನ್ನುವ ಗುಣಕ್ಕೆ ಶರಣಾಗತರಾದ ಕಾಳನೇ ಮುಂತಾದ ಪಂಚಮರ ಬದುಕೇ ಶ್ರೇಷ್ಠವೆಂಬ ಭಾವನೆಯನ್ನು ಲೇಖಕರು ಬೀರುತ್ತಾರೆ. ಭಗವಂತ ಪಕ್ಷಪಾತವಿಲ್ಲದ ಸ್ವಾಮಿ ಎಂಬುದಕ್ಕೆ ಅವನು ಚೆನ್ನಿಯಲ್ಲಿಟ್ಟ ಸಂಗೀತ ಕಲೆಯ ಮಿಂಚೇ ಸಾಕ್ಷಿ ಎಂಬುದು ಗೊರೂರರ ಅಂತರಂಗದ ವಾಣಿ.

ಪಟ್ಟಣ ವಾಸದಲ್ಲಿ ಹಣದ ಹೆಮ್ಮೆಯಿಂದ ಬೀಗುತ್ತ ವಿದ್ಯೆ ಕಲಿಯದೆ ದುರ್ಬಲನಾಗಿ ಉಳಿದ ಶಠಾರಿಯವರ ಮಗ ಸುಂದರನಿದ್ದಾನೆ. ಸುಬ್ಬಾಭಟ್ಟರ ಮಗ ವಾಸು ಹೊಸ ವಿಚಾರಗಳ ಬೆಂಕಿಯ ಕಿಡಿಗಳನ್ನೇ ನುಂಗಿ ಹಿರಿಯರ ಕಂದಾಚಾರಗಳನ್ನು ಎದುರಿಸಿ ನಿಲ್ಲುವವನಾದರೆ, ಸುಂದರ ಬೇಸಾಯ ಮಾಡುತ್ತೇನೆಂದು ಹೇಳುತ್ತ, ಕುಳಿತ ಕಡೆಯೆ ಆಗು ಹೋಗು ಕೂಲಿ ಕುಂಬಳಗಳ ಜಮಾ ಹಾಕಿಕೊಂಡು ಇಸ್ಪೀಟು ಆಡುತ್ತ ಮನೆಗೆ ಬರುತ್ತಿದ್ದ ಗೇಣಿ ಭತ್ತಕ್ಕೂ ನಾಮ ಹಾಕುತ್ತಾನೆ. ಟ್ರಾಕ್ಟರು ತಂದರೂ ಸೀಮೆಗೊಬ್ಬರ ಹಾಕಿದರೂ ಅವನ ಭೂಮಿಯಲ್ಲಿ ಬೆಳೆಯಿಲ್ಲ. ಅವನಿಗೆ ಶ್ರದ್ಧೆ ಸಾಲದು. ಆಧುನಿಕವಾದ ಸಲಕರಣೆಗಳಂತೆಯೇ ಆಧುನಿಕ ಸಮಸ್ಯೆಗಳಿರುತ್ತವೆ. ಅವನ್ನಳವಡಿಸಿ ಬೇಸಾಯ ಮಾಡುವುದು ಸುಲಭವಲ್ಲ. ಅದಕ್ಕೆ ನಮ್ಮ ರೈತರ ಅಜ್ಞಾನ ಸ್ವಲ್ಪ ಕಾರಣವಾದರೆ, ಸರ್ಕಾರದ ಕೆಂಪು ಪಟ್ಟಿಯ ಧೋರಣೆಯೂ ಸ್ವಲ್ಪ ಕಾರಣ. ಸೀಮೆಗೊಬ್ಬರಕ್ಕೆ ದುಡ್ಡು ಸುರಿದರೆ ನಾಡಿನ ಹಸಿರು ಗೊಬ್ಬರಕ್ಕೆ ಬೇಡಿಕೆ ಹೋಗುತ್ತದೆ. ಅಲ್ಲಿಗೆ ಪದಾರ್ಥವೂ ಹಾಳು ಸ್ವಾವಲಂಬನೆಯೂ ಕೇಡು. ನಮ್ಮ ಭೂಮಿಗೆ ಸೀಮೆಗೊಬ್ಬರ

ಒಗ್ಗದೆ ಹೋದರೆ ಆ ವರ್ಷದ ಬೆಳೆಯೇ ಖೋತ. ಹೀಗೆ ಹಳ್ಳಿಯನ್ನು ಉದ್ಧರಿಸುವ ಬದಲು ಈ ಪದಾರ್ಥಗಳು ಹಳ್ಳಿಗಳನ್ನಿನ್ನೂ ತುಳಿಯುತ್ತವೆ. ಸ್ವಾವಲಂಬನೆ ಸಹಜವಾದ ಸಂಪನ್ಮೂಲಗಳನ್ನು ಹಾಳುಮಾಡಿಕೊಂಡು ವಿದೇಶಿಯರು ಕೊಡುವ ಘನಂದಾರಿ ಸಾಲ ಗಳಿಗೆ ಕೈಯೊಡ್ಡುವ ಒಂದು ಕರಾಳ ಮುಖವನ್ನು ಇವರು ಚಿತ್ರಿಸಿದ್ದಾರೆ. ಹೀಗೆ ಹಳ್ಳಿಯವರ ಬದುಕನ್ನು ಹತ್ತಿರದಿಂದ ಅರಿಯದೆ ಅವರ ಸಮಸ್ಯೆಗಳನ್ನು ಎಲ್ಲ ದೃಷ್ಟಿ ಕೋನದಿಂದಲೂ ವಿಚಾರಿಸಿ ಬಗೆಹರಿಸದೆ ದೂರದಿಂದ ಉಪನ್ಯಾಸ ಮಾಡಿ ಯಂತ್ರ ನಾಗರಿಕತೆಯನ್ನೂ ಬೆಳಸಿ ಶಾಂತವಾದ ಸ್ವಸಂಪೂರ್ಣವೂ ಸ್ವಾವಲಂಬಿಯೂ ಆದ ಹಳ್ಳಿಯ ಬದುಕನ್ನು ಕಲಕುವ ಪಟ್ಟಣಿಗರ ಈ ಪ್ರಯತ್ನದ ನಿರರ್ಥಕತೆಯನ್ನೂ ಇಲ್ಲಿ ಗೊರೂರರು ಚಿತ್ರಿಸಿದ್ದಾರೆ. ಚಿತ್ರಣದಲ್ಲಿ ಗೊರೂರರದು ಎಂತಹ ಯಥಾರ್ಥತೆ, ಎಂತಹ ವಿನೋದ ದೃಷ್ಟಿ.

ಇಲ್ಲಿನ ವ್ಯಕ್ತಿಗಳು ಆದರ್ಶದ ಕನಸಿನ ಲೋಕದವರಲ್ಲ. ನಮ್ಮ ಸುತ್ತ ಮುತ್ತಣ ಜೀವಂತ ಜನರು. ಗೊರೂರರು ತಮಗೇ ವಿಶಿಷ್ಟವಾದೊಂದು ಸಾಮರ್ಥ್ಯದಿಂದ ಜನರ ಜೀವನಾಡಿಯನ್ನು ಹಿಡಿಯಬಲ್ಲರು. ಬರವಣಿಗೆಯಲ್ಲಿ ಅದನ್ನು ಮಿಡಿಯ ಬಲ್ಲರು. ಪ್ರಪಂಚದಲ್ಲಿ ಇಷ್ಟೊಂದು ಅನ್ಯಾಯವಿದೆಯಲ್ಲ ಎಂದುಕೊಂಡು ಕೊರಗುತ್ತ ಕೂಡದೆ ಸಹೃದಯತೆಯಿಂದ ನೋಡಿ ಅನ್ಯಾಯವನ್ನೂ ದೌರ್ಬಲ್ಯವನ್ನೂ ಉಪಹಾಸ ಮಾಡುವ ಸಾಮರ್ಥ್ಯವುಳ್ಳವರು. ಇದು ಪುಸ್ತಕದಿಂದ ಕಲಿತ ವಿಚಾರಪರತೆಯಲ್ಲ— ಜೀವನಾನುಭವದಿಂದ ನೇರವಾಗಿ ಮೂಡಿದ ವಿಚಾರವಂತಿಕೆ.

ಪಂಚಮರನ್ನು ಉದ್ಧರಿಸಬೇಕು. ಸರಿ—ಹೇಗೆ? ಯಾವ ಮಾರ್ಗದಲ್ಲಿ? ಅವರಿಗೆ ವಿದ್ಯೆಯನ್ನು ಕೊಡಬೇಕು, ಆರೋಗ್ಯವನ್ನು ತರಬೇಕು, ಧೈರ್ಯವುಂಟು ಮಾಡಿ ಪ್ರೀತಿ ಯಿಂದ ಕಾಪಾಡಬೇಕು. ಆನಂದ ಚೆನ್ನಿಯನ್ನು ಗಾನಶಾರದೆಯನ್ನಾಗಿ ಮಾಡಿದ ಹಾಗೆ. ವಾಸು ಚೆನ್ನಿಯನ್ನು ಮದುವೆಯಾದ ಹಾಗೆ. ಅದು ಬಿಟ್ಟು ಇದ್ದುದಿದ್ದಂತೆ ನೀವೆಲ್ಲ ಸಮಾನರು, ಹಾಗೆ ಹೀಗೆಂದು ಭಾಷಣ ಮಾಡಿ, ದೇವಾಲಯವನ್ನು ಹೊಗಿರಿ ಎಂದರೆ, ಅವರು ತಮ್ಮ ಸಮಾನವಿಲ್ಲವೆಂದು ತಿರುಗುತ್ತ ಲಾಂಗಟ್ಟಲೆ ಹೆಂಡ ಬಸಿದು ಕೊಂಡು ದೇವಾಲಯಕ್ಕೆ ನುಗ್ಗಿ–ಪೂಜೆ ಪ್ರಾರ್ಥನೆಗಳಿಗಲ್ಲ–ದೊಣ್ಣೆಗಳಿಂದ ಯಾರನ್ನೂ ಕುಟ್ಟಿ ಯಾರು. ಅವರಿಗೆ ಹೆಂಡ ಕುಡಿಸಿ ಕುಣಿಯಬಿಡುವುದು ಯಾವ ಪರಿಯ ಉದ್ಧಾರ? ವಿದ್ಯೆ ಇಲ್ಲದೆ ತಿಳುವಳಿಕೆಯಿಲ್ಲದೆ ಧೈರ್ಯ ಸಂಸ್ಕಾರಗಳಿಲ್ಲದೆ ನೀವು ಮುಕ್ತರು ಶಕ್ತರು ಎಂದರೆ ಭೇತಾಳನಂತೆದ್ದು ಊರನ್ನು ಹಾಳುಗೆಡವಲಾರರೆ?

ದೇವಾಲಯಗಳಲ್ಲಿ ತುಂಬಿಕೊಂಡ ಡಾಂಭಿಕರಾದ ವೈದಿಕರು ಎಂತಹವರು? ವಂಶ ಪಾರಂಪರ್ಯವಾದ ಪೂಜೆಗೆ ಅವಕಾಶ ಕೊಡದೆ, ಪರಮ ಸಾತ್ವಿಕರಾದ ರಾಮಣ್ಣ ಪೆರುಮಾಳರನ್ನು ನೂಕುವರು. ಹೆಡಿಗೆಗಟ್ಟಲೆ ಬಾಳೆಹಣ್ಣು, ಪಿಂಡಿಗಟ್ಟಲೆ ಬೆಲ್ಲ, ಮೂಟೆ ಗಟ್ಟಲೆ ಕಾಯಿದೊರೆತರೂ ರಸಾಯನ ಪೂಜಾರಿಗಳ ಭಟ್ಟರುಗಳ ಮನೆಗೆ ಸಾಗಿ ಹೋಗಿ ಅವರಿಂದ ಭಕ್ತರ ಕೈಬಾಯಿಗೆ ದೊರೆಯುವುದು ಬರಿಯ ಬೆಲ್ಲದ ಅಂಟೆ. ಸದ್ಭಾವನೆಯಿಂದ

ಊರ ಮಧ್ಯೆ ಚಪ್ಪರ ನಿರ್ಮಿಸಿ ಹೊಲೆಯರು ಪೆರುಮಾಳ್ ದಾಸಿ ರಾಮಭಜನೆ ಮಾಡುತ್ತ ನೈವೇದ್ಯಕ್ಕಾಗಿ ಹಾಕಿದ ಹಣ್ಣು ಕಾಯಿಗಳ ರಾಶಿಯನ್ನು ನೋಡಿ ತಮ್ಮ ದೇವಾಲಯಕ್ಕೂ ಇಂತಹ ರಾಶಿಯೇಕೆ ಬರಬಾರದು ಎಂದು ಕರುಬುತ್ತಾರೆ. ಪವಿತ್ರವಾದ ಗಾನದ ಭಕ್ತಿಯ ಹೊಳೆಯಲ್ಲಿ ಕರಗಲಾರದ ಮಾತ್ಸರ್ಯದ ಬಂಡೆಗಳಿವರು.

ಹಳ್ಳಿಯೆಂದರೆ ಅದೊಂದು ಕೂಪವೂ ಹೌದು. ಯಾರಾದರೂ ಕೆಟ್ಟರೆ ಅದೊಂದು ಸ್ವಾರಸ್ಯದ ಸುದ್ದಿ. ಎಲ್ಲರೂ ಪುನಃ ಪುನಃ ಅದನ್ನೇ ಆಡಿಕೊಂಡು ನಿಲ್ಲುವರೇ ಹೊರತು ಕಷ್ಟಕ್ಕೆ ಸಿಕ್ಕಿದವರಿಗೆ ಸಹಾಯ ಮಾಡಬೇಕೆಂಬ ಪ್ರವೃತ್ತಿಯಿಲ್ಲ. ಅವರೆ ಅವರ ಬಗೆಗೆ ಅದಮ್ಯವಾದ ಕುತೂಹಲವುಂಟು. ಅದು ಪುನಃ ಸುದ್ದಿಯಾಗಬೇಕಲ್ಲ! ಅದರಿಂದ ಗೊರೂರರು ಹಳ್ಳಿಯವರ ಈ ಗುಣಕ್ಕೆ ಜುಗುಪ್ಸೆಗೊಂಡಿದ್ದಾರೆ. "ನಾಯಿ ಪುನಃ ಪುನಃ ತನ್ನ ವಾಂತಿಗೆ ಹಿಂದಿರುಗಿದಂತೆ" ಇವರ ನಡವಳಿಕೆ ಎಂದು ಮೂದಲಿಸುವರು.

ವಿವಾಹದ ನೆಪದಲ್ಲಿ ನಡೆವ ಶೋಷಣೆಯನ್ನೂ ಬ್ರಾಹ್ಮಣರ ಮನೆಗಳಲ್ಲಿ ನಡೆವ ದೂಷ್ಯವಾದ ಸುಲಿಗೆಯನ್ನೂ ಪ್ರಸ್ತಾಪಿಸಿ ನಾಗರಿಕತೆ ಬೆಳೆದಂತೆಲ್ಲ ಕೆಲವರು 'ಹಿಂದುವರಿಯುವ' ಜನ ಇದ್ದಾರೆ. ಬದಲಿಸಿದ ಸಮಾಜಕ್ಕೆ ತಕ್ಕಂತೆ ಧರ್ಮಶಾಸ್ತ್ರ ಬೆಳೆಯುಲಿಲ್ಲ. ಎಂದಿಗೋ ಬೆಳೆಯುವುದನ್ನು ನಿಲ್ಲಿಸಿದ 'ಧರ್ಮಶಾಸ್ತ್ರದ ಶವ'ವನ್ನು ಹೊರುವವರು ಈ ಜನ ಎಂದು ಕಿಡಿಕಾರಿದ್ದಾರೆ. ವರದಕ್ಷಿಣೆ ಕೊಡಬೇಕು, ಎರಡೂ ಖರ್ಚು ವಹಿಸಬೇಕು, ಆಗುವ ಶಾಸ್ತ್ರವೆಲ್ಲ ಸಾಂಗೋಪಾಂಗವಾಗಿ ನೆರವೇರಬೇಕು ಎಂದು ಹೇಳುತ್ತಾ ಗುಂಡು ಮಾಂಗಲ್ಯವನ್ನೂ ತರದ ಅನುಕೂಲಸ್ಥರಾದ ಗಂಡಿನವರ ಭಂಡತನವನ್ನೂ, ನಡುವೆ ಓಡಾಡಿಕೊಂಡು ಸರಾಗವಾಗಿ ಸಾಲ ಮಾಡಿಸಿ ದುಡ್ಡು ಖರ್ಚು ಮಾಡಿಸುವ ಸುಬ್ಬಾಭಟ್ಟನನ್ನೂ, ಮದುವೆ ಮನೆ ಕೆಲಸಕ್ಕೆ ಸಹಾಯ ಮಾಡುವೆನೆಂದು ಆರಾರು ತಿಂಗಳಿಗೆ ಸಾಕಾಗುವಷ್ಟು ಲವಾಜಮೆಯನ್ನು ಸಂಗ್ರಹಿಸಿಕೊಂಡ ಹಳ್ಳಿಯ ಜನರ ಅತಿಯಾಶೆಯನ್ನು ವಿವರ ವಿವರವಾಗಿ ಚಿತ್ರಿಸಿ ನೂರಾರು ಜನ ಕನ್ಯಾಪಿತೃಗಳ ಪರಿಪಾಟಲಿಗೆ ಗೊರೂರರು ಕಾದಂಬರಿಯಲ್ಲಿ ದನಿಗೊಟ್ಟಿದ್ದಾರೆ. ಇವಕ್ಕೆ ಕೊಸರು ಎಂಬಂತೆ ಅರ್ಥವಿಲ್ಲದ ಪ್ರಸ್ಥದ ಖರ್ಚು, ಉಪಚಾರ, ಹಳ್ಳಿಯವರೆಲ್ಲ ಇವರ ಮನೆಯ ಮದುವೆಗೆ ತಮ್ಮ ನೆಂಟರನ್ನು ಕರೆದು ಧಾರಾಳವಾಗಿ ಉಣಿಸುವುದು ಇವು ಬೇರೆ. ಆಸ್ತಿಯೆಲ್ಲ ಮಾರಿ ಹೆಣ್ಣಿನ ತಂದೆ ಬಡವನಾದ. ಎಲ್ಲವನ್ನೂ ಖರ್ಚುಮಾಡಿ ಬೀಗರೂ ಬರಿಗೈಯವರಾದರು. ಯಾವ ಯಾವ ದಂಧೆಯಲ್ಲೋ ತೊಡಗಿ ಸುಂದರನೂ ಸೋತನು. ಎಲ್ಲೂ ಪ್ರೇಮದ ಆಸರೆಯನ್ನು ಪಡೆಯದೆ ಹೇಮಾವತಿಯೂ ರಿಕ್ತಳಾಗಿಯೇ ಉಳಿದಳು. ಇಷ್ಟೆಲ್ಲ ಸುಲಿಯುವ ಜನ ತನ್ನನ್ನು ಬಾಳಿಸಿಯಾರೆ ಎಂಬ ಸಂದೇಹ ಅವಳಿಗೆ. ಇಷ್ಟು ಅಲ್ಪರಾದ ಜನರಿಗೆ ತನ್ನನ್ನು ಕೊಡುವುದೇಕೆ, ತಾವು ಬರಿದಾಗುವುದೇಕೆ, ಅದರ ಬದಲು ತಾನು ತನ್ನ ತಂದೆಯ ಮನೆಯಲ್ಲಿ ಉಳಿದರೇನು ಎಂದು ಹೇಮಾವತಿಯ ಅಂತಃಕರಣ ಕೂಗುತ್ತದೆ. ಗಂಡನ ಪ್ರೀತಿಯನ್ನು ಪಡೆಯದೆ ಅತ್ತೆಯ ಮನೆಯಿಂದ ದೂರಾಗಿ ತಂದೆಯ ಮನೆಯೂ ಬರಿದಾಗಿ—ಅಕ್ಷರಶಃ ಬರಿದಾಗಿ—ಮನೆಗೂ ಬೀಗ

ಬಿದ್ದು—ಅದು ತಮ್ಮದಾಗಿಯೂ ಉಳಿಯದೆ—ತನ್ನ ಒಡಲಿಗಾಗಿ ತಾನು ಒಂದು ಕಾಲದಲ್ಲಿ ಉತ್ತಮವಾಗಿ ಬಾಳಿದ ತನ್ನ ಊರಲ್ಲೆ ಜೀತದ ಆಳಾಗಬೇಕಾಯಿತು. ಆಗಲಾದರೂ ಹಳ್ಳಿ ಅಯ್ಯೋ ಎಂದಿತೆ? ಕುತೂಹಲಗೊಂಡಿತು, ಕೆಣಕಿತು, ಚುಚ್ಚಿತು, ನೋಯಿಸಿತು. ಸಾಲದುದಕ್ಕೆ ಪತನದ ಹಾದಿಯನ್ನು ತೋರಬಯಸಿತು. ಅವಳ ಕಷ್ಟ ವನ್ನು ಎಲ್ಲರೂ ಬಲ್ಲರು. ಆದರೆ ಯಾರಲ್ಲಿಯೂ ಹನಿ ಕರುಣವಿಲ್ಲ. ಹಾಗಾದರೆ ಮಾನ ವೀಯತೆ ಎಲ್ಲಿ? ಉತ್ತಮರೆಂದು ಪಟ್ಟಿ ನಾಮ ಹಾಕಿಕೊಂಡು ಮೆರೆವ ಶ್ರೀವೈಷ್ಣವ –ಬ್ರಾಹ್ಮಣ ಸಮಾಜವನ್ನು ಕಂಡು ಗೌರೂರರು ಹೀನಾಯಪಡುವರು. ಆದರೆ ಉತ್ತ ಮರ ಆಪತ್ಕಾಲಕ್ಕೆ ಭಗವಂತನ ಸಹಾಯವಿದೆ. ಆನಂದನಿಂದ ಹೇಮಾವತಿ ಉಳಿಯು ತ್ತಾಳೆ. ಹದಿನೆಂಟು ವರ್ಷಕ್ಕೆ ಸಾವಿರದೆಂಟು ನೋವನ್ನುಂಡ ಹೇಮಾವತಿಗೆ ಈಗ ಆನಂದನ ಪಿತೃವಾತ್ಸಲ್ಯದ ಮಡಿಲು ದೊರೆಯಿತು. ಕಂಬಳಿಹುಳದಂತೆ ಸರಿಯುತ್ತಿದ್ದ ಚೆನ್ನಿಯ ಬದುಕು ಚಿಟ್ಟೆಯಂತೆ ಬಣ್ಣವೇರಿತು. ಆಕೆ ಗಂಧರ್ವ ಕನ್ನಿಕೆಯಾಗುವ ಸೋಜಿಗ ವನ್ನೂ, ಅದರ ನಾನಾ ಹಂತವನ್ನೂ ಮುಂದೆ ಕಾಣುತ್ತೇವೆ. ಅಲ್ಲಿನ ವಾಸ್ತವವಾದ ಕಲ್ಪನೆ ಸುಂದರ. ಅಲ್ಲಿಯೂ ಸಂಗೀತಗಾರರ ಮತ್ಸರವ ಕಡಲನ್ನು ಹಾಯಬೇಕು.

ಕಾದಂಬರಿಯ ಯಾವ ಸನ್ನಿವೇಶವನ್ನು ತೆಗೆದುಕೊಂಡರೂ ಅಲ್ಲಿ ವಾಸ್ತವಿಕತೆ ಎದ್ದು ಕಾಣುವ ಗುಣ. ಹೇಮಾವತಿಯು ಗಂಡನ ಮನೆಯಲ್ಲಿ ಬಾಳುವ ಸನ್ನಿವೇಶವೊಂದನ್ನು ಉದಾಹರಣೆಗೆ ನೋಡಬಹುದು. ಅವಳನ್ನು ಪ್ರೀತಿಯಿಂದ ಆದರಿಸುವವರಿಲ್ಲ. ಗಂಡನಿಗೆ ಅವಳ ಮೇಲೆ ಮೊದಲೇ ಮನಸ್ಸಿರಲಿಲ್ಲ. ಈಗಲಾದರೂ ಅವಳ ಸೌಂದರ್ಯಕ್ಕೂ ಹಾಡಿಗೂ ಮನಸೋಲಬಹುದೇ ಎಂದರೆ ಅವನಿಗೆ ಅವಳ ತಂದೆಯ ಸುಲಿಗೆ ಮಾಡಿಬಿಟ್ಟದ್ದರಿಂದ ಅವಳಿಗೆ ತನ್ನ ಮೇಲೆ ಪ್ರೀತಿ ಇರಲಾರದೆಂಬ ಅಳುಕು. ಹಾಗಾದರೂ ಆಕೆಯನ್ನು ಸಮೀಪಿಸಲು ನುಡಿಯಲು ಏನೋ ಒಂದು ಬಿಂಕ. ಅವಳಿಗಾದರೊ ರುಚಿಯಾಗಿ ಅಡುಗೆ ಮಾಡಿ, ಅವನುಂಡ ಮೇಲೆ ಊಟ ಮಾಡಿ ಸೇವಿಸಬೇಕೆಂಬ ಮುಗ್ಧ ಪಾತಿವ್ರತ್ಯ ಭಾವ. ಅದು ಅವನಿಗೆ ತಿಳಿಯುವಂತೆಯೇ ಇಲ್ಲ. ಅವನು ಮನೆ ಸೇರುವುದೇ ಕಡಿಮೆ. ಯಾವ ಉದ್ಯಮ ಹಿಡಿದರೂ ಗಂಟು ತೆಳ್ಳಗಾಗುವುದೇ ಹೊರತು ಊರ್ಜಿತವಿಲ್ಲ. ಯಾವ ಸಮಸ್ಯೆಯನ್ನೂ ವಾಸ್ತವ ದೃಷ್ಟಿಯಿಂದ ನೋಡಿ ಪಟ್ಟುಹಿಡಿದು ಮಾಡುವುದು ಅವನ ಐಷಾರಾಮದ ಬದುಕಿಗೆ ಒಗ್ಗದು. ಈ ಮಧ್ಯೆ ಸ್ವತಂತ್ರ ವಾತಾವರಣದಲ್ಲಿ ಬೆಳೆದು ತಿರುಗಾಡುವ 'ದಂಡಿನ ಹುಡುಗಿ'ಯ ಸ್ನೇಹವಾಯಿತು. ಈಗ ಹೇಮಾವತಿಗೆ ಸುಮ್ಮನಿರಲಾಗಲಿಲ್ಲ. ನೂರು ಮಾತುಗಳನ್ನು ಮನದಲ್ಲಿ ತುಂಬಿ ಕೊಂಡು ನ್ಯಾಯ ಧರ್ಮದ ವಿಚಾರ ಮಾಡಬೇಕೆಂದು ಗಂಡನೆದುರಿಗೆ ಬಂದಳು. ಎಂದೂ ವಾದಿಸಿ ಅರಿಯದ ಸಾಧುವಾದ್ದರಿಂದ ಮಾತು ಎಲ್ಲಿಗೋ ಹೋಗಿ ಅಳು ಬಂದಿತು. ಅತ್ತೆ ಮಾವ ಗಂಡ ಎಲ್ಲರೂ ಸೇರಿ ದೂರಿದಾಗ ಅಳುತ್ತಾ ಕೋಣೆ ಸೇರಿದಳು. ಇತ್ತ ತನ್ನ ಇಷ್ಟವಿಲ್ಲದೆ ಮದುವೆಯಾಗಿ, ಬಂದ ವರದಕ್ಷಿಣೆ ಹಣವೆಲ್ಲ ನಾನಾ ದಂಧೆಗಳಲ್ಲಿ ಕರಗಿಹೋಗಿ ಅಸಹಾಯಕನಾದ ಸುಂದರ ಇವರನ್ನೆಲ್ಲ ಶಿಕ್ಷಿಸುವವನಂತೆ ಸೈನ್ಯಕ್ಕೆ ಸೇರಿಬಿಟ್ಟನು.

ಈ ಸನ್ನಿವೇಶವನ್ನು ಕುರಿತು ವಿಚಾರ ಮಾಡಿದಂತೆಲ್ಲ ಅದರ ಸಹಜತೆ ಹೆಚ್ಚು ಹೆಚ್ಚಾಗಿ ತೋರುತ್ತದೆ. ಉತ್ತಮರ ಮನೆಯ ಸುಸಂಸ್ಕೃತಳಾದ ಮುಗ್ಧ ಹೆಣ್ಣು ಹೇಮಾವತಿ. ಮನಸ್ಸಿನ ತುಂಬ ಪ್ರೀತಿಯನ್ನು ತುಂಬಿಕೊಂಡಿದ್ದಾಳೆ. ಅಭಿಮಾನ ಅವಳನ್ನು ತಡೆಯುತ್ತದೆ. ಹಣದಾಸೆಯಲ್ಲಿ ಅತ್ತೆ ಮಾವಂದಿರು ಕುರುಡರೂ ಕ್ರೂರಿಗಳೂ ಆಗಿದ್ದಾರೆ. ಯುವಕನಾದ ಸುಂದರ ಅಂತಹ ಕ್ರೂರಿಯಲ್ಲ. ಆದರೆ ಮನೋಧೈರ್ಯವಿಲ್ಲದವನು. ಅವನಿಗೆ ಪಟ್ಟಣದ ಸ್ವತಂತ್ರವಾದ ಗಾಳಿಯ ವಿಲಾಸದ ಜೀವನ ಶ್ರೇಷ್ಠವಾಗಿ ತೋರುತ್ತದೆ. ಆದರೆ ಹೇಮಾವತಿಗೆ ತನ್ನಲ್ಲಿ ಪ್ರೀತಿಯುಂಟಾದರೆ, ತಾನು ಸ್ವತಂತ್ರನಾಗಿ ಸಂಪಾದಿಸಲು ಶಕ್ತನಾದರೆ ಅವಳೊಡನೆ ಬಾಳಬೇಕೆಂಬ ಆಸೆಯೂ ಗುಪ್ತವಾಗಿ ಅವನಲ್ಲಿದೆ. ಯೌವನದಲ್ಲಿ ಪುರುಷನಿಗೆ ಪತ್ನಿಯೊಂದು ರಕ್ಷಣೆ ಎಂಬ ಸತ್ಯ ಅವನಿಗೆ ತಡವಾಗಿಯಾದರೂ ಅರಿವಿಗೆ ಬರುವುದು. ಯೌವನ ವೃದ್ಧಾಪ್ಯಗಳ ನಡುವಣ ಅಂತರವನ್ನೂ, ಆಗ ನಾವು ಮೌಲ್ಯಗಳಿಗೆ ಕೊಡುವ ಬೆಲೆಯನ್ನೂ ಈ ಸಂದರ್ಭ ಸೊಗಸಾಗಿ ಚಿತ್ರಿಸುತ್ತದೆ. ಪ್ರಾಯವೆಂಬುದು ಕನಸಿನ ಲೋಕ. ಆದರ್ಶಕ್ಕೆ ಭಾವನೆಗಳಿಗೆ ಅಲ್ಲಿ ಬೆಲೆ. ಇಳಿಗಾಲವೆಂಬುದೊಂದು ಭ್ರಮನಿರಸನ. ಅಲ್ಲಿ ಯಾವಾಗಲೂ ಲಾಭ ನಷ್ಟದ ಚಿಂತನೆ. ದಯವೆಲ್ಲಿ? ಪ್ರೇಮವೆಲ್ಲಿ? ಹಣದ ಲೆಕ್ಕಾಚಾರವೇ ಪರಮ.

ಪೆರುಮಾಳರು ಸ್ವಭಾವತಃ ಉದಾರಿಗಳು, ದೈವಭಕ್ತರು. ಮಗಳನ್ನು ಭಟ್ಟರ ಮಗ ವಾಸುವಿಗೆ ಕೊಡುವುದರಲ್ಲಿ ಧರ್ಮ ಅಡ್ಡಿಯಾಗಿ ಅವರಿಗೆ ಕಾಣಲಿಲ್ಲ. ಸಣ್ಣ ಪುಟ್ಟ ಶಾಸ್ತ್ರ ವ್ಯತ್ಯಾಸಗಳು ಅವರಿಗೆ ಗಮನಿಸಬೇಕಾದಷ್ಟು ಮುಖ್ಯವಾಗಲಿಲ್ಲ. ಆದರೆ ಭಟ್ಟರು ಧರ್ಮದ ತಿರುಳನ್ನು ಅರಿಯದೆ ಸಾರಿಗೆ ನೇತುಕೊಂಡು ಇರುವವರು. ಮದುವೆಯಲ್ಲಿ ಯಾವ ಶಾಸ್ತ್ರ ಅನುಸರಿಸಬೇಕು? ಮಾಧ್ವರದೆ ಶ್ರೀವೈಷ್ಣವರದೆ ಎಂದು ಯೋಚಿಸುತ್ತ ಆ ಕಾರಣದಿಂದ ಮಗನಿಗೆ ನಿರಾಶೆಯುಂಟುಮಾಡಿದರು. ದೇವರಂತಹ ಪೆರುಮಾಳರ ಸಂಬಂಧವನ್ನು ಪಡೆಯದೆ ಹೋದರು. ಅಲ್ಲದೆ ಹಳ್ಳಿಯಲ್ಲಿ ಇಂತಹ ಮದುವೆಗಳು ನಾನಾ ಕಷ್ಟಕ್ಕೆ ದಾರಿ ಮಾಡುತ್ತವೆ ಎಂದರು. ಆದರೆ ಹೊಲೆಯರ ಚೆನ್ನಿ ಗಾನಶಾರದೆಯಾಗಿ ಮಾರ್ಪಟ್ಟು ಮಗ ವಾಸು ಅವಳನ್ನೇ ಮದುವೆಯಾಗುವೆನೆಂದು ಹಟ ತೊಟ್ಟಾಗ ಭಟ್ಟರು ದುಃಖಿತರಾದರು, ಭೀತರಾದರು. ಸನ್ನಿಗೆ ಒಳಗಾದರು. “ಹೊಲೆಯರ ಕಾಳ ನನ್ನ ಬೀಗ, ಛೀಷ್ ಛೀಷ್!.... ನನ್ನ ಮನೆಯ ಸತ್ತ ದನಗಳನ್ನೆಲ್ಲಾ ತಿಂದವನು ಕಾಳನೇ. ಈ ಗಾನಶಾರದೆಯೂ ತಿಂದಿದ್ದಿರಬೇಕು. ಇವಳನ್ನು ಮದುವೆಯಾಗುವವನು ‘ಕಶ್ಯಪ ಕಾಶ್ಯಪ ನಿಧ್ರುವ ನಿಧ್ರ್ಯುವ ರೇಭ ರೈವ ಸಪ್ತಾರ್ಷ’ ಪ್ರವರಾನ್ವಿತನಾದ ಅಗ್ರಹಾರದ ಪುರೋಹಿತ ಸುಬ್ಬಾಭಟ್ಟರ ಮಗ ವಾಸು....ಆದರೆ ಗಾನಶಾರದೆಗೆ ಯಾವ ಪ್ರವರ ಹೇಳುತ್ತೀರಿ?.... ಕಾಳನ ಅಪ್ಪ ಕಾಳ, ಅವನಪ್ಪ ಕಾಳ, ಅವನಪ್ಪ ಕಾಳ; ಸಮಾಜ ಸುಧಾರಣೆಯಂತೆ ಸುಧಾರಣೆ. ಇನ್ನೊಬ್ಬ ಹೊಲತಿಯನ್ನು ಮದುವೆಯಾಗು ನೋಡೋಣ. ....ನಿನಗೆ ಬೇಕಾದುದು ಅವಳ ರೂಪ ಯೌವನ ಲಾವಣ್ಯ ಸಂಗೀತ. ....ಹೇಮಾವತಿಯನ್ನು ಮದುವೆಯಾಗು

ತ್ತೇನೆ ಅಂದ.... ಅವರು ಐಯ್ಯಂಗಾರ‍್ರು, ಬೇಡ ಎಂದೆ. ಈಗ ಹೊಲತಿಯನ್ನು ಮದುವೆಯಾಗುತ್ತೇನೆ ಎಂದ. ಕಲಿಯುಗ ಪ್ರಾರಂಭವಾಗಿದೆ. ಆದ್ದರಿಂದಲೇ ಹೀಗೆ ವರ್ಣಸಂಕರ....ಹೌದು." (ಪುಟ ೨೯ಳ) ಮುಂತಾಗಿ ಕೂಗಾಡುತ್ತಾರೆ.

ಪ್ರಜ್ಞಾಶೂನ್ಯರಾಗಿ ಅವರು ಪಡುವ ಈ ಅವಸ್ಥೆಯನ್ನು ಕೇಳಿ ಆನಂದನು ಆಡುವ ಮಾತುಗಳು ಲೇಖಕರ ದೃಷ್ಟಿಯನ್ನು ಪ್ರತಿಬಿಂಬಿಸುತ್ತವೆ. "ಗಾನಶಾರದೆಯನ್ನು ವಿವಾಹವಾಗದಿದ್ದರೆ ಬಾಳುವುದಕ್ಕೆ ಆಗುವುದಿಲ್ಲ ಎಂದು ತೋರಿದರೆ ವಿವಾಹವಾಗು.... ಗಾನಶಾರದೆಯ ರೂಪ ಲಾವಣ್ಯ ಗಾನ ಮಾಧುರ್ಯ ಈಗ ನಿನ್ನನ್ನು ಆಕರ್ಷಿಸಿರ ಬಹುದು. ಇವೆಲ್ಲಾ ಕ್ಷಣಿಕವಾದ ದೈಹಿಕ ಆಕರ್ಷಣೆಯೇ ಹೊರತು ಆತ್ಮದ ಆಕರ್ಷಣೆ ಯಲ್ಲ.... ವಿವಾಹ ನನ್ನ ಪ್ರಶ್ನೆ ಎಂಬ ಮಾತು ಈಚೆಗೆ ಹೊಸ ನಾಗರಿಕತೆ ಕಲಿಸಿರುವ ಗಿಣಿ ಪಾಠ. ನಿಮ್ಮ ತಂದೆಯವರಿಗೆ ವಿವಾಹ ಇನ್ನೂ ಮನೆತನದ ಪ್ರಶ್ನೆ.... ಕಾಳನ ಮಗಳನ್ನು ನಿಮ್ಮ ತಾಯಿ ಸೊಸೆಯಾಗಿ ಸ್ವೀಕರಿಸಿ ಮನೆಗೆ ಸೇರಿಸುವರೆ....?" (ಪುಟ ೨೯೬) ಮುಂತಾಗಿ ಉಪದೇಶಿಸುವರು.

ಸುಧಾರಣೆ ಎಂದರೆ ಗುರುಹಿರಿಯರನ್ನು ನೋಯಿಸುವ ಒರಟು ಸ್ವಾರ್ಥವಲ್ಲ. ಅದು ಭಾವನೆಗಳಿಂದ ಪರಿಪೋಷಿತವಾಗಿ ಅಂತಃಸ್ಫೂರ್ತಿಯಿಂದ ನಡೆಯಬೇಕಾದದ್ದು. ನಮಗೆ ಸುಧಾರಣೆಯಲ್ಲಿ ನಂಬಿಕೆ ಶ್ರದ್ಧೆ ಇರುವಂತೆ ಹಿರಿಯರಿಗೆ ಅವರ ಧರ್ಮ ಧ್ಯೇಯಗಳ ಲ್ಲಿಯೂ ಅಂತಹುದೇ ಶ್ರದ್ಧೆ ಇರುತ್ತದೆ. ಈ ಎರಡೂ ಸತ್ಯವೇ ಎನ್ನುವರು.

ಇಲ್ಲಿ ಪ್ರಕಟವಾಗಿರುವ ಸಹಾನುಭೂತಿ, ಸರ್ವವ್ಯಾಪಕವಾದ ಮಾನವ ಪ್ರೀತಿ ಮೆಚ್ಚುವಂತಹವು. ಎಲ್ಲರಿಗೂ ಒಂದೇ ಮಂತ್ರವನ್ನು ಹೇಳುವ ಸುಧಾರಕರಿಗೆ ಹೀಗೆ ಹೃದಯವಂತಿಕೆಯೂ ಆವಶ್ಯಕ. ಮತ್ತೊಂದು ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿ ಕಸಿ ಯಾಗಲಿರುವ ಸಂಸ್ಕೃತಿಗೆ, ಅದಕ್ಕೆ ಬದ್ಧರಾದ ಮಾನವರಿಗೆ ಎಂತಹ ವೇದನೆ ಎಂಬು ದನ್ನು ಅನುಭವಿಸಿದವರು ಬಲ್ಲರು. ಆದರೆ ಮೂಢನಂಬಿಕೆಗಳನ್ನೂ ಅರ್ಥಹೀನ ಆಚರಣೆ ಗಳನ್ನೂ ನಿರ್ದಾಕ್ಷಿಣ್ಯವಾಗಿ ತೊರೆಯಬೇಕು. ಅನ್ಯಮಾರ್ಗವಿಲ್ಲ. ಸುಧಾರಣೆ ಹಂತ ಹಂತವಾಗಿ ಆಗಬೇಕು. ನೈರ್ಮಲ್ಯ ಆರೋಗ್ಯ ವಿದ್ಯೆ ಕಲೆಗಳ ಮೂಲಕ ಪಂಚಮರು ಎಂಬ ಹೆಸರಿನ ದುರದೃಷ್ಟ ಜನತೆ ಹರಿಜನರಾಗಿ ಸುಧಾರಣೆಗೊಳ್ಳಬೇಕು. ಗಾಂಧೀಜಿ ಯವರ ಹೆಸರು ಹೇಳಿಕೊಂಡು ಅವರನ್ನು ಇದ್ದುದಿದ್ದಂತೆ ಬನ್ನಿ ನೀವೆಲ್ಲ ನಮಗೆ ಸಮಾ ನರು ಎಂದು ಬಿಟ್ಟರೆ ಬೋನಿನಲ್ಲಿರುವ ಹುಲಿಯನ್ನು ಊರೊಳಕ್ಕೆ ಬಿಟ್ಟಂತೆ ತಿಳಿಗೇಡಿ ತನವಾಗುವುದು. ಅವರಿಗೆ ಸೇಂದಿಯನ್ನೂ ಸ್ವಾತಂತ್ರ್ಯವನ್ನೂ ಕೊಟ್ಟು ಹಾಳುಗೈಯು ದಿರಿ, ಕುಡಿದ ಅವರ ದೊಣ್ಣೆಯ ಪೆಟ್ಟಿಗೆ ಸಿಲುಕಬಹುದು ಎಂದು ಎಚ್ಚರಿಸುವರು. ಅವರ ನಡುವೆ ನಾವು ಬಾಳುತ್ತ ಅವರನ್ನು ನಮ್ಮಂತೆ ಮಾರ್ಪಡಿಸಬೇಕು. ಈ ಕೆಲಸಕ್ಕೆ ಬ್ರಾಹ್ಮಣರು ಅರ್ಹರು. ಪರಂಪರೆಯಿಂದ ಅವರನ್ನು ಶೋಷಣೆ ಮಾಡಿದುದಕ್ಕೆ ಇದೇ ಅವರಿಗೆ ತಕ್ಕ ಪ್ರಾಯಶ್ಚಿತ್ತ ಎಂಬುದು ಇಲ್ಲಿ ವಾಸುವಿನ ಮಾತು. ಇದಕ್ಕೆ ಎಂತಹ ವರೂ ಹೌದೆಂದಾರು.

ಗೊರೂರರ ಗದ್ಯಶೈಲಿ ಮನೋಜ್ಞವಾದುದು. ಸಂಗೀತದ ಮಹಿಮೆಯನ್ನು ಬಣ್ಣಿಸುವಾಗ ಭಾವಪೂರ್ಣವಾಗುತ್ತದೆ. ದುಡಿಮೆಯ ಸತ್ಫಲಗಳನ್ನು ಹೇಳುವಾಗ ಕಾಂತಾಸಮ್ಮಿತವಾಗುತ್ತದೆ. ಹಳ್ಳಿಗರ ನ್ಯೂನತೆಗೆ ಕಿಡಿಕಾರುತ್ತದೆ. ಅವರ ಧಾರ್ಮಿಕ ಜೀವನವನ್ನು ಕಟುವಾಗಿ ಟೀಕಿಸುತ್ತ, ಉದಾತ್ತ ಚರಿತರಾದ ರಾಮಾನುಜಾಚಾರ್ಯರ ಮಾತನ್ನೂ ಮೀರುವ ಸೋಗಲಾಡಿಗಳನ್ನು ಅವರ ಶೈಲಿ ಸಮರ್ಥವಾಗಿ ಸದೆ ಬಡಿಯುತ್ತದೆ. ಅವರಿವರನ್ನು ಮೋಸಗೊಳಿಸಿ ಉನ್ನತಿ ಹೊಂದಬಯಸುವ ಹಳ್ಳಿಗರನ್ನು ಗೇಲಿ ಮಾಡುತ್ತದೆ. ನಾಣ್ನುಡಿಗಳಿಂದ ಸಮೃದ್ಧವಾಗಿ ನವೀನವಾದ ಉಪಮೆಗಳಿಂದ ಕಂಗೊಳಿಸುತ್ತದೆ. ಜೀವನ ಪ್ರವಾಹದಂತೆ, ಹೇಮಾವತಿಯ ಅಲೆಗಳಂತೆ ತರಂಗಮಯವಾದ ವಿಲಾಸವನ್ನುಳ್ಳುದು ಇವರ ಗದ್ಯಶೈಲಿ. ಕಾದಂಬರಿಯ ತಂತ್ರ ಸರಳ ಮತ್ತು ನೇರ. ಒಟ್ಟಿನಲ್ಲಿ ಗೊರೂರರು ಒಂದು ಹಳ್ಳಿಯ ಬದುಕನ್ನೇ ಮಗ್ಗವಾಗಿ ಹಾಸಿಕೊಂಡು ಅಲ್ಲಿನ ರಾಜಕೀಯ ಧಾರ್ಮಿಕ ಸಾಮಾಜಿಕ ಚಿತ್ರಗಳನ್ನು ಸೊಗಸಾಗಿ ನೆಯ್ದಿದ್ದಾರೆ.

'ಊರ್ವಶಿ'

ಎಚ್. ಎಂ. ಶಂಕರನಾರಾಯಣ ರಾವ್

ಕನ್ನಡಸಾಹಿತ್ಯದ ನವೋದಯದ ಕಾಲದಲ್ಲಿ ಹಳ್ಳಿಯ ಜೀವನವನ್ನು ವಿವಿಧ ಮುಖಗಳಲ್ಲಿ ಚಿತ್ರಿಸುವ 'ಹಳ್ಳಿಯ ಚಿತ್ರಗಳು' ಎಂಬ ಕೃತಿಯಿಂದ ಮೊದಲಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯಸೇವೆ ಸುಮಾರು ಅರ್ಧ ಶತಮಾನಗಳ ಕಾಲ ಅವ್ಯಾಹತವಾಗಿ ನಡೆದು ಬಂದಿದೆ. ಹಳ್ಳಿಯ ಜನಜೀವನವನ್ನು ಅನೇಕ ಸ್ತರಗಳಲ್ಲಿ ಚಿತ್ರಿಸಿ, ಬರಡಾಗಿದ್ದ ನಮ್ಮ ಸಾಹಿತ್ಯಕ್ಷೇತ್ರಕ್ಕೆ ತಿಳಿಹಾಸ್ಯದ ಪನ್ನೀರನ್ನು ಚಿಮುಕಿಸಿ, ಅದು ನಂದನವನದಂತೆ ಕಂಗೊಳಿಸುವಂತೆ ಮಾಡಿದ್ದು ಅವರಿಂದ ನಮ್ಮ ಸಾಹಿತ್ಯಕ್ಕೆ ಸಂದ ಮಹತ್ತರವಾದ ಸೇವೆ. ಅವರ ಲೇಖನಿ ಹೊಸ ಸಾಹಿತ್ಯದಲ್ಲಿ ತಿಳಿಹಾಸ್ಯದ ಹೆದ್ದಾರಿಯನ್ನೇ ತೆರೆಯಿತು. ನನಗೆ ತಿಳಿದಂತೆ ಕವಿತೆ ನಾಟಕಗಳ ಹೊರತಾಗಿ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿರಚನೆ ಮಾಡಿ ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಹಿಂದಿನ ಮತ್ತು ಇಂದಿನ ಸಾಹಿತ್ಯಕೃತಿಗಳ ವಿಮರ್ಶೆ, ಗಾಂಧೀ ಸಾಹಿತ್ಯರಚನೆ ಇವೂ ಕೂಡ ಅವರ ಸಾಹಿತ್ಯರಚನೆಯ ಕಕ್ಷ್ಯೆಯೊಳಗೆ ಅಡಕವಾಗಿವೆ. ಇಷ್ಟೇ ಅಲ್ಲ: ಅವರು ಭರತಖಂಡದ ಇತರ ಭಾಷೆಗಳ ಸಾಹಿತ್ಯದ ಗಡಿಯೊಳಗೆ ನುಗ್ಗಿ ಅಲ್ಲಿನ ಶ್ರೇಷ್ಠ ಕಥೆ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ.

ಅವರು ಕನ್ನಡದಲ್ಲಿ ವಿಪುಲವಾಗಿ ಸಣ್ಣ ಕಥೆಗಳನ್ನೇ ರಚನೆ ಮಾಡಿದ್ದಾರೆ. ಆದರೆ ಅವರು ಬರೆದಿರುವ ಸ್ವತಂತ್ರ ಕಾದಂಬರಿಗಳು ಎರಡೇ—'ಹೇಮಾವತಿ' ಮತ್ತು 'ಊರ್ವಶಿ.' ಶ್ರೇಷ್ಠವಾದ, ರತ್ನಗಳಂತಿರುವ ಈ ಎರಡು ಕಾದಂಬರಿಗಳೂ ಹಳ್ಳಿಯ ಮಧ್ಯಮ ವರ್ಗದ ಜೀವನವನ್ನು ಚಿತ್ರಿಸುತ್ತವೆ. ಈ ಕಾದಂಬರಿಗಳಲ್ಲಿ ಒಂದಾದ 'ಊರ್ವಶಿ'ಯನ್ನು ಕುರಿತು ಇಲ್ಲಿ ನಾಲ್ಕು ಮಾತುಗಳನ್ನು ಹೇಳಲು ಯತ್ನಿಸಿದೆ.

'ಊರ್ವಶಿ' ಕಾದಂಬರಿಯ ಸ್ಥೂಲವಾದ ಕಥೆ ಇದು :

ಮಲ್ಲಿಗೆಹಳ್ಳಿಯ ಸೀತಾಲಕ್ಷ್ಮಿ ರೂಪವತಿ, ಗಾನಸರಸ್ವತಿ ಹಾಗೂ ಸುಸಂಸ್ಕೃತಳು. ತಂದೆ ತಾಯಿಗಳಿಲ್ಲದ ಅವಳನ್ನು ಅವಳ ಅಣ್ಣಂದಿರಾದ ರಾಮು, ಶ್ರೀನಿವಾಸರು ರಂಭಾಪುರಿಯ ಸುಂದರರಾಜನಿಗೆ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾದ ತರುಣದಲ್ಲಿ ದಂಪತಿಗಳು ಮುಂದಿನ ಸುಖದ ಕನಸುಗಳನ್ನು ಕಾಣುತ್ತ ಕಾಲ ಕಳೆಯುತ್ತಿದ್ದರು. ಹೀಗಿರಲು ಒಮ್ಮೆ ಸೀತಾಲಕ್ಷ್ಮಿ, ಅಕ್ಕ ಜಲಜಾಕ್ಷಿಯ ಬಾಣಂತಿತನಕ್ಕೆ ಹೋಗಿದ್ದಾಗ, ಅವಳ ಗಂಡ ನರಸಿಂಹನು ಮಳೆಯ ದಿನವೊಂದರಲ್ಲಿ ತೋಟದಲ್ಲಿ ನಾದಿನಿಯನ್ನು ಸಂಪರ್ಕ ಮಾಡಿಬಿಟ್ಟನು. ಇದರ ಪರಿಣಾಮವಾಗಿ ಗರ್ಭಿಣಿಯಾದ ಆಕೆ ಹಾಸನದ ಆಸ್ಪತ್ರೆಯಲ್ಲಿ ಹೆತ್ತು ಮಗುವನ್ನು ಕಳೆದುಕೊಂಡಳು.

ನರಸಿಂಹನ ಈ ವರ್ತನೆ ಅನೇಕರ ಮೇಲೆ ಪರಿಣಾಮ ಬೀರಿತು. ಅನಿರೀಕ್ಷಿತವಾದ ತನಗೆ ತಿಳಿಯದಂತೆಯೇ ಆದ ಈ ಘಟನೆಯಿಂದ ಸೀತಾಲಕ್ಷ್ಮಿ ಹೆದರಿ ಕಂಗಾಲಾದಳು; ರಾಮು ಶ್ರೀನಿವಾಸರು ಊರಿನಲ್ಲಿ ತಲೆತಗ್ಗಿಸಬೇಕಾಯಿತು; ಸುಂದರರಾಜನಿಗೆ ಹುಚ್ಚು ಹಿಡಿಯುವುದೊಂದು ಬಾಕಿ ಉಳಿಯಿತು.

ಆಸ್ಪತ್ರೆಯಿಂದ ಸೀತಾಲಕ್ಷ್ಮಿ ತೌರಿಗೆ ಹಿಂದಿರುಗಿದಳು. ಕಿರಿಯ ಅಣ್ಣ ಶ್ರೀನಿವಾಸನಿಗೆ ಸೀತಾಲಕ್ಷ್ಮಿಯ ಮೇಲೆ ಪ್ರೀತಿ ಹೆಚ್ಚು. ರಾಮಸ್ವಾಮಿಗೆ ನರಸಿಂಹನ ಕಥೆ ನಡೆದ ಮೇಲಂತೂ ಅದು ಕಡಿಮೆಯಾಯಿತು. ಅಣ್ಣ ನಮ್ಮವನಾದರೂ ಅತ್ತಿಗೆ ನಮ್ಮವಳಲ್ಲವಷ್ಟೆ. ತಂಗಿಯ ವಿಷಯದಲ್ಲಿ ಅಣ್ಣ ತಮ್ಮಂದಿರ ವಿರಸ ಎಷ್ಟು ದೂರ ಹೋಯಿತೆಂದರೆ, ಸೀತಾಲಕ್ಷ್ಮಿ ಒಮ್ಮೆ ನದಿಗೆ ಹಾರಿಕೊಂಡಳು. ಶ್ರೀನಿವಾಸ ಸಕಾಲದಲ್ಲಿ ಇವಳನ್ನು ಬದುಕಿಸಿದನು. ಇದರಿಂದಾಗಿ ಅಣ್ಣತಮ್ಮಂದಿರು ಬೇರೆಯಾದರು.

ಈ ನಡುವೆ ಊರಿನವರ ವರ್ತನೆಯ ಫಲವಾಗಿ ಸೀತಾಲಕ್ಷ್ಮಿ ಅತ್ತೆಯ ಮನೆಯನ್ನು ಸೇರಿದಳು. ಅಲ್ಲಿ ಆಕೆ ಅನುಭವಿಸಿದ್ದು ನರಕಯಾತನೆ. ಅತ್ತೆ ಅತ್ತಿಗೆ ನಾದಿನಿಯರು, ಮಾವನ ಅಕ್ಕ ಒಂದು ರೀತಿ ಇವಳನ್ನು ಅಸ್ಪೃಶ್ಯಳಂತೆ ಕಂಡರೆ, ಇವಳ ಭಾವ ಇವಳನ್ನು ಬಯಸಿ ನಿರಾಶನಾಗಿ, ಇವಳ ಮೇಲೆ ಕಳ್ಳತನದ ಅಪವಾದ ಹೊರಿಸಿದನು. ಬೇಸತ್ತ ಇವಳು ಆತ್ಮಹತ್ಯೆ ಮಾಡಿಕೊಂಡಾಗ, ಮಾವ ಗುಂಡಣ್ಣನವರು ಇದನ್ನು ತಪ್ಪಿಸಿ ಸೀತಾಲಕ್ಷ್ಮಿಯನ್ನು ತೌರುಮನೆಗೆ ಕಳುಹಿಸಿದರು. ಇವಳು ಹೊರಟು ಹೋದ ಮೇಲೆ ಮನೆಗೆ ಬಂದ ಸುಂದರರಾಜನಿಗೆ ಬೇರೊಂದು ಮದುವೆ ಮಾಡಿಸಲು ಯತ್ನಿಸಿ ತಂದೆತಾಯಿಗಳು ವಿಫಲರಾದರು.

ಹೆಂಡತಿಯ ವಿಷಯ ತಿಳಿದಂದಿನಿಂದ ಹುಚ್ಚನಂತಾದ ಸುಂದರರಾಜನು, ಸಾಲ ಮಾಡಿ ಊರೂರು ಅಲೆಯತೊಡಗಿದನು. ರಂಭಾಪುರಿಯ ಸಾಹುಕಾರರು ಸಾಲಕ್ಕಾಗಿ ಅವನನ್ನು ಕೋರ್ಟಿನಲ್ಲಿ ಹಿಡಿಸಲು ಯತ್ನಿಸಿದಾಗ, ಸೀತಾಲಕ್ಷ್ಮಿ ತನ್ನ ಏಕೈಕ ಆಸ್ತಿಯಾದ ಚಿನ್ನದ ಡಾಬನ್ನು ಕೊಟ್ಟು ಅವನನ್ನು ಉಳಿಸಿದಳು. ಈ ಘಟನೆಯಿಂದ ಸೀತಾಲಕ್ಷ್ಮಿಗೂ ಶ್ರೀನಿವಾಸನಿಗೂ ವಿರಸವುಂಟಾಯಿತು. ಈ ನಡುವೆ ಮಹಾಲಕ್ಷ್ಮಿಯ

ಚಿನ್ನದ ಸರವನ್ನು ಕದ್ದವನು ಕೃಷ್ಣನೇ ಎಂದು ರುಜುವಾತಾಗಿ ಸೀತಾಲಕ್ಷ್ಮಿ ಅಪವಾದದಿಂದ ಮುಕ್ತಳಾದಳು.

ಬೆಂಗಳೂರಿನಲ್ಲಿ ಸೋದರಮಾವನಾದ ಪ್ರಾಣಾಚಾರ್ಯರಿಂದ ಆಯುರ್ವೇದ ವಿದ್ಯೆ ಕಲಿತ ಮೇಲೆ ಸೀತಾಲಕ್ಷ್ಮಿ ಮಲ್ಲಿಗೆಹಳ್ಳಿಯಲ್ಲಿ ಜನಸೇವೆಗಾಗಿ ನಿಂತಳು. ಅಲ್ಲದೆ ಕೆಲವು ದಿನಗಳಾದಮೇಲೆ ರಂಭಾಪುರಿಗೆ ಹೋಗಿ ನಿದ್ರಾವಿಹೀನ ಸ್ಥಿತಿಗೆ ಇಳಿದಿದ್ದ ಸುಂದರರಾಜನನ್ನು ಸೀತಾಲಕ್ಷ್ಮಿ ಸಂಗೀತದಿಂದ ಬದುಕಿಸಿಕೊಂಡಳು. ಸೊಸೆಯ ಕಾರ್ಯದಿಂದ ಗುಂಡಣ್ಣ ಕಲ್ಯಾಣಮ್ಮನವರಿಗೆ ಸಂತೋಷವಾಯಿತು. ಸುಂದರರಾಜನಿಗೆ ಹವಾ ಬದಲಾಯಿಸಲು ಅತ್ತೆಮಾವಂದಿರೊಡನೆ ಸೀತಾಲಕ್ಷ್ಮಿ ದಕ್ಷಿಣ ದೇಶದ ಯಾತ್ರೆಗೆ ಹೋದಾಗ, ಮಾಯಾವರದ ಬಳಿ ಕಾವೇರಿಯಲ್ಲಿ ಸೀತಾಲಕ್ಷ್ಮಿ ಗಂಡನೊಡನೆ ಜಲಸಮಾಧಿ ಹೊಂದಿದಳು.

ಯಾವುದೋ ವಿಷಗಳಿಗೆಯಲ್ಲಿ ಪ್ರಕೃತಿಯ ಸಂಚಿಗೆ, ವ್ಯಕ್ತಿಯ ಮೋಹಚಾಪಲ್ಯಗಳಿಗೆ ಬಲಿಯಾಗಿ, ತನಗೆ ತಿಳಿಯದಂತೆಯೇ ಪಾತಾಳಕ್ಕೆ ಬಿದ್ದು, ಆದರೆ ಕ್ಷಣಾರ್ಧದಲ್ಲಿ ಎಚ್ಚರಗೊಂಡು ಪಶ್ಚಾತ್ತಾಪ ತ್ಯಾಗ ಸೇವೆಗಳಿಂದ ತನ್ನನ್ನು ತಾನು ಉದ್ಧರಿಸಿಕೊಂಡ ಸೀತಾಲಕ್ಷ್ಮಿಯೆಂಬ ಮಹಿಳೆಯ ಹೃದಯ ವಿದ್ರಾವಕವಾದ ಕರುಣಕಥೆಯೇ ಈ ಕಾದಂಬರಿಯ ವಸ್ತು. ಅಹಲ್ಯೋದ್ಧಾರದ ಕಥೆಗಿಂತ ಸೀತಾಲಕ್ಷ್ಮಿಯ ಕಥೆ ಮಹತ್ವದಲ್ಲಿ ಕಡಮೆಯಾದುದೇನಲ್ಲ. ಅದಕ್ಕೆ ಪ್ರತಿಯಾಗಿ ಇದು ಒಂದು ಕೈ ಮಿಗಿಲಾದುದೆಂದೇ ಹೇಳಬೇಕು. ದೇವರಾಜನೆಂಬ ಕುತೂಹಲಕ್ಕೆ ಮರುಳಾಗಿ, ಗೌತಮನ ವೇಷದಿಂದ ಬಂದ ಇಂದ್ರನನ್ನು ತನ್ನಲ್ಲಿಗೆ ಬರಮಾಡಿಕೊಂಡ ಅಹಲ್ಯೆ, ತನ್ನ ಮಾನ ರಕ್ಷಣೆ ಮಾಡಬೇಕೆಂದು ಅವನನ್ನು ಬೇಡಿಕೊಂಡಳು. ಸೀತಾಲಕ್ಷ್ಮಿಗಾದರೋ ಕನಸು ಮನಸುಗಳಲ್ಲಿ ಈ ದುರುದ್ದೇಶವಿರಲಿಲ್ಲ. ಇಂದ್ರನಿಗೆ ಗೌತಮನು ಶಿಕ್ಷೆಯನ್ನು ವಿಧಿಸಿದನು. ಸೀತಾಲಕ್ಷ್ಮಿಯ ಸತೀತ್ವವನ್ನು ಭಂಗಪಡಿಸಿದ ನರಸಿಂಹನಿಗೆ ಯಾರು ಶಿಕ್ಷೆ ವಿಧಿಸಿದರು ? ಸಮಾಜ ಅವನನ್ನು ಶಿಕ್ಷಿಸುವುದಿರಲಿ, ನರಸಿಂಹ ಗಂಡಸು ಅವನು ಏನು ಬೇಕಾದರೂ ಮಾಡಬಹುದು ಎಂದು ತೀರ್ಪಿತ್ತಿತು. ಪುರುಷನಿಗೊಂದು ನ್ಯಾಯ, ಸ್ತ್ರೀಗೊಂದು ನ್ಯಾಯವೇ ? ಈ ವಿಷಯದಲ್ಲಿ ಸ್ತ್ರೀಯಷ್ಟೇ ಪುರುಷನೂ ಅಪರಾಧಿಯಲ್ಲವೇ ? ಅಥವಾ ಒಂದು ಕೈ ಮೇಲೋ ? ಅಹಲ್ಯೆ ಯಾರ ಕಣ್ಣಿಗೂ ಬೀಳದೆ ನಿರಾಹಾರಿಯಾಗಿ ಗಾಳಿ ಕುಡಿಯುತ್ತ ಶ್ರೀರಾಮನು ತನ್ನಲ್ಲಿಗೆ ಬರುವವರೆಗೆ ಕಾಲ ತಳ್ಳಿ, ಅವನಿಂದ ಶುದ್ಧಿಯನ್ನೂ ಗಂಡನಿಂದ ಕ್ಷಮೆಯನ್ನೂ ಪಡೆದಳು. ಈ ತೆರನಾದ ಸಹಾನುಭೂತಿ ಸೀತಾಲಕ್ಷ್ಮಿಗೆ ದೊರಕಲಿಲ್ಲ. ಕೆಂಡದಂತಹ ಸಮಾಜದ ಮಧ್ಯದಲ್ಲಿದ್ದುಕೊಂಡು, ಕಷ್ಟನಿಷ್ಠುರಗಳಿಗೆ ಗುರಿಯಾಗಿ, ಅತ್ತೆ, ಅತ್ತಿಗೆ, ಓರಗಿತ್ತಿ ಇವರೇ ಮೊದಲಾದವರ ವಾಗ್ಬಾಣಗಳಿಗೆ ತುತ್ತಾಗಿ ಬದುಕಿದ ಸೀತಾಲಕ್ಷ್ಮಿಗೆ, ಶ್ರೀನಿವಾಸ ಕಮಲಮ್ಮನವರ ಸಹಾನುಭೂತಿ ಕನಿಕರಗಳು ಮತ್ತು ಸಂಗೀತದ ಸಹವಾಸಗಳಿರದೆ ಹೋಗಿದ್ದರೆ ಅವಳ ಬಾಳು ಎಂದೋ ಮುಗಿಯುತ್ತಿತ್ತು. ಪ್ರಾಣಾಚಾರ್ಯರೂ ಅವಳಿಗೆ ಬದುಕನ್ನು

ಸಸ್ಯವನ್ನಾಗಿ ಮಾಡಿದರು. ಅಹಲ್ಯೆಯ ಪತನ ಹಾಗೂ ಉದ್ಧಾರ ರಾಮಾಯಣ ಕಾಲದಲ್ಲಿ ಮಾತ್ರ ನಡೆಯಲಿಲ್ಲ; ಮನುಷ್ಯ ಸಂತತಿ ಭೂಮಿಯ ಮೇಲೆ ಇರುವವರೆಗೆ, ಅರಿಷಡ್ವರ್ಗಗಳು ಅವನನ್ನು ಕೆಣಕುತ್ತಿರುವವರೆಗೆ, ಈ ನಾಟಕ ನಡೆಯುತ್ತಿರುತ್ತದೆ. ಅರಿತೋ ಅರಿಯದೆಯೋ ಈ ವಿಷಮಚಕ್ರದಲ್ಲಿ ತೊಡರಿ ಬೀಳುವ ವ್ಯಕ್ತಿ, ತನ್ನನ್ನು ಸುತ್ತಿರುವ ತಾನಿರುವ ಸಮಾಜದಿಂದ ನಿರೀಕ್ಷಿಸುವುದು ಕನಿಕರದ ಎರಡು ಹನಿ ಕಣ್ಣೀರು ಮತ್ತು ಸಹಾನುಭೂತಿ.

ಲೇಖಕರ ಕನಿಕರ ಸಹಾನುಭೂತಿಗಳು ಸಹಜವಾಗಿಯೇ ಸೀತಾಲಕ್ಷ್ಮಿಯ ಕಡೆಗೆ ಹರಿದಿವೆ. ಸೀತಾಲಕ್ಷ್ಮಿ ಬಡವಳು, ಪ್ರಕೃತಿಯ ಸಂಚಿಗೆ ತನಗರಿಯದಂತೆಯೇ ತೊಡರಿಕೊಂಡವಳು ಎಂಬ ಅಂಶಗಳನ್ನು ಬಿಟ್ಟರೆ, ಅವಳು ಅಪರಂಜಿ ಚಿನ್ನ. ಬಡತನಕ್ಕಾಗಿ ಎಂದೂ ಆಕೆ ಕೊರಗಿದವಳಲ್ಲ. ಪ್ರಕೃತಿಯಲ್ಲಿ ಸಮತೋಲನವಿರುವಂತೆ ಕಂಡು ಬರುತ್ತದೆ. ಸೀತಾಲಕ್ಷ್ಮಿಗೆ ಬಡತನವನ್ನು ಕೊಟ್ಟ ಪ್ರಕೃತಿಯೇ ಇತರರು ಕರುಬುವಷ್ಟರ ಪುಟ್ಟಿನ ರೂಪವನ್ನು ದಯಪಾಲಿಸಿತ್ತು; ಅವಳ ಸಂಗೀತ ಪ್ರತಿಭೆಯೂ ಅಮೋಘವಾಗಿತ್ತು. ಗಣಪತಿ ಭಾಗವತರ ಕಛೇರಿಗೆ ಪಿಟೀಲು ನುಡಿಸಿ ಮೆಚ್ಚಿಗೆ ಪಡೆದವಳಲ್ಲವೇ ಅವಳು? ಹಳ್ಳಿಯಲ್ಲಿ ಪಡೆಯಬಹುದಾದ ವಿದ್ಯೆ ಪಡೆದು ತನ್ನ ನಡತೆಯಿಂದ ಎಲ್ಲರನ್ನೂ ಆಕರ್ಷಿಸಿದ್ದ ಆಕೆಯನ್ನು ಸುಂದರರಾಜನು ಮದುವೆಯಾದದ್ದು ಹಣಕ್ಕಲ್ಲ; ಅವಳ ಗುಣಕ್ಕೆ, ಸಂಗೀತಕ್ಕೆ. ಎಲ್ಲ ದಂಪತಿಗಳಂತೆ ಆಕೆಗೂ ಯೌವನ ಸಹಜವಾದ ಕನಸುಗಳಿದ್ದುವು; ಆಸೆ ಆಕಾಂಕ್ಷೆಗಳಿದ್ದುವು. ಯಾವ ಅಲಂಕಾರಗಳಿಂದ, ಊಟ ಉಪಚಾರಗಳಿಂದ, ಗಾನದಿಂದ ಗಂಡನನ್ನು ತೃಪ್ತಿಪಡಿಸಬೇಕು, ತೃಪ್ತಿಪಡಿಸಲು ಸಾಧ್ಯ ಎಂಬುದೇ ಅವಳ ಬದುಕಿನ ಗುರಿಯಾಗಿತ್ತು. ಆದರೆ ನರಸಿಂಹನ ವರ್ತನೆಯಿಂದ ಅವಳ ಕನಸುಗಳು ಮಣ್ಣುಗೂಡಿದವು.

ಒಮ್ಮೆ ಊರಿನ ಆರಾಧ್ಯದೇವತೆಯೆನಿಸಿ ತೌರುಮನೆಗೂ ಅತ್ತೆಯ ಮನೆಗೂ ಬೇಕಾದ ಸೀತಾಲಕ್ಷ್ಮಿ, ಇದ್ದಕ್ಕಿದ್ದಂತೆ ಯಾರಿಗೂ ಬೇಡವಾದಳು. ಹಿರಿಯ ಅಣ್ಣ ರಾಮಸ್ವಾಮಿಗೆ ಆಕೆ ಅಪಶಕುನ. ಕಿರಿಯಣ್ಣನಿಗೆ ಅವಳ ಚಿನ್ನದ ದಾಬು ಸುಂದರ ರಾಜನಿಗೆ ಸಂದಾಗ ಆಕೆ ಯಾರ ಮಾತನ್ನೂ ಕೇಳದ ಹೆಣ್ಣು. ಶ್ರೀರಂಗಮ್ಮನಿಗೆ ಆಕೆ ಮನೆ ಮುರುಕಿ, ಮೂಳಿ, ಹಾದರಗಿತ್ತಿ; ಅನಿಷ್ಟ. ಮಹಾಲಕ್ಷ್ಮಿಗೂ ಅಷ್ಟೆಯೇ. ಕೃಷ್ಣನಿಗಂತೂ ಆಕೆ ನಾಯಿ ಮುಟ್ಟಿದ ಗಡಿಗೆ; ಬಿಸುಡತಕ್ಕವಳು. ಆದರೆ ಅವನು ಸೀತಾಲಕ್ಷ್ಮಿ ತಮ್ಮನ ಹೆಂಡತಿಯೆಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆ ನರಸಿಂಹನನ್ನು ತೃಪ್ತಿಪಡಿಸಿದವಳು ನನಗೇಕೆ ಸೇವೆ ಸಲ್ಲಿಸಬಾರದು ಎಂದು ಆಸೆಪಟ್ಟನು. ಸೀತಾಲಕ್ಷ್ಮಿ ಸೇರಿದ ಮನೆ ಸಾಮರಸ್ಯವಿಲ್ಲದ್ದು. ಪಿತ್ರಾರ್ಜಿತ ಆಸ್ತಿಯನ್ನು ಅವಲಂಬಿಸಿದ್ದ ಮನೆಯ ಯಜಮಾನ ಗುಂಡಣ್ಣನವರು ಮೂರು ಜನ ಗಂಡು ಮಕ್ಕಳ ತಂದೆಯಾಗಿದ್ದು ಎರಡನೆಯ ಮದುವೆಯಿಂದ ದುರ್ಬಲರಾಗಿದ್ದರು. ಅವರ ಎರಡನೆಯ ಹೆಂಡತಿ ಕಲ್ಯಾಣಮ್ಮನಿಗೆ ಮನೆಯಲ್ಲಿ ಸರಿಯಾದ ಸ್ಥಾನವಿರಲಿಲ್ಲ. ನಿರುದ್ಯೋಗಿಯಾದ ಸುಂದರರಾಜನ ಮಾತ

ನ್ನಂತೂ ಹೇಳಬೇಕಾಗಿರಲಿಲ್ಲ. ಹೀಗಿರುವಲ್ಲಿ ಜಾರಿದ ಸೀತಾಲಕ್ಷ್ಮಿಯನ್ನು ಮೇಲಕ್ಕೆ ಎತ್ತುವುದೆಂತು? ಹಿರಿಯರೂ ಭೀರುಗಳೂ ಆದ ಗುಂಡಣ್ಣನವರಿಗೇನೋ ಸೊಸೆಯ ವಿಷಯದಲ್ಲಿ ಕನಿಕರ ಮತ್ತು ಸಹಾನುಭೂತಿ. ಕಲ್ಯಾಣಮ್ಮನಿಗೂ ಅಷ್ಟೆ. ಸುಂದರರಾಜನಿಗೆ ನರಸಿಂಹನ ಮೇಲೆ ದ್ವೇಷ; ಸೀತಾಲಕ್ಷ್ಮಿಯ ಮೇಲೆ ಆಸೆ. ಆದರೆ ಸಮಾಜದ ನಿರ್ಬಂಧಗಳು ಅವಳ ಸ್ವೀಕಾರಕ್ಕೆ ಅಡ್ಡಿಬಂದವು. ಸೀತಾಲಕ್ಷ್ಮಿಯ ಸೇವೆ ಎಲ್ಲರಿಗೂ ಬೇಕು; ಅವಳ ಸೌಖ್ಯ ಯಾರಿಗೂ ಬೇಡ.

ಗಂಡನ ಅಸಡ್ಡೆ, ಅತ್ತೆಮಾವಂದಿರ ದೌರ್ಬಲ್ಯ, ಕೃಷ್ಣನ ಆಸೆ, ಶ್ರೀರಂಗಮ್ಮನ ಹೊಂಕಾರ, ಸಮಾಜದ ತಿರಸ್ಕಾರ—ಈ ಪಂಚಾಗ್ನಿಗಳ ನಡುವಿದ್ದು ತನ್ನ ಉದ್ಧಾರವನ್ನು ಕಂಡುಕೊಂಡವಳು ಸೀತಾಲಕ್ಷ್ಮಿ. ಅಣ್ಣ ತಮ್ಮಂದಿರಲ್ಲಿ ವಿರಸ ಮೂಡಿದಾಗ, ಕಳ್ಳತನದ ಅಪವಾದ ಹೊತ್ತಾಗ, ಆತ್ಮಹತ್ಯೆಗೆ ಪ್ರಯತ್ನಿಸಿ ಶ್ರೀನಿವಾಸ ಗುಂಡಣ್ಣನವರಿಂದ ಬದುಕಿದಾಗ ಯಾವುದೋ ಒಳ್ಳೆಯದಕ್ಕೆ ದೈವ ತನ್ನ ಜೀವವನ್ನು ಉಳಿಸಿದೆಯೆಂದು ಆಕೆ ನಂಬಿದಳು. ಸೀತಾಲಕ್ಷ್ಮಿಗೆ ತಾನು ಮಾಡಿದ ತಪ್ಪಿನ ಅರಿವು ಇರದಿರಲಿಲ್ಲ. ಹಾಗಾದರೆ ನರಸಿಂಹನೇಕೆ ನಿರ್ದೋಷಿಯಾಗಬೇಕು? ಅವನ ತಪ್ಪಿಗೆ ಶಿಕ್ಷೆ ಬೇಡವೇ—ಇದು ಅವಳ ಯೋಚನೆ, ಪ್ರಶ್ನೆ. ಇವಕ್ಕೆ ಸಮಾಜವೇ ಉತ್ತರವನ್ನು ಹೇಳಬೇಕು. ತಾಳ್ಮೆ, ಮೌನ, ತ್ಯಾಗಗಳು ಸೀತಾಲಕ್ಷ್ಮಿಯ ಬಾಳಿನುದ್ದಕ್ಕೂ ಆಕೆಗೆ ನೆರವು ನೀಡಿದುವೆಂಬುದನ್ನು ಇಲ್ಲಿ ನೆನೆಯಬೇಕು.

ಇಲ್ಲಿಯೂ ಪ್ರಕೃತಿ ಸೀತಾಲಕ್ಷ್ಮಿಯ ಕಷ್ಟಗಳನ್ನು ಒಂದು ಸಮತೋಲನಕ್ಕೆ ತಂದಿದೆಯೆಂಬುದನ್ನು ಗಮನಿಸಬೇಕು. ಒಂದು ದೃಷ್ಟಿಯಲ್ಲಿ ಸಮಾನದುಃಖಿಯಾದ ಕಮಲಮ್ಮ ಸೀತಾಲಕ್ಷ್ಮಿಯಲ್ಲಿದ್ದ ಸಂಗೀತ ಪ್ರತಿಭೆಯನ್ನು ಗುರುತಿಸಿ ಅವಳ ಬಾಳಿನುದ್ದಕ್ಕೂ ಸಹಾನುಭೂತಿಯ ಅಮೃತವೃಷ್ಟಿಯನ್ನು ಎರೆದಳು. ಇಲ್ಲವಾಗಿದ್ದರೆ ಅವಳ ಬಾಳು ಬರಡಾಗುತ್ತಿತ್ತು. ಹಾಗೆಯೇ ಪ್ರಾಣಾಚಾರ್ಯರು ಅವಳಿಗೆ ತ್ಯಾಗದ ದಾರಿಯನ್ನು ತೋರಿಸಿಕೊಟ್ಟರು. ತಾನು ಕಲಿತ ಆಯುರ್ವೇದದಿಂದ ಹಳ್ಳಿಯ ಹೆಣ್ಣಿನ ಜೀವವನ್ನು ಉಳಿಸಿದಾಗ, ಸಂಗೀತದಿಂದ ಗಂಡನ ಪ್ರಾಣವನ್ನು ಉಳಿಸಿದಾಗ ಅವಳಿಗೆ ಆದ ತೃಪ್ತಿಯೆಷ್ಟು! ಗಂಡನೊಡನೆ ದಕ್ಷಿಣದೇಶದ ಯಾತ್ರೆಗೆ ಹೋದಾಗ ಅವಳ ಬಾಳು ಧನ್ಯವೆನಿಸಿತು. ಒಂದು ಬದುಕಿನಲ್ಲಿಯೇ ನಾಲ್ಕು ಜೀವದ ದುಃಖ ಅನುಭವಿಸಿದ ಆಕೆಗೆ ಗಂಡನೊಡನೆ ಜಲಸಮಾಧಿಯೇ ಸಹಜವಾದ ಅಂತ್ಯ ಎನಿಸುತ್ತದೆ. ಸೀತಾಲಕ್ಷ್ಮಿ, ಸುಂದರಿ, ಸುಸಂಸ್ಕೃತೆ, ಪತಿವ್ರತೆ; ಆದರೆ ಒಂದು ತಪ್ಪು ಹೆಜ್ಜೆಯಿಂದ ಸುಂದರವಾದ ಬಾಳು ಹೇಗೆ ಹಾಳಾಯಿತು ಎಂಬುದನ್ನು ಕಾದಂಬರಿಕಾರರು ನಿರ್ದೇಶಿಸಿದ್ದಾರೆ.

ಸೀತಾಲಕ್ಷ್ಮಿಯ ಬದುಕು ದುರ್ಭರವೆನಿಸುವುದಕ್ಕೆ ತಕ್ಕ ಆವರಣವೂ ಇಲ್ಲಿ ಕಲ್ಪಿತವಾಗಿದೆ. ಸ್ವಲ್ಪ ವಯಸ್ಸಾಗಿ ಬದುಕನ್ನು ಕಂಡವರಿಗೆ ಶ್ರೀರಂಗಮ್ಮನ ಕ್ರೌರ್ಯ ಹೊಸ ವಿಷಯವೇನಲ್ಲ. ಜ್ಯೋತಿಷ, ಪ್ರಶ್ನೆ ಕೇಳುವುದು, ಮಾಯಾಮಂತ್ರಗಳು ಈಗಲೂ

ಹಳ್ಳಿಯಲ್ಲಿರಬಹುದು. ಲಿಂಗಾಚಾರಿಯಂತಹ ಕೊಳಕರಿಂದ, ಅರಿಶಿನದಿಂದ ಹಾನಿಯೇ ಹೊರತು ಸಮಾಜಕ್ಕೆ ಒಳಿತಿಲ್ಲ. ಇಷ್ಟೇ ಅಲ್ಲ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎನ್ನುವಂತೆ, ಸೀತಾಲಕ್ಷ್ಮಿಯ ಸುತ್ತಮುತ್ತಲಿದ್ದ ಹೆಂಗಸರ ಬಾಯಿಂದ ಹೊರಟ ನಿಷ್ಠುರವಾದ ಮಾತುಗಳಿಗಂತೂ ಕೊನೆಮೊದಲೆ ಇಲ್ಲ. ಅನೇಕ ಗಂಡಸರ ಬಾಯಿಗಳನ್ನು ಕಟ್ಟಬಹುದು; ಆದರೆ ಇಬ್ಬರು ಹೆಂಗಸರು ಮಾತನಾಡಲು ಸೇರಿದರೆ ತೀರಿತು—ಅವರ ಬಾಯಿಗೆ ತಡೆಯೇ ಇರುವುದಿಲ್ಲ. ಸಮಾನ ದುಃಖದ ಹೆಣ್ಣಿನ ಹೃದಯವನ್ನು ಅರ್ಥಮಾಡಿಕೊಂಡು ಕನಿಕರ ತೋರುವ ಕಮಲಮ್ಮನಂತಹ ಹೆಣ್ಣು ಮಕ್ಕಳು ಸಮಾಜದಲ್ಲಿ ಅಪರೂಪ. ಕಾದಂಬರಿಯಲ್ಲಿ ಬರುವ ಹೆಣ್ಣುಮಗಳೊಬ್ಬಳು ಹೇಳುವಂತೆ ಈ ಅವಿವೇಕ ಅನರ್ಥಗಳಿಗೆ ಮುಖ್ಯ ಕಾರಣ ಸಾವಿರ ವರುಷಗಳಿಂದ ಬಂದಿರುವ ಸಂಪ್ರದಾಯ ಹಾಗೂ ಗಂಡಸರು ತಮ್ಮ ಮೂಗಿನ ನೇರಕ್ಕೆ ಬರೆದಿಟ್ಟಿರುವ ಧರ್ಮಶಾಸ್ತ್ರ. "ಏಕಃ ಕರೋತಿ ಪಾಪಾನಿ ಫಲಂ ಭುಂಕ್ತೇ ಮಹಾಜನಾಃ." ಸಮಾಜದಲ್ಲಿ ಉನ್ನತವಾದ ಸ್ಥಾನ ಮತ್ತು ಹಣವುಳ್ಳವರು ತಮ್ಮ ಲೋಪದೋಷಗಳನ್ನು ಹೇಗೋ ಸರಿಪಡಿಸಿಕೊಳ್ಳುತ್ತಾರೆ. ಈ ಎರಡರ ಅಭಾವವನ್ನು ಪಡೆದ ಸೀತಾಲಕ್ಷ್ಮಿಯಂತಹ ಅನಾಥ ಸ್ತ್ರೀಯರಿಗೆ ದೇವರಲ್ಲದೆ ಮತ್ತೆ ಇನ್ನಾರು ಗತಿ?

'ಊರ್ವಶಿ' ಪ್ರಾದೇಶಿಕ ಸಾಮಾಜಿಕ ಕಾದಂಬರಿಯೆಂದು ಮೇಲೆ ಹೇಳಿತಷ್ಟೆ. ವಿಸ್ತಾರ ವೈವಿಧ್ಯಗಳಿಗೆ ಹೆಚ್ಚು ಅವಕಾಶವಿಲ್ಲದ ಕಥೆಯಲ್ಲಿ ರೂಪಿತವಾಗಿರುವ ಪಾತ್ರಗಳು ಕಡಮೆ. ಹೀಗೆ ಬಂದ ಪಾತ್ರಗಳನ್ನು ಗೆರೆಯೆಳೆದು ಚಿತ್ರಿಸಿ ಸಜೀವವಾಗಿಸಿದ್ದಾರೆ. ಇಂಥ ಪಾತ್ರಗಳಲ್ಲಿ ಕೆಲವರ ವಿಚಾರವಾಗಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬಹುದು. ಜೀವನ ನಿರ್ವಹಣೆಗೆ ಕಷ್ಟವಾಗಿದ್ದರೂ, ಪಿತ್ರಾರ್ಜಿತವಾದ ಆಸ್ತಿಯಲ್ಲೇ ತೃಪ್ತಿಗೊಂಡು, ಪರಮ ಸಾತ್ವಿಕರಾಗಿ ಬಾಳಿ, ವಿಧಿವಶದಿಂದ ತಪ್ಪು ದಾರಿಯಲ್ಲಿ ನಡೆದ ಸೊಸೆಯ ವಿಷಯದಲ್ಲಿ ಕನಿಕರ ತೋರಿ, ಆಕೆಯನ್ನು ಕಳುಹಿಸ ವಿಷಯದಲ್ಲಿ ಪೋಲೀಸಿನವರಿಗೆ ಕೊಡುತ್ತೇನೆಂದಾಗ ಮಕ್ಕಳನ್ನು ಗದರಿ, ಮನೆಯ ಗೌರವವನ್ನು ಎತ್ತಿ ಹಿಡಿದು, ಮಗನಾದ ಕೃಷ್ಣನ ವಿಷಯದಲ್ಲಿ ಅಸಹ್ಯಪಟ್ಟು ಮನೆಬಿಟ್ಟು ನಡೆದರೂ, ಏನೂ ಮಾಡಲಾರದ ಗುಂಡಣ್ಣನವರು; ತಾಯಿಯಿಲ್ಲದ ಮಗುವೆಂದು ಸೀತಾಲಕ್ಷ್ಮಿಯ ವಿಷಯದಲ್ಲಿ ಕನಿಕರಗೊಂಡು, ಅವಳ ವಿಷಯವಾಗಿ ಅಣ್ಣನೊಡನೆ ದ್ವೇಷ ಕಟ್ಟಿಕೊಂಡು ಬೇರೆಯಾಗಿ ಅವಳನ್ನು ಕಾಪಾಡಿದರೂ, ಗಂಡನನ್ನು ಬಿಡಿಸಲು ಚಿನ್ನದ ಡಾಬನ್ನು ಕೊಟ್ಟಳೆಂದು ಅವಳ ಮೇಲೆ ಅಸಮಾಧಾನಗೊಂಡ ಅಣ್ಣ ಶ್ರೀನಿವಾಸ; ತಂಗಿಯ ಮೇಲೆ ಕನಿಕರವಿದ್ದರೂ ಅವಳ ನಡತೆಯಿಂದ ಸೀತಾಲಕ್ಷ್ಮಿಯನ್ನು ಅಪಶಕುನವೆಂದು ಭಾವಿಸಿದ ಹಿರಿಯ ಅಣ್ಣ ರಾಮಸ್ವಾಮಿ; ಯಾವ ಸಂಸ್ಕಾರವೂ ಇಲ್ಲದೆ ಕೇವಲ ಪಶುಬಲದಿಂದ ಸೀತಾಲಕ್ಷ್ಮಿಯೊಡನೆ ವರ್ತಿಸಿದ ನರಸಿಂಹ; ವಿದ್ಯಾವಂತನಲ್ಲದಿದ್ದರೂ ಸುಸಂಸ್ಕೃತನಾಗಿ, ಸೀತಾಲಕ್ಷ್ಮಿಯ ರೂಪ ಸಂಗೀತಗಳಿಗೆ ಮರುಳಾಗಿ ಅವಳನ್ನು ಕೈಹಿಡಿದು, ನರಸಿಂಹನಿಂದ ಆ ವಸ್ತು ದಕ್ಕದಿದ್ದಾಗ ಹುಚ್ಚ

ನಂತಾಗಿ, ಎರಡನೆಯ ಮದುವೆಯನ್ನು ತಿರಸ್ಕರಿಸಿದರೂ ಅವಳನ್ನು ಸ್ವೀಕರಿಸಲು ಧೈರ್ಯ ಸಾಲದೆ ಆದರೂ ಅವನ ಸೇವೆ ಸಂಗೀತಗಳಿಂದ ತನ್ನ ಮಾನಸಿಕ ದೈಹಿಕ ವ್ಯಾಧಿಗಳನ್ನು ಗುಣಪಡಿಸಿಕೊಂಡು ಆಸೆಯಿಂದ ಸಮಾಧಾನದಿಂದ ಹೆಂಡತಿಯೊಡನೆ ತೀರ್ಥಯಾತ್ರೆ ನಡೆಸಿ ವಿಧಿಯಿಂದ ವಂಚಿತನಾಗಿ ಕೊನೆಗೆ ಅವಳೊಡನೆ ಜಲಸಮಾಧಿ ಹೊಂದಿದ ಸೀತಾಲಕ್ಷ್ಮಿಯ ಗಂಡ ಸುಂದರರಾಜ; ಸೀತಾಲಕ್ಷ್ಮಿ ನಾದಿನಿಯೆಂಬುವನ್ನು ಮರೆತು, ಅವಳ ರೂಪಕ್ಕೆ ಮರುಳಾಗಿ, ನಾಯಿಯಂತೆ, ಅವಳ ಹಿಂದೆ ಅಲೆದು, ಅವಳು ತಿರಸ್ಕರಿಸಿದಾಗ, ಆ ಹೆಣ್ಣಿನ ಬಾಳನ್ನು ಕಳ್ಳತನದ ಅಪವಾದದಿಂದ ನರಕವನ್ನಾಗಿಸಿ, ತನ್ನ ತಪ್ಪು ತಿಳಿದ ಮೇಲೆ ಹೆಂಡತಿಯಲ್ಲಿ ಅದನ್ನೊಪ್ಪಿಕೊಂಡು ಕೆಂಪಿ ಸೀತಾಲಕ್ಷ್ಮಿಯ ಆಸೆಯನ್ನು ಬಿಟ್ಟು ಮರ್ಯಾದೆಯ ಬಾಳಿಗೆ ಹಿಂದಿರುಗಿದ ಸುಂದರರಾಜನ ಅಣ್ಣ ಕೃಷ್ಣಯ್ಯ; ಗಾಂಧಿಯ ತತ್ವಗಳಿಗೆ ಮನಸೋತು, ಬೆಂಗಳೂರಿನಲ್ಲಿ 'ಧನ್ವಂತರಿ ಆಶ್ರಮ'ವನ್ನು ತೆರೆದು ರಾಧೆ ಸೀತಾಲಕ್ಷ್ಮಿಯರಂತಹ ಅಬಲೆಯರ ಉದ್ಧಾರಕ್ಕೆ ನೆರವಾದ ಸ್ವಾರ್ಥತ್ಯಾಗಿ ಪ್ರಾಣಾಚಾರ್ಯ; ಹಣವೇ ಸರ್ವಸ್ವವೆಂದು ನಂಬಿ ಬಡವರ ಕಷ್ಟ ಕಾರ್ಪಣ್ಯಗಳಿಗೆ ಆರ್ತನಾದಕ್ಕೆ ಓಗೊಡದೆ ಅವನ್ನು ಶೋಷಿಸುವುದರಲ್ಲೇ ತತ್ಪರನಾಗಿರುವ ಸಾಹುಕಾರ ಅಪ್ಪಾಜಿ; ಬಾಲ್ಯದಲ್ಲಿಯೇ ವಿಧವೆಯಾದರೂ ಜೀವನೋಪಾಯಕ್ಕಾಗಿ ಉಪಾಧ್ಯಾಯಿನಿಯ ವೃತ್ತಿಯನ್ನು ಅವಲಂಬಿಸಿ, ತನ್ನ ಸಂಗೀತ ವಿದ್ಯೆಯೆಲ್ಲವನ್ನೂ ನಿರ್ವಂಚನೆಯಿಂದ ಸೀತಾಲಕ್ಷ್ಮಿಗೆ ಹೇಳಿ ಕೊಟ್ಟು ಅವಳ ಸ್ಥಿತಿಗೆ ತನ್ನ ಕನಿಕರ ಸಹಾನುಭೂತಿಗಳನ್ನು ತೋರಿ, ಅವಳ ಬದುಕನ್ನು ಸಹ್ಯವಾಗಿಸಿ ಗಂಡನೊಡನೆ ಆಕೆ ಜಲಸಮಾಧಿ ಹೊಂದಿದಾಗ ಅದು ಸಾವಿತ್ರಿ ಸತ್ಯವಾನರ ಬದುಕೆಂದು ಹೊಗಳಿ ಸಮಾಧಾನ ಪಟ್ಟುಕೊಂಡ ಕಮಲಮ್ಮ; ತಮ್ಮ ವೈಯಕ್ತಿಕ ಪ್ರತಿಷ್ಠೆಯಿಂದ ಸೀತಾಲಕ್ಷ್ಮಿಯ ಬಾಳನ್ನು ನರಕ ಮಾಡಿದ ಗುಂಡಣ್ಣನವರ ಅಕ್ಕ ಶ್ರೀರಂಗಮ್ಮ ಮತ್ತು ಸೊಸೆ ಮಹಾಲಕ್ಷ್ಮಿ ಇವರು ಕಾದಂಬರಿಯಲ್ಲಿ ಚಿತ್ರಿತರಾದ ಇತರ ವ್ಯಕ್ತಿಗಳು. ವಿವರಗಳಿಗೆ ಕಾದಂಬರಿಯನ್ನೇ ಓದಬೇಕು.

ಪದ್ಯಕಾವ್ಯದಲ್ಲಿ ಸಾಮಾನ್ಯವಾಗಿ ಪದಬಂಧ ಬಿಗಿಯಾಗಿರುತ್ತದೆ. ತಾನು ಹೇಳಬೇಕೆಂದಿರುವುದನ್ನು ಕವಿ ಕೆಲವು ಪದಗಳಲ್ಲಿಯೇ ಅಡಕವಾಗಿ ಹೇಳಲು ಪ್ರಯತ್ನಿಸುತ್ತಾನೆ. ಗದ್ಯದ ಲೇಖಕನಿಗೆ ಪದ್ಯ ಲೇಖಕನಂತೆ ಛಂದಸ್ಸಿನ ನಿರ್ಬಂಧವಿರುವುದಿಲ್ಲ. ಗದ್ಯದಲ್ಲಿ ವಿಸ್ತಾರಕ್ಕೆ ಹೆಚ್ಚು ಅವಕಾಶವುಂಟು. ಈ ಮಾತು ಕಾದಂಬರಿಯ ರಚನೆಗೆ ಹೆಚ್ಚು ಅನ್ವಯಿಸುತ್ತದೆ. ಆದರೆ ಈ ಕಾದಂಬರಿಯನ್ನು ಓದಿದಾಗ, ಕಥೆಯ ಅಡಕವನ್ನೂ ಲೇಖಕರ ಭಾಷಾ ಸೌಲಭ್ಯವನ್ನೂ ಕಂಡು ಬೆರಗಾಗುತ್ತೇವೆ. ಕಾದಂಬರಿಯಲ್ಲಿ ಉಪಯೋಗಿಸಿರುವ ಭಾಷೆ, ಶೋಧಿಸಿ ಸಂಸ್ಕರಿಸಿದ ಜನಸಾಮಾನ್ಯರ ಭಾಷೆ. ಅಚ್ಚ ಕನ್ನಡದ ನುಡಿಗಟ್ಟಿನ ಭಾಷೆ. ಯಾವ ಪದವನ್ನೂ ಇಲ್ಲಿ ತೆಗೆದುಹಾಕುವಂತಿಲ್ಲ. ಒಮ್ಮೊಮ್ಮೆ ಇಲ್ಲಿ ಭಾಷೆಗೆ ಸಂಸ್ಕಾರ ಸಾಲದು ಎನಿಸಿದರೆ, ಮರುಕ್ಷಣದಲ್ಲಿ ಹಾಗೆ ಮಾಡಿದ್ದರೆ ಭಾಷೆಯ ಸೊಗಡು ಮಾಯವಾಗುತ್ತಿತ್ತು ಎನಿಸುತ್ತದೆ. ಲೇಖಕರ ಭಾಷಾಸೌಲಭ್ಯ ವಿಲಾಸಗಳನ್ನು ತೋರಿ

ಸಲು ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ಕಥೆಗೆ ಹಿನ್ನೆಲೆಯಾಗಿ ವರ್ಣನೆಗಳು ಅವಶ್ಯಕ. ಇಲ್ಲಿಯೂ ಆಹ್ಲಾದಕರವಾದ ವರ್ಣನೆಗಳಿದ್ದು, ಒಮ್ಮೊಮ್ಮೆ ಅವು ಕಾವ್ಯಮಟ್ಟಕ್ಕೆ ಏರುತ್ತವೆ. ಈ ಹೇಳಿಕೆಗೆ ಉದಾಹರಣೆ :

ಮಧ್ಯಾಹ್ನದ ಬಿಸಿಲಿನಿಂದ ಒಂದು ಹಕ್ಕಿಯಾಗಲಿ, ಹುಲ್ಲು ಧೂಳಾಗಲಿ ಗಾಳಿಯಲ್ಲಿ ಹಾರಾಡುತ್ತಿರಲಿಲ್ಲ. ಉರಿಬಿಸಿಲಿನಲ್ಲಿ ಹೊರಕ್ಕೆ ತಲೆಹಾಕುವ ಮನುಷ್ಯ ಪ್ರಾಣಿ ಯಾವುದೂ ಇರಲಿಲ್ಲ. ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ನದಿಯ ಬೈಲು ನಿರ್ಜನವಾಗಿತ್ತು. ಆದರೆ ದಡದಿಂದ ಮೇಲಕ್ಕೆ ಕಾಣುತ್ತಿದ್ದಂತೆ, ನದಿಯ ತೀರ ಒಣಗಿ ನಿಂತಿರಲಿಲ್ಲ. ತೀರದ ತೋಪಿನ ಮರಗಳು ತಮ್ಮ ಹಸಿರು ಎಲೆಗಳನ್ನು ಹರಿಯುತ್ತಿದ್ದ ನೀರಿನ ಮೇಲೆ ಬಾಗಿಸಿ ನೀರಿನ ಕಲಕಲರವದ ಸಣ್ಣ ಅಲೆಗಳೊಂದಿಗೆ ಪಿಸುಮಾತನ್ನಾಡುತ್ತಿದ್ದವು. ತೀರದ ಎರಡು ಕಡೆಯ ಮರಗಳೂ, ದೂರದಲ್ಲಿ ನದಿಯ ಮೇಲೆ ಕೆಳಗೆ ಎದ್ದು ಕಾಣುತ್ತಿದ್ದ ಗುಡ್ಡಗಳ ಮೇಲಿನಿಂದ ಬಾಗಿದ್ದ ಮರಗಳೂ ಸೇರಿ ನದಿ, ಹಸಿರು ಬಯಲಿನ ಒಂದು ಸರಸ್ಸಿನಂತೆಯೇ ತೋರುತ್ತಿತ್ತು. ಊರಿನ ಮುಂದೆ ಬಾಗಿಹೋಗುತ್ತಿದ್ದ ನದಿ ಶುಭ್ರವಾಗಿ ಬೆಳ್ಳಿಯ ಸೋರೆಯಾಗಿ ಕುಡುಗೋಲಿನಂತೆ ಕಾಣುತ್ತಿತ್ತು. (ಪುಟ ೧೪೬)

ಇದು ಸುಂದರವಾದ ಒಂದು ಬೆಳುದಿಂಗಳ ರಾತ್ರಿಯ ವರ್ಣನೆ :

ಅದು ಹುಣ್ಣಿಮೆಯ ಮೊದಲ ರಾತ್ರಿ ; ಆಕಾಶ, ಚಂದ್ರನೆಂಬ ಬಟ್ಟಲಿನಲ್ಲಿ ನಕ್ಷತ್ರ ಕುಸುಮವನ್ನು ತುಂಬಿ ಪರಮಾತ್ಮನಿಗೆ ಅರ್ಪಿಸುತ್ತಿತ್ತು. ಹಿತ್ತಲ ಏಳು ಮಲ್ಲಿಗೆ ಹೂವಿನ ಗಂಧವನ್ನು ಹೊತ್ತು ತಂಗಾಳಿ ಮೆಲ್ಲಗೆ ಚಲಿಸುತ್ತಿತ್ತು. ಆ ಗಾಳಿ ಸ್ವಲ್ಪ ಬಲವಾದಾಗ ತೆಂಗಿನ ಗರಿಗಳು ಹೆಚ್ಚು ವೇಗದಿಂದ ಅಲುಗಾಡಿ ದೂರದ ಜನತೆಯನ್ನು ಕೈಬೀಸಿ ಕರೆಯುವಂತಿದ್ದಿತು. (ಪುಟ ೩೧೨)

ಸೀತಾಲಕ್ಷ್ಮಿಯ ಕೈಯಲ್ಲಿ ಕೊಳೆಯಾಗಿದ್ದ 'ಪಾತ್ರೆಗಳೆಲ್ಲ ಸೂರ್ಯನ ಮರಿ'ಗಳಾದವಂತೆ! (ಪುಟ ೩೦೮)

ಹೆಣ್ಣಿನ ರೂಪವನ್ನು ಅಡಿಯಿಂದ ಮುಡಿಯವರೆಗೆ ವರ್ಣಿಸಿ, ವಾಚಕರು ಬಾಯಿ ಚಪ್ಪರಿಸುವಂತೆ ಮಾಡುವ ಲೇಖಕರು ಹೆಚ್ಚು ಮಂದಿ. ಇಲ್ಲಿಯಾದರೋ ಆ ಸ್ತ್ರೀ ವರ್ಣನೆ ಗಂಭೀರವಾಗಿ, ಸಂಯಮಪೂರ್ಣವಾಗಿ, ಗ್ರಾಹ್ಯವಾಗಿ ಬಂದಿದೆ ಎನ್ನುವುದಕ್ಕೆ ಒಂದೆರಡು ನಿದರ್ಶನಗಳು.

ಸೀತಾಲಕ್ಷ್ಮಿ, ಚಿನ್ನದಲ್ಲಿ ಕಡೆದು ಮಾಡಿದ ಒಳ್ಳೆಯ ಮಾಟದ ಗೊಂಬೆಯಂತಿದ್ದಳು. (ಪುಟ ೧)

ಒಬ್ಬ ವರ ಜಲಜಾಕ್ಷಿಯನ್ನು ಪರೀಕ್ಷಿಸುವುದಕ್ಕೆ ಬಂದವನು, ಮನೆಯಲ್ಲಿ ಓಡಾಡುತ್ತಿದ್ದ ಹದಿಮೂರು ವಯಸ್ಸಿನ ಸೀತಾಲಕ್ಷ್ಮಿಯ ಮೋಹಕ ರೂಪವನ್ನು ನೋಡಿ ತಾನು ಬಂದ ಉದ್ದೇಶವನ್ನೇ ಮರೆತು ಸೀತಾಲಕ್ಷ್ಮಿಯನ್ನೇ ವಿವಾಹವಾಗುತ್ತೇನೆಂದನು. (ಪುಟ ೪)

ಸೀತಾಲಕ್ಷ್ಮಿ, ಸೊಂಟದ ಮೇಲೆ ನೀರಿನ ಕೊಡವನ್ನಿಟ್ಟುಕೊಂಡು ಬಾವಿ ಕಡೆಯಿಂದ ಬಂದಳು. ಅವಳನ್ನು ಕಂಡಕೂಡಲೇ, ಸುಂದರರಾಜನು, ಬಾಯಿಗೆ ತೆಗೆದುಕೊಂಡು ಹೋಗುತ್ತಿದ್ದ ಇಡ್ಲಿ ತುತ್ತನ್ನು ಹಾಗೆಯೇ ಹಿಡಿದುಕೊಂಡು, ಅವಳ ಕಡೆಯೇ ನೋಡುತ್ತಾ ಕುಳಿತುಬಿಟ್ಟನು. (ಪುಟ ೧೪)

ಗಾಡಿಯಿಂದ ಪಂತಪಂತಿರುವ ಹೆಜ್ಜೆಗಳನ್ನು ನೀಡಿ ಇಳಿದ ಹೂವಿನ ಲತೆಯಂತಿದ್ದ ಆಕೆಯನ್ನು ನೋಡಿದ ಕೂಡಲೇ ಅವಳ ಹಿರಿಯ ಎಲ್ಲ ವೈದಿಕರಿಗೂ ಉಂಟಾದುದು ಒಂದು ಅದ್ಭುತ ಆಶ್ಚರ್ಯ. (ಪುಟ ೧೯)

ಗಾಡಿಯಿಂದ ಮೊದಲು ಮುಂದಕ್ಕೆ ಹೊಳೆಯುವ ಮೊಳಕಾಲನ್ನು ನೀಡಿ, ಅವರ ಸಮ್ಮೋಹಶಕ್ತಿ ಇನ್ನೂ ಮರೆಯಾಗುವುದರೊಳಗೇ ಕೆಳಗೆ ಇಳಿದ ಆ ಅದ್ಭುತ ಸೌಂದರ್ಯವನ್ನ ನೋಡಿ, ಮಿಂಚನ್ನು ಥಳಾರನೆ ನೋಡಿ ಮುಚ್ಚುವ ಕಣ್ಣುಗಳಂತೆ ಅವರು ಅವಾಕ್ಕಾದರು. (ಪುಟ ೧೯)

ರಾಮಸ್ವಾಮಿ ಅಯ್ಯಂಗಾರರು ತಿಳಿಯಾದ ಸವಿರಾದ ಯಾರ ಮನಸ್ಸನ್ನೂ ನೋಯಿಸದ ಹಾಸ್ಯದ ಹೊನಲನ್ನು ಹರಿಯಿಸುವುದರಲ್ಲಿ ಸಮರ್ಥರು ಎಂದು ಈ ಮೊದಲು ಹೇಳಿತಷ್ಟೆ. ಸೀತಾಲಕ್ಷ್ಮಿಯ ಕಥೆ ಕರುಣರಸ ಪ್ಲಾವಿತವಾದ ಕಥೆ. ಇಲ್ಲಿ ಹಾಸ್ಯಕ್ಕೆ ಹೆಚ್ಚು ಅವಕಾಶವಿಲ್ಲದಿದ್ದರೂ, ಒರೆಯ ಮೇಲೆ ಉಜ್ಜಿದ ಚಿನ್ನದ ರೇಖೆಯಂತೆ ಅದು ಅಲ್ಲಲ್ಲೆ ಮಿನುಗುತ್ತದೆ. ಇದಕ್ಕೆ ಒಂದು ಉದಾಹರಣೆ:

ಒಮ್ಮೆ ಸೀತಾಲಕ್ಷ್ಮಿಯ ಭಾವ ಕೃಷ್ಣನು ಮನೆಯ ಜನ ದೇವಸ್ಥಾನಕ್ಕೆ ಹೋಗಿದ್ದಾಗ, ಮನೆಯಲ್ಲಿ ಒಬ್ಬಳೇ ಇದ್ದ ಅವಳನ್ನು ಸ್ಪರ್ಶಮಾಡಲು ಯತ್ನಿಸಿ ಅವಳಿಂದ ಒದೆ ತಿಂದು ಗಾಯಗೊಂಡನು. ಗಂಡನ ಹಣೆಯ ಗಾಯವನ್ನು ಕುರಿತು ಹೆಂಡತಿ ಕೇಳಿದಾಗ ಅವನು ಏನು ಹೇಳಬೇಕು? ಆಗ ಅವನು ಕೊಟ್ಟ ವಿಚಿತ್ರವಾದ ಉತ್ತರವನ್ನು ಲೇಖಕರು ಹೀಗೆ ವರ್ಣಿಸಿದ್ದಾರೆ. ಇದನ್ನು ಓದಿದಾಗ ಕತ್ತಲಲ್ಲಿ ಮಿಂಚಿದ ಬೆಳಕಿನಂತೆ ಯಾರಿಗೆ ತಾನೆ ನಗು ಬರುವುದಿಲ್ಲ?

ಔಷಧಿ ಹಚ್ಚಿದ್ದ ಅವನ ಹಣೆಯ ಗಾಯದ ಕಾರಣ ಯಾರಿಗೂ ತಿಳಿಯಲಿಲ್ಲ. ಕೃಷ್ಣನ ಹೆಂಡತಿ ಮಾತ್ರ ಸೀತಾಲಕ್ಷ್ಮಿಗೆ ಕೇಳುವಂತೆಯೇ ಗಂಡನನ್ನು ಸಂದೇಹದಿಂದ ನಾನಾ ಥಾಟಿ ಸವಾಲಿಗೆ ಒಳಪಡಿಸಿದಳು. ಒಂದು ಸಲ "ತೋಟಕ್ಕೆ ನುಗ್ಗಿದ್ದ ಕತ್ತೆಯನ್ನು ಹಿಂದುಗಡೆ ನಿಂತು ಓಡಿಸುತ್ತಿರುವಾಗ ಅದು ಎರಡು ಕಾಲು

ಗಳನ್ನು ಎತ್ತಿ ಒದೆಯಿತು. ನಾನು ಒಂದಕ್ಕೆ ನೆಗೆಯುವಾಗ ಗಿಡದ ಕೊಂಬೆ ತಗುಲಿತು" ಎಂದನು. ಮತ್ತೊಂದು ಸಲ ಯಾವುದೋ ಧ್ಯಾನದಲ್ಲಿ ಮಾತನಾಡುತ್ತ "ನಮ್ಮ ಕೆಂಪು ಕಡಸು ಒದೆಯಿತು" ಎಂದನು. ಸೀತಾಲಕ್ಷ್ಮಿಯು "ಇದೇನು? ಈಗ ಕತ್ತೆ ಒದೆಯಿತು ಎಂದಿರಲ್ಲ" ಎಂದಳು. ಕೃಷ್ಣನು ಒಂದೇ ಗಳಿಗೆ ಯೋಚಿಸಿ "ಅದು ಕತ್ತೆಯಲ್ಲದೆ ಇನ್ನೇನು? ಇಲ್ಲದಿದ್ದರೆ ನನ್ನನ್ನು ಯಾಕೆ ಒದೆಯುತ್ತಿತ್ತು?" ಎಂದನು. ಎಲ್ಲ ಮಾತುಗಳನ್ನು ಕೇಳುತ್ತಿದ್ದ ಸೀತಾಲಕ್ಷ್ಮಿಗೆ ನಗೆ ಬಂತು. ರಾಮನ ಮಗ ನಾರಾಯಣನು "ಅದು ಚಿಕ್ಕಪ್ಪ. ಅದರ ಹತ್ತಿರ ಒದೆಸ್ಕೊಂಡು ಸುಮ್ಮನೆ ಬಿಟ್ಟು ಬಿಟ್ರಿ. ಹಿಡಿದು ಕಟ್ಟಿಹಾಕಬೇಕಾಗಿತ್ತು" ಎಂದನು. ಕೃಷ್ಣನು "ಅದು ಬಲು ಜೋರಿನದಪ್ಪ. ಕಟ್ಟಿಹಾಕಲು ಸಿಕ್ಕಲಿಲ್ಲ" ಎಂದನು. (ಪುಟ ೧೫೩)

ಅನುಭವಪೂರ್ಣವಾದ ವಾಕ್ಯಗಳನ್ನು ಗಾದೆಗಳನ್ನು ಲೇಖಕರು ಕಾದಂಬರಿಯ ಉದ್ದಕ್ಕೂ ಭೂರಿ ಎರಚಿದ್ದಾರೆ. ಅವುಗಳನ್ನು ಸವಿಯುವುದೇ ಒಂದು ಸೊಗಸು. ಆನಂದ. ಆ ನುಡಿಮುತ್ತುಗಳಲ್ಲಿ ಕೆಲವು ಇವು:

ಆ ತುಂಬು ಸಂಸಾರದ ವೃಕ್ಷಕ್ಕೆ ಅವನೇ ಪುಷ್ಪವಾಗಿ ತೋರುತ್ತಿದ್ದನು. (ಪುಟ ೧೧)

ಸುಂದರರಾಜನಿಗೆ ಬಾಳೆ ಒಂದು ಜೀವನದ ಅಮೃತವಾದ ಸಾರ್ಥಕ ಇತಿಹಾಸ ವಾಗಿ ತೋರುತ್ತಿತ್ತು. (ಪುಟ ೧೧)

ಬಾಳೋನಿಗೆ ಒಂದು ಮಾತು, ಬಾಳೆಗೆ ಒಂದು ಗೊನೆ. (ಪುಟ ೧೨)

ಆಕೆ ಎಲ್ಲಕ್ಕಿಂತ ಹೆಚ್ಚಾಗಿ ನರಸಿಂಹನನ್ನೇ ಉಬ್ಬೆಗೆ ಹಾಕಿದಳು. (ಪುಟ ೩೧)

ಇದ್ದಕ್ಕಿದ್ದಂತೆ ತಾನು ಗರ್ಭಿಣಿಯಾದುದು, ಅವಳಿಗೆ ಅರಿವಾದ ಕೂಡಲೇ ಅವಳು ಸತ್ತಂತೆ ಆದಳು. (ಪುಟ ೫೦)

ಆಗ ಬಂದಿದ್ದವಳು ಜೀವಂತಳಾದ ಸೀತಾಲಕ್ಷ್ಮಿ, ಇವಳೋ ಬದುಕಿದ್ದರೂ ಸತ್ತ ಹೆಣ್ಣು. (ಪುಟ ೬೫)

ಮನುಷ್ಯನ ಸುಖಕ್ಕೆ ಒಂದು ಪರಿಮಿತಿಯುಂಟೆಂದು ತೋರುತ್ತದೆ. (ಪುಟ ೧೦೬)

ಹೆಣ್ಣಿನ ಹೃದಯದ ಅಂತರಾಳದ ಆಸೆಯನ್ನು ಹೆಣ್ಣು ತತ್‌ಕ್ಷಣ ಸ್ವಾಭಾವಿಕ ವಾಗಿ ಕಂಡುಹಿಡಿಯುತ್ತದೆ. (ಪುಟ ೧೩೩)

ಸೀತಾಲಕ್ಷ್ಮಿ ಮನೆಗೆ ಬಂದ ಮೇಲೆ ಮನೆಯಲ್ಲಿದ್ದವರೆಲ್ಲ ಪೂರ್ಣ ಸ್ವಸ್ಥ ರಾದರು. (ಪುಟ ೧೩೭)

ಸೀತಾಲಕ್ಷ್ಮಿ ಚೇಷ್ಟೆಯಿಂದ ಒಂದೆರಡು ಸಲ ಆ ನಗೆಯನ್ನು ಹಿಂದಿರುಗಿಸಿಬಿಟ್ಟಳು. ಅಲ್ಲಿಗೆ ಕೃಷ್ಣನ ಕೆಲಸ ಮುಗಿದೇ ಹೋಯಿತು. (ಪುಟ ೧೫೭)

ಸಿಂಗಾರಮ್ಮ ಊರಿಗೆ ಆಧುನಿಕ ಮನುವಾದಳು. (ಪುಟ ೧೮೮)

ಕಮಲೆ ಏನು ಮಾಡುವುದಕ್ಕೂ ತೋಚದೆ ಹಿತ್ತಲಿಗೂ ಮನೆಗೂ, ಬೆಂಕಿ ಮೇಲೆ ಕುಳಿತ ಬೆಕ್ಕಿನಂತೆ ಓಡಾಡಿದಳು. (ಪುಟ ೧೯೧)

ಈ ವಯಸ್ಸಿಗೆ ನಾಲ್ಕು ಬಾಳಿನ ದುಃಖ ಅನುಭವಿಸಿದೆ. (ಪುಟ ೨೫೫)

ಸೀತಾಲಕ್ಷ್ಮಿ ಆದರ್ಶ ದಾದಿಯಾದಳು. (ಪುಟ ೨೪೯)

ಇದ್ದಾಳಲ್ಲ, ಆ ಚಿನ್ನಾಲಿ ಚಿತ್ರಾಂಗದೆ ಹೊಸ ಡಾಕ್ಟರು ಸೀತಾಲಕ್ಷ್ಮಿ. (ಪುಟ ೨೯೧)

ಯಾರೋ ಒಬ್ಬರು ಕಮಲಮ್ಮನನ್ನು 'ಸತ್ತವರು ಯಾರು?' ಎಂದು ಕೇಳಿದರು. ಕಮಲಮ್ಮ 'ಸಾವಿತ್ರಿ ಸತ್ಯವಾನ' ಎಂದಳು. (ಪುಟ ೩೨೫)

ಉದ್ಧರಿಸುವುದಕ್ಕೆ ಯೋಗ್ಯವಾದ ಇಷ್ಟೇ ವಾಕ್ಯಗಳು ಕಾದಂಬರಿಯಲ್ಲಿ ಇರುವುವೆಂದಾಗಲೀ, ಉದ್ಧರಿಸಿದ ಮೇಲಿನ ವಾಕ್ಯಗಳೆಲ್ಲ ಉತ್ತಮೋತ್ತಮವೆಂದಾಗಲೀ ಯಾರೂ ತಿಳಿಯಬಾರದು. ಕಥೆಯ ರಚನೆಗೆ ಲೇಖಕರು ಒಂದು ಉಪಕಥೆ (ಕಮಲೆಯ ಕಥೆ ಪುಟ ೧೮೯, ರಾಧೆಯ ಕಥೆ ಪುಟ ೨೪೫), ಒಂದು ವರ್ಣನೆ, ಒಂದು ಲೋಕಾನುಭವ, ಒಂದು ಚತುರೋಕ್ತಿ ಇವೇ ಮುಂತಾದ ಅಸ್ತ್ರಗಳನ್ನು ಹೇಗೆ ಬಳಸಿಕೊಳ್ಳುವರೆಂಬುದಕ್ಕೆ ಮೇಲಿನ ಉದಾಹರಣೆಗಳನ್ನು ಕೊಟ್ಟದ್ದಾಯಿತು. ಯಾವ ಒಂದು ಸಾಹಿತ್ಯಕೃತಿಯ ಸಂಪೂರ್ಣ ರಸಾಸ್ವಾದನ ದೊರಕಬೇಕಾದರೆ ಸಮಗ್ರ ಕೃತಿಯನ್ನೇ ಸಾವಧಾನವಾಗಿ ವಾಚನ ಮಾಡಬೇಕು. ಗ್ರಂಥದಲ್ಲಿರುವ ರಸಸ್ಥಾನಗಳಾವುವು, ದೋಷಗಳೇನು ಎನ್ನುವುದನ್ನು ತೋರಿಸುವುದಕ್ಕೆ ವಿಮರ್ಶೆಯಾಗಲೀ ಅವಲೋಕನವಾಗಲೀ ದಾರಿಗಂಬವಾಗಬಲ್ಲುದೇ ಹೊರತು ಅದೇ ಕೃತಿಯ ಸ್ಥಾನವನ್ನು ಆಕ್ರಮಿಸಲಾರದಷ್ಟೆ. 'ಊರ್ವಶಿ' ಎಂಬ ಕಾದಂಬರಿ ರಸಸ್ಯಂದಿಯಾದ ಕೃತಿ, ಮತ್ತೆ ಮತ್ತೆ ಓದಿ ಆನಂದಿಸಬೇಕಾದ ಕೃತಿ, ಕನ್ನಡ ಕಾದಂಬರಿಗಳಲ್ಲಿ ಇದೊಂದು ಗಟ್ಟಿಕಾಳು ಎಂಬುದನ್ನು ತಿಳಿಸಲು ಇಷ್ಟು ಮಾತನ್ನು ಹೇಳಬೇಕಾಯಿತು. ಕಾದಂಬರಿಯ ವಸ್ತು ಹಳೆಯ ಕಾಲಕ್ಕೆ ಸೇರಿದ್ದು ಎಂದು ನವ್ಯಪಂಥದವರು ಇದಕ್ಕೆ ದೋಷಾರೋಪಣೆ ಮಾಡುವರೇನೋ! ಲೇಖಕನು ಸಾಮಾಜಿಕ ಕಾದಂಬರಿಗೆ ತನ್ನ ಕಾಲದ ತನ್ನ ಸುತ್ತಮುತ್ತಲ ಬದುಕನ್ನು ತಾನೆ ಆಯ್ದುಕೊಳ್ಳಬೇಕು? ಅದು ಸಾರ್ವಕಾಲಿಕಮೌಲ್ಯಗಳನ್ನು ಯಾವ ಪ್ರಮಾಣದಲ್ಲಿ ಒಳಗೊಂಡು ಅಭಿವ್ಯಕ್ತವಾಗಿದೆಯೆನ್ನುವುದು ಮುಖ್ಯವಾದ ಅಂಶ. ಈ ದೃಷ್ಟಿಯಿಂದ ಪರಿಶೀಲಿಸಿದಾಗಲೂ ಈ ಕಾದಂಬರಿ ಉನ್ನತಮಟ್ಟದಲ್ಲಿ ತೇರ್ಗಡೆಯಾಗುವುದೆನ್ನುವುದು ಇಲ್ಲಿ ಗಮನಾರ್ಹವಾದ ಅಂಶ.

ನೀತಿಬೋಧೆ ಸಾಹಿತ್ಯದ ಪ್ರಮುಖವಾದ ಉದ್ದೇಶವೇನಲ್ಲ. ಅವ್ಯಕ್ತವಾಗಿ ಅದು ವಾಚಕನ ಮೇಲೆ ಪ್ರಭಾವ ಬೀರಿದರೆ ಪರಿಣಾಮವನ್ನುಂಟುಮಾಡಿದರೆ ಅದು ಗ್ರಾಹ್ಯವೇ. ಈ ಮಾತು ಕಾದಂಬರಿಗೂ ಅನ್ವಯಿಸುತ್ತದೆ. ಒಂದು ಶ್ರೇಷ್ಠ ಕಾದಂ

ಬರಿ ಬರಿಯ ಕಥೆ ಹೇಳುವುದರಲ್ಲಿಯೇ ತೃಪ್ತಿ ಹೊಂದುವುದಿಲ್ಲ. ಅದು ತನ್ನ ಗರ್ಭದಲ್ಲಿ ಒಂದು ತತ್ವವನ್ನೋ ಸಂದೇಶವನ್ನೋ ಹುದುಗಿಸಿಕೊಂಡಿರುತ್ತದೆ. ಹಾಗಾದರೆ ಊರ್ವಶಿ ಕಾದಂಬರಿಯಿಂದ ಮಥಿತವಾಗುವ ತತ್ವವೇನು? ಅದು ಬೀರುವ ಸಂದೇಶ ವೇನು? ಸ್ವಾರ್ಥಮಯವಾದ ಈ ಜಗತ್ತಿನಲ್ಲಿ ತ್ಯಾಗಮಯ ಜೀವನದಿಂದ ಬರುವ ಶಾಂತಿ ಮತ್ತಾವುದರಿಂದಲೂ ಬರುವುದಿಲ್ಲವೆಂಬುದನ್ನು ಈ ಕಾದಂಬರಿ ಹೇಳುವಂತೆ ತೋರುತ್ತದೆ. ಸೀತಾಲಕ್ಷ್ಮಿ ಶ್ರೀಮಂತನನ್ನೇನೂ ಕೈಹಿಡಿಯಲಿಲ್ಲ. ನರಸಿಂಹ ಅವಳನ್ನು ಕೂಡಿದ ಮೇಲಂತೂ ಹೆತ್ತ ಮನೆಯಲ್ಲಿ ಅತ್ತೆಯ ಮನೆಯಲ್ಲಿ ಅವಳ ಬಾಳು ನರಕ ವಾಯಿತು. ಈ ಬಾಳನ್ನು ಸಹನೆಯಿಂದ ಸಹಿಸಿಕೊಂಡ ಆಕೆ ತನ್ನ ಪಿಟೀಲು ವಿದ್ಯೆ ಯಿಂದ ಗಂಡನನ್ನು ಬದುಕಿಸಿಕೊಂಡಳು. ಪ್ರಾಣಾಚಾರ್ಯರಿಂದ ತಾನು ಕಲಿತ ಆಯುರ್ವೇದ ವಿದ್ಯೆ ಒಂದೆರಡು ಜೀವಗಳನ್ನಾದರೂ ಉಳಿಸಲು ಸಾಧ್ಯವಾಯಿತಲ್ಲ ಎಂದು ಅವಳ ಮನಸ್ಸಿಗೆ ಎಷ್ಟೊಂದು ನೆಮ್ಮದಿ! ಕಮಲಮ್ಮ ವಿಧವೆ; ಜೀವನೋ ಪಾಯಕ್ಕಾಗಿ ಉಪಾಧ್ಯಾಯ ವೃತ್ತಿಯನ್ನು ಹಿಡಿದವಳು. ತಾನು ಕಲಿತ ಪಿಟೀಲು ವಿದ್ಯೆಗೆ ಸೀತಾಲಕ್ಷ್ಮಿಯೇ ತಕ್ಕ ಪಾತ್ರವೆಂದರಿತು, ಅವಳಲ್ಲಿ ಕನಿಕರಿಸಿ, ನಿರ್ವಂಚನೆ ಯಿಂದ ಅವಳಿಗೆ ತನ್ನ ವಿದ್ಯೆಯನ್ನು ಧಾರೆಯೆರೆದು, ಅವಳನ್ನು ಸಮಾಜಸೇವೆಗೆ ತೊಡಗಿಸಿದ ಮಹಾನುಭಾವೆ. ಪಾಶ್ಚಾತ್ಯ ವೈದ್ಯದಿಂದ ನಮ್ಮ ಜನ ಉದ್ಧಾರವಾಗು ವುದು ಕಷ್ಟ ಎಂಬುದನ್ನರಿತ ಪ್ರಾಣಾಚಾರ್ಯರು ಧನ್ವಂತರೀ ಆಶ್ರಮವನ್ನು ಸ್ಥಾಪಿಸಿ, ತಾವೂ ತಮ್ಮಂತೆ ಇತರರನ್ನೂ ಸಮಾಜ ಸೇವೆಗೆ ತೊಡಗಿಸಿದವರು. ಸೀತಾಲಕ್ಷ್ಮಿ, ಕಮಲಮ್ಮ, ಪ್ರಾಣಾಚಾರ್ಯರಂತಹ ವ್ಯಕ್ತಿಗಳು ಕತ್ತಲಲ್ಲಿ ಮಿನುಗುವ ನಂದಾದೀಪ ಗಳು. ಮನೆಗಿಂತ ದೇಶ ಮುಖ್ಯ, ವ್ಯಕ್ತಿಗಿಂತ ಸಮಾಜ ಮುಖ್ಯ ಎಂಬ ತತ್ವವನ್ನು ಸಾರಿ ಮಹಾತ್ಮಾ ಗಾಂಧಿಯವರು ನಾಡಿಗೆ ಸ್ವಾತಂತ್ರ್ಯವನ್ನು ತಂದರು. ಗಾಂಧಿಯವರ ಬಳಿ ಇದ್ದು, ಆ ತತ್ವಗಳಲ್ಲಿ ನಂಬಿಕೆಯನ್ನಿಟ್ಟು ಅವುಗಳನ್ನು ಆಚರಿಸು ತ್ತಿರುವ ಶ್ರೀಯುತರು, ಆ ತಲೆಮಾರಿನ ಜನರ ನಂಬಿಕೆಗಳ ಭಾಗವನ್ನು ಕಾದಂಬರಿ ಯಲ್ಲಿ ಹಿಡಿದಿಟ್ಟಿದ್ದಾರೆಂದು ನನ್ನ ಅನಿಸಿಕೆ.

ವೇದಾಧ್ಯಯನಸಂಪನ್ನರಾಗಿ, ಊರಿಗೆ ಮಾರ್ಗದರ್ಶನ ಮಾಡಬೇಕಾಗಿದ್ದ ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬಗಳು ಹೇಗೆ ಅಧೋಮಾರ್ಗಕ್ಕೆ ಅಡಿಯಿಟ್ಟಿವೆ ಎಂಬ ಚಿತ್ರವನ್ನು ಇಲ್ಲಿ ಕಾಣಬಹುದು. ಇಲ್ಲಿಯ ಜನರಿಗೆ ವಿದ್ಯೆಯಿಲ್ಲ; ವಿದ್ಯೆ ಕಲಿ ಯಲು ಅನುಕೂಲ ಉಪಪತ್ತಿಗಳಿಲ್ಲ; ಆಸಕ್ತಿ ಇಲ್ಲ. ಅಪ್ಪ ಹಾಕಿದ ಆಲದಮರ ಎಂಬಂತೆ ಪಿತ್ರಾರ್ಜಿತವಾಗಿ ಬಂದ ಭೂಮಿಗೆ ಜೋತುಬಿದ್ದು, ಅದರ ಅದನ್ನು ಸ್ವಂತ ವಾಗಿ ವ್ಯವಸಾಯ ಮಾಡದೆ, ರೈತ ಕೊಟ್ಟಷ್ಟರಿಂದ ತೃಪ್ತರಾಗಿ ಸೋಮಾರಿಗಳಾಗಿ ಕಾಲಕಳೆಯುವುದು ಇವರಿಗೆ ಬಂದಿರುವ ರೋಗ. ಮಾಡಲು ಕೆಲಸವಿಲ್ಲದೆ ಮೂಢ ನಂಬಿಕೆಗಳಿಗೆ ಆಕರವಾಗಿರುವ ಇವರಿಂದ ಇತರರಿಗೆ ಆಗುವುದು ನರಕಹಿಂಸೆ. ಅರ್ಥ ವಿಲ್ಲದ ಸಂಪ್ರದಾಯಗಳು ನಮ್ಮ ಜನರನ್ನು ಕಿತ್ತು ತಿನ್ನುತ್ತಿವೆ. ಈ ವಿಷಯದಲ್ಲಿ

ನಾವು ಅನೇಕ ವೇಳೆ ಶಾಸ್ತ್ರಗಳನ್ನು ದೂರುವುದುಂಟು. ಇದು ಸರಿಯಲ್ಲ. ಏಕೆಂದರೆ, ತಪ್ಪು ಶಾಸ್ತ್ರದ್ದಲ್ಲ, ನಮ್ಮದು. ಮಹರ್ಷಿಗಳಿಂದ ಪ್ರಣೀತವಾದ ಶಾಸ್ತ್ರಗಳು ದೇಶ ಕಾಲಗಳನ್ನು ಗಮನಕ್ಕೆ ತೆಗೆದುಕೊಂಡು ವಿಧಿ ನಿಷೇಧ ಪ್ರಾಯಶ್ಚಿತ್ತಗಳನ್ನು ವಿಧಿಸಿವೆ. ತೊಂದರೆಯಾಗಿರುವುದೆಲ್ಲ ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಅರ್ಥ ಮಾಡಿಕೊಂಡ ಅಂಶಗಳನ್ನು ಬಾಳಿಗೆ ಉದಾರವಾಗಿ ಅನ್ವಯಿಸದೆ ಇರುವ ಸಂಪ್ರದಾಯ ಬದ್ಧ ಮೂಢರಿಂದ. ಇಂಥವರಿಂದ ವ್ಯಕ್ತಿ ಜೀವನ ಹೇಗೆ ಎಷ್ಟರಮಟ್ಟಿಗೆ ನರಕವಾಗಬಲ್ಲ ದೆಂಬುದನ್ನು ಕಾದಂಬರಿ ಚಿತ್ರಿಸುತ್ತದೆ. ತಿಳಿಯದ ಮೂಢರ ಮಾತು ಹಾಗಿರಲಿ; ವಿದ್ಯಾವಂತರೂ ಕೂಡ ತಮ್ಮ ವಿದ್ಯೆ ಬಡವರ ಸೇವೆಗೆ ಮೀಸಲು ಎಂಬ ತತ್ವವನ್ನು ಮರೆತು ಹಳ್ಳಿಗರನ್ನು ಬಡವರನ್ನು ಶೋಷಿಸುವುದು ತುಂಬ ವಿಷಾದಕರವಾದ ಅಂಶ. ಕಾದಂಬರಿಯಲ್ಲಿ ರೂಪಿತರಾಗಿರುವ ಡಾಕ್ಟರುಗಳೇ ಇದಕ್ಕೆ ಉದಾಹರಣೆ. ಅವರ ಸ್ವಾರ್ಥ, ವಿಷಯದ ರಿಕ್ತತೆ, ನಿಷ್ಕರುಣೆ ಇವುಗಳೊಂದಿಗೆ ಪ್ರಾಣಾಚಾರ್ಯರ ಸ್ವಾರ್ಥತ್ಯಾಗವನ್ನು ಹೋಲಿಸಬಹುದು. ಪಾಶ್ಚಾತ್ಯ ವೈದ್ಯಶಾಸ್ತ್ರವನ್ನು ಕಲಿತವರಿಗೆ ಹಣವೊಂದೇ ಮುಖ್ಯವೇ? ಕರುಣೆ ಇಲ್ಲವೇ? ಲೇಖಕರು ಕೇಳುವ ಪ್ರಶ್ನೆಗೆ ಈ ವೈದ್ಯರಿಂದ ಸೇವೆ ಪಡೆವವರು ಉತ್ತರ ಹೇಳಬೇಕು. ಮನುಷ್ಯ ಮನುಷ್ಯನೇ. ಅವನು ಯಾವ ಜಾತಿ ಮತ ಪಂಥದವನಾದರೇನು? ಅವನಲ್ಲಿ ಎಲ್ಲ ಪ್ರಾಣಿಗಳ ದುರ್ಗುಣಗಳು ಮನೆಮಾಡಿಕೊಂಡಿರುವಾಗ ಶೋಷಣೆಯ ಆಸೆ ಸ್ವಾರ್ಥಗಳು ಅವನಿಂದ ಹೇಗೆ ಮಾಯವಾದಾವು? ಎರಡು ಕಾಲುಗಳನ್ನು ಭೂಮಿಯಿಂದ ಕೀಳಲಾರದ ಆರಡಿ ಮನುಷ್ಯನ ಮನಸ್ಸು ಆಕಾಶಕ್ಕೆ ಬೆಳೆದಾಗಲೇ ಅವನ ಉದ್ಧಾರ. ಸಂಗೀತ ಸಾಹಿತ್ಯ ಗಳಿಂದ ಮನಸ್ಸನ್ನು ಸಂಸ್ಕಾರಗೊಳಿಸಿಕೊಂಡು, ಜೀವನದ ಆವಶ್ಯಕತೆಗಳನ್ನು ಕಡಮೆ ಮಾಡಿಕೊಂಡು, ಸೇವಾ ಮನೋವೃತ್ತಿಯನ್ನು ಬೆಳೆಸಿಕೊಂಡವರಿಂದಲೇ ನಮ್ಮ ನಾಡಿನ ಹಳ್ಳಿಗಳ ಉದ್ಧಾರ ಎಂಬ ತತ್ವವನ್ನು ಲೇಖಕರು ಕಾದಂಬರಿಯ ಮೂಲಕ ಸಾರು ತ್ತಿರುವಂತೆ ಕಾಣುತ್ತದೆ.

ಬಡವರ ಹಳ್ಳಿಗರ ಶೋಷಣೆ ವಿದ್ಯಾವಂತರಿಗೇ ಏನು ಮೀಸಲಾಗಿಲ್ಲ. ಶ್ರೀಮಂತ ರೆನಿಸಿಕೊಂಡವರೂ, ಸಾಹುಕಾರರೂ ಈ ಶೋಷಣೆಯ ಪಾಪದಲ್ಲಿ ಭಾಗಿಯಾದವರೇ. ಇಲಿ ಅಲ್ಪಪ್ರಾಣಿ; ಅದರ ಕ್ಷೇತ್ರ ಕಿರಿದು; ಆದರೆ ಅದು ಮಾಡುವ ಹಾವಳಿ ಅಲ್ಪ ವೇನಲ್ಲ. ಇಲ್ಲಿನ ಆವರಣದಲ್ಲಿ ಬರುವ ವ್ಯಕ್ತಿಗಳು ಇಲಿಗಳಂತೆ. ಸಾಹುಕಾರ್ ಅಪ್ಪಾಜಿ ಇದಕ್ಕೆ ಉತ್ತಮ ಉದಾಹರಣೆ. ಬಡ್ಡಿ ವ್ಯವಹಾರ, ಹರಾಜು, ಕೋರ್ಟುಗಳಿಲ್ಲದಿದ್ದರೆ ಇವನಿಗೆ ಊಟ ಸೇರುತ್ತಿರಲಿಲ್ಲವೇನೋ! ನಿರ್ದಾಕ್ಷಿಣ್ಯ ವೃತ್ತಿಯ ಇವನಿಂದ ಎಷ್ಟು ಮನೆ ಬೆಳಕುಗಳು ನಂದಿದುವೋ! ದುಡ್ಡೇ ದೇವರೆಂದು ಭಾವಿಸುವವರಿಗೆ ಹೇಳತಕ್ಕದ್ದೇನಿದೆ? ನೊಂದವರ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವಂತೆ, ಸಮಾಜದಲ್ಲಿ ಕಂಡುಬರುವ ಅನ್ಯಾಯಗಳನ್ನು ನೋಡಿ ಲೇಖಕರು ಟೀಕಿಸಿದ್ದಾರೆ. ಅವು ತೀವ್ರವೆಂದು ತೋರಿದಾಗ ಉರಿದೆದ್ದಿದ್ದಾರೆ. ಆದರೆ ಒಂದು

ವಿಷಯ. ಯಾವ ಸಂದರ್ಭದಲ್ಲಿಯೇ ಆಗಲಿ ಎಲ್ಲಿಯೇ ಆಗಲಿ ಯಾವ ವಿಷಯದಲ್ಲಿಯೇ ಆಗಲಿ ಲೇಖಕರ ವಿಷದ ಮುಳ್ಳು ಕಂಡುಬಾರದು.

ಮೂರು ನಾಲ್ಕು ದಶಕಗಳ ಹಿಂದಿನ ಮಾಸಿದ ಹಳ್ಳಿಯ ಚಿತ್ರ ಇಲ್ಲಿದೆ ಎಂದು ಯಾರಾದರೂ ಆಕ್ಷೇಪಿಸಿದರೆ, ಈ ಆಕ್ಷೇಪಣೆಗೆ ಉತ್ತರ ಇಷ್ಟೆ. ದೇಶದ ಜೀವನಾಡಿಗಳಂತಿರುವ ಹಳ್ಳಿಗಳನ್ನು ತೊರೆದು, ಪಟ್ಟಣಿಗರಾದ ನಾವು ಗಂಟೆಗೆ ಅರವತ್ತು ಮೈಲಿಗಳಂತೆ ಧಾವಂತದಿಂದ ಓಡುತ್ತಿದ್ದೇವೆ. ಹಳ್ಳಿಗಳಿಗೆ ಹೋದರೆ ಇಂದಿಗೂ ಕಾದಂಬರಿಯಲ್ಲಿ ಕಾವ್ಯಮಯವಾದ ರೀತಿಯಲ್ಲಿ ವರ್ಣಿತವಾದ ಜೀವನ ದರ್ಶನವಾದೀತು! ಹಣವಂತರಿಂದ ಬಡವರ ಶೋಷಣೆ, ವಿದ್ಯಾವಂತರ ದಬ್ಬಾಳಿಕೆ, ಬಡತನದ ಕಷ್ಟಕಾರ್ಪಣ್ಯಗಳು, ಅತ್ತೆಸೊಸೆಯರ ಜಗಳ—ಇವು ಎಲ್ಲ ಕಾಲದ ಸಾಮಾಜಿಕ ಸಮಸ್ಯೆಗಳು. ಇವು ಜೀವಂತವಾಗಿರುವವರೆಗೆ ಕಾದಂಬರಿಯ ಸ್ವಾರಸ್ಯ ಹೇಗೆ ತಾನೆ ಮಂಕಾದೀತು?

ಈ ಪ್ರಬಂಧವನ್ನು ಮುಕ್ತಾಯಗೊಳಿಸುವ ಮುನ್ನ ಒಂದೆರಡು ಸಣ್ಣ ಅಂಶಗಳನ್ನು ನಿರೂಪಿಸಿದರೆ ಅನುಚಿತವಾಗಲಾರದು. ಮೊದಲನೆಯದಾಗಿ ರಾಮಸ್ವಾಮಿ ಅಯ್ಯಂಗಾರರ ಕೃತಿಗಳಲ್ಲಿ ಹೇಮಾವತಿಯ ನದಿ ಹಾಸುಹೊಕ್ಕಾಗಿ ಬಂದಿದೆ. ಅದನ್ನು ಅವರು ತಮ್ಮ ಲೇಖನಿಯ ಮೂಲಕ ಅಮೃತವನ್ನಾಗಿಸಿದ್ದಾರೆ. ಹೇಮಾವತಿಯ ಹಾಲಿನಂಥ ನೀರು, ಅದರ ಮೇಲಿರುವ ಸೇತುವೆ, ಅದರ ಎರಡು ದಡದಲ್ಲಿರುವ ನಂದನದಂಥ ವನಗಳು, ನದಿಯನ್ನು ಆಶ್ರಯಿಸಿರುವ ಜನ ಜಾನುವಾರುಗಳು ಇವೇ ಮೊದಲಾದುವುಗಳ ವರ್ಣನೆಗಳನ್ನು ಓದಿದಾಗ, ಈ ನದಿಯನ್ನು ಆಶ್ರಯಿಸಿರುವ ಸಮಸ್ತವೂ ಧನ್ಯ, ಇವುಗಳನ್ನು ಚಿತ್ರದಲ್ಲಿ ಬರೆದಂತೆ ತಮ್ಮ ಕೃತಿಗಳಲ್ಲಿ ವರ್ಣಿಸಿರುವ ಈ 'ಹೇಮಾವತಿಯ ವರಪುತ್ರ'ನೂ ಧನ್ಯ ಎಂಬ ಭಾವನೆ ಮೂಡಿ, ನಮಗೆ ಈ ಭಾಗ್ಯವಿಲ್ಲವಲ್ಲ ಎಂಬ ಸಾತ್ವಿಕವಾದ ಕರುಬು ಲೇಖಕರ ವಿಷಯದಲ್ಲಿ ಮೂಡುತ್ತದೆ. ಈ ಕಾದಂಬರಿಯಲ್ಲಿಯೂ ಹೇಮಾವತಿಯ ಮಂಜುಳ ನಿನಾದ ಕೇಳಿಬರುತ್ತದೆ. ಮಲ್ಲಿಗೆಹಳ್ಳಿ ರಂಭಾಪುರಗಳು ಇರುವುದು ಈ ನದಿಯ ದಡಗಳ ಮೇಲೆ. ತನ್ನ ಅಕ್ಕಪಕ್ಕದ ಕ್ಷೇತ್ರಗಳಿಗೆ ಈ ಎರಡು ಗ್ರಾಮಗಳ ಸ್ತ್ರೀಯರಿಗೆ ಈ ನದಿವಿಹಾರ ಕ್ಷೇತ್ರ. ತಮ್ಮ ತಮ್ಮ ಮನೆಗಳ ಸಮಸ್ಯೆಗಳನ್ನೂ ಇತರರ ಗೃಹಕೃತ್ಯಗಳ ಸಮಸ್ಯೆಗಳನ್ನೂ ಸ್ತ್ರೀಯರು ಇಲ್ಲಿ ಪರಿಹರಿಸುತ್ತಾರೆ. ಯಾರ ಆತಂಕವೂ ಇಲ್ಲದೆ ಇಲ್ಲಿ ಸ್ತ್ರೀಪರಿಷತ್ತು ಸೇರುತ್ತದೆ. ಯಾವ ಭೇದವನ್ನೂ ಎಣಿಸದೆ ಹೇಮಾವತಿ ಆಬಾಲವೃದ್ಧರಿಗೆ ಆಶ್ರಯ ಕೊಡುತ್ತಾಳೆ—ಅದರಿಂದ ಒಳ್ಳೆಯದಾಗಲಿ, ಕೆಟ್ಟದ್ದಾಗಲಿ. ಒಮ್ಮೆ ಸೀತಾಲಕ್ಷ್ಮಿಯೂ ಈ ಜನ್ಮ ರೋಸಿ ಹೇಮಾವತಿಯ ಆಶ್ರಯವನ್ನು ಬಯಸಿದಳು. ಆದರೆ ಅದು ಸಿಗಲಿಲ್ಲ. ದೂರದ ಕಾವೇರಿ ಸೀತಾಲಕ್ಷ್ಮಿಗೆ ಆಶ್ರಯ ಕೊಡಬಯಸಿದಾಗ ಹೇಮಾವತಿಗೆ ಅದು ಹೇಗೆ ತಾನೆ ದಕ್ಕೀತು? ಒಂದು ಮಾತಿನಲ್ಲಿ ಹೇಳಬಹುದಾದರೆ ಹೇಮಾವತಿ ನದಿ ಕಾದಂಬರಿಯ ಒಂದು ಅವಿಭಾಜ್ಯ ಅಂಗವಾಗಿ ಅದನ್ನು ಕಾಂತಿಗೊಳಿಸಿದೆ.

ಸಂಸ್ಕೃತವನ್ನು ಚೆನ್ನಾಗಿ ಬಲ್ಲ ವಿದ್ವಾಂಸರಿಗೆ 'ಊರ್ವಶಿ' ಎಂಬ ಪದದ ಪ್ರಯೋಗ

ಅಸಾಧುವಾಗಿ ಕಾಣಬಹುದು. ಯಾವುದೋ ಒಂದು ಸೌಲಭ್ಯಕ್ಕಾಗಿ ತನಗೆ ಪ್ರಿಯ ವಾದುದನ್ನು ಜನತೆ ಅಸಾಧುಗೊಳಿಸುತ್ತದೆ; ಅಸಾಧುವಾದುದನ್ನು ಸಾಧುವೆಂದು ಒಪ್ಪಿ ಕೊಳ್ಳುವಂತೆ ಒತ್ತಾಯಪಡಿಸುತ್ತದೆ. ಇದರಿಂದ ಈ ಪದದ ಪ್ರಯೋಗ ಸಾಧುವಾದು ದೆಂದು ವಾದ ಮಾಡುತ್ತಿಲ್ಲ. ಈ ಪದದ ಪ್ರಯೋಗಕ್ಕೆ ಕುಮಾರವ್ಯಾಸ ಮಹಾ ಕವಿಯ ಬೆಂಬಲವಿದೆಯೆಂಬ ಅಂಶವನ್ನು ಮಾತ್ರ ಇಲ್ಲಿ ತಿಳಿಸಬಯಸಬಹುದು.

ಕಾದಂಬರಿಯ ಹೆಸರಿನ ಔಚಿತ್ಯವನ್ನು ಕುರಿತು ಒಂದು ಮಾತು. ಊರ್ವಶಿ ದೇವ ಲೋಕದ ಗಣಿಕೆ. ಅವಳ ಹೆಸರನ್ನು ಕೇಳಿದೊಡನೆಯೇ ಅವಳ ಮೋಹಕ ರೂಪ ನಮ್ಮ ಮನಸ್ಸಿನಲ್ಲಿ ಮಿಂಚಿ ಮಾಯವಾಗುತ್ತದೆ. ಅವಳ ಸೌಂದರ್ಯಕ್ಕೆ ಮರುಳಾಗಿ, ಊರ್ವಶಿಯ ಸಮಯಕ್ಕಾಗಿ ಜಯಂತ ನಳಕೂಬರು ವರ್ಷಗಟ್ಟಳೆ ಅವಳ ದ್ವಾರದಲ್ಲಿ ಕಾಯುವರೆಂದ ಮೇಲೆ ಹೆಚ್ಚು ಹೇಳತಕ್ಕದ್ದೇನಿದೆ? ಆದರೆ ಈ ಹೆಸರು ಕಾದಂಬರಿ ಯಲ್ಲಿ ಒಂದು ರೂಪಕ. ಈ ಹೆಸರಿನ ಪಾತ್ರ ಕಾದಂಬರಿಯಲ್ಲಿ ಯಾವುದೂ ಮೂಡಿ ಬಂದಿಲ್ಲ. ಸೀತಾಲಕ್ಷ್ಮಿಯ ರೂಪ ಸೌಂದರ್ಯಗಳು ದೇವಲೋಕದ ಊರ್ವಶಿಯುದ ರಂತೆ ಅದ್ಭುತವಾದುವು. ಆ ಸೌಂದರ್ಯದಿಂದ ಆಕರ್ಷಿತರಾದ ಯುವಕರು ಪತಂಗ ಗಳಂತೆ ಅದರಲ್ಲಿ ಬೀಳಲೆಳಸುವುದೇನೂ ಆಶ್ಚರ್ಯವಲ್ಲ. ಆ ಸೌಂದರ್ಯ ಕಾದಂಬರಿ ಯನ್ನು ಆವರಿಸಿ ಕಾಂತಿಗೊಳಿಸಿದೆ. ಆದರೆ ಸೀತಾಲಕ್ಷ್ಮಿಯ ಆ ಅಸಹಾಯಕವಾದ ಸ್ಥಿತಿಯ ಸಮಯವನ್ನು ಬಿಟ್ಟರೆ, ಆ ಸೌಂದರ್ಯದ ಹಿಂದೆ ಅದಮ್ಯವಾದ ಸಂಯಮ ವಿದೆಯೆಂಬುದು ಗಮನಾರ್ಹ.

ಊರ್ವಶಿಯ ಕಥೆ ನಿನ್ನೆ ಮೊನ್ನೆಯದೇನಲ್ಲ. ಭೂಮಿಯ ಮೇಲೆ ಮನುಷ್ಯನ ಅವತಾರ ಪ್ರಾರಂಭವಾದಂದಿನಿಂದ ಮೊದಲಾದ ಕಥೆ ಅವನ ಅವತಾರ ಸಮಾಪ್ತಿಯಾ ದಾಗಲೇ ಮುಗಿಯುತ್ತದೆ. ಹೆಣ್ಣು ನಿರ್ಬಲಳು ಹಾಗೂ ನಿಸ್ಸಹಾಯಕಳು. ಸದಾ ಎಚ್ಚೆತ್ತ ವಿವೇಕ, ದೈವಾನುಗ್ರಹ ಮಾತ್ರ ಅವಳ ಶೀಲವನ್ನು ರಕ್ಷಿಸಬಲ್ಲುದು—ಕಥೆಯ ಮಥಿತಾರ್ಥ ಇದು.

ಊರ್ವಶಿ ಒಂದು ದೃಷ್ಟಿಯಿಂದ ಕನ್ನಡದ 'ಪುನರುತ್ಥಾನ' ಕಾದಂಬರಿ ಎಂದು ಧಾರಾಳವಾಗಿ ಹೇಳಬಹುದು.

ದುಃಖಿಗಳ ಪಾಪಿಗಳ
ನಾವು ಧಿಕ್ಕರಿಸುವೆವು
  ದೂರ ಅಟ್ಟುವೆವು.
ಅಟ್ಟನಾ ರೀತಿಯಲಿ
  ತಂದೆ, ರಕ್ಷಕನು.
ದೈನ್ಯದಲಿ, ಮೌನದಲಿ
ತನ್ನ ಪಾಪವನೊಪ್ಪಿ
ಮರೆಹೊಗುವನಾಥೆಯನು
ಎದೆಯಲ್ಲಿ ಕೈಮುಗಿಸಿ
  ಅವನ ಬಳಿ ಕಳುಹು.

‘ಮಲೆನಾಡವರು’

ಎಚ್. ಜಿ. ಸೂರ್ಯನಾರಾಯಣ ರಾವ್

‘ಮಲೆನಾಡವರು’ ಎಂಬ ಹೆಸರು ಕೇಳಿದ ತಕ್ಷಣವೇ ಕೂಡಲೇ ಜ್ಞಾಪಕಕ್ಕೆ ಬರುವುದು ಕುವೆಂಪುರವರ ‘ಮಲೆನಾಡಿನ ಚಿತ್ರಗಳು’, ‘ಕಾನೂರು ಸುಬ್ಬಮ್ಮ ಹೆಗ್ಗಡಿತಿ’, ‘ಮಲೆಗಳಲ್ಲಿ ಮದುಮಗಳು’, ಕಾರಂತರ ‘ಬೆಟ್ಟದ ಜೀವ’ ಮುಂತಾದವು. ‘ಮಲೆನಾಡವರು’ ಅನುವಾದ ಕೃತಿಯೆಂದರೆ ಸೋಜಿಗವಾಗಬಹುದು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಜಗದ್ವಿಖ್ಯಾತ ರಷ್ಯನ್ ಕಾದಂಬರಿಕಾರನಾದ ಟಾಲ್‌ಸ್ಟಾಯ್‌ನ ‘ಕಾಸಕ್ಸ್’ (*Cossacks*) ಕಾದಂಬರಿಯನ್ನು ೧೯೪೭ರಲ್ಲಿ ಭಾಷಾಂತರಿಸಿದರು. ಅಲ್ಲಿಂದೀಚೆಗೆ ಟಾಲ್‌ಸ್ಟಾಯ್‌ನ ಪ್ರಸಿದ್ಧ ಕಾದಂಬರಿಯಾದ ‘ರಿಸರಕ್ಷನ್’ನ್ನು ದೇಜಗೌ ಅತ್ಯಂತ ಸಮರ್ಥವಾಗಿ ‘ಪುನರುತ್ಥಾನ’ ಎಂಬ ಹೆಸರಿನಲ್ಲಿ ಕನ್ನಡಿಸಿದ್ದಾರೆ. ‘ಆನಂದ’ರು ಟಾಲ್‌ಸ್ಟಾಯ್‌ನ ಆತ್ಮಚರಿತ್ರೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಹಲವಾರು ಸಣ್ಣ ಕತೆಗಳೂ ಸಹ ಕನ್ನಡಕ್ಕೆ ಭಾಷಾಂತರಿಸಲ್ಪಟ್ಟಿವೆ. ಈ ಅನುವಾದ ಕಾರ್ಯ ರಷ್ಯಾ ಭಾರತಗಳ ಸಾಂಸ್ಕೃತಿಕ ಬಾಂಧವ್ಯವನ್ನು ಅರ್ಥವತ್ತಾಗಿ ಹೆಚ್ಚಿಸಲು ನೆರವಾಗಿದೆ. ನಮ್ಮ ರಾಮಾಯಣ, ಮಹಾಭಾರತಗಳು ರಷ್ಯನ್ ಭಾಷೆಯಲ್ಲಿ ಅನುವಾದಗೊಂಡಿವೆ ಎಂಬುದು ಹೆಮ್ಮೆಯ ವಿಷಯ. ರಷ್ಯನ್ ಭಾಷೆಯಲ್ಲಿರುವ ಉತ್ತಮ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳುತ್ತಿರುವುದು ಈ ದಿಶೆಯಲ್ಲಿ ಶುಭ ಸೂಚನೆ. ಟಾಲ್‌ಸ್ಟಾಯ್‌ನ ಕೃತಿಗಳೆಲ್ಲವನ್ನೂ ಸಮಗ್ರವಾಗಿ ಕನ್ನಡಿಸಬೇಕೆಂದು ಶ್ರೀ ದೇಜಗೌ ‘ಪುನರುತ್ಥಾನ’ದ ಮುನ್ನುಡಿಯಲ್ಲಿ ವ್ಯಕ್ತಪಡಿಸಿರುವ ಸಂಕಲ್ಪ ಟಾಲ್‌ಸ್ಟಾಯ್‌ನ ಮಹತ್ ಕಾದಂಬರಿಗಳಾದ ‘ವಾರ್ ಅಂಡ್ ಪೀಸ್’, ‘ಅನ್ನ ಕೆರಿನೀನಾ’ ಇವನ್ನು ಕನ್ನಡದಲ್ಲಿ ಓದುವ ಭಾಗ್ಯದ ನಿರೀಕ್ಷೆಯನ್ನು ಹುಟ್ಟಿಸಿದೆ. ಈ ಸಾಹಸ ಕಾರ್ಯಕ್ಕೆ ಗೊರೂರರ ‘ಮಲೆನಾಡವರು’ ಎಂಬ ಅನುವಾದ ನಾಂದಿಯಾಗಿದೆ.

ಯಾವ ದೇಶವೇ ಆಗಲಿ ಜನವೇ ಆಗಲಿ ನಿಸರ್ಗದ ಮಡಿಲಲ್ಲಿ ಬೆಳೆಯುವ ಜನರ ಬಾಳು ಒಂದೇ ರೀತಿಯದು ಎಂಬುದು ಈ ಕತೆಯಿಂದ ಗೋಚರವಾಗುತ್ತದೆ. ಟಾಲ್‌ಸ್ಟಾಯ್‌ನ ಕತೆಕಾದಂಬರಿಗಳಲ್ಲಿ ಮಾನವಪ್ರೇಮ, ವಿಶ್ವಾಸ, ಕುಟುಂಬ ಜೀವನದ ನೆಮ್ಮದಿ ಮುಂತಾದ ಬಾಳನ್ನು ಹಸನುಗೊಳಿಸುವ ಮೌಲ್ಯಗಳಿಗೆ ಪ್ರಾಶಸ್ತ್ಯ. ಈ ತತ್ತ್ವಗಳನ್ನೇ ತಮ್ಮ ಸ್ವಂತ ಕೃತಿಗಳಲ್ಲಿಯೂ ಹೃದಯಂಗಮವಾಗಿ ನಿರೂಪಿಸಿರುವ ಗೊರೂರರನ್ನು ಟಾಲ್‌ಸ್ಟಾಯ್ ಕೃತಿಗಳು ಆಕರ್ಷಿಸಿರುವುದು ಆಶ್ಚರ್ಯವೇನಿಲ್ಲ.

ಟಾಲ್‌ಸ್ಟಾಯ್ ಹುಟ್ಟಿದ್ದು ಶ್ರೀಮಂತ ಮನೆತನದಲ್ಲಿ. ತನ್ನ ಯೌವನವನ್ನು ಭೋಗಲೋಲುಪ್ತಿಯಲ್ಲಿ ಕಳೆದು, ಅದು ಬೇಸರವಾಗಿ ಆತನ ಜೀವನದಲ್ಲಿ ಒಂದು ನೈತಿಕ ಕ್ರಾಂತಿಯೇ ಆಯಿತು. ಅನಂತರ ಅವನು ಸರಳ ಜೀವನವನ್ನು ಕೈಗೊಂಡು ರೈತರ ಸೇವೆಗಾಗಿ, ಸಮಾಜದ ಸುಧಾರಣೆಗಾಗಿ ತನ್ನ ಬಾಳನ್ನು ಮುಡಿಪಿಟ್ಟ. ಶ್ರೀಮಂತ ವರ್ಗದ ಬೆಡಗು ಜೀವನದ ಕೃತ್ರಿಮತೆಯಿಂದ ರೋಸಿಹೋಗಿ ಆತನ ಮನಸ್ಸು ಹಳ್ಳಿಗಾಡಿನ ಜನರ ಸರಳತೆಗೆ ಒಲಿಯಿತು. ಆ ಕಾಲದಲ್ಲಿ ಅವನು ಕಾಕಸಸ್ ಪರ್ವತದ ಪ್ರದೇಶಕ್ಕೆ ಸಿಪಾಯಿಯಾಗಿ ಹೋಗಿ ಎರಡು ವರ್ಷ ವಾಸವಾಗಿದ್ದ. ಅಲ್ಲಿನ ಜನರ ಸರಳ ಸುಂದರ ಬಾಳು ಅವನನ್ನು ಮುಗ್ಧಗೊಳಿಸಿತು. ಆ ಕಾಲದಲ್ಲಿ ಅವನ ಪ್ರೇಮ ಜೀವನದಲ್ಲಿಯೂ ಒಂದು ಮಹತ್ತರವಾದ ನಿರಾಶೆಯ ಅನುಭವವುಂಟಾಯಿತಂತೆ. ಆ ಪರ್ವತಗಾಡಿನ ಚೆಲುವೆ ಮರ್‍ಯಾಂಕ ಇವನನ್ನು ಮದುವೆ ಮಾಡಿಕೊಳ್ಳಲು ಒಪ್ಪಲಿಲ್ಲವೆಂದೂ ಇದರಿಂದ ನಿರಾಶನಾಗಿ ರಷ್ಯಾಕ್ಕೆ ಹಿಂತಿರುಗಿದನೆಂದೂ ಪ್ರತೀತಿ. ಅದು ಹೇಗೇ ಇರಲಿ, ಈ ಅವಧಿಯ ಜೀವನದಲ್ಲಿ ಅವನು ಕಂಡು ಆನಂದಿಸಿದ ನಿಸರ್ಗದ ಭವ್ಯ ಸೌಂದರ್ಯ, ಆ ಪರ್ವತ ಪ್ರಾಂತದ ಜನಜೀವನ ‘ಕಾಸಕ್ಸ್’ನಲ್ಲಿ ಚಿತ್ರಿತವಾಗಿದೆ. ಈ ಸರಳಜೀವನವೇ ಅಯ್ಯಂಗಾರರ ಹೃದಯವನ್ನು ಸೂರೆಗೊಂಡಿರುವುದು. ನಮ್ಮ ನಾಡಿನ ಹಳ್ಳಿಯ ಚಿತ್ರಗಳನ್ನು ಕೊಡುವುದರಲ್ಲಿ ಗೊರೂರರು ಸಿದ್ಧಹಸ್ತರು. ಆ ಹಳ್ಳಿಗಾಡಿನ ಬಾಳಿನಲ್ಲಿ ಅವರು ಕಂಡ ಚೆಲುವನ್ನೂ, ಸ್ವಾರಸ್ಯವನ್ನೂ ತಮ್ಮ ರಸವತ್ತಾದ ಶೈಲಿಯಲ್ಲಿ ಬಣ್ಣಿಸಿರುವುದು ಸರಿಯಷ್ಟೆ. ಈ ಸರಳತೆಯ ಸೊಬಗನ್ನು ಕಂಡು ಆನಂದಿಸುವ ಕಣ್ಣಿಗೆ ‘ಕಾಸಕ್ಸ್’ ಕಾದಂಬರಿ ಮನೋಹರವಾಗಿ ಕಂಡುದು ಸಹಜವೇ.

ಅನುವಾದದ ಮುಖ್ಯ ಧ್ಯೇಯ ಧೋರಣೆಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದ್ದರೂ ಒಮ್ಮತ ಕುದುರಿಲ್ಲ. ಕೆಲವರ ಅಭಿಪ್ರಾಯದಲ್ಲಿ ಮೂಲಕೃತಿ ಆ ಕಾಲದ ಓದುಗರ ಮೇಲೆ ಬೀರಿದ ಪ್ರಭಾವವನ್ನೇ ಅನುವಾದವು ಭಾಷಾಂತರಕಾರನ ಸಮಕಾಲೀನರ ಮೇಲೆ ಬೀರಬೇಕು. ಈ ದೃಷ್ಟಿಯಲ್ಲಿ ಅನುವಾದಕನ ಗಮನವೆಲ್ಲಾ ಕೃತಿಯು ಒಟ್ಟು ಪರಿಣಾಮದ ಮೇಲೆ. ಮೂಲಕೃತಿಯ ಪ್ರತಿಯೊಂದು ಮಾತನ್ನೂ ಅನುವಾದದಲ್ಲಿ ತರುವ ಅಗತ್ಯವಿಲ್ಲ. ಈ ನಿಲುವನ್ನು ವಿರೋಧಿಸುವವರ (ಉದಾ : ನ್ಯೂಮನ್) ವಾದ ಹೀಗೆ:

The translator's "first duty is a historical one—to be *faithful*".[1]

[1] ಉದ್ಧೃತ_Matthew Arnold: *Essays*, p. 246.

ಅನುವಾದಕನ ಕರ್ತವ್ಯ ಐತಿಹಾಸಿಕವಾದುದು—ಅದು ಪ್ರಾಮಾಣಿಕವಾಗಿರಬೇಕು. ಮೂಲಕೃತಿಯ ವಿಶಿಷ್ಟ ಅಂಶಗಳೆಲ್ಲಾ ತದ್ವತ್ತಾಗಿ ಅನುವಾದದಲ್ಲಿ ರೂಪುಗೊಳ್ಳಬೇಕು. ಅದು ತರ್ಜುಮೆಗೊಂಡ ಭಾಷೆಗೆ ಒಗ್ಗಲಿ, ಒಗ್ಗದಿರಲಿ, ಅನುವಾದಿತ ಭಾಷೆಯಲ್ಲಿ ಕೆಲವು ಭಾಗಗಳು ಕೃತಕವಾಗಿ, ಒಮ್ಮೊಮ್ಮೆ ವಿಚಿತ್ರವಾಗಿ ಕಂಡರೂ ಆಕ್ಷೇಪವಿಲ್ಲ; ಅವೂ ಸ್ವೀಕಾರಯೋಗ್ಯವೇ. ಮೂಲಕೃತಿಗೆ ವಸ್ತು, ಶೈಲಿ, ನಿರೂಪಣೆ ಮುಂತಾದ ಎಲ್ಲ ಬಗೆಯಲ್ಲಿಯೂ ಪೂರ್ಣ ನಿಷ್ಠೆಯನ್ನು ತೋರಿಸಿದರೆ ಮಾತ್ರ ಅನುವಾದವು ಸಾರ್ಥಕ ಎಂಬುದೇ ಈ ವಾದದ ತಿರುಳು. ಸ್ವಲ್ಪ ಸ್ವಾತಂತ್ರ್ಯ ತೆಗೆದುಕೊಂಡರೂ ಮೂಲಕೃತಿಯ ವೈಶಿಷ್ಟ್ಯಕ್ಕೆ ಕುಂದು ಬರಬಹುದು. ಮ್ಯಾಥ್ಯೂ ಆರ್ನಾಲ್ಡ್ ಎಂಬ ಆಂಗ್ಲ ವಿಮರ್ಶಕ ಹೇಳುವಂತೆ ಒಳ್ಳೆಯ ಅನುವಾದ ಮೂಲಕೃತಿಯೊಡನೆ ತಾದಾತ್ಮ್ಯದಿಂದ ಮಾತ್ರ ಸಾಧ್ಯ:

> It may be said of that union of the translator with his original, which alone can produce a good translation, that it takes place when the mist which stands between them—the mist of alien modes of thinking, speaking, and feeling on the translator's part—'defaecates to a pure transparency', and disappears.[1]

ಮೂಲಕೃತಿಗೂ, ಅನುವಾದಕ್ಕೂ ನಡುವಿನ ಮಂಜು ಕರಗಿ ಹೋಗಬೇಕು. ಅಂದರೆ, ಮೂಲದ ಭಾವನೆಗಳು ಪೂರ್ತಿಯಾಗಿ ಅನುವಾದಕನ ಭಾಷೆಯಲ್ಲಿ ಆವಿಷ್ಕಾರ ಪಡೆದಿರಬೇಕು. ಈ ಹಿತವಚನ ಪ್ರತಿಯೊಬ್ಬ ಅನುವಾದಕನಿಗೂ ಮಾರ್ಗದರ್ಶನ ಕೊಡುವ ವಿವೇಕದ ನುಡಿ.

ಮೂಲಗ್ರಂಥದ ಭಾವ ಸ್ಪಷ್ಟವಾಗುವ ದೃಷ್ಟಿಯನ್ನು ಇಟ್ಟುಕೊಂಡು ಅನುವಾದ ಮಾಡಿದ್ದೇನೆಂದು ಗೊರೂರರು ಮುನ್ನುಡಿಯಲ್ಲಿ ತಿಳಿಸಿದ್ದಾರೆ. 'ಮಲೆನಾಡವರು' ಅಕ್ಷರಶಃ ಭಾಷಾಂತರವಲ್ಲ. ಈ ಅನುವಾದಕ್ಕೆ ಸಂಬಂಧಿಸಿದ ಹಾಗೆ ನಾವು ಗಮನಿಸಬೇಕಾದದ್ದು, 'ಮಲೆನಾಡವರು' ಅನುವಾದದ ಅನುವಾದ. ಮೂಲಕೃತಿಯಿರುವುದು ರಷ್ಯನ್ ಭಾಷೆಯಲ್ಲಿ. ಅದರ ಇಂಗ್ಲಿಷ್ ಭಾಷಾಂತರದಿಂದ ಅಯ್ಯಂಗಾರರು ಕನ್ನಡಿಸಿದ್ದಾರೆ. ಆದ್ದರಿಂದ ಭಾವವನ್ನೇ ಮುಖ್ಯ ಲಕ್ಷ್ಯವಾಗಿಟ್ಟುಕೊಂಡು ಅನುವಾದ ಮಾಡಿರುವುದು ಸಮ್ಮತವಾಗಿದೆ. ಮೂಲಭಾಷೆಯ ಜ್ಞಾನವಿದ್ದು ನೇರವಾಗಿ ಅಲ್ಲಿಂದಲೇ ಅನುವಾದ ಮಾಡಿದ್ದರೆ ಕೃತಿಯ ಸೊಗಸು ಇನ್ನೂ ಹೆಚ್ಚುತ್ತಿತ್ತು ಎನ್ನುವುದು ನಿರ್ವಿವಾದ. ಭಾಷೆಯಿಂದ ಭಾಷೆಗೆ ನುಡಿಗಟ್ಟು, ಭಾಷಾಮರ್ಜಿ ಬದಲಾಯಿಸುವುದರಿಂದ ಅಯ್ಯಂಗಾರರು ಇಂಗ್ಲಿಷ್ ಅನುವಾದ ಕೃತಿಯಲ್ಲಿರಬಹುದಾದ ತೊಡಕುಗಳನ್ನು ಬಗೆಹರಿಸಿಕೊಂಡು ಟಾಲ್‌ಸ್ಟಾಯ್‌ನ ಮೂಲಕೃತಿಯ ಸೊಗಸನ್ನು ಬಟ್ಟಿ ಇಳಿಸುವ ಸಾಹಸವನ್ನು ಮಾಡಿದ್ದಾರೆ. ರಷ್ಯನ್ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಟಾಲ್‌ಸ್ಟಾಯ್‌ನ

[1] ಅದೇ, ಪುಟ ೨೫೧.

'ಕಾಸಕ್ಸ್' ಕಾದಂಬರಿಯನ್ನು ಓದಿರುವವರ ಗೆಳೆಯರಿಂದ ಅಯ್ಯಂಗಾರರ ಪ್ರಯತ್ನ ಯಶಸ್ವಿಯಾಗಿದೆಯೆಂದು ಕೇಳಿ ತುಂಬಾ ಸಂತೋಷಪಟ್ಟಿದ್ದೇನೆ. ಇದಕ್ಕೆ ಕಾರಣ ಅಯ್ಯಂಗಾರರು ಟಾಲ್‌ಸ್ಟಾಯ್ ಸಾಹಿತ್ಯ ಅಧ್ಯಯನವನ್ನು ಆಳವಾಗಿ ಮಾಡಿ ಮೂಲಕೃತಿಯ ಹೃದಯವನ್ನು ಚೆನ್ನಾಗಿ ತಿಳಿದುಕೊಂಡಿರುವುದು.

ಟಾಲ್‌ಸ್ಟಾಯ್‌ನ ಈ 'ಕಾಸಕ್ಸ್' ಗ್ರಂಥ ಕುರಿತು ರಷ್ಯಾದ ಶ್ರೇಷ್ಠ ಸಾಹಿತಿ ಟರ್ಗೆನೀವ್ ಹೀಗೆ ಹೇಳಿದ್ದಾನೆ: "ನಾನು ಹೆಚ್ಚುಹೆಚ್ಚಾಗಿ 'ಕಾಸಕ್ಸ್' ಓದಿದಂತೆ, ಇದು ಟಾಲ್‌ಸ್ಟಾಯ್‌ರವರ ಅತ್ಯುತ್ತಮ ಚಿತ್ರ ಎಂಬ ನಂಬಿಕೆ ಹೆಚ್ಚಾಗುತ್ತಿದೆ."[1] ರವೀಂದ್ರನಾಥ ಟಾಗೋರರೂ ಸಹ 'ಕಾಸಕ್ಸ್' "ಶುದ್ಧವಾದ ಪೂರ್ಣವಾದ ಕಲೆ"[2] (pure and perfect art) ಎಂದು ಮೆಚ್ಚಿ ಟರ್ಗೆನೀವ್‌ನ ಪ್ರಶಂಸೆಗೆ ದನಿಗೂಡಿಸಿದ್ದಾರೆ. ಇಂತಹ ಶ್ರೇಷ್ಠ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ಗೊರೂರರು ಉಪಕಾರ ಮಾಡಿದ್ದಾರೆ. ಅನುವಾದಕ್ಕೆ ತಕ್ಕ ಮನೋಧರ್ಮ, ಲೋಕಾನುಭವ ಮತ್ತು ಸಾಹಿತ್ಯ ಪರಿಶ್ರಮ ಈ ಸಾಹಸವನ್ನು ಯಶಸ್ವಿಗೊಳಿಸಿದೆ.

ಟಾಲ್‌ಸ್ಟಾಯ್‌ನ ಕೃತಿಗಳಲ್ಲಿ ಒಂದಲ್ಲ ಒಂದು ಬಗೆಯಲ್ಲಿ ಕಾಣುವ ಜಿಜ್ಞಾಸೆ ಪ್ರೇಮವನ್ನು ಕುರಿತದ್ದು. 'ಕಾಸಕ್ಸ್'ನಲ್ಲಿ ಮಾಸ್ಕೋದ ಕೃತಕ ಜೀವನದಿಂದ ಬೇಸತ್ತ ತರುಣ ಒಲೆನಿನ್ ಪ್ರೀತಿಗಾಗಿ ಹಂಬಲಿಸುತ್ತಾನೆ. ಈ ತರುಣ ಇಪ್ಪತ್ತು ವರ್ಷಗಳ ಕಾಲ ಬಾಳನ್ನು ವ್ಯರ್ಥವಾಗಿ ಕಳೆಯುತ್ತಾನೆ.

ಅವನಿಗೆ ತನ್ನ ಜೀವನದ ಬಗ್ಗೆ ತುಂಬ ಬೇಸರ ಬಂದು ಮಾಸ್ಕೋ ನೆನಪುಗಳನ್ನೇ ಮರೆಯಲು ರಷ್ಯಾ ಸೇನೆಯಲ್ಲಿ ಸಿಪಾಯಿಯಾಗಿ ಸೇರಿ ದೂರದ ಕಾಕಸಸ್ ಪ್ರಾಂತ್ಯಕ್ಕೆ ತೆರಳುತ್ತಾನೆ. ಪ್ರಯಾಣ ಮಾಡುವಾಗ ಇದುವರೆವಿಗೂ ತಾನು ನಡೆಸಿದ ಬಾಳಿನ ನೆನಪುಗಳ ಬುತ್ತಿಯನ್ನು ಮೆಲುಕು ಹಾಕುತ್ತಾನೆ. ಕೈಗೆ ಬಂದ ಹಣವನ್ನೆಲ್ಲಾ ನೀರಿನಂತೆ ಖರ್ಚು ಮಾಡಿದ್ದಾನೆ; ಸಾಲವನ್ನೂ ಮಾಡಿಕೊಂಡಿದ್ದಾನೆ; ಓರ್ವ ತರುಣಿಯ ಪ್ರೇಮಕ್ಕೆ ಸಿಕ್ಕಿ ತಾನು ಅವಳನ್ನು ಪ್ರೀತಿಸಲಾರದೆ ಹೋದನೆಂಬ ನೆನಪು ಇನ್ನೂ ತೀಕ್ಷ್ಣವಾಗಿ ಅವನ ಹೃದಯವನ್ನು ಚುಚ್ಚುತ್ತಿದೆ. ನಿಜವಾದ ಪ್ರೇಮ ಉಂಟೇ? ಪ್ರೇಮ ಬರೀ ಭ್ರಾಂತಿಯೇ? ಈ ಪ್ರಶ್ನೆಗಳು ಇವನನ್ನು ಕಾಡುತ್ತಿವೆ. ತಾನು ಇದುವರೆಗೂ ನಡೆಸಿರುವ ಬಾಳು ನಿರರ್ಥಕವೆಂಬ ಭಾವನೆ ಅವನ ಹೃದಯ ತುಂಬಿದೆ. ತಾನು ವಿಚಿತ್ರವಾದ ವ್ಯಕ್ತಿಯೆಂದು ಅವನಿಗೆ ತೋರಿದೆ. ಕಾರಣವಿಷ್ಟೇ. ಎಲ್ಲರೂ ಹೆಂಗಸಿನಿಂದ ಪ್ರೀತಿಸಲ್ಪಡಬೇಕೆಂಬ ಬಯಕೆಯಿಂದ ಹಾತೊರೆಯುವುದಾದರೆ ಇವನಿಗೆ ಆ ಬಗ್ಗೆಯೇ ಶಂಕೆ ಹುಟ್ಟಿದೆ. ಹೇಗಾದರೂ ಇದನ್ನು ಪರಿಹರಿಸಿಕೊಂಡು ಎಲ್ಲರಂತೆ ಪ್ರೀತಿಸಿ ತನ್ನ ಸುತ್ತಮುತ್ತಲ ಸಮಾಜಕ್ಕೆ ಹೊಂದಿಕೊಳ್ಳಬೇಕೆಂಬ ಆಸೆ ಇವನ ಹೃದಯದಲ್ಲಿ ಮಿಡಿಯುತ್ತಿದೆ. ಅವನು ಹಂಬಲಿಸುವುದು ಹೊಸ ಬಾಳಿಗಾಗಿ.

---

1 ಗೊರೂರ ಮುನ್ನುಡಿಯಿಂದ ಉದ್ಧೃತ; ಪು. ii

2 ಅದೇ.

ಕಾಕಸಸ್‌ಗೆ ಸಿಪಾಯಿಯಾಗಿ ಹೋಗುವ ಅವಕಾಶ ಅವನಿಗೆ ಹೊಸ ನಿರೀಕ್ಷೆಯನ್ನು ಹುಟ್ಟಿಸಿದೆ. ಅವನ ಹಳೆಯ ಜೀವನದ ನೆನಪು ಕೊಡುವ ಪರಿಸರವನ್ನೆಲ್ಲಾ ಮರೆತು ಬಿಡುವ ಅಪೇಕ್ಷೆಗೆ ಇದು ಸದವಕಾಶ. ಚಳಿಗಾಲದ ಒಂದು ರಾತ್ರಿಯನ್ನು ತನ್ನ ಸ್ನೇಹಿತರೊಡನೆ ಹೋಟೇಲಿನಲ್ಲಿ ಕುಡಿತದಲ್ಲಿ ಕಳೆದು ಅವರಿಂದ ಬೀಳ್ಕೊಂಡು ಕುದುರೆ ಗಾಡಿಯಲ್ಲಿ ಪ್ರಯಾಣ ಹೊರಡುತ್ತಾನೆ. ದಕ್ಷಿಣದ ಕಾಕಸಸ್ ಪ್ರಾಂತದ ಹತ್ತಿರ ಹತ್ತಿರ ಹೋಗುತ್ತಾ ಅವನಿಗೆ ಒಂದು ಹೊಸ ಹುರುಪು, ನೆಮ್ಮದಿ ಹುಟ್ಟುತ್ತದೆ. ಮಾಸ್ಕೋ ಜೀವನದ ಕೃತ್ರಿಮತೆ ಹಿಂದೆ ಹಿಂದೆ ಸರಿದಂತೆ ಕಾಕಸಸ್ ಪರ್ವತಗಳ ತಪ್ಪಲಿನ ನೋವ್ಲೊಮ್ಲಿನ್‌ಸ್ಕ್ ಎಂಬ ಹಳ್ಳಿಯಲ್ಲಿ ನೆಲಸುತ್ತಾನೆ. ಆ ಒಂದು ವರ್ಷದ ಅವನ ಅನುಭವವೇ ಈ ಚಿಕ್ಕ ಕಾದಂಬರಿಯ ವಸ್ತು. ಕಾಕಸಸ್ ಪರ್ವತಗಳ ಸೌಂದರ್ಯ, ಆ ಹಳ್ಳಿಗಾಡು ಜನದ ಸರಳತೆ, ಆ ತರುಣಿಯರ ಚೆಲುವು ಅವನ ಹೃದಯವನ್ನು ಸೂರೆಗೊಳ್ಳುತ್ತವೆ. ಒಲೆನಿನ್ ಒಬ್ಬ ಸೈನ್ಯದ ಸೈನ್ಯ ಧ್ವಜಾಧಿಕಾರಿ ಉಪಾಧ್ಯಾಯನ ಮನೆಯಲ್ಲಿ ವಾಸಮಾಡತೊಡಗುತ್ತಾನೆ. ಅವನ ಮಗಳು ಮರ್‍ಯಾಂಕ ಅತ್ಯಂತ ಚೆಲುವೆ. ಮರ್‍ಯಾಂಕಳನ್ನ ನೋಡಿದವರೆಲ್ಲಾ ಅವಳ ರೂಪಕ್ಕೆ ಬೆರಗಾಗುವವರೇ. ಕಾಕಸಸ್ ಸಿಪಾಯಿಯಾಗಿ ಹಳ್ಳಿಯಿಂದ ಕೆಲವು ಮೈಲಿಗಳ ದೂರ ಟೆರೆಕ್ ನದಿಯಾಚೆಯಿಂದ ಗುಡ್ಡದ ಕಾಡುಜನರು ಬಂದು ಹಾವಳಿ ಮಾಡದಂತೆ ನೋಡಿಕೊಳ್ಳುವ ಬುರುಜು ಕಾವಲುಗಾರ ಲುಕಾಷ್ಕ. ಮರ್‍ಯಾಂಕ ಆ ಹಳ್ಳಿಯ ಹುಡುಗಿಯರನ್ನೆಲ್ಲಾ ಚೆಲುವಿನಲ್ಲಿ ಮೀರಿಸಿರುವಳೆಂದೂ, ತನ್ನ ಮಗನಿಗೆ ಅನುರೂಪ ಕನ್ಯೆಯೆಂದೂ, ಅವರಿಬ್ಬರ ಮದುವೆ ಆದಷ್ಟು ಬೇಗ ನಿಶ್ಚಯ ಮಾಡಬೇಕೆಂದೂ ಅವನ ತಾಯಿ ಕಾತುರಪಡುತ್ತಾಳೆ. ಲುಕಾಷ್ಕನೂ ಒಳ್ಳೆ ಸಾಹಸಿಯೆಂದು ಹೆಸರು ಪಡೆದ ರೂಪವಂತ ತರುಣ.

ಮೊದಮೊದಲು ತನ್ನಷ್ಟಕ್ಕೆ ತಾನೇ ಒಬ್ಬಂಟಿಗನಾಗಿದ್ದುಕೊಂಡು 'ಚಿಕ್ಕಪ್ಪ' ಎರೋಷ್ಕ ಎಂಬ ನಿವೃತ್ತ ಸಿಪಾಯಿಯ ಜೊತೆಗೆ ಬೇಟೆಯಲ್ಲಿ ಕಾಲಕಳೆಯುತ್ತಿದ್ದ ಒಲೆನಿನ್‌ಗೆ ಮರ್‍ಯಾಂಕಳಲ್ಲಿ ಅನುರಾಗ ಹುಟ್ಟುತ್ತದೆ. ಅವನಿಗೆ ತಿಳಿಯದೆಯೇ ಅವಳ ರೂಪಕ್ಕೆ ಅವನು ಮಾರುಹೋಗಿದ್ದಾನೆ. ಅವಳ ಸ್ವಚ್ಛಂದ ನಡೆನುಡಿ ಅವನನ್ನು ಮೋಹಗೊಳಿಸುತ್ತದೆ. ಆದರೂ ಲೋಕದಲ್ಲಿ ಪ್ರೇಮವೆಂಬುದು ಸುಳ್ಳೆಂದು ಅವನು ತಿಳಿದಿದ್ದ. ಪ್ರೇಮದ ಸೆಳೆತಕ್ಕೆ ಸಿಗಬಾರದೆಂದೂ, ಪ್ರೇಮಕ್ಕೂ ತನಗೂ ದೂರವೆಂದೂ ಭಾವಿಸಿದ್ದ. ಸಂದರ್ಭಗಳ ಒತ್ತಡದಿಂದ ಒಲೆನಿನ್ ಮತ್ತು ಮರ್‍ಯಾಂಕರ ಪರಿಚಯ ಹೆಚ್ಚಾಗಿ, ಅವಳಲ್ಲಿ ತನಗೆ ಗಾಢವಾದ ಪ್ರೀತಿಯಿದೆ ಎಂಬುದು ಅವನಿಗೆ ಅರಿವಾಗುತ್ತದೆ. ಅದನ್ನು ಕಂಡು ಅವನೇ ಅಚ್ಚರಿಗೊಳ್ಳುತ್ತಾನೆ. ತಾನು ದೊಡ್ಡ ಮನೆತನದವ, ಬೇಕಾದಷ್ಟು ಆಸ್ತಿಪಾಸ್ತಿಗಳುಳ್ಳ ದೊಡ್ಡಸ್ತಿಕೆಯಿಂದ ಕೂಡಿದ ಶ್ರೀಮಂತ ತರುಣ. ಅವಳಾದರೋ ನಿಸರ್ಗದ ಮಡಿಲಲ್ಲಿ ಬೆಳೆದ ನಾಜೂಕನ್ನೇ ಅರಿಯದ ಹಳ್ಳಿಯ ಹುಡುಗಿ. ಆದರೂ ಅವಳಲ್ಲಿ ಎಂಥ ಗಾಂಭೀರ್ಯ, ಎಂಥ ದಿಟ್ಟತನ. ಯಾವ ಪ್ರತಿಷ್ಠೆಗೂ ಸೊಪ್ಪು ಹಾಕದ ಸ್ವಾತಂತ್ರ್ಯಪ್ರಿಯಳಾದ ಅತ್ಯಂತ ಸುಂದರಿ. ಇವಳನ್ನು ಮದುವೆ ಮಾಡಿಕೊಳ್ಳ

ಬೇಕೆಂಬ ಆಸೆ ಪ್ರಬಲವಾಗಿ ಅವಳ ಒಪ್ಪಿಗೆಯನ್ನು ಕೋರುತ್ತಾನೆ. ಅವಳಿಗೆ ಮೊದಲು ಇವನ ಅಪೇಕ್ಷೆ ಆಶ್ಚರ್ಯಕರವಾಗಿಯೂ, ತಮಾಷೆಯಾಗಿಯೂ ತೋರುತ್ತದೆ. ಆಮೇಲೆ ಮಾಸ್ಕೋದಿಂದ ಬಂದ ಶ್ರೀಮಂತ ತರುಣ ತನ್ನನ್ನು ಪ್ರೀತಿಸಲು ಸಾಧ್ಯವೇ ಎಂದು ಆಶ್ಚರ್ಯ ಪಡುತ್ತಾಳೆ. ಆದರೆ ಲುಕಾಷ್ಕನಿಗೆ ಅವಳನ್ನು ಮದುವೆ ಮಾಡಿಕೊಡಬೇಕೆಂಬ ನಿಶ್ಚಯ ವಾಗಿದೆ. ಅವಳ ತಾಯಿತಂದೆಯರೂ ಸಹ ಅದಕ್ಕೆ ಒಪ್ಪಿದ್ದಾರೆ. ಈ ವಿಚಾರ ಒಲೆನಿನ್‌ಗೂ ತಿಳಿದದ್ದೇ. ಇದರಿಂದ ಇವನೂ ಒಂದು ಪೇಚಿಗೆ ಸಿಕ್ಕಿ ಹಾಕಿಕೊಳ್ಳುತ್ತಾನೆ. ಲುಕಾಷ್ಕ ಮರ್‍ಯಂಕರವರ ಪ್ರೇಮದ ನಡುವೆ ತಾನು ಪ್ರವೇಶಿಸುವುದು ನ್ಯಾಯವಲ್ಲವೆಂದೂ ಅವರಿಬ್ಬರ ಸುಖವನ್ನು ಹಾರೈಸುವುದೇ ತನ್ನ ಕರ್ತವ್ಯವೆಂದೂ ತಿಳಿದು ತನ್ನಪಾಡಿಗೆ ತಾನು ದಿನಗಳನ್ನು ಕಳೆಯುತ್ತಾನೆ. ಲುಕಾಷ್ಕನಿಗೆ ತನ್ನ ಕುದುರೆಯನ್ನೇ ದಾನವಾಗಿ ಕೊಟ್ಟು ಔದಾರ್ಯವನ್ನು ತೋರುತ್ತಾನೆ. ಆದರೆ ಈ ನಿರ್ಲಿಪ್ತತೆ ಸಾಧ್ಯವಿಲ್ಲವೆಂಬುದೂ ಅವನಿಗೆ ಗೊತ್ತು. ಕೊನೆಗೆ ಬೆಟ್ಟದ ಜನಗಳ ಒಂದು ಘರ್ಷಣೆಯಲ್ಲಿ ಲುಕಾಷ್ಕನಿಗೆ ಗುಂಡಿನೇಟು ತಗುಲಿ ಸಾಯುತ್ತಾನೆ. ಆಗ ಮತ್ತೊಮ್ಮೆ ಒಲೆನಿನ್, ಮರ್‍ಯಂಕಳನ್ನು ಪ್ರೀತಿಸೆಂದು ಕೇಳಿದಾಗ, ಆಗ ತಾನೇ ಕಣ್ಣೀರಾರಿದ ಮುಖದಿಂದ ಅವಳು ನಿರಾಕರಿಸುತ್ತಾಳೆ. ನೆಲದ ಮೇಲೆ ಕಾಲನ್ನು ಬಡಿದು ಅವಳು “ಹೋಗು, ನಿನ್ನನ್ನು ಕಂಡರೆ ನನಗೆ ಅಸಹ್ಯ!” ಎಂದು ಹೆದರಿಸುವವಳಂತೆ ಅವನ ಕಡೆ ಒಂದು ಹೆಜ್ಜೆಯನ್ನು ಇಡುತ್ತಾಳೆ. ಅವಳ ಮುಖದಲ್ಲಿ ಕಂಡ ದ್ವೇಷ, ಕೋಪದಿಂದ ಒಲೆನಿನ್ ನಿರಾಶನಾಗಿ ಹೊರಟು ಹೋಗು ತ್ತಾನೆ.

ಈ ಕಾದಂಬರಿಯಲ್ಲಿ ಕಂಡುಬರುವ ಇನ್ನೊಂದು ಅಂಶ ಶ್ರೇಷ್ಠ ಸಂಸ್ಕೃತಿಯವರು ಹಿಂದುಳಿದ ಜನರ ಮೇಲೆ ತಮ್ಮ ಪ್ರಭುತ್ವವನ್ನು ಹೇರಿಸಬಲ್ಲರೇ ಎಂಬುದು. ರಷ್ಯಾ ಪಟ್ಟಣದ ನಾಗರಿಕತೆಯ ಪ್ರತಿನಿಧಿಯಾದ ಒಲೆನಿನ್ ತರುಣನನ್ನು ಹಳ್ಳಿಗಾಡಿನವಳಾದ ಮರ್‍ಯಂಕ ನಿರಾಕರಿಸುವುದು ಈ ಸಮಸ್ಯೆಯ ಪ್ರತೀಕ. ಈ ವಿಷಯವನ್ನು ಟಾಲ್‌ಸ್ಟಾಯ್, ಅವರು ಕಾಕಸಸ್ ಪ್ರದೇಶದಲ್ಲಿ ವಾಸವಾಗಿದ್ದಾಗ ಕಂಡುಕೊಂಡಿರ ಬೇಕು. ಅದನ್ನೆ ಈ ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಿರಬೇಕು.

ಈ ಕಾದಂಬರಿಯಲ್ಲಿ ಬರುವ ಸ್ವಾರಸ್ಯವಾದ ಪಾತ್ರ ಇನ್ನೊಂದಿದೆ. ‘ಚಿಕ್ಕಪ್ಪ’ ಎರೋಷ್ಕ ಎಂಬ ಕಾಸಕ್ ಮುದುಕ. ಅವನು ಕಾಲವೆಲ್ಲಾ ಕಳೆಯುವುದು ಬೇಟೆಯಲ್ಲಿ. ಎಲ್ಲರೊಡನೆಯೂ ವಿನೋದವಾಗಿ, ಸರಸವಾಗಿ ಬೆರೆಯುತ್ತಾನೆ. ಅವನ ಸರಸಿಕೆಯನ್ನು ಅವನ ಮಾತಿನಲ್ಲೇ ಕಾಣಬಹುದು. “ಪಾಪ! ಎಲ್ಲಿ ಪಾಪ? ಚೆಲುವೆಯಾದ ಹೆಣ್ಣನ್ನು ನೋಡುವುದು ಪಾಪವೇ? ಅವಳೊಡನೆ ಸ್ವಲ್ಪ ಹಾಸ್ಯ ಮಾಡಿದರೆ ಅದೇ ಪಾಪವೇ? ಅವಳನ್ನು ಪ್ರೀತಿಸುವುದೇ ಪಾಪವೇ?....ಇದು ಪಾಪವಲ್ಲ, ಮೋಕ್ಷ....ಆದುದರಿಂದ ಚೆಲುವೆಯಾದ ಹುಡುಗಿಯನ್ನು ನೋಡುವುದು ಪಾಪವಲ್ಲ. ಅವಳನ್ನು ಮಾಡಿರುವುದು ಅದಕ್ಕಾಗಿ, ಪ್ರೀತಿಸುವುದಕ್ಕೆ, ಆನಂದವನ್ನು ಕೊಡುವುದಕ್ಕೆ, ಮಿತ್ರ ಇದು ನನ್ನ ಭಾವನೆ.” (ಪುಟ ೬೭) ಒಲೆನಿನ್‌ಗೆ ಸರಸಿ ಎರೋಷ್ಕನ ಪರಿಚಯ ತುಂಬ ಹಿತವೆನಿಸು

ತ್ತದೆ. ಅವನೊಡನೆ ದ್ರಾಕ್ಷಾರಸ ಕುಡಿಯುವುದು, ಬೇಟೆಯಾಡುವುದು ಅವನಿಗೆ ಎಷ್ಟೋ ಸಂತೋಷವನ್ನು ಕೊಡುತ್ತದೆ.

ಕಾಸಕ್ ತರುಣ ತರುಣಿಯರ ವಿನೋದಗಳನ್ನೂ, ಸಾಹಸಗಳನ್ನೂ ನೋಡಿದಾಗ ಎರೋಷ್ಕಾಗೆ ಸಾಹಸ ಜೀವನದ ಹಳೆಯ ನೆನಪುಗಳು ಬರುತ್ತವೆ. ಆ ಅನುಭವಗಳನ್ನು ಕೇಳಿದಾಗ ಮಲೆನಾಡಿನ ಜೀವನ ಎಷ್ಟು ಸಾಹಸದಿಂದ ಕೂಡಿತ್ತು ಎಂದು ಮನಗಾಣುತ್ತೇವೆ. ಅನೇಕ ವ್ಯಕ್ತಿಚಿತ್ರಗಳು ಸೊಗಸಾಗಿ ಮೂಡಿ ಬಂದಿವೆ. ನಮ್ಮ ಹಳ್ಳಿಯಲ್ಲೂ ಇಂದೂ ಕಾಣಬಹುದಾದ ಹೆಂಗಸರ ನೈಜಸ್ವಭಾವವನ್ನು ಇಲ್ಲಿ ಲುಕಾಷ್ಕನ ತಾಯಿಯಲ್ಲಿ, ಮರ್‍ಯಾಂಕಳ ತಾಯಿ ಗ್ರಾನಿ ಯುಲಿಟ್ಕಯಲ್ಲಿ ಕಾಣಬಹುದು. ಮರ್‍ಯಾಂಕಳ ಸ್ವಭಾವದಲ್ಲಿ ಒಂದು ಗಾಂಭೀರ್ಯ, ಬಿಗಿ, ಯಾರನ್ನೂ ಲೆಕ್ಕಿಸದ ಸ್ವತಂತ್ರ ಧೋರಣೆಯನ್ನು ಕಂಡರೆ ಅವಳ ಸ್ನೇಹಿತಳಾದ ಯುಸ್ತೆಂಕಳಲ್ಲಿ ಆ ಪ್ರಾಯಕ್ಕೆ ಸಹಜವಾದ ಕುಡಿತ ಕುಣಿತಗಳಲ್ಲಿ ಆಸಕ್ತಿ, ಯಾವ ಸಂಕೋಚವೂ ಇಲ್ಲದ ಬಯಕೆಗಳಿವೆ. ಗೆಳತಿಯರೊಡನೆ ಆರಾಮವಾಗಿ, ಆನಂದವಾಗಿ, ಮಜಾದಲ್ಲಿ ಕಾಲಕಳೆಯುವ ಬೆಲೆಟ್ಸ್ಕಿ ಶ್ರೀಮಂತ ವರ್ಗದ ಪ್ರತಿನಿಧಿ ಮತ್ತು ಒಲನಿನ್‌ನ ಸ್ನೇಹಿತ. ಈ ಹಳ್ಳಿಯ ಜನ ಎಷ್ಟೇ ಹಿಂದುಳಿದವರಾದರೂ ಅವರ ಒಪ್ಪ ಓರಣ, ಅಚ್ಚುಕಟ್ಟು, ತಮ್ಮ ಹಳ್ಳಿಯ ಪ್ರೇಮ ಇವೂ ಸಹ ಕಥನ ಸ್ವಾರಸ್ಯವನ್ನು ಹೆಚ್ಚಿಸುತ್ತವೆ. ಪಟ್ಟಣ ಜೀವನದ ರೀತಿ ನೀತಿಗಳಿಗೂ ಬೆಟ್ಟಗಾಡಿನ ಜೀವನದ ರೀತಿ ನೀತಿಗಳಿಗೂ ಎಷ್ಟು ವ್ಯತ್ಯಾಸವಿದೆ! ಈ ತೆರದ ಮಲೆನಾಡು ಚಿತ್ರಗಳು ನಮ್ಮ ಕನ್ನಡದಲ್ಲಿ ಕೆಲವು ಕೃತಿಗಳಲ್ಲಿ ಸುಂದರವಾಗಿ ಬಂದಿವೆ. ಗೊರೂರರವರೇ ಹಳ್ಳಿಯ ಬಾಳಿನ ಚಿತ್ರಗಳಲ್ಲಿ, ಈ ಬಗೆಯ ಜನಜೀವನವನ್ನು ಸೊಗಸಾಗಿ ವರ್ಣಿಸಿದ್ದಾರೆ. ಒಂದು ದೃಷ್ಟಿಯಿಂದ ಮಾನವ ಸ್ವಭಾವ ಎಲ್ಲ ಕಡೆಯೂ ಒಂದೇ ಎಂಬ ತಿಳುವಳಿಕೆ ಮೂಡುತ್ತದೆ.

ಅನ್ಯ ಭಾಷೆಗಳಲ್ಲಿರುವ ಉತ್ತಮ ಕೃತಿಗಳ ಅನುವಾದದಿಂದ ಯಾವುದೇ ಸಾಹಿತ್ಯ ಶ್ರೀಮಂತವಾಗುತ್ತದೆ. ನಾವು ಅನುವಾದಕ್ಕೆ ಆರಿಸಿಕೊಳ್ಳುವ ಕೃತಿ ನಮ್ಮ ಸಂಸ್ಕೃತಿಯ ಹಿನ್ನೆಲೆಯಿಂದ ಭಿನ್ನವಾದಷ್ಟೂ ತರ್ಜುಮೆ ಕಾರ್ಯ ಕಷ್ಟಕರವಾಗುವುದು. ಇಂಗ್ಲಿಷ್, ಫ್ರೆಂಚ್, ರಷ್ಯನ್ ಮುಂತಾದ ಭಾಷೆಗಳಿಂದ ಕಥೆ, ಕಾದಂಬರಿಗಳನ್ನು ಅನುವಾದ ಮಾಡಬೇಕಾದಾಗ ಬರುವ ಮುಖ್ಯ ಸಮಸ್ಯೆಯೆಂದರೆ, ಆ ವಸ್ತುವನ್ನು ನಮ್ಮ ಭಾಷಾ ಮರ್ಜಿಗೆ ಒಗ್ಗಿಸಿಕೊಳ್ಳುವುದು. ಎಷ್ಟೇ ಪ್ರಾಮಾಣಿಕವಾಗಿ ಮಾಡಿದ ಅನುವಾದವೂ ಭಾಷಾಮರ್ಜಿಯನ್ನು ಅನುಸರಿಸದಿದ್ದರೆ ಕೃತಕವಾಗುತ್ತದೆ. ಮೂಲ ಗ್ರಂಥಕರ್ತನು ನಮ್ಮ ಭಾಷೆಯಲ್ಲಿಯೇ ಬರೆದಿದ್ದರೆ ಹೇಗಿರಬಹುದಾಗಿತ್ತೋ ಅಷ್ಟು ಸಹಜವಾಗಿದ್ದರೆ ಅನುವಾದದ ಕಾರ್ಯ ಸಫಲವಾಗಿದೆ ಎನ್ನಬಹುದು. ಆದರೆ ಇದು ಹೇಳುವಷ್ಟು ಅಥವಾ ಬಯಸುವಷ್ಟು ಸುಲಭವಲ್ಲ. ಮೂಲಕೃತಿಕಾರನ ಕಥನ ಶೈಲಿ ಸ್ವಲ್ಪವೂ ಕುಂದದಂತೆ ಅನುವಾದವಾಗಬೇಕು. ಅದಕ್ಕೆ ಬೇಕಾದುದು ಸಮಾನ ಮನೋಧರ್ಮ ಹಾಗೂ ಎರಡು ಭಾಷೆಗಳ ನಿಷ್ಕೃಷ್ಟ ಜ್ಞಾನ. ಪ್ರತಿಯೊಂದು ಪದದ ಅರ್ಥವೇನೋ

ಮುಖ್ಯವೇ. ಅದಕ್ಕಿಂತ ಮುಖ್ಯವಾಗಿ ಅದರ ವ್ಯಂಜಕ ಅರ್ಥ, ಧ್ವನಿ, ಪದ ಜೋಡಣೆ ಇನ್ನೂ ಮುಖ್ಯ. ಅವನ್ನು ಅನುವಾದದಲ್ಲಿ ಪರಿಣಾಮಕಾರಿಯಾಗಿ ತರಬೇಕಾದರೆ ಅನುವಾದಕನಿಗೆ ವಿಶೇಷ ಸಾಮರ್ಥ್ಯ ಬೇಕು. ಭಾಷೆಯ ಮೇಲಿನ ಸಾಮರ್ಥ್ಯ ಮುಖ್ಯವಾದುದೇನೋ ಸರಿ. ಆದರೆ ಮೂಲಕೃತಿಯ ಹೃದಯವನ್ನು ತಿಳಿಯುವ ಕಲ್ಪನಾಶಕ್ತಿ, ಸಂವೇದನಾಶಕ್ತಿ ಅಷ್ಟೇ ಅಗತ್ಯ. ಇವೆರಡೂ ಮೇಳೈಸಿದರೆ ಅನುವಾದ ಸಾರ್ಥಕವಾಗುತ್ತದೆ. ಈ ಸಾಮರ್ಥ್ಯ ಗೊರೂರರಿಗೆ ಒಲಿದಿವೆ ಎಂಬುದು 'ಮಲೆನಾಡವರು' ಎಂಬ ಕೃತಿಯಲ್ಲಿ ಚೆನ್ನಾಗಿ ಕಾಣುತ್ತದೆ.

ಟಾಲ್‌ಸ್ಟಾಯ್ ರಷ್ಯನ್‌ನಲ್ಲಿ ಬರೆದ ಕೃತಿಯನ್ನು ಅಯ್ಯಂಗಾರರು ನೇರವಾಗಿ ಕನ್ನಡಕ್ಕೆ ತರಬಹುದಾಗಿದ್ದಿದ್ದರೆ ಈ ಅನುವಾದದ ಸೊಗಸು ಇಮ್ಮಡಿಯಾಗುತ್ತಿದ್ದಿತೆಂಬುದು ಸ್ಪಷ್ಟವೇ. ಮೂಲಕೃತಿಯ ಇಂಗ್ಲಿಷ್ ಅನುವಾದದಿಂದ ಗೊರೂರವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹೀಗಿದ್ದರೂ ಸಹ, ಗೊರೂರರ ಬರವಣಿಗೆಯಲ್ಲಿ ಸ್ವಲ್ಪವೂ ಅಸಹಜತೆ ಕಾಣಬರುವುದಿಲ್ಲ. ಕಥೆಯನ್ನು ಓದುತ್ತಾ ಹೋದಾಗ ಎಲ್ಲೂ ಅಡೆತಡೆಗಳಿಲ್ಲ. ಇಂಗ್ಲಿಷ್ ಭಾಷಾಂತರ ಓದಿದಾಗ ಎಷ್ಟು ಸೊಗಸಿನಿಂದ ಕಥೆ ಓಡುತ್ತದೆಯೋ ಹಾಗೆಯೇ ಈ ಕಥನದಲ್ಲೂ ಓಟವಿದೆ. ಇದು ನಿಜಕ್ಕೂ ಗೊರೂರರ ಅನುವಾದ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಉದಾಹರಣೆಗೆ ಕೆಲವು ಭಾಗಗಳನ್ನು ಪರಿಶೀಲಿಸೋಣ :

> ರಾತ್ರಿಯು ನಿಶ್ಶಬ್ದವಾಗಿದ್ದಿತು. ಬೆಚ್ಚಗೆ, ಕತ್ತಲೆಯಾಗಿತ್ತು. ಅಂತರಿಕ್ಷದ ಒಂದು ಕಡೆ ನಕ್ಷತ್ರಗಳು ಪ್ರಕಾಶಿಸುತ್ತಿದ್ದುವು. ಮತ್ತೊಂದು ದೊಡ್ಡ ಪಾರ್ಶ್ವದಲ್ಲಿ ಬೆಟ್ಟಗಳ ಕೋಡುಗಲ್ಲಿನ ಮೇಲೆ ಪಸರಿಸಿದ್ದ ದೊಡ್ಡದಾದ ಒಂದು ಕಪ್ಪು ಮೋಡ ಕವಿದಿದ್ದಿತು. ಕಪ್ಪಾಗಿ, ನಕ್ಷತ್ರಗಳಿಂದ ಆಕಾಶದಲ್ಲಿ, ಮೋಡವು ಗಾಳಿಯಿಲ್ಲದುದರಿಂದ ಸ್ಪಷ್ಟವಾಗಿ ನಿಧಾನವಾಗಿ ಬೆಟ್ಟದೊಂದಿಗೆ ಸೇರಿಕೊಂಡು ಚಲಿಸುತ್ತಿದ್ದಿತು. ಕಾಸಕ್‌ರಿಗೆ ಎದುರಿಗೆ ನದಿಯೂ ಅದರ ಆಚೆ ಕಡೆಯ ಪ್ರದೇಶಗಳೂ ಕಾಣುತ್ತಿದ್ದವು. (ಪುಟ ೪೨)

> ರಾತ್ರಿಯ ಬಹುಭಾಗವು ಕಳೆದುಹೋಗಿದ್ದಿತು. ಪಶ್ಚಿಮದ ಕಡೆಗೆ ತೇಲಿಹೋಗಿದ್ದ ಕಪ್ಪುಮೋಡದ ಕೆಳಗಡೆ ಪ್ರಕಾಶವಾದ ಆಕಾಶವು ಕಾಣುತ್ತಿದ್ದಿತು. ಮೇಲಕ್ಕೆ ಬಾಗಿದ್ದ ಚಿನ್ನದ ಬಣ್ಣದ ಬಿದಿಗೆಯ ಚಂದ್ರನು ಕೆಂಬಣ್ಣವನ್ನು ಬೀರುತ್ತಾ ಬೆಟ್ಟದ ಮೇಲೆ ಹೊಳೆದನು. ಛಳಿ ಕಡಿಯಲು ಪ್ರಾರಂಭಿಸಿತು. (ಪುಟ ೪೩)

> ನಾನು ಯಾಕೆ ಸುಖಿಯಾಗಿದ್ದೇನೆ? ಹಿಂದೆ ಯಾತಕ್ಕಾಗಿ ಬದುಕುತ್ತಿದ್ದೆ? ನನಗಾಗಿ ಎಷ್ಟೊಂದು ಸುಖವನ್ನು ಬಯಸಿದೆ? ನಾನು ಎಷ್ಟೋ ಪಿತೂರಿ ಮಾಡಿದೆ. ಆದರೆ ದುಃಖ ಮತ್ತು ಲಜ್ಜೆ ಹೊರತು ಮತ್ತೇನೂ ದೊರೆಯಲಿಲ್ಲ. ಈಗ ನೋಡಿದರೆ ಸುಖವಾಗಿರಬೇಕಾದರೆ ನನಗೇನೂ ಬೇಕಿಲ್ಲ. (ಪುಟ ೧೧೨)

ಇದೇ ಸುಖ. ಇತರರಿಗಾಗಿ ಬದುಕುವುದರಲ್ಲಿಯೇ ಸುಖವಿರುವುದು. ಅದು ಸ್ಪಷ್ಟವಾಗಿದೆ. ಸುಖದ ಆಸೆ ಎಲ್ಲರ ಹೃದಯದಲ್ಲೂ ಸ್ವಾಭಾವಿಕವಾಗಿದೆ. ಆದುದರಿಂದ ಅದು ನ್ಯಾಯವಾದುದು. ಅದನ್ನು ಸ್ವಾರ್ಥದೃಷ್ಟಿಯಿಂದ ಅಂದರೆ ತನಗೆ ಧನ, ಪ್ರಸಿದ್ಧಿ, ಸುಖ ಅಥವಾ ಪ್ರೇಮ ದೊರೆಯಬೇಕೆಂದು ಸಾಧಿಸಲು ಪ್ರಯತ್ನಿಸಿದಾಗ ಆ ಆಸೆಗಳನ್ನು ಪೂರೈಸಲು ಅಸಾಧ್ಯವಾದ ಪರಿಸ್ಥಿತಿಗಳು ಏಳಬಹುದು. ಆದುದರಿಂದ ಸುಖದ ಆಸೆಯಲ್ಲ, ಆದರೆ ಐಶ್ವರ್ಯ, ಧನ, ಪ್ರೇಮಗಳ ಈ ಆಸೆಗಳು ನ್ಯಾಯವಾದುವಲ್ಲ ಎಂಬುದು ಗೊತ್ತಾಗುತ್ತದೆ. ಆದರೆ ಬಾಹ್ಯ ಪರಿಸ್ಥಿತಿಗಳು ಹೇಗಿದ್ದರೂ ಯಾವಾಗಲೂ ಪೂರೈಸಿಕೊಳ್ಳಬಹುದಾದ ಆಸೆಗಳು ಯಾವುವು? ಅವು ಯಾವುವು? ಪ್ರೇಮ, ತ್ಯಾಗ ಈ ಹೊಸ ಸತ್ಯವನ್ನು ಕಂಡುಹಿಡಿದೆನೆಂದೇ ಅವನಿಗೆ ತೋರಿದಾಗ ಅವನಿಗೆ ಅತ್ಯಂತ ಸಂತೋಷವುಂಟಾಯಿತು. ಅವನು ಮೇಲಕ್ಕೆ ಹಾರಿ, 'ಯಾರಿಗಾಗಿ ತ್ಯಾಗ ಮಾಡಲಿ, ಯಾರಿಗೆ ಒಳ್ಳೆಯದನ್ನು ಮಾಡಲಿ ಯಾರನ್ನು ಪ್ರೀತಿಸಲಿ' ಎಂದು ಆತುರದಿಂದ ಹುಡುಕತೊಡಗಿದನು. (ಪುಟ ೧೧೨)

ಒಟ್ಟಿನಲ್ಲಿ ಇಂಗ್ಲಿಷ್‌ನಲ್ಲಿ 'ಕಾಸಕ್ಸ್' ಓದಿದಾಗ ನನ್ನ ಮನಸ್ಸಿನ ಮೇಲೆ ಆದ ಪರಿಣಾಮವೇ 'ಮಲೆನಾಡವರು' ಓದಿದಾಗಲೂ ಆಗಿದೆ. ಗೊರೂರರು 'ಹಳ್ಳಿಬಾಳು', 'ನಮ್ಮೂರಿನ ರಸಿಕರು', 'ಮೆರವಣಿಗೆ', 'ಹೇಮಾವತಿಯ ತೀರದಲ್ಲಿ' ಎಂಬ ಕೃತಿಗಳನ್ನೂ ರಚಿಸಿ ತಮ್ಮ ತಿಳಿಯಾದ ಹಾಸ್ಯದಿಂದ ಕನ್ನಡ ಜನಕ್ಕೆ ಉಲ್ಲಾಸವನ್ನೂ, ಆನಂದವನ್ನೂ ನೀಡಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟಸ್ಥಾನ ಪಡೆದವರು. ಅವರ ಕೃತಿಮಾಲೆಯಲ್ಲಿ ಈ ಟಾಲ್‌ಸ್ಟಾಯ್ ಕೃತಿಯ ಅನುವಾದವೂ ಒಂದು ಸುಂದರ ಕುಸುಮ.

'ರಾಜನರ್ತಕಿ'

ಬಿ. ನಂ. ಚಂದ್ರಯ್ಯ

ರಾಮಚಂದ್ರ ಠಾಕೂರರ 'ರಾಜನರ್ತಕಿ' ಆಮ್ರಪಾಲಿಯ ಕಥೆಯನ್ನೊಳಗೊಂಡಿರುವ ಕಾದಂಬರಿ. ಇದರ ಕಥೆ ಎರಡೂವರೆ ಸಾವಿರ ವರ್ಷಗಳಷ್ಟು ಹಳೆಯದು. ಆಗ್ಗೆ ಗೌತಮ ಬುದ್ಧನ ಪ್ರಭಾವ ಉತ್ತರಾಪಥದಲ್ಲಿ ತನ್ನ ವರ್ಚಸ್ಸನ್ನು ಸ್ಥಾಪಿಸಿಕೊಂಡು ಜನರ ಮನಸ್ಸನ್ನು ಸತ್ಪಥದತ್ತ ಕೊಂಡೊಯ್ಯುವ ಸಾರ್ಥಕ ಕಾರ್ಯದಲ್ಲಿ ನಿರತವಾಗಿತ್ತು. ಈ ಕಾರ್ಯಕ್ಕೆ ತಕ್ಕ ಸಾಮಾಜಿಕ ವ್ಯವಸ್ಥೆಯೂ ಪ್ರಚಲಿತವಾಗಿತ್ತು. ಅಷ್ಟು ಹೊತ್ತಿಗಾಗಲೇ ಹೊರಗಿನಿಂದ ಬಂದ ಆರ್ಯರು ಇಲ್ಲಿನ ಭಾರತೀಯ ಜನಾಂಗದೊಂದಿಗೆ ಹೋರಾಡಿ ಗೆಲುವನ್ನು ಸಂಪಾದಿಸಿಕೊಂಡು ಅದರ ಗರ್ವದಿಂದ ನಾನಾ ರೀತಿಯ ಅಸಂತೋಷಕರವಾದ ಕಾರ್ಯಗಳನ್ನು ಮಾಡುತ್ತ ತಮ್ಮ ಪಾಪದ ಫಲವನ್ನೂ ಪಡೆದರು. ಪ್ರಾರಂಭಾವಸ್ಥೆಯಲ್ಲಿ ದಬ್ಬಾಳಿಕೆಯನ್ನು ನಡೆಸುತ್ತಿದ್ದ ಈ ಜನ ದಿನದಿಂದ ದಿನಕ್ಕೆ ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡಿದರು. ಭಾರತದ ಫಲವತ್ತಾದ ಮಣ್ಣಿನ ಮೇಲೆ ಕಾಲಿಟ್ಟಮೇಲೆ ಒಂದು ದೃಷ್ಟಿಯಿಂದ ತಮ್ಮ ವಿನಾಶವನ್ನು ತಾವೇ ಮಾಡಿಕೊಂಡರು. ಹಿಮಾಲಯ ಪರ್ವತದ ಆ ಕಡೆಯಿಂದ ಬಂದ ಕುರು–ಪಾಂಚಾಲ ಶಾಖೆಗಳೊಂದಿಗೆ ಉತ್ತರ ಕುರುವಿನ ಭರತರ ಸಂಘರ್ಷವಾಗದೆ ಇವರಿಬ್ಬರೂ ಒಂದಾಗಿ ಬೆರೆತು ಸಂಯುಕ್ತ ಜಾತಿಯೊಂದು ಏರ್ಪಟ್ಟಿದ್ದಿದ್ದರೆ ಅದರ ವಿಷಯವೇ ಬೇರೆ ಆಗಿರುತ್ತಿತ್ತು. ಆದರೆ ಉತ್ತರ ಕುರುವಿನ ದೇವಗಣದವರು ತಮ್ಮ ವಿಜಯದ ಗರ್ವದಿಂದ ಪ್ರಮತ್ತರಾಗಿದ್ದರು. ಅದರಲ್ಲಿಯೇ ಮುಳುಗಿದ್ದು ಕೊನೆಗೆ ಅದರಲ್ಲಿಯೇ ಕರಗಿ ಹೋದರು. ಹೀಗಾಗಿ ಆರ್ಯಾವರ್ತದಲ್ಲಿ ಇವರ ಪ್ರಸಾರವಾಗಲಿ, ಪ್ರಚಾರವಾಗಲಿ ಆಗಲೇ ಇಲ್ಲ. ಇನ್ನೊಂದು ಕಡೆ ಈ ಪೂರ್ವೀಯರು ದಕ್ಷಿಣದಲ್ಲಿ ದ್ರಾವಿಡರ ಮೇಲೆ ಆಕ್ರಮಣಮಾಡಿ ಅವರನ್ನು ಜಯಿಸಿ ಆ ವಿಜಯದಲ್ಲಿಯೇ ಪ್ರಮತ್ತರಾಗದೆ ಅವರಲ್ಲಿ ಬೆರೆತುಹೋದರು. ಇದು ಆರ್ಯರು ಮಾಡಿದ

ಮೊದಲ ತಪ್ಪು. ಆಮೇಲೆ ಇವರಲ್ಲಿ ರಾಜನ್ಯರು, ಪುರೋಹಿತರು, ವಿಶರು ಎಂಬ ಮೂರು ಜಾತಿಗಳನ್ನುಂಟುಮಾಡಿದ್ದಲ್ಲದೆ ಆಯಾ ಜಾತಿಗಳಿಗೆ ಅನುಕೂಲವಾಗುವಂತೆ ಅನುಲೋಮ-ಪ್ರತಿಲೋಮ ವಿವಾಹ ಪದ್ಧತಿಗಳನ್ನು ಜಾರಿಗೆ ತಂದರು. ಬ್ರಾಹ್ಮಣರು ದಕ್ಷಿಣೆಯ ರೂಪದಲ್ಲಿ, ಕ್ಷತ್ರಿಯರು ತಾವು ಮಾಡಿದ ದಿಗ್ವಿಜಯಗಳಲ್ಲಿ ಸುಂದರ ಸ್ತ್ರೀಯರನ್ನು ದಾಸಿಯರ ರೂಪದಲ್ಲಿ ರಾಶಿರಾಶಿಯಾಗಿ ಸೇರಿಸಿಕೊಂಡರು. ಹೀಗೆ ರಾಶಿರಾಶಿಯಾಗಿ ಅಧಿಕ ಸಂಖ್ಯೆಯಲ್ಲಿ ಸುಂದರಾತಿಸುಂದರ ಸ್ತ್ರೀಯರು ಒಂದು ಕಡೆ ದಾಸಿಯರ ರೂಪದಲ್ಲಿ ಸೇರಿದಾಗ ಏನು ಸಂಭವಿಸಬಹುದೋ ಅದೆಲ್ಲ ಸಂಭವಿಸಿತು. ದಕ್ಷಿಣೆಯ ರೂಪದಲ್ಲಿ ಪಡೆದ ಈ ದಾಸಿಯರನ್ನು ತೆರೆದ ಪಟ್ಟಣದ ಚೌಕಗಳಲ್ಲಿ ಮಾರಾಟ ಮಾಡಿದರು. ಇದರಿಂದಾಗಿ ಇವರದೇ ಒಂದು ಜಾತಿಯಾಗಿ ಬೆಳೆಯಲು ಅವಕಾಶವಾಯಿತು. ಇದರಿಂದಾಗಿ ವರ್ಣಸಂಕರ ಅತಿಯಾಗಿ ಅಸಂಖ್ಯಾತ ಸಂತಾನದ ಉತ್ಪತ್ತಿಯಾಯಿತು. ಹೀಗೆ ವರ್ಣಸಂಕರದಿಂದ ಹುಟ್ಟಿದ ಶಿಶುಗಳನ್ನು ಮೊದಮೊದಲು ತಂದೆಯ ಕುಲ-ಗೋತ್ರಕ್ಕೆ ಸೇರಿದವು ಎಂದು ಘೋಷಿಸಿದರು. ಆದರೆ ಅವರಿಗೆ ಯಾವ ದಾಯ ಭಾಗವನ್ನೂ ಕೊಡಲಿಲ್ಲ. ಕಾಲಾನಂತರದಲ್ಲಿ ಹೀಗೆ ಹುಟ್ಟಿದ ಶಿಶುಗಳಿಗೆ ದಾಯ ಭಾಗವನ್ನು ಕೊಡದೇ ಇರುವುದು ಇರಲಿ, ಅವರನ್ನು ಆರ್ಯರು ತಂದೆಯ—ಅಂದರೆ ತಮ್ಮ—ಕುಲ-ಗೋತ್ರದವರೆಂದು ಕರೆಯುವುದನ್ನು ನಿಷೇಧಿಸಿ ಆ ಗೋತ್ರದಿಂದಲೇ ಉಚ್ಚಾಟನೆ ಮಾಡಿದರು. ಮೊದಮೊದಲು ಪ್ರತಿಲೋಮ ಸಂತಾನಕ್ಕೆ ಮಾತ್ರ ವರ್ಣಸಂಕರ ವಿಧಿಸಲಾಗಿತ್ತು; ಅದು ಮುಂದುವರಿದು ಅನುಲೋಮ ಪ್ರತಿಲೋಮದ ಪ್ರತಿಯೊಂದು ಸಂತಾನವನ್ನೂ ಸಂಕರ ಜಾತಿಯನ್ನಾಗಿ ಮಾಡಲಾಯಿತು ಮತ್ತು ಅವರನ್ನು ತಮ್ಮ ಉಪಜೀವಿಗಳನ್ನಾಗಿ ಮಾಡಿಕೊಂಡು ಅವರನ್ನು ಪ್ರತ್ಯೇಕವಾದ ಒಂದು ಜಾತಿಯನ್ನಾಗಿಯೇ ಮಾಡಿಟ್ಟರು. ಇದು ಆರ್ಯರು ಮಾಡಿದ ಎರಡನೆಯ ತಪ್ಪು. ಸ್ವಾರಸ್ಯದ ಸಂಗತಿಯೆಂದರೆ, ಈ ರೀತಿಯ ಸಂಕರ ಸಂತಾನವೆಲ್ಲ ಮೇಧಾವಿಗಳೂ, ಪರಿಶ್ರಮಿಗಳೂ, ಸಹಿಷ್ಣುಗಳೂ, ಉದ್ಯಮಶೀಲರೂ ಆಗಿದ್ದರು. ವರ್ಣಸಂಕರವುಂಟಾದ ಸಂತಾನದಲ್ಲಿ ಇದು ಸಹಜವೇ. ತಾನು ಉಚ್ಚ ಜಾತಿಗೆ ಸೇರಿದವನು ಎಂಬ ಭಾವನೆ ಬೆಳೆಯುವುದರ ಜೊತೆಗೆ ಅಧಿಕಾರದ ಮದವೂ ಸೇರಿದಾಗ ಸಹಜವಾಗಿಯೇ ಕಪಿಗೆ ಕಳ್ಳು ಕುಡಿಸಿ ಚೇಳು ಕುಟುಕಿಸಿಬಿಟ್ಟಂತೆಯೇ ಆಗುವುದು. ಆರ್ಯರೂ ಕೂಡ ಅಧಿಕಾರ ಮದದಿಂದ ಪ್ರಮತ್ತರಾಗಿ ಮದ್ಯಪಾಯಿಗಳೂ (ಕುಡುಕರು), ಸೋಮಪಾನಿಗಳೂ, ಗರ್ವಿಷ್ಠರೂ, ಅಕರ್ಮಣ್ಯವಾದಿಗಳೂ ಆಗುತ್ತ ಬಂದರು. ಈಗ ಅವರು ಕೇವಲ ನಿರರ್ಥಕವಾದ ಯಜ್ಞಾಡಂಬರಗಳ ಹಾಸ್ಯಾಸ್ಪದ ವಿಡಂಬನೆಗಳಲ್ಲಿ ತೊಳಲತೊಡಗಿದ್ದರು. ಇಲ್ಲವೆ, ಕೇವಲ ಕಲ್ಪಿತ ಬ್ರಹ್ಮವಾದದಲ್ಲಿ ಮುಳುಗಿರುತ್ತಿದ್ದರು. ಆದುದರಿಂದಲೇ ಆರ್ಯ ಜನಾಂಗದಲ್ಲಿ ಅಂದು ಪ್ರಸೇನಜಿತರಂಥ ಗಲಿತ ರಾಜರುಗಳು ಈ ದೌರ್ಬಲ್ಯದ ಸಂಕೇತವಾಗಿ ಉಳಿದಿದ್ದರು. ರಾಜ ಶಾಸನವು ಕೂಡ ಇಂಥ ಅಕರ್ಮಣ್ಯವಾದಿಗಳೂ, ವಿಷಯಲೋಲುಪರೂ ಆದ ಆರ್ಯ ರಾಜರ ಕೈ ತಪ್ಪಿ ಕರ್ಮಣ್ಯವಾದಿಗಳೂ, ಉದ್ಯಮಶೀಲರೂ, ಪರಾಕ್ರಮಶಾಲಿಗಳೂ ಆದ ಸಂಕರ ಸಂತಾನದ ಕೈಗೆ ಹಸ್ತಾಂತರವಾಗು

ತ್ತಿತ್ತು. ಇದರ ಭಯವೂ ಅವರಿಗಿತ್ತು. ಆದರೂ ಪ್ರಸೇನಜಿತನು ತನ್ನ ವಿಷಯಲೋಲುಪತೆಯಿಂದಾಗಿ, ತನ್ನ ವಯೋಧರ್ಮವನ್ನೂ ಗಣಿಸದೆ ದಾಸೀ ಪುತ್ರಿಯನ್ನು ಮದುವೆಯಾದ. ಆ ಚೇಲನಾದೇವಿಯಿಂದ ಹುಟ್ಟಿದ ಪುತ್ರ ವಿಡ್ಡುಭ ಅವನಿಂದ ರಾಜ್ಯಸೂತ್ರವನ್ನು ಕಿತ್ತುಕೊಳ್ಳುತ್ತಾನೆ. ನಿರ್ಭಾಗ್ಯನಾದ ಪ್ರಸೇನಜಿತನು ಅತ್ಯಂತ ದಯನೀಯ ಸ್ಥಿತಿಯಲ್ಲಿ ಸಾವನ್ನಪ್ಪುತ್ತಾನೆ.

ದಿನದಿಂದ ದಿನಕ್ಕೆ ವರ್ಣಸಂಕರ ಸಂತಾನದ ಕೈ ಮೇಲಾಗುತ್ತ ಬರುತ್ತಿರುವುದನ್ನು ಕಂಡುಕೊಂಡು ಹೆದರಿದ ಆರ್ಯರು ಆ ಸಮಾಜದಲ್ಲಿ ವಿವಾಹದ ವಿಷಯದಲ್ಲಿ ಕೆಲವು ಕಟ್ಟಳೆಗಳನ್ನು ವಿಧಿಸಿ ಮದುವೆಯ ವಿವಿಧ ಪದ್ಧತಿಗಳನ್ನು ನಿರ್ಮಿಸಿದರು. ಆ ಕಾಲಕ್ಕೆ ಪ್ರಖ್ಯಾತ ಶ್ರೋತ್ರೀಯರೆಂದು ಪರಿಗಣಿತರಾಗಿದ್ದ ಭಾರದ್ವಾಜ, ಕಾತ್ಯಾಯನ, ಶೌನಕ, ಬೌಧಾಯನ, ಗೌತಮ, ಆಪಸ್ತಂಭ, ಶಾಂಬವ್ಯ, ಜೈಮಿನಿ, ಕಣಾದ, ಔಲೂಕ, ವಾಸಿಷ್ಠ, ಸಾಂಖ್ಯಾಯನ, ಹಾರೀತ, ಪಾಣಿನಿ, ವೈಶಂಪಾಯನ ಮೊದಲಾದ ಧರ್ಮಾಚಾರ್ಯರು ಆರ್ಯ ರಾಜರ ಪರಿಷತ್ತಿನಲ್ಲಿ ಸಮಾವೇಶಗೊಂಡು ಸಮಾಜದಲ್ಲಿ ಉತ್ಪಾತಗಳಿಗೆ ಕಾರಣವಾಗಿದ್ದ ಮದುವೆಯ ವಿಷಯದಲ್ಲಿ ಚರ್ಚೆಮಾಡಿ ಕೆಲವು ವಿವಾಹ ಪದ್ಧತಿಗಳನ್ನು ನಿರ್ಣಯಿಸಿದರು. ವಿವಾಹದ ವಿಷಯದಲ್ಲಿ ಅದುವರೆಗೂ ಪ್ರಚಲಿತವಾಗಿದ್ದ ಪದ್ಧತಿಗೆ ಮಂಗಳ ಹಾಡಿ ಹೊಸ ಪದ್ಧತಿಗಳನ್ನು ಮಂಡಿಸಿದರು. ಅಂದಿನಿಂದ ಯಾವಳೇ ಕನ್ಯೆ ತಾರುಣ್ಯಾವಸ್ಥೆಯನ್ನು ಪಡೆದ ಮೇಲೆ ಕುಮಾರಿಯಾಗಿರಕೂಡದು. ಅವಳು ತಾನೇ ಸ್ವತಃ ಗಂಡನನ್ನು ಆರಿಸಿಕೊಳ್ಳಕೂಡದು. ಅವಳು ಏಕಪತಿವ್ರತೆಯಾಗಿರಬೇಕು. ಸವತಿಯರ ಜೊತೆಯಲ್ಲಿ ಅನಸೂಯಳಾಗಿ ಈರ್ಷ್ಯಾರಹಿತ ಬಾಳುವೆಯನ್ನು ಮಾಡಬೇಕು. ಕೇವಲ ಸಂತಾನೋತ್ಪತ್ತಿಗಾಗಿಯೇ ಯುವತಿ ತರುಣನನ್ನು ಮದುವೆಯಾಗಬಾರದು. ಅವಳು ತನ್ನ ಗೃಹಕೃತ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವಂಥ ಸದ್ಗೃಹಿಣಿಯಾಗಿರಬೇಕು. ವರನಿಗೆ ಕನ್ಯೆಯನ್ನು ಆಕೆಯ ಹಿರಿಯರು ಕೊಡಬೇಕು. ಆಕೆ ಸಾಯುವತನಕ ಏಕಪತಿವ್ರತೆಯಾಗಿ, ಗಂಡನ ಜೀವನಸಂಗಿನಿಯಾಗಿ ಅಭಿನ್ನಳಾಗಿ ಬಾಳುವೆಯನ್ನು ಮಾಡುತ್ತಿದ್ದರೂ ಮನೆಯ ಎಲ್ಲ ರೀತಿಯ ಯಾಜಮಾನ್ಯ ಅಥವಾ ಅಧಿಕಾರ ಮಾತ್ರ ಗಂಡ ಮತ್ತು ಮಕ್ಕಳ ಕೈಯಲ್ಲಿ ಮಾತ್ರ ಇರಬೇಕು ಎಂದು ನಿರ್ಣಯಿಸಿದರು. ಇದರಿಂದಾಗಿ ಆ ಹೆಂಡತಿಯಾದವಳು ಪತಿ ಸೇವೆ ಮಾಡುವವಳೂ, ನಿಯಮ ಪಾಲನೆ ಮಾಡುವವಳೂ, ಗುರುಜನರಿಂದ ದತ್ತವಾದವಳೂ, ಅತ್ತೆ-ಮಾವಂದಿರ ಮತ್ತು ಗಂಡನ ಕುಟುಂಬದ ಜೊತೆಯಲ್ಲಿ ಬಾಳಬೇಕಾದವಳೂ ಎಂದು ನಿರ್ಣಯಿಸಲ್ಪಟ್ಟಳು. ಈ ಹೊಸ ನಿಯಮಗಳು ಆರ್ಯ-ಅನಾರ್ಯ, ಅನುಲೋಮ, ಸಂಕರ ಎಲ್ಲ ಜಾತಿಗಳಿಗೂ ಅನ್ವಯಿಸುವುವೆಂದೂ, ವರ್ಣಧರ್ಮೀಯರು ಬೇಕಾದರೆ ವೈದಿಕ ಮರ್ಯಾದೆಗಳಲ್ಲಿಯೇ ಇರಬಹುದೆಂದೂ, ಆಂಧ್ರ, ಸೌರಾಷ್ಟ್ರ, ಚೋಳ, ಚೇರ, ಪಾಂಡ್ಯ, ಅಂಗ, ವಂಗ, ಕಳಿಂಗ ಈ ಎಲ್ಲ ಜನಪದಗಳೂ ಈ ನಿಯಮಗಳನ್ನು ಪಾಲಿಸಬೇಕೆಂದೂ ತೀರ್ಮಾನಿಸಿದರು.

ಇನ್ನೂ ಮುಂದುವರಿದು ಈಗ ನಮಗಿರುವ ನಾಲ್ಕು ವರ್ಣಗಳು ಸಾಲವು; ಅನೇಕ ಅನಾರ್ಯ ಬಂಧುಗಳ ಮಿಶ್ರಣದಿಂದ ಈಗಿರುವ ಜಾತಿಗಳಲ್ಲಿ ಅನೇಕ ಜಾತಿಗಳು ಹುಟ್ಟುತ್ತಿವೆ; ಅನಾರ್ಯ ಬಂಧುಗಳ ಸಂಸರ್ಗಕ್ಕೆ ಉತ್ತೇಜನ ಕೊಡುವುದಕ್ಕಾಗಿ ಅಸವರ್ಣ ವಿವಾಹ ಮರ್ಯಾದೆಯನ್ನು ಸ್ಥಿರಗೊಳಿಸಿದ್ದೆವು; ಈಗ ನಾವು ಇಂಥ ವಿವಾಹಗಳಿಂದ ಉತ್ಪನ್ನವಾದ ಸಂತಾನವನ್ನು ಅವರ ದಾಯಭಾಗದಿಂದ ವಂಚಿತರನ್ನಾಗಿ ಮಾಡಬೇಕು; ಶುದ್ಧ ವರ್ಣ ಮತ್ತು ಗೋತ್ರ ಪರಂಪರೆಗಳಿಂದಲೂ ವಂಚಿತರನ್ನಾಗಿ ಮಾಡಬೇಕು; ಅವರು ಅನುಲೋಮವಾಗಲಿ, ಪ್ರತಿಲೋಮವಾಗಲಿ, ಅವರ ಪ್ರತ್ಯೇಕ ಜಾತಿಯನ್ನು ಸ್ಥಾಪಿಸಬೇಕು ಎಂದು ತೀರ್ಮಾನಿಸಿ ಆರು ವಿಧವಾದ ಮದುವೆಗಳನ್ನು ಸ್ಥಾಪಿಸಿದರು. (೧) ಬ್ರಾಹ್ಮ: ಇದರಲ್ಲಿ ತಂದೆ ವಟುವರನಿಗೆ ಅರ್ಘ್ಯವನ್ನು ಕೊಟ್ಟು ಕನ್ಯಾದಾನ ಮಾಡುತ್ತಾನೆ. ಇದು ಬ್ರಾಹ್ಮಣ-ಬ್ರಾಹ್ಮಣರಲ್ಲಿ ನಡೆಯುವ ವಿವಾಹ; (೨) ದೈವ: ಇದರಲ್ಲಿ ತಂದೆಯು ಕನ್ಯೆಯನ್ನು ವಸ್ತ್ರಭೂಷಣಗಳಿಂದಲಂಕರಿಸಿ ಯಜ್ಞದಲ್ಲಿ ಸ್ಥಾನಾಪನ್ನನಾಗಿರುವ ಪುರೋಹಿತನಿಗೆ ಕೊಡುತ್ತಾನೆ. ಇದು ಕ್ಷತ್ರಿಯ-ಬ್ರಾಹ್ಮಣರಲ್ಲಿ ನಡೆಯುವ ವಿವಾಹ; (೩) ಆರ್ಷ: ಇದರಲ್ಲಿ ತಂದೆಯು ಒಂದು ಹಸು ಮತ್ತು ಎತ್ತನ್ನು ತೆಗೆದುಕೊಂಡು ಇದಕ್ಕೆ ಬದಲಾಗಿ ತನ್ನ ಕನ್ಯೆಯನ್ನು ಕೊಡುತ್ತಾನೆ. ಇದು ಜನಪದಕ್ಕಾಗಿ ನಡೆಯುವ ಮದುವೆ; (೪) ಗಾಂಧರ್ವ: ಇದರಲ್ಲಿ ತರುಣ-ತರುಣಿಯರು ಪರಸ್ಪರ ಪ್ರೀತಿಸಿ ಮದುವೆಯಾಗುತ್ತಾರೆ. ಇದು ವಯಸ್ಕರಲ್ಲಿ ನಡೆಯುವ ಮದುವೆ; (೫) ಕ್ಷಾತ್ರ: ಇದರಲ್ಲಿ ಗಂಡನಾಗುವವನು ಕನ್ಯೆಯ ಸಂಬಂಧಿಗಳೊಡನೆ ಯುದ್ಧ ಮಾಡಿ ಗೆದ್ದು ತನ್ನ ಬಾಹುಬಲದಿಂದ ಕನ್ಯೆಯನ್ನು ಅಪಹರಿಸುವನು. ಇದು ಕ್ಷತ್ರಿಯರ ಕ್ಷಾತ್ರದಿಂದ ನಡೆಯುವ ಮದುವೆ; (೬) ಮಾನುಷ: ಇದರಲ್ಲಿ ಗಂಡನು ಕನ್ಯೆಯನ್ನು ಆಕೆಯ ತಂದೆಯಿಂದ ಕೊಂಡುಕೊಳ್ಳುವನು. ಇದು ಕ್ಷತ್ರಿಯ, ಬ್ರಾಹ್ಮಣ ಮತ್ತು ಶೂದ್ರರಲ್ಲಿ ನಡೆಯುವ ಮದುವೆ. ಕ್ಷಾತ್ರ ವಿವಾಹವನ್ನು ರಾಕ್ಷಸ ಎಂದೂ, ಮಾನುಷವನ್ನು ಆಸುರ ಎಂದೂ ಕರೆದಿದ್ದಾರೆ, ದಕ್ಷಿಣ ಜನಪದಗಳಲ್ಲಿ ಈ ವಿವಾಹ ಪದ್ಧತಿ ಇತ್ತು ಎಂಬ ಕಾರಣಕ್ಕಾಗಿ.

ಇಂಥ ಸಾಮಾಜಿಕ ಹಿನ್ನೆಲೆಯುಳ್ಳ ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಬುದ್ಧನ ಕಾಲದಲ್ಲಿ ನಡೆದ ಕತೆ, ಆಮ್ರಪಾಲಿಯ ಕತೆ. ಅಂದಿನ ಸಮಾಜದಲ್ಲಿ ಯಥೇಚ್ಛವಾಗಿ ಪ್ರಚಲಿತವಿದ್ದ ವರ್ಣಸಂಕರದ ಫಲ, ಆಮ್ರಪಾಲಿಯ ಜನನ. ಸಹಜವಾಗಿಯೇ ವರ್ಣಸಂಕರದ ಫಲವಾದ ಆಮ್ರಪಾಲಿ ಅನನ್ಯ ಸುಂದರಿಯಾಗಿ ಕಂಗೊಳಿಸುತ್ತಾಳೆ.

ಆಕೆಯ ಅದ್ಭುತವಾದ ಅನಿಂದ್ಯ ಸೌಂದರ್ಯಕ್ಕೆ ಮರುಳಾದ ಅಸಂಖ್ಯಾತ ಲಿಚ್ಛವೀ ರಾಜಕುಮಾರರ ವ್ಯಾಮೋಹದಿಂದಾಗಿ ರಾಜ್ಯದ ಹಿತದೃಷ್ಟಿಯಿಂದ ರಾಜ ನರ್ತಕಿಯಾಗಿ ತನ್ನ ಅದ್ವಿತೀಯ ದೇಶಪ್ರೇಮವನ್ನು ತೋರಿಸಿ ರಾಜ-ಮಹಾರಾಜರುಗಳು ಮಾಡಬಹುದಾದ ಕಾರ್ಯಕ್ಕಿಂತ ಉನ್ನತವಾದ ಕಾರ್ಯವನ್ನು ಸಾಧಿಸಿದ ಹೆಂಗಸು, ಆಮ್ರಪಾಲಿ.

ತನ್ನ ಕಾಲದ ಅಪ್ರತಿಮ ಸುಂದರಿಯಾಗಿ, ಶ್ರೇಷ್ಠ ಕಲೋಪಾಸಕಳಾಗಿ, ಉನ್ನತ ಮಟ್ಟದ ದೇಶಪ್ರೇಮಿಯಾಗಿ, ದೇಶ ದೇಶಗಳ ಮಧ್ಯದಲ್ಲಿದ್ದ ವಿರಸಗಳನ್ನು ಮರೆಸಿ ಸಮರಸತೆಯನ್ನು ಸಾಧಿಸಿದ ಯೋಗಿನಿಯಾಗಿ ಕಾಣುವುದರ ಮೂಲಕ ತನ್ನ ಕಾಲದಲ್ಲಿ ತನ್ನದೇ ಆದ ವಿಶಿಷ್ಟ ಇತಿಹಾಸವನ್ನು ಸ್ಥಾಪಿಸಿದ ಮಹಾತ್ಯಾಗಿನಿ ಆಮ್ರಪಾಲಿಯ ಕತೆ ಅಂದಿನಿಂದ ಇಂದಿನವರೆಗೆ ಸತತವಾಗಿ ಕವಿಗಳ, ನಾಟಕಕಾರರ, ಕಾದಂಬರಿಕಾರರ ಮನಸ್ಸನ್ನು ಸೆರೆ ಹಿಡಿದಿರುವುದಲ್ಲದೆ ಅವರನ್ನು ಚೋದಿಸಿ ಆಯಾ ಕ್ಷೇತ್ರಗಳಲ್ಲಿ ಉನ್ನತೋನ್ನತವಾದ ಗ್ರಂಥ ರಚನೆಯನ್ನು ಮಾಡಿಸಿ ಭಾರತದ ಜನಮನವನ್ನು ತನ್ನತ್ತ ಆಕರ್ಷಿಸಿ ಭಾರತೀಯ ಸಾಹಿತ್ಯದಲ್ಲಿ ಉಚ್ಚಸ್ಥಾನವನ್ನು ಪಡೆದುಕೊಂಡಿದೆ.

'ರಾಜನರ್ತಕಿ' ಕಾದಂಬರಿಯಂತೆಯೇ ಇದೇ ಕಥಾವಸ್ತುವನ್ನೇ ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಹಿಂದಿಯಲ್ಲಿ ಆಚಾರ್ಯ ಚತುರಸೇನ ಶಾಸ್ತ್ರಿ 'ವೈಶಾಲೀ ಕೀ ನಗರ ವಧೂ' ಎಂಬ ಕಾದಂಬರಿಯನ್ನೂ, ಇಂಗ್ಲಿಷಿನಲ್ಲಿ ವಿಮಲಾ ರೈನಾ 'ಅಂಬಾಪಾಲಿ' ಎಂಬ ಕಾದಂಬರಿಯನ್ನೂ ಬರೆದಿದ್ದಾರೆ. ಇವೆರಡೂ ಗಾತ್ರದಲ್ಲಿ ಹಿರಿದಾದ ಬೃಹತ್ ಕಾದಂಬರಿಗಳು. ಕನ್ನಡದಲ್ಲಿ ಡಾ. ಪ್ರಭುಶಂಕರ ಅವರು 'ಅಂಬಾಪಾಲಿ' ಎಂಬ ನಾಟಕವನ್ನು ಬರೆದಿದ್ದಾರೆ.

ಮೇಲೆ ಹೇಳಿದ ಎರಡು ಕಾದಂಬರಿಗಳೂ ಕಥಾಸಂವಿಧಾನದಲ್ಲಿ, ವಸ್ತುವಿವರಗಳಲ್ಲಿ, ನಿರೂಪಣ ಕ್ರಮದಲ್ಲಿ ಬಹುಮಟ್ಟಿಗೆ ಒಂದೇ ರೀತಿಯಲ್ಲಿ ಇರುವಂತೆ ಕಂಡುಬರುತ್ತದೆ. ಇಲ್ಲಿ ಬರುವ ಆಮ್ರಪಾಲಿಯ ಪಾತ್ರ ಚಿತ್ರಣದಲ್ಲಿ ಉದ್ದೇಶ ಮೂಲತಃ ಒಂದೇ ಆಗಿದ್ದರೂ ಪಾತ್ರ ಬೆಳವಣಿಗೆಯ ರೀತಿಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಈ ವ್ಯತ್ಯಾಸ ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ಚಿತ್ರಿತವಾಗಿರುವುದು ಕಂಡುಬರುತ್ತದೆ. ಮೇಲೆ ಹೇಳಿರುವಂತೆ ವರ್ಣಸಂಕರದ ಪಿಡುಗು ತಾನೇ ತಾನಾಗಿ ತಾಂಡವವಾಡುತ್ತಿದ್ದ ಸಂದರ್ಭದಲ್ಲಿ ಮಗಧ ಸಾಮ್ರಾಟ ಬಿಂಬಸಾರ ಇನ್ನೂ ಯುವರಾಜನಾಗಿದ್ದಾಗ ಮಾತಂಗಿ ಎಂಬ ಕುಲಗೋತ್ರಗಳೇನೂ ತಿಳಿಯದ ಕನ್ಯೆಯ ಸ್ನೇಹದ ಫಲವಾಗಿ ಆಕೆಯ ಗರ್ಭದಿಂದ ಪಾಲಿಯ ಅಣ್ಣನಾದ ಸೋಮಪ್ರಭನೂ, ಬಿಂಬಸಾರನ ಮಿತ್ರನೂ ಮಂತ್ರಿಯೂ ಆಗಿದ್ದ ವರ್ಷಕಾರನಿಂದ ಅದೇ ಮಾತಂಗಿಯ ಗರ್ಭದಲ್ಲಿ ಪಾಲಿಯೂ ಹುಟ್ಟಿದಳೆಂದೂ, ಹುಟ್ಟಿದ ತಕ್ಷಣ ಈ ಶಿಶುಗಳು ಪ್ರಕೃತಿಯ ಮಡಿಲಲ್ಲಿ ಆಶ್ರಯಪಡೆದುವೆಂದೂ ತಿಳಿಯುತ್ತದೆ. ಮಾವಿನ ಮರದ ಅಡಿಯಲ್ಲಿ ಸಿಕ್ಕಿದ ಈ ಮಗುವನ್ನೇ ವೈಶಾಲಿಯ ಸಂಥಾಗಾರದ ಅಧ್ಯಕ್ಷ ಮಹಾನಾಮರು ಸಾಕಿ ದೊಡ್ಡವಳನ್ನಾಗಿ ಮಾಡುತ್ತಾರೆ.

ವರ್ಣಸಂಕರದಿಂದ ಹುಟ್ಟಿದ ಈ ಪಾಲಿ ಮಹಾನಾಮರ ಕಣ್ಮಣಿಯಾಗಿ ಬೆಳೆಯುತ್ತಾಳೆ. ವಿವಾಹಾವಸ್ಥೆಗೆ ಬಂದ ಮೇಲೆ ತಾನು ಮೈಗೂಡಿಸಿಕೊಂಡಿದ್ದ ಸೌಂದರ್ಯದಿಂದ ಜನಮನವನ್ನು ಆಕರ್ಷಿಸುತ್ತಾಳೆ. ಅಂಬಾಪಾಲಿಯ ರೂಪಸುಧಾಪ್ರಮತ್ತರಾದ ವೈಶಾಲಿಯ ಲಿಚ್ಛವೀ ಸಾಮಂತರು ಅವಳಿಗಾಗಿ ಪರಸ್ಪರ ಹೊಡೆದಾಡಿ ಸಾಯಲೂ

ಸಿದ್ಧರಾಗುತ್ತಾರೆ. ಕೆಲವರು ಸಾವನ್ನು ಅಪ್ಪುತ್ತಾರೆ. ಕೊನೆಗೆ ಲಿಚ್ಛವೀ ಗಣತಂತ್ರದ ಧಾರ್ಮಿಕ ಆಧಾರ ಗ್ರಂಥವಾದ 'ಪ್ರವೇಣಿ' ಪುಸ್ತಕದ ಕಟ್ಟಳೆಯಂತೆ ರಾಜ್ಯದ ಐಕ್ಯದ ಹಾಗೂ ಲಿಚ್ಛವೀ ಗಣತಂತ್ರದ ಹಿತದೃಷ್ಟಿಯಿಂದ ವೃದ್ಧ ಮಹಾನಾಮನು, ರಾಷ್ಟ್ರ ಭಕ್ತಿಯ ಸಂಕೇತವಾದ ಮಹಾನಾಮನು, ಕೇವಲ ರಾಜ್ಯದ ಕಲ್ಯಾಣದ ದೃಷ್ಟಿಯಿಂದ ತನ್ನ ಮಗಳ ಹಿತವನ್ನೂ ಲಕ್ಷಿಸದೆ, ಅಭಯನ ಕಾಮುಕ ಮನೋಭಾವವನ್ನು ಕಂಡು ಹೇಸಿ, ಆಮ್ರಪಾಲಿಯನ್ನು 'ರಾಜನರ್ತಕಿ' ಎಂದು ಸಂಥಾಗಾರದಲ್ಲಿ ಎಲ್ಲರೂ ಆಶ್ಚರ್ಯ ಪಡುವಂತೆ ಘೋಷಿಸುತ್ತಾನೆ. ತಾನೂ ಉಳಿದ ಲಿಚ್ಛವಿಯರಂತೆಯೇ ಈ ಲಿಚ್ಛವೀ ಗಣತಂತ್ರದ ಒಬ್ಬ ಪ್ರಜೆ; ಆ ಪ್ರಜೆಗೆ ಇರಬೇಕಾದ ಎಲ್ಲಾ ಸೌಲಭ್ಯಗಳನ್ನೂ ಪಡೆಯುವ ಹಕ್ಕುಳ್ಳ ನಾನು ನಾನಾಗಿ, ನನ್ನವೇ ಆದ ಕಲ್ಪನೆಗಳನ್ನು ರೂಪಿಸಿಕೊಂಡು, ನನ್ನ ಜೀವನದ ಕಹಿ ಸಿಹಿಗಳನ್ನು ಅನುಭವಿಸುವ ಹಕ್ಕು ನನಗಿಲ್ಲವೇ? ನಾನು ನನಗೆ ಇಷ್ಟರಾದವರನ್ನು ಪ್ರೇಮಿಸಿ ವಿವಾಹವಾಗಿ ಮಧುರವಾದ ದಾಂಪತ್ಯ ಸುಖವನ್ನು ಅನುಭವಿಸುವ ಹಕ್ಕಿಲ್ಲವೇ? ಸುಂದರಿಯಾಗಿ ಹುಟ್ಟಿದ್ದೆ ತಪ್ಪೆ ಎಂದು ಮುಂತಾಗಿ ಆಲೋಚಿಸಿದರೂ ಲಿಚ್ಛವೀ ಧರ್ಮಕ್ಕನುಗುಣವಾಗಿ, ತನ್ನ ತಂದೆಯ ಕೀರ್ತಿ–ಗೌರವಕ್ಕಾಗಿ ತನ್ನ ಕೋಮಲವಾದ, ಸುಂದರವಾದ ಭಾವಕುಸುಮಗಳನ್ನು ಕಿವುಚಿ, ಹೃದಯವನ್ನು ಪಾಷಾಣವನ್ನಾಗಿ ಮಾಡಿಕೊಂಡು ಆ ಜೀವನವನ್ನು ಒಪ್ಪಿ ನಡೆಯುತ್ತಾಳೆ. ರಾಜನರ್ತಕಿಯಾದರೂ ತನ್ನ ಪಾತಿವ್ರತ್ಯಕ್ಕೆ ಭಂಗ ತಂದುಕೊಳ್ಳದೆ ತನ್ನ ಕರ್ತವ್ಯವನ್ನೂ ಪಾಲಿಸುತ್ತಾಳೆ; ಕೊನೆಗೆ ಬುದ್ಧನ ಶರಣು ಹೋಗಿ ಸನ್ಯಾಸಿನಿಯಾಗುತ್ತಾಳೆ.

ಮಗಧ ಸಾಮ್ರಾಟ ಬಿಂಬಸಾರ ಮತ್ತು ಲಿಚ್ಛವೀ ಗಣತಂತ್ರದ ಅನುಪಮ ಸುಂದರಿ ಆಮ್ರಪಾಲಿ ಇವರಿಬ್ಬರ ಪ್ರಣಯ ಕತೆಯೇ 'ರಾಜನರ್ತಕಿ' ಕಾದಂಬರಿಯ ಕಥಾವಸ್ತು. ಎರಡು ವಿರುದ್ಧ ರಾಷ್ಟ್ರಗಳ ಮಧ್ಯೆ ಅರಳಿದ ಈ ಪ್ರಣಯ ಕುಸುಮ ರಾಷ್ಟ್ರ ಪ್ರೇಮದ ಯಾಗಾಗ್ನಿಯಲ್ಲಿ ಹೇಗೆ ಕಮರಿ ಹೋಯಿತು ಎಂಬುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಆಮ್ರಪಾಲಿಯ ರೂಪಸುಧೆ ಲಿಚ್ಛವೀ ಗಣತಂತ್ರದ ಯುವಕರನ್ನು ಆಕೆಯಲ್ಲಿ ಪ್ರಣಯೋನ್ಮತ್ತರನ್ನಾಗಿ ಮಾಡಿ ಲಿಚ್ಛವಿಯ ಸಮಸ್ತ ಯುವಕ ಸಂತತಿಯನ್ನೇ ನಿರ್ಮೂಲ ಮಾಡಲು ತೊಡಗುತ್ತದೆ. "ಇಷ್ಟು ರೂಪ, ಇಷ್ಟು ಮಾದಕತೆ! ಇಂತಹ ಚಂಚಲ ಯೌವನ; ಹೃದಯದ ವೇಗವನ್ನು ಇನ್ನೂ ತೀವ್ರಗೊಳಿಸುವ ಈ ನೃತ್ಯಾಂಗನೆ!....'ಕವಿಗಳ ಕಾವ್ಯಗಳಿಂದ, ಕತೆಗಾರರ ವರ್ಣನೆಗಳಿಂದ, ಕಲಾವಿದರ ಚಿತ್ರಗಳಿಂದ ಉದ್ಭವವಾದ ತೇಜಸ್ಸು ಮತ್ತು ಸೌಂದರ್ಯದ ಸತ್ವವೋ' ಎಂಬಂತಿದ್ದ ಆ ಸುಂದರಿ, ಸಮ್ಮೋಹಕವಾದ ಚೆಲುವನ್ನು ಚೆಲ್ಲುತ್ತಾ ರಥದ ಮೇಲೆ" (ಪುಟ ೧೨–೧೩) ಬಂದಳೆಂದರೆ ಸುಧೀರನಂತಹ ಯುವಕರು ಹಾಗೆಯೇ ನಿಂತುಬಿಡುತ್ತಿದ್ದರು. "ಪಾಲಿ ಎಂದರೆ ಯಾರು ತಾನೆ ಮುಗ್ಧರಾಗರು?....ಪಾಲಿ ಒಬ್ಬಳು, ಅವಳನ್ನು ವಿವಾಹವಾಗುವವರು ಲಕ್ಷ ಸಂಖ್ಯೆಯ ಮಂದಿ. ಹೀಗಿರುವುದರಿಂದ ಪಾಲಿ ವಿವಾಹವಾಗಲು ಸಾಧ್ಯವಿಲ್ಲ....ಆದರೆ ಪಾಲಿಯನ್ನು ಪ್ರೇಮಿಸದ

ದವನು ಯುವಕನೇ ಅಲ್ಲ....ಪಾಲಿಗಾಗಿ ತನ್ನನ್ನೇ ತಾನು ವಂಚಿಸಿಕೊಳ್ಳದವನು ಮನುಷ್ಯನೇ ಅಲ್ಲ....ಪಾಲಿಯನ್ನು ಯಾರು ನೋಡಿಲ್ಲವೋ ಅವನು ಜಗತ್ತಿನಲ್ಲಿ ಏನನ್ನೂ ನೋಡಿಲ್ಲ....ಪಾಲಿ ಅದ್ವಿತೀಯಳು ಮತ್ತು ಅನುಪಮಳು" (ಪುಟ ೧೬-೧೭) ಎಂದು ಬ್ರಹ್ಮದತ್ತನೊಡನೆ ಸಂಜಯ ಹೇಳುವ ಮಾತುಗಳು ಪಾಲಿಯ ವಿಷಯದಲ್ಲಿ ಅಕ್ಷರಶಃ ಸತ್ಯ. "ಪಾಲಿ ವಿವಾಹವಾಗಿಬಿಡು. ಹಗಲು ರಾತ್ರಿ ಪ್ರೇಮದಲ್ಲಿ ಬೇಯುತ್ತಿರುವ ಯುವಕರಿಗೆ ಸ್ವಲ್ಪವಾದರೂ ಶಾಂತಿ ಸಿಕ್ಕಲಿ" (ಪುಟ ೧೯) ಎಂದು ರೇವಾ ಪಾಲಿಯೊಂದಿಗೆ ಹೇಳುವ ಮಾತೂ ಸತ್ಯ. "ಆದರೆ ಮದುವೆಯಾಗುವುದು ಯಾರನ್ನ?" (ಅಲ್ಲೇ) ಎಂದು ಹೇಳುವ ಪಾಲಿಯ ಮಾತೂ ಅಷ್ಟೇ ಸತ್ಯ. ಇಂಥ ಪಾಲಿಯನ್ನು ಬಿಂಬಸಾರನ ಸಾಹಸೀ ಹೃದಯ ಒಂದು ಬಾರಿ ನೋಡಬೇಕೆಂಬ ಅಧೈರ್ಯಕ್ಕೆ ಒಳಗಾಯಿತು.

ಕ್ಷತ್ರಿಯ ರಾಜರಲ್ಲಿ ಗೌತಮ ಬುದ್ಧನ ಪ್ರಥಮ ಅನುಯಾಯಿಯೂ ಹಾಗೂ ಅವನಿಗಿಂತ ಐದು ವರ್ಷ ಚಿಕ್ಕವನೂ ಆಗಿದ್ದ ಬಿಂಬಸಾರ ಪರಾಕ್ರಮಿಯೂ ವಿದ್ವಾಂಸನೂ ಆಗಿದ್ದ. ಅಷ್ಟೇ ಅಲ್ಲದೆ ರಸಿಕನೂ ಆಗಿದ್ದ. ಅವನಿಗೆ ತನ್ನ ಮಹಿಮೆಯಲ್ಲಿ ಎಷ್ಟು ಗರ್ವವಿತ್ತೋ ಅವನ ಪ್ರಜೆಗಳಿಗೂ ಅವನು ತಮ್ಮ ರಾಜನಾಗಿದ್ದ ಹೆಮ್ಮೆ ಅದಕ್ಕಿಂತ ಹೆಚ್ಚಾಗಿತ್ತು. ಬರಿಯ ಸೌಂದರ್ಯ ವರ್ಣನೆಯಿಂದ ಯಾರಿಗಾಗಿಯಾದರೂ ಹುಚ್ಚರಾಗುವವರ ಸಂಖ್ಯೆ ಕಡಿಮೆ. ಲೋಕ ಅವನನ್ನು ಕವಿ ಎನ್ನುತ್ತದೆ. ಆದರೆ ಪಾಲಿಯ ವಿಷಯ ಕೇಳಿ ಅವಳಿಗಾಗಿ ಹುಚ್ಚರಾಗಿರುವವರ ಸಂಖ್ಯೆ ಅಸಂಖ್ಯಾತವಾಗಿತ್ತು. ಅವರಲ್ಲಿ ಮಗಧರಾಜ ಬಿಂಬಸಾರನೂ ಒಬ್ಬನಾಗಿದ್ದ. ಬಿಂಬಸಾರನ ಪ್ರತಿ ಉಸಿರಿನಲ್ಲಿಯೂ ಆಮ್ರಪಾಲಿ ಪ್ರವೇಶಿಸಿದ್ದಳು. ಆಕೆಯನ್ನು ನೋಡಿಕೊಂಡು ಬಂದ ಬ್ರಹ್ಮದತ್ತ "ಆಮ್ರಪಾಲಿ.... ವೀರಾಂಗನೆ, ಬುದ್ಧಿಶಾಲಿನಿ, ಸುಂದರಿ, ಅದ್ಭುತ ಆಕರ್ಷಕ ಅವರ್ಣನೀಯ, ಅದ್ವಿತೀಯ" (ಪುಟ ೨೫) ಅಪ್ರತಿಮ ರೂಪಸಿ ಎಂದು ಮುಂತಾಗಿ ವರ್ಣಿಸಿದರೆ, ಅವನ ಜೊತೆಯಲ್ಲಿಯೇ ಹೋಗಿ ಬಂದಿದ್ದ ಸಂಜಯ "ಪಾಲಿಗೆ ಅನುರೂಪನಾಗಿರುವ ಪುರುಷ ಒಬ್ಬ ಮಾತ್ರ. ಅವರೆ ಮಗಧರಾಜ ಬಿಂಬಸಾರ" (ಅಲ್ಲೇ) ಎಂದು ಹೇಳಿ ಬ್ರಹ್ಮದತ್ತನನ್ನು ಕರೆದುಕೊಂಡು ಅಲ್ಲಿಂದ ಹೊರಟು ಹೋಗುತ್ತಾನೆ. ಈ ಮಾತು ಬಿಂಬಸಾರನ ಹೃದಯದಲ್ಲಿ ಅನುರಣಿತವಾಗುತ್ತದೆ.

ಈ ಮಧ್ಯೆ ಕುಟಿಲ ರಾಜತಂತ್ರಜ್ಞನೂ, ಡಾಂಭಿಕನೂ, ನೀಚನೂ, ಸಾಧುರೂಪದಲ್ಲಿದ್ದ ಪಿಶಾಚಿಯೂ ಆದ ಅಭಯನ ಹದ್ದಿನ ಕಣ್ಣು ಪಾಲಿಯ ಮೇಲೆ ಬಿದ್ದಿರುತ್ತದೆ. ಪಾಲಿ ಕೇವಲ ಸೌಂದರ್ಯದ ಪ್ರತಿಮೂರ್ತಿ ಮಾತ್ರವಾಗಿರಲಿಲ್ಲ. ಅವಳ ಬುದ್ಧಿ ತೀಕ್ಷ್ಣವಾಗಿತ್ತು. ಅವಳ ಚೇಷ್ಟೆಯ ಸ್ವಭಾವದ ಮರೆಯಲ್ಲಿ ಆಳವಾದ ವಿವೇಕವಿತ್ತು. ತನಗಾಗಿ ಜನ ಹೇಗೆ, ಏಕೆ ಹುಚ್ಚರಾಗುತ್ತಾರೆಂಬುದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ವಿದ್ವತ್ತು, ಸೌಂದರ್ಯ ಮತ್ತು ಅದ್ಭುತ ತೇಜಸ್ಸು ಆಕೆಯ ಆಕರ್ಷಣೆಯ ಮುಖ್ಯ ರಹಸ್ಯಗಳಾಗಿದ್ದವು. ಅವಳನ್ನು ಜಯಿಸಲು ಅಪೇಕ್ಷಿಸುವವರಲ್ಲಿ ಈ ಮೂರು ಗುಣಗಳೂ ಇರಲಿಲ್ಲ. ಒಂದಿದ್ದರೆ ಇನ್ನೊಂದು ಇರುತ್ತಿರಲಿಲ್ಲ. ಹೀಗಿದ್ದುದರಿಂದ ಅವಳ ಮನಸ್ಸನ್ನು

ಯಾರೂ ಜಯಿಸಿರಲಿಲ್ಲ. ಹೀಗಾಗಿ ತನ್ನ ವಿವಾಹದ ಮಾತುಗಳನ್ನು ಹುಡುಗಾಟಿಕೆಯ ಮಾತುಗಳಲ್ಲಿ ಹಾರಿಸಿಬಿಡುತ್ತಿದ್ದಳು. ಮದುವೆಯ ವಿಷಯದಲ್ಲಿ ಅಣ್ಣನ ತಂಗಿಯ ಜೊತೆಯಲ್ಲಿ ಹಾಸ್ಯ ಮಾಡುತ್ತಿರುವಾಗಲೇ ಮಗಧ ಸಾಮ್ರಾಟ ಬಿಂಬಸಾರ ಬೊಂಬೆ ಯಾಟದ ಸೂತ್ರಧಾರನಾಗಿ ಅಲ್ಲಿಗೆ ಬಂದಿರುತ್ತಾನೆ. ಆಕೆಯ ಅಣ್ಣ "ನಮ್ಮ ಶತ್ರುಗಳು ಕಾಡು ಮನುಷ್ಯರಲ್ಲ, ಮಾಗಧಿಯರು" (ಪುಟ ೪೫) ಎಂದಾಗ "ಮಾಗಧಿಗಳೇ ಆಗಲಿ ಅಥವಾ ಅವರ ರಾಜನೇ ಆಗಲಿ" (ಅಲ್ಲೇ) ಎನ್ನುತ್ತಾಳೆ. "ಅವನು ಬಂದರೆ ಏನು ಹೇಳುವೆ?" (ಅಲ್ಲೇ) "ಮೊದಲು ನಾನಲ್ಲ ಹೇಳುವುದು. ನನ್ನ ಬಾಣ. ಒಂದು ಸಲ ನನ್ನ ಎದುರಿಗೆ ನಿಲ್ಲಲಿ....ಆಗ....ಆಗ...." (ಅಲ್ಲೇ) ಎನ್ನುತ್ತಿರುವಂತೆಯೇ ಅವಳ ದೃಷ್ಟಿ ಬೊಂಬೆ ಯಾಟದ ಸೂತ್ರಧಾರನ ಮೇಲೆ ಬೀಳುತ್ತದೆ. ಆಗ ಸೂತ್ರಧಾರ ನಮಸ್ಕರಿಸಿ ಅನಂತರ ಬೊಂಬೆಯಾಟವನ್ನು ಪ್ರದರ್ಶಿಸುತ್ತಾನೆ. "ಅವಿವಾಹಿತಳಾಗಿರುವುದಕ್ಕಿಂತ ಹಲ್ಲು ಬಿದ್ದ ಮುದುಕನನ್ನಾದರೂ ಮದುವೆಯಾಗುವುದೇ ಸಾವಿರ ಪಾಲು ಉತ್ತಮ" (ಅಲ್ಲೇ) ಎಂಬುದೇ ಆ ಬೊಂಬೆಯ ನಾಟಕದ ವಸ್ತುವಾಗಿತ್ತು. ಚಿಕ್ಕ ಹೆಂಡತಿ ಮತ್ತು ವೃದ್ಧ ಪತಿಯ ನಡುವೆ ನಡೆಯುವ ವಿವಿಧ ಪ್ರಸಂಗಗಳನ್ನು ತೋರಿಸುತ್ತ ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದನು.

ಆಗ ಪಾಲಿಯ ಲಕ್ಷವೆಲ್ಲ ಸೂತ್ರಧಾರನಲ್ಲಿಯೇ ನೆಟ್ಟಿತ್ತು. ಸೂತ್ರಧಾರನ ತೀಕ್ಷ್ಣ ವಾದ ಕಣ್ಣುಗಳು ಅವಳ ಹೃದಯದ ಯಾವುದೋ ಗಹನವಾದ ಭಾವನೆಗಳನ್ನು ಎಚ್ಚರಿಸಿ ಅವಳನ್ನು ಅವನ ಕಡೆಗೆ ಸೆಳೆಯುತ್ತಿದ್ದವು. ಬಹಳ ಸಮೀಪದ ಆತ್ಮೀಯ ನೊಬ್ಬ ಅನೇಕ ವರ್ಷಗಳ ನಂತರ ಸಿಕ್ಕಿಯೂ ತನ್ನ ಕಡೆಗೆ ನೋಡಲು ಇಚ್ಛೆ ಇಲ್ಲವೋ ಎಂಬಂತೆ ಪಾಲಿಗೆ ಭಾಸವಾಯಿತು. ಪಾಲಿಯ ಮನಸ್ಸು ಬಾರಿಬಾರಿಗೂ ಅವನ ಕಡೆಗೆ ಹರಿಯುತ್ತಿತ್ತು. ನಾಟಕ ಮುಗಿದ ಮೇಲೆ 'ಪರದೇಶದವನೊಬ್ಬನ ಕಾಣಿಕೆ' ಎಂದು ಪಾಲಿಯು ಆಸಕ್ತಳಾಗಿ ನೋಡುತ್ತಿದ್ದ ಚಿಕ್ಕ ಸೂತ್ರದ ಬೊಂಬೆಯನ್ನು ಅವಳ ಕೈಗೆ ಕೊಟ್ಟ ಅವನ ಧ್ವನಿಯನ್ನು ಕೇಳಿ ಪಾಲಿ ಒಂದು ಕ್ಷಣ ಸ್ತಂಭಿತಳಾದಳು. ಯಾರಿಗೂ ಸೋಲದ ಪಾಲಿ ಬಿಂಬಸಾರನಿಗೆ ಸೋತಳು. ಇತ್ತ ಬಿಂಬಸಾರನ ರೋಮ ರೋಮಗಳ ಲ್ಲಿಯೂ ಪಾಲಿ ಸೇರಿಹೋದಳು. ಅವನು ಪಾಲಿಯ ಪ್ರಾಸಾದಕ್ಕೆ ಹೋಗಿದ್ದ. ಪಾಲಿ ಅವನನ್ನು ಜಯಿಸಿದಳು. ಯಾವಾಗಲೂ ಹೆಂಗಸಿಗೆ ಸೋಲುವುದೇ ಗಂಡಸಿನ ಹಣೆಯ ಬರಹ. ಪರಾಜಿತನಾಗದವನು ಪುರುಷನಲ್ಲ ಅಥವಾ ಅವನು ಮಹಾತ್ಮನಾಗಿರಬೇಕು.

ಬಿಂಬಸಾರ ಅಂಥ ಮಹಾತ್ಮನೇನೂ ಅಲ್ಲ. ನಿಜವಾದ ಜಿತೇಂದ್ರಿಯ ಬ್ರಹ್ಮಚಾರಿಯೂ ಅಲ್ಲ. ಇಂಥವನನ್ನು ಪಡೆಯಲು ಎಷ್ಟೋ ಜನ ಅಪ್ಸರೆಯರನ್ನೂ ನಾಚಿಸುವಂತಹ ಸುಂದರಿಯರು ಪ್ರಯತ್ನಿಸಿ ವಿಫಲರಾಗಿದ್ದರು. ಇಂಥವನನ್ನೂ ಪಾಲಿ ಜಯಿಸಿದಳು. ಇಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅಜೇಯರಾಗಿದ್ದರು, ಅಸಾಧ್ಯರಾಗಿದ್ದರು. ಆದರೆ ಅಂಥವರು ಪರಸ್ಪರ ಸೋತಿದ್ದರು. ಸೋತು ಗೆದ್ದಿದ್ದರು.

ಮತ್ತೊಮ್ಮೆ ನಂದಿಗ್ರಾಮಕ್ಕೆ ಬರುತ್ತಿರುವಾಗ ಸೂತ್ರಧಾರ ತನ್ನ ಶೌರ್ಯವನ್ನು

ಪ್ರದರ್ಶಿಸಿದ. ಅದು ಸಣ್ಣ ವಿಷಯ, ಅತಿ ಸಣ್ಣ ವಿಷಯ. ಆದರೆ ಪಾಲಿ ಪ್ರದರ್ಶಿತವಾದ ಶೌರ್ಯದಿಂದ ಪರಾಜಿತಳಾದಳು. ಅಂಥ ವಿಷಮ ಪರಿಸ್ಥಿತಿಯಲ್ಲೂ, ಅಣ್ಣ ಶತ್ರುಗಳ ಬಾಣವೇಟಿನಿಂದ ಗಾಯಗೊಂಡಿದ್ದರೂ, ನಿರ್ಭಯಳೂ ನಿರ್ಭೀತಳೂ ಆಗಿ ವ್ಯಂಗ್ಯ ಮಾಡುತ್ತಿದ್ದ ಪಾಲಿಯನ್ನು ಕಂಡು ಬಿಂಬಸಾರ ಚಕಿತನಾದ. ಆ ಸಂದರ್ಭದಲ್ಲಿ ದೂರದಲ್ಲಿ ಬರುತ್ತಿದ್ದ ಅಶ್ವಾರೋಹಿಗಳ ಮೇಲೆ ಬಾಣ ಪ್ರಯೋಗ ಮಾಡಿ ಶತ್ರುಗಳಿಬ್ಬರನ್ನೂ ಯಮಸದನಕ್ಕೆ ಕಳುಹಿಸಿ ಪಾಲಿಯು ತೋರಿದ ಆಕಸ್ಮಿಕ ಶೌರ್ಯಪ್ರದರ್ಶನವನ್ನು ಕಂಡು ಬಿಂಬಸಾರ ಮತ್ತಷ್ಟು ಚಕಿತನಾದ. "ಬಿಂಬಸಾರ ಪಾಲಿಯಿಂದ ಜಯಿಸಲ್ಪಟ್ಟಿದ್ದ. ರಣ ಚಂಡಿಯ ಶೌರ್ಯ ಮತ್ತು ಸ್ಫೂರ್ತಿಯನ್ನು ಇಂದು ಅವಳಲ್ಲಿ ಕಣ್ಣಾರೆ ಕಂಡಿದ್ದ. ಅವಳು ಕುಳಿತ ಭಂಗಿ, ಚಪಲತೆ, ಚಾತುರ್ಯಪೂರ್ಣ ಧೈರ್ಯ ಮತ್ತು ಸಂಯಮ ಇವೆಲ್ಲ ಅವನನ್ನು ಭ್ರಾಂತಿಗೊಳಿಸಿದ್ದವು. ಪಾಲಿ ತನ್ನ ಹೃದಯದಲ್ಲಿ ಆಳ್ವಿಕೆ ಮಾಡುತ್ತಿರುವುದು ಅವನಿಗೆ ಮೊದಲ ಬಾರಿಗೆ ಅನುಭವವಾಯಿತು. ಆದರೆ ಅವಳನ್ನು ಹೊಂದುವ ಶಕ್ತಿಯೂ, ಹೊಂದಬಹುದೆಂಬ ಆಶೆಯೂ ಅವನಿಗಿರಲಿಲ್ಲ." (ಪುಟ ೫೬)

ದಿನದಿಂದ ದಿನಕ್ಕೆ ಕ್ಷಣದಿಂದ ಕ್ಷಣಕ್ಕೆ ಹುಣ್ಣಿಮೆಯ ಚಂದ್ರನಂತೆ ಅವರ ಪ್ರೇಮವು ಗಾಢವಾಗುತ್ತ ಬಂತು. ಅನಿಶ್ಚಿತತೆಯ ತೂಗುಯ್ಯಾಲೆಯಲ್ಲಿಯೇ ಇವರ ಪ್ರಣಯಲತೆ ದಾಂಗುಡಿಯಿಟ್ಟಿತು. ಕೊನೆಗೆ ವೈಶಾಲಿಯ ಸಂಥಾಗಾರದಲ್ಲಿ ಅದರ ಅಧ್ಯಕ್ಷ, ಪಾಲಿಯ ತಂದೆ ಮಹಾನಾಮರು ಲಿಚ್ಛವೀ ಗಣತಂತ್ರದ ಉಳಿವಿಗಾಗಿ, ಐಕ್ಯಕ್ಕಾಗಿ ತಮ್ಮ ಜೀವದ ಉಸಿರಾಗಿ ಕಣ್ಮಣಿಯಾಗಿ ಬೆಳೆದ ಪಾಲಿಯನ್ನು, ರಾಷ್ಟ್ರ ಕಲ್ಯಾಣಕ್ಕಾಗಿ ಇನ್ನು ಮೇಲೆ ಪಾಲಿ ರಾಜನರ್ತಕಿ, ವೈಶಾಲಿಯ ನಗರವಧು ಎಂದು ಘೋಷಿಸಿದರು. ಇತ್ತ ಅದೇ ಸಮಯದಲ್ಲಿ ಗ್ರಾಮದ ಹೊರಗೆ ವೇದಾಂತಿಯ ಸಮ್ಮುಖದಲ್ಲಿ ಲಿಚ್ಛವೀ ಗಣತಂತ್ರದ ಪರಮಶತ್ರು ಎಂದು ಘೋಷಿಸಲ್ಪಟ್ಟ ಮಗಧ ಸಾಮ್ರಾಟ ಬಿಂಬಸಾರನೊಂದಿಗೆ ಪಾಲಿಯ ವಿವಾಹವಿಧಿ ನಡೆದುಹೋಯಿತು. ಪಾಲಿ ತನ್ನ ಸರ್ವಸ್ವವನ್ನೂ ಬಿಂಬಸಾರನಲ್ಲಿ ಸಮರ್ಪಿಸಿದಳು. ತಾನು ಮದುವೆಯಾದದ್ದು ತಮ್ಮ ಪರಮ ಶತ್ರುವನ್ನು ಎಂದು ಗೊತ್ತಾದಾಗ ಪಾಲಿಗೆ ಉಂಟಾದ ದುಃಖ ಅಷ್ಟಿಷ್ಟಲ್ಲ. ಆದರೆ ವೈಶಾಲಿ ಮತ್ತು ರಾಜಗೃಹವನ್ನು, ಲಿಚ್ಛವಿ ಮತ್ತು ಮಾಗಧೀಯರನ್ನು ಒಂದುಗೂಡಿಸಲು ಇದ್ದ ಒಂದೇ ಒಂದು ಮಾರ್ಗ ಪರಸ್ಪರ ಪ್ರೇಮವನ್ನು ಗೆಲ್ಲುವುದು. ಇದಕ್ಕಾಗಿಯೇ ನನ್ನ ಮಹಾಮಂತ್ರಿ ಆಕಸ್ಮಿಕವಾಗಿ ಪ್ರಾಣತ್ಯಾಗ ಮಾಡಿದ ಎಂದು ಹೇಳಿ ಪಾಲಿಯ ಮನಸ್ಸಿನಲ್ಲಿದ್ದ ಕೆಟ್ಟ ಭಾವನೆಯನ್ನು ದೂರ ಮಾಡಿದ. ಅನಂತರ ಪ್ರಾಯಃ ಮನುಷ್ಯಮಾತ್ರದವರು ಅನುಭವಿಸಬಹುದಾದ ಅಪ್ಪುಗೆಯ ಸುಖದ, ಆನಂದದ ಪರಾಕಾಷ್ಠೆಯಲ್ಲಿ ಇಬ್ಬರೂ ಮುಳುಗಿ ಹೋದರು, ಕರಗಿ ಹೋದರು. ಅವರಿಬ್ಬರ ಜೀವನದಲ್ಲಿ ನ ಭೂತೋ ನ ಭವಿಷ್ಯತಿ ಎನ್ನಬಹುದಾದ ಆನಂದದ ಅಮೃತ ಘಳಿಗೆಗಳನ್ನು ಅವರಿಬ್ಬರೂ ಅನುಭವಿಸಿದರು. ಈ ಜೋಡಿಯೊಂದನ್ನು ಬಿಟ್ಟರೆ ಪ್ರಪಂಚದ ಬೇರಾವ ಜೋಡಿಯೂ ಅದರ ಸಮವಲ್ಲವೇನೋ ಎಂಬಂತಹ ಅನುಭವ ಪಡೆದರು. ಅದಕ್ಕೆಯೋ ಏನೋ

ಅವರಿಬ್ಬರ ಜೀವನದಲ್ಲಿಯೂ ಅಂಥ ಸುಖ, ಆನಂದ ದೊರೆತದ್ದು ಅದೇ ಮೊದಲು. ಅದೇ ಕೊನೆ. ಪಾಲಿಯ ಜೀವನದ ಪ್ರಶಸ್ತವಾದ, ಸುಂದರವಾದ, ಆನಂದದಾಯಕವಾದ ಒಂದು ಘಟ್ಟ ಇಲ್ಲಿಗೆ ಮುಗಿಯುತ್ತದೆ.

ತಂದೆ ಮಹಾನಾಮರು ಮಗಳು ಪಾಲಿಯನ್ನು ರಾಜನರ್ತಕಿಯನ್ನಾಗಿ ಘೋಷಿಸಿರುವ ಸುದ್ದಿಯನ್ನು ಅಣ್ಣ ಆನಂದ ಪಾಲಿಗೆ ತಿಳಿಸುತ್ತಾನೆ. ಪಾಲಿಯ ಸ್ಥಿತಿ ಹೇಗಿರಬೇಡ! ತನ್ನ ಅನುಪಮ ಸೌಂದರ್ಯ ಹಾಗೂ ಸರಸ ವಿನೋದ ಪ್ರವೃತ್ತಿಯ ಜೊತೆಗೆ ಕಲ್ಲು ಹೃದಯಿಯೂ ಆಗಿ ತನ್ನ ಹೃದಯದ ಕುಸುಮ ಕೋಮಲ ಭಾವಗಳನ್ನೂ ಚಿವುಟಿ ಕಠಿಣಳಾಗಿ ವರ್ತಿಸುವ ಆತ್ಮಸ್ಥೈರ್ಯವನ್ನೂ ಹೊಂದಿದ್ದಳು ಪಾಲಿ. ತನ್ನ ಸಮಸ್ತವನ್ನೂ ಸೂರೆಗೊಂಡ ಪ್ರಿಯ ಮಗಧ ಸಾಮ್ರಾಟ ಬಿಂಬಸಾರನನ್ನು ಬಂದಕ್ಕೆ ಕಳುಹಿಸಿಕೊಡುವ ಸಂದರ್ಭದಲ್ಲಿನ ಆಕೆಯ ವರ್ತನೆ ಅವಳ ಈ ವಿಲಕ್ಷಣ ಸ್ಥೈರ್ಯಕ್ಕೆ ಸಾಕ್ಷಿ ನುಡಿಯುತ್ತದೆ. ಈ ಆಘಾತವೇ ಸಾಲದೆಂಬಂತೆ ತಂದೆ ಮಹಾನಾಮರ ಬಳಿ ಬಂದಾಗ ತಿಳಿಯುತ್ತದೆ, ತಾನು ಅವರ ಪುತ್ರಿಯಲ್ಲ, ಸಾಕು ಮಗಳು ಎಂಬುದು. ಈ ದುಃಖದ ಬೆನ್ನ ಹಿಂದೆಯೇ ಮಹಾನಾಮರ ಮರಣ. ಅಣ್ಣ ಆನಂದ ಸಂಸಾರ ತ್ಯಾಗ ಮಾಡಿ ಸನ್ಯಾಸಿಯಾದನೆಂಬ ಸುದ್ದಿ. ದುಃಖದ ಮೇಲೆ ದುಃಖ, ಆಘಾತಗಳ ಮೇಲೆ ಆಘಾತ. ಮುಂದೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ, ಮನಃಪೂರ್ವಕವಾಗಿ ಪ್ರೀತಿಸಿದ ಅಣ್ಣನ ಏಕೈಕ ಸ್ಮೃತಿ, ತನ್ನ ಕೊನೆಯ ಆಧಾರವಾದ ತನ್ನ ಮಗನೂ ಕೈಬಿಟ್ಟು ಹೋಗುತ್ತಾನೆ. ಜೀವನವನ್ನು ಇನ್ನೂ ಪ್ರಾರಂಭಿಸುತ್ತಿದ್ದವಳ ಪಾಲಿಗೆ ಇಂಥ ಅಸಹನೀಯ ದುಃಖಗಳು ಒಂದಾದ ಮೇಲೆ ಒಂದರಂತೆ ಬಂದರೆ ಅವುಗಳನ್ನು ತಡೆಯುವುದಾದರೂ ಹೇಗೆ? ಲಿಚ್ಛವೀ ಕನ್ಯೆ ಎನಿಸಿದ ಪಾಲಿ ತನ್ನ ದೇಹಸೌಂದರ್ಯದಿಂದ ವೈಶಾಲಿಯ ಜನ ಸಮೂಹವನ್ನು ಉಲ್ಲಾಸಗೊಳಿಸುವುದರ ಮೂಲಕ ಆ ಯುವ ಜನಾಂಗ ರಾಷ್ಟ್ರಕಾರ್ಯದಲ್ಲಾದರೂ ಪಾಲ್ಗೊಳ್ಳಲಿ ಎಂದೂ, ತನ್ನ ತಂದೆ ಮಹಾನಾಮರ ಕೀರ್ತಿಗೆ ಕಳಂಕ ತಾರದೆ ಅವರ ಮಾತನ್ನು ನಡೆಸಿಕೊಡಬೇಕೆಂದೂ, ತನ್ನ ಅದಮ್ಯ ದುಃಖವನ್ನು ವಿಸ್ಮೃತಿಯಲ್ಲಿ ತಳ್ಳಿಬಿಡಬೇಕೆಂದೂ ಆಕೆ ರಾಜನರ್ತಕಿಯಾದಳು. ಅತುಲೈಶ್ವರ್ಯ ಸಂಪತ್ತಿನ ಸ್ವಾಮಿನಿಯಾದಳು. ತನ್ನ ಅದ್ಭುತ ಸೌಂದರ್ಯ ಹಾಗೂ ಅಸಾಧಾರಣ ಕಲಾ ಪ್ರದರ್ಶನದಿಂದ ಬಹಳ ಬೇಗ ದೇಶ-ದೇಶಗಳಲ್ಲಿ ತನ್ನ ಕೀರ್ತಿ ಪತಾಕೆಯನ್ನು ಹಾರಿಸಿದಳು. ಇಡೀ ವೈಶಾಲಿಯಲ್ಲಿ ಅತ್ಯಂತ ಪ್ರಭಾವಶಾಲಿನೀ ಸ್ತ್ರೀಯಾದಳು. ಸಂಘಾಗಾರದಲ್ಲಿಯೂ ಪಾಲಿಯ ಮಾತೇ ನಡೆಯುವಂತಾಯಿತು. ಅಷ್ಟೇಕೆ, ಚೇಟಕ ರಾಜನ ಪುತ್ರಿ ಚೇಲನಾಳೊಂದಿಗೆ ತನ್ನಿನಿಯ, ಮಗಧ ಸಾಮ್ರಾಟ ಬಿಂಬಸಾರನ ವಿವಾಹ ನಡೆಯಲು ನೆರವಾಗಿ, ಎರಡೂ ರಾಜ್ಯಗಳ ವಿರಸ ಪ್ರೇಮದಲ್ಲಿ ಪರ್ಯವಸಾನವಾಗಿ ರಾಷ್ಟ್ರ-ರಾಷ್ಟ್ರಗಳ ಮಧ್ಯೆ ಶಾಂತಿ ಜೀವನಕ್ಕೆ ಅಸ್ತಿಭಾರ ಹಾಕಿದಳು. ಕೊನೆಗೆ ತನ್ನೊಬ್ಬ ಮಗನೂ ಬುದ್ಧನ ಅನುಯಾಯಿಯಾಗಿ ಸನ್ಯಾಸಿಯಾದ ಮೇಲೆ ಕ್ರಮಕ್ರಮವಾಗಿ ಪರಿವರ್ತಿತವಾಗುತ್ತ ಬಂದು ತನ್ನ ಮಗನಿಂದಲೇ ದೀಕ್ಷೆಯನ್ನು ಕೈಕೊಂಡು

ಆತ್ಮೋದ್ಧಾರದಲ್ಲಿ ಪ್ರವೃತ್ತಳಾಗಿ ಕೊನೆಗೆ ಅರ್ಹತ್ವವನ್ನು ಪಡೆದು 'ಪಾಲಿ ಥೇರಿ' ಯಾಗಿ ಗಡಿನಾಡುಗಳಲ್ಲಿ ಓಡಾಡುತ್ತ ಎರಡು ರಾಜ್ಯದ ಜನರಿಗೂ ಪ್ರೇಮ ಸೂತ್ರ ವನ್ನು ತಿಳಿಸಿ ಶಾಂತಿ ಮಂತ್ರವನ್ನು ಬೋಧಿಸಿ ಜನರು ಪರಸ್ಪರ ಶಾಂತಿಯಿಂದ ಇರು ವಂತೆ ಮಾಡಿದಳು. ತನ್ನ ಸೌಂದರ್ಯದ ತೇಜಸ್ಸಿನಿಂದ ಹೇಗೆ ಯುವಕರನ್ನು ಪ್ರಣಯೋ ನ್ಮತ್ತರನ್ನಾಗಿ ಮಾಡಿದ್ದಳೊ, ಅದಕ್ಕಿಂತಲೂ ಹೆಚ್ಚಾದ ಸಾರ್ಥಕವಾದ ರೀತಿಯಲ್ಲಿ ಅರ್ಹತ್ವವನ್ನು ಪಡೆದಮೇಲೆ ಅದೇ ಜನರನ್ನು ಶಾಂತಿಮತ್ತರನ್ನಾಗಿ ಮಾಡಿದಳು. ಯಾವ ಚಕ್ರವರ್ತಿಗಳು ಶತಶತಮಾನಗಳ ಸತತ ಪ್ರಯತ್ನದಿಂದ ಶಾಂತಿಯನ್ನು, ಸೌಹಾರ್ದವನ್ನು ಸ್ಥಾಪಿಸಲು ಅಸಮರ್ಥರಾಗಿದ್ದರೊ ಆ ಕಾಯಕವನ್ನು ಒಬ್ಬ ಹೆಂಗಸು, ರಾಜನರ್ತಕಿ ತನ್ನ ಅಸಾಧಾರಣ ಆತ್ಮತೇಜಸ್ಸಿನ ಪ್ರಭಾವದಿಂದ ಸಾಧಿಸಿ ದಳು. ಒಂದೇ ಸಮನೆ ವಿದ್ವೇಷಾಗ್ನಿಯ ಕುಂಡದಲ್ಲಿ ಬೇಯುತ್ತಿದ್ದ ಜನಮನವನ್ನು ಶಾಂತಿ–ಪ್ರೇಮಗಳ ಮಂತ್ರಸೇಚನೆಯಿಂದ ತಂಪುಗೊಳಿಸಿ ಆತ್ಮಸಂತೃಪ್ತಿಯ ನೆರಳಲ್ಲಿ ಒಂದುಗೂಡಿಸಿದಳು. ಈ ಎಲ್ಲ ಕಾರ್ಯಗಳಿಗೂ ಹಿನ್ನೆಲೆಯಾಗಿ ಕಾದಂಬರಿಯ ಉದ್ದಕ್ಕೂ ಬುದ್ಧನ ವರ್ಚಸ್ಸು, ಪ್ರಭಾವ ಹರಿದು ಬಂದಿರುವುದನ್ನು ನಾವು ಮರೆಯು ವಂತೆಯೇ ಇಲ್ಲ.

ಈ ಕಾದಂಬರಿಯಲ್ಲಿ ಪ್ರಧಾನವಾಗಿ ಎರಡು ಗುಣಗಳನ್ನು ಕಾಣುತ್ತೇವೆ. ಒಂದು : ಇಲ್ಲಿ ಬರುವ ಲಿಚ್ಛವೀ ಗಣತಂತ್ರದ ಯುವಕರು ತಮ್ಮ ಗಣತಂತ್ರದ ಉಳಿವಿಗಾಗಿ, ಐಕ್ಯವನ್ನು ಕಾಪಾಡಿಕೊಂಡು ಬರುವುದರ ಜೊತೆಗೆ ಅದರ ಘನತೆಯನ್ನು ಹೆಚ್ಚಿಸು ವುದಕ್ಕಾಗಿ ತಮ್ಮ ಪ್ರಾಣಗಳನ್ನೂ ಕೊಡುವುದಕ್ಕೆ ಎಲ್ಲ ಕಾಲಕ್ಕೂ ಸಿದ್ಧರಾಗಿದ್ದ ಶ್ರೇಷ್ಠ ವರ್ಚಿಯ ಯೋಧರು. ಯುದ್ಧಕ್ಕೆ ಹೊರಟರೆಂದರೆ ಜಯ ಅವರಿಗೆ ಸದಾ ಲಭ್ಯ, ರಣರಂಗದಲ್ಲಿ ಮಡಿಯುವುದೆಂದರೆ ಅವರಿಗೆ ಯಾವುದೇ ರೀತಿಯ ಅಳುಕೂ ಇಲ್ಲ. ಇಂಥ ಅಭಿಮಾನಿಶಾಲಿಗಳು ಲಿಚ್ಛವೀ ಗಣತಂತ್ರದ ಯೋಧರು. ಎರಡು : ರಾಜ್ಯದ ಪ್ರಶ್ನೆ ಬಂದರೆ ಹೇಗೆ ಪ್ರಾಣಗಳನ್ನು ಕೊಡಲು ಸಿದ್ಧರಾಗಿರುತ್ತಿದ್ದರೋ ರಸಿಕ ಜೀವನದಲ್ಲೂ ಅಷ್ಟೇ ಆಸಕ್ತರಾಗಿರುತ್ತಿದ್ದರು. ಯುದ್ಧದಲ್ಲಿ ಹೇಗೆ ತಮ್ಮನ್ನು ತಾವು ಮರೆತುಬಿಡುತ್ತಿದ್ದರೋ ಹಾಗೆಯೇ ಸುರಾಪಾನ ಮತ್ತು ಅಧರ ಪಾನಗಳಲ್ಲೂ ತಮ್ಮನ್ನು ಅಷ್ಟೇ ಮರೆತುಬಿಡುತ್ತಿದ್ದರು. ಈ ಎರಡು ಗುಣಗಳೂ ಅವರಲ್ಲಿ ಅತಿಯಾಗಿ ಪರಾಕಾಷ್ಠೆ ಯನ್ನು ಮುಟ್ಟಿದ್ದವು. ಆದರೆ ಯಾವುದೇ ವಿಷಯದಲ್ಲಾಗಲೀ 'ಅತಿ' ಬಹಳ ಕೆಟ್ಟದ್ದು ಎಂದು ಕಾಣುತ್ತದೆ. ಪಾಲಿ ಈ ಲಿಚ್ಛವಿಯರ ಎರಡೂ ಗುಣಗಳ ಸಂಕೇತವಾಗಿ ದ್ದಳೋ ಎಂಬಂತೆ ಕಾಣುತ್ತದೆ. ಲಿಚ್ಛವಿಯರ ಸ್ವಾತಂತ್ರ್ಯ ಪ್ರವೃತ್ತಿ, ರಾಷ್ಟ್ರಪ್ರೇಮ ಅವಳಲ್ಲಿಯೂ ಇದೆ. ಅದಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿದಳು. ಅವರ ರಸಿಕತೆಯನ್ನು ತಣಿಸುವ ರೂಪಸುಧಾಮೂರ್ತಿಯಾಗಿದ್ದಳು. ನಿಜ. ಆದರೆ ಅವಳು ಅಷ್ಟಕ್ಕೇ ನಿಲ್ಲದೆ ಇನ್ನೂ ಮುಂದುವರಿದು ಆತ್ಮೋದ್ಧಾರದ ಹಾದಿಯಲ್ಲಿ ಸಾಗಿದಳು. ತನ್ನವರಿಗೂ ಆ ಆತ್ಮಾನಂದದ ಸುಖವನ್ನು ಉಂಟುಮಾಡಿದಳು. ಕೊನೆಗೆ ರಾಜನರ್ತಕಿ

ಯಾದ ಆಮ್ರಪಾಲಿ ದೇವಿ ಆಮ್ರಪಾಲಿಯಾಗಿ, ಪಾಲಿ ಥೇರಿಯಾಗಿ ದೇಶ ಕಲ್ಯಾಣದ ಮಂಗಳಮೂರ್ತಿಯಾಗಿ ಕಂಗೊಳಿಸಿದಳು. ತನ್ನಂಥವಳು ಏನೆಲ್ಲ ಮಾಡಬಹುದು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿ ನಿಂತಳು.

ಕನ್ನಡ ಸಾಹಿತ್ಯದಲ್ಲಿ ಅನೇಕ ಅಮೂಲ್ಯವಾದ ಸತ್ವಯುತವಾದ ಸಾರ್ಥಕ ಗ್ರಂಥ ರಚನೆ ಮಾಡಿ ಕನ್ನಡ ಸಾಹಿತ್ಯವನ್ನು ಹುಲುಸಾಗಿಸಿ ಹಾಸ್ಯ ಬರಹಗಾರರಲ್ಲಿ ಪ್ರಮುಖರಾಗಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಗುಜರಾತಿ ಮೂಲದ ಈ ಕಾದಂಬರಿಯನ್ನು ಮೂಲಕೃತಿಯೋ ಎನ್ನುವಷ್ಟು ಸುಂದರವಾಗಿ ಅನುವಾದ ಮಾಡಿ ಕನ್ನಡಿಗರೆಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಎರಡು ಸಾವಿರದ ಐದುನೂರು ವರ್ಷಗಳಷ್ಟು ಹಿಂದಿನ ಇಷ್ಟು ಸುಂದರವಾಗಿರುವ ಕಥಾವಸ್ತುವನ್ನು ಆರಿಸಿಕೊಂಡು ಹಿಂದೀ ಗುಜರಾತಿ ಭಾಷೆಗಳಲ್ಲಿಯಂತೆ ಕನ್ನಡದಲ್ಲಿ ಗ್ರಂಥ ರಚನೆ ಮಾಡಿರುವಂತೆ ನನಗೆ ತಿಳಿದು ಬಂದಿಲ್ಲ, ಡಾ. ಪ್ರಭುಶಂಕರ ಅವರ 'ಅಂಬಾಪಾಲಿ' ನಾಟಕವನ್ನು ಬಿಟ್ಟರೆ. ಇಂಥ ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಿರುವುದು ಆ ರೀತಿಯ ಗ್ರಂಥಗಳ ಕೊರತೆಯನ್ನು ತುಂಬಿದಂತಾಗಿದೆ. ಇಂಥ ಇನ್ನೂ ಅನೇಕ ಗ್ರಂಥಗಳು ಅನುವಾದ ಮೂಲಕವಾಗಲಿ, ಮೂಲರಚನೆಯ ಮೂಲಕವಾಗಲಿ ಕನ್ನಡದಲ್ಲಿ ಬಂದರೆ ಕನ್ನಡ ಸಾಹಿತ್ಯದ ವೈವಿಧ್ಯ ವಿಸ್ತಾರಗೊಳ್ಳುವುದರಲ್ಲಿ ಸಂಶಯವಿಲ್ಲ. ಅಂತೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಈ ಗ್ರಂಥವನ್ನು ಕನ್ನಡಕ್ಕೆ ನೀಡಿ ಮಹೋಪಕಾರ ಮಾಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ. ಇದರಿಂದ ಇಂಥ ಇನ್ನೂ ಅನೇಕ ಗ್ರಂಥಗಳನ್ನು ಕನ್ನಡ ನಾಡು ನಿರೀಕ್ಷಿಸುತ್ತದೆ ಎಂದರೆ ತಪ್ಪಲ್ಲ.

'ಭಗವಾನ್ ಕೌಟಿಲ್ಯ'

ಮ. ಸು. ಕೃಷ್ಣಮೂರ್ತಿ

ಭಾರತೀಯ ಸಂಸ್ಕೃತಿಯ ಆಧುನಿಕ ಅಧ್ವರ್ಯುವಾದ ಕನ್ಹಯ್ಯಾಲಾಲ್ ಮಾಣಿಕ್ ಲಾಲ್ ಮುನ್ಷಿಯವರು ತಮ್ಮ ವ್ಯಕ್ತಿತ್ವ, ಕೃತಿತ್ವಗಳಿಂದ ಅದರ ಪುನರುಜ್ಜೀವನಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ಗುಜರಾತಿ ಹಾಗೂ ಇಂಗ್ಲೀಷಿನ ಶೃಂಗಶ್ರೇಣಿಯ ಲೇಖಕರಾದ ಅವರು ಆಧುನಿಕ ಭಾರತೀಯ ಸಾಹಿತ್ಯದ ನಿರ್ಮಾಪಕರಲ್ಲಿ ಒಬ್ಬರು. ಮುನ್ಷಿ ಅವರು ಗುಜರಾತಿಯ ಸರ್ವಶ್ರೇಷ್ಠ ಐತಿಹಾಸಿಕ ಕಾದಂಬರಿಕಾರರೆಂದು ಪರಿಗಣಿತರಾಗಿದ್ದಾರೆ. ಅವರು ಮೊತ್ತಮೊದಲು ಸಾಮಾಜಿಕ ಕಾದಂಬರಿಗಳನ್ನು ಬರೆದು ಬೆಳಗಾಗುವುದರೊಳಗಾಗಿ ಪ್ರಸಿದ್ಧರಾಗಿಬಿಟ್ಟರು. 'ವೇರನೀ ವಸುಲಾಲ್' ಅವರ ಮೊತ್ತಮೊದಲನೆಯ ಸಾಮಾಜಿಕ ಕಾದಂಬರಿ. ಇದರ ತನಮುನ ಎಂಬ ಪಾತ್ರ ವನ್ನು ಅರಿಯದ ಗುಜರಾತಿಯೇ ಇಲ್ಲ. ಅಷ್ಟೊಂದು ಜೀವಂತವಾಗಿದೆ ಈ ಪಾತ್ರ. ಅನಂತರ ಅವರು 'ಪಾಟಣನೋ ಪ್ರಭುತ್ವ', 'ಗುಜರಾತ್‌ನೋ ನಾಥ', 'ಪೃಥ್ವೀ ವಲ್ಲಭ', 'ರಾಜಾಧಿರಾಜ', 'ಜಯ ಸೋಮನಾಥ್', 'ಭಗವಾನ್ ಕೌಟಿಲ್ಯ', 'ಲೋಪಾ ಮುದ್ರಾ', 'ಭಗವಾನ್ ಪರಶುರಾಮ', 'ಭಗ್ನಪಾದುಕಾ' ಮೊದಲಾದ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಇವುಗಳಲ್ಲದೆ ನಾಟಕ, ನಿಬಂಧ, ಸಣ್ಣಕತೆ, ವಿಮರ್ಶೆ, ಜೀವನಚರಿತ್ರೆ, ಸಾಹಿತ್ಯಚರಿತ್ರೆ, ಇತಿಹಾಸ, ಪ್ರವಾಸ ಸಾಹಿತ್ಯ, ನೆನಹುಗಳು, ಭಾಷಣಗಳು ಮತ್ತು ಲೇಖನಗಳು, ಪತ್ರಮಾಲೆ, ಈ ರೀತಿ ಅವರು ಮುಟ್ಟದ ಸಾಹಿತ್ಯ ಪ್ರಭೇದವೇ ಇಲ್ಲವೆನ್ನಬೇಕು. ಈ ಎಲ್ಲ ಕೃತಿಗಳಲ್ಲೂ ಅವರು ಭಾರತೀಯ ಸಂಸ್ಕೃತಿಯ ವೈಭವವನ್ನು ಚಿತ್ರಿಸಿ ಭಾರತೀಯರಲ್ಲಿ ಒಂದು ವಿಧವಾದ ಅಸ್ಮಿತೆಯನ್ನುಂಟುಮಾಡಿ ದ್ದಾರೆ, ಭಾರತೀಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಭಾರತೀಯ ಸಾಹಿತ್ಯಕ್ಕೆ ಮುನ್ಷಿಯವರ ಕೊಡುಗೆಯನ್ನು ಕುರಿತು *Munshi : His Art and Work—Man*

of Letters ಎಂಬ ಗ್ರಂಥದ ಭೂಮಿಕೆಯಲ್ಲಿ ಅದರ ಸಂಪಾದಕರು ಹೇಳುವ ಮಾತುಗಳು ಗಮನಾರ್ಹವಾದವು :

> "Munshi's literary works, whether in English or Gujarati, bear the stamp of his ebullient personality. As a writer with original ideas and a new technique, as one who delights to seek fresh fields and pastures new, Munshi will long be remembered and cherished not only as one of the makers of modern Indian literature, but as one who has broadened its frontiers and widened its viston"[1]

ಅಲೆಕ್ಸಾಂಡರ್ ಡ್ಯೂಮಾ ಬಾಲ್ಯದಿಂದಲೂ ಮುನ್ಷಿಯವರ ಮೆಚ್ಚಿನ ಲೇಖಕ. ಅವರ ಕಾದಂಬರಿಗಳಲ್ಲಿ ಪಾತ್ರರಚನೆ, ಸಂವಾದ, ಕಥಾ ನಿರೂಪಣೆ ಇವುಗಳಲ್ಲಿ ಕಂಡು ಬರುವ ಸರಳತೆ, ಸೌಂದರ್ಯ ಮತ್ತು ಕಲಾಮಯತೆ ಇವುಗಳೆಲ್ಲದರ ಮೇಲೆ ಡ್ಯೂಮಾನ ಪರೋಕ್ಷ ಪ್ರಭಾವವಿದೆಯೆನ್ನಬಹುದು. ಆದರೆ ಮುನ್ಷಿಯವರ ದೃಷ್ಟಿಕೋಣ ಸಾಂಸ್ಕೃತಿಕವಾದದ್ದು. ಸಾಮಾಜಿಕ ವಿಕೃತಿಗಳನ್ನು, ನಗ್ನ ಭಗ್ನ ಸತ್ಯಗಳನ್ನು ಪ್ರತಿಪಾದಿಸುವುದಕ್ಕಿಂತ ಭಾರತೀಯ ಸಂಸ್ಕೃತಿಯ ಮೂಲಸ್ವರವನ್ನು ಎತ್ತಿ ತೋರಿಸುವುದರಲ್ಲೇ ಅವರಿಗೆ ಆಸಕ್ತಿ. ಮುನ್ಷಿಯವರ ಎಲ್ಲ ಐತಿಹಾಸಿಕ ಕೃತಿಗಳಲ್ಲೂ ಭಾರತೀಯ ಸಂಸ್ಕೃತಿಯ ಮೂಲಸ್ವರ ಮಿಡಿದಿರುವುದನ್ನು ಕಾಣಬಹುದು. ಈ ರೀತಿ ಸಾಂಸ್ಕೃತಿಕ ಸ್ವರದಿಂದ ಧ್ವನಿತವಾದ ಇತಿಹಾಸವನ್ನು ಮೋಹಕವೂ ಸಜೀವವೂ ಆದ ರೂಪದಲ್ಲಿ ಚಿತ್ರಿಸುವುದೇ ಅವರ ಕಾದಂಬರಿಗಳ ಉದ್ದೇಶ.

'ಭಗವಾನ್ ಕೌಟಿಲ್ಯ' ಮುನ್ಷಿಯವರ ಪ್ರಸಿದ್ಧ ಐತಿಹಾಸಿಕ ಕಾದಂಬರಿ. *The Art and Practice of Historical Fiction* ಎಂಬ ತನ್ನ ಗ್ರಂಥದಲ್ಲಿ ಟಿ. ಷೆಪರ್ಡ್ ಐತಿಹಾಸಿಕ ಕಾದಂಬರಿಯ ಬಗೆಗೆ ಹೀಗೆ ಹೇಳುತ್ತಾನೆ :

> "Historical fiction deals imaginatively with the past and can follow paths where trespass boards confront the pedestrian historian. The novelist has wider range, he may set foot in the reserves of history, but on one condition; he may not make his habitation there, or may only build if part of his house stands within the demense of the imagination. The really great historical novelist, it seems to me, are those who invest and surround their characters—the men and women

---

[1] *Munshi His Art And Work*, Introductory, p. 9

of 'lost years.' With the haze of wishfulness and glamour which is comparable to that gloss of film of prehistoric implements and weapons, which covers time's own work, not to be copied by any human tool or process."

ಈ ರೀತಿ ಐತಿಹಾಸಿಕ ಸತ್ಯ ಹಾಗೂ ಕಲ್ಪನೆಯ ಸುವರ್ಣ ಸಂಯೋಗವಲ್ಲಿ ಐತಿಹಾಸಿಕ ಕಾದಂಬರಿಯ ಕಲೆಯ ಮರ್ಮ ಅಡಗಿರುವುದು. ಇಂಗ್ಲೀಷಿನ ವಿಖ್ಯಾತ ಐತಿಹಾಸಿಕ ಕಾದಂಬರಿಕಾರ ಸರ್ ವಾಲ್ಟರ್ ಸ್ಕಾಟ್ ತನ್ನ ಕಾದಂಬರಿಗಳಲ್ಲಿ ಸತ್ಯ ಮತ್ತು ಕಲ್ಪನೆಯ ನಡುವೆ ಒಂದು ವಿಧವಾದ ಸಮತೋಲನವನ್ನು ಸ್ಥಾಪಿಸಲು ಯತ್ನಿಸಿದ. ಇದಕ್ಕಾಗಿ ಅವನು ಹಲವು ಇತಿಹಾಸ ಪ್ರಸಿದ್ಧ ವ್ಯಕ್ತಿಗಳನ್ನು ತನ್ನ ಕಾದಂಬರಿಗಳಲ್ಲಿ ಗೌಣ ಪಾತ್ರಗಳನ್ನಾಗಿ ಮಾಡಿಬಿಟ್ಟ. ಆದರೂ ಕೂಡ ಐತಿಹಾಸಿಕ ಕಾದಂಬರಿಕಾರನ ಕಾರ್ಯ ವೀರಪೂಜೆ ಅಥವಾ ಶುಷ್ಕ ದರಬಾರೀ ಚರಿತ್ರಕಾರನದಲ್ಲ. ಮುಖ್ಯ ಪಾತ್ರಗಳ, ಸನ್ನಿವೇಶಗಳ ಮೂಲಕ ಒಂದು ವಿಶಿಷ್ಟ ಯುಗದ ಜನತೆಯನ್ನು, ಅದರ ಚಿತ್ತವೃತ್ತಿಯನ್ನು ಚಿತ್ರಿಸುವುದೇ ಅವನ ಪ್ರಮುಖ ಕರ್ತವ್ಯ. ಆದ್ದರಿಂದ ಶ್ರೇಷ್ಠ ಕಾದಂಬರಿಕಾರ ಚರಿತ್ರೆಯ ನೀರಸವಸ್ತುವನ್ನು ಕಲ್ಪನೆಯಿಂದ ರಂಜಿತಗೊಳಿಸಿ ಆಸ್ವಾದ್ಯವನ್ನಾಗಿ ಮಾಡುತ್ತಾನೆ. ಆದರೆ ಸತ್ಯ ಕಲ್ಪನೆಗಳ ಈ ಸಂಮಿಶ್ರಣದಲ್ಲಿ ಪ್ರಮಾಣಜ್ಞಾನ ತುಂಬ ಅಗತ್ಯ. ಸತ್ಯದಿಂದ ತೀರ ದೂರ ಸರಿದರೆ ಇತಿಹಾಸಕ್ಕೆ ದ್ರೋಹ ಬಗೆದಂತಾಗುತ್ತದೆ. ಕಲ್ಪನೆಗೆ ಎರವಾಗಿ ಬರಿಯ ಸತ್ಯದ ಪೂಜಾರಿಯಾದರೆ ಅದು ಕಾದಂಬರಿಯಾಗದೆ ವಾರ್ತೆಯಾಗುತ್ತದೆ. ಸತ್ಯ, ಕಲ್ಪನೆಯ ಪ್ರಮಾಣದ ಆಧಾರದ ಮೇಲೆ ಐತಿಹಾಸಿಕ ಕಾದಂಬರಿಯನ್ನು ಕೆಲವು ವಿದ್ವಾಂಸರು ಮೂರು ವಿಧವಾಗಿ ವಿಂಗಡಿಸಿದ್ದಾರೆ. (೧) ಯಾವುದೋ ಒಂದು ಕಾಲಖಂಡದ ಚಿತ್ರ (period novel). ಇಲ್ಲಿ ಕಾದಂಬರಿಕಾರನ ದೃಷ್ಟಿ ಇತಿಹಾಸ ಸಂಶೋಧನೆಯ ಮೇಲಿರುತ್ತದೆ. ಬರ್ಥೋಲೆಮಿಯ ೧೭೮೮ರಲ್ಲಿ ಬರೆದ 'ಅನಾಕಾರ್ಸಿಸ್ ಇನ್ ಗ್ರೀಸ್' ಇಂಥದೇ ಕಾದಂಬರಿ. (೨) ಐತಿಹಾಸಿಕ ರೊಮಾನ್ಸ್. ಇದರಲ್ಲಿ ಐತಿಹಾಸಿಕ ಸತ್ಯಕ್ಕಿಂತ ಜನಶ್ರುತಿ, ದಂತಕತೆಗಳು, ಐತಿಹ್ಯಗಳು ಮೊದಲಾದ ಚಮತ್ಕಾರಮಯ ಸಾಮಗ್ರಿಗಳಿಗೆ ಹೆಚ್ಚು ಪ್ರಾಧಾನ್ಯ. ಡ್ಯೂಮಾ, ಲಿಟ್ಟನ್, ಸ್ಕಾಟ್ ಮೊದಲಾದವರ ಕಾದಂಬರಿಗಳು ಈ ಪಂಗಡಕ್ಕೆ ಸೇರುತ್ತವೆ. (೩) ಐತಿಹಾಸಿಕ ಕಾದಂಬರಿ. ಇದರಲ್ಲಿ ಚರಿತ್ರೆಗೆ ಹೆಚ್ಚು ಸಮೀಪವಾಗಿ ಚಾರಿತ್ರಿಕ ಘಟನೆಗಳನ್ನು, ಕಾಲ ವಿಶೇಷದ ಸಮಾಜದ ಸ್ಥಿತಿಗಳನ್ನು ಚಿತ್ರಿಸಲಾಗುತ್ತದೆ. ಥ್ಯಾಕರೆಯ 'ಹೆನ್ರಿ ಎಸ್ಮಂಡ್', 'ರೊಮೋಲಾ' ಮೊದಲಾದವು ಈ ಶ್ರೇಣಿಯವು. ಶಿಪ್ಲೆಯ ಪ್ರಕಾರ ಕಾದಂಬರಿಯ ಶ್ರೇಷ್ಠತೆ ಬದುಕಿನ ಬಗೆಗೆ ಪ್ರಾಮಾಣಿಕತೆ, ನಿಷ್ಠೆ, ಅದರಲ್ಲಿ ಸೌಂದರ್ಯ ತತ್ವಗಳನ್ನು ಪಡಿಮೂಡಿಸುವ ಶಕ್ತಿ, ಆಳ, ಅಗಲದಲ್ಲಿ ಅಡಗಿರುತ್ತದೆ.

ಮುನ್ಷಿಯವರ ಐತಿಹಾಸಿಕ ಕಾದಂಬರಿಗಳನ್ನು ಐತಿಹಾಸಿಕ ರೊಮಾನ್ಸ್ ಎಂಬ

ಈ ಎರಡನೆಯ ವರ್ಗಕ್ಕೆ ಸೇರಿಸಬಹುದು. ಐತಿಹಾಸಿಕ ಕಾದಂಬರಿಗಳ ಬಗೆಗೆ ಮುನ್ಷಿಯವರೇ ಒಂದು ಕಡೆ ಹೀಗೆ ಹೇಳಿದ್ದಾರೆ:

> "My practical concern has been with the real drama of life, neither theories of life nor morals. Inspite of the past three decades of effort on the part of the critics to teach me the contrary, I have found it impossible to look upon a historical novel as anything but a romantic speculation. A by gone age, as it actually was, can never be recreated by a literary artist. He can treat the past as an alien world and its men as myths, and occupy himself with hauling its upholstery into the present; or he can project the drama of life around him on the screen of the past."[1]

ಈ ರೀತಿ ಮುನ್ಷಿಯವರ ದೃಷ್ಟಿಯಲ್ಲಿ ಐತಿಹಾಸಿಕ ಕಾದಂಬರಿ ಒಂದು ರೊಮಾಂಟಿಕ್ ಸ್ಪೆಕ್ಯುಲೇಷನ್ ಆಗಿದೆ. ಇದರ ಫಲವಾಗಿಯೋ ಏನೋ ಅವರು ತಮ್ಮ 'ಪೃಥ್ವೀವಲ್ಲಭ' ಎಂಬ ಕಾದಂಬರಿಯಲ್ಲಿ ಕರ್ನಾಟಕದ ವೀರ ಚಾಲುಕ್ಯ ತೈಲಪನಿಗೆ ತುಂಬ ಅನ್ಯಾಯ ಮಾಡಿದ್ದಾರೆ. ಐತಿಹಾಸಿಕ ನಿಷ್ಠೆ ಇದ್ದಿದ್ದರೆ ಅಷ್ಟೊಂದು ಅನ್ಯಾಯ ವಾಗುತ್ತಿರಲಿಲ್ಲವೋ ಏನೋ. ಈ ಕಾದಂಬರಿಯಲ್ಲಿ ಜನಶ್ರುತಿ, ದಂತಕತೆಗಳಿಗೇ ಪ್ರಾಧಾನ್ಯ. 'ಭಗವಾನ್ ಕೌಟಿಲ್ಯ' ಮುನ್ಷಿಯವರ ಇಂಥದೇ ಒಂದು ಐತಿಹಾಸಿಕ ರೊಮಾನ್ಸ್. ಇದು ಪ್ರಾಚೀನ ಭಾರತದ ರಾಷ್ಟ್ರಪುರುಷರಲ್ಲಿ ಒಬ್ಬನಾದ ಮಹಾ ಮೇಧಾವಿ ಚಾಣಕ್ಯನ ಬದುಕನ್ನು ಕುರಿತ ಕಾದಂಬರಿ. ಚಾಣಕ್ಯ 'ಮುದ್ರಾರಾಕ್ಷಸ', 'ಅರ್ಥಶಾಸ್ತ್ರ' 'ಚಾಣಕ್ಯ ನೀತಿ', 'ಮುದ್ರಾಮಂಜೂಷ' ಮೊದಲಾದ ಕೃತಿಗಳಲ್ಲಿ ಕುಟಿಲ ಮತಿಯಾಗಿ, ಹೃದಯಹೀನನಾಗಿ ತರ್ಕಕರ್ಕಶನಾಗಿ ಚಿತ್ರಿತನಾಗಿದ್ದಾನೆ. 'ಮುದ್ರಾ ರಾಕ್ಷಸ' ಮೊದಲಾದ ಕೃತಿಗಳಲ್ಲಿ ಚಾಣಕ್ಯ ಚಂದ್ರಗುಪ್ತನ ವ್ಯಕ್ತಿತ್ವವನ್ನು ಮಸುಕಿಸುವ ಕ್ಷಣಕ್ಷಣಕ್ಕೂ ತನ್ನ ಬುದ್ಧಿ ವೈಭವದ ಕೋಲ್ಮಿಂಚನ್ನು ಎಸೆಯುವ, ಶತ್ರುಗಳ ಮೇಲೆ ಕುತಂತ್ರದ ಬರಸಿಡಿಲುಗಳನ್ನು ಉರುಳಿಸುವ ಕಾರ್ಮೋಡವಾಗಿ ಚಿತ್ರಿತನಾಗಿದ್ದಾನೆ. ಆದರೆ ಕಾರ್ಮೋಡವನ್ನು ತಿರುಗು ಮುರುಗು ಮಾಡಿ ಯಾರಾದರೂ ನೋಡಿರುವರೆ? ಹಾಗೆ ನೋಡಿದರೆ ಅಲ್ಲಿ ಬಿಳಿಯ ಬೆಳಕೇ ಬೆಳಕು. ಮುನ್ಷಿಯವರು ಇಲ್ಲಿ ಆ ಕೆಲಸವನ್ನು ಮಾಡಿದ್ದಾರೆ. ಅವರೇ ಹೇಳುವಂತೆ ಇಲ್ಲಿ ಚಾಣಕ್ಯ ಭಾರತೀಯ ಮಿಕವೆಲ್ಲಿಯಾಗಿ ಅಲ್ಲ, ವೇದವ್ಯಾಸ, ವಸಿಷ್ಠ, ವಾಮದೇವ, ವಿಶ್ವಾಮಿತ್ರ, ಭಗವಾನ್ ಶಂಕರಾಚಾರ್ಯ ಮೊದಲಾದ ದ್ರಷ್ಟಾರರಂತೆ ಭಗವಾನ್ ಕೌಟಿಲ್ಯನಾಗಿ ಬರುತ್ತಾನೆ. ಇಲ್ಲಿ ಚಾಣಕ್ಯನ ಪೂರ್ವ ಜೀವನವನ್ನು ಚಿತ್ರಿಸಿದೆ. ಇಲ್ಲಿ ಕಂಡುಬರುವುದು ಚಾಣಕ್ಯನ ಕುಟಿಲ ಕಾರ

---

[1] *Munshi: His Art and Work*, Munshi on His own Work, p. 35

ಸ್ಥಾನವಲ್ಲ. ಪವಿತ್ರವಾದ ಋಷ್ಯಾಶ್ರಮಗಳಿಂದ ಕೂಡಿದ ನೈಮಿಷಾರಣ್ಯ. ಅದರ ನಡುವೆ ಅನುಭಾವಿಯೂ ತಪೋನಿಧಿಯೂ ಆದ ಚಾಣಕ್ಯ; ವೈದಿಕ ಸಂಸ್ಕೃತಿಯ ಪುನರುದ್ಧಾರಕ, ಶಾಸ್ತ್ರಕಾರ, ಮಹಾಮೇಧಾವಿ ಹಾಗೂ ಸಹೃದಯನಾದ ಈತ ಚಂದ್ರಗುಪ್ತನ ನೆರವಿನಿಂದ ನಂದನ ದುರಾಡಳಿತವನ್ನು ಕೊನೆಗೊಳಿಸಿ ಮಗಧದಲ್ಲಿ ಧರ್ಮದ ಪುನರ್‌ಪ್ರತಿಷ್ಠೆಯ ಕನಸುಗಾರ. ಈ ಕಾದಂಬರಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯನ್ನು ಕುರಿತ ಕಾದಂಬರಿ ಮಾಲೆಯ ಪ್ರಥಮ ಕುಸುಮ. ಆದ್ದರಿಂದ ಒಂದು ದೃಷ್ಟಿಯಲ್ಲಿ ಇದು ಅಪೂರ್ಣವೆಂದೇ ಹೇಳಬೇಕು. ಆದರೆ ಚಾಣಕ್ಯನ ಜೀವನ ದಿವ್ಯ ಜೀವನವಾಗಿ ಪರಿಣಮಿಸುವುದನ್ನು ನೋಡಿದರೆ ಇದು ತನ್ನಷ್ಟಿಗೆ ಪೂರ್ಣವೆನ್ನಬಹುದು. ಏಕೆಂದರೆ ಇದರಲ್ಲಿ ಮಗಧದಲ್ಲಿ ಮೌರ್ಯ ಸಾಮ್ರಾಜ್ಯ ಸಂಸ್ಥಾಪನೆಗಿಂತ ಚಾಣಕ್ಯನ ತಪಃಫಲೋದಯಕ್ಕೆ ಹೆಚ್ಚಿನ ಪ್ರಾಧಾನ್ಯ. ಈ ದೃಷ್ಟಿಯಿಂದ ‘ಭಗವಾನ್ ಕೌಟಿಲ್ಯ’ ಎಂಬ ಹೆಸರು ಇದಕ್ಕೆ ಸಾರ್ಥಕವಾಗಿದೆ.

ಐತಿಹಾಸಿಕ ಕಾದಂಬರಿಯಲ್ಲಿ ರಚನಾತ್ಮಕ ಪ್ರತಿಭೆ ಇತಿಹಾಸದ ಸ್ಥೂಲ ತಥ್ಯಗಳ ಅಂತರಾಳವನ್ನು ಕಲ್ಪನಾಪ್ರಸೂತ ಕಥಾಖಂಡಗಳಿಂದ ತುಂಬುತ್ತದೆ. ಇತಿಹಾಸ ಮತ್ತು ಕಲ್ಪನೆಯ ಈ ಮೇಳ ಕಲ್ಪನೆ ಇತಿಹಾಸದ ಎಲ್ಲೆಕಟ್ಟಿನಲ್ಲಿದ್ದಾಗ ಮಾತ್ರ ಸಾರ್ಥಕವಾಗುತ್ತದೆ. ಲೇಖಕರು ಈ ಕೃತಿಯಲ್ಲಿ ಇತಿಹಾಸದ ತಳಪಾಯದ ಮೇಲೆ ಕಲ್ಪನೆಯ ಪ್ರಾಸಾದವನ್ನು ನಿರ್ಮಿಸಿದ್ದಾರೆ. ಇದರ ಹೂರಣವೆಲ್ಲ ಕಲ್ಪನೆಯದು. ಹೊರ ಚೀಲ ಮಾತ್ರ ಚರಿತ್ರೆಯದು.

ನಂದರು ಮಗಧ ದೇಶವನ್ನು ಆಳುತ್ತಿದ್ದಾಗ ಇಡೀ ಉತ್ತರ ಭಾರತ ಅವರ ಅಧೀನ ದಲ್ಲಿತ್ತು. ಈ ಅಧಿಕಾರ ಅವರ ತಲೆ ಕೆಡಿಸಿತು. ಕೊನೆಗೆ ಬಂದ ರಾಜರು ಉನ್ಮತ್ತರಾಗಿ ಜೀವನದ ಉಚ್ಚಮೌಲ್ಯಗಳನ್ನು ನಿರ್ಲಕ್ಷಿಸಿದರು. ಫಲವಾಗಿ ಧರ್ಮ ಕ್ಷೀಣಿಸಿತು. ನಂದ ಸಾಮ್ರಾಜ್ಯ ಪತನದ ಅಂಚಿನಲ್ಲಿ ನಿಂತು ಕೆಳಗುರುಳಲು ಬಿರುಗಾಳಿಯನ್ನು ನಿರೀಕ್ಷಿಸುತ್ತಿತ್ತೆಂದು ಕಾಣುತ್ತದೆ. ಅಲೆಕ್ಸಾಂಡರನ ದಂಡಯಾತ್ರೆ ಚಂಡಮಾರುತವಾಗಿ ಪರಿಣಮಿಸಿರ ಬೇಕು. ಇಂಥ ಸನ್ನಿವೇಶದಲ್ಲಿ ಚಾಣಕ್ಯ ಚಂದ್ರಗುಪ್ತರು ಅಖಂಡಭಾರತ ಕಲ್ಪಕರಾಗಿ, ಪ್ರೇರಕ ಚೈತನ್ಯರಾಗಿ ಕಾರಕಶಕ್ತಿಯಾಗಿ ಭಾರತೀಯ ಇತಿಹಾಸದಲ್ಲಿ ಮೈದೋರಿ ದರು. ಇಂಥ ವಿಸ್ತೃತ ಪಟಭೂಮಿ ಈ ಕಥೆಯದು.

ಈ ಕಥೆಯ ಆರಂಭದಲ್ಲಿ ಧನನಂದ ಎಂದು ವಿಖ್ಯಾತನಾದ ಹಿರಣ್ಯಗುಪ್ತ ಮಗಧ ವನ್ನು ಆಳುತ್ತಿದ್ದ. ರಾಕ್ಷಸ, ವಕ್ರನಾಸ ಮೊದಲಾದವರು ಅವನ ಮಂತ್ರಿಗಳು. ಧನನಂದ ತನ್ನ ಮಂತ್ರಿ ವಕ್ರನಾಸನ ಮಾತನ್ನು ಕೇಳಿಕೊಂಡು ಅಮಾತ್ಯನಾದ ಆಚಾರ್ಯ ಶಕಟಾಲನನ್ನು ಪದಚ್ಯುತಿಗೊಳಿಸಿದುದೇ ಅಲ್ಲದೆ ಅವನ ಸರ್ವಸ್ವವನ್ನೂ ಕಸಿದುಕೊಂಡ. ಶಕಟಾಲ ಮಹಾ ವಿದ್ವಾಂಸ. ಸಾಧಕ, ಚಾಣಾಕ್ಷ ರಾಜನೀತಿಜ್ಞ ಮತ್ತು ಬ್ರಾಹ್ಮಣ ಸಂಸ್ಕೃತಿಯ ನಿಧಿ, ಪ್ರತಿನಿಧಿ. ಆದರೆ ಅವನು ದುರ್ದೈವಿ. ವಿಪತ್ಪ ರಂಪರೆಗಳೇ ಅವನ ಮೇಲೆರಗುತ್ತವೆ. ಪದಚ್ಯುತನಾದ ಮೇಲೆ ಅವನು ಕಣ್ಣು

ಕಳೆದುಕೊಳ್ಳುತ್ತಾನೆ. ನಿರ್ಗತಿಕನಾದ ಅವನನ್ನು ಅವನ ಮಕ್ಕಳೂ ತೊರೆಯುತ್ತಾರೆ. ಸ್ಥೂಲಭದ್ರನೆಂಬ ಒಬ್ಬ ಮಗ ಪಾಟಲೀಪುತ್ರದ ವೇಶ್ಯೆಯ ಗುಲಾಮನಾಗುತ್ತಾನೆ. ಮಗಳು ಗೌರಿ ಈಗ ಆತನ ಊರುಗೋಲು. ಈ ಎಲ್ಲ ಸ್ಥಿತಿಗಳಿಂದ ನಂದರ ರಾಜ್ಯದಲ್ಲಿ ಬ್ರಾಹ್ಮಣ್ಯ, ಅದರ ವಿದ್ವತ್ತು ಕಡೆಯುಸಿರೆಳೆಯುತ್ತಿರುತ್ತದೆ.

ಧನನಂದನ ಅಂತಃಪುರದ ಸೇನಾಧ್ಯಕ್ಷ ಸೇನಾಜಿತ ಗೌರಿಯನ್ನು ಪ್ರೀತಿಸುತ್ತಾನೆ. ಕ್ಷತ್ರಿಯ ಬ್ರಾಹ್ಮಣರ ಈ ಪ್ರೇಮವನ್ನು ಶಕಟಾಲ ಅನುಮೋದಿಸುವುದಿಲ್ಲ. ಆದರೆ ಅವನು ರಾಜಾಜ್ಞೆಗೆ ಮಣಿಯಬೇಕಾಗುತ್ತದೆ. ಮದುವೆ ಒಳ್ಳೆಯ ಲಗ್ನಕ್ಕಾಗಿ ಮುಂದಕ್ಕೆ ಹೋಗುತ್ತದೆ.

ಇದೇ ವೇಳೆಗೆ ತಕ್ಷಶಿಲೆಯ ರಾಜಕುಮಾರ ಆಂಭಿಯು ಧನನಂದನ ರಾಣಿಯಾದ ತನ್ನ ಅಕ್ಕ ಸುಮೋಹಾದೇವಿಯನ್ನು ಕಾಣಲು ಬರುತ್ತಾನೆ. ತಕ್ಷಶಿಲೆಯ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ ಆಕೆ ಪಾಟಲೀಪುತ್ರದಲ್ಲಿ ಬಂದಿಯಂತೆ ಇರುತ್ತಾಳೆ. ಆಕೆಗೆ ತನ್ನ ಗಂಡನೆಂದರೆ ಎಲ್ಲಿಲ್ಲದ ದ್ವೇಷ. ಏಕೆಂದರೆ ಆ ಗಂಡನೆನ್ನಿಸಿಕೊಂಡವನು ಆಕೆಯನ್ನು ಕಸಕ್ಕಿಂತಲೂ ಕಡೆಯಾಗಿ ಬಂದಿಯಂತೆ ನಡೆಸಿಕೊಳ್ಳುತ್ತಾನೆ. ಅರಮನೆಯಲ್ಲಿದ್ದರೂ ಆಕೆ ಪಂಜರದ ಗಿಣಿಯಾಗಿರುತ್ತಾಳೆ. ಆಕೆಯ ಸುತ್ತಲೂ ಗುಪ್ತಚಾರರ ಜಾಲ. ಕೂತರೆ ನಿಂತರೆ ಅವರ ವರದಿ. ಅಂತಃಪುರದ ಗಿಳಿಗಳೂ ಗೂಢಚರ್ಯಾ ಪಟುಗಳು !

ಪಾಟಲೀಪುತ್ರಕ್ಕೆ ಆಂಭಿ ಬಂದಾಗ ಅವನ ಜೊತೆ ಅವನ ಮಿತ್ರನೂ ಮಾರ್ಗದರ್ಶಕನೂ ಆದ ವಿಷ್ಣುಗುಪ್ತ ಚಾಣಕ್ಯ ಬರುತ್ತಾನೆ. ಆತ ಶಕಟಾಲನ ಹಳೆಯ ವಿದ್ಯಾರ್ಥಿ. ಇವರ ಆಗಮನದ ಹಿನ್ನೆಲೆಯಲ್ಲಿ ಏನೋ ಒಳಸಂಚಿರಬೇಕೆಂದು ನಂದ ಮತ್ತು ಅವನ ಮಂತ್ರಿ ಶಂಕಿಸುತ್ತಾರೆ. ಆದರೆ ಯಾವ ಉತ್ಸಾಹವನ್ನೂ ತೋರಿಸದೆ ಮೊದಮೊದಲು ಅವರು ತಾತ್ಸಾರವನ್ನು ತೋರಿಸುತ್ತಾರೆ. ಆದರೆ ವಿಷ್ಣುಗುಪ್ತ ತನಗೆ ತಕ್ಕ ಗೌರವ ಸಲ್ಲದುದಕ್ಕಾಗಿ ಕೋಪಗೊಂಡು ನಗರ ಪ್ರವೇಶ ಮಾಡುವುದಿಲ್ಲವೆಂದು ಹೇಳುತ್ತಾನೆ. ಇತ್ತ ತಮ್ಮ ಬಂದಿರುವ ವಾರ್ತೆ ಮಹಾರಾಣಿಗೆ ಮುಟ್ಟುತ್ತದೆ. ಆದರೆ ಇದರಿಂದ ಆಕೆಯ ಸ್ಥಿತಿ ಸುಧಾರಿಸುತ್ತದೆ ಎಂದು ಹೇಳುವಂತೇನೂ ಇಲ್ಲ.

ಧನನಂದನ ಮಂತ್ರಿಗಳು ಚಾಣಕ್ಯ ಊರೊಳಕ್ಕೆ ನಡೆದೇ ಹೋಗಬೇಕೆಂದೂ, ಪಾಟಲೀಪುತ್ರದಲ್ಲಿ ಬ್ರಾಹ್ಮಣನಿಗೆ ಗಜಾರೋಹಣ ಮಾಡುವ ಅಧಿಕಾರವಿಲ್ಲವೆಂದೂ ತಿಳಿಸುತ್ತಾರೆ. "ಶ್ರೋತ್ರಿಯ, ಕಾಲುನಡಿಗೆಯಲ್ಲಿ ಹೋಗುವುದಾದರೆ ಆಚಾರ್ಯ ಶಕಟಾಲರ ಮನೆಗೆ ಮಾತ್ರವೇ" (ಪುಟ ೫೩) ಎಂದು ಚಾಣಕ್ಯ ತಿಳಿಸುತ್ತಾನೆ. ಅದರಂತೆ ಆಂಭಿಯ ಜೊತೆ ರಾಜ ಪ್ರಾಸಾದಕ್ಕೆ ಹೋಗದೆ, ಅತ್ತ ಸುಳಿಯಲೂ ಜನ ಹೆದರುತ್ತಿದ್ದ ಶಕಟಾಲರ ಮನೆಗೆ ಚಾಣಕ್ಯ ನಡೆದು ಹೋಗಿ ತನ್ನ ಗೌರವಾದರಗಳ ಕಾಣಿಕೆಯನ್ನು ಅರ್ಪಿಸುತ್ತಾನೆ. ಈ ತೇಜಸ್ವಿಯ ಆಗಮನದಿಂದ ಶಕಟಾಲನ ಭಗ್ನ ಕುಟೀರ ರಾಜಕೀಯ ಚಟುವಟಿಕೆಗಳ ಕೇಂದ್ರವಾಗುತ್ತದೆ. ರಾಜಮಾತೆಯು, ಧರ್ಮಾಧಿಕಾರಿಯು, ಮತ್ತು

ಮಹಾವಿದ್ವಾಂಸರು ಮಹಾತ್ಮರಾದ ಚಾಣಕ್ಯನನ್ನು ಕಾಣಲು ಉತ್ಸುಕತೆಯಿಂದ ಅಲ್ಲಿಗೆ ಹೋಗುತ್ತಾರೆ.

ಈಗ ವಿಷ್ಣುಗುಪ್ತ ತೊಡಕಾಗಿದ್ದ ಪರಿಸ್ಥಿತಿಯ ಎಲ್ಲ ಸೂತ್ರಗಳನ್ನೂ ತನ್ನ ಕೈಗೆ ತೆಗೆದುಕೊಳ್ಳುತ್ತಾನೆ. ಮಹತ್ವಾಕಾಂಕ್ಷಿಯಾದ ರಾಜಕುಮಾರ ಚಂದ್ರಗುಪ್ತ ಸೇನಾಜಿತನ ಅಧೀನದಲ್ಲಿ ಕಾರಾಗಾರದಲ್ಲಿ ಬಂದಿಯಾಗಿ ಕೊಳೆಯುತ್ತಿದ್ದಾನೆಂದು ತಿಳಿದು ಚಾಣಕ್ಯ ಅವನ ಬಿಡುಗಡೆಗಾಗಿ ತಂತ್ರ ಹೂಡುತ್ತಾನೆ. ಮಗಧದ ಎಲ್ಲ ದುಸ್ಥಿತಿಗಳನ್ನೂ ಸರಿಪಡಿಸಲು ಇವನೇ ಸಮರ್ಥ ಎಂದು ಚಂದ್ರಗುಪ್ತನ ಬಗೆಗೆ ಅವನು ನಿರ್ಧರಿಸುತ್ತಾನೆ. ತನ್ನ ಗುರು ಶಕಟಾಲರ ಅಪಮಾನದಿಂದ ಅವನು ಕುದಿಯುತ್ತಾನೆ. ಸೇಡಿನ ಕಿಡಿ ಹೊಗೆಯಾಡುತ್ತದೆ.

ಈ ರಾಜಕೀಯ ಗೊಂದಲಗಳು ಸೇನಾಜಿತ ಮತ್ತು ಗೌರಿಯ ಪ್ರೇಮದಿಂದ ಇನ್ನೂ ಹದಗೆಟ್ಟು ತೊಡಕಾಗುತ್ತವೆ. ಅಂಧನಾದ ಶಕಟಾಲನ ಮಗಳನ್ನು ಸೇನಾಜಿತ ಮದುವೆಯಾದರೆ ಅವನು ಶತ್ರುಪಕ್ಷಕ್ಕೆ ಹೋಗಿ ಶಾಂತಿಗೆ ಮುಳ್ಳಾಗುವುದು ತಪ್ಪೀತು ಎಂದು ನಂದನ ಮಂತ್ರಿಗಳು ಎಣಿಕೆ ಹಾಕುತ್ತಾರೆ. ಸೇನಾಜಿತ ತನ್ನ ಪ್ರೇಯಸಿಯ ತಂದೆಯನ್ನು ಕಾಣಹೋಗುತ್ತಾನೆ. ತನ್ನ ಸ್ಥಾನಮಾನಗಳನ್ನು ಕಂಡು ತನ್ನ ಜೇಳ್ವಿಯ ಮಾತಿಗೆ ಬೆರಗಾಗಿ ಆ ಮುದುಕ ಮದುವೆಗೆ ಸಮ್ಮತಿಸುತ್ತಾನೆ ಎಂದು ಅವನ ಎಣಿಕೆ. ಆದರೆ ಶಕಟಾಲನಿಗೆ ಈ ಮದುವೆ ಖಂಡಿತ ಇಷ್ಟವಿಲ್ಲ. ಆದರೆ ಅವನು ಅಸಹಾಯಕ. ಈಗ ವಿಷ್ಣುಗುಪ್ತ ಬಂದುದರಿಂದ ಶಕಟಾಲನ ಮನದಲ್ಲಿ ಹೊಸ ಆಶೆ ಮೂಡುತ್ತದೆ. ವಿಷ್ಣುಗುಪ್ತನ ವರ್ಚಸ್ಸು, ಖ್ಯಾತಿ, ಗೌರವ ಮತ್ತು ಭೂಮವ್ಯಕ್ತಿತ್ವಕ್ಕೆ ಗೌರಿ ಮಾರು ಹೋಗುತ್ತಾಳೆ. ಅವಳ ಮನದಲ್ಲಿ ತುಮುಲವೇಳುತ್ತದೆ. ಒಬ್ಬ ಪ್ರತಿಷ್ಠಿತ ರಾಜಪುರುಷನನ್ನು ಮದುವೆಯಾಗಿ ಲೌಕಿಕ ಭೋಗಭಾಗ್ಯಗಳಲ್ಲಿ ಮುಳುಗುವುದೋ ಇಲ್ಲವೆ ಅಪರಿಗ್ರಹಿಯೂ, ತಪೋಧನನೂ ಜ್ಞಾನಮೇರುವೂ ಆದ ಬ್ರಾಹ್ಮಣನ ಕೈ ಹಿಡಿದು ಸಾಧುಜೀವನ ನಡೆಸುವುದೋ ಎಂದು.

ವಿಷ್ಣುಗುಪ್ತ ಮತ್ತು ಶಕಟಾಲರು ಒಮ್ಮೆ ಸರಿ ಹೊತ್ತಿನಲ್ಲಿ ಮಾತನಾಡಿಕೊಳ್ಳುತ್ತಿರುತ್ತಾರೆ. ಅದನ್ನು ಕೇಳಿ ಗೌರಿಯ ಸಾತ್ವಿಕ ಪ್ರವೃತ್ತಿ, ಆಧ್ಯಾತ್ಮಿಕ ಪಿಪಾಸೆ ಮೊದಲಾದವು ಜಾಗೃತವಾಗುತ್ತವೆ. ಆಕೆ ತನ್ನ ತಂದೆಯ ಆಶೀರ್ವಾದದಿಂದ ಪುನೀತವೂ, ಪ್ರಾಚೀನ ಋಷಿಗಳಿಂದ ಪ್ರತಿಪಾದಿತವೂ ಆದ ಆರ್ಷಜೀವನದ ಕನಸು ಕಾಣತೊಡಗುತ್ತಾಳೆ. ಅವಳ ಕಿವಿಗೆ ಮತ್ತೊಂದು ಮಾತೂ ಬೀಳುತ್ತದೆ. ತನ್ನ ಮಗಳು ಕ್ಷತ್ರಿಯನೋರ್ವನನ್ನು ಮದುವೆಯಾಗುವುದು ಸಮ್ಮತವಲ್ಲವೆಂದು ಆತ ವಿಷ್ಣುಗುಪ್ತನೆದುರಿಗೆ ತನ್ನ ಎದೆಯನ್ನು ತೋಡಿಕೊಳ್ಳುತ್ತಾನೆ. ಅವಳ ಕೈ ಹಿಡಿದು ತನ್ನನ್ನು ಉದ್ಧಾರ ಮಾಡಬೇಕೆಂದೂ ಶಕಟಾಲ ವಿಷ್ಣುಗುಪ್ತನನ್ನು ಕೇಳಿಕೊಳ್ಳುತ್ತಾನೆ. ಇದೆಲ್ಲವನ್ನೂ ಕೇಳಿ ಆಕೆ ಪೇಚಿಗೆ ಸಿಕ್ಕಿ ಬೀಳುತ್ತಾಳೆ. ಏನು ಮಾಡಬೇಕೆಂದು ತೋರದೆ ಒದ್ದಾಡುತ್ತಾಳೆ.

ಕೊನೆಗೆ ಅವಳ ನಿರ್ಧಾರವೇನೆಂದು ಅವನನ್ನು ಕರೆದು ತಂದೆ ಕೇಳುತ್ತಾನೆ. ಆಗ ವಿಷ್ಣುಗುಪ್ತ ಹೇಳುತ್ತಾನೆ: "ಗೌರಿ, ಆಚಾರ್ಯರು ಸ್ಪಷ್ಟವಾಗಿ ಹೇಳುತ್ತಿಲ್ಲ. ನನ್ನ ಮಾತು ಕೇಳು. ಸೇನಾಜಿತ ನಾಳೆಯೇ ಮದುವೆಯಾಗಲು ಸಿದ್ಧನಾಗಿದ್ದಾನೆ. ಅವನನ್ನು ಮದುವೆಯಾದರೆ ಅವನು ನಿನ್ನನ್ನು ಭವ್ಯ ವಸ್ತ್ರಗಳನ್ನುಡಿಸುವನು. ಅಲಂಕಾರಗಳಿಂದ ಅಲಂಕರಿಸುವನು. ರಾಜವೈಭವಗಳಿಂದ ಮೆರೆಯಗೊಳಿಸುವನು. ನನ್ನೊಡನೆ ನಿನ್ನ ವಿವಾಹದ ತಿಥಿಯನ್ನು ವಿಧಿ ಇನ್ನೂ ನಿಶ್ಚಯಮಾಡಿಲ್ಲ. ಏಕೆಂದರೆ ನನಗೆ ಧರ್ಮಕ್ಷೇತ್ರ ಸರ್ವಶ್ರೇಷ್ಠವಾದುದು ಯಾವುದೂ ಇಲ್ಲ. ಇದು ನಿಶ್ಚಿತವಾದಾಗಲೇ ಕೌಟಿಲ್ಯನು ನಿನ್ನನ್ನು ಪಾಣಿಗ್ರಹಣ ಮಾಡುವನು. ಮತ್ತು ಎಲೈ ಶಕಟಾಲಿ, ತ್ರಿಪುರಾರಿಯು ಪರ್ವತ ಕನ್ಯೆಗೆ ಏನು ಕೊಟ್ಟನೋ ಅದೇ ನಿನಗೂ ಸಿಕ್ಕುವುದು— ಶಿಲಾತಲದ ಶಯ್ಯೆ, ಭಿಕ್ಷಾಪಾತ್ರೆ, ಮೃಗಚರ್ಮ ಮತ್ತು ವಿಭೂತಿ." (ಪುಟ ೯೨)

ಇದರಿಂದ ಗೌರಿಯ ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ತಪಸ್ವಿಯನ್ನು ವರಿಸಿ ಬಡತನವನ್ನು ಅಪ್ಪಿಕೊಳ್ಳುವುದೋ ಅಥವಾ ರಜೋಮಯವಾದ ಕ್ಷತ್ರಿಯ ಜೀವನವನ್ನೋ ಎಂದು. ಚಾಣಕ್ಯನತ್ತ ಮನಸ್ಸು ತುಯ್ಯುತ್ತದೆ. ಜೊತೆಗೆ ಅವಳು ಸೇನಾಜಿತನ ಪ್ರೇಮವನ್ನೂ ಮರೆಯಲಾರಳು.

ಸೇನಾಜಿತ ಶಕಟಾಲರನ್ನು ಕಂಡಾಗ ಶಕಟಾಲ ಆತ ತಾನು ನೈಮಿಷಾರಣ್ಯಕ್ಕೆ ಹೋಗಲು ರಾಜನಿಂದ ಅನುಮತಿ ತಂದುಕೊಟ್ಟರೆ ಅವನಿಗೆ ಗೌರಿಯನ್ನು ಮದುವೆ ಮಾಡುವುದಾಗಿ ಷರತ್ತು ಹಾಕುತ್ತಾನೆ. ಸೇನಾಜಿತ ಅದಕ್ಕೆ ಒಪ್ಪುತ್ತಾನೆ. ಪಾಟಲೀಪುತ್ರ ರಾಜಕೀಯ ಚಟುವಟಿಕೆಗಳಿಂದ ತುಂಬಿಹೋಗುತ್ತದೆ. ವಕ್ರನಾಸ, ರಾಕ್ಷಸ ಮತ್ತು ದರ್ಶಕನೇ ಮೊದಲಾದ ಮಂತ್ರಿಗಳು ಏನೇನೋ ಸಂಚು ಹೂಡುತ್ತಾರೆ. ಆದರೆ ಚಾಣಕ್ಯ ತಂತ್ರದಿಂದ ಸೇನಾಜಿತನ ನೆರೆಯಿಂದ ಚಂದ್ರಗುಪ್ತ ಪಾರಾದ ಕೂಡಲೆ ಮಂತ್ರಿಗಳ ಮಂತ್ರಾಲೋಚನೆಯೆಲ್ಲ ಮಣ್ಣುಗೂಡುತ್ತದೆ. ಘಟನೆಗಳು ಶಿಖರವನ್ನೇರುತ್ತವೆ.

ರಾಜ, ಮಂತ್ರಿಗಳಿಗೆ ಅಂಭಿ ಮತ್ತು ವಿಷ್ಣುಗುಪ್ತರ ರಾಜಕೀಯ ಚಟುವಟಿಕೆ ತಲೆನೋವಾಗಿ ಪರಿಣಮಿಸುತ್ತದೆ. ಅವರು ಅಂಭಿಯನ್ನು ಸಾಗಹಾಕಬಯಸುತ್ತಾರೆ. ಮಹಾರಾಣಿಯನ್ನು ತನ್ನ ಜೊತೆ ಕರೆದುಕೊಂಡು ಹೋಗಬೇಕೆಂಬ ಅಂಭಿಯ ಇಚ್ಛೆಗೂ ರಾಜ 'ಅಸ್ತು' ಎನ್ನುತ್ತಾನೆ. ಅಂಭಿಯ ಗೌರವಾರ್ಥವಾಗಿ ಒಂದು ಭವ್ಯ ಸತ್ಕಾರಕೂಟ ಏರ್ಪಡುತ್ತದೆ. ಅದೇ ವೇಳೆಗೆ ಶಕಟಾಲನ ಕುಟೀರಕ್ಕೆ ಬೆಂಕಿ ಬಿದ್ದ ಸುದ್ದಿ ಬರುತ್ತದೆ. ಈ ವಾರ್ತೆ ಅರಸ ಹಾಗೂ ಮಂತ್ರಿಗಳಿಗೇನೂ ಅನಿರೀಕ್ಷಿತವಲ್ಲ. ಏಕೆಂದರೆ ಚಾಣಕ್ಯನನ್ನು ಕೊಲ್ಲಲು ಅವರೇ ಅದಕ್ಕೆ ಏರ್ಪಾಟು ಮಾಡಿರುತ್ತಾರೆ.

ಆದರೆ ಚಾರಾಕ್ಷ ಚಾಣಕ್ಯನ ಕಿವಿಗೆ ಈ ವಾರ್ತೆ ಮುಂಚೆಯೇ ಮುಟ್ಟಿರುತ್ತದೆ. ಅವನು ಕುಟೀರವನ್ನು ತೊರೆದು ಸತ್ಕಾರ ಸಭೆಗೆ ಹೊರಟಿರುತ್ತಾನೆ. ಸತ್ಕಾರ ಸಭೆಯಲ್ಲಿ ಚಾಣಕ್ಯನಿದ್ದಾನೆಂದು ತಿಳಿದು ಅವನನ್ನು ಗುರುತಿಸಿ ರಾಜ ಅವನ ಶಿಖೆಯನ್ನು

ಹಿಡಿದು ಜಗ್ಗಿಸುತ್ತಾನೆ. ಅದು ಬಿಚ್ಚಿಹೋಗುತ್ತದೆ. ವಿಷ್ಣುಗುಪ್ತ ರೋಷಭೀಷಣನಾಗುತ್ತಾನೆ. "ಎಲ್ಲಿಯವರೆಗೆ ಭೂಮಿಯ ಮೇಲಿನಿಂದ ಸಂಪೂರ್ಣ ನಂದ ವಂಶದ ಮೂಲೋಚ್ಛೇದವಾಗುವುದಿಲ್ಲವೋ ಅಲ್ಲಿಯವರೆಗೆ ಕೌಟಿಲ್ಯನು ನಿನ್ನ ಹಸ್ತ ಸ್ಪರ್ಶದಿಂದ ಬಿಚ್ಚಿಹೋದ ಈ ಜಡೆಯನ್ನು ಮತ್ತೆ ಕಟ್ಟುವುದಿಲ್ಲ" (ಪುಟ ೨೧೪–೨೧೫) ಎಂದು ಭೀಷ್ಮ ಪ್ರತಿಜ್ಞೆಮಾಡುತ್ತಾನೆ.

ತನ್ನ ಮನೆಗೆ ಬೆಂಕಿ ಬಿದ್ದಿರುವ ಸುದ್ದಿ ಗೌರಿಗೆ ಮುಟ್ಟಿದಾಗ ಅವಳು ಸೇನಾಜಿತನೇ ಆ ಕೆಲಸ ಮಾಡಿರಬೇಕೆಂದು ಶಂಕಿಸಿ ತುಂಬ ಹತಾಶಳಾಗಿ ನೈಮಿಷಾರಣ್ಯಕ್ಕೆ ಹೊರಟು ಹೋಗುತ್ತಾಳೆ. ಅತ್ತ ಸತ್ಕಾರಕೂಟ ಗೊಂದಲದಲ್ಲೇ ಕೊನೆಗೊಂಡಾಗ ವಿಷ್ಣುಗುಪ್ತ ಅಂಭಿಯೊಡನೆ ನೈಮಿಷಾರಣ್ಯಕ್ಕೆ ತೆರಳುತ್ತಾನೆ. ಕ್ರುದ್ಧನಾದ ನಂದ ಅವರನ್ನು ಬೆನ್ನಟ್ಟ ಬಯಸುತ್ತಾನೆ. ಆದರೆ ಮಂತ್ರಿಗಳು ಅವನನ್ನು ತಡೆದು ಸೇನಾಜಿತನಿಗೆ ಆ ಕೆಲಸ ವಹಿಸುತ್ತಾರೆ. ಅವನಿಗೆ ಚಾಣಕ್ಯನ ಮೇಲೆ ಸೇಡು ತೀರಿಸಿಕೊಳ್ಳಲು ಸದವಕಾಶ ಲಭಿಸುತ್ತದೆ. ಏಕೆಂದರೆ ಅವನಿಂದಲೇ ಚಂದ್ರಗುಪ್ತ ಸೆರೆಯಿಂದ ತಪ್ಪಿಸಿಕೊಂಡಿರುತ್ತಾನೆ. ಅವನಿಂದಲೆ ಗೌರಿಯೂ ಕೈತಪ್ಪಿಹೋಗುವಂತಿದ್ದಾಳೆ. ಈ ರೀತಿ ಅವನು ಸೇನಾಜಿತನ ಮುಖಭಂಗ ಮಾಡಿರುತ್ತಾನೆ.

ಅನಂತರ ನೈಮಿಷಾರಣ್ಯ ಇವರೆಲ್ಲರ ಕಾರ್ಯಕ್ಷೇತ್ರವಾಗುತ್ತದೆ. ಪರಮಪಾವನವೂ ಆದರ್ಶಮಯವೂ ಆದ ನೈಮಿಷಾರಣ್ಯದ ವರ್ಣನೆ ಬರುತ್ತದೆ. ಅದರ ಕುಲಪತಿ ಭದ್ರಾಕ್ಷರು. ಸೇನಾಜಿತ ಅಲ್ಲಿಗೆ ಬಂದಾಗ ವಿಷ್ಣುಗುಪ್ತ ವೇದವ್ಯಾಸರ ಪಾದುಕೆಗಳಿರುವ ಸ್ಥಾನದಲ್ಲಿ ಧ್ಯಾನಲೀನನಾಗಿರುತ್ತಾನೆ. ವ್ಯಾಸರು ಅವನಿಗೆ ಪ್ರತ್ಯಕ್ಷರಾಗಿ ಆರ್ಯಾವರ್ತವನ್ನು ನಂದನ ದುರಾಡಳಿತದಿಂದ ಪಾರುಮಾಡುವಂತೆ ಆಣತಿಯೀಯುತ್ತಾರೆ. ಅವನನ್ನು ಕೊಲ್ಲಲು ಅವನ ಹಿಂದೆ ಬಂದು ನಿಂತಿದ್ದ ಸೇನಾಜಿತ ವ್ಯಾಸರನ್ನು ಪ್ರತ್ಯಕ್ಷ ಕಾಣುತ್ತಾನೆ. ಈ ಪ್ರಸಂಗದಿಂದ ಅವನ ಹೃದಯ ಪರಿವರ್ತನೆಯಾಗುತ್ತದೆ. ಅವನು ತನ್ನ ಖಡ್ಗವನ್ನು ಬಿಸಾಡುತ್ತಾನೆ. ಚಾಣಕ್ಯ ಸೇನಾಜಿತನಿಗೆ ಗೌರಿಯನ್ನು ಮದುವೆ ಮಾಡಿಕೊಳ್ಳುವಂತೆ ಹೇಳಿ ತನ್ನ ಅಪೂರ್ವ ತ್ಯಾಗವನ್ನು ಮೆರೆಯುತ್ತಾನೆ; ಗೌರಿಗೆ "ಆಚಾರ್ಯ ಶಕಟಾಲರ ಕುಲವನ್ನು ಉತ್ತರಣ ಮಾಡುವ ಮಗನಿಗೆ ತಾಯಿಯಾಗು" (ಪುಟ ೨೮೫) ಎಂದು ಆಶೀರ್ವದಿಸುತ್ತಾನೆ. ಸೇನಾಜಿತನೂ ಗೌರಿಯೂ ಭಗವಾನ್ ಕೌಟಿಲ್ಯನ ಚರಣ ಧೂಳಿಯನ್ನು ತಲೆಗೆ ಧರಿಸುತ್ತಾರೆ.

ಈ ಹೊತ್ತಿಗೆ ಸರಿಯಾಗಿ ಅಲಕ್ಷೇಂದ್ರ ಭಾರತದ ಮೇಲೆ ದಂಡೆತ್ತಿ ಬಂದ ಸುದ್ದಿ ಮುಟ್ಟುತ್ತದೆ. ಈ ಕಥಾ ಮಾಲಿಯ ಮೊದಲನೆಯ ಭಾಗ ಇಲ್ಲಿಗೆ ಮುಗಿಯುತ್ತದೆ. ಬ್ರಹ್ಮತೇಜೋಬಲದ ಮುಂದೆ ಕ್ಷಾತ್ರಬಲ ಹತಬಲವಾದ ಕಥೆ ಇದು.

ಪಾತ್ರ ಚಿತ್ರಣದಲ್ಲಿ ಲೇಖಕರಿಗೆ ಸಾಕಷ್ಟು ಯಶಸ್ಸು ದೊರೆತಿದೆ. ಚಾಣಕ್ಯ ಕಾದಂಬರಿಯ ನಾಯಕ. ಆದರೆ ಇಲ್ಲಿ ಐತಿಹಾಸಿಕ ವ್ಯಕ್ತಿ ಚಾಣಕ್ಯನ ಸುತ್ತ ಪೌರಾಣಿಕತೆಯ ಪರಿವೇಷವನ್ನು ಕಟ್ಟಲಾಗಿದೆ. ಇದರಲ್ಲಿ ಚಾಣಕ್ಯನ ಬದುಕಿನ ತರತಮ ಸೋಪಾನಗಳ,

ಶೀರ್ಷಿಕೆ ಸೂಚಿಸುವ ಮಾರ್ಗ ಇದು. ಚಾಣಕ್ಯನ ಪಾತ್ರ ಚಿತ್ರಣ ಸಹಜವಾಗ ಲೇಖಕರ ಕಣ್ಣ ಮುಂದೆ ಶಂಕರಾಚಾರ್ಯರ ಅಥವಾ ವ್ಯಾಸ ಮಹರ್ಷಿಗಳ ಚಿತ್ರವಿದ್ದಿರಬೇಕು. ಆತ ಜನ್ಮತಃ ಸಿದ್ಧಪುರುಷನಂತೆ ಚಿತ್ರಿತನಾಗಿದ್ದಾನೆ. ಚಾಣಕ್ಯನ 'ಅರ್ಥಶಾಸ್ತ್ರ' ಮೊದಲಾದ ಗ್ರಂಥಗಳ ಆಧಾರದ ಮೇಲೆ ಆತನ ವ್ಯಕ್ತಿತ್ವವನ್ನು ರೂಪಿಸಿಲ್ಲ. ಲೇಖಕರು ಇಲ್ಲಿ ಚಾಣಕ್ಯನನ್ನು ಬ್ರಾಹ್ಮಣ ಧರ್ಮದ ನಿಧಿ, ಪ್ರತಿನಿಧಿಯನ್ನಾಗಿ ಚಿತ್ರಿಸಲು ಯತ್ನಿಸಿದ್ದಾರೆ. ಆದರೆ ಚಂದ್ರಗುಪ್ತನನ್ನು ಸೆರೆಯಿಂದ ಬಿಡಿಸಲು ಗೌರಿಯನ್ನು ಸೇನಾಜಿತನ ಬಳಿಗೆ ಕಳುಹಿಸಿ ಅವಳ ಮೋಹದ ಬಲೆಗೆ ಆತನು ಬೀಳುವಂತೆ ಮಾಡಿದ್ದಾರೆ. ಸೇನಾಜಿತ ಅಂದು ರಾತ್ರಿ ಸಮಾಜವನ್ನು ವೀಕ್ಷಿಸುತ್ತ ಗೌರಿಯೊಡನೆ ಕಾಲ ಕಳೆಯುತ್ತಾನೆ. ರಾತ್ರಿ ತನ್ನ ಮನೆಗೆ ಹೋಗಬೇಕೆಂಬ ಸಂಕಲ್ಪವನ್ನು ಸೇನಾಜಿತ ಮರೆಯುತ್ತಾನೆ. ತನ್ನ ಮನೆಯಲ್ಲಿ ಬಿದ್ದಿರುವ ಹಸಿದ ಪತ್ನಿಯನ್ನು ಯಾರು ಗಮನಿಸುತ್ತಾರೆ ಎಂದು ಆಶ್ಚರ್ಯ. ಆದರೆ ಆ ರಾತ್ರಿಯೇ ಚಂದ್ರಗುಪ್ತ ಅಲ್ಲಿಂದ ಪಾರಾಗುತ್ತಾನೆ.

ಒಂದು ರೀತಿಯಲ್ಲಿ ತನಗೆ ವಾಗ್ದತ್ತೆಯೂ ತನ್ನ ಗುರುಪುತ್ರಿಯೂ ಆದ ಗೌರಿಯನ್ನು ತನ್ನ ತಂತ್ರಕ್ಕಾಗಿ ಈ ರೀತಿ ಬಳಸಿಕೊಳ್ಳುವುದು ಕುಟಿಲನಾದ ಚಾಣಕ್ಯನಿಗೆ ಶೋಭಿಸಬಹುದೇನೋ ಏನೋ, ಭಗವಾನ್ ಕೌಟಿಲ್ಯನಿಗಂತೂ ಸುತರಾಂ ಶೋಭಿಸದು. ಮರಣ ದಿನವನ್ನು ನಿರೀಕ್ಷಿಸಿ ಅಸಹಾಯಕನಾಗಿ ಸೆರೆಯಿಂದ ತಪ್ಪಿಸಿಕೊಳ್ಳುವುದು ಚಂದ್ರಗುಪ್ತನ ಘನತೆಗೂ ತಕ್ಕುದಲ್ಲವೋ ಏನೋ. ಇದಕ್ಕಿಂತ 'ಮುದ್ರಾಮಂಜೂಷ'ದಲ್ಲಿ ಬರುವ ಅರಗಿನ ಮಂಟಪದ ಪ್ರಕರಣ ಹೆಚ್ಚು ಭವ್ಯವು. ಚಂದ್ರಗುಪ್ತನ ವ್ಯಕ್ತಿತ್ವಕ್ಕೆ ಮೆರುಗು ಕೊಡುವ ಸಂಘಟನೆ ಆಗಿದೆ. ನಂದ ನಿರ್ಮೂಲನಕ್ಕಾಗಿ ಚಾಣಕ್ಯ ಪಣ ತೊಡಲು ಮೂಲ ಕಾರಣವೇನು? ಆತನ ಬದುಕಿನ ಯಾವ ಘಟನೆ ಆತನ ವ್ಯಕ್ತಿತ್ವದಲ್ಲಿ ಈ ಪ್ರವೃತ್ತಿಯನ್ನು ತಂದೊಡ್ಡಿತು ಮೊದಲಾದವುಗಳ ಮನೋವೈಜ್ಞಾನಿಕ ಚಿತ್ರಣ ಇಲ್ಲಿಲ್ಲ.

ರಾಕ್ಷಸನ ಪಾತ್ರ ಇಲ್ಲಿ ಕುಬ್ಜವಾಗಿದೆ. ಬಹುಶಃ ಮುಂದಿನ ಭಾಗಗಳನ್ನು ಬರೆದಿದ್ದರೆ ಲೇಖಕರು ಈ ಪಾತ್ರವನ್ನು ಬೆಳೆಸುತ್ತಿದ್ದರೋ ಏನೋ. ಆದರೆ ಈಗಿರುವಷ್ಟು ನೋಡಿದರೆ ಆತ ಚಾಣಕ್ಯನ ಪ್ರತಿಸ್ಪರ್ಧಿಯಾಗಲಾರ. ಧನನಂದ ಇಲ್ಲಿ ಬೌದ್ಧ ಧರ್ಮದ ಪೋಷಕನಂತೆ ಚಿತ್ರಿತನಾಗಿದ್ದಾನೆ. ಆತನ ಆಜ್ಞೆಯಂತೆ ನಿರ್ಮಿತವಾದ ಪಾಟಲೀಪುತ್ರದ ಅನೇಕ ಸ್ತೂಪಗಳು ನಿಂತಿದ್ದವು. ಆತನ ವರ್ಣನೆ ಹೀಗಿದೆ: "ಉನ್ನತವಾದ ಕಪ್ಪಾದ ಸ್ನಾಯುಯುಕ್ತವಾದ ದೇಹ, ವಿಷಯಲಾಲಸಾಮಯವಾದ ಹೊರಕ್ಕೆ ಹೊರಟಿರುವ ದೊಡ್ಡ ದೊಡ್ಡ ಕಣ್ಣುಗಳು, ಚಿಕ್ಕ ಹಣೆ, ಉದ್ದವಾದ ಕೂದಲು, ಸುಂದರವಾದರೂ ಅನಾಕರ್ಷಕ ಮುಖ ಇವುಗಳೆಲ್ಲ ಮಗಧ ನರೇಂದ್ರ ಧನನಂದನ ಕಡೆಗೆ ಜನರ ದೃಷ್ಟಿಯನ್ನು ಎಳೆಯುತ್ತಿತ್ತು. ಆತನ ನಡಿಗೆ ಕಕ್ಕನ ನಡಿಗೆಯಂತಿತ್ತು. ಆತನ ತುಟಿಗಳ ಮೇಲೆ ಆತನ ಎಲ್ಲ ಪಿತಾಮಹರ ಸ್ಥೂಲತೆಯಿತ್ತು. ಆತನು ಮದದ ಮತ್ತು ಅಧಮತೆಯ ಪ್ರತೀಕನಾಗಿದ್ದ." (ಪುಟ ೧೬)

ಬೌದ್ಧಧರ್ಮದ ಪೋಷಕನಂತೆ ಕಾಣುವನು ಆತನ ವ್ಯಕ್ತಿತ್ವದ ಮೇಲೆ ಇದರ

ಪ್ರಭಾವವೇನೂ ಇರಲಿಲ್ಲವೆ? ಅಥವಾ ಬೌದ್ಧಧರ್ಮವೇ ಈ ಹೊತ್ತಿಗೆ ಅಧೋಗತಿಗೆ ಇಳಿದಿತ್ತೆ—ಮೊದಲಾದ ವಿವರಗಳು ಇಲ್ಲಿಲ್ಲ. ತನ್ನ ಕೈಹಿಡಿದ ಮಡದಿ ಸುಮೋಹಾದೇವಿಯನ್ನು ಆತ ನಡೆಸಿಕೊಳ್ಳುವ ರೀತಿಯಲ್ಲೇ ಆತನ ಸಂಸ್ಕಾರ ವ್ಯಕ್ತವಾಗಿದೆ.

ಚಂದ್ರಗುಪ್ತನ ಪೂರ್ವಜೀವನದ ಮೇಲೆ ಬೆಳಕು ಚೆಲ್ಲಿ ಲೇಖಕರು ಅವನು ಕ್ಷತ್ರಿಯ ಎಂದು ಸ್ಥಾಪಿಸಿದ್ದಾರೆ. ತಾನು ಹೀನಕುಲಜ ಎಂಬ ಭಾವನೆ ಅವನನ್ನು ನಿರ್ವೀರ್ಯನನ್ನಾಗಿ ಮಾಡಿರುತ್ತದೆ. "ತಾನು ಸ್ವತಃ ಅಧಮನೆಂದು ತಿಳಿದುಕೊಂಡುದರಿಂದ ಅಧಮತೆಯಿಂದ ಉದ್ಧಾರ ಪಡೆಯಲು ಅವನು ಪ್ರಯತ್ನಿಸುತ್ತಿರಲಿಲ್ಲ. ಮತ್ತು ನಂದನ ಮಹತ್ತೆಯ ಎದುರಿಗೆ ತಲೆತಗ್ಗಿಸುತ್ತಾ ಬಂದಿದ್ದನು. ಈಗ ಕ್ಷಣಮಾತ್ರ ಅವನು ತನ್ನ ಪ್ರತಾಪ, ನಂದನ ನಿರ್ಮಾಲ್ಯ—ಎರಡನ್ನೂ ಅವರವರ ಪರಾಕಾಷ್ಠೆಯಲ್ಲಿ ನೋಡಿದನು. ಇಲ್ಲಿಯವರೆಗೆ ಅವನು ತಾನು ಕುಲಹೀನತೆಯ ಪಕ್ಕದಲ್ಲಿ ನಿಂತು, ಶ್ರದ್ಧೆಯಿಂದಲೂ ಪೂಜ್ಯತೆಯಿಂದಲೂ ನರೇಂದ್ರ ಕುಲದ ಪರ್ವತ ಶಿಖರದ ಮೇಲೆ ಮಂಡಿಸಿದ್ದ ಧನನಂದನನ್ನು ನೋಡುತ್ತಿದ್ದನು." (ಪುಟ ೧೮೬) ಚಾಣಕ್ಯ ಅವನಿಗೆ ಸತ್ಯವನ್ನು ಅರುಹಿದಾಗ ಸ್ವಸ್ವರೂಪದರ್ಶನದಿಂದ ಅವನಲ್ಲಿ ಅದ್ಭುತ ಆತ್ಮಪ್ರತ್ಯಯ ಸಂಚರಿಸುತ್ತದೆ. ಆದರೆ ಚಂದ್ರಗುಪ್ತ ಅಷ್ಟು ಸುಲಭವಾಗಿ ಚಾಣಕ್ಯನ ಮಾತನ್ನು ನಂಬುವುದಿಲ್ಲ. ಅವನು ಅರ್ಜುನನಂತೆ ಅನೇಕ ಸಂದೇಹಗಳನ್ನು ಮುಂದಿಡುತ್ತಾನೆ. ಚಾಣಕ್ಯ ಕೃಷ್ಣನಂತೆ ಆತನ ಸಂದೇಹಗಳೆಲ್ಲವನ್ನೂ ಪರಿಹರಿಸಿ ಆತನನ್ನು ನಂದ ನಿರ್ಮಾಣಕ್ಕಾಗಿ ಹುರಿದುಂಬಿಸುತ್ತಾನೆ. ಕೊನೆಗೆ ಚಾಣಕ್ಯ ಅವನಿಗೆ ತನ್ನದಲ್ಲ, ಅವನ ವಿಶ್ವರೂಪ ತೋರಿಸುತ್ತಾನೆ: "ಅಪ್ಪಾ ನೀನು ಕೈಯಲ್ಲಿ ರಾಜದಂಡ ಹಿಡಿದು ಕುಳಿತಿರುವುದನ್ನು ನೋಡುತ್ತಿದ್ದೇನೆ. ಸರ್ವಧರ್ಮಗಳ ಆಶ್ರಯ ರೂಪವಾದ ವಿದ್ಯೆಯಿಂದ ನೀನು ಪ್ರೇರಿತನಾಗಿರುವುದನ್ನು ನೋಡುತ್ತಿದ್ದೇನೆ. ಪ್ರಜ್ಞೆ, ನಿನ್ನನ್ನು ವಾಕ್ಯಕ್ರಿಯಾ ವಿಶಾರದನನ್ನಾಗಿಯೂ, ಲೋಕಕಲ್ಯಾಣ ತತ್ಪರನನ್ನಾಗಿಯೂ ಮಾಡುತ್ತಿರುವುದನ್ನು ನೋಡುತ್ತೇನೆ. ನೀನು ಮೂರು ವೇದಗಳ ಮೂಲಕ ಲೋಕರಕ್ಷಣೆ ಮಾಡುತ್ತಿರುವುದನ್ನು, ವರ್ಣಾಶ್ರಮ ಮರ್ಯಾದೆಗಳನ್ನು ಸಾಕ್ಷಾತ್ಕರಿಸುತ್ತಿರುವುದನ್ನು ಸ್ವಧರ್ಮದಲ್ಲಿ ಪ್ರಜೆಗಳನ್ನು ತೊಡಗಿಸುತ್ತಿರುವುದನ್ನು, ಅವರಿಗೆ ಸ್ವರ್ಗ ಮತ್ತು ಮೋಕ್ಷಗಳನ್ನು ದಾನ ಮಾಡುತ್ತಿರುವುದನ್ನೂ ನೋಡುತ್ತಿದ್ದೇನೆ. ನೀನು ಕೃಷಿಸಂಪನ್ನನಾಗಿ ಪಶುಪಾಲನೆ ಮಾಡುತ್ತಾ, ವಾಣಿಜ್ಯ ವೈಭವಗಳನ್ನು ಬೆಳೆಸುತ್ತಿರುವುದನ್ನೂ ನೋಡುತ್ತಿದ್ದೇನೆ. ಲೋಕಯಾತ್ರೆಗೆ ಆಧಾರರೂಪವಾದ ದಂಡ ನೀತಿಯಿಂದ ಅಲಬ್ಧದ ಲಾಭವನ್ನು ಪಡೆಯುತ್ತಿರುವವನನ್ನಾಗಿಯೂ—ಸಂಪಾದಿಸಿದುದನ್ನು ರಕ್ಷಿಸುವವನಾಗಿಯೂ—ರಕ್ಷಿಸಿದುದನ್ನು ಬೆಳೆಸುವವನಾಗಿಯೂ—ವೃದ್ಧಿಯನ್ನು ಸುಯೋಗ್ಯವಾಗಿ ಮಾಡುತ್ತಿರುವವನನ್ನಾಗಿಯೂ ನೋಡುತ್ತಿದ್ದೇನೆ. ಮೌರ್ಯ ಶ್ರೇಷ್ಠ ನಾಲ್ಕು ವಿದ್ಯೆಗಳಿಂದ ರಾಜ್ಯಚಕ್ರ ನಡೆಸುವುದನ್ನೂ, ನಿನ್ನ ಛತ್ರಚ್ಛಾಯೆಯಲ್ಲಿ ಅನೇಕ ರಾಷ್ಟ್ರಗಳನ್ನೂ ಗಣಗಳನ್ನೂ ಒಟ್ಟುಗೂಡಿಸುತ್ತಿರುವುದನ್ನೂ, ಆರ್ಯಧರ್ಮದಿಂದ ಲೋಕಸಂಗ್ರಹದ ಉದ್ಧಾರ ಮಾಡುತ್ತಿರುವುದನ್ನೂ, ಮಹರ್ಷಿಗಳ

ಜೀವನ ಮಂತ್ರಗಳನ್ನು ಸನಾತನಗೊಳಿಸುತ್ತಿರುವವನ್ನು. ಅನೇಕ ಮತ್ತು ಆವರ್ತನದ ಗಡಿಗಳನ್ನು ಒಂದು ಮಾಡುತ್ತಿರುವುದನ್ನು ನೋಡುತ್ತೇನೆ." (ಪುಟ ೧೫೦-೫೧)

ಈ ರೀತಿ ಚಂದ್ರಗುಪ್ತ ಆರ್ಯಸಂಸ್ಕೃತಿಯ ಪರಮ ಆದರ್ಶಪುರುಷನಂತೆ ಚಿತ್ರಿತನಾಗಿದ್ದಾನೆ. ಸ್ತ್ರೀ ಪಾತ್ರಗಳಲ್ಲಿ ಗೌರಿಯ ಪಾತ್ರ ಅತ್ಯಂತ ಮನೋವೈಜ್ಞಾನಿಕವಾಗಿದೆ. ಐಹಿಕ ಆಮುಷ್ಮಿಕ ಈ ಎರಡು ಸಿದ್ಧಿಗಳ ನಡುವೆ ನಿಂತು ಅವುಗಳ ಸೆಳೆತಕ್ಕೆ ಸಿಕ್ಕಿ ತಲ್ಲಣಿಸಿ ಯಾವ ನಿಷ್ಠೆಯನ್ನೂ ಬಾರದೆ ಕೊನೆಗೆ ಪರಿಸ್ಥಿತಿಯ ಮುಂದೆ ತಲೆ ಬಾಗುವ ಈ ಹೆಣ್ಣಿನ ಚಿತ್ರಣ ಅತ್ಯಂತ ಮಾರ್ಮಿಕವಾಗಿದೆ. ರಾಜಕೀಯ ಚದುರಂಗದಾಟಕ್ಕೆ ಸಿಕ್ಕಿ ತೊಳಲಾಡುವ ರಾಜಕುಮಾರಿಯೊಬ್ಬಳ ಚಿತ್ರ ಸುಮೋಹಾದೇವಿಯಲ್ಲಿ ಅತ್ಯಂತ ಕರುಣಭೀಕರವಾಗಿ ಬಂದಿದೆ.

ವಾತಾವರಣ ಚಿತ್ರಣದಲ್ಲಿ ಲೇಖಕರಿಗೆ ಅದ್ಭುತ ಯಶಸ್ಸು ದೊರೆತಿದೆ. ಪ್ರಾಚೀನ ಭಾರತದ ಗತವೈಭವವನ್ನು ಚಿತ್ರಿಸುವುದರಲ್ಲಿ ಮುನ್ಶಿಯವರು ಎತ್ತಿದ ಕೈ. ನಂದರ 'ಮೋಹನಗೃಹ'ದ ವರ್ಣನೆ ಹೀಗಿದೆ:

> ಆ ಭಾಗವು ವಿಶಾಲವಾಗಿತ್ತು. ಬೆಳ್ಳಿಯ ತಗಡು ಬಡಿದ ಗೋಡೆಗಳು. ಕಂಬಗಳಲ್ಲಿ ಕೆಂಪು, ನೀಲಮಣಿಗಳನ್ನು ನೆಟ್ಟಿದ್ದರು. ಒಳಬಾಗಿಲಿನ ಎದುರಿಗೆ ಬೆಳ್ಳಿಯ ಎರಡು ಸಿಂಹಗಳು ಎರಡು ಕಡೆಗೂ ನಿಂತಿದ್ದವು.
>
> ಪಕ್ಕದಲ್ಲಿ ಸುಂದರ ಕುಶಲಕಲಾ ನಿರ್ಮಿತವಾದ ಬೆಳ್ಳಿಯ ಒಂದು ಕಾಲುಮಣೆಯಿತ್ತು.....ಅಲ್ಲಿಂದ ಒಳಗೆ ಪ್ರವೇಶಿಸಿದರೆ ಸುವರ್ಣ ಖಂಡದಲ್ಲಿ ಸೇನಾಜಿತ ತನ್ನ ನಿತ್ಯದ ಸ್ಥಳದಲ್ಲಿ ನಿಂತಿದ್ದನು. ಹತ್ತಿರದಲ್ಲಿದ್ದ ಕಂಚುಕಿಯೂ, ನರೇಂದ್ರದೇವನು ಏಳುವುದನ್ನು ಕಾಯುತ್ತಾ ಆಗಾಗ್ಗೆ ಒಳಭಾಗವನ್ನು ನೋಡುತ್ತಿದ್ದನು. ಕುದುರೆಯ ರಾವುತರೂ ಸಶಕ್ತರಾದ ಇಬ್ಬರು ವೃದ್ಧ ಯವನ ಸ್ತ್ರೀಯರು, ಬಿಲ್ಲು ಹಿಡಿದು ಒಳಗಿನ ಬಾಗಿಲನ್ನು ರಕ್ಷಿಸುತ್ತಿದ್ದರು.
>
> ಆ ಪ್ರಾಸಾದದಲ್ಲಿ ನಾಲ್ಕು ಚಿಕ್ಕದ ಗೋಡೆಗಳು ಮನೋಹರ ಆಕಾರದಲ್ಲಿ ಕಟ್ಟಲ್ಪಟ್ಟಿದ್ದವು. ಅವನ್ನು ನೀಲಮಣಿಯಿಂದ ಅಲಂಕರಿಸಿದ್ದರು. ಪ್ರಾಸಾದದ ಮಧ್ಯೆ ಒಂದು ಕಿಟಕಿ ಇತ್ತು. ಅದರಿಂದ ಪ್ರಕಾಶವೂ ಗಾಳಿಯೂ ಬರುತ್ತಿತ್ತು. ಕಿಟಕಿಯ ಬಳಿ ನಾಲ್ವರು ಯವನ ಸ್ತ್ರೀಯರು ರಕ್ಷಣೆ ಕೊಡುತ್ತಿದ್ದರು! (ಪುಟ ೯೭)

ನೈಮಿಷಾರಣ್ಯದ ವರ್ಣನೆಯಲ್ಲಿ ಲೇಖಕರ ಪ್ರಕೃತಿಪ್ರೇಮ ಅತ್ಯಂತ ಮನೋಹರವಾಗಿ ಬಿಂಬಿತವಾಗಿದೆ. ವೈದಿಕಯುಗದ ಆರಣ್ಯಕ ಸಂಸ್ಕೃತಿ ಕಣ್ಣಿಗೆ ಕಟ್ಟುವಂತಿದೆ:

> ದೂರದಲ್ಲಿ ಎರಡು ಪರ್ವತ ಮಾಲೆಗಳು ಸೇರುತ್ತಿದ್ದವು. ಅಲ್ಲಿಯವರೆಗೆ ಆ ವನವು ಮತ್ತು ನದಿಯ ಸಮಾನ ಪ್ರವಾಹವಿತ್ತು. ಪ್ರವಾಹದ ಹೊಳಪಿನ ಬಣ್ಣದಂತೆ ಪ್ರಕಾಶದ ಸಮುಚ್ಚಯವಾಗುತ್ತಿತ್ತು. ಧೂಮ್ರಪುಂಜವು ಮೇಲು ಮೇರೆಯ

ಹಾರಲು ಪ್ರಯತ್ನಿಸುತ್ತಿತ್ತು. ಒಂದೆಡೆಯಲ್ಲಿ ಜಟಾಧಾರಿ ಪುರುಷರ ಜತೆ ಬಾಲಕರ ಸಮೂಹ ಹೋಗುತ್ತಿತ್ತು. ಇನ್ನೊಂದೆಡೆ ಹಸುಗಳು ಆಟವಾಡುತ್ತಿದ್ದವು. ಒಂದೆಡೆ–ಮಧ್ಯದಲ್ಲಿ–ವಿಭೂತಿಯ ಒಂದು ಚಿಕ್ಕ ರಾಶಿ ಬಣ್ಣದಲ್ಲಿ ವೈವಿಧ್ಯವನ್ನು ತರುತ್ತಿತ್ತು. ಇನ್ನಾವುದೋ ಸ್ಥಾನದಿಂದ ಧೂಮ್ರ ಪುಂಜದೊಡನೆ ಸುವಾಸನೆ ಪ್ರವಹಿಸುತ್ತಿತ್ತು. ಎಲ್ಲಿಂದಲೋ ಘಂಟಾನಾದದ ಮಧುರ ಧ್ವನಿ ಬರುತ್ತಿತ್ತು. ಮತ್ತೆಲ್ಲಿಂದಲೋ ಯಾರದೋ ಹೂಂಕಾರದ ಅಥವಾ ಹಾಸ್ಯದ ಧ್ವನಿ ಕೇಳುತ್ತಿತ್ತು. ಅನೇಕ ಕಡೆಗಳಿಂದ ಮಂತ್ರೋಚ್ಚಾರದ ಮಧುರವೂ ಪ್ರೇರಣಾದಾಯಕವೂ ಆದ ಧ್ವನಿ; ಸುವಾಸನೆ, ಮತ್ತೆ ಬೇರೆ ಧ್ವನಿಗಳು ಏಕರೂಪವಾಗಿ, ಆ ಸ್ಥಳ ಶಾಂತವೂ ರಮಣೀಯವೂ ಆಗಿತ್ತು. ವಾತಾವರಣ ವಿಶುದ್ಧವೂ ಸಮೃದ್ಧವೂ ಆಗಿ ವರುಣ ದೇವನ ಆಕಾಶ ಸಿಂಹಾಸನವನ್ನು ಸ್ಪರ್ಶಮಾಡುವ ಮಹತ್ತರವಾದ ಇಚ್ಛೆಯಿಂದ ಮೇಲಕ್ಕೆ ಬರುತ್ತಿದ್ದಂತೆ ತೋರುತ್ತಿತ್ತು. ಇಂದ್ರಿಯಗಳ ಮೂಲಕ ಆತ್ಮದಲ್ಲಿ ಅಮೃತರಸವನ್ನು ತುಂಬಿ ಈ ಅರಣ್ಯವು ಸೇನಾಜಿತನನ್ನು ಸ್ವಲ್ಪ ಶಾಂತಗೊಳಿಸಿತು. (ಪುಟ ೨೩೧–೩೨)

ಇಂಥ ವರ್ಣನೆಗಳಿಂದ ಈ ಕಾದಂಬರಿ ಇಡಿಕಿರಿದಿದೆ. ನಂದ, ರಾಕ್ಷಸ, ಚಾಣಕ್ಯ ಮೊದಲಾದ ಐತಿಹಾಸಿಕ ಹೆಸರುಗಳಿಲ್ಲದಿದ್ದರೆ ಇವನ್ನು ವೈದಿಕ ಕಾದಂಬರಿ (Biblical novel) ಎನ್ನಬಹುದಾಗಿತ್ತು. ಇತಿಹಾಸ ಮತ್ತು ಪುರಾಣ ಇವೆರಡರ ಸಂಗಮವನ್ನು ಇಲ್ಲಿ ಕಾಣಬಹುದು.

ಚಂದ್ರಗುಪ್ತ ಚಾಣಕ್ಯರ ಕಾಲಕ್ಕಾಗಲೇ ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಚಾಣಕ್ಯನ ಚಟುವಟಿಕೆಗಳ ಹಿಂದೆ ಬೌದ್ಧಧರ್ಮದ ಮೂಲೋತ್ಪಾಟನೆಯೂ ಒಂದು ಗುರಿಯಾಗಿತ್ತೆಂದು ಕೆಲವು ಗ್ರಂಥಗಳಿಂದ ತಿಳಿಯಬರುತ್ತದೆ. ಆದರೆ ಇಲ್ಲಿ ಬೌದ್ಧಧರ್ಮದ ಪ್ರಭಾವ ಚಿತ್ರಣವಿಲ್ಲ. ಕ್ಷಪಣಕ, ಪಾಖಂಡೀಮತದ ಸ್ತೂಪ ಮೊದಲಾದವುಗಳನ್ನು ಬಿಟ್ಟರೆ ಅದರ ಬಗೆಗೆ ಅಷ್ಟಾಗಿ ವಿವರಣೆಯಿಲ್ಲ. ಮಗಧ ದೇಶ ಬೌದ್ಧಧರ್ಮದ ಪ್ರಧಾನ ದುರ್ಗವಾಗಿತ್ತು. ಆದರೆ ಇಲ್ಲಿ ಅದರ ಚಟುವಟಿಕೆಗಳೇನು ಎಂಬುದರ ಚಿತ್ರಣವಿಲ್ಲ. ಲೇಖಕರ ಉದ್ದೇಶ ಬ್ರಾಹ್ಮಣ ಧರ್ಮದ ಹಿರಿಮೆಗರಿಮೆಯ ಪ್ರತಿಷ್ಠಾಪನೆಯಾಗಿರುವುದರಿಂದ ಅವರು ಈ ಅಂಶವನ್ನು ಅಲಕ್ಷಿಸಿರಲೂ ಸಾಕು. "ಕೌಟಿಲ್ಯ ಮಗಧದಲ್ಲಿ ಕ್ರಾಂತಿಯನ್ನು ಉಂಟುಮಾಡಿದುದು ರಾಜಕೀಯ ಮತ್ತು ಸಾಮಾಜಿಕ ಜೀವನವನ್ನು ಉನ್ನತಮಟ್ಟಕ್ಕೆ ಏರಿಸಲು ಮಾತ್ರ. ಕೌಟಿಲ್ಯರ ವಿಷಯದಲ್ಲಿ ಆ ಭಾವನೆ ದೃಢವಾದರೆ ನನ್ನ ಪ್ರಯತ್ನ ಸಾರ್ಥಕವಾದಂತೆ" (ಪೀಠಿಕೆ, ಪುಟ ೪) ಎಂದು ಲೇಖಕರು ಹೇಳಿದ್ದಾರೆ. ಅದೂ ಅಲ್ಲದೆ ವರ್ಣಾಶ್ರಮಧರ್ಮ ಶಿಥಿಲವಾಗುತ್ತಿತ್ತೆಂದು ಅಲ್ಲಲ್ಲಿ ಹೇಳಿದ್ದಾರೆ. ಇದರ ಹಿನ್ನೆಲೆಯ ಬಗೆಗೆ ಹೆಚ್ಚು ಬೆಳಕು ಚೆಲ್ಲಬಹುದಾಗಿತ್ತು.

ಮುನ್ಷಿಯವರ ಕಥನ ಮಾರ್ಗ ತುಂಬ ನೇರವಾದುದು, ಸರಳವಾದುದು. ಒಂದು

ಮೂಲಕಥೆಯ ಘಟನೆಯೊಡನೆ ಅಕ್ಕಪಕ್ಕದ ಅನೇಕ ಘಟನೆಗಳೂ, ಅವಾಂತರ ಘಟನೆಗಳೂ ಅವರ ಕೃತಿಗಳಲ್ಲಿ ಕಾಣಸಿಗುವುದಿಲ್ಲ. ಅಂತೆಯೇ ಕಥನ ಕ್ರಮದಲ್ಲಿ, ಸಂವಿಧಾನದಲ್ಲಿ ಜಟಿಲತೆಯಿಲ್ಲ. ಅದರ ಫಲವಾಗಿ ವೈವಿಧ್ಯವೂ ಇಲ್ಲವಾಗಿದೆ. ಆದರೆ, ವೈವಿಧ್ಯಜನ್ಯವಾದ ದೋಷಗಳೂ ಇಲ್ಲ. ಮುನ್ಷಿಯವರಲ್ಲಿ ಅಪೂರ್ವ ಸಂಯಮವಿದೆ. ಕಥೆಯ ಮೇಲೆ ಅವರಿಗೆ ಹಿಡಿತವಿರುತ್ತದೆ. ಕುಂಬಿ ಶಿಲ್ಪಿಯಂತೆ ಅವರು ತಮ್ಮ ಕೇಂದ್ರಬಿಂದುವಿನಲ್ಲಿ ನಿಂತು ಅಗತ್ಯವಾದ ಕಥಾನಕವನ್ನು ಆರಿಸಿಕೊಳ್ಳುತ್ತಾರೆ, ಅನಾವಶ್ಯಕವಾದುದನ್ನು ತ್ಯಜಿಸುತ್ತಾರೆ. ಇದರಿಂದ ಇವರ ಕಾದಂಬರಿಯಲ್ಲಿ ಒಂದು ಅದ್ಭುತವಾದ ಬಿಗಿಯಿದೆ. ಕಥೆ ಎಲ್ಲೂ ನಿಲ್ಲುವುದಿಲ್ಲ, ಸುಸ್ತಾಗಿ ಕುಳಿತುಕೊಳ್ಳುವುದಿಲ್ಲ. ವರ್ಣನೆಯಲ್ಲೂ ಅಷ್ಟೆ. ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು ಎನ್ನುವಂತೆ ಮುನ್ಷಿಯವರು ಅತ್ಯಂತ ಕಡಿಮೆ ಶಬ್ದಗಳಲ್ಲಿ ಅತಿ ಹೆಚ್ಚಿನದನ್ನು ಸಾಧಿಸುತ್ತಾರೆ. ಉದಾಹರಣೆಗೆ ಶಕಟಾಲನ ಪಾತ್ರ ಚಿತ್ರಣವನ್ನು ನೋಡಬಹುದು:

> ಅರಣ್ಯದಲ್ಲಿ ಬಿರುಗಾಳಿಯಿಂದ ಕೊಂಬೆಗಳು ಮುರಿದು ಏಕಾಕಿಯಾಗಿರುವ ಮಹಾವೃಕ್ಷ, ಎಲೆಗಳುದುರಿದರೂ ಒರಟು ಧೈರ್ಯದಿಂದ ಗಗನದ ಕಡೆಗೆ ನೋಡುತ್ತಿರುವಂತೆ ಈ ವೃದ್ಧ ಪದಭ್ರಷ್ಟ ಮಂತ್ರಿ ಕಾಣುತ್ತಿದ್ದನು. ಜ್ಯೋತಿಹೀನವಾದ ಆ ಕಣ್ಣುಗಳಲ್ಲಿ ನೀರು ಬರುತ್ತಿರಲಿಲ್ಲ. ಅದರಲ್ಲಿದ್ದ ನಿರ್ಬಲತೆ ಹೊರಕ್ಕೆ ಕಾಣದೆ ಕುಗ್ಗಿ ಕುಳಿತಿತ್ತು. ಅವನ ಬಾಡಿದ ಮುಖದ ಮೇಲೆ ಎಳೆದ ವಕ್ರರೇಖೆಗಳಲ್ಲಿ ಗತಕಾಲದ ಇತಿಹಾಸ ಕಥೆಗಳಿದ್ದವು. (ಪುಟ ೫೨)

ಈ ಕಾದಂಬರಿಯ ಅನುವಾದ ಅಷ್ಟು ಹಿತವಾಗಿಲ್ಲ. ಅಭಿಮಾನ, ಉಪಹಾರ, ಉತ್ತೇಜನ, ಪಾಷಾಣ, ಪೀಡೆ, ಛಾವಣಿ ಮೊದಲಾದ ಶಬ್ದಗಳು ಗುಜರಾತಿ–ಹಿಂದಿಯಲ್ಲಿ ಮತ್ತು ಕನ್ನಡದಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗುತ್ತವೆ ಎಂಬುದನ್ನು ಅನುವಾದಕರು ಮರೆತಂತೆ ಕಾಣುತ್ತದೆ. ಉದಾಹರಣೆಗೆ ಹಿಂದಿಯಲ್ಲಿ ಉಪಹಾರವೆಂದರೆ ಬಹುಮಾನ, ಕಾಣಿಕೆ; ಅಭಿಮಾನವೆಂದರೆ ಹೆಮ್ಮೆ; ಛಾವಣಿ ಎಂದರೆ ದಂಡಿನ ಶಿಬಿರ, (cantonment.) ಕನ್ನಡದಲ್ಲಿ ಈ ಅರ್ಥ ಬರುವುದಿಲ್ಲ. ಇದಲ್ಲದೆ ಈ ಕೆಳಗಿನ ಪ್ರಯೋಗಗಳು ಗಮನಾರ್ಹವಾದವು:

> ನಯನಾಭಿರಾಮವಾದ ಇಂಪಾದ ಹಸಿರು ನಾಲ್ಕು ಕಡೆಯೂ ಹಬ್ಬಿತ್ತು (ಪುಟ ೨) "ಅವನ ಗೌರಿಯು ಈ ಬ್ರಾಹ್ಮಣನಿಗಾಗಿ ಇಷ್ಟು "ಮತ್‌ವಾಲಿ" ಹೇಗಾದಳು?" (ಪುಟ ೨೫) "ಈ ಜಗತ್ತೇ ನನಗೆ ಪೀಡೆ" (ನೋವು) (ಪುಟ ೪೩) "ಮುಖದಿಂದ ಸೀಮಿತವಾಗಿದ್ದ ಅಧರಗಳಲ್ಲಿ ದೃಢತೆಯೂ ಖಂಡಿತವೂ ಬಂದಿತ್ತು." (ಪುಟ ೪೭) "ಎಲಾ ಇಂಥ ಮೂರ್ಖತೆ ಮಾಡುವವನು ಹೇಗಿರಬಹುದು?" (ಪುಟ ೫೩) "ಹತ್ತಿರದಲ್ಲಿ ನಿಂತಿದ್ದ ಒಂದು ವ್ಯಕ್ತಿ ಕೇಳಿದ" (ಪುಟ ೫೩) "ಅದರಿಂದ ಹೊರಡು

ತ್ತಿದ್ದ ಅದೃಷ್ಟ ತೇಜ ಬೇರೆಯವರನ್ನು ಹೀನರನ್ನಾಗಿ ಮಾಡುತ್ತಿತ್ತು." (ಪುಟ ೭೮) "ಮುಖ ಪಾಷಾಣದಂತೆ ನಿಶ್ಚೇಷ್ಟಿತವಾಗಿತ್ತು." (ಪುಟ ೮೮) "ಅವಳ ಬಾಗಿಲಲ್ಲಿ ಬಂದು ಆನೆ ತೂಗುತ್ತಿತ್ತು." (ಪುಟ ೧೨೦)

ಅನುವಾದಕರು ಅರಿಕೆಯಲ್ಲಿ ಹೇಳಿರುವ ಒಂದು ಮಾತು ಮೂಲ ಲೇಖಕರ ಹೇಳಿಕೆಗೆ ತದ್ವಿರುದ್ಧವಾಗಿದೆ. "ಮುನ್ನುಡಿಯಲ್ಲಿ ಶ್ರೀ ಮುನ್ಷಿಯವರೇ ಹೇಳಿರುವಂತೆ ಕೌಟಿಲ್ಯರ ಮೆಕೆವೆಲ್ಲಿ ಸ್ವಭಾವದ ರಾಜನೀತಿ ಚಿತ್ರಿತವಾಗಿದೆ." (ಅರಿಕೆ, ಪುಟ ೨) ಈಗ ಮುನ್ಷಿಯವರ ಹೇಳಿಕೆಯನ್ನು ಗಮನಿಸಿ: "ನಾನು ಭಗವಾನ್ ಕೌಟಿಲ್ಯವನ್ನು ಸುಮಾರು ೩೫ ವರುಷಗಳ ಕೆಳಗೆ ಬರೆದೆ. ಆಗ ಕೌಟಿಲ್ಯರನ್ನು ರಾಜಕೀಯ ಗುರಿಯನ್ನು ಮುಟ್ಟಲು ನೀತಿಯ ಮಾರ್ಗವಲ್ಲಿ ಪೂರ್ಣ ನಿರ್ಲಕ್ಷ್ಯ ತೋರಿದ ಮೆಕೆವೆಲ್ಲಿ (Machiavelli) ಮಾದರಿಯ ರಾಜತಂತ್ರ ನಿಪುಣನಾಗಿ ಚಿತ್ರಿಸುವುದು ಪದ್ಧತಿಯಾಗಿತ್ತು. ಆದರೆ ಇದು ವಾಸ್ತವಾಂಶಕ್ಕೆ ತೀರ ವಿರೋಧ." (ಪೀಠಿಕೆ, ಪುಟ ೪)

ಒಟ್ಟಿನಲ್ಲಿ ಮಹಾಮೇಧಾವಿ ಕೌಟಿಲ್ಯನ ಇನ್ನೊಂದು ಮುಖ ಇಲ್ಲಿನ ಅಂತರಂಗ ಜೀವನದ ಎತ್ತರ ಬಿತ್ತರವನ್ನು ಚಿತ್ರಿಸುವ ಇಂಥ ಭವ್ಯಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ಗೊರೂರರು ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಭರತವರ್ಷದ ರಾಷ್ಟ್ರಪುರುಷನೊಬ್ಬನ ಜೀವನವನ್ನು ಮನಮುಟ್ಟುವಂತೆ ಚಿತ್ರಿಸುವ ಈ ಕಾದಂಬರಿ ಉಜ್ವಲ ರಾಷ್ಟ್ರಪ್ರೇಮಿಗಳಾದ ಗೊರೂರರ ಕೈಯಿಂದ ಕನ್ನಡಕ್ಕೆ ಬಂದುದು ಒಂದು ಸುಯೋಗವೇ ಸರಿ.

‘ಕ್ರೌಂಚವಧ’

ಎಸ್. ವಿ. ಪಾಟೀಲ

ಕಾವ್ಯ, ಕಥೆ, ನಾಟಕ, ಕಾದಂಬರಿ ಮೊದಲಾದವು ಸಾಹಿತ್ಯದ ಕೆಲವು ಮುಖಗಳು. ಇವುಗಳಲ್ಲಿ ಕಾದಂಬರಿಯು ತುಂಬ ಜನಪ್ರಿಯ ಮಾಧ್ಯಮ. ಆದ್ದರಿಂದಾಗಿ ಪ್ರತಿಯೊಂದು ಭಾಷೆಯಲ್ಲಿ ಕಾದಂಬರಿಯು ಬೆಳೆ ಹುಲುಸಾಗಿ ಬೆಳೆದಿದೆ. ಕನ್ನಡ ಸಾಹಿತ್ಯವೂ ಇದಕ್ಕೆ ಹೊರತಾಗಿಲ್ಲ. ಯಾವುದೇ ಒಂದು ಭಾಷೆಯ ಸಾಹಿತ್ಯದಲ್ಲಿ ಒಂದು ಹೊಸ ಪ್ರಕಾರ ಬೆಳೆದು ಬರಬೇಕಾದರೆ ಅದು ಬೇರೊಂದು ಭಾಷೆಯ ಅನುಕರಣೆ ಅಥವಾ ಅನುವಾದವಾಗಿಯೋ ಬರುವುದುಂಟು. ಅದರಂತೆ ಕನ್ನಡ ಕಾದಂಬರಿಯ ಬೆಳವಣಿಗೆ ಅನುವಾದಿತ ಕೃತಿಗಳಿಂದ ಆರಂಭವಾಗಿರುವುದು ಕಂಡುಬರುವುದು. ಈ ರೀತಿ ಅನುವಾದಿತ ಕೃತಿಗಳಿಂದ ಹೊಸ ಹೆಜ್ಜೆಯನ್ನಿಡಲು ಆರಂಭಿಸಿದ ಕನ್ನಡ ಕಾದಂಬರಿ ಕ್ಷೇತ್ರವು ಇಂಗ್ಲಿಷ್ ಕಾದಂಬರಿಗಳಿಗಿಂತ ಅವುಗಳನ್ನು ಅರಗಿಸಿಕೊಂಡು ರಚಿತವಾದ ಬಂಗಾಲಿ ಹಾಗೂ ಮರಾಠಿ ಕಾದಂಬರಿಗಳ ಅನುವಾದದ ಮೂಲಕ ವಿಶೇಷ ರೀತಿಯಲ್ಲಿ ಮುನ್ನಡಿಯಿಟ್ಟುದು ಕಂಡುಬರುವುದು. ವಸ್ತು, ಸ್ವಭಾವ, ಪರಿಸರ, ಸಂಪ್ರದಾಯ, ಸಂಸ್ಕೃತಿ— ಈ ದೃಷ್ಟಿಯಿಂದ ಗಮನಿಸಿದಾಗ ಬಂಗಾಲಿ ಕಾದಂಬರಿಗಳಿಗಿಂತ, ಮರಾಠಿ ಕಾದಂಬರಿಗಳು ಕನ್ನಡಿಗರಿಗೆ ಸಮೀಪವಾಗಿ ತೋರುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗೆ ಕನ್ನಡ ಕಾದಂಬರಿಯ ಬೆಳವಣಿಗೆಯ ಮೊದಲ ಹಂತದಿಂದಲೇ ಮರಾಠಿ ಕಾದಂಬರಿಗಳ ಪ್ರಭಾವ ಕನ್ನಡ ಕಾದಂಬರಿಗಳ ಮೇಲಾದುದು ಕಂಡುಬರುವುದು. ಇದರ ಫಲವಾಗಿ ಮರಾಠಿಯ ಪ್ರಸಿದ್ಧ ಕಾದಂಬರಿಕಾರರಾದ ಹರಿನಾರಾಯಣ ಆಪ್ಟೆ ಅವರ ಕಾದಂಬರಿಗಳು ಬಂಗಾಲಿಯ ಬಂಕಿಮಚಂದ್ರರ ಕೃತಿಗಳೊಂದಿಗೆ ಕನ್ನಡಕ್ಕೆ ಅನುವಾದಗೊಂಡವು. ಹ.ನಾ. ಆಪ್ಟೆ ಅವರ ತರುವಾಯದ ಕಾಲಖಂಡದಲ್ಲಿ ಕಲಾತ್ಮಕ ಕೃತಿ ರಚಿಸಿದವರಲ್ಲಿ ಶ್ರೀ ವಿ. ಸ. ಖಾಂಡೇಕರ ಅವರು ಪ್ರಮುಖರು. ಮರಾಠಿ

ಕಾದಂಬರಿಗೆ ಕಲೆಯ ಮೆರಗನ್ನಿತ್ತು ಅದನ್ನು ಜನಪ್ರಿಯಗೊಳಿಸಿದವರು ಅವರು. ಅದರಂತೆ ಐತಿಹಾಸಿಕ ಹಿನ್ನೆಲೆಯನ್ನು ತೊರೆದು ಸಮಾಜದಲ್ಲಿನ ತತ್ಕಾಲಿನ ಸಮಸ್ಯೆಗಳನ್ನು ಪ್ರಭಾವಿಯಾಗಿ ಚಿತ್ರಿಸುವ ಪರಂಪರೆಯನ್ನು ಆರಂಭಿಸಿದರು. ಅವರ ಪ್ರಸಿದ್ಧ ಕೃತಿಗಳಲ್ಲಿ ‘ಕ್ರೌಂಚವಧ’ ಒಂದು. ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡ ಈ ಕೃತಿ ಕನ್ನಡಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಂಥ ಖ್ಯಾತ ಸಾಹಿತಿಗಳಿಂದ ಬಂದುದು ತುಂಬ ಅಪೂರ್ವವೆನ್ನಬೇಕು.

‘ಉತ್ತರ ರಾಮಚರಿತೆ’ಯಲ್ಲಿಯ ಕ್ರೌಂಚವಧ ಸನ್ನಿವೇಶ ಭಾರತೀಯ ಸಾಹಿತ್ಯದಲ್ಲಿಯೇ ಚಿರನೂತನವಾದುದು. ಸರಸ–ಸಲ್ಲಾಪದಲ್ಲಿ ತೊಡಗಿದ ಕ್ರೌಂಚಪಕ್ಷಿಗಳ ಜೊತೆಯನ್ನು ಗಮನಿಸಿದ ಬೇಡನೊಬ್ಬನ ಬಾಣಕ್ಕೆ ತುತ್ತಾದುದು ಗಂಡು ಪಕ್ಷಿ. ಅದರ ಅಗಲುವಿಕೆಯ ದುಃಖದಿಂದ ಆ ಹೆಣ್ಣು ಪಕ್ಷಿಯಿಂದ ಹೊರಟ ಕಾರುಣ್ಯಪೂರ್ಣ ಧ್ವನಿ ವಾಲ್ಮೀಕಿಯ ಹೃದಯವನ್ನು ಸೇರಿತು. ಅದರಿಂದ ಒಂದು ಅದ್ಭುತ ಮಹಾಕಾವ್ಯ ಉದಯಿಸಿತು. ಈ ಸನ್ನಿವೇಶದ ಅಭಿಧಾನವನ್ನೇ ಹೊತ್ತ ಈ ಕೃತಿಯಲ್ಲಿ ಮನ ಒಂದಾದ ಗಂಡು–ಹೆಣ್ಣಿನ ಸಂಬಂಧ ಅನಿರೀಕ್ಷಿತವಾಗಿ ಬೇರೊಬ್ಬರಿಂದ ಅಗಲಿಸಲ್ಪಟ್ಟು, ಅವರಿಬ್ಬರು ಜೀವನಮುದ್ದಕ್ಕೂ ವಿರಹ–ನೋವನ್ನು ಅನುಭವಿಸುವುದು ವ್ಯಕ್ತವಾಗಿದೆ. ಕೇವಲ ಪ್ರೇಮ, ದಾಂಪತ್ಯಕ್ಕೆ ಇಲ್ಲಿಯ ವಿಷಯ ಸೀಮಿತವಾಗಿರದೆ ಅದಕ್ಕಿಂತಲೂ ಪ್ರಮುಖವಾಗಿ ರಾಷ್ಟ್ರೀಯತೆ ಹಾಗೂ ಸ್ವಾತಂತ್ರ್ಯ ಚಳವಳಿಯ ವಿಷಯ ಸಾಕಷ್ಟು ವಿವರವಾಗಿ ವ್ಯಾಪಿಸಿದೆ. ವೈಯಕ್ತಿಕ ಅಸ್ತಿತ್ವವನ್ನೇ ಕಳೆದುಕೊಂಡ ಸ್ವಸಂತುಷ್ಟ ಸಂಸ್ಥಾನದ ಸೇವಕರು ಹಾಗೂ ಬಡವನಾದರೂ ಸಮಾಜದ ದಲಿತ ವರ್ಗದ ಕಷ್ಟನಿವಾರಣೆಗಾಗಿ ನಿರ್ಭೀತಿಯಿಂದ ಹೋರಾಡುವ ನಾಯಕ, ಇದೆಲ್ಲವನ್ನೂ ಮೀರಿ, ಜಗತ್ತಿನ ಆಗುಹೋಗುಗಳನ್ನು ಗಮನಿಸದೇ ತನ್ನದೇ ಆದ ಲೋಕದಲ್ಲಿ ಮಗ್ನನಾಗುವ ಬುದ್ಧಿಜೀವಿಯ ವಾಸ್ತವ ಚಿತ್ರಣ ಇಲ್ಲಿದೆ.

ಪ್ರೊ. ಅಪ್ಪಣ್ಣ ಅವರ ಏಕಮಾತ್ರ ಪುತ್ರಿ ಸುಲೋಚನೆ ಪದವೀಧರೆ. ತಂದೆಯ ಪ್ರೀತಿಯಲ್ಲಿ ಬೆಳೆದವಳು. ಅದರೊಂದಿಗೆ ಅವರಂತೆ ಮೂಢ ಸಂಪ್ರದಾಯಗಳನ್ನು ನಂಬದ ವೈಚಾರಿಕ ತಳಹದಿಯನ್ನು ಪಡೆದವಳು. ದಿನಕರನೆಂಬ ಬಡ ವಿದ್ಯಾರ್ಥಿ ತಮ್ಮ ಮನೆಯಲ್ಲಿದ್ದು ಓದು ಮುಂದುವರಿಸುವನೆಂಬುದು ತಿಳಿದಾಗ ಅವಳಿಗಾದ ಸಂತೋಷ ಅಷ್ಟಿಷ್ಟಲ್ಲ. ಒಡಹುಟ್ಟಿದವರಿಲ್ಲದೆ, ಒಬ್ಬಂಟಿಗಳಾದ ಅವಳಿಗೆ ಒಬ್ಬ ಜೊತೆಗಾರ ಬರುವನೆಂದು ತಿಳಿದಾಗ ಬಹುದಿನದ ಕೊರತೆ ದೂರವಾದಂತಾಗುವುದು. ಅವನು ಬರಬೇಕಿದ್ದ ದಿವಸ ಅವನ ಆಗಮನದ ನಿರೀಕ್ಷೆಯಲ್ಲಿ ಅವಳು ಕಳೆದ ಭಾರವಾದ ಕ್ಷಣಗಳು ಅವಳ ಮನದಿಂಗಿತವನ್ನರಹುವುವು. ಒಂದು ದಿನ ತಡವಾಗಿ ಬಂದ ಅವನನ್ನು ತಾನು ಮಾತನಾಡಿಸಲೇ ಕೂಡದೆಂದು ತುಂಟತನದಿಂದ ನಿಶ್ಚಯಿಸಿದ ಅವಳ ಮನಸ್ಸು ಅವನನ್ನು ನೋಡಿ, ಅವನ ಮಾತನ್ನು ಕೇಳಿದಾಕ್ಷಣ ಬದಲಾಗಿಬಿಡುವುದು ಸಹಜ. ಅವನ ಮಾರ್ಗದರ್ಶನ ಅವಳಿಗೊಂದು ಹಬ್ಬ. ವಯಸ್ಸು ಬೆಳೆದಂತೆ ದಿನಕರನ ಪ್ರೀತಿಯ

ತತ್ತ್ವಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವಳು. ದಿನಕರ ಚಳುವಳಿಯಲ್ಲಿ ಭಾಗವಹಿಸಿ ಅವರಿಂದ ದೂರವಾದಾಗ ಅವನನ್ನು ಸ್ಮರಿಸಿಕೊಳ್ಳುವಳು. ಅವರೂ ತಾನು ಬೆಳೆದು ಬಂದ ವಾತಾವರಣದಲ್ಲಿ ತನ್ನ ಶಿಕ್ಷಣ ಹಾಗೂ ಪ್ರತಿಭೆಯ ಸ್ವಲ್ಪದ ದೋಣಿಯಲ್ಲಿ ಈಜಾಡುತ್ತ ನಲಿಯುವಳು. ಉತ್ತರ ಭಾರತಕ್ಕೆ ಹೊರಟುನಿಂತ ದಿನಕರನ ಜೊತೆಗೆ ತಾನೂ ಹೊರಡಲು ಸಿದ್ಧಳಾಗುವ ಅವಳ ಮನಸ್ಸು–ಹೃದಯ ದಿನಕರನ ವಿಷಯದಲ್ಲಿ ಪ್ರೀತಿ ನಂಬುಗೆಯನ್ನು ತಾಳಿದುದನ್ನು ಸಾರುತ್ತವೆ. ಅವಳೆ ದಿನಕರನಿಂದ ದೂರವಿದ್ದ ಪದವೀಧರೆ ಫೆಲೋಶಿಪ್ಪನ್ನು ಗಿಟ್ಟಿಸಿದ ಪ್ರತಿಭಾವಂತ ಸುಲೋಚನೆ ಹಾಗೂ ಡಾಕ್ಟರ್ ಸರ್ಜನ್ ಭಗವಂತರಾವ್ ಅವರು ಒಬ್ಬರಿಗೊಬ್ಬರು ಸಮೀಪ ಬಂದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಅವರ ಭೇಟಿ ವಿವಾಹ ಬಂಧನದಲ್ಲಿ ಪರಿವರ್ತನೆ ಹೊಂದುವುದು ಪ್ರೊ. ಅಪ್ಪಣ್ಣ ಅವರಿಗೆ ಸಂತೋಷದ ಸಂಗತಿ. ಶ್ರೀಮಂತಿಕೆ, ಸುಖ–ಸೌಲಭ್ಯ, ಗೌರವಗಳ ದೃಷ್ಟಿಯಿಂದ ಅದು ಅನುರೂಪವೆಂದು ಬಗೆಯಲಾಯಿತು. ಡಾ. ಭಗವಂತ ರಾವ್ ಅವರೊಂದಿಗಿನ ಸುಲೋಚನೆಯ ದಾಂಪತ್ಯ ಸುಖಮಯವಾಗಿಯೇ ಇದ್ದರೂ, ದಿನಕರನ ಚಟುವಟಿಕೆ ಹಾಗೂ ರಾಷ್ಟ್ರೀಯ ವಿಚಾರಗಳು ಅವಳನ್ನು ಆಗಾಗ ಬಾಧಿಸದೇ ಇರುತ್ತಿರಲಿಲ್ಲ. ಬಡಜನರ ಹಾಗೂ ದೇಶದ ಕುರಿತ ಅವನ ವಿಚಾರಗಳೇ ಯೋಗ್ಯವೆಂಬ ಭಾವನೆಯೊಂದಿಗೆ ಡಾ. ಭಗವಂತರಾವ್‌ರೊಂದಿಗಿನ ಈ ಸುಖ–ಸಂತೃಪ್ತಿಯ ಜೀವನಕ್ಕಿಂತ ಆ ಬಡತನದ ಜೀವನವೇ ಲೇಸೆಂಬ ಭಾವನೆಯುಂಟಾಗುತ್ತದೆ. ಅವರೂ ತಾನು ಡಾ. ಭಗವಂತರಾವನ ಪತ್ನಿ, ಕರ್ತವ್ಯವಿಮುಖಳಾಗಕೂಡದು ಎಂಬ ಪ್ರಜ್ಞೆ ಅವಳಿಗಿದೆ. ಅವರೂ ರೈತರ ಸಭೆಯ ಕಾಲಕ್ಕೆ ದಿನಕರನ ಜೀವಕ್ಕೆ ಅಪಾಯವಿರುವ ಸೂಚನೆ ತನಗೆ ತಿಳಿದಾಗ ಅವನನ್ನು ಏನಾದರೂ ಮಾಡಿ ಉಳಿಸಬೇಕೆಂದು ಯೋಚಿಸುವಳು. ಅದರಂತೆ ತನಗೆ ಆರೋಗ್ಯ ಸರಿಯಿಲ್ಲ, ಕೂಡಲೇ ಹೊರಟು ಬರಬೇಕೆಂದು ಹೇಳಿ ಕಳುಹಿಸುವಳು. ಅದನ್ನು ಗಮನಿಸಿ ದಿನಕರ ಬರುವನು. ದಿನಕರನ ತಾಯಿಯ ಆರೋಗ್ಯ ಕೆಟ್ಟುದರಿಂದ ಅವಳನ್ನು ಪರೀಕ್ಷಿಸಲು ಬಂದ ಡಾ. ಭಗವಂತ ರಾವ್ ಅಲ್ಲಿ ಸುಲೋಚಳ ಸಂದೇಶವನ್ನು ಓದಿ ಮನೆಯ ಕಡೆಗೆ ಹೊರಡುವರು. ಅವರು ಕೋಣೆಯ ಬಾಗಿಲಲ್ಲಿ ಬಂದಾಗ ಸುಲೋಚೆ ದಿನಕರನನ್ನು ಅಪ್ಪಿಕೊಂಡುಬಿಡುವಳು. ಸಭೆ ನಡೆದ ಸ್ಥಳದಲ್ಲಿ ಪೋಲಿಸರು ಗೋಳಿಬಾರು ಮಾಡಿದುದರಿಂದ ಜನ ರೊಚ್ಚಿಗೆದ್ದು ಕಲ್ಲು ತೂರಲು ಆರಂಭಿಸಿತು. ಅದರಲ್ಲಿ ಪೋಲಿಸು ಅಧಿಕಾರಿಯೊಬ್ಬನು ಮರಣಹೊಂದಿದನು. ಈ ಪ್ರಸಂಗ ಮುಗಿಯುವುದರಲ್ಲಿ, ದಿನಕರ ಆ ಸ್ಥಳಕ್ಕೆ ಧಾವಿಸುವನು. ದಿನಕರನೇ ಸಭೆಯಲ್ಲಿ ಬೇರೆ ವೇಷದಲ್ಲಿದ್ದು ಅಧಿಕಾರಿಯ ಕೊಲೆ ಮಾಡಿದನೆಂಬ ಕಾರಣದಿಂದ ಅವನನ್ನು ಬಂಧಿಸಲಾಯಿತು. ಅಪರಾಧ ಸಿದ್ಧವಾಗಿ ಅವನಿಗೆ ಫಾಸಿ ಶಿಕ್ಷೆ ವಿಧಿಸಲ್ಪಟ್ಟಿತು. ಅಧಿಕಾರಿಯ ಕೊಲೆ ನಡೆದ ಸಮಯ ದಿನಕರ ಅಲ್ಲಿರದಿದ್ದರೂ ತಾನು ಆ ವಿಷಯವನ್ನು ಹೇಳುವುದಿಲ್ಲ. ಈ ವಿಷಯ ತಿಳಿದ ಡಾ. ಭಗವಂತರಾವ್ ಅವರು ಸತ್ಯಸಂಗತಿಯನ್ನು ಹೊರಗೆಡಹಿ ಸ್ವತಃ ಅಪಮಾನಿತರಾಗಿ ದಿನಕರನನ್ನು ಉಳಿಸಲು ಸಿದ್ಧರಿರಲಿಲ್ಲ.

ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಿರಪರಾಧಿ ದಿನಕರನನ್ನು ರಕ್ಷಿಸುವ ಹೊಣೆಯನ್ನು ಸುಲೋಚನೆಯು ಧೀರಳಾಗಿ ಹೊರುವಳು. ಅವಳ ಆತ್ಮಚರಿತೆ, ದಿನಕರನು ಪ್ರೊ. ಅಪ್ಪಣ್ಣ ಅವರಿಗೆ ಬರೆದ ಕಾಗದ ಹಾಗೂ ಅವರಿಗೆ ಡಾ. ಭಗವಂತರಾವ್ ಅವರು ಹೇಳುವ ವಿಷಯ ಇವೆಲ್ಲವೂ ಈ ವ್ಯಕ್ತಿಗಳ ಮನಸ್ಸನ್ನೂ ಹೃದಯವನ್ನೂ ಬಿಚ್ಚಿ ಇಡುವುದರಿಂದ ಅನಾಹುತ ತಪ್ಪುವುದಲ್ಲದೆ, ದಿನಕರನ ಕಾರ್ಯದ ಮಹತ್ವವನ್ನು ಎಲ್ಲರೂ ಅರಿಯುವಂತಾಗುವುದು.

ಬಾಲ್ಯದ ಸುಲೋಚನೆ ತುಂಟತನ ಹಾಗೂ ಚೆಲ್ಲಾಟದಿಂದ ಕೂಡಿದವಳಾಗಿದ್ದಾಳೆ. ತಂದೆಯ ಪ್ರೀತಿ–ವಾತ್ಸಲ್ಯಗಳ ಅಧಿದೇವತೆ. ಅವರ ವಿಚಾರ ಸರಣಿಯನ್ನೇ ತನ್ನದಾಗಿಸಿಕೊಂಡಿದ್ದಾಳೆ. ದೇವರಲ್ಲಿ ನಂಬುಗೆಯಿಲ್ಲ. ಮನುಷ್ಯರಲ್ಲಿ ಉಂಟು. ದಿನಕರನ ಹೊಸ ವಿಚಾರಗಳನ್ನು ಆಸ್ಥೆಯಿಂದ ಕೇಳಿ ತಿಳಿದುಕೊಂಡು, ಅವನ ಕಾರ್ಯದ ಬಗ್ಗೆ ಗೌರವವಿರಿಸಿಕೊಂಡಿದ್ದಾಳೆ. ಅವನು ಪಡುವ ಕಷ್ಟಕ್ಕಾಗಿ ಕನಿಕರಪಡುವಳು. ಜೇಲಿನಲ್ಲಿದ್ದ ಅವನನ್ನು ನೆನೆದಾಗ ಚಹಾ ಕೂಡ ಬೇಡವಾಗುವುದು. ಕೈಹಿಡಿದ ಪತಿ ಡಾ. ಭಗವಂತರಾವರ ಪೂರ್ತಿ ಪ್ರೇಮ ಸಂಪಾದಿಸಿದ್ದಾಳೆ. ಆದರೂ ವೈಚಾರಿಕ ಪಾತಳಿಯಲ್ಲಿ ಅಂತರ. ಡಾ. ಭಗವಂತರಾವ್ ಅವರು ಸ್ವಂತದ ಹಾಗೂ ತಮ್ಮ ಪೋಷಕರಾದ ಮಹಾರಾಜರ ಬಗ್ಗೆ ಚಿಂತಿಸಿದರೆ, ದಿನಕರ ಸ್ವಾರ್ಥವನ್ನು ಬದಿಗಿರಿಸಿ ದೇಶದ ಬಗ್ಗೆ, ಬಡ ಜನರ ಬಗ್ಗೆ ಚಿಂತಿಸುವವ. ಇದೇ ಸರಿಯೆಂಬುದಾಗಿ ಸುಲೋಚನಳ ಅಭಿಪ್ರಾಯ. ಇದರಿಂದಾಗಿಯೇ ಸುಲೋಚನ ಹಾಗೂ ಡಾ. ಭಗವಂತರಾವರ ಸಂಸಾರದಲ್ಲಿ ಬಿರುಕು ಕಾಣಿಸಿಕೊಳ್ಳುವುದು. ಆದರೂ ಯಾರ ಕುರಿತೂ ತಪ್ಪು ಅಭಿಪ್ರಾಯ ಉಂಟಾಗುವ ಮುಂಚೆಯೇ ಸುಲೋಚನಳ ಜೀವನಚರಿತೆ ಅವಳ ಮನದ ಇಂಗಿತ. ಏರಿಳಿತ ಹಾಗೂ ಹೊಯ್ದಾಟದ ಸ್ಪಷ್ಟ ಚಿತ್ರಣವನ್ನೀಯುವದರಿಂದ ಅಲ್ಲಿ ಸಂಶಯಕ್ಕೆಡೆಯಿಲ್ಲ. ತಾನೇನೋ ಡಾ. ಭಗವಂತರಾವರ ಪತ್ನಿ. ಆದರೆ ದಿನಕರನಿಗೆ ಇರುವವಳು ಸುಲೊ ಮಾತ್ರ ಒಬ್ಬಳೇ ಎಂಬುದನ್ನು ಸ್ಪಷ್ಟಪಡಿಸುವಳು. ವಿಪ್ಪತ್ತಿನಲ್ಲಿ ತಂದೆಯ ವಾರಸು, ದಿನಕರನಿಂದ ಬಡವರಿಗಾಗಿ ಅನುಕಂಪೆ, ಸಹಾನುಭೂತಿ, ರಾಷ್ಟ್ರೀಯ ಭಾವನೆಯ ಜಾಗೃತಿ; ಡಾ. ಭಗವಂತರಾವರಿಂದ ಸ್ವ–ಜೀವನದಲ್ಲಿ ಸುಖ–ಸಮಾಧಾನ ಇವೆಲ್ಲವುಗಳನ್ನು ಏಕಕಾಲಕ್ಕೆ ಪಡೆದೂ ಮಾನಸಿಕ ತುಮುಲವನ್ನು ಎದುರಿಸಿದ ಉದಾತ್ತ ಜೀವಿ ಸುಲೋಚನೆ.

ಬಡತನದ ಜೀವನದಿಂದ ಎಂಥ ಕಷ್ಟವನ್ನೂ ಎದುರಿಸಲು ಸಮರ್ಥನಾದ ಧೀರ ದಿನಕರ . ಸುಲೋಚನೆ ಅವನನ್ನು 'ದಿಲೀಪ'ನೆಂದು ಕರೆದುದು ಸಾರ್ಥಕವಾಗಿದೆ. ಬುದ್ಧಿವಂತ ಆದರೆ ಪರಿಸರ ಹಾಗೂ ಕಾಲದ ಆಹ್ವಾನವನ್ನು ಮನ್ನಿಸುವವ. ಸ್ವಾತಂತ್ರ್ಯ ಚಳವಳಿ, ಸಂಸ್ಥಾನದ ಬಡಜನರ ಹಿತ–ಸಂರಕ್ಷಣೆಗಳೇ ಪ್ರಮುಖ ಧ್ಯೇಯಗಳಾಗಿ ಶಿಕ್ಷಣ ಬದಿಗುಳಿದರೂ ಚಿಂತಿಸದವ. ಶಿಕ್ಷಣದಲ್ಲಿ ಮಧ್ಯೆ ಅಡ್ಡಿಯೊದಗಿದರೂ ಮೂರನೆಯ ತರಗತಿಯಲ್ಲಿ ಪದವಿ ಪಡೆಯುವನು. ಸುಲೋಚನೆಯ ಜೊತೆ ಬೆಳೆದಿದ್ದು, ಅವಳ

ಬಗ್ಗೆ ಪ್ರೇಮವಿದ್ದರೂ, ಅವಳು ಬೆಳೆದ ರೀತಿ ಹಾಗೂ ತಾನು ಕೈಕೊಂಡ ಕಾರ್ಯದಲ್ಲಿಯ ಕಷ್ಟಕಾರ್ಪಣ್ಯ ಇವುಗಳ ನಡುವಿನ ಅಂತರದ ಅರಿವಿನಿಂದಾಗಿ ತನ್ನ ಮನದಿಂಗಿತವನ್ನು ಬಚ್ಚಿಟ್ಟ ದೃಢ ನಿರ್ಧಾರಿ. ಪ್ರತಿಭಟನಾರ್ಥವಾಗಿ ಕಾಲೇಜಿನ ಎದುರು ಸೇರಿದ ವಿದ್ಯಾರ್ಥಿಗಳಿಗೆ "ಕಾಲೇಜು ಸರಸ್ವತಿಯ ದೇವಾಲಯ. ಇದು ಸಂತೆಕೂಟ ಅಲ್ಲ" (ಪುಟ ೨೩) ಎಂದು ಪ್ರೊ. ಅಪ್ಪಣ್ಣ ನುಡಿದಾಗ, "ಸಂತೆಕೂಟ ಕೂಡಿದರೆ ಮಕ್ಕಳಿಗೆಲ್ಲ ಉಣಲು ಆಹಾರ ದೊರೆಯುವುದು. ದೇವಾಲಯದಲ್ಲಿ ಪೂಜಾರಿಗೆ ಮಾತ್ರ ನೈವೇದ್ಯ ದೊರಕುವುದು. ಉಳಿದವರೆಲ್ಲ ಹಸಿದುಕೊಂಡು ತಾನೇ ಬಿದ್ದಿರಬೇಕು?" (ಪುಟ ೨೩–೨೪) ಎಂಬ ದಿನಕರನ ಪ್ರತ್ಯುತ್ತರ ತೀಕ್ಷ್ಣತೆಯ ಅರಿವನ್ನುಂಟುಮಾಡುವುದು. ಸ್ವಂತ ಮನೆಯಲ್ಲಿರಿಸಿಕೊಂಡು ತನ್ನ ಶಿಕ್ಷಣ ಸೌಲಭ್ಯವನ್ನು ಒದಗಿಸಿಕೊಟ್ಟು ಉಪಕರಿಸಿದ ಪ್ರೊ. ಅಪ್ಪಣ್ಣ ಅವರ ಅಭಿಪ್ರಾಯವು ತನಗೆ ಸಮ್ಮತವಾಗದ ಪಕ್ಷದಲ್ಲಿ ಅದನ್ನು ಖಂಡಿಸುವಲ್ಲಿ, ಒಡಿದು ಮುಂದೆ ನೋಡದೆ ತನ್ನ ಅಭಿಪ್ರಾಯ ಹೇಳುವಲ್ಲಿ ಅವನ ಪ್ರಾಮಾಣಿಕತೆ ಅಡಗಿದೆ. ಆದರೆ ಇದರಿಂದ ಪ್ರೊ. ಅಪ್ಪಣ್ಣ ಅವರ ಮನಸ್ಸಿಗೆ ನೋವಾದುದಕ್ಕಾಗಿ ವ್ಯಥೆಪಟ್ಟಿದ್ದಾನೆ. ವ್ಯಕ್ತಿಗಿಂತ ವಿಚಾರ, ತತ್ವ ಪ್ರಮುಖ, ತನಗೆ ಪೂಜ್ಯರಾದ ವ್ಯಕ್ತಿಗಳಿಗೆ ಅದರಿಂದ ನೋವಾಗುವುದೆಂದು ಅದನ್ನು ವ್ಯಕ್ತಮಾಡದೇ ಇರುವುದು ಸರಿಯಲ್ಲವೆಂದು ತಿಳಿದವನು. ಎಷ್ಟೋ ಪ್ರಸಂಗಗಳಲ್ಲಿ ಸಂಯಮದಿಂದ ವರ್ತಿಸಿದವ. ತಾನು ಮಾಡದ ಅಪರಾಧಕ್ಕಾಗಿ ಫಾಸಿ ಶಿಕ್ಷೆ ವಿಧಿಸಲ್ಪಟ್ಟಿದ್ದರೂ ಸತ್ಯಸಂಗತಿಯನ್ನು ಅರುಹಿ ಪ್ರಾಣ ರಕ್ಷಣೆ ಮಾಡಿಕೊಳ್ಳಬಹುದಿತ್ತು. ಆದರೆ "ಸುಲೋಳಲ್ಲಿ ನನಗೆ ಪ್ರೇಮವಿಲ್ಲದಿದ್ದಾಗ! ತ್ಯಾಗವು ಪ್ರೇಮದ ಆತ್ಮ ಎಂಬ ಭಾವನೆಯಲ್ಲಿ ನನಗೆ ಶ್ರದ್ಧೆ ಇಲ್ಲದಿದ್ದಲ್ಲಿ!" ಎಂಬ ಅವನ ಮಾತು ಸುಲೋಳ ಬಗೆಗೆ ಅವನಿಗಿದ್ದ ಪ್ರೇಮವನ್ನು ವ್ಯಕ್ತಪಡಿಸುವುದು. ತಾನು ಉಳಿದು ತನ್ನ ಪ್ರೀತಿಯ ವ್ಯಕ್ತಿಯ ದಾಂಪತ್ಯವನ್ನು ಅಸ್ತವ್ಯಸ್ತಗೊಳಿಸುವುದಕ್ಕಿಂತ ತನ್ನನ್ನು ತಾನು ಅರ್ಪಿಸಿ ಅವಳ ಜೀವನದ ಸುಖವನ್ನು ಬಯಸುವ ಆದರ್ಶ ಅವನದಾಗಿದೆ. ಹೀಗೆ ಧೈರ್ಯ, ಸಾಹಸ, ಬಡ ಜನರ ಹಿತಸಂರಕ್ಷಣೆ, ಪ್ರಾಮಾಣಿಕತೆ ಈ ಮೊದಲಾದ ಗುಣಗಳಿಂದ ಸ್ವಾತಂತ್ರ್ಯ ಹೋರಾಟ ಕಾಲದ ಪ್ರಾಮಾಣಿಕ ಹೋರಾಟಗಾರನ ಚಿತ್ರ ಇಲ್ಲಿ ಪೂರ್ತಿ ಬಂದಿದೆ.

ಬಡತನದಲ್ಲಿಯೂ ಸ್ವಪ್ರತಿಭೆ–ಸಾಹಸದಿಂದ ಮೇಲೆ ಬಂದು ಧನ್ಯ ಭವಿಷತ್ತನ್ನು ರೂಪಿಸಿಕೊಂಡ ಸಾಹಸಿ ಡಾ. ಭಗವಂತರಾವ್. ಅವರ ಪ್ರತಿಭೆ–ಪಾಂಡಿತ್ಯಗಳೇ ಮಹಾರಾಜರನ್ನು ಆಕರ್ಷಿಸಿ ಉಚ್ಚ ಶಿಕ್ಷಣದ ಏರ್ಪಾಡನ್ನು ಮಾಡಿದವು. ಮಹಾರಾಜರ ಕೃಪೆಯಿಂದ ಉಚ್ಚ ವೈದ್ಯಕೀಯ ಶಿಕ್ಷಣ ಪೂರ್ತಿಗೊಳಿಸಲು ಅವಕಾಶವಾದುದರಿಂದ ತಮ್ಮ ಪೂರ್ಣಸೇವೆ ಮಹಾರಾಜರಿಗೆ ಮೀಸಲೆಂದು ನಂಬಿದವರು. ಆದರೆ ಮಹಾರಾಜರ ಮಗಳು–ಅಕ್ಕಾರಾಣಿಯ ಗರ್ಭಪಾತ ಶಸ್ತ್ರಚಿಕಿತ್ಸೆಯನ್ನು ಅವಳ ಮನದ ವಿರುದ್ಧ ತಾವು ಮಾಡಬೇಕಾಗಿ ಬಂದುದು, ಹಾಗೂ ಅದರಲ್ಲಿ ಅಕ್ಕಾರಾಣಿ ಕೊನೆಯುಸಿರೆಳೆದು ತಮ್ಮ ಶಸ್ತ್ರಕ್ರಿಯೆಯ ಯಶಸ್ಸಿನಲ್ಲಿ ಕಳಂಕವುಂಟಾದುದು ಅವರ ಮನಸ್ಸಿನ ಮೇಲೆ

ಗಾಢ ಪರಿಣಾಮ ಬೀರುವುದು. ಈ ರೀತಿಯ ಸದಸದ್ವಿವೇಕವುಳ್ಳ ರಾಜನಿಷ್ಠ ಸೇವಕರು ಅವರು. ದಿನಕರ ಮಹಾರಾಜರ ವಿರೋಧಿಯಾಗಿರದಿದ್ದರೂ ಪ್ರಜಾಪಕ್ಷಪಾತಿ. ಇದೇ ಅವರಿಬ್ಬರಲ್ಲಿಯ ಅಂತರ. ಅದರಿಂದಾಗಿ ದಿನಕರನ ಬಗ್ಗೆ ತಾತ್ಸರ. ಆದರೂ ದಿನಕರನ ಕಾಗದ ಓದಿ, ಸುಲೋಳ ಬಗ್ಗೆ ಅವನಿಗಿದ್ದ ಅಭಿಪ್ರಾಯ ಓದಿದಾಗ ಅವನ ಬಗ್ಗೆ ಗೌರವ ಮೂಡುವುದು. "ಪ್ರಪಂಚದಲ್ಲಿ ಹಣಕ್ಕೆ ಗೌರವವಿರಬಹುದು; ಆದರೆ ಧ್ಯೇಯಕ್ಕೂ ಗೌರವ ಇದ್ದೇ ಇದೆ" (ಪುಟ ೩೧೭) ಎಂಬ ಮಾತನ್ನು ದಿನಕರನಿಂದ ಅರಿತು ಅವನ ಕಾರ್ಯವನ್ನು ಗೌರವಿಸಿದ್ದಾರೆ. ಅಲ್ಲದೆ ರಾಜಸೇವೆಯಿಂದ ಮುಕ್ತನಾಗಿ ಜನಸೇವೆಯಲ್ಲಿ ತೊಡಗುವ ಶುಭ ನಿರ್ಣಯವನ್ನೂ ಕೈಕೊಳ್ಳುವರು. ಸುಲೋಳ ಬಗ್ಗೆ ತುಂಬ ಪ್ರೀತಿ. ಅವಳಿಂದ ಅಗಲಿದಾಗ, ಕಮಲ ಎಷ್ಟೇ ಪ್ರಚೋದಿಸಿದರೂ ಬಲಿ ಬೀಳದ ನಿಗ್ರಹಿ.

ವಿದ್ವತ್ತು, ವಿನಯ, ಸಾತ್ವಿಕತೆಯ ಭಾರತೀಯ ಪ್ರಾಚೀನ ಪಂಡಿತರ ಪ್ರತಿರೂಪವಾಗಿ ತೋರುವರು ಪ್ರೊ. ಅಪ್ಪಣ್ಣಾ. ದೇವರಲ್ಲಿ ನಂಬುಗೆಯಿಡದೆ, ಮನುಷ್ಯರಲ್ಲಿ ನಂಬುಗೆಯಿಡುವಷ್ಟು ಪ್ರಗತಿಶೀಲರು. ದಿನಕರನಂಥ ಬಡ ಪ್ರತಿಭಾವಂತನು ಗುಮಾಸ್ತನಾಗಿ ಜೀವಿಸದೆ ಪದವಿಧರನಾಗಿ ಬುದ್ಧಿಜೀವಿಯಾಗಿ ಪ್ರಕಾಶಿಸಬೇಕೆಂದು ಅವನನ್ನು ಸ್ವಂತ ಮನೆಯಲ್ಲಿ ತಂದಿರಿಸಿಕೊಂಡು ಅವನ ಶಿಕ್ಷಣದ ಅನುಕೂಲತೆಯನ್ನು ಒದಗಿಸಿಕೊಟ್ಟ ಉದಾರಿಗಳು. ಏಕಮಾತ್ರ ಪುತ್ರಿ ಸುಲೋಳ ಮೇಲೆ ಎಲ್ಲಿಲ್ಲದ ಪ್ರೀತಿ. ಸುಲೋ, ವೀಣೆ ಹಾಗೂ ಸಂಸ್ಕೃತಕಾವ್ಯ—ಅದರಲ್ಲೂ 'ಉತ್ತರರಾಮಚರಿತೆ'—ಹಾಗೂ 'ಕ್ರೌಂಚವಧ' ಸನ್ನಿವೇಶಗಳೆಂದರೆ ಸಮಾನ ಪ್ರೀತಿಯ ವಿಷಯಗಳು. ಕರ್ತವ್ಯದಲ್ಲಿ ಸದಾ ಮಗ್ನ. ಪತ್ನಿ ಮಡಿದರೂ ಅಷ್ಟೇ. ಸ್ಥಿತಪ್ರಜ್ಞರು. ದಿನಪತ್ರಿಕೆಗಳ ಬಗೆಗಿನ ಅವರ ಅಭಿಪ್ರಾಯ ಅವರು ಜ್ಞಾನದ ಕೆಲವೊಂದು ಮಾರ್ಗಗಳನ್ನಷ್ಟೇ ಗೌರವಿಸುತ್ತಿದ್ದುದಾಗಿ ತೋರುತ್ತದೆ. ಅದರಂತೆ ಗಾಂಧೀಜಿಯವರ ಬಗೆಗಿನ ಅವರ ಅಭಿಪ್ರಾಯವೂ ಇದಕ್ಕೆ ಇನ್ನೊಂದು ನಿದರ್ಶನ. ಪಾಂಡಿತ್ಯ, ಪ್ರತಿಭೆ, ಸರಸ, ಸಜ್ಜನಿಕೆ, ಸಾತ್ವಿಕತೆಯಿಂದ ಸರ್ವರ ಗೌರವಾದರಗಳಿಗೆ ಪಾತ್ರರಾದ ಪ್ರೊ. ಅಪ್ಪಣ್ಣಾ ಅವರ ವ್ಯಕ್ತಿತ್ವದಲ್ಲಿ ಬುದ್ಧಿಭಾವಗಳ ಸಮನ್ವಯದ ಕೊರತೆಯೊಂದನ್ನು ಗುರುತಿಸುವಲ್ಲಿ ದಿನಕರ ಮಾತ್ರ ಯಶಸ್ವಿಯಾಗಿದ್ದಾನೆ. "ಜ್ಞಾನವನ್ನು ಪೂಜಿಸುವುದೆಂದರೆ, ಭಾವನೆಗಳನ್ನು ಅರೆದು ಕೊಲ್ಲುವುದೆ? ನಿಮ್ಮ ಆಯುಷ್ಯ ಪೂರ್ತಿ ಈ ರೀತಿ ತಾನೆ ನಡೆಯಿತು?" (ಪುಟ ೨೭೩) ಎಂಬ ದಿನಕರನ ಕಾಗದದಲ್ಲಿನ ಮಾತು ಪ್ರೊ. ಅಪ್ಪಣ್ಣಾ ಅವರ ಕಣ್ಣು ತೆರೆಯಿಸಿತು. ದಿನಕರ, ಸುಲೋ ಹಾಗೂ ತಾವು ಒಂದೇ ಮನೆಯಲ್ಲಿ ಅನೇಕ ವರ್ಷಗಳವರೆಗೆ ನೆಲೆಸಿದ್ದರೂ ಅವರಿಬ್ಬರನ್ನೂ ಅರಿಯಲು ಅವರಿಗೆ ಸಾಧ್ಯವಾದುದು ಕೊನೆಯಲ್ಲಿ ಮಾತ್ರ.

ಸುಲೋಚನೆ, ದಿನಕರ, ಡಾ. ಭಗವಂತರಾವ್, ಪ್ರೊ. ಅಪ್ಪಣ್ಣಾ ಈ ಪಾತ್ರಗಳೊಂದಿಗೆ ದಿನಕರನ ತಾಯಿ-ತಂದೆ, ಪ್ರಿನ್ಸಿಪಾಲ, ಅಡಿಗೆಯ ಆಳು, ಕಮಲ, ಮಹಾರಾಜರು ಮೊದಲಾದ ಇನ್ನೂ ಕೆಲವು ಪಾತ್ರಗಳು ಕಾದಂಬರಿಯ ಕ್ಷಿತಿಜದ ಮೇಲೆ ಮೂಡಿವೆ.

ಜೀವನದಲ್ಲಿಯ ಕೆಲ ಉತ್ಕಟ ಪ್ರಸಂಗಗಳಿಂದ ಖಾಂಡೇಕರ ಅವರ ಪಾತ್ರ ಪೋಷಣೆ

ಯರಾಗುವ ಹಾಗೂ ಅವನ್ನು ಕಲ್ಪಕತೆಯಿಂದ ತೋರಿಸುವುದರಿಂದ ಅವು ಹೆಚ್ಚು ಆಕರ್ಷಕವಾಗಿವೆ. ಆ ಪಾತ್ರಗಳ ಸ್ವಭಾವ-ಚಿತ್ರಣವನ್ನು ನೇರವಾಗಿ ಕೊಡದೆ, ಅವುಗಳ ಅಂತರಂಗವನ್ನೇ ತೆರೆದಿಡುವುದರಿಂದ ಅವು ಸಜೀವವಾಗಿವೆ. ಈ ರೀತಿ ಮನೋವಿಶ್ಲೇಷಣೆಯ ಯೋಗ್ಯ ಉಪಯೋಗವನ್ನು ಮಾಡಿಕೊಂಡಿದ್ದರೂ ಪಾತ್ರಗಳ ಬಾಹ್ಯಾಂಗವನ್ನು ಅಲಕ್ಷಿಸಿಲ್ಲ. ಅದರಂತೆ ಯಾವುದೇ ಒಂದು ಪಾತ್ರಕ್ಕೆ ವಿಶೇಷ ಪ್ರಾಮುಖ್ಯ ಇರದೆ ಕಥೆಯ ದೃಷ್ಟಿಯಿಂದ ಎಲ್ಲ ಪಾತ್ರಗಳೂ ಮಹತ್ವಪೂರ್ಣವಾಗಿವೆ. ಈ ರೀತಿ ಪ್ರತಿಯೊಂದು ಪಾತ್ರದೊಂದಿಗೆ ಸಮರಸತೆಯನ್ನು ಕಾದಂಬರಿಯುದ್ದಕ್ಕೂ ಕಾಣಬಹುದು. ಮೂಲಕೃತಿಯ ಈ ವೈಶಿಷ್ಟ್ಯ ಅನುವಾದದಲ್ಲಿಯೂ ಸಾರ್ಥಕವಾಗಿ ರೂಪ ತಾಳಿದುದು ಅನುಭವಕ್ಕೆ ವೇದ್ಯವಾಗುವುದು.

ಖಾಂಡೇಕರರ ಕಾದಂಬರಿಗಳಲ್ಲಿಯ ವಿಶೇಷ ಸಂಗತಿ ಎಂದರೆ—ಕಾದಂಬರಿಯ ಪರಿಸರಕ್ಕೆ ಇರುವ ಮಹತ್ವ. ಅದರ ಮುಖಾಂತರ ಸಾಮಾಜಿಕ ಜೀವನದ ವಿವಿಧ ಅಂಗಗಳ ಯಥಾರ್ಥ ದರ್ಶನ ಮಾಡಿಸುವರು. ಪ್ರಿಯ ಜನಗಳ ಅಗಲುವಿಕೆ, ಸ್ವಾರ್ಥ ಸಾಧಕ, ವ್ಯಕ್ತಿ-ಪೂಜಕ ಅಧಿಕಾರಿ ಹಾಗೂ ದಲಿತರ ನ್ಯಾಯಕ್ಕಾಗಿ ಹೋರಾಡುವ ಧೀರ, ಬುದ್ಧಿ-ಭಾವನೆಗಳಿಗಿರುವ ಜಿಲಿ—ಈ ಮೊದಲಾದ ವಿಚಾರಗಳನ್ನು ಪ್ರಭಾವಿಯಾಗಿ ಮೂಡಿಸಲು ರಾಮನಗರದಂತಹ ಸಂಸ್ಥಾನ ಸುಂದರ ಪರಿಸರವಾಗಿ ಪರಿಣಮಿಸಿದೆ.

‘ಉತ್ತರ ರಾಮಚರಿತೆ’ಯ ‘ಕ್ರೌಂಚವಧ’ ಸನ್ನಿವೇಶದ ಝಳಕ್ ಕಾದಂಬರಿಯುದ್ದಕ್ಕೂ ಅಲ್ಲಲ್ಲಿ ಆದುದು ಕಂಡುಬರುವುದು. ಈ ಸನ್ನಿವೇಶದಿಂದ ತುಂಬ ಪ್ರಭಾವಿತರಾಗಿ, ಪಂಡಿತರೆಲ್ಲ ತಲೆದೂಗುವಂತೆ ವಿವರಿಸಬಲ್ಲ ಪ್ರೊ. ಅಪ್ಪಣ್ಣಾ ಅವರೇ ಅದರ ವ್ಯಾಪಕ ಅರ್ಥವನ್ನು ಗ್ರಹಿಸುವಲ್ಲಿ ವಿಫಲರಾದುದು ಕೊನೆಯಲ್ಲಿ ತಿಳಿಯುವುದು. ಸುಲೋಳ ಜೀವನಚರಿತೆ ಹಾಗೂ ದಿನಕರ ಅವರಿಗೆ ಬರೆದ ಕಾಗದದ ಹಿನ್ನೆಲೆಯಲ್ಲಿ ಸುಲೋಳ ಮನೆಯಲ್ಲಿಯ ‘ಕ್ರೌಂಚವಧ’ದ ಚಿತ್ರವನ್ನು ಕಂಡಾಗ ಹೊಸ ಅನುಭವ ಅವರ ಹೃದಯಕ್ಕೆ ವೇದ್ಯವಾಗುವುದು. ಹಾಗೂ ಜೀವನದುದ್ದಕ್ಕೂ ತಾವು ಬೋಧಿಸಿದ ವಿಷಯ ತಮ್ಮ ಸಮೀಪದಲ್ಲಿದ್ದೂ ತಿಳಿಯದೆ ಹೋಗುವುದು. ‘ಕ್ರೌಂಚವಧ’ ಸನ್ನಿವೇಶವು ಅರ್ಥಪೂರ್ಣ ಪ್ರತಿಮೆಯಾಗಿ ಕಾದಂಬರಿಯುದ್ದಕ್ಕೂ ನಿಲ್ಲುವುದು.

ಇಡಿ ಕಥೆಯನ್ನೂ ತಾವೇ ಹೇಳದೆ ಅದನ್ನು ವಿವಿಧ ಪಾತ್ರಗಳ ಮುಖಾಂತರ ಹೇಳಿಸುವಲ್ಲಿ ಕಲೆಯ ಕೌಶಲ್ಯವನ್ನು ಕಾಣಬಹುದು. ಆರಂಭದಲ್ಲಿಯ ಪ್ರೊ. ಅಪ್ಪಣ್ಣಾ ಅವರ ಮನದ ತೊಳಲಾಟ, ಅದರ ನಿವಾರಣೆಗಾಗಿ ಸುಲೋಳ ಜೀವನಚರಿತೆ, ದಿನಕರನ ಕಾಗದ ಹಾಗೂ ಇವೆಲ್ಲವನ್ನೂ ಮೇಳೈಸಲು ಡಾ. ಭಗವಂತರಾವ್ ಅವರ ನಿರೂಪಣೆಯ ಮೂಲಕ ಆ ಆ ಪಾತ್ರಗಳು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಲು ಅಸಮರ್ಥವಾಗಬಹುದಾದ ಎಷ್ಟೋ ಭಾವನೆಗಳು ಬಿಡಿಸಲ್ಪಟ್ಟಿವೆ. ಪಾತ್ರಗಳ ಮಾನಸಿಕ ತುಮುಲವನ್ನು ತಮ್ಮ ಶಬ್ದಗಳಲ್ಲಿ ಹೇಳುವುದಕ್ಕಿಂತ ಅವುಗಳ ಹೃದಯವನ್ನು ತೆರೆದಿಟ್ಟು ಅವರ

ಪರಿಣಾಮವನ್ನು ಓದುಗರೇ ಅನುಭವಿಸುವಂತೆ ಮಾಡುವಲ್ಲಿಯೂ ಸಫಲತೆ ದೃಗ್ಗೋಚರ ವಾಗುವುದು.

ಖಾಂಡೇಕರರ ಆರಂಭದ ಕಾದಂಬರಿಗಳ ಭಾಷೆ ಪ್ರಬಂಧ ಹಾಗೂ ವಿಮರ್ಶೆಗಳಿಗೆ ತಕ್ಕುದಾಗಿದ್ದು ಕಾದಂಬರಿಗೆ ತಕ್ಕ ಮನೆಮಾತಿನ ಭಾಷೆಯಾಗಿರಲಿಲ್ಲವೆಂಬ ಕೊರತೆಯನ್ನು ಅವರ ಆಮೇಲಿನ ಕಾದಂಬರಿಗಳು ನಿವಾರಿಸಿವೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪ್ರತಿಭೆಯಿಂದಾಗಿ ಈ ಅನುವಾದವು ಸ್ವತಂತ್ರ ಕೃತಿಯೆನಿಸುವಷ್ಟರಮಟ್ಟಿಗೆ ಭಾಷೆಯ ದೃಷ್ಟಿಯಿಂದ ಪರಿಪೂರ್ಣವಾಗಿದೆ. ಆದರೂ “ಆ ಆರು ತಿಂಗಳಲ್ಲಿ ನಡೆದ ಸಂಭವಗಳನ್ನೆಲ್ಲ ಹೇಳುತ್ತ ಹೋದರೆ....” (ಪುಟ ೧೫೬), “ಅಪ್ಪಣ್ಣ ಅವರಿಗೆ ಮತ್ತೊಂದು ಸಂಭವವೂ ಜ್ಞಾಪಕ ಬಂತು” (ಪುಟ ೧೪) ಇದರಂತೆ ಕಾದಂಬರಿಯ ಹಲವಾರು ವಾಕ್ಯಗಳಲ್ಲಿ ಬಳಕೆಯಾದ ‘ಸಂಭವ’ ಪದದ ಬದಲಾಗಿ ‘ಘಟನೆ’ ಅಥವಾ ‘ಸನ್ನಿವೇಶ’ವೆಂಬ ಪದವಿದ್ದಿದ್ದರೆ ಉಚಿತವಾಗಬಹುದಿತ್ತೇನೊ ಎನ್ನಿಸದೇ ಇರದು. ಈ ಒಂದು ಪದವನ್ನು ಬಿಟ್ಟರೆ ಬೇರೆ ಎಲ್ಲೆಡೆಯಲ್ಲಿಯೂ ಅನುವಾದದ ಭಾಷೆಯು ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ.

ಖಾಂಡೇಕರರ ಬರಹದಲ್ಲಿ ಹೊಸ ವಾಕ್ ಪ್ರಕಾರಗಳು ಅರ್ಥಗರ್ಭಿತ ನಾಣ್ಣುಡಿಗಳು ಸಾಕಷ್ಟು ಕಂಡುಬರುವುವು. ಈ ಅರ್ಥಗರ್ಭಿತ ಮಾತುಗಳು ಕಾದಂಬರಿಯಲ್ಲಿ ವ್ಯಾಪಿಸಿದ ಅಮೃತ ಬಿಂದುಗಳೇ ಆಗಿವೆ. ಇವು ಲೇಖಕನ ಲೋಕಾನುಭವ, ಜ್ಞಾನ ಹಾಗೂ ಭಾಷೆಯ ಮೇಲಿನ ಹಿಡಿತವನ್ನು ಎತ್ತಿ ತೋರಿಸುವುವು. ಇವುಗಳಿಂದ ಭಾಷೆಯ ಸೌಂದರ್ಯವೂ, ಶ್ರೀಮಂತಿಕೆಯೂ ಹೆಚ್ಚುವುದರಲ್ಲಿ ಸಂಶಯವಿಲ್ಲ. ಇಂಥ ಅಮೃತ ಬಿಂದುಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸುವಲ್ಲಿ ಮೂಲದ ಅರ್ಥವೇನೋ ಬರಬಹುದು ಆದರೆ ಮೂಲದ ಸಹಜ–ಸುಭಗತೆ ಹಾಗೂ ಶಕ್ತಿ ಬರುವುದು ತುಂಬ ಕಷ್ಟ. ಆದರೆ ಕೆಳಗಿನ ಮಾತುಗಳನ್ನು ಗಮನಿಸಿದಾಗ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅನುವಾದಕನ ಸಾಮರ್ಥ್ಯ ಹಾಗೂ ಕನ್ನಡ ಭಾಷೆಯ ಮೇಲಿನ ಅವರ ಹಿಡಿತದ ಅರಿವಾಗುವುದು.

(೧) ಪ್ರಕೃತಿ ಹೆಣ್ತನಕ್ಕೆ ಕೆಲವು ಶಾಪಗಳನ್ನು ಇತ್ತಿದೆ. ಆ ಶಾಪಗಳನ್ನು ಮರೆಯಿಸುವುದಕ್ಕಾಗಿಯೋ ಎಂಬಂತೆ ಅವಳಿಗೆ ತಾಯ್ತನವೆಂಬ ವರವನ್ನು ಕೊಟ್ಟಿದೆ. (ಪುಟ ೧೫೯)

(೨) ಮಿತ್ರನ ಮರಣಕ್ಕಿಂತ ಮೈತ್ರಿಯ ಸಾವನ್ನು ಸಹಿಸುವುದು ಕಷ್ಟ (ಪುಟ ೧೬೫)

(೩) ಜ್ಞಾನವನ್ನು ಪೂಜಿಸುವುದೆಂದರೆ, ಭಾವನೆಗಳನ್ನು ಕೊಲ್ಲುವುದೆ ? (ಪುಟ ೨೬೩)

(೪) ಪುಷ್ಪಗಳನ್ನು ಮನೆಯಲ್ಲಿ ಪುಷ್ಪಕುಂಡಗಳಲ್ಲೇ ಇಡಬೇಕು. ಯಜ್ಞಕುಂಡದ ಬಳಿ ಇಟ್ಟರೆ ಅವು ಬಾಡಿ ಬೆಂದು ಒಣಗಿ ಹೋಗುತ್ತವೆ. (ಪುಟ ೨೮೮)

(೫) ಕಲೆ ಎನ್ನುವುದು ಭೂತಕಾಲದ ಕನ್ಯೆ, ವರ್ತಮಾನ ಕಾಲದ ಪತ್ನಿ ಮತ್ತು ಭವಿಷತ್ಕಾಲದ ತಾಯಿ. (ಪುಟ ೨೯೧)

(೬) ಮಾತು, ಕಣ್ಣೀರು, ಮತ್ತು ರಕ್ತ! ಮೂರರ ಉಗಮಸ್ಥಾನವೂ ಒಂದೇ. ಆದರೆ ಅವುಗಳ ಜಗತ್ತುಗಳು ಎಷ್ಟು ಭಿನ್ನವಾಗಿವೆ? (ಪುಟ ೨೯೨)

(೭) ತಾಜಮಹಲ್, ವ್ಯಕ್ತಿಜೀವನದ ಸೌಂದರ್ಯದ ಪ್ರತೀಕ, ಚಿತ್ತೂರಗಡವು ವ್ಯಕ್ತಿಜೀವನದ ಸಾಮರ್ಥ್ಯದ ಪ್ರತಿಮೆ. (ಪುಟ ೨೫೪)

(೮) ಹೂವು ಇಂದೋ ನಾಳೆಯೋ ಬಾಡಬೇಕಾದುದು ತಾನೇ? ಮನುಷ್ಯನ ಬಾಳೂ ಅದರಂತೆಯೇ. ಬಾಡುವವರೆಗೂ ಸುಗಂಧವನ್ನು ಬೀರಿದರೆ ಹೂವಿನ ಬಾಳು ಸಾರ್ಥಕವಾಗುತ್ತದೆ. (ಪುಟ ೩೦೪)

ಮೂಲ ಲೇಖಕರ ವಿಚಾರಗಳನ್ನು ಅರಗಿಸಿಕೊಂಡು ಅವುಗಳಿಗೆ ತನ್ನ ಭಾಷೆಯಲ್ಲಿ ಅಭಿವ್ಯಕ್ತಿಯನ್ನು ನೀಡುವ ಮಹಾಕಾರ್ಯ ಅನುವಾದಕನದಾಗಿರುತ್ತದೆ. ಅದರಿಂದ ಖಾಂಡೇಕರರ ವಾಕ್‌ಪ್ರಚಾರಗಳು ಮೂಲ ಕನ್ನಡವೋ ಏನೋ ಅನ್ನಿಸುವಷ್ಟರ ಮಟ್ಟಿಗೆ ಕನ್ನಡ ಜಾಯಮಾನಕ್ಕೆ ತೀರ ಹೊಂದಿಕೊಂಡು ಬಂದಿರುವುದು ಮೇಲಿನ ನಿದರ್ಶನಗಳ ಮೂಲಕ ಮನವರಿಕೆಯಾಗದಿರದು.

ನವಿರಾದ ಭಾವನೆಗಳನ್ನು, ಸೂಕ್ಷ್ಮ ಸುಖ-ದುಃಖಗಳನ್ನು ಕಾವ್ಯಾತ್ಮಕವಾಗಿ ಚಿತ್ರಿಸುವ ಪ್ರಯತ್ನ ಖಾಂಡೇಕರ ಅವರದಾಗಿದೆ. "ವಾಲ್ಮೀಕಿಯ ಶೋಕ ಶ್ಲೋಕವಾಗಿ ಹೊರಹೊಮ್ಮಿತು. ನಿಜವಾದ ಕಾವ್ಯಸೃಷ್ಟಿ ಹೀಗೆ ಉಕ್ಕಿ ಬರುತ್ತೆ. ಅಂತರಂಗ ತಳಮಳಗೊಂಡ ಹೊರತು ಉತ್ತಮ ಕಾವ್ಯ ಸೃಷ್ಟಿ ಇಲ್ಲ. ಸಮುದ್ರವನ್ನು ಕಡೆದುದರಿಂದ ತಾನೇ ಅಮೃತ ಸೃಷ್ಟಿಯಾದುದು. ಹೊಸ ಹೊಸ ಕಲ್ಪನೆಗಳು ಉಕ್ಕುತ್ತಿರುವ ಪ್ರತಿಭಾವಂತರ ತೀವ್ರ ಮನೋವಿಶ್ಲೇಷಣೆಗಳಿಂದ ಮಾತ್ರ ಉತ್ತಮ ಕಾವ್ಯ ಜನಿಸುವುದು" (ಪುಟ ೨೧) 'ಉತ್ತರ ರಾಮಚರಿತೆ'ಯ ಬಗೆಗಿನ ಪ್ರೊ. ಅಪ್ಪಣ್ಣ ಅವರ ವ್ಯಾಖ್ಯಾನ ಖಾಂಡೇಕರರ ಕೃತಿಗಳಿಗೆ ಅನ್ವಯಿಸುವಂತೆ, ಅನುವಾದಕನ ಪ್ರತಿಭೆಯಿಂದಾಗಿ ಗೊರೂರರ ಅನುವಾದಕ್ಕೂ ಅಷ್ಟೇ ಅರ್ಥಪೂರ್ಣವಾಗಿ ಅನ್ವಯಿಸುವುದು. ಇದೇ ಅನುವಾದಕರ ಸಿದ್ಧಿಯ ಹೆಗ್ಗುರುತು.

ಸಾಮಾನ್ಯವಾಗಿ ವಿ. ಸ. ಖಾಂಡೇಕರ ಅವರ ಕಾದಂಬರಿಗಳು ಓದಿ ಮರೆಯುವಂತಹವಲ್ಲ. ಅವು ಓದುಗರ ವಿಚಾರಗಳಿಗೆ ಚಾಲನೆಯನ್ನೀಯುತ್ತ ಮನನ ಮಾಡಲು ಹಚ್ಚುವಂತಹವಾಗಿವೆ ಎಂಬ ಅಭಿಪ್ರಾಯ ಈ ಅನುವಾದ ಕೃತಿಗೂ ಅನ್ವಯಿಸುವುದು. ಒಟ್ಟಿನಲ್ಲಿ ಮರಾಠಿಯ ಒಂದು ಶ್ರೇಷ್ಠ ಕೃತಿಯು ಮೂಲದ ನಯ ನಾಜೂಕುಗಳನ್ನು ಕಾಯ್ದುಕೊಂಡು, ಕನ್ನಡದಲ್ಲಿ ಸಾರ್ಥಕವಾಗಿ ಅಭಿವ್ಯಕ್ತಗೊಳಿಸಿರುವುದರಿಂದ ಅದನ್ನು ಒದಗಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಾರ್ಯ ಸ್ತುತ್ಯವಾಗಿದೆ. ಇತರ ಭಾರತೀಯ ಭಾಷೆಗಳ ಶ್ರೇಷ್ಠ ಕೃತಿಗಳ ಅನುವಾದ ಕಾರ್ಯ ಕನ್ನಡದಲ್ಲಿ ಆಗಬೇಕಾದ ಪ್ರಮಾಣದಲ್ಲಿ ಆಗದಿರುವುದರಿಂದ ಅದರ ಅವಶ್ಯಕತೆಯನ್ನು ಎತ್ತಿ ತೋರಿಸುವುದಲ್ಲದೆ, ಅಂಥ ಪ್ರಯತ್ನಗಳಿಗೆ ಇದು ನಿತ್ಯ ಮಾರ್ಗದರ್ಶಕ ಕೃತಿಯಾಗಿ ಉಳಿಯುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಣ್ಣ ಕಥೆಗಳು

ಎಲ್. ಎಸ್. ಶೇಷಗಿರಿರಾವ್

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸುಮಾರು ನಲವತ್ತು ವರ್ಷಗಳಿಂದ ಸಣ್ಣ ಕಥೆಗಳನ್ನು ಬರೆಯುತ್ತಿದ್ದಾರೆ. 'ಶ್ರೀನಿವಾಸ'ರನ್ನು ಬಿಟ್ಟರೆ ಈ ಪ್ರಮಾಣದಲ್ಲಿ ಇಷ್ಟು ಕಾಲಾವಧಿಯಲ್ಲಿ ಕನ್ನಡದಲ್ಲಿ ಸಣ್ಣ ಕಥೆಗಳನ್ನು ಬರೆದವರು ಗೊರೂರರೇ ಎಂದು ಕಾಣುತ್ತದೆ. 'ಬೂತಯ್ಯನ ಮಗ ಅಯ್ಯು', 'ಗಂಡುಬೀರಿ ಹೊಸಬಿ', 'ನಮ್ಮೂರಿನ ರಸಿಕ'ರಿಂದ ಪ್ರಾರಂಭವಾಗಿ ಅವರ ಕಥೆಗಳು ಗ್ರಾಮ ಜೀವನವನ್ನು ಸೃಷ್ಟಿಸಿದುವು. ಅನಂತರದ ಕಥೆಗಳಲ್ಲಿ ನಗರ ಜೀವನದತ್ತಲೂ ಕಣ್ಣು ಹೊರಳಿಸಿದ್ದಾರೆ. ಅವರ ಕಥೆಗಳನ್ನು ಹೀಗೆಯೇ ಎರಡು ವರ್ಗಗಳಾಗಿ ವಿಂಗಡಿಸಬಹುದು—ಹಳ್ಳಿಯ ಜೀವನವನ್ನು ಕುರಿತವು, ನಗರ ಜೀವನವನ್ನು ಕುರಿತವು.

ಗೊರೂರರ ಹಳ್ಳಿಯ ಜೀವನದ ಕಥೆಗಳು ಬೂತಯ್ಯನ ಮಗ ಅಯ್ಯು. ಗಂಡುಬೀರಿ ಹೊಸಬಿ, ಪುಟ್ಟಮಲ್ಲಿಗೆ, ಜಮೀನ್ದಾರರು ಇಂತಹ ಹಲವು ವ್ಯಕ್ತಿಗಳನ್ನು ಕುರಿತವಾದರೂ ನಿಜವಾಗಿ ಅವೆಲ್ಲ ಮಲ್ಲಿಗೆಹಳ್ಳಿಯ ಕಥೆಗಳೇ. ಇವೆಲ್ಲವುಗಳಲ್ಲಿ ಹಳ್ಳಿಯೇ ಕೇಂದ್ರ ಪಾತ್ರ. ಎಲ್ಲ ಪಾತ್ರಗಳ ಸುತ್ತಣ ಪರಿಸರ ಕಥೆಕಥೆಯಲ್ಲೂ ಸ್ಪಷ್ಟವಾಗಿ ರೂಪತಾಳುತ್ತದೆ. ಆ ಪರಿಸರದಲ್ಲಿಯೇ ಇವು ಬದುಕುವುದು ಮಾತ್ರವಲ್ಲ, ಇವುಗಳ ಒಳಜೀವನವೂ ಸಾಗುವುದು. ಇವರ ಆಸೆ ಹಂಬಲಗಳು ರೂಪ ತಾಳುವುದು ಈ ಪರಿಸರದಲ್ಲಿಯೇ. ಇಲ್ಲಿ ವಿಜಯ, ಶಾಂತಿ, ಸಮಾಧಾನಗಳನ್ನು ಪಡೆಯುವ ಪಾತ್ರಗಳ ಮೌಲ್ಯಗಳು ಮಲ್ಲಿಗೆಹಳ್ಳಿಯ ಸಮಾಜ ಒಪ್ಪಿರುವ ಮೌಲ್ಯಗಳೇ. ಇಲ್ಲಿನ ವ್ಯಕ್ತಿತ್ವಗಳಲ್ಲಿ ಬಹು ಗಟ್ಟಿ ವ್ಯಕ್ತಿತ್ವದ 'ಗಂಡುಬೀರಿ ಹೊಸಬಿ'[1]ಯ ಕಥೆಯಲ್ಲಿ ಯುಗಾದಿ ಹಬ್ಬದ ಆಚರಣೆಗೆ ಸಿಕ್ಕಿರುವ ಪ್ರಾಧಾನ್ಯ ಅರ್ಥವತ್ತಾದದ್ದು : "ಯುಗಾದಿ ಹಬ್ಬದ

---

[1] 'ವೈಯ್ಯಾರಿ' ಪುಟ ೬೨-೮೩.

ದಿವಸ ಹೊಸಬಿಯು ಉಳಿದವರಿಗಿಂತ ಹೆಚ್ಚು ಮಡಿಯಾಗಿದ್ದಳು. ತನ್ನ ಪ್ರೀತಿಯ ಹಸುವಿನ ಮೈಯನ್ನು ತೊಳೆದು ಅದರ ಹಣೆಗೆ ಕುಂಕುಮವನ್ನಿಟ್ಟು ಕೋಡಿಗೆ ಚೆಂಡು ಹೂವಿನ ದಂಡೆಯನ್ನು ಸುತ್ತಿ ಸಿಂಗರಿಸಿದಳು. ಕುಂಟನಾದ ಜೋರಿಗೆ ಬಲಾತ್ಕಾರದಿಂದ ಬಿಸಿನೀರಿನ ಸ್ನಾನ ಮಾಡಿಸಿದಳು. ದೋಸೆ. ಪಾಯಸ ಮುಂತಾದ ರುಚಿಯಾದ ಅಡಿಗೆಗಳನ್ನೆಲ್ಲಾ ಮಾಡಿಟ್ಟು ದೇವಸ್ಥಾನಕ್ಕೆ 'ತಳಿಗೆ'ಯನ್ನು ತೆಗೆದು ಕೊಂಡು ಹೋದಳು.....ಹೊಸಬಿಯು ಐನೋರನ್ನು ಮನೆಯ ಮೇಲಿ ಕೂರಿಸಿ ಎಲೆ, ಅಡಕೆ, ಹೂವು, ಕಾಯಿ, ಅಕ್ಕಿ, ಬೇಳೆ, ತರಕಾರಿ. ಬಾಳೆಹಣ್ಣು ಎಲ್ಲವನ್ನು ತಟ್ಟೆಯಲ್ಲಿ ತಂದಿಟ್ಟು ದಣ್ಣಕ್ಕಿದಳು." (ಪುಟ ೭೩–೭೪)

ಗೊರೂರರ ಕಥೆಗಳಲ್ಲಿ ಉದ್ದೇಶಿತ ಕಲೆ ಇಲ್ಲ. ಆಧುನಿಕ ಸಂವೇದನೆಗೆ ಪ್ರಿಯವಾದ ಬಿಗಿಯಾದ ಬಂಧ, ಸೂಕ್ಷ್ಮತೆ, ಸಂಕೇತ-ಪ್ರತಿಮೆಗಳ ಬಳಕೆ ಇಲ್ಲ. ಎಷ್ಟೋ ಬಾರಿ ಕಥೆಗಾರರೇ ನೇರವಾಗಿ ಪ್ರವೇಶಮಾಡಿ ಅಭಿಪ್ರಾಯ ನೀಡುವುದುಂಟು, ತೀರ್ಮಾನ ಸೂಚಿಸುವುದುಂಟು. ಹಲವು ಕಥೆಗಳು ಬರಿಯ ಪ್ರಬಂಧಗಳೇ ಆಗಿ ಉಳಿಯುತ್ತವೆ. ತಂತ್ರದ ಬಗೆಗೆ ಅವರು ಹೆಚ್ಚು ಯೋಚನೆ ಮಾಡಿದವರೇ ಅಲ್ಲ ಎಂದು ತೋರುತ್ತದೆ. ಎದುರಿಗೆ ಕುಳಿತು ಸ್ನೇಹಿತರಿಗೆ ಕಥೆ ಹೇಳುವವರ ರೀತಿ ಅವರದು. ಪ್ರಾಸಂಗಿಕವಾಗಿ ಬಂದ ಅಂಶಗಳನ್ನು ಎತ್ತಿಕೊಂಡಾಗ ಕಥೆ ಅತ್ತ ಇತ್ತ ಹರಿಯುವುದುಂಟು. ಸಾಮಾನ್ಯ ಸಂಭಾಷಣೆಯಲ್ಲಿನಂತೆ ಚುಟಕಗಳು ಹಾರುವುದುಂಟು. ಇಷ್ಟಾದರೂ ಅವರ ಕೆಲವು ಕಥೆಗಳು ಆಳವಾದ ಪರಿಣಾಮವನ್ನುಂಟುಮಾಡುವುದು ಹೇಗೆ ಎಂಬುದು ಕುತೂಹಲಕರವಾದ ಪ್ರಶ್ನೆ.

ಗೊರೂರರ ಕಥೆಗಳ ವಸ್ತು ಹಳ್ಳಿಯ ಜೀವನ ಎಂದಾಗ ಆ ಜೀವನದಲ್ಲಿ ಎಷ್ಟು ಭಾಗ ಅವರ ಕಥೆಗಳ ವೃತ್ತದಿಂದ ಹೊರಗೆ ಉಳಿದಿವೆ ಎಂಬುದು ಗಮನಾರ್ಹ. ಹಳ್ಳಿಯ ಜೀವನದ ಬಹು ಮುಖ್ಯ ಭಾಗ ಹೊಲ ಗದ್ದೆಗಳಲ್ಲಿ ಕೃಷಿಯ ಕೆಲಸ. ರೈತನಿಗೆ ತನ್ನದೇ ಆದ ಪ್ರಪಂಚ, ತನ್ನದೇ ಸಮಸ್ಯೆಗಳು, ತನ್ನದೇ ಸಂತೋಷ-ದುಃಖಗಳು ಉಂಟು. ಹೊಲದಲ್ಲಿ ಬಿತ್ತನೆ, ಕಳೆ ಕೀಳುವುದು, ಕುಯ್ಲು ಇಂತಹ ಬೇಸಾಯದ ಜಗತ್ತಿನ ಚಟುವಟಿಕೆಗಳು ಗೊರೂರರ ಕಥೆಗಳಲ್ಲಿ ಕಾಣುವುದು ವಿರಳ. 'ನಮ್ಮ ಊರಿನ ರಸಿಕ'ರಲ್ಲಿ ಕಡೆಯ ಪುಟಗಳಲ್ಲಿ ಇಂಥ ಒಂದು ವರ್ಣನೆ ಬರುತ್ತದೆ: ಆದರೆ ಇಲ್ಲಿನ ಚಿತ್ರ ರೈತರ ಸಮುದಾಯಕ್ಕೆ ಸೇರದ ಮತ್ತು ಅದನ್ನು ಇನ್ನೊಂದು ಸಮುದಾಯದೊಂದಿಗೆ ಹೋಲಿಸಿ ನೋಡಬಲ್ಲ ವಿಮರ್ಶಾತ್ಮಕ ದೃಷ್ಟಿ ಕಂಡದ್ದು. ಹೊಲ ಗದ್ದೆಗಳಲ್ಲಿ ಹೆಂಗಸರು, ಗಂಡಸರು ಒಟ್ಟಿಗೆ ಕೆಲಸ ಮಾಡುತ್ತಾರೆ. ಹಾಡುತ್ತಾರೆ. ದಣಿವಾರಿಸಿಕೊಳ್ಳುತ್ತಾರೆ, ಒಮ್ಮೊಮ್ಮೆ ಜಗಳವಾಡುತ್ತಾರೆ; ಇಲ್ಲಿಯೂ ವ್ಯಕ್ತಿ–ವ್ಯಕ್ತಿ ಸಂಬಂಧಗಳುಂಟು. ಆದರೆ ಇದರ ಚಿತ್ರಣ ಗೊರೂರರ ಕಥೆಗಳಲ್ಲಿ ಇಲ್ಲ. ರೈತವರ್ಗಕ್ಕೆ ಸಂಬಂಧಿಸಿದ್ದು ಎನ್ನಬಹುದಾದ 'ಪುಟ್ಟ-ಮಲ್ಲಿಗೆ[1]' ಕಥೆಯನ್ನೆ ತೆಗೆದುಕೊಳ್ಳೋಣ.

[1] 'ವೈಯ್ಯಾರಿ', ಪುಟ ೧೦೩–೧೨೦.

ಸುಮಾರು ಐದು ಸಾವಿರ ಪದಗಳ ಈ ಕಥೆಯಲ್ಲಿ ಕ್ರಿಯೆ ಬಹು ನಿಧಾನವಾಗಿ ಸಾಗುತ್ತದೆ. ಕಥೆಯಲ್ಲಿ ಆಗುವುದೇನು? ಪುಟ್ಟಮಲ್ಲಿಗೆಯ ತಂದೆ ನಿಂಗ ಬುದ್ಧಿವಂತ, ಗಟ್ಟಿಗ, ಅವನು ಸತ್ತು ಸಂಸಾರಕ್ಕೆ ಕಷ್ಟ ಬಂದಿತು. ಪುಟ್ಟಮಲ್ಲಿಗೆ ಸುಂದರಿಯಾದ ಹೆಣ್ಣಾಗಿ ಬೆಳೆದಳು. ಊರಿನಲ್ಲಿ ತಳವಾರ ಎಂದು ಕರೆಸಿಕೊಂಡ ಕರಿಯನಿಗೆ ಅವಳನ್ನು ಮದುವೆಯಾಗುವ ಆಸೆ. ಬಸವಯ್ಯ ಎಂಬಾತನಿಗೂ ಪುಟ್ಟಮಲ್ಲಿಗೆಯನ್ನು ಕೈಹಿಡಿಯುವ ಬಯಕೆ; ಪುಟ್ಟಮಲ್ಲಿಗೆ ಬಸವಯ್ಯನಿಗೆ ಒಲಿದಿದ್ದಾಳೆ. ಊರಿನ ಪೂಜಾರಿಯನ್ನೂ ಬೇರೆ ಊರಿನಿಂದ ಬಂದ ಬುಡಬುಡಕೆ ದಾಸಯ್ಯಗಳ ಹೆಂಗಸನ್ನೂ ಕರಿಯ ಜೇಬಿಗೆ ಹಾಕಿಕೊಂಡು, ಶಕುನ ಹೇಳಿಸಿ, ಪುಟ್ಟಮಲ್ಲಿಗೆಗೆ ಶಕುನಗಳಲ್ಲಿದ್ದ ನಂಬಿಕೆಯನ್ನು ಪ್ರಭಾವಿಸಿ, ಅವಳನ್ನು ಮದುವೆಯಾಗುವ ಹಂಚಿಕೆ ಮಾಡಿದ್ದಾನೆ. ಬಸವಯ್ಯ ಇದನ್ನು ಯಶಸ್ವಿಯಾಗಿ ಮುರಿಯುತ್ತಾನೆ. ಬಸವಯ್ಯ–ಪುಟ್ಟಮಲ್ಲಿಗೆ ಇವರ ಮದುವೆ ಸಂಭ್ರಮದಿಂದ ನಡೆಯುತ್ತದೆ. ಇಲ್ಲಿ ಆಳುಗಳು ಹೊಲದಲ್ಲಿ ರಾಗಿ ಕುಯ್ಯುವ ಪ್ರಸಂಗವಿದೆ. ಆದರೆ ನಿಜವಾಗಿ ನಾವು ಆಳುಗಳ ಪ್ರಪಂಚವನ್ನು ಪ್ರವೇಶಿಸುವುದೇ ಇಲ್ಲ. ಬಹು ನಿಧಾನವಾಗಿ ಸಾಗುವ ಕಥೆಯಲ್ಲೂ ಇದರ ವರ್ಣನೆಗೆ ಸ್ಥಳವಿಲ್ಲ. ಆಳುಗಳು ಕುಯ್ಯುತ್ತಿದ್ದಾಗ ಪೂಜಾರಿ ಅಯ್ಯ ಬರುತ್ತಾನೆ, ತನ್ನ ಪಾತ್ರವನ್ನು ನಿರ್ವಹಿಸಿ ಹೋಗುತ್ತಾನೆ.

ಕಥೆಯ ಆಸಕ್ತಿ ಇರುವುದು ಒಂದು ಪರಂಪರೆಗೆ ಅಪಚಾರ ಮಾಡುವ ಪ್ರಯತ್ನ, ಆ ಪರಂಪರೆ ತಾನೇ ಅಪಚಾರವನ್ನು ತಿದ್ದಿದುದು ಇದರಲ್ಲಿ. ಪುಟ್ಟಮಲ್ಲಿಗೆ–ಬಸವಯ್ಯನ ಕುದಿತಗಳು, ನಿರಾಸೆ ಇವಕ್ಕೆ ಇಲ್ಲಿ ಹೆಚ್ಚು ಲಕ್ಷ್ಯವಿಲ್ಲ. ಇಲ್ಲಿ ಶಕುನವನ್ನು ನಂಬುವುದಕ್ಕೆ ವಿರೋಧ, ಪೂಜಾರಿಗಳನ್ನೂ ಬುಡಬುಡಿಕೆ ದಾಸಯ್ಯಗಳನ್ನೂ 'ಶಕುನ ಕೇಳುವುದ'ಕ್ಕೆ ವಿರೋಧ ಎಂದಿಲ್ಲ. ಇವರನ್ನು ನಂಬಿ ಪುಟ್ಟಮಲ್ಲಿಗೆ ಕೆಟ್ಟಳು ಎಂಬ ದೃಷ್ಟಿಯೂ ಇಲ್ಲ. ಕರಿಯನ ರೂಪಾಯಿಯಿಂದ ಪ್ರಭಾವಿತಳಾದ ಶಕುನ ಹೇಳುವವಳು, "ನಿನ್ಗೆ ಈಗ ಮನಸ್ಸಿಗೆ ಒಂದು ವೇಚನೆ ಹಿಡಿದಿದೆ. ನಿನ್ನ ಕಣ್ಗೆ ಎರಡು ಜನ ಕಾಣ್ತಾರೆ. ಅವರಿಬ್ಬರ್ಲ್ಗೆ ನೀನು ಬೇಕು....ಇಲ್ಲಿಂದ ನೀನು ಹೊರೀಕೆ ಹೋದ ತಕ್ಷಣ ಒಬ್ಬ ಮನಸ ಬರ್ತಾನೆ. ನಿನ್ಕಂಡ್ರೆ ಅವನ್ಗೆ ಪರಾಣ....ಅಂತಾ ಗಂಡ ಯಾರ್ಗೆ ಸಿಕ್ಬೇಕಾದ್ರು ಅದೃಷ್ಟ ಮಾಡಿರಬೇಕು. ನೀನೀಗ ಹೊರೀಕೆ ಹೋದ ಕೂಡ್ಲೆ ಅವ ನಿನ್ನ ಒಂದಿಚಾರ ಕೇಳ್ತಾನೆ. ಆಗ್ಲಿ ಅಂತ ಒಪ್ಕೋ. ಒಪ್ಕೊಂಡ್ರೆ ದೇವರ್ಗೆ ಒಪ್ಪಿತ....ಒಪ್ಕೊಳ್ದೆ ಇದ್ರೆ ನೋಡ್ಕೊ ಬಾರಿ ಕಷ್ಟ ಬರ್ತದೆ. ಈಗಲೇ ಹೇಳಿನ್ನಿ" (ಪುಟ ೧೨೦)ಎಂದು ಹೇಳುತ್ತಾಳೆ. ಇದನ್ನು ಕೇಳಿಸಿಕೊಂಡಿದ್ದ ಬಸವಯ್ಯ ಪುಟ್ಟಮಲ್ಲಿಗೆ ಹೊರಕ್ಕೆ ಬರುವ ಹೊತ್ತಿಗೆ ಎದುರಾಗುತ್ತಾನೆ. "ನನ್ನನ್ನು ಮದ್ವೆ ಆಗ್ತೀಯ?" (ಪುಟ ೧೨೧) ಎಂದು ಕೇಳುತ್ತಾನೆ. ತಾನು ಹೊರಕ್ಕೆ ಬರುತ್ತಲೇ ಅವನೇ ಕಂಡದ್ದರಿಂದ, ಪುಟ್ಟಮಲ್ಲಿಗೆಗೂ ತನ್ನ ಒಲವಿಗೆ ದೇವರ ಆಶೀರ್ವಾದವೂ ಇದೆ ಎಂಬ ಧೈರ್ಯ. ಈ ಪ್ರಣಯದ ಪ್ರಸಂಗವೂ ಇಡೀ ಕಥೆಯಲ್ಲಿ ಸ್ವಲ್ಪ ಭಾಗ ಮಾತ್ರ. ಕಥೆಯ ಪ್ರಾರಂಭ ನಿಂಗನ ಚಿತ್ರಣದಿಂದ. ಪುಟ್ಟಮಲ್ಲಿಗೆಯ ಪ್ರಸ್ತಾಪ ಬರುತ್ತಲೇ ಕಥೆಗಾರರು,

"ಇಲ್ಲಿ ನಮ್ಮ ಹಳ್ಳಿಗಾಡಿನ ಹುಡುಗ ಹುಡುಗಿಯರ ಜೀವನದೆಗೆಯನ್ನು ಕುರಿತು ಎರಡು ಮಾತು ಹೇಳಬೇಕು" (ಪುಟ ೧೦೪) ಎನ್ನುತ್ತಾರೆ. ಹಳ್ಳಿಯಲ್ಲಿ ಹುಡುಗಿಯರು ಬೆಳೆಯುವ ರೀತಿಯ ವಿವರಣೆ ಸುಮಾರು ಮುನ್ನೂರು ಪದಗಳನ್ನು ತೆಗೆದುಕೊಳ್ಳುತ್ತದೆ. ಅನಂತರ ಹಳ್ಳಿಯ ಒಕ್ಕಲಿಗರ ಹೆಣ್ಣಿನ ಮದುವೆಯ ಕ್ರಮದ ವಿವರಣೆ. "ಒಕ್ಕಲಿಗರಲ್ಲಿ ಹೆಣ್ಣು ಬ್ರಾಹ್ಮಣರಲ್ಲಿರುವಷ್ಟು ಅಗ್ಗವಾಗಿಲ್ಲ. ಪ್ರತಿಯೊಂದು ಹುಡುಗಿಯಿಂದಲೂ ಹೆಣ್ಣಿನ ತಂದೆಗೆ ಸಂಪಾದನೆಯುಂಟು....ಗಂಡನು ತನ್ನ ಪಾಡಿಗೆ ತಾನು ಕೆಲಸ ಮಾಡುತ್ತಿರುವುದು, ಹೆಂಡತಿ ಸುಖವಾಗಿ ಮನೆಯಲ್ಲಿ ಇರುವುದು ಇದು ಒಕ್ಕಲಿಗರ ಪದ್ಧತಿಯಲ್ಲ." (ಪುಟ ೧೦೭) ಹೀಗೆ ಕಥೆಯ ಪ್ರಾರಂಭದಲ್ಲಿ ಪುಟ್ಟಮಲ್ಲಿಗೆಯ ಪ್ರಸ್ತಾಪವಿದ್ದರೂ, ನಾವು ಅವಳನ್ನು ಕಾಣುವುದು ಪ್ರಾತಿನಿಧಿಕವಾಗಿ; ಹಳ್ಳಿಯಲ್ಲಿ ತಲೆಮಾರುಗಳಿಂದ ಒಂದು ಸಂಪ್ರದಾಯದಲ್ಲಿ ಹೆಣ್ಣುಗಳು ಬೆಳೆದಂತೆ ಬೆಳೆದ ಹುಡುಗಿಯಾಗಿ, ವ್ಯಕ್ತಿಯಾಗಿ ಅಲ್ಲ. ನಿಜವಾಗಿ ಇಡೀ ಕಥೆಯಲ್ಲಿ ಅವಳ ಪಾತ್ರ ಬಹು ಸ್ವಲ್ಪ; ಬಸವಯ್ಯನ ಪಾತ್ರವೂ ಮಿತವೇ. ಸ್ವಲ್ಪ ಚಟುವಟಿಕೆ ತೋರಿಸುವವನು ಕರಿಯನೇ. ಅವನ ಪ್ರಯತ್ನ ನಿಷ್ಫಲವಾದ ಮೇಲೆ, ಪುಟ್ಟಮಲ್ಲಿಗೆಯ ಮದುವೆಯ ವರ್ಣನೆಗೆ ಸುಮಾರು ಮೂರರಲ್ಲಿ ಒಂದು ಪಾಲು ವಿಸ್ತಾರ ಸಲ್ಲುತ್ತದೆ. ಮದುವೆಗೆ ಊಟಕ್ಕೆ ಹೇಗೆ ಆಹ್ವಾನಿಸುತ್ತಾರೆ, ರಾತ್ರಿ ಪಂಚಾಯ್ತಿಯ ನ್ಯಾಯ, ಎಲೆ ಅಡಿಕೆ ಕೊಡುವುದು ಈ ವಿವರಗಳು ಈ ಭಾಗವನ್ನು ತುಂಬುತ್ತವೆ. ಇದು ಹಿಂದಿನ ಕಥೆಯನ್ನು ಮರೆಸಿ ಬೇರೊಂದು ವಾತಾವರಣವನ್ನೆ ನಿರ್ಮಿಸುತ್ತದೆ: ಇಷ್ಟು ಮಾತ್ರವಲ್ಲ, ಬಸವಯ್ಯ–ಪುಟ್ಟಮಲ್ಲಿಗೆಯರ ಮದುವೆ ಒಂದು ಸಂಪ್ರದಾಯದ ನಿರ್ದಿಷ್ಟ ಅಭಿವ್ಯಕ್ತಿ ಎಂಬುದು ಮನದಟ್ಟಾಗುತ್ತದೆ. ಮದುವೆಯಾದ ಕೂಡಲೆ ಹೆಂಡತಿಯನ್ನು ಕರೆದುಕೊಂಡು ಊರಿಗೆ ಹೋಗಬೇಕೆಂದು ಬಸವಯ್ಯನ ಇಷ್ಟ. ಆದರೆ ಓಲಗವಿಲ್ಲದೆ ಹೊಸ ಮದುಮಗ-ಮದುಮಗಳು ಊರು ಬಿಡುವಂತಿಲ್ಲ. ಮದುವೆಯ ಕಾಲವಾದುದರಿಂದ ಓಲಗದವರು ಬೇರೆ ಊರಿಗೆ ಹೋಗಿದ್ದಾರೆ. ["ಹಳ್ಳಿಗಳಲ್ಲಿ ಓಲಗ ಸಿಕ್ಕದೆ ಗಂಡಿನ ಮನೆಯವರು ಎರಡು–ಮೂರು ತಿಂಗಳು ಹೆಣ್ಣಿನ ಮನೆಯಲ್ಲಿ ಇರುವುದುಂಟು." (ಪುಟ ೧೩೦)] ಹೀಗೆ ಸಂಪ್ರದಾಯ ಇಡೀ ಕಥೆಯನ್ನು ತುಂಬಿಬಿಟ್ಟಿದೆ.

ಹೀಗೆ ಕಥೆಗೆ ಹೆಸರನ್ನು ಕೊಟ್ಟ ಪಾತ್ರವೇ ವ್ಯಕ್ತಿಯಾಗಿ ಈ ಕಥೆಯಲ್ಲಿ ಕಾಣಿಸಿಕೊಳ್ಳುವುದೇ ಕಡಮೆ. ತಾನು ಬಸವಯ್ಯನನ್ನು ಮದುವೆಯಾಗುತ್ತೇನೆಂದೂ, ಅವನ ಜೊತೆಯಲ್ಲಿ ಎಲ್ಲಿಯಾದರೂ ಸರಿಯೆ ಸುಖವಾಗಿರುತ್ತೇನೆಂದೂ ತಾಯಿಗೆ ಧೈರ್ಯವಾಗಿ ಹೇಳುವುದರಲ್ಲಿ, ಹೊಸಬಳಾದ ಕರಿಯನ ಬಲೆಯಿಂದ ಪಾರಾದಂತೆ ತಾನೂ ಉಪಾಯದಿಂದ ಪಾರಾಗುವೆನೆಂಬ ವಿಶ್ವಾಸದಲ್ಲಿ ಅವಳು ಪ್ರತ್ಯೇಕ ವ್ಯಕ್ತಿತ್ವ ಹೊಂದಿದ ಹೆಣ್ಣಾಗಿ ಕಾಣುತ್ತಾಳೆ. ಆದರೆ ಕಥೆಯಲ್ಲಿ ಒತ್ತು ಬಿದ್ದಿರುವುದು ಅವಳು ಒಕ್ಕಲಿಗರ ಹೆಣ್ಣು ಎಂಬ ವಿಷಯದ ಮೇಲೆ.

ಈ ಒಕ್ಕಲಿಗ ಸಮುದಾಯದ ಪಕ್ಕದಲ್ಲಿ ಬ್ರಾಹ್ಮಣರ ಸಮುದಾಯವಿದೆ. ನಿಜವಾಗಿ ನೋಡಿದರೆ ಪುಟ್ಟಮಲ್ಲಿಗೆ–ಬಸವಯ್ಯ ಇವರ ಕಥೆಯಲ್ಲಿ ರಾಮಯ್ಯನಿಗೆ ಸ್ಥಾನವೇ ಇಲ್ಲ.

ಆಮೇಲೆ ಒಕ್ಕಲಿಗರ ಹೆಣ್ಣಿನ ಮದುವೆಯ ಪ್ರಸ್ತಾಪ ಬರುತ್ತಲೇ ಕಥೆಗಾರರು ಹೇಳುತ್ತಾರೆ: "ಒಕ್ಕಲಿಗರಲ್ಲಿ ಹೆಣ್ಣು ಬ್ರಾಹ್ಮಣರಲ್ಲಿರುವಷ್ಟು ಅಗ್ಗವಾಗಿಲ್ಲ." (ಪುಟ ೧೦೭) ಬಸವಯ್ಯ–ಪುಟ್ಟಮಲ್ಲಿಗೆಯರ ಮದುವೆ ನಿಶ್ಚಯವಾಗುತ್ತಲೆ ಮತ್ತೆ ಈ ಹಾರುವ ಸಮುದಾಯ ಚಿತ್ರದೊಳಕ್ಕೆ ಬರುತ್ತದೆ. ಮದುವೆ ಮಾಡಿಸುವವರು ಯಾರು ಎಂಬ ಚರ್ಚೆ ನಡೆಯುತ್ತದೆ. ಕಡೆಗೆ ಮದುವೆ ಮಾಡಿಸುವ ನಾಣಿಗೆ ಮದುವೆ ಮಾಡಿಸುವುದೂ ಬರುವುದಿಲ್ಲ. ವಧೂವರರು ಚಪ್ಪರದಲ್ಲಿ ಸೇರಿದ ಕೂಡಲೆ 'ರಾಜಶೇಖರ ವಿಲಾಸ'ದ ಮೊದಲನೆಯ ಪದ್ಯವನ್ನು ಎರಡು ಸಲ ಗಟ್ಟಿಯಾಗಿಯೂ ಸ್ಪಷ್ಟವಾಗಿಯೂ ಪಠಿಸುತ್ತಾನೆ. "ಅಘಟನಾ ಘಟಿತ ಸಂಯುಕ್ತಂ ಬ್ರಹ್ಮ ಕಟ್ಟಿದ ಕಂಕಣಂ" ಎಂದು ಹೇಳಿ "ಕಟ್ಟು ಕಂಕಣ" ಎನ್ನುತ್ತಾನೆ. "ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ ಲಲಾಟ ಲಿಖಿತ ರೇಖಾ" ಎಂಬ ಶ್ಲೋಕ ಹೇಳಿ, "ಮಂಗಳಂ ಕೋಸಲೇಂದ್ರಾಯ...." ಹೇಳಿ, "ಲೋಕಕ್ಕೆಲ್ಲ ಮಂಗಳವಾಗಲಿ, ಚಕ್ರವರ್ತಿಗೆ ಸಮಾನನಾದ ಮಗ ದಂಪತಿಗಳಿಗೆ ಹುಟ್ಟಲಿ" (ಪುಟ ೧೨೭) ಎಂದು ಆಶೀರ್ವದಿಸಿ ಮದುವೆ ಮುಗಿಯಿತು ಎನ್ನುತ್ತಾನೆ. ವಿವಾಹದ ಕ್ರಮ ಸ್ವಲ್ಪಮಟ್ಟಿಗೆ ಬರುವವರಿಗೆಲ್ಲ ಇದು ವಿಧ್ಯುಕ್ತವಲ್ಲ ಎಂಬುದು ಸ್ಪಷ್ಟ. ನಾಣಿಗೂ ಇದು ತಿಳಿಯದೆ ಇಲ್ಲ; ಮೋಸ ಮಾಡುವ ಉದ್ದೇಶವೂ ಅವನದಲ್ಲ. 'ಕಸ್ತೂರಿ ತಿಲಕೇ', 'ಲಲಾಟ ಫಲಕೇ', 'ಕುಂಕುಮ', 'ಪುಷ್ಪಾಂಜಲಿ', ಕಂಕಣ', 'ಮಂಗಳ' ಇಂತಹ ಶಬ್ದಗಳನ್ನು ಕೇಳಿದರೆ ಹಳ್ಳಿಯವರಿಗೆ ತೃಪ್ತಿ, ವಿಧ್ಯುಕ್ತವಾಗಿ ವಿವಾಹ ನಡೆಯಿತು ಎಂಬ ಸಮಾಧಾನ.

ರಾಮಸ್ವಾಮಿ ಅಯ್ಯಂಗಾರರ ಕಥೆಗಳನ್ನು ಓದಿದಾಗ ಇವರು ಸಂಪ್ರದಾಯನಿಷ್ಠರು, ಭೂತಕಾಲಕ್ಕೆ ಕಟ್ಟುಬಿದ್ದವರು ಎನ್ನಿಸಬಹುದು. ಆಗಲೆ ಬಹುಮಟ್ಟಿಗೆ ಮರೆಯಾಗಿರುವ ಒಂದು ಸಾಮಾಜಿಕ ವ್ಯವಸ್ಥೆಯನ್ನು ಮಮತೆಯಿಂದ ಚಿತ್ರಿಸುತ್ತಾರೆ. ಈಚೆಗಿನ ಕಥೆಗಳಲ್ಲಿ ಮಮತೆಯೊಂದಿಗೆ, ಈ ವ್ಯವಸ್ಥೆ ಮರೆಯಾಯಿತೆಂಬ ವಿಷಾದ ಬೆರೆತಿದೆ. ಈಗ ಹಳ್ಳಿಯ ಜೀವನ ಬಹು ವೇಗವಾಗಿ ಬದಲಾವಣೆ ಹೊಂದಿದೆ. ಪ್ರಜಾಪ್ರಭುತ್ವ, ನ್ಯಾಯಾಲಯಗಳ ಸಂಖ್ಯೆಗಳ ಏರಿಕೆ, 'ಸಂವಿಧಾನ ದತ್ತ ಹಕ್ಕು'ಗಳ ಅರಿವು, ವೇಗವಾಗಿ ಸಂಚಾರ ಮಾಡುವ ಸೌಲಭ್ಯಗಳು, ವೃತ್ತಪತ್ರಿಕೆಗಳು, ಟ್ರಾನ್ಸಿಸ್ಟರುಗಳು—ಎಲ್ಲ ಸೇರಿ ಆ ಹಿಂದಿನ ವ್ಯವಸ್ಥೆಯನ್ನು ಬಹುಮಟ್ಟಿಗೆ ಶಿಥಿಲಗೊಳಿಸಿವೆ. ರಾಮಸ್ವಾಮಿ ಅಯ್ಯಂಗಾರ್ಯರ ಕಥೆಗಳನ್ನು ಓದುವಾಗ ಸರಳತೆ ಕಳೆದುಕೊಂಡ (ಸೊಫಿಸ್ಟಿಕೇಷನ್ ತುಂಬಿದ) ನಮ್ಮ ಜಗತ್ತಿನಿಂದ ಸರಳತೆ ವಾತಾವರಣದಲ್ಲಿ ಬೆರೆತುಹೋಗಿರುವ ಜಗತ್ತಿಗೆ ಕಾಲಿಡುತ್ತೇವೆ. ಈ ಅಂತರವೇ ಒಂದು ವಿಲಕ್ಷಣ ಸಂತೋಷವನ್ನು ಉಂಟುಮಾಡುತ್ತದೆ. ನಾಗರಿಕತೆಗೆ ತೆರಬೇಕಾದ ಬೆಲೆಯನ್ನು ಈ ಕಥೆಗಳು ಮತ್ತೆ ಮತ್ತೆ ನೆನಪಿಗೆ ತರುತ್ತವೆ. ಯುಗಾದಿ, ದೀಪಾವಳಿಗಳನ್ನು ಇಡೀ ಸಮುದಾಯ ಒಂದಾಗಿ ಆಚರಿಸುವ, ಸುಖ–ದುಃಖ–ವಿರಾಮ–ವಿನೋದ–ಆಟಗಳನ್ನು ಒಂದಾಗಿ ಅನುಭವಿಸುವ ಒಂದು ಸಮಾಜ ಮತ್ತೆ ಬಾರದಂತೆ ಮಾಯವಾಗಿ

ಹೋಗಿವೆ ಎಂಬುದರ ಅರಿವನ್ನು ಉಂಟುಮಾಡುತ್ತವೆ.

ಎಂದರೆ, ಗೊರೂರರ ಕಥೆಗಳು ನಮಗೆ ಮೆಚ್ಚಿಗೆಯಾಗುವುದು ಈ ಒಂದು ಚಾರಿತ್ರಿಕ ಕಾರಣದಿಂದ ಮಾತ್ರವೇ? ಒಂದು ಸರಳ ಜಗತ್ತಿಗೆ ಕಾಲಿಟ್ಟು ಮರಳುತ್ತೇವೆ ಎಂದು ಇವನ್ನು ಓದಬೇಕೆ?

ಈ ಪ್ರಶ್ನೆಯನ್ನು ಉತ್ತರಿಸಲು ಹಿಂದೆ ನಾವು ಗಮನಿಸಿದ 'ಪುಟ್ಟಮಲ್ಲಿಗೆ' ಕಥೆಯನ್ನೇ ಮತ್ತೆ ನೋಡಬಹುದು. ಗೊರೂರರ ಕಥೆ ಎಂದರೆ ಹಾಸ್ಯದ ಕಥೆ ಎಂಬ ಭಾವನೆಯೂ ನಮಗುಂಟು. ಈ ಕಥೆಯಲ್ಲಿ ಹಾಸ್ಯದ ಅಂಶ ಬಹು ಕಡಮೆ. ಪ್ರಾರಂಭದಲ್ಲಂತೂ ಹಾಸ್ಯದ ಸುಳಿವೇ ಇಲ್ಲ. ನಿಜವಾಗಿ ಹಾಸ್ಯ ಕಾಲಿಡುವುದು ಕಥೆಯ ಕ್ರಿಯೆ ಮುಕ್ತಾಯವಾಗಿ ಪುಟ್ಟಮಲ್ಲಿಗೆ–ಬಸವಯ್ಯನ ಮದುವೆ ನಡೆಯುವಾಗಲೆ. ನಾವೆ ಅವರ ಮದುವೆಯನ್ನು ನಡೆಸುವ ವೈಖರಿಯನ್ನು ನೋಡಿದ್ದೇವೆ. ಇಡೀ ಕಥೆಯಲ್ಲಿ ಹಾಸ್ಯದ ಭಾಗ ಎನ್ನಬಹುದಾದದ್ದು ಇದೊಂದೇ.

'ಪುಟ್ಟಮಲ್ಲಿಗೆ' ಬಹು ಶ್ರೇಷ್ಠ ಕಥೆ ಎಂದೇನೂ ಹೇಳುವಂತಿಲ್ಲ. ಆದರೆ ಇದರಲ್ಲಿ ಗೊರೂರರ ಕಥೆ ನೀಡುವ ಅನುಭವವನ್ನು ವಿಶ್ಲೇಷಿಸಬಹುದು. ಆಗಲೆ ಹೇಳಿದಂತೆ, ಪುಟ್ಟಮಲ್ಲಿಗೆ ಇಲ್ಲಿ ಬಹುಮಟ್ಟಿಗೆ ಕಾಣುವುದು ಒಕ್ಕಲಿಗರ ಹೆಣ್ಣಾಗಿ. ಕರಿಯನನ್ನು ಇಲ್ಲಿ ಕಾಣುವುದು 'ತಳವಾರ'ನಾಗಿ. "ವಾಸ್ತವವಾಗಿ ಅವನು ನಮ್ಮೂರ ತಳವಾರನಲ್ಲ....ನಮ್ಮೂರಿನ ರೈತರೂ ಬ್ರಾಹ್ಮಣರೂ ದನಗಳನ್ನು ಹೆಚ್ಚಾಗಿ ಪೋಲಿ ಬಿಡುವುದರಿಂದ ರೈತರು ಆ ದನಗಳನ್ನು ಕಾಯುವುದಕ್ಕೆ ಪ್ರತಿ ವರ್ಷವೂ ಒಬ್ಬೊಬ್ಬ 'ತಳವಾರ'ನನ್ನು ಗೊತ್ತುಮಾಡುತ್ತಾರೆ." (ಪುಟ ೧೦೩) ಕರಿಯ ತಳವಾರನಾಗಿ ತನ್ನ ಸ್ಥಾನವನ್ನು ದುರುಪಯೋಗ ಮಾಡಿಕೊಳ್ಳುತ್ತಾನೆ. "ಕರಿಯನು ತಳವಾರನಾಗುವುದಕ್ಕಿಂತ ಮುಂಚೆ ಇದ್ದ ತಳವಾರರು ಸಾಧಾರಣವಾಗಿ ಯಾರ ದನಗಳನ್ನೂ ಮನೆಗೆ ಹೊಡೆದುಕೊಂಡು ಹೋಗಿ ಕಟ್ಟಿಹಾಕಿಕೊಳ್ಳುತ್ತಿರಲಿಲ್ಲ....ಆದರೆ ಕರಿಯನು ತಳವಾರನಾದ ಮೇಲೆ ಅವನ ಕೊಟ್ಟಿಗೆಯಲ್ಲಿ ಹೆಚ್ಚಾಗಿ ದನಗಳು ಸೇರಲು ಪ್ರಾರಂಭವಾಯಿತು." (ಪುಟ ೧೦೮)

ಬಸವಯ್ಯನನ್ನು ನಾವು ಕಾಣುವುದು ರೈತರಲ್ಲಿ ಒಬ್ಬನಾಗಿ. ಅವನ ತಂದೆ ನಿಷ್ಠುರಿಯಾಗಿರುವವನು, ನೂರಾರು ಖಂಡುಗ ಭತ್ತ ಬೆಳೆಯುತ್ತಾನೆ, ಲೇವಾದೇವಿಯನ್ನೂ ಮಾಡುತ್ತಾನೆ. ಆದರೆ ಅವನು ಆಳುಗಳಲ್ಲಿ ಸೇರಿಹೋಗುತ್ತಾನೆ. ಎಂದರೆ, ಪುಟ್ಟಮಲ್ಲಿಗೆ ಬಸವಯ್ಯ ಇಬ್ಬರೂ ಒಂದು ಗುಂಪಿನಲ್ಲಿ ಸಹಜವಾಗಿ ಬೆರೆತುಹೋಗುವ ವ್ಯಕ್ತಿಗಳಾಗಿ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತಾರೆ. ಈ ಗುಂಪಿನ ವಿಷಯ ಮೊದಲೇ ಕಥೆಗಾರರು ಹೀಗೆಂದಿದ್ದಾರೆ: "ಅವರು ಪೈರನ್ನು ಕುಯ್ಯುವುದನ್ನು ನೋಡಿದರೆ ಅದು ಒಂದು ವಿಧವಾದ ಆಟದಂತೆ ತೋರುವುದೇ ಹೊರತು, ಕಷ್ಟವಾದ ಕೆಲಸದಂತೆ ತೋರುವುದಿಲ್ಲ. ಆಗ ಅವರ ನಗುವೇನು, ಉತ್ಸಾಹವೇನು, ತಮ್ಮ ಕಷ್ಟದಿಂದ ಬೆಳೆದ ಪೈರನ್ನು ಕುಯ್ಯುತ್ತಿರುವಾಗ ಉಂಟಾಗುವ ಸ್ವಾವಲಂಬನದ ಹೆಮ್ಮೆಯೇನು! ಭೂಮಿತಾಯಿಯೂ ತೋಳಬಲವೂ ಇರುವವರಿಗೆ ಹೆದರಿಕೊಳ್ಳುವುದಿಲ್ಲವೆಂದುಕೊಳ್ಳುತ್ತಿರುವ ಅವರ

ಮುಖದ ಧೈರ್ಯವೇನು !" (ಪುಟ ೧೦೯)

ಎಂದರೆ, 'ಪುಟ್ಟಮಲ್ಲಿಗೆ'ಯಲ್ಲಿ ಕರಿಯ ಪುಟ್ಟಮಲ್ಲಿಗೆಯನ್ನು ಮದುವೆಯಾಗುವ ಪ್ರಯತ್ನ ಬರಿಯ ಎರಡು ವ್ಯಕ್ತಿಗಳ ಸಂಬಂಧದ ಪ್ರಶ್ನೆ ಎಂದು ನಮಗನ್ನಿಸುವುದಿಲ್ಲ. ಒಂದು ಗುಂಪಿನಲ್ಲಿ ಸೇರಿದ್ದು ಅಹಂಭಾವದಿಂದ ಗುಂಪನ್ನು ತನ್ನ ಪ್ರತಿಷ್ಠೆಗೆ ಬಳಸಿಕೊಳ್ಳ ಬಯಸುವ, ಗುಂಪಿನ ಸಾಮರಸ್ಯವನ್ನು ಕದಡಲು ಸಿದ್ಧವಾಗಿರುವ ವ್ಯಕ್ತಿ—ಗುಂಪಿನಲ್ಲಿ ಸಂತೋಷವಾಗಿ ಬೆರೆತು ಅದರ ಲವಲವಿಕೆಗೆ ಕೊಡುಗೆ ಕೊಟ್ಟು ಅದರಿಂದ ಸಂತೋಷಪಡೆಯುವ ವ್ಯಕ್ತಿ ಇವರ ಸಂಬಂಧದ ಪ್ರಶ್ನೆಯಾಗುತ್ತದೆ. ಬಸವಯ್ಯನೂ ಪುಟ್ಟಮಲ್ಲಿಗೆಯಂತೆ ಗುಂಪಿನಲ್ಲಿ ಸೇರಿ ಸಂತೋಷ ಕೊಡಬಲ್ಲ—ಪಡೆದುಕೊಳ್ಳಬಲ್ಲ ವ್ಯಕ್ತಿ.

'ಪುಟ್ಟಮಲ್ಲಿಗೆ'ಯಲ್ಲಿ ಕಥೆಯ ಅಂತ ಬಹು ಕಡಮೆಯಾದವರೂ ಇದು ಕಳಪೆಯ ಕಥೆ ಎನ್ನಿಸುವುದಿಲ್ಲ. ಓದಿದ ಮೇಲೆ ಸಂಕೀರ್ಣವಾದ ಅನುಭವ ದೊರೆಯದಿದ್ದರೂ ಒಂದು ವಿಧವಾದ ತೃಪ್ತಿ ದೊರೆಯುತ್ತದೆ. ಇದಕ್ಕೆ ಕಾರಣ, ಬಸವಯ್ಯ ಪುಟ್ಟಮಲ್ಲಿಗೆಯನ್ನು ಮದುವೆಯಾದುದರಿಂದ ಪ್ರೇಮಕ್ಕೆ ವಿಜಯ ದೊರೆಯಿತು ಎಂಬ ಸಮಾಧಾನ ಮಾತ್ರವಲ್ಲ. ಸಮಷ್ಟಿ ಜೀವನದ ಸಂತೋಷವನ್ನೂ ಶಾಂತಿಯನ್ನೂ ನಾಶಗೊಳಿಸುವ ಅಹಂಭಾವವನ್ನು ಸಮಷ್ಟಿ ಜೀವನ ಮುರಿಯಲು ಶಕ್ತವಾಗುವ ಅನುಭವವನ್ನು ಕಥೆ ಒಳಗೊಂಡಿರುವುದು. ಬಸವಯ್ಯ ತನ್ನ ಅಹಂಭಾವಕ್ಕೆ ಕಡಿವಾಣ ಹಾಕಿ ಸಮಷ್ಟಿ ಜೀವನದಲ್ಲಿ ಭಾಗವಹಿಸಬಲ್ಲವನು. ತಳವಾರನ ಸಂಸ್ಥೆಯಂತೆ ಬುಡಬುಡಿಕೆ ದಾಸಯ್ಯಗಳದೂ, ಅದೃಶ್ಯ ಶಕ್ತಿಗಳ ಮನಸ್ಸನ್ನು ತಿಳಿದವನೆಂಬ ಅಯ್ಯನದೂ ಸಂಸ್ಥೆಗಳೇ. ಸಮಷ್ಟಿ ಜೀವನ ಇವನ್ನು ಉಳಿಸಿಕೊಂಡಿದೆ. ಕಾರಣ—ಇವು ಜನರಿಗೆ ವಿಶ್ವಾಸವನ್ನೂ ಧೈರ್ಯವನ್ನೂ ಕೊಡುತ್ತವೆ. ("ಮುದುಕಿಯ ಶಕುನ ಕೇಳುವುದರಲ್ಲಿ ಹಳ್ಳಿಯವರಿಗೆಲ್ಲಾ ಬಹಳ ಉತ್ಸಾಹವುಂಟಾಗಿತ್ತು. ಮುದುಕಿಯು ಸಾಧಾರಣವಾಗಿ ಅವರವರ ಸ್ವಭಾವಗಳನ್ನು ಅರಿತು ಎಲ್ಲರಿಗೂ ಒಳ್ಳೆಯ ಶಕುನಗಳನ್ನೇ ಹೇಳುತ್ತಿದ್ದಳು. ಇದರಿಂದ ಜನರಿಗೆ ಅವಳಲ್ಲಿ ಕುತೂಹಲದ ಜತೆಗೆ ವಿಶ್ವಾಸವೂ ಉಂಟಾಯಿತು.") (ಪುಟ ೧೧೮) (ನಮ್ಮ ವೈಯಕ್ತಿಕ ಅಭಿಪ್ರಾಯ ಏನೇ ಇರಲಿ) ಕಥೆಯಲ್ಲಿ ಇದು ರೂಪುಗೊಂಡಿರುವಂತೆ, ಇದು ಅಂತಹ ಒಳ್ಳೆಯದೂ ಅಲ್ಲದ ಕೆಟ್ಟದೂ ಅಲ್ಲದ, ಆದರೆ ಜನಕ್ಕೆ ಉತ್ಸಾಹ, ಧೈರ್ಯಗಳನ್ನು ಕೊಡುವುದರಿಂದ ಸಹ್ಯವಾದ ಸಂಸ್ಥೆ. ಅನೇಕರಿಗೆ ಇದರಲ್ಲಿ ನಂಬಿಕೆ ಇಲ್ಲ. ಬಸವಯ್ಯ "ಇವಳೇನು ನಿಜಾನೇ ಹೇಳ್ತಾಳೋ ಸುಳ್ಳೇ ಹೇಳ್ತಾಳೋ ನನಗಂತೂ ತಿಳಿಯದು" (ಪುಟ ೧೧೫) ಎನ್ನುತ್ತಾನೆ. ಕರಿಯನಿಗೂ ಅವಳು ದೈವಪ್ರೇರಿತಳು ಎಂಬ ಪೂಜ್ಯ ಭಾವನೆಯೇನೂ ಇಲ್ಲ, ಇದ್ದಿದ್ದರೆ ರೂಪಾಯಿಯಿಂದ ಅವಳ ನಾಲಗೆಯನ್ನು ಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಎಂದರೆ ಪ್ರತಿಸ್ಪರ್ಧಿಗಳಿಬ್ಬರಿಗೂ ಈ ಸಂಸ್ಥೆಯಲ್ಲಿ ನಂಬಿಕೆ ಇಲ್ಲ. ಆದರೆ ಕರಿಯ ಇದನ್ನು ಕೆಡಿಸಿ ತನ್ನ ಸ್ವಾರ್ಥಕ್ಕೆ ಬಳಸಲು ಪ್ರಯತ್ನಿಸುತ್ತಿದ್ದಾನೆ. ಎಂದರೆ ಮುಟ್ಟಿದುದನ್ನೆಲ್ಲ ಮೈಲಿಗೆ ಮಾಡುವ, ಹೊಲಸುಗೆಡಿಸುವ ಕೈ ಅವನದು.

ಅವನ್ನೇ ಬಳಸಿ ಬಸವಯ್ಯ ಅವನನ್ನು ಸೋಲಿಸುತ್ತಾನೆ. ಈ ಸೋಲು ವೈಯಕ್ತಿಕವಾಗಿ ಕರಿಯನದು ಮಾತ್ರವಲ್ಲ, ಸಮಷ್ಟಿ ಜೀವನವನ್ನು ಹಾಳುಗೆಡಹುವ ಅವನ, ಪೂಜಾರಿಯ ಮತ್ತು ಶಕುನ ಹೇಳುವ ಮುದುಕಿಯ ಸೋಲೂ ಹೌದು. ಈ ಪ್ರಯತ್ನ ಸೋತು ಸಮಷ್ಟಿ ಜೀವನ ತನ್ನ ಶಾಂತಿಯನ್ನು ಕಾಪಾಡಿಕೊಂಡಿದೆ.

ಕಥೆಯನ್ನು ಇಬ್ಬರು ಪ್ರಣಯಿಗಳ ಕಥೆ ಎಂದು ಮಾತ್ರ ನೋಡದೆ ಸಮಷ್ಟಿ ಜೀವನ-ವ್ಯಕ್ತಿ ಜೀವನಗಳ ಸಂಬಂಧದ ಚಿತ್ರ ಎಂದು ಗುರುತಿಸಿದಾಗ ಇದರಲ್ಲಿ ಹಾಸ್ಯಕ್ಕೆ ನೆಲೆಯಾದ ವಿವಾಹ ವೈಖರಿಗೂ ಅರ್ಥ ಬರುತ್ತದೆ. ವಿವಾಹದ ಸಮಯದಲ್ಲಿ ಹೇಳುವ ಮಂತ್ರಗಳ ಅರ್ಥ ವಧೂವರರಿಗಾಗಲಿ, ಅಲ್ಲಿರುವ ಬಹುಮಂದಿಗಾಗಲಿ ಆಗುವುದಿಲ್ಲ. ಆದರೆ ಈ ಮಂತ್ರತಂತ್ರಗಳಿಲ್ಲದೆ ನಡೆದ ವಿವಾಹವನ್ನು ಒಕ್ಕಲಿಗ ಸಮುದಾಯ ಒಪ್ಪುವುದಿಲ್ಲ. ಇದಕ್ಕೆ ಕಾರಣ, ಈ ಮಂತ್ರತಂತ್ರಗಳು ಗಂಡು-ಹೆಣ್ಣು ಜೊತೆಯಾಗುವುದಕ್ಕೆ ಒಂದು ಆಸ್ತಿಭಾರವನ್ನೂ ಆವರಣವನ್ನೂ ಸೃಷ್ಟಿಸುತ್ತವೆ ಎಂಬುದು. ಗಂಡು-ಹೆಣ್ಣಿಗೂ ಭದ್ರತೆಯ ಭಾವ ಬರುತ್ತದೆ. ಸಮಷ್ಟಿ ಜೀವನ-ವ್ಯಕ್ತಿ ಜೀವನದ ಆಧಾರವೇ ಇದು. ಸಮಷ್ಟಿಯು ವ್ಯಕ್ತಿಗೆ ಭದ್ರತೆ ಮತ್ತು ಶಾಂತಿಗಳನ್ನು ಕಲ್ಪಿಸಿಕೊಡಬೇಕು, ಇದನ್ನು ಮಾಡಲು ವ್ಯಕ್ತಿ ಸಮಷ್ಟಿಗೆ ನೆರವಾಗಬೇಕು. ಇಲ್ಲವಾದರೆ ಸಮಷ್ಟಿ ಜೀವನಕ್ಕೆ ಭಂಗ ಬರುತ್ತದೆ.

ಬಸವಯ್ಯನ ಮದುವೆಯ ಊಟದಲ್ಲಿ ಮಾದನು ಎದ್ದು ನಿಂತು, "ಹನ್ನೆರಡು ಹಳ್ಳಿಯ ಮಾನ್ಯರಿರಾ, ನಂದೊಂದು ನ್ಯಾಯ ಅಯ್ತೆ" (ಪುಟ ೧೬೮) ಎನ್ನುತ್ತಾನೆ. ಎಲ್ಲರ ಎದುರಿನಲ್ಲಿ ಕರಿಯನ ವಿಚಾರಣೆ ನಡೆದು ಕರಿಯ ಕ್ಷಮಾಪಣೆ ಕೇಳುತ್ತಾನೆ, ದಂಡ ತೆರುತ್ತಾನೆ. ಸಮಷ್ಟಿ ಜೀವನ ತನ್ನ ಅಧಿಕಾರವನ್ನು ಮತ್ತೆ ಸ್ಥಾಪಿಸಿದೆ, ತನ್ನ ಮೌಲ್ಯಗಳನ್ನು ಎತ್ತಿ ಹಿಡಿದಿದೆ.

ಸಾಮಾನ್ಯವಾಗಿ ಗೊರೂರರ ಕಥೆಗಳಲ್ಲೆಲ್ಲ ವ್ಯಕ್ತಿಯ ಅಹಂಭಾವದ ಸೋಲು ವಸ್ತು, ಕಥೆಯ ಗಮನ ಶಾಂತಿಯ ಕಡೆಗೆ. (ಈ ರೀತಿಯಲ್ಲಿ ಇವು 'ಶ್ರೀನಿವಾಸ'ರ ಕಥೆಗಳನ್ನು ನೆನಪಿಗೆ ತರುತ್ತವೆ, ಆದರೆ 'ಶ್ರೀನಿವಾಸ'ರ ಕಥೆಗಳಲ್ಲಿ ಸಮಾಜ ಇಷ್ಟು ಸ್ಪಷ್ಟವಾಗಿ ರೂಪುಗೊಳ್ಳುವುದಿಲ್ಲ. ಶಾಂತಿಯೇ ಕಥೆಯಾಗಿದೆ ಎನ್ನಿಸುವಂತಹ 'ಮಂತ್ರೋದಯ'ದಲ್ಲಿ ಬೆಳಕೆಲ್ಲ ವ್ಯಕ್ತಿಯ ಮೇಲೆಯೇ.) ವ್ಯಕ್ತಿಯ ವೈಯಕ್ತಿಕತೆಯು ಅರಿವು ಸಮಷ್ಟಿ ಜೀವನದ ಶ್ರೀಮಂತಿಕೆಯನ್ನು ಹೆಚ್ಚಿಸಬಲ್ಲದೆಂಬುದನ್ನು ಅವರು ಗುರುತಿಸುತ್ತಾರೆ, ಸಮಷ್ಟಿ ಜೀವನದ ಶ್ರೀಮಂತಿಕೆಯನ್ನು ಹೆಚ್ಚಿಸಬಲ್ಲ ವೈಯಕ್ತಿಕತೆಯನ್ನು ಸಂಭ್ರಮದಿಂದ ಅವರು ಚಿತ್ರಿಸುತ್ತಾರೆ. 'ಮಲ್ಲಿಗೆಹಳ್ಳಿಯಲ್ಲಿ ಬಯಲಾಟ'[1]ದಲ್ಲಿ ಇಂತಹ 'ವೈಯಕ್ತಿಕತೆಗಳು' ಸೇರಿ ಸಂತೋಷದ ಆವರಣವನ್ನು ನಿರ್ಮಿಸುವುದನ್ನು ಕಾಣುತ್ತೇವೆ. ಇಲ್ಲಿ ಮತ್ತೆ ಸಮಾಜದ ಜೀವನದ ಬಗೆಯನ್ನು ಕಾಪಾಡಿ ಮೌಲ್ಯಗಳನ್ನು ಪೀಳಿಗೆಯಿಂದ ಪೀಳಿಗೆಗೆ ಉಳಿಸಿ ಸಾಗಿಸುವ ಪರಂಪರೆಯ ಚಿತ್ರದಿಂದಲೇ ಕಥೆ ಪ್ರಾರಂಭ.

[1] 'ಗರುಡಗಂಬದ ದಾಸಯ್ಯ', ಪುಟ ೨೯-೪೩.

(ಆಂಜನೇಯನ ಪಾತ್ರವನ್ನು ಬಹು ಸೊಗಸಾಗಿ ಮಾಡುವನೆಂದು ಪ್ರಸಿದ್ಧನಾಗಿರುವವನು ಒಬ್ಬ ಮುಸಲ್ಮಾನ.) ಈ ಬಯಲಾಟದ ಅಭಿನಯ ಉದ್ದಕ್ಕೂ ಹಾಸ್ಯಾಸ್ಪದವಾಗುತ್ತದೆ. ರಾಮನ ಕುಣಿತ ಅಸಂಬದ್ಧ. ಅವನು ಲಕ್ಷ್ಮಣನು ಮಾತನಾಡುವುದಕ್ಕೆ ಅವಕಾಶಕೊಡ. ತಾರೆ ತಾನು ಹೆಂಗಸೆಂಬುದನ್ನೂ, ಲಕ್ಷ್ಮಣನಿಗೆ ವಿಧೇಯತೆಯನ್ನು ತೋರಿಸಿ ಸುಗ್ರೀವನ ವಿಷಯದಲ್ಲಿ ಅವನು ದಯೆತೋರಿಸುವಂತೆ ಬೇಡಿಕೊಳ್ಳಲು ಬಂದವಳೆಂಬುದನ್ನೂ ಮರೆತಂತೆ ತೋರಿತ್ತು. ಸುಗ್ರೀವ ಹಸಿರು ಕೆಂಪು ಬಣ್ಣದ ಪಟ್ಟಿಗಳಿಂದ ಕೂಡಿದ್ದ ಅಂಗಿಯನ್ನೂ, 'ಇಜಾರ'ವನ್ನೂ, ನಡೆಯದೆ ಇರುವ ರಿಸ್ಟ್ ವಾಚನ್ನೂ ಧರಿಸಿದ್ದಾನೆ. ಅವನದು ದೈಗುಣಿತ, ಪಿಶಾಚ ಕುಣಿತ. ಪದೇ ಪದೇ 'ಜಗನ್ನಾಥ' ಎಂಬುದಾಗಿ ಭಯಂಕರವಾದ ಧ್ವನಿಯಲ್ಲಿ ಕೂಗುತ್ತಾನೆ. ಇದನ್ನು ಕೇಳಿದಾಗಲೆಲ್ಲ ತೂಕಡಿಸುತ್ತಿದ್ದ ರಾಮನು ಬೆಚ್ಚಿ ಬೀಳುತ್ತಾನೆ. ಆಂಜನೇಯನ ವೇಷ ಹಾಕಿದ ಆಚಾರ್ರು ರಾಮನನ್ನು "ನಿರುಪಮ, ನಿರಾನಂದ" (ಪುಟ ೩೮) ಎಂದು ಹೊಗಳಲು ಪ್ರಾರಂಭಿಸಿ, "ನಿರ್ದಯ, ನಿರ್ಲಜ್ಜ" (ಅಲ್ಲೇ) ಎಂಬ ಸ್ಥಿತಿಗೆ ತಲಪುತ್ತಾರೆ. ಇಷ್ಟೆಲ್ಲ ಆದರೂ, ಪ್ರತಿಯೊಬ್ಬರೂ ಪ್ರಾಧಾನ್ಯ ಬಯಸಿ ಬಂದ ದೃಷ್ಟಿಯಿಂದ ಬಯಲಾಟದ ಸೊಗಸಿಗೆ ಭಂಗ ತಂದರೂ, ಇಡೀ ಹಳ್ಳಿ ಬಯಲಾಟವನ್ನು ನೋಡಿ ನಲಿಯುತ್ತದೆ. ಭಾಗವಹಿಸಿದವರ ತಪ್ಪುಗಳನ್ನು ಮರೆಯುತ್ತದೆ, ಕೊರತೆಗಳನ್ನು ತುಂಬಿಕೊಡುತ್ತದೆ.

ಅಹಂಭಾವವನ್ನು ಸಂಪೂರ್ಣವಾಗಿ ಕರಗಿಸಿಬಿಡುವುದು ಗೊರೂರರ ಕಥೆಗಳಲ್ಲಿ ವ್ಯಕ್ತಿಯ ಸಾಧನೆಯ ಗೌರೀಶಂಕರ. ಅಹಂಭಾವವನ್ನು ಹೀಗೆ ಅರಗಿಸಿಕೊಂಡಿರುವವರಿಗೆ ಸಂತೋಷವೂ ಇಲ್ಲದ ದುಃಖವೂ ಇಲ್ಲದ ಒಂದು ವರ್ಣನಾತೀತ ಮನಸ್ಥಿತಿ. ಈ ಸ್ಥಿತಿಯ ಮೂರ್ತಿಗಳಾಗಿ ಇಬ್ಬರನ್ನು ಗಮನಿಸಬಹುದು. ಒಬ್ಬ ಬೆಸ್ತರ ಕರಿಯ.[1] ಅವನ ಮನಸ್ಥಿತಿ ಅವನ ದೇಹದ ಸ್ಥಿತಿಯಲ್ಲಿ ಪ್ರಕಟವಾಗಿದೆ—ಅವನು ಕಾಲಾತೀತ. ಅವನಿಗೆ ಮುಪ್ಪೂ ಇಲ್ಲ, ಬಾಲ್ಯವೂ ಇಲ್ಲ. ಅವನಿಗಿರುವುದು ಯೌವನ ಒಂದೇ. "ನಾನು ನೋಡಿದ ನಲವತ್ತು ವರುಷದಿಂದಲೂ ಅವನು ಒಂದೇ ಸಮನಾಗಿದ್ದಾನೆ. ಒಂದೊಂದು ಸಲ ಎಂಬತ್ತು ವಯಸ್ಸಿನ ಮುಪ್ಪಿನ ನಮ್ಮ ತಂದೆಯವರೂ ಸಹ ತಾವು ನೋಡಿದಂದಿನಿಂದ ಕರಿಯ ಹೀಗೆಯೆ ಇದ್ದಾನೆ" (ಪುಟ ೫) ಎಂದು ಹೇಳಿದ್ದುಂಟು. ಅವನು ಕಪ್ಪು—ಆದರೆ "ಕರಿಯನ ಕಪ್ಪು ಆ ಭಗವಂತನ ಸಂಪೂರ್ಣ ದೋಷರಹಿತ ಕಲೆ." (ಅಲ್ಲೇ) "ಬ್ರಾಹ್ಮಣರು ಕಾಲರ ಪ್ಲೇಗಿನ ಭಯದಿಂದ ಸಹಸ್ರ ನಾಮಾರ್ಚನೆ ಪೊಂಗಲು ಕೈಂಕರ್ಯಾದಿ ಭಗವತ್ ಸೇವೆಯಲ್ಲಿ ತೊಡಗಿರುವಾಗ, ಒಕ್ಕಲಿಗರು ಕನ್ನಂಬಾಡಿ ಅಮ್ಮ, ಕತ್ತರಿಗಟ್ಟದ ಅಮ್ಮಗಳಿಗೆ ತಳಿಗೆ ಪನಿವಾರಗಳನ್ನು ಹೊರುತ್ತಿರುವಾಗ ಕರಿಯ ತನ್ನ ಪಾಡಿಗೆ ತಾನು ಮೀನು ಹಿಡಿಯುವುದರಲ್ಲಿಯೇ ನಿರತನಾಗಿರುತ್ತಾನೆ." (ಪುಟ ೬) ಅವನು ಏನನ್ನೇ ಮಾಡಲಿ ಅಚ್ಚುಕಟ್ಟಾಗಿ ಮಾಡುತ್ತಾನೆ. "ಅವನು ಮಾಡುವ ನೂಲು ಉಕ್ಕಿನ ತಂತಿಯಂತೆ ಗಟ್ಟಿ. ಆ ನೂಲನ್ನು ನೋಡಿ ನಮ್ಮೂರ ಪುರೋಹಿತರು, 'ಜನಿವಾರಕ್ಕೆ

[1] 'ಬೆಸ್ತರ ಕರಿಯ', ಪುಟ ೫–೧೪.

ಈ ತರಹ ನೂರು ಮಾಡಬೇಕಯ್ಯ. ಒಳ್ಳೆ ಕೇಣ್ಣೆ ಹಾಗೆ. ಅವರಿಗೇನು ಗೊತ್ತಾಗುತ್ತದೆ — ಇವ ಬೆಸ್ತ. ಇವನ ಕೈಲಿ ಜಸಿವಾರ ಮಾಡಿಸೋಕೆ ಆಗದು' ಎನ್ನುತ್ತಾರೆ." (ಪುಟ ೯) ಮೊದಲ ಹೆಂಡತಿಯಿಂದ ಐದು ಜನ ಮಕ್ಕಳು ಕರಿಯನಿಗೆ. ಅವರು ತೀರಿಕೊಂಡ ಮೇಲೆ ಎರಡನೆ ಹೆಂಡತಿಯಿಂದ ಒಂಬತ್ತು ಜನ ಮಕ್ಕಳು. ಅವಳೂ ಸತ್ತಳು. ಕಥೆ ಹೇಳುವವರಿಗೆ ತೋರಿತು, ಇನ್ನು ಕರಿಯನ ತೋಳು ಮುಗಿಯಿತು, ಅವನು ಸೋತ ಎಂದು. ಕೆಲವು ದಿನಗಳ ನಂತರ ಅವನ ಮನೆಗೆ ಹೋದಾಗ, "ಕರಿಯ ಎಂಬ ನನ್ನ ಕೂಗಿಗೆ ಉತ್ತರವಾಗಿ ಒಳಗಿನಿಂದ ಒಬ್ಬ ಹೆಂಗಸು ಬಂದಳು. ಅವಳು ಕರಿಯನ ಮೂರನೆಯ ಹೆಂಡತಿ. ಕರಿಯ ಅವಳನ್ನು ಮದುವೆಯಾಗಿ ನಾಲ್ಕು ದಿನಗಳಾಗಿದ್ದುವು." (ಪುಟ ೧೩) ಕರಿಯನ ಇಬ್ಬರು ಹೆಂಡತಿಯರ ಸಾವು, ಕಥೆ ಹೇಳುವವರು ಅವನ ಮನೆಗೆ ಹೋದಾಗ ಕಾಣುವ "ಒಂದು ದೊಡ್ಡ ಕೊಪ್ಪಲನ್ನೇ ಸ್ಥಾಪಿಸಲು ಸಾಕಾಗುವಷ್ಟು ಇದ್ದ ಆತನ ಸಣ್ಣ ದೊಡ್ಡ ಮಕ್ಕಳು", ಇವರ ಸಂಖ್ಯೆಯನ್ನು ಬೆಳೆಸಲು ಕಾಲಿಟ್ಟಿರುವ ಮೂರನೆಯ ಹೆಂಡತಿ—ಇವರೆಲ್ಲ ಕರಿಯನ ಕಾಲಾತೀತತೆಯನ್ನು ಕಣ್ಣ ಮುಂದೆ ಮೂರ್ತವಾಗಿ ನಿಲ್ಲಿಸುತ್ತಾರೆ. 'ನಾಯಿ ಬಾಲ'[1]ದ ನಾಯಕ ಎಷ್ಟರಮಟ್ಟಿಗೆ ಪ್ರತ್ಯೇಕತೆಯನ್ನು ಕಳೆದುಕೊಂಡಿದ್ದಾನೆಂದರೆ ಅವನಿಗೆ ತನ್ನ ನಿಜವಾದ ಹೆಸರೇ ತಿಳಿಯದು. (ಮನುಷ್ಯನ ಹೆಸರೇ ಅಲ್ಲವೇ ಅವನ ಪ್ರತ್ಯೇಕತೆಯನ್ನು ಸಾರಿ ಹೇಳುವುದು?) ಅವನ ನಿಜವಾದ ಹೆಸರು ರಂಗ, ಅವನನ್ನು ಜನ ಕರೆಯುವುದು ತೂರ ಎಂದು. ನಿನ್ನ ನಿಜವಾದ ಹೆಸರೇನು? ಎಂದು ಕಥೆ ಹೇಳುವವರು ಕೇಳಿದಾಗ, "ಮನೆಯಲ್ಲಿ ಕೇಳಿಕೊಂಡು ಬರುತ್ತೇನೆ" (ಪುಟ ೩೩) ಎಂದು ಹೇಳುತ್ತಾನೆ. ಹತ್ತನೆಯ ವಯಸ್ಸಿನಾಚೆ ಅವನ ದೇಹ ಬೆಳೆದಿಲ್ಲ. ಬುದ್ಧಿಯೂ ಬೆಳೆಯಲಿಲ್ಲ. ತಂದೆ ಇಲ್ಲದುದರಿಂದ ಚಿಕ್ಕಪ್ಪನ ಮನೆಯಲ್ಲಿದ್ದಾನೆ. ಚಿಕ್ಕಪ್ಪ ಅವನನ್ನು ಜೀತಕ್ಕಿಟ್ಟು, ಹಣವನ್ನೆಲ್ಲ ತಾನು ಕುಡಿಯಲು ಉಪಯೋಗಿಸುತ್ತಾನೆ. ತೂರ ಎಲ್ಲರ ಕೈಯಲ್ಲಿ "ಅಪ್ರಯೋಜಕ, ಕೈಲಾಗದವನು, ಸಡ್ಡ ಸುಬಡೆ" (ಪುಟ ೩೫) ಎನಿಸಿಕೊಂಡಿದ್ದಾನೆ. ಕಥೆ ಹೇಳುವವರ ಮನೆಯಲ್ಲಿ ಕೆಲಸಕ್ಕಿರುವ ತೂರ ಏನಿದ್ದರೂ ಎರಡು ಮೂರು ದನಗಳನ್ನು ನೋಡಿಕೊಳ್ಳಬೇಕು, ಅಷ್ಟೆ. ಎಲ್ಲರೂ ಅವನನ್ನು ಬಯ್ಯುವವರೇ: ಶಾನುಭೋಗರು "ಹಾಳು ಹೊಲೆಯ ಮುಂಡೇಗಂಡ.... ಹಾಸಿಸ್ತ ಮುಂಡೇಗಂಡ" (ಪುಟ ೩೯) ಎಂದು ಬಯ್ಯುತ್ತಾರೆ: ಮಡಿವಂತಿಕೆಯ ಮೂರ್ತಿ ಕಾವೇರಮ್ಮ ಅವನನ್ನು ಬಯ್ಯುತ್ತಾರೆ, ಮನೆಯ ಬಾಗಿಲಿನಲ್ಲಿ ಸಂಧ್ಯಾವಂದನೆ ಜಪ ಮಾಡುತ್ತಿರುವ ಪುರೋಹಿತರು ಅವನನ್ನು ಬಯ್ಯುತ್ತಾರೆ. ಅವನು ದನ ಮೇಯಿಸಲು ಹೋಗುವಾಗ ತಮ್ಮ ದನಗಳನ್ನೂ ಸೇರಿಸಿಬಿಡುತ್ತಾರೆ. "ಮಹಾ ಇವ ಮಾಡೋದೇನು? ಇವನ ಕೈಲಿ ಒಂದು ಕರು ತಡೆಯೋಕೆ ಆಗ್ತದ್ಯೆ? ಸಡ್ಡ ಮುಂಡೇಗಂಡ. ದನಗಳ ಹಾಡಿಗೆ ದನ ಹೋಗ್ತದೆ ಬರ್ತದೆ" (ಪುಟ ೩೮) ಎಂದೂ ಎನ್ನುತ್ತಾರೆ. ಅವನು ಪ್ಲೇಗ್ ಎಂದು ಮಲಗಿದಾಗ, ಅವರ ದಿನಚರಿಯೆಲ್ಲ ಅಸ್ತವ್ಯಸ್ತ. ತುರುಕರ ಗೋರಿಯ ಮೂಲಕ ಹೋದರೆ ಸ್ನಾನ ಮಾಡ

[1] 'ಬೆಸ್ತರ ಕರಿಯ', ಪುಟ ೩೨–೪೫.

ಬೇಕೆಂದು ವಿಧಿಸಿದ್ದ ಕಾವೇರಮ್ಮನೇ ಈಗ ತುರುಕರ ಗೋರಿಯಲ್ಲಿ ಮೇಯುತ್ತಿರುವ ಹಸುವಿನ ಹಗ್ಗ ಹಿಡಿದುಕೊಂಡು ಕುಳಿತಿರುತ್ತಾರೆ. ಶಾಸ್ತ್ರಾಚಾರ್ರಿಗೆ ಹೊಳೆಯ ಸ್ನಾನವಿಲ್ಲ. ಪುರೋಹಿತರಿಗೆ ಜಪತಪವಿಲ್ಲ. ತೂರ ಹಿಂದಕ್ಕೆ ಬರುತ್ತಾನೆ. ಕಥೆ ಹೇಳುವವರು, "ಇವನಿಗೆ ರೋಗ ಬಂದುದು ಒಳ್ಳೆಯದಾಯಿತು. ಇನ್ನಾದರೂ ಜನರಿಗೆ ಇವನ ಬೆಲೆ ತಿಳಿಯುತ್ತದೆ" (ಪುಟ ೪೪) ಎಂದುಕೊಳ್ಳುತ್ತಾರೆ. ತೂರ ದನಗಳನ್ನು—ಮೂರು ಕಾಸು ಸಂಬಳ ಕೊಡದೆ ದನಗಳನ್ನು ಕಳುಹಿಸುವವರ ದನಗಳನ್ನೂ—ಬಿಟ್ಟುಕೊಂಡು, ಪುರೋಹಿತರ ಬಾಗಿಲಿಗೆ ಬರುತ್ತಲೇ, ಪುರೋಹಿತರು, "ಹಾಳು ಮುಂಡೆಗಂಡ, ಈ ಹೊಲೆಮ್ಮೈಲಿಗೆ ನಮಗೆ ಹೋಗುವಂತೆಯೇ ಇಲ್ಲ" (ಪುಟ ೪೪) ಎಂದು ಸಿಡಿಯುತ್ತಾರೆ.[1] ಚಿತ್ತಶುದ್ಧಿ, ಮನಶ್ಶಾಂತಿಗಳಿಗೆ ಮಾರ್ಗಗಳಾದ ಸ್ನಾನ, ಮಡಿ, ಜಪತಪಗಳನ್ನು ಅನುಸರಿಸುತ್ತಿರುವ ಬಲ್ಲವರ ಮಧ್ಯೆ ದೇಹ-ಮನಸ್ಸುಗಳ ಬೆಳವಣಿಗೆ ನಿಂತ ತೂರ. ಇವನು ಸಾವಿನ ಅಂಚನ್ನು ಮುಟ್ಟಿ ಬಂದವನು. ತನ್ನ ಹೆಸರಿನ ಮಮತೆಯೂ ಇಲ್ಲದವನು. "ನಾನು ಎರಡು ಮೂರು ದಿನ ರಂಗ ಎಂದು ಕೂಗಿದೆ. ತೂರನು ಜವಾಬು ಕೊಟ್ಟಾಗ ಕೊಟ್ಟ, ಇಲ್ಲದಾಗ ಇಲ್ಲ. ಕೊನೆಗೆ ನಾನೂ ಎಲ್ಲರ ದಾರಿ ಹಿಡಿದೆ. ರಂಗನೆಂಬ ಹೆಸರಿನಿಂದ ಎರಡು ಮೂರು ದಿನ ನಾನು ಮೆರೆಯಿಸಲು ಪ್ರಯತ್ನಿಸಿದ ತೂರ, ತೂರನಾಗಿಯೇ ಶೋಭಿಸತೊಡಗಿದ." (ಪುಟ ೩೩)

ಕರಿಯನಂತೆ, ತೂರನಂತೆ ಬಾಳಿಗೆ ಅಂಟಿಯೂ ಅಂಟದಂತಿರುವುದು ಕಷ್ಟ. ಬಾಳಿನಲ್ಲಿ ಪರಿಸರದೊಂದಿಗೆ ವ್ಯಕ್ತಿಯ ಬಾಂಧವ್ಯ ಯಾವಾಗಲೂ ಇಷ್ಟು ತೆಳುವಾಗಿರುವುದಿಲ್ಲ. ಬಾಳಿನ ಧರ್ಮಸಂಕಟಗಳು, ಕಹಿಗಳು, ಸವಾಲುಗಳು ಇವನ್ನು ಗೊರೂರರು ಗುರುತಿಸಿದ್ದಾರೆ. ಅವರ ಕಥೆಗಳೆಲ್ಲ ಸಾಮಾನ್ಯವಾಗಿ ವ್ಯಕ್ತಿಯ ಶಾಂತಿ ಸಾಧನೆಯನ್ನು ಕುರಿತವು. ಗೊರೂರರ ಪಾತ್ರಗಳಿಗೆ ಒಳತೋಟಿ ಎನ್ನುವುದು ಇಲ್ಲವೇ ಇಲ್ಲ ಎನ್ನಬೇಕು. ಹೀಗೆ ಮಾಡಲಿ, ಹಾಗೆ ಮಾಡಲಿ ಎಂಬ ಹೊಯ್ದಾಟಕ್ಕೆ ಸಿಕ್ಕುವ ಅಥವ ಬೇರೆ ಬೇರೆ ಮೌಲ್ಯಗಳು, ಮಾರ್ಗಗಳ ನಡುವೆ ತುಯ್ದಾಡುವ ಮನಸ್ಸು ಇಲ್ಲಿಲ್ಲ. ಆಗಲೇ ನಾವು ಕಂಡಂತೆ, ಪರಿಸರದೊಂದಿಗೆ ಹೊಂದಿಕೊಳ್ಳಲಾರದ ಅಹಂಭಾವ ಶಾಂತಿ ಇಲ್ಲದಿರುವುದಕ್ಕೆ ಒಂದು ಕಾರಣ. ಈ ವಸ್ತುವನ್ನುಳ್ಳ ಕಥೆಗಳಲ್ಲಿ ಸಾಮಾನ್ಯವಾಗಿ ಗೊರೂರರು ಪರಂಪರೆ, ಸಂಪ್ರದಾಯ ಇವನ್ನು ಮೂರ್ತಗೊಳಿಸುತ್ತಾರೆ. ಇವು ಪರಿಸರದೊಂದಿಗೆ ವ್ಯಕ್ತಿಯ ಸಂಬಂಧವನ್ನು ನಿರ್ಧರಿಸಿವೆ. ಇವುಗಳಿಂದ ವ್ಯಕ್ತಿ ಇಂತಹ ಸಂಬಂಧವನ್ನು ರೂಪಿಸಿಕೊಳ್ಳಬಹುದು ಎಂಬುದೊಂದು ಕಾರಣ. ಇಂತಹ ನಿರೂಪಣೆಯಿಂದ ಮತ್ತೊಂದು—ಕಲಾತ್ಮಕ—ಪರಿಣಾಮವೂ ಉಂಟು; ವ್ಯಕ್ತಿಯ ಸುತ್ತಲಿನ ಸಮುದಾಯದ ವರ್ಣನೆಯಿಂದ ದೇಶ(space)ದಲ್ಲಿ ಅವನನ್ನು ನಾವು ಕಾಣಲು ಸಾಧ್ಯ

[1] ಇಲ್ಲಿ ಕಥೆಗಾರರು, 'ಹಾಸಿಗೆ ತಿಗಣೆ ಮುದ್ದಿಪ ನಿಮ್ಮ ಮೈಗೆ ಹೇಸಿಗೆ ಆದುದು ಮುಟ್ಟಲು ನಮ್ಮ ಕೈಗೆ' ಮೊದಲಾದ ಮಾತನ್ನು ಉಲ್ಲೇಖಿಸದಿದ್ದರೇ ಉತ್ತಮವಾಗಿತ್ತು. ಈ ಉಲ್ಲೇಖನದಿಂದ ಕಥೆ ನೇರ ಹೇಳಿಕೆಯಾಗಿಬಿಡುತ್ತದೆ ಎನ್ನಿಸುತ್ತದೆ.

ನಾಗುವಂತೆ, ಇದರಿಂದ ಅವನನ್ನು ಕಾಲದಲ್ಲಿ ಕಾಣಲು ಸಾಧ್ಯವಾಗುತ್ತದೆ; ಯಾವ ವ್ಯಕ್ತಿಯೇ ಆಗಲಿ, ಎಷ್ಟು ಹಿರಿಯನೇ ಆಗಲಿ, ಅವನನ್ನು ಪೀಳಿಗೆಗಳ ಹಿನ್ನೆಲೆಯಲ್ಲಿ ಕಂಡಾಗ, (ಅವನು ಒಂದು ಗುಂಪಿನಲ್ಲಿ ಒಬ್ಬ ಎಂಬುದರ ಜೊತೆಗೆ) ಅವನೂ, ನಿರಂತರ ಹರಿಯುವ ಕಾಲದ ಪ್ರವಾಹದಲ್ಲಿ ಸ್ವಲ್ಪ ಕಾಲ ತೇಲುವ ವಸ್ತು ಎಂಬುದನ್ನು ಕಾಣುತ್ತೇವೆ. ಅಹಂಭಾವ, ಅತಿಭಾವುಕತೆ ಎರಡಕ್ಕೂ ಮದ್ದು ಯಥಾದೃಷ್ಟಿ—perspective. ವಿಶಾಲವಾದ ಕಾಲ-ದೇಶಗಳ ಹಿನ್ನೆಲೆಯಲ್ಲಿ ಒಬ್ಬ ವ್ಯಕ್ತಿಯನ್ನು ಕಂಡಾಗ ಅವನಿಗೆ, ಅವನ ಸುಖದುಃಖಗಳಿಗೆ ಎಷ್ಟು ಪ್ರಾಮುಖ್ಯ ಕೊಡಬೇಕು ಎಂಬುದು ತಾನೇ ಎದ್ದು ತೋರುತ್ತದೆ. ಗೊರೂರರ ಕಥೆಗಳಲ್ಲಿ ನಮಗೇ ಅರಿವಿಲ್ಲದಂತೆ. ಕಥೆಗಾರರು 'ಹರಟೆ ಹೊಡೆಯುತ್ತಿದ್ದಾರೆ' ಎಂದು ಕಾಣುವಂತಹ ಭಾಗಗಳಲ್ಲಿ, ಪಾತ್ರಗಳನ್ನು ಹತ್ತಾರು ಜನರ ಮಧ್ಯೆ, ಪೀಳಿಗೆಗಳ ಹಿನ್ನೆಲೆಯಲ್ಲಿ ಕಾಣುತ್ತೇವೆ. ಇದರಿಂದ ಆತ್ಮಪ್ರತ್ಯಯ, ಆತ್ಮಗೌರವಗಳಿಗೂ ಅಹಂಭಾವಕ್ಕೂ ನಡುವಿನ ರೇಖೆ ಸ್ಪಷ್ಟವಾಗಿ ಕಾಣುತ್ತದೆ.

ಪರಿಸರದೊಂದಿಗೆ ಹೊಂದಿಕೊಳ್ಳುವುದು ಅಸಾಧ್ಯವಾಗುವುದು, ಸಮಷ್ಟಿ ಜೀವನದಲ್ಲಿ ಬೆರೆತು ಬಾಳುವುದು ಅಹಂಭಾವದಿಂದ ಸಾಧ್ಯವಾಗದೆ ಹೋಗುವುದು. ಈ ಅಹಂಭಾವ ವ್ಯಕ್ತಿಜೀವನವನ್ನೂ ಸಮಷ್ಟಿ ಜೀವನವನ್ನೂ ಕಲಕುತ್ತದೆ ಎಂಬುದನ್ನು 'ಗಂಡುಬೀರಿ ಹೊಸಬು', 'ಕೃಷ್ಣಮಲ್ಲಿಗೆ' ಮೊದಲಾದ ಹಲವು ಕಥೆಗಳಲ್ಲಿ ಕಾಣುತ್ತೇವೆ. ಈ ಕಥೆಗಳಲ್ಲಿ ಅಹಂಭಾವ ಪರಂಪರೆ, ಸಂಪ್ರದಾಯಗಳನ್ನು ಹೊಲಸುಗೊಳಿಸಿ ವೈಯಕ್ತಿಕ ಲಾಭಕ್ಕೆ ತಿರುಗಿಸಿಕೊಳ್ಳುವ ಪ್ರಯತ್ನವನ್ನು ಕಾಣುತ್ತೇವೆ. ಆದರೆ ಅಹಂಭಾವಕ್ಕೆ ಇನ್ನೊಂದು ಮುಖವುಂಟು. ಇದು ಸಮಷ್ಟಿ ಜೀವನದ ರೀತಿ-ಮೌಲ್ಯಗಳನ್ನು ಗುರುತಿಸದೆ, ಇರುವ ಗೌರವವನ್ನು ಗುರುತಿಸದೆ ಮರೀಚಿಕೆಯನ್ನು ಹಿಂಬಾಲಿಸುತ್ತದೆ. 'ಕಮ್ಮಾರ ವೀರಭದ್ರಾಚಾರಿ ಜೋಯಿಸನಾದುದು'[1] ಇಂತಹ ಅಹಂಭಾವದ ಚಿತ್ರಣ. ಗೊರೂರರ ಕಥೆಗಳಲ್ಲಿ ಸೋದ್ದೇಶ ಕಲೆ ಕಾಣುವುದಿಲ್ಲ ಎಂದು ಆಗಲೇ ಹೇಳಿದ್ದೇನೆ. ಹೀಗೆಂದರೆ ಕಲೆಯೇ ಇಲ್ಲ ಎಂದರ್ಥವಲ್ಲ. ಉಪದೇಶದ ಪ್ರಬಂಧವಾಗುವ ಅಪಾಯ ಈ ವಸ್ತು ಮತ್ತು ದೃಷ್ಟಿಕೋನಗಳಲ್ಲಿವೆ. ಆದರೆ ಕಥೆ ಮೊದಲು ಒಲಿಸುವುದು ಕಣ್ಣನ್ನು. ವೀರಭದ್ರಾಚಾರಿಯ "ಏಟನ್ನು ತಾಳಲಾರದೆ, ಕಬ್ಬಿಣದಿಂದ ಸಿಡಿಯುತ್ತಿದ್ದ ಉರಿಯುವ ಹೊಟ್ಟು ಮತ್ತು ಕೆಂಡಗಳು, ಕತ್ತಿಗೆ ಕತ್ತಿ ಎದುರಾದಾಗ ಅವುಗಳ ತೀಕ್ಷ್ಣ ಅಲಗುಗಳಿಂದ ಹಾರುವ ರತ್ನಕಿಡಿಗಳಂತೆ ಕಾಣುತ್ತಿದ್ದವು. ಸಂಜೆಯ ಮಬ್ಬುಗತ್ತಲೆಯಲ್ಲಿ, ಕಮ್ಮಾರನ ಮನೆಯ ಮುಂದೆ ಕೆಲಸ ನಡೆಯುತ್ತಿರುವಾಗ, ಕತ್ತಲೆಯಲ್ಲಿ ರಾಮಬಾಣದಂತೆ ಹೊರಡುತ್ತಿದ್ದ ಹೂಬಾಣಗಳನ್ನೂ, ಕಿಡಿಗಳ ಪ್ರಸರಣ ವಿನ್ಯಾಸವನ್ನೂ ನೋಡಲು ಹಳ್ಳಿಯ ಹುಡುಗರೆಲ್ಲ ಕಮ್ಮಾರನ ಮನೆಯ ಮುಂದೆ ಸೇರುತ್ತಿದ್ದರು. ಹುಡುಗರಿಗೆ ಅಲ್ಲಿ ನಿತ್ಯವೂ ಬಾಣ ಬಿರುಸುಗಳ ನಯನ ಮನೋಹರ

[1] 'ಕಮ್ಮಾರ ವೀರಭದ್ರಾಚಾರಿ' ಪುಟ ೧೧೪

ಪ್ರದರ್ಶನವೇ. ಆ ಮಬ್ಬು ಬೆಳಕಿನಲ್ಲಿ, ಸೊಂಟದವರೆಗೆ ಮಾತ್ರ ಒಂದು ಚೌಕವನ್ನು ಸುತ್ತಿಕೊಂಡು, ಕಾದ ಕಬ್ಬಿಣದಿಂದ ಹಾರುತ್ತಿರುವ ಕಿಡಿಬಾಣಗಳು ತನ್ನ ಮೈಮೇಲೆ ಪುಷ್ಪವೃಷ್ಟಿ ಮಾಡುವುವೋ ಎಂಬಷ್ಟು ಅವುಗಳ ಹತ್ತಿರದಲ್ಲಿ ಕುಳಿತಿರುತ್ತಿದ್ದ ಆ ಕರಿ ಮೈಯಿನ ಕಮ್ಮಾರ, ಬಾಲಕರಿಗೆ ಅಲ್ಲಾವುದ್ದೀನನ ಮಾಯಾದೀಪದ ಮಾಂತ್ರಿಕನಾಗಿ ತೋರುತ್ತಿದ್ದನು." (ಪುಟ ೧) ಹೀಗೆ ಕತ್ತಲ ಮಧ್ಯೆ ಬೆಳಕನ್ನು ಹರಿಸುವ ಮಾಂತ್ರಿಕನಾಗಿ ಕಮ್ಮಾರ ವೀರಭದ್ರಾಚಾರಿ ಮೊದಲು ಕಾಣುವುದು ಪರಿಣಾಮಕಾರಿಯಾಗಿದೆ. ಇದರ ನಂತರ ಎರಡನೆಯ ಚಿತ್ರ, "ಬಾಚಿ ಹಿಡಿದುಕೊಂಡು ಅವನು ಮರ ಕೆತ್ತಲು ಪ್ರಾರಂಭಿಸಿದರೆ, ಒಂದು ಆಳಿಗೆ ಎತ್ತಲು ಸಾಧ್ಯವಾಗದಂತಹ ದೊಡ್ಡ ದೊಡ್ಡ ಚಕ್ಕೆಗಳು ರಣಹದ್ದು ಹಾರಿದಂತೆ ದೂರ ಹಾರಿ ಬೀಳುತ್ತಿದ್ದವು." (ಪುಟ ೨) ಹೀಗೆ ವೀರಭದ್ರಾಚಾರಿ ಚೈತನ್ಯದ ಚಿಲುಮೆಯಾಗಿ ಕಣ್ಣಿನ ಮುಂದೆ ನಿಲ್ಲುತ್ತಾನೆ. ಕಥೆ ವೀರಭದ್ರಾಚಾರಿಯದು ಎಂದು ಕಂಡರೂ, ಅವನೊಬ್ಬನದು ಮಾತ್ರವಲ್ಲ. "ಜೋಯಿಸನಾಗುವುದು ಆಚಾರಿಯಾಗುವುದಕ್ಕಿಂತ ಸುಲಭ, ಅದರಲ್ಲಿ ಹೆಚ್ಚು ಲಾಭವೂ ಉಂಟು" (ಪುಟ ೬) ಎಂದುಕೊಂಡ ಎನ್ನುತ್ತಲೇ ಬರುವ ವಾಕ್ಯಗಳು : "ಈ ಹೊಸ ಉತ್ಸಾಹದಲ್ಲಿ ಅವನಿಗೆ ತಾನು, ನನ್ನ ಪ್ರಾಂತದಲ್ಲಿ ಕಟ್ಟಿರುವ ಆ ನೂರಾರು ಮನೆಗಳೂ ತಾನಿಲ್ಲದಿದ್ದರೆ ಆ ಮನೆಗಳೇ ಆಗುತ್ತಿರಲಿಲ್ಲವೆಂಬುದೂ ಆ ಮನೆಗಳಲ್ಲಿ ಪ್ರತಿನಿತ್ಯ ತನ್ನ ಹೆಸರು ಎಲ್ಲರ ಬಾಯಲ್ಲೂ ಇರುವುದೂ ಮರೆತೇಹೋಯಿತು. 'ತಾನು ಮನೆಯ ಕಂಬ, ಜೋಯಿಸ ಬರಿಯ ಮನೆಯ ಬಣ್ಣ' ಎಂಬುದು ಅವನಿಗೆ ಮರೆಯಿತು."(ಪುಟ ೬-೭) ಹೀಗೆ ಸಮಷ್ಟಿ ಜೀವನದಲ್ಲಿ ಇಬ್ಬರ ಸ್ಥಾನಗಳತ್ತ ಗಮನ ಹರಿಯುತ್ತದೆ. ಅವನು ಲಾಭದ ಕಡೆ ಗಮನಕೊಟ್ಟು ಜೋಯಿಸನಾಗುತ್ತಲೆ, ಅವನ ಮನೆಯ ಪಾಡಿಗಿಂತ ಈ ಮೊದಲು ವರ್ಣನೆಯಾಗುವುದು ಇತರ ಮನೆಗಳ ಪಾಡುಗಳು. ಕಥೆ ಮುಗಿಯುವುದೂ ಕಣ್ಣಿಗೆ ಕಟ್ಟುವ ಚಿತ್ರದೊಡನೆ; ಅದರಲ್ಲಿ ಮೊದಲು ಪ್ರಾಶಸ್ತ್ಯ ಬೆಳಕಿಗೆ. "ತುಮುರು ಹಿಡಿದಿದ್ದ ಬಾಚಿ ಆ ಕತ್ತಲೆಯಲ್ಲಿ ಬೆಳ್ಳಿಯ ಗೆರೆಯಂತೆ ಹೊಳಪಾಗಿ ತೋರಿತು. ಮೋಡಗಳು ಚದುರಿ ಆಕಾಶದಲ್ಲಿ ಸುಮಾರಾಗಿ ನಕ್ಷತ್ರಗಳು ಕಾಣತೊಡಗಿದವು." (ಪುಟ ೧೨-೧೩)ಅನಂತರ, "ಠಣಾರ್ ಠಣಾರ್ ಎಂದು ದಪ್ಪ ದಪ್ಪ ಚಕ್ಕೆಗಳು ಹಾರತೊಡಗಿದವು." (ಪುಟ ೧೩) ಊರವರೆಲ್ಲ ಅವನ ಮನೆಗೆ ಧಾವಿಸುತ್ತಾರೆ, ಎಲ್ಲ ಸೇರಿ ನಾಲ್ಕೇ ದಿನಗಳಲ್ಲಿ ಅವನ ಮನೆಯನ್ನು ಕಟ್ಟುತ್ತಾರೆ. ಮತ್ತೆ ವೀರಭದ್ರಾಚಾರಿ ಸಮಷ್ಟಿಯಲ್ಲಿ ಭಾಗವಾಗುತ್ತಾನೆ. ಅವನು ಬೇರೆಯಾಗಿ, ಚೈತನ್ಯ ಉಡುಗಿ, ಮತ್ತೆ ಚೈತನ್ಯ ತುಂಬಿ ಒಂದಾದ ಪ್ರಕ್ರಿಯೆ ಚಿತ್ರಗಳಿಂದ ಕಣ್ಣ ಮುಂದೆ ನಡೆದಂತಾಗುತ್ತದೆ.

'ಬೂತಯ್ಯನ ಮಗ ಅಯ್ಯು'[1]ವನ್ನು ಓದದಿದ್ದರೆ ಗೊರೂರರ ಕಥೆಗಳನ್ನು ಓದಿದಂತೆಯೇ ಅಲ್ಲ ಎಂಬುದು ನನ್ನ ಭಾವನೆ. ಅವರ ಇತರ ಕಥೆಗಳಲ್ಲಿಯೂ ಕೆಟ್ಟವರು ಬರುತ್ತಾರೆ, ಗಟ್ಟಿ ವ್ಯಕ್ತಿತ್ವದ ಗಂಡಸರು ಹೆಂಗಸರು ಬರುತ್ತಾರೆ. ಆದರೆ ಮನುಷ್ಯ

[1] 'ವೈಯ್ಯಾರಿ', ಪುಟ ೩-೪೯

ಸ್ವಭಾವದಲ್ಲಿ ಕೆಟ್ಟತನ ಎಷ್ಟಿರಬಹುದು, ಗಟ್ಟಿಗತನ ಎಷ್ಟಿರಬಹುದು ಎಂಬುದನ್ನು ಗೊರೂರರು ಎಷ್ಟರಮಟ್ಟಿಗೆ ಕಂಡಿದ್ದಾರೆ ಎನ್ನುವುದನ್ನು ಗುರುತಿಸಲು ಬೂತಯ್ಯ, ಅಯ್ಯು, ಗುಳ್ಳ ಇವರ ಈ ಕಥೆಯನ್ನು ಓದಬೇಕು. ಸುಮಾರು ಒಂಬತ್ತು ಸಾವಿರ ಪದಗಳ ಈ ದೀರ್ಘ ಕಥೆಯಲ್ಲಿ ಬೂತಯ್ಯನ ಪರಿಚಯವೇ ಸುಮಾರು ಒಂದೂವರೆ ಸಾವಿರ ಪದಗಳನ್ನು ಆಕ್ರಮಿಸಿಕೊಂಡಿದೆ. ಪರಿಚಯದ ಪ್ರಾರಂಭದ ಒಂದು ಭಾಗ: 'ಬೂತಯ್ಯನವರು ನಮ್ಮ ಪ್ರಾಂತಕ್ಕೆ ಪಾಳಯಗಾರರಂತಿದ್ದರು. ಅವರನ್ನು ಶಿಶುಪಾಲ, ಜರಾಸಂಧ, ರಾವಣ, ಕಳಿಂಗ ಎಂದವರು ನಮ್ಮ ಕಡೆ ಬೇಕಾದಷ್ಟು ಜನ ಇದ್ದಾರೆ. ಅವರು ದುಷ್ಟರು, ಘಾತಕರು ಎಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಅವರು ಯಾವ ಕೆಲಸ ಮಾಡುವುದಕ್ಕೂ ಹೇಸುತ್ತಿರಲಿಲ್ಲ. ಅವರಿಗೆ ಮನುಷ್ಯನ ಭಯವಿರಲಿಲ್ಲ. ದೇವರ ಭಯ ಸತ್ತ ನಂತರದ ಭಯವಾದುದರಿಂದ ಅದನ್ನು ಕುರಿತು ಯೋಚಿಸಬೇಕಾದುದು ಸತ್ತ ನಂತರವೆಂದು ಅವರು ಹೇಳುತ್ತಿದ್ದರು. ಅವರಿಗೆ ಯಾರ ಮೇಲಾದರೂ ಕೋಪ ಬಂದರೆ, ಅವನ ಮನೆಯನ್ನು ಸುಟ್ಟು ಬೂದಿಯನ್ನು ನೆತ್ತಿಗೆ ಹಚ್ಚಿಕೊಳ್ಳುತ್ತಿದ್ದರು. ಅದರಿಂದಲೂ ಅವರ ಕೋಪವೂ ದ್ವೇಷವೂ ಶಾಂತವಾಗುತ್ತಿರಲಿಲ್ಲ....ಅವನ ಹೊಲಗದ್ದೆಗಳಿಗೆ ಹೊಡೆಯ ಕಾಲದಲ್ಲಿ ದನಗಳನ್ನು ನುಗ್ಗಿಸಿ ಪೈರನ್ನು ನುಣ್ಣಗೆ ಮೇಯಿಸುತ್ತಿದ್ದರು. ಅದರಿಂದಲೂ ತೃಪ್ತಿಯಾಗದಿದ್ದರೆ ಅವನು ಒಬ್ಬನೇ ಸಿಕ್ಕಿದಾಗ ಅವನ ತಲೆ ಒಡೆದು ಸೊಂಟವನ್ನು ಮುರಿದು ಕೈಕಾಲುಗಳನ್ನು ಹಿಂಡಿ ಊನ ಮಾಡುತ್ತಿದ್ದರು....(ಅವನ ದನಗಳ) ಕಾಲನ್ನು ಮುರಿದು ಬಾಲವನ್ನು ಕತ್ತರಿಸುತ್ತಿದ್ದರು....ಅವನ ಹುಲ್ಲು ಮೆದೆಗೆ ಬೆಂಕಿಯನ್ನು ಹಚ್ಚಿ ಬೂದಿಯನ್ನು ಎರಡು ಮೈಲಿ ತೂರುತ್ತಿದ್ದರು....ತಮ್ಮ ಕಾಫಿ ತೋಟಕ್ಕೆ ನುಗ್ಗಿದ ಆಡುಗಳನ್ನು ಅಟ್ಟಿಕೊಂಡು ಗಿಡಗಳ ಬುಡದಲ್ಲಿ ಗೊಬ್ಬರಕ್ಕಾಗಿ ಹೂತುಬಿಡುತ್ತಿದ್ದರು." (ಪುಟ ೩-೪)

"ಬೂತಯ್ಯನವರ ಈ ಸಾಧನೆಯಲ್ಲಿ ಅವರಿಗೆ ಅಸಾಧ್ಯ ಸಂಖ್ಯೆಯ ವೈರಿಗಳಾಗಿದ್ದಾರೆ. ಒದೆತಗಳಂತೂ ಲೆಕ್ಕವಿಲ್ಲದಷ್ಟು ಬಿದ್ದಿವೆ. ಒಕ್ಕಲಿಗರೂ ತಿಗಳರೂ ಹರಿಜನರೂ ಒಟ್ಟೊಟ್ಟಾಗಿ ಗುಂಪು ಕೂಡಿ ಅವರಿಗೆ ಚೆನ್ನಾಗಿ 'ಇಡಿಕೆ' ಪೈಯಿಸಿ ಪ್ರತಿಯೊಂದು ಮೂಳೆಯನ್ನೂ ನುಗ್ಗಿ ಹಾಕಿದ್ದಾರೆ. ಕೈಕಾಲುಗಳನ್ನೆಲ್ಲಾ ಇಡಿಮ ಪುಡಿ ಮಾಡಿದ್ದಾರೆ. ಆದರೆ ಇದಾವುದರಿಂದಲೂ ಬೂತಯ್ಯನವರು ಹೆದರಿಲ್ಲ. ಪ್ರತಿಯೊಂದು ಘಟನೆಯಿಂದಲೂ ಮನುಷ್ಯ ಜಾತಿಯಲ್ಲಿ ಅವರ ದ್ವೇಷವೂ ಕೋಪವೂ ಹೆಚ್ಚಾಗುತ್ತಿದ್ದುವು." (ಪುಟ ೫)

ಹಣ ಒಂದನ್ನು ಬಿಟ್ಟು ಬೇರಾವುದರಲ್ಲೂ ಮಮತೆ ಇಲ್ಲದ ಬೂತಯ್ಯನವರು ಮಗ ಅಯ್ಯುವಿಗೆ, "ರೈತರಿಗೆ ಅಯ್ಯೋ ಎಂದರೆ ಸಾಕು, ಆರು ತಿಂಗಳು ಪಾಪ ಸುತ್ತಿ ಕೊಳ್ಳುತ್ತೆ." (ಪುಟ ೮) ಎಂದು ಹೇಳುತ್ತಲೇ ಪ್ರಾಣಬಿಟ್ಟರು. ಬೂತಯ್ಯನವರ ಮಗನಾದ ಅಯ್ಯು ದೌಷ್ಟ್ಯದಲ್ಲಿ ಕಡಿಮೆಯವನಾಗಿರಲಿಲ್ಲ; ಆದರೆ ಬೂತಯ್ಯನವರನ್ನು ಬುದ್ಧಿವಂತಿಕೆಯು ಅವನಲ್ಲಿ ಇಲ್ಲದಿದ್ದುದರಿಂದ ಅವನು ಹಲ್ಲು ಕಿತ್ತ ಹಾವಿನಂತಾಗಿದ್ದನು.

ಬೂತಯ್ಯನ ಕ್ರೌರ್ಯಕ್ಕೆ ಬಲಿಗಳಾದ ರೈತರ ವಿಷಯದಲ್ಲಿಯೂ ಕಥೆಯಲ್ಲಿ ಮಾನ.

'ಆದರ್ಶೀಕರಣ' ಅಥವಾ ಸರಳೀಕರಣವಿಲ್ಲ. ಬೂತಯ್ಯ ಕ್ರೌರ್ಯದ ಮೂರ್ತಿ, ರೈತರು ಸಹಾಯಹೀನ ಸಜ್ಜನರು ಎಂಬ ಸುಲಭವಾದ ಪಕ್ಷ–ಪ್ರತಿಪಕ್ಷಗಳ ಚಿತ್ರಣ ಇಲ್ಲಿಲ್ಲ. "ರೈತ ನಿಗೆ ಮರೆತೂ ಒಂದು ಒಳ್ಳೆಯ ಮಾತನ್ನು ಆಡಬೇಡ" (ಪುಟ ೮-೯) ಎಂಬ ಬೂತಯ್ಯನ ಬುದ್ಧಿವಾದ ನ್ಯಾಯವಾದದ್ದೆ ಎನ್ನಿಸುವಂತೆಯೇ ಅವರೂ ನಡೆದುಕೊಳ್ಳುತ್ತಾರೆ. ಅಯ್ಯು ದಯೆ ತೋರಿಸಿ ಬರಬೇಕಾಗಿದ್ದ ಹಣ ಬಿಟ್ಟುಕೊಟ್ಟರೆ, ಬೂತಯ್ಯನವರು ಕಾಸಿಗೆ ಕಾಸು ಕೂಡಿ ಹಾಕಿದ್ದೆಲ್ಲ ಇವರ ಕಾಲದಲ್ಲಿ ದಾರಿ ಹಿಡೀತದೆ ಎನ್ನುತ್ತಾರೆ. ನ್ಯಾಯವಾಗಿ ಕೊಡಬೇಕಾದುದನ್ನೂ ಕೊಡದೆ ದಕ್ಕಿಸಿಕೊಳ್ಳಲು ನೋಡುತ್ತಾರೆ.

ಬೂತಯ್ಯ, ಅಯ್ಯು ಅವರ ಪ್ರತಿಪಕ್ಷದ ಸಂಕೇತ, ಅವರ ಹತ ದ್ವೇಷಗಳಿಗೆ ಪ್ರತಿಯಾಗಿ ಬಂದ ಹತದ್ವೇಷಗಳ ಮೂರ್ತಿ ಗುಳ್ಳ. ಅವನೂ ಕೆಟ್ಟವನೇ. "ಜಾಲಹಳ್ಳಿಯಲ್ಲಿ ಗುಳ್ಳನು ಕೀಚಕನಾಗಿದ್ದನು....ಅವನು ಹೆದರುತ್ತಿದ್ದುದು ಬೂತಯ್ಯನವರೊಬ್ಬರಿಗೆ ಮಾತ್ರ....ಗುಳ್ಳನಿಗೂ 'ರೈತರು ಕುರಿಗಳು, ಅವರನ್ನು ನಾವು ತಿನ್ನಬೇಕು, ಅವರು ಇರುವುದೇ ನಮಗಾಗಿ' ಎಂಬ ನಂಬಿಕೆ ಇದ್ದಿತು." (ಪುಟ ೧೩) ಗುಳ್ಳನಿಗೂ ಅಯ್ಯುವಿಗೂ ಜಗಳವಾಗಿ ಗುಳ್ಳ ಅಯ್ಯುವಿಗೆ ನಾಲ್ಕು ಬಾರಿಸಿದ ಮೇಲೆ ಅಯ್ಯು ಗುಳ್ಳನ ಮೇಲೆ ಕ್ರಿಮಿನಲ್ ಮೊಕದ್ದಮ್ಮೆ ಒಂದನ್ನೂ ಸಿವಿಲ್ ಮೊಕದ್ದಮ್ಮೆ ಒಂದನ್ನೂ ಹೂಡಿದ.

ಕಥೆ ಓದುವಾಗ ಕಾಣುವ ನೋಟ ಸಣ್ಣದಾಗಿ ಪ್ರಾರಂಭವಾಗಿ, ಸಣ್ಣದರಲ್ಲಿಯೇ ಸುಳಿಗಳಲ್ಲಿ ಸುಂಗಲು ಹವಣಿಸುತ್ತ ಕ್ರಮೇಣ ಅಗಲವಾಗಿ, ಪ್ರಬಲವಾಗಿ ಪ್ರವಾಹವಾಗುವ ನದಿಯದು. ಅಯ್ಯು–ಗುಳ್ಳರ ಜಗಳ ಪ್ರಾರಂಭವಾದ ಮೇಲೆ ಬರುವ ಹೋಲಿಕೆಗಳೆಲ್ಲ ಅರ್ಥವತ್ತಾದುವು. ಜನ ಅವರನ್ನು ಪ್ಲೇಗು, ಕಾಲರಾ, ಮಾರಿ, ಮಸಣಿಗಳಿಗೆ, ಧೂಮಕೇತುಗಳಿಗೆ ಹೋಲಿಸುತ್ತಾರೆ. ಗುಳ್ಳನೇ ಅಯ್ಯುವನ್ನು ಹುಲಿಗೂ ತನ್ನನ್ನು ಹುಚ್ಚುನಾಯಿಗೂ ಹೋಲಿಸಿಕೊಳ್ಳುತ್ತಾನೆ. ಅವನು ಗಾಯಗೊಂಡ ಹಾವಿನಂತೆ ಬುಸುಗುಟ್ಟುತ್ತಾನೆ. ಈ ವ್ಯಾಜ್ಯದಲ್ಲಿ ಸಾಕ್ಷ್ಯಕ್ಕೆ ಜನರು ಬೇಕಾಗಿ, ಸುಳ್ಳು ಸಾಕ್ಷಿ ಹೇಳಲು ಒಪ್ಪಿದವರೂ, ನಿಜ ಹೇಳಲು ಒಪ್ಪದವರೂ, ಇವರ ಸುಳಿಯಲ್ಲಿ ಸಿಕ್ಕಿ ಕೇಳುತ್ತಾರೆ.

ದ್ವೇಷ ಪ್ರವಾಹವಾಗಿ ಬಲಿಗಳನ್ನು ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದು ಕಣ್ಣಿಗೆ ಕಟ್ಟುತ್ತದೆ. ಗುಳ್ಳನ ಹೆಂಡತಿ ನದಿಯಲ್ಲಿ ಧುಮುಕಿದಾಗ, ಗುಳ್ಳ ಅಯ್ಯುವನ್ನು ಕಡಿಯುತ್ತೇನೆ ಎಂದು ಛಲ ಹಿಂದಿದ್ದಾನೆ. "ನೀವು ಈ ದಿನ ಊರು ಬಿಟ್ಟು ಹೋಗಿ" (ಪುಟ ೧೯) ಎಂದು ಗುಳ್ಳನ ಹೆಂಡತಿ ಅಯ್ಯುವನ್ನು ಬೇಡಿಕೊಂಡರೆ ಅಯ್ಯು "ಆಗಲಿ ಆತನ ಬಂಡೆ ಕಾಯಿಸ್ತೀನಿ" (ಪುಟ ೨೦) ಎಂದಿದ್ದಾನೆ. ಒಬ್ಬನ ಕೈಯಲ್ಲಿ ಮಚ್ಚು, ಇನ್ನೊಬ್ಬನ ಕೈಯಲ್ಲಿ ಬಂದೂಕು. ಇದನ್ನು ತಡೆಯಲಾರದೆ ಗುಳ್ಳನ ಹೆಂಡತಿ ಪೂರ್ಣ ಪ್ರವಾಹದಲ್ಲಿ ಹರಿಯುತ್ತಿದ್ದ ನದಿಗೆ ಬೀಳುತ್ತಾಳೆ. ನೀರಿಗೆ ಇಳಿಯಲು ಯಾರಿಗೂ ಧೈರ್ಯವಿಲ್ಲ—ಅಯ್ಯುವನ್ನು ಬಿಟ್ಟರೆ. ಈ ಕಥೆಯಲ್ಲಿ ಸಾವು-ಜೀವಗಳ ಆಟ ವಿಶಿಷ್ಟವಾಗಿದೆ. ಗುಳ್ಳ ಅಯ್ಯುನ ಜೀವವನ್ನು ತೆಗೆಯುವೆನೆಂದು ಛಲ ಹಿಡಿದಿದ್ದಾನೆ; ಅಯ್ಯು ಗುಳ್ಳನನ್ನು ಸುಟ್ಟುಹಾಕುತ್ತೇನೆ ಎಂದು

ಹಠ ಹಿಡಿದಿದ್ದಾನೆ: ಇಷ್ಟರೂ ಸಾಯಲು ತಾನು ಸಿದ್ಧನಿಲ್ಲ—ಪ್ರತಿಸ್ಪರ್ಧಿಯನ್ನು ಜೀವಿಯ ಪಾಲುಮಾಡಲು ತವಕಪಡುತ್ತಿದ್ದಾನೆ: ಈ ದ್ವೇಷ ಹತ್ತಿ ಉರಿಯುತ್ತಿರುವಾಗಲೇ. ಗುಳ್ಳನ ಹೆಂಡತಿ ಪ್ರವಾಹದಲ್ಲಿ ಬಿದ್ದಳೆಂದು—ಅವಳನ್ನು ಉಳಿಸುವವನು ಒಬ್ಬನೇ. ಅಯ್ಯು— ಅಯ್ಯು ಪಂಚೆಯನ್ನು ಮೇಲಕ್ಕೆ ಬಿಗಿದು ಕಟ್ಟಿ ಸುಕ ಸುಂದರನಾಗಿಯೂ ಸೊರಗಿದವನಾಗಿಯೂ ಭೋರ್ಗರೆಯುತ್ತಿದ್ದ ಪ್ರವಾಹಕ್ಕೆ ಹಾರುತ್ತಾನೆ. ಕಣ್ಮರೆಯಾಗುತ್ತಾನೆ. ಬಂದರೆ ತಿಳಿದು ತಿಳಿದೂ ಸಾವಿನ ಬಾಯಿಗೇ ಹಾರುತ್ತಾನೆ. ಜನ ಅಯ್ಯುವಿನ ಆಸೆ ಬಿಡುತ್ತಾರೆ. ಪ್ರವಾಹ ಗುಳ್ಳನ ಹೆಂಡತಿಯನ್ನು ಸೆಳೆದುಕೊಂಡು ಹೋಗುತ್ತಿದೆ; ಅಯ್ಯು ಅವಳ ಹಿಂದೆಯೇ ಸಾಗಿದ್ದಾನೆ. ಕಡೆಗೂ ಅವಳನ್ನು ಉಳಿಸುತ್ತಾನೆ.

ದ್ವೇಷದ ಪ್ರವಾಹ ಹೀಗೆ ಭೋರ್ಗರೆದು ಗುಳ್ಳನ ಹೆಂಡತಿಯನ್ನೇ ಬಲಿ ತೆಗೆದುಕೊಳ್ಳುವಂತೆ ಉಕ್ಕಿ ಇಳಿದಮೇಲೆ, ಅಯ್ಯುವಿನಲ್ಲಿ ದ್ವೇಷ ಇಳಿಯುತ್ತದೆ. ಎಲ್ಲ ವೈರವನ್ನೂ ಕೊನೆಗಾಣಿಸಬೇಕು, ಎಲ್ಲ ಕೇಸುಗಳನ್ನೂ ವಾಪಸ್ಸು ತೆಗೆದುಕೊಳ್ಳಬೇಕು ಎಂದು ಯೋಚಿಸುತ್ತಾನೆ. ಬುಂಡೆಕ್ಯಾತ ಎನ್ನುವವನು, "ನೀನು ಅವನ ಹೆಂಡತಿಯನ್ನು ಬದುಕಿಸಿದರೂ ಗುಳ್ಳ ಬೇರೆ ನಿನ್ನ ತಲೆ ಒಡೆಯುವುದನ್ನು ಬಿಡೋದಿಲ್ಲ....ಸಾಯಲಿ ಎಂದು ದಾಗಿ ನೀನು ಸುಮ್ಮನೆ ಇರಬೇಕಾಗಿತ್ತು" ಎನ್ನುತ್ತಾನೆ. (ಪುಟ ೨೩) ಗುಳ್ಳ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಯೋಚನೆಯಲ್ಲಿಲ್ಲ. ಅಯ್ಯು ಅರೆದು ಹೋಗುತ್ತಾನೆ ಎಂದು ಅವನ ನಿರೀಕ್ಷಣೆ. ಅಯ್ಯುವಿನ ಲಾಯರೂ ಅಯ್ಯುವಿಗೆ ಏನಾಗುವುದೋ ಎಂಬ ಆತಂಕದಲ್ಲಿ ಇದ್ದಾರೆ. ಅಂತೂ ಮೊಖದ್ದಮೆ ವಜಾ ಆಗುತ್ತದೆ. ಅಯ್ಯು ಈಗ ಗುಳ್ಳನನ್ನು ಒರೆಸಿಹಾಕುತ್ತಾನೆ ಎಂದು ನಿರೀಕ್ಷಿಸಿದವರಿಗೆ, ಈಗ ಅಯ್ಯುವಿನ ಒಳ್ಳೆಯತನ ನೋಡಿ ಕೋಪ ತಿರಸ್ಕಾರ. ಲಾಯರ ಫೀಜು ಕೊಡಲಿಲ್ಲವೆಂದು ಗುಳ್ಳನನ್ನು ದಸ್ತಗಿರಿ ಮಾಡಲು ಅಮೀನ ಬರುತ್ತಾನೆ. ಅಲ್ಲಿಗೆ ಅಯ್ಯು ಬಂದಾಗ "ನಾನು ಜೈಲಿಗೆ ಹೋಗೋದ ನೋಡೋಕೆ ಅಯ್ಯು ಬರ್ತಾ ಅವನೆ. ಬರಲಿ, ಬರಲಿ. ಅಲ್ಲಿಂದ ಬಂದ ಮೇಲೆ ಅಯ್ಯುನಿಗೆ ಹಬ್ಬ ಮಾಡ್ತೀನಿ" (ಪುಟ ೨೭-೨೮) ಎಂದುಕೊಳ್ಳುತ್ತಾನೆ ಗುಳ್ಳ. ಅಯ್ಯು ತಾನೇ ಹಣ ಕೊಟ್ಟು ಗುಳ್ಳನನ್ನು ಬಿಡಿಸುವೆನೆನ್ನುತ್ತಾನೆ. ಗುಳ್ಳ ಒಪ್ಪುವುದಿಲ್ಲ: ಅವನ ಋಣ ಗುಳ್ಳನಿಗೆ ಬೇಡ, ಸೆರೆಮನೆಗಾದರೂ ಹೋದಾನು. "ನೀನು ನನ್ನ ಮನೆಯಲ್ಲಿ ಕೆಲಸ ಮಾಡಿ ಈ ಹಣವನ್ನು ತೀರಿಸುವಿಯಂತೆ" (ಅಲ್ಲೇ) ಎಂದು ಅಯ್ಯು ಹೇಳಿದ ಮೇಲೆ ಒಪ್ಪಿಕೊಳ್ಳುತ್ತಾನೆ.

ಈ ಮಾತು ಅಯ್ಯು ಹೇಳಿದ್ದು ಗುಳ್ಳ ಹಣ ತೆಗೆದುಕೊಳ್ಳಲಿ ಎಂದು, ಅಷ್ಟೆ. ಆದರೆ ಗುಳ್ಳ, "ಅಯ್ಯು ನನಗೆ ಈ ಹಣ ಸಾಲ ಕೊಟ್ಟವ್ನೆ. ಅಸಲು ಬಡ್ಡಿ ಎರಡನ್ನೂ ದುಡಿದೇ ತೀರಿಸಬೇಕು. ಈ ಅಯ್ಯನ ಒಂದು ಕಾಸು ಋಣವೂ ನನಗೆ ಬೇಡ. ಸಾಲ ತೀರೋ ಗಂಟ ಅವನ ಮಗನಾಗಿ ದುಡೀತೀನಿ....ಇದು ಮುಗಿದ ಮೇಲೆ ದೇವರ ದಯೆ ಇದ್ರೆ 'ಗುಳ್ಳ, ದ್ವೇಷ ಎಂದಿಗೂ ಮರೆಯೋಲ್ಲ' ಎಂದು ಅಯ್ಯುನಿಗೆ ಗೊತ್ತಾಗಿಯೇ ಆಗ್ತದೆ" (ಅಲ್ಲೇ) ಎಂದೇ ಕೆಲಸ ಪ್ರಾರಂಭಿಸುತ್ತಾನೆ. (ದ್ವೇಷ ಸಾಧನೆಗೆ ದೇವರ ದಯೆ ಬೇಡುವ ಭಾವನೆಯಲ್ಲಿರುವ ಸಹಜತೆಯನ್ನು ಗಮನಿಸಬೇಕು. ದಯೆ-ದ್ವೇಷಗಳು ಒಂದೇ ವಾಕ್ಯ

ದಲ್ಲಿ, ಒಬ್ಬನ ಮನಸ್ಸಿನಲ್ಲಿ ಒಟ್ಟಿಗೆ ಮಿಂಚುವುವನ್ನೂ ಗಮನಿಸಬೇಕು.) ಅವನು ಕೆಲಸ ಮಾಡುವುದರಲ್ಲಿಯೂ ಛಲವೇ. ಅವನ ಕೆಲಸದ ನಿಷ್ಠೆಯನ್ನು ಕಂಡು ಅಯ್ಯು ಬೆದರುತ್ತಾನೆ. "ಇವನ ಕಿಚ್ಚು ಇನ್ನೂ ಆರಿಲ್ಲ. ದ್ವೇಷ ಸ್ವಲ್ಪವೂ ಕಡಮೆಯಾಗಿಲ್ಲ" (ಪುಟ ೨೯) ಎನ್ನಿಸುತ್ತದೆ. ಅಯ್ಯುವಿನ ಸಾವಿರಾರು ರೂಪಾಯಿಗಳನ್ನು ಕಸಕ್ಕಿಂತ ಕಡೆಯಾಗಿ ಕಂಡು ಅಯ್ಯುವಿಗೆ ತಲಪಿಸುತ್ತಾನೆ. ಇದೊಂದು ಭಯಂಕರ ಕರ್ತವ್ಯನಿಷ್ಠೆ.

ಅಯ್ಯುವಿನಲ್ಲಿ ದ್ವೇಷ ಮಾಯವಾಗಿದ್ದರೂ ಗುಳ್ಳನಲ್ಲಿ ಪ್ರಬಲವಾಗಿರುವ ದ್ವೇಷ ಮತ್ತೆ ಪ್ರವಾಹವಾಗಿ ಉಕ್ಕುತ್ತದೆ. ಗುಳ್ಳನ ನಾಯಕತ್ವದಲ್ಲಿ ಜನ ಅಯ್ಯುವಿನ ಮನೆಯನ್ನು ಲೂಟಿ ಮಾಡಲು ಬಂದಾಗ "ಅಯ್ಯನೇನಾದರೂ ತುಟಿಕ್ ಪಿಟಿಕ್ ಅಂದರೆ ಅವನನ್ನು ಕಡಿದೇಹಾಕಬೇಕು" (ಪುಟ ೩೩) ಎಂದು ತೀರ್ಮಾನ ಮಾಡಿ ದೊಣ್ಣೆ, ಕತ್ತಿ, ಕೊಡಲಿ, ಮಚ್ಚು ಹಿಡಿದು ಬಂದಿದ್ದಾರೆ ಜನ. "(ಗುಳ್ಳನ) ಕಣ್ಣಿನಲ್ಲಿ ಆಗ ಕಂಡಷ್ಟು ದ್ವೇಷವೂ ಪಿಶಾಚತನವೂ ರಾಕ್ಷಸಭಾವವೂ ಅಯ್ಯುವಿಗೆ ಮತ್ತಾವಾಗಲೂ ಕಂಡಿರಲಿಲ್ಲ." (ಪುಟ ೩೫) ಬಂದವರು ಮನೆಯನ್ನೆಲ್ಲ ಲೂಟಿ ಮಾಡುತ್ತಾರೆ. "ಅಯ್ಯುವಿನ ಹೆಂಡತಿಯು ಕೈಯಲ್ಲಿದ್ದ ಬಳೆಗಳನ್ನೂ ತೆಗೆದು ಕೆಳಕ್ಕೆ ಹಾಕಿದಳು. ಅದನ್ನು ತೆಗೆದುಕೊಳ್ಳಲು ಒಬ್ಬನು ಮುಂದಕ್ಕೆ ಬಂದನು. ಗುಳ್ಳನು ಹಾ ಎಂದು ಗದರಿಸಿದನು. ಬಳೆಗಳನ್ನು ಯಾರೂ ಮುಟ್ಟಲಿಲ್ಲ." (ಪುಟ ೩೬) ಗುಳ್ಳನ ಹೆಂಡತಿಯನ್ನು ಅಯ್ಯು ಉಳಿಸಿದ ದಿನ ನೆಟ್ಟ ಬೀಜ ಬೆಂಕಿಯ ಭೂಮಿಯಲ್ಲಿಯೂ ಉರಿದುಹೋಗಿಲ್ಲ.

ದ್ವೇಷ ಹಿಂದೆ ಪ್ರವಾಹವಾಗಿ ಉಕ್ಕಿತು, ಈಗ ಬೆಂಕಿಯಾಗಿ ನಾಲಗೆ ಚಾಚುತ್ತದೆ. ಜನ ದನದ ಕೊಟ್ಟಿಗೆಯನ್ನು ಲೂಟಿ ಮಾಡುತ್ತಿರುವಾಗ ಲಾಂದ್ರವು ಕೆಳಕ್ಕೆ ಉರುಳಿ ಹುಲ್ಲು ಹತ್ತಿಕೊಳ್ಳುತ್ತದೆ. ರೈತರು ಬೇಕೆಂದೇ ಮನೆಗೆ ಬೆಂಕಿ ಹಚ್ಚಿದರೆಂದು ತಿಳಿದ ಅಯ್ಯುವಿಗೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಉರಿಯುತ್ತಿರುವ ಮನೆಯಿಂದ ಬರುವುದಕ್ಕೂ ಹೆದರಿಕೆ. ಮತ್ತೆ ಸಾವು-ಉಳಿವುಗಳ ಮಧ್ಯೆ ತೂಗಾಟ. ಅಂತೂ ಅವರು ಪಾರಾಗುತ್ತಾರೆ. ಪೋಲೀಸ್ ಇನ್ಸ್‌ಪೆಕ್ಟರು ಪ್ರತ್ಯಕ್ಷವಾಗುತ್ತಾರೆ. "ಅಯ್ಯುವು ಗುಳ್ಳನ ಮುಖವನ್ನು ನೋಡಿದನು. ಅದು ಮೊದಲಿನಂತೆ ಕಠೋರವೂ ನಿಷ್ಠುರವೂ ಆಗಿತ್ತು. ಅಲ್ಲಿ ಪಶ್ಚಾತ್ತಾಪದ ಸೂಚನೆ ಏನೂ ತೋರಲಿಲ್ಲ...."ಈ ಬಾರಿ ಮಣ್ಣು ಹೊರೋದೆ ನಮ್ಮ ಹಣೆಬರ್ಹ, ಇಷ್ಟಾಳಿಗೂ ಬೇಡಿ ಬಿಗಿಸೋದ್ನ ಅಯ್ಯ ಬಿಡ್ತಾನ್ಯೆ?" ಎಂದುಕೊಂಡು ರೈತರು....ಬಂದುದನ್ನು ಅನುಭವಿಸಲು ಸಿದ್ಧರಾದರು." (ಪುಟ ೩೯) ಅಯ್ಯುವು ಇನ್ಸ್‌ಪೆಕ್ಟರಿಗೆ, "ನನ್ನ ಮನೆಗೆ ಯಾರೂ ನುಗ್ಗಿರಲಿಲ್ಲ....ಎತ್ತು ಲಾಂದ್ರವನ್ನು ಉರುಳಿಸಿತು. ಬೆಂಕಿ ಹುಲ್ಲಿಗೆ ಹತ್ತಿಕೊಂಡು ಮನೆ ಸುಟ್ಟುಹೋಯಿತು" (ಪುಟ ೪೦) ಎನ್ನುತ್ತಾನೆ. ಇನ್ಸ್‌ಪೆಕ್ಟರು ಚಕಿತರಾಗಿ, ಕೋಪಗೊಂಡು ಹೊರಟುಹೋಗುತ್ತಾರೆ. "ಗುಳ್ಳನ ಮುಖದಲ್ಲಿ ಸ್ವಲ್ಪವೂ ದ್ವೇಷವಿರಲಿಲ್ಲ. ಆಶ್ಚರ್ಯವು ಮೂಡಿ ಮಾಯವಾಗಿ ಕೃತಜ್ಞತೆಯೂ ದೈನ್ಯವೂ ಅಲ್ಲಿ ತುಂಬಿದ್ದವು." (ಅಲ್ಲೇ)

ಮತ್ತೆ ನದಿಯ ಪ್ರವಾಹ ಬರುತ್ತದೆ. ಕಾಡಿನ ಕಟ್ಟೆ ಒಡೆಯುತ್ತದೆ. ನೀರಿನ

ರೂಪವಾಗಿ ಧಾವಿಸುವ ಸಾವಿನ ಹಾದಿಯಲ್ಲಿ ಮೊದಲು ಸಿಕ್ಕುವವರು ಅಯ್ಯುವಿನ ಹೆಂಡತಿ, ಮಕ್ಕಳು (ಅಯ್ಯು ಊರಲ್ಲಿಲ್ಲ.) ಕಟ್ಟೆ ಒಡೆದ ಸದ್ದು ಕೇಳಿ ಮೊದಲು ಓಡುವವನು ಗುಳ್ಳ. ಒಂದು ನಿಮಿಷದಲ್ಲಿ ಊರಿಗೆ ಊರನ್ನೇ ಎಬ್ಬಿಸಿದ್ದಾನೆ. ಬೂತಯ್ಯನವರ ಕಾಲದಲ್ಲಿ "ಹೊಳೆಗೂ ಇವರ ಮೇಲೆ ಸಿಟ್ಟು, ಬರುವ್ಹೊಲ್ಲದಲ್ಲ" (ಪುಟ ೬೭) ಎನ್ನುತ್ತಿದ್ದ ರೈತರು ಅಯ್ಯುವಿನ ಹೆಂಡತಿ ಮಕ್ಕಳನ್ನು ಉಳಿಸಲು ತಮ್ಮ ಪ್ರಾಣವನ್ನಾದರೂ ಕೊಡಲು ಸಿದ್ಧರಾಗಿದ್ದರು. ಗುಳ್ಳನೂ ಮೂವರು ರೈತರೂ ಜೀವದ ಆಸೆ ಬಿಟ್ಟು ಹೇಗಾಗಿ ಅಯ್ಯುವಿನ ಸಂಸಾರವನ್ನು ಉಳಿಸುತ್ತಾರೆ.

ಕಥೆಯ ಮುಕ್ತಾಯ: "ಇದು ನಡೆದು ಹದಿನಾಲ್ಕು ವರ್ಷಗಳಾದುವು. ಅಯ್ಯುವಿನ ಮನೆಯಿಂದ ಕಳವಾದ ಪತ್ರಗಳೆಲ್ಲ ಒಂದೊಂದಾಗಿ ಅವನ ಮನೆಗೆ ರೈತರಿಂದಲೇ ಬಂದುವು. ಅವನ ಆಸ್ತಿ ಪೈಪಟ್ಟು ಬೂತಯ್ಯನವರ ಕಾಲದಲ್ಲಿ ಇದ್ದುದಕ್ಕಿಂತ ಸ್ವಲ್ಪವೂ ಕಡಿಮೆಯಾಗಿಲ್ಲ. ಅವನಿಗೆ ರೈತರ ಭಯವೂ ರೈತರಿಗೆ ಅವನ ಭಯವೂ ಇಲ್ಲ. ಗುಳ್ಳನು ಈಗಲೂ ಅವನ ಮನೆಯ ಆಳು. ಊರಲ್ಲಿ ಯಾರ ಬಾಯಲ್ಲಿ ಕೇಳಿದರೂ "ಬೇಕಾದ್ದು ಬರಲಿ ಅಯ್ನೋರು ಆತ್ಕೋತಾರೆ" ಎಂಬುವೇ ಮಾತಾಗಿದೆ." (ಪುಟ ೬೯)

ದ್ವೇಷ ತುಂಬಿದ, ಗಂಟಲನ್ನೇ ಹಿಸುಕುವಂತಹ ಉಸಿರಾಡಿಸಲು ಬಿಡದ ವಾತಾವರಣದಿಂದ ಪ್ರಾರಂಭವಾದ ಕಥೆ ತಿಳಿಯಾದ, ಪ್ರಶಾಂತವಾದ, ಸ್ನೇಹ ವಿಶ್ವಾಸ ತುಂಬಿದ ವಾತಾವರಣದಲ್ಲಿ ಮುಕ್ತಾಯವಾಗುತ್ತದೆ. ಪ್ರಕೃತಿಯಲ್ಲೂ ಮನುಷ್ಯನ ಜಗತ್ತಿನಲ್ಲೂ ಅಲ್ಲೋಲಕಲ್ಲೋಲಗಳಾಗಿ ಕಡೆಗೆ ಶಾಂತಿ ಮೂಡುವ ಅನುಭವ ಕಥೆಯಲ್ಲಿ ಆಗುತ್ತದೆ. ಇಲ್ಲಿ ಕೇಂದ್ರ ವ್ಯಕ್ತಿಗಳು ಗುಳ್ಳ ಮತ್ತು ಅಯ್ಯು. ಆದರೆ ಕಥೆಯ ಮೊದಲ ಎಂಟು ಪುಟಗಳಲ್ಲಿ ಬೂತಯ್ಯನೇ ಪ್ರಧಾನ. (ಕಥೆಯ ಹೆಸರೂ 'ಬೂತಯ್ಯನ ಮಗ ಅಯ್ಯು') ಕಡೆಗೆ ಒಡೆಯುವುದೂ ಬೂತಯ್ಯನವರು ಕಟ್ಟಿದ್ದ ಜಾಲಹಳ್ಳಿಯ ಕಾಡಿನ ಕಟ್ಟೆಯೇ. ಜಾಲಹಳ್ಳಿ ಕಾಡಿನಲ್ಲಿ ಅವರು ಕಟ್ಟಿಸಿ ವಾಸಿಸುತ್ತಿದ್ದ ಮನೆಯಲ್ಲಿಯೇ ಅಯ್ಯುವಿನ ಹೆಂಡತಿ ಮಕ್ಕಳು. ಅವರು ಕಟ್ಟಿದ ಕಟ್ಟೆ ಒಡೆದು ನುಗ್ಗಿದ ನೀರಿನಲ್ಲಿ ಸಾವನ್ನು ಕಾಣುವುದು. ಇದರಿಂದಲೇ ಗುಳ್ಳ ಮತ್ತು ಇತರ ರೈತರು ಅವರನ್ನು ಉಳಿಸುವುದು. ಈ ಕಥೆಯಲ್ಲಿ ಗುಳ್ಳ ಮತ್ತು ಅಯ್ಯುವಿನ ಸುತ್ತಮುತ್ತಲಿನವರ ಪಾತ್ರ (ಅವರಲ್ಲಿಯೂ ಬುಂಡೆ ಕ್ಯಾತನದು) ಗಮನಿಸಬೇಕಾದದ್ದು. ಬೂತಯ್ಯನವರನ್ನು ದ್ವೇಷಿಸುವ, ಅವರನ್ನು ಕಂಡರೆ ಹೆದರುವ, ಶಾಪ ಹಾಕುವ, ಆದರೆ ಅವರ ಮಗ ಅಯ್ಯು ನಮ್ಮ ಎಂದು ಪರೋಕ್ಷವಾಗಿ ಬೂತಯ್ಯನವರನ್ನು ಮೆಚ್ಚುವ ಸುತ್ತಲಿನ ಜನರಿಂದ ಕಥನ ಪೂರ್ಣವಾಗುತ್ತದೆ. (ಬೂತಯ್ಯನವರನ್ನು ಕಥೆಯ ಉದ್ದಕ್ಕೂ ಯಾರೂ ಏಕವಚನದಿಂದ ಕರೆಯುವುದಿಲ್ಲ, ಬೇರೆ ಯಾರಿಗೂ ಈ ಗೌರವ ಸಲ್ಲುವುದಿಲ್ಲ ಎಂಬುದೂ ಸ್ವಾರಸ್ಯದ ಅಂಶ.) ಭೂತ–ವರ್ತಮಾನ, ಪ್ರಕೃತಿ–ಮನುಷ್ಯ, ಸಮಷ್ಟಿ–ವ್ಯಕ್ತಿಗಳು, ಸಾವು–ಬದುಕುಗಳು ಕಥೆಯಲ್ಲಿ ವಿಚಿತ್ರವಾಗಿ ಹೆಣೆದುಕೊಳ್ಳುತ್ತ ಹೋಗುತ್ತವೆ: ಒಂದು ಸಂಕೀರ್ಣವಾದ ಅನುಭವವನ್ನು ಸೃಷ್ಟಿಸುತ್ತವೆ. ಕನ್ನಡದ ಶ್ರೇಷ್ಠ ಕಥೆಗಳಲ್ಲಿ ಇದು

ಒಂದು. ಮನುಷ್ಯಸ್ವಭಾವದ ಚಿತ್ರಣದಲ್ಲಿ ವಾಸ್ತವಿಕತೆಯನ್ನು ಈ ಗಾತ್ರದ ಬರಹದಲ್ಲಿ ಇಷ್ಟರಮಟ್ಟಿಗೆ ಭಾವಾತಿರೇಕಕ್ಕೆ ಎಡೆಕೊಡದೆ ಸಾಧಿಸಿರುವ ಕಥೆಗಳು ಕಡಮೆ.

ಹಳ್ಳಿಗರ ಜೀವನವಲ್ಲದೆ ಪಟ್ಟಣದವರ ಜೀವನವೂ ಗೊರೂರರ ಕಥೆಗಳಿಗೆ ವಸ್ತುವನ್ನು ಒದಗಿಸಿದೆ. ಆದರೆ ಈ ಕಥೆಗಳಲ್ಲಿ ಹಳ್ಳಿಯ ಕಥೆಗಳಲ್ಲಿನಂತೆ ಮೂರ್ತವಾದ ಪರಿಸರವಿಲ್ಲ; ಸಮಷ್ಟಿ ಇಲ್ಲಿ ಸ್ಪಷ್ಟವಾಗಿ ರೂಪ ತಾಳುವುದಿಲ್ಲ. ಈ ಕಥೆಗಳಲ್ಲಿ ಸಾಮಾನ್ಯವಾಗಿ ಕೇಂದ್ರವ್ಯಕ್ತಿ ಒಂದು ಜಗತ್ತಿನಿಂದ ಇನ್ನೊಂದು ಜಗತ್ತಿಗೆ ಕಾಲಿಟ್ಟು, ಹಿಂದಿರುಗು ತ್ತಾನೆ. ಈ ಬೇರೊಂದು ಪ್ರಪಂಚದ ದರ್ಶನ ಕೆಲವು ಕಥೆಗಳಲ್ಲಿ ಒಂದು ಶಿಕ್ಷಣವಾಗು ತ್ತದೆ, ಕಣ್ಣನ್ನು ತೆರೆಸುತ್ತದೆ. ಇನ್ನು ಕೆಲವು ಕಥೆಗಳಲ್ಲಿ ಅನುಭವದ ದ್ವಂದ್ವಾರ್ಥವನ್ನು, ಅನಿಶ್ಚಿತಾರ್ಥವನ್ನು ಧ್ವನಿಗೂಡಿಸಿಕೊಳ್ಳುತ್ತದೆ; ಇದರಿಂದಲೇ ಬಹು ಸರಳವೆನ್ನಿಸುವ ಕಥೆಯೂ ಆಳವಾದ ಪರಿಣಾಮವನ್ನುಂಟುಮಾಡುತ್ತದೆ. ಮೊದಲನೆಯ ವರ್ಗಕ್ಕೆ ಸೇರಿದ ಕಥೆ 'ಮುಳ್ಳು ಗಿಡ'[1]. "ಸೂರಪ್ಪನ ಬಾಳಿನಲ್ಲಿ ಆನಂದವೆಂಬುದೇ ಇರಲಿಲ್ಲ" (ಪುಟ ೪೧) ಸಂಬಳ ಮೂವತ್ತು ರೂಪಾಯಿ. ಮನೆತುಂಬ ಮಕ್ಕಳು. ಮದುವೆಯಾಗಬೇಕೆಂದಿದ್ದ ಲಲಿತೆಯನ್ನು ಬಿಟ್ಟು ಸಂಗೀತ ಸಾಹಿತ್ಯಗಳ ಗಂಧವೇ ಇಲ್ಲದ ತಿರುಮಲಮ್ಮನನ್ನು (ಹೆಸರು ಚೆನ್ನಾಗಿಲ್ಲ, ನಮ್ಮ ಮಗಳ ಹೆಸರನ್ನಾದರೂ ಆಕರ್ಷಕವಾಗಿ ಇಡಬಾರದಾಗಿತ್ತೆ ಎಂದು ಅವನು ಯೋಚಿಸಿದ್ದುಂಟು) ಕಟ್ಟಿಕೊಂಡು ದಿನ ಕಳೆಯುವನು. ತಾನು ಪರಿಪೂರ್ಣತೆಯ ಸ್ತ್ರೀರೂಪವೆಂದು ಭಾವಿಸಿದ್ದ ಲಲಿತಳ ಮೊಂಡತನ, ಒರಟುತನ ಎಲ್ಲ ಕಂಡಾಗ ಅವನಿಗೆ ತನ್ನ ಹೆಂಡತಿಯ ಸ್ವಭಾವ, ಹಿರಿಮೆ ಅರಿವಾಗುತ್ತದೆ. ಹಿಂದಿನ ದಿನ ಲಲಿತಳನ್ನು ಕಂಡ ಮೇಲೆ ತನ್ನ ಹೆಂಡತಿಯಲ್ಲಿ ಅಸಮಾಧಾನ ಹೆಚ್ಚಾಗಿತ್ತು. ಬೆಳಿಗ್ಗೆ ಏಳುವ ಹೊತ್ತಿಗೆ ಬಿಸಿನೀರು ಕಾಸಿದ್ದಾಳೆ, ಬಿಸಿರೊಟ್ಟಿ ಮತ್ತು ಕಾಫಿಯನ್ನು ಕೊಡುತ್ತಾಳೆ. ಹೊರಡು ವಾಗ ಒಂದು ಕೈಚೀಲವನ್ನು ಕೊಟ್ಟು 'ಇರಲಿ ಸ್ವಲ್ಪ ತಿಂಡಿ ಬೇಕಾಗುತ್ತೆ' ಎನ್ನು ತ್ತಾಳೆ. ಅವನು ಬಾಗಿಲು ದಾಟುವಾಗ 'ಕೊಳ್ಳಿ' ಎಂದು ಮೂರು ಪಾವಲಿ ಕೈಗೆ ಹಾಕುತ್ತಾಳೆ; ಸೂರಪ್ಪನಿಗೆ ಆಗ ಜ್ಞಾಪಕಕ್ಕೆ ಬರುತ್ತದೆ ತಾನು ಕೈಲಿಗೆ ದುಡ್ಡಿಲ್ಲದೆ ಹೊರಟಿದ್ದೇನೆ ಎಂದು. ಶ್ರೀಮಂತನ ಕೈ ಹಿಡಿದ ಲಲಿತಳ ಹಠ, ಕಿರಿಚಾಟ, 'ಸಾಕು ಬಾಯಿಮುಚ್ಚಿ' ಎಂಬ ಕೂಗಾಟ ಎಲ್ಲ ಕೇಳಿ ಅವನಿಗೆ ಕಣ್ಣು ತೆರೆಯುತ್ತದೆ. "ಸೂರಪ್ಪನ ದೃಷ್ಟಿ ತನ್ನ ಕೈಚೀಲದ ಕಡೆಗೂ ಅದರಲ್ಲಿದ್ದ ತಿಂಡಿಯ ಕಡೆಗೂ ಹೋಯಿತು ... ಸೂರಪ್ಪ ತಪ್ಪು ಮಾಡಿದವನು ಪ್ರಾಯಶ್ಚಿತ್ತಮಾಡಿಕೊಳ್ಳುವಂತೆ ನಿಸ್ಸಂಕೋಚವಾಗಿ ಅತ್ತನು." (ಪುಟ ೫೨) ದೀನವಾದ ನಿರಾಡಂಬರವಾದ, ಕ್ಷುಲ್ಲಕವಾದ ಕೈಚೀಲ ಪೊಟ್ಟಣಗಳು ಹೇಗೆ ತಿರುಮಲಮ್ಮನ ವ್ಯಕ್ತಿತ್ವವನ್ನೂ ಪ್ರೇಮವನ್ನೂ ಮೂರ್ತಗೊಳಿಸಿ ಸಂಕೇತಗಳಾಗುತ್ತವೆ ಎಂಬುದನ್ನು ಗಮನಿಸಬೇಕು. ಕಥೆ ಭಾವಾತಿರೇಕಕ್ಕೆ ಎಡೆಕೊಡುವ ಘಟ್ಟ ಇದು. ತಪ್ಪಿನ ಅರಿವಾದ ಸೂರಪ್ಪ ಮನೆಗೆ ಹೋಗಿ, ಹೆಂಡತಿಯ ಮುಂದೆಯೂ ಕಣ್ಣೀರು ಸುರಿಸಿ, ಅವಳು ಔದಾರ್ಯದ ಮುದ್ದೆಯಾಗಿ ಅವನನ್ನು ಕ್ಷಮಿಸಿ ಇಬ್ಬರೂ ಕಣ್ಣೀರಿನ ಕೋಡಿ

[1] 'ಕನ್ಯಾಕುಮಾರಿ ಮತ್ತು ಇತರ ಕಥೆಗಳು', ಪುಟ ೪೧–೫೬

ಹುಸಿನ ಮುಕ್ತಾಯದತ್ತ ಕಥೆ ಹರಿಯುವ ಆಶಯ ಈ ತಿರುವಿನಲ್ಲಿರುವುದು. ಆದರೆ ಕಥೆ ಭಾವಾತಿರೇಕದಿಂದ ತಪ್ಪಿಸಿಕೊಳ್ಳುತ್ತದೆ. ಹೆಂಡತಿಯಲ್ಲಿ ತನ್ನ ಪ್ರೇಮವನ್ನು ತೋರಿಸುವುದು ಹೇಗೆ ಎಂದು ಯೋಚಿಸಿ, ಮಲ್ಲಿಗೆ ಹೂವನ್ನು ಕೊಳ್ಳುತ್ತಾನೆ. (ಮದುವೆಯಾದ ಹೊಸದರಲ್ಲಿ ಅವಳು ಮಲ್ಲಿಗೆ ಹೂವು ತನ್ನಿ ಎಂದಾಗ "ಈ ಮುಳ್ಳುಗಿಡಕ್ಕೆ ಮಲ್ಲಿಗೆ ಹೂವು ಯಾಕೆ?" (ಪುಟ ೫೩) ಎಂದಿದ್ದ.) ಮನೆಯ ಬಾಗಿಲಿನಲ್ಲಿ ಕುಳಿತುಕೊಂಡು ಹೆಂಡತಿಗೆ ಒಂದು ಪ್ರೇಮ ಪತ್ರವನ್ನು ಬರೆಯುತ್ತಾನೆ. ಒಳಕ್ಕೆ ಹೋದಾಗ ಮಕ್ಕಳು ಹೆಂಡತಿಯನ್ನು ಸುತ್ತುಗಟ್ಟಿವೆ. ಅವಳು ನಗುನಗುತ್ತಾ ಕೆಲಸ ಮಾಡುತ್ತಿದ್ದಾಳೆ. ಸೂರಪ್ಪ ಕಾಗದ ಕೊಟ್ಟು, 'ಓದು' ಎಂದರೆ "ನನಗೆ ಓದುವುದಕ್ಕೆ ಬರುತ್ತದೆಯೆ?....ನೀವೇ ಓದಿ ಹೇಳಿ" (ಪುಟ ೫೫) ಎನ್ನುತ್ತಾಳೆ. ಅವನು ಕಾಗದ ಓದುವುದಕ್ಕೆ ಹೋಗಿ ನಾಚಿಕೊಂಡು, ಉಗುಳು ನುಂಗುತ್ತ, "ಇನ್ನೇನೂ ಇಲ್ಲ. ನಾನು ನಿನ್ನನ್ನು ಬಹಳ ಪ್ರೀತಿಸುತ್ತೇನೆ....ನಿನಗೆ ನಾನು ಅರ್ಹನಲ್ಲ...." (ಅಲ್ಲೇ) ಹೀಗೆ ಹೊಸದಾಗಿ ನಲ್ಲೆಯನ್ನು ಒಲಿಸಿಕೊಳ್ಳಬಯಸುವ ಪ್ರಿಯನ ಹಾಗೆ ಮಾತನಾಡುತ್ತಾನೆ.

ಎರಡನೆಯ ವರ್ಗದ ಕಥೆಗಳಲ್ಲಿ ಒಂದು 'ಕೋರ್ಟಿನಲ್ಲಿ ಗೆದ್ದ ಎತ್ತು.'[1] ಅಖಿಲ ಭಾರತ ಚರಖ ಸಂಘದ ಖಾದಿ ವಸ್ತ್ರಾಲಯದ ವ್ಯವಸ್ಥಾಪಕ ವಿದ್ಯಾಶಂಕರ, ಸಾಧು ಸ್ವಭಾವದ ಬಡಪಾಯಿ. ರೈಲು ನಿಲ್ದಾಣದಿಂದ ಮೂಟೆಗಳನ್ನು ವಸ್ತ್ರಾಲಯಕ್ಕೆ ತರಲು ಇದ್ದ ಮುಸ್ಲಿಂ ಆಳನ್ನು ನೆಚ್ಚಿ ಇನ್ನೂರು ರೂಪಾಯಿ ಕೊಟ್ಟರೆ ಅವನು ಹಣವನ್ನೆ ನುಂಗಿಬಿಡುತ್ತಾನೆ. ಸಹೋದ್ಯೋಗಿಗಳ ಮಾತು ಕೇಳಿ ನ್ಯಾಯಾಲಯದ ಮೆಟ್ಟಿಲು ತುಳಿದ ವಿದ್ಯಾಶಂಕರರು ಖಾದಿರನ ಗಾಡಿಯನ್ನೂ ಎತ್ತನ್ನೂ ಅಮಾನತಿನ ಜಪ್ತಿ ಮಾಡಿಸುತ್ತಾರೆ. ಖಾದಿರ್ ರಸ್ತೆಯಲ್ಲಿಯೆ ಗಾಡಿ ಬಿಟ್ಟು ನಡೆಯುತ್ತಾನೆ. ಅದನ್ನು ಕೋರ್ಟಿಗೆ ಒಯ್ಯುವ ಪ್ರಯತ್ನದಲ್ಲಿ ಗಾಡಿ ಜಟಕಾ ಒಂದಕ್ಕೆ ಡಿಕ್ಕಿ ಹೊಡೆದು, ಚಕ್ರಗಳು ಜೀರಿಬೀರಿಯಾಗುತ್ತವೆ. ಮುಲ್ತಾನಿ ಸೇಟ್ ಒಬ್ಬ, "ಎತ್ತು ಗಾಡಿ ನನ್ನದು, ಖಾದಿರ ನನ್ನ ಆಳು. ಎತ್ತು ಗಾಡಿ ನನಗೆ ಹಿಂದಕ್ಕೆ ಕೊಡಿಸಬೇಕು. ನಷ್ಟವಾಗಿರುವ ಇವತ್ತಿನ ಬಾಡಿಗೆ ಹತ್ತು ರೂಪಾಯಿ ಕೊಡಿಸಬೇಕು" (ಪುಟ ೩೫) ಎನ್ನುತ್ತಾನೆ. ನ್ಯಾಯಾಲಯ ಮುಗಿದಮೇಲೆ ಗಾಡಿ–ಎತ್ತುಗಳನ್ನು ಏನು ಮಾಡಬೇಕೆಂದು ತಿಳಿಯದೆ ವಿದ್ಯಾಶಂಕರರಿಗೆ ದಿಗ್ಭ್ರಮೆಯಾಗುತ್ತದೆ. ಅನಂತರ, ವಿಚಾರಣೆ ಮುಗಿಯುವವರೆಗೆ, ನಿತ್ಯ ಒಂದು ರೂಪಾಯಿ ಐದು ಆಣೆ ನಾಲ್ಕು ಪೈ ಸಂಪಾದಿಸುತ್ತಿದ್ದ ವಿದ್ಯಾಶಂಕರರು ಎತ್ತಿಗೆ ದಿನಕ್ಕೆ ಒಂದೂವರೆ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹೇಗೋ ಎತ್ತನ್ನೂ ಗಾಡಿಯನ್ನೂ ಖಾದಿರನ ಮನೆಗೆ ಸಾಗಿ ಹಾಕಿ ನಿಟ್ಟುಸಿರುಬಿಡುತ್ತಾರೆ. ಆದರೆ ಕೇಂದ್ರಕಚೇರಿಯಿಂದ ಕಾಗದ ಬರುತ್ತದೆ: "ನೀವು ಖಾದಿರ್‌ಗೆ ಕೊಟ್ಟು ಕಳೆದುಕೊಂಡು ಇನ್ನೂರು ರೂಪಾಯಿಗಳನ್ನು ಕರಡು ಸಾಲದ (Bad debt) ಖಾತೆಗೆ ವರ್ಗಾಯಿಸಿದೆ. ನೀವು ಕೋರ್ಟಿಗೆ ಹೋಗಬೇಕಾದುದಿರಲಿಲ್ಲ. ಅನ್ಯಾಯಕ್ಕೆ ಪ್ರತೀಕಾರ

[1] 'ಕನ್ಯಾಕುಮಾರಿ ಮತ್ತು ಇತರ ಕಥೆಗಳು', ಪುಟ ೨೯–೪೦

ಮಾಡಬಾರದೆಂಬ ಮಹಾತ್ಮರ ವಾಕ್ಯ (Resist not evil) ಅಖಿಲ ಭಾರತ ಚರಖಾ ಸಂಘದ ಕೆಲಸದವರಿಗೆ ತಿಳಿದಿರಬೇಕು" (ಪುಟ ೪೦) ಎಂದು.

ಈ ವರ್ಗದ ಕಥೆಗಳಿಂದ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಬಹುದು: 'ಮಧ್ಯಮ ತರಗತಿ' ಸೀತಾರಾಮುವಿಗೆ ಸಂಬಳದ ದಿನ ಬಂದರೆ ದುಃಖವೇ; ಕಾರಣ, ಸಂಬಳ ಬಂದುದರಿಂದ ಸಮಸ್ಯೆಗಳು ಹೆಚ್ಚುತ್ತಿದ್ದುವು, ಅಷ್ಟೆ. ಮನೆಗೆ ಬರುತ್ತಲೇ ಹಣ ಕೊಡಬೇಕಾದವರಿಗೆಲ್ಲ ಕೊಟ್ಟ ಮೇಲೆ ಉಳಿದದ್ದು—ಒಂದೂ ಮುಕ್ಕಾಲು ರೂಪಾಯಿ. ಜೊತೆಗೆ, ಆರು ತಿಂಗಳ ಹಿಂದೆ ತೆಗೆದುಕೊಂಡಿದ್ದ ಸಾಲವನ್ನು ನೆನಪು ಕೊಟ್ಟ ಅಣ್ಣನ ಕಾಗದ ಬೇರೆ. ಮರುದಿನವೂ ಮನಸ್ಸಿಗೆ ಯೋಚನೆ. "ಈ ತಾಪತ್ರಯಗಳಿಗೆ ಕೊನೆ ಎಂದು, ಯಾವ ದುಂದುವೆಚ್ಚ ಮಾಡಿದ್ದೇವೆ ಹೀಗೆ ಕಷ್ಟ ಅನುಭವಿಸುವುದಕ್ಕೆ, ಮಕ್ಕಳಿಗೆ ಒಂದು ಚೂರು ಸಿಹಿ ತೆಗೆದುಕೊಂಡು ಹೋಗಿ ಎಷ್ಟು ದಿನಗಳಾಯಿತು? ಒಂದು ವರ್ಷದಿಂದ ಹಿರಿಯ ಹುಡುಗಿ ಸ್ನೋ ಬಾಟಲ್ ಬೇಡುತ್ತಿದೆಯಲ್ಲ?" ಹೀಗೆ ಯೋಚಿಸುತ್ತಿರುವಾಗಲೆ ಬಸ್‌ನಲ್ಲಿ ಮುಂದೆ ಕುಳಿತವರೊಬ್ಬರು ಬಾಯಿತುಂಬ ವೀಳೆದೆಲೆ ಹೊಗೆಸೊಪ್ಪು ತುಂಬಿಕೊಂಡವರು ಒಬ್ಬರ ಜೇಬಿನಲ್ಲಿದ್ದ ದಪ್ಪ ಲೆದರ್ ಪರ್ಸ್ ಅವನ ಕಣ್ಣನ್ನು ಸೆಳೆಯುತ್ತದೆ. ಆತ ಎದ್ದು ಹೋದ ಮೇಲೆ ಪರ್ಸ್ ಕೆಳಕ್ಕೆ ಬಿದ್ದಿದ್ದುದು ಕಾಣುತ್ತದೆ. ಅದನ್ನೆತ್ತಿಕೊಂಡು ಸೀತಾರಾಮು ಇಳಿಯುತ್ತಾನೆ. ಒಂದೆರಡು ನಿಮಿಷ ಅವನಿಗೆ ಮೈಮೇಲೆ ಪ್ರಜ್ಞೆಯೇ ಇಲ್ಲ. "ನಾನು ಏನು ಮಾಡಿಬಿಟ್ಟೆ!" ಎಂದು ದಿಗ್ಭ್ರಾಂತಿ. ತಾನು ಕಳವು ಮಾಡಿದೆ ಎಂದು ನಂಬಲೇ ಆತ. ಪರ್ಸನ್ನು ಹಿಂದಕ್ಕೆ ಕೊಡಬೇಕೆಂದರೆ—ಯಾರಿಗೆ ಕೊಡುವುದು? ಮನೆ ತಲುಪಿದರೆ, ಓಡಿ ಬಂದ ಮಗುವನ್ನು ಎತ್ತಿಕೊಳ್ಳಬೇಕೆಂದೂ ಲಕ್ಷ್ಯವಿಲ್ಲ. ಮಗು ಬಿದ್ದು ಅಳುತ್ತದೆ. ಪರ್ಸ್ ಬಿಚ್ಚಲೋ ಬೇಡವೋ ಎಂದು ಅನುಮಾನಿಸಿ ಅನುಮಾನಿಸಿ, ಬಿಚ್ಚುತ್ತಾನೆ. ಪರ್ಸ್‌ನಲ್ಲಿ ಮಡಿಸಿ ದುಂಡುದುಂಡು ಸುರಳಿ ಸುರಳಿಗಳಾಗಿ ಭರ್ತಿ ಮಾಡಿದ್ದ 'ಹೊಗೆಸೊಪ್ಪಿನ ಸಿಂಬೆಗಳು! ಹೆಂಡತಿ, "ಇದೇನು ಇದನ್ನೂ ಅಭ್ಯಾಸಮಾಡಿಕೊಂಡಿರಾ? ಹೊಸ ಪರ್ಸಿನಲ್ಲಿ ಇದನ್ನು ಯಾಕೆ ಹಾಕಬೇಕು?" ಎಂದು ಕೇಳುತ್ತಾಳೆ. ಸೀತಾರಾಮುವೂ ಬೇರೆ ಜ್ಞಾನದಲ್ಲಿ ಎಲ್ಲಿಯೋ ನೋಡುತ್ತ "ಹೌದು ಹೊಸ ಪರ್ಸಿನಲ್ಲಿ ಹೊಗೆಸೊಪ್ಪನ್ನು ಯಾಕೆ ಹಾಕಬೇಕು!" ಎಂದನು.

ಈ ಎರಡು ಕಥೆಗಳಲ್ಲೂ ಕೇಂದ್ರವ್ಯಕ್ತಿ ಪಡುವ ಕಷ್ಟ ದುರಂತದ ಭವ್ಯತೆಯನ್ನು ಮುಟ್ಟುವುದಿಲ್ಲ; ವ್ಯಕ್ತಿಯ ಅಪರಾಧಕ್ಕೆ ವಿಧಿಂದ ಶಿಕ್ಷೆ ಎಂದು ತೀರ್ಮಾನಿಸುವಂತಿಲ್ಲ. ನಿತ್ಯ ಜೀವನದ ಸಾಮಾನ್ಯ ಘಟನೆಗಳೇ ಕಥೆಗಳ ಸಾಮಗ್ರಿ. ವಿದ್ಯಾಶಂಕರರು ಖಾದಿರ್‌ನನ್ನು ನೆಚ್ಚಿ ಇನ್ನೂರು ರೂಪಾಯಿಗಳನ್ನು ಕೊಟ್ಟದ್ದು ತಪ್ಪು ಎಂದು ನಿಷ್ಠುರ 'ಆಡಿಟರ್' ಎನ್ನಬಹುದು; ಆದರೆ ವಿದ್ಯಾಶಂಕರರಿಗೆ ಮೊದಲು ಆ ಕೆಲಸದಲ್ಲಿದ್ದವರು ಖಾದಿರ್‌ನನ್ನು ನ್ಯಾಯವಾಗಿ ನಡೆದುಕೊಳ್ಳುತ್ತಾನೆ, ಅವನ ಮನೆಯ ಸುತ್ತಮುತ್ತ ಜಗಳವಾದರೆ ತೀರ್ಪು ಕೊಟ್ಟು ಶಾಂತಿ ಸಂಸ್ಥಾಪನೆ ಮಾಡುವವನೇ ಅವನು ಎಂದು

ಹೊಗೆಸೊಪ್ಪಲ್ಲ? ವಿದ್ಯಾಶಂಕರರು ಕೈಯಿಂದ ಹಣ ಹಾಕಿ ತೆಪ್ಪಗಿರುತ್ತಿದ್ದರು. ಜೊತೆಗಿದ್ದವರು, ಛೆ, ಕಡೆಗೆ ಅಗತ್ಯವಾದರೆ ಹಾಗೆ ಮಾಡುವುದು ಇದ್ದೇ ಇದೆ. ಅವನನ್ನು ಸುಮ್ಮನೆ ಬಿಟ್ಟುಬಿಡುವುದೆ ಎಂದರಲ್ಲ? ನಿಜ. ಅಖಿಲ ಭಾರತ ಚರಖಾ ಸಂಘದಲ್ಲಿ ಕೆಲಸದವನಿಗೆ ದುಷ್ಟತನಕ್ಕೆ ಪ್ರತೀಕಾರ ಮಾಡಬಾರದೆಂಬ ಮಹಾತ್ಮರ ತತ್ತ್ವ ತಿಳಿದಿರಬೇಕು. ತಿಳಿದುದೆ ಇರುವುದು ಮಹಾಪರಾಧವೆ? ಸೀತಾರಾಮು ಮನೆಯಲ್ಲಿ ಹುಡುಗರಿಗೆ ಎರಡು ಪೆಪ್ಪರ್‌ಮಿಂಟ್ ಕೊಳ್ಳಲಾರ. ಇಡೀ ತಿಂಗಳು ದುಡಿದು ತಂದ ಸಂಬಳದಲ್ಲಿ ಮೊದಲನೆಯ ತಾರೀಖೇ ರಾತ್ರಿ ಜೇಬಿನಲ್ಲಿ ಒಂದೂ ಮುಕ್ಕಾಲು ರೂಪಾಯಿ. ಕುಡಿಯಲಿಲ್ಲ, ಜೂಜಾಡಲಿಲ್ಲ, ಹೆಣ್ಣಿನ ಬೆನ್ನಟ್ಟಲಿಲ್ಲ. ನಾಲ್ಕು ಹೆಣ್ಣುಗಳಾದ ಮೇಲೆ ಒಂದು ಗಂಡು ಎಂದು ಸ್ವಲ್ಪ ಸಂಭ್ರಮದಿಂದ ಹುಟ್ಟಿದ ಹಬ್ಬ ಮಾಡಿ ಅದೇ ಮಹಾಪರಾಧ ಎಂದುಕೊಳ್ಳುವ ಸ್ಥಿತಿಯಾಗಿದೆಯಲ್ಲ? ಇನ್ಸ್ಪೆಕ್ಟರ ಪರ್ಸ್ ತೆಗೆದುಕೊಂಡ—ಅದೂ ಕೆಳಕ್ಕೆ ಬಿದ್ದದ್ದು. ಅದರೂ ತಪ್ಪು ತಪ್ಪಲ್ಲವೆ? ಪರ್ಸಿನಲ್ಲಿ ಏನೂ ಇರಲಿಲ್ಲ, ಆದರೂ ಮಾನಸಿಕವಾಗಿ ಕಳ್ಳತನ ಮಾಡಿದ ಅಲ್ಲವೆ? ವಿದ್ಯಾಶಂಕರರು ಪಸ್ತಿ ಮಾಡಿದ ಗಾಡಿಯನ್ನು ಕಟ್ಟಿಕೊಂಡು ಪಡುವ ಪಾಡನ್ನು ನೋಡಿ ನಗುತ್ತೇವೆ. ಎಂದರೆ, ನಮ್ಮಲ್ಲಿ ಕ್ರೌರ್ಯ ಇದೆ ಎಂದು ಅರ್ಥವಲ್ಲವೆ? ಆ ಘಟ್ಟದಲ್ಲಿ ನಾವಾದರೂ, "ದುಷ್ಟತನವನ್ನು ವಿರೋಧಿಸಬೇಡ" ಎಂಬ ಮಹಾತ್ಮರ ವಾಕ್ಯವನ್ನು ಸ್ಮರಿಸಿದ್ದೇವೆಯೊ? ಬಾದಿರ್ ಅಪ್ಪಟ ಪುಂಡ. ವಿದ್ಯಾಶಂಕರರು ಸಾಧು. ಇದು ತಿಳಿದೂ, ನಾವು ವಿದ್ಯಾಶಂಕರರನ್ನು ನೋಡಿ ನಗುವುದು ಏಕೆ? ಅವರ ಮುಗ್ಧತೆಯನ್ನು ಕಂಡಲ್ಲವೆ? ಬಾದಿರನ ಕಮೀನತನ ಮೆಚ್ಚಿಗೆಗೆ ವಸ್ತು, ವಿದ್ಯಾಶಂಕರರ ಮುಗ್ಧತೆ ಹಾಸ್ಯಕ್ಕೆ ವಸ್ತು—ಹೌದೆ? ಹಾಗಾದರೆ ನಗದೆ ಏನು ಮಾಡಬೇಕು? ಕಥೆಯ ಆ ಘಟ್ಟದಲ್ಲಿ ವಿದ್ಯಾಶಂಕರರ ಪ್ರಾಣಕ್ಕೇನೂ ಆಪತ್ತಿಲ್ಲ, ಅವರೇನೂ ಮನೆ ಮಠ ಕಳೆದುಕೊಂಡು ಭಿಕಾರಿಗಳಾಗಿಲ್ಲವಲ್ಲ? ಹಾಗಾದರೆ—ನಾವು ನಕ್ಕದ್ದು ಸರಿಯೆ? ಅದು ನಮ್ಮಲ್ಲಿರುವ ಕ್ರೌರ್ಯದ ಪ್ರದರ್ಶನ ಅಲ್ಲವೆ? ಸೀತಾರಾಮು 'ಕಪ್ಪು' ಪರ್ಸಿನಿಂದ ಹೊಗೆಸೊಪ್ಪು ಸುರಿಸುರಿಯಾಗಿ ಬಿದ್ದಾಗ, ನಮ್ಮ ಪ್ರತಿಕ್ರಿಯೆ ಏನು? ದಪ್ಪವಾಗಿದ್ದ ಹೊಸ ಪರ್ಸಿನಿಂದ ಒಂದಿಷ್ಟು ನೋಟುಗಳ ಕಂತೆ ಸುರಿದು ತನಗೆ ಸ್ವಲ್ಪವಾದರೂ ಸಹಾಯವಾದೀತು ಎಂದು ಅವನ—ಭಾಷೆಯಲ್ಲಿನ್ನೂ ಮೂಡಿರದ—ಆಸೆ! ನಮಗೂ ಅವನಲ್ಲಿ ಸಹಾನುಭೂತಿ. ಅವನಿಗೆ ಹಣ ಸಿಕ್ಕಲಿಲ್ಲ ಎಂದು ಸಹಾನುಭೂತಿ ನಮಗಾಗುತ್ತದೆಯೆ? ಅವನ ನಿರಾಶೆಯನ್ನು ಕಂಡು ನಗುವೆ? ಸತ್ಯ, ಸಾಧುಪ್ರಾಣಿ ತನ್ನದಲ್ಲದುದಕ್ಕೆ ಕೈ ಹಾಕಿದ್ದರೂ ವಿಧಿ ಅವನು ಕಳ್ಳನಾಗುವುದನ್ನು ತಪ್ಪಿಸಿತಲ್ಲ ಎಂದು ಸಮಾಧಾನವೆ? ಹೊಸ ಪರ್ಸಿನಲ್ಲಿ ಹೊಗೆಸೊಪ್ಪು ಏಕೆ ಎಂದು ಆಶ್ಚರ್ಯವೆ? ಎಲ್ಲ ಸೇರಿವೆ ಅಲ್ಲವೆ! ವಿದ್ಯಾಶಂಕರರು, ಸೀತಾರಾಮು ಇಬ್ಬರೂ ತಮ್ಮದಲ್ಲದ ಬೇರೆ ಪ್ರಪಂಚಕ್ಕೆ—ಪುಂಡತನದ ಪ್ರಪಂಚಕ್ಕೆ, ಸುಖಸಂಪತ್ತುಗಳ ಪ್ರಪಂಚಕ್ಕೆ, ಕಳ್ಳತನದ ಪ್ರಪಂಚಕ್ಕೆ—ಕಾಲಿಟ್ಟು ಹಿಂದಿರುಗಿದ್ದಾರೆ. ಅವರ ಅನುಭವವೇನೋ ವಿಚಿತ್ರವಾಯಿತು: ಅವರಿಗೆ ಶಿಕ್ಷಣ ದೊರೆಯಿತು ಎಂದು

ಸಂತೋಷ ಪಡೋಣವೆ? ಸಾಮಾನ್ಯ ಘಟನೆಗಳಿಂದ ನಿರ್ಮಿತವಾದ ಅನುಭವ ಇಂಥ ಕಥೆಗಳಲ್ಲಿ ಎಷ್ಟು ಸಂಕೀರ್ಣವಾದ, ಅನಿಶ್ಚಿತಾರ್ಥವಾದ ಸ್ವರೂಪವನ್ನು ಪಡೆಯುತ್ತದೆ ಎಂಬುದು ಬೆರಗುಗೊಳಿಸುವ ಅಂಶ.

ಗೊರೂರರು 'ವೈಯಾರಿ', 'ಶಿವರಾತ್ರಿ', 'ಉಸುಬು', 'ಗರುಡಗಂಬದ ದಾಸಯ್ಯ', 'ಬೆಸ್ತರ ಕರಿಯ', 'ಗೋಪುರದ ಬಾಗಿಲು', 'ಕಮ್ಮಾರ ವೀರಭದ್ರಾಚಾರಿ', 'ಕಥೆಗಳು ಮತ್ತು ವಿನೋದ ಚಿತ್ರಗಳು'—ಇಷ್ಟು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. (ಇವುಗಳಲ್ಲಿ ಕೆಲವು ಪ್ರಬಂಧಗಳೂ ಇವೆ.) ಮಾನವ ಸ್ವಭಾವದಲ್ಲಿ ಪ್ರಾಮಾಣಿಕವಾದ, ಸಹಜವಾದ, ಶಕ್ತಿಯುತವಾದ, ಲವಲವಿಕೆಯ ಆಸಕ್ತಿ ಇರುವುದರಿಂದ ಅವರು ಸೃಷ್ಟಿಸಿದ ಪಾತ್ರಗಳ ಸೃಷ್ಟಿಯ ವೈವಿಧ್ಯ ಆಶ್ಚರ್ಯಕರವಾದದ್ದು. ಅವರಿಗೆ ಪ್ರಪಂಚವನ್ನು ತಮ್ಮ ತತ್ತ್ವಕ್ಕನುಗುಣವಾಗಿ ಪುನರ್ನಿರ್ಮಾಣ ಮಾಡುವ ಅವಸರವಿಲ್ಲ. ಓರೆಕೋರೆಗಳಲ್ಲಿ ಮುಗ್ಧತೆ ಅಜ್ಞಾನಗಳಲ್ಲಿ ಸಹಾನುಭೂತಿ ತೋರಿಸಬಲ್ಲರು. ಇತರರನ್ನು ಮನುಷ್ಯರೆಂದು ಪರಿಗಣಿಸದೆ ಬರಿಯ ಸಾಧನೆಗಳೆಂದು ಪರಿಗಣಿಸುವ ಸ್ವಾರ್ಥ ಮಾತ್ರ ಅವರಿಗಾಗದು: ಜೀವನದಲ್ಲಿ ಲವಲವಿಕೆಯ, ಉತ್ಸಾಹದ ಆಸಕ್ತಿ ಇದ್ದರೆ ನೂರು ದೋಷಗಳನ್ನು ಕಡೆಗಣಿಸಿಯಾರು. ಅವರ ಕೆಲವು ಕಥೆಗಳ ಮೂಲಕ ಅವರ ಕಥಾಸೃಷ್ಟಿಯ ವೈವಿಧ್ಯವನ್ನೂ, ಬೆಲೆಯನ್ನೂ ಸೂಚಿಸಲು ಪ್ರಯತ್ನಿಸಿದ್ದೇನೆ. ಭಾರತೀಯ ಸಾಹಿತ್ಯಕ್ಕೂ ಪಾಶ್ಚಾತ್ಯ ಸಾಹಿತ್ಯದ ಬಹುಭಾಗಕ್ಕೂ ಒಂದು ಮುಖ್ಯ ವ್ಯತ್ಯಾಸ, ಭಾರತೀಯ ಸಾಹಿತ್ಯ ಮನಸ್ಸಿನ ಶಾಂತಿಯತ್ತ ವಾಲುತ್ತದೆ ಎನ್ನುವುದು. ಇದು ಜೀವನದ ಕಷ್ಟ, ಅನ್ಯಾಯ, ಕೆಟ್ಟತನಗಳಿಗೆ ಕಣ್ಣುಮುಚ್ಚಿ ಸುಲಭವಾಗಿ ಗಳಿಸಿದ ಶಾಂತಿಯಲ್ಲ. ಇವೆಲ್ಲ ಇದ್ದರೂ ಮನುಷ್ಯ ಶಾಂತಿಯನ್ನು ಗಳಿಸದೆ ಗತ್ಯಂತರವಿಲ್ಲ. ಇವುಗಳ ನಡುವೆ ಇದ್ದೂ ವ್ಯಕ್ತಿ ಪ್ರಮಾಣದ ಅರಿವನ್ನು—Perspective ಅನ್ನು—ಸಾಧಿಸಿ, ತನಗೆಷ್ಟು ಪ್ರಾಧಾನ್ಯ ಸಲ್ಲಬೇಕು ಎಂಬುದನ್ನೂ ತಿಳಿದು ಕಂಡುಕೊಂಡ ಶಾಂತಿ. ನೋವನ್ನು ಅನುಭವಿಸಿ ಸಹಿಸಿಕೊಂಡ ಶಾಂತಿ. ವ್ಯಕ್ತಿಯ ಮೇಲೆಯೇ ಬೆಳಕೆಲ್ಲ ಕೇಂದ್ರೀಕೃತವಾಗಿದ್ದು, ಬಂಡಾಯವೇ ಜೀವಂತಿಕೆಯ ಲಕ್ಷಣ, ಸಾಕ್ಷ್ಯ ಎನ್ನುವ ಭಾವನೆ ಬೆಳೆಯುತ್ತಿರುವ ಕಾಲದಲ್ಲಿ ಗೊರೂರರ ಕಥೆಗಳು ವಿಲಕ್ಷಣವಾಗಿ ಕಾಣುತ್ತವೆ. (ಅನ್ಯಾಯ, ಸಮಾಜದ ಕೊಳೆ ಇವನ್ನು ಕಾಣದ 'ಆಸ್ಟ್ರಿಚ್ ನೀತಿ'ಯನ್ನೇನೂ ನಾನು ಪ್ರತಿಪಾದಿಸುತ್ತಿಲ್ಲ.) ಜೀವನದಲ್ಲಿ, ಸಾಹಿತ್ಯದಲ್ಲಿ ಪ್ರಕ್ಷುಬ್ಧತೆಯೇ ಬೆಳೆಯುತ್ತಿರುವ ಈ ದಿನಗಳಲ್ಲಿ ತಿಳಿಹಾಸ್ಯ, ಅಹಂಭಾವಕ್ಕೆ ಕಡಿವಾಣ ಹಾಕಿ ಸಾಧಿಸಿದ ಶಾಂತಿ—ಇವುಗಳಿಂದ ಶ್ರೀಮಂತವಾದ ಅನುಭವವನ್ನು ನೀಡುವ ಕಥೆಗಳು ವಿಶಿಷ್ಟವಾಗಿ ಕಾಣುತ್ತವೆ. ಗೊರೂರರ ಎಷ್ಟೋ ಕಥೆಗಳು ಒಳ್ಳೆಯ ಕಥೆಗಳಷ್ಟೆ ಎಂದರೂ ಉತ್ತಮ ಕಥೆಗಳು ಎನ್ನಬಹುದಾದವು ತಕ್ಕಷ್ಟು ಸಂಖ್ಯೆಯಲ್ಲಿ ಅವರ ಲೇಖನಿಯಿಂದ ಬಂದಿವೆ. ಮುಗ್ಧತೆಗೆ ಸೆರೆಯಾಗದ ಆದರ್ಶತ್ವ, ಸರಳೀಕರಣಕ್ಕೆ ಸೆರೆಯಾಗದ ವಾಸ್ತವಿಕೆ, ಅನುಕಂಪವನ್ನು ಬಿಡದ ತಿಳಿಹಾಸ್ಯ, ಮಾನವಸ್ವಭಾವದಲ್ಲಿ ಸಹಜವಾದ ಮತ್ತು ಉದಾರವಾದ ಆಸಕ್ತಿ—ಇವು ಅವರ ಕಥಾ ಸಾಹಿತ್ಯಕ್ಕೆ ಜೀವವನ್ನೂ, ಬೆಲೆಯನ್ನೂ ತಂದಿವೆ.

ಅನುವಾದಿತ ಕಥೆಗಳು

ಬಿ. ಎಸ್. ರುಕ್ಕಮ್ಮ

೧

'ಪಾಶ್ಚಾತ್ಯರ ಪುರಾತನ ಕಥೆಗಳು' ಮತ್ತು 'ಕೊನೆಸ್ಟ್ರೈ ಕಥೆಗಳು' ಎಂಬ ಗೊರೂರರ ಈ ಎರಡು ಗ್ರಂಥಗಳು ಅನುವಾದಿತ ಕೃತಿಗಳು. ಒಂದು ಆಂಗ್ಲ ಭಾಷೆಯ ಪ್ರಾಚೀನ ಕಥೆಗಳ ಅನುವಾದವಾದರೆ ಇನ್ನೊಂದು ನಾಲ್ಕು ದಶಕಗಳ ಹಿಂದಿನ ತಮಿಳು ಗ್ರಂಥದ ಭಾಷಾಂತರ. ಎರಡೂ ಕಥೆಗಳೇ ಆದರೂ ಅವುಗಳಲ್ಲಿ ಎಷ್ಟೊಂದು ಭಿನ್ನತೆ. ವಸ್ತು ಮತ್ತು ರೀತಿಗಳಲ್ಲಿ ಆಗಿರುವ ಬದಲಾವಣೆ ಸಹಜವೇ. ಏಕೆಂದರೆ ಸಾವಿರಾರು ವರುಷಗಳ ಅಂತರ ಈ ಎರಡು ಕೃತಿಗಳ ನಡುವೆ ಇದೆ. ಕಥಾಸಾಹಿತ್ಯ ಪ್ರಕಾರ ವಿಕಾಸ ಗೊಂಡ ಹಾದಿಯ ಎರಡು ಘಟ್ಟಗಳನ್ನು ಇಲ್ಲಿ ಗುರುತಿಸಬಹುದು.

ಶೌರ್ಯ ಶೃಂಗಾರ ಧರ್ಮಗಳನ್ನು ವಸ್ತುವನ್ನಾಗುಳ್ಳ ಈ ಪಾಶ್ಚಾತ್ಯ ಪುರಾತನ ಕಥೆಗಳು ಅಂದಿನ ಜನತೆಯ ಬಾಳಿನೊಲವನ್ನೂ ವಿಚಾರವಂತಿಕೆಯನ್ನೂ ಪ್ರತಿಬಿಂಬಿಸುತ್ತವೆ. ಕೃತಿಯಲ್ಲಿ ಒಟ್ಟು ಆರು ಕಥೆಗಳಿವೆ. ಈ ಕಥೆಗಳನ್ನು ಕನ್ನಡಕ್ಕೆ ತರುವಲ್ಲಿ ಲೇಖಕರು ಹೀಗೆ ನುಡಿದಿದ್ದಾರೆ :

> ಈಗ ಕೆಲವು ವರ್ಷಗಳ ಹಿಂದೆ ನಾನು ಒಂದು ಸ್ಕೂಲಿನಲ್ಲಿ ಹುಡುಗರಿಗೆ ನೀತಿ ಪಾಠಗಳನ್ನು ಹೇಳುತ್ತಿದ್ದೆನು. ರಾಮಾಯಣ, ಭಾರತ, ಭಾಗವತದಿಂದ ಕತೆ ಗಳನ್ನು ಹೇಳಿ ಹೇಳಿ ನನಗೂ, ಕೇಳಿ ಕೇಳಿ ಹುಡುಗರಿಗೂ ಬೇಸರಿಕೆಯಾಗಿತ್ತು. ಆಗ ನನ್ನ ಸ್ನೇಹಿತರೊಬ್ಬರು ಕೆಲವು ಪಾಶ್ಚಾತ್ಯ ಕಥೆಗಳ ಪುಸ್ತಕಗಳನ್ನು ನನ್ನ ಕೈಗೆ ಹಾಕಿದರು. ಅವುಗಳ ಪೈಕಿ ಆಗ ೩೦ ಕತೆಗಳನ್ನು ಕನ್ನಡದಲ್ಲಿ ಬರೆದಿದ್ದೆನು. ಆ ಕತೆಗಳ ಪೈಕಿ ಆರು ಕತೆಗಳನ್ನು ಇಲ್ಲಿ ಅಚ್ಚುಹಾಕಿದ್ದೇನೆ. (ಪುಟ iii)

ಇದರಿಂದ ಹೇಳಿದ್ದನ್ನೇ ಹೇಳಿ ಕೇಳಿದ್ದನ್ನೇ ಕೇಳಿ ಜಿಡ್ಡು ಹಿಡಿದ ಮನಸ್ಸಿಗೆ ಹೊಸ

ರುಚಿ ಮೂಡಿತು. ಅಲ್ಲಿ ಬೇರೊಂದು ಸಮಾಜದ ಚಿತ್ರಣವಾದುದರಿಂದ ವೈವಿಧ್ಯ ನೆಲೆಗೊಂಡಿತು. ಏನೇ ಆಗಲಿ ನಮ್ಮೂರಿನ ಎಳೆಯ ಜೀವಿಗಳಿಗೆ ಹೊಸತನವೂ ವೈವಿಧ್ಯವೂ ಇರಬೇಕು. ಇತರ ಜನಾಂಗಗಳ ಆದರ್ಶ ಧರ್ಮಗಳ ತಿಳುವಳಿಕೆ ಅವರಿಗಾಗಬೇಕು. ಅದಕ್ಕೂ ನಮ್ಮ ಆದರ್ಶಗಳಿಗೂ ಇರುವ ಹೋಲಿಕೆ ವ್ಯತ್ಯಾಸಗಳು ಗೊತ್ತಾಗಬೇಕು. ಹೊಸ ಅರಿವು, ಹೊಸತನ ಅವರದಾಗಬೇಕು.

ಈ ಗ್ರಂಥದ ಮೊದಲ ಕಥೆ—'ಕಷ್ಟಕ್ಕೆ ಒಳಗಾದ ಸತಿ' ಎಂಬುದು. ಇದು ಪ್ರಸಿದ್ಧಳಾದ ಜಿನಿವೀವಳ ಕಥೆ. ಆಕೆ ನಮ್ರಳು, ಮಧುರವಾದ ಸ್ವಭಾವವುಳ್ಳವಳು. ಪರಿಶುದ್ಧೆ, ಮೇಲಾಗಿ ಚೆಲುವೆ. ಇಂತಹ ಅಪೂರ್ವ ಗುಣವತಿಯನ್ನು ಅದೃಷ್ಟಶಾಲಿಯೂ ಬಹಳ ಶೂರನೂ ಆದ ಕೌಂಟ್ ಸಿಫ್ರಾಯ್ ಮದುವೆಯಾದ. ಅವರು ಬಹುಕಾಲ ಸುಖಸಂಸಾರ ಮಾಡಬಹುದೆಂಬ ನಿರೀಕ್ಷೆ ತಳಮೇಲಾಯಿತು. ಒದಗಿ ಬಂದ ಯುದ್ಧದ ದೆಸೆಯಿಂದ ಅಲ್ಪ ಕಾಲ ಮಾತ್ರ ಸವಿದ ಸಂಸಾರ ಸುಖಕ್ಕೆ ಎರವಾಗಿ ಯುದ್ಧಕ್ಕೆ ಹೊರಡಬೇಕಾಯಿತು. ಹೊರಡುವಾಗ ಗೋಲೋ ಎಂಬ ಸರದಾರನ ರಕ್ಷಣೆಗೆ ಒಪ್ಪಿಸಿ ಹೊರಟ. ಗೋಲೋವಿನ ಮನ ಒಡತಿಯ ಚೆಲುವಿನಿಂದ ವಿಚಲಿತವಾಯಿತು; ಅವಳ ಒಪ್ಪಿಗೆ ಇಲ್ಲದೆ ಹೋಗಿ ಕ್ರೂರವಾಯಿತು. ಹಿಂದಿರುಗಲಿದ್ದ ಸಿಫ್ರಾಯ್ ಮನಸ್ಸಿಗೆ ಗೋಲೋ ಹುಳಿ ಹಿಂಡಿಬಿಟ್ಟನು. ಹೆಂಡತಿಯ ಪರಿಶುದ್ಧತೆಯಲ್ಲಿ ಅಪನಂಬಿಕೆಪಟ್ಟು ಅವಳ ಮತ್ತು ಅವಳ ಪುತ್ರನ ವಧೆಗೆ ಅಪ್ಪಣೆ ಮಾಡಿಬಿಟ್ಟನು. ಒಡೆಯನಿನ್ನೂ ಮನೆಗೆ ಹಿಂದಿರುಗಿಲ್ಲ. ಜಿನಿವೀವಳು ಮಗನೊಡನೆ ವಧಾಸ್ಥಾನವನ್ನು ಸೇರಿದಳು. ಸ್ವಾಮಿಯ ನಂಬಿಕೆಗೆ ಪಾತ್ರನಾದ ಸೇವಕನಲ್ಲಿ ಕರುಣೆ ಇಲ್ಲದಿರಬಹುದು; ಕಟುಕರಿಗೆ ಕರುಣೆ ಉಂಟಾಯಿತು. ಯಾರೂ ಸುಳಿಯದ ಕಾಡಿನಲ್ಲಿ ಅವರಿಬ್ಬರನ್ನೂ ತೊರೆದು ಬಂದರು. ಜಿಂಕೆಯ ಹಾಲು ಕುಡಿದು ಮಗು ಬೆಳೆಯಿತು. ಗೆಡ್ಡೆಗೆಣಸು ತಿನ್ನುತ್ತ ಕೂದಲಿನಲ್ಲಿ ಮೈಮುಚ್ಚಿಕೊಂಡು ಏಳು ವರ್ಷಗಳ ಕಾಲ ಅವಳು ಮರುಗಿದಳು—"ದುಷ್ಟನಿಗ್ರಹ ಶಿಷ್ಟಪರಿಪಾಲಕನಾದ ಎಲೈ ದೇವರೇ ! ಅನ್ಯಾಯವಾಗಿ ಈ ದುಃಖವನ್ನು ನಾನು ಇನ್ನೆಷ್ಟು ದಿನ ಅನುಭವಿಸಬೇಕೆಂದು ನಿನ್ನ ಇಷ್ಟ....ಈ ಕಷ್ಟವನ್ನು ಅನುಭವಿಸಲು ನಾನು ಮಾಡಿದುದೇನು ?" (ಪುಟ ೨೦) "ಮಗಳೇ! ದೇವರು ಅನುಭವಿಸಿದುದನ್ನು ನೀನು ನಮ್ರತೆಯಿಂದ ಅನುಭವಿಸಲಾರೆಯಾ? ಅವನನ್ನು ಯಾವ ತಪ್ಪಿಗಾಗಿ ಶಿಲುಬೆಗೆ ನೇತುಹಾಕಿ ಕೊಂದರು ? ಸಹನೆಯಿಂದಿರು. ದೇವರು ಅನುಭವಿಸಿದ ಕಷ್ಟವನ್ನು ಅನುಭವಿಸಲು ನೀನು ಅರ್ಹಳಾದುದಕ್ಕಾಗಿ ಸಂತೋಷಪಡು. ದೇವರ ದಾರಿ ಮನುಷ್ಯರ ದಾರಿಯಂತೆ ಅಲ್ಲ" (ಪುಟ ೨೦–೨೧) ಎಂಬ ಧ್ವನಿ ಕೇಳಿ ಬಂತು. ಜಿನಿವೀವಳು ಕಣ್ಣೀರು ಸುರಿಸುತ್ತ "ದೇವರೇ, ನನ್ನ ಇಷ್ಟವಲ್ಲ. ನಿನ್ನ ಇಷ್ಟವೇ ನಡೆಯಲಿ" (ಪುಟ ೨೧) ಎಂದುಕೊಂಡಳು.

ಈ ಸಮರ್ಪಣ ಭಾವವೇ ತಾನೆ, ಭಕ್ತರ ಆದರ್ಶ.

ಮುಂದೆ ಸಿಫ್ರಾಯ್‌ಯ ಮನದ ಸಂದೇಹ ನಿವಾರಣೆಯಾಯಿತು. ಜಿನಿವೀವಳು

ಆತನಿಗೆ ಬರೆದಿಟ್ಟಿದ್ದ ಪತ್ರ ದೊರೆಯಿತು. ಈ ಕತೆಗಾರನ ನಿರಾಡಂಬರವಾದ ಅರ್ಥಪತ್ತಾದ ಶೈಲಿಯನ್ನೂ ಪ್ರೌಢವಾದ ವಿಚಾರಧಾರೆಯನ್ನೂ ಮೆಚ್ಚದಿರುವುದು ಹೇಗೆ?

ಉದಾರಿಯಾದ ಒಡೆಯನೇ, ಮತ್ತು ಪ್ರೀತಿಪಾತ್ರನಾದ ನಲ್ಲನೇ ! ನನ್ನನ್ನು ಮರಣ ದಂಡನೆಗೆ ನೀನು ಗುರಿಮಾಡಿದ್ದೀಯೆಂದು ನಾನು ತಿಳಿದೆ; ಮತ್ತು ನಿನ್ನಿಂದ ಬೀಳ್ಕೊಳ್ಳಲು ಈ ಕಾಗದವನ್ನು ಬರೆಯುತ್ತಿದ್ದೇನೆ. ನನಗೆ ಈ ಶಿಕ್ಷೆಯು ತಕ್ಕುದೆಂದು ನೀನು ಯೋಚಿಸುವುದು ಮರಣಕ್ಕಿಂತ ಕ್ರೂರವಾದುದಾದರೂ, ಅದು ನಿನ್ನ ಇಚ್ಛೆಯಾದುದರಿಂದ ನಾನು ಒಂದು ಪ್ರತಿ ಮಾತನ್ನೂ ಆಡದೆ ಸಾಯುತ್ತೇನೆ. ಪರಿಶುದ್ಧಳಾದ ನಿನ್ನ ಹೆಂಡತಿಯ ಹೆಸರನ್ನು ಕೆಡಿಸಲು, ನೀನು ಅವಕಾಶವನ್ನು ಕೊಟ್ಟಿರುವ ಆ ನೀಚನ ಬಯಕೆಗ್ಗೂ, ಬಲಿಗೂ ಒಳಗಾಗದೇ, ನಿನ್ನಲ್ಲೇ ಪೂರ್ಣವಾದ ಪ್ರೀತಿಯನ್ನಿಟ್ಟಿರುವುದೇ ನನ್ನ ಮುಖ್ಯ ಅಪರಾಧ. ನನ್ನ ಕೊಲೆಗಡುಕನ ಕ್ರೌರ್ಯಕ್ಕೆ ತುತ್ತಾಗಿ, ನನ್ನ ಕೂಡ ಸಾಯಬೇಕಾಗಿರುವ ನಿನ್ನ ಮಗನನ್ನು ನಾನು ಹಡೆದುದೇ ನನ್ನ ಮುಖ್ಯ ವ್ಯಸನ. ನನ್ನ ನಂಬಿಕೆಯು ದೇವರಲ್ಲಿದೆ. ಅವನು ಒಂದು ದಿವಸ ನನ್ನ ನಿರಪರಾಧಿತ್ವವನ್ನು ಹೊರಗೆಡವಿ, ನನ್ನ ಶತ್ರುಗಳನ್ನು ನಾಶಮಾಡುತ್ತಾನೆ. ನಿನ್ನನ್ನೂ, ನಿನ್ನನ್ನು ಮೋಸಪಡಿಸಿದವನನ್ನೂ ನಾನು ಕ್ಷಮಿಸಿದ್ದೇನೆ. ನಾನು ಇಷ್ಟರಲ್ಲಿಯೇ ದೇವರ ಎದುರಿಗೆ ಹೋಗಬೇಕಾಗಿದೆ. ನನ್ನ ಜೀವಮಾನದಲ್ಲೆಲ್ಲಾ ನಿನ್ನನ್ನು ಹೊರತು ಮತ್ತಾರನ್ನೂ ಪ್ರೀತಿಸಲಿಲ್ಲವೆಂಬುವಕ್ಕೆ ಆ ದೇವರನ್ನು ಸಾಕ್ಷಿಯನ್ನಾಗಿ ಕರೆಯುತ್ತೇನೆ. ನನಗೆ ಏನು ಸಂಭವಿಸಿದರೂ, ನೀನು ಸುಖಿಯಾಗಿರಬೇಕೆಂದು ನಾನು ಎಂದಿನಂತೆ ಈಗಲೂ ಪ್ರಾರ್ಥಿಸುತ್ತೇನೆ. ಮರಣದವರೆಗೆ ನಿನ್ನನ್ನೇ ನಂಬಿ ನಿನ್ನಲ್ಲಿ ಪ್ರೇಮವುಳ್ಳವಳಾಗಿ, ಈ ರೀತಿ ಬೀಳ್ಕೊಳ್ಳುತ್ತೇನೆ. ಜಿನಿವೀವ್. (ಪುಟ ೨೨-೨೩)

ಈ ಪತ್ರ ಎಷ್ಟು ಸ್ಫುಟವಾಗಿ ಜಿನಿವೀವಳ ವ್ಯಕ್ತಿತ್ವವನ್ನು ಚಿತ್ರಿಸುವುದು. ಪ್ರತಿ ಮಾಡಿಟ್ಟ ನೀರೆಯಂತೆ ಅವಳ ಮನಸ್ಸು. ವಿಷಾದದಲ್ಲಿಯೂ ಅದೇ ವಿವೇಕ. ಸುಖದಲ್ಲಿ ಸಂಪತ್ತಿನಲ್ಲಿ ಹೇಗೋ ಕಷ್ಟದಲ್ಲಿ ಅವಮಾನದಲ್ಲಿಯೂ ಅಂತಹುದೇ ನಂಬಿಕೆ. ಇಂತಹ ಸಂಯಮ, ವಿವೇಕಕ್ಕಾಗಿ ತಾನೆ ನಾವೆಲ್ಲಾ ಹಾತೊರೆಯುವುದು.

ಮುಂದೆ ಗಂಡ ಹೆಂಡಿರು ಸೇರಿದರು. ಮಗನ ಭವಿಷ್ಯ ಉತ್ತಮವಾಯಿತು. ಸಂತುಷ್ಟಳಾದರೂ ಹಿಂದೆ ಅರಣ್ಯದಲ್ಲಿ ಕಷ್ಟಪಾಡಿನಿಂದ ಜಿನಿವೀವಳು ನಿಶ್ಶಕ್ತಳಾದಳು. ಮಗನನ್ನು ಕಾಪಾಡಬೇಕೆಂಬ ಅವಳ ತಾಯ್ತನದ ಭಾವ ಹಿಂದೆಯೇ ಅವಳೆಲ್ಲ ಶಕ್ತಿಯನ್ನು ವಿನಿಯೋಗಿಸಿತ್ತು. ಈಗ ರಕ್ಷಿತಳಾದರೂ ದುರ್ಬಲೆಯಾಗಿ ಕೊನೆಯ ಉಸಿರು ಎಳೆದಳು. ಕ್ರೂರನಾದ ಸಿಫ್ರಾಯ್ ಪ್ರೇಮದಲ್ಲಿ ನೊಂದು ವಿರಕ್ತನಾದನು.

ಈ ಕಥೆ ಎಷ್ಟು ನಿರಾಡಂಬರವಾದುದೋ ಅಷ್ಟೇ ಸಹಜವಾದ ಸನ್ನಿವೇಶಗಳಿಂದ ಉತ್ತಮ ಪಾತ್ರಚಿತ್ರಣದಿಂದ ಕೂಡಿ ಬಹಳ ಸುಂದರವಾದುದು.

'ಮೋಸಗಾರ ಸೇವಕ' ಎಂಬ ಕಥೆಯು ಹೆಸರೇ ಅದರ ಅಂತರ್ಯವನ್ನು ಹೇಳುತ್ತದೆ.

ತನ್ನ ದಯಾಗುಣದಿಂದ ಮೂವರು ಕೈದಿಗಳಿಗೆ ಸಹಾಯಮಾಡಿ ಗಡಿಪಾರಾದ ರಾಜಕುಮಾರ ರೋಸ್ವಾಲನು ದಾರಿಯಲ್ಲಿ ತನ್ನ ಸೇವಕನ ಮೋಸಕ್ಕೆ ಪಕ್ಕಾಗಿ ತನ್ನ ದುರದೃಷ್ಟಕ್ಕೆ ಗೋಳಿಡುತ್ತಿರುವಾಗ ರಾಜಕುಮಾರಿಯ ದಯೆಗೆ ಪಾತ್ರನಾಗಿ ತನ್ನ ಸಾಹಸ ಚಾತುರ್ಯಗಳಿಂದ ಕುಮಾರಿಯ ಪ್ರೇಮಕ್ಕೆ ಪಾತ್ರನಾಗುವನು. ವೃದ್ಧ ಸರದಾರರು ಅವನಿಗೆ ಪ್ರತ್ಯುಪಕಾರ ಮಾಡಿದುದರ ಫಲವಾಗಿ ಸ್ಪರ್ಧೆಗಳಲ್ಲಿ ಗೆದ್ದು, ಸುಳ್ಳು ರಾಜಕುಮಾರನನ್ನು ಸೋಲಿಸಿ ತನ್ನ ಸ್ಥಾನವನ್ನು ಪುನಃ ಪಡೆಯುವನು. ಮೋಸ ವಂಚನೆಗಳಿಗೆ ತಕ್ಕ ಶಿಕ್ಷೆಯಾಗಿ ದಯಾಗುಣ ಪರೋಪಕಾರ ಬುದ್ಧಿಯುಳ್ಳವನಿಗೆ ಕೊನೆಯಲ್ಲಿ ಒಳಿತಾಗುವುದೆಂಬ ನಂಬಿಕೆ ಈ ಕಥೆಯಲ್ಲಿ ವ್ಯಕ್ತವಾಗುವುದು.

'ಒಂದು ಪುರಾತನ ಕಥೆ' ಮತ್ತು 'ಶೂರ ಸರದಾರ' ಎಂಬ ಕಥೆಗಳಲ್ಲಿ ಸ್ವಲ್ಪ ಮಟ್ಟಿನ ಸಾಮ್ಯವಿದೆ. ಪ್ರಾರಂಭದಲ್ಲಿ ಕಥೆಯ ಬೆಳವಣಿಗೆಯ ಕೆಲಸಂಶಗಳಲ್ಲಿ ಸಾಮ್ಯವಿದ್ದು ಅಂತ್ಯವು ತೀರಾ ವಿರುದ್ಧವಾಗಿದೆ.

'ಒಂದು ಪುರಾತನ ಕಥೆ'ಯಲ್ಲಿ ಪೀಟರ್ ಮತ್ತು ಮಾಗ್ದಲೋನರು ಪರಸ್ಪರ ಶೌರ್ಯ ಮತ್ತು ಸೌಂದರ್ಯದಿಂದ ಆಕರ್ಷಿತರಾಗಿ ಹಿರಿಯರ ಸಹಾಯವನ್ನು ಕಾಣದೆ, ಅರಮನೆಗಳನ್ನು ತೊರೆದು, ಪರಸ್ಪರ ಅಗಲುತ್ತಾರೆ. ಪೀಟರನು ದೇಶಾಂತರಗಳಲ್ಲಿ ಶೌರ್ಯವನ್ನು ತೋರಿದರೆ ಮಾಗ್ದಲೋನ ಸನ್ಯಾಸಿನಿಯಂತೆ ಬಾಳುತ್ತ ದೀನದಲಿತರನ್ನು ಸೇವಿಸುತ್ತಾಳೆ. ಕೊನೆಗೊಮ್ಮೆ ಒಂದಾಗುತ್ತಾರೆ.

'ಶೂರ ಸರದಾರ' ಎಂಬ ಕಥೆ ಬೇರೊಂದು ಆಳಕ್ಕೆ ಇಳಿಯುತ್ತದೆ. ಸಾಮಾನ್ಯ ಸರದಾರನೊಬ್ಬ ಗರ್ವಿಷ್ಠೆಯೂ ಚೆಲುವೆಯೂ ಆದ ರಾಜಕುಮಾರಿಯನ್ನು ಪ್ರೀತಿಸುವ ಸಾಹಸ ಮಾಡುವನು. ತನ್ನ ಶೌರ್ಯ ಸಾಹಸಗಳಿಂದ ಅವಳನ್ನು ಮೆಚ್ಚಿಸುವನು. ಪುರಾಣ ಕಥೆಗಳಲ್ಲಿ ಮಾತ್ರ ಕಂಡುಬರುವಂತಹ ರೆಕ್ಕೆಗಳೂ ಉಗುರುಗಳೂ ಇರುವ ಸರ್ಪವನ್ನು ಗೈ ಇಲ್ಲಿ ಸಂಹರಿಸಿದ ನಂತರ ಚಕ್ರವರ್ತಿಗಳ ಕನ್ಯೆಯರೂ ಅವನನ್ನು ಹಂಬಲಿಸುವಂತಾಗುತ್ತದೆ. ಪ್ರೇಮದ ಹುರುಪಿನಲ್ಲಿ ಇಂತಹ ಉನ್ನತಿಗೇರಿ ತಾನು ಬಯಸಿದ್ದ ಫೆಲಿಸಳನ್ನು ವಿವಾಹವಾಗುವನು. ಬಹಳ ಸುಖಿಯಾಗಿ ಅದೃಷ್ಟಶಾಲಿಯಾಗಿ ಸ್ವಲ್ಪ ಕಾಲ ಕಳೆದಮೇಲೆ ದೇವರು ನನಗೆ ಇಷ್ಟೆಲ್ಲ ಭಾಗ್ಯವನ್ನು ಕೊಟ್ಟ. ನಾನು ಆತನಿಗಾಗಿ ಯಾವ ಸೇವೆ ಮಾಡಿದೆ? ಇದೆಲ್ಲ ಒಬ್ಬ ಹೆಂಗಸಿಗಾಗಿ ಪಟ್ಟ ಶ್ರಮವಲ್ಲವೆ ಎಂದು ದುಃಖವುಂಟಾಯಿತು. ಅವನ ಮನಸ್ಸು ದೈವಮುಖಿಯಾಯಿತು. ಇದುವರೆಗೆ ಸಾಹಸದ ಹೆಸರಿನಲ್ಲಿ ಗೋರಿ ಗುಡ್ಡೆ ಇಟ್ಟುಕೊಂಡ ಪಾಪವನ್ನು ಕಳೆದುಕೊಳ್ಳಲು ತಪಸ್ಸು ಮಾಡಬೇಕು. ಪವಿತ್ರವಾದ ದುಃಖದಲ್ಲಿ ಪಶ್ಚಾತ್ತಾಪದಲ್ಲಿ ಕಾಲಕಳೆಯಬೇಕು. ಪವಿತ್ರಕ್ಷೇತ್ರಗಳಲ್ಲಿ ಸನ್ಯಾಸಿಯಂತೆ ಬಾಳಬೇಕೆಂದು ಪತ್ನಿಯನ್ನು ತೊರೆದು ತನ್ನ ಖಡ್ಗವನ್ನು ಹುಟ್ಟಲಿರುವ ತನ್ನ ಮಗನಿಗೆ ಕೊಡುವಂತೆ ತಿಳಿಸಿ ನಡೆದನು. ಇತ್ತ ಪತ್ನಿಯೂ ಅವನಿಗಾಗಿ ಕಾಯುತ್ತ, ಹುಡುಕಿಸುತ್ತ ದಾನ ಧರ್ಮಗಳಲ್ಲಿ ತನ್ನ ದುಃಖವನ್ನು ಮರೆಯಲು ಯತ್ನಿಸಿದಳು.

ಬಹುಕಾಲದ ಮೇಲೆ ಸನ್ಯಾಸಿಯ ವೇಷದಲ್ಲಿ ಹಿಂದಿರುಗಿದ ಗ್ಯೈ. ಅಧಿಕಾರ ಸಂಪತ್ತುಗಳನ್ನು ತೊರೆದು ದಯೆಯಿಂದ ದುಃಖದಿಂದ ದೀನರ ಸನ್ಯಾಸಿಗಳ ಸೇವೆಯಲ್ಲಿ ಕಾಲ ಕಳೆದ ಫೆಲಿಸಳನ್ನು ಕಂಡು, ಆಶಿಸುವ ತನ್ನ ಮನಸ್ಸನ್ನು ಸಂಯಮಿಸುತ್ತಾನೆ. ಇಂತಹ ವಿರಕ್ತಿಯ ಬದುಕೇ ಶ್ರೇಷ್ಠ. ಸಂಪತ್ತಿನಲ್ಲಿ ಭೋಗದಲ್ಲಿ ಮೈಮರೆತು ಪಾಪಿಗಳಾಗುವುದೇ ಬೇಡ. ಸ್ವರ್ಗದಲ್ಲಿ ನಾವು ಸೇರೋಣ ಎಂದು ಯೋಚಿಸಿ ಏಕಾಂಗಿಯಾಗಿ ಮರಣ ಕಾಲದವರೆಗೂ ಇದ್ದು ಕೊನೆಗೆ ತನ್ನ ಕುರುಹನ್ನು ಫೆಲಿಸಳಿಗೆ ತಿಳಿಸುತ್ತಾನೆ. ಇದನ್ನು ಕಂಡು ಧಾವಿಸಿಬಂದ ಫೆಲಿಸಳು ದುಃಖದಿಂದ ತಾನೂ ಎದೆಯೊಡೆದು ಸತ್ತು ಅವನೊಟ್ಟಿಗೆ ಗೋರಿಯಲ್ಲಿ ಮಲಗಿದಳು. ಹೀಗೆ ಶೂರನಾದ ಗ್ಯೈ ಮತ್ತು ಸುಂದರಿಯಾದ ಫೆಲಿಸಳ ಕಥೆ ಮುಗಿಯುತ್ತದೆ.

ತನ್ನ ಆತ್ಮ ಕಲ್ಯಾಣಕ್ಕಾಗಿ ಶ್ರಮಿಸಿದಈ ಶೂರ ಭಾರತದ ತಪಸ್ವಿಗಳಂತೆಯೇ ಕಾಣುತ್ತಾನೆ. ಅವನ ಆತ್ಮಶಕ್ತಿ ಉನ್ನತವಾದುದು; ಪ್ರೇಮ, ಶೌರ್ಯ, ತ್ಯಾಗ ಯಾವುದರಲ್ಲಿಯೂ ಅತಿಶಯವಾದ ಎತ್ತರವನ್ನು ಅದು ಮುಟ್ಟಬಲ್ಲುದು.

'ಸಹನಾಶೀಲಳಾದ ಸತಿ' ಎಂಬುದು ತಿಳುವಳಿಕೆಯುಳ್ಳವನಾದರೂ ಕ್ರೂರಿಯಾಗಿದ್ದ ಬಲಿಷ್ಟ ಸರದಾರನೊಬ್ಬನ ಚಿತ್ತಲಹರಿಗಳಿಂದ ನೊಂದ ಅಪೂರ್ವ ಧೈರ್ಯಶಾಲಿನಿಯಾದ ಗುಣವತಿಯಾದ ಸತಿಯನ್ನು ಕುರಿತದ್ದು. ತುಂಬ ಬಡವರ ಮನೆಯ ಹೆಣ್ಣನ್ನು ಅವಳ ಅಂದ ಚಂದ ಗುಣಗಳಿಗೆ ಮಾರುಹೋಗಿ ಅರಸಿಯನ್ನಾಗಿ ಮಾಡಿಕೊಂಡು ಅವಳು ಕೊನೆಯವರೆಗೂ ವಿಧೇಯಳಾಗಿ ಇರಬಹುದೇ ಅಥವಾ ಸಿರಿಯಲ್ಲಿ ಮೈಮರೆತು ತಿರುಗಿಬಿದ್ದಾಳೆಯೋ ಎಂದು ಪರೀಕ್ಷಿಸುವ ಸರದಾರನ ದುಷ್ಟತನವನ್ನು ಇಲ್ಲಿ ಕಾಣಬಹುದು. ಮಕ್ಕಳನ್ನು ಅವಳಿಂದ ಕಸಿದು ಕೊಲ್ಲುವಂತೆ ನಟಿಸಿ, ಅವಳನ್ನು ತಂದೆಯ ಮನೆಗೆ ತಿರುಗಿ ಹೋಗುವಂತೆ ಹೇಳಿ, ಕೊನೆಗೆ ಹೊಸರಾಣಿಯನ್ನು ಆದರಿಸಲು ನಿಲ್ಲಿಸಿ, ಯಾವ ಹೊತ್ತಿಗೂ ವಿನಯಶೀಲೆಯೂ, ಹರ್ಷಚಿತ್ತೆಯೂ, ಸಹನಾಮಯಿಯೂ ಆಗಿಯೇ ಉಳಿದ ಸತಿಯನ್ನು ಕೊನೆಯಲ್ಲಿ ಕೊಂಡಾಡಿ ಕಥೆ ಮುಗಿದಿದೆ. ಸ್ತ್ರೀಯರಿಗೆ ಇದು ಆದರ್ಶ. ಇಂತಹ ಸರ್ವಸಮರ್ಪಣಭಾವವನ್ನು ಅವರು ರೂಢಿಸಿಕೊಳ್ಳಲೆಂಬುದು ಕಥೆಯ ಉದ್ದೇಶವಾಗಿದೆ.

'ಗರ್ವಿಷ್ಠನಾದ ದೊರೆ'ಯ ಗರ್ವವನ್ನಿಳಿಸಲು ಅವನಂತೆಯೇ ಆಕಾರತಾಳಿ ಅವನ ಉಡುಪುಗಳನ್ನು ಕಸಿದು, ನಿಜವಾದ ರಾಜನನ್ನು ಭಂಗಪಡಿಸಿ ಸರಿಯಾಗಿ ದಂಡಿಸಿ ಬುದ್ಧಿ ಕಲಿಸುವ ದೇವದೂತನ ಕಥೆ ಇಲ್ಲಿದೆ. ಉಡುಪನ್ನೂ ಅಧಿಕಾರವನ್ನೂ ಜನ ಒಪ್ಪಿಸುವರೇ ಹೊರತು ಅನ್ಯಥಾ ಅಲ್ಲ. ಅದರಲ್ಲೂ ಮಾನವನಿಗೆ ಎಲ್ಲದರಲ್ಲಿಯೂ ಮಿತಿ ಇದೆ. ದೈವವನ್ನು ಮರೆಯುವುದು ಸಲ್ಲದು, ಎಂಬ ತತ್ತ್ವವನ್ನು ಈ ಕಥೆ ಬೋಧಿಸುವುದು.

ಈ ಕೊನೆಯ ಎರಡು ಕಥೆಗಳ ಸ್ವಾರಸ್ಯವನ್ನು ಮನಗಂಡು ಇತರ ಲೇಖಕರು ಇವನ್ನು ಹಲವು ರೂಪ ರೀತಿಗಳಲ್ಲಿ ಅನುವಾದಿಸಿರುವುದನ್ನು ನಾವು ಕಾಣುತ್ತೇವೆ.

ಒಟ್ಟಿನಲ್ಲಿ ಆ ಕಾಲಕ್ಕೆ ಇವು ನವೀನವಾದ ಕಲ್ಪನೆಗಳನ್ನುಳ್ಳ ಕಥೆಗಳು. ಇತ್ತೀಚೆಗೆ ವೇಷಾಂತರಗೊಂಡು ಇವು ನಮ್ಮ ದೇಶದ ಜಾನಪದ ಕಥೆಗಳೆಂದು ಪ್ರಕಟವಾಗಿರುವುದೂ ಕಂಡು ಬಂದಿದೆ.

೨

‘ಕೊನಷ್ಟೈ ಕತೆಗಳು’ ಸಮಸ್ತವನ್ನೂ ಹಾಸ್ಯದೃಷ್ಟಿಯಿಂದ ಕಂಡು, ಹೊಸ ರೀತಿಯಿಂದ ಚಿತ್ರಿಸುವ ಉತ್ತಮ ಅಭಿರುಚಿಯುಳ್ಳ ರಸಿಕಲೇಖಕ ಕೊನಷ್ಟೈ ಅವರ ಕೃತಿಗಳು. ಈ ಕಥೆಗಳನ್ನು ರಚಿಸಿ ಪ್ರಕಟಿಸಿದ್ದೇಕೆ ಎಂದರೆ “ಇದಕ್ಕಿಂತ ಕೀಳಾದ ಎಷ್ಟೋ ಕತೆಗಳನ್ನು ಓದಿದ್ದೇನೆ” (ಅರಿಕೆ, ಪುಟ ೧–೨) ಎಂದು ಮನೆಯಾಕೆ ಹೇಳಿ ಉತ್ತೇಜನ ಕೊಟ್ಟದ್ದು ಕಾರಣ. ಅದರಿಂದ ಆಕೆಗೇ ಇದನ್ನು ಅರ್ಪಿಸಿದ್ದಾರೆ.

ಯಾವ ವಿಚಾರವನ್ನೂ ವಕ್ರದೃಷ್ಟಿಯಿಂದ ನೋಡಿ ವಿನೋದವನ್ನುಂಟುಮಾಡುವುದರಲ್ಲಿ ಲೇಖಕರ ಪ್ರತಿಭೆ ಚೆನ್ನಾಗಿ ಪ್ರಕಾಶಿಸಿದೆ. ಭಾರತೀಯ ಸಂಸ್ಕೃತಿಯಲ್ಲಿ, ಹಿಂದೂ ಧರ್ಮದಲ್ಲಿ ಸಂಪೂರ್ಣವಾಗಿ ಅರಳಿದ ಒಂದು ಅಂತರಂಗ ಇಲ್ಲಿ ಪಾಶ್ಚಾತ್ಯ ವಿದ್ಯೆಯಿಂದ ಹೊಳಪು ತಳೆದಿದೆ. ಇಂತಹ ಮನೋಧರ್ಮ ನಮ್ಮ ಲೇಖಕರಲ್ಲಿರಬೇಕೆಂಬುದು ಸಾರಸ್ವತ ಪ್ರಪಂಚದ ಆಶಯ. ಬದುಕಿಗೆ ಹಾಸ್ಯವೊಂದು ಸಂಜೀವಿನಿ. ಅದರ ಸುಗಂಧ ಇಲ್ಲಿ ಎಲ್ಲ ಕಥೆಗಳನ್ನೂ ನವಿರಾಗಿ ವ್ಯಾಪಿಸಿಕೊಂಡಿದೆ. ನಾನಾ ರೂಪದಲ್ಲಿ ಪ್ರತ್ಯಕ್ಷವಾಗುವ ಹಾಸ್ಯವನ್ನು ಸ್ವತಃ ಇಲ್ಲಿನ ಕತೆಗಳನ್ನು ಓದಿ ಅರಿಯಬೇಕೇ ಹೊರತು ಅನ್ಯಥಾ ಅಲ್ಲ.

‘ಜೋತಿಷ್ಯ’ ಎಂಬ ಸುಂದರ ಕಥೆಯಲ್ಲಿ ಗೆಳತಿಯರ ವಾದ ವಿವಾದಗಳ ನಡುವೆ ಬಿಚ್ಚಿಕೊಂಡ ಒಂದು ಪ್ರಣಯ ವೃತ್ತಾಂತವಿದೆ. ಇಲ್ಲಿನ ನಾಯಿಕೆ ಮುಗ್ಧೆ. ಸಿಟ್ಟಿನಲ್ಲಿ ನಿಜ ಹೇಳಿ ಬಿಡುವ ತರಳೆ. ಅವಳ ಅತ್ತಾನ್ (ಅತ್ತೆಯ ಮಗ) ಬಂದು “ಬಾಗಿಲಿನಲ್ಲಿ ಮೋಟಾರು ಸಿದ್ಧವಾಗಿದೆ” ಎಂದರೆ “ನಾನು ಇಣಿಕಿ ನೋಡುವುದಿಲ್ಲ. ಅಬ್ಬ, ಎಷ್ಟು ದೊಡ್ಡ ಕಾರು” ಎನ್ನುತ್ತಾಳೆ. “ಊಟದ ಹೊತ್ತಿಗೆ ಹಿಂದಿರುಗಿಬಂದುಬಿಡಬಹುದು” ಎಂದರೆ “ಒಂದು ಹೆಜ್ಜೆಯನ್ನೂ ಎತ್ತಿಡುವುದಿಲ್ಲ....ನಾನು ಒಳ್ಳೆಯ ಸೀರೆ ಕೂಡ ಉಟ್ಟುಕೊಂಡಿಲ್ಲ.” (ಪುಟ ೧೩) ಎನ್ನುತ್ತಾಳೆ. ಬೇಕು ಎಂಬುದನ್ನು ಬೇಡ ಎನ್ನುವ ಈ ರಮಣಿಯ ಚಿತ್ರಣ, ಜೋತಿಷ್ಯದ ಅಂತರಾಳವನ್ನು ಬಯಲಿಗೆಳೆವ ಇತರ ಪ್ರೌಢೆಯರ ಮಾತು, ಇಲ್ಲಿನ ಏಕಪ್ರಕಾರವಾದ ವಿನೋದದ ಮಿನುಗು ಶ್ರೇಷ್ಠವಾದುದು.

‘ಕಮೀಷನರ ಕೊರಗು’ ಎಂಬ ಕಥೆಯ ಶೈಲಿ ಬಹಳ ವಿನೋದಪೂರ್ಣ. ಮನೆಯಲ್ಲಿ ಹೋಮ್ ಆರ್ಡರು (H. O) ಗಳನ್ನು ಪರಿಪಾಲಿಸುತ್ತ ತಾವೇ ಮನೆಯವರೆಲ್ಲರ ಸಂಚಿಗೆ ಒಳಪಟ್ಟ ಕಮಿಷನರ ಪಾಡನ್ನು ನೋಡಿ ನಗುತ್ತೇವೆ.

‘ಕತೆ ಬರೆಯುವ ರೀತಿ’, ‘ಅರುವತ್ತು ಮೂವರು’, ‘ಪತ್ತೇದಾರಿ’, ‘ಕುತ್ತಾಲಂ’ ಎಂಬ ಕತೆಗಳು ಕೊನಷ್ಟೈ ಮತ್ತು ಅವರ ಪತ್ನಿ ಲಲಿತ ಇವರ ನಡುವಣ ಪ್ರಣಯ.

ಸಂಸಾರ, ಸಂಚಾರ ಇವುಗಳನ್ನೊಳಗೊಂಡು ಮೋಹಕವಾಗಿದೆ. ರಸಿಕ ದಂಪತಿಗಳ ಸಂವಾದವೂ ಚಾತುರ್ಯವೂ ಅದ್ವಿತೀಯವಾದುದು. "ಯಾವಾಗಲೂ ಇಂಗ್ಲಿಷ ಕಾದಂಬರಿಗಳನ್ನೇ ಓದುತ್ತ ತಮಿಳು ಕೈಬರಹವನ್ನು ಓದುವ ಶಕ್ತಿಯನ್ನೇ ಕೆಲವರು ಕಳೆದುಕೊಂಡಿರುತ್ತಾರೆ. ಅದಕ್ಕೇ ಸ್ತ್ರೀ ವಿದ್ಯಾಭ್ಯಾಸವೆಂದು ಹೆಸರಂತೆ" (ಪುಟ ೬೨) ಎಂದು ಕೊಸಟ್ಟು ವಾದಿಸುವರು. ಎಷ್ಟು ಮನೋಜ್ಞವಾದ ಚುಚ್ಚು ನುಡಿ. ಹೊಸ ವಿದ್ಯೆಯ ಅಮಲಿನಲ್ಲಿ ಮೈಮರೆತು ಒಣ ಆಡಂಬರವನ್ನು ಹಿಡಿದು ತಿರುಗುವ ಮಹಿಳಾ ವರ್ಗಕ್ಕೆ ಇದು ಭರ್ಜರಿಯಾದ ಬಾಣವೇ! ಹೆಂಡತಿಯು ತಂದೆ ಮಗಳು ಇರುವ ಕಥೆ ತೊಡಗಿದಳು. ಗಂಡನು ತಂದೆ ಮಗ ಇರುವ ಕಥೆಯನ್ನು ಹೇಳುವನು. "ತಂದೆ ಕುರುಡನು. ದೃಷ್ಟಿಮಾಂದ್ಯದವರು ಕನ್ನಡಕವನ್ನು ಹಾಕಿಕೊಂಡು ಅದರ ಮೂಲಕ ನೋಡುವಂತೆ. ಅವನು ಪುಸ್ತಕಗಳನ್ನು ಓದಿ ಅದರ ಮೂಲಕ ಪ್ರಪಂಚವನ್ನು ನೋಡುವನು." (ಪುಟ ೬೩) ಅನಂತರ ರಸಮಯವೂ ಚಮತ್ಕಾರಪೂರ್ಣವೂ ಆದ ವಾಗ್ವಾದ ಜರಗಿ ಈ ಕಥೆಯ ನಾಯಕಿಗೂ ಆ ಕಥೆಯ ನಾಯಕನಿಗೂ ವಿವಾಹ ನಡೆದು ಎರಡು ಅರ್ಧ ಕತೆಗಳೂ ಪೂರ್ಣವಾಗುವುವು. ಕಥೆಯ ರಚನೆಯನ್ನೂ ಹಾಸ್ಯ ಮಾಡುವ ವೃತ್ತಿ ಇವರದು.

'ಕುತ್ತಾಲಂ' ಎಂಬ ಕಥೆಯ ಸಂಭಾಷಣೆಯ ಸ್ವಾರಸ್ಯವನ್ನಂತೂ ಕಥೆಯನ್ನು ಓದಿಯೇ ಅರಿಯಬೇಕು. ದಂಪತಿಗಳು ಅಷ್ಟು ಚತುರರಾಗಿದ್ದರೆ ಸಂಸಾರ ಸೊಗಸು-ವ್ರದುಂಟೇ !

'ಯಯಾತಿಯ ಯೌವನ', 'ಯಾಗಭಂಗ', 'ಸಾವಿರದ ಎರಡನೆಯ ಕತೆ'ಗಳು ಅಪೂರ್ವವಾದ ಕಲ್ಪನೆಗಳು. ಹಿಂದಿನ ಕಾವ್ಯ ಪುರಾಣಗಳನ್ನು ಹಾಸ್ಯದ ಕನ್ನಡಿಯಲ್ಲಿ ತೋರಿಸಿ ನಮಗೆ ಅವು ಇನ್ನೂ ಹತ್ತಿರವಾಗುವಂತೆ ಮಾಡಿದ್ದಾರೆ. ಯಯಾತಿ ಪುನರ್ಯುವಕನಾದರೂ ಶರ್ಮಿಷ್ಠೆ ದೇವಯಾನಿಯರ ಪೈಪೋಟಿ ಮತ್ಸರಗಳಲ್ಲಿ ನೊಂದು ಒಂದು ಕ್ಷಣವನ್ನೂ ಸಾವಿರ ವರ್ಷಗಳು ಕಳೆದಂತೆ ಸಂತಪಿಸುತ್ತ ಕಳೆಯುವುದು ಒಂದು ವಿಶೇಷ!

'ಯಾಗಭಂಗ'ವಂತೂ ಪುರಾಣ ಪಾತ್ರಗಳನ್ನು (ಕಲ್ಪಿತವೇ) ಎಳೆದು ಮನೋಹರವಾಗಿ ಹಾಸ್ಯ ವಿಜೃಂಭಿಸುತ್ತದೆ. ಅಗ್ನಿಗರ್ಭರ ಯಾಗಕ್ಕೆ ಅವರ ಪತ್ನಿ ದಾಕ್ಷಾಯಿಣಿಯ ಆಕ್ಷೇಪಣೆಗಳು ಓದುವವರನ್ನು ನಗೆಗಡಲಿನಲ್ಲಿ ಅದ್ದುತ್ತವೆ. ವಿರೂಪಾಕ್ಷನೆಂಬ ಯಾಗಭಂಗಕಾರಕನಾದ ರಾಕ್ಷಸನಿಗೆ ಸ್ಥಾನವಿಲ್ಲವೆ. ಮಾಂಸಾಹಾರ ಅತಿಯಾಗಿ ಕ್ಷೀಣ ದೃಷ್ಟಿಯಾಗಿದೆಯಂತೆ. ಅಂಬೆಗಾಲಿಡುವ ಮಗನನ್ನೇ ನೋಡಲಾರದು ಕಟ್ಟಳು ಹೊರಡುವಷ್ಟು ದೃಷ್ಟಿಮಾಂದ್ಯ ಅವನಿಗೆ. ಗಂಡನ ರಾಜ್ಯ ಹೇಗಾದರೂ ಇರಲಿ ವಿರೂಪಾಕ್ಷನ ಹೆಂಡತಿಗೆ ದಾಕ್ಷಾಯಿಣಿ ಅಯೋಧ್ಯೆಯಿಂದ ಕಮಂಡಲುವನ್ನು ತರಿಸಿಕೊಡಬೇಕೆಂದು ಆಸೆಯವರಲ್ಲಿ ಮಾತಾಗಿದೆ. ಅವರ ಯಾಗಕ್ಕೆ ರಕ್ಷಕನ ಪತ್ನಿ ತುಪ್ಪವನ್ನು ಕೊಡುವಳು. ಇಲ್ಲಿಯೂ ಹೆಂಡತಿ ಯಜ್ಞ ಹಾಳು ಮಾಡಲು ಮಾಂಸವನ್ನೇಕೆ ತಂದ ಎಂದು ಬಯ್ದು ಗಂಡನನ್ನು ದಂಡಿಸುತ್ತಾಳೆ.

‘ಸಾವಿರದ ಎರಡನೆಯ ರಾತ್ರಿ’ಯಂತೂ ಅದ್ಭುತವಾದ ವಿನೋದ. ಸಾವಿರದೊಂದು ಕಥೆ ಹೇಳಿದ ಷಹಜಾದಿ ತನಗೂ ತನ್ನ ತಂಗಿಗೂ ಅಭಯವನ್ನು ಪಡೆದಮೇಲೆ ಶಾಲನ್ನು ಸೌಕರ್ಯವಾಗಿ ಹೊದ್ದುಕೊಂಡು ಬೇಕಾದರೆ ಕಥೆಯನ್ನು ನೀವೇ ಹೇಳಿ ನನಗೆ ಬಾಯಿ ನೋಯುತ್ತದೆ ಎಂದಳಂತೆ! ಸುಲ್ತಾನರು ಕಥೆ ಹೇಳಲು ಹೋಗಿ ಅವಳ ಮೂರು–ನಾಲ್ಕು ಕಥೆಗಳನ್ನು ಸೇರಿಸಿ ಮೂರ್ಖರಾಗಿ ಹತಾಶರಾದರು. ತಮ್ಮ ಪ್ರತಿಜ್ಞೆಯಲ್ಲಿ ತಾವೇ ಸಿಲುಕಿ ಪರಿತಪಿಸಿದರೆಂದು ಕಥೆಗಾರರು ಕಲ್ಪಿಸುತ್ತಾರೆ.

‘ಹಟಮಾರಿ’, ‘ಸಂಗೀತ’ ಎಂಬ ಕಥೆಗಳಲ್ಲಿ, ಸಂಗೀತಕ್ಕಿರುವ ದಿವ್ಯ ಶಕ್ತಿಯನ್ನೂ ಅದರ ಅಲೌಕಿಕ ಪ್ರಭಾವದಿಂದ ಮಾನವರ ದೌರ್ಬಲ್ಯಗಳು ದೂರವಾಗುವುವೆಂಬುದನ್ನೂ ಹೇಳುತ್ತ ಎರಡು ರಸಮಯ ಕಥೆಗಳನ್ನು ಸೃಷ್ಟಿಸಿದ್ದಾರೆ.

‘ಉದ್ಯೋಗ’ ಎನ್ನುವುದು ಕೆಲಸವಿಲ್ಲದ ಉತ್ಸಾಹೀ ತರುಣನ ಪತ್ತೇದಾರಿ ಕೆಲಸದ ಅಂಗವಾಗಿ ಪೋಲೀಸು ಇಲಾಖೆಯ ಪರಿಚಯವನ್ನು ತಂದುಕೊಡುತ್ತ ವಿನೋದದ ಹುಯಿಲನ್ನು ಹಾಕುತ್ತದೆ. ಕಥೆ ಅನಿರೀಕ್ಷಿತವಾದ ರೀತಿಯಲ್ಲಿ ಹೊರಳುತ್ತ ಕುತೂಹಲಕಾರಿಯಾಗಿ ಬೆಳೆದಿದೆ.

‘ತಾರಾಪೂಜೆ’ ಒಂದು ಶ್ರೇಷ್ಠವಾದ ಕೃತಿ. ಏನೂ ಅರಿಯದ ಒಬ್ಬ ಅಘೋರಂ ಐಯ್ಯರ್ ಅಪ್ರಯತ್ನವಾಗಿ ನಡೆದೊಂದು ಗಡಿಬಿಡಿಗೆ ಸಾಕ್ಷಿಯಾಗಿ ಬಂದುದು, ಜೆಪ್ಪುತನದಿಂದ ಕೂಡಿದ ಅವರ ಭ್ರಮೆ ಇಳಿದು ತೆರೆಯ ಮೇಲೆ ತಾರೆಗಳಿಗಿರುವ ಅಪೂರ್ವ ಕಾಂತಿ, ಗಾಂಭೀರ್ಯಗಳು ನಿಜಜೀವನದಲ್ಲಿ ಇರುವುದಿಲ್ಲವೆಂಬ ಅರಿವನ್ನು ಹೊಳೆಯಿಸಿ ಅಲ್ಲಿಗೆ ನಿಲ್ಲದೆ ಅವರ ಸ್ವಭಾವಕ್ಕೆ ತಕ್ಕಂತೆ ಇಪ್ಪತ್ತು ರೂಪಾಯಿನ ಉತ್ತರೀಯಕ್ಕೆ ಬದಲಾಗಿ ತನ್ನ ಕೈ ಸೇರಿದ ನೂರೆಪ್ಪತ್ತೈದು ರೂಪಾಯಿಯ ಸೀರೆಯನ್ನು ಹಿಂದಿರುಗಿಸಬೇಕೆ ಅಥವಾ ಇಟ್ಟುಕೊಳ್ಳುವುದು ತಪ್ಪೆ ಎಂಬ ಚಿಂತೆಯಲ್ಲಿ ಮುಗಿಯುತ್ತದೆ. ಇಲ್ಲಿ ಕಥೆಗಾರರ ಪ್ರತಿಭೆ ಗೋಚರವಾಗುವುದು. ಹಾಸ್ಯಮಾಡಿ ನಕ್ಕರೂ ಮಾನವರನ್ನು, ಸಮಾಜವನ್ನು ಅವರು ಸೂಕ್ಷ್ಮವಾಗಿ ಅರಿತಿದ್ದಾರೆ.

‘ವನಮಾಲಿ’ ಕೂಡ ಇಂತಹ ಒಂದು ಚಮತ್ಕಾರದ ಪ್ರಯತ್ನ. ಅದರ ತಾರೆಯರ ಜೀವನದ ಉತ್ತಮವಾದ ಮುಖವನ್ನು ಅದು ಬಿಡಿಸುತ್ತದೆ.

ಊರ್ವಶಿಯನ್ನು ಕುರಿತು ಎರಡು ಕಥೆಗಳಿವೆ. ಅವುಗಳಲ್ಲಿ ಒಂದನ್ನು ನಾಟಕವೇ ಎನ್ನಬೇಕು. ಇವು ಅತಿಶಯವಾದ ಕಲ್ಪನೆ, ಸುಂದರವಾದ ಭಾವಪೂರ್ಣವಾದ ಶೈಲಿ ಇವುಗಳಿಂದ ಕೂಡಿ ಹಾಸ್ಯದೂರವಾಗಿವೆ.

ಚ್ಯವನ ಋಷಿ ಮತ್ತು ಸುಕನ್ಯೆಯ ಕಥೆಯನ್ನೂ ಸಹ ಸಂಶೋಧನೆಯ ನೆಪ ಹೂಡಿ ವಿನೋದಕ್ಕೆ ಈಡು ಮಾಡಿದ್ದಾರೆ.

ಹಾಸ್ಯ ಎಂಬುದೊಂದು ಭೂಮಿಕೆ. ಅಲ್ಲಿಗೆ ಯಾರನ್ನು ಎಳೆತಂದರೂ—ಅವರು ದೇವತೆಗಳಾಗಲಿ ರಕ್ಕಸರಾಗಲಿ ಹಿರಿಯರಾಗಲಿ ಕಿರಿಯರಾಗಲಿ ಕ್ರೂರಿಗಳಾಗಲಿ ಮಂಕರಾಗಲಿ–ಅವರು ಅದುವರೆಗೆ ಕಳೆದುಕೊಂಡಿದ್ದ ಮಾನವೀಯತೆಯನ್ನು ಪುನಃ ಪಡೆಯು

ವರು. ಮಾನವಂಗೆ ಅದೊಂದು ಅಮೋಘವಾದ ವರ. ಇಂದಿನ ವೈಜ್ಞಾನಿಕ ಯುಗದಲ್ಲಿ ನಮಗಿದು ಬಾಳಲು ಬೇಕಾಗುವ ಅಮೃತವಾದ ರಸ.

೩

ಕೊನಷ್ಟ್ಯ, ಅವರ ಕೃತಿಗಳು ತಿರುಳಿನಲ್ಲಿ ಮಾತ್ರವಲ್ಲದೆ ತಂತ್ರದಲ್ಲಿಯೂ ಹೊಸ ಸಂಯಮ. ಇಲ್ಲಿರುವ ಹದಿನೆಂಟು ಕಥೆಗಳು ಹದಿನೆಂಟು ಬಗೆಯಾಗಿ ತೋರುತ್ತವೆ. ನಾಟಕ, ಚಿತ್ರ, ಕಥೆ, ಹಾಡು ಹೀಗೆ ನಾನಾ ರೂಪದಲ್ಲಿ ಭಂಗಿಯಲ್ಲಿ ಇವರ ಕೃತಿ ರಚನೆ ನಡೆದಿದೆ. ಇವರ ಪ್ರತಿಭಾಜಲದಲ್ಲಿ ಮಿಂದು ಹಾಸ್ಯರಸದಲ್ಲಿ ಮುಳುಗಿ ಪುನಃ ಪುನಃ ನಮ್ಮನ್ನು ನಾವು ಪಡೆಯುತ್ತೇವೆ, ಹೊಸಬರಾಗುತ್ತೇವೆ.

ಇಂತಹ ಕೃತಿಗಳನ್ನು ಅನುವಾದಿಸಿದ ಗೊರೂರರು ಅಭಿನಂದನೀಯರು. ಒಂದು ಕಡೆ ನೀತಿಯನ್ನೂ ಇನ್ನೊಂದು ಕಡೆ ಹಾಸ್ಯವನ್ನೂ, ಒಮ್ಮೆ ಪರದೇಶವನ್ನೂ ಇನ್ನೊಮ್ಮೆ ನೆರೆಯ ಜನರನ್ನೂ ನಮ್ಮವರನ್ನಾಗಿ ಮಾಡಿದ್ದಾರೆ. ಎರಡು ಕೃತಿಗಳಲ್ಲಿನ ಶೈಲಿಯೂ ಭಿನ್ನವಾಗಿದೆ. ಪರಕಾಯಪ್ರವೇಶ ಮಾಡಿದ್ದಾರೋ ಎಂಬಷ್ಟರಮಟ್ಟಿಗೆ ಮೂಲ ಲೇಖಕರ ಕೃತಿಗಳ ಸವಿಯನ್ನೂ ಗಾಂಭೀರ್ಯವನ್ನೂ ಗೊರೂರರು ಭಾಷಾಂತರದಲ್ಲಿ ಉಳಿಸಿಕೊಟ್ಟಿದ್ದಾರೆ.

ಪ್ರಬಂಧಗಳು

ಎಂ. ಸಿ. ವಸಂತಕುಮಾರ್

ಆಧುನಿಕ ನವೋದಯ ಕಾಲದ ಪ್ರಮುಖ ಸಾಹಿತಿಗಳಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಒಬ್ಬರು. ಅವರು ಜಾನಪದದ ಹಾಲು ಕುಡಿದು ಬೆಳೆದ ನಾಗರಿಕರು. ಒಂದು ಕಡೆ ಜಾನಪದ ಪರಿಸರ ಮತ್ತೊಂದು ಕಡೆ ಸುಸಂಸ್ಕೃತ ಮನೆತನ: ಹೀಗಾಗಿ ಅವರಿಗೆ ಪ್ರತಿಭೆಯ ಜೊತೆಗೆ ಬದುಕಿನಲ್ಲೂ ಬರೆಹದಲ್ಲೂ ಒಂದು ವಿಶಿಷ್ಟವಾದ ಲಾಭ ಒದಗಿ ಬಂತು. ಅವರ ಜಾನಪದೀಯವಾದ ಸಾಹಿತ್ಯದ ಪೈರು ಸುಸಂಸ್ಕೃತಿಯ ನೀರು, ನಾಗರಿಕತೆಯ ಗೊಬ್ಬರ ಬೆರೆತು ಹುಲುಸಾಯಿತು. ಅವರಲ್ಲಿ ಸಂಪ್ರದಾಯಬದ್ಧವಾದ ಉತ್ತಮ ಧಾರ್ಮಿಕ ಭಾವನೆಯೊಂದಿಗೆ ಆಧುನಿಕವಾದ ವೈಜ್ಞಾನಿಕ ದೃಷ್ಟಿಯೂ ಕೂಡಿ ಬಂತು. ಅವರು ಜಾನಪದ ಮತ್ತು ನಾಗರಿಕತೆ ಇವುಗಳ ನಡುವಿನ ರಸಸೇತು. ಅವರ ಸಾಹಿತ್ಯ ಗ್ರಾಮೀಣತೆಯ ಹಸುರನ್ನೂ ಬ್ರಾಹ್ಮಣ್ಯದ ಉತ್ತಮಿಕೆಯನ್ನೂ ಮೈದುಂಬಿಕೊಂಡಿತು. ಈ ತೆರನಾದ ವಿಶಿಷ್ಟತೆ ಕನ್ನಡ ಸಾಹಿತಿಗಳಲ್ಲಿ ಅಪೂರ್ವವಾದುದು. ಈ ಎಲ್ಲ ಕಾರಣಗಳಿಂದಾಗಿ ಅವರ ಸಾಹಿತ್ಯ ಎಲ್ಲ ವರ್ಗದ ಎಲ್ಲ ಮಟ್ಟದ ಜನರಿಗೆ ಪ್ರಿಯವಾಗಲು ಅವಕಾಶವಾಯಿತು.

ಗೊರೂರರು ಕಥೆ, ಕಾದಂಬರಿ, ಚಿತ್ರ, ಜೀವನ ಚರಿತ್ರೆ, ವಿಮರ್ಶೆ, ಅನುವಾದ ಮೊದಲಾದ ಸಾಹಿತ್ಯದ ಬಹಳಷ್ಟು ಪ್ರಕಾರಗಳಲ್ಲಿ ಕೃಷಿಮಾಡಿ ಉತ್ತಮ ಫಸಲನ್ನು ಪಡೆದಿದ್ದಾರೆ. ಆದರೆ ಅವರ ಪೂರ್ಣ ಸಿದ್ಧಿ ಕಾಣದೊರೆಯುವುದು ಪ್ರಬಂಧಗಳಲ್ಲಿ. ಸಾಹಿತ್ಯದ ಇತರ ಅನೇಕ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕೆಲಸ ಮಾಡಿದ್ದರೂ ಕಾರಂತರು ಹೇಗೆ ಪ್ರಮುಖವಾಗಿ ಕಾದಂಬರಿಕಾರರೊ, ಬೇಂದ್ರೆ ಅವರು ಹೇಗೆ ಭಾವಗೀತಕಾರರೊ, ಮಾಸ್ತಿ ಅವರು ಸಣ್ಣಕತೆಗಾರರೊ ಹಾಗೆಯೇ ಗೊರೂರರು ಮುಖ್ಯವಾಗಿ ಪ್ರಬಂಧಕಾರರು. ಅವರು ಸಂಪೂರ್ಣವಾಗಿ ತಮ್ಮತನವನ್ನು ಕಂಡುಕೊಂಡದ್ದು ಮತ್ತು ಅದನ್ನು ಅಭಿವ್ಯಕ್ತಪಡಿಸಿಕೊಂಡದ್ದು ಪ್ರಬಂಧಗಳ ಮೂಲಕವೆ. ಅವರ ಅಪಾರವಾದ ಜನಪ್ರಿಯತೆಗೆ ಪ್ರಬಂಧಗಳು ಬಹಳ ಮಟ್ಟಿಗೆ ಕಾರಣ.

ಗೊರೂರರ ಪ್ರಬಂಧಗಳು ಅವರ ಹಲವು ಹತ್ತು ಕೃತಿಗಳಲ್ಲಿ ಹರಡಿ ಹೋಗಿ ಹೋಗಿವೆ. ಕೆಲವು ಪುಸ್ತಕಗಳಂತೂ ಕಥೆ, ಚಿತ್ರ, ಪ್ರಬಂಧ, ಲೇಖನ ಎಲ್ಲವನ್ನೂ ಒಳಗೊಂಡಿವೆ. ಅವರ ಪ್ರಬಂಧ ಸಂಕಲನಗಳಲ್ಲಿ ಹೆಚ್ಚಾಗಿ ಚಿತ್ರಗಳಿವೆ. ಕೆಲವು ಹರಟೆಯ ಲಕ್ಷಣಗಳನ್ನೂ ಒಳಗೊಂಡಿವೆ. ಚಿತ್ರಗಳಲ್ಲಿ ಜೀವನ ಚಿತ್ರಗಳನ್ನೂ, ವ್ಯಕ್ತಿ ಚಿತ್ರಗಳನ್ನೂ ಕಾಣಬಹುದು. ಚಿತ್ರಗಳು ಮತ್ತು ಹರಟೆಗಳು 'ಪ್ರಬಂಧ'ದ ವಲಯದಲ್ಲಿ ಸೇರುತ್ತವೆಂಬುದು ನಮ್ಮ ನೆನಪಿನಲ್ಲಿದ್ದರೆ ಸಾಕು. ಗೊರೂರರ ಪ್ರಬಂಧಗಳು 'ಹಳ್ಳಿಯ ಚಿತ್ರಗಳು' (೧೯೩೦), 'ನಮ್ಮ ಊರಿನ ರಸಿಕರು' (೧೯೩೨), 'ಬೈಲಹಳ್ಳಿ ಸರ್ವೆ' (೧೯೩೬), 'ಗರುಡಗಂಬದ ದಾಸಯ್ಯ' (೧೯೪೯), 'ಬೆಸ್ತರ ಕರಿಯ' (೧೯೪೪), 'ಹೇಮಾವತಿಯ ತೀರದಲ್ಲಿ' (೧೯೬೬), 'ಕಥೆಗಳು ಮತ್ತು ವಿನೋದ ಚಿತ್ರಗಳು' (೧೯೭೨), 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' (೧೯೭೨), ಮುಂತಾದ ಸಂಕಲನಗಳಲ್ಲಿ ಸೇರಿಕೊಂಡಿವೆ.[1] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' ಎಂಬ ಗ್ರಂಥದಲ್ಲಿ ಹಿಂದಿನ ಸಂಕಲನಗಳಲ್ಲಿನ ಕೆಲವು ಉತ್ತಮ ಪ್ರಬಂಧಗಳನ್ನು ಸೇರಿಸಿಕೊಂಡಿರುವುದರ ಜೊತೆಗೆ 'ಒಂದು ಸಂಜೆ', 'ಬಿಂದಿಗಮ್ಮನ ಜಾತ್ರೆ' ಮತ್ತು 'ಸಂಚಾರಿ ಚಲನಚಿತ್ರಗಳು' ಎಂಬ ಮೂರು ಹೊಸ ಪ್ರಬಂಧಗಳನ್ನು ಅಳವಡಿಸಿದ್ದಾರೆ. ಇವುಗಳಲ್ಲಿ ಮೊದಲನೆಯದು ('ಒಂದು ಸಂಜೆ') 'ನಡೆದು ಬಂದ ದಾರಿ'ಯಲ್ಲಿ ಪ್ರಕಟವಾಗಿತ್ತು. ಉಳಿದೆರಡು 'ಪ್ರಬುದ್ಧ ಕರ್ನಾಟಕ'ದಲ್ಲಿ ಬೆಳಕು ಕಂಡಿದ್ದವು. 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಎಂಬ ಸಂಕಲನದಲ್ಲಿ ಕೂಡ ಹಿಂದಿನ ಕೃತಿಗಳಲ್ಲಿಯ ಪ್ರಬಂಧಗಳು ಸೇರಿವೆ. ಇದಲ್ಲದೆ ೧೯೬೧ರಲ್ಲಿ ದೆಹಲಿಯ ಸಾಹಿತ್ಯ ಅಕಾಡೆಮಿಗಾಗಿ 'ಹೊಸಗನ್ನಡ ಪ್ರಬಂಧ ಸಂಕಲನ' ಎಂಬ ಕೃತಿಯನ್ನು ಅತ್ಯುತ್ತಮವಾಗಿ ಸಂಪಾದಿಸಿದ್ದಾರೆ. ಇದು ಕನ್ನಡ ಪ್ರಬಂಧಗಳ ಪ್ರಾತಿನಿಧಿಕ ಸ್ವರೂಪದ್ದು ಎಂದು ಹೇಳಲಾಗದಿದ್ದರೂ ಪ್ರಮುಖವಾದದ್ದು ಎಂಬುದು ನಿರ್ವಿವಾದ. ಇದರಲ್ಲಿ ಡಿ.ವಿ.ಜಿ., ಮಾಸ್ತಿ, ಕುವೆಂಪು, ಬೇಂದ್ರೆ ಮೊದಲಾದವರಿಂದ ಹಿಡಿದು ಎಂ. ವಿ. ಸೀತಾರಾಮಯ್ಯನವರವರೆಗೆ ಸುಮಾರು ಮುವ್ವತ್ತು ಜನ ಹಿರಿಯ ಪ್ರಮುಖ ಪ್ರಬಂಧಕಾರರ ಒಂದೊಂದು ಪ್ರಬಂಧವನ್ನು ಸೇರಿಸಲಾಗಿದೆ. ಈ ಸಂಕಲನಕ್ಕೆ ಅವರು ಬರೆದಿರುವ ಪ್ರಸ್ತಾವನೆಯಲ್ಲಿ 'ಪ್ರಬಂಧ ಸಾಹಿತ್ಯ'ದ ಗುಣ ಸ್ವರೂಪಗಳನ್ನು ತುಂಬ ಅಡಕವಾಗಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಪ್ರಬಂಧ ಸಾಹಿತ್ಯಾಭ್ಯಾಸಿಗಳಿಗೆ ಅದು ಅತ್ಯುಪಯುಕ್ತವಾಗಿದೆ. ಬೇರೆ ಬೇರೆ ಪ್ರಬಂಧಕಾರರ ಪ್ರಬಂಧಗಳನ್ನೊಳಗೊಂಡಂತೆ ರಾಘವಾಚಾರ್ ಅವರ 'ಮುತ್ತುಹವಳ' ಮತ್ತು ಪಂಚಲಿಂಗೇಗೌಡರ 'ನವನೀತ' ಸಂಕಲನಗಳು ಪ್ರಕಟವಾಗಿವೆಯಾದರೂ ಅವು ಗುಣ ಗಾತ್ರ ಪಾತ್ರಗಳಲ್ಲಿ 'ಹೊಸಗನ್ನಡ ಪ್ರಬಂಧ ಸಂಕಲನ'ವನ್ನು ಸರಿಗಟ್ಟಲಾರವು.

---

[1] ೧೯೭೦ರಲ್ಲಿ ಪ್ರಕಟವಾದ 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು' ಎಂಬ ಗ್ರಂಥವು 'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು' ಮತ್ತು 'ಬೈಲಹಳ್ಳಿ ಸರ್ವೆ' ಕೃತಿಗಳನ್ನು ಒಳಗೊಂಡಿದೆ.

ಪ್ರಬಂಧಕಾರನ ದಾರಿ ಬಹಳವುಟ್ಟಿಗೆ ವಕ್ರ ಮತ್ತು ವಿಶಿಷ್ಟ. ಎಲ್ಲರಿಗೂ ಸಾಮಾನ್ಯ ಪ್ರಾಣಿಯಾದ 'ಎಮ್ಮೆ' ಇವನಿಗೆ ಮಹತ್ತಾದುದು. 'ಕಾಯಿಲೆ'ಗಳು ಸಮಾಜಕ್ಕೆ ಶಾಪ ವಾದರೆ ಇವನಿಗೆ ಅವೇ ವರ. ಇದು ಇವನ ಸದ್ಗುಣಗಳಲ್ಲೊಂದು. ಇವನು ಯಾವುದೇ ನಿಯಮ, ಕಟ್ಟುಪಾಡು ಮತ್ತು ಬಲಾತ್ಕಾರಗಳಿಂದ ಹೊರಗು. ಆಲಸ್ಯ, ಸೋಮಾರಿತನ ಪ್ರಗತಿಯ ದೃಷ್ಟಿಯಿಂದ ಕಂಟಕಗಳಾದರೆ ಇವನಿಗೆ ಅವು ಸಾಧನೆಯ ಸಂಕೇತ. ಜಗತ್ತಿನಲ್ಲಿ ಸಂಭವಿಸುವ ಅತ್ಯದ್ಭುತ ಘಟನೆಗಳು ಇವನಿಗೆ ತೀರ ಸಾಧಾರಣ. ಆದರೆ ತೃಣ ವಿಷಯಗಳಿಗೆ ಇವನು ಕೊಡುವ ಪ್ರಾಧಾನ್ಯ ಹಿಮಾಲಯದ ಸ್ವರೂಪದ್ದು. ಲೋಕ ನಗುವಾಗ ಅಳುವ ಇವನು ಎಷ್ಟೋ ಸಾರಿ ನಮಗೆ ತುಂಬ ವಿಚಿತ್ರ ಪ್ರಾಣಿ; ಅಂತೆಯೇ ವಾಸ್ತವವಾದಿ ಮಾತ್ರವಲ್ಲ ವಿಜ್ಞಾನಿ ಕೂಡ. ಇವನು ಕಲ್ಪನಾಜೀವಿಯೂ ಹೌದು. ಇವನ ಕಲ್ಪನೆಗಳಿಗೆ ಮಿತಿಯಿಲ್ಲ. ಅವು ಶಶಿ ರವಿ ತಾರಾ ಕೋಟಿಗಳನ್ನು ದಾಟಿ ಸಂಚರಿಸುತ್ತವೆ. ಆದರೆ ಅವುಗಳ ಗುರುತ್ವಾಕರ್ಷಣ ಶಕ್ತಿ ಇಲ್ಲಿ, ನೆಲದಲ್ಲಿ, ವಾಸ್ತವಿಕತೆಯ ಮನೋಮಂದಿರದಲ್ಲಿ. ಅವುಗಳು ಗಾಳಿಯಲ್ಲಿ ಹಾರಿಹೋಗುವುದಕ್ಕೆ ನಿರ್ಮಾಣಗೊಂಡವುಗಳಲ್ಲ. ಮಾನವನ ವಿಚಾರವಂತಿಕೆಗೆ ಪೋಷಕವಾಗಿ ನೀರೆರೆಯುವಂತಹವು. ಈ ಎಲ್ಲ ವಿಶಿಷ್ಟ ಲಕ್ಷಣಗಳನ್ನು ನಾವು ಗೊರೂರರ ಪ್ರಬಂಧಗಳಲ್ಲಿ ನಿಚ್ಚಳವಾಗಿ ಗುರುತಿಸ ಬಹುದು.

ಗೊರೂರರಿಗೆ ಪರಿಸರದೊಂದಿಗೆ ಪ್ರಕೃತಿಯೊಂದಿಗೆ ತಾದಾತ್ಮ್ಯವಿದೆ. ಅವರು ಜನರ ನಿತ್ಯದ ಬಾಳಿನ, ಸರಳತೆ, ಸ್ವಚ್ಛತೆ, ನೋವು, ನಗೆ, ಎಲ್ಲವನ್ನು ನಮ್ಮ ಕಣ್ಣಮುಂದೆ ತಂದಿದ್ದಾರೆ. ಗ್ರಾಮ ಸಮಾಜದ ಹತ್ತಾರು ಜನಾಂಗಗಳ ಜೀವನದ ವೈವಿಧ್ಯದ ನಿಕಟ ಪರಿಚಯ ಅವರಿಗಿದೆ. ಅವರಿಗಿರುವ ಒಳ್ಳೆಯ ಅಧ್ಯಯನ, ಜನಪದ ಗೀತೆಗಳ ಒಲವು, ಸಂಸ್ಕೃತ ಸಾಹಿತ್ಯದ ಅರಿವು, ಸದಭಿರುಚಿ, ರಸಿಕತೆ ಅವರ ಪ್ರಬಂಧಗಳ ಶಕ್ತಿಯನ್ನು ಹೆಚ್ಚಿಸಿವೆ. ಆ ಪ್ರಬಂಧಗಳು ಒಂದು ಸಂಕೀರ್ಣತೆಯನ್ನು ಪಡೆದುಕೊಂಡಿವೆ. ಎಲ್ಲಕ್ಕಿಂತ ಹೆಚ್ಚಾಗಿ ಹೇಮಾವತೀ ನದಿ ಅವರ ಬಹಳಷ್ಟು ಪ್ರಬಂಧಗಳ ಜೀವನಾಡಿಯಾಗಿದೆ.

ನನ್ನ ಪರಿಮಿತ ಪ್ರಜ್ಞೆಗೆ ತಿಳಿದಂತೆ ಗೊರೂರರನ್ನು ಬಿಟ್ಟರೆ ಜಗತ್ತಿನ ಯಾವುದೇ ಭಾಷೆಯಲ್ಲಿ ಒಂದು ನದಿಯ ಜೀವನವನ್ನು ಸಾಹಿತ್ಯದ ತುಂಬ ಸರ್ವತ್ರವಾಗಿ ಉಸಿರಾಡಿಸಿದ ಸಾಹಿತಿ ಇಲ್ಲವೆಂದೇ ಹೇಳಬೇಕು. ಬದುಕಿನಲ್ಲಾಗಲಿ, ಬರಹದಲ್ಲಾಗಲಿ ಹೇಮಾವತೀ ನದಿಗೂ ಗೊರೂರರಿಗೂ ಇರುವ ಅವಿನಾಭಾವ ಸಂಬಂಧ ಅನನ್ಯವಾದುದು. ಕುವೆಂಪು ಅವರಿಗೂ ಮಲೆನಾಡಿಗೂ ಇರುವ ಸಂಬಂಧದಂತೆಯೇ ಗೊರೂರರಿಗೂ ಹೇಮಾವತಿ ನದಿಗೂ ಇರುವ ಸಂಬಂಧ. ಕುವೆಂಪುರವರ ಸಾಹಿತ್ಯ ಸೀಮೆಯಲ್ಲಿ ಮಲೆನಾಡು ಯಾವ ಮಹತ್ತಾದ ಪಾತ್ರವನ್ನು ವಹಿಸಿತೊ ಅಂಥದೇ ಪಾತ್ರವನ್ನು ಗೊರೂರರ ಸಾಹಿತ್ಯಭೂಮಿಯಲ್ಲಿ ಹೇಮಾವತೀ ನದಿ ವಹಿಸಿದೆ. ವಾಸ್ತವವಾಗಿ ಹೇಮಾವತಿ ನದಿಯಲ್ಲಿ ಒಂದು ಸಂಸ್ಕೃತಿ ಅಡಗಿದೆ. ಅದು ನದಿಯ ತೀರದ ಜನರ ಸಾಹಸ ಜೀವನಕ್ಕೆ

ಮಾಡಿಟ್ಟ ರಂಗಭೂಮಿ. ಗೊರೂರರ ಪ್ರಬಂಧಗಳಲ್ಲಿ ಕಂಡುಬರುವ ಹಲವು ಹತ್ತು ವಿಷಯಗಳ ಸಂಕೀರ್ಣತೆಗೆ ಒಂದು ಐಕ್ಯವನ್ನು ಕೊಡುವುದು ಇಲ್ಲಿನ ನದಿ. ಗೊರೂರರು ನದಿಯ ತೀರದ ಜನರ ಬದುಕನ್ನು ಚಿತ್ರಿಸುವುದರ ಜೊತೆಯಲ್ಲೇ ನದಿಯ ಬದುಕನ್ನೂ ಚಿತ್ರಿಸಿದ್ದಾರೆ. ಕಾರಣ ಅವು ಬೇರೆ ಬೇರೆ ಅಲ್ಲ, ಒಂದೇ. ಒಂದು ನದಿ ಒಂದು ಜನಾಂಗದ ಜೀವನವನ್ನೇ ಕಟ್ಟಬಲ್ಲದು ಎಂಬುದಕ್ಕೆ 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧ ಸಾಕ್ಷಿಯಾಗಿದೆ. ಇದು ಒಂದು ಅತ್ಯುತ್ತಮವಾದ ಪ್ರಬಂಧ. ಒಂದು ರೀತಿಯಲ್ಲಿ ಇದು ಗೊರೂರರ ಪ್ರಬಂಧಗಳಿಗೆ ಪ್ರಾತಿನಿಧಿಕ ಸ್ವರೂಪದಲ್ಲಿದೆ. ಆದರೆ ಹೇಮಾವತೀ ನದಿ ಈ ಒಂದು ಪ್ರಬಂಧಕ್ಕೆ ಸೀಮಿತವಾಗಿಲ್ಲ. ಅದು ಅವರ ಬಹಳಷ್ಟು ಪ್ರಬಂಧಗಳ ಕೇಂದ್ರಶಕ್ತಿ. ಜಾತ್ರೆ, ತೇರು, ಸೇತುವೆ, ಸಾಹಸ, ಸ್ಪರ್ಧೆ, ಉತ್ಸವ, ಜಗಳ, ಸಂತೋಷ, ಸಂಭ್ರಮ, ಬೆಳೆ, ಕೊಳೆ, ಸಮೇರಾಯರು, ಜೋಡಿದಾರರು, ಪಾರುಪತ್ತೆಗಾರರು, ಆ ಊರಿನ ರಸಿಕರು, ಸರ್ವೇಯರು, ಶ್ಯಾನುಭೋಗರು, ಪಟೇಲರು, ಪುರೋಹಿತರು, ಬೆಸ್ತರು, ಒಕ್ಕಲಿಗರು—ಹೀಗೆ ಯಾವುದೂ, ಯಾರೂ ಆ ನದಿಯಿಂದ ಹೊರತಾಗಿಲ್ಲ.

ಗೊರೂರರು ಅಪ್ಪಟ ಗಾಂಧೀವಾದಿ. ಅವರ ಜೀವನದಲ್ಲೂ, ಸಾಹಿತ್ಯದಲ್ಲೂ ಗಾಂಧೀ ಪ್ರಭಾವ ಬಹಳಷ್ಟಿದೆ. ಅವರ ಪ್ರಬಂಧಗಳಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳಿವೆ. 'ದೇವರೂ ಡಿಮಾಕ್ರಸಿಯೂ' ಎಂಬ ಪ್ರಬಂಧದಲ್ಲಿ ಬ್ರಾಹ್ಮಣರ ಗುಂಡ ಎಂಬ ವೈದಿಕರಾದ ಮಡಿವಂತರ ಕೆಂಗಣ್ಣುಗಳಿಗೆ ಅಂಜದೆ ಹೊಲೆಯರ ವಾದ್ಯಗಳನ್ನು ತಂದು ದೇವರ ಉತ್ಸವ ನಡೆಸಿದಂತಹ ಹಲವಾರು ಘಟನೆಗಳ ಸಮರ್ಥ ಪ್ರತಿಪಾದನೆಯಲ್ಲಿ ನಾವಿದನ್ನು ಕಾಣಬಹುದು. ಅಸ್ಪೃಶ್ಯತಾ ನಿವಾರಣೆಯಲ್ಲಿ ಮತ್ತು ಭಾವೈಕ್ಯವನ್ನು ಮೂಡಿಸುವಲ್ಲಿ ಗೊರೂರರ ಪ್ರಬಂಧಗಳು ವಹಿಸಿರುವ ಪಾತ್ರ ಕಡಿಮೆಯೇನಲ್ಲ. 'ಜಾತ್ರೆ', 'ಬಂಡಿಗಮ್ಮನ ಜಾತ್ರೆ', 'ಹೇಮಾವತಿಯ ತೀರದಲ್ಲಿ' ಮೊದಲಾದ ಪ್ರಬಂಧಗಳಲ್ಲಿ ನಾವಿದನ್ನು ಕಾಣಬಹುದು. ಇಲ್ಲಿ ಬ್ರಾಹ್ಮಣ, ಹೊಲೆಯ, ಒಕ್ಕಲಿಗ, ಹಜಾಮ, ಅಗಸ, ದಾಸಯ್ಯ, ತುರುಕ ಎಲ್ಲರೂ ಒಟ್ಟಾಗಿ ಒಂದಾಗಿ ಕಲೆತು ಉತ್ಸಾಹದಿಂದ ಬದುಕುವುದನ್ನು ನೋಡುತ್ತೇವೆ. ಒಂದು ದೇವರ ಉತ್ಸವ ನಡೆಸುವಾಗ, ಒಂದು ಸ್ಪರ್ಧೆ ಏರ್ಪಟ್ಟಾಗ ತಮ್ಮ ಮಧ್ಯೆ ಇರುವ ಎಲ್ಲ ಭೇದಭಾವಗಳ ಮೇಲುಕೀಳುಗಳ ಅಸಮಾನತೆಯ ಗೋಡೆಗಳನ್ನು ಕೆಡವಿ, ಬಿರುಕುಗಳನ್ನು ಮುಚ್ಚಿ ಒಂದಾಗುತ್ತಾರೆ. ಅವರಿಗೆ ಒಳಗೊಂದು ಹೊರಗೊಂದು ಇಲ್ಲ. ಅವರ ಬದುಕು ಶುದ್ಧ ಅಪರಂಜಿ. ಗ್ರಾಮೀಣ ಜನ ಯಾವತ್ತೂ ಜಾತಿಗೆ ಅಂಟಿಕೊಂಡವರಲ್ಲ. ಅವರಿಗೆ ಜಾತಿ ಸುಲಭವಾಗಿ ಒಡೆದು ಎಲ್ಲರೊಡನೆ ಬೆರೆತು ಒಂದಾಗಬಲ್ಲ ಮಣ್ಣು ಹೆಂಟೆಯಂತೆ. ವಿದ್ಯಾವಂತರೆನಿಸಿದ ನಾಗರಿಕರಲ್ಲಿ ಅದು ಅಂತರಂಗದಲ್ಲಿ ಅಡಗಿರುವ ಕಾರ್ಕೋಟಕ ವಿಷದ ಹಾಗೆ. ಆದ್ದರಿಂದ ಗ್ರಾಮೀಣರ ಭಾವೈಕ್ಯ ತುಂಬ ಪ್ರಾಮಾಣಿಕವಾದುದು. ಏಕೆಂದರೆ ಅದು ಅಂತಃಕರಣದಿಂದ ಬಂದುದು. 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧದಲ್ಲಿನ ಇಂತಹ

ಒಂದು ಚಿತ್ರವನ್ನು ನಿದರ್ಶನಕ್ಕಾಗಿ ಗಮನಿಸಬಹುದು: "ನಮ್ಮೂರು ಸಾಹುಕಾರರ ಮನೆಯ ಆದಿಕರ್ನಾಟಕರ ಜೀತದ ಆಳು ಪುಟ್ಟ. ಅವನ ೧೬–೧೮ ವರುಷದ ಮಗ ದೇವನು ಸಾಹುಕಾರರ ಮಗ ಮೂರ್ತಿಯೊಂದಿಗೆ ದೊಡ್ಡನ ಕಲ್ಲಿನಲ್ಲಿ ಈಜುವಾಗ ಅವನನ್ನು ಹಿಡಿದು ಮುಳುಗಿಸುತ್ತಾನೆ. ಜೆಸ್ತರ ಕಾಳನ ಬೆನ್ನಿನ ಮೇಲೆ ಪುರೋಹಿತರ ಮಗ ಕಿಟ್ಟು ನೀರಿನಲ್ಲಿ ಸವಾರಿ ಮಾಡುತ್ತಾನೆ. ಸಮಾನವಾಗಿ ಬದುಕುವುದು ಮನುಷ್ಯನ ನೈಸರ್ಗಿಕ ಸ್ವಭಾವಕ್ಕೆ ಹೊಂದಿಕೊಂಡಂತೆ ಕಾಣುತ್ತದೆ."[1] ಎನ್ನುತ್ತಾರೆ ಪ್ರಬಂಧಕಾರರು. ಒಕ್ಕಲಿಗರ ಸಮೇರಾಯನಗಳ ಜಾತ್ರೆಯಲ್ಲಿ ಬ್ರಾಹ್ಮಣರು ಭಾಗವಹಿಸುವುದು, ಬ್ರಾಹ್ಮಣರ ತೇರು ಜಾತ್ರೆಯಲ್ಲಿ ಪಂಚಮರು ಪಾಲ್ಗೊಳ್ಳುವುದು ಇತ್ಯಾದಿ ಚಿತ್ರಗಳನ್ನು ನೋಡಬಹುದು.

ಗೊರೂರರ ಪ್ರಬಂಧಗಳಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದುದು ಅವರ ನಿರ್ದಾಕ್ಷಿಣ್ಯವಾದ ಪ್ರವೃತ್ತಿ ಮತ್ತು ನಿರ್ಮಲವಾದ ಮನಸ್ಸು. ಅವರು ಒಂದು ಪ್ರದೇಶದಲ್ಲಿನ ಹಾರುವ, ಹೊಲೆಯ, ಒಕ್ಕಲಿಗ, ಜೆಸ್ತ, ಅಗಸ, ತುರುಕ ಮೊದಲಾದ ನಾನಾ ಜನಾಂಗದವರ ಬದುಕಿನಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ಗುಣದೋಷಗಳಿಗೆ ಪಕ್ಷಪಾತವಿಲ್ಲದೆ ಕನ್ನಡಿ ಹಿಡಿದಿದ್ದಾರೆ. ಅವರಲ್ಲಿರುವ ಅಜ್ಞಾನ, ಅವಿವೇಕ, ಸ್ವಾರ್ಥತೆ, ಸಂಕುಚಿತ ಭಾವನೆ, ಹೀನ ಪ್ರವೃತ್ತಿ ಮೊದಲಾದ ದೌರ್ಬಲ್ಯಗಳನ್ನು ತುಂಬ ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಆದರೆ ಆ ವಿಡಂಬನೆಗಳು ಹಾಸ್ಯದ ಕಜ್ಜಾಯಗಳಾಗಿವೆಯೇ ಹೊರತು ಮತೀಯ ಮೂದಲಿಕೆಗಳಾಗಿಲ್ಲ. ಅಲ್ಲಿ ಸುಧಾರಣೆಯ ಸದಾಶಯವಿದೆಯೇ ಹೊರತು ಅಪಮಾನದ ದುರುದ್ದೇಶವಿಲ್ಲ. ಹೀಗಾಗಿ ಅವರ ಪ್ರಬಂಧಗಳ ಬಗ್ಗೆ ಯಾವ ಮತದವರಿಗೂ ಅಸಹನೆಯಿಲ್ಲ: ಯಾವ ಜಾತಿಯವರೂ ಕೊಚ್ಚಿಗೆದ್ದಿಲ್ಲ. ಗೊರೂರರು ಇತರರಲ್ಲಿರುವಂತೆ ತಮ್ಮ ಮತದಲ್ಲೂ ಬೇರು ಬಿಟ್ಟಿರುವ ಮಡಿವಂತಿಕೆ, ಪ್ರತಿಷ್ಠೆ, ಅಂಧಶ್ರದ್ಧೆ, ಅರ್ಥವಿಲ್ಲದ ಸಂಪ್ರದಾಯ, ಆಚಾರ ಅವಿಚಾರ, ಉತ್ತಮಿಕೆಯ ಅಹಂಭಾವ ಮತ್ತು ಇವುಗಳಿಂದಾಗುವ ಆಭಾಸ ಅನರ್ಥ ಇತ್ಯಾದಿ ಹುಳುಕುಗಳನ್ನು ನಿಸ್ಸಂಕೋಚವಾಗಿ ಮುಚ್ಚುಮರೆಯಿಲ್ಲದೆ ತೋರಿಸಿದ್ದಾರೆ. ತಮ್ಮ ಜ್ಞಾನದ ಕೋಲಿನಿಂದ ಜನತೆಯನ್ನು ತಿವಿದಿದ್ದಾರೆ. ಹಾಸ್ಯದ ಚಾವಟಿಯಿಂದ ಹೊಡೆದಿದ್ದಾರೆ. ಅವರ ಬಹಳಮಟ್ಟಿನ ಪ್ರಬಂಧಗಳು ಮುಖ್ಯವಾಗಿ 'ಗರುಡಗಂಬದ ದಾಸಯ್ಯ', ಕೃತಿಯಲ್ಲಿನ 'ಆಚಾರ ಕೆಟ್ಟರೂ ಆಕಾರ ಕೆಡಬಾರದು', 'ನಮ್ಮ ಊರು ಹಾರುವರ ಶೌರ್ಯ', 'ಹಾರುವಯ್ಯ ಹಜಾಮನಾದುದು', 'ಕ್ಷೌರ' ಮೊದಲಾದ ಪ್ರಬಂಧಗಳು ಇದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ವೈದಿಕರಲ್ಲಿ ವಿಧವೆಯರಿಗೆ ತಲೆ ಬೋಳಿಸುವ ವಿಕೃತಕಾರ್ಯ ನಿಜಕ್ಕೂ ಅಸಹನೀಯವಾದುದು. ಆ ಜನರಿಗೆ ವಿಧವೆ ಮುಡಿಯನ್ನು ಬಾಚಿಕೊಂಡು ಲಕ್ಷಣವಾಗಿ ಕಾಣಿಸುವುದು ಧರ್ಮಸಮ್ಮತವಲ್ಲ. ಆದರೆ

---

[1] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೯

ಯಾವನೋ ಒಬ್ಬ ಪರಪುರುಷ–ಕ್ಷೌರಿಕ ಜುಟ್ಟನ್ನು ಹಿಡಿದು ಬೋಳಿಸುವುದು ಧರ್ಮ ಸಮ್ಮತ! ಈ ಕೆಟ್ಟ ಪದ್ಧತಿಯನ್ನು ಕುರಿತು 'ಕ್ಷೌರ' ಪ್ರಬಂಧದಲ್ಲಿ "ಪತಿವ್ರತೆಯಾದ ಸ್ತ್ರೀಯನ್ನು ಮುಟ್ಟುವ ಮೊದಲ ಅಧಿಕಾರ ಗಂಡನಿಗೆ—ಎರಡನೆಯ ಅಧಿಕಾರ ಕ್ಷೌರಿಕನಿಗೆ"[1] ಎಂದು ತುಂಬ ಮಾರ್ಮಿಕವಾಗಿ ಮತ್ತು ಅಷ್ಟೇ ಕಟುವಾಗಿ ವಿಡಂಬಿಸಿದ್ದಾರೆ. ಇಲ್ಲೆಲ್ಲ ಪ್ರಬಂಧಕಾರರಿಗಿರುವ ಸುಧಾರಣಾ ಭಾವನೆ ವ್ಯಕ್ತವಾಗುತ್ತದೆ. 'ಆಚಾರ ಕೆಟ್ಟರೂ ಆಕಾರ ಕೆಡಬಾರದು' ಎನ್ನುವ ಪ್ರಬಂಧದಲ್ಲಿ ಬ್ರಾಹ್ಮಣರೆಲ್ಲ ಪಪ್ಪಾಯದ ಹಣ್ಣು ತಿಂದು ಎಂಜಲಾದ ಕೈತೊಳೆಯಲು—ನೀರಿಲ್ಲದೇ ಇದ್ದರೂ ಸಹ ಬಂದು ಚೊಂಬನ್ನೇ ಹೊರಗೆ ತೆಗೆದುಕೊಂಡು ಹೋಗಿ ಶುದ್ಧ ಮಾಡಿ ತೊಳೆದಂತೆ ನಟಿಸಿ ಒಳಗೆ ತಂದಿಡುವುದು : ಶೂದ್ರನ ಕೂದಲನ್ನು ಎತ್ತಿ ಹಾಕಿದ ಕ್ಷೌರಿಕ ಚಂಡಾಲನಿಗೆ ಸಮಾನ ಎಂದು ಭಾವಿಸಿ ನಂಜನಿಂದ ಕ್ಷೌರ ಮಾಡಿಸಿಕೊಳ್ಳದೆ ಕೊನೆಗೆ ತಾವೇ ಹಜಾಮರಾಗಿ ನಿಧನೆಗೆ ಕ್ಷೌರಮಾಡುವುದು–ಮುಂತಾದ ವಿಚಿತ್ರ ವಿಪರ್ಯಾಸಗಳನ್ನು, ಆಭಾಸಗಳನ್ನು ಗೊರೂರರು ತುಂಬ ವಿನೋದಮಯವಾಗಿ ಚಿತ್ರಿಸಿದ್ದಾರೆ. ತಮ್ಮ 'ಮಡಿ' ಎಂಬ ಪ್ರಬಂಧದಲ್ಲಿ ಮಡಿಯನ್ನು ಕುರಿತು ಬರೆಯುತ್ತ, "ನಮ್ಮಲ್ಲಿ ಒಬ್ಬೊಬ್ಬರೂ ಒಂದೊಂದು ಕಸುಬನ್ನು ಆರಿಸಿಕೊಳ್ಳುವಂತೆ ಕೆಲವರು ಮಡಿಯನ್ನೇ ಕಸಬಾಗಿ ಆರಿಸಿಕೊಂಡಿದ್ದಾರೆ"[2] ಎನ್ನುವಲ್ಲಿಯ ವಿಡಂಬನೆ ಹಾಸ್ಯ ಮೆಚ್ಚುವಂತಹದು. ಇಂತಹ ವಾಕ್ಯಗಳು ಗೊರೂರರ ಪ್ರಬಂಧಗಳಲ್ಲಿ ಕಿಕ್ಕಿರಿದಿವೆ.

ಇಲ್ಲಿ ವೈದಿಕರು ಯಾವುದನ್ನು ಶಾಸ್ತ್ರಸಮ್ಮತವೆಂದರೊ, ವಾಸ್ತವವಾಗಿ ಆಲೋಚಿಸಿದರೆ ಅವೂ ಮೂಢನಂಬಿಕೆಗಳೆ. ಮೂಢನಂಬಿಕೆಗಳು ಎಲ್ಲ ಜನಾಂಗದವರಲ್ಲೂ ಅವರ ಸಂಪ್ರದಾಯಬದ್ಧವಾದ ಬದುಕಿನ ರೀತಿನೀತಿಗನುಗುಣವಾಗಿ ಬೇರು ಬಿಟ್ಟಿವೆ. ಇವು ಸಾಮಾಜಿಕ ಮತ್ತು ನೈತಿಕ ಏರುಪೇರುಗಳಿಗೆ ಆರ್ಥಿಕ ಅಸಮಾನತೆಗೆ ಕಾರಣಗಳಾಗುತ್ತವೆ. ಇವುಗಳ ನಿರ್ಮೂಲನ ಸಾಹಿತಿಗಳ ಆದ್ಯ ಕರ್ತವ್ಯ. ಗೊರೂರರು ಈ ದಿಸೆಯಲ್ಲಿ ನಿಸ್ಪೃಹತೆಯಿಂದ ದುಡಿದಿದ್ದಾರೆ. ಸಮಾಜದಲ್ಲಿ ಸಿಕ್ಕಾಬಟ್ಟೆ ಬೆಳೆದಿರುವ ಮೂಢನಂಬಿಕೆಗಳೇ ಮೊದಲಾದ ಪಾಪಸುಕಳ್ಳಿಗಳನ್ನು ಕತ್ತರಿಸುವ ಕತ್ತಿಯನ್ನಾಗಿಸಿದ್ದಾರೆ ತಮ್ಮ ಲೇಖನಿಯನ್ನು. ಗೀತೆಯನ್ನು ಚತುರ್ವರ್ಣಗಳನ್ನು ತಮ್ಮ ಮೂಗಿನ ನೇರಕ್ಕೆ ಸರಿಯಾಗಿ ಮತೀಯವಾಗಿ ವ್ಯಾಖ್ಯಾನ ಮಾಡುತ್ತಿರುವ ಈ ಕಾಲದಲ್ಲಿ ತಮ್ಮ ಮತದ ಕೊಳೆಯನ್ನು ಹೊರಹಾಕಿ ತೊಳೆಯುತ್ತೇನೆ ಎಂದು ಹೊರಡುವ ವ್ಯಕ್ತಿ ನಿಜಕ್ಕೂ ಮಹಾತ್ಮ. ಆಯಾ ಜನಾಂಗದವರ ಬದುಕಿನಲ್ಲಿ ತುಂಬಿಕೊಂಡಿರುವ ಹೊಲಸನ್ನು ಆಯಾ ಜನಾಂಗದ ಸಾಹಿತಿಗಳೇ ತೊಳೆಯುವಂಥದು ಹೆಚ್ಚು ಸೂಕ್ತವಾದುದು. ಇಂದು ಇದು ಅತ್ಯಂತ ಮುಖ್ಯವಾಗಿ ಆಗಬೇಕಾಗಿರುವ ಕಾರ್ಯ. ಇದನ್ನು ಬೇರೊಬ್ಬ ಸಾಹಿತಿ ಮಾಡಬಾರದೆಂದಲ್ಲ; ಆದರೆ ಅದರಿಂದ ಮತೀಯ ಭಾವನೆಗಳು ಉಂಟಾಗಿ ಸಾಹಿತಿಯ

[1] 'ಗರುಡಗಂಬದ ದಾಸಯ್ಯ', ಪುಟ ೧೪೫

[2] 'ಕಮ್ಮಾರ ವೀರಭದ್ರಾಚಾರಿ', ಪುಟ ೨೮೮

ಅಪ್ರಾಮಾಣಿಕವಾದ ಪ್ರಯತ್ನ ವಿಫಲವಾಗಬಹುದು. ಅಥವಾ ಸಫಲವಾದರೂ ಸಾಹಿತಿ ಜಾತೀಯ ಕಳಂಕದಿಂದ ಅನ್ಯಾಯವಾಗಿ ಆರೋಪಿತನಾಗಬಹುದು. ನಮ್ಮಲ್ಲಿ ಇವಕ್ಕೆ ನಿದರ್ಶನಗಳಿಲ್ಲದಿಲ್ಲ. ತಾವು ಹುಟ್ಟಿಬಂದ ಜಾತಿಯ ಜನರ ಜೀವನ ವಿಧಾನಗಳ ಕಸ ಮುಸುರೆಗಳನ್ನೆಲ್ಲ ಮುಚ್ಚುಮರೆಯಿಲ್ಲದೆ ಬಹಿರಂಗಕ್ಕೆ ತಂದು 'ಕಾಸಿಗೆ ಪಂಜೇರು' ಮಾಡಿದವರು ಇಬ್ಬರು ಮಹಾನುಭಾವರುಗಳು. ಒಬ್ಬರು ಕುವೆಂಪು; ಮತ್ತೊಬ್ಬರು ಗೊರೂರು ರಾಮಸ್ವಾಮಿ ಅಯ್ಯಂಗಾರ್. ಕುವೆಂಪುರವರು ತಮ್ಮ ಎರಡು ಕಾದಂಬರಿಗಳಲ್ಲಿ, ಮುಖ್ಯವಾಗಿ 'ಕಾನೂರು ಹೆಗ್ಗಡತಿ'ಯಲ್ಲಿ, ಒಕ್ಕಲಿಗರಲ್ಲಿದ್ದ ಕೆಲವು ಹೇಯ ಪ್ರವೃತ್ತಿಗಳನ್ನೂ, ಮೂಢನಂಬಿಕೆಗಳನ್ನೂ ನಿರ್ದಾಕ್ಷಿಣ್ಯವಾಗಿ ತೋರಿಸಿಕೊಟ್ಟಿದ್ದಾರೆ. ಗೊರೂರರು ತಮ್ಮ ಪ್ರಬಂಧಗಳಲ್ಲಿ ಇದೇ ಕೆಲಸಮಾಡಿದ್ದಾರೆ. ದೊಡ್ಡ ಚೇತನಗಳಿಗೆ ಮಾತ್ರ ಈ ಕಾರ್ಯ ಸಾಧ್ಯ. ಕೃತಿಗಳಲ್ಲಿ, ವೇದಿಕೆಗಳಲ್ಲಿ ವಿಶ್ವ ತತ್ವದ ಮಾತುಗಳನ್ನಾಡಿ ಬದುಕಿನಲ್ಲಿ ಅವಕ್ಕೆ ತದ್ವಿರುದ್ಧವಾಗಿರುವವರ ಮಾತು ಬೇರೆ. ಅವರದು ಕಲೆಗಾಗಿ ಕಲೆ. ಆದರೆ ಗೊರೂರರ ಬದುಕು ಬರೆಹಗಳು ಭಿನ್ನವಲ್ಲ.

ಒಳ್ಳೆಯ ಆರಂಭ ಮತ್ತು ಒಳ್ಳೆಯ ಮುಕ್ತಾಯ ಪ್ರಬಂಧ ರಚನೆಯ ಮುಖ್ಯ ಲಕ್ಷಣಗಳಲ್ಲೊಂದು. ಇದು ಗೊರೂರರಿಗೆ ಚೆನ್ನಾಗಿ ಸಿದ್ಧಿಸಿದೆ. ಅವರ ಯಾವುದೇ ಪ್ರಬಂಧ ಇದಕ್ಕೆ ನಿದರ್ಶನವಾಗಬಲ್ಲದು. "ಹೇಮಾವತೀ ನದಿಯು ಸಮುದ್ರ ಉಸಿರು"[1]—ಇದು 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧದ ಆರಂಭ. "ಬೆಸ್ತರ ಕರಿಯು ನಿಜವಾಗಿಯೂ ಯೋಗಿಯೇ?"[2]—ಇದು 'ಬೆಸ್ತರ ಕರಿಯ' ಎಂಬ ಪ್ರಬಂಧದ ಆರಂಭ. 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ' ಎಂಬ ಪ್ರಬಂಧದ ಆರಂಭವನ್ನು ನೋಡಿ: "ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು."[3] ಈ ಪ್ರಬಂಧದ ಮೊದಲ ಪಂಕ್ತಿಯೇ ಪ್ರಬಂಧದ ವಸ್ತುವಾದ ಎಮ್ಮೆಯ ಬಗ್ಗೆ ಒಂದು ವಿಶೇಷವಾದ ಆಸಕ್ತಿಯನ್ನು ತಂದುಕೊಡುತ್ತದೆ. ಜೊತೆಯಲ್ಲಿ ಪ್ರಬಂಧದ ಮತ್ತೊಂದು ಗುಣವಾದ ಹಾಸ್ಯವೂ ತಲೆಹಾಕುತ್ತದೆ. ನಮ್ಮ ನಾಡು ಎಮ್ಮೆಯ ನಾಡು ಎಂದರೆ ಯಾರು ಭುಜ ತಟ್ಟಿಕೊಳ್ಳುತ್ತಾರೆ? ನಾಚಿ ಅವಮಾನಗೊಳ್ಳುತ್ತಾರೆ. ವಸ್ತುಸ್ಥಿತಿ ಏನೇ ಇದ್ದರೂ ಅನಪೇಕ್ಷಿತವಾದುದನ್ನೆ ವಿಶಿಷ್ಟ ಗುಣವೆಂದಾಗ ನಗುಬರುವುದು ಸಹಜ. ಆದರೆ ತಾವು ಪ್ರತಿಪಾದಿಸಲಿರುವ ವಿಷಯಕ್ಕೆ ಆ ಮೂಲಕ ಒಂದು ಮಹತ್ವವನ್ನು ತಂದುಕೊಟ್ಟು ವಾಚಕರ ಮನಸ್ಸನ್ನು ಆಕರ್ಷಿಸಿ ಅವರನ್ನು ಆತ್ಮೀಯತೆಗೆ ತೆಗೆದುಕೊಳ್ಳಬೇಕಾಗಿರುವುದು ಪ್ರಬಂಧಕಾರರ ಪ್ರಮುಖ ಗುರಿ. ಅದಿಲ್ಲಿ ಸಾಧಿತವಾಗಿದೆ. ಯಾವುದೇ ವಸ್ತುವನ್ನು ಆರಿಸಿಕೊಂಡರೂ ಸಮರ್ಥ ಲೇಖಕ ಉತ್ತಮ ಪ್ರಬಂಧಗಳನ್ನು ರಚಿಸಬಲ್ಲನೆಂಬುದಕ್ಕೆ ಪ್ರಕೃತ ಪ್ರಬಂಧ 'ನಮ್ಮ ಎಮ್ಮೆಗೆ

---

1 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧

2 'ಬೆಸ್ತರ ಕರಿಯ', ಪುಟ ೫

3 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೭೩

ಮಾತು ತಿಳಿಯುವುದೆ' ಸಾಕ್ಷಿಯಾಗಿದೆ. ಇದರಲ್ಲಿ ಎಮ್ಮೆ ಚುರುಕು ಪ್ರಾಣಿ. ಅದಕ್ಕೆ ಇತರ ಪ್ರಾಣಿಗಳಂತೆಯೇ ಬುದ್ಧಿಯಿದೆ, ಎಂಬುದನ್ನು ತಿಳಿಸಿದ್ದಾರೆ. ನಾವಾಡುವ ಮಾತುಗಳು ಅದಕ್ಕೆ ಚೆನ್ನಾಗಿ ತಿಳಿಯುತ್ತವೆಂಬುದನ್ನು ತಮ್ಮ ಪ್ರಾಮಾಣಿಕವಾದ ಅನುಭವಗಳೊಂದಿಗೆ ಸಮರ್ಥಿಸಿದ್ದಾರೆ. ಎಮ್ಮೆ ಕರು ಹಾಕುವಾಗ ಇವರು ಗೋಣಿ ಚೀಲವನ್ನು ಹಿಡಿದುಕೊಂಡು ಅದರ ಕರು ನೆಲಕ್ಕೆ ಬೀಳದಂತೆ ಆತುಕೊಳ್ಳಲು ಪ್ರಯತ್ನಿಸಿದ್ದು. ಇವರ ಮಾತನ್ನು ಮೊದಲೇ ಕೇಳಿಸಿಕೊಂಡ ಎಮ್ಮೆ ಕರುವನ್ನು ನೆಲಕ್ಕೆ ಎಸೆದದ್ದು. ಹೆಂಡತಿಯ ಸೀರೆಯನ್ನು ಉಟ್ಟು ಲೇಖಕರು ಹಾಲು ಕರೆಯಲು ಹೋದಾಗ ಅದು ಒದ್ದದ್ದು—ಮುಂತಾದ ಪ್ರಸಂಗಗಳ ಮೂಲಕ ನಾವಿದನ್ನು ಮನಗಾಣಬಹುದು. ಎಮ್ಮೆಗೆ ಮಾತು ತಿಳಿಯಲಿ ಬಿಡಲಿ, ಅದನ್ನು ಜನರು ಒಪ್ಪಲಿ ಒಪ್ಪದಿರಲಿ ಆದರೆ ಅದನ್ನು ಚಿತ್ರಿಸುವುದರಲ್ಲಿರುವ ಇವರ ಅನುಭವಗಳ ರಮಣೀಯತೆಯನ್ನು ಯಾರೂ ಮರೆಯುವಂತಿಲ್ಲ, ಅಲ್ಲಗಳೆಯುವಂತಿಲ್ಲ. ವಾಸ್ತವವಾಗಿ ಇದೊಂದು ಉತ್ತಮ ಪ್ರಬಂಧ.[1] ಇದರಲ್ಲಿ ಎಮ್ಮೆಯ ನಾನಾ ಲಕ್ಷಣಗಳನ್ನೂ ಎಮ್ಮೆಯ ಹಾಲಿನ ಮಹತ್ವವನ್ನೂ ಸುಂದರವಾಗಿ ಪರಿಚಯಿಸಿದ್ದಾರೆ. ಎಮ್ಮೆಯ ಕರು ತಾಯಿಯ ಹೊಟ್ಟೆಯಿಂದ ಹೊರಗೆ ಬರುವಾಗ ಅದರ ಒದೆತದಿಂದ ರಭಸವಾಗಿ ಹೊರಗೆ ಬಿತ್ತು ಎಂದು ಹೇಳುತ್ತ "ಪ್ರಪಂಚ ಏನೂ ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ"[2] ಎನ್ನುತ್ತಾರೆ. ಜೀವನದಲ್ಲಿ ಸುಖಕ್ಕಿಂತ ಕಷ್ಟಗಳೇ ಹೆಚ್ಚು ಎನ್ನುವ ನಿಲುವಿಗೆ ಒಳ್ಳೆಯ ಸಂಕೇತವನ್ನು ತಂದಿದ್ದಾರೆ. ಅವರು ಈ ಪ್ರಬಂಧವನ್ನು ಮುಗಿಸುವುದರಲ್ಲೂ ಒಂದು ಸೊಗಸಿದೆ. "ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲ ಎಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ? ಆ ಎಮ್ಮೆಯ ಹಾಲನ್ನು ಕುಡಿದ ನನ್ನನ್ನೇ ನೋಡಿ"[3]

ಇನ್ನು ಜಗತ್ತಿನ ನಿತ್ಯಪರಿವರ್ತನಶೀಲತೆಯತ್ತ ದೃಷ್ಟಿಹಾಯಿಸಿರುವ 'ದೇವರುಗಳೂ ಡೆಮಾಕ್ರಸಿಯೂ' ಎಂಬ ಪ್ರಬಂಧ ಗಮನಾರ್ಹವಾದುದು. ಪರಿವರ್ತಿತ ಜಗತ್ತಿನಲ್ಲಿ ಭಗವಂತನೂ ಅದಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಅಥವಾ ಹೊಂದಿಕೊಳ್ಳುವಂತೆ ಮಾಡುತ್ತಾರೆ ಪ್ರಜಾಪ್ರಭುತ್ವದಲ್ಲಿನ ಜನ. ಪ್ರಜಾಪ್ರಭುತ್ವದ ನೇರ ಸ್ಥಿತಿಗತಿಗಳ ಚಿತ್ರಣ ಅದರ ಉದ್ದೇಶವಲ್ಲ. ಬಹಳ ಮಟ್ಟಿಗೆ ವಿಡಂಬಿತಗೊಂಡ ಅದರ ವ್ಯಂಗ್ಯ ಚಿತ್ರ ಇಲ್ಲಿದೆ. ಜನರ ಎಲ್ಲ ತೆರನ ಅಲಸಿಕೆ, ಸೋಮಾರಿತನ, ಉದಾಸೀನತೆ, ಮೊದಲಾದವುಗಳ ಸಂಯುಕ್ತ ಸಂಕ್ಷಿಪ್ತ ಸಂಕೇತರೂಪ 'ಡೆಮಾಕ್ರಸಿ' ಎಂಬ ಪದ. ಡೆಮಾಕ್ರಸಿ ಬಂದರೂ ಜನರಿಗೆ ಸುಖವಿಲ್ಲ ಎಂಬುದಕ್ಕೆ ಇಂದಿನ ದೇವರ ಸ್ಥಿತಿ ಸಂಕೇತ ಸ್ವರೂಪದ್ದು. ಹಿಂದೆ ದೇವರ ಪೂಜೆಗೆ ದೊರೆಯುತ್ತಿದ್ದ ರಾಶಿರಾಶಿ ಹೂವಾಗಲಿ, ತುಳಸಿಯಾಗಲಿ ಈಗಿಲ್ಲ.

---

[1] ಸಾಹಿತ್ಯ ಅಕಾಡೆಮಿಗಾಗಿ ಸಂಪಾದಿಸಿರುವ 'ಹೊಸಗನ್ನಡ ಪ್ರಬಂಧ ಸಂಕಲನ'ದಲ್ಲಿ [illegible] ಇದೇ ಪ್ರಬಂಧವನ್ನು ಸೇರಿಸಿದ್ದಾರೆ.

[2] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೬೨

[3] ಅದೇ, ಪುಟ ೮೨

ದೇವರ ಪೂಜೆ ಉತ್ಸವಗಳಿಗೆ ಸಕಾಲದಲ್ಲಿ ಓಲಗದವರಿಲ್ಲ—ಅವರಿಗೆ ಅದಕ್ಕಾಗಿ ಜಮೀನು ಬಿಟ್ಟಿದ್ದರೂ ಸಹ. ಪಟೇಲರು ಅವರ ಮನೆಗಳ ಬಾಗಿಲಿಗೆ ಸಾವಿರ ಸಲ ಅಲೆದರೂ ಪ್ರಯೋಜನವಿಲ್ಲ. ದೇವರಿಗೆ ಅಂಜದವರು ಪಟೇಲರಿಗೆ ಅಂಜುತ್ತಾರೆಯೆ ? ಇದೇ ಸಮಯದಲ್ಲಿ ಅವರು ಪ್ರಜಾಪ್ರಭುತ್ವದ ಒಂದೆರಡು ಒಳ್ಳೆಯ ಲಕ್ಷಣಗಳನ್ನೂ ತಿಳಿಸುತ್ತಾರೆ. ಜನರಲ್ಲಿ ಅಸ್ಪೃಶ್ಯತಾಭಾವನೆಗಳು ಮಾಯವಾಗಿ ಸಮಾನತತ್ವ ಮತ್ತು ಗುಣಪಕ್ಷಪಾತ ಬೆಳೆಯಲು ಹೇಗೆ ಕಾರಣವಾಯಿತು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಮೀಸೆ ಗುಂಡನ ಚಟುವಟಿಕೆಗಳಲ್ಲಿ ಇದು ವ್ಯಕ್ತವಾಗುತ್ತದೆ.

'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' ಗ್ರಂಥದ 'ಸಫಲ ಜೀವನ' ಎಂಬ ಪ್ರಬಂಧ ತುಂಬ ಪರಿಣಾಮಕಾರಿಯಾದುದು. ಇದರಲ್ಲಿ ಕರ್ಮಯೋಗದ ರಹಸ್ಯ ಬಿಚ್ಚಿಕೊಂಡಿದೆ. ಕರ್ಮವೇ ಭಗವದಾರಾಧನೆ ಎಂಬ ತತ್ತ್ವ ವೆಂಕಟರಾಯನ ಬದುಕಿನಲ್ಲಿ ಸಿದ್ಧಿಸಿದೆ. ದುಡಿಮೆಯಿಲ್ಲದ ಪೂಜೆ ನೀರಿನಲ್ಲಿ ಮಾಡಿದ ಹೋಮದಂತೆ ನಿರರ್ಥಕವೆಂಬುದನ್ನು ಇಲ್ಲಿ ಮನಗಾಣಬಹುದು. ವೆಂಕಟರಾಯನ ಒಬ್ಬನ ದುಡಿಮೆಯಿಂದ ಸಮಗ್ರ ಮಲ್ಲಿಗೆ ಹಳ್ಳಿಯೇ ನಗುತ್ತಿತ್ತು. ಆದರೆ ಹೆಂಡತಿಯ ಬಲವಂತಕ್ಕೆ ಕಟ್ಟುಬಿದ್ದು ಇಷ್ಟವಿಲ್ಲದೆ ಇದ್ದರೂ ಸಹ ಅನಿವಾರ್ಯವಾಗಿ ಬರಿಯ ಪೂಜೆ, ಜಪ, ತಪ, ಅನುಷ್ಠಾನಗಳಲ್ಲಿ ಆತ ತೊಡಗಿದಾಗ ಮಲ್ಲಿಗೆಹಳ್ಳಿ ಹಾಲು ಹಣ್ಣು ಹೂವು ಪತ್ರೆಗಳಿಲ್ಲದೆ ಕೊರಗಿತು. ಒಬ್ಬನ ದುಡಿಮೆಯಿಂದ ಹಳ್ಳಿಯ ಸಾವಿರ ಜನ ಹರ್ಷಿಸಲು ಸಾಧ್ಯವಿರುವಾಗ, ಸಾವಿರ ಜನವೂ ದುಡಿದರೆ ಆ ನಾಡು ಸುಖದ ಬೀಡಾಗಲು ಸಂದೇಹವಿಲ್ಲ—ಎಂಬ ಭಾವ ಇಲ್ಲಿ ಧ್ವನಿತವಾಗುತ್ತದೆ. ನೂರು ತತ್ವಗಳು ಹೇಳುವ ನೀತಿಯನ್ನು ಈ ಒಂದು ಪ್ರಬಂಧ ಪರಿಣಾಮಕಾರಿಯಾಗಿ ನೆರವೇರಿಸಿದೆ. ಈ ಪ್ರಬಂಧದಲ್ಲಿ ಜೀವನದ ಪರಿಶುದ್ಧತೆಯನ್ನು, ಗ್ರಾಮಜೀವನದ ನಿರ್ಮಲತೆಯನ್ನು ಮತ್ತು ಬದುಕಿನಲ್ಲಿ ಅದು ತಂದುಕೊಡುವ ನೆಮ್ಮದಿಯನ್ನು ಲೇಖಕರು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ವೆಂಕಟರಾಯ ತನ್ನ ಮುವ್ವತ್ತೈದು ವರ್ಷಗಳ ಪಟ್ಟಣದ ಕಾರಕೂನ ಜೀವನದಲ್ಲಿ ಪಡೆಯಲಾಗದ ನೆಮ್ಮದಿಯನ್ನು ಹಳ್ಳಿಯ ಕೃಷಿಕನಾಗಿ ಪಡೆದುಕೊಳ್ಳುತ್ತಾನೆ. ವಾಚಕರಿಗೆ ಒಬ್ಬ ತಾತ್ವಿಕ ವ್ಯಕ್ತಿಯಾಗಿ ಗೋಚರಿಸುತ್ತಾನೆ. ಗೊರೂರರ ಇಂತಹ ಪ್ರಬಂಧಗಳನ್ನು ಓದುವಾಗ, ವಿಲಿಯಮ್ಸ್ ಹೇಳುವ, "The essayist's usual role is that of the social philosopher, the critic, the annotator"[1] ಎಂಬ ಮಾತಿಗೆ ಸಮರ್ಥನೆ ದೊರೆಯುತ್ತದೆ.

'ಬಿಂದಿಗಮ್ಮನ ಜಾತ್ರೆ' ಬರೆಹದಲ್ಲಿ ಜಾನಪದ ಜೀವನದ ಒಮ್ಮುಖದ ಒಂದು ಚಿತ್ರವಿದೆ. ಒಂದು ಪ್ರದೇಶದ ಜನರ ಬದುಕು ಅಲ್ಲಿನ ರಂಗ ಮತ್ತು ಬಿಂದಿಗಮ್ಮ ಈ ಎರಡು ದೇವರುಗಳ ಸುತ್ತ ಬಳಸಿಕೊಂಡಿರುವ ವಿಧಾನ, ಆ ಬಗ್ಗೆ ಅವರ ಆಚಾರ ವಿಚಾರ ಸಂಪ್ರದಾಯ, ಭಕ್ತಿ ಮತ್ತು ಅದರ ಅಭಿವ್ಯಕ್ತಿ ಈ ಪ್ರಬಂಧದ ಮುಖ್ಯ ತಿರುಳಾಗಿದೆ. ಜನರಿಗೆ

1 W. E. Williams, *A Book of English Essays*, Introduction, p. 11

ಆ ದೇವರ ಬಗೆ ಇರುವ ಏಕನಿಷ್ಠೆ ಪೂಜಾರಿಯ ಕ್ರಿಯೆಯಲ್ಲಿ ಸಾಂಕೇತಿಕವಾಗಿ ಕಾಣಿಸಿಕೊಂಡಿದೆ. ಪೂಜಾರಿ ಬಂಡಿಗಮ್ಮನ ಗಂಟಿಯನ್ನು ಬೋಳು ತಲೆಯ ಮೇಲೆ ಹೊತ್ತು ಅದನ್ನು ಕೆಡವದಂತೆ ನಾಗಾಲೋಟದಿಂದ ಓಡಿ ರಂಗನ ಬೆಟ್ಟವನ್ನು ಸೇರುವುದು. ಮಧ್ಯೆ ಹನ್ನೆರಡು ಕಡೆ ತೋರಣಗಳಲ್ಲಿ ನಮಸ್ಕರಿಸುವುದು ಮುಂತಾದ ಚಿತ್ರಗಳು ಆ ಪೂಜಾರಿಯ ಭಕ್ತಿಯ ಆವೇಶವನ್ನೂ ಕಾರ್ಯಶ್ರದ್ಧೆ ನಿಷ್ಠೆ ನಂಬಿಕೆಗಳನ್ನು ತೋರ್ಪಡಿಸುತ್ತವೆ. ಇಲ್ಲಿ ಸೇರಿರುವ ದಂತಕತೆ, ಸ್ಥಳ ಪುರಾಣ, ಜನಪದ ಗೀತೆಗಳು, ಪ್ರಾದೇಶಿಕ ಪರಿಚಯ, ಮೂಢನಂಬಿಕೆ ಮೊದಲಾದವುಗಳು ಗ್ರಾಮೀಣತೆಯ ಸೊಗಸನ್ನು ಸಾರಿ ಲೇಖನದ ಚೆಲುವನ್ನು ಇಮ್ಮಡಿಸಿವೆ. 'ಬಂಡಿಗಮ್ಮನ ಜಾತ್ರೆ'ಯನ್ನು ಇದೇ ಹಾಸನ ಜಿಲ್ಲೆಯ 'ಮಾವನೂರು ಮುಳ್ಳಪ್ಪನ ಜಾತ್ರೆ' ಮತ್ತು 'ಮುಕಳಿ ಗಿಡ್ಡಮ್ಮನ ಹಬ್ಬ'ಗಳು ಬಹಳ ಮಟ್ಟಿಗೆ ಹೋಲುತ್ತವೆ.[1]

ಬೆಟ್ಟದಲ್ಲಿ ಬಂಡಿಗಮ್ಮ ಮತ್ತು ರಂಗದೇವರು ಸುತ್ತಮುತ್ತಲ ಜನರ ಸಂತೋಷ, ಸಂಭ್ರಮ ಮತ್ತು ಸಾಹಸಗಳಿಗೆ ಆಧಾರವಾಗಿದ್ದಾರೆ. ಜನಜೀವನದ ಚೇತನ ಶಕ್ತಿಯಾಗಿದ್ದಾರೆ. ನಮ್ಮ ನಾಡಿನ ಯಾವುದೇ ಪ್ರಾಂತ್ಯದ ಗ್ರಾಮ ದೇವತೆ ಈ ತೆರನಾಗಿ ಅಲ್ಲಿಯ ಜನಜೀವನದ ಮೇಲೆ ಇನ್ನಿಲ್ಲದ ರೀತಿಯಲ್ಲಿ ಪ್ರಭಾವ ಬೀರಿರುವುದು ಕಂಡು ಬರುತ್ತದೆ. 'ಬಂಡಿಗಮ್ಮನ ಜಾತ್ರೆ' ಜಾತ್ರೆಯೊಂದನ್ನು ವಸ್ತುವಾಗುಳ್ಳ ಒಂದು ಒಳ್ಳೆಯ ಲೇಖನವೇ ಹೊರತು ಪ್ರಬಂಧವಲ್ಲ. 'ಜಾನಪದ ಜೀವನಕ್ಕೆ ವಿಹಾರವೇ ಸ್ಫೂರ್ತಿ' ಎಂಬುದು ಕೂಡ ಸುಂದರವಾದ ಕಥನಾತ್ಮಕ ಲೇಖನ ಎನ್ನಬಹುದೇ ಹೊರತು ಪ್ರಬಂಧ ಎನ್ನುವಂತಿಲ್ಲ.

ಗೊರೂರರ ಅನುಭವದ ಕೈಬುಟ್ಟಿಯಿಂದ ಹೊರಹೊಮ್ಮಿರುವ ಮತ್ತೊಂದು ಪ್ರಬಂಧ 'ನಾಕಚಾರಿಯಲ್ಲಿ.' ಇದು ಹಾಸ್ಯಪ್ರಧಾನವಾದುದು. ಅನಿರೀಕ್ಷಿತ ಪ್ರವಾಸ ನಾಕಚಾರಿಗೆ ಹೋಗಬೇಕಾಗಿ ಬಂದಾಗ ಒದಗಿದ ಸಂಕಷ್ಟಗಳನ್ನು ಇಲ್ಲಿ ರಸವತ್ತಾಗಿ ಚಿತ್ರಿಸಿದ್ದಾರೆ. ಪ್ರಬಂಧಕಾರರ ಇಲ್ಲಿನ ಅನುಭವಕ್ಕೆ ಆಧಾರ ತಿಂಗಳಿನ ಮೂರು ದಿನ

---

[1] ಮಾವನೂರು ಮುಳ್ಳಪ್ಪನ ಜಾತ್ರೆ ದೀಪಾವಳಿಯ ಸಮಯದಲ್ಲಿ ನಡೆಯುತ್ತದೆ. ಅಲ್ಲಿಯೂ ಸಹ ಭಕ್ತನೊಬ್ಬ ಮುಳ್ಳಪ್ಪದೇವರ ಗಂಟನ್ನು ಬರಿಯ ತಲೆಯ ಮೇಲೆ ಹೊತ್ತು ಎರಡು ಕೈಗಳಲ್ಲೂ ಎರಡು ಚಾಕುಗಳನ್ನು ಹಿಡಿದು ವೇಗವಾಗಿ ಓಡುತ್ತ ಬೆಟ್ಟವನ್ನು ಹತ್ತುತ್ತಾನೆ. ಈ ಮಧ್ಯೆ 'ದೀವಟಿಗೆ ಸಲಾಮು' ಮಾಡುತ್ತಾನೆ. ಈ ಸಮಯದಲ್ಲಿ ಗಂಟನ್ನು ಕೈಯಲ್ಲಿ ಹಿಡಿದು, ಅದು ನೆಲಕ್ಕೆ ಬೀಳದಂತೆ ಗದ್ದವನ್ನು ಭೂಮಿಗೆ ತಾಗಿಸುತ್ತಾನೆ. ಒಂದು ವೇಳೆ ಗಂಟು ನೆಲಕ್ಕೆ ಬಿದ್ದರೆ ಭಕ್ತ ತನ್ನೆರಡು ಕೈಗಳಲ್ಲಿರುವ ಚಾಕುಗಳಿಂದ ಹೊಟ್ಟೆಯನ್ನು ಇರಿದುಕೊಂಡು ಸಾಯುತ್ತಾನೆ. ಈಗ ಮುಳ್ಳಪ್ಪದೇವರನ್ನು ಹೊರುತ್ತಿರುವ ಭಕ್ತನ ವಂಶೀಕರೊಬ್ಬ ಹಿಂದೆ ಹೀಗೆ ಇರಿದುಕೊಂಡು ಸತ್ತಿದ್ದನಂತೆ. (ಹೆಚ್ಚಿನ ವಿವರಗಳಿಗೆ ಪ್ರಕೃತ ಲೇಖಕನ 'ಮುಕಳಿ ಗಿಡ್ಡಮ್ಮ' ಕೃತಿಯ ಪೀಠಿಕೆಯನ್ನು ನೋಡಿ.) ಇಲ್ಲಿ ಬಂಡಿಗಮ್ಮನ ಪೂಜಾರಿಯನ್ನು ಆಚಾತುರ್ಯವಾದರೆ ಬಲಿಯವರು ಕತ್ತರಿಸಿಹಾಕುತ್ತಾರೆ ಎಂಬಿದೆ. ಇಂತಹ ಸಾಮ್ಯಗಳು ಕರ್ನಾಟಕದಾದ್ಯಂತ ಇದ್ದರೂ ಆಶ್ಚರ್ಯಪಡಬೇಕಾಗಿಲ್ಲ. ಜನಪದ ಪುರಾಣಗಳಲ್ಲಿ ಇದೊಂದು ಸಾಮಾನ್ಯ ಲಕ್ಷಣ.

ಗಳು. ಅವರ ಈ ಅನುಭವದಲ್ಲಿ ಅಡಿಗೆಯೂ ಒಂದು ವಿಜ್ಞಾನ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಅನುಭವವಿಲ್ಲದೆ ಪಾಕಶಾಲೆಗೆ ಹೋದ ವ್ಯಕ್ತಿ ಸಿದ್ಧತೆಯಿಲ್ಲದೆ ರಣರಂಗಕ್ಕೆ ಹೋದ ಸೈನಿಕನ ಹಾಗೆ ಆಗುತ್ತಾನೆಂಬುದನ್ನು ಇಲ್ಲಿ ಸಕಾರಣವಾಗಿ ಸಮರ್ಥಿಸಿದ್ದಾರೆ. ಅಲ್ಲದೆ ಅಡಿಗೆಯಲ್ಲಿ ನಿಸ್ಸೀಮರಾದವರನ್ನೂ ಅದರಿಂದಾಗಿ ತಮ್ಮ ಹೆಂಡಂದಿರಿಗೆ ದಾಸರಾದವರನ್ನೂ ಅಥವಾ ದಾಸರಾದುದರಿಂದ ಅಡಿಗೆಯವರಾಗಬೇಕಾಗಿಬಂದುದನ್ನೂ ಚೆನ್ನಾಗಿ ಚಿತ್ರಿಸಿದ್ದಾರೆ. ಇಲ್ಲಿಯ ಶಾಮಯ್ಯಂಗಾರಿ ಮತ್ತು ರಾಘವಾಚಾರ್ ಪಾತ್ರಗಳು ಇದಕ್ಕೆ ಒಳ್ಳೆಯ ನಿದರ್ಶನಗಳಾಗಿವೆ.

ನಾಗರಿಕತೆಯ ಪ್ರಭಾವ ಜಾನಪದದ ನಾಶಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು 'ಸೇತುವೆ' ಎಂಬ ಪ್ರಬಂಧದಲ್ಲಿ ಕಾಣಬಹುದು. ಅಲ್ಲದೆ ವೈಜ್ಞಾನಿಕ ಸಾಧನೆಗಳು ಮಾನವನನ್ನು ಪ್ರಕೃತಿಯಿಂದ ವಂಚಿಸುತ್ತವೆ, ಸ್ವಾಭಾವಿಕ ಸಾಹಸಗಳಿಂದ ಅವನನ್ನು ದೂರ ಮಾಡಿ ಅವನ ಬದುಕನ್ನು ಕೃತಕವನ್ನಾಗಿಸುತ್ತವೆ ಎಂಬ ಅಂಶ ಇಲ್ಲಿ ವ್ಯಕ್ತವಾಗುತ್ತದೆ. ವಿಜ್ಞಾನ ಮಾನವನ ಸುಖಕ್ಕೆ ಸಹಾಯಕಾರಿಯಾದುದು ಎಂಬುದು ಎಲ್ಲರ ಭಾವನೆ. ಆದರೆ ಅದರಿಂದ ಒದಗಬಹುದಾದ ಅನನುಕೂಲಗಳ ಕಡೆಗೆ ಪ್ರಬಂಧಕಾರರು ನಮ್ಮ ಗಮನ ಸೆಳೆಯುತ್ತಾರೆ. ಒಂದು ನದಿಗೆ ಸೇತುವೆ ಕಟ್ಟಿದರೆ ಆ ಊರಿನ ಜನ ಅದೆಷ್ಟು ಸಂತೋಷಪಡುವುದಿಲ್ಲ. ಏಕೆಂದರೆ ಆ ಸೇತುವೆಯಿಂದ ಆಗುವ ಪ್ರಯೋಜನಗಳು ಅಪಾರ. ಆದರೆ ಪ್ರಬಂಧಕಾರರು ಆನಂದಪಡುವುದಕ್ಕೆ ಬದಲಾಗಿ ದುಃಖಿಸುತ್ತಾರೆ. ಪ್ರಕೃತಿಜೀವಿಯಾದ ಅವರಿಗೆ ಸೇತುವೆ ತಮ್ಮನ್ನು ನದಿಯಿಂದ ದೂರ ಮಾಡಿತಲ್ಲ ಎಂಬ ವ್ಯಥೆ ಉಂಟಾಗಿದೆ. ಯಾವುದೇ ವಸ್ತುವಿನಲ್ಲಿ ಪ್ರಬಂಧಕಾರ ಸಾಮಾನ್ಯ ಜನತೆ ಕಾಣದೆ ಇದ್ದ ವಿಷಯಗಳನ್ನು ಕಂಡುಕೊಳ್ಳುತ್ತಾನೆ. ಅವನ ಅಂತರ್‌ದೃಷ್ಟಿಗೆ ಗೋಚರವಾದ ಇತರ ವಿಶಿಷ್ಟ ವಿಷಯಗಳನ್ನು ತೋರಿಸಿಕೊಡುತ್ತಾನೆ. ನದಿಗೆ ಸೇತುವೆ ಬಂದುದರಿಂದ ತಮಗಾದ ವ್ಯಥೆಯ ಆಧಿಕ್ಯವನ್ನು ಪ್ರಬಂಧದ ಮುಕ್ತಾಯದ ವಾಕ್ಯದಲ್ಲಿ ತುಂಬ ಪರಿಣಾಮಕಾರಿಯಾಗಿ ಹೇಳಿದ್ದಾರೆ: "ಅದರ ಮೇಲೆ (ನದಿಯ ಮೇಲೆ) ಬಿದ್ದ ಸೇತುವೆ ಅದಕ್ಕೂ ನಮಗೂ ನಡುವೆ ಬಿದ್ದಂತೆ ತೋರುತ್ತಿದೆ."[1] ಎಂಬುದಾಗಿ. ಇಲ್ಲಿ ನದಿಗೂ ಪ್ರಬಂಧಕಾರರಿಗೂ ಇರುವ ರಕ್ತ ಸಂಬಂಧ ಎಷ್ಟು ಗಾಢವಾದುದು ಎಂಬುವನ್ನೂ ಊಹಿಸಬಹುದು.

'ಬೆಟ್ಟದ ಮನೆಯಲ್ಲಿ' ಎಂಬ ಪ್ರಬಂಧದಲ್ಲಿ ಅವರು ನಿರ್ಜನವಾದ ಬೆಟ್ಟದ ಮನೆಯಲ್ಲಿದ್ದುಕೊಂಡು ಬಿದಿರು ಕಡಿಸಬೇಕಾಗಿ ಬಂದ ಸಮಯದ ಸಾಹಸ ಜೀವನದ ವರ್ಣನೆಯನ್ನು ಕಲ್ಪನಾತ್ಮಕವಾಗಿ ಹೇಳಿದ್ದಾರೆ. 'ಜಪ, ತಪ, ಅನುಷ್ಠಾನ'ಗಳು ದೇವರಿಗಾಗಿ ಅಲ್ಲ, ದೊರೆಯದೆ ಇರುವ ನಿತ್ಯ ಬಳಕೆಯ ವಸ್ತುಗಳಿಗಾಗಿ ಎಂಬುದನ್ನು ಅದೇ ಹೆಸರಿನ ಪ್ರಬಂಧದಲ್ಲಿ ತೋರಿಸಿಕೊಟ್ಟಿದ್ದಾರೆ. ಈ ಪ್ರಬಂಧ ಧ್ವನಿಪೂರ್ಣವಾಗಿದ್ದು ವ್ಯಂಗ್ಯೋಕ್ತಿಗಳಿಂದ ಕೂಡಿದೆ. 'ವಸ್ತುಕ್ಷಾಮ' ಕೂಡ ಕಂಟ್ರೋಲ್ ಕಾಲದ

1 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೪೮

ಸ್ಥಿತಿಗತಿಗಳನ್ನು, ಬಟ್ಟೆಗೆ ಇದ್ದ ಅಭಾವವನ್ನೂ, ಮುತ್ತಣ್ಣ ಮೈಸೂರಿನ ಹಜಾಮನ ಶಾಪಿನಿಂದ ಕ್ಷೌರ ಮಾಡುವಾಗ ಹೊದಿಸಿದ ಬಟ್ಟೆಯನ್ನೇ ಹೊತ್ತು ತಂದ ರೀತಿಯನ್ನೂ ವಿನೋದಮಯವಾಗಿ ಚಿತ್ರಿಸಿದ್ದಾರೆ. 'ಕನ್ನಡ ಮೌಲ್ವಿ' ಎಂಬ ಪ್ರಬಂಧ ಗರಿ ಹಗುರವಾದ ರೀತಿಯಲ್ಲಿ ತುಂಬ ಹಿತಮಿತವಾಗಿ ಮೂಡಿ ಬಂದಿದೆ. ಗುಣ ಜಾತಿಯಲ್ಲಿಲ್ಲ, ನೀತಿಯಲ್ಲಿ – ರೀತಿಯಲ್ಲಿ ಎಂಬುದನ್ನಿಲ್ಲಿ ತಿಳಿಯಬಹುದಾಗಿದೆ. ಸಾಬಿಗಿರುವ 'ಕುಮಾರ ವ್ಯಾಸ ಭಾರತ'ದ ಪ್ರೇಮ ನಮಗೆ ಅವನಲ್ಲಿ ಗೌರವವನ್ನು ಮೂಡಿಸುತ್ತದೆ. ಇಲ್ಲಿ ಬರುವ ಸಾಹೇಬ 'ಮಹಾಭಾರತ', 'ರಾಮಾಯಣ', 'ಭಗವದ್ಗೀತೆ', 'ಖುರಾನ್' ಎಲ್ಲವನ್ನೂ ಬಲ್ಲವನು. ಅವನ ಪ್ರಕಾರ ಎಲ್ಲ ಧರ್ಮಗಳು ಹೇಳುವುದು ಒಂದೆ: "ಮನುಷ್ಯ ಒಳ್ಳೆಯವನಾಗಿರಬೇಕು"[1] ಎಂದು. ಲೇಖಕರಿಗಿರುವ ಭಾವೈಕ್ಯ ಮನೋಭಾವ ಅವರ ಬರೆಹಗಳಲ್ಲಿ ಅವಕಾಶ ದೊರೆತಾಗಲೆಲ್ಲ ಪ್ರಕಟಗೊಂಡಿದೆ.

'ಬೆಸ್ತರ ಕರಿಯ' ಪ್ರಬಂಧವನ್ನು ನಾವು ವಿಶೇಷವಾಗಿಯೇ ಗಮನಿಸಬೇಕಾಗಿದೆ. ಅದೊಂದು ಸೊಗಸಾದ ವ್ಯಕ್ತಿಚಿತ್ರ ಮತ್ತು ಅನುಭವ ಸಂಶೋಧನೆ. ಅವರ ಪ್ರಬಂಧಗಳಲ್ಲೆಲ್ಲ ಇದು ಭಿನ್ನವಾಗಿ ವಿಶಿಷ್ಟ ಸ್ವರೂಪದ್ದಾಗಿದೆ. ಮೀನು ಹಿಡಿದು ಬದುಕುವ ಕರಿಯನ ಜೀವನದಲ್ಲೂ ಯೋಗಿತ್ವವನ್ನು ಕಂಡ ಗೊರೂರರು ನಿಜಕ್ಕೂ ದೊಡ್ಡ ದಾರ್ಶನಿಕರು. ಯೋಗಿತ್ವಕ್ಕೆ ವ್ರತ, ಧ್ಯಾನ, ತ್ಯಾಗ, ತಪಸ್ಸು, ಬ್ರಹ್ಮಚರ್ಯ, ಅರಣ್ಯ, ದೈವಭಕ್ತಿ ಮೊದಲಾದ ಸಾಧನಗಳ ಅವಶ್ಯಕತೆಯ ತಪ್ಪು ಕಲ್ಪನೆಯನ್ನು ಹೊಂದಿದ್ದ ಜನಕ್ಕೆ ಕರಿಯನ ಪಾತ್ರದ ಮೂಲಕವಾಗಿ ಇವುಗಳಿಲ್ಲದ ಬೇರೊಂದು ಜಗತ್ತಿನ ಅರಿವು ಮಾಡಿಕೊಡುತ್ತಾರೆ. ತೀರ ಸಾಮಾನ್ಯ ವ್ಯಕ್ತಿಯೂ ಕೂಡ ತನ್ನ ನಿಷ್ಕಾಮ ಕರ್ಮದಿಂದ ಎತ್ತರಕ್ಕೇರಬಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇಲ್ಲಿ ಕರಿಯನಿಗೆ ತಾನು ಎತ್ತರಕ್ಕೇರಬೇಕೆಂಬ ಪೂರ್ವ ದೃಷ್ಟಿಯೂ ಇಲ್ಲ ಅಥವಾ ತಾನು ಎತ್ತರಕ್ಕೇರಿದ್ದೇನೆಂಬ ಅರಿವೂ ಇಲ್ಲ. ವಾಸ್ತವವಾಗಿ ಇಂತಹ ಯಾವುದೇ ಅರಿವಿಲ್ಲದ ಅವನ ಬದುಕು ಅವನ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗಿದೆ. ಪ್ರಬಂಧಕಾರರು ಮೊದಲಿಗೆ ಕರಿಯನ ಭೌತಿಕ ಚಿತ್ರವನ್ನು ಕೊಡುತ್ತಾರೆ. ಅವನ ಮೈಬಣ್ಣ ಕಪ್ಪು. ಅದು ಐನ್‌ಟಾರಿನಂತೆ. ಪ್ರಬಂಧಕಾರರ ದೃಷ್ಟಿಯಲ್ಲಿ ಕರಿಯನ ಕಪ್ಪು "ಆ ಭಗವಂತನ ಪರಿಪೂರ್ಣ ದೋಷರಹಿತ ಕಲೆ?"[2] "ಅವನಿಗೆ ಮುಪ್ಪೂ ಇಲ್ಲ ಬಾಲ್ಯವೂ ಇಲ್ಲ. ಅವನಿಗಿರುವುದು ಯೌವನ ಒಂದೇ. ನಾನು ನೋಡಿದ ನಲವತ್ತು ವರುಷದಿಂದಲೂ ಅವನು ಒಂದೇ ಸಮನಾಗಿದ್ದಾನೆ. ಒಂದೊಂದು ಸಲ ಎಂಭತ್ತು ವರುಷದ ಮುಪ್ಪಿನ ನಮ್ಮ ತಂದೆಯವರು ಸಹ ತಾವು ನೋಡಿದಂದಿನಿಂದ ಕರಿಯ ಹೀಗೆಯೇ ಇದ್ದಾನೆ ಎಂದು ಹೇಳಿದುದುಂಟು."[3] ಎಂದಿದ್ದಾರೆ. ಇಲ್ಲಿ ಕರಿಯನ ಶಾರೀರಿಕ ಆರೋಗ್ಯ ಮತ್ತು ಅದಕ್ಕೆ ಹಿನ್ನೆಲೆಯಾದ ಮಾನಸಿಕ

[1] 'ಕಥೆಗಳು ಮತ್ತು ವಿನೋದ ಚಿತ್ರಗಳು', ಪುಟ ೪೦೬

[2] 'ಬೆಸ್ತರ ಕರಿಯ', ಪುಟ ೫

[3] ಅದೇ

ಸುಸ್ಥಿರತೆ ವ್ಯಕ್ತವಾಗುತ್ತದೆ. ಆ ಮಾನಸಿಕ ಸುಸ್ಥಿರತೆಗೆ ಪ್ರಬಂಧಕಾರರು ಇನ್ನೊಂದು ಆಧಾರವನ್ನು ಒದಗಿಸುತ್ತಾರೆ. ಅವನಿಗೆ ಮೂವರು ಹೆಂಡಿರಲ್ಲಿ ಒಟ್ಟು ಹದಿನಾಲ್ಕು ಮಕ್ಕಳಾಗಿರುತ್ತಾರೆ. ಮೊದಲನೆಯ ಹೆಂಡತಿ ಸತ್ತಾಗ ಅವನು ಧೃತಿಗೆಡಲಿಲ್ಲ. ಎರಡನೆಯ ಹೆಂಡತಿ ಸತ್ತಾಗಲೂ ಅವನ ಸ್ಥಿತಿ ಬದಲಾಯಿಸಲಿಲ್ಲ. ಮೂರನೆಯ ಹೆಂಡತಿಯೂ ಮನೆಗೆ ಬಂದಳು. ಆಗ ಕರಿಯ ವಯಸ್ಸಿನಲ್ಲಿ ಮಾತ್ರ ವೃದ್ಧ. ಆದರೆ "ರೋಗಗಳನ್ನೂ ಮುಪ್ಪನ್ನೂ ಜೀರ್ಣಿಸಿಕೊಂಡಂತೆ ಕರಿಯ ಹೆಂಡತಿಯರನ್ನೂ ಜೀರ್ಣಿಸಿಕೊಳ್ಳುತ್ತಾನೆ." ಎಂಬುದು ತುಂಬ ಅರ್ಥಪೂರ್ಣವಾದ ವಾಕ್ಯ. ಇಲ್ಲಿ ಅವನ ದೈಹಿಕ ಶಕ್ತಿ ಮತ್ತು ಸಾವಿನ ಬಗ್ಗೆ ಅವನಿಗಿದ್ದ ನಿರ್ಲಕ್ಷ್ಯ ಗಮನಿಸಬೇಕಾದುದು. ಕರಿಯ ಕಷ್ಟ ಸುಖಗಳೆರಡನ್ನೂ ಒಂದೇ ಸಮನಾಗಿ ಸ್ವೀಕರಿಸಿದವನು. ಕಷ್ಟದಲ್ಲಿ ತಗ್ಗಲಿಲ್ಲ, ಸುಖದಲ್ಲಿ ಹಿಗ್ಗಲಿಲ್ಲ. ಯಾವುದನ್ನೂ ಹಚ್ಚಿಕೊಳ್ಳಲಿಲ್ಲ. ಎಂಥದೇ ಸಮಯದಲ್ಲೂ ತನ್ನ ಕಾಯಕದಿಂದ ವಿಮುಖನಾಗಲಿಲ್ಲ. ಬಂದದ್ದನ್ನು ಬಂದಂತೆ ಎದುರಿಸಿದ ಧೀರ. ಅವನಿಗೆ ಭಯವೆಂಬುದೇ ಇಲ್ಲ. ಆತ ಉದಾರಿ ಮತ್ತು ವಿನೋದಿ. ಮಕ್ಕಳ ಆನಂದಕ್ಕಾಗಿ ಹಿಡಿದ ಮೀನುಗಳನ್ನು ಹೊಳೆಗೆ ಬಿಡುವುದು ಮತ್ತು ಅವರಿಗೆ ಕಟ್ಟುಕತೆಗಳನ್ನು ಹೇಳಿ ನಲಿಸುವುದರಲ್ಲಿ ನಾವಿದನ್ನು ಕಾಣಬಹುದು. ಯಾವುದಕ್ಕೂ ಅಂಟಿಕೊಳ್ಳದ ಇವನ ಬಾಳು "ತಾವರೆಯ ಎಲೆಯ ಮೇಲಿನ ನೀರು."[1] ಎಂದಿದ್ದಾರೆ ಪ್ರಬಂಧಕಾರರು. "ಎಲ್ಲಾ ನೀರನ್ನೂ ತನ್ನಲ್ಲಿ ಒಳಗೊಂಡ ಸಮುದ್ರ ಹೇಗೆ ಶಾಂತವಾಗಿರುತ್ತಿದೋ ಹಾಗೆ ಕರಿಯ ಲೋಕದ ಹೊಡೆತ ಒದೆತಗಳನ್ನು ಸಹಿಸಿಕೊಂಡು ಅದಕ್ಕಾಗಿ ಯಾರ ಮೇಲೆಯೂ ಅಸಮಾಧಾನ ಅಸೂಯೆಪಡದೆ ಶಾಂತನಾಗಿರುತ್ತಾನೆ."[2] ಇಂತಹ ಒಬ್ಬ ಸ್ಥಿತಪ್ರಜ್ಞನ ಅಪೂರ್ವವಾದ ಜೀವನವನ್ನು ಚಿತ್ರಿಸಿ ಪ್ರಬಂಧ ಸಾಹಿತ್ಯದ ಬೆಲೆಯನ್ನು ಹೆಚ್ಚಿಸಿದ್ದಾರೆ ಗೊರೂರರು. ಬೆಸ್ತರ ಕರಿಯನಂತಹ ಅನಾಮಧೇಯ ನಿಷ್ಕಾಮಕರ್ಮಿಗಳು ಜಗತ್ತಿನಲ್ಲಿ ಬೇಕಾದಷ್ಟು ಜನರಿದ್ದಾರೆ. ಇಂಥ ಸಾಹಸಿಗಳ ಬದುಕನ್ನು ಹುಡುಕಿ ಕಡೆದಿಡುವುದು ಅತ್ಯುಪಯುಕ್ತವಾದ ಮತ್ತು ಅತ್ಯುತ್ತಮವಾದ ಸಂಶೋಧನೆಯೆಂದೇ ನನ್ನ ಭಾವನೆ.

ವಿನೋದ ಚಿತ್ರಗಳು ಮತ್ತು ಸಾಹಸಮಯ ಜೀವನದ ವರ್ಣನೆಗಳು ಗೊರೂರರ ಪ್ರಬಂಧಗಳಲ್ಲಿ ಹೇರಳವಾಗಿವೆ. 'ಹೇಮಾವತಿಯ ತೀರದಲ್ಲಿ' ಕಾಗೆದೇಶಿಕ, ಹೊಟ್ಟೆ ಸಂಪತ್ತಯ್ಯ, ಶೀನಪ್ಪ, ಬಬ್ರು, ಕಂಕರ ರಾಮಯ್ಯ—ಇವರುಗಳು ಮುತ್ತುಗದ ಎಲೆಯನ್ನು ತಂದ ರೀತಿಯನ್ನಾಗಲಿ, ಅವರು ಪರಸ್ಪರ ಪಾರ ಕಲಿಸಿ ಸೇಡು ತೀರಿಸಿಕೊಂಡದ್ದನ್ನಾಗಲಿ ಯಾರೂ ಮರೆಯುವಂತಿಲ್ಲ. ಅವು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತವೆ. ಘಟನೆಗಳಿಗಿಂತ ಮೊದಲು ಅವರ ಹೆಸರುಗಳೇ ವಿನೋದವನ್ನುಂಟುಮಾಡುತ್ತವೆ. ಸಮೀರಾಯಗಳು ಮತ್ತು ಬುಡ್ಡದಾಸಯ್ಯಗಳು ಕಾಣಿಕೆ ಎತ್ತುವ ಸ್ವಾರಸ್ಯಮಯ ವಿಧಾನ, ಅವರುಗಳಿಗೆ ನಡುಬೀದಿಯಲ್ಲಿ ವಾಗ್ವಾದ ನಡೆದು ಜೊಂಬು

1 ಅದೇ, ಪುಟ ೧೨

2 ಅದೇ, ಪುಟ ೧೪

ತುತ್ತೂರಿ ಇವುಗಳಿಂದಲೇ ಒಬ್ಬರಿಗೊಬ್ಬರು ಉತ್ತರ ಪ್ರತ್ಯುತ್ತರ ಕೊಟ್ಟ ರೀತಿ; ಜವಾನ ಗುಂಡು ಹಾರಿಸಿದ ವೈಖರಿ; ಮಟ್ಟಿ ಕಲ್ಲು ಮಡುವಿಗೆ ಎಣ್ಣೆ, ಬೆಂಕಿಕಡ್ಡಿ, ಬತ್ತಿ ಮೂರನ್ನೂ ತಲೆಯ ಮೇಲೆ ಇಟ್ಟುಕೊಂಡು ಹುಣ್ಣಿಮೆಯ ರಾತ್ರಿಯಲ್ಲಿ ಈಜಿಕೊಂಡು ಹೋಗಿ ದೀಪವನ್ನು ಹಚ್ಚಿ ಬರುವ ಸಾಹಸ; ಮೊಡ್ಡನ ಕಲ್ಲಿನಲ್ಲಿ ಬೆಸ್ತರು ಮುಳುಗಿ ಅರ್ಧ ಆಳು ತೂಕದ ಮೀನುಗಳನ್ನು ಬರಿಯ ಕೈಲಿ ತಬ್ಬಿಕೊಂಡು ಮೇಲೇಳುವ ರೋಮಾಂಚಕಾರಿ ಮತ್ಸ್ಯ ಬೇಟೆ; ಒಕ್ಕಲಿಗರ ಹೆಂಗಸರು ಬ್ರಾಹ್ಮಣರ ಕಡವಿಗೆ ಬಂದದ್ದರ ಪರಿಣಾಮವಾಗಿ ಒಕ್ಕಲಿಗರ ಹೆಂಗಸರಿಗೂ ಬ್ರಾಹ್ಮಣರ ಹೆಂಗಸರಿಗೂ ಕೈಕೈ ಹತ್ತಿ ಮರವಿ ಬಿಂದಿಗೆಗಳಿಂದಲೇ ಕಾಳಗ ನಡೆದದ್ದು; 'ಪೆನ್ಶನ್ ದಫ್ತರ್ ಬರೆಯುವ ಅನುಭವಗಳು'; 'ದೇವರುಗಳ ಜೂಜಿನಲ್ಲಿ' ಅರ್ಚಕರಿಗೆ ಜೋಯಿಸ ಶಾಸ್ತ್ರ ಹೇಳಿದ ಬಗೆ; 'ಅಮೃತ ವಾಕ್ಯ'ದಲ್ಲಿ ಅರಸರ ಕೆನ್ನೆಗೆ ಹಾವು ನಾಲಿಗೆಯಿಂದ ಮುತ್ತು ಕೊಟ್ಟದ್ದು, ಮತ್ತು ಕಚ್ಚಿದ್ದು; 'ಹಾರುವಯ್ಯ ಹಜಾಮನಾದದ್ದು'; 'ಮಲ್ಲಿಗೆಹಕ್ಕಿ ಬಯಲಾಟ'ದಲ್ಲಿ ಶ್ರೀಕಂಠಾಚಾರ್ಯರ ಆಂಜನೇಯನ ಪಾತ್ರ, ಅದರಲ್ಲೂ ಅವರು ಶ್ರೀರಾಮನನ್ನು "ನಿರುಪಮ, ನಿರಾನಂದ, ನಿರವದ್ಯ, ನಿರ್ದೋಷ, ನಿರ್ಗುಣ, ನಿರಾಧಾರ, ನಿತ್ಯತೃಪ್ತ, ನಿರಾಕಾರ, ನಿರ್ಮಲ, ನಿರ್ಗುಣ, ನಿರ್ದಯ, ನಿರ್ಲಜ್ಜ"[1] ಎಂದು ಬಾಯಿಗೆ ಬಂದಂತೆ ಅರ್ಥದ ಅರಿವಿಲ್ಲದೆ ನಕಾರ ಪ್ರಯೋಗ ಮಾಡಿದ್ದು; ರಾಮರಸದ (ಅಫೀಮಿನ) ಮಹಿಮೆ; ಗರುಡಗಂಬದ ದಾಸಯ್ಯನಿಗಾದ ಪೇಚಾಟ; ಫ್ಲೂಟ್ ಬಾಯಿಯ ಹಣೆಯ ಬರಹದಲ್ಲಿ ಖಾದಿ ಬಟ್ಟೆಗಳನ್ನು ಮಾರುವಾಗ ಸುಳ್ಳುವಾದದಿಂದಾದ ಅಪವಾದ—ಹೀಗೆ ನೂರಾರು ಅನುಭವಗಳು, ರಸಮಯ ಘಟನೆಗಳು, ಚಿತ್ರಗಳು ಅವರ ಪ್ರಬಂಧಗಳ ಜೀವಂತಿಕೆಗೆ ಕಾರಣವಾಗಿವೆ. ಗೊರೂರರ ಬರೆಹಗಳ ಒಂದು ವಿಶಿಷ್ಟವಾದ ಜಾಯಮಾನವನ್ನು, ಸ್ವೋಪಜ್ಞತೆಯನ್ನು ಇವು ತೋರಿಸಿ ಕೊಡುತ್ತವೆ. ಇವುಗಳ ಸೊಬಗನ್ನು ಓದಿ ಆನಂದಿಸಬೇಕೆ ಹೊರತು ವ್ಯಾಖ್ಯಾನದಿಂದ ಆಸ್ವಾದಿಸಲು ಸಾಧ್ಯವಿಲ್ಲ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಗೊರೂರರು ತಮ್ಮ ಪ್ರಬಂಧಗಳಲ್ಲಿ ಹಳ್ಳಿಗರ ಬಗ್ಗೆ ತೋರಿರುವ ಪ್ರೀತಿ, ಅನುಕಂಪ, ಸಹಾನುಭೂತಿ, ವಿಶ್ವಾಸ ಮುಂತಾದ ಗುಣಗಳು. ಇದಕ್ಕೆ ಕಾರಣ ಅವರ ಗ್ರಾಮಜೀವನದ ಬಗ್ಗೆ ಇವರಿಗಿರುವ ಗೌರವ. "ನಮ್ಮ ದೇಶದ ರೈತ ನಮ್ಮ ದೇಶದ ಬೆನ್ನುಮೂಳೆ. ಅವನೇ ನಮ್ಮ ಜನತೆಯ ಜೀವಾಳ. ಅವನಲ್ಲಿ ಅಡಗಿರುವ ಸಂಸ್ಕೃತಿಯೇ ನಮ್ಮ ಪ್ರಾಣವಾಯು"[2] ಎಂಬುದು ಅವರ ನಿಲುವು. ಆದರೆ ಗೊರೂರರು ತಮ್ಮ ಪ್ರಬಂಧಗಳಲ್ಲಿ ಗ್ರಾಮಜೀವನದ ತಿಳಿಯಾದ ಸ್ವಚ್ಛ ಶುಭ್ರ ಜೀವನವನ್ನು ಮಾತ್ರ ಪರಿಚಯಿಸಿದ್ದಾರೆಯೆ ಹೊರತು ಆ ಜನರ ಬದುಕಿನ ಸಂಕೀರ್ಣಾವಸ್ಥೆಯ ಕೆಸರನ್ನಾಗಲಿ, ಘಾಟನ್ನಾಗಲಿ ಇವರಿಗೆ ಚಿತ್ರಿಸಲು ಸಾಧ್ಯವಾಗಿಲ್ಲ ಎನಿಸುತ್ತದೆ. ಹಳ್ಳಿಯ ಬಾಳಿನ ಒಂದು ವಿಶಿಷ್ಟವಾದ ರೂಪ, ನೆಲದ

1 'ಗರುಡಗಂಬದ ದಾಸಯ್ಯ', ಪುಟ ೩೮

2 'ಹಳ್ಳಿಯ ಬಾಳು', ಮೊದಲ ಮಾತು, ಪುಟ ೧

ಕಮ್ಯೂನಿಸ್ಟನ ವಾಸನೆ, ಇವರ ಪ್ರಬಂಧಗಳಲ್ಲಿ ಮೂಗಿಗೆ ಬಡಿಯುವುದಿಲ್ಲ. ಇದು ಅನಿವಾರ್ಯವೂ ಹೌದು. ಏಕೆಂದರೆ ಇವರು ಹುಟ್ಟಿ ಬೆಳೆದದ್ದು ಬ್ರಾಹ್ಮಣ ಸಮಾಜದಲ್ಲಿ. ಆದ್ದರಿಂದ ಇವರು ಆ ಸಮಾಜದಲ್ಲಿದ್ದು ಅದರ ಒಳ ಹೊರಗನ್ನು, ಅದರ ಮೇಲೇರಿ ಇತರ ಸಮಾಜಗಳನ್ನು ನೋಡಲು ಸಾಧ್ಯವಾಗಿದೆಯೇ ಹೊರತು, ಇತರ ಸಮಾಜದವರ ಬದುಕಿನಲ್ಲಿ ಮುಳುಗಿ ಅವರಲ್ಲಿ ತಾವೂ ಒಬ್ಬರಾಗಿ ನೋಡಲು ಸಾಧ್ಯವಾಗಿಲ್ಲ. ಇದನ್ನು ನಾವು ನಿರೀಕ್ಷಿಸುವಂತೆಯೂ ಇಲ್ಲ. ಬೆಸ್ತರ ಕರಿಯನ ಕಾಯಕ ಶ್ರದ್ಧೆಯನ್ನು, ಯೋಗಿತ್ವವನ್ನು ಕಂಡು ಗುರುತಿಸಿದ ಈ ಸಾಹಿತಿ ಅವನನ್ನು 'ಬೆಸ್ತ'ನನ್ನಾಗಿ ಕಾಣುವಲ್ಲಿ, ಅವನ ಬದುಕಿನ ಹಸಿತನವನ್ನು ಕಡೆದಿಡುವಲ್ಲಿ ವಿಫಲರಾಗಿದ್ದಾರೆ. ಕರಿಯನ ಮೀನು ಹಿಡಿಯುವ ಕಾರ್ಯದಲ್ಲಿ ಯಾಂತ್ರಿಕತೆ, ಮಾಂತ್ರಿಕತೆ, ಒಪ್ಪ ಓರಣಕ್ಕೆ ಗಮನ ಕೊಟ್ಟಂತೆ ಭಾಸವಾಗುತ್ತದೆಯೇ ಹೊರತು ಅವನನ್ನು ಬಗ್ಗಡಕ್ಕಿಳಿಸಿರುವುದು ಕಂಡುಬರುವುದಿಲ್ಲ. ಅವನು ಮೀನುಗಳನ್ನೂ ಸಹ ಶುಭ್ರವಾಗಿ, ಅಚ್ಚುಕಟ್ಟಾಗಿ, ಹಿಡಿದಂತೆ ಅನಿಸುತ್ತದೆಯೇ ಹೊರತು ಅವನ ಮೈಕೈಗೆ ಕೆಸರಾದ ಅನುಭವವಾಗಲಿ, ಮೀನಿನ ಗಬ್ಬು ನಾತವಾಗಲಿ ವಾಚಕರಿಗೆ ಗೋಚರವಾಗುವುದಿಲ್ಲ. ಗ್ರಾಮೀಣ ಜನಜೀವನದ ಅಂತರ್ಯದ ಹೊಲಸನ್ನಾಗಲಿ, ಬಾಹ್ಯದ ಗಲೀಜನ್ನಾಗಲಿ ಇವರು ಗಮನಿಸುವುದಿಲ್ಲ. ಏನೇ ಆದರೂ ಒಬ್ಬ ಸಾಹಿತಿ ನಾನಾ ಜನಾಂಗದವರ ನಾನಾ ಕಸುಬಿನವರ ಬದುಕನ್ನು ಸಾಮಿಪ್ಯದಿಂದ ಕಂಡು ಸರಸವಾಗಿ, ಪ್ರಾಮಾಣಿಕವಾಗಿ ಚಿತ್ರಿಸಿರುವುದು ಅಪೂರ್ವವಾದ ವಿಷಯ. ಇದು ಕಡಮೆಯ ಸಾಹಸವೆಂದು ಯಾರೂ ಭಾವಿಸುವಂತಿಲ್ಲ.

ಗೊರೂರರ ಪ್ರಬಂಧಗಳ ಯಶಸ್ಸಿಗೆ ಅವರ ಅನನುಕರಣೀಯವಾದ ಶೈಲಿ ಮತ್ತು ನವುರಾದ ಹಾಸ್ಯ ಬಹಳ ಮಟ್ಟಿಗೆ ಕಾರಣ. ವಾಸ್ತವವಾಗಿ ಅವರು ಕನ್ನಡ ಸಾಹಿತ್ಯದ ಅತ್ಯುತ್ತಮ ಗದ್ಯಕಾರರಲ್ಲಿ ಒಬ್ಬರು. ಸರಳವಾಗಿ, ತೀರ ಸಹಜವಾಗಿ, ನಿರಲಂಕಾರವಾಗಿ ಬರೆದುಕೊಂಡು ಹೋಗುವುದು ಅವರ ಜಾಯಮಾನ. ಅವರ ಇಂತಹ ಸ್ವಾಭಾವಿಕವಾದ ಬರವಣಿಗೆಯಲ್ಲಿಯೇ ಒಂದು ಆಕರ್ಷಣೆಯಿದೆ, ಬನಿಯಿದೆ, ಸೊಬಗಿದೆ: ಮಾರ್ಮಿಕವಾಗಿ ಹೇಳುವ ಜಾಣ್ಮೆಯಿದೆ. ಆತ್ಮೀಯತೆಯ ಗುಣ ಮತ್ತು ಚಿತ್ರ ಕಟ್ಟುವ ಕಲೆ ಅವರಿಗೆ ಸಿದ್ಧಿಸಿದೆ. ಹೀಗಾಗಿ ಅವರ ಪ್ರಬಂಧಗಳು ಓದಿಸಿಕೊಂಡು ಹೋಗುತ್ತವೆ. "Style is that by which one personality moves another" ಎನ್ನುವಂಥದು ಅವರ ಶೈಲಿ. ಎಂಥದೇ ಒಳ್ಳೆಯ ವಸ್ತುವಿದ್ದರೂ, ವಿಷಯ ಸಂಗ್ರಹವಿದ್ದರೂ ಕೆಲವರು ಅಭಿವ್ಯಕ್ತಿಯ ಸಾಮರ್ಥ್ಯವಿಲ್ಲದೆ ಸೋತುಬಿಡುತ್ತಾರೆ. ಆದರೆ ಗೊರೂರರು ತೀರ ಸಾಮಾನ್ಯ ವಿಷಯಗಳಿಗೂ ಸಾಮರ್ಥ್ಯವನ್ನು ತುಂಬಿ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನವನ್ನು ಒದಗಿಸುತ್ತಾರೆ ತಮ್ಮ ಸುಂದರವಾದ ಶೈಲಿಯ ಸಹಾಯದಿಂದ. (ಬಹುಶಃ ಇಂಥ ಕಾರಣಗಳಿಂದಲೆ ಇರಬೇಕು ಮಿಡಲ್ಟನ್ ಮರ್ರಿ, "Style–the highest achievement of literature" ಎಂದುದು) ಗೊರೂರರ ಭಾಷೆ ಜನಭಾಷೆಗೆ ಹತ್ತಿರವಾಗಿದೆ. ಅಲ್ಲಿ ಒಳ್ಳೆಯ ಲಯವಿದೆ. ಆಡುನುಡಿ, ಗಾದೆ ಮತ್ತು

ಉತ್ತಮ ಉಪಮಾನಗಳಿಂದ ಕೂಡಿದೆ. ಒಂದನ್ನು ಹೇಳಿ ಆ ಮೂಲಕ ಮತ್ತೊಂದನ್ನು ಧ್ವನಿಸುವ ಶಕ್ತಿಯಿದೆ. ಲಲಿತವಾದ ನಿರೂಪಣೆ ಮತ್ತು ಸುಸಂಸ್ಕೃತವಾದ ಹಾಸ್ಯ ದಿಂದಾಗಿ ಅವರ ಪ್ರಬಂಧಗಳು ಎಂತಹವರನ್ನೂ ಬಹು ಬೇಗ ಆಕರ್ಷಿಸುತ್ತವೆ. ಇದಕ್ಕೆ ನಿದರ್ಶನವಾಗಿ ಅವರ 'ಜಪ, ತಪ, ಅನುಷ್ಠಾನ' ಎಂಬ ಪ್ರಬಂಧದ ಒಂದು ಭಾಗ ವನ್ನು ನೋಡಬಹುದು : "....ಬಸ್ ನಿಲ್ಲುತ್ತದೆ. ಜನ ಒಂದೇ ಸಟಿಗೆ ನಾಗಾಲೋಟದಲ್ಲಿ ಇಳಿಯುವವರಿಗೆ ಸಹ ಸ್ಥಳ ಕೊಡದೆ ಬಸ್ಸಿನೊಳಕ್ಕೆ ನುಗ್ಗುತ್ತಾರೆ. ನಾನು ಒಂದು ಕಾಲನ್ನು ಬಸ್ಸಿನ ಮೇಲೆ ಇಟ್ಟು ಕೈಯಲ್ಲಿ ಬಸ್ ಕಂಬಿ ಹಿಡಿದುಕೊಂಡು ಒಳಕ್ಕೆ ತೂರಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಒಬ್ಬ ಕೂಣಪ ನನ್ನ ಕೈ ಸಂದಿಯಲ್ಲಿ ತಲೆಹಾಕಿ ಮೈ ಕೊಡವಿದ. ನಾನು ಕೆಳಕ್ಕೆ ಬಿದ್ದೆ. ನಾನು ಸುಧಾರಿಸಿಕೊಂಡು ಏಳುವುದರೊಳಗೆ ಇನ್ನಷ್ಟು ಭರ್ತಿಯಾಗಿ ಹೋಯಿತು. ಕೊನೆಯ ಸಲ ಬಸ್ ಹತ್ತುವಾಗ ಒಬ್ಬ ಸ್ತ್ರೀ ನನ್ನೊಂದಿಗೆ ಸ್ಪರ್ಧಿಸಿದಳು. ಬಸ್ಸಿನಲ್ಲಿದ್ದವರೆಲ್ಲಾ ಹೆಂಗಸರಿಗೆ ದಾರಿ ಬಿಡಿ ಎಂದು ನನ್ನನ್ನು ಗದರಿಸಿದರು. ಆದರೆ ಬಸ್ ಹತ್ತುವುದಕ್ಕೆ ಮುಂಚೆ ಅವರಾರೂ ಹೆಂಗಸರಿ ಗಾಗಿ ದಾರಿ ಬಿಡಲಿಲ್ಲ. ನನ್ನನ್ನು ತಳ್ಳಿ ಒಳಕ್ಕೆ ನುಗ್ಗಿ ನಿಂತಿದ್ದ ಕೂಣಪ "ಹೆಂಗಸರಿಗೆ ಮರ್ಯಾದೆ ತೋರಿಸಿರಿ, ದಾರಿ ಬಿಡಿ" ಎಂದ. ಕೂಣಪನ ಹೆಜ್ಜೆ ಕೆಳಗೆ ತನ್ನ ಹೆಜ್ಜೆ ಸಿಕ್ಕಿಸಿಕೊಂಡು ಈಚೆಗೆ ಬಿಡಿಸಿಕೊಳ್ಳಲಾರದೆ ನರಳುತ್ತಿದ್ದ ಒಬ್ಬ ಗೃಹಸ್ಥರು "ನೀವು ಇಳಿದರೆ ನಾಲ್ಕು ಜನಕ್ಕೆ ಜಾಗವಾಗುತ್ತೆ" ಎಂದರು. ಕೂಣಪ ಕೋಪದಿಂದ "ನೀವು ಇಳಿದರೂ ಒಬ್ಬರಿಗೆ ಜಾಗವಾಗುತ್ತೆ" ಎಂದ. ಈ ಅವಾಂತರದಲ್ಲಿ ಹೆಂಗಸು ಹೇಗೋ ಬಸ್ ಏರಿದಳು. ನಾನು ನಿಂತಲ್ಲಿಯೇ ನಿಂತೆ."[1] ಇಲ್ಲಿ ವರ್ಣನಾಮಯವಾದ ಹಾಸ್ಯ ಚಿತ್ರವೊಂದನ್ನು ಕಾಣುತ್ತೇವೆ. ನಮ್ಮ ನಾಡಿನಲ್ಲಿ ಜನರು ಬಸ್ಸಿಗಾಗಿ ಪಡುವ ಪಾಡು ಆ ಸಮಯದಲ್ಲಿ ಅವರು ವ್ಯಕ್ತಪಡಿಸುವ ಕುಸಂಸ್ಕೃತಿ ಇತ್ಯಾದಿ ವಿಷಯಗಳು ವ್ಯಕ್ತ ವಾಗುತ್ತವೆ. ಸಮಾಜದಲ್ಲಿನ ನೂರಾರು ವಿಚಿತ್ರ ವಿಪರ್ಯಾಸಗಳು ಅವರ ಪ್ರಬಂಧಗಳಲ್ಲಿ ಸಚಿತ್ರವಾಗಿ ತೆರೆದುಕೊಂಡಿವೆ. ಕಾವ್ಯಮಯವಾದ ವರ್ಣನೆಗಳು ಸೊಗಸಾದ ಕಲ್ಪನೆ ಗಳು ಇವರ ಪ್ರಬಂಧಗಳಲ್ಲಿ ಅಲ್ಲಲ್ಲಿ ಮಿಂಚಿ ಮಿನುಗುತ್ತವೆ. 'ಜಾತ್ರೆ' ಪ್ರಬಂಧದ (ಪುಟ ೭೧) ವರ್ಣನಾಭಾಗವನ್ನು ಉದಾಹರಣೆಗಾಗಿ ಗಮನಿಸಬಹುದು. ಬೆಳದಿಂಗಳ ರಾತ್ರಿಯಲ್ಲಿ ಆಲೂರಿನ ರಮಣಿಯರು ಬಿಟ್ಟ ರಂಗವಲ್ಲಿ "ಬೀದಿಗೆಲ್ಲಾ ಮಲ್ಲಿಗೆ ಹೂಗಳನ್ನು ಹಾಸಿದಂತೆ ತೋರುತ್ತದೆ"[2]ಯಂತೆ. ಜಾತ್ರೆಯ ಸಮಯದಲ್ಲಿ ಊರಿನಲ್ಲಿ ಚಲಿಸುತ್ತಿರುವ ತೇರಿನ ಉತ್ಸವವನ್ನು ಚಿತ್ರಿಸುತ್ತ "ಊರಿಗೆ ಊರೇ ಅಲಂಕೃತವಾದ ವಧುವಿನಂತೆ ತೋರುತ್ತಿರುವುದು"[3] ಎಂದು ಹೇಳುತ್ತಾರೆ. ರಾತ್ರಿ ಉತ್ಸವಗಳ ಸಮಯದಲ್ಲಿ ಬಾಗಿಲ ನಲ್ಲಿ ಹೆಣ್ಣುಗಳು ದೀಪದ ತಟ್ಟೆಗಳನ್ನು ಹಿಡಿದುಕೊಂಡು ತಲ್ಲೀನವಾಗಿ ಉತ್ಸವಗಳನ್ನು

1 'ಬೆಸ್ತರ ಕರಿಯ', ಪುಟ ೭೬

2 'ಗರುಡಗಂಬದ ದಾಸಯ್ಯ', ಪುಟ ೫೭

3 ಅದೇ, ಪುಟ ೫೮

ನೋಡುವಾಗ "ಆ ದೀಪಗಳ ಹಿಂದೆ ನಿನಗಿಂತ ನಾನೆ ಹೆಚ್ಚು ಕಾಂತಿ ಎನ್ನುವ ಪ್ರಮದೆಯರ ಮುಖ ಜ್ಯೋತಿ"[1] ಕಾಣಿಸುತ್ತಿದ್ದಂತೆ. 'ಹೇಮಾವತಿಯ ತೀರದಲ್ಲಿ' ಸ್ತ್ರೀಯರು "ತಲೆಯ ಮೇಲೆ ಕುಕ್ಕೆಗಳಲ್ಲಿ ಬೆಳಗಿದ ಪಾತ್ರೆಗಳನ್ನೂ ಒಗೆದ ಸೀರೆಗಳನ್ನೂ ಇಟ್ಟುಕೊಂಡು ಸಿದ್ಧವಾಗಿದ್ದರೂ ತಲೆಯ ಮೇಲಿನ ಭಾರವನ್ನು ಮರೆತು ಈಜುವ ಸಾಹಸಗಳನ್ನು ನೋಡುತ್ತಾ"[2] ನಿಂತುಬಿಡುತ್ತಿದ್ದರಂತೆ.

"ನಮ್ಮ ದೇವಸ್ಥಾನದ ಇಲಿಗಳು ಕ್ರಿಸ್ತರ ದೇವಾಲಯಗಳ ಇಲಿಗಳಷ್ಟು ಬಡಕಲುಗಳಾಗಿಲ್ಲ. ಅವೂ ಅಲ್ಲಿ ಸಮಾರಾಧನೆ ಹುಳಿಯನ್ನಗಳನ್ನು ಹೊಡೆದು ಹೆಗ್ಗಣಗಳಿಗಿಂತ ಬಲವಾಗಿವೆ."[3] ಎನ್ನುವಲ್ಲಿಯ ಶಕ್ತಿಪೂರ್ಣವಾದ ಉಪಮೆ ಮತ್ತು ವಿಡಂಬನೆಯನ್ನು ಗಮನಿಸಬಹುದು. ವಾಸ್ತವವಾಗಿ ಇಲ್ಲಿಯ ವಿಡಂಬನೆ ಕ್ರಿಸ್ತರ ದೇವಾಲಯಗಳ ಇಲಿಗಳನ್ನು ಕುರಿತದ್ದಲ್ಲ, ನಮ್ಮ ದೇವಾಲಯಗಳ ದುಃಸ್ಥಿತಿಯನ್ನು ಕುರಿತದ್ದು.

ಜಾನಪದಕ್ಕೆ ಯಾವುದೇ ಪ್ರೋತ್ಸಾಹ ಇಲ್ಲದ ದಿನಗಳಲ್ಲಿ ಗೊರೂರರು ಉತ್ತಮ ಜನಪದ ಗೀತೆಗಳನ್ನು ತಮ್ಮ ಪ್ರಬಂಧಗಳಲ್ಲಿ ಔಚಿತ್ಯವರಿತು ಬಳಸಿ ಆ ಮೂಲಕ ಅವುಗಳಿಗೆ ಒಂದು ವಿಶೇಷವಾದ ಮನ್ನಣೆಯನ್ನು ತಂದುಕೊಟ್ಟರು. [ಈ ದಿಸೆಯಲ್ಲಿ 'ಹಳ್ಳಿಯ ಬಾಳು' ಗ್ರಂಥ (೧೯೪೬) ತುಂಬ ಗಮನಾರ್ಹವಾದುದು] ಸಮೇರಾಯಗಳ ವರ್ಣನೆಯನ್ನು ಎಷ್ಟೇ ವಿಶದವಾಗಿ ಮಾಡಿದ್ದರೂ ಸಹ ಹರಿಜನರು ತಮಟೆಗಳನ್ನು ಬಡಿಯುತ್ತ

ಮೂಡಮುತ್ತಿನ ಗಿರಿಯೋ ಪಡುವ ಚಿನ್ನದ ಗಿರಿಯೋ
ಸೋಲಿಗರ ಸೀಮೆ ಸಿರಿಹರಿ ವೆಂಕಟ್ರಮಣ
ಸೋಲಿಸು ಬೇಡ ಗೆಲಿಸಯ್ಯ[4]

ಎಂದು ಹೇಳುವ ಗೀತೆಯನ್ನು ಸೇರಿಸದಿದ್ದರೆ ಆ ಜಾನಪದದ ಒಂದು ಸನ್ನಿವೇಶ ಅಷ್ಟಾಗಿ ಕಳೆ ಕಟ್ಟುತ್ತಿರಲಿಲ್ಲವೇನೋ. ಇವರು ಬಳಸಿಕೊಂಡಿರುವ "ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗಾಯಿತು", "ಬಂದರೆ ಮೊಗೆ ಹೋದರೆ ಹೊಗೆ", "ಹುಚ್ಚಿ ಮಳೆಗೆ ಗುಬ್ಬಿ ತಲೆಯೂ ನೆನೆಯುವುದಿಲ್ಲ", "ಹಾರುವರ ಹೊಲಕ್ಕೆ ಹಾರಕ, ದೇವರ ಹೊಲಕ್ಕೆ ಹುಚ್ಚೆಳ್ಳು", "ಹೆಡ್ಡನ ಆರಂಭ ಗೊಬ್ಬರದಲ್ಲಿ" ಇತ್ಯಾದಿ ಗಾದೆಗಳು, "ಯಾಚಿಸುವವನು ಯಾವಾಗಲು ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತಾನೆ", "ಕಲಿಯುಗದ ನಾಗರಿಕತೆಯ ಶಿಖರ ಕಾಫಿ", "ಸಂಶ್ಲೇಷ ವಿಶ್ಲೇಷಗಳು ವಿರಹಿಗಳಿಗೆ ಮಾತ್ರವೇ ಅಲ್ಲ ಎಲ್ಲರಿಗೂ ಉಂಟು", ಮುಂತಾದ ಸೂತ್ರರೂಪದ ನುಡಿಗಟ್ಟುಗಳು ಇವರ ಭಾಷೆಗೆ ಮೆರಗು ಕೊಟ್ಟಿವೆ. ಅಲ್ಲದೆ ಇವರು ಬಳಸಿರುವ 'ಹೊರ್ಜಿ', 'ಹೊದ್ನ', 'ಸಾಗಡ' ಮೊದಲಾದ ಪದಗಳು ಭಾಷಾಶಾಸ್ತ್ರದ ಕಡೆಗೆ ಗಮನ

1 ಅದೇ, ಪುಟ ೫೯.

2 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೮

3 ಅದೇ, ಪುಟ ೨೫.

4 ಅದೇ, ಪುಟ ೧೬.

ಸೆಳೆಯುತ್ತವೆ. ಎಂದೋ ನಡೆದ ಘಟನೆಗಳನ್ನು, ಕಥೆಗಳನ್ನು ಪ್ರಚಲಿತ ವಿಷಯಗಳೊಡನೆ ಬೆರಸಿ ಹೇಳುವ ನೈಪುಣ್ಯ ಇವರಲ್ಲಿದೆ. "ಮನುಷ್ಯನಿಗೆ ಭಯವಿರಬಾರದು: ಅದರಂತಹ ರೋಗ ಬೇರೆ ಯಾವುದೂ ಇಲ್ಲ" ಎಂಬಂತಹ ನೀತಿಯುಕ್ತ ವಾಕ್ಯಗಳು ಅವರ ಪ್ರಬಂಧಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಹೀಗಾಗಿ ಅವರು ತಮ್ಮದೇ ಆದ ಒಂದು ಅತ್ಯುತ್ತಮ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಇದು ಅವರ ಪ್ರಬಂಧಗಳಿಗೆ ಜೀವಕಳೆಯನ್ನಿತ್ತಿದೆ.

ಗೊರೂರರ ಒಂದೊಂದು ಪ್ರಬಂಧವೂ ಒಂದೊಂದು ಕಾದಂಬರಿಯನ್ನು ಓದಿದ ಅನುಭವವನ್ನು ತಂದುಕೊಡುತ್ತದೆ. ಅಲ್ಡಸ್ ಹಕ್ಸ್ಲೆಯ ದೃಷ್ಟಿಯಲ್ಲಿ ಇದು ಪ್ರಬಂಧದ ಒಂದು ಒಳ್ಳೆಯ ಲಕ್ಷಣ. ಕಾದಂಬರಿಯಲ್ಲಿ ಯಾವುದು ನಿಜವೆನಿಸುತ್ತದೆಯೋ, ಅದು ಕಿಂಚಿತ್ ಹೊರತಾಗಿ ಪ್ರಬಂಧದಲ್ಲಿಯೂ ನಿಜವೆನಿಸುತ್ತದೆ ಎಂಬುದು ಈತನ ಅಭಿಪ್ರಾಯ.[1] ಘಟನಾವಳಿ. ಕಥನಾಂಶಗಳ ಜಳಕೆ ಮತ್ತು ಸ್ವಾರಸ್ಯಮಯವಾದ ಸಂಭಾಷಣೆಗಳನ್ನು ಕಾದಂಬರಿಯಲ್ಲಿಯಂತೆ ಪ್ರಬಂಧಗಳಲ್ಲೂ ತಂದಿದ್ದಾರೆ ಗೊರೂರರು.

ಗೊರೂರರ ಪ್ರಬಂಧಗಳು ಹರಟೆಯ ಸ್ಥಾನದಿಂದ ಬಹಳ ಮೇಲೇರಿದರೂ ಸಹ ಅವು ಲಲಿತ ಪ್ರಬಂಧದ ಎಲ್ಲ ಲಕ್ಷಣಗಳನ್ನು ಮೈದುಂಬಿಕೊಳ್ಳಲಿಲ್ಲ. ಹರಟೆ ಮತ್ತು ಪ್ರಬಂಧ ಈ ಎರಡರ ಮಧ್ಯದ ಯಾವುದೋ ಒಂದು ಬಿಂದುವಿನಲ್ಲಿ ಅವು ನೆಲಸಿಬಿಟ್ಟಿವೆ. ಆದರೆ ಹಾಗೆ ಲಲಿತ ಪ್ರಬಂಧದ ಎಲ್ಲ ಲಕ್ಷಣಗಳನ್ನು ಹಿತಮಿತವಾಗಿ ಒಳಗೊಂಡ ಪ್ರಬಂಧಕಾರರಲ್ಲಿ ಕೂಡ ಇವರ ಆತ್ಮೀಯತೆಯ ಗುಣ, ನವುರಾದ ಹಾಸ್ಯ ಮತ್ತು ಚಿತ್ರ ಕಟ್ಟುವ ಕಲೆ ಈ ಮಟ್ಟದಲ್ಲಿ ಬೆರಸಿ ಬಂದಿಲ್ಲ. ಈ ವಿಷಯದಲ್ಲಿ ಗೊರೂರರೇ ಸಾರ್ವಭೌಮರು. ಗೊರೂರರ ಪ್ರಬಂಧವಾಹಿನಿ ತುಂಬ ಅಗಲವಾಗಿದೆ, ಶುಭ್ರವಾಗಿದೆ; ಆದರೆ ಆಳವಾಗಿಲ್ಲ. ವರ್ಣನೆಗೆ ಕೊಟ್ಟಿರುವಷ್ಟು ಗಮನವನ್ನು ಆಲೋಚನೆಗೆ ಕೊಟ್ಟಿಲ್ಲ. ಎಷ್ಟೇ ಉತ್ತಮವಾದ ಭಾವನೆಗಳಿದ್ದರೂ ಕೂಡ ಹೆಚ್ಚಾದ ವಿವರಣೆಯ ಕಾರಣದಿಂದ ತೆಳುವಾಗಿ ಪ್ರಬಂಧದ ಜಾಳುತನಕ್ಕೆ ಅವಕಾಶವಾಗಿಬಿಡುತ್ತದೆ. ಸುಪ್ರಸಿದ್ಧ ಆಂಗ್ಲ ಸಾಹಿತಿ ಡಾ. ಜಾನ್ಸನ್ ಪ್ರಬಂಧದ ಬಗ್ಗೆ ಹೇಳಿದ 'ಮನಸ್ಸಿನ ಸ್ವಚ್ಛಂದ ಲಹರಿ'ಗೆ (A loose sally of mind) ಇವರ ಪ್ರಬಂಧಗಳು ಒಳ್ಳೆಯ ನಿದರ್ಶನಗಳಾಗಬಲ್ಲವೇ ಹೊರತು, ಬೇಕನ್ ಹೇಳಿದ 'ಚದುರಿದ ಚಿಂತನೆ'ಗಳಿಗೆ (dispersed meditations) ಇಲ್ಲಿ ಹೆಚ್ಚು ಅವಕಾಶವಿಲ್ಲ. ಕನ್ನಡ ಪ್ರಬಂಧ ಸಾಹಿತ್ಯದಲ್ಲಿ ಇವರ ಸಮರ್ಥ ಪ್ರತಿನಿಧಿ ಪ್ರತಿನ ಅವರು. ಅವರ 'ಈಚಲು ಮರದ ಕೆಳಗೆ' ಮತ್ತು 'ಧೇನುಕ ಪುರಾಣ' ಎಂಬೆರಡು ಪ್ರಬಂಧ ಸಂಕಲನಗಳಲ್ಲಿ ನಾವು ಅವರ ವ್ಯಾಪಕವಾದ ಚಿಂತನಶಕ್ತಿಯನ್ನೂ ಆಲೋಚನಾ ಪ್ರಚೋದನೆಯ ವಿಧಾನವನ್ನೂ ಕಾಣಬಹುದು. ಗೊರೂರರು ಸೊಗಸಾಗಿ ನಗಿಸಬಲ್ಲರು. ಆದರೆ ಅಂತಃಕರಣ

1 "What is true of the novel is only a little less true of essay. For, like the novel, the essay is a literary device for saying almost everything about anything." Aldous Huxley, *Collected Essays*, Preface, p 5.

ವನ್ನು ಮಿಡಿಯಲಾರರು. ಪುತಿನ ಅವರು ತಮ್ಮ ಬಿಗಿಯಾದ ಶೈಲಿಯಿಂದಾಗಿ ಗೊರೂರರಷ್ಟು ಸುಲಭವಾಗಿ ವಾಚಕರಿಗೆ ಎಟಕುವುದಿಲ್ಲ. ಇದು ಅವರ ಕಾವ್ಯ ನಾಟಕಗಳಲ್ಲೆಂತೊ ಪ್ರಬಂಧಗಳಲ್ಲೂ ಹಾಗೆಯೆ. ಈ ಕಾರಣದಿಂದಾಗಿ ಗೊರೂರರ ಪ್ರಬಂಧಗಳ ವಾಚಕ ಬಳಗ ಪುತಿನ ಅವರ ಪ್ರಬಂಧಗಳ ವಾಚಕ ಬಳಗಕ್ಕಿಂತ ಬಹಳ ಪಾಲು ಹೆಚ್ಚು.

ಗೊರೂರರ "ಬರೆಹದಲ್ಲಿ ಒಂದು ನಯವಾದ ಹಾಸ್ಯವು ಹರಡಿಕೊಂಡಿದೆ. ಅದರಲ್ಲಿ ಹತ್ತು ಮಸಾಲೆ ಕೂಡಿಕೊಂಡಿದೆ. ಇಲ್ಲಿ ಕತೆಯಿದೆ; ಪಾತ್ರ ಸೃಷ್ಟಿಯಿದೆ; ನಗೆಯಿದೆ; ನೋವಿದೆ; ಬಣ್ಣನೆಯಿದೆ; ಬೂಟಾಟವಿದೆ; ಕಟಕಿಯಿದೆ: ಶಲ್ಯ ತಂತ್ರವಿದೆ: ಬೇಕಾದರೆ ತತ್ವವಿದೆ; ಬೇಡವಾದರೆ ಹರಟೆಯಿದೆ."[1] ಒಟ್ಟಿನಲ್ಲಿ, ಅವರ ಪ್ರಬಂಧಗಳು ಅವರ ಅನುಭವ ಶ್ರೀಮಂತಿಕೆ, ಆತ್ಮೀಯತೆಯ ಗುಣ, ತಿಳಿಯಾದ ಹಾಸ್ಯ, ಚಿತ್ರಕಟ್ಟುವ ರೀತಿ, ಜಾನಪದ ಜೀವನದ ವಸ್ತು ವಿಧಾನ, ವಾಸ್ತವಿಕ ಪ್ರಜ್ಞೆ, ನಿರ್ದಾಕ್ಷಿಣ್ಯ ಪ್ರವೃತ್ತಿ ಸುಧಾರಣ ಮನೋಭಾವ, ಜನತೆಯ ಬಗ್ಗೆ ಇರುವ ಮಾನವೀಯ ಪ್ರೀತಿ, ಅನುಕಂಪೆ ಮೊದಲಾದ ಗುಣಗಳಿಂದಾಗಿ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಗಳಾಗಿವೆ. ಅವು ಸುಮಾರು ನಲವತ್ತೈದು ವರ್ಷಗಳಿಂದ ನಿರಂತರವಾಗಿ ಕನ್ನಡ ಜನತೆಗೆ ಪುಷ್ಕಳವಾದ ಆನಂದವನ್ನು ಒದಗಿಸುತ್ತ ಬಂದಿವೆ.

ನಿರೂಪಣೆಯಲ್ಲಿ ಸಾಂದ್ರತೆ ಇಲ್ಲವಾದರೂ ಜಾನಪದ ಜೀವನದ ಹಸಿರೆ ಗೊರೂರರ ಪ್ರಬಂಧಗಳ ಉಸಿರು. ಅವರ ಪ್ರಬಂಧಗಳು ಅವರ ವೈವಿಧ್ಯಮಯ ಅನುಭವಗಳ ರಂಜನೀಯ ಚಿತ್ರಶಾಲೆ; ಅವು ಅವರ ಬದುಕಿನ ಪರಿಸರದ ಸಾಮಾಜಿಕ ಚರಿತ್ರೆಯನ್ನು ಕಡೆದಿಟ್ಟಿರುವ, ಕಡೆದಿಡುತ್ತಿರುವ ಚಿರಂತನ ಶಾಸನಗಳು.

---

1 'ಗರುಡಗಂಬದದಾಸಯ್ಯ', ಮುನ್ನುಡಿ, (ದ. ರಾ. ಬೇಂದ್ರೆ) ಪುಟ ೬

ಪ್ರಬಂಧಗಳು

ಎನ್. ಪ್ರಹ್ಲಾದರಾವ್

೧

ಆಧುನಿಕ ಕನ್ನಡ ಗದ್ಯ ಸಾಹಿತ್ಯ ಶಿಲ್ಪಿಗಳಲ್ಲೊಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಪ್ರಧಾನತಃ ಬಲು ಒಳ್ಳೆಯ ಕಥೆಗಾರರು. ಜೀವನದ ಯಾವುದೇ ಸನ್ನಿವೇಶವನ್ನಾದರೂ ಅವರು ಬಹು ರಸವತ್ತಾಗಿ ನಿರೂಪಿಸುತ್ತಾರೆ. ಕಥಾಪ್ರಸಂಗದ ತುದಿ ಮೊದಲುಗಳನ್ನು ಗುರುತಿಸುವಾಗ, ವಿವರ ವಿವರವಾಗಿ ಅದರ ಎಳೆಗಳನ್ನು ಹಿಂಜಿ ಹರಡುವಾಗ, ವಿವರಣೆಯಲ್ಲಿಯೇ ಅದರ ಅಂತರಾರ್ಥ ಸ್ಫುರಿಸುವಂತೆ ಮಾಡುವಾಗ, ಅದರ ಮರ್ಮಸ್ಥಾನವನ್ನು ಮಿಡಿದು ಉದ್ದೇಶಿತ ಅನುಭವ ಓದುಗರಿಗೆ ಆಗುವಂತೆ ಮಾಡುವಾಗ, ಅವರ ನಿರೂಪಣ ವೈಖರಿಯನ್ನು ಗಮನಿಸಬೇಕು. ಈ ಗುಣ ಅವರ ಕಥೆಗಳಲ್ಲಿ ಹೇಗೋ ಹಾಗೆ ಅವರ ಪ್ರಬಂಧಗಳಲ್ಲೂ ಎದ್ದು ಕಾಣುತ್ತದೆ. ಆ ಕ್ಷೇತ್ರದಲ್ಲೂ ಅವರದು ಕಥೆಗಾರನ ನಡಿಗೆಯೇ. ಅಮೂರ್ತವಾದ ಅಭಿಪ್ರಾಯಗಳ ಮಂಡನೆ, ವಿಶ್ಲೇಷಣೆ—ಇವು ಅವರ ಕ್ರಮವೇ ಅಲ್ಲ. ಎಂಥ ಜಟಿಲ ಸಮಸ್ಯೆಯನ್ನಾದರೂ ಅವರು ಸ್ಪಷ್ಟ, ಮೂರ್ತ ಜೀವನಚಿತ್ರಣಗಳಿಂದ ಸುಲಭವಾಗಿ ಬಿಡಿಸುತ್ತಾರೆ. ಆದ್ದರಿಂದ ಅವರ ಕಥೆಗಳಿಗೂ ಜೀವನಚಿತ್ರಗಳಿಗೂ ಪ್ರಬಂಧಗಳಿಗೂ ಬಹು ವೇಳೆ ವ್ಯತ್ಯಾಸವೇ ಕಾಣದು. ಇದು ಕಥೆಯೇ ಎನ್ನಿಸಿಕೊಳ್ಳುವಂಥ ಕೃತಿಗಳನ್ನು ಬಿಟ್ಟು, ಇದು ಅಭಿಪ್ರಾಯ ಪ್ರಧಾನವಾದ ಗದ್ಯಕೃತಿ, ನುಡಿಚಿತ್ರ ಎನ್ನಿಸಿಕೊಳ್ಳಬಹುದಾದುದನ್ನು ಮಾತ್ರ ಈ ಲೇಖನದಲ್ಲಿ ಪರಿಶೀಲಿಸಲಾಗುತ್ತದೆ.

ಗೊರೂರರ 'ಹಳ್ಳಿಯ ಚಿತ್ರಗಳು' ಪ್ರಕಟವಾದುದು ೧೯೩೦ರಲ್ಲಿ. ಅದರಲ್ಲಿ 'ನಮ್ಮ ಹೋಳಿಯ ಒಂದು ಅನುಭವ', 'ನಮ್ಮ ಊರ ಬಸ್ಸು' ಎಂಬಿವು ಪ್ರಬಂಧಗಳಿಗೆ ಯಾಗಿ ಅವನ್ನು ಇಲ್ಲಿ ಹೆಸರಿಸುತ್ತಿದ್ದೇನೆ. ಅಲ್ಲಿಂದ ಸುಮಾರು ೪೦ ವರ್ಷಗಳ ಅವಧಿಯಲ್ಲಿ ಗೊರೂರರು ವಿಪುಲವಾಗಿ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಅವುಗಳಲ್ಲಿ ಪ್ರಬಂಧ

ಸಾಹಿತ್ಯ ಎನ್ನಿಸಿಕೊಳ್ಳಬಹುದಾದ ಸಂಕಲನಗಳು ಹೀಗಿವೆ : 'ಗರುಡಗಂಬದ ದಾಸಯ್ಯ' (೧೯೩೯), 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು' (೧೯೬೬). 'ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು' (೧೯೭೨), 'ಕಥೆಗಳು ಮತ್ತು ವಿನೋದ ಚಿತ್ರಗಳು' (೧೯೭೨). ಇವುಗಳಲ್ಲಿನ ಕೆಲವು ಬರೆಹಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗೊರೂರರ ಪ್ರಬಂಧಗಳ ವೈಶಿಷ್ಟ್ಯವನ್ನು ಗುರುತಿಸಬಹುದು.

ವೈಶಿಷ್ಟ್ಯವನ್ನು ಗುರುತಿಸುವುದೇ ಉದ್ದೇಶವಾದ್ದರಿಂದ ಪ್ರಬಂಧವೆಂದರೇನು, ಅದರ ಚರಿತ್ರೆ ಹೇಗಿದೆ, ಅದರ ಸಾಮಾನ್ಯ ಗುಣಲಕ್ಷಣಗಳಾವುವು ಎಂಬ ವಿಷಯಗಳು ಇಲ್ಲಿ ಅಪ್ರಕೃತವಾಗುತ್ತವೆ. ಗಂಟೆ ಎಷ್ಟು ಎಂದು ಕೇಳಿದವರಿಗೆ ಗಡಿಯಾರ ಮಾಡುವುದು ಹೇಗೆ ಎಂಬ ವಿವರಗಳನ್ನೆಲ್ಲ ಹೇಳುವುದು ಜಾಣತನವಲ್ಲವಷ್ಟೆ! ಅಲ್ಲದೆ ಗೊರೂರರು ಸಾಹಿತ್ಯ ಅಕಾಡೆಮಿಗಾಗಿ ಸಂಕಲಿಸಿಕೊಟ್ಟಿರುವ (೧೯೬೧) ಹೊಸಗನ್ನಡ ಪ್ರಬಂಧ ಸಂಕಲನದ ಮುನ್ನುಡಿಯಲ್ಲಿ ಈ ಬಗ್ಗೆ ಹೇಳಬೇಕಾದುದನ್ನೆಲ್ಲ ಹೇಳಿದ್ದಾರೆ. ಅಲ್ಲೂ ಟಿಪ್ಪಣಿ ವಿಭಾಗದಲ್ಲೂ ತಾವು ಆಯ್ಕೆಮಾಡಿರುವ ಪ್ರಬಂಧಗಳ ಮತ್ತು ಪ್ರಬಂಧಕಾರರ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದ್ದಾರೆ; ಆದರೆ ವ್ಯಕ್ತಿಸಹಜವಾದ ಸಂಕೋಚದಿಂದ ತಮ್ಮ ಬಗ್ಗೆ ಏನನ್ನೂ ಹೇಳಿಕೊಂಡಿಲ್ಲ. ಅಲ್ಲಿ ಅವರ ಬಗ್ಗೆ ಬಿಟ್ಟು ಹೋಗಿರುವ ವಿವರಗಳಲ್ಲಿ ಕೆಲವನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಸಮಾಧಾನದ ಸಂಗತಿಯೆಂದರೆ ಗೊರೂರರ ಆ ಸಂಕಲನದಲ್ಲಿ ಅವರದೇ ಆದ—'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?'—ಎಂಬ ಒಂದು ಪ್ರಬಂಧವಿದೆ. ತಮ್ಮ ಸಂಕೋಚದ ಅತಿರೇಕದಲ್ಲಿ ಸಂಪಾದಕರು ತಮ್ಮ ಯಾವುದೇ ಪ್ರಬಂಧವನ್ನು ಈ ಸಂಕಲನದಲ್ಲಿ ಸೇರಿಸದೆ ಬಿಟ್ಟಿದ್ದರೆ ಪರಿಪುಷ್ಟವಾಗಿ ಬೆಳೆಯುತ್ತಿರುವ ಕನ್ನಡ ಪ್ರಬಂಧ ಪ್ರಕಾರದ ಒಂದು ಪ್ರಧಾನ ಅಂಗವೇ ಊನವಾದಂತಾಗುತ್ತಿತ್ತು.

ಉತ್ತಮವಾದ ಪ್ರಬಂಧ ರುಚಿಕಟ್ಟಾದ ಸಾರು ಇದ್ದಹಾಗೆ ಇರಬೇಕು ಎಂದು ನಾನು ಆಗಾಗ ಹೇಳುವುದುಂಟು. ಎಲ್ಲರ ಮನೆಯಲ್ಲೂ ಸಾರು ತಯಾರಾಗುತ್ತದೆ. ಎಲ್ಲರೂ ಉಪಯೋಗಿಸುವುದು ಬೇಳೆ, ಸಾರಿನ ಪುಡಿ, ಹುಣಿಸೆಹಣ್ಣು, ಕರಿಬೇವಿನ ಸೊಪ್ಪು ಇತ್ಯಾದಿಗಳನ್ನೇ. ಆದರೆ ಒಬ್ಬರ ಮನೆಯ ಸಾರು ಇದ್ದಂತೆ ಇನ್ನೊಬ್ಬರ ಮನೆಯ ಸಾರು ಇರುವುದಿಲ್ಲ. ಒಬ್ಬೊಬ್ಬರ ಮನೆಯದಕ್ಕೆ ಒಂದೊಂದು ವಿಶೇಷ ರುಚಿ ಇರುತ್ತದೆ. ಒಂದೇ ತರಹದ ಸಾರು ಸಿಕ್ಕುವುದು ಹೋಟಲಿನಲ್ಲಿ ಮಾತ್ರ! ಗೊರೂರರು ಸಂಪಾದಿಸಿರುವ ಹೊಸಗನ್ನಡ ಪ್ರಬಂಧ ಸಂಕಲನದಲ್ಲಿ ಮೂವತ್ತು ಬಗೆಯ ಸಾರುಗಳನ್ನು ನಾವು ನೋಡಬಹುದು. ಅವುಗಳಲ್ಲಿ ಗೊರೂರರ ಸಾರೂ ಇದೆಯಷ್ಟೆ. (ಅವರಿಗೆ ಪಾಕಶಾಲೆಯ ಸಾರು ಮಾಡಲು ಬರುತ್ತದೊ ಇಲ್ಲವೊ ತಿಳಿಯದು. 'ಪಾಕಶಾಲೆಯಲ್ಲಿ' ಎಂಬ ಅವರ ಪ್ರಬಂಧವನ್ನು ಓದಿದ ನಮಗೆ ಅಂಥ ಶಂಕೆ ಬರಲು ಸಾಧ್ಯ.) ಆದರೆ ತಮ್ಮ ಪ್ರಬಂಧಗಳಲ್ಲಿ ಅವರು ಒದಗಿಸಿರುವ ಸಾರಿನ ರಸಪಾಕ ಎಂಥವರನ್ನೂ ಬೆರಗುಗೊಳಿಸುವಂಥದು.

೨

ಗೊರೂರರ ಪ್ರಬಂಧಗಳಲ್ಲಿ ಬಹು ಜನ ರಸಿಕಮಿತ್ರರ ಚಿತ್ತಾಪಹಾರ ಮಾಡಿರುವ ಪ್ರಬಂಧಗಳೆಂದರೆ 'ಹೇಮಾವತಿಯ ತೀರದಲ್ಲಿ'. 'ಬಂದಿಗಮ್ಮನ ಜಾತ್ರೆ,' 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ ?', 'ಸಂಚಾರಿ ಚಲನಚಿತ್ರಗಳು.' 'ಒಂದು ಸಂಜೆ.' 'ಆಚಾರ ಕೆಟ್ಟರೂ ಆಕಾರ ಕೆಡಬಾರದು.' 'ಜಾತ್ರೆ', 'ಚೆಟ್ಟಿದ ಮನೆಯಲ್ಲಿ.' 'ಮಲ್ಲಿಗೆ ಹಳ್ಳಿಯಲ್ಲಿ ಬಯಲಾಟ', 'ಸಫಲ ಜೀವನ', 'ಕನ್ನಡ ಮೌಲ್ವಿ'—ಈ ಮುಂತಾದವು. ತಾವು ಕಂಡು ಉಂಡ ಹಳ್ಳಿಯ ಜೀವನದ ಅನೇಕ ಮುಖಗಳನ್ನು ಚಿತ್ರಿಸುವಲ್ಲಿ ಲೇಖಕರು ಇಲ್ಲಿ ತೋರುವ ಕವಿಮನೋಧರ್ಮ, ಅದಕ್ಕನುಗುಣವಾದ ಅಭಿವ್ಯಕ್ತಿ ತಂತ್ರ, ಉದ್ದಕ್ಕೂ ಕಾಣುವ ಆಡುಮಾತಿನ ಶೈಲಿ, ಇಪ್ಪತ್ತು ಮೂವತ್ತು ಪುಟಗಳಷ್ಟು ಉದ್ದವಾಗಿ ಬೆಳೆದಾಗಲೂ ಪ್ರಬಂಧದ ಐಕ್ಯಕ್ಕೆ ಭಂಗಬಾರದ ರೀತಿಯಲ್ಲಿ ಅದನ್ನು ನಡೆಸಿರುವ ಜಾಣ್ಮೆ—ಇವು ಇಲ್ಲಿನ ವೈಶಿಷ್ಟ್ಯಗಳಾಗಿವೆ.

'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧಕ್ಕೆ ಹೇಮಾವತಿಯೇ ಪ್ರಧಾನ ವಿಷಯ. ಹೇಮಾವತೀ ನದಿಯು ನಮ್ಮ ಜೀವದ ಉಸಿರು, ನಮ್ಮ ನಾಡಿಯ ರಕ್ತ, ನಮ್ಮ ಊರಿನ ಬೀದಿ—ಎಂಬ ಪಲ್ಲವಿಯನ್ನನುಸರಿಸಿ ರಚಿತವಾದ ಈ 'ಹಾಡಿ'ನಲ್ಲಿ ಹತ್ತು ನುಡಿಚಿತ್ರಗಳು ಬಂದಿವೆ.

> ಹೇಮಾವತೀ ನದಿಯು ನಮ್ಮೂರ ಉಸಿರು. ನದಿಯ ದಡದಲ್ಲಿ ನಿಂತುಕೊಂಡು ನೋಡಿದರೆ ನದಿ ನಮ್ಮೂರ ಬಳಿ ಇರುವಷ್ಟು ಸುಂದರವಾಗಿ ಸೊಗಸಾಗಿ ಮತ್ತೆಲ್ಲೂ ಇಲ್ಲವೆಂದು ಯಾರಿಗಾದರೂ ತೋರುವುದು. ನರಸಿಂಹಸ್ವಾಮಿ ದೇವಸ್ಥಾನದ ಮುಂದುಗಡೆಯಿಂದ ಎಡಗಡೆಯೂ ಬಲಗಡೆಯೂ ನೋಡಿದರೆ ನೂರಾರು ತೋಪುಗಳ ಗೊಂಚಲುಗಳು ಕಣ್ಣಿಗೆ ವಿಶ್ರಾಂತಿಯನ್ನು ಕೊಡುವುವು. ನದಿಯ ಎರಡು ದಡಗಳಲ್ಲೂ ಮರದ ಕೊಂಬೆಗಳು ನದಿಯ ಮೇಲೆ ಬಾಗಿದ್ದು ನೀರನ್ನು ಮುತ್ತಿಡುತ್ತಾ ನದಿಯ ರೆಪ್ಪೆಗಳಂತೆ ಕಾಣುವುವು. ನದಿಯಿಂದ ಮೇಲೆ ಪಶ್ಚಿಮಕ್ಕೆ ಒಂದು ಮೈಲಿ ಹೋದರೆ ಈಶ್ವರನನ್ನು ತಪಸ್ಸಿಗೆ ಆಕರ್ಷಿಸುವಷ್ಟು ರಮಣೀಯವೂ ಶಾಂತವೂ ಆದ ಸಂಗಮ ಮತ್ತು ತೋಪು. ಹೇಮಾವತೀ ನದಿಯು ನಮ್ಮ ಪ್ರಾಂತಕ್ಕೇ ಜೀವವನ್ನು ಕೊಡುವ ಜೀವನಾಡಿ. ಅದರ ಸ್ಪರ್ಶದಿಂದ ಪವಿತ್ರವೂ ಚೆನ್ನೂ ಆದ ನಮ್ಮ ನಾಡು ದೇವಲೋಕದ ನಂದನವನಕ್ಕೆ ಎಣೆಯಾದುದು.[1]

ಹೀಗೆ ಪ್ರಾರಂಭವಾಗುವ ಪ್ರಬಂಧ ಒಮ್ಮೆಲೇ ತನ್ನ ಕಾವ್ಯರಮಣೀಯತೆಯಿಂದಲೂ ಕಾಳಿದಾಸೀಯವೆನ್ನಬಹುದಾದ ಸುಲಭಾಭಿವ್ಯಕ್ತಿಯಿಂದಲೂ ಓದುಗರನ್ನು ಸೆರೆಹಿಡಿಯುತ್ತದೆ. ಮುಂದೆ ನದೀಪಾತ್ರವನ್ನು ಬ್ರಾಹ್ಮಣ ಗಂಡಸರು, ಬ್ರಾಹ್ಮಣ ಹೆಂಗಸರು,

1 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧

ಒಕ್ಕಲಿಗರು ತಮ್ಮ ತಮ್ಮ ಕಡುಗಳನ್ನಾಗಿ ಹಂಚಿಕೊಂಡು ತಮ್ಮ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಲು ನಡೆಸುವ ಜಗಳಗಳ ಲಘುನಿರೂಪಣೆ ಬರುತ್ತದೆ. ನದೀತೀರದಲ್ಲಿ ಪ್ರಶಸ್ತವಾದ ಮುತ್ತುಗದ ಎಲೆ ತರಲು ಹೋದ ಕಂಕರ ರಾಮ್ಮೆಂಗಾರಿಗೆ ಶೀನಪ್ಪ ಮತ್ತು ಕಾಗೆ ದೇಶಿಕರು ಮಾಡಿದ ಮೋಸದ ವರ್ಣನೆಯಂತೂ ನಗೆಯ ಹೊನಲನ್ನು ಹರಿಸುತ್ತದೆ. ಮೊದಲು ದೊಡ್ಡನ ಕಲ್ಲಿಗೂ ಅನಂತರ ಪುಟ್ಟಿ ಕಲ್ಲಿಗೂ ಈಜುವ ಸಾಹಸವನ್ನು ಮೆರೆವಲ್ಲಿ ಯುವಕರ ನಡುವೆ ಬ್ರಾಹ್ಮಣ ಒಕ್ಕಲಿಗ ಎಂಬ ಭೇದ ಎಷ್ಟು ಸಹಜವಾಗಿ ಮಾಯವಾಗುತ್ತದೆ ಎಂಬ ಸಂದರ್ಭದ ಸಹಜ ಚಿತ್ರಣ ಆಮೇಲೆ ಬರುತ್ತದೆ. ವಡದ ನರಸಿಂಹಸ್ವಾಮಿ ದೇವಾಲಯ ಮತ್ತು ಅದರ ಪಾರುಪತ್ತೇಗಾರರ ಮಡಿಯನ್ನು ವರ್ಣಿಸುವ ಭಾಗ ಮುಂದಿನದು. ವರ್ಷಕ್ಕೆ ಒಮ್ಮೆ ಎಣ್ಣೆಬತ್ತಿಗಳನ್ನು ತಲೆಯಲ್ಲಿ ಹೊತ್ತು ಪುಟ್ಟಿಕಲ್ಲಿಗೆ ಹೋಗಿ ಊರಿನ ಧೀರರು ದೀಪ ಹತ್ತಿಸುವುದು, ಅನಂತರ ಊರ ಜನ ನದಿಯಲ್ಲಿ ದೀಪ ತೇಲಿಬಿಡುವುದು—ಈ ಪ್ರಸಂಗವಂತೂ ಭಾವಗೀತಾತ್ಮಕವಾಗಿದೆ. ತಿರುಪತಿಗೆ ಹೋಗಿ ಬಂದ ಸಮೇರಾಯರುಗಳು ಊರ ಜಾತ್ರೆಯಲ್ಲಿ ವಿಧಿಸುವ ಕಟ್ಟುಕಟ್ಟಳೆಗಳ ವಿವರಗಳಂತೂ ಜನಪದ ಜೀವನಕ್ಕೆ ಹಿಡಿದ ಕನ್ನಡಿಯಂತಿವೆ. ಮುಂದಿನದು ನದೀತೀರದ ಸ್ಮಶಾನದ ವರ್ಣನೆ. ಇಲ್ಲಿ ಕೇವಲ ಒಂದು ಪುಟ್ಟ ವಾಕ್ಯವೃಂದದಲ್ಲಿ ಬರುವ ವರ್ಣನೆ ಸ್ಮಶಾನದ, ಸಾವಿನ ಬಗ್ಗೆ ಸಾಮಾನ್ಯರಿಗೆ ಇರಬಹುದಾದ ಭಯ ಭೀತಿಗಳನ್ನು ದೂರೀಕರಿಸಿ ಅವುಗಳ ವಿಚಾರದಲ್ಲಿ ಹೊಸ ಭಾವನೆಯನ್ನು ಮೂಡಿಸುವಷ್ಟು ಶಕ್ತಿಯುತವಾಗಿದೆ. ದೇವಾಲಯದ ಹೊರವಲಯದ ಮರವೊಂದರ ಮೇಲೆ ಬೆಕ್ಕು ಮರಿಮಾಡಿ ಸಾಕುವುದು, ದೇವಾಲಯದ ಇಲಿಗಳ ಕಾಟ, ಸಂಜೆ ನದಿಯ ಮೇಲೆ ಹಾರಿಹೋಗುವ ಹಕ್ಕಿಗಳ ವರ್ಣನೆ—ಹೀಗೆ ಪ್ರಬಂಧ ಮುಂದುವರಿದು ಬಾಲ್ಯದ ದಿನಗಳಲ್ಲಿ ಒಟ್ಟಾಗಿ ನದಿಯಲ್ಲಿ ಈಜಾಡಿದವರ ನೆನಪು ಹೇಗೆ ಅಚ್ಚಳಿಯದೆ ಐವತ್ತರ ಇಳಿವಯಸ್ಸಿನಲ್ಲೂ ಅಲ್ಲಿಯವರನ್ನು ಉತ್ಸಾಹಿಸುತ್ತದೆ ಎಂಬ ವಿಷಯಕ್ಕೆ ಬಂದು “ಹೇಮಾವತೀ ನದಿಯು ನಮ್ಮ ಜೀವದ ಉಸಿರು” ಎಂಬ ಪಲ್ಲವಿಯಿಂದ ಮುಕ್ತಾಯವಾಗುತ್ತದೆ. ಈ ಪ್ರಬಂಧ ಹತ್ತು ರಮ್ಯಚಿತ್ರಗಳ ಒಂದು ಚಿತ್ರಶಾಲೆ. ನದಿಯೋ ಈ ಚಿತ್ರಮೌಕ್ತಿಕಗಳನ್ನು ಪೋಣಿಸಿ ಹಿಡಿದಿರುವ ರೇಷ್ಮೆಯ ದಾರ. “ಗೊರೂರರ ಬರೆಹಗಳ ಮೋಹಕತೆ ಎಂದೂ ಮಂಕಾಗದಂಥದು” ಎಂಬ ವಿ. ಸೀತಾರಾಮಯ್ಯನವರ ಮಾತನ್ನು ಇಲ್ಲಿ ಸ್ಮರಿಸಬಹುದು. ಈ ಪ್ರಬಂಧ ೧೯೪೦ರಲ್ಲಿ ಸೃಷ್ಟಿಯಾದದ್ದು. ಮೂವತ್ತು ವರ್ಷ ಕಳೆದ ಮೇಲೂ ಅದರ ಮೋಹಕತೆ ಅಚ್ಚಳಿಯದೆ ನಿಂತಿದೆ.

೩

ಜನಪದ ಸಾಹಿತ್ಯವನ್ನು ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ಸಂಗ್ರಹಿಸುವುದು ಒಂದು ಬಗೆಯ ಕೆಲಸ. ಗೊರೂರರು ಅನೇಕರಿಗಿಂತ ಮೊದಲೇ ಆ ಕೆಲಸವನ್ನು

ಸಾಕಷ್ಟು ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿನ, ಬಹುಶಃ ಇತರರು ಯಾರೂ ಮಾಡದ
ಒಂದು ಕೆಲಸವನ್ನು ಅವರು ಇನ್ನೂ ಸಮರ್ಪಕವಾಗಿ ಮಾಡಿದ್ದಾರೆ. ಜನಪದ ಸಾಹಿತ್ಯ
ವನ್ನು ಆ ಭಾಗದ ಜನಪದಕ್ಕೇ ಅನ್ವಯಿಸಿ ನೋಡಿ ಅದು ಇಂದಿಗೂ ಅವರ ರಕ್ತದಲ್ಲಿ
ಹೇಗೆ ಸೇರಿ ಉಳಿದುಬಂದಿದೆ ಎಂಬುದನ್ನು ಗುರುತಿಸಿ ವ್ಯಾಖ್ಯಾನಿಸುವುದು ಜನಪದ
ಸಾಹಿತ್ಯ ಸಂಗ್ರಹದಷ್ಟೇ ಮುಖ್ಯವಾದ ಕೆಲಸ. ಇದನ್ನು ಗೊರೂರರು ಬಹು ಚೆನ್ನಾಗಿ
ಆತ್ಮೀಯವಾಗಿ ನಿರ್ವಹಿಸಿದ್ದಾರೆ. "ಗೊರೂರರ ಕೃತಿಗಳು ಬರಬರುತ್ತ ಹಳ್ಳಿಗಳ
ಮಹಾಭಾರತಗಳೇ ಆಗುತ್ತಿವೆ. ಅವು ಗ್ರಾಮಜೀವನದ ವಿಶ್ವರೂಪದ ರಸನೋಟ..."
ಎಂಬ ಗೋಕಾಕರ ವಿಮರ್ಶೆ ಉಚಿತವಾದುದೇ ಆಗಿದೆ. ಈ ಒಂದು ವಿಷಯಕ್ಕೆ
ನಿದರ್ಶನವಾಗಿ ನಾವು 'ಬಿಂದಿಗಮ್ಮನ ಜಾತ್ರೆ', 'ಮಲ್ಲಿಗೆ ಹಳ್ಳಿಯಲ್ಲಿ ಬಯ
ಲಾಟ'—ಈ ಕೆಲವು ಪ್ರಬಂಧಗಳನ್ನು ಹೆಸರಿಸಬಹುದು. ಹದಿನೆಂಟು ಪುಟಗಳಷ್ಟು
ದೊಡ್ಡದಾಗಿರುವ 'ಬಿಂದಿಗಮ್ಮನ ಜಾತ್ರೆ' ಎಂಬ ಪ್ರಬಂಧ ಭವ್ಯವಾದ ಒಂದು ಅನು
ಭವವನ್ನು ಯುಕ್ತ ವಿವರಗಳೊಂದಿಗೆ ಹೇಳುವಲ್ಲಿ ಕೃತಾರ್ಥವಾಗಿದೆ. ರಂಗನ ಬೆಟ್ಟದ
ರಂಗಪ್ಪದೇವರಿಗೂ ಭರತೂರು ಬಿಂದಿಗಮ್ಮನಿಗೂ ವರ್ಷಕ್ಕೊಮ್ಮೆ ಮದುವೆಯ
ಸಂಭ್ರಮ ಏರ್ಪಡುತ್ತದೆ. ಆಗ ಸುತ್ತಣ ಜನ ಜಾತ್ರೆ ಸೇರುತ್ತಾರೆ. ಬೆಟ್ಟದ ರಂಗಪ್ಪ
ಹೆಂಡತಿಯನ್ನು ನೋಡಲು ಭರತೂರಿಗೆ ಧಾವಿಸಿ ಬರುತ್ತಾನೆ. ಅವನೊಡನೆ ಬಿಂದಿಗಮ್ಮ
ನನ್ನು ತಲೆಯಲ್ಲಿ ಹೊತ್ತ ಪೂಜಾರಿ ಮತ್ತೆ ರಂಗನ ಬೆಟ್ಟಕ್ಕೆ ಹೋಗುತ್ತಾನೆ. ಅಲ್ಲಿ
ಅವರಿಬ್ಬರ ಲಗ್ನ ನೆರವೇರುತ್ತದೆ. ಬಿಂದಿಗಮ್ಮನನ್ನು ತಲೆಯಲ್ಲಿ ಹೊರುವಾಗ ಪೂಜಾ
ರಿಗೆ ಆವೇಶ ಬರುತ್ತದೆ.

> ಪೂಜಾರಿ ತಟ್ಟೆಯನ್ನು ಎರಡು ಕೈಗಳಿಂದಲೂ ಹಿಡಿದು, ತನ್ನ ಬೋಳು ತಲೆಯ
> ಮೇಲೆ ಸಮತೂಕದಲ್ಲಿ ಇಟ್ಟುಕೊಳ್ಳುತ್ತಾನೆ. ಅದಾವ ಮಾಯೆಯೋ! ವಾತಾ
> ವರಣದಲ್ಲಿ ವಿದ್ಯುತ್‌ಸಂಚಾರವಾದಂತೆ ಕಾಣುತ್ತದೆ. ಒಂದು ಗಳಿಗೆ ಮುಂಚೆ
> ಕಾಣುತ್ತಿದ್ದ ನದಿ ತೋಪು ಮಂಟಪ ಜನತೆ ಪೂಜಾರಿ ಎಲ್ಲ ಮರೆಯಾಗಿ, ಒಂದು
> ದೇವಲೋಕದಲ್ಲಿ ನಾವೆಲ್ಲ ಇರುವಂತೆ ಭಾಸವಾಗುತ್ತದೆ. ಪೂಜಾರಿ ಪೂಜಾರಿ
> ಯಂತೆ ಕಾಣುವುದೇ ಇಲ್ಲ. ಅವನು ನಮ್ಮನ್ನೆಲ್ಲ ಭಗವತ್ ಸಾನಿಧ್ಯಕ್ಕೆ ಕರೆದು
> ಕೊಂಡು ಹೋಗುವ ಭಕ್ತಾಗ್ರೇಸರನಾಗಿ ತೋರುತ್ತಾನೆ. ಒಂದು ಗಳಿಗೆ ಮುಂಚೆ
> ಅಲ್ಲಿ ಬೀಡಿ ಸೇದುತ್ತಾ ನಿಂದ್ದವರು, ತಮಗೆ ಸರಿಯಾದ ಹಾರ ಮುಂತಾದ
> ಮರ್ಯಾದೆ ದೊರೆಯಲಿಲ್ಲವೆಂದು ವಾದಿಸುತ್ತಿರುವವರು, ಜಾತ್ರೆಯಲ್ಲಿ ವ್ಯಾಪಾರ
> ಆಗಲಿಲ್ಲವೆಂದು ಕೊರಗುತ್ತಿರುವವರು, ಈ ಅಲ್ಪ ಜಂತುಗಳೆಲ್ಲ, ನಮಗೆ ಆ ಸಾನಿಧ್ಯ
> ದಲ್ಲಿ ತಾವೂ ದೇವತೆಗಳಂತೆ ಕಾಣುತ್ತಾರೆ. ಎಲ್ಲರೂ ಭಕ್ತಿಯಿಂದ ಆವೇಶ ಬಂದ
> ವರಂತೆ ಆಗಿರುತ್ತಾರೆ. ನಿಜವಾದ ಪರ್ವಕಾಲ ಸಮೀಪಿಸಿದುದು ಜನಕ್ಕೆ ಗೊತ್ತಾ
> ಗುತ್ತದೆ. ಭಗವದ್ಗೀತೆಯನ್ನು ಕೇಳುತ್ತಾ ನಿಂತಿರುವ ಅರ್ಜುನ. ವಿಶ್ವರೂಪವನ್ನು

ನೋಡಲು ಸನ್ನದ್ಧನಾದಂತೆ, ಜನತೆ, ಒಂದು ಅದ್ಭುತವನ್ನು ನೋಡುವ ಮನೋಭಾವವನ್ನು ಪಡೆಯುತ್ತದೆ. ಮುಂದುಗಡೆ ಅಡ್ಡೆಕಾರರು ರಂಗದೇವರನ್ನು ಹೊತ್ತುಕೊಂಡು ಹೊರಡುತ್ತಾರೆ. ಈಗ, ರಂಗದೇವರಿಗೆ ಓಲಗವೂ ಇಲ್ಲ, ಪಂಜೂ ಇಲ್ಲ. ಅಡ್ಡೆ ಹೊತ್ತವರೂ ಮುಂದುಗಡೆ ನಾಗಲೋಟದಲ್ಲಿ ಓಡುತ್ತಾರೆ. ಹಿಂದುಗಡೆ ಬಿಂದಿಗನ್ಮಾನನ್ನು ಹೊತ್ತ ಪೂಜಾರಿ, ಅಷ್ಟೇ ವೇಗದಲ್ಲಿ ಹೊರಡುತ್ತಾನೆ. ಅವನ ಮುಂದೆ ಪಂಜನ್ನು ತೋರಿಸುತ್ತಾ ಎರಡು ಕಡೆಯೂ ಒಬ್ಬೊಬ್ಬ ಪಂಜಿನವನು ಇರುತ್ತಾನೆ. ಇನ್ನೊಂದು ಮೂರು ಮಾರು ಹೋಗುವುದರೊಳಗೆ, ಎರಡು ಕೈಗಳನ್ನು ಪೂರ್ತಾ ಬಿಟ್ಟು, ತಲೆಯ ಮೇಲೆ ‘ಬಿಂದಿಗೆ’ಯಿರುವುದು ತನಗೆ ಗೊತ್ತೇ ಇಲ್ಲವೋ ಎಂಬಂತೆ ಓಡುತ್ತಾನೆ.[1]

ಪ್ರಬಂಧಕ್ಕೂ ಭಾವಗೀತೆಗೂ ವ್ಯತ್ಯಾಸವಿಲ್ಲವೆಂಬುದನ್ನು ತಿಳಿಯಲು ಈ ಪ್ರಬಂಧವನ್ನು ಓದಬೇಕು. ಅರ್ಥಪೂರ್ಣವಾದ ವಿವರಗಳು, ಉಚಿತವಾದೆಡೆ ಮೂಲ ಲಾವಣಿಯಿಂದ ಉದ್ಧೃತವಾದ ಕವನ ಭಾಗಗಳು, ಸರಿಯಾದ ಸ್ಥಳದಲ್ಲಿ ಅರಳಿ ನಿಲ್ಲುವ ಐತಿಹ್ಯಗಳು, ಇಡೀ ಪ್ರಬಂಧದ ಹಿನ್ನೆಲೆಯಲ್ಲಿ ಲೇಖಕರಿಗೆ ಜನತೆಯ ನಂಬಿಕೆಗಳ ವಿಷಯದಲ್ಲಿ ಇರುವ ಅಪಾರ ಸಹಾನುಭೂತಿ—ಇವುಗಳಿಂದಾಗಿ ಈ ಪ್ರಬಂಧ ಗೊರೂರರ ಅತ್ಯುತ್ತಮ ಕೃತಿಗಳಲ್ಲೊಂದಾಗಿದೆ. ಈ ಕೃತಿಯ ಬಗ್ಗೆ ಬರೆಯುತ್ತ ಡಿ. ವಿ. ಗುಂಡಪ್ಪನವರು “....ಸೊಗಸಾದ ಕಾವ್ಯ. ವಾಕ್ಕಾವ್ಯದ ಜೊತೆಗೆ ಭಾವ ಕಾವ್ಯ. ಮಹರ್ಷಿ ಸಂದೇಶ ನಮ್ಮ ಜನರ ಹೃದಯದಲ್ಲಿ ಬೇರು ಬಿಟ್ಟು, ಅವರು ದೇವರನ್ನು ತಮ್ಮ ನಿತ್ಯ ಜೀವನದಲ್ಲಿ ಕಂಡು ಸರಸವಾಡುವಂತಿದೆ....” ಎಂದಿದ್ದಾರೆ.

೪

ಗಾತ್ರದಲ್ಲಿ ಸಾಕಷ್ಟು ದೊಡ್ಡವೂ ನಿರ್ವಹಣೆಯಲ್ಲಿ ಗಂಭೀರವೂ ಆದ ಇನ್ನೆರಡು ಪ್ರಬಂಧಗಳನ್ನು ಒಟ್ಟಾಗಿ ನೋಡಬಹುದು. ‘ಬೆಟ್ಟದ ಮನೆಯಲ್ಲಿ’ ಎಂಬ ೨೫ ಪುಟಗಳ ಪ್ರಬಂಧ ಮಲೆನಾಡಿನ ಜನಜೀವನದಲ್ಲಿನ ಸಾಹಸಪ್ರಿಯತೆಯನ್ನು ರಸವಂತಿಕೆಯಿಂದ ಚಿತ್ರಿಸುತ್ತದೆ. ವಾ ಸಾಹಸಾ ಎಂದು ಕೂಗುವ ಕುಳಿಂಗ ಪಕ್ಷಿ ಹುಲಿ ಸಿಂಹಗಳ ಹಲ್ಲ ನಡುವಿನ ಮಾಂಸವನ್ನು ಹೆಕ್ಕಿ ತಿನ್ನುತ್ತದೆ ಎಂಬ ಪ್ರಸ್ತಾವನೆಯಿಂದ ಪ್ರಾರಂಭವಾಗುವ ಈ ಪ್ರಬಂಧ ಹೇಮಾವತಿಗೆ ೨೦ ಮೈಲಿ ಮೇಲುಗಡೆ ಹಿಂದೊಂದು ಕಾಲದಲ್ಲಿ ಹಿರಿಯರು ಅರ್ಧದಷ್ಟು ಮಾತ್ರ ಹಾಕಿರುವ ಅಡ್ಡಕಟ್ಟೆಯನ್ನೂ ಅದಕ್ಕೂ ಮೇಲೆ ಎರಡು ಸಾವಿರ ಅಡಿಗಳ ಎತ್ತರದ ಬೆಟ್ಟದಲ್ಲಿ ಮನೆ ತೋಟ ಮಾಡಿದ ಸಾಹಸಿಗರ ಎದೆಗಾರಿಕೆಯನ್ನೂ ವರ್ಣಿಸುತ್ತದೆ. ಆ ಬೆಟ್ಟದ ಮನೆಗೆ ಹೋಗಬೇಕಾದರೆ ನಿಮಗೆ ದಾರಿ

[1] ‘ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು’, ಪುಟ ೩೭-೩೮

ಯಾವುದು ಎಂದು ಹೇಳಲು ಮೊದಲು ಮಾಡಿ ಲೇಖಕ ಅಲ್ಲಿನ ಪ್ರಕೃತಿಯ ಗಭೀರತೆಯನ್ನು ವರ್ಣಿಸುತ್ತಾನೆ. ನಡುವೆ ಪೂಜಮ್ಮನ ಮಡುವಿನ ಐತಿಹ್ಯವನ್ನು ಹೇಳುತ್ತಾನೆ. ಇಡೀ ಪ್ರಬಂಧ ನಮ್ಮ ಜನರ ಸಾಹಸಪ್ರಿಯತೆಗೆ ಬರೆದ ವ್ಯಾಖ್ಯಾನದಂತಿದೆ.

ಮೂವತ್ತೊಂಬತ್ತು ಪುಟಗಳಷ್ಟು ನೀಳವಾಗಿರುವ ‘ಸಫಲ ಜೀವನ’ವೆಂಬ ಪ್ರಬಂಧ ತಾಲ್ಲೂಕು ಕಚೇರಿಯಲ್ಲಿ ಮೂವತ್ತೈದು ವರ್ಷ ದುಡಿದು ಹಣ್ಣುಗಾಯಿ ನೀರುಗಾಯಿಯಾಗಿ ನಿವೃತ್ತನಾದ ಒಬ್ಬ ಮನುಷ್ಯ ಹೇಗೆ ಹಳ್ಳಿಗೆ ಬಂದು ನೆಲಸಿ ಭೂಮಿ ಕೊಂಡು ಸ್ವಂತ ಬೇಸಾಯ ಮಾಡಿ ಹೂ ಹಣ್ಣು ಕಾಳು ಕಡ್ಡಿ ಬೆಳೆದು ಹಸು ಕಟ್ಟಿಕೊಂಡು ಸುಖಜೀವನ ನಡೆಸಿದ ಎಂಬ ಕಥೆಯಾಗಿದೆ. ಸಾಂಪ್ರದಾಯಿಕವಾದ ದೇವರ ಪೂಜೆ, ಮತ್ತು ಹರಿಕಥಾಶ್ರವಣಗಳಿಗಿಂತ ಕಾಯಕ ಮುಖ್ಯ, ಸರ್ಕಾರಿ ವೃತ್ತಿಗಿಂತ ಬೇಸಾಯ ಉತ್ತಮ ಎಂಬ ತತ್ತ್ವಗಳನ್ನು ಪ್ರತಿಪಾದಿಸುವುದೇ ಪ್ರಬಂಧದ ಉದ್ದೇಶವಾಗಿದ್ದರೂ ಎಲ್ಲಿಯೂ ತತ್ತ್ವ ಕಥಾನಕವನ್ನು ಮುಂಕುಗೊಳಿಸುವುದಿಲ್ಲ.

೫

ಗೊರೂರರನ್ನು ಜನ ಪ್ರಧಾನವಾಗಿ ಹಾಸ್ಯಲೇಖಕರೆಂದೇ ಪರಿಗಣಿಸಿ ಅವರ ಬರಹಗಳನ್ನು ಮೆಚ್ಚಿದ್ದಾರೆ. ಇದು ಸರಿಯೇ. ಅವರ ಕೃತಿಗಳಲ್ಲಿನ ನವುರಾದ ಹಾಸ್ಯ, ಲಘು ವಿಡಂಬನೆ, ಕಟಕಿ ಇವು ಅನ್ಯತ್ರ ಸಿಕ್ಕುವಂಥವು. ಅವರು ಸಾಹಿತ್ಯರಂಗವನ್ನು ಪ್ರವೇಶಿಸಿದ್ದೇ ಅವರ ನಗೆಬರೆಹಗಳಿಂದ. ‘ನಮ್ಮ ಊರಿನ ರಸಿಕರು’ ಮತ್ತು ‘ಹಳ್ಳಿಯ ಚಿತ್ರಗಳ’ಲ್ಲಿ ನಾವದನ್ನು ಕಾಣುತ್ತೇವೆ. ಆದರೆ ಗೊರೂರರಿಗೆ ಇನ್ನೊಂದು ಮುಖ್ಯವಾದ ಮುಖವಿದೆ — ಗಂಭೀರ ಮುಖ. ಅದನ್ನು ನಾವು ಕಡೆಗಣಿಸಿದಲ್ಲಿ ಲೇಖಕರಿಗೆ ಅನ್ಯಾಯ ಮಾಡಿದಂತಾಗುತ್ತದೆ. ನನ್ನ ಆಶಯ ಏನು ಎಂಬುದನ್ನು ನಾನು ಮೇಲೆ ವಿವರಿಸಿರುವ, ಹೆಸರಿಸಿರುವ ಪ್ರಬಂಧಗಳು ಸ್ಪಷ್ಟಪಡಿಸುತ್ತವೆ. ಕವಿಗೆ ಜೀವನದ ಸುಖ ದುಃಖಗಳೆರಡರ ಆಳವಾದ ಪರಿಚಯವೂ ಇದೆ. ‘ಕನ್ನಡ ಮೌಲ್ವಿ’ ಎಂಬ ಪ್ರಬಂಧವನ್ನಾಗಲಿ ‘ಸೀತಮ್ಮನ ಸಾಹಸ’ ಎಂಬುದನ್ನಾಗಲಿ ನೋಡಿ. ವೃತ್ತಿಯಿಂದ ಉರ್ದು ಪಾಠ ಹೇಳುವ ಒಬ್ಬ ಮೌಲ್ವಿ ತನ್ನ ಸ್ವಂತ ಇರಾದೆಯಿಂದ ಕನ್ನಡ ಕಲಿತು, ‘ಕುಮಾರವ್ಯಾಸ’ನನ್ನು ಓದಿ ಅರ್ಥ ಹೇಳುತ್ತ, ಡಿ. ವಿ. ಜಿ. ಅವರ ‘ಉಮರನ ಒಸಗೆ’ಯನ್ನು ಬಾಯಿ ಪಾಠ ಮಾಡಿ, ಗೊರೂರರ ಬರವಣಿಗೆಯನ್ನು ಮೆಚ್ಚಿ ಅವರನ್ನು ನೋಡುವ ಕಾತರವನ್ನು ವ್ಯಕ್ತಪಡಿಸುತ್ತಾನೆ. ಅಂಥ ಒಬ್ಬ ಮುಸಲ್ಮಾನ ಸಭ್ಯನನ್ನು ಇಲ್ಲಿ ಲೇಖಕರು, ಪರಿಚಯ ಮಾಡಿಕೊಡುತ್ತಾರೆ. ಇಲ್ಲಿ ಕನ್ನಡದ ಬಗ್ಗೆ ಗೊರೂರರಿಗೆ ಇರುವ ಕಳಕಳಿಯನ್ನೂ ಹಿಂದೂ ಮುಸಲ್ಮಾನರ ನಡುವೆ ಭಾವೈಕ್ಯಕ್ಕೆ ಕನ್ನಡ ಹೇಗೆ ಸಹಾಯಕವಾಗಬಹುದು ಎಂಬುದನ್ನೂ ಕಾಣಬಹುದಾಗಿದೆ. ಗಂಡ ಸತ್ತ ಒಂದು ವರ್ಷ ಕಾಲ ಯಾವ ಹಬ್ಬವನ್ನೂ ಮಾಡಬಾರದೆಂದು ಅತ್ತೆ ಕಟ್ಟುನಿಟ್ಟಾಗಿ ಹೇಳುತ್ತಿದ್ದಾಗಲೂ ಪುಟ್ಟ ಮಕ್ಕಳ ಕಾಟವನ್ನು ತಡೆಯಲಾರದೆ ಗೋಕುಲಾಷ್ಟಮಿ ಹಬ್ಬವನ್ನು

ಆಚರಿಸುವ ಸೀತಮ್ಮನ ಸಾಹಸ ಓದುಗರ ಕಣ್ಣಲ್ಲಿ ನೀರು ತರಿಸುತ್ತದೆ. 'ಜಾನಪದ ಜೀವನಕ್ಕೆ ದೀಪಾವಳಿಯ ಸ್ಫೂರ್ತಿ' ಎಂಬ ಲೇಖನದಲ್ಲಿ ಗೊರೂರರು ನರಕಾಸುರ ಮತ್ತು ಬಲೀಂದ್ರರ ಕಥಾನಕಗಳಿಗೆ ಹೊಸತೊಂದು ಮೆರುಗನ್ನೇ ತಂದಿದ್ದಾರೆ. 'ಬೆಸ್ತರ ಕರಿಯ' ಎಂಬ ಕೃತಿಯನ್ನು ಹೇಗೆ ಲಘುಚಿತ್ರವೆನ್ನಲಾದೀತು? ಕರಿಯ 'ಪಶು'ವಿನಂತೆ ಬಾಳಿದ ಒಬ್ಬ ಹಳ್ಳಿಗ. ನೀಚ ಕುಲದವನು. ಮೀನು ಹಿಡಿಯುವುದು ಅವನ ವೃತ್ತಿ. ಹೆಂಡತಿ ಸತ್ತಳೆಂದು ಮತ್ತೆ ಮತ್ತೆ ಮದುವೆ ಮಾಡಿಕೊಳ್ಳುತ್ತಾನೆ. ಜೀವನದ ಕಷ್ಟ ಸುಖಗಳಾವುವೂ ಅವನ ಮನಸ್ಸಿನ ಮೇಲೆ ಪರಿಣಾಮ ಮಾಡಿದಂತೆ ಕಾಣುವುದಿಲ್ಲ. ಆದರೂ ಅವನೊಬ್ಬ ಸ್ಥಿತಪ್ರಜ್ಞ, ಯೋಗಿ. ಈ ಧಾಟಿಯಲ್ಲಿ ಪ್ರಬಂಧ ಬೆಳೆಯುತ್ತದೆ. ಹಾಳತವಾದ ಇಲ್ಲಿನ ಬರೆವಣಿಗೆ ಖಚಿತವಾಗಿ ತನ್ನ ಗುರಿ ಸಾಧಿಸಿದೆ. ಹೊರವ್ಯವಹಾರದಲ್ಲಿ ಕಠೋರಳಾಗಿದ್ದ ಹೆಂಗಸೊಬ್ಬಳ ಹೃದಯ ಎಷ್ಟು ಮೃದು ಎನ್ನುವುದನ್ನು 'ಕಾಳಿಯ ಹೃದಯ' ಎಂಬ ಪ್ರಬಂಧ ವಿವರಿಸಿದರೆ, ಗಂಡನ ಮನೆಯವರು ಮನೆಯಲ್ಲಿ ಕಾಲಿಟ್ಟರೆ ತನ್ನ ಸಾಕುಮಗುವನ್ನು ಬಾವಿಗೆ ಹಾಕಿಬಿಡುವುದಾಗಿ ಹೆದರಿಸುವ ಮತ್ತೊಬ್ಬ ಹೆಂಗಸನ್ನು 'ಗೃಹಿಣೀ ಗೃಹ ಮುಚ್ಚೀತೆ' ಎಂಬ ಪ್ರಬಂಧ ಚಿತ್ರಿಸುತ್ತದೆ.

ಮರಗಳನ್ನು ಕಡಿದು ಹಾಕಿದ್ದರಿಂದ ಈಗ ಹಿಂದಿನಷ್ಟು ಮಳೆ ಬರುತ್ತಿಲ್ಲ ಎಂಬ ಅಭಿಪ್ರಾಯ ಮನಸ್ಸಿಗೆ ಬಂದಿತಾಗಿ ಅದನ್ನೇ 'ಒಂದು ಸಂಜೆ' ಎಂಬ ಪ್ರಬಂಧದ ಉದ್ದಕ್ಕೂ ಮೆಲುಕು ಹಾಕುತ್ತಾರೆ. ಮಳೆ ಮೋಡ ಗುಡುಗು ಸಿಡಿಲು ಗಾಳಿಯ ಅವಾಂತರ, ತುಂಬಿ ಹರಿವ ನದಿ, ಮಳೆಗಳ ಬಗೆ, ಕಾಡಿನ ವೈಭವ — ಇವುಗಳ ಸೂಕ್ಷ್ಮವಿವರಗಳು ಪ್ರಬಂಧದ ಉದ್ದಕ್ಕೂ ಬರುತ್ತವೆ; ಒಂದು ಬರಡು ಗದ್ಯವನ್ನು ಕಾವ್ಯದ ಮಟ್ಟಕ್ಕೆ ಏರಿಸುತ್ತವೆ:

> "ಈ ಕೆಟ್ಟು ಹೋದ ಕಾಲದಲ್ಲಿ" ಸಹ ಕಾಲಕ್ಕೆ ಸರಿಯಾಗಿ ಮಳೆ ಭೋರ್ಗರೆಯುತ್ತಿತ್ತು. ಗುಡುಗು, ಮಿಂಚು, ಬಿರುಗಾಳಿ, ಮೇಘರಾಜನ ಆಗಮನದ ವಂದಿಮಾಗಧರಾಗಿ ಮೊದಲು ಬರುತ್ತಿದ್ದರು. ಈಗಿನವರಾದ ನಮಗೆ ರಾಜನೂ ಬೇಡ, ವಂದಿಮಾಗಧರೂ ಬೇಡ; ಆದರೆ ಮಳೆ, ಗುಡುಗು, ಮಿಂಚು, ಬಿರುಗಾಳೆಲ್ಲ ಬೇಕಲ್ಲ? ಆದರೆ ಈಗ ಬಿರುಗಾಳಿಯೇ ಅಪರೂಪವಾಯಿತು. ದರಿದ್ರನಾದವನು ಎಲ್ಲ ಅವಸ್ಥೆಗಳಲ್ಲೂ ಎಲ್ಲ ಕಾಲಗಳಲ್ಲೂ ಒಂದೇ ಸಮನಾಗಿರುವಂತೆ, ಒಂದೇ ಬಗೆಯ ಉಡುಪನ್ನು ಧರಿಸುವಂತೆ, ಗಾಳಿ ಈಗ ಯಾವಾಗಲೂ ಒಂದೇ ಸಮನಾಗಿದೆ. ಕವಿಗಳು ಹೇಳುವ ಮಂದಮಾರುತ, ಮಲಯ ಮಾರುತ, ಮೆಲುನಡೆಯ ಮಾರುತ, ತಂಗಾಳಿ, ಎಲರುಗಾಳಿ ಇವೆಲ್ಲ ಇರಲಿ, ನಮ್ಮ ಕಣ್ಣಿಗೆ ಕಾಣುತ್ತಿದ್ದ ಬಿರುಗಾಳಿ, ಸುಂಟರಗಾಳಿಗಳು ಸಹ ಈಗ ಮಾಯವಾಗಬೇಕೆ? ಆಗ ಒಂದು ಬಿರುಗಾಳಿ ಎದ್ದರೆ, ಭೂಮಿಯನ್ನು ಒಂದು ಕಡೆಯಿಂದ ಚಾಪೆಯಂತೆ ಸುತ್ತಿಕೊಂಡು ಹೋಗಿಬಿಡುತ್ತಿತ್ತು. ಆಗಿನ ಕಾಲದಲ್ಲಿ ಹುಡುಗರಾದ ನಮಗೆ ಕತೆ

ಹೇಳುವಾಗ ಹಿರಣ್ಯಾಕ್ಷ ಭೂಮಿಯನ್ನು ಸುತ್ತಿಕೊಂಡು ಹೋದುದನ್ನು ಹೇಳಲು ಬಿರುಗಾಳಿಯ ಉದಾಹರಣೆಯನ್ನು ಹೇಳುತ್ತಿದ್ದರು.[1]

ಹೀಗೆ ಇಲ್ಲಿ ಬರುವ ಮಳೆಗಾಳಿಗಳ ವರ್ಣನೆಗಳು ಅಭಿಜಾತ ಸಾಹಿತ್ಯದ ಸೊಗಸಿಂದ ಹೊಳೆಯುತ್ತವೆ. ಉದ್ದಕ್ಕೂ ಪ್ರಕೃತಿಯ ವೈಭವ ಮತ್ತು ಸಮೃದ್ಧಿಯನ್ನು ವಿಸ್ತರಿಸುವ ಕವಿಲೇಖಕ ಇದ್ದಕ್ಕಿದ್ದಂತೆ ಪ್ರಬಂಧದ ಕೊನೆಯಲ್ಲಿ ಮಾನವ ಪ್ರಕೃತಿಯ ವಿಶ್ಲೇಷಣೆಗೆ ತೊಡಗುತ್ತಾನೆ. ಉದ್ದಕ್ಕೂ ಗುರಿ ಸಾಧಿಸಿದ ಬರವಣಿಗೆಗೆ ಕೊನೆಯ ಈ ತಿರುವಿನಿಂದಾಗಿ ತೂಕ ತಪ್ಪಿದಂತಾಗುತ್ತದೆ. ಆದರೂ 'ಒಂದು ಸಂಜೆ' ನಿಜಕ್ಕೂ ಗೊರೂರರ ಉತ್ತಮ ಪ್ರಬಂಧಗಳಲ್ಲೊಂದು.

೬

“ಒಬ್ಬ ಅರಸುಗಳೆ, ಹಜಾಮರೆ, ಹಾರುವರೆ, ತುರುಕರೆ, ದಾಸಯ್ಯಗಳೆ, ಬಯಲಾಟದವರೆ, ಸುಭೇದಾರರೆ, ಶ್ಯಾನುಭೋಗರೆ, ಹೊಲೆಯರೆ—ಇವರೆಲ್ಲರನ್ನು ಒಂದು ಮಾಲೆಯಲ್ಲಿ ಪೋಣಿಸಿದ ವಿಕಟ ಕವಿತ್ವವು ಪ್ರಶಂಸನೀಯವೆಂದು ಯಾರೂ ಹೇಳಲಿಕ್ಕಿಲ್ಲ? ಹಾಸ್ಯವು ಸಾಮ್ಯವಾದಿ. ವ್ಯಂಗಸರಣಿಯ ಗಾದೆ ಮಾತಿನ ಲೇಹ್ಯಗಳು, ಕಟಕಿಯ ಮಾತಿನ ತಿರುಪಿನ ಕಷಾಯಗಳು, ಹಾಸ್ಯಗರ್ಭಿತ ಉಪಮೆ ದೃಷ್ಟಾಂತಗಳ ಪಾಚಕ ರೇಚಕಗಳು, ಅತಿಶಯೋಕ್ತಿಯ ಗುಳಿಗೆಗಳು, ತತ್ತ್ವದ ಭಸ್ಮಗಳು—ಇವೆಲ್ಲವು ಸಾಮಾಜಿಕ ರುಗ್ಣತೆಯನ್ನು ಕಳೆಯುವ ಇವರ ಹಾಸ್ಯವೈದ್ಯಕದಲ್ಲಿ ಉಚಿತ ಪ್ರಯೋಜನಕಾರಿಯಾದುವನ್ನು ಅಡಿಗಡಿಗೆ ಕಂಡು ಹೀಗೆಯೇ ಈ ಕಲೆಯು ನಮ್ಮ ಜನಮನದ ಕೊಳೆಯನ್ನು ಕಳೆದು ಬೆಳಗುವಂತಿರಲಿ ಎಂದು ಹರಸುವಂತಾಗುವುದು. ಗೊರೂರರ ಕಲೆಯು ಎಲ್ಲಿಂದಲೋ ರಫ್ತಾಗಿ ಬಂದ ಸೀಮೆಛಾಪಿನ ಸರಕಲ್ಲ. ಅದು ಜಾನಪದ ಜೀವನದಲ್ಲಿ ಹುದುಗಿದ್ದರೂ ಹರಿಯುತ್ತಿದ್ದ ಹಾಸ್ಯದ ಹೊಳೆಯನ್ನು ಕಂಡುಹಿಡಿದು ಅದನ್ನು ಬಣ್ಣಿಸಬಲ್ಲ ಸ್ವಭಾವಸಿದ್ಧವಾದ ವಚನವೈಖರಿಯು. ಅದಕ್ಕೆ ಎಂದಿಗೂ ಜಯವಿರಲಿ.” ಹೀಗೆಂದು ದ. ರಾ. ಬೇಂದ್ರೆ ಗೊರೂರರ 'ಗರುಡಗಂಬದ ದಾಸಯ್ಯ' ಎಂಬ ಕೃತಿಯ ಮುನ್ನುಡಿಯಲ್ಲಿ ಹೇಳುತ್ತಾರೆ (ಪುಟ ೬). ಹಳ್ಳಿಗರ ಜೀವನದ ಹತ್ತು ಮುಖಗಳನ್ನು ಚಿತ್ರಿಸುವಲ್ಲಿ ಗೊರೂರರು ಬಳಸಿರುವ ತಂತ್ರವನ್ನು ಬೇಂದ್ರೆಯವರು ಬಹು ಚೆನ್ನಾಗಿ ಈ ಮಾತುಗಳಲ್ಲಿ ಬಣ್ಣಿಸಿದ್ದಾರೆ. ಒಂದು ಕಡೆ ಬ್ರಾಹ್ಮಣರಿಗೂ ಮತ್ತೊಂದು ಕಡೆ ಒಕ್ಕಲಿಗರು ಹಾಗೂ ಹೊಲೆಯರಿಗೂ ನಡುವೆ ಏರ್ಪಡುತ್ತಿದ್ದ ಸರಸ ವಿರಸಗಳನ್ನು ಮಂಡಿಸುವಲ್ಲಿ, ಶಿಥಿಲವಾಗುತ್ತಿರುವ ಬ್ರಾಹ್ಮಣ್ಯದ ರೀತಿನೀತಿಗಳನ್ನು ವಿಡಂಬಿಸುವಲ್ಲಿ, ಗೊರೂರರ ಲೇಖನಿ ತೋರುವ ಸಂಯಮ, ಸಹಾನುಭೂತಿ ಅನ್ಯತ್ರ ಕಾಣಸಿಗದು.

ಹಾರುವರ ರೀತಿನೀತಿಗಳನ್ನು ವಿಡಂಬಿಸುವ ಪ್ರಬಂಧಗಳಲ್ಲಿ 'ಆಚಾರ ಕೆಟ್ಟರೂ

[1] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೧೪-೧೧೫

ಆಕಾರ ಕೆಡಬಾರದು' ಎಂಬುದು ಬಹು ಸೊಗಸಾದದ್ದು. "ನೆನ್ನೆ ರಾತ್ರಿ ನಿದ್ರೆ ಬರದು ದರಿಂದ ಸುಮಾರು ಹನ್ನೆರಡು ಗಂಟೆಗೆ ದೀಪ ಹತ್ತಿಸಿಕೊಂಡು ನಿಮ್ಮ ಗರುಡಗಂಬದ ದಾಸಯ್ಯನನ್ನು ಓದಲು ಪ್ರಾರಂಭಿಸಿದೆ. ನಿದ್ರೆ ಬಾರದಾಗ ಇದು ನನ್ನ ಪದ್ಧತಿ. 'ಆಚಾರ ಕೆಟ್ಟರೂ ಆಕಾರ ಕೆಡಬಾರದು' ಎಂಬುದನ್ನು ಓದುತ್ತಾ ತಡೆಯಲಾರದ ನಗು ಬಂತು. ಗಟ್ಟಿಯಾಗಿ ನಗುತ್ತಲೇ ಇದ್ದುಬಿಟ್ಟೆ. ನಮ್ಮ ಹುಡುಗರು ಗಾಬರಿ ಯಿಂದ ಎದ್ದು ನೋಡಿದರು. ವಿಷಯ ತಿಳಿದ ನಂತರ ಅವರೂ ನಗತೊಡಗಿದರು. ಮಹಾನುಭಾವಾ, ನೀವು ಕನ್ನಡ ಕಲಿತದ್ದು ಸಾರ್ಥಕವಾಯಿತು. ಹೀಗೆಯೇ ಬರೆ ಯುತ್ತ ಜನಮನದ ಕೊಳೆಯನ್ನು ಹೋಗಲಾಡಿಸುತ್ತಿರಿ" ಎಂದು ಡಿ. ವಿ. ಜಿ. ಈ ಬರೆಹವನ್ನು ಕೊಂಡಾಡಿದ್ದಾರೆ. ಆಚಾರಕ್ಕೂ ಆಚರಣೆಗೂ ಇರುವ ವ್ಯತ್ಯಾಸವನ್ನಿಲ್ಲಿ ವಿವರವಾಗಿ ನಿರೂಪಿಸಲಾಗಿದೆ. ಬ್ರಾಹ್ಮಣೇತರರಂತೆ ಬ್ರಾಹ್ಮಣರು ಇದನ್ನು ಓದಿದರೂ ತಮ್ಮ ವರ್ತನೆಯನ್ನು ಕಂಡು ತಾವೇ ನಗಬೇಕಾಗುತ್ತದೆ. ಊರಿಂದ ದೂರವಿದ್ದ ಹೊಲೆಯರು ತಮ್ಮ ವಿಶೇಷ ಓಲಗದಿಂದಾಗಿ ಕ್ರಮೇಣ ಊರೊಳಕ್ಕೆ ಪ್ರವೇಶಿಸಿ ಒಂದು ದಿನ ನರಸಿಂಹಸ್ವಾಮಿ ರಥದ ಕಟ್ಟೆಯನ್ನು ಏರಿ ಕುಳಿತದ್ದನ್ನು 'ಜಾತ್ರೆ' ಎಂಬ ಪ್ರಬಂಧ ಹಸನಾಗಿ ಬಣ್ಣಿಸುತ್ತದೆ. ಒಮ್ಮೊಮ್ಮೆ ಸಮಾಜದ ಕುಂದನ್ನು ಎತ್ತಿ ಆಡು ವಾಗ ಗೊರೂರರು ವಿಡಂಬನೆ ಹಾಸ್ಯ ಮುಂತಾದ ಎಲ್ಲ ವರಸೆಗಳನ್ನೂ ಬಿಟ್ಟು ನೇರ ವಾಗಿ ಚುಚ್ಚುವಂತೆ ಬರೆಯಬಲ್ಲರೆಂಬುದಕ್ಕೆ ಅವರ 'ಜಪ, ತಪ, ಅನುಷ್ಠಾನ', 'ಸಾರಿಗೆ ಸಪ್ತಾಹ', 'ಲಂಚ ತ್ರಿವಿಕ್ರಮ', 'ಪೆನ್ಷನ್', ದಫ್ತರ ಬಂದಿಯ ಅನುಭವ ಗಳು'—ಎಂಬ ಪ್ರಬಂಧಗಳು ನಿದರ್ಶನಗಳಾಗಿವೆ. ಇಂದಿನ ಬ್ರಾಹ್ಮಣರಿಗೆ ಜಪ, ತಪ, ಅನುಷ್ಠಾನಗಳೆಲ್ಲ ಬೆಳಗ್ಗೆ ಎದ್ದು ರೇಷನ್ ಡಿಪೋ ಬಾಗಿಲಲ್ಲಿ ಅಕ್ಕಿ, ಸೀಮೆಯೆಣ್ಣೆ, ಸೌದೆಗಾಗಿ ಕಾಯುವುದರಲ್ಲೇ ಪರ್ಯವಸಾನವಾಗುತ್ತದೆ; ಸಾರಿಗೆ ಸಪ್ತಾಹವನ್ನು ಮಾಡುತ್ತಿರುವ ವಾರದಲ್ಲೇ ಕದೀಮ ಕಂಡಕ್ಟರುಗಳು ಚಿಲ್ಲರೆ ಕೊಡುವ ಒಂದು ವಿಷಯ ದಲ್ಲಿ ಮುಗ್ಧ ಹಳ್ಳಿಯವರಿಗೆ ಮೋಸ ಮಾಡುತ್ತಾರೆ; ಶಾನುಭೋಗರುಗಳನ್ನು ತಾತ್ಸಾರ ಮಾಡುವ ತಹಶೀಲುದಾರರು ಷೇಕದಾರರುಗಳು ಹಳ್ಳಿಗಳಿಗೂ ಸರ್ಕಾರಕ್ಕೂ ಇರುವ ಮೂಲಭೂತವಾದ ಕೊಂಡಿಗಳನ್ನೇ ಕತ್ತರಿಸುತ್ತಿದ್ದಾರೆ; ನೂರು ಕಾನೂನುಗಳನ್ನು ಮಾಡಿದರೂ ಸಬ್ ರಿಜಿಸ್ಟ್ರಾರ್ ಆಫೀಸಿನವರು ಲಂಚ ಹೊಡೆವುದನ್ನು ಬಿಡರು—ಈ ಸತ್ಯಗಳನ್ನು ಇಷ್ಟು ನಿಷ್ಠುರವಾಗಿ, ನೇರವಾಗಿ, ವಿವರವಾಗಿ ಆದರೂ ಮೋಹಕವಾಗಿ ಮತ್ತೆ ಯಾರೂ ಹೇಳಿದಂತಿಲ್ಲ.

ಜೀವನದ ಬಹು ಸಣ್ಣ ವಿಷಯವೂ ಗೊರೂರರಿಗೆ ಒಂದು ಪ್ರಬಂಧಕ್ಕಾಗುವಷ್ಟು ವಿಷಯವನ್ನು ಒದಗಿಸಬಲ್ಲುದು. ಊರ ದಾಸಯ್ಯಗಳಿಗಾಗಿ ಒಂದು ಗರುಡಗಂಬವನ್ನು ಕೊಂಡು ತರಹೋಗಿ ಲೇವಡಿಗೆ ಪಕ್ಕಾಗುವ ಲೇಖಕನ ಅನುಭವ 'ಗರುಡಗಂಬದ ದಾಸಯ್ಯ' ಎಂಬ ಲೇಖನದಲ್ಲಿ ಬರುತ್ತದೆ. ಕೆಲವೊಮ್ಮೆ ಗೊರೂರರ ಹಾಸ್ಯ ಲಾರೆಲ್ ಮತ್ತು ಹಾರ್ಡಿಗಳ ಸ್ತರಕ್ಕೆ ಮುಟ್ಟಬಹುದೆಂಬುದಕ್ಕೆ ಅವರ 'ವಿನೋದ ಲಹರಿ' ಎಂಬ

ಪ್ರಬಂಧ ಸಾಕ್ಷಿ. ಅಲ್ಲಿ ಗಾಂಪರೊಡೆಯರ ಶಿಷ್ಯರು ತಮ್ಮ ಗುರುಗಳ ಕುದುರೆಯನ್ನು ಕಾಲುಕಟ್ಟಿ ಬಸ್ಸಿನ ಮೇಲುಗಡೆ ಹಾಕಿಬಿಡುತ್ತಾರೆ. ಪ್ರಸಂಗ ಗುಲ್ಲೋಗುಲ್ಲಾಗುತ್ತದೆ.

'ಹಳ್ಳಿಯ ಬಸ್ಸು' ಗೊರೂರರ ಮೂರು ಪ್ರಬಂಧಗಳಿಗೆ ವಿಷಯವಾಗುತ್ತದೆ. ಮೊದಲು ಹಳ್ಳಿಗೆ ಬಸ್ಸು ಬಂದುದರ ವೈಖರಿಯನ್ನು, ಅದರ ಏಜೆನ್ಸಿ ಹಿಡಿಯಲು ಪೈಪೋಟಿ ಮಾಡಿದ ವೀರರ ಚರಿತ್ರೆಯನ್ನು 'ನಮ್ಮ ಊರ ಬಸ್ಸು' ಎಂಬ ಪ್ರಬಂಧ ವರ್ಣಿಸಿದರೆ, ಈ ಮೊದಲೇ ತಿಳಿಸಿದಂತೆ 'ಸಾರಿಗೆ ಸಪ್ತಾಹ' ಎಂಬುದು ಬಸ್ಸು ಲೋಕದ ಲಂಚದ ಹಾವಳಿಯನ್ನು ವರ್ಣಿಸುತ್ತದೆ. 'ಪ್ರಥಮ ಹನಿಮೂನ್ ಪ್ರವಾಸ' ಎಂಬ ಪ್ರಬಂಧದಲ್ಲಿ, ಹೊಸದಾಗಿ ಮದುವೆಯಾದ ಯುವಕನೊಬ್ಬ ಹೆಂಡತಿಯನ್ನು ತವರು ಮನೆಗೆ ಮುಟ್ಟಿಸಿ ಅಲ್ಲಿ ಆಕೆಯೊಡನೆ ಒಂದೆರಡು ಗಂಟೆ ಇದ್ದು ಅನಂತರ ಕೆಲಸದ ಮೇಲೆ ಪ್ರಯಾಣ ಮಾಡಬೇಕೆಂದು ಹಳ್ಳಿಯ ಬಸ್ಸಿಗೆ ಕಾಯುತ್ತಾನೆ. ಬಸ್ಸು ಹಳ್ಳಿಗೆ ಬರುವ, ಬಂದು ಹೊರಡುವ, ಹೊರಟು ಗುರಿ ಮುಟ್ಟುವ ಅವಾಂತರವನ್ನು ಲೇಖಕರು ಮನೋಹರವಾಗಿ ಚಿತ್ರಿಸುತ್ತಾರೆ. ಹೊಸ ದಂಪತಿಗಳ ಹನಿಮೂನು ಬಸ್ಸು ಪ್ರಯಾಣದಲ್ಲೇ ಮುಕ್ತಾಯವಾಗುತ್ತದೆ.

ಲಘುವಾದರೂ ಪರಿಣಾಮಕಾರಿಯಾದ ಪ್ರಬಂಧಗಳೆಂದರೆ 'ಕ್ಷೌರ', 'ಹಾರುವಯ್ಯ ಹಜಾಮನಾದುದು' ಮತ್ತು 'ನಮ್ಮ ಊರ ಹಾರುವರ ಶೌರ್ಯ'—ಇವು. ಮೊಂಡು ಕತ್ತಿಯ ಹಜಾಮನ ಕೈಲಿ ತಲೆ ಕೊಡುವ ಯಜ್ಞವನ್ನು 'ಕ್ಷೌರ' ಎಂಬ ಪ್ರಬಂಧ ವರ್ಣಿಸಿದರೆ, ತಮ್ಮ ಕಟ್ಟಳೆಗಳನ್ನು ಮೀರಿದನೆಂದು ಊರ ಹಜಾಮನನ್ನು ಬಹಿಷ್ಕರಿಸಲು ಶ್ರೋತ್ರಿಯರಾದ ನರಸಿಂಹಾಚಾರ್ಯರು ತಾವೇ ಕ್ಷೌರಕಾರ್ಯವನ್ನು ಎಸಗಿದನ್ನು ಪ್ರಬಂಧ ವಿವರಿಸುತ್ತದೆ. ಹಾರುವರ ಶೌರ್ಯ ಅಷ್ಟಕ್ಕೇ ಕೊನೆಯಾಗುವುದಿಲ್ಲ. ಊರ ಮುಸಲ್ಮಾನರು ತಮ್ಮ ಹೆಂಚುಗಳನ್ನು ಕದಿಯಲು ಹವಣಿಸುತ್ತಿದ್ದಾರೆಂಬ ಗುಮಾನಿಯ ಮೇಲೆ ಹಾರುವಯ್ಯಗಳೆಲ್ಲ ಗುಂಪು ಸೇರಿ ಮಸಲತ್ತು ಮಾಡಿ, ಕತ್ತಿ, ಬಂದೂಕು, ದೊಣ್ಣೆಗಳೊಡನೆ ಅವರ ವಿರುದ್ಧ ಹೋರಾಡಲು ಹೋಗುತ್ತಾರೆ. ಪರಿಣಾಮದಲ್ಲಿ ಹಾರುವಯ್ಯಗಳು ಹಾಕುವ ಬಾಂಬು ಪುಸ್ ಎಂದುಬಿಡುತ್ತದೆ:

> ಅಪ್ಪಣ್ಣಯ್ಯಂಗಾರಿ ಮಾತ್ರ ಓಡಲಿಲ್ಲ. ತುರುಕರಿಗೆ ಕಲ್ಲಿನಿಂದ ಹೊಡೆಯಲು ಪ್ರಾರಂಭಿಸಿದ. ಆ ವೇಳೆಗೆ ಪಾಚು ಸಾಬಿಯು ಸಮೀಪಕ್ಕೆ ಬಂದು "ಅರೆ, ನಿಮ್ಮ ಹೆಂಚು ಬೇಡ ಅಂತ ನಾವು ಬಂದೊ. ನಿಮ್ಗೆ ಬೇಕಾದ್ರೆ ತಕೊಳ್ಳಿ. ಇಲ್ಲಾಕೆ ಬಿಟ್ಟಿದ್ದೀರಿ. ಇದಕ್ಕೆ ಇಷ್ಟೊಂದು ಜನ ಯಾಕೆ ಬಂದ್ರಿ?" ಎಂದ. ಅಪ್ಪಣ್ಣಯ್ಯಂಗಾರಿಯು...."ನೀವೆಲ್ಲ ಕಳ್ರು. ಕದಿಯೋಕೆ ಬಂದಿದೀರಿ" ಎಂದ. ಪಾಚು ಸಾಬಿಯು "ಅರೆ, ಕದ್ಯೋಕೆ ಬಂದೋರು ಯಾರು? ಈ ಹೆಂಚೆ ಎಂಟು ತಿಂಗಳಿಂದ ಕೇಳೋರಿಲ್ದೆ ಬಿದ್ದಿತ್ತು" ಎಂದ. ಅಪ್ಪಣ್ಣಯ್ಯಂಗಾರಿಯು "ಕದಿಯೋಕೆ ಬರುವ ಮೇಲೆ ರಾತ್ರಿ ಹೊತ್ತು ಯಾಕೆ ಬಂದಿರಿ. ಹಗಲುಹೊತ್ತೇ ಬರಬಹುದಾಗಿತ್ತಲ್ಲಾ" ಎಂದ.

ಪಾಚು ಸಾಬಿಯು ಗಟ್ಟಿಯಾಗಿ ನಗುತ್ತಾ "ಹಗಲು ಹೊತ್ತು ಬೆಂಕಿ ಬಿಸಿಲು, ರಾತ್ರಿ ಬಿಸಿಲಿಲ್ಲ. ಈಗ ತಿಂಗಳು ತಂಪಾಗಿದೆ, ಅದ್ಕೆ ಬಂದೊ" ಎಂಬುದಾಗಿ ಹೇಳಿ ಗಾಡಿಯಲ್ಲಿದ್ದ ಹೆಂಚನ್ನು ಕೆಳಕ್ಕೆ ಸುರಿದು ಗಾಡಿಯನ್ನು ಹೊಡೆದುಕೊಂಡು ಉಳಿದ ಸಾಬರ ಜೊತೆಯಲ್ಲಿ ಹೊರಟುಹೋದ.[1]

೭

'ಸಂಚಾರಿ ಚಲನಚಿತ್ರಗಳು' ಎಂಬುದು ಶುದ್ಧ ಪ್ರಬಂಧಕ್ಕೊಂದು ಒಳ್ಳೆಯ ಉದಾಹರಣೆ. 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧದಲ್ಲಿ ಹೇಗೋ ಹಾಗೆ ಇಲ್ಲೂ ಸಂಚಾರಿ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಒಂಬತ್ತು ನುಡಿಚಿತ್ರಗಳು ಬರುತ್ತವೆ. ಯಕ್ಷಗಾನ ಬಯಲಾಟ ಕುಣಿತ ಮೊದಲಾದ ಹಳ್ಳಿಯ ವಿನೋದಗಳಿಗೂ ಹೊರಗಿನದಾದ ಸಿನಿಮಾಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನಿಲ್ಲಿ ಗೊರೂರರು ಬಹು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಅನಂತರ ಟೂರಿಂಗ್ ಟಾಕೀಸಿನವರ ವೈಖರಿಗಳನ್ನು—ಅವರ ಡೇರೆ, ಅವರ ಜಾಹಿರಾತು, ಅವರು ತರಿಸುವ ಸಿನಿಮಾಗಳು, ಅವರ ಡೈನಮೊ,—ಇತ್ಯಾದಿಗಳನ್ನು ವರ್ಣಿಸುತ್ತಾರೆ. ಸುಮಾರು ೨೧ ಪುಟಗಳಷ್ಟು ಉದ್ದವಿರುವ ಈ ಪ್ರಬಂಧ ಬಿಡಿಬಿಡಿಯಾದ ಅನುಭವಗಳನ್ನು ಹೇಳಿದರೂ ಎಲ್ಲಿಯೂ ಕುಂಟುವುದಿಲ್ಲ. ಇಂಥ ವಿಷಯಗಳನ್ನು ಇಷ್ಟು ಹಸನಾಗಿ ಹೇಳುವುದು ನುರಿತ ಕಲಾವಿದನಿಗೆ ಮಾತ್ರ ಸಾಧ್ಯ.

೮

ಗೊರೂರರ ವಿಚಿತ್ರ ಕಲ್ಪನಾವಿಲಾಸಕ್ಕೆ ತಕ್ಕ ಉದಾಹರಣೆಯೆಂದರೆ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?'—ಎಂಬ ಪ್ರಬಂಧ. "ಪ್ರಾಣಿಗಳಿಗೆ ಬುದ್ಧಿ ಇಲ್ಲ ಎಂದು ಕೆಲವರು ಹೇಳುತ್ತಾರೆ. ಆತ್ಮವಿಲ್ಲ ಎಂದು ಕೆಲವರು ಹೇಳುತ್ತಾರೆ. ಮನುಷ್ಯ ತನ್ನ ಅಹಂಕಾರವನ್ನು ಮರೆತು ಪ್ರಾಣಿಯನ್ನು ಸಮಾನಸ್ಕಂಧನಂತೆ ಭಾವಿಸಿ, ಅವರ ಚಲನವಲನಗಳನ್ನು ನಿರೀಕ್ಷಿಸಿದರೆ, ಎಮ್ಮೆಯೂ ಸಹ ನಮ್ಮ ಮಾತನ್ನು ಅರಿತು ಅದರಂತೆ ನಡೆಯಬಲ್ಲದು, ಎಂಬುದು ಗೊತ್ತಾಗುತ್ತದೆ."[2] ಎಮ್ಮೆಯಂಥ ದಡ್ಡ ಪ್ರಾಣಿ ಹೇಗೆ ತಾವು ಆಡಿದ ಮಾತುಗಳೆಲ್ಲವನ್ನೂ ಅರ್ಥಮಾಡಿಕೊಂಡಂತೆ ನಡೆಯಿತು ಎಂಬುದನ್ನು ಇಲ್ಲಿ ವಿವರಿಸಿದೆ. ನಮ್ಮ ನಾಡು ಎಮ್ಮೆಯನಾಡು, ಹಳ್ಳಿಯ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತವಾದ ಸಂಗಾತಿ, ಪ್ರಕೃತಿಯಂತೆ ಎಮ್ಮೆಯನ್ನು ಅರ್ಥಮಾಡಿಕೊಳ್ಳುವುದೂ ಕಷ್ಟ, ಮಹಾತ್ಮ ಗಾಂಧಿಯವರು ಎಮ್ಮೆಗೆ ಪ್ರಾಶಸ್ತ್ಯ ಕೊಡದಿರುವುದು ಅನ್ಯಾಯ, ಎಮ್ಮೆ ವಿಶ್ವಾಮಿತ್ರನ ಸೃಷ್ಟಿ, ವಿಶ್ವಾಮಿತ್ರನ ರಾಜಸಗುಣ ಮಿಕ್ಕೆರಡು ಗುಣಗಳಿಗಿಂತ ಲೋಕದ ಜನಕ್ಕೆ ಹತ್ತಿರ ಹತ್ತಿರವಾದ್ದು, ಊರಿಗೆಲ್ಲ ಕಾಮಧೇನು

[1] 'ಗರುಡಗಂಬದ ದಾಸಯ್ಯ', ಪುಟ ೨೪–೨೫

[2] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಅರಿಕೆ ಪುಟ iii

ವನ್ನು ಒದಗಿಸಲು ಸಾಧ್ಯವೇ?—ಹೀಗೆ ಪ್ರಬಂಧದ ಪೀಠಿಕೆ ಬೆಳೆಯುತ್ತದೆ; ಬೆಳೆದು ಮುಂದಿನ ಮುಖ್ಯ ವಿಷಯಕ್ಕೆ ಸುಭದ್ರ ತಳಪಾಯವನ್ನು ಏರ್ಪಡಿಸುತ್ತದೆ.

ತಮ್ಮ ಎಮ್ಮೆ ನಿಂತುಕೊಂಡೇ ಕರ ಹಾಕುತ್ತದಾಗಿ ಕರ ಬದುಕುವುದೇ ಕಷ್ಟವಾಗುತ್ತದೆ ಎಂದು ತಿಳಿದ ಮನೆಯವರು ಈ ಬಾರಿ ಅದು ಈಯುವಾಗ ಅದರ ಹಿಂಭಾಗದಲ್ಲಿ ಕರ ಬೀಳುವ ಕಡೆ ಒಂದು ಗೋಣಿಚೀಲವನ್ನು ಹಿಡಿಯುತ್ತಾರೆ. ಇವರಾಡಿದ ಮಾತುಗಳನ್ನು ಅರ್ಥಮಾಡಿಕೊಂಡಂತೆ ಎಮ್ಮೆ ಅತ್ತಿಂದ ಇತ್ತ ತನ್ನ ಮೈಯನ್ನು ಅಲುಗಾಡಿಸುತ್ತ ಚೀಲ ಹಿಡಿದವರಿಗೆ ಸುಸ್ತುಮಾಡಿಸಿ ಎಂದಿನಂತೆ ಕರುವನ್ನು ನೆಲಕ್ಕೆ ಎಸೆದುಬಿಡುತ್ತದೆ. ಹಾಲುಕೊಡುವ ಎಮ್ಮೆಗೆ ಹೆಚ್ಚು ತಿಂಡಿ ಇಟ್ಟಾಗ ಅದಕ್ಕೆ ಏನು ಅನ್ನಿಸಬಹುದು? ಅದರೆದುರಿಗೆ ಅದನ್ನು ಬೈದಾಗ ತಾತ್ಸಾರದ ಮಾತುಗಳಿಂದ ಹಂಗಿಸಿದಾಗ ಅದಕ್ಕೆ ಅರ್ಥವಾಗುತ್ತದೆಯೆ? ಗೊರೂರರ ಎಮ್ಮೆ ಅರ್ಥ ಮಾಡಿಕೊಂಡಂತೆ ನಡೆಯುತ್ತದೆ. ಎಮ್ಮೆಯನ್ನು ಕುರಿತ ಈ ಬರೆಹ ಬಹು ರಮ್ಯವಾದುದು, ಅಪೂರ್ವವಾದುದು.

೬

ಗೊರೂರರಿಗೆ ಒಂದು ವಿಶಿಷ್ಟವಾದ ಶೈಲಿ ಉಂಟು ಎಂಬುದನ್ನು ವಿಚಾರಮಾಡಬೇಕು. ಗೊರೂರರದ್ದು ಸುಲಭವಾದ ನೇರವಾದ ಕನ್ನಡ. ಹಾಸನದ ಕಡೆಯ ಕನ್ನಡ. ಆದರೆ ತೀರ ಪ್ರಾದೇಶಿಕವಲ್ಲ. ಹಳ್ಳಿಯ ಜೀವನದ ನಾನಾ ಮುಖಗಳ ವಿವರಗಳನ್ನು ಕೊಡುವಾಗ ಅವರು ಅಲ್ಲಲ್ಲಿನ ಪದಗಳನ್ನು ಬಳಸುತ್ತಾರಾದರೂ ಎಲ್ಲಿಯೂ ಅವರು ತಮ್ಮ ಇಡೀ ಶೈಲಿಯನ್ನೇ ಗ್ರಾಮೀಣವನ್ನಾಗಿ ಮಾಡರು. ಹೇಳಬೇಕಾದುದನ್ನು ಸೊಗಸಾಗಿ ಹೇಳಿದರಾಯಿತು ಎಂಬುದೇ ಅವರ ಗುರಿ. ಬೇಕೆಂದು ವಾಕ್ಯಗಳನ್ನು ತಿರಿಚುವುದು, ದೂರದ ವರ್ಣನೆ, ಕಲ್ಪನೆಗಳನ್ನು ತರಲು ಯತ್ನಿಸುವುದು, ಉದ್ದನೆಯ ವಾಕ್ಯಗಳನ್ನು ಉದ್ಧರಿಸುವುದು—ಇವು ಗೊರೂರರಿಗೆ ಹಿಡಿಸವು. ಆಳವಾದ ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ ಪಾಂಡಿತ್ಯವಿದ್ದರೂ ಅನಾವಶ್ಯಕವಾಗಿ ಅವರು ಅದನ್ನು ಪ್ರದರ್ಶಿಸರು. ಅವರ ಬರೆಹ ಗಾಂಧಿ, ಎ. ಆರ್. ಕೃಷ್ಣಶಾಸ್ತ್ರೀ, ಡಿ. ವಿ. ಗುಂಡಪ್ಪ (ಅವರ ಈಚಿನ ಜ್ಞಾಪಕ ಚಿತ್ರಮಾಲೆಯಲ್ಲಿನಂತೆ) ಮೊದಲಾದವರ ಬರೆಹದಂತೆ ಸುಲಭ, ನೇರ, ಸಹಜ, ವಿಷಯಕ್ಕೆ ಹಾಳತವಾಗಿ ಒಪ್ಪುವಂಥದು. ತತ್ತ್ವಮಥನಕ್ಕಿಂತ ಅನುಭವ ವಿವರಗಳನ್ನು ಕೊಡುವುದೇ ಗೊರೂರರಿಗೆ ಪ್ರಿಯವಾದ ಗುರಿ. ಅದಕ್ಕೆ ಅವರ ಶೈಲಿ ಚೆನ್ನಾಗಿ ಒಪ್ಪುತ್ತದೆ.

ಡಿ. ವಿ. ಜಿ. ಅವರಂತೆ ಗೊರೂರರೂ ತಮ್ಮ ಈ ಪರಿಣತ ವಯಸ್ಸಿನಲ್ಲಿ ಕನ್ನಡ ಓದುಗರಿಗೊಂದು ಜ್ಞಾಪಕ ಚಿತ್ರಮಾಲೆಯನ್ನು ಕೊಡಬಹುದಲ್ಲವೆ? "ಗೊರೂರರು ಎಷ್ಟು ಬೇಗ ಬೇಗ ಕೃತಿಗಳನ್ನು ಬರೆದರೆ ನಾವು ಅಷ್ಟು ಬೇಗ ಬೇಗ ಓದಿ ಆನಂದಿಸಬಹುದು" ಎಂಬ ಗೋಕಾಕರ ಹಾರೈಕೆ ನಮ್ಮೆಲ್ಲರದೂ ಆಗಿದೆ ಎಂದು ಹೇಳಿ ಈ ಪ್ರಬಂಧವನ್ನು ಮುಗಿಸುತ್ತೇನೆ.

ಜೀವನ ಚಿತ್ರಗಳು

ಜಿ. ವರದರಾಜ ರಾವ್

ಯದ್ಯದಾಚರತಿ ಶ್ರೇಷ್ಠಃ ತತ್ತದೇವ ಇತರೋ ಜನಃ
ಸ ಯತ್ಪ್ರಮಾಣಂ ಕುರುತೇ ಲೋಕಃ ತದನುವರ್ತತೇ

—ಭಗವದ್ಗೀತೆ ೩.೨೧

೧

ನಮ್ಮ ಹಳ್ಳಿಯ ಚಿತ್ರಗಳನ್ನು ಚಿತ್ರಿಸುವುದರಲ್ಲಿ ಸಿದ್ಧಹಸ್ತರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಹಲವಾರು ಹಿರಿಯ ಮಾರ್ಗದರ್ಶಕರನ್ನು ಕುರಿತು ಸಣ್ಣ ಸಣ್ಣ ಕೃತಿಗಳನ್ನು ರಚನೆ ಮಾಡಿರುವರೆಂಬ ವಿಷಯ ಹೆಚ್ಚು ಜನರ ಗಮನಕ್ಕೆ ಬಂದಿರಲಾರದು. ಗೊರೂರರು ಇಂದಿನ ಕನ್ನಡ ಸಾಹಿತ್ಯದಲ್ಲಿ ಹೇಗೆ ವಿಶಿಷ್ಟವಾದ ಸ್ಥಾನವನ್ನು ಗಳಿಸಿರುವರೋ ಹಾಗೆಯೇ ಅವರು ನಮ್ಮ ದೇಶದ ಸ್ವಾತಂತ್ರ್ಯಪೂರ್ವದ ಉಜ್ವಲ ಇತಿಹಾಸದಲ್ಲಿಯೂ ಅಪೂರ್ವವಾದ ಪ್ರಶಸ್ತಿಯನ್ನು ಪಡೆದಿರುವರು. ಗಾಂಧೀಜಿಯವರ ತತ್ವಗಳಲ್ಲಿ ಬಲವಾದ ಶ್ರದ್ಧೆಯುಳ್ಳ ಅವರು ಎಷ್ಟೋ ವರ್ಷಗಳ ಕಾಲ ಬೆಂಗಳೂರಿನ ಖಾದಿ ವಸ್ತ್ರಾಲಯದ ಮೇಲ್ವಿಚಾರಕರಾಗಿದ್ದರು. ನಮ್ಮ ರಾಜಕೀಯ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೆ, ಆ ಮಾರಣ ಹೋಮಕ್ಕೆ ತಮ್ಮ ಪುತ್ರನೊಬ್ಬನನ್ನು ಬಲಿ ನೀಡಿದ ಮಹಾತ್ಯಾಗಿಗಳವರು. ಇಂದು ಹಳ್ಳಿಯಲ್ಲಿಯೇ ನೆಲಸಿ ಆ ಗ್ರಾಮಜೀವನದ ಸರಳತೆ, ಸಹಜತೆ, ಸ್ನೇಹಪರತೆ, ನಿಷ್ಕಪಟತೆಗಳನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ಮಿತ್ರರಿಗೆಲ್ಲ ಆದರ್ಶಪ್ರಾಯರಾಗಿರುವರು. ಇಂಥ ಮಹನೀಯರು ತಮ್ಮ ಜೀವನವನ್ನು ಹಸನುಗೊಳಿಸುವಲ್ಲಿ ಎಂತೆಂತಹ ವ್ಯಕ್ತಿಗಳ ಮನೋಧರ್ಮಕ್ಕೆ ಮಾರುಹೋಗಿದ್ದಾರೆಂಬುದನ್ನು ಅವರು ರಚಿಸಿರುವ 'ಜಗತ್ತಿನ ಮಹದ್ವ್ಯಕ್ತಿಗಳು' (೧೯೫೫), 'ಸತೀ ಕಸ್ತೂರಿ ಬಾ' (೧೯೪೪) ಮತ್ತು 'ಮೌಲಾನಾ

ಅಬುಲ್ ಕಲಾಂ ಆಜಾದ್'(೧೯೫೩ ಎರಡನೆಯ ಮುದ್ರಣ) ಎಂಬ ಪುಸ್ತಕಗಳ ಮೂಲಕ ನಾವು ತಿಳಿಯಬಹುದು.

'ಜಗತ್ತಿನ ಮಹದ್ವ್ಯಕ್ತಿಗಳು' ಎಂಬ ಪುಟ್ಟ ಪುಸ್ತಕವು ಆ ರೂಪದಲ್ಲಿ ೧೯೫೫ರಲ್ಲಿ ಪ್ರಕಟವಾದರೂ, ಅಲ್ಲಿನ ಬರೆಹಗಳು ಬೊಂಬಾಯಿಯ 'ಪ್ರಬೋಧಕ' ಎಂಬ ಕನ್ನಡ ಮಾಸಪತ್ರಿಕೆಯಲ್ಲಿ ಆಗಿಂದಾಗ್ಗೆ ಪ್ರಕಟವಾದುವು ಎಂದು ತಿಳಿದುಬರುತ್ತದೆ. ಇದರಲ್ಲಿ 'ಮಹಾತ್ಮ ಸಾಕ್ರೆಟೀಸ್', 'ಶೂರನಾದ ಬಿಲ್ಲಾಳು', 'ಮಹಾತ್ಮಾ ಟಾಲ್‌ಸ್ಟಾಯ್', 'ಅಮೇರಿಕದ ಕೋಟ್ಯಾಧಿಪತಿ ಹೆನ್ರಿಫೋರ್ಡ್', 'ಸಿದ್ಧಾರ್ಥನು ಬುದ್ಧನಾದುದು', 'ಜೋನ್ ಆಫ್ ಆರ್ಕ್' ಮತ್ತು 'ಮಹಾತ್ಮಾ ಗಾಂಧಿ' ಎಂಬ ಏಳು ಲೇಖನಗಳಿವೆ. ಈ ಪ್ರತಿಯೊಬ್ಬ ವ್ಯಕ್ತಿಯನ್ನೂ ಕುರಿತು ದೊಡ್ಡ ದೊಡ್ಡ ಗ್ರಂಥಗಳನ್ನೇ ಬರೆಯುವಷ್ಟು ಸಾಮಗ್ರಿಯಿದೆ. ಪ್ರಕೃತ ಲೇಖಕರಾದರೋ ಈ ದೇಶ ವಿದೇಶಗಳ ಮಹನೀಯರ ಮಹತ್ವವನ್ನು ಸಾಕಷ್ಟು ಪರಿಣಾಮಕಾರಿಯಾಗಿ ಬಹಳ ಚಿಕ್ಕದಾಗಿ ಪರಿಚಯಮಾಡಿಕೊಟ್ಟಿರುತ್ತಾರೆ. ಈ ಮಾರ್ಗದರ್ಶಕರ ಪಂಕ್ತಿಯಲ್ಲಿ ದೇಶಭಕ್ತರು, ಕೋಟ್ಯಧಿಪತಿಗಳು, ಧರ್ಮಪ್ರವರ್ತಕರು, ತತ್ವಜ್ಞಾನಿಗಳು ಮತ್ತು ಆದರ್ಶ ಸಾಹಿತಿಗಳಿದ್ದಾರೆ. ಒಬ್ಬ ಮನುಷ್ಯನ ಬದುಕು ಸಾರ್ಥಕವಾಗಬೇಕಾದರೆ, ಈ ಹಲವಾರು ಕ್ಷೇತ್ರಗಳಿಗೆ ಸೇರಿದ ಮಹನೀಯರ ಸಿದ್ಧಿ ಸಾಧನೆಗಳು ಸರ್ವದಾ ಆದರ್ಶಪ್ರಾಯವಾದುವು. ಗೊರೂರು ರಾಮಸ್ವಾಮಿ ಅಯ್ಯಂಗಾರರ ಈ ರೇಖಾಚಿತ್ರಗಳನ್ನು ಓದುವಲ್ಲಿ ಅವರ ಶೈಲಿ ಈ ಮಹನೀಯರ ಮಾಹಾತ್ಮ್ಯೆಯನ್ನು ಎಷ್ಟು ಸರಳವಾಗಿ ಪರಿಚಯ ಮಾಡಿಕೊಡುತ್ತದೆಯೆಂಬುದನ್ನು ಗಮನಿಸಬಹುದು. ಸಾಕ್ರಟೀಸನ ಜೀವನವನ್ನು ಚಿತ್ರಿಸುತ್ತ ಲೇಖಕರು ಆತನ ಸರಳ ಜೀವನವನ್ನೂ, ಸತ್ಯಪ್ರಿಯತೆಯನ್ನೂ, ತತ್ವನಿಷ್ಠೆಯನ್ನೂ ಬಹಳ ಪ್ರಭಾವಶಾಲಿಯಾಗಿ ಹೇಳುವರು. ಸಾಕ್ರಟೀಸನ ತರ್ಕಪದ್ಧತಿಯ ವೈಶಿಷ್ಟ್ಯವನ್ನು ತಿಳಿಯಪಡಿಸಿದ ಬಳಿಕ, ಅವನ ಬಗ್ಗೆ ಆತನ ಅಹಿತರು ಆಕ್ಷೇಪಣೆಯೆತ್ತಿ ಅವನನ್ನು ಹೇಗೆ ವಿಚಾರಣೆಗೆ ಗುರಿ ಮಾಡಿದರೆನ್ನುವ ಸನ್ನಿವೇಶ ಸ್ವಾಭಾವಿಕವಾಗಿಯೇ ಮನಕರಗಿಸುವಂತಿದೆ. ಸಾಕ್ರೆಟೀಸನು ನಗುನಗುತ್ತ ವಿಷಪಾನ ಮಾಡಿದ ಘಟನೆಯಂತೂ ಹೃದಯಸ್ಪರ್ಶಿಯಾಗಿದೆ. ವಿಷಪಾನಕ್ಕೆ ಹೆದರದ ಆ ತತ್ವಜ್ಞಾನಿ ಎಷ್ಟು ಅಚಲನಾಗಿದ್ದನೆಂಬುದನ್ನು ಈ ಒಂದೆರಡು ವಾಕ್ಯಗಳಲ್ಲಿ ಹೇಗೆ ಹುದುಗಿಟ್ಟಿರುವರೆನ್ನುವುದನ್ನು ಗಮನಿಸಬಹುದು :

> ಕೊನೆಯ ದಿವಸವು ಬಂದಿತು. ಸಾಕ್ರೆಟೀಸನಿಗೆ ಸ್ವಲ್ಪವಾಗಲಿ ದುಃಖವಿರಲಿಲ್ಲ. ಅವನ ಶಕ್ತಿಯೂ ಶಾಂತಿಯೂ ಒಂದು ವಿಧವಾದ ಜ್ಯೋತಿಯಾಗಿ ತುರಂಗವನ್ನೆಲ್ಲ ವ್ಯಾಪಿಸಿದಂತೆ ತೋರುತ್ತಿದ್ದಿತು. ಆ ದಿನವೆಲ್ಲ ಅವನು ಸ್ನೇಹಿತರೊಂದಿಗೆ ಪ್ರೇಮದಿಂದ ಮಾತನಾಡಿದನು. ಒಂದು ಸಲ ಕ್ರಿಟೋವು "ನಿನ್ನನ್ನು ಹೇಗೆ ಸಮಾಧಿ ಮಾಡಬೇಕು" ಎಂದು ಕೇಳಿದನು. ಸಾಕ್ರೆಟೀಸನು ನಗುತ್ತಾ "ನನ್ನನ್ನು ನೀವು

ಹಿಡಿಯಬಲ್ಲಿರಾದರೆ ಹೇಗೆ ಬೇಕೋ ಹಾಗೆ ಸಮಾಧಿಮಾಡಿ. ನಾನು ಹೋದ ಮೇಲೆ ಉಳಿಯುವುದು ನಾನಲ್ಲ. ಬರಿಯ ದೇಹ ಮಾತ್ರ. ಆದುದರಿಂದ ಸಂತೋಷ ದಿಂದ ಸಂಪ್ರದಾಯವೇನೋ ಅಥವಾ ನಿಮಗೆ ಯಾವುದು ಉತ್ತಮವೆಂದು ತೋರು ವುದೋ ಹಾಗೆ ಮಾಡಿ" ಎಂದನು. (ಪುಟ ೧೭)

ಸಾಯುವ ಹೊತ್ತಿನಲ್ಲಿಯೂ ಸಾಕ್ರಟೀಸನ ಮಾತು ಎಷ್ಟು ತತ್ವಗರ್ಭಿತವಾಗಿದೆ ಯೆಂಬುದನ್ನು ಈ ನಾಲ್ಕು ವಾಕ್ಯಗಳಲ್ಲಿ ಕಾಣಬಹುದು. ಅವನು ಕುರಿತು ಯಾವ ತತ್ವಗ್ರಂಥವನ್ನು ರಚಿಸದೆ ಹೋದರೂ ಅವನ ಸಮಸ್ತ ಜೀವನವೇ ತತ್ವಸೌಧವನ್ನು ನಿರ್ಮಿಸಿತು. ವಿಷಪಾನ ಮಾಡಿಸುವಲ್ಲಿ, ಊಳಿಗದವನ ಅಳುಕನ್ನು ಕಂಡು, ಸಮಾಧಾನ ಹೇಳಿ, "ನಿನಗೂ ಶುಭವಾಗಲಿ. ನೀನು ಹೇಳಿದಂತೆ ಮಾಡುತ್ತೇನೆ" ಎಂದು ನಗುನಗುತ್ತ ಲೋಕಹಿತವನ್ನೇ ಹಾರೈಸಿದ ಹುತಾತ್ಮನವನು! ಈ ಸ್ಥಿತಪ್ರಜ್ಞನ ವ್ಯಕ್ತಿ ಚಿತ್ರವನ್ನು ಲೇಖಕರು ಮುಗಿಸುವ ರೀತಿಯೂ ಸಹ ಉಲ್ಲೇಖನಾರ್ಹವಾಗಿದೆ:

ಸಾಕ್ರೆಟೀಸನು ಪಾಶ್ಚಾತ್ಯ ತತ್ವ ಪ್ರವಾಹಗಳಿಗೆ ಮೂಲಸ್ಥಾನ. ಈಗ ತತ್ವಜ್ಞಾನ ದಿಂದ ಮೋಕ್ಷವನ್ನು ಪಡೆದಿರುವವರೆಲ್ಲರೂ ಸಾಕ್ರೆಟೀಸನಿಗೆ ಋಣಿಗಳು. ಸಾಕ್ರೆಟೀಸನ ಕ್ರಮವನ್ನನುಸರಿಸಿ ಆತನ ಬೋಧನೆಯಿಂದ ಮುಂದುವರಿದು ಪ್ಲೇಟೋ ತಾನೆ ಒಂದು ಘನ ತತ್ವಪ್ರಪಂಚವನ್ನು ನಿರ್ಮಿಸಿದನು. ತತ್ವಾನ್ವೇಷಣ ಎಲ್ಲಿಯವರೆಗೆ ಜಗತ್ತಿನಲ್ಲಿ ನಡೆಯುವುದೋ ಅಲ್ಲಿಯವರೆಗೆ ಸಾಕ್ರೆಟೀಸನ ಹೆಸರು ಪ್ರಪಂಚದಲ್ಲಿ ಶಾಶ್ವತವಾಗಿರುವುದು. (ಪುಟ ೧೯)

ಸಾಕ್ರಟೀಸನ ಜೀವನಸಾರವೆಲ್ಲ ಈ ಮಾತುಗಳಲ್ಲಿ ಮಿಡಿಯುವಂತಿದೆ.

ಇದೇ ಸಾಲಿನಲ್ಲಿ ನಿಲ್ಲಬಲ್ಲ ಮತ್ತೊಂದು ದೊಡ್ಡ ಚೇತನ ರಷ್ಯಾ ದೇಶದ ಸುಪ್ರಸಿದ್ಧ ಮಹಾಪುರುಷನಾದ ಟಾಲ್‌ಸ್ಟಾಯ್. ಲೇಖಕರು ಈ ಮಹಾನುಭಾವನ ಜೀವನ ವನ್ನು ಹಂತಹಂತವಾಗಿ ಪರಿಚಯ ಮಾಡಿಕೊಟ್ಟು ಆತನು ತನ್ನ ಕೃತಿಗಳ ನಿರ್ಮಾಣ ವನ್ನು ಯಾವ ಹಿನ್ನೆಲೆಯಲ್ಲಿ ರಚಿಸಿದನೆಂಬುದರ ಕಡೆಗೆ ನಮ್ಮ ಲಕ್ಷ್ಯವನ್ನು ಸೆಳೆಯು ತ್ತಾರೆ. ಟಾಲ್‌ಸ್ಟಾಯಿಗೆ ಬಡವರೆಂದರೆ ಅಚ್ಚುಮೆಚ್ಚು. ರಷ್ಯಾದೇಶದ ರೈತರ ಮಧ್ಯೆ ಆತನು ತನ್ನ ಜೀವನದ ಧ್ಯೇಯವನ್ನು ಕಂಡುಕೊಂಡ. ರೈತರಲ್ಲಿ ನೂತನ ಪ್ರಜ್ಞೆಯನ್ನು, ಜಾಗೃತಿಯನ್ನು ಉಂಟುಮಾಡಿದ ಟಾಲ್‌ಸ್ಟಾಯಿಯ ಒಂದೊಂದು ಪ್ರಯತ್ನವನ್ನೂ ರೇಖಾರೂಪದಲ್ಲಿ ಇಲ್ಲಿ ಬಿಡಿಸಿ ತೋರಿದ್ದಾರೆ. ಟಾಲ್‌ಸ್ಟಾಯಿಯ ಜೀವನವು ಸಹ ಅಷ್ಟೇ ಕುತೂಹಲಕಾರಿಯಾದುದು.

ಆತನು ಯೋಧರಲ್ಲಿ ಯೋಧ; ಸಾಹಿತಿಗಳಲ್ಲಿ ಸಾಹಿತಿ; ವಿಚಾರಪರರಲ್ಲಿ ವಿಚಾರ ಪರ; ಬಡವರಲ್ಲಿ ಬಡವ; ತ್ಯಾಗಿಗಳಲ್ಲಿ ತ್ಯಾಗಿ; ರೈತರಲ್ಲಿ ರೈತ. ಪ್ರಕೃತಿಯ ಸೌಂದರ್ಯೋಪಾಸಕನೂ ಹೌದು; ಮಾನವರ ಗುಣಗ್ರಾಹಿಯೂ ಹೌದು. ಟಾಲ್

ಸ್ಟಾಯಿಯ ಬರೆವಣಿಗೆಯಲ್ಲಿ ಕಂಡುಬರುವ ಜೀವನದರ್ಶನ ಮಹೋನ್ನತವಾದುದು. ಆತನು ಧರ್ಮವನ್ನು ಕಂಡುಕೊಂಡ ಕ್ರಮವಂತೂ ಹೇಳಲಸದಳವಾದದ್ದು. "ಎಂದಿಗೂ ಕೋಪಗೊಳ್ಳಬೇಡ, ವ್ಯಭಿಚಾರ ಮಾಡಬೇಡ, ಆಣೆ ಮಾಡಬೇಡ. ಆತ್ಮಸಂರಕ್ಷಣೆಗಾಗಿ ಪಶುಬಲವನ್ನು ಉಪಯೋಗಿಸಬೇಡ. ಯುದ್ಧ ಮಾಡಬೇಡ." (ಪುಟ ೪೩) ಈ ಪಂಚ ಶೀಲಗಳನ್ನು ಅನುಸರಿಸಿದ್ದೇ ಆದರೆ ಪ್ರಪಂಚಕ್ಕೆ ಎಂದಿಗೂ ಭಯವಿಲ್ಲ. ಕಡೆಕಡೆಗೆ ಈ ತೇಜಸ್ವಿಯು ನಮ್ಮ ಮಹರ್ಷಿಗಳಂತೆ ಎಲ್ಲವನ್ನೂ ತ್ಯಜಿಸಿ ಕಣ್ಮರೆಯಾಗುವನು. ಆತನ ಬಾಳಿನ ಆಳವನ್ನು ಲೇಖಕರು ಕಡೆಯಲ್ಲಿ ಹೀಗೆ ನಿರ್ದೇಶಿಸಿದ್ದಾರೆ:

> ಟಾಲ್‌ಸ್ಟಾಯಿಯು ಶ್ರೀಮಂತನಾಗಿ ಹುಟ್ಟಿ, ಬಡವರಂತೆ ಬದುಕಿ, ದರಿದ್ರರಂತೆ ಸತ್ತುಹೋದನು. ಆತನ ಪ್ರಭಾವವು ರಷ್ಯಾ ದೇಶದಲ್ಲಿ ಅಲ್ಲದೆ ಪ್ರಪಂಚದಲ್ಲೆಲ್ಲ ಪಸರಿಸಿದೆ. ಅನ್ಯಾಯ, ಬಡವರ ಹಿಂಸೆ, ಅಸ್ವಾತಂತ್ರ್ಯ ಮುಂತಾದವುಗಳಿಗಾಗಿ ಹೊಡೆದಾಡುವವರಿಗೆಲ್ಲಾ ಟಾಲ್‌ಸ್ಟಾಯಿಯ ಜೀವನವೂ ಚರಿತ್ರೆಯೂ ಆದರ್ಶವಾಗಿವೆ. (ಪುಟ ೫೧)

ಕೋಟ್ಯಧಿಪತಿಯಾದ ಹೆನ್ರಿ ಫೋರ್ಡ್‌ನ ಜೀವನದ ಆಸ್ತಿಪಾಸ್ತಿಗಳಿಗಾಗಿ ಪ್ರಪಂಚ ಬೆರಗಾಗಿದ್ದರೆ, ಪ್ರಕೃತ ಲೇಖಕರು ಅವನ ಕಾರ್ಯದಕ್ಷತೆಗೆ ತಲೆದೂಗುವರು. ಆತನು ಅಮೆರಿಕದ ಹಳ್ಳಿ ಹಳ್ಳಿಗಳಲ್ಲಿ ಯಂತ್ರಗಳ ಬಿಡಿಭಾಗಗಳನ್ನು ನಿರ್ಮಿಸಲು ತೊಡಗುವ ಯೋಜನೆಯನ್ನೂ, ಅದರ ಸಾರ್ಥಕ್ಯವನ್ನೂ ಬಹಳ ಚೆನ್ನಾಗಿ ವಿವರಿಸಿರುವರು. ಕೈಗಾರಿಕೆಯ ಪ್ರಗತಿಯಿಂದ ದೇಶಕ್ಕೆ ಎಂತಹ ಭವಿಷ್ಯವಿದೆಯೆಂಬುದನ್ನು ಹೆನ್ರಿ ಫೋರ್ಡನು ಕೈಕೊಂಡ ಹಲವಾರು ಕಾರ್ಯಕ್ರಮಗಳನ್ನು ವಿವರಿಸುವುದರ ಮೂಲಕ ಸರಳವಾಗಿ ತಿಳಿಸುವರು. ಒಂದು ಕಡೆ ಕೈಗಾರಿಕೆ, ಮತ್ತೊಂದು ಕಡೆ ಕೃಷಿ. ಈ ಎರಡನ್ನೂ ಈ ಪಾಶ್ಚಾತ್ಯ ಪ್ರಯೋಗಪಟು ಹೇಗೆ ಸಮನ್ವಯ ಮಾಡಿದನೆಂಬುದನ್ನು ತೋರಿಸಿಕೊಡುವರು. ಈ ಮೂಲಕ ಪ್ರಗತಿಪಥದಲ್ಲಿ ಅಡಿಯಿಡುತ್ತಿರುವ ನಮ್ಮ ಭರತಖಂಡ ಹೇಗೆ ಪಾಠ ಕಲಿಯಬಹುದೆಂಬುದನ್ನು ಮನವರಿಕೆ ಮಾಡಿಕೊಡುವರು.

ಯಾವ ವಿದೇಶದ ನಿದರ್ಶನವನ್ನೇ ತೆಗೆದುಕೊಂಡರೂ, ಲೇಖಕರ ಮನಸ್ಸು ತಮ್ಮ ತಾಯ್ನಾಡಿಗೆ ಅದರಿಂದ ಏನು ಪ್ರಯೋಜನವಾದೀತೆಂಬುದರ ಕಡೆಗೇ ಒಲಿಯುವುದು. ಫೋರ್ಡನ ಮಹತ್ಸಾಧನೆಗಳನ್ನೆಲ್ಲ ವಿವರಿಸಿದ ಬಳಿಕ, ಕಡೆಗೆ ಅವರ ಎಚ್ಚರಿಸುವ ನುಡಿಗಳು ಇವು:

> ಭಾರತದಲ್ಲಿಯೂ ಸಣ್ಣ ಸಣ್ಣ ಹಿಡುವಳಿಗಳನ್ನು ಇಲ್ಲದಂತೆ ಮಾಡಬೇಕೆಂಬ ಚಳುವಳಿ ಇದೆ. ಅಮೆರಿಕದ ಅನುಭವ ನಮಗೆ ಉಪಯುಕ್ತವಾಗಬಹುದು. ಹಳೆಯ ಸಂಪ್ರದಾಯಗಳು ಅಮೆರಿಕದ ಅಭಿವೃದ್ಧಿಯನ್ನೇ ತಡೆದವೆಂದು ಫೋರ್ಡ್ ಹೇಳುತ್ತಿದ್ದನು. ಕೇವಲ ಮುನ್ನೂರು ವರ್ಷ ಮಾತ್ರ ವಯಸ್ಸಾಗಿರುವ ಅಮೆರಿಕದ

ಏಳಿಗೆಗೆ ಹಳೆಯ ಸಂಪ್ರದಾಯ ಅಡ್ಡಿಯಾಗುವುದಾದರೆ ನಾಲ್ಕಾರು ಸಾವಿರ ವರುಷಗಳ ಇತಿಹಾಸವುಳ್ಳ ಸಾಧಾರಣವಾಗಿಯೇ ಸಂಪ್ರದಾಯಶರಣವಾದ ಭಾರತದ ಗತಿ ಏನು?

ಭಾರತದ ಏಳಿಗೆ ಇರುವುದು, ಎಲ್ಲ ಕ್ಷೇತ್ರದಲ್ಲಿಯೂ ಹೊಸ ಹೊಸ ಪ್ರಯೋಗದಲ್ಲಿಯೇ. (ಪುಟ ೬೩)

ಪಾಶ್ಚಾತ್ಯ ಮಹಾಪುರುಷನನ್ನು ಮೆಚ್ಚುವುದರಲ್ಲಿಯೇ ಲೇಖಕರ ಮನಸ್ಸು ಸಂತೃಪ್ತವಾಗದೆ, ಆ ಮೂಲಕ ಮಾತೃಭೂಮಿಯ ಮುನ್ನಡೆಯನ್ನು ಆಲೋಚಿಸಲೆಳಸುವುದು ಅವರ ರಾಷ್ಟ್ರಪ್ರೇಮದ ಸಂಕೇತವೇ ಸರಿ.

ಫ್ರಾನ್ಸ್ ದೇಶದ ಅದ್ವಿತೀಯ ತೇಜಸ್ವಿನಿಯಾದ ಜೋನ್ ಆಫ್ ಆರ್ಕ್ ಎಂಬಾಕೆಯ ದೇಶಭಕ್ತಿಯ ಚಿತ್ರಣದಲ್ಲಿ ಲೇಖಕರ ಕುಶಲತೆಯನ್ನು ಕಂಡು ಆಶ್ಚರ್ಯವಾಗದಿರದು. ವೀರಾಧಿವೀರರು ಕಂಗೆಟ್ಟಿದ್ದ ಸಂದರ್ಭದಲ್ಲಿ, ಈ ಹಳ್ಳಿಯ ಮುಗ್ಧ ಬಾಲೆ ಫ್ರಾನ್ಸ್ ದೇಶದ ಸೇನೆಯನ್ನೇ ನಡೆಸಿ ಜಗತ್ತಿಗೆ ವಿಸ್ಮಯವನ್ನುಂಟುಮಾಡಿದ ಸಂಗತಿಯನ್ನು ಬಹಳ ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಮಾಡಿಕೊಟ್ಟಿರುವರು. ಅಂದಿನ ರಾಜಕೀಯ ಪರಿಸ್ಥಿತಿ, ಐತಿಹಾಸಿಕ ಸಂಗತಿಗಳು ಮೊದಲಾದವುಗಳನ್ನು ಜೋನಳ ಮಹತ್ಕಾರ್ಯಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಹೇಳಿ, ಆಕೆ ವೀರರಮಣಿಯಾಗಿ, ವೀರಾವೇಶದಿಂದ, ತನ್ನ ಅಂತರಂಗದ ವಾಣಿಯ ಪ್ರೇರಣೆಯ ಮೇರೆಗೆ ಹೇಗೆ ಕಾಳಗಗಳಲ್ಲಿ ಮುನ್ನುಗ್ಗಿದಳೆಂಬುದು ಸತ್ಯವೋ ಸೋಜಿಗವೋ ಎಂದು ಪ್ರಶ್ನೆ ಕೇಳುವಂತೆ ಚಿತ್ರಿತವಾಗಿದೆ. ಆದರೇನು? ನಾಡಿನ ನಾಯಕರಿಗೆ ಒದಗುವ ದುರಂತವೇ ಆಕೆಯ ಪಾಲಿಗೂ ಒದಗಿತು. ಆಕೆಯನ್ನು ಅತಿಮಾನುಷಳೆಂದು ಭಾವಿಸಿದ ಜನ, ಅವಳನ್ನು "ದೈವದ್ರೋಹಿ, ಮಾಟಗಾತಿ, ವಿಗ್ರಹಾರಾಧಕಿ" ಎಂಬ ಆಪಾದನೆಗಳಿಗೆ ಗುರಿಮಾಡಿ, ಕೈಯಾರೆ ಬೆಂಕಿ ಇಟ್ಟು ಸುಟ್ಟರು. ಅವಳ ಭಸ್ಮವೂ ಸಿಗದಂತೆ ಇಂಗ್ಲಿಷರು ಅದನ್ನು ನದಿಯಲ್ಲಿ ಕದಡಿದರಂತೆ. ಇಂಥ ವೀರನಾರಿಯ ಬಗ್ಗೆ ಲೇಖಕರು ಕಡೆಯಲ್ಲಿ ಹೇಳಿರುವ ಒಂದೆರಡು ನುಡಿಗಳು ಅವಳ ಹೆಸರಿನ ಅಮರತ್ವವನ್ನು ಸಾರಿ ಹೇಳುವಂತಿವೆ:

ಜೋನಳು ಫ್ರಾನ್ಸಿನಲ್ಲಿ ಎಬ್ಬಿಸಿದ್ದ ಉತ್ಸಾಹದ ಕಿಡಿ ಅವಳೊಡನೆ ಆರಲಿಲ್ಲ. ಅವಳು ಹುತಾತ್ಮಳಾದ ಹತ್ತೊಂಬತ್ತು ವರ್ಷಗಳೊಳಗೆ ಫ್ರೆಂಚರು ಇಂಗ್ಲಿಷರನ್ನು ಫ್ರಾನ್ಸಿನಿಂದ ಓಡಿಸಿದರು. ಯಾರಿಗಾಗಿ ಅವಳು ಪ್ರಾಣವನ್ನು ಕೊಟ್ಟಳೋ ಆ ಚಾರಲ್ಸನು ನಿರುಪದ್ರವನಾಗಿ ಸಿಂಹಾಸನವನ್ನೇರಿದನು. ಆಗ ಚಾರಲ್ಸನು ಪಶ್ಚಾತ್ತಾಪದಿಂದಲೋ ಅಥವಾ ಬಂದಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿಕೊಳ್ಳುವ ಉದ್ದೇಶದಿಂದಲೋ ಜೋನಳ ವಿಚಾರಣೆಯನ್ನು ಮತ್ತೆ ನಡೆಸಿದನು. 'ರೂಯಿನ್'ನಲ್ಲಿ ಆಗ ಬದುಕಿದ್ದವರೆಲ್ಲ ಬಂದು ಸಾಕ್ಷಿ ಹೇಳಿದರು. ಹಿಂದೆ ಅವಳಿಗೆ ವಿರೋಧಿಗಳಾಗಿದ್ದವರೆಲ್ಲ ಈಗ ಅವಳ ಪರವಾಗಿಯೇ ಸಾಕ್ಷಿ ಕೊಟ್ಟರು. ಅದರ

ಫಲವಾಗಿ ಕ್ರಿ.ಶ. ೧೪೫೬ರಲ್ಲಿ ಜೋನಳು ನಿರಪರಾಧಿಯೆಂದು ಸಾರಲಾಯಿತು. ಅಂದಿನಿಂದ ಜೋನಳು ಫ್ರಾನ್ಸಿನ ಒಬ್ಬ ರಕ್ಷಾದೇವತೆಯೆಂದು ಪರಿಗಣಿಸಲ್ಪಟ್ಟಳು. ಪೋಪರು ಅವಳಿಗೆ 'ಸೇಂಟ್ ಜೋನ್ ಆಫ್ ಆರ್ಕ್' ಎಂದು ನಾಮಕರಣಮಾಡಿ ಚರ್ಚು ಅವಳ ಸದ್ವೃತ್ತಿಯನ್ನು ಒಪ್ಪಿತೆಂಬ ಮುದ್ರೆಯನ್ನು ಹಾಕಿದರು. (ಪುಟ ೧೦೨)

ಎಲ್ಲ ಹುತಾತ್ಮರ ಹುರುಳೂ ಹೀಗೆಯೇ. ಇದ್ದಾಗ ಅವರೊಂದಿಗೆ ಗುದ್ದಾಡಿದವರು, ಸತ್ತಾಗ ಬಾಯಿತುಂಬ ಕೊಂಡಾಡುವರು. ಏನೇ ಇರಲಿ! ಸಾತ್ವಿಕ ಶಕ್ತಿಗೆ ಎಂದಿಗಾದರೂ ಜಯ ಲಭಿಸುವುದೆಂಬ ಭರವಸೆಯಾದರೂ ದೊರೆಯುವುದು ಮಹಾಭಾಗ್ಯ.

ಈ ಪುಟ್ಟ ಪುಸ್ತಕದಲ್ಲಿ ಬರುವ 'ಮಹಾತ್ಮಾ ಗಾಂಧಿ'ಯವರ ಜೀವನ ಪರಿಚಯ ಲೇಖಕರ ಸಂಗ್ರಹ ಕಲೆಗೆ ಒಂದು ಸಂಕೇತವೆನ್ನಬಹುದು. ಕೇವಲ ಇಪ್ಪತ್ತೆರಡು ಪುಟಗಳಲ್ಲಿ ಗಾಂಧೀಜಿಯವರ ಅಖಂಡ ಜೀವನವನ್ನು ಅಡಗಿಸಿಟ್ಟಿರುವರು. ಅಂತೆಯೇ ಸಿದ್ಧಾರ್ಥನ ಔದಾರ್ಯವನ್ನು ಸಹ ಪರಿಣಾಮಕಾರಿಯಾಗಿ ಚಿತ್ರಿಸಿರುವರು. ಒಟ್ಟಿನಲ್ಲಿ, ಈ ಪುಟ್ಟ ಪುಸ್ತಕದಲ್ಲಿ ಏಳು ಜನರ ವ್ಯಕ್ತಿಚಿತ್ರಗಳು ಯಶಸ್ವಿಯಾಗಿ ಮೂಡಿಬಂದಿವೆ.

೨

ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಕೇಳಿ ತಲೆದೂಗುವ ಜನ, ಆತನ ಸತಿಯಾದ ಕಸ್ತೂರಿಬಾ ಅವರ ಜೀವನದ ವಿವರಗಳನ್ನು ಅಷ್ಟೇ ಚೆನ್ನಾಗಿ ತಿಳಿದಿರುವರೆಂದು ಹೇಳುವಂತಿಲ್ಲ. ಆಕೆಯ ವ್ಯಕ್ತಿತ್ವವು ಗಾಂಧೀಜಿಯವರ ವ್ಯಕ್ತಿತ್ವದ ದೇದೀಪ್ಯಮಾನವಾದ ಅಮಿತ ಪ್ರಕಾಶದಲ್ಲಿ ಸಾಕಷ್ಟು ಗಮನಕ್ಕೆ ಬಾರದೆಹೋದುದೇ ಇದಕ್ಕೆ ಕಾರಣ. ಆದರೆ ಗಾಂಧೀಜಿಯವರ ಆತ್ಮಕಥೆಯನ್ನು ಓದಿದವರಿಗೆ, ಅವರ ಬದುಕಿನ ನಿರ್ಮಾಣದಲ್ಲಿ ಕಸ್ತೂರಿಬಾ ಎಂತಹ ಮುಖ್ಯ ಪಾತ್ರವಹಿಸಿದ್ದಾರೆಂಬುದು ಸ್ವವಿದಿತವಾಗುತ್ತದೆ. ಗಾಂಧೀಜಿಯವರ ಅಹಿಂಸಾವ್ರತಾನುಷ್ಠಾನಕ್ಕೆ ಕಸ್ತೂರಿ ಬಾಯಿಯೇ ಮಾರ್ಗದರ್ಶಕಳೆಂಬುದನ್ನು ನಾವು ಮರೆಯುವಂತಿಲ್ಲ. ಗಾಂಧೀಜಿಯವರ ಮಹತ್ವ ದಿನದಿನಕ್ಕೆ ಬೆಳೆದಂತೆಲ್ಲ ಆಕೆ ಅವರ ನಡೆ ನುಡಿಗಳನ್ನು ನೆರಳಿನಂತೆ ಅನುಸರಿಸಿ ಮಹಾಸತಿಯೆನ್ನಿಸಿದಳು. ಆಕೆಯ ಬಗ್ಗೆ ಪ್ರತ್ಯೇಕವಾದ ಕೃತಿಗಳಾವುವೂ ಇಲ್ಲದ ಕಾಲದಲ್ಲಿ, ಆಕೆಯ ಮರಣದ ತರುಣದಲ್ಲಿ ಕನ್ನಡದಲ್ಲಿ ಒಂದೆರಡು ಕೃತಿಗಳು ಪ್ರಕಟವಾದುವು. ಅವುಗಳಲ್ಲಿ ಗೊರೂರರ 'ಸತೀ ಕಸ್ತೂರ ಬಾ' ಒಂದು, ಸಿದ್ದವ್ವನಹಳ್ಳಿ ಕೃಷ್ಣಶರ್ಮರ 'ಕಸ್ತೂರಿ ಬಾ' ಇನ್ನೊಂದು. ಲೇಖಕರಿಬ್ಬರೂ ನಮ್ಮ ನಾಡಿನ ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಹೆಸರುವಾಸಿಯಾದವರು. ಇಂಥವರು ಈ ಎಲೆಮರೆಯ ಹೂವಿನ ಹಿರಿಮೆಯನ್ನು ಬಹಳ ಸಹಜವಾಗಿ ಚಿತ್ರಿಸಿರುತ್ತಾರೆ. ಪ್ರಕೃತದಲ್ಲಿ ಗೊರೂರರ ಪುಸ್ತಕದ ಪ್ರಾಶಸ್ತ್ಯವೇನು ಎನ್ನುವುದನ್ನು ಇಲ್ಲಿ ಪರಿಶೀಲಿಸಿದೆ.

ಗೊರೂರರು ಕಸ್ತೂರಿ ಬಾ ಅವರ ಮರಣಕ್ಕಾಗಿ ಕಂಬನಿಯನ್ನು ಸಮರ್ಪಿಸುವುದರಿಂದಲೇ ತಮ್ಮ ಪುಸ್ತಕವನ್ನು ಪ್ರಾರಂಭಿಸುತ್ತಾರೆ. ಆಕೆಯು ಆಗಾಖಾನರ ಸೆರೆಮನೆಯಲ್ಲಿ ಸತ್ತ ಸುದ್ದಿಯಿಂದ ದೇಶವಿದೇಶಗಳೇ ದುಃಖತಪ್ತವಾಗಿದ್ದ ಆ ದುರ್ದಿನದಂದು ಲೇಖಕರ ಮನಸ್ಸು ಹೇಗೆ ಮಿಡಿದಿದೆಯೆನ್ನುವುದನ್ನು ಇಲ್ಲಿ ಮನಗಾಣಬಹುದು. ಹೆಸರಿಗೇನೋ ಅಂದು ಪರಮ ಪವಿತ್ರವಾದ ಶಿವರಾತ್ರಿ! ಆದರೆ ನಾಡಿನ ನಾಯಕನ ಪತ್ನಿಯ ಮರಣದಿಂದ ಎಲ್ಲರ ಮನಸ್ಸೂ ಕಲಕಿಹೋಗಿದೆ. ಶ್ರೀಮತಿ ಕಸ್ತೂರಿ ಬಾ ಭಾರತದ ಮಹಾ ಸಾಧ್ವಿಯರಂತೆ ತಮ್ಮ ಪತಿಯ ಆದರ್ಶವನ್ನೇ ತ್ರಿಕರಣಪೂರ್ವಕವಾಗಿ ಅನುಸರಿಸಿ ಅಮರರಾದವರು. ಆಕೆಗೆ ಬೇರಾವ ಪಟ್ಟವೂ ಇಲ್ಲ. ಆದರೇನು? ಲೇಖಕರೇ ಹೇಳುವಂತೆ "ಶ್ರೀರಾಮಚಂದ್ರನನ್ನು ಸೀತೆ ಅನುಸರಿಸಿದಂತೆ ಬಾರವರು ಗಾಂಧಿಯನ್ನು ಅನುಸರಿಸಿದರು. ಆಂಜನೇಯ ರಾಮನ ಸೇವೆ ಮಾಡಿದಂತೆ ಗಾಂಧಿಯವರ ಸೇವೆ ಮಾಡಿದರು. ಕೊನೆಗೆ ಸೌಭಾಗ್ಯವತಿಯಾಗಿ ಸುಮಂಗಲಿಯಾಗಿ ಗಂಡನ ತೊಡೆಯ ಮೇಲೆ ತಲೆಯಿಟ್ಟುಕೊಂಡು ನಗುನಗುತ್ತಾ ಪರಮಾತ್ಮನ ಸಾನ್ನಿಧ್ಯವನ್ನು ಸೇರಿದರು" (ಪು ೨). ಕಸ್ತೂರಿ ಬಾ ಅವರ ಕೃತಾರ್ಥವಾದ ಈ ಬಾಳಿನ ಒಂದೊಂದು ಪುಟವನ್ನೂ ಮುಂದೆ ತಮ್ಮ ಪುಸ್ತಕದಲ್ಲಿ ಬಹಳ ಸರಳವಾಗಿ ಚಿತ್ರಿಸಿರುವರು.

ಕಸ್ತೂರಿ ಬಾ ಮತ್ತು ಗಾಂಧೀಜಿಯವರ ದಾಂಪತ್ಯ ಜೀವನದ ಪ್ರಾರಂಭಕಾಲ ಬಹು ವಿಸ್ಮಯಕಾರಿಯಾದದ್ದು. ಓದು ಬರೆಹ ಬಾರದ ಆ ಶ್ರೀಮಂತ ಕುವರಿಯನ್ನು ಮೋಹನಲಾಲ ಕರಮಚಂದ ಗಾಂಧಿಯವರು ಮೊದಮೊದಲು ಸ್ವಲ್ಪ ನಿಷ್ಠುರವಾಗಿಯೇ ನಡೆಸಿಕೊಂಡಿದ್ದುಂಟು. ಅದರಲ್ಲಿಯೂ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದಾಗ ಆಕೆಯನ್ನು ಮಿತಿಮೀರಿ ದಂಡಿಸಿದ್ದನ್ನೂ ನಾವು ಬಲ್ಲೆವು. ವಾಸ್ತವಿಕವಾಗಿ ಆ ಬಿರುಗಾಳಿಯ ಮಧ್ಯೆ ಕಸ್ತೂರಿ ಬಾ ಅವರ ಸಹನೆ ಗಾಂಧೀಜಿಯವರಿಗೆ ಗೋಚರವಾಗಿ ಆಕೆಯ ಬಗ್ಗೆ ಅವರಿಗೆ ಅದ್ವಿತೀಯವಾದ ಆದರ ಮೂಡಿತು. ಆ ಘಟನಾಪೂರ್ಣವಾದ ದಿನಗಳನ್ನು ಲೇಖಕರು ಬಹಳ ಮಾರ್ಮಿಕವಾಗಿ ಚಿತ್ರಿಸಿರುತ್ತಾರೆ. ಕಸ್ತೂರಿ ಬಾ ಅವರಿಗೂ ಗಾಂಧೀಜಿಗೂ ಮಾತುಕತೆಗಳು ಜೋರಾಗಿ ನಡೆದು ಒಬ್ಬರನ್ನೊಬ್ಬರು ಪ್ರತಿಭಟಿಸಿ ನಿಂತ ಕ್ಷಣಗಳನ್ನು ಉಲ್ಲೇಖಿಸಿ, ಕಡೆಗೆ ಪರಸ್ಪರ ಪಶ್ಚಾತ್ತಾಪದಲ್ಲಿ ಮುಗಿದ ಸಂದರ್ಭವನ್ನು ಲೇಖಕರು ಗಾಂಧೀಜಿಯವರ ಮಾತಿನಲ್ಲಿಯೇ ಪರಿಚಯ ಮಾಡಿಕೊಡುವರು. "ಅದ್ವಿತೀಯವಾದ ಸಹನೆಯಿಂದ ಹೆಂಡತಿಯೇ ಯಾವಾಗಲೂ ಜಯಶಾಲಿಯಾಗಿದ್ದಾಳೆ" (ಪುಟ ೭) ಎಂಬ ಗಾಂಧೀಜಿಯವರ ಮಾತಿಗಿಂತಲೂ ಬಾ ಅವರಿಗೆ ಬೇರೆ ಮನ್ನಣೆ ಅಗತ್ಯವೆ?

ಗಾಂಧೀಜಿಯವರು ವ್ರತ ನಿಯಮಗಳಲ್ಲಿ ಎಷ್ಟರಮಟ್ಟಿಗೆ ನಿಷ್ಠರೋ ಆಕೆಯೂ ಅಷ್ಟೇ ಉಗ್ರ ತಪಸ್ವಿನಿ. ದಕ್ಷಿಣ ಆಫ್ರಿಕಾದಲ್ಲಿ ಒಮ್ಮೆ ಆಕೆ ಅನಾರೋಗ್ಯಕ್ಕೆ ಗುರಿಯಾದಾಗ ತುಂಬ ಕಠಿನವಾದ ಪಥ್ಯವನ್ನು ಮಾಡಬೇಕಾಯಿತು. ಕಸ್ತೂರಿ ಬಾ ಗಂಡನ ಮಾತಿಗೆ ಚಾಚೂ ತಪ್ಪದೆ ನಡೆದುಕೊಂಡರು. ಗಾಂಧೀಜಿಯವರು ಬ್ರಹ್ಮಚರ್ಯಪರಿಪಾಲನೆ ಮಾಡ

ತೊಡಗಿದಾಗ ಆಕೆ ನಡೆದುಕೊಂಡ ರೀತಿಯನ್ನು ಕಂಡು ಗಾಂಧೀಜಿ ಬೆರಗಾದರು. ಆ ದಂಪತಿಗಳು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ತಮ್ಮ ಬದುಕನ್ನು ದೇಶಸೇವೆಗಾಗಿ ಮೀಸಲಿಟ್ಟ ಬಳಿಕ ಇಬ್ಬರೂ ಪುಟಕ್ಕಿಟ್ಟ ಮಿಸುನಿಗಳಂತಾದರು.

ಗಾಂಧೀಜಿಯವರು ಆಫ್ರಿಕಾದಲ್ಲಿ ಫೀನಿಕ್ಸ್ ಆಶ್ರಮವನ್ನು ಸ್ಥಾಪಿಸಿ ಅಲ್ಲಿನ ಭಾರತೀಯರ ಮೇಲ್ಮೆಗಾಗಿ ಶ್ರಮಿಸತೊಡಗಲು, ಅವರ ಹೆಗಲೆಣೆಯಾಗಿ ನಿಂತು ದುಡಿದ ಮಹಾಸಾಧ್ವಿ ಕಸ್ತೂರಿ ಬಾ. ಸೆರೆಮನೆಗೆ ಹೋಗಲೂ ಹೆದರಿದವರಲ್ಲ. ಗಾಂಧೀಜಿಯವರು ಇತರ ಸ್ತ್ರೀಯರನ್ನು ಕುರಿತು ಚಳುವಳಿಗೆ ಸೇರುವಂತೆ ಹೇಳಿದರೂ ತಮ್ಮ ಪತ್ನಿಗೆ ತಾವಾಗಿ ಹೇಳಿರಲಿಲ್ಲ. ಆಗ ಕಸ್ತೂರಿಬಾ ತಾವಾಗಿಯೇ ಮುಂದೆ ಬಂದು "ಇವನ್ನೆಲ್ಲಾ ನೀವು ಯಾಕೆ ನನಗೆ ಹೇಳುವುದಿಲ್ಲ. ನನಗೆ ನೋವಾಗುತ್ತದೆ. ಸೆರೆಮನೆಗೆ ಹೋಗಲು ನನಗೆ ಅರ್ಹತೆಯಿಲ್ಲವೇ ? ಇತರರು ಯಾವ ಮಾರ್ಗದಲ್ಲಿ ಹೋಗುವಂತೆ ನೀವು ಬಯಸುತ್ತೀರೋ ನಾನೂ ಆ ಮಾರ್ಗವನ್ನೆ ಹಿಡಿಯುತ್ತೇನೆ" (ಪುಟ ೧೪) ಎಂದರು.

ಗಾಂಧೀಜಿಯವರು ತಾವು ಗಂಡನಾಗಿ ಹೆಂಡತಿಗೆ ಬಲಾತ್ಕರಿಸುವುದು ಉಚಿತವಲ್ಲವೆಂದೂ, ಒಂದು ವೇಳೆ ಆಕೆ ಸೆರೆಮನೆಗೆ ಬೆದರಿ ಹಿಂತೆಗೆದರೆ ಅದು ತಮಗೆ ತಕ್ಕುದಲ್ಲವೆಂದೂ ವ್ಯಕ್ತಪಡಿಸಲು, ಕಸ್ತೂರಿ ಬಾ ಆಡಿದ ಮಾತುಗಳು ಎಂದೆಂದಿಗೂ ಸ್ಮರಣಾರ್ಹವಾದುವು. "ನಾನು ಸೆರೆಗೆ ಹೋಗಿ ಕ್ಷಮಾಪಣೆ ಕೊಟ್ಟು ಹೊರಗೆ ಬಂದರೆ ನೀವು ನನ್ನ ಮುಖವನ್ನೇ ನೋಡಬೇಡಿ. ನೀವೂ ಮಕ್ಕಳೂ ಸಹಿಸುವ ಕಷ್ಟ ನಾನೂ ಸಹಿಸುತ್ತೇನೆ. ಖಂಡಿತ ಚಳುವಳಿ ಸೇರುತ್ತೇನೆ" (ಪುಟ ೧೪) ಎಂದರು. ಆಕೆ ಆಡಿದಂತೆಯೇ ಗಾಂಧೀಜಿಯವರು ಆಫ್ರಿಕಾದಲ್ಲಿ ಪಟ್ಟ ಯಾತನೆಗಳಲ್ಲಿ ನಗುನಗುತ್ತ ತಾವೂ ಭಾಗಿಯಾದರು. ಕಸ್ತೂರಿಬಾ ಅವರ ವ್ಯಕ್ತಿತ್ವ ಯಾವ ರೀತಿ ತಮ್ಮ ಪತಿಯ ಸಾನ್ನಿಧ್ಯದಲ್ಲಿ ವಿಕಸಿತವಾಯಿತೆಂಬುದನ್ನು ಈ ವಿಭಾಗದಲ್ಲಿ ಲೇಖಕರು ಬಹಳ ಪರಿಣಾಮಕಾರಿಯಾಗಿ ನಿರೂಪಿಸಿರುವರು.

ಭರತಖಂಡಕ್ಕೆ ಬಂದ ಬಳಿಕ ಗಾಂಧೀಜಿಯವರ ಕ್ಷೇತ್ರ ಮತ್ತಷ್ಟು ವಿಶಾಲವಾಯಿತು. ಸಮಸ್ತ ಭರತಖಂಡದ ನಾಯಕರಾದ ಅವರು ದೊಡ್ಡ ಸಂಸಾರವನ್ನು ನಿರ್ವಹಿಸಲು ತೊಡಗಿದಾಗ, ಕಸ್ತೂರಿ ಬಾ ಅವರು ಎಲ್ಲ ರೀತಿಯಾದ ಹೊಣೆಯನ್ನೂ ಹಸನ್ಮುಖದಿಂದ ಹೊತ್ತರು. ಗಾಂಧೀಜಿಯವರು ಹರಿಜನರ ಮೇಲ್ಮೆಗಾಗಿ ಆಂದೋಲನವನ್ನು ಕೈಕೊಂಡಾಗ, ಮೊದಮೊದಲು ಕಸ್ತೂರಿಬಾ ಅವರ ಸಾಂಪ್ರದಾಯಿಕ ಶ್ರದ್ಧೆ ಅಡ್ಡಗಟ್ಟಿನಿಂತರೂ ಕಡೆಗೆ ಆಕೆ ಅದಕ್ಕೆ ಒಗ್ಗಿಹೋದರು. ಲಕ್ಷ್ಮಿಯೆಂಬ ಒಬ್ಬ ಹರಿಜನ ಹೆಣ್ಣುಮಗಳನ್ನು ತಮ್ಮ ಮಗಳೆಂದೇ ಎಣಿಸಿ ಸಾಕಲು ಆರಂಭಿಸಿದರು. ಒಮ್ಮೆ ಗಾಂಧೀಜಿಯವರಿಗೆ ಆರು ವರ್ಷಗಳ ಸಜೆ ಸಂಭವಿಸಲು, ಚಳುವಳಿಯ ಮೇಲ್ವಿಚಾರಣೆಯನ್ನು ಬಾ ಅವರೇ ವಹಿಸಿದ ಸಂಗತಿ ಅತ್ಯಂತ ಆಶ್ಚರ್ಯಕರವಾದುದು. ಅವರಿಗೆ ಸೌಮ್ಯ ನಾರಿಯಾಗಿದ್ದ ಆಕೆ ಹೇಗೆ ಧೀರರಾಗಿ ವರ್ತಿಸಿದರೆಂಬುದನ್ನು ಲೇಖಕರು ಆಕೆಯಿತ್ತ ಒಂದು ಸಂದೇಶದ ಮೂಲಕ ತಿಳಿಸಿರುವರು :

ನನ್ನ ಪ್ರಿಯಪತಿಗೆ ಇಂದು ಆರು ವರುಷ ಕಾರಾಗೃಹ ಲಭಿಸಿದೆ. ಈ ದೀರ್ಘವಾದ ಶಿಕ್ಷೆ ನನ್ನ ಮನಸ್ಸಿಗೆ ಬಹು ವ್ಯಥೆ ಮಾಡಿರುವುದು ನಿಜವಾದರೂ, ನಮ್ಮ ಪ್ರಯತ್ನದಿಂದ ನನ್ನ ಪತಿಯನ್ನು ಅವಧಿಗಿಂತ ಮುಂಚೆ ಬಿಡಿಸಿಕೊಳ್ಳಬಹುದೆಂಬ ಧೈರ್ಯದಿಂದ ನನಗೆ ಸ್ವಲ್ಪ ಸಮಾಧಾನವುಂಟಾಗಿದೆ.

ಭಾರತ ಎಚ್ಚತ್ತು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯದಲ್ಲಿ ತೊಡಗಿದರೆ ಗಾಂಧಿಯವರನ್ನು ಬಿಡುಗಡೆ ಮಾಡುವುದು ಮಾತ್ರವೇ ಅಲ್ಲ, ಕಳೆದ ಹದಿನೆಂಟು ತಿಂಗಳಿನಿಂದ ನಾವು ಯಾವುದಕ್ಕಾಗಿ ಹೊಡೆದಾಡುತ್ತಾ ದುಃಖವನ್ನು ಅನುಭವಿಸುತ್ತಿರುವೆವೊ ಆ ಮೂರು ಪ್ರಶ್ನೆಗಳೂ ಸಮಾಧಾನವಾಗಿ ತೀರ್ಮಾನವಾಗುವುದರಲ್ಲಿ ಸಂದೇಹವಿಲ್ಲ.

ಔಷಧಿ ನಮ್ಮ ಕೈಯಲ್ಲಿಯೇ ಇದೆ. ನಮಗೆ ಅಪಜಯವಾದರೆ ತಪ್ಪು ನಮ್ಮದು. ನನ್ನಲ್ಲಿಯೂ ನನ್ನ ಪತಿಯಲ್ಲಿಯೂ ವಿಶ್ವಾಸವುಳ್ಳ ಸ್ತ್ರೀಪುರುಷರನ್ನೆಲ್ಲಾ ನಾನು ಕೇಳುವುದು ಇದೆಯೇ. ರಚನಾತ್ಮಕ ಕಾರ್ಯಕ್ರಮದಲ್ಲಿ ಮನಸ್ಸಿಟ್ಟು ಅದನ್ನು ಜಯಶಾಲಿಯಾಗಿ ಮಾಡಿ. (ಪುಟ ೨೦–೨೧)

ಕಸ್ತೂರಿ ಬಾ ಅವರ ಈ ಸಹಜವಾಣಿಯಿಂದ ಸಮಸ್ತರೂ ಸ್ಫೂರ್ತಿಗೊಂಡರು. ತಮ್ಮ ಗಂಡನು ಸೆರೆಮನೆಯಲ್ಲಿದ್ದ ಆ ಅವಧಿಯಲ್ಲಿ ಬಾ ಅವರು ತೋರಿದ ಆ ಸ್ಥೈರ್ಯ, ಊರೂರುಗಳನ್ನು ಸುತ್ತಿ ಕಂಗೆಟ್ಟ ಜನತೆಗೆ ಧೈರ್ಯ ಹೇಳಿದ ಆ ಕೆಚ್ಚು, ಮೊದಲಾದುವುಗಳನ್ನು ಲೇಖಕರ ವಿವರಣೆಗಳನ್ನೇ ಓದಿ ತಿಳಿಯಬೇಕು. ಕಸ್ತೂರಿ ಬಾ ಅವರ ದೇಶಭಕ್ತಿ, ಪತಿಭಕ್ತಿ ಮತ್ತು ಸೇವಾಕಾಂಕ್ಷೆಗಳು ಸದ್ದುಗದ್ದಲವಿಲ್ಲದೆ ಸಹಜವಾಗಿ ಪಡಿಮೂಡುವಂತೆ ಇಲ್ಲಿ ಸಣ್ಣಪುಟ್ಟ ಸಂಗತಿಗಳನ್ನು ಬಹಳ ಸ್ವಾರಸ್ಯವಾಗಿ ಪೋಣಿಸಿರುವರು.

ಕಸ್ತೂರಿ ಬಾ ಅವರು ಆದರ್ಶ ಪತ್ನಿಯಾಗಿದ್ದಂತೆಯೇ ಆದರ್ಶ ಮಾತೆಯೂ ಆಗಿದ್ದರು. ತಮ್ಮ ಮಕ್ಕಳ ಮೇಲಿನ ಮಮತೆ ಹೇಳತೀರದು. ಆದರೆ ಅದು ಕೇವಲ ಕುರುಡು ವಾತ್ಸಲ್ಯವಲ್ಲ. ತಮ್ಮ ಮಗನಾದ ಹೀರಾಲಾಲ್ ದಾರಿತಪ್ಪಿ ನಡೆದಾಗ, ಆಕೆ ಅವನಿಗೆ ಬುದ್ಧಿ ಹೇಳಲೂ ಹಿಂತೆಗೆದವರಲ್ಲ. ಗಾಂಧೀಜಿಯವರು ಅಲಕ್ಷ್ಯದಿಂದಿದ್ದರೂ ತಾಯಿಯಾದ ಬಾ ಸುಮ್ಮನಿರಲಿಲ್ಲ. ಆಕೆ ಹೀರಾಲಾಲನಿಗೆ ಬರೆದ ಪತ್ರ ಇದಕ್ಕೆ ಸೂಕ್ತ ನಿದರ್ಶನ. ಲೇಖಕರು ಕಸ್ತೂರಿ ಬಾ ಅವರ ಆ ಪತ್ರವನ್ನೇ ಉದಾಹರಿಸಿ ಆಕೆಯ ಮನೋಧರ್ಮವೆಂತಹುದು ಎನ್ನುವುದನ್ನು ಪರಿಚಯ ಮಾಡಿಕೊಡುವರು. ಆ ಪತ್ರದಿಂದ ಒಂದೆರಡು ವಾಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು :

ನಿನಗೆ ನಾನು ಏನು ಹೇಳಲಿ. ನಿನ್ನ ಮೇಲೆ ನಿನಗೆ ಸ್ವಾಧೀನವಿರಬೇಕೆಂದು ಇಷ್ಟು ವರುಷವೂ ನಿನ್ನನ್ನು ಕೇಳಿಕೊಳ್ಳುತ್ತಿದ್ದೇನೆ. ಆದರೆ ನೀನು ದಿನದಿನಕ್ಕೆ ಹೆಚ್ಚುಹೆಚ್ಚು ಕೆಡುತ್ತಿದ್ದೀಯೆ. ಈಗ ನನಗೆ ಜೀವದಿಂದಿರುವುದೇ ಕಷ್ಟವಾಗುತ್ತಿದೆ. ನಿನ್ನ ವೃದ್ಧ ಮಾತಾಪಿತೃಗಳಿಗೆ ಅವರ ಈ ವಯಸ್ಸಿನಲ್ಲಿ ನೀನು ಉಂಟುಮಾಡುವ ಹಿಂಸೆಯನ್ನು ಕುರಿತು ಯೋಚಿಸು.

> ನಿಮ್ಮ ತಂದೆ ಯಾರಿಗೂ ಏನೂ ಹೇಳುವುದಿಲ್ಲ. ಆದರೆ ನಿನ್ನ ಈ ಹೊಡೆತಗಳಿಂದ ಅವರ ಹೃದಯ ಒಡೆಯುತ್ತಿದೆ ಎಂಬುದು ನಿನಗೆ ಗೊತ್ತು. ಹೀಗೆ ನಮಗೆ ಪದೇ ಪದೇ ನೋವುಂಟುಮಾಡುವುದು ನಿನಗೆ ಪಾಪ. ನಮ್ಮ ಮಗನಾದರೂ ನೀನು ಶತ್ರುವಿನಂತೆ ನಡೆಯುತ್ತಿರುವೆ. (ಪುಟ ೨೮)

ಬಹು ದೀರ್ಘವಾದ ಈ ಪತ್ರವನ್ನು ಓದುತ್ತಿದ್ದರೆ ಕಸ್ತೂರಿ ಬಾ ಅವರು ತಮ್ಮ ಮಗನ ಸಲುವಾಗಿ ಎಷ್ಟು ಯಾತನೆ ಅನುಭವಿಸಿದ್ದಾರೆ ಎನ್ನುವುದು ಸ್ವವಿದಿತವಾಗುತ್ತದೆ. ಒಂದೊಂದು ನುಡಿಯೂ ಸಿಹಿಯೂ ಹೌದು; ಕಹಿಯೂ ಹೌದು !

ಭರತಖಂಡದ ರಾಷ್ಟ್ರೀಯ ಚಳುವಳಿಯ ಇತಿಹಾಸದಲ್ಲಿ ಕಸ್ತೂರಿ ಬಾ ಅವರ ಹೆಸರು ಎಂದೆಂದಿಗೂ ಅಳಿಸಿ ಹೋಗುವಂತಹುದಲ್ಲ. ಅವರಿಗೆ ಅಧಿಕಾರದ ಆಸೆಯಾಗಲಿ, ಮುನ್ನುಗ್ಗಿ ಮೆರೆಯಬೇಕೆಂಬ ಚಪಲವಾಗಲಿ ಎಂದೆಂದಿಗೂ ಇದ್ದಂತಿಲ್ಲ. ಗಾಂಧೀಜಿಯವರ ನೆರಳಾಗಿ ಸೇವೆ ಸಲ್ಲಿಸುವುದರಲ್ಲೇ ಸಂತೃಪ್ತಿ. ೧೯೪೨ನೆಯ ಸಾಲಿನ ಕಟ್ಟಕಡೆಯ ಸ್ವಾತಂತ್ರ್ಯ ಸಮರದಲ್ಲಿ ಆಹುತಿಯಾದ ಹುತಾತ್ಮರಲ್ಲಿ ಕಸ್ತೂರಿ ಬಾ ಒಬ್ಬರು. ಆಕೆ ಆಗಾಖಾನರ ಅರಮನೆಯಲ್ಲಿ ಸೆರೆಯಲ್ಲಿರಬೇಕಾದರೆ ದೇಹಾಲಸ್ಯಕ್ಕೆ ಗುರಿಯಾಗಿ ಕಣ್ಣು ಮುಚ್ಚಬೇಕಾಯಿತು. ಈ ಹೃದಯವಿದ್ರಾವಕವಾದ ಸಂದರ್ಭವನ್ನು ಪ್ರಕೃತ ಪುಸ್ತಕದಲ್ಲಿ ಬಹಳ ವಿವರವಾಗಿಯೇ ನಿರೂಪಿಸಿದೆ. ಇಡೀ ಜನತೆಯ ಕಳವಳ ವ್ಯಾಕುಲವನ್ನೂ, ಗಾಂಧೀಜಿಯವರ ಸ್ಥೈರ್ಯಧೈರ್ಯಗಳನ್ನೂ ಲೇಖಕರು ಬಹಳ ಯಶಸ್ವಿಯಾಗಿ ಚಿತ್ರಿಸಿರುವರು. ಮಹಾಸತಿ ಕಸ್ತೂರಿಬಾಯಿಯ 'ಕೊನೆ ಹೇಗೆ ಆಯಿತು' ಎಂದು ಲೇಖಕರು ಮನಕರಗುವಂತೆ ಮುಕ್ತಾಯ ಮಾಡುವರು :

> ಕಡೆಗೆ ಕಣ್ಣು ಮುಚ್ಚಿ ತೆರೆಯುವುದರಲ್ಲಿ ಕೊನೆ ಬಂತು. ಎಲ್ಲರ ಕಣ್ಣುಗಳಿಂದಲೂ ನೀರು ಧಾರೆಯಾಗಿ ಹರಿಯಿತು. ಗಾಂಧಿ ತಮ್ಮ ಕಣ್ಣೀರನ್ನು ಹಿಂದಕ್ಕೆ ದೂಡಿದರು. ಎಲ್ಲರೂ ಸುತ್ತ ನಿಂತು ಕಸ್ತೂರಿ ಬಾ ಅವರಿಗೆ ಪ್ರಿಯವಾಗಿದ್ದ, ಅವರ ಮುಂದೆ ಯಾವಾಗಲೂ ಹಾಡುತ್ತಿದ್ದ ಪ್ರಾರ್ಥನೆ ಹಾಡಿದರು. ಎರಡು ನಿಮಿಷಗಳ ನಂತರ ತಾಯಿ ನಿಶ್ಶಬ್ದರಾದರು. ಒಬ್ಬ ಡಿಟೆನ್ಯೂ ಹೇಳಿದಂತೆ ನಾವು ಊಟ ಮುಗಿಸಲಿ ಎಂದು ಅವರು ಕಾದರು. ಸೆರೆಮನೆಯಲ್ಲಿ ಸಾಯಂಕಾಲ ೬ ಘಂಟೆಗೆ ಕಡೆ ಊಟ. ಅವರು ೭-೩೫ಕ್ಕೆ ಸ್ವರ್ಗಸ್ಥರಾದರು. (ಪುಟ ೩೭)

ಕಸ್ತೂರಿ ಬಾ ಅವರು ಪ್ರಥಮತಃ ಆದರ್ಶ ಪತ್ನಿ. ಆ ಸೂತ್ರವೇ ಅವರ ಬಾಳಿನ ಗೆಲುವಿಗೆ ಮುಖ್ಯ ಬೆಂಬಲವಾಯಿತು. ಗಾಂಧೀಜಿಯವರ ಸೇವಾಕ್ಷೇತ್ರ ವಿಸ್ತಾರವಾದಂತೆಲ್ಲ ಅವರ ದೃಷ್ಟಿಯೂ ಸಹ ವಿಸ್ತಾರವಾಯಿತು. ಮಹಾತ್ಮನ ಪತ್ನಿಯಾಗುವುದು ಹೂವಿನ ಹಾಸುಗೆಯಲ್ಲ. ಆತನ ಅನಂತ ಕಷ್ಟಗಳ ಬೇಗೆಯಲ್ಲಿ ಆಕೆಯ ಬದುಕು ಕುದಿಕುದಿದು ಪರಿಪಕ್ವವಾಯಿತು. ಆಕೆ ತನ್ನ ಸಂಸಾರಾಭಿಲಾಷೆಯನ್ನು,

ಪುತ್ರ ಮಿತ್ರ ಸಮಸ್ತ ವಾತ್ಸಲ್ಯವನ್ನೂ ದೇಶ ಸೇವೆಗಾಗಿ ಸಮರ್ಪಿಸಿ ತಮ್ಮ ನಿಡಿದಾದ ಬಾಳನ್ನು ಸಾರ್ಥಕಗೊಳಿಸಿದರು. ಲೇಖಕರು ಹೇಳಿರುವಂತೆ "ಹೀಗೆ ಬಾ ೭೪ ವರುಷದ ಆಯಸ್ಸನ್ನು ಕಳೆದರು. ಈ ನಾಡಿಗಾಗಿ ಜೀವ ತೇದರು. ಈ ನಾಡಿನ ಮಕ್ಕಳನ್ನು ಹರಸಿದರು. ಇಂಥವರ ತ್ಯಾಗ ಎಂದಿಗೂ ವ್ಯರ್ಥವಾಗುವುದಿಲ್ಲ" (ಪುಟ ೪೦)

ಕಸ್ತೂರಿ ಬಾ ಅವರನ್ನು ಕುರಿತ ಈ ಸಣ್ಣ ಪುಸ್ತಕ ಆ ಮಹಾಸತಿಯ ಮಹಿಮೆಯನ್ನು ಎಂದೆಂದಿಗೂ ಮರೆಯದಂತೆ ಬೆಳಗುವ ಒಂದು ಹಣತೆಯೇ ಸರಿ. ಈ ಜ್ಯೋತಿಯಿಂದ ಆ ತರುವಾಯ ಕುಡಿಯನ್ನು ಹೊತ್ತಿಸಿಕೊಂಡ ಇತರ ಹಲವಾರು ಹಣತೆಗಳುಂಟು. ಒಂದೊಂದು ಕೃತಿಯೂ ಆಕೆಯ ಸತೀತ್ವವನ್ನೂ ಸಮರ್ಪಣ ಭಾವವನ್ನೂ ಸಾರಿ ಹೇಳುವ ಕಿರುಗಾಣಿಕೆಯೇ ಸರಿ.

೩

'ಮೌಲಾನಾ ಅಬುಲ್ ಕಲಾಂ ಆಜಾದ್' ಎಂಬ ಮತ್ತೊಂದು ಸಣ್ಣ ಪುಸ್ತಕ ಆಜಾದರ ಆತ್ಮೋನ್ನತಿಯನ್ನು ಸಾರಿ ಹೇಳುವ ಒಂದು ಸಂದೇಶವಂತಿದೆ. ಆಜಾದರು ಎಂತಹ ಕುಲೀನಸ್ಥರೆಂಬುದನ್ನೂ, ಅವರು ಅರಾಬಿಕ್, ಪರ್ಷಿಯನ್ ಮತ್ತು ಉರ್ದು ಭಾಷೆಗಳಲ್ಲಿ ಎಂತಹ ಪ್ರಾವೀಣ್ಯವನ್ನು ಸಂಪಾದಿಸಿದರೆಂಬುದನ್ನೂ, ಅವರು ಭಾರತದ ಸ್ವಾತಂತ್ರ್ಯ ಸಮರದಲ್ಲಿ ಹೇಗೆ ಮುಕ್ತಮನಸ್ಸಿನಿಂದ ಭಾಗವಹಿಸಿ ಇತರ ಮುಸಲ್ಮಾನರಿಗೆ ಆದರ್ಶಪ್ರಾಯರಾದರೆಂಬುದನ್ನೂ ಬಹಳ ಪ್ರಭಾವಶಾಲಿಯಾಗಿ ಇಲ್ಲಿ ಚಿತ್ರಿಸಿದೆ. ಪುಸ್ತಕ ಗಾತ್ರದಲ್ಲಿ ದೊಡ್ಡದಾಗಿಲ್ಲದಿದ್ದರೂ ಸತ್ವದಲ್ಲಿ ಬಹಳ ಪುಷ್ಟಿಯುತವಾಗಿದೆಯೆಂಬುದನ್ನು ಓದಿ ತಿಳಿಯಬಹುದು.

ಸುಮಾರು ೧೦೦ ಪುಟಗಳಿರುವ ಈ ಪುಸ್ತಕದಲ್ಲಿ ಲೇಖಕರು ಆಜಾದರ ಮನೆತನದ ಹಿರಿಮೆಯನ್ನು ಮೊದಲು ಪ್ರಸ್ತಾಪಿಸಿರುತ್ತಾರೆ. ಆಜಾದರ ಹಿರಿಯರು ಅಕ್ಬರನ ಕಾಲದಿಂದ ಹೆಸರುವಾಸಿಯಾಗಿದ್ದವರು. ಧರ್ಮ ಮತ್ತು ಮತಗಳ ವಿಷಯಗಳಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದರು. ಧರ್ಮಕ್ಕೆ ವಿರುದ್ಧವಾದುದನ್ನು ಪ್ರತಿಭಟಿಸಲು ರಾಜನಿಗೂ ಹೆದರದವರು. ಆ ಸಲುವಾಗಿ ಭಾರತವನ್ನೇ ಬಿಟ್ಟುಹೋಗಲೂ ಅಳುಕಿದವರಲ್ಲ. ಆಜಾದರ ತಂದೆಯಾದ ಮೌಲಾನಾ ಮಹಮ್ಮದ್ ಗಾಹಿರುದ್ದೀನ್ ದೇಶವನ್ನೇ ಬಿಟ್ಟು ಮಕ್ಕಾದಲ್ಲಿ ಹೋಗಿ ನೆಲಸಬೇಕಾಯಿತು. ಅಲ್ಲಿಯೇ ೧೮೮೮ರಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದರು ಹುಟ್ಟಿದ್ದು. ಬಳಿಕ ಭಾರತಕ್ಕೆ ಹಿಂದಿರುಗಿದ ಈ ಮನೆತನದವರ ಹೆಸರು ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಅಮರವಾಗುವಂತೆ ಮಾಡಿದ ಕೀರ್ತಿ ಆಜಾದರಿಗೆ ಸಲ್ಲುತ್ತದೆ.

ಆಜಾದರು ಸ್ವಭಾವತಃ ತುಂಬ ಬುದ್ಧಿಶಾಲಿಗಳೆಂಬುದು ಅವರ ಬಾಲ್ಯಚರಿತ್ರೆಯನ್ನು ಓದಿದ ಯಾರಿಗಾದರೂ ಅರಿವಾಗುತ್ತದೆ. ಲೇಖಕರು ಒಂದೆಡೆಯಲ್ಲಿ ಈ ಪ್ರತಿಭಾಶಾಲಿಯ ಪಾಂಡಿತ್ಯವನ್ನು ಕುರಿತು ಹೀಗೆ ಬರೆದಿರುತ್ತಾರೆ:

> ತಮ್ಮ ೧೫ನೆಯ ವಯಸ್ಸಿನ ವೇಳೆಗೆ ಆಜಾದರಿಗೆ ಕುರಾನಿನಲ್ಲಿ ಪೂರ್ಣವಾದ ಪಾಂಡಿತ್ಯವುಂಟಾಯಿತು. ಕೈರೊವಿನ ಪ್ರಸಿದ್ಧವಾದ ಅಲ್ ಅಜಹರ್ ವಿಶ್ವವಿದ್ಯಾನಿಲಯದಲ್ಲಿ ಅವರು ಎರಡು ವರುಷ ವ್ಯಾಸಂಗ ಮಾಡಿದರು. ಅವರು ಹುಟ್ಟಿ ಬೆಳೆದುದು ವೈದಿಕ ಸಮಾಜವಾದರೂ ಆಜಾದರು ಶಾಸ್ತ್ರದ ಯಾವ ಮಾತನ್ನೂ ಪರೀಕ್ಷಿಸಿದ ಹೊರತು ನಂಬುತ್ತಿರಲಿಲ್ಲ. ಶಾಸ್ತ್ರದ ವಿಷಯದಲ್ಲಿ ಸಹ ಆಜಾದರು ತೋರಿಸುತ್ತಿದ್ದ ಹೊಸ ಧೈರ್ಯವನ್ನು ಕಂಡು ಹಳೆಯ ಕಾಲದ ಪಂಡಿತರಿಗೆಲ್ಲಾ ಆಶ್ಚರ್ಯವಾಯಿತು. ಆಜಾದರು ಇಂಗ್ಲಿಷನ್ನು ಕಲಿಯದೆ ಉಳಿದ ಅರಾಬಿಕ್ ಪರ್ಷಿಯನ್ನುಗಳನ್ನು ಮಾತ್ರ ಕಲಿತುದಕ್ಕೆ ಅವರ ಕಾಲದ ಮೌಲ್ವಿಗಳ ಸಂಪ್ರದಾಯ ಶರಣತ್ವವೇ ಕಾರಣ. ಆಗ ಇಂಗ್ಲಿಷನ್ನು ಕಲಿಯುವುದು ಧರ್ಮಕ್ಕೆ ವಿರುದ್ಧ ಎಂಬ ಭಾವನೆ ಸಹ ಸಂಪ್ರದಾಯಶರಣರಲ್ಲಿ ಇದ್ದಿತು. ಆಜಾದರ ತಂದೆ ಗಾಹಿರುದ್ದೀನ್ ಪೂರ್ಣವಾಗಿ ಹಳೆಯ ಸಂಪ್ರದಾಯದವರು. (ಪುಟ ೧೪)

ಈ ರೀತಿ ಸಂಪ್ರದಾಯಸ್ಥ ಮನೆತನದಲ್ಲಿ ಬೆಳೆದ ಆಜಾದರು ತಮ್ಮ ಸ್ವತಂತ್ರ ವಿಚಾರಶಕ್ತಿಯಿಂದ ಭರತಖಂಡದ ರಾಜಕೀಯ ಮತ್ತು ರಾಷ್ಟ್ರೀಯ ಮುಸಲ್ಮಾನ ಬಂಧುಗಳಲ್ಲಿ ಹೇಗೆ ಗಣ್ಯರಾದರೆನ್ನುವುದನ್ನು ಲೇಖಕರು ಬಹಳ ಸರಳವಾಗಿ ಪ್ರತಿಪಾದಿಸಿರುತ್ತಾರೆ.

ಆಜಾದರು ಶಾಲೆಗೆ ಹೋಗಿ ಇಂಗ್ಲಿಷು ಕಲಿತವರಲ್ಲ. ಆದರೆ ಆ ಬಗ್ಗೆ ಅವರಿಗೆ ಯಾವ ವ್ಯಥೆಯೂ ಆಗಲಿಲ್ಲ. ಅದಕ್ಕೆ ಬದಲಾಗಿ ಅವರಿಗೆ ಎಷ್ಟೋ ಸಮಾಧಾನ. ತಾವು ಇಂಗ್ಲಿಷು ಕಲಿತುದನ್ನು ಕುರಿತು ಅವರು ಹೀಗೆ ಬರೆದಿರುತ್ತಾರೆ:

> ೧೯೦೯ರಲ್ಲಿ ಒಬ್ಬ ಸ್ನೇಹಿತರ ಪ್ರೋತ್ಸಾಹದಿಂದ ಶಬ್ದಕೋಶವನ್ನಿಟ್ಟುಕೊಂಡು ಇಂಗ್ಲಿಷು ಕಲಿಯಲು ಪ್ರಾರಂಭಿಸಿದೆ. ನನ್ನ ತಂದೆ ನನ್ನನ್ನು ಇಂಗ್ಲಿಷ್ ಶಾಲೆಗೆ ಕಳುಹಿಸದುದರಿಂದ ನನಗೆ ದುಃಖವಿಲ್ಲ. ಇಂಗ್ಲಿಷ್ ಶಾಲೆಗೆ ಹೋಗದುದರಿಂದ ನನಗೆ ಏನೂ ನಷ್ಟವಿಲ್ಲ. ನನಗೆ ಬೇಕಾದ ಇಂಗ್ಲಿಷನ್ನು ನನ್ನ ಸ್ವಂತ ಪ್ರಯತ್ನದಿಂದ ಕಲಿತುದರಿಂದ ನನಗೆ ಲಾಭವೇ ಆಗಿದೆ. ಶಾಲೆಯಲ್ಲಿ ಕಲಿತಿದ್ದರೆ ಅದಕ್ಕಾಗಿ ವೆಚ್ಚವಾಗುತ್ತಿದ್ದ ನನ್ನ ಕಾಲವನ್ನೆಲ್ಲಾ ನಾನು ಉಳಿಸಿದ್ದೇನೆ. (ಪುಟ ೧೫)

ಆದರೆ ಆಜಾದರ ಪುಸ್ತಕ ಭಂಡಾರವನ್ನು ಕಂಡವರಿಗೆ ಅವರಿಗೆ ಇಂಗ್ಲಿಷಿನಲ್ಲಿ ಎಷ್ಟು ಪರಿಣತಿಯಿತ್ತೆಂದು ವ್ಯಕ್ತವಾಗುತ್ತಿತ್ತು. ಪ್ರಾಚೀನ ಸಂಪ್ರದಾಯದಲ್ಲಿ ಬೆಳೆದರೂ ನವೀನ ಜ್ಞಾನವಾಹಿನಿಯನ್ನು ಎಂದಿಗೂ ಕಡೆಗಣಿಸಿದವರಲ್ಲ. ಅವರ ಭಾಷೆಗಳ ಪರಿಚಯವೂ ಅಷ್ಟೇ ವಿಪುಲವಾಗಿತ್ತು.

ಭರತಖಂಡದ ಇತಿಹಾಸದಲ್ಲಿ ಆಜಾದರು ಎರಡು ದೃಷ್ಟಿಗಳಿಂದ ಸರ್ವಮಾನ್ಯರಾಗಿರುತ್ತಾರೆ. ಮೊದಲನೆಯದಾಗಿ ಅವರು ಮುಸಲ್ಮಾನರಾದರೂ ಎಂದಿಗೂ ಕೋಮು ಭಾವನೆಯಿಂದ ಸಂಕುಚಿತಮನಸ್ಕರಾಗಿರಲಿಲ್ಲ. ತಮ್ಮ ಕಾಲದಲ್ಲಿ ಕೆಲವು ಮುಸಲ್ಮಾನರು

ಇಂಗ್ಲಿಷರ ಕಪಟ ನೀತಿಗೆ ಒಳಗಾಗಿ ಹಿಂದೂಗಳಿಂದ ಪ್ರತ್ಯೇಕವಾಗಿ ಉಳಿದು ಭಾರತದ ಮೇಲ್ಮೆಗೆ ವಿರುದ್ಧವಾಗಿ ವರ್ತಿಸಿದಾಗ ಅವರು ಅದನ್ನು ಖಂಡಿಸಿದರು. ಕೇವಲ ತಮ್ಮ ಹದಿನಾಲ್ಕನೆಯ ವಯಸ್ಸಿನಿಂದಲೇ ಅವರು ಉರ್ದುವಿನಲ್ಲಿ ಅತ್ಯಂತ ಪ್ರಭಾವಶಾಲಿಯಾದ ಲೇಖನಗಳನ್ನು ಬರೆಯಲು ಆರಂಭಿಸಿದ್ದರು. ತಾವೇ ಪತ್ರಿಕೆಗಳನ್ನು ಸ್ಥಾಪಿಸಿ, ಆ ಮೂಲಕ ಜನಜಾಗೃತಿಯನ್ನು ಮಾಡುವ ದೀಕ್ಷೆಯನ್ನು ವಹಿಸಿದರು. ಮುಸಲ್ಮಾನರಿಗೆ ಅವರ ಧರ್ಮಾಭಿಮಾನವನ್ನು ಕಂಡರೆ ತುಂಬ ಗೌರವವಿತ್ತು. ಚಿಕ್ಕ ವಯಸ್ಸಿನಲ್ಲಿಯೇ ಅವರು ಧಾರ್ಮಿಕ ಗ್ರಂಥಗಳಲ್ಲಿ ತಮಗಿರುವ ಪಾಂಡಿತ್ಯವನ್ನು ಹಲವಾರು ಬಗೆಗಳಲ್ಲಿ ಪ್ರಕಟ ಪಡಿಸಿದರು. ಈ ಆಳವಾದ ಅಧ್ಯಯನ ಅವರ ಜೀವಮಾನದ ಉದ್ದಕ್ಕೂ ಮುಂದು ವರಿಯಿತು. ಪವಿತ್ರವಾದ ಕುರಾನನ್ನು ಕುರಿತು ಅವರು ರಚಿಸಿರುವ 'ತರ್ಜುಮಾನ್–ಉಲ್–ಕುರಾನ್' ಎಂಬ ವ್ಯಾಖ್ಯಾನವು ಸಮಸ್ತ ಮಹಮ್ಮದೀಯ ಜನಾಂಗದ ಆದರಕ್ಕೆ ಪಾತ್ರವಾಗಿದೆ. ಅಲ್ಲಿ ಅವರು ಪ್ರಕಟಿಸಿರುವ ಆಧುನಿಕ ದೃಷ್ಟಿ ತುಂಬ ಗಮನಾರ್ಹ ವಾದುದು ಎಂದು ತಿಳಿದುಬರುತ್ತದೆ. ಪತ್ರಿಕಾಸಂಪಾದಕರಾಗಿ ಅವರು ನಿರ್ವಹಿಸಿದ ಕೆಲಸವೂ ಸಹ ಇಷ್ಟೆ ಪ್ರಶಂಸಾರ್ಹವಾದುದು. 'ಅಲ್ ಹಿಲಾಲ್' ಎಂಬ ಪತ್ರಿಕೆಯ ಮೂಲಕ ಅವರು ಸಕಾಲದಲ್ಲಿ ಭಾರತದ ಮುಸ್ಲಿಮರನ್ನು ಎಚ್ಚರಿಸತೊಡಗಿದರು. ಕೆಲವು ಸ್ವಾರ್ಥಪರರಾದ ಮುಸ್ಲಿಮ್ ನಾಯಕರು ಭಾರತದ ಮುಸ್ಲಿಮರು ಭರತಖಂಡದ ಸ್ವಾತಂತ್ರ್ಯ ಚಳುವಳಿಗೆ ವಿರುದ್ಧವಾಗಿ ನಿಂತಾಗ ಆಜಾದರು ದಿಟ್ಟತನದಿಂದ ಆ ನಾಯಕರನ್ನು ಮೂದಲಿಸಿದ್ದು ಅತ್ಯಂತ ಪ್ರಶಂಸನೀಯವಾದ ಸಂಗತಿ. ಈ ಪವಿತ್ರ ಕಾರ್ಯವನ್ನು ಸಾರಿ ಹೇಳುವ ಸಲುವಾಗಿ 'ಅಲ್ ಹಿಲಾಲ್' ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಅಂದು ಅವರು ಮುಸ್ಲಿಂ ಬಂಧುಗಳಿಗೆ ಇತ್ತ ಎಚ್ಚರಿಕೆಯ ಮಾತು ಗಳು ಇಂತಿವೆ :

> ಭಾರತದ ಮುಸಲ್ಮಾನರ ಚರಿತ್ರೆ ಹಿರಿದಾದುದು. ಈ ದೇಶವನ್ನು ತಮ್ಮ ನಾಡಾಗಿ ಮಾಡಿಕೊಂಡ ಮುಸಲ್ಮಾನರು ಇಲ್ಲಿಯವರ ಕಷ್ಟಸುಖದಲ್ಲಿ ಭಾಗಿಗಳಾಗಬೇಕು. ಹಿಂದೂಗಳ ಸ್ವಾತಂತ್ರ್ಯದ ಹೋರಾಟದಲ್ಲಿ ಮುಸಲ್ಮಾನರೂ ಹೆಗಲಿಗೆ ಹೆಗಲು ಕೊಟ್ಟು ನೆರವಾಗಬೇಕು. ಭಾರತದ ಮುಸಲ್ಮಾನರ ನಡವಳಿಕೆ ಜಗತ್ತಿನ ಮುಸ ಲ್ಮಾನರಿಗೆಲ್ಲಾ ಆದರ್ಶವಾಗಿರಬೇಕು. ಭಾರತದ ಮುಸಲ್ಮಾನರು ಸ್ವಾತಂತ್ರ್ಯದ ಹೋರಾಟದಲ್ಲಿ ಹಿಂದುಗಳಿಗಿಂತ ಹಿಂದೆ ಬೀಳಬಾರದು. (ಪುಟ ೨೧)

ಆಜಾದರು ಈ ನಿಲುವನ್ನು ತಳೆದು ತಮ್ಮ ಜೀವನಪರ್ಯಂತ ಹಾಗೆಯೇ ನಡೆದು ಕೊಂಡು ಭಾರತದ ಆದರ್ಶ ಸ್ವಾತಂತ್ರ್ಯ ವೀರರಲ್ಲಿ ಒಬ್ಬರೆನಿಸಿದರು. ಭಾರತದ ಆದರ್ಶಕ್ಕೆ ಪ್ರತಿಯಾಗಿ ವರ್ತಿಸಿದ ಇತರ ಮುಸ್ಲಿಂ ಸಂಸ್ಥೆಗಳಿಗೆ ಆಜಾದರ ಈ ಸಂದೇಶ ಸಮ್ಮತವೆನ್ನಿಸಲಿಲ್ಲ. ಅವರುಗಳು ದೂರ ದೂರವಾದರು. ಆದರೆ ಆಜಾದರು ಎಂದೆಂದಿಗೂ ತಮ್ಮ ದೃಢವಾದ ನಿಲುವನ್ನು ಬದಲಿಸಲಿಲ್ಲ. ಪ್ರತಿಗಾಮಿಗಳಾದ ಮುಸ್ಲಿಮರು ಜಾತಿಯ

ಹೆಸರಿನಲ್ಲಿ ಭಾರತದ ಸ್ವಾತಂತ್ರ್ಯ ಸಾಧನೆಗೆ ಎದುರಾಗಿ ನಿಂತಾಗಲೆಲ್ಲ ಅವನ್ನು ನಿರ್ಭಯವಾಗಿ ಖಂಡಿಸಿದರು. ಅಲ್ಪಸಂಖ್ಯಾತರೆಂಬ ನೆಪದಿಂದ ಅವರು ಮುಂದೊಡ್ಡುತ್ತಿದ್ದ ಕಾರಣಗಳಿಗೆ ಒಮ್ಮೆ ಅದಕ್ಕೆ ತಕ್ಕ ಸಮಾಧಾನವನ್ನಿತ್ತು ಕಡೆಯಲ್ಲಿ ಭಾರತೀಯನಾದ ಮುಸ್ಲಿಮನ ಬಗ್ಗೆ ಅವರು ಬರೆದ ಮಾತುಗಳು ಇಂದಿಗೂ ಮನನೀಯವಾಗಿವೆ:

> ಭಾರತದಲ್ಲಿ ಹಿಂದೂ ಧರ್ಮಕ್ಕೆ ಯಾವ ಸ್ಥಾನವೋ ಇಸ್ಲಾಂ ಧರ್ಮಕ್ಕೂ ಅದೇ ಸ್ಥಾನ. ಹಿಂದೂ ಧರ್ಮ ಇಲ್ಲಿಯವರ ಅನೇಕ ಸಾವಿರ ವರುಷಗಳ ಮತವಾಗಿದ್ದರೆ ಇಸ್ಲಾಂ ಧರ್ಮವೂ ಒಂದು ಸಾವಿರ ವರುಷಗಳ ಮತವಾಗಿದೆ. ಹೇಗೆ ಹಿಂದುವಾದವನು ನಾನು ಭಾರತೀಯ, ಹಿಂದೂ ಧರ್ಮದ ಅನುಯಾಯಿ ಎಂದು ಹೆಮ್ಮೆಯಿಂದ ಹೇಳಬಹುದೋ ಹಾಗೆಯೇ ಮುಸಲ್ಮಾನನೂ ನಾನು ಭಾರತೀಯ, ಇಸ್ಲಾಂ ಅನುಯಾಯಿ ಎಂದು ಹೇಳಬಹುದು. ಈ ಆವರಣವನ್ನು ನಾನು ಇನ್ನೂ ಹೆಚ್ಚು ವಿಸ್ತಾರ ಮಾಡುತ್ತೇನೆ. ಭಾರತದ ಕ್ರಿಶ್ಚಿಯನ್ನರೂ ಸಹ, ನಾನು ಭಾರತೀಯ, ಭಾರತದ ಒಂದು ಧರ್ಮವಾದ ಕ್ರಿಸ್ತ ಧರ್ಮವನ್ನು ಅನುಸರಿಸುತ್ತೇನೆ ಎಂದು ಹೇಳಬಹುದು. (ಪುಟ ೧೦೩–೧೦೪)

ಈ ಹೃದಯವೈಶಾಲ್ಯದಲ್ಲಿ ಕಾಲುಭಾಗವಾದರೂ ಇತರ ಮುಸಲ್ಮಾನರಿಗೆ ಇದ್ದಿದ್ದರೆ. ಅಥವಾ ಆಜಾದರ ಸಂದೇಶ ಎಲ್ಲ ಮುಸಲ್ಮಾನರನ್ನೂ ಏಕಪ್ರಕಾರವಾಗಿ ಒಂದುಗೂಡಿಸಿದ್ದರೆ ನಮ್ಮ ಸ್ವತಂತ್ರಭಾರತ ಅಖಂಡವಾಗಿಯೇ ಉಳಿಯುತ್ತಿತ್ತೋ ಏನೋ! ಕುರಾನಿನ ಮೇಲೆ ಅಧಿಕಾರಯುತವಾಗಿ ಮಾತನಾಡಬಲ್ಲ ಆಜಾದರ ವಾಣಿ, ರಾಜಕೀಯ ಪ್ರಪಂಚದಲ್ಲಿ ಅವರ ಜನತೆಯನ್ನು ಸಮಗ್ರವಾಗಿ ಒಂದುಗೂಡಿಸದೆ ಹೋದುದು ಭರತಖಂಡದ ದುರ್ದೈವವೇ ಸರಿ.

ಆಜಾದರಂತೂ ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ಅಪಾರವಾದ ತ್ಯಾಗ ಮಾಡಿದರು. ಭಾರತೀಯರಲ್ಲಿ ಬೆರೆತು ಬಾಳಿದ ಆ ಹಿರಿಯರು ಸಾಧಿಸಿದ ಹಲವಾರು ಸಂಗತಿಗಳನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬಹಳ ಸತ್ವಶಾಲಿಯಾಗಿ ನಿರೂಪಿಸಿರುತ್ತಾರೆ. ಭರತಖಂಡದ ಸ್ವಾತಂತ್ರ್ಯ ಚಳುವಳಿಯೊಂದಿಗೆ ಆಜಾದರ ಜೀವನದ ಎಳೆಗಳು ಹೇಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿದ್ದುವು ಎನ್ನುವುದನ್ನು ಇಲ್ಲಿನ ವಿವರಣೆಗಳಲ್ಲಿ ಕಾಣಬಹುದು. ಮುಖ್ಯವಾಗಿ ಆಜಾದರನ್ನು ಒಮ್ಮೆ ಬ್ರಿಟಿಷ್ ಸರ್ಕಾರದವರು ಕಲ್ಕತ್ತೆಯಲ್ಲಿ ಬಂಧಿಸಿ, ರಾಜದ್ರೋಹದ ಆಪಾದನೆಗಾಗಿ ವಿಚಾರಣೆ ಮಾಡಿ, ಒಂದು ವರ್ಷ ಸಜಾ ವಿಧಿಸಿದಾಗ ಅವರು ಇತ್ತ ಉರ್ದುವಿನ ಒಂದು ಹೇಳಿಕೆ ತುಂಬ ಮಹತ್ವಪೂರ್ಣವಾದುದು. ಆಜಾದರು ನ್ಯಾಯಾಧೀಶರ ತೀರ್ಪನ್ನು ಕೇಳಿ ನಗುನಗುತ್ತ, "ನಾನು ನಿರೀಕ್ಷಿಸಿದುದಕ್ಕಿಂತ ಕಡಮೆಯಲ್ಲಿಯೇ ಮುಕ್ತಾಯವಾಯಿತು" (ಪುಟ ೪೦) ಎಂದರು. ಆ ತೀರ್ಮಾನವನ್ನು ಕೇಳಿದ ಅವರ ಪತ್ನಿಯೂ ಅಷ್ಟೇ ವಿಸ್ಮಯವನ್ನು ವ್ಯಕ್ತಪಡಿಸಿ, ಗಾಂಧೀಜಿಯವರಿಗೆ ಕೂಡಲೆ ಈ ರೀತಿ ತಂತಿ ಕಳುಹಿಸಿದರು:

> ನನ್ನ ಪತಿಯವರಾದ ಮೌಲಾನಾ ಅಬುಲ್ ಕಲಾಂ ಆಜಾದರ ಮೊಕದ್ದಮೆಯಲ್ಲಿ ಈ ದಿನ ತೀರ್ಪು ಕೊಡಲ್ಪಟ್ಟಿತು. ಅವರಿಗೆ ಒಂದೇ ಒಂದು ವರುಷ ಸೆರೆವಾಸ ಸಿಕ್ಕಿದೆ. ನಾನು ನಿರೀಕ್ಷಿಸಿ ಸಿದ್ಧವಾಗಿದ್ದುದಕ್ಕಿಂತ ಇದು ಬಹಳ ಕಡಮೆಯೇ. ದೇಶಸೇವೆಗೆ ಸೆರೆವಾಸವೂ ದಂಡವೂ ಬಹುಮಾನವೆನ್ನುವುದಾದರೆ ಆಜಾದರಿಗೆ ಸರಿಯಾದ ಬಹುಮಾನ ದೊರೆತಿಲ್ಲವೆಂದು ನೀವು ಒಪ್ಪಲೇಬೇಕು. ಆಜಾದರು ಯಾವ ಶಿಕ್ಷೆಗೆ ಅರ್ಹರೋ ಅದರಲ್ಲಿ ಅಲ್ಪ ಭಾಗ ಮಾತ್ರ ಅವರಿಗೆ ಇಂದು ದೊರೆತಿದೆ. (ಪುಟ ೪೦)

ಈ ರೀತಿಯಾದ ಸಮಾನ ಹೃದಯವುಳ್ಳ ಸತಿ ದೊರೆತಿದ್ದು ಆಜಾದರ ಮಹಾ ಭಾಗ್ಯವೆಂದು ತೋರುತ್ತದೆ. ಭರತಖಂಡದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಈ ರೀತಿ ತಮ್ಮ ಪತಿಯ ಆದರ್ಶಕ್ಕೆ ತಕ್ಕಂತೆ ವರ್ತಿಸಿದ ಮಹಾಸಾಧ್ವಿಯರು ಎಷ್ಟು ಜನವೋ ಹೇಳತೀರದು! ಇಂಥ ಆದರ್ಶ ಪತ್ನಿಯನ್ನು ಆಜಾದರು ಕಳೆದುಕೊಂಡ ಸನ್ನಿವೇಶವಂತೂ ತುಂಬ ಹೃದಯವಿದ್ರಾವಕವಾಗಿದೆ. ೧೯೪೨ರಲ್ಲಿ ಚಳುವಳಿಯಲ್ಲಿ ಆಕೆ ಸೆರೆಮನೆಯಲ್ಲಿದ್ದಾಗ ಸಾವಿಗೆ ತುತ್ತಾದರು. ಆಗ ಆಕೆಗೆ ತಮ್ಮ ಪತಿಯ ಸಾನ್ನಿಧ್ಯ ಲಭಿಸದೆ ಹೋಯಿತು. ಆಜಾದರು ಆ ಯಾತನೆಯನ್ನು ಹೇಗೆ ಅನುಭವಿಸಿದರೋ ಅವರೇ ಬಲ್ಲರು.

ಮೇಲೆ ಹೇಳಿದ ತೀರ್ಪನ್ನು ಆಲಿಸಿದ ಆಜಾದರು ಕೊಟ್ಟ ಹೇಳಿಕೆ ಅವರ ವ್ಯಕ್ತಿತ್ವ ಸರ್ವಸ್ವವನ್ನು ಪ್ರತಿಬಿಂಬಿಸುವಂತಿದೆ :

> ಮನುಷ್ಯನ ಕೈಯಲ್ಲಿ ನ್ಯಾಯಸ್ಥಾನವೂ ಯುದ್ಧಭೂಮಿಯೂ ಒಂದೇ ಆಗಿವೆ. ಮತಸ್ಥಾಪಕರಾದ ಸಾಧುಗಳು, ದೇವಾಂಶ ಪುರುಷರು, ವಿಜ್ಞಾನ ಶಾಸ್ತ್ರಜ್ಞರು, ಹೊಸ ಹೊಸ ಶೋಧಕರು ಎಲ್ಲರೂ ನ್ಯಾಯಾಸ್ಥಾನದ ಮುಂದೆ ಬಂದಿದ್ದಾರೆ. ಆ ಮಹನೀಯರನ್ನೆಲ್ಲಾ ಅನೀತಿಯ ಸರ್ಕಾರ ತಮ್ಮ ಆಯುಧವಾದ ನ್ಯಾಯಾಸ್ಥಾನದ ಮುಂದೆ, ತಪ್ಪಿತಸ್ಥನನ್ನು ನಿಲ್ಲಿಸಿದಂತೆ ನಿಲ್ಲಿಸಿದೆ. ನ್ಯಾಯಾಸ್ಥಾನದಲ್ಲಿ ನಡೆದಿರುವ ಅನ್ಯಾಯಗಳು, ಕೊನೆಯಿಲ್ಲದೆ ಪಟ್ಟಿಯಾಗುತ್ತವೆ. ಈ ಅನ್ಯಾಯಗಳ ಮುಂದೆ, ಹತ್ಯಾಕಾರನಂತೆ ನಿಲ್ಲಿಸಿ ದಂಡಿಸಿರುವ ಏಸು ನಮ್ಮ ಕಣ್ಣಿಗೆ ಮೊದಲು ಬೀಳುತ್ತಾನೆ. ತನ್ನ ಕಾಲದಲ್ಲಿ ಎಲ್ಲರಿಗಿಂತ ತಾನು ಹೆಚ್ಚು ಜ್ಞಾನಿಯಾಗಿದ್ದುದೇ ತನ್ನ ತಪ್ಪಾಗಿ ವಿಷದಿಂದ ಪ್ರಾಣ ಬಿಡುವ ಶಿಕ್ಷೆಗೊಳಗಾದ ಮಹಾತ್ಮಾ ಸಾಕ್ರಟೀಸನನ್ನು ಈ ಪಟ್ಟಿಯಲ್ಲಿ ನೋಡುತ್ತೇವೆ. ತನ್ನ ಕಾಲದ ಮೂಢರಿಗಿಂತ ಹೆಚ್ಚು ಜ್ಞಾನಿಯಾಗಿ, ತಾನು ಕಂಡ ನಿಜವಾದ ಅಂಶವನ್ನು ಜಗತ್ತಿನ ಮಂಗಳಕ್ಕಾಗಿ ಹೇಳಿ, ಆ ಮೂಢರ ಕೈಲಿ ಮರಣದಂಡನೆಗೆ ಗುರಿಯಾದ ಗೆಲಿಲಿಯೋವನ್ನು ನೋಡುತ್ತೇವೆ. ಅಂತಹ ಮಹನೀಯರು ನಿಂತಿದ್ದ ಸ್ಥಳದಲ್ಲಿ ನಿಲ್ಲುವ ಅವಕಾಶವೂ ಅಂತಹ ಶಿಕ್ಷೆ

ಯನ್ನು ಹೊಂದುವ ಸಂಭವವೂ ನನಗೆ ದೊರೆತುದರಿಂದ ನಾನು ಆನಂದಿತನಾಗಿ ದೇವರನ್ನು ವಂದಿಸುತ್ತೇನೆ. (ಪುಟ ೪೩–೪೪)

ಆಜಾದರ ಈ ಹೀರಿಕತಾವಾಕ್ಯಗಳನ್ನು ಕೇಳಿದರೆ ಯಾರಿಗಾದರೂ ಅವರ ಮನಸ್ಸಿನ ಅಚಲತೆ ಆಶ್ಚರ್ಯವನ್ನು ಉಂಟುಮಾಡದೆ ಇರುವುದಿಲ್ಲ. ಆ ತರುವಾಯ ಅವರು ಸರ್ಕಾರದ ಉಗ್ರನೀತಿಯನ್ನು ಖಂಡಿಸಿ, ಸ್ವಾತಂತ್ರ್ಯವೆನ್ನುವುದು ಎಂತಹ ಪವಿತ್ರವಾದ ವಸ್ತುವೆನ್ನುವುದನ್ನು ವಿವರಿಸಿರುತ್ತಾರೆ:

ಮನುಷ್ಯ ಸ್ವತಂತ್ರನಾಗಿರಬೇಕೆಂಬುದು ದೇವರ ಇಚ್ಛೆ. ಇದೇ ಪ್ರಕೃತಿ ನಿಯಮ. ದೇವರ ಸೇವಕರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಳ್ಳಲು ಯಾವ ಮನುಷ್ಯನಿಗೂ ಯಾವ ಅಧಿಕಾರವರ್ಗಕ್ಕೂ ಹಕ್ಕು ಇಲ್ಲ. ಗುಲಾಮಗಿರಿಯು ಸರಪಣಿ ಚಿನ್ನದ್ದಾದರೂ ಅದು ಗುಲಾಮಗಿರಿಯೇ. ಅದು ದೇವಇಚ್ಛೆಗೂ ಆಜ್ಞೆಗೂ ವಿರೋಧವಾದುದೇ. ಆದುದರಿಂದ ಅಸ್ವಾತಂತ್ರ್ಯದಿಂದ ಈ ನಾಡನ್ನು ಬಿಡಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದೆ. (ಪುಟ ೪೪)

ತಾವು ಜನ್ಮತಃ ಮುಸಲ್ಮಾನರಾಗಿದ್ದರೂ ಪೌರರಾಗಿ ಭಾರತೀಯರೆಂಬುದನ್ನು ಅವರು ಎಂದೂ ಮರೆತವರಲ್ಲ. ಹಾಗೂ, ತಾವು ಕೈಕೊಂಡಿರುವ ಚಳುವಳಿ ಮುಸಲ್ಮಾನರ ಧಾರ್ಮಿಕ ದೃಷ್ಟಿಯಿಂದಲೂ ಎಷ್ಟು ಉಚಿತವಾದುದೆಂಬುದನ್ನೂ ಈ ಹೇಳಿಕೆಯಲ್ಲಿ ತಿಳಿಸಿರುತ್ತಾರೆ:

ದೇಶದ ಏಳಿಗೆಗೆ ಸರಿಯಾದ ಅವಕಾಶ ಕೊಡದ ಮುಸಲ್ಮಾನ ರಾಜ್ಯಾಂಗವನ್ನು ಸಹ ಎದುರಿಸುವುದು ಮುಸಲ್ಮಾನರ ಕರ್ತವ್ಯ. ಹೀಗಿರುವಲ್ಲಿ ಭಾರತ ಸರ್ಕಾರದ ವಿಷಯದಲ್ಲಿ ಇಸ್ಲಾಂ ನಡತೆ ಹೇಗಿರಬೇಕೆಂದು ಹೇಳಬೇಕಾದುದೇ ಇಲ್ಲ. ಇಂದು ಭಾರತದಲ್ಲಿ ಸ್ಥಾಪಿತವಾದ ಸರ್ಕಾರ ನಿರಂಕುಶಾಧಿಕಾರ. ಇಂತಹ ಸರ್ಕಾರವನ್ನು ಎದುರಿಸುವುದು ನಾನು ಮುಸಲ್ಮಾನನೆಂಬ ದೃಷ್ಟಿಯಿಂದಲೇ ನನ್ನ ಮುಖ್ಯ ಕರ್ತವ್ಯ. ಇಸ್ಲಾಂ ದೀರ್ಘದರ್ಶಿಯು ಮುಸಲ್ಮಾನರಿಗೆ ಈ ತತ್ವವನ್ನು ಬೋಧಿಸಿದ: 'ದುಷ್ಟ ಸರ್ಕಾರದ ಎದುರಿನಲ್ಲಿ ಯಾರು ಸತ್ಯವನ್ನು ಬಹಿರಂಗವಾಗಿ ಹೇಳಿ ಅದರ ಕಾರಣಕ್ಕಾಗಿ ಮರಣವನ್ನು ಅನುಭವಿಸುವನೋ ಅವನೇ ಪುಣ್ಯವಂತ.' ಯಾರು ದೇವರಿಗೆ ಮಾತ್ರ ಹೆದರುತ್ತಾರೆಯೋ, ತಮಗೆ ಸತ್ಯವೆಂದು ತೋರಿದುದನ್ನು ಬಹಿರಂಗವಾಗಿ ಪ್ರಕಟಿಸುತ್ತಾರೆಯೋ ಅವರೇ ನಿಜವಾದ ಮುಸಲ್ಮಾನರು. ಮುಸಲ್ಮಾನರು ಭೂಮಿಯಲ್ಲಿ ಸತ್ಯಕ್ಕೆ ಸಾಕ್ಷಿಯಾಗಿರಬೇಕು. ಆದುದರಿಂದ ಅವರು ಬಹಿರಂಗವಾಗಿ ಸಾಕ್ಷಿ ಕೊಡದೆ ವಿಧಿಯಿಲ್ಲ. ಅವರು ಸತ್ಯದ ಸಾಕ್ಷಿ ಕೊಡಬೇಕೆಂಬುದೇ ಖುರಾನಿನ ಬೋಧೆ. ಇಸ್ಲಾಂನಂತೆ 'ಎಲ್ಲಿ ಯಾರೆಡೆ ಇದ್ದರೂ ಸತ್ಯವನ್ನೇ ಹೇಳುತ್ತೇನೆ' ಎಂಬ ಮಾತು ಪ್ರತಿಯೊಬ್ಬ ಮುಸಲ್ಮಾನನ ಧರ್ಮ. (ಪುಟ ೪೫–೪೬)

ಆಜಾದರು ಹೆಸರಿಗೆ ತಕ್ಕಂತೆ ಚಿಕ್ಕಂದಿನಿಂದಲೂ ಸ್ವಾತಂತ್ರ್ಯಪ್ರಿಯರಾಗಿದ್ದರು. ಗಾಂಧೀಜಿಯಂತಹ ಗುರುಗಳು ತಮಗೆ ಲಭಿಸಿದ್ದು ಮಹಾಭಾಗ್ಯವೆಂದು ಅವರು ಮುಚ್ಚು ಮರೆಯಿಲ್ಲದೆ ಹೇಳಿದ್ದಾರೆ :

> ನನ್ನ ಬಾಲ್ಯದಿಂದ ನನಗೆ ಸ್ವಾತಂತ್ರ್ಯದಲ್ಲಿ ಪ್ರೇಮ. ನನ್ನ ಆಯುಸ್ಸನ್ನೆಲ್ಲ ಸ್ವಾತಂತ್ರ್ಯ ಸಾಧನೆಗೇ ಕಳೆದಿದ್ದೇನೆ. ನನ್ನ ೧೮ನೆಯ ವಯಸ್ಸಿಗೆ ಈ ಆಸೆ ಉಂಟಾಯಿತು. ಇದೇ ನನ್ನ ಜೀವನದ ಧ್ಯೇಯವಾಯಿತು. ಸ್ವಾತಂತ್ರ್ಯವೆಂಬುದು ನನ್ನ ಹಗಲು ರಾತ್ರಿಯ ಕನಸಾಯಿತು. ಅನಂತರ ನನಗೆ ೪ ವರುಷ ಕಾವಲು ನಿಯಮಿಸಿದರು. ಆಗಲೂ ನಾನು ಭಾರತದ ಸ್ವಾತಂತ್ರ್ಯಕ್ಕೇ ಸಿದ್ಧನಾದೆ. ಜನರನ್ನು ತಯಾರಿಸಿದೆ. ನಾನು ಬದುಕಿರುವುದು ಈ ಸ್ವಾತಂತ್ರ್ಯದ ಒಂದೇ ಒಂದು ಗುರಿಗಾಗಿ; ಕುರಾನಿನಲ್ಲಿ ಹೇಳಿರುವ ನನ್ನ ಅನುಷ್ಠಾನಗಳು ನನ್ನ ಬಾಳು, ಸಾವು, ಎಲ್ಲವೂ ಜಗತ್ ಸ್ವಾಮಿಯಾದ ದೇವರಿಗಾಗಿಯೇ. ಭಾರತದ ಮುಸಲ್ಮಾನರು ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಬೇಕೆಂದು ಎಲ್ಲಾ ಚಳುವಳಿ ಮಾಡಿದವನೂ ನಾನೇ.
>
> ....ಗಾಂಧೀಯವರ ನೇತೃತ್ವದಲ್ಲಿ ನನಗೆ ಪೂರ್ಣನಂಬಿಕೆ. ಆಯುಧಗಳಿಂದ ಭಾರತಕ್ಕೆ ಮುಕ್ತಿಯಿಲ್ಲ. ಆ ಮಾರ್ಗ ಮಂಗಳಕರವಾದುದಲ್ಲ ಎಂಬುದು ನನ್ನ ದೃಢವಾದ ಅಭಿಪ್ರಾಯ. ಅಹಿಂಸೆಯನ್ನು ಆಯುಧವಾಗಿ ಹೊಂದಿದ ಚಳುವಳಿಯಿಂದ ಮಾತ್ರವೇ ಭಾರತಕ್ಕೆ ಸ್ವಾತಂತ್ರ್ಯ ಲಭಿಸುವುದು. ಭಾರತ ಜಯ ಹೊಂದಿದರೆ ಇದು ಜಗತ್ತಿನ ಇತಿಹಾಸದಲ್ಲಿ ಪ್ರಸಿದ್ಧವಾದ ಧಾರ್ಮಿಕ ಜಯವಾಗುವುದು. (ಪುಟ ೪೨–೪೮)

ಪುಟಗಟ್ಟಲೆಯಿರುವ ಈ ಹೇಳಿಕೆ ಆಜಾದರ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಸ್ವಯಂ ಸಾಕ್ಷಿಯಂತಿದೆ. ಈ ತತ್ವನಿಷ್ಠೆಯಿಂದ ಭಾರತದ ಬಿಡುಗಡೆಗಾಗಿ ಕಂಕಣ ತೊಟ್ಟ ಈ ಹಿರಿಯ ಮುಸಲ್ಮಾನರ ಬಂಧು ನಮ್ಮ ದೇಶದ ಇತಿಹಾಸದಲ್ಲಿ ಇಂದು ಅಮರವಾದ ಹೆಸರನ್ನೇ ಸಂಪಾದಿಸಿರುತ್ತಾರೆ. ಗಾಂಧೀಜಿಯವರ ಅನುಯಾಯಿಗಳಲ್ಲಿ ಪ್ರಮುಖರ ಪಂಕ್ತಿಗೆ ಸೇರಿದವರು ಅವರು. ಇಂಥವರನ್ನು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ಆರಿಸಿ ಭಾರತೀಯರು ಗೌರವಿಸಿದರು. ದೇಶವು ಸ್ವತಂತ್ರವಾದ ಮೇಲೆ ಅವರು ಭಾರತದ ಸಚಿವರಲ್ಲಿ ಒಬ್ಬರೂ ಆಗಿದ್ದರು.

ಆಜಾದರು ಅಜಾನುಬಾಹುಗಳು. ಬರಿವಣಿಗೆಯಲ್ಲಿ ಎಂತೋ ಮಾತಿನಲ್ಲಿಯೂ ಹಾಗೆಯೇ ನಿಸ್ಸೀಮರು. ಸಹಸ್ರ ಸಹಸ್ರ ಜನಸ್ತೋಮವನ್ನು ತಮ್ಮ ಅಸ್ಖಲಿತವಾದ ವಾಣಿಯಿಂದ ಬೆರಗುಮಾಡಬಲ್ಲ ನೇತಾರರು. ವಿದ್ಯಾಪಾರಂಗತರು, ಸರಸಿಗಳು. ಸಮಸ್ತ ಮುಸ್ಲಿಂ ಜನಾಂಗಕ್ಕೆ ಅವರು ನೀಡಿರುವ ಪವಿತ್ರವಾದ ಕೊಡುಗೆಯೆಂದರೆ ಅವರು ಕುರಾನಿಗೆ ಬರೆದಿರುವ ನೂತನ ವ್ಯಾಖ್ಯಾನ. ಅತ್ತ ಧಾರ್ಮಿಕ ಕ್ಷೇತ್ರದಲ್ಲಿಯೂ ಇತ್ತ

ರಾಜಕೀಯ ಕ್ಷೇತ್ರದಲ್ಲಿಯೂ ಅವರಷ್ಟು ಸ್ಥಾನ ಮಾನಗಳನ್ನು ಸಂಪಾದಿಸಿದ ವ್ಯಕ್ತಿಗಳು ವಿರಳ. ಇಂಥ ಮಹನೀಯರ ಜೀವನವನ್ನು ಗೊರೂರರು ಬಹಳ ಶ್ರದ್ಧೆಯಿಂದ ಕನ್ನಡದಲ್ಲಿ ನಿರೂಪಿಸಿರುವರು. ಆಜಾದರನ್ನು ಕುರಿತು ಅವರ ಪುಸ್ತಕದ ಮುಕ್ತಾಯದಲ್ಲಿ ಆಡಿರುವ ಮಾತುಗಳು ಅನುರಂಜಿಸುತ್ತಿವೆ:

> (ಆಜಾದರು) ಒಳ್ಳೆಯ ಜ್ಞಾನಿ, ದೇಶಭಕ್ತರು, ಧೀರರು...ಭಾರತದ ಸುಪುತ್ರರಲ್ಲಿ ಅಗ್ರಗಣ್ಯರು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಕೈಕೊಂಡ ಭಾರತ ಸೇವೆಯ ದೀಕ್ಷೆಯ ಮಾರ್ಗದಿಂದ ಅವರು ಸ್ವಲ್ಪವೂ ಕದಲಲಿಲ್ಲ. ಈ ಸೇವೆ ಅವರು ತಮ್ಮ ಹೃದಯದ ಆನಂದಕ್ಕಾಗಿ ಮಾತ್ರವೇ ಮಾಡಿದುದು. ಯಾವ ವಿಧವಾದ ಸಾಮ್ರಾಜ್ಯಾಡಂಬರವೂ ಇವರಿಗೆ ಇಷ್ಟವಿಲ್ಲ. ಬೇಗಂ ಆಜಾದರಿಗಾಗಿ ಕೇಳಲಾಗುತ್ತಿದ್ದ ಸ್ಥಿತಿಯನ್ನು ಸಹ ಅವರು ಬೇಡವೆಂದರು. ಇವರ ಹೃದಯ ವಿಶಾಲವಾದದ್ದು. ಜಗತ್ತೆಲ್ಲ ಸುಖವಾಗಿರಬೇಕೆಂಬುದು ಅವರ ಗುರಿ. ಸರ್ವಾಧಿಕಾರ ಪ್ರಭುತ್ವವನ್ನು ಇವರು ಸರ್ವಥಾ ಒಪ್ಪುವುದಿಲ್ಲ. (ಪುಟ ೧೦೬)

ಆಜಾದರ ಈ ಜೀವನಚರಿತ್ರೆ ಆಕಾರದಲ್ಲಿ ಚಿಕ್ಕದಾದರೂ ಲೇಖಕರು ತುಂಬ ತಾದಾತ್ಮ್ಯದಿಂದ ಬರೆದಿರುವುದನ್ನು ಇಲ್ಲಿನ ಸರಳಸರಣಿಯಲ್ಲಿ ಕಾಣಬಹುದು.

ಗೊರೂರರು ಯಾವ ಜೀವನಚರಿತ್ರೆಯನ್ನೂ ಉದ್ದೇಶಪೂರ್ವಕವಾಗಿ ಪ್ರೌಢವಾಗಿ ಶಾಸ್ತ್ರೀಯವಾಗಿ, ಸ್ಪಷ್ಟವಾಗಿ ಬರೆಯದೆ ಇರಬಹುದು. ಇದು ಅವರ ಕ್ಷೇತ್ರವೂ ಅಲ್ಲ. ಆದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮಹಾತ್ಮ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ನಂಬಿಕೆಯಿದ್ದ ಈ ಲೇಖಕರಿಗೆ ಆ ಧೀರರ ದಾರಿಯಲ್ಲಿ ನಡೆದ ಒಬ್ಬೊಬ್ಬರೂ ಆದರ್ಶವ್ಯಕ್ತಿಗಳೇ ಸರಿ. ತಮ್ಮ ಜೀವನಾದರ್ಶವನ್ನು ನಿರೂಪಿಸಿಕೊಳ್ಳುವಲ್ಲಿ ಅವರು ಸ್ವೀಕರಿಸಿದ ಸಂಗತಿಗಳನ್ನು ಇಲ್ಲಿ ನಿರಾಡಂಬರವಾಗಿ ನಿರೂಪಿಸಿದ್ದಾರೆ ಎನ್ನಬಹುದು. ಇಂಗ್ಲೀಷಿನ ಕವಿಯೊಬ್ಬನು ಈ ಬಗ್ಗೆ ಆಡಿರುವ ನುಡಿಗಳು ಎಂದೆಂದಿಗೂ ಮನನೀಯವಾಗಿವೆ. ಆ ಮಾತುಗಳೊಂದಿಗೆ ಈ ಲೇಖನವನ್ನು ಮುಗಿಸಲು ಆಶಿಸುತ್ತೇನೆ:

Lives of greatmen all remind us
We can make our lives sublime.

LONGFELLOW

'ಸಾಹಿತ್ಯರಶ್ಮಿ'

ಸಿ. ಪಿ. ಕೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕನ್ನಡ ನಾಡಿನಲ್ಲಿ ಮನೆಮಾತಾಗಿ ಪರಿಣಮಿಸಿರುವ ಹೆಸರು. ಅದನ್ನು ಪೂರ್ತಿ ಹೇಳಬೇಕಾಗಿಯೂ ಇಲ್ಲ; ಗೊರೂರು ಎಂದರೆ ಸಾಕು, ಹೇಮಾವತಿ ಎಂದರೆ ಸಾಕು, ಆ ಹೆಸರು ತಾನಾಗಿಯೆ ಧ್ವನಿಗೊಳ್ಳುತ್ತದೆ. ಗೊರೂರು, ಹೇಮಾವತಿಗಳು ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯದಿಂದ ಅಮರವಾಗಿವೆ. ಹೀಗೆ ಒಂದು ಊರಿನೊಡನೆ, ನದಿಯೊಡನೆ ತಮ್ಮ ಹೆಸರು ಬೆರಸಿದ ಲೇಖಕರು ನಮ್ಮಲ್ಲಿ ಬಹಳ ಮಂದಿಯಿಲ್ಲ; ಯಾವ ಸಾಹಿತ್ಯದಲ್ಲಾದರೂ ಕಡಮೆಯೆ.

ಪ್ರಬಂಧ ಕತೆ ಕಾದಂಬರಿಗಳ ಲೇಖಕರೆಂದೆ ಗೊರೂರು ರಾಮಸ್ವಾಮಿ ಅಯ್ಯಂಗಾರರು ನಾಡಿನಲ್ಲಿ ಖ್ಯಾತರಾಗಿರುವುದು: ಅದರಲ್ಲೂ ಅವರ ಪ್ರಬಂಧಗಳು ಅವರನ್ನು ನಗೆಬರಹಗಾರರೆಂದೆ ಕನ್ನಡಿಗರಿಗೆ ವಿಶೇಷವಾಗಿ ಪರಿಚಯಿಸಿ ಆತ್ಮೀಯರನ್ನಾಗಿಸಿವೆ. ಆದರೆ ಗೊರೂರರ ವ್ಯಕ್ತಿತ್ವ ಹಾಗೂ ಲೇಖನ ಕರ್ಮಕ್ಕೆ ಇನ್ನೊಂದು ಮುಖವೂ ಇದೆ: ವಿಮರ್ಶೆ ವಿಚಾರ ಜಿಜ್ಞಾಸೆ ಮಂಥನಗಳಲ್ಲೂ ಅವರು ಗಟ್ಟಿ ಕುಳ. ನಗಬಲ್ಲ, ನಗಿಸಬಲ್ಲ ಈ ವ್ಯಕ್ತಿ ಗಂಭೀರವಾಗಿ ಚಿಂತಿಸಲೂ ಬಲ್ಲರು; ಮೇಲೆ ಮೇಲೆ ತೇಲಾಡಬಲ್ಲರಷ್ಟೆ ಅಲ್ಲ, ಆಳಕ್ಕೆ ಮುಳುಗಲೂ ಬಲ್ಲರು. ಬರಿಯ ಮರಳಲ್ಲ, ಉಸುಬಲ್ಲ ಅವರ ಬರವಣಿಗೆ; ಈ ಪದರಗಳ ಕೆಳಗೆ ಅಥವಾ ಜೊತೆಗೆ ಶಿಲಾಸ್ತರವೂ ಉಂಟು.

ಗೊರೂರರ ವ್ಯಕ್ತಿತ್ವ ಹಾಗೂ ಸಾಹಿತ್ಯದ ವೈಚಾರಿಕ ಮುಖಕ್ಕೆ ಕನ್ನಡಿ ಹಿಡಿಯುವ ಕೃತಿಗಳಲ್ಲಿ ಕಲಶಪ್ರಾಯವಾದದ್ದು ಅವರ 'ಸಾಹಿತ್ಯರಶ್ಮಿ'. ಈ ಶೀರ್ಷಿಕೆ ಸಂಕುಚಿತವೆನ್ನಬೇಕು; ಏಕೆಂದರೆ ಪ್ರಕೃತ ಹೊತ್ತಗೆಯಲ್ಲಿ ಸಾಹಿತ್ಯ ಮಾತ್ರವೆ ಚರ್ಚಿತವಾಗಿಲ್ಲ; ಲೇಖಕರ ದೃಷ್ಟಿ ಪ್ರಸಾರ ಇನ್ನೂ ವ್ಯಾಪಕವಾಗಿದ್ದು ಜೀವನದ ಹಲವಾರು ಶಾಖೆಗಳನ್ನೊಳಗೊಂಡಿದೆ. ಸಾಹಿತ್ಯ, ಶಿಲ್ಪಕಲೆ, ಚಿತ್ರಕಲೆ, ಶಿಕ್ಷಣ, ವೃತ್ತಪತ್ರಿಕೆ, ಜೀವನ

ತತ್ತ್ವ—ಹೀಗೆ ಅನೇಕ ವಿಷಯಗಳನ್ನು ವಿವೇಚನೆಗೆ ಗುರಿಪಡಿಸುವ ವೈವಿಧ್ಯಪೂರ್ಣವೂ ವಿಚಾರಸಂಪನ್ನವೂ ಆದ ಗ್ರಂಥ 'ಸಾಹಿತ್ಯಪತ್ರಿ.'

ಇದರಲ್ಲಿ ಸಂಕಲಿತವಾಗಿರುವ ಇಪ್ಪತ್ತನಾಲ್ಕು ಲೇಖನಗಳಲ್ಲಿ ಗೊರೂರರ ಬಹುಮುಖಾಭಿರುಚಿ, ಬಹುಭಾಷಾಭಿಜ್ಞತೆಗಳೂ ವ್ಯುತ್ಪತ್ತಿ ಪಾಂಡಿತ್ಯಗಳೂ ವಿಚಾರ ವಿಮರ್ಶನ ಪ್ರವೃತ್ತಿಗಳೂ ಚೆನ್ನಾಗಿ ವ್ಯಕ್ತವಾಗಿವೆ. ಒಂದೊಂದು ಲೇಖನದಲ್ಲೂ ಗೊರೂರರು ಉದ್ದಿಷ್ಟ ವಿಷಯವನ್ನು ಸರಳವಾಗಿ, ಸ್ಪಷ್ಟವಾಗಿ, ನಿರ್ದುಷ್ಟವಾಗಿ ಪರಿಚಯ ಮಾಡಿಕೊಡುತ್ತಾರೆ; ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯವಾದರೆ ಮೂಲದಿಂದ ವಿಪುಲವಾಗಿ ಉದ್ಧೃತಿಗಳನ್ನು ಕೊಟ್ಟು ಆಸ್ವಾದನಕ್ಕೆ ಅವಕಾಶ ಕಲ್ಪಿಸುತ್ತಾರೆ. ಕೆಲವು ಲೇಖನಗಳಲ್ಲಿ ಅವರು ಎತ್ತಿಕೊಂಡಿರುವ ವಿಷಯಗಳು ಕನ್ನಡದಲ್ಲಿ ಇದುವರೆಗೆ ಬಂದಿರಲಿಲ್ಲವೆಂಬುದು ಗಮನಾರ್ಹ: ಅವುಗಳನ್ನವರು ಕನ್ನಡಿಗರಿಗೆ ತಿಳಿಸಿ, ಅರಿವಿನ ದಿಗಂತವನ್ನು ವಿಸ್ತರಿಸಿದ್ದಾರೆ. ನಮ್ಮ ಜನ ಓದಿ ಸವಿಯಬೇಕಾದ, ಮೆಲುಕು ಹಾಕಬೇಕಾದ ಸಾಮಗ್ರಿ ಇಲ್ಲಿ ಬಹಳ ಇದೆ: ಕೇವಲ ಪ್ರವೇಶ ದೊರಕಿಸಿ, ಹಸಿವು ಹುಟ್ಟಿಸಿ, ಇನ್ನೂ ಶ್ರೀಮಂತವಾದುದರತ್ತ ಮಾರ್ಗದರ್ಶನ ಮಾಡಿಸುವ ಭಾಗವೂ ಸಾಕಷ್ಟಿದೆ. ಒಟ್ಟಿನಲ್ಲಿ ಇಲ್ಲಿನ ಬರಹಗಳು ಬೇರೆ ಬೇರೆ ಹಂತಗಳಲ್ಲಿ ಸಾಹಿತ್ಯಾಭ್ಯಾಸಿಗಳಿಗೆ ಮತ್ತು ಇತರರಿಗೆ ಉಪಯುಕ್ತವಾಗುತ್ತವೆ.

ಮೊದಲು ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಅವಲೋಕಿಸಬಹುದು. 'ಕಾವ್ಯವನ್ನು ಕುರಿತು' ಲೇಖನದಲ್ಲಿ ಕಾವ್ಯದ ಗುರಿ, ತಂತ್ರಕೌಶಲ, ಉತ್ಕೃಷ್ಟ ಕಾವ್ಯದ ಗುಣಗಳು, ಕವಿ ದಾರ್ಶನಿಕ ವಿಜ್ಞಾನಿಗಳ ಸಂಬಂಧ, ವಾಸ್ತವಿಕತೆ ಮುಂತಾದುವನ್ನು ಕುರಿತು ಪರಂಪರಾಗತವಾದ ವಿಚಾರಗಳನ್ನೇ ಒಂದೆಡೆ ಕ್ರೋಢೀಕರಿಸಲಾಗಿದೆ. ಕಾವ್ಯದ ಗುರಿಯ ಬಗೆಗೆ ಗೊರೂರರು ಹೇಳುತ್ತಾರೆ: "ಆತ್ಮಾನಂದವನ್ನು ಕೊಡುವವರೆಗೆ ಕಾವ್ಯ ತನ್ನ ಕರ್ತವ್ಯವನ್ನು ಪೂರ್ಣವಾಗಿ ಮಾಡಿದಂತಾಗುವುದಿಲ್ಲ." (ಪುಟ ೧೪೮) ತಂತ್ರದ ಬಗ್ಗೆ ಅವರ ಅಭಿಪ್ರಾಯ: "ಕಲೆ ಪರಿಪೂರ್ಣವಾಗಬೇಕಾದರೆ ನಿರ್ದೋಷವಾದ ತಂತ್ರ ಪ್ರಯೋಗ ಮೊದಲನೆಯ ಹೆಜ್ಜೆ. ಆದರೆ ಇನ್ನೂ ಅನೇಕ ಹೆಜ್ಜೆಗಳಿವೆ…ಕವಿ ತಂತ್ರದ ಮೇಲೆ ಅಷ್ಟೊಂದು ದೃಷ್ಟಿಯಿಡಬೇಕಾದುದಿಲ್ಲ. ತಂತ್ರ ಅವನಿಗೂ ಇರಬೇಕೆಂಬುದು ನಿಜ. ಆದರೆ ಕಾವ್ಯಸೃಷ್ಟಿಯ ಕಾವಿನಲ್ಲಿ ತಂತ್ರ, ಗೌಣಸ್ಥಾನವನ್ನು ಹೊಂದುತ್ತದೆ." (ಪುಟ ೧೪೯) ಕಾವ್ಯದ ಉತ್ಕೃಷ್ಟತೆಗೆ ಮೂರು ಗುಣಗಳ ಸಾಮರಸ್ಯ ಅವಶ್ಯ: "ಛಂದಸ್ಸಿನ ಪರಿಪೂರ್ಣತೆ, ಮಾತು ಭಾವಗಳ ಪಾರಿಶುದ್ಧತೆ, ಉತ್ಕೃಷ್ಟ ವಸ್ತು, ಸತ್ಯದ ದಿವ್ಯದರ್ಶನ." (ಪುಟ ೧೫೧) ಆಧುನಿಕ ಕವಿತೆಯ ಛಂದೋರಾಹಿತ್ಯವನ್ನು ಕುರಿತು ಗೊರೂರರ ಮಾತುಗಳು ಗಮನಾರ್ಹವಾಗಿವೆ: "ಆಧುನಿಕ ಕವಿತೆ ಛಂದಸ್ಸನ್ನು ಹಾರಿಸಿದೆ. ಇದರ ಪ್ರಯೋಗ ಫ್ರಾನ್ಸ್, ಇಟಲಿ ಅಮೆರಿಕ ಎಲ್ಲೆಲ್ಲೂ ನಡೆದಿದೆ. ಎಡ್ವರ್ಡ್ ಕಾರ್ಪೆಂಟರ್, ವಾಲ್ಟ್ ವಿಟ್‌ಮನ್ ಮುಂತಾದವರು ಈ ಮಾರ್ಗದಲ್ಲಿಯೂ ಸಿದ್ಧಿ ಪಡೆದಿದ್ದಾರೆ. ಆದರೆ ಅವರು ಹೆಚ್ಚಾಗಿ ಸಿದ್ಧಿ ಪಡೆದುದು, ತಮ್ಮ ಕಾವ್ಯಶಕ್ತಿಯಿಂದಲೇ

ಹೊರತು ಬರಿಯ ಛಂದಸ್ಸನ್ನು ಬಿಟ್ಟುದರಿಂದ ಮಾತ್ರವಲ್ಲ. ಛಂದಸ್ಸನ್ನು ಬಿಡುವುದು, ಕಾವ್ಯದ ಮುಂಗಳ ಭವಿಷ್ಯದ ದೃಷ್ಟಿಯಿಂದ ಸಾಧುವೇ ಅಸಾಧುವೇ ಎಂಬುದರ ಮೇಲೆ ಕಡೆಯ ಮಾತು ಈಗಲೇ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಇದುವರೆಗಿನ ಪರಂಪರಾಗತವಾದ ಛಂದೋಬದ್ಧವಾದ ವರಕವಿಗಳ ಕಾವ್ಯಗಳನ್ನು ಸ್ಫೂರ್ತಿಯಲ್ಲಿಯೂ ಗಾನದಲ್ಲಿಯೂ ಸಂದೇಶದಲ್ಲಿಯೂ ಆತ್ಮಶಕ್ತಿಯಲ್ಲಿಯೂ ಹಿಂದಕ್ಕೆ ಹಾಕುವ ಕಾವ್ಯ, ಛಂದಸ್ಸುರಹಿತವಾದ ಕವಿತೆಯಲ್ಲಿ ಬರುವವರೆಗೆ ಪರಂಪರಾಗತವಾದ ಕವಿತೆಯ ಬಾಹ್ಯಾಕಾರದ ಸ್ವರೂಪದ ಸ್ಥಾನ ಸುಭದ್ರವಾಗಿಯೇ ಇರುತ್ತದೆ." (ಪುಟ ೧೫೧) ಇನ್ನೂ ಅನೇಕ ಚಿಂತನಸೂಕ್ತಕಗಳನ್ನು ಈ ಪ್ರಬಂಧದಲ್ಲಿ ಕಾಣಬಹುದು: "ಕಾವ್ಯದ ಗುರಿ ....ಬರಿಯ ಪ್ರಕೃತಿಯ ಛಾಯಾಗ್ರಹಣವಲ್ಲ ಅಥವಾ ವಸ್ತುಸ್ಥಿತಿಯ ಬರಿಯ ಅನುಕರಣ ಮಾತ್ರವಲ್ಲ" (ಪುಟ ೧೫೩); "ಕವಿಯ ದರ್ಶನ, ಧರ್ಮ, ಅವನ ತತ್ತ್ವ, ಇವೆಲ್ಲ ಅವನ ಕಾವ್ಯಕ್ಕೆ ವಸ್ತುಗಳಾಗಬಹುದು. ಆದರೆ ಅವು ಎಂದಿಗೂ ಅವನ ಕಾವ್ಯದ ಆತ್ಮವಾಗಲಾರವು. ಕಾವ್ಯದ ಮುಖ್ಯ ಪ್ರೇರಣಶಕ್ತಿ ಅವರ ದಿವ್ಯದೃಷ್ಟಿ" (ಪುಟ ೧೫೪): "ವಾಸ್ತವಿಕತೆಯನ್ನು ಚಿತ್ರಿಸುವುದರಿಂದ ಕಾವ್ಯ ತನ್ನ ಗುರಿಯನ್ನು ಮುಟ್ಟಲಾರದು. ಯಾಕೆಂದರೆ ಕಲೆ ವಿಜ್ಞಾನವಲ್ಲ....ಬಾಹ್ಯ ಕೃತಕ ಪ್ರಮಾಣಗಳಿಗೆ ಬಲಿಯಾಗದೆ, ತನ್ನ ಅಂತರಂಗದ ಸಜೀವ ಕಾವ್ಯ ಪ್ರಮಾಣ ಮಟ್ಟದಿಂದಲೇ ಕೃತಿರಚನೆ ಮಾಡಬೇಕು" (ಪುಟ ೧೫೫) ಇತ್ಯಾದಿ.

'ಕನ್ನಡ ಗ್ರಂಥಗಳಲ್ಲಿ ಗದ್ಯರಚನೆ' ಕನ್ನಡ ಗದ್ಯದ ಸಂಕ್ಷಿಪ್ತ ಚರಿತ್ರೆಯಾಗಿದೆ. 'ವಡ್ಡಾರಾಧನೆ'ಯಿಂದ ಎ.ಆರ್.ಕೃ.ವರೆಗೆ ಕನ್ನಡ ಗದ್ಯ ಬೆಳೆದುಬಂದ ಬಗೆಯನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ. ಉದಾಹರಣೆಗಳನ್ನು ಪುಟಗಟ್ಟಲೆ ಕೊಟ್ಟಿರುವುದು ಅನುಚಿತ ಎನಿಸುವುದಿಲ್ಲ. ಏಕೆಂದರೆ, ಯಾವೊಬ್ಬ ಲೇಖಕನ ಗದ್ಯದ ಗತಿಯನ್ನು ತಿಳಿಯಬೇಕಾದರೆ ಎರಡು ಮೂರು ಸಾಲು ಸಾಕಾಗುವುದಿಲ್ಲ; ಸಾಕಷ್ಟು ದೂರ ಹಿಂಬಾಲಿಸಿಯೆ ಅದರ ನಡಗೆಯ ವೈಶಿಷ್ಟ್ಯವನ್ನು ಗುರುತಿಸಬೇಕು.

'ವಡ್ಡಾರಾಧನೆ'ಯ ಬಗೆಗೆ ಲೇಖಕರು ಹೀಗೆ ಹೇಳುತ್ತಾರೆ: "ಇಲ್ಲಿ ಕಥನಕಲೆಯೂ ಗದ್ಯಶೈಲಿಯೂ ಸಿದ್ಧಿಯನ್ನು ಮುಟ್ಟಿವೆ (ಪುಟ ೪)....ಕನ್ನಡವನ್ನು ಸಂಸ್ಕೃತದ ಅಡಿಯಾಳು ಮಾಡದೆ ತನ್ನ ಕಾಲಿನ ಮೇಲೆ ತಾನು ನಿಲ್ಲುವಂತೆ ಮಾಡಿದ ಕೃತಿ ವಡ್ಡಾರಾಧನೆ. ಕನ್ನಡ ಗದ್ಯರಚನೆಯಲ್ಲಿ ಇದು ಧೀರವಾದ ಸ್ಪಷ್ಟವಾದ ಹೆಜ್ಜೆ." (ಪುಟ ೫) ಮುಂದೆ ಪಂಪನ ಗದ್ಯವನ್ನು ಕುರಿತು: "ಪಂಪನಲ್ಲಿ ಕನ್ನಡ ಸಂಸ್ಕೃತಗಳ ಸುಖವಾದ ಸಮ ಬೆರಕೆ ಇದೆ." (ಅಲ್ಲೇ) "ಪಂಪನ ಗದ್ಯ ಶೈಲಿಯೂ ಜೇನುಕೊಡವೆ. ಅದೊಂದು ಮಿಂಚಿನ ಗೊಂಚಲು. ಒಂದೇ ವಾಕ್ಯದಲ್ಲಿ ಒಂದು ಆಶ್ವಾಸದ ಅಭಿಪ್ರಾಯಗಳನ್ನೆಲ್ಲ ಹೊಳೆಸುತ್ತಾನೆ. ಗದ್ಯದಲ್ಲಾಗಲಿ ಪದ್ಯದಲ್ಲಾಗಲಿ ಪಂಪನ ಸಮಾನರು ಹುಟ್ಟಲಿಲ್ಲ." (ಪುಟ ೬) ಅನಂತರ ಚಾವುಂಡರಾಯನ ಗದ್ಯದ ಪ್ರಸ್ತಾಪ: "ಚಾವುಂಡರಾಯನನ್ನು, ಕನ್ನಡ ಗದ್ಯ ಶೈಲಿಯಲ್ಲಿ ದೇಸಿಯ ಬಳಕೆಯನ್ನು ಪ್ರಚಾರಕ್ಕೆ ತಂದ

ಗದ್ಯಕಾರನೆನ್ನಬಹುದು." (ಪುಟ ೬) ದುರ್ಗಸಿಂಹನ ಗದ್ಯವನ್ನು ಹೀಗೆ ನಿರೂಪಿಸಲಾಗಿದೆ: "ಪರಿಪಕ್ವ ಸಂಯಮವಾದ ಸಾಂಕೇತಿಕ ಕಥೆಗಳನ್ನು ಕುರಿತು ಹೇಳುವುದರಿಂದ ಈ ಗದ್ಯ ಶೈಲಿ ಚಂಪುವಿನ ಹೊರೆಯನ್ನು ಕಳೆದುಕೊಂಡು ಹಗುರವಾಗಿದೆ." (ಪುಟ ೭) ಅಂತೆಯೇ "ನಯಸೇನನ ಗದ್ಯ, ಚಂಪೂ ಗದ್ಯದ ಕ್ಲಿಷ್ಟತೆಯನ್ನು ಕಳೆದುಕೊಂಡು ಉಲ್ಲಾಸಕರವಾಯಿತು." (ಪುಟ ೯) ಇವರಲ್ಲದೆ "ಚಂಪೂ ಗದ್ಯಶೈಲಿಯಲ್ಲಿ ತಕ್ಕಮಟ್ಟಿನ ಗದ್ಯಸಿದ್ಧಿಯನ್ನು ಪಡೆದವನು ನಾಗಚಂದ್ರ" (ಪುಟ ೧೦) ಎಂದಿದ್ದಾರೆ ಲೇಖಕರು. ಇಷ್ಟಾದಮೇಲೆ ವಚನಕಾರರ ಗದ್ಯದ ವಿವೇಚನೆ ಬಂದಿದೆ. ವಚನಗಳ "ಆಕಾರ ಗದ್ಯವಾದರೂ ಇವು ಮೂಲತಃ ಕಾವ್ಯ" (ಪುಟ ೧೧) ಎಂದೂ "ವಚನಗಳಿಂದ ಕನ್ನಡ ಸಾಹಿತ್ಯದಲ್ಲಿ ಗದ್ಯ ಹೆಚ್ಚು ಪರಿಣಾಮಕಾರಿಯಾಗಿ ಪ್ರಯೋಗವಾದ ಅನುಭವವುಂಟಾಯಿತು. ಆತ್ಮಾನುಭವ, ಹೃದಯ ಮತ್ತು ದೃಷ್ಟಿ ವೈಶಾಲ್ಯ, ಸೃಷ್ಟಿಯ ರಹಸ್ಯದರ್ಶನ, ಭೇದನ ಇವುಗಳ ನಿರೂಪಣೆಗೆ ಗದ್ಯ ಹದವಾಗಿ ಒದಗುವುದೆಂಬುದನ್ನು ಕವಿಗಳು ಅರಿತರು" (ಪುಟ ೧೫) ಎಂದೂ ಹೇಳಲಾಗಿದೆ. ವಚನಕಾರರಾದ ಮೇಲೆ ಹರಿಹರ: "ಹರಿಹರ ರಗಳೆಯಲ್ಲಿ ಹೇಗೆ ಔನ್ನತ್ಯವನ್ನು ಪಡೆದನೋ ಹಾಗೆಯೇ ಕನ್ನಡ ಗದ್ಯಕ್ಕೆ ಹೊಸ ಪ್ರಾಣವನ್ನು ಕೊಟ್ಟನು" (ಅಲ್ಲೇ): "ಹರಿಹರನ ಗದ್ಯ ಕನ್ನಡ ಸಾಹಿತ್ಯದ ಉತ್ಕೃಷ್ಟ ಗದ್ಯ." (ಪುಟ ೧೬) 'ನಂಬಿಯಣ್ಣನ ರಗಳೆ'ಯನ್ನು ಕುರಿತು "ಈ ರಗಳೆಯಲ್ಲಿ ಪದ್ಯಕ್ಕಿಂತ ಗದ್ಯವೇ ಹೆಚ್ಚು ಪ್ರಭಾವಯುಕ್ತವಾಗಿದೆ" (ಅಲ್ಲೇ) ಎಂದಿದ್ದಾರೆ. "ಒಂದು ದೃಷ್ಟಿಯಿಂದ ಕನ್ನಡ ಗದ್ಯಕ್ಕೆ ಹರಿಹರನೇ ಉನ್ನತ ಶಿಖರವೆನ್ನಬಹುದು. ಅಲ್ಲಿಂದ ಮುಂದೆ ಮೈಸೂರು ಚಿಕ್ಕದೇವರಾಜರ ಕಾಲದವರೆಗೆ ತಲೆಯೆತ್ತಿ ನಿಲ್ಲುವ ಗದ್ಯ ಗ್ರಂಥ ಯಾವುದೂ ಇಲ್ಲ." (ಪುಟ ೨೧) 'ಚಿಕ್ಕದೇವರಾಯ ವಂಶಾವಳಿ'ಯನ್ನು ಕುರಿತು "ಗದ್ಯಶಕ್ತಿಯೇ ಅದರ ಕಾವ್ಯಶಕ್ತಿ" (ಅಲ್ಲೇ) ಎಂದೂ "ಸಂಸ್ಕೃತ ಮತ್ತು ಹಳಗನ್ನಡ ಸಾರವನ್ನು ಹೀರಿ ಆತ್ಮಪ್ರತ್ಯಯದಿಂದ ನಡೆಯುವ ಧೀರ ದಿಟ್ಟ ಕನ್ನಡ ಶೈಲಿ ತಿರುಮಲಾರ್ಯನದು" (ಅಲ್ಲೇ) ಎಂದೂ ಹೇಳಲಾಗಿದೆ. "'ಚಿಕ್ಕದೇವರಾಜ ವಂಶಾವಳಿ'ಯು ಗದ್ಯ ನಿಜವಾದ ಗದ್ಯಕಾವ್ಯ. ಇದು ತಿರುಮಲಾರ್ಯನ ಸರ್ಗಶಕ್ತಿಯನ್ನೂ ಪ್ರದರ್ಶಿಸುವ ಗದ್ಯಗ್ರಂಥ" (ಪುಟ ೨೩) ಎಂಬ, "ತಿರುಮಲಾರ್ಯ ಒಳ್ಳೆಯ ಶೈಲಿಕಾರ" (ಪುಟ ೨೬) ಎಂಬ ಹೊಗಳಿಕೆ ಸಂದಿದೆ. "ತಿರುಮಲಾರ್ಯನ ಗದ್ಯ ಕೆಲವೆಡೆ ಕಷ್ಟವಾಗಿಯೂ ಕೃತ್ರಿಮವಾಗಿಯೂ ತೋರುವುದು ನಿಜ" (ಪುಟ ೩೦) ಎಂಬ ಟೀಕೆಯೂ ಬಂದಿದೆ. "ಚಿಕ್ಕದೇವರಾಯ ವಂಶಾವಳಿಯೊಂದಿಗೆ ಹಳಗನ್ನಡದ ರೀತಿಯ ಗದ್ಯಕಾವ್ಯ ಕೊನೆಯಾಯಿತೆಂದು ಹೇಳಬಹುದು." (ಪುಟ ೩೦) ಮುಂದೆ ಗಮನಾರ್ಹವಾದದ್ದು 'ಮುದ್ರಾಮಂಜೂಷ'. ಅದರ "ಇದರ ಕನ್ನಡವನ್ನು ಅಚ್ಚ, ಹೊಸಗನ್ನಡ ಶೈಲಿಯ ಆದರ್ಶ ಉದಾಹರಣೆಯಾಗಿ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಈ ಶೈಲಿ ಹಳಗನ್ನಡ ಹೊಸಗನ್ನಡಗಳ ಅಷ್ಟೇನೂ ಹಿತವಲ್ಲದ ಸಮ್ಮಿಶ್ರಣದ ಫಲ." (ಅಲ್ಲೇ) ಮುಂದೆ ಮುದ್ದಣನ ಬಗ್ಗೆ: "ಕೆಂಪುನಾರಾಯಣನ ಕಾಲಕ್ಕೆ ಗದ್ಯ ಪೂರ್ಣವಾಗಿ ಹೊಸಗನ್ನಡ

ವಾಯಿತು. ಆದರೂ ಹಳಗನ್ನಡದ ಆಕರ್ಷಣೆ, ಅವರ ಸತ್ವಯುಕ್ತವಾದ ಗರಡಿ ಸಾಧನೆ, ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಮುದ್ದಣನನ್ನು ಬಿಡಲಿಲ್ಲ.... ಮುದ್ದಣನ ನಿಜವಾದ ಹಳಗನ್ನಡ ಗದ್ಯವಿರುವುದು ರಾಮಾಶ್ವಮೇಧದಲ್ಲಿ." (ಪುಟ ೩೦–೩೧)

ಮುಂದೆ, ಆಧುನಿಕ ಕನ್ನಡ ಗದ್ಯದ ಹೊಣೆಯನ್ನು ಪರಂಪರೆಯ ಹಿನ್ನೆಲೆಯಲ್ಲಿ ಗೊರೂರರು ಹೀಗೆ ವಿವರಿಸಿದ್ದಾರೆ : "ಕನ್ನಡ ಗದ್ಯ ೯ನೆಯ ಶತಮಾನದ ದುರ್ವಿನೀತಾದಿಗಳಲ್ಲಿ ಅದೃಶ್ಯ ಸರಸ್ವತಿಯಾಗಿ, ಪಂಪಾದಿಗಳ ಚಂಪೂಕಾವ್ಯಗಳಲ್ಲಿ ಪದ್ಯಗಳ ಸಾಟಿಯಾಗಿ, ವಡ್ಡಾರಾಧನೆ ಚಾವುಂಡರಾಯ ಪುರಾಣಗಳಲ್ಲಿ ಸ್ವತಂತ್ರ ರೂಪ ಪಡೆದು ಹರಿಹರನಲ್ಲಿ ಮಹಾಭಿಷಿಕ್ತವಾಯಿತೆಂದು ಹೇಳಬಹುದು. ಪದ್ಯದ ಜತೆಯಲ್ಲಿಯೇ ಗ್ರಂಥವನ್ನು ಕಂಡಿರಬಹುದಾದ ಗದ್ಯ, ಏರು ತಗ್ಗುಗಳಲ್ಲಿ ಹರಿದು ಹರಿಹರನಲ್ಲಿ ಮಹಾಪ್ರವಾಹವಾಗಿ ಕನ್ನಡ ಜನದ ಬಾಳು, ದೇಸಿ, ಜನಪದಗಳ ಆಡುಮಾತು ಇವುಗಳನ್ನೆಲ್ಲ ಕೊಂಡು ಮಹತ್ ಸತ್ಯ ವೇದಾಂತಗಳನ್ನು ನಿತ್ಯ ವ್ಯವಹಾರಗಳನ್ನು ಸಾಧಿಸಲು ತಾನು ಶಕ್ತವೆಂಬುವನ್ನು ತೋರಿಸಿಕೊಟ್ಟಿದೆ. ಕನ್ನಡ ಗದ್ಯ ಇದುವರೆಗೆ ಸಾಧಿಸದ ಕೆಲಸ ಯಾವುದೂ ಇಲ್ಲ. ಕನ್ನಡ ಜನತೆಯ ಬಾಳನ್ನು ತಿದ್ದಲು ಈ ಗದ್ಯವೇ ನಮಗೆ ಗತಿ. ಹೊಸಗನ್ನಡ ಗದ್ಯಕ್ಕೆ ಇಂದು ಎಂದಿಗಿಂತ ಹೆಚ್ಚಾದ ಜವಾಬ್ದಾರಿಯಿದೆ. ಆಧುನಿಕ ಜಗತ್ತಿನ ಜಟಿಲಸಮಸ್ಯೆಗಳಿಗೆ ಕನ್ನಡಿಗರನ್ನು ಸಿದ್ಧ ಮಾಡುವ ಹೊಣೆ ಕನ್ನಡ ಗದ್ಯವದ್ದು."(ಪುಟ ೩೨) ಕಡೆಯದಾಗಿ, 'ಹೊಸಗನ್ನಡ ಗದ್ಯ'ಕ್ಕೆ ಎ. ಆರ್. ಕೃಷ್ಣಶಾಸ್ತ್ರಿಗಳನ್ನು ಪ್ರತಿನಿಧಿಗಳನ್ನಾಗಿ ತೆಗೆದುಕೊಂಡಿದ್ದಾರೆ ಲೇಖಕರು. ಏಕೆಂದರೆ "ಹೊಸಗನ್ನಡ ಗದ್ಯ ನಿರ್ಮಾಣದಲ್ಲಿ ಪೂಜನೀಯ ಕೃಷ್ಣಶಾಸ್ತ್ರಿಗಳ ಸೇವೆ ಹಿರಿದಾದುದು." (ಪುಟ ೩೩) ಅವರ ಬರಹಗಳಿಂದ ಅನೇಕ ಭಾಗಗಳನ್ನು ಎತ್ತಿಕೊಡಲಾಗಿದೆ. ಕೃಷ್ಣಶಾಸ್ತ್ರಿಗಳ ಗದ್ಯ ಹೊಸಗನ್ನಡ ಗದ್ಯದ ಒಂದು ಮಾದರಿಯಾಯಿತೇ ಹೊರತು ಅವರ ಎಲ್ಲ ವೈವಿಧ್ಯಗಳನ್ನೂ ನಿದರ್ಶಿಸಲಾರದು. ಅಂತೂ ಅದೊಂದು ಮುಖ್ಯವಾದ ಘಟ್ಟವಾದ್ದರಿಂದ ಗೊರೂರರು ಅಲ್ಲಿಗೇ ನಿಲ್ಲಿಸಿದ್ದಾರೆ ಎಂದು ಸಮಾಧಾನಪಟ್ಟುಕೊಳ್ಳಬಹುದು. "ಇಂತಹ ಭಾಷೆಯಿಂದ ಜಗತ್ತಿನಲ್ಲಿ ಸಾಧಿಸಲಾರದ ಕೆಲಸ ಯಾವುದು ?" (ಪುಟ ೪೩) ಎಂಬ ಪ್ರಶ್ನೆಯಿಂದ ಲೇಖನ ಮುಕ್ತಾಯಗೊಂಡಿದೆ. ಹೊಸಗನ್ನಡ ಗದ್ಯದ ಎಲ್ಲ ಬಗೆಗಳನ್ನೂ ಪರಿಗಣಿಸಿದಾಗ ಈ ಪ್ರಶ್ನೆ ಇನ್ನೂ ಹೆಚ್ಚು ಅರ್ಥಪೂರ್ಣವಾಗುತ್ತದೆ.

ಒಟ್ಟಿನಲ್ಲಿ ಗೊರೂರರು ಈ ಸುದೀರ್ಘ ಲೇಖನದಲ್ಲಿ ಕನ್ನಡ ಗದ್ಯದ ಒಂದು ಸ್ಪಷ್ಟ ಚಿತ್ರವನ್ನು ವಿಮರ್ಶಪೂರ್ವಕವಾಗಿ ಒಡಮೂಡಿಸಿದ್ದಾರೆ.

'ಊರ್ವಶಿಯ ಶಾಪ' ಕುಮಾರವ್ಯಾಸ ಭಾರತದ ಆ ಪ್ರಸಂಗದ ನಿರೂಪಣೆ; ಬಹುಮಟ್ಟಿಗೆ ಮೂಲದ ಗದ್ಯಾನುವಾದ. "ಈ ಲೇಖನದ ಉದ್ದಕ್ಕೂ ಕುಮಾರವ್ಯಾಸನ ವಾಕ್ಯಗಳನ್ನೇ ವಿಪುಲವಾಗಿ ಬಳಸಲಾಗಿದೆ." (ಪುಟ ೧೮೮) ಎಂದು ಲೇಖಕರೆ ಹೇಳಿಕೊಂಡಿದ್ದಾರೆ. ಕುಮಾರವ್ಯಾಸ ಭಾರತದ ಇನ್ನೊಂದು ಪ್ರಸಂಗವನ್ನು ಕುರಿತ

‘ರುಧಿರದ ತಿಲಕವಾದನಲ್ಲಿ ಧರಾಂಗನೆಗೆ’ ಎಂಬ ಲೇಖನದ್ದೂ ಇದೇ ಸ್ವರೂಪ. ದುರ್ಯೋಧನ ಪಾತ್ರದ ಬಗೆಗೆ ಲೇಖಕರ ಈ ನುಡಿಗಳು ಮನನಯೋಗ್ಯವಾಗಿವೆ: “ಸಂಸ್ಕೃತ ಮೂಲ ಲೇಖಕರಾದ ವ್ಯಾಸಮಹರ್ಷಿಗಳಿಂದ ಹಿಡಿದು ಕುಮಾರವ್ಯಾಸನ ವರೆಗೆ ಎಲ್ಲ ಕವಿಗಳ ಗುರಿಯೂ ಭೀಮನನ್ನೇ ಗದಾಯುದ್ಧದ ನಾಯಕನನ್ನಾಗಿ ಮಾಡುವುದಾಗಿದ್ದರೂ ಅವರ ಪ್ರಯತ್ನವಿಲ್ಲದೆ ದುರ್ಯೋಧನನೇ ತನ್ನ ಸ್ವಾಭಾವಿಕ ಗುಣಗಳಿಂದ, ಕೊನೆಯ ಘಳಿಗೆಯವರೆಗೆ ತಾನೇ ಗದಾಯುದ್ಧದ ನಾಯಕನಾಗುತ್ತಾನೆ. ಸಂಸ್ಕೃತ ಭಾರತದಲ್ಲಿ ದುರ್ಯೋಧನನು ಪಂಪರನ್ನರ ಕಾವ್ಯಗಳಲ್ಲಿ ಕಂಡಷ್ಟು ಉಜ್ವಲನಾಗಿ ಕಾಣದಿದ್ದರೂ ಉಳಿದ ಹಿಂದಿನ ಒಂಬತ್ತು ಪರ್ವಗಳಲ್ಲಿ ತೋರುವುದಕ್ಕಿಂತ ಹೆಚ್ಚು ಮಹನೀಯನಾಗಿ ಕಾಣುತ್ತಾನೆ.” (ಪುಟ ೨೦೪) ಅಂತೆಯೇ ಕುಮಾರವ್ಯಾಸನ ದುರ್ಯೋಧನನನ್ನು ಕುರಿತ ಊಹೆಯೂ ವಿಚಾರಾರ್ಹವಾಗಿದೆ: “ಸೋತ ದುರ್ಯೋಧನನಲ್ಲಿಯೇ ನಮಗೆ ಸಹಾನುಭೂತಿ. ದುರ್ಯೋಧನನ ಸಾವಿನೊಂದಿಗೆ ಮಹಾಭಾರತವೇ ಮುಗಿದಂತೆ ತೋರುತ್ತದೆ. ಮುಂದೆ ಯಾರಿಗೆ ಪಟ್ಟವಾದರೇನು? ಬಿಟ್ಟರೇನು? ಯಾವ ಛಲದಿಂದ ಭಾರತ ಕಾವ್ಯಸೃಷ್ಟಿಯೋ ಆ ಛಲಪುರುಷ ಕಣ್ಮರೆಯಾಗುತ್ತಾನೆ. ಈ ಕಾರಣದಿಂದಲೇ ಇರಬೇಕು, ಕುಮಾರವ್ಯಾಸ ಗದಾಪರ್ವದೊಂದಿಗೆ ತನ್ನ ಭಾರತವನ್ನು ಮುಕ್ತಾಯಗೊಳಿಸಿದ್ದಾನೆ.” (ಪುಟ ೨೯೭)

ಜೈಮಿನಿ ಭಾರತದ ಅನೇಕ ಪ್ರಸಂಗಗಳಲ್ಲಿ ಹಾಸ್ಯ ಮೈದಳೆದಿರುವ ಪರಿಯನ್ನು ವಿವೇಚಿಸುತ್ತದೆ ‘ಕವಿ ಲಕ್ಷ್ಮೀಶ’ ಎಂಬ ಲೇಖನ. “ಲಕ್ಷ್ಮೀಶನು ತನ್ನ ಸ್ವಾತಂತ್ರ್ಯವನ್ನೂ ಕಲಾಶಕ್ತಿಯನ್ನೂ ತೋರಿಸಿ ಜೈಮಿನಿ ಭಾರತವು ಕೆಲವು ದೃಷ್ಟಿಗಳಲ್ಲಿ ಹೊಸ ಮತ್ತು ಹಳೆಯ ಕವಿತೆಗಳ ಸುಖಕರವಾದ ಮಿಲನವಾಗುವಂತೆ ಮಾಡಿದ್ದಾನೆ” (ಪುಟ ೭೫) ಎಂಬುದು ಜೈಮಿನಿ ಭಾರತದ ಬಗ್ಗೆ ಗೊರೂರರ ತೀರ್ಪು. ಅವನ ಹಾಸ್ಯವನ್ನು ಕುರಿತು ಅವರು ಹೇಳುತ್ತಾರೆ: “ಲಕ್ಷ್ಮೀಶನ ಹಾಸ್ಯದಲ್ಲಿ ಔಚಿತ್ಯವಿದೆ; ಗಾಂಭೀರ್ಯವಿದೆ; ಮಿತಿ ಇದೆ; ಬಗೆಯನ್ನು ಉನ್ನತಿಗೆ ಏರಿಸುವ ಕಳೆಯು ಗುರಿಯಿದೆ.” (ಪುಟ ೭೫) ಲಕ್ಷ್ಮೀಶನ ಸರಸ್ವತೀ ಸ್ತೋತ್ರದಲ್ಲಿ “ತಾಯೆನಗೆ ತಾಯಿ ನಗೆಗೂಡಿ ನೋಡಿ” ಎಂಬ ಮಾತು ಬಂದಿರುವುದು ಆಕಸ್ಮಿಕವಲ್ಲ ಎಂಬ ಲೇಖಕರ ಮಾತು ಅವರ ಸೂಕ್ಷ್ಮದೃಷ್ಟಿಗೆ ಸಾಕ್ಷಿಯಾಗಿದೆ. ಶುದ್ಧ ಹಾಸ್ಯವನ್ನು ಮಾತ್ರವಲ್ಲದೆ ಶೃಂಗಾರದೊಡಗೂಡಿದ ನಯವಾದ ಹಾಸ್ಯವನ್ನು ಲಕ್ಷ್ಮೀಶ ಮೆರೆದಿರುವುದಕ್ಕೆ ಅವರು ನಿದರ್ಶನಗಳನ್ನಿತ್ತಿದ್ದಾರೆ. ಆದರೆ ಸ್ವಾರಸ್ಯಪೂರ್ಣವಾದ ಚಂಡಿಯ ಕತೆಯ ಬಗ್ಗೆ ಹೆಚ್ಚೇನೂ ಹೇಳದೆ “ಚಂಡಿಯ ಕಥೆಯ ನಿರೂಪಣೆಯಲ್ಲಿಯೂ ಕವಿ ಗುರುವು ಬಹಳ ಚಮತ್ಕಾರವನ್ನು ತೋರಿಸಿದ್ದಾನೆ” (ಪುಟ ೮೮) ಎಂದಷ್ಟೇ ಹೇಳಿ ನಾಲ್ಕಾರು ಪದ್ಯಗಳನ್ನು ಉದಾಹರಿಸಿ ಮುಗಿಸಿರುವುದು ಅರಕೆಯ ಭಾವನೆಯನ್ನುಂಟುಮಾಡುವುದು. ಅಂತೂ ಲಕ್ಷ್ಮೀಶನ ಕಾವ್ಯದ ಒಂದು ಗಣ್ಯವಾದ ಪಾರ್ಶ್ವ ಈ ಲೇಖನದಲ್ಲಿ ಅನಾವರಣಗೊಂಡಿದೆ.

‘ರತ್ನಾಕರ’ ಎಂಬ ಲೇಖನ ‘ಭರತೇಶ ವೈಭವ’ವನ್ನು ಕುರಿತುದಾಗಿದೆ. ಈ ಕಾವ್ಯದ

ಸ್ವಾರಸ್ಯವನ್ನು ಗೊರೂರರು ತಿಳಿಸುವುದು ಹೀಗೆ: "ನಮಗೆ ತಿಳಿಯದೆಯೇ ಒಂಬತ್ತು ಸಾವಿರ ಸಾಂಗತ್ಯ ಪದ್ಯಗಳು ಸಾಗಿಹೋಗುತ್ತವೆ. ನಾವು ಕತೆಯಲ್ಲಿ ತಲ್ಲೀನರಾಗುತ್ತೇವೆ. ಕವಿ ಕೃತಕೃತ್ಯನಾಗುತ್ತಾನೆ." (ಪುಟ ೩೨೭) 'ಭೋಗವಿಜಯ'ದ ಬಗೆಗೆ ಅವರು ಹೇಳುತ್ತಾರೆ: "ಭೋಗವಿಜಯ ರತ್ನಾಕರನ ಪ್ರತಿಭೆಯ ಬೆಳಕು; ಭರತೇಶ ವೈಭವದ ಗುರಿ ಕಾವ್ಯದೃಷ್ಟಿಯಿಂದ ಭೋಗವಿಜಯದಲ್ಲಿಯೇ ಸಾಧಿತವಾಗಿದೆ ಎಂದು ಹೇಳಬಹುದು." (ಪುಟ ೩೨೮) ರತ್ನಾಕರನ ಸ್ವಂತಿಕೆ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಲಾಗಿದೆ: "ಜೈನ ಕತೆಗಳನ್ನು ಹೇಳುವ ಸಂಪ್ರದಾಯವನ್ನು ಬದಲಾಯಿಸಿ, ಭೂಮಿಯಲ್ಲಿ ಚಕ್ರಿಯ ಭೋಗವನ್ನು ವರ್ಣಿಸುವ ಹೊಸ ಮಾರ್ಗವನ್ನು ಹಿಡಿಯುವುದರಲ್ಲಿ ರತ್ನಾಕರ ತನ್ನ ಜಾಣ್ಮೆಯನ್ನೂ ಲೋಗರ ಅಭಿರುಚಿಯನ್ನು ತಾನು ಚೆನ್ನಾಗಿ ಅರಿತಿರುವುದನ್ನೂ ತೋರಿಸಿಕೊಂಡಿದ್ದಾನೆ." (ಅಲ್ಲೇ) "ಸಂಪ್ರದಾಯಬದ್ಧವಾಗಿ ಅದರಲ್ಲಿಯೂ ಮತಸಂಬಂಧವಾದ ಗ್ರಂಥದಲ್ಲಿ, ಪಂಚಕಲ್ಯಾಣಗಳಿಗೆ ಅರ್ಹನಾದ ಚಕ್ರಿಯ ಭೋಗವಿಲಾಸವನ್ನು ವರ್ಣಿಸುವವರಿಗೆ ಎದೆಗಾರಿಕೆ ಬೇಕು. ಭೋಗ, ಯೋಗದ ಹಾದಿ ಎಂದು ತೋರಿಸುವುದು ಕತ್ತಿಯ ಮೇಲೆ ನಡೆಯುವ ವರಸೆ: ಮಿತಿ ತಪ್ಪಿದರೂ ಕತೆ ಹಾದರದ ಕತೆಯಾಗುವುದು. ಈ ಶೃಂಗಾರ ಭಗವದ್ಗೀತೆಯ ಅನಾಸಕ್ತಿಯೋಗದಂತೆ ಅನಾಸಕ್ತಿ ಶೃಂಗಾರ. ಈ ಕಥಾಭಾಗ ರತ್ನಾಕರನ ಸ್ವಂತ." (ಪುಟ ೩೩೪) ಒಬ್ಬ ಸಂಸಾರಿಯ ಬಾಳನ್ನು, ಸಂಸಾರದಲ್ಲಿ ಅತ್ತೆ ಸೊಸೆಯರ ಸಾಮರಸ್ಯವನ್ನು ರತ್ನಾಕರ ತನ್ನ ಕೃತಿಯಲ್ಲಿ ಚಿತ್ರಿಸಿದ್ದಾನೆ ಎಂಬ ಉಕ್ತಿಯಲ್ಲೂ ತಥ್ಯವಿದೆ.

ಇವು ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳಾದರೆ ಇನ್ನು ಕೆಲವು ಆಧುನಿಕ ಕನ್ನಡ ಸಾಹಿತ್ಯವನ್ನು ಕುರಿತವಾಗಿವೆ.

'ಬೇಂದ್ರೆಯವರ ವ್ಯಕ್ತಿತ್ವ' ಎಂಬ ಪ್ರಬಂಧ ಆ ವರಕವಿಯ ವ್ಯಕ್ತಿತ್ವವನ್ನು ಮಾತ್ರವಲ್ಲದೆ ಕಾವ್ಯವನ್ನು ಸೊಗಸಾಗಿ ಪರಿಚಯಿಸುತ್ತದೆ. "ವಿಶಾಲವಾದ ಹಣೆ; ಎತ್ತರವೂ ಕುಳ್ಳೂ ಅಲ್ಲದ ದೇಹ; ಹಾಸ್ಯದಿಂದಲೂ 'ಚಕಮಕ ಚಂಚಲ'ದಿಂದಲೂ ಜ್ಯೋತಿಯ ಕಿಡಿಯಂತೆ ಹೊಳೆಯುವ ಕಣ್ಣುಗಳು, ತಲೆಯ ಮೇಲೇರಿಸಿದ ಖಾದಿ ಅರಿವೆಯ ಟೋಪಿ: ಮುಖದಲ್ಲಿ ಒಂದು ವಿಧವಾದ ಧೈರ್ಯ, ಕೆಚ್ಚು, ತ್ಯಾಗ ಅನಾಸಕ್ತಿ; ಈ ಪ್ರಪಂಚವನ್ನು ಮರೆತು ಎಲ್ಲಿಯೋ ವಿಹರಿಸುತ್ತಿರುವಂತಹ ದೂರದ ನೋಟ; ಬೇರೆ ಯಾವುದೋ ಉತ್ತಮವಾದ ಲೋಕಕ್ಕೆ ಸೇರಿದವನು ಒಂದು ಗಳಿಗೆ ಬಂದು ನಮ್ಮಲ್ಲಿ ಮಿಳಿತವಾಗುತ್ತಿದ್ದಾನೇನೋ ಎಂಬ ಗಂಭೀರವಾದ ಯೋಗಿಯ ಮುಖಭಾವ" (ಪುಟ ೪೪)—ಇದು ಬೇಂದ್ರೆಯವರ ವ್ಯಕ್ತಿಚಿತ್ರ. "ಅವರ ಕಾವ್ಯಗಳಿಗಿಂತ ಅವರು ಹಿರಿಯರು" (ಪುಟ ೪೫); "ಅಲ್ಪವಾದುದರಲ್ಲಿ ಪೂರ್ತಿ ಸೋಲುತ್ತಾರೆ, ಮುಖ್ಯವಾದುದರಲ್ಲಿ ಒಂದು ತೀರುವಿನಷ್ಟು ಸೋಲುವುದಿಲ್ಲ" (ಪುಟ ೪೮); "ಬಾಳಿನ ಹೋರಾಟವೆಲ್ಲಾ ಈ ಮನಸ್ಸಿನ ಮೇಲೆ, ಮನಸ್ಸನ್ನು ಮೃದುಮಾಡಿ ಆರ್ದ್ರಮಾಡಿ ಸಾಗಿವೆ" (ಅಲ್ಲೇ); ....ವಿಶ್ವಾಮಿತ್ರನ ಅಸ್ತ್ರಗಳನ್ನೆಲ್ಲಾ ನುಂಗಿ ನಿಂತ ವಸಿಷ್ಠನ ಬ್ರಹ್ಮದಂಡದಂತೆ ಕೆಚ್ಚೆದೆಯು

ಣಕು ತನ್ನ ಬಾಳಿನ ಗುರಿಯನ್ನು ಮರೆಯದೆ ನಿಂತಿದ್ದಾನೆ" (ಪುಟ ೪೮)—ಮುಂತಾದ ಮಾತುಗಳೂ ಕವಿಯ ವ್ಯಕ್ತಿತ್ವವನ್ನು ಸೂತ್ರಪ್ರಾಯವಾಗಿ ಅರುಹುತ್ತವೆ. ಬೇಂದ್ರೆಯವರ ಕಾವ್ಯದ ಜೀವಾಳವಾಗಿರುವ ಸಾಮಾಜಿಕ ಪ್ರಜ್ಞೆಯನ್ನೂ ಜಾನಪದ ಗುಣವನ್ನೂ ಗೊರೂರರು ನಿದರ್ಶನಸಹಿತ ಎತ್ತಿ ಹಿಡಿದಿದ್ದಾರೆ. "ಬೇಂದ್ರೆಯವರು ಕನ್ನಡದಲ್ಲಿ ಸಾಧಿಸಿರುವ ಕಾರ್ಯವನ್ನು, ಅಂದರೆ ರಾಜಕೀಯವಾದ ಕ್ರಾಂತಿಯನ್ನು ಜನಜಾಗ್ರತೆಯನ್ನು ಮತ್ತಾವ ಕವಿಯೂ ಸಾಧಿಸಿಲ್ಲ" (ಪುಟ ೫೩): "ಬೇಂದ್ರೆಯವರ ಕವನಗಳಲ್ಲಿ ಬುದ್ಧಕನ್ನಾ ಬಡವರ ಮೇಲಿನ ಈ ಕನಿಕರ ಒಡೆದು ಕಾಣುತ್ತದೆ...ಅನ್ನಾವತಾರದಂತಹ ಒಂದು ಪದ್ಯ, ಬಂಗಾಳಾ ಕ್ಷಾಮವನ್ನು ಕುರಿತ ನೂರು ವರದಿಗಳು ಮಾಡದಿರುವ ಕೆಲಸವನ್ನು ಮಾಡಿದೆ" (ಪುಟ ೫೪): "ಬೇಂದ್ರೆಯವರ ಕಲೆ, ಕಲ್ಪನೆಯು, ಸಚ್ಚಿದಾನಂದದ ಬ್ರಹ್ಮದಲ್ಲಿ ಭೃಂಗದ ಬೆನ್ನೇರಿ ಬರುತ್ತಿದ್ದರೂ ಅವರ ಬೇರು ಜನಪದದಲ್ಲಿಯೇ ಇದೆ" (ಪುಟ ೫೫)—ಮೊದಲಾದ ವಿಮರ್ಶೋಕ್ತಿಗಳನ್ನು ಲಕ್ಷಿಸಬಹುದು.

ಹೀಗೆಯೆ, 'ನಿಕಟ ಪರಿಚಯ' ಲೇಖನದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ವ್ಯಕ್ತಿತ್ವ ಹಾಗೂ ವಾಙ್ಮಯದ ಸ್ವರೂಪವನ್ನು ಅಚ್ಚುಕಟ್ಟಾಗಿ ಚಿತ್ರಿಸಲಾಗಿದೆ. "ಬನ್ನಿ, ಬನ್ನಿ. ನೀವು ಮಾಡಿದ ಪಾಪವನ್ನು ನೀವೇ ಅನುಭವಿಸಬೇಕು" (ಪುಟ ೧೬೦) ಎಂಬ ತಿಮ್ಮಪ್ಪಯ್ಯನವರ ಮಾತಿನಿಂದ ನಾಟಕೀಯವಾಗಿ, ಕುತೂಹಲಕಾರಿಯಾಗಿ ಆರಂಭಗೊಳ್ಳುತ್ತದೆ ಲೇಖನ. ಮುಂದುವರಿದಂತೆ ಆ ದಿವ್ಯವ್ಯಕ್ತಿಯ ನಿಕಟ ಪರಿಚಯ ಓದುಗರಿಗೂ ಆಗುತ್ತದೆ. "ಮುಳಿಯ ತಿಮ್ಮಪ್ಪಯ್ಯನವರದು ಬಹಳ ಸರಳ ಸ್ವಭಾವ. ಮನಸ್ಸು ಮಕ್ಕಳ ಮನಸ್ಸಿನಂತೆ ಮೃದು. ಅವರ ಮುಖದಲ್ಲಿ ಅಕೃತ್ರಿಮತೆಯೂ ಸಾತ್ವಿಕತನವೂ ಗಾಂಭೀರ್ಯವೂ ಒಡೆದು ಕಾಣುತ್ತಿತ್ತು. ಅವರ ಜ್ಞಾನ ಎರಡು ಬಗೆಯದು: ಒಂದು ಆಳವಾದ ಪಾಂಡಿತ್ಯಪ್ರೌಢ, ಅನೇಕ ಗ್ರಂಥಾನುಭವಜನಿತ ಸಂಸ್ಕೃತಜ್ಞಾನ: ಎರಡನೆಯದು ಆಳವೂ ವಿಶಾಲವೂ ಆದ ಯಕ್ಷಗಾನ, ದೇಸಿ, ನುಡಿಗಟ್ಟು, ಗಾದೆ, ಸರ್ವಜ್ಞ, ತಾಳಮದ್ದಲೆ, ತುಳುಭಾಷೆ, ದಕ್ಷಿಣ ಕನ್ನಡ ಜಿಲ್ಲೆಯ ಆಚಾರ ನಡೆನುಡಿ ಭಾಷೆ ಈ ಎಲ್ಲವುಗಳ ಅನುಭವ ರಸಾಯನಜ್ಞಾನ" (ಪುಟ ೧೬೩): "ಮಾತು, ವೇಷ ಹಳೆಯವಾಗಿದ್ದರೂ ಮುಳಿಯ ತಿಮ್ಮಪ್ಪಯ್ಯನವರ ಮನೋವೃತ್ತಿ ಕ್ರಾಂತಿಕಾರಕವಾಗಿತ್ತೆಂಬುದು ಅವರ ನಿಕಟ ಪರಿಚಯವಿದ್ದ ನನ್ನಂತಹವರಿಗೆ ಗೊತ್ತು" (ಪುಟ ೧೬೪): "ತಿಮ್ಮಪ್ಪಯ್ಯನವರ ಬಾಳು ಆಳವಾದ ಅರ್ವಾಚೀನ ಪ್ರಾಚೀನ ಸಂಸ್ಕೃತಿಗಳ ಫಲ, ಜೀವನದ ನಾನಾ ಅನುಭವಗಳ ಪರಿಪಕ್ವ ಪರಿಣಾಮ. ಸರ್ವರಲ್ಲಿಯೂ ಮೈತ್ರಿಭಾವ ಇವುಗಳಿಂದ ಪುನೀತವಾಗಿತ್ತು" (ಪುಟ ೧೬೬)—ಇಂಥ ಮಾತುಗಳು ಕೀಲಿಕೈಗಳಾಗಿವೆ. ವಿಮರ್ಶಕರ ವಿಷಯದಲ್ಲಿ ತಿಮ್ಮಪ್ಪಯ್ಯನವರ ಅಭಿಪ್ರಾಯ ಹೀಗಿತ್ತಂತೆ: "ಜನತೆಯ ರುಚಿಯನ್ನು ತಿದ್ದಬೇಕಾದ ವಿಮರ್ಶಕ ಗ್ರಂಥವನ್ನೇ ಓದದೆ ವಿಮರ್ಶಿಸಿಬಿಡುವುದೆ? ಇದೇನು ವಿಮರ್ಶೆಯೋ ಕಾಡುಹರಟೆಯೋ? ಸರಿಯಾದ ವಿಮರ್ಶಕ ಗ್ರಂಥಕರ್ತನಿಗೂ ಮಾರ್ಗದರ್ಶಕನಾಗಿರಬೇಕು. ಆದರೆ ಈಗ ಗ್ರಂಥ ಬರೆಯಲು ತಿಳಿಯದವರೆಲ್ಲ ವಿಮರ್ಶಕ

ರಾಗುತ್ತಿದ್ದಾರೆ. ಕನ್ನಡ ನಾಡಿನ ದುರ್ದೈವ." (ಪುಟ ೧೩೫) ಈ ಮಾತು ಇಂದಿಗೂ ಅಪ್ರಸ್ತುತವೇನಲ್ಲ.

'ಶ್ರೀನಿವಾಸರ ಸಣ್ಣಕತೆಗಳು' ಆ ವಿಷಯಕ್ಕೊಂದು ಸಮರ್ಥ ಪ್ರವೇಶವಾಗಿದೆ. ಶ್ರೀನಿವಾಸರ ಕತೆಗಳ ಪ್ರಮುಖ ಲಕ್ಷಣಗಳನ್ನು ಗೊರೂರರು ಇಲ್ಲಿ ಚೆನ್ನಾಗಿ ಸಂಗ್ರಹಿಸಿದ್ದಾರೆ. "ಶ್ರೀನಿವಾಸರು ಬರೆದಿರುವ ಕತೆಗಳಲ್ಲಿ ಬಹುಭಾಗದವು ನಮ್ಮ ಜನರಿಗೆ, ನಮ್ಮ ಸಂಸಾರಗಳಿಗೆ ಸಂಬಂಧಪಟ್ಟವು. ಅವರು ಮುಖ್ಯವಾಗಿ ಪ್ರತಿಪಾದಿಸುವ ರಸ ಶೃಂಗಾರ; ಹೇಳುವ ಕ್ರಮ ಮೊದಲಿನಿಂದ ಕೊನೆಯವರೆಗೆ ನೇರವಾಗಿ: ಮಧುರವಾಗಿ ನಯವಾದ ಮಾತು ಮತ್ತು ಸಣ್ಣ ಸಣ್ಣ ವಾಕ್ಯಗಳು: ವಾಕ್ಯಗಳ ಜತೆಯಲ್ಲಿ ಸೇರಿಕೊಂಡು ಇರುವ ಸಾಮ್ಯಗಳು; ಕತೆಗಳನ್ನೆಲ್ಲಾ ಮೇಲಕ್ಕೆ ಕಾಣದಿದ್ದರೂ ಹೂವಿನ ಪರಿಮಳದಂತೆ ಹೊಂದಿಕೊಂಡು ಆವರಿಸಿರುವ ಆದರ್ಶ; ಓದಿದ ಮೇಲೆ ಉಂಟಾಗುವುದು ಮುಂದಲ ಶುಭ, ಮುಂದಲ ಒಳ್ಳೆಯದರಲ್ಲಿ ನಂಬಿಕೆ: ಸತ್ಯ ಸೌಂದರ್ಯ ಶಾಂತಿಗಳಿಗೇ ಎಂದೆಂದಿಗೂ ಜಯವೆಂಬ ಸಾತ್ವಿಕಭಾವನೆ, ಕಥಾವಸ್ತುವಿಗೂ ಶೈಲಿಗೂ ಪಾತ್ರರಚನೆಗೂ ಹೇಳುವ ಕ್ರಮಕ್ಕೂ ಅನ್ವಯಿಸುವ ಅಲೌಕಿಕವಾದ ಆನಂದ. ಇವು ಶ್ರೀನಿವಾಸರ ಸಣ್ಣ ಕತೆಗಳ ವೈಶಿಷ್ಟ್ಯಗಳು." (ಪುಟ ೧೦೮) ಶ್ರೀನಿವಾಸರ ಕತೆಗಳಲ್ಲಿ ಬರುವ ಶೃಂಗಾರದ ಬಗ್ಗೆ ಹೀಗೆ ಹೇಳಲಾಗಿದೆ: "ಸ್ತ್ರೀಯರಲ್ಲಿ ತಮಗಿರುವ ಸ್ವಾಭಾವಿಕವಾದ ಗೌರವದಿಂದ ಶ್ರೀನಿವಾಸರ ಶೃಂಗಾರ ಯಾವಾಗಲೂ ಹಿತವಾಗಿ ಮಿತವಾಗಿ ಗಂಭೀರವಾಗಿದೆ." (ಪುಟ ೧೧೦) ಹೀಗೆಯೇ, "ನಮ್ಮ ಜನರ ಸ್ವಭಾವವನ್ನು ವರ್ಣಿಸುವುದರಲ್ಲಿ ಶ್ರೀನಿವಾಸರ ಪ್ರತಿಭೆ ಅಸಾಧಾರಣವಾದುದು." (ಪುಟ ೧೧೧) "ಶ್ರೀನಿವಾಸರ ಕತೆಗಳನ್ನು ಓದಿದನಂತರ, ಒಂದು ಬಗೆಯ ಗಂಭೀರವಾದ ಶಾಂತವಾದ ವಾತಾವರಣ ನಮ್ಮನ್ನು ಮುತ್ತಿಕೊಳ್ಳುತ್ತದೆ" (ಪುಟ ೧೧೬) ಎಂಬ ಉಕ್ತಿಗಳೂ ಉಪಾದೇಯವಾಗಿವೆ.

'ಹೊಸಗನ್ನಡ ಸಣ್ಣಕತೆಗಳು' ಎಂಬುದು ಬಹಳ ಹಿಂದೆ ಬರೆದ ರೇಖಾಪ್ರಾಯವಾದ ಲೇಖನ. ಮೊದಲು ಸಣ್ಣಕತೆಯ ಸ್ವರೂಪವನ್ನು ಕುರಿತು ಕೆಲವಂಶಗಳನ್ನು ಹೇಳಿದ್ದಾರೆ ಲೇಖಕರು. "ಈಗ ಕನ್ನಡದಲ್ಲಿ ಬಂದಿರುವ ಕತೆಗಳಲ್ಲಿ ಅತ್ಯುತ್ತಮವಾದುವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಮೆ ಅಲ್ಲ" (ಪುಟ ೧೯೩) ಎಂದು ಮೆಚ್ಚಿಕೊಂಡಿದ್ದಾರೆ. ಆದರೆ ಇನ್ನೊಂದೆಡೆ "ಈವರೆಗೆ ನಮ್ಮಲ್ಲಿ ಬೆಳೆದಿರುವ ಅನೇಕ ಸಣ್ಣ ಕತೆಗಳು ಶ್ರೇಷ್ಠ ವರ್ಗಕ್ಕೆ ಸೇರಿದುವಾದರೂ ನಮ್ಮ ಬಾಳಿನ ಅನೇಕ ಸಮಸ್ಯೆಗಳನ್ನು ಅವು ಮುಟ್ಟಿಯೇ ಇಲ್ಲ" (ಪುಟ ೧೯೭) ಎಂದಿರುವುದನ್ನೂ ಲೆಕ್ಕಿಸಬೇಕು. ಇಂದಿಗೂ ಈ ಮಾತು ಸತ್ಯ. ಅಂತೆಯೆ ಈ ಕೆಲವು ಎಚ್ಚರಿಕೆಯ ಮಾತುಗಳೂ ನಮ್ಮ ಕತೆಗಾರರು ಗಮನಿಸತಕ್ಕವಾಗಿವೆ: "ಮೇಲು ಮೇಲಿನ ಶೃಂಗಾರವಾಗಲಿ ಕಾಲೇಜು ಹುಡುಗ ಹುಡುಗಿಯರ ಸರಸ ಜೀವನವಾಗಲಿ ಮಾತ್ರವೇ ಚಿತ್ರಿತವಾದರೆ ಲೇಖಕನಿಗೆ ಸಾರ್ಥಕ್ಯ ಉಂಟಾಗುವು

ವಿಲ್ಲ" (ಪುಟ ೧೯೩): "ಯುವಕಸಾಹಿತಿಗಳು ಮುಖ್ಯವಾಗಿ ನಮ್ಮ ದೇಶದ ಜನರ ಬಾಳಿನಿಂದ ಸ್ಫೂರ್ತಿಯನ್ನು ಹೊಂದಬೇಕು. ನಮ್ಮ ಜನರ ಜೀವನದಲ್ಲಿ ಅವರ ಸಾಹಿತ್ಯ ಬೇರು ಬಿಡಬೇಕು. ಸಮತೆಯ ದೃಷ್ಟಿಯಿಲ್ಲದೆ ಯಾವ ಪರಸಂಸ್ಕೃತಿಯನ್ನೂ ಬಲಾತ್ಕಾರವಾಗಿ ನಮ್ಮ ಜನರ ಮೇಲೆ ಹೇರಲು ಪ್ರಯತ್ನಿಸಬಾರದು. ಸಂಸ್ಕೃತ ಗೊಡ್ಡು ಹೇಗೆ ಒಂದು ಪಿತ್ಥವೋ, ಇಂಗ್ಲಿಷ್ ಗೊಡ್ಡು ಹೇಗೆ ಒಂದು ಪಿತ್ಥವೋ, ರಷ್ಯ ಗೊಡ್ಡು ಹಾಗೆಯೇ ಒಂದು ವಿಘಾತದ ಪಿತ್ಥ" ('ಪ್ರಗತಿಶೀಲ ಸಾಹಿತ್ಯ'ವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಿರುವ ಮಾತು: ಆದರೆ ಅದರ ತಾತ್ಪರ್ಯ ಇಂದಿಗೂ ಪ್ರಸ್ತುತವು) (ಪುಟ ೧೯೬-೯೭): "ಹೊಸದಾಗಿ ಸಾಹಿತಿಗಳಾಗುತ್ತಿರುವವರೂ, ಹಳೆಯ ಹೆಸರಾದ ಸಂತ ಸಾಹಿತಿಗಳೂ ಗಮನಿಸಬೇಕಾದ ಅಂಶ ಮತ್ತೊಂದಿದೆ. ಆಧುನಿಕ ಪ್ರಸಾರಣೆಯ ಸೌಕರ್ಯದಿಂದ ಜನರಲ್ಲಿ ತಿಳಿವಿನ ಮಟ್ಟ ದಿನದಿನಕ್ಕೂ ಹೆಚ್ಚುತ್ತಿದೆ. ಅವರು ಕಲೆಗಾರರಲ್ಲಿ ಹೆಚ್ಚೆಚ್ಚಿಗೂ ಉತ್ತಮತೆಯನ್ನು ನಿರೀಕ್ಷಿಸುತ್ತಾರೆ. ಆಧುನಿಕ ನಾಗರಿಕತೆಯ ಸೌಕರ್ಯಗಳಿಂದ, ಒಬ್ಬನ ಕೃತಿಯನ್ನು ಮತ್ತೊಬ್ಬನ ಕೃತಿಯೊಂದಿಗೆ ಹೋಲಿಸಲು ಅನುಕೂಲಗಳಿವೆ." (ಪುಟ ೧೯೯)

ತಮಿಳು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎರಡು ಲೇಖನಗಳು—'ಸರ್ವಾಂತರ್ಯಾಮಿ' ಮತ್ತು 'ನಾಲಡಿಯಾರ್'—'ಸಾಹಿತ್ಯ ರಶ್ಮಿ'ಯಲ್ಲಿ ಸೇರಿವೆ. 'ಸರ್ವಾಂತರ್ಯಾಮಿ'ಯಲ್ಲಿ ಆಳ್ವಾರ್ ನಾಯನ್ಮಾರುಗಳ ಭಾಗವತ ಕಲ್ಪನೆಯ ಪ್ರತಿಪಾದನೆಯಿದ್ದರೆ, 'ನಾಲಡಿಯಾರ್'ನಲ್ಲಿ ಆ ಹೆಸರಿನ ಪ್ರಾಚೀನ ತಮಿಳು ಗ್ರಂಥದ ಸೊಗಸು ಚಿತ್ರಗೊಂಡಿದೆ.

ಸಂಸ್ಕೃತ ವಾಙ್ಮಯಕ್ಕೆ ಸಂಬಂಧಿಸಿದ ಮೂರು ಲೇಖನಗಳು: 'ಸಂಸ್ಕೃತದ ಕೆಲವು ಸರಸೋಕ್ತಿಗಳು', 'ಒಂದು ಭಕ್ತಿಗೀತೆ' ಹಾಗೂ 'ವಿಶ್ವಗುಣಾದರ್ಶ.' 'ಸಂಸ್ಕೃತದ ಕೆಲವು ಸರಸೋಕ್ತಿಗಳು' ಕೇವಲ ಒಂದು ಸುಭಾಷಿತ ಮಾಲಿಕೆ. 'ಒಂದು ಭಕ್ತಿಗೀತೆ' 'ಯಾಮುನಾಚಾರ್ಯರ ಆಳವಂದಾರ್ ಸ್ತೋತ್ರ'ದ ಪರಿಚಯ. "ಇದನ್ನು ಭಕ್ತಿಪಂಥದವರ ಭಗವದ್ಗೀತೆ ಎನ್ನಬಹುದು" (ಪುಟ ೩೬೦) ಎಂದೂ "ಶಾಂತರಸ ಮತ್ತು ಭಕ್ತಿರಸಕ್ಕೆ ಈ ಸಣ್ಣ ಕಾವ್ಯ ಒಂದು ಉದಾಹರಣೆ" (ಪುಟ ೩೬೪) ಎಂದೂ ಲೇಖಕರು ಹೇಳುತ್ತಾರೆ. ಭಗವಂತನನ್ನು ಬಣ್ಣಿಸುವ ಕೆಲವು ಮೂಲಪದ್ಯಗಳನ್ನೂ ಅವುಗಳ ಅನುವಾದವನ್ನೂ ಲೇಖನದಲ್ಲಿ ಕೊಡಲಾಗಿದೆ. 'ವಿಶ್ವಗುಣಾದರ್ಶ' ಅಷ್ಟೇನೂ ಪ್ರಸಿದ್ಧವಲ್ಲದ ಒಂದು ಒಳ್ಳೆಯ ಕೃತಿಯತ್ತ ನಮ್ಮ ಗಮನ ಸೆಳೆಯುವ ಸ್ವಾರಸ್ಯಯುತ ಲೇಖನವಾಗಿದೆ. ವೆಂಕಟಾಧ್ವರಿ ಎಂಬ ಕವಿ ರಚಿಸಿದ್ದು 'ವಿಶ್ವಗುಣಾದರ್ಶ' ಕಾವ್ಯ. ಕವಿ "ಭಾರತದಲ್ಲೆಲ್ಲ ಪರ್ಯಟನಮಾಡಿ ಎರಡು ಗಂಧರ್ವ ದೇವತೆಗಳ ಸಂಭಾಷಣೆಯ ನೆಪದಿಂದ ಭಾರತದ ನಾನಾ ಭಾಗದ ಜನರ ವೇಷಭೂಷಾ ಆಚಾರ ಗುಣದೋಷಗಳನ್ನು ಪರೀಕ್ಷಿಸಿ ಗುಣಗಳೇ ಹೆಚ್ಚೆಂದು ತೀರ್ಮಾನಿಸಿದ್ದಾನೆ." (ಪುಟ ೩೬೩) ಯಾವ ವಸ್ತುವಿನಲ್ಲೂ ಬರಿಯ ಗುಣಗಳೆ ತುಂಬಿರುವುದಿಲ್ಲ ಅಥವಾ ಬರಿಯ ದೋಷಗಳೆ ತುಂಬಿರುವುದಿಲ್ಲ; ಎಲ್ಲದರಲ್ಲೂ ಗುಣದೋಷಗಳಿರುತ್ತವೆ ಎಂಬುದನ್ನು

ಹೃದ್ಯವಾಗಿ ನಿರೂಪಿಸುವ ಈ ಅಪರೂಪದ ಕೃತಿಯನ್ನು ಗೊರೂರರು ಪರಿಚಯ ಮಾಡಿ ಕೊಟ್ಟಿರುವುದು ಸ್ತುತ್ಯರ್ಹವಾದ ಕೆಲಸ.

'ರವೀಂದ್ರನಾಥ ಠಾಕೂರರು' ಲೇಖಕರೇ ಹೇಳಿಕೊಂಡಿರುವಂತೆ "ಒಂದು ಸಂಕ್ಷಿಪ್ತ ಸಮಗ್ರ ಸಿಂಹಾವಲೋಕನ." ಠಾಕೂರರ ಜೀವನ, ಬಹುಮುಖ ವ್ಯಕ್ತಿತ್ವ ಹಾಗೂ ಸಾಹಿತ್ಯದ ಸ್ಥೂಲ ಪರಾಮರ್ಶೆ ಈ ಪ್ರಬಂಧದಲ್ಲಿದೆ. ಗೊರೂರರು ರವೀಂದ್ರರನ್ನು ಕುರಿತು ಭಾವಪೂರ್ಣವಾಗಿ ಹೇಳುತ್ತಾರೆ: "ಜೀವನಸ್ರೋತವಾದ ದೊಡ್ಡ ನದಿಯೊಂದು ತನ್ನ ಗಮನದ ಮಧ್ಯಮಾರ್ಗದಲ್ಲಿ ನೂರಾರು ಉಪಪ್ರವಾಹಗಳಾಗಿ ಒಡೆದು, ಒಂದೊಂದು ಪ್ರವಾಹವೂ ಮೂಲನದಿಯಷ್ಟೇ ಜಲಪೂರ್ಣವಾಗಿ ವೇಗವಾಗಿ ಅನೇಕ ಮೈಲಿಗಳು ಹರಿದು ಸಮೃದ್ಧವಾಗಿ ಬೆಳೆಗಳನ್ನು ಬೆಳೆಸಿ, ಮತ್ತೆ ಎಲ್ಲವೂ ಒಂದಾಗಿ ಸಮುದ್ರದ ಕಡೆಗೆ ಹೊರಡುವಂತೆ, ಠಾಕೂರರು ಒಂದೊಂದು ಸಾಹಿತ್ಯಪ್ರಕಾರದಲ್ಲಿಯೂ ಜೀವನ ಪ್ರಕಾರದಲ್ಲಿಯೂ ಒಂದೊಂದು ಜೀವನದ ಕಾರ್ಯವನ್ನೇ ಮಾಡಿದರೂ, ಅವರ ಜೀವಿತದ ಒಟ್ಟು ಸಾಧನೆ ಅವುಗಳೆಲ್ಲದರ ಮೊತ್ತಕ್ಕಿಂತ ನೂರು ಪಾಲು ಹೆಚ್ಚಾಗಿತ್ತು." (ಪುಟ ೩೪೭) ಠಾಕೂರರ ವಿಶ್ವಕುಟುಂಬ ಪ್ರವೃತ್ತಿಯನ್ನೂ ಸ್ವಾತಂತ್ರ್ಯದ ಕಲ್ಪನೆಯನ್ನೂ ಲೇಖನದಲ್ಲಿ ಸ್ಪಷ್ಟಪಡಿಸಲಾಗಿದೆ. ಇದೊಂದು ಪುಟ್ಟ ಜೀವನಚರಿತ್ರೆಯೂ ಆಗಿದೆ.

ಗೊರೂರರು ಭಾರತೀಯ ಸಾಹಿತ್ಯವನ್ನು ಮಾತ್ರವಲ್ಲ, ಪಾಶ್ಚಾತ್ಯ ಸಾಹಿತ್ಯವನ್ನೂ ಅನುಶೀಲನ ಮಾಡಿದ್ದಾರೆ. ಈ ದಿಸೆಯಲ್ಲಿ 'ಗಯಟೆ', 'ಥಾಮಸ್ ಹಾರ್ಡಿ' ಮತ್ತು 'ಜನತೆಯ ಕವಿ' ಮಹತ್ವಪೂರ್ಣ ಲೇಖನಗಳು. ಗಯಟೆ, ಹಾರ್ಡಿ, ವಿಟ್ಮನ್ನರಂಥ ವಿದೇಶೀಯ ಸಾಹಿತಿಗಳ ಬಗೆಗೆ ನಮ್ಮಲ್ಲಿ ಏನು ಬಂದಿದೆ? ಅವರನ್ನು ಅಧ್ಯಯನ ಮಾಡಿರುವ ಇಂಗ್ಲಿಷ್ ಪ್ರಾಧ್ಯಾಪಕರು ಏನು ಮಾಡುತ್ತಿದ್ದಾರೆ? ಅವರು ಮಾಡಬೇಕಾದ ಕೆಲಸವನ್ನು ಗೊರೂರರು ಸಣ್ಣ ಪ್ರಮಾಣದಲ್ಲಿಯಾದರೂ ಸಮರ್ಪಕವಾಗಿ ಮಾಡಿದ್ದಾರೆ. ಈ ಸಾಧನೆ ಅಭಿನಂದನೀಯವಾದದ್ದು. 'ಗಯಟೆ' ಲೇಖನದಲ್ಲಿ ಗಯಟೆಗೆ ಹಿನ್ನೆಲೆಯಾದ ಜರ್ಮನ್ ಸಾಹಿತ್ಯದ ಸ್ಥಿತಿಗತಿಗಳನ್ನು ವಿಶದಪಡಿಸಿ, ಕವಿಯ ಜೀವನವೃತ್ತವನ್ನು ಸ್ಥೂಲವಾಗಿ ತಿಳಿಸಲಾಗಿದೆ. ಅವನ ಜೀವನತತ್ತ್ವಗಳನ್ನೂ ಸಾಹಿತ್ಯ ಕೃಷಿಯನ್ನೂ ಲೇಖಕರು ದಿಗ್ದರ್ಶನಪ್ರಾಯವಾಗಿ ನಿರೂಪಿಸಿದ್ದಾರೆ. 'ಥಾಮಸ್ ಹಾರ್ಡಿ'ಯಲ್ಲೂ ಅಷ್ಟೆ. "ಥಾಮಸ್ ಹಾರ್ಡಿಯನ್ನು ಅನೇಕರು ಸಾಹಿತ್ಯದ ಗೂಬೆಯೆಂದು ಕರೆದಿದ್ದಾರೆ" (ಪುಟ ೨೩೦) ಎಂದು ಆಸಕ್ತಿ ಕೆರಳುವಂತೆ ಮೊದಲುಮಾಡಿ, ಅವನ ಸಾಹಿತ್ಯಕ್ಕೊದಗಿದ ಸಮಕಾಲೀನ ಪ್ರೇರಣೆಗಳನ್ನು ತಿಳಿಸಿ, ಅವನ ಜೀವನ ಕಥೆಯನ್ನು ಸಂಗ್ರಹಿಸಿದ್ದಾರೆ. ಅನಂತರ ಹಾರ್ಡಿಯ ಸಾಹಿತ್ಯಪ್ರಪಂಚದ ಪರಿಚಯ. "ಸ್ವಲ್ಪ ಜೀವನದ ಹೋರಾಟ, ಎಲ್ಲೋ ಸ್ವಲ್ಪ ನಗು: ಕೂಡಲೇ ಜೀವನವನ್ನು ಸುಖವಾಗಿ ಮಾಡುವ ಆ ಮುಂಕುಗಳೂ ಹಿಂದುಹೋಗುತ್ತವೆ. ಆಮೇಲೆ ಪೂರ್ಣ ಅಂಧಕಾರ. ಆ ಅಂಧಕಾರದಿಂದ ಈಚೆಗೆ ದಾರಿ ಇಲ್ಲ. ಸಾಹಿತ್ಯದ ಎಲ್ಲಾ ಸಿಂಹಗಳೂ ಈ ಅಂಧಕಾರದಲ್ಲಿ ಮುಳುಗಿದ್ದು ಈಚೆಗೆ ಬಂದಿದ್ದಾರೆ. ಆದರೆ ಹಾರ್ಡಿ ಈಚೆಗೆ ಬರು

ವುದೇ ಇಲ್ಲ" (ಪುಟ ೨೨೫) ಮುಂತಾದ ಮಾತುಗಳು ಸೂತ್ರಪ್ರಾಯವಾಗಿವೆ. "ಹಾರ್ಡಿ ನಮ್ಮ ಮುಂಗೆ ತನ್ನ ಕಾಲದ ವೆಸೆಕ್ಸನ್ನು ಚಿತ್ರಿಸಿದ್ದಾನೆ. ಜನ ಭಾಷೆ ಉಡುಗೆ ತೊಡುಗೆ ದುಡಿಮೆ ವಿಶ್ರಾಂತಿ ಇವೆಲ್ಲ ವೆಸೆಕ್ಸ್‌ಗೆ ಸಂಬಂಧಿಸಿದುವು. ಆದರೆ ಆ ಜನತೆಯು ಅಷ್ಟು ಪ್ರಾದೇಶಿಕವಾದುವಲ್ಲ. ಅವರ ದುಃಖ ಕತೆಗಳು ಜಗತ್ತಿನ ಯಾವುದೇ ಭಾಗದ ಜನತೆಯಲ್ಲಿ ವ್ಯಕ್ತವಾಗಬಹುದಾದ ಪ್ರೀತಿ ದ್ವೇಷ ದುಃಖ ಇವುಗಳ ಸುತ್ತ ನೆಯ್ದುಕೊಂಡಿವೆ" (ಪುಟ ೨೩೦) ಎಂಬ ವಿಮರ್ಶೆಯಲ್ಲಿ ಹಾರ್ಡಿಯ ಸಾಹಿತ್ಯದ ಹಿರಿಮೆ ಪ್ರಕಟವಾಗಿದೆ. 'ಜನತೆಯ ಕವಿ' ಎಂಬುದು ವಿಟ್‌ಮನ್ನನ 'ಗರುಕೆಯ ದಳಗಳು' ಕೃತಿಯ ಅವಲೋಕನ. "ಅವನ ಬಾಳಿನ ಒಂದೇ ಗುರಿ ಡಿಮಾಕ್ರಸಿ ಅಥವಾ ಪ್ರಜಾಪ್ರಭುತ್ವವಾಗಿತ್ತು. ಕಲೆಗಳಲ್ಲಿಯೂ ಸಾಹಿತ್ಯದಲ್ಲಿಯೂ ತಾನು ಕೈಯಿಟ್ಟ ಸಮಸ್ತ ವ್ಯವಹಾರದಲ್ಲಿಯೂ ಈ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅವನು ಹೆಣಗಿದನು. ಅದುದರಿಂದ ಅವನು ಛಂದೋಬದ್ಧವಾದ ಕವಿತೆಯನ್ನೂ ಕೃತಕವಾದ ಒಣ ಆಡಂಬರದ ಹೊರಜಿಡಗಿನ ಶೈಲಿಯನ್ನೂ ಮೀರಿದನು. ಜನತೆಯ ಮಾತೇ ಅವನ ಶೈಲಿಯಾಯಿತು" (ಪುಟ ೨೪೫); "ಪ್ರಜಾತಂತ್ರ, ವ್ಯಕ್ತಿಗಳನ್ನು ಉತ್ತಮಗೊಳಿಸುವುದು. ಪ್ರಜಾತಂತ್ರದಲ್ಲಿಯೇ ವ್ಯಕ್ತಿ ತನ್ನ ಗುರಿಯನ್ನು ಸಾಧಿಸುವುದು—ಈ ಧ್ಯೇಯ ವಿಟ್‌ಮನ್ನರ ಕವನಗಳ ಗುರಿ" (ಪುಟ ೨೫೫) ಎಂಬ ಹೇಳಿಕೆಗಳಲ್ಲಿ ವಿಟ್‌ಮನ್ನನ ಕೃತಿಯ ವೈಶಿಷ್ಟ್ಯವೆಲ್ಲ ಸೂಚಿತವಾಗಿದೆ. ಈ ಮೂರೂ ಲೇಖನಗಳು ಆಯಾ ಕವಿಗಳ ಕೃತಿಗಳ ಸಮಗ್ರ ಅಧ್ಯಯನಕ್ಕೆ ಪ್ರಚೋದಕವಾಗುವುದರಲ್ಲಿ ಸಂಶಯವಿಲ್ಲ.

'ಭಾರತದ ಶಿಲ್ಪ ಮತ್ತು ಚಿತ್ರಕಲೆ' ಎಂಬ ಲೇಖನದಲ್ಲಿ ಮುಖ್ಯವಾಗಿ ಅಜಂತ ಎಲ್ಲೋರಗಳ ಸಮೀಕ್ಷೆಯಿದ್ದರೂ, ಭಾರತೀಯ ಶಿಲ್ಪ, ಚಿತ್ರಕಲೆಗಳ ಪರಂಪರೆ ಇಲ್ಲಿ ಸ್ಥೂಲವಾಗಿ ರೇಖಿತವಾಗಿದೆ. ವೇದಕಾಲೀನ ಋಷಿಗಳು ಶಿಲ್ಪಕಲೆಯನ್ನಾಗಲಿ ಚಿತ್ರಕಲೆಯನ್ನಾಗಲಿ ಸೃಜಿಸಲಿಲ್ಲವೆಂಬುದನ್ನು ಗೊರೂರರು ಕಾವ್ಯಮಯವಾಗಿ ತಿಳಿಸುವುದು ಹೀಗೆ: "ಭಾರತದಲ್ಲಿ ಶಿಲ್ಪ ಮತ್ತು ಚಿತ್ರಕಲೆಗಳ ಪ್ರಾರಂಭದ ಯುಗವನ್ನು ನಾವು ಸುಮಾರು ಎರಡು ಸಾವಿರ ವರುಷಗಳ ಹಿಂದಿನಿಂದಲೂ ಕಾಣಬಹುದು. ವೇದಗಳನ್ನು ಸೃಷ್ಟಿಸಿದ ಋಷಿಗಳ ಮನೋನೇತ್ರದ ಎದುರಿಗೆ. ಅನೇಕ ಸಹಸ್ರ ನೇತ್ರಗಳ ನಾನಾ ವರ್ಣಗಳ ಅಂತರಿಕ್ಷವೂ, ಪರ್ವತ ವೃಕ್ಷ ನದಿಗಳ ರಮಣೀಯ ಸೌಂದರ್ಯವೂ ಬೆಳಗು ಬೈಗುಗಳ ನಿತ್ಯನೂತನ ಬದಲಾವಣೆಗಳೂ, ಇಂದ್ರನೇ ಮೊದಲಾದ ದೇವತೆಗಳ ದೇದೀಪ್ಯಮಾನ ಸ್ವರೂಪವೂ, ದೇವಕನ್ನಿಕೆಯರ ಚಪಲ ಮಣಿಮಂಜೀರ ನೂಪುರ ಧ್ವನಿಮಿಶ್ರ ಅಪಾಂಗ ಭಂಗಿಯೂ ಹೊಳೆದಿದ್ದವು. ಆದರೆ ಆ ರೂಪಗಳನ್ನು ಶಿಲ್ಪಗಳಲ್ಲಿಯಾಗಲಿ ಚಿತ್ರಗಳಲ್ಲಿಯಾಗಲಿ ಅವರು ಹಿಡಿದು ಇಡಲಿಲ್ಲ." (ಪುಟ ೬೧) ಮುಂದೆ ಅಜಂತದ ಚಿತ್ರಕಲೆಯ ಸುರಸ ವಿಮರ್ಶೆ ಹರಡಿಕೊಂಡಿದೆ. "ಅಜಂತ ಗುಹಾಂತರ ದೇವಾಲಯ ಭಿತ್ತಿಚಿತ್ರಗಳು, ಭಾರತದ ಚಿತ್ರಕಲೆಯ ಪ್ರಥಮ ಸಾಧನೆ ಎನ್ನಬಹುದು ... ಭಾರತ. ತಾನು ಭಾರತವೇ ಆಗಿದ್ದಾಗ ಚಿತ್ರಿಸಿದ. ಭಾರತದ ಚಿತ್ರವನ್ನೊಳಗೊಂಡ

ಕಲಾಕೃತಿಗಳು ಅವು” (ಪುಟ ೬೧); “ಆ ಆಕೃತಿಗಳಲ್ಲಿ ತೋರತೋರುವ ಬಾಳಿನ ಉತ್ಸಾಹ, ಜೀವನವು ಮಹೋತ್ಸವವೆಂಬ ಭಾವ, ಬಾಳಿನ ವೈಭವ, ನೋಟಕರನ್ನು ಬೆರಗು ಮಾಡುತ್ತದೆ....ಕೆಲವೆಡೆ ಬರಿಯ ಕಣ್ಣುಗಳನ್ನೇ ರೂಪಿಸಿಬಿಟ್ಟಿದ್ದಾರೆ. ಆದರೂ ಆ ಕಣ್ಣುಗಳನ್ನು ನೋಡಿದ ಕೂಡಲೇ ಮೋಹನಾಂಗಿ ನವಯೌವನದಿಂದ ಜ್ವಲಿಸುತ್ತಾ ನಮ್ಮ ಮುಂದೆ ಹಾಯ್ದಂತೆ ಗೋಚರವಾಗುತ್ತದೆ. ಅಜಂತದ ಚಿತ್ರಗಳು ಹೀಗೆ ಅಂದಿನ ಬಾಳಿನ ಅನುಕರಣ, ಪ್ರತಿದಿನದ ಬಾಳನ್ನು ಪೂರ್ಣವಾಗಿ ಬಾಳಬೇಕೆಂಬ ಧ್ಯೇಯದ ಪ್ರತೀಕ” (ಪುಟ ೬೩); “ಚಿತ್ರಗಳಲ್ಲಿರುವ ರೇಖೆಗಳು ಹರಿಯುತ್ತಿರುವ ರಕ್ತನಾಳಗಳೋ, ಮುಂದಲ ಗಳಿಗೆಯಲ್ಲಿ ಎದ್ದು ಜೀವಗೊಂಡು, ಓಡಾಡುವುವೋ ಎಂಬಂತೆ ತೋರುವುವು.” (ಪುಟ ೬೫) ಹೀಗೆಯೇ ಎಲ್ಲೋರದ ಶಿಲ್ಪಕಲೆಯೂ ವಿಮರ್ಶಿತವಾಗಿದೆ. “ಸದ್ಯದಲ್ಲಿ ಭಾರತದಲ್ಲಿ ಚಿತ್ರಕಲೆಯಲ್ಲಾಗಲಿ ಶಿಲ್ಪದಲ್ಲಿಯಾಗಲಿ ಪ್ರಾಚೀನ ವೈಭವವನ್ನು ಮುಟ್ಟುವವರು ಇನ್ನೂ ಬೆಳಕಿಗೆ ಬಂದಿಲ್ಲ” (ಪುಟ ೭೨) ಎಂದು ಗೊರೂರರು ಅಭಿಪ್ರಾಯಪಡುತ್ತಾರೆ. ವಾತ್ಸ್ಯಾಯನನ ಕಾಮ ಸೂತ್ರದಲ್ಲಿ ಬರುವ “ರೂಪಭೇದಾಃ ಪ್ರಮಾಣಾನಿ....” ಎಂಬ ಶ್ಲೋಕವನ್ನು ಅವರು ವ್ಯಾಖ್ಯಾನಿಸಿ ಶಿಲ್ಪಚಿತ್ರ ಕಲೆಗಳ ಸ್ವರೂಪವನ್ನು ವಿವರಿಸಿರುವುದು ಸಮೀಚೀನವಾಗಿದೆ.

ಒಂದು ರಾಷ್ಟ್ರದ ಜನಜೀವನಕ್ಕೂ ಆ ರಾಷ್ಟ್ರದ ಸಾಹಿತ್ಯ, ಕಲೆಗಳಿಗೂ ಇರುವ ಸಂಬಂಧವನ್ನು ಜಾಗತಿಕ ವ್ಯಾಪ್ತಿಯಲ್ಲಿ ವಿಚಾರ ಮಾಡಿರುವ ಲೇಖನ ‘ರಾಷ್ಟ್ರೀಯ ಸಾಹಿತ್ಯ ಮತ್ತು ಕಲೆ.’ “ಸಾಹಿತ್ಯ ಮತ್ತು ಕಲೆಗಳ ವೈಭವದ ಕಾಲವೇ ರಾಷ್ಟ್ರದ ಅಭ್ಯುದಯ ಕಾಲ” (ಪುಟ ೯೫) ಎಂಬುದನ್ನು ಪ್ರತಿಪಾದಿಸುವುದು ಈ ಲೇಖನದ ಒಂದು ಮುಖವಾದರೆ ಆ ಮಾತಿಗೆ ಅಪವಾದಗಳನ್ನೂ ತೋರಿಸುವುದು ಇನ್ನೊಂದು ಮುಖ. “ರಾಷ್ಟ್ರದ ಕಲೆಯಲ್ಲಿ ಅದ್ಭುತವಾದ ಕಾಂತಿಯು ಕೆಲವು ವೇಳೆ ರಾಷ್ಟ್ರದ ವೈಭವ ಸೂರ್ಯನ ಅಸ್ತಮಯ ಕಾಲದಲ್ಲಿ ಮಾತ್ರ ಪ್ರಕಟವಾಗುತ್ತದೆ” (ಪುಟ ೯೮) ಎಂದಿರುವ ಲೇಖಕರು “ಇಂದೂ ದೇಶಗಳಲ್ಲಿಯೂ ಕೂಡ, ಒಂದು ಯುಗದ ರಾಷ್ಟ್ರ ಜೀವನ ವೈಭವದ ತುದಿಯನ್ನು ಮುಟ್ಟಿ ಇಳಿತರವಾಗಲು ಪ್ರಾರಂಭಿಸಿದಾಗ, ಭಾರತದ ಕಲೆಯು ತನ್ನ ಸ್ವಾಭಾವಿಕವಾದ ಸ್ವರ್ಣತೆಯನ್ನು ಹೊಂದಿತು” (ಪುಟ ೧೦೪) ಎಂದು ಹೇಳಿದ್ದಾರೆ. ಕಡೆಯದಾಗಿ ಅವರು ವಿದ್ಯಾರ್ಥಿಗಳಿಗೆ ನೀಡಿರುವ ಉಪದೇಶ ಅಮೂಲ್ಯವಾದದ್ದು : “ನಿಮಗೆ ಬರೆಯುವ ಶಕ್ತಿ ಇದ್ದರೆ ನಿಮ್ಮ ದೇಶದ ರಾಷ್ಟ್ರಜೀವನವನ್ನು ಕುರಿತು ನಿಮ್ಮ ಭಾಷೆಯಲ್ಲಿ ಬರೆಯಿರಿ....ಪ್ರತಿ ಭಾರತೀಯನೂ ಅವನು ಎಲ್ಲಿದ್ದರೂ ಸರಿಯೆ ಸುಂದರವಾದುದನ್ನೂ ರಾಷ್ಟ್ರೀಯವಾದುದನ್ನೂ ಪ್ರೀತಿಸುವ ಮನೋಭಾವವನ್ನು ಬೆಳಸಿಕೊಳ್ಳಲಿ.” (ಪುಟ ೧೦೫-೬) ಒಟ್ಟಿನಲ್ಲಿ ವಿಚಾರಗರ್ಭಿತವಾದ ಪ್ರಬಂಧವಿದು.

‘ನಮ್ಮ ಶಿಕ್ಷಣದ ರೂಪರೇಖೆಗಳು’ ವ್ಯಾವಹಾರಿಕ ದೃಷ್ಟಿಯಿಂದ ಅತ್ಯುಪಯುಕ್ತವಾದ ಲೇಖನ. “ಶಿಕ್ಷಣ ಜೀವನದ ಬೆಳಕು. ಧನಿಕರು ಬಡವರು ಎಂಬ ಭೇದವಿಲ್ಲದೆ

ಇದು ಎಲ್ಲರಿಗೂ ಅವಶ್ಯಕ" (ಪುಟ ೧೧೦) ಎಂದು ಲೇಖಕರು ಬರೆದರು. "ದೇಶದ ಅವಶ್ಯಕತೆಯನ್ನರಿತು ಶಿಕ್ಷಣವನ್ನು ಕೊಡಬೇಕು...ಹುಟ್ಟಿದೆ ನಾಲಿಗೆ ಇಲ್ಲಿ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ನಮ್ಮ ದೇಶದ ಶಿಕ್ಷಣ ಸಮಸ್ಯೆ ಸಮರ್ಪಕವಾಗಿ ಪರಿಹಾರವಾಗುವುದಿಲ್ಲ" (ಪುಟ ೧೧೧) ಎಂದು ಹೇಳುತ್ತಾರೆ. ನಮ್ಮ ಶಿಕ್ಷಣದಲ್ಲಿ ಪೂರ್ಣವಾಗಿ ಕ್ರಾಂತಿಕಾರಕವಾದ ಬದಲಾವಣೆಗಳಾಗಬೇಕೆಂಬುದು ಅವರ ನಿಲುವು. "ಇದುವರೆಗೆ ನಮ್ಮ ದೇಶದಲ್ಲಿ ನಮ್ಮ ಬಾಲಕರಿಗೆ ಸರಿಯಾದ ಶಿಕ್ಷಣದ ಅವಕಾಶ ದೊರೆಯದೆ ಬಹಳ ಅನ್ಯಾಯವಾಯಿತು. ಇದಕ್ಕೆ ಪರಕೀಯ ಸರ್ಕಾರವೇ ಕಾರಣ. ಮುಂದೆ ನಮ್ಮ ಸರ್ಕಾರಗಳು ಈ ಕೊರತೆಯನ್ನು ತತ್‌ಕ್ಷಣ ಹೋಗಲಾಡಿಸಬೇಕು." (ಪುಟ ೧೧೦) ಹಿಂದಿನ ಶಿಕ್ಷಣದ ದೋಷವನ್ನು ಅವರು ಎತ್ತಿ ತೋರಿದ್ದಾರೆ: "ಹಿಂದೆ ನಮ್ಮ ಆಳರಸರು ಶಿಕ್ಷಣವನ್ನು ಮೇಲಿನಿಂದ ಪ್ರಾರಂಭಿಸುತ್ತಿದ್ದರು. ಕೆಲವು ಕಾಲೇಜುಗಳನ್ನೂ ಹೈಸ್ಕೂಲುಗಳನ್ನೂ ಸ್ಥಾಪಿಸುವುದರಿಂದ ಜ್ಞಾನ ಕೆಳಗೆ ದೇಶದಲ್ಲೆಲ್ಲಾ ಹರಡುವುದೆಂದು ಅವರು ನಂಬಿದ್ದರು. ಆದರೆ ಜ್ಞಾನ ಅಷ್ಟು ಸುಲಭವಾಗಿ ಹರಿಯುವುದಿಲ್ಲ. ನಮ್ಮ ಹಿಂದಿನ ಸರ್ಕಾರಗಳ ಈ ನೀತಿಯಿಂದ ನಮ್ಮ ಮಧ್ಯಮ ವರ್ಗದ ಕುರ್ಚಿಭೂಷಣರೂ ಉಪಾಧ್ಯಾಯರೂ ವಕೀಲರೂ ಮಾತ್ರ ಸೃಷ್ಟಿಯಾದರು." (ಪುಟ ೧೧೪) ಶಿಕ್ಷಣದ ಗುರಿಯ ಬಗ್ಗೆ ಅವರು ಹೇಳುತ್ತಾರೆ: "ಶಿಕ್ಷಣದ ಗುರಿ ನೀತಿಜೀವನವನ್ನು ಕಲಿಸುವುದೇ ಆಗಿರಬೇಕು. ಅದರಿಂದಲೇ ವ್ಯಕ್ತಿಗೆ ಸಮಾಧಾನತೆಯೂ ಅವನ ಜೀವನದಲ್ಲಿ ಸಮರಸವೂ ಉಂಟಾಗುತ್ತದೆ. ಅದೇ ಸಾಮಾಜಿಕ ಜೀವನದ ಕಟ್ಟಡದ ಭದ್ರವಾದ ಅಡಿಗಲ್ಲು." (ಪುಟ ೧೨೦) ಮೂಲಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಜಾರಿಗೆ ತರಬೇಕೆನ್ನುತ್ತಾರೆ ಲೇಖಕರು. "ವಯಸ್ಕರ ಶಿಕ್ಷಣದ ಜಟಿಲವಾದ ಸಮಸ್ಯೆಯ ಪರಿಹಾರಕ್ಕೆ ನಮ್ಮ ಎಲ್ಲ ಬುದ್ಧಿಶಕ್ತಿಯನ್ನೂ ಕಾರ್ಯಶಕ್ತಿಯನ್ನೂ ಪ್ರಯೋಗಿಸಬೇಕು" (ಪುಟ ೧೨೮) ಎಂಬುದು ಅವರ ಇನ್ನೊಂದು ವಿಚಾರ. "ಆರ್ಥಿಕ ಪುನರುಜ್ಜೀವನವಾದ ಹೊರತು ಹೊಸ ಚೈತನ್ಯ ಸಾಧ್ಯವಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ನನ್ನ ದೃಷ್ಟಿಯಲ್ಲಿ ಆರ್ಥಿಕ ಅಭಿವೃದ್ಧಿಯೂ ಬುದ್ಧಿಯ ಬೆಳವಣಿಗೆಯೂ ಎರಡೂ ಒಂದೇ ನಾಣ್ಯದ ಎರಡು ಮುಖಗಳು" (ಅಲ್ಲೇ) ಎಂಬ ಮಾತಿನಲ್ಲಿ ಸತ್ಯವಿದೆ.

ಶಿಕ್ಷಣದಲ್ಲಿ ವಿಜ್ಞಾನದ ಸ್ಥಾನಮಾನದ ಬಗೆಗೆ ಗೊರೂರರು ಆಲೋಚಿಸಿದ್ದಾರೆ. "ಹೊಸ ವಿಜ್ಞಾನದಲ್ಲಿ, ನಾವು ಅದನ್ನು ಸರಿಯಾಗಿ ಉಪಯೋಗಿಸಿದ್ದರೆ ಮೋಕ್ಷ ನಮ್ಮದು" (ಪುಟ ೧೩೩) ಎಂದು ಹೇಳಿ, "ಭಾರತದಲ್ಲಿ, ಪ್ರಕೃತಿಯ ಗರ್ಭದಲ್ಲಿ ಇನ್ನೂ ಅನೇಕ ಐಶ್ವರ್ಯ ಅಡಗಿದೆ. ಗಣಿಗಳು ಕಾಡುಗಳು ಭೂಮ್ಯಾದಿಗಳು ಇವೆಲ್ಲಾ ನಮ್ಮ ಮೂಲಧನಗಳು. ಸಂಶೋಧನೆಯಿಂದ ಇವುಗಳನ್ನೆಲ್ಲಾ ಕಂಡುಹಿಡಿಯಬೇಕಾಗಿದೆ. ಆಧುನಿಕ ವಿಜ್ಞಾನಮಾರ್ಗದಿಂದ ಅವುಗಳನ್ನೆಲ್ಲಾ ಉಪಯೋಗಿಸಿಕೊಳ್ಳಬೇಕಾಗಿದೆ" (ಅಲ್ಲೇ) ಎಂದು ಸೂಚಿಸುತ್ತಾರೆ. "ನಮ್ಮ ವಿಜ್ಞಾನ ಜ್ಞಾನವನ್ನು ನಿತ್ಯದ ಬಾಳ್ವೆಗೆ

ಹೊಂದಿಸಿಕೊಳ್ಳಬೇಕು" (ಪುಟ ೧೨೫) ಎಂದು ಹೇಳಿ, "ವ್ಯಕ್ತಿಯ ಮಂಗಳವೆಂಬ ಮೆಟ್ಟಿಲಿನಿಂದ ಸಮಾಜ ಮಂಗಳವೆಂಬ ಮೇಲುಮೆಟ್ಟಿಲನ್ನು ವಿಜ್ಞಾನ ಒತ್ತಿ ಹೇಳುತ್ತಿದೆ. ನಮ್ಮ ಧರ್ಮಗಳೆಲ್ಲಾ ಬೋಧಿಸಿದುದು ಇದನ್ನೇಯೆ" (ಪುಟ ೧೨೭-೮) ಎಂದೂ, "ಭಾರತೀಯರ ವೇದಾಂತ, ವಿಜ್ಞಾನದ ಬೆಳವಣಿಗೆಯನ್ನು ಎಂದಿಗೂ ತಡೆಯಲಿಲ್ಲ" (ಪುಟ ೧೨೮) ಎಂದೂ ವಿಜ್ಞಾನವನ್ನು ಸಮರ್ಥಿಸಿದ್ದಾರೆ. "ನಮ್ಮ ಶಿಕ್ಷಣ ಸಂಸ್ಥೆಗಳು ಈ ವಿಶಾಲಭಾವನೆಗಳನ್ನು ಪ್ರಚಾರಪಡಿಸುವ ಕೇಂದ್ರಗಳಾಗಬೇಕು....ಜ್ಞಾನಾರ್ಜನೆಗೆ ಹತ್ತಿರದ ಕಾಲುದಾರಿ ಇಲ್ಲ. ಜನಾಂಗದ ಮುಂದಿನ ನಾಯಕರಾಗುವವರು ನಿಷ್ಠೆಯಿಂದ ಜ್ಞಾನಸಂಪಾದನೆ ಮಾಡಬೇಕು....ನಿಜವಾದ ಜ್ಞಾನವಿಲ್ಲದವರ ಕೈಲಿ ದೇಶದ ಆಳ್ವಿಕೆ ಸಿಕ್ಕಿದರೆ ಪ್ರಜಾಪ್ರಭುತ್ವ ಮರೆಯಾಗುವುದು" (ಪುಟ ೧೩೦) ಎಂಬುದು ಲೇಖಕರ ಮುಕ್ತಾಯಭಾಗ. ಶಿಕ್ಷಣತಜ್ಞರು ಗಮನಿಸಬೇಕಾದ ಎಷ್ಟೋ ಉಕ್ತಿಗಳು ಈ ಬರಹದಲ್ಲಿವೆ. ಗೊರೂರರ ಪ್ರಜಾಸತ್ತಾತ್ಮಕ ಉದಾರ ಮನೋವೃತ್ತಿ ಇಲ್ಲಿ ಸುವ್ಯಕ್ತವಾಗಿದೆ. ಶಿಕ್ಷಣ ಎಲ್ಲರಿಗೂ ಬೇಡ, ಅರ್ಹರಿಗೆ ಮಾತ್ರ ಮೀಸಲಾಗಿರಲಿ. ಸ್ವಾತಂತ್ರ್ಯ ಬಂದಮೇಲೆ ನಮ್ಮ ವಿದ್ಯಾಭ್ಯಾಸ ಹಾಳಾಗಿಹೋಯಿತು, ಬ್ರಿಟಿಷರ ಕಾಲದಲ್ಲಿ ಚೆನ್ನಾಗಿತ್ತು, ಈಗ ಯಾರೋ ಯಾರೋ ಮುಂದೆ ಬರುವಂತಾಯಿತು ಎಂದೆಲ್ಲ ಸದಾ ಗೊಣಗುತ್ತ ವಿಷಕಾರುವ (ದುರ್) ಬುದ್ಧಿಜೀವಿಗಳು ಈ ಹೊತ್ತು ನಮ್ಮಲ್ಲಿ ಕಂಡುಬರುತ್ತಾರೆ. ಅವರಿಗೂ ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೂ ಎಷ್ಟು ಅಂತರ!

'ಟಾಲ್‌ಸ್ಟಾಯ್‌ರವರ ತತ್ತ್ವಗಳು' ಎಂಬ ಲೇಖನ ಆ ಮಹಾಪುರುಷನ 'ಜೀವನ' ಎಂಬ ಕೃತಿಯ ಸಾಮಾನ್ಯ ಅವಲೋಕನ. 'ಹಳ್ಳಿಗಳ ವೃತ್ತಪತ್ರಿಕೆಗಳು' ಎಂಬ ಲೇಖನದಲ್ಲಿ ಅಮೆರಿಕದ ಗ್ರಾಮೀಣ ಪತ್ರಿಕೆಗಳ ಬಗ್ಗೆ ಸ್ವಾರಸ್ಯಪೂರ್ಣವಾದ ಸಂಗತಿಗಳನ್ನು ತಿಳಿಸಲಾಗಿದೆ. ಲೇಖನವನ್ನೋದಿದಮೇಲೆ, ನಮಗೆ ಇಂಥ ವಿಷಯ ಗೊತ್ತೇ ಇರಲಿಲ್ಲವಲ್ಲ ಎನಿಸುತ್ತದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರರದು ಸನಾತನ-ನೂತನಗಳ, ಮೂಡಣ-ಪಡುವಣಗಳ ಸಾಮರಸ್ಯದಿಂದ ಹದನಾದ ವ್ಯಕ್ತಿತ್ವ. ಆ ಚೇತನ ತನ್ನ ಕಿಟಕಿ ಬಾಗಿಲುಗಳನ್ನೆಲ್ಲ ತೆರೆದಿಟ್ಟು ಎಲ್ಲೆಡೆಗಳಿಂದ ಗಾಳಿ ಬೆಳಕುಗಳನ್ನು ಬರಮಾಡಿಕೊಳ್ಳುವಂಥದು. ಅದರಲ್ಲಿ ಯಾವುದೇ ಉಪಾಧಿ ಪೂರ್ವಾಗ್ರಹಗಳಿಗೆ, ವಿಕಾರ ಅತಿರೇಕಗಳಿಗೆ ಸ್ಥಾನವಿಲ್ಲ. ಋಜುತ್ವ, ನಿರ್ಮಲತೆಗಳು ಅದರ ಸಾರ ಗುಣಗಳು. 'ಸಾಹಿತ್ಯ ರಶ್ಮಿ'ಯ ಬರೆಹಗಳು ಈ ಸಂಗತಿಯನ್ನು ಉದ್ದಕ್ಕೂ ತೋರ್ಪಡಿಸುತ್ತವೆ.

ಪ್ರಕೃತ ಗ್ರಂಥದಲ್ಲಿ ವಿದ್ವತ್ತಿದ್ದರೂ ಅದರ ಭಾರ ಜಟಿಲತೆಗಳು ಕಾಣುವುದಿಲ್ಲ; ಪ್ರತಿಯಾಗಿ, ಅತಿ ಸರಳತೆಯ ಅಪಾಯ ಒಮ್ಮೊಮ್ಮೆ ತಲೆಹಾಕಬಹುದು. ಹಗುರವಾದರೂ ಗಾಂಭೀರ್ಯರಹಿತವಲ್ಲದ, ಹದವಾದ ಆಕರ್ಷಕವಾದ ಶೈಲಿ ಗೊರೂರರಿಗೆ ಇಲ್ಲಿ ಸಿದ್ಧಿಸಿದೆ. ಈ 'ಸಾಹಿತ್ಯ ರಶ್ಮಿ'ಯಲ್ಲಿ ಸಾಹಿತ್ಯ ವಿಷಯಕವಾದ ಲೇಖನಗಳೆ ಬಹುಸಂಖ್ಯೆಯಲ್ಲಿವೆ. ಇವುಗಳಲ್ಲಿ ಗೋಚರಿಸುವ ವಿಮರ್ಶೆ ಪ್ರಧಾನವಾಗಿ ಪರಿಚಯಾತ್ಮಕ

ಅಥವಾ ವರ್ಣನಾತ್ಮಕ ಎನ್ನಬಹುದು. ಈ ಬಗೆಯ ಪ್ರಕಾರಕ್ಕೆ ಅವರದೇ ಆದ ನೆಲೆಬೆಲೆಗಳುಂಟು. ಇದು ಇತರ ಬಗೆಯ ವಿಮರ್ಶೆಗಳಿಗೆ ಮೆಟ್ಟಿಲೂ ತೊಟ್ಟಿಲೂ ಆಗಿ ಸಾರ್ಥಕವಾಗಬಲ್ಲುದು. ವರ್ಣನಾತ್ಮಕ ವಿಮರ್ಶೆಗೆ ಸದಭಿರುಚಿ, ಸಹೃದಯತೆ, ಸಂಸ್ಕಾರಾದಿ ಗುಣಗಳು ಅತ್ಯಾವಶ್ಯಕ. ಅತ್ಯುತ್ತಮ ಭಾಗಗಳನ್ನು ಮೂಲಕೃತಿಯಿಂದ ಆರಿಸುವುದು ಎಲ್ಲರಿಗೂ ಸಾಧ್ಯವಾಗುವ ಸುಲಭವಾದ ಕಾರ್ಯವೇನಲ್ಲ. ಹಾಗೆ ಎತ್ತಿ ಕೊಟ್ಟಾಗ, ಯಾವ ವ್ಯಾಖ್ಯಾನ ಇಲ್ಲದಿದ್ದರೂ, ಓದುಗ ತಾನಾಗಿಯೇ ಅದನ್ನು ಅನುಭವಿಸಿ ಆಸ್ವಾದಿಸಬಲ್ಲ. ಇದು ಒಳ್ಳೆಯ ಭಾಗವೆಂಬ ಸೂಚನೆ ಸಾಕಾದೀತು. ವಿಶೇಷಜ್ಞರಲ್ಲದ ಸಾಮಾನ್ಯರಿಗಂತೂ ಇಂತಹ ವಿಮರ್ಶೆಯಿಂದ ಮಹೋಪಕಾರವಾಗುತ್ತದೆ: ಅದೊಂದು ರೀತಿಯ ದೀಕ್ಷಾ ಪ್ರಯೋಜನ.

ಗೊರೂರು ರಾಮಸ್ವಾಮಿ ಅಯ್ಯಂಗಾರರ ವಿಮರ್ಶೆ ಪಂಡಿತರಿಗಿಂತ ಪಾಮರರನ್ನು ಮುಖ್ಯವಾಗಿ ಲಕ್ಷ್ಯದಲ್ಲಿರಿಸಿಕೊಂಡಿದ್ದು. ಪ್ರಜಾಪ್ರಭುತ್ವದಲ್ಲಿ ನಿಷ್ಠೆಯುಳ್ಳ ಅವರಿಗೆ ಈ ಜನತಾಂತರ್ದೃಷ್ಟಿ ಸಹಜವಾಗಿದ್ದು, ಅವರ ಸಾಹಿತ್ಯಸಮಸ್ತವೂ ಇದಕ್ಕೆ ಸಾಕ್ಷಿಯಾಗಿದೆ.

'ಸಾಹಿತ್ಯದ ಜೀವಾಳ'

ಎಚ್. ಎಂ. ಚನ್ನಯ್ಯ

'ಸಾಹಿತ್ಯದ ಜೀವಾಳ' ಷೋಪೆನ್‌ಹೌರನ ನಾಲ್ಕು ಪ್ರಬಂಧಗಳ ಅನುವಾದ. ಹೆಗೆಲನ ಸಮಕಾಲೀನನಾದ ಷೋಪೆನ್‌ಹೌರನು ನೋವಾಲಿಸ್ ಮತ್ತು ಹಾಫ್‌ಮನ್‌ರಂಥ ರೊಮ್ಯಾಂಟಿಕರ ಪ್ರಭಾವಕ್ಕೆ ಒಳಗಾದಂಥವನು; ಇಂಡಿಯಾದ ಉಪನಿಷತ್ತುಗಳು ಮತ್ತು ಬೌದ್ಧ ಧರ್ಮಗಳ ತತ್ವಗಳಿಂದಲೂ ಪ್ರಭಾವಿತನಾದಂಥವನು: ಸಾಹಿತ್ಯ, ಕಲೆಗಳಲ್ಲೂ ಆಸಕ್ತನಾಗಿದ್ದ ತತ್ವಶಾಸ್ತ್ರಜ್ಞ.

'ಲೇಖನ ಕಲೆ', 'ತನ್ನಷ್ಟಕ್ಕೆ ತಾನು ಆಲೋಚನೆ ಮಾಡುವುದು', 'ಗ್ರಂಥಗಳು ಮತ್ತು ಅವುಗಳ ವ್ಯಾಸಂಗ', 'ಶೈಲಿ'—ಇಲ್ಲಿ ಹೀಗೆ ನಾಲ್ಕು ಪ್ರಬಂಧಗಳಿವೆ. ಈ ಪ್ರಬಂಧಗಳಲ್ಲಿ ಷೋಪೆನ್‌ಹೌರನು ಆ ವಿಷಯಗಳನ್ನು ಕುರಿತು ಚರ್ಚಿಸುವಾಗ, ಸಾಹಿತ್ಯದ ಬಗ್ಗೆ, ಅದರ ಸ್ವರೂಪದ ಬಗ್ಗೆ ತನ್ನ ಅಭಿಪ್ರಾಯಗಳನ್ನೂ ಮಂಡಿಸಿದ್ದಾನೆ.

ಮೊದಲನೆಯ ಪ್ರಬಂಧದಲ್ಲಿ, ವಿಷಯ ಪ್ರತಿಪಾದನೆಗಾಗಿ ಬರೆಯುವ ಗ್ರಂಥಕರ್ತರು ಶ್ರೇಷ್ಠರು ಎಂದು ಹೇಳಿ, ಅಂಥವರಿಗೆ "ಇತರರಿಗೆ ತಿಳಿಸಲು ಅರ್ಹವಾದುವೆಂದು ತಮಗೆ ತೋರುವ ಯೋಚನೆಗಳೂ ಅನುಭವಗಳೂ ಉಂಟಾಗಿರುತ್ತವೆ." (ಪುಟ ೧) ಎಂದು ಹೇಳುತ್ತಾನೆ. ಕೇವಲ ಬರೆಯುವುದಕ್ಕಾಗಿಯೇ ಬರೆಯುವವರಿಗೆ, ಹೇಳಬೇಕಾದ್ದೇನೂ ಇಲ್ಲದೆ ಅವರು ಕೇವಲ ಹಣಕ್ಕಾಗಿ ಬರೆಯುತ್ತಾರೆ, ಎನ್ನುತ್ತಾನೆ. "ವಿಷಯವನ್ನು ಹೇಳುವುದಕ್ಕಾಗಿಯೇ ಯಾವನು ಬರೆಯುವುದಿಲ್ಲವೋ ಅವನಿಗೆ ಬರೆಯುವುದಕ್ಕೆ ಅರ್ಹವಾದುದು ಏನೂ ಇಲ್ಲ." (ಅಲ್ಲೇ) "ಜನರು ಹಣಸಂಪಾದನೆಗಾಗಿ ಅಂಥವುಗಳನ್ನು ಬರೆಯುತ್ತಿರುವುದೇ ಸಾಹಿತ್ಯವು ಈಗ ಇಷ್ಟು ಹೀನಾವಸ್ಥೆಯಲ್ಲಿರಲು ಕಾರಣವಾಗಿದೆ" (ಅಲ್ಲೇ) ಎಂಬ ಈ ಮಾತುಗಳು ಆಲೋಚನೆ ಮತ್ತು ವಿಷಯಪ್ರತಿಪಾದನೆಗೆ ಮಹತ್ವ ಕೊಡುವುದನ್ನು ಕಾಣಬಹುದು.

"ಮತ್ತೆ ಲೇಖಕರಲ್ಲಿ ಮೂರು ಬಗೆಯವರಿದ್ದಾರೆಂದು ಹೇಳಬಹುದು. ಯೋಚನೆ

ಮಾಡದೆ ಬರೆಯುವವರು ಮೊದಲನೆಯವರು. ಅವರು ಮನಸ್ಸಿನಲ್ಲಿ ತುಂಬಿರುವ ನೆನಪುಗಳಿಂದ ಬರೆಯುತ್ತಾರೆ. ಅನೇಕ ವೇಳೆ ಇತರರ ಪುಸ್ತಕಗಳಿಂದಲೇ ನೇರವಾಗಿ ತೆಗೆದು ಬರೆಯುವರು. ಆ ಗುಂಪೇ ಬಹಳ ದೊಡ್ಡದು. ಬರೆಯುತ್ತಿರುವಾಗ ಆಲೋಚನೆ ಮಾಡುವವರು ಎರಡನೆಯವರು. ಅವರು ಯೋಚನೆ ಮಾಡುವುದು ಬರೆಯುವುದಕ್ಕಾಗಿಯೇ. ಅವರ ಸಂಖ್ಯೆಯಾದರೂ ಕಡಮೆಯಿಲ್ಲ. ಬರವಣಿಗೆಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಯೋಚನೆ ಮಾಡುವ ಗ್ರಂಥಕರ್ತರೇ ಮೂರನೆಯ ವರ್ಗದವರು. ಅವರು ಬಹಳ ವಿರಳ." (ಪುಟ ೨) ಅವನ. ಮೂರನೆಯ ವರ್ಗದ ಲೇಖಕರೇ ನಿಜವಾಗಿಯೂ ತಮ್ಮದೇ ಆದುದನ್ನು ಹೇಳಲು ಸಮರ್ಥರಾಗಿರುತ್ತಾರೆ: ಶ್ರೇಷ್ಠ ಗ್ರಂಥಕರ್ತರೆಲ್ಲಾ ಈ ಜಾತಿಗೆ ಸೇರುತ್ತಾರೆ ಎಂಬ ವಿಷಯವನ್ನು ಪ್ರತಿಪಾದಿಸುತ್ತಾನೆ.

ಹೊಸ ಗ್ರಂಥಗಳ ಬಗ್ಗೆ ಹೇಳುತ್ತಾ, ಹೊಸದಾದ ಮಾತ್ರಕ್ಕೇ ಯಾವ ಗ್ರಂಥವೂ ಶ್ರೇಷ್ಠವಾಗಲು ಸಾಧ್ಯವಿಲ್ಲ ಎನ್ನುವುದನ್ನು ಹೇಳಿ, "ಅನೇಕವೇಳೆ ಶ್ರೇಷ್ಠವಾದ ಮತ್ತು ಉತ್ತಮವಾದ ಹಳೆಯ ಗ್ರಂಥವನ್ನು ಹೊಸ ಗ್ರಂಥಗಳು ಹಿಂದಕ್ಕೆ ತಳ್ಳುವುವು. ಅಂತಹ ಹೊಸ ಗ್ರಂಥಗಳು ಹಣದಾಸೆಯಿಂದ ರಚಿತವಾಗಿ ಸ್ನೇಹಿತರ ಹೊಗಳಿಕೆಗೆ ಪಾತ್ರವಾಗಿ ದುರಭಿಮಾನದಿಂದ ಮೆರೆಯುತ್ತವೆ" (ಪುಟ ೫) ಎಂದು ಹೇಳುತ್ತಾನೆ. ಸಾಧ್ಯವಾದಷ್ಟು ಮೂಲ ಲೇಖಕರನ್ನೇ ಓದಬೇಕು: ಮೂಲದಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ಕರತಲಾಮಲಕ ಮಾಡಿಕೊಂಡಮೇಲೆ, ಅದರ ಮೇಲೆ ಬರೆದ ಬೇರೆ ಗ್ರಂಥಗಳನ್ನು ಓದಬೇಕು: ಮೂಲವನ್ನೇ ಓದದೆ, ಅದರ ಮೇಲೆ ಬಂದುದನ್ನು ಓದಿ ತೃಪ್ತರಾಗಬಾರದು. ಹಾಗೇ, ಪುಸ್ತಕಕ್ಕೆ ಇಡಬೇಕಾದ ಹೆಸರು ಉಚಿತವಾಗಿರಬೇಕು ಎನ್ನುವುದನ್ನು ಹೇಳಿ, 'ವಸ್ತು'ವಿನ ಬಗ್ಗೆ ಚರ್ಚಿಸುತ್ತಾನೆ. "ವಸ್ತುವಿನಿಂದಲೇ ಪ್ರಸಿದ್ಧವಾದ ಗ್ರಂಥಗಳನ್ನು ಸಾಮಾನ್ಯವಾದ ಮತ್ತು ಹೆಚ್ಚು ಜ್ಞಾನಿಗಳಲ್ಲದ ಲೇಖಕರೂ ಬರೆಯಬಹುದು" (ಪುಟ ೭) "ಕಾವ್ಯ ವಸ್ತುವನ್ನು ಕುರಿತು ಕವಿಯ ಆಲೋಚನೆಗಳೇನು ಎನ್ನುವುದೇ ಗ್ರಂಥಕ್ಕಿರುವ ನಿಜವಾದ ಬೆಲೆ." (ಅಲ್ಲೇ) "ಜನತೆಗೆ ರೂಪಕ್ಕಿಂತ ವಸ್ತುವೇ ಹೆಚ್ಚು ಬೇಕಾಗಿದೆ. ಆದುದರಿಂದಲೇ ಅದರ ಸಂಸ್ಕೃತಿಯು ಅಷ್ಟೇನೂ ಉಚ್ಚತರವಾದುದಾಗಿಲ್ಲ." (ಪುಟ ೮) "ರೂಪವನ್ನು ಬಿಟ್ಟು ವಿಷಯಕ್ಕೆ ಇಷ್ಟು ಪ್ರಾಶಸ್ತ್ಯವನ್ನು ಕೊಡುವುದು ಬಹಳ ಅಂದವಾದ ಯುಟ್ರೀರಿಯ ಕಲಶವನ್ನು ಕಂಡು ಅದರ ಆಕೃತಿ ಮತ್ತು ಬಣ್ಣಕ್ಕಾಗಿ ಆನಂದಿಸುವ ಬದಲು ಆ ಮಣ್ಣು ಯಾವುದು, ಆ ಬಣ್ಣ ಯಾವುದು ಮುಂತಾಗಿ ಅದನ್ನು ರಸಾಯನಶಾಸ್ತ್ರ ರೀತಿ ಪರೀಕ್ಷೆ ಮಾಡಿದಂತೆ ಆಗುತ್ತದೆ." (ಅಲ್ಲೇ) ಈ ಮಾತುಗಳಲ್ಲಿ, ಒಂದು ಮುಖ್ಯವಾದ ವಿಷಯ ಪ್ರತಿಪಾದಿತವಾಗಿದೆ: 'ವಸ್ತು' ಮುಖ್ಯವಲ್ಲ: ಆ ವಸ್ತುವಿಗೆ ಕವಿ ತಂದುಕೊಡುವ 'ಸತ್ವ' ಮುಖ್ಯ: ಅದು, ಉತ್ತಮ ಸಾಹಿತ್ಯಕೃತಿಯಲ್ಲಿ ತನಗೆ ತಕ್ಕ ಅನಿವಾರ್ಯವಾದ 'ರೂಪ'ದಲ್ಲಿ ಮೂಡಿರುತ್ತದೆ.

ಎರಡನೆಯ ಪ್ರಬಂಧದಲ್ಲಿಯೂ ಷೋಪನ್‌ಹಾರನು ಆಲೋಚನೆಗೆ ಪ್ರಾಧಾನ್ಯ ಕೊಟ್ಟು, ಅತಿಯಾಗಿ ಓದುವುದರಿಂದ ಮನಸ್ಸು ಸ್ಥಿತಿಸ್ಥಾಪಕಶಕ್ತಿಯನ್ನು ಕಳೆದು

ಕೊಳ್ಳುತ್ತವೆ, ಓದಿದ್ದನ್ನು ಚೆನ್ನಾಗಿ ಆಲೋಚನೆ ಮಾಡಿ ಅದನ್ನು ವ್ಯವಸ್ಥಿತ ಮಾಡಿ ಕೊಳ್ಳದಿದ್ದರೆ ಅದು ಉಪಯೋಗಕ್ಕೆ ಬರುವುದಿಲ್ಲ ಎಂಬ ಅಂಶವನ್ನು ಪ್ರತಿಪಾದಿಸಿದ್ದಾನೆ.

"ಪುಸ್ತಕಗಳ ಪುಟಗಳಲ್ಲಿ ತಮ್ಮ ವ್ಯಾಸಂಗವನ್ನು ನಡೆಸಿರುವವರೆ ಪಂಡಿತರು. ಆದರೆ ಪ್ರಕೃತಿಯ ಪುಸ್ತಕವನ್ನು ನೇರವಾಗಿ ಹೊಗುವವರೇ ಆಲೋಚನಾಪರರು ಮತ್ತು ಪ್ರತಿಭಾಶಾಲಿಗಳು. ಪ್ರಪಂಚಕ್ಕೆ ಜ್ಞಾನದ ಬೆಳಕನ್ನು ಕೊಟ್ಟು ಅದನ್ನು ಮುಂದಕ್ಕೆ ನಡೆಸಿಕೊಂಡು ಹೋಗುವವರೇ ಅವರು." (ಪುಟ ೧೧);....ತಾನು ಯೋಚನೆ ಮಾಡಿ—ತನ್ನ ಅನುಭವದಿಂದ—ಆ ಜ್ಞಾನವನ್ನು ಕಂಡುಹಿಡಿದಿದ್ದರೆ, ಅದು ಅವನಿಗೆ ಪುಸ್ತಕ ಜ್ಞಾನಕ್ಕಿಂತ ನೂರರಷ್ಟು ಸಾವಿರವಷ್ಟು ಹೆಚ್ಚು, ಬೆಲೆಯಾದುದು." (ಪುಟ ೧೨); ನಮ್ಮ ಸ್ವಂತ ಆಲೋಚನೆಗಳಿಂದ ಸಂಪಾದಿಸಿದ ಸತ್ಯವು, ನಮ್ಮ ಸ್ವಂತ ಅವಯವದ ಹಾಗೆ." (ಪುಟ ೧೩): ಹಾಗೆ ಯೋಚನೆಮಾಡುವ "ಮನಸ್ಸು ಓದಿದುದನ್ನೆಲ್ಲಾ ಸ್ವಾಧೀನಪಡಿಸಿ ಕೊಂಡು ತನ್ನ ಆಲೋಚನೆಗಳೊಂದಿಗೆ ಒಂದು ಮಾಡಿಕೊಳ್ಳುತ್ತದೆ.": "ನಿಜವಾಗಿಯೂ ಸತ್ವವುಳ್ಳ ಮನಸ್ಸಿನ ಕಾರ್ಯಗಳೆಲ್ಲಾ ತೀರ್ಮಾನ ಮತ್ತು ಸ್ಪಷ್ಟತೆಯ ಲಕ್ಷಣಗಳಿಂದ ಕೂಡಿರುತ್ತವೆ." (ಪುಟ ೧೬); ಆದರೆ, "ವಿಚಾರಮಾಡಿ ತೀರ್ಮಾನಕ್ಕೆ ಬರುವವರಿಗಿಂತ ಸುಮ್ಮನೆ ನಂಬುವ ಮಾರ್ಗವನ್ನು ಅನುಸರಿಸುವವರೇ ಜಗತ್ತಿನಲ್ಲಿ ಹೆಚ್ಚು" (ಪುಟ ೧೮) —ಇತ್ಯಾದಿ ಮಾತುಗಳು, ಸಿದ್ಧ ಸತ್ಯಗಳನ್ನು ಎರವಲು ಪಡೆದು ಒಪ್ಪಿಕೊಳ್ಳದೆ ತಾನೇ ಅನ್ವೇಷಣೆಮಾಡಿ ಕಂಡುಕೊಳ್ಳುವ ಸತ್ಯವೇ ವ್ಯಕ್ತಿಗೆ ಅತ್ಯಮೂಲ್ಯವಾದದ್ದು ಎನ್ನುವ ವಿಷಯವನ್ನು ಸ್ಪಷ್ಟಪಡಿಸುತ್ತವೆ.

ಮೂರನೆಯ ಪ್ರಬಂಧದಲ್ಲಿಯೂ ಕೂಡ, ಬೇರೆಯವರ ಗ್ರಂಥಗಳನ್ನು ಓದುವಾಗ ಯಾವ ಧೋರಣೆ ತಾಳಬೇಕು ಎನ್ನುವುದರ ಬಗ್ಗೆ ಚಿಂತಿಸಲಾಗಿದೆ. "ಯಾವಾಗಲೂ ಕುದುರೆ ಸವಾರಿ ಮಾಡುತ್ತಿರುವವನು ನಡೆಯುವುದನ್ನು ಮರೆಯುವಂತೆ" (ಪುಟ ೨೧), ಪ್ರತಿಕ್ಷಣವನ್ನೂ ಬೇರೆಯವರು ಬರೆದದ್ದನ್ನು ಓದುವುದರಲ್ಲಿಯೇ ಕಳೆದರೆ, ಮನಸ್ಸು ಸ್ವತಃ ಆಲೋಚಿಸುವ ಶಕ್ತಿಯನ್ನೇ ಕಳೆದುಕೊಂಡು ಸದಾ ಅದು "ಮತ್ತೊಬ್ಬನ ಆಟದ ಬಯಲಾಗಿ" (ಅಲ್ಲೇ) ಪರಿಣಮಿಸುತ್ತದೆ. "ಮನಸ್ಸು ಮೆಲಕುಹಾಕಿ ಧ್ಯಾನ ಮಾಡಲು ಕಾಲವೇ ದೊರೆಯುವುದಿಲ್ಲ" (ಪುಟ. ೨೨)

ಸಾಹಿತ್ಯದ ಕಳೆಗಳಂತಿರುವ ಕುಕಾವ್ಯಗಳು ಜನರ ಲಕ್ಷ್ಯವನ್ನೂ ಹಣವನ್ನೂ ಅಪಹರಿಸಿಬಿಡುತ್ತವೆ. ಅಂಥ ಗ್ರಂಥಗಳು ಹಣಸಂಪಾದನೆಗಾಗಿ ಹೊರಟಿರುತ್ತವೆ. "ಈ ಹಣಸಂಪಾದನೆಗಾಗಿ ಲೇಖಕನೂ ಪ್ರಕಾಶಕನೂ ವಿಮರ್ಶಕನೂ ಒಂದಾಗಿ ಪಿತೂರಿ ನಡೆಸುತ್ತಾರೆ." (ಪುಟ ೨೪) "ಸಾಹಿತ್ಯ ಪತ್ರಿಕೆಗಳು ಸಾಮಾನ್ಯ ಜನರ ಅಲ್ಪ ವಿಷಯಗಳಲ್ಲಿ ತೊಡಗಿರುವುದರಿಂದ ಜನರ ಅಮೂಲ್ಯವಾದ ಕಾಲವನ್ನೆಲ್ಲಾ ಅಪಹರಿಸುತ್ತವೆ." (ಅಲ್ಲೇ) ಈ ಮಾತುಗಳು ಷೋಪನ್‌ಹೌರನ ಕಾಲದ ಯೂರೋಪಿನ ಪರಿಸ್ಥಿತಿಗೆ ಎಷ್ಟರಮಟ್ಟಿಗೆ ಅನ್ವಯವಾಗುತ್ತವೆಯೋ ಅಷ್ಟೇ ಈಗಿನ ನಮ್ಮ ಪರಿಸ್ಥಿತಿಗೂ ಅನ್ವಯವಾಗುತ್ತವೆ ಎನ್ನಿಸುತ್ತದೆ.

ಕೊನೆಯ 'ಶೈಲಿ' ಎಂಬ ಪ್ರಬಂಧದಲ್ಲಿ ಷೋಪನ್‌ಹೌರನು. ಆ ಬಗ್ಗೆ ತನ್ನ ಅಭಿಪ್ರಾಯಗಳನ್ನು ಪ್ರತಿಪಾದಿಸಿದ್ದಾನೆ. "ಲೇಖಕನ ಮನಸ್ಸಿನ ಸಾಮಾನ್ಯ ಸ್ಥಿತಿಯನ್ನು ಅವನ ಶೈಲಿಯಿಂದ ತಿಳಿಯಬಹುದು" (ಪುಟ ೨೯) ಎಂದು ಹೇಳಿ, ಸರಳವಾಗಿ ಸ್ಪಷ್ಟವಾಗಿ ಬರೆಯುವ ರೀತಿಯನ್ನು ಅವನು ಎತ್ತಿಹಿಡಿಯುತ್ತಾನೆ; ಆಡಂಬರದ ಶೈಲಿಯನ್ನು ಅಲ್ಲಗಳೆಯುತ್ತಾನೆ.

ಕೆಲವರು, ತಮ್ಮ ಯೋಚನೆಗಳು ವಾಸ್ತವವಾಗಿ ಇರುವುದಕ್ಕಿಂತ ಅಗಾಧವಾದಂಥವು ಎಂಬ ಭ್ರಮೆ ಹುಟ್ಟಿಸಲು, ಅಸ್ವಾಭಾವಿಕವಾದ ದೊಡ್ಡ ದೊಡ್ಡ ವಾಕ್ಯಗಳಲ್ಲಿ ಹೇಳುತ್ತಾರೆ; ತಮ್ಮ ಭಾವಗಳಿಗೆ ವೇಷ ಬಣ್ಣ ಹಾಕುತ್ತಾರೆ; ಅಸ್ಪಷ್ಟವಾದ ವಾಕ್ಯಗಳನ್ನು ಸೃಷ್ಟಿಮಾಡುತ್ತಾರೆ. ಇಂಥ ಬರವಣಿಗೆಗೆ ಶೆಲ್ಲಿಂಗ್ ಮತ್ತು ಫಿಷ್ಟೆ. ಅವರ ಬರವಣಿಗೆಗಳನ್ನು ನೋಡಬಹುದು ಎಂದು ಹೇಳುತ್ತಾನೆ. ಅಷ್ಟೆ ಅಲ್ಲದೆ "ಇದಕ್ಕೆ ಅಸಂಬದ್ಧ ಪ್ರಲಾಪದ ಹೆಗೇಲಿಯನ್ಸ್ (Hegelians)ರೇ ಉದಾಹರಣೆ" (ಪುಟ ೨೧) ಎನ್ನುತ್ತಾನೆ.[1]

ಹೀಗೆ ಮುಂದುವರಿಯುತ್ತಾ, "....ಯಾರಿಗೂ ಅರ್ಥವಾಗದಂತೆ ಬರೆಯುವುದಕ್ಕಿಂತ ಸುಲಭವಾದುದು ಯಾವುದೂ ಇಲ್ಲ. ಹಾಗೆಯೇ ಎಲ್ಲರಿಗೂ ತಿಳಿಯುವಂತೆ ಗಹನವಾದ ವಿಚಾರಗಳನ್ನು ಸರಿಯಾದ ಸುಲಭವಾದ ರೀತಿಯಲ್ಲಿ ಬರೆಯುವುದು ಬಹಳ ಕಷ್ಟ." (ಪುಟ ೨೨): "ಅಸ್ಪಷ್ಟವಾದ ಕೆಟ್ಟ ಶೈಲಿ ಎಂದರೆ ಮಂಕಾದ ಮತ್ತು ಮಂದವಾದ ಬುದ್ಧಿ ಎಂದರ್ಥ" (ಪುಟ ೨೩): "ಲೇಖಕನು ಅಸ್ಪಷ್ಟವಾದ ಶೈಲಿಯನ್ನು ಆರಿಸುವುದಕ್ಕೆ ಅನೇಕ ಉದಾಹರಣೆಗಳಿವೆ. ಸ್ಪಷ್ಟವಾದ ಸಿದ್ಧಾಂತಗಳನ್ನು ಹೇಳಲು ಹೆದರುವ, ಯೋಗ್ಯತೆಯಿಲ್ಲದ ಗ್ರಂಥಕರ್ತರಿಗೆ ಈ ಬಗೆಯ ಶೈಲಿಯು ತುಂಬ ಸಹಾಯಕವಾಗಿದೆ" (ಪುಟ ೨೫): "ಶೈಲಿಯಲ್ಲಿ ಆಡಂಬರವನ್ನು ತೋರಿಸುವುದು ಸಮಾಜದಲ್ಲಿ ದೊಡ್ಡಸ್ತಿಕೆ ಪ್ರತಿಷ್ಠೆಗಳನ್ನು ತೋರಿಸಿದಂತೆ" (ಪುಟ ೨೮): "ಆದುದರಿಂದ, ಸಾಧ್ಯವಾದರೆ ಲೇಖಕನು ಮುಖ್ಯ ಸಾರವನ್ನು ಮಾತ್ರ ಹೇಳಬೇಕು....ಕೆಲವೇ ಮಾತುಗಳಲ್ಲಿ ಹೆಚ್ಚು ಭಾವಗಳನ್ನು ಲೇಖಿಸುವುದು ಮೇಧಾವಿಯ ಗುಣ" (ಪುಟ ೩೦)—ಈ ಮಾತುಗಳಲ್ಲಿ ಷೋಪನ್‌ಹೌರನು ಆಡಂಬರದ ಅಸ್ಪಷ್ಟವಾದ ಬರವಣಿಗೆಯ ರೀತಿಯ ವಿರುದ್ಧವಾದ ತನ್ನ ಅಭಿಪ್ರಾಯವನ್ನು ತಿಳಿಸಿದ್ದಾನೆ.

ಮುಖ್ಯವಾಗಿ ತತ್ತ್ವಶಾಸ್ತ್ರಜ್ಞನಾದ ಷೋಪನ್‌ಹೌರನು ಈ ಪ್ರಬಂಧಗಳಲ್ಲಿ ತಾತ್ತ್ವಿಕವಾಗಿ ಸಾಹಿತ್ಯಕ್ಕೆ ಸಂಬಂಧಿಸಿದ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಿದ್ದಾನೆ.

---

[1] ಹೆಗೆಲನ ಬಗ್ಗೆ ಷೋಪನ್‌ಹಾರನಿಗೆ ಇದ್ದ ಅಸೂಯೆಯನ್ನು ಇಲ್ಲಿ ನೆನೆಯಬಹುದು.. ಹೆಗೆಲನ ಉಪನ್ಯಾಸಗಳಿದ್ದ ಹೊತ್ತಿನಲ್ಲಿಯೇ ಷೋಪನ್‌ಹಾರನು ತನ್ನ ಉಪನ್ಯಾಸಗಳನ್ನು ಇಟ್ಟುಕೊಳ್ಳುತ್ತಿದ್ದನಂತೆ; ಕಾರಣ ಹೆಗೆಲನ ಉಪನ್ಯಾಸಗಳನ್ನು ಕೇಳುತ್ತಿದ್ದವರನ್ನು ತನ್ನ ಕಡೆಗೆ ಆಕರ್ಷಿಸುವುದು. ಆದರೆ, ಪರಿಣಾಮ ಹಾಗಾಗದೆ, ಷೋಪನ್‌ಹಾರನ ಉಪನ್ಯಾಸಗಳಿಗೆ ಯಾರೂ ಬರದೆ, ಹೆಗೆಲನ ಉಪನ್ಯಾಸಗಳಿಗೇ ಎಲ್ಲರೂ ಹೋಗಲು ತೊಡಗಿದರಂತೆ. ಹಾಗಾಗಿ ಷೋಪನ್‌ಹಾರನೇ ಉಪನ್ಯಾಸ ಕೊಡುವುದನ್ನು ನಿಲ್ಲಿಸಿದನಂತೆ. Bertrand Russel: *History of Western Philosophy*, p. 723.

‘ಸಾಹಿತ್ಯದ ಜೀವಾಳ’

೧೯೪೩ರಷ್ಟು ಹೊತ್ತಿಗೆ ಈ ಪ್ರಬಂಧಗಳನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡಕ್ಕೆ ತಂದು, ಪಾಶ್ಚಾತ್ಯ ತತ್ವಶಾಸ್ತ್ರಜ್ಞನೊಬ್ಬನ ಸಾಹಿತ್ಯವನ್ನು ಕುರಿತಾದ ಆಲೋಚನೆಗಳು ಕನ್ನಡಿಗರಿಗೆ ದೊರೆಯುವಂತೆ ಮಾಡಿದ್ದಾರೆ. ಅವರ ಕನ್ನಡ ಸರಳವೂ ಸ್ಪಷ್ಟವೂ ಆಗಿದೆ.

'ಭಾರತ ಭಾಗ್ಯವಿಧಾತ'

ಎಚ್. ತಿಪ್ಪೇರುದ್ರಸ್ವಾಮಿ

ಜನಮನದ ಶಕ್ತಿಯೇ ಮಹಾತ್ಮರನ್ನು ಸಮಷ್ಟಿಗೆ ತಪ್ಪದೆ ಎಳೆದು ತರುತ್ತದೆ... ಕವಿ ವಾಣಿಯ ಆಂತರಿಕ ಸತ್ಯಕ್ಕೆ ಜಗತ್ತಿನ ಮಹಾತ್ಮರೆಲ್ಲರ ಜೀವನವೇ ಸಾಕ್ಷಿ. ಸಮಷ್ಟಿ ಮನಸ್ಸು ಅಂತೋ ಅಂಯಮೆಯೋ 'ತಮಸೋ ಮಾ ಜ್ಯೋತಿರ್ಗಮಯ'—ಎಂಬ ಅಭೀಪ್ಸೆಯಿಂದ ಕತ್ತಲಿನಾಚೆ ಕೈಚಾಚಿ ಹಂಬಲಿಸುತ್ತಿರುವಾಗ ಅದರ ಹಾರೈಕೆಯೇ ರೂಪುಗೊಂಡಂತೆ ಬೆಳಕಿನ ಆವಿರ್ಭಾವವಾಗುತ್ತದೆ. ಥಟ್ಟನೆ ಬಂದ ಆ ಬೆಳಕಿನಿಂದ ಕಣ್ಣು ಕೋರೈಸುತ್ತದೆ. ಅದಕ್ಕೆ ಹೊಂದಿಕೊಂಡು ಅದರೊಡನೆ ಹೆಜ್ಜೆಯಿಡಲು ಕಲಿಯುತ್ತಿರುವ ವೇಳೆಗೆ ಮಿಂಚು ಮರೆಯಾಗುತ್ತದೆ. ಹೆಪ್ಪುಗಟ್ಟಿದ ಕತ್ತಲೆ ಇನ್ನೂ ದಟ್ಟವಾದಂತೆ ತೋರುತ್ತದೆ. ಆದರೆ ಅದು ತಾತ್ಕಾಲಿಕ. ಅವರು ನಡೆದ ಬೆಳಕಿನ ಹೆಜ್ಜೆಗಳು ಮಾರ್ಗದರ್ಶಕವಾಗಿ ನಿಲ್ಲುತ್ತವೆ. ಬುದ್ಧ, ಕ್ರಿಸ್ತ, ಮೊದಲಾದವರು ಅಂತಹ ಬೆಳಕಿನ ಹೆಜ್ಜೆಗಳಾಗಿ ಉಳಿದಿದ್ದಾರೆ. ಮಹಾತ್ಮಾ ಗಾಂಧೀಜಿಯವರ ಆಗಮನ ಮತ್ತು ನಿರ್ಗಮನಗಳು ಮಾನವನ ಇತಿಹಾಸದಲ್ಲಿ ಅಂತಹ ಉಜ್ವಲ-ಘಟ್ಟವನ್ನು ನಿರ್ಮಿಸಿವೆ.

ಇಂದಿನ ತರುಣ ಜನಾಂಗಕ್ಕೆ ಗಾಂಧೀಜಿ ಕೇವಲ ಹೆಸರು ಮಾತ್ರವಾಗಿ ಉಳಿದಿದ್ದಾರೆ. ಹೆಚ್ಚೆಂದರೆ ಅವರ ಹೆಸರಿನ ಸುತ್ತ ಸತ್ಯ ಅಹಿಂಸೆ ಮೊದಲಾದ ಕೆಲವು ಮೌಲ್ಯಗಳನ್ನು ಅಂಟಿಸಿರುವುದನ್ನು ಅವರು ಕಾಣುತ್ತಾರೆ. ಆ ಮೌಲ್ಯಗಳ ಬುಡದಲ್ಲಿ ನಿಂತು ಅವುಗಳನ್ನು ಸುಂದರ ಮುಖವಾಡಗಳನ್ನಾಗಿ ಮಾಡಿಕೊಂಡು ಅವರ ಅನುಯಾಯಿಗಳೆಂದು ಹೇಳಿಕೊಳ್ಳುವವರನ್ನು ಕಂಡು ಆ ಮೂಲಕ ಗಾಂಧೀಜಿಯವರನ್ನು ನೋಡುತ್ತಾರೆ. ಆದರೆ ಗಾಂಧೀಜಿಯವರನ್ನು ಅರಿಯಬೇಕಾದರೆ ಇವುಗಳನ್ನು ದಾಟಿ ಅವರ ಕೃತಿಗಳಿಗೇ ಹೋಗಬೇಕಾಗುತ್ತದೆ. ಗಾಂಧೀಜಿಯವರ ವ್ಯಕ್ತಿತ್ವ ಜ್ಯೋತಿರ್ಲಿಂಗ ರೂಪವಾದ ಅವರ ಮಾತು ಮತ್ತು ಕೃತಿಗಳಲ್ಲಿ ಉಳಿದು ಬಂದಿದೆ. ಅಂತೆಯೇ ಅವರೊಡನೆ ಸಂಪರ್ಕವನ್ನು ಪಡೆದ ಕೆಲವು ಪ್ರಾಮಾಣಿಕ ಸಾಧಕರು ಅಜ್ಞಾತ-

ಇನ್ನೂ ನಮ್ಮ ಮಧ್ಯದಲ್ಲಿದ್ದಾರೆ; ಗಾಂಧೀಜಿಯವರ ವಿರಾಟ್‌ವ್ಯಕ್ತಿತ್ವವನ್ನು ತಾವು ಕಂಡಂತೆ ಪರಿಚಯ ಮಾಡಿಕೊಡುವ ಪ್ರಯತ್ನವನ್ನೂ ಮಾಡಿದ್ದಾರೆ. ಅವರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಒಬ್ಬರು; ಅವರ 'ಭಾರತ ಭಾಗ್ಯ ವಿಧಾತ', ಅಂತಹ ಒಂದು ಒಳ್ಳೆಯ ಪ್ರಯತ್ನ.

ಗೊರೂರರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಂಡವರು. ತಮ್ಮ ಪರಿಸರದಲ್ಲಿ ಬೆರೆತು, ಬದುಕಿನ ವಿವಿಧ ಸ್ತರಗಳನ್ನು ತೆರೆದ ಕಣ್ಣಿಂದ ನೋಡಿ, ಹಾಸ್ಯದ ಹೊದಿಕೆಯಿಂದ ತಿಳಿಯಾದ ಭಾಷೆಯಲ್ಲಿ ಒಡಮೂಡಿಸುವ ಸೃಜನಾತ್ಮಕ ಸಾಹಿತ್ಯ ಸೃಷ್ಟಿಯಲ್ಲಿ ಅವರು ಅಗ್ರಗಣ್ಯರಾದವರು. 'ನಮ್ಮ ಊರಿನ ರಸಿಕರು' ಮರೆಯಲಾಗದ ಅವರ ಕೃತಿ. ಅಂತೆಯೇ 'ಶಿವರಾತ್ರಿ' ಮೊದಲಾದ ಕಥೆಗಳನ್ನೂ, 'ಗರುಡಗಂಬದ ದಾಸಯ್ಯ' ಮೊದಲಾದ ಲಘುಪ್ರಬಂಧಗಳನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಆದರೆ ಅವರ ಕೃತಿಗಳ ಸಮುದಾಯದಲ್ಲೆಲ್ಲಾ 'ಭಾರತ ಭಾಗ್ಯ ವಿಧಾತ' ವಿಶಿಷ್ಟವಾದುದು.

ಭಾರತ ಸ್ವಾತಂತ್ರ್ಯದ ಮಹಾ ಹೋರಾಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಪಾಲ್ಗೊಂಡವರು; ಗಾಂಧೀಜಿಯನ್ನು ಹತ್ತಿರದಿಂದ ಕಂಡವರು; ಅವರ ವ್ಯಕ್ತಿತ್ವಕ್ಕೆ ಮಾರುಹೋದವರು; ಅವರ ತತ್ವಗಳಿಗೆ ತಮ್ಮನ್ನು ಅರ್ಪಿಸಿಕೊಂಡವರು; ನಿಷ್ಠೆಯಿಂದ ಆ ಜೀವನ ಮಾರ್ಗದಲ್ಲಿ ಮುನ್ನಡೆಯುತ್ತಿರುವವರು—ಇವರು ಗಾಂಧೀಜಿಯವರನ್ನು ಕುರಿತು ಬರೆದ ಕೃತಿ ಸಹಜವಾಗಿಯೇ ಕುತೂಹಲವನ್ನೂ ಹೆಚ್ಚಿನ ನಿರೀಕ್ಷೆಯನ್ನೂ ಹುಟ್ಟಿಸುತ್ತದೆ. ಅದಕ್ಕೆ ನಿರಾಶೆಯಾಗದ ರೀತಿಯಲ್ಲಿ ಕೃತಿ ರೂಪುಗೊಂಡು ಓದುಗರನ್ನು ಸಂತೋಷಗೊಳಿಸುತ್ತದೆ. ಗಾಂಧೀಜಿಯವರ ಮೇಲೆ ಇನ್ನೆಷ್ಟೇ ಕೃತಿಗಳು ಬಂದರೂ ಇದು ಹಳತಾಗದ ರೀತಿಯಲ್ಲಿ ಕಲಾತ್ಮಕವಾಗಿ ಮೂಡಿ ಬಂದಿದೆ 'ಭಾರತ ಭಾಗ್ಯ ವಿಧಾತ.'

ಇದು ಜೀವನಚರಿತ್ರೆಯಲ್ಲ. ಗಾಂಧೀಜಿಯವರ ಬಹುಮುಖ ಜೀವನವನ್ನು ಕುರಿತು ಬೇರೆ ಬೇರೆ ಕಾಲದಲ್ಲಿ ಬರೆದು ಮಾಸಪತ್ರಿಕೆಗಳಲ್ಲಿ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟಿಸಿದ ಲೇಖನಗಳು ಇಲ್ಲಿವೆ. "ಆದರೆ ಗಾಂಧಿಯವರ ನಾನಾ ಚಟುವಟಿಕೆಗಳನ್ನು ಕುರಿತು ಬರೆದ ಈ ಎಲ್ಲ ಪ್ರಬಂಧಗಳೂ ಒಂದು ರೀತಿಯಲ್ಲಿ ಗಾಂಧೀಜೀವಿತದ ಹೆಗ್ಗುರುತುಗಳಾಗಿರುವುದು ನನಗೆ ಕಂಡಾಗ ಲೇಖನಗಳನ್ನು ಈಗಿರುವಂತೆ ಒಂದುಗೂಡಿಸಿದೆ" (ಪುಟ iii) ಎನ್ನುತ್ತಾರೆ ಲೇಖಕರು. ಬರೆದ ಕಾಲ ಬೇರೆ ಬೇರೆಯಾದರೂ ಸಂದರ್ಭ ಭಿನ್ನವಾದರೂ ಇವುಗಳಲ್ಲಿ ಏಕತೆಯ ಸೂತ್ರ ಕಾಣುವುದಲ್ಲದೆ ಗಾಂಧೀಜಿಯವರ ವ್ಯಕ್ತಿತ್ವದ ಉಜ್ವಲ ಚಿತ್ರ ಮೂಡಿಬರಲು ಸಾಧ್ಯವಾಗಿದೆ.

ಗ್ರಂಥದ ಪ್ರಾರಂಭವೇ ಕುತೂಹಲಕಾರಿಯಾಗಿದೆ. ವಿಶ್ರಾಂತಿಗಾಗಿ ಗಾಂಧೀಜಿಯವರು ೧೯೩೬ರಲ್ಲಿ ನಂದಿಬೆಟ್ಟದಲ್ಲಿ ಕೆಲವು ಕಾಲ ತಂಗಿದ್ದಾಗ ಅವರನ್ನು ಕಾಣಲು ಗೊರೂರರು ತಮ್ಮ ಮಿತ್ರರೊಡನೆ ಹೊರಡುತ್ತಾರೆ, ತಿರುಪತಿಗೆ ಯಾತ್ರಿಕರು ಹೊರ

ಟಿಂತೆ ಈ ಗಾಂಧೀಯಾತ್ರೆಗೆ. ಇದ್ದಕ್ಕಿದ್ದಂತೆ ಭಾರತದ ಕಣ್ಣಾಗಿ ಹರಿದುಬರುವ ನದಿ ಬಿಟ್ಟದ್ದನ್ನೂ ಅಲ್ಲಿ ಗಾಂಧೀಜಿಯವರ ಕಾರ್ಯವಿಧಾನಗಳನ್ನೂ ಅವರನ್ನು ಕಂಡು ಧನ್ಯತೆಯ ಉದ್ಗಾರ ತೆಗೆಯುವ ಜನಸಮುದಾಯವನ್ನೂ ಗೊರೂರರು ಚಿತ್ರವತ್ತಾಗಿ ವರ್ಣಿಸಿದ್ದಾರೆ.

ಮಹಾತ್ಮರಿಗಿಂತ ಮೊದಲು ಅವರ ಟಪಾಲಿನ ದರ್ಶನವಾಗುತ್ತದೆ. ಒಂದು ದೊಡ್ಡ ಗೋಣೀಚೀಲದ ತುಂಬ ತುಂಬಿದ ಟಪಾಲನ್ನು ಹೊತ್ತು ಒಬ್ಬನು ಬೆಟ್ಟದ ಮೇಲೆ ಮೆಟ್ಟಿಲುಗಳ ಮೇಲೆ ಸಾಗಿಸುತ್ತಿದ್ದಾನೆ. ಅದನ್ನು ಕಂಡ ಗೊರೂರರಿಗೆ ಆ ಕಾಗದ ಪತ್ರಗಳಲ್ಲಿರುವ ವೈವಿಧ್ಯದ ಕಲ್ಪನೆ ಬರುತ್ತದೆ. ಸರ್ಕಾರದಿಂದ ಬಂದಿರುವ ಗಹನವಾದ ಪತ್ರಗಳಿಂದ ಹಿಡಿದು ಖಾದಿಬಟ್ಟೆಯನ್ನು ಹಳ್ಳಿಗಾಡಿನಲ್ಲಿ ಒದಗಿಸುವ ಖಾಸಗೀ ವಿಷಯದವರೆಗೆ ಇಡೀ ಬ್ರಹ್ಮಾಂಡವೇ ಅವರ ಪತ್ರಗಳಲ್ಲಿ ತುಂಬಿದೆ ಎಂದು ಅವರು ವರ್ಣಿಸಿರುವ ರೀತಿ ಗಾಂಧೀಜಿಯವರ ಬಹುಮುಖ ವ್ಯಕ್ತಿತ್ವದ ಮೇಲೆ ಬೀರುವ ಮೊದಲ ಬೆಳಕು. ಅವರಿಗೆ ಜೀವನದಲ್ಲಿ ಯಾವುದೂ ಕಿರಿದಲ್ಲ; ಗೌಣವಲ್ಲ. ಎಲ್ಲವನ್ನೂ ಅವರವರ ಮಟ್ಟದಲ್ಲಿ ನಿಂತು ನೋಡುವ ಪೂರ್ಣದೃಷ್ಟಿಯ ಜೀವನ ಗಾಂಧೀಜಿಯವರದು. ನಿಜವಾಗಿ ಆ ಕಾರಣಕ್ಕಾಗಿಯೇ ಅವರಿಗೆ ಮಹಾತ್ಮಾ ಎಂಬ ಹೆಸರು ಸಾರ್ಥಕವಾಗಿರುವುದು. ದೇಶಕ್ಕೆ ಸ್ವಾತಂತ್ರ್ಯವನ್ನು ಸಾಧಿಸಿಕೊಟ್ಟದ್ದು ಆ ವಿರಾಟ್ ವ್ಯಕ್ತಿತ್ವದ ಒಂದು ಅಂಶ ಅಷ್ಟೆ. ಇದನ್ನು ಸೂಚಿಸುವ ಸಂಕೇತವಾಗಿ ಟಪಾಲಿನ ಪ್ರಸಂಗವನ್ನು ನಿರೂಪಿಸಿರುವುದು ಅರ್ಥವತ್ತಾಗಿದೆ.

ಅನಂತರ ಬೆಟ್ಟದ ಮೇಲೆ ಗಾಂಧೀಜಿಯ ದರ್ಶನ. ಜನರ ಉತ್ಸಾಹ ಭಕ್ತಿಭಾವ ಪ್ರಾರ್ಥನಾ ಸಭೆ—ಈ ಮೊದಲಾದ ಸನ್ನಿವೇಶಗಳನ್ನು ಗೊರೂರರು ವರ್ಣಿಸುತ್ತಿದ್ದರೆ ನಾವೂ ಅವರೊಡನೆ ಆತ್ಮೀಯವಾಗಿ ಭಾಗವಹಿಸಿದಂತಾಗುತ್ತದೆ. "ಸ್ವತಃ ಗಾಂಧಿಯೇ ಭಗವಂತ ಸೃಷ್ಟಿಸಿರುವ ಅದ್ಭುತ ಕಾವ್ಯ" (ಪುಟ ೫) ಎಂದು ಮುಂತಾಗಿ ಅವರು ಹೇಳುವ ಮಾತುಗಳು ತುಂಬಾ ಪರಿಣಾಮಕಾರಿಯಾಗಿವೆ. ಆ ಮಾತುಗಳ ಸತ್ಯ ಉದ್ದಕ್ಕೂ ಬೆಳೆದುಕೊಂಡು ಹೋಗಿರುವಂತೆ ಕಾಣುತ್ತದೆ. ಸಂಜೆಯ ಪ್ರಾರ್ಥನೆಯ ಹಾಗೆ ಬೆಳಗಿನ ಜಾವದ ಪ್ರಾರ್ಥನೆ: ಅಲ್ಲಿ ಸ್ಥಾಣುವಿನಂತೆ ಕುಳಿತ ಮಹಾತ್ಮಾ ಗಾಂಧೀಜಿಯವರ ದಿವ್ಯವಿಗ್ರಹ, ಗೀತೆಯ ಶ್ಲೋಕಗಳ ಅನುರಣನ ಧ್ವನಿ—ಇವುಗಳ ಪರಿಸರದಲ್ಲಿ ಲೇಖಕರು ಮೈಮರೆಯುತ್ತಾರೆ: ಓದುಗರನ್ನೂ ಮೈಮರೆಸುತ್ತಾರೆ. 'ನಂದಿಬೆಟ್ಟದಲ್ಲಿ ಸ್ಥಾಣು' ಎಂದು ಈ ಅಧ್ಯಾಯವನ್ನು ಕರೆದಿರುವುದೂ ಅರ್ಥವತ್ತಾಗಿದೆ.

ಮುಂದಿನ ಅಧ್ಯಾಯ 'ಭಾರತ ಇತಿಹಾಸದ ಒಂದು ನೋಟ.' ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಕ್ಕಮಟ್ಟಿಗೆ ದೀರ್ಘವಾಗಿಯೇ ಇಲ್ಲಿ ಚರ್ಚಿಸಿ ಅದರ ಆಂತರಿಕ ಶಕ್ತಿಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಈ ವಿಭಾಗ, ಲೇಖಕರೇ ಹೇಳಿರುವಂತೆ, ಲಾಲಾ ಲಜಪತರಾಯರು ಬರೆದ 'ಯಂಗ್ ಇಂಡಿಯಾ' ಎಂಬ ಗ್ರಂಥದ ಆಧಾರದ ಮೇಲೆ ಬರೆದುದು. ಅಲ್ಲಿನ ಅನೇಕ ಅಂಶ

ಗಳನ್ನು ಔಚಿತ್ಯಪೂರ್ಣವಾದ ರೀತಿಯಲ್ಲಿ ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಗಾಂಧೀಜಿಯವರ ಆಗಮನಕ್ಕೆ ಮುನ್ನ ಭಾರತದ ಸ್ಥಿತಿ ಹೇಗಿತ್ತೆಂಬುದರ ಚಿತ್ರ ಇಲ್ಲಿದೆ. ವಿದೇಶೀಯರ ಆಳ್ವಿಕೆಯಿಂದ ನಿಸ್ಸತ್ತ್ವವಾಗಿದ್ದರೂ ಭಾರತ ತನ್ನ ಅಂತಸ್ಸತ್ತ್ವದಿಂದ ಮತ್ತೊಮ್ಮೆ ತಲೆಯೆತ್ತಿ ಜಗತ್ತಿಗೆ ತನ್ನ ಸಂದೇಶವನ್ನು ಸಾರುವ ಆಧ್ಯಾತ್ಮಿಕ ಶಕ್ತಿಸಂಪನ್ನವಾಗಿತ್ತು. ಆ ಆಂತರಿಕ ಶಕ್ತಿಯನ್ನು ಕಂಡುಕೊಳ್ಳುವ ದ್ರಷ್ಟಾರನ ಆಗಮನಕ್ಕಾಗಿ ಭಾರತದ ಅಂದಿನ ರಾಜಕೀಯ ಸಾಮಾಜಿಕ ರಂಗಗಳು ಕಾಯುತ್ತಿದ್ದುವು. ಸ್ವಾತಂತ್ರ್ಯದ ಕಹಳೆ ಆಗಲೇ ಅಲ್ಲಲ್ಲಿ ಮೊಳಗುತ್ತಿತ್ತು. ಭಾರತದ ಅದಮ್ಯ ಆಧ್ಯಾತ್ಮಿಕ ಶಕ್ತಿ ಮೈಕೊಡವಿಕೊಂಡು ಮೇಲೇಳಲು ಹವಣಿಸುತ್ತಿತ್ತು. ಆ ಸಮಷ್ಟಿ ಶಕ್ತಿಯ ನಿಧಿಯೂ ಪ್ರತಿನಿಧಿಯೂ ಆಗಿ ಮೂಡಿಬಂದ ಮಹಾಚೇತನ ಗಾಂಧೀಜಿ. ಈ ಭಾವನೆ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ, ಇಲ್ಲಿನ ಪುಟಗಳನ್ನು ಓದುತ್ತಿದ್ದರೆ.

'ಭಾರತ ಭಾಗ್ಯವಿಧಾತ' ಎಂಬ ಮೂರನೇ ಅಧ್ಯಾಯ 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದ ಲೇಖನ. ಒಂದು ದೃಷ್ಟಿಯಿಂದ ಗಾಂಧೀಜಿಯ ವ್ಯಕ್ತಿತ್ವವನ್ನು ಕುರಿತ ಸಮಗ್ರ ಚಿತ್ರ ಇಲ್ಲಿದೆ. ಅವರ ಸತ್ಯಾನ್ವೇಷಣೆಯ ಸಾಧನೆ ಕ್ರಮೇಣ ಬೆಳೆಯುತ್ತಾ ಹೋದ ಬಗೆಯನ್ನೂ ಜೀವನಚರಿತ್ರೆಯ ಹಿನ್ನೆಲೆಯಲ್ಲಿ ಹಿಂಜಿ ತೋರಿಸುತ್ತಾರೆ ಲೇಖಕರು. ದಕ್ಷಿಣ ಆಫ್ರಿಕ ಅವರ ಸಾಧನೆಯ ಮೊದಲ ರಂಗವಾಗಿ ಪರಿಣಮಿಸಿದುದರ ವರ್ಣನೆ ಪರಿಣಾಮಕಾರಿಯಾಗಿ ಬಂದಿದೆ. ಅಲ್ಲಿ ಅವರಿಗೆ ದೊರೆತ ಅಮೂಲ್ಯ ಅನುಭವ, ಮುಂದಿನ ಕಾರ್ಯವಿಧಾನಕ್ಕೆ ಮಾರ್ಗದರ್ಶಕವಾಯಿತು. ಸರ್ವೋದಯದ ಕಲ್ಪನೆ ಮೊಟ್ಟಮೊದಲು ಗಾಂಧೀಜಿಯವರಿಗೆ ಮೂಡಿದುದು ಇಲ್ಲಿಯೇ. ಅದಕ್ಕೆ ಕಾರಣವಾದ ರಸ್ಕಿನ್ನನ ಗ್ರಂಥ ಮೂರು ಅಂಶಗಳನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಿತು :

(೧) ಎಲ್ಲರ ಅಭ್ಯುದಯದಲ್ಲಿ ನನ್ನ ಅಭ್ಯುದಯ ಅಡಗಿದೆ.

(೨) ಪ್ರತಿಯೊಬ್ಬರಿಗೂ ದುಡಿಮೆಯ ಫಲ ಸಮನಾಗಿರಬೇಕು. ವಕೀಲನಿಗೆ ದೊರೆಯುವಷ್ಟು ಪ್ರತಿಫಲವೇ ಬಡಗಿ ಹಜಾಮನಿಗೂ ದೊರೆಯಬೇಕು.

(೩) ದುಡಿಮೆಯವನ, ರೈತನ, ದೇಹಶ್ರಮದಿಂದ ಕಸುಬು ಮಾಡುವವನ ಬದುಕೇ ಸಾರ್ಥಕವಾದ ಬದುಕು.

—ಈ ಮೂರು ಸೂತ್ರಗಳ ಶಾಶ್ವತ ಸತ್ಯವನ್ನು ಅವರು ಮನಗಂಡುದಲ್ಲದೆ ತಮ್ಮ ಕಾರ್ಯವಿಧಾನದಲ್ಲಿ ಅಳವಡಿಸಿಕೊಳ್ಳಲು ಹೆಣಗಿದರು. ಅವರ ವೈಯಕ್ತಿಕ ಸತ್ಯಾನ್ವೇಷಣೆಯ ಮಾರ್ಗಕ್ಕೂ, ರಾಜಕೀಯ ಹೋರಾಟಕ್ಕೂ ಸಾಮಾಜಿಕ ಆಂದೋಳನಕ್ಕೂ ಇದೇ ಹಿನ್ನೆಲೆಯಾಗಿ ಪರಿಣಮಿಸಿತು. ಜೀವನದ ಎಲ್ಲ ರಂಗಗಳಲ್ಲಿಯೂ ಅವರ ಈ ಪೂರ್ಣದೃಷ್ಟಿ ವ್ಯಾಪಿಸಿತು. ಈ ಹಿನ್ನೆಲೆಯಲ್ಲಿ ವಿವಾಹ, ಬ್ರಹ್ಮಚರ್ಯೆ, ಆತ್ಮಯಜ್ಞ, ಸತ್ಯಾಗ್ರಹದ ಸ್ವರೂಪ, ಅಹಿಂಸಾ ಸತ್ಯ ಅಸ್ತೇಯಾದಿ ಏಕಾದಶ ವ್ರತಗಳು ಈ ಮೊದಲಾದುವುಗಳನ್ನು ಕುರಿತ ಅವರ ದೃಷ್ಟಿಯನ್ನು ವಿವರಿಸಿದ್ದಾರೆ ಗೊರೂರರು.

'ಸತ್ಯಾಗ್ರಹ ಸೂರ್ಯ' ಎಂಬ ಮುಂದಿನ ಅಧ್ಯಾಯವಂತೂ ಅವರು ಕಂಡ ಸತ್ಯಾ

ಗ್ರಹದ ಶಕ್ತಿ ಸಾಮರ್ಥ್ಯ ವ್ಯಾಪ್ತಿ ವಿಸ್ತಾರಗಳನ್ನು ಸಮರ್ಥವಾಗಿ ಮಾಡಿಕೊಡುತ್ತದೆ. ಭಾರತಕ್ಕೆ ಬಂದೊಡನೇ ಅವರು ಕೈಗೆತ್ತಿಕೊಂಡ ಚಂಪಾರಣ್ಯದ ಸತ್ಯಾಗ್ರಹವನ್ನು ಇಲ್ಲಿ ವಿವರಿಸಿದ್ದಾರೆ. ಚಂಪಾರಣ್ಯಕ್ಕೆ ಅವರು ಬಂದುದು, ರೈತರ ಅಹವಾಲನ್ನು ಕೇಳಿ ಅವರ ಶೋಚನೀಯ ಸ್ಥಿತಿಯನ್ನು ಕಂಡು ತಮ್ಮ ಕಾರ್ಯವಿಧಾನವನ್ನು ನಿರ್ಧರಿಸಿದುದು, ಸರ್ಕಾರದ ವಿರೋಧವನ್ನು ಎದುರಿಸಿದ ರೀತಿ, ಪ್ರಾರಂಭದ ಅಡ್ಡಿ ಆತಂಕಗಳು, ಕೊನೆಯಲ್ಲಿ ಅವರು ಪಡೆದ ಜಯ—ಈ ವಿವರಗಳೆಲ್ಲಾ ರೋಮಾಂಚಕಾರಕ ಸಾಹಿತ್ಯ ಕೃತಿಯಾಗುವಂತಹವು. ಗಾಂಧೀಜಿಯವರ ಜೀವನವೇ ಒಂದು ಮಹಾಕಾವ್ಯವಾಗಿ ಬೆಳೆಯತೊಡಗಿತು. ಈ ಘಟನೆಯ ಕೆಲವು ವಿವರಗಳನ್ನು ಇಲ್ಲಿ ಗೊರೂರರು ತಮ್ಮ ಸರಳ ಆಕರ್ಷಕ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಮುಂದೆ ಅಹಿಂಸೆಯ ವ್ಯಾಪ್ತಿಯನ್ನು ಗಾಂಧೀಜಿಯವರು ಕಂಡ ಮತ್ತು ಅದನ್ನು ವಿವಿಧ ರಂಗಗಳಲ್ಲಿ ಪ್ರಯೋಗಿಸಿದುದರ ವಿವೇಚನೆ ಬರುತ್ತದೆ. ಹಿಂಸೆ ಮತ್ತು ಅಹಿಂಸೆಗಳ ಸೂಕ್ಷ್ಮ ವಿಶ್ಲೇಷಣೆ ಇಲ್ಲಿದೆ. "ಹಿಂಸೆ ಮತ್ತು ಹೇಡಿತನ ಇವೆರಡರ ಪೈಕಿ ನಾನು ಹಿಂಸೆಯನ್ನೇ ಒಪ್ಪುತ್ತೇನೆ. ಕೊಲ್ಲದೆ ಸಾಯುವ ಸ್ಥಿಮಿತವಾದ ಧೈರ್ಯವನ್ನು ನಾನು ಅಭ್ಯಾಸ ಮಾಡುತ್ತಿದ್ದೇನೆ. ಆದರೆ ಈ ಧೈರ್ಯ ಯಾರಿಗೆ ಇಲ್ಲವ್ರೋ ಅವರು ಕೊಲ್ಲುವ ಮತ್ತು ಕತ್ತಿಗೆ ಎದೆಯೊಡ್ಡುವ ವಿದ್ಯೆಯನ್ನು ಕಲಿಯಬೇಕು." (ಪುಟ ೧೩೫)—ಎಂದು ಮುಂತಾಗಿ ಹೇಳಿದ ಗಾಂಧೀಜಿಯವರ ಹೇಳಿಕೆಯನ್ನು ವಿವರಿಸಿದ್ದಾರೆ. ಅಹಿಂಸೆ ಕೇವಲ ರಾಜಕೀಯರಂಗಕ್ಕೆ ಮಾತ್ರವಲ್ಲ; ಜೀವನದ ಎಲ್ಲ ಕಷ್ಟಗಳಿಗೂ ಇದರಲ್ಲಿ ನಿವಾರಣೋಪಾಯಗಳಿವೆ—ಎಂದು ಅದರಿಂದ ರೂಪಿತವಾದ ಜೀವನ ದೃಷ್ಟಿಯನ್ನು ಎತ್ತಿಹಿಡಿದಿದ್ದಾರೆ. ಭಗವದ್ಗೀತೆಯಲ್ಲಿ ಗಾಂಧೀಜಿ ಕಂಡ ಅಹಿಂಸಾ ಪ್ರತಿಪಾದನೆ ಸಹಜವಾಗಿಯೇ ದೀರ್ಘವಾಗಿ ಬಂದಿದೆ. ಕೆಲವು ಸನ್ನಿವೇಶಗಳನ್ನು ತೆಗೆದುಕೊಂಡು ಅಲ್ಲಿ ಗಾಂಧೀಜಿಗೆ ಅಹಿಂಸೆ ಹೇಗೆ ವಜ್ರಕವಚವಾಯಿತೆಂಬುದನ್ನೂ ತಾರಕಶಕ್ತಿಯಾಯಿತೆಂಬುದನ್ನೂ ತೋರಿಸಿಕೊಟ್ಟಿದ್ದಾರೆ.

ಅನಂತರದ ಅಧ್ಯಾಯ '೧೯೪೧ರಲ್ಲಿ ವಾರ್ಧಾದಲ್ಲಿ ನಡೆದ ಎ.ಐ.ಸಿ.ಸಿ.'ಯ ವರ್ಣನೆಯನ್ನು ಕುರಿತದ್ದು. ಗೊರೂರರು ಅಲ್ಲಿಗೆ ಪ್ರಯಾಣವನ್ನು ಕೈಗೊಂಡುದರ ವರ್ಣನೆಯಿಂದ ಇದು ಪ್ರಾರಂಭವಾಗುತ್ತದೆ. ತಮಗೆ ಸಹಜವಾದ ಸರಸ ಶೈಲಿಯಲ್ಲಿ ಅಧಿವೇಶನದ ಸಿದ್ಧತೆಗಳನ್ನೂ ಅಲ್ಲಿನ ಕಾರ್ಯಕಲಾಪಗಳನ್ನೂ ನಿರೂಪಿಸಿದ್ದಾರೆ. ಅಂದು ಸ್ವಾತಂತ್ರ್ಯ ಹೋರಾಟದ ಮಹಾ ಮಹಾ ನಾಯಕರೆಲ್ಲಾ ಒಟ್ಟಾಗಿ ಸೇರಿದ ಆ ಸನ್ನಿವೇಶದಲ್ಲಿ ರಾಜಕೀಯದ ಅತಿ ಗಹನ ಚರ್ಚೆಯಿಂದ ಹಿಡಿದು, ಊಟದ ಮನೆಯಲ್ಲಿ ನಡೆಯುತ್ತಿದ್ದ ವಿನೋದಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಈ ಅಧಿವೇಶನದಲ್ಲಿ ಗಾಂಧಿಯವರ ಪಾತ್ರವನ್ನು ಕೆಲವೇ ಮಾತುಗಳಲ್ಲಿ ಮೂಡಿಸಿದ್ದರೂ ಅವರ ವ್ಯಕ್ತಿತ್ವವನ್ನು ಸಮರ್ಥವಾಗಿ ಚಿತ್ರಿಸಿದೆ.

ಮುಂದೆ ಭಾರತ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ಹೂಡಿದ ಸತ್ಯಾಗ್ರಹ

ಸಮರದ ಪ್ರಮುಖ ಘಟ್ಟಗಳು ಬರುತ್ತವೆ. ಅದ್ಭುತವಾದ ಒಂದು ಹೊಸ ಅಸ್ತ್ರವನ್ನು ಗಾಂಧೀಜಿ ಭಾರತಕ್ಕೆ ಕೊಟ್ಟರು. ಮದ್ದುಗುಂಡುಗಳ ನೆರವಿಲ್ಲದೆ ನೈತಿಕ ಬಲದಿಂದ ಮತ್ತು ಆತ್ಮಶಕ್ತಿಯಿಂದ ಆಸುರೀಬಲವನ್ನು ಅಳಿಸಿಹಾಕುವ ಆ ಸಾಧನೆ ರೋಮಾಂಚನಕಾರಿಯಾದ ಸಾಹಸ ಕಥೆ. ಅಂದಿನ ರಾಜಕೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಆ ಅಸಹಕಾರ ಚಳುವಳಿ ಮತ್ತು ಅದರಿಂದ ಉಂಟಾದ ಜನಜಾಗೃತಿ, ಗಾಂಧೀಜಿಯವರ ಒಂದು ಮಹತ್ತರವಾದ ಪವಾಡದಂತಾಯಿತು. ಅದು ಬೆಳೆದುಬಂದ ಕೆಲವು ಪ್ರಮುಖವಾದ ಹೆಜ್ಜೆಗಳನ್ನು ಗೊರೂರರು ಇಲ್ಲಿ ನಿರೂಪಿಸಿದ್ದಾರೆ.

'ಕರ್ಮಯೋಗಿ' ಎಂಬ ಅಧ್ಯಾಯ ಗಾಂಧೀಜಿಯವರ ಬಾಳಿನ ಪೂರ್ಣ ದರ್ಶನವನ್ನು ಮಾಡಿಕೊಡುತ್ತದೆ. ಭಾರತದ ಕಲ್ಯಾಣ, ದರಿದ್ರ ನಾರಾಯಣನ ಸೇವೆ, ಜಗತ್ತಿನ ಮಂಗಳ, ಕೊನೆಯಲ್ಲಿ ಈ ಕರ್ಮ ತಪಸ್ಸುಗಳ ಮೂಲಕವೇ ಭಗವಂತನ ಸಾಕ್ಷಾತ್ಕಾರ—ಇವೇ ಈ ಕರ್ಮಯೋಗಿಯ ಧ್ಯೇಯಗಳು ಎಂದು ಅವರ ಬಾಳಿನ ಧ್ಯೇಯಗಳನ್ನು ಸಂಗ್ರಹಿಸಿದ್ದಾರೆ. ಈ ಒಂದೊಂದು ಆದರ್ಶವನ್ನೂ ಅವರು ಸಾಧಿಸಿದ ರೀತಿಯನ್ನೂ ಎತ್ತಿ ತೋರಿಸಿದ್ದಾರೆ. ಸತ್ಯವೇ ದೇವರು ಎಂಬ ಅವರ ಸೂತ್ರದ ರಹಸ್ಯವನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾರೆ. ದೇಶ, ದೇವರು, ಮೋಕ್ಷ, ಸ್ವಾತಂತ್ರ್ಯದ ಹೋರಾಟ, ವೈಯಕ್ತಿಕ ಪರಿಶುದ್ಧಿ, ದೀನದಲಿತರ ಸೇವೆ, ಪ್ರಾರ್ಥನೆ—ಈ ಮೊದಲಾದುವು ಪರಸ್ಪರ ವಿರೋಧಗಳಲ್ಲವೆಂದೂ ಪೂರಕಗಳೆಂದೂ ಅವರು ಸಾಧಿಸಿ ತೋರಿಸಿದ ಬಗೆ ಅರ್ಥವತ್ತಾಗಿ ಇಲ್ಲಿ ಪ್ರತಿಪಾದಿತವಾಗಿದೆ.

ಸ್ಥಿತಪ್ರಜ್ಞನ ಲಕ್ಷಣಗಳನ್ನು ಅಳವಡಿಸಿಕೊಂಡ ಕರ್ಮಕೌಶಲ್ಯ ಗಾಂಧೀಜಿಯವರ ಬಾಳಿನ ಒಂದೊಂದು ಘಟನೆಯಲ್ಲೂ ವ್ಯಕ್ತವಾಗಿದೆ. "ಗಾಂಧಿಯವರ ಬಾಳಿನಲ್ಲಿ ಒಂದು ಗಳಿಗೆಯೂ ವಿಶ್ರಾಂತಿಯಿಲ್ಲ. ಅವರು ಮಾಡಿದ ಒಂದೊಂದು ಕೆಲಸಕ್ಕೆ ಸಾಧಾರಣರಾದವರಿಗೆ ನೂರು ನೂರು ವರುಷಗಳಾದರೂ ಬೇಕು. ಆ ಯಾವ ಕೆಲಸಗಳೂ ಅಪೂರ್ಣಗಳಲ್ಲ. ಪ್ರತಿಯೊಂದೂ ಹೇಗೆ ಹೇಗೆ ಆಗಬೇಕೋ ಹಾಗೆಯೇ ಆಗಿವೆ. ಯಾವುದರಲ್ಲಿಯೂ ಕರ್ಮ ಕೌಶಲ್ಯ ಕಡಮೆಯಾಗಿಲ್ಲ." (ಪುಟ ೨೧೫) ಒಂದು ಕಡೆಯಲ್ಲಿ ದರಿದ್ರ ನಾರಾಯಣನ ಸೇವೆ, ಅವರ ನಿಜವಾದ ಪ್ರತಿನಿಧಿಯಾಗಬೇಕೆನ್ನುವ ನಿರಂತರ ಜಾಗೃತಿ, ಸ್ವಂತ ಇಚ್ಛೆಯಿಂದ ಕೈಕೊಂಡ ದಾರಿದ್ರ್ಯವ್ರತ; ಇನ್ನೊಂದು ಕಡೆಯಲ್ಲಿ ಇಡೀ ದೇಶವನ್ನು ಎಚ್ಚರಗೊಳಿಸಿ ಮೇಲೆತ್ತುವ ಸಾಹಸ—ಇವುಗಳ ಸೂಕ್ಷ್ಮ ವಿವೇಚನೆಯನ್ನು ಗಾಂಧೀಜಿಯವರ ಮಾತುಗಳಲ್ಲಿ ನಿರೂಪಿಸಿರುವ ರೀತಿ ಪರಿಣಾಮಕಾರಿಯಾಗಿದೆ.

ಯಾವ ಕೆಲಸವನ್ನೇ ಆಗಲಿ ಮೊದಲು ಆಚರಿಸಿ ಅನಂತರ ಬೋಧಿಸುವುದು ಗಾಂಧೀಜಿಯವರ ಪದ್ಧತಿ. ಹರಿಜನ ಬಂಧುವನ್ನಾಗಿ ಅವರನ್ನು ಗುರುತಿಸುವಲ್ಲಿ ಇದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಅಸ್ಪೃಶ್ಯರ ಉದ್ಧಾರ ಗಾಂಧೀಜಿಯವರ ಬಾಳಿನ ಉಸಿರಾಗಿದ್ದಿತೆಂಬುದನ್ನು ಮನಗಾಣಿಸಿಕೊಟ್ಟಿದ್ದಾರೆ. ಅಲ್ಲಿ ಅವರು ಉದಾಹರಿಸಿರುವ

ಮಾತುಗಳು ತುಂಬಾ ಮಾರ್ಮಿಕವಾಗಿವೆ: "ನಾನು ನನ್ನ ಹೆಂಡತಿಯನ್ನು ಮದುವೆಯಾಗುವುದಕ್ಕೆ ಮುಂಚೆಯೇ ಅಸ್ಪೃಶ್ಯತಾ ನಿವಾರಣೆಯನ್ನು ಮದುವೆಯಾದೆ. ನನ್ನ ಬಾಳಿನಲ್ಲಿ ಎರಡು ಕಠಿಣ ಪರಿಸ್ಥಿತಿ ಬಂದಿತ್ತು. ಇಲ್ಲಿ ಹರಿಜನರಿಗಾಗಿ ಕೆಲಸ ಮಾಡಬೇಕು, ಇಲ್ಲ ಹೆಂಡತಿಯನ್ನು ಬಿಡಬೇಕು. ನಾನೇನೋ ಮೊದಲನೆಯದನ್ನೇ ಆರಿಸಿಕೊಳ್ಳುತ್ತಿದ್ದೆ. ಆದರೆ ನನ್ನ ಹೆಂಡತಿಯ ಸೌಜನ್ಯದಿಂದ ಅದು ತಪ್ಪಿತು" (ಪುಟ ೪೪) ಎನ್ನುವ ಅವರ ಮಾತು ಇಲ್ಲಿ ಬರುತ್ತದೆ. ಅಲ್ಲದೆ, "ನನಗೆ ಈಗ ಮೋಕ್ಷ ಬರ ದಿದ್ದರೆ ಮುಂದಿನ ಜನ್ಮದಲ್ಲಿ ನಾನು ಭಂಗಿಯಾಗಿ ಹುಟ್ಟುವಂತೆ ಅನುಗ್ರಹಿಸಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ" (ಪುಟ ೪೪)—ಎಂಬ ಅವರ ಪ್ರಾರ್ಥನೆಯನ್ನು ಕಾಣುತ್ತೇವೆ. ಸನಾತನಿ ಹಿಂದು ಎಂದು ಗಾಂಧೀಜಿ ತಮ್ಮನ್ನು ಕರೆದುಕೊಂಡರು. ಆದರೆ ಆ ಸನಾತನತ್ವಕ್ಕೆ ಅವರು ಕೊಡುವ ಅರ್ಥ ವ್ಯಾಪಕವಾದದ್ದು: ವಿಚಾರಶೀಲ ವಾದದ್ದು. ಕಂದಾಚಾರದ ಸಂಪ್ರದಾಯವಲ್ಲ ಅವರ ಸನಾತನತೆ. ಅದನ್ನು ಸರಿಯಾದ ರೀತಿಯಲ್ಲಿ ಗ್ರಹಿಸದೇ ಹೋದರೆ ಅವರ ವರ್ಣಾಶ್ರಮ ವಿವೇಚನೆ ತೊಡಕನ್ನುಂಟು ಮಾಡುವ ಸಂಭವವಿದೆ. ಬಹುಶಃ ಆ ದೃಷ್ಟಿಯಿಂದಲೇ ಆ ವಿಷಯವನ್ನು ಸ್ವಲ್ಪ ದೀರ್ಘವಾಗಿ ಇಲ್ಲಿ ಚರ್ಚಿಸಿದ್ದಾರೆ, ಗೊರೂರರು. ಸನಾತನ ಸತ್ಯಗಳ ಮೇಲೆ ರೂಪಿತವಾದ ಅವರ ಕ್ರಾಂತಿಕಾರಕ ದೃಷ್ಟಿಯನ್ನು ಇಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳ ಬಹುದು.

ಮುಂದೆ ಗಾಂಧೀಜಿಯವರ ಬ್ರಹ್ಮಚರ್ಯೆಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುತ್ತಾ ಅವರದು ಶುಕಮುನಿಯ ಬ್ರಹ್ಮಚರ್ಯೆಯಲ್ಲ: ಸತ್ಯನಿಷ್ಠ ಸಂಸಾರಿಯ ಬ್ರಹ್ಮಚರ್ಯೆ ಎಂದು ತೋರಿಸಿದ್ದಾರೆ. ಅನಂತರ ಅವರ ಅನಾಸಕ್ತಿ ಯೋಗದ ಮೀಮಾಂಸೆ ಬರುತ್ತದೆ. ಅದು ಅವರ ಎಲ್ಲ ಕಾರ್ಯಗಳ ನಿಯಂತ್ರಕಶಕ್ತಿ ಮಾತ್ರ ವಲ್ಲದೆ ತಾರಕಮಂತ್ರವೂ ಹೌದು. ಅವರು "ಆತ್ಮನ್ಯೇವಾತ್ಮನಾತುಷ್ಟಃ" ಆಗಿರು ವುದಕ್ಕೂ, ಅವರ ವಿನೋದಶೀಲತೆಗೂ ಇದೇ ಮೂಲ ಎನ್ನುತ್ತಾರೆ ಗೊರೂರರು. ಅದಕ್ಕೆ ಉದಾಹರಣೆಯಾಗಿ ಕೆಲವು ಪ್ರಸಂಗಗಳನ್ನು ಆರಿಸಿಕೊಟ್ಟಿದ್ದಾರೆ.

ಅಜಾತಶತ್ರು ಎಂಬ ಹೆಸರು ಯಾರಿಗಾದರೂ ಅನ್ವಯಿಸುವುದಾದರೆ ಅದು ಸಂಪೂರ್ಣವಾಗಿ ಅನ್ವಯಿಸುವುದು ಗಾಂಧೀಜಿಯವರಿಗೆ. ಅವರಿಗೆ ಶತ್ರುಗಳೆನ್ನುವವರೇ ಇರಲಿಲ್ಲ. ಯಾರ ವಿರುದ್ಧವಾಗಿ ಅಸಹಕಾರದ ಹೋರಾಟವನ್ನು ನಡೆಸಿದರೋ ಅವ ರನ್ನು ಮಿತ್ರರೆಂದೇ ಕಂಡರು. ತಾತ್ವಿಕವಾಗಿ ಅವರೊಡನೆ ವಿರೋಧವುಳ್ಳವರು ಕೂಡಾ ಗಾಂಧೀಜಿಯವರ ವಿಚಾರದಲ್ಲಿ ಗೌರವದ ಭಾವನೆಯನ್ನು ತಾಳುತ್ತಿದ್ದರು. ಅಂತಹ ಅಪೂರ್ವ ವ್ಯಕ್ತಿತ್ವ ಅವರದು. ಇದಕ್ಕೆ ಕಾರಣ ಅವರ ಅನಾಸಕ್ತಿಯೋಗ. ಇದನ್ನು ಲೇಖಕರು ಇಲ್ಲಿ ಮನದಟ್ಟು ಮಾಡಿಕೊಟ್ಟಿದ್ದಾರೆ.

ಮುಂದೆ ಗಾಂಧೀಜಿಯವರ ರಾಜಕೀಯ ದೃಷ್ಟಿ ಮತ್ತು ಅವರು ಕೈಕೊಂಡ ಗ್ರಾಮೋದ್ಧಾರದ ಕಾರ್ಯಗಳ ವಿವರಣೆ ಬರುತ್ತದೆ. ರಾಜಕೀಯ ಮತ್ತು ಧರ್ಮವನ್ನು

ಅವರು ಬೆಸೆದ ಬಗೆ, ಅವರ ಗ್ರಾಮ ಸ್ವರಾಜ್ಯದ ಆದರ್ಶಗಳನ್ನು ಇಲ್ಲಿ ಕಂಡುಕೊಳ್ಳ ಬಹುದು. 'ಗಾಂಧೀ ಚಿಕ್ಕಪ್ಪ' ಎಂಬ ಅಧ್ಯಾಯ ಅವರ ಇನ್ನೊಂದು ಮುಖವನ್ನು ತೋರಿಸಿಕೊಡುತ್ತದೆ. ಅವರ ಕಠೋರನಿಷ್ಠೆ ವಜ್ರದಷ್ಟು ಕಠಿಣ; ಆದರೆ ಅವರ ಮನಸ್ಸು ಕುಸುಮದಷ್ಟು ಕೋಮಲ ಎಂಬುದನ್ನೂ, ಮಕ್ಕಳಿಗಾಗಿ ಅವರ ಮನಸ್ಸು ಮಿಡಿಯುತ್ತಿದ್ದುದನ್ನೂ ಬಹಳ ಕುತೂಹಲಕರವಾದ ರೀತಿಯಲ್ಲಿ ತೋರಿಸಿಕೊಟ್ಟಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದಿತು. ಆದರೆ ಅದು ಗಾಂಧೀಜಿ ಬಯಸಿದ ರೀತಿಯಲ್ಲಲ್ಲ. ದೇಶ ಒಡೆಯಿತು; ಪಾಕಿಸ್ತಾನ ನಿರ್ಮಾಣವಾಯಿತು ಆದರೂ ಮತಧರ್ಮಗಳ ಹೆಸರಿನಲ್ಲಿ ರಕ್ತಪಾತ ನಡೆಯುವುದು ತಪ್ಪಲಿಲ್ಲ. ಅಲ್ಲಲ್ಲಿ ಕೊಲೆ ಲೂಟಿ ಅತ್ಯಾಚಾರಗಳು ಅಟ್ಟಹಾಸಗೈದುವು. ನವಖಲಿ ಜಿಲ್ಲೆಯಲ್ಲಿ ಇದರ ವಿಕಟ ನರ್ತನ, ಮಾನವತೆಯ ವಿಕೃತಿಯ ಕರಾಳ ಮುಖವನ್ನು ತೋರಿಸಿತು. ಅಲ್ಲಿನ ಹತ್ಯಾಕಾಂಡವನ್ನು ಕೇಳಿ ಗಾಂಧೀಜಿ ತಲ್ಲಣಿಸಿದರು. ತಮ್ಮ ಜೀವನವನ್ನು ಪಣವಾಗಿಟ್ಟು ನವಖಲಿ ಜಿಲ್ಲೆಯಲ್ಲಿ ಪಾದಯಾತ್ರೆ ಕೈಗೊಂಡರು. ಅವರ ಸತ್ವಸಾಧನೆಯ ಈ ಪ್ರಸಂಗವನ್ನು 'ಗಾಂಧೀಜಿಯ ನವಖಲಿ ಯಾತ್ರೆ' ಎಂಬ ಅಧ್ಯಾಯದಲ್ಲಿ ಗೊರೂರರು ಚಿತ್ರಿಸಿದ್ದಾರೆ. ಜಾತಿಯ ದ್ವೇಷದಿಂದ ಹೆತ್ತಿ ಉರಿಯುತ್ತಿದ್ದ ಆ ಜಿಲ್ಲೆಯಲ್ಲಿ ಗಾಂಧೀಜಿ ಸುಮಾರು ಐವತ್ತು ದಿನ ಗಳ ಕಾಲ ಹಳ್ಳಿಯಿಂದ ಹಳ್ಳಿಗೆ ಹೋಗುತ್ತಾ ಅಹಿಂಸೆಯ ಸಂದೇಶವನ್ನಿತ್ತು ದಾನವ ನನ್ನು ಮಾನವನನ್ನಾಗಿ ಮಾಡುವ ದೈವಿಕ ಸಾಹಸ ಒಂದು ರೋಮಾಂಚಕಾರಿಯಾದ ಕಥೆ. ದೀರ್ಘವಾದ ಈ ಅಧ್ಯಾಯದಲ್ಲಿ ಅದು ಯಥಾವತ್ತಾಗಿ ಮೂಡಿ ಬಂದಿದೆ. ರುದ್ರಭೀಕರ ಜ್ವಾಲೆಯ ಮಧ್ಯದಲ್ಲಿ ಅಮೃತ ಮೇಘದಿಂದ ಮಳೆಗರೆಯುವ ಸ್ನಿಗ್ಧ ಸ್ನೇಹದ ಅಲೌಕಿಕ ತೇಜಸ್ಸನ್ನು ಕಾಣಿಸುತ್ತದೆ.

ಇಂತಹ ಮಹಾಚೇತನಕ್ಕೆ ಮರಣ ಇಲ್ಲ. ಅವರ ದೇಹ ಮರೆಯಾದರೂ ಅವರು ಅಮರರು. ಯಾವ ಉದ್ದೇಶ ಸಾಧನೆಗಾಗಿ ಅವರು ಜೀವನ ಪರ್ಯಂತ ಶ್ರಮಿಸಿದರೋ ಆ ಉದ್ದೇಶಕ್ಕಾಗಿಯೇ ಜೀವನವನ್ನು ಮುಡಿಪಾಗಿಟ್ಟರು. ಆ ಸಾಹಸದಲ್ಲಿಯೇ ಕೊನೆಯ ಉಸಿರೆಳೆದರು. ಈ ಸನ್ನಿವೇಶವನ್ನು ಗೊರೂರರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಶಾಂತಿಯೇ ಮೈವೆತ್ತಂತೆ ಪ್ರಾರ್ಥನಾಮಂದಿರದತ್ತ ಬರುತ್ತಿದ್ದ ಗಾಂಧೀಜಿಯವರ ಮೇಲೆ ಗುಂಡನ್ನು ಹಾರಿಸಿ ಕೊಲೆಗೈದ ಹೃದಯವಿದ್ರಾವಕ ಘಟನೆ ಮಾನವನ ಇತಿಹಾಸದಲ್ಲಿ ಒಂದು ಕಳಂಕದ ದಿನ. ಏಕೆಂದರೆ, "ಮಹಾತ್ಮಗಾಂಧಿ ಭಾರತಕ್ಕೆ ಮಾತ್ರ ಸೇರಿದವರಲ್ಲ. ಅವರು ಮನುಷ್ಯ ಪ್ರಪಂಚಕ್ಕೆ ಸೇರಿದವರು. ರಾಜ್ಯದಲ್ಲಿ ಅಧಿಕಾರ ಸ್ಥಾನದಲ್ಲಿಲ್ಲದಿದ್ದರೂ, ಜಗತ್ತಿನ ಎಲ್ಲ ರಾಷ್ಟ್ರಗಳ ಬಾವುಟ ಗಳನ್ನೂ ಒಬ್ಬ ಖಾಸಗೀ ವ್ಯಕ್ತಿಗಾಗಿ ತಗ್ಗಿಸಿದ ಉದಾಹರಣೆ ಮತ್ತೆಲ್ಲಿಯೂ ಇಲ್ಲ. ಜಗತ್ತಿನ ಎಲ್ಲ ರಾಷ್ಟ್ರಗಳೂ ತಮ್ಮ ರಾಜ್ಯಾಂಗ ಸಭೆಗಳಲ್ಲಿ ನಿಂತು ಗಾಂಧಿಯವರ ನಿಧನಕ್ಕಾಗಿ ಶೋಕ ಪ್ರದರ್ಶನ ಮಾಡಿದುವು. ಪರಮಾತ್ಮನ ವಿಷಯದಲ್ಲಿ ಹೇಗೆ ನಾಲ್ಕು ವೇದಗಳೂ ನೂರೆಂಟು ಉಪನಿಷತ್ತುಗಳೂ ಹೊಗಳಿದರೂ ಮುಗಿಯುವುದಿಲ್ಲ

ವೆಂದು ಹೇಳುತ್ತಾರೆಯೋ ಪರಮಾತ್ಮನ ಭಕ್ತರಾದ ಗಾಂಧಿಯವರ ಪಿತೃವೂ ಹಾಗೆಯೇ." (ಪುಟ ೨೮೫) ಎನ್ನುತ್ತಾರೆ ಲೇಖಕರು. ಅನಂತರ ನೆಹರೂ ಪಟೇಲ ರಾಜಾಜಿ, ರಾಜೇಂದ್ರಬಾಬು, ಸರೋಜಿನಿನಾಯ್ಡು. ಆಜಾದ್. ಪ್ಯಾರೇಲಾಲ ಮೊದಲಾದವರಲ್ಲದೆ ಮೌಂಟ್ ಬ್ಯಾಟನ್. ನೋಯೆಲ್ ಬಾಕರ್. ಆಂಡ್ರ್ಯೂ ಗ್ರೊಮಿಕೊ. ಕ್ಲೆಮೆಂಟ್ ಆಟ್ಲಿ, ಜಫರುಲ್ಲಾ ಖಾನ್—ಇವರೇ ಮೊದಲಾಗಿ ವಿಶ್ವದ ನಾಯಕರೆಲ್ಲರೂ ಗಾಂಧೀಜಿಯವರನ್ನು ಕುರಿತು ನುಡಿದ ಮಾತುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಮತ್ತು ಕೊನೆಯಲ್ಲಿ ಹೇಳುತ್ತಾರೆ: ಇದು "ವಿಶ್ವಜ್ಯೋತಿಗೆ ವಿಶ್ವ ಅರ್ಪಿಸಿದ ಬಾಷ್ಪಾಂಜಲಿ. ಗಾಂಧಿಯವರನ್ನು ಪಡೆದ ನಾವು ಎಂತಹ ಧನ್ಯರೆಂಬುದನ್ನು ಸೂಚಿಸುತ್ತದೆ. ಇಂತಹ ವಿಭೂತಿಗೆ ಅರ್ಹರಾಗುವ ಯೋಗ್ಯತೆ ನಮಗೆ ಉಂಟಾಗಲಿ" (ಪುಟ ೪೬೦)—ಎಂಬುದಾಗಿ.

ಮುಂದೆ ಮಹಾತ್ಮಾಜಿಯವರ ಭಾವನೆಗಳ ರತ್ನಗಣಿಗೆ ಸೂಚನೆಯ ರೂಪವಾಗಿರುವ 'ಡೆಲ್ಲಿ ಡೈರಿ'ಯನ್ನು ಕೊಟ್ಟಿದ್ದಾರೆ. "ನಮ್ಮ ನೆರೆ ಹೊರೆಯವರೊಂದಿಗೆ ವ್ಯವಹರಿಸುವುದರಿಂದ ಹಿಡಿದು ಜಗತ್ತಿನ ರಾಷ್ಟ್ರಗಳು ವಿಶ್ವಭ್ರಾತೃತ್ವದ ಮಾರ್ಗದಲ್ಲಿರಲು ಅನುಸರಿಸಬೇಕಾದ ಆದರ್ಶಗಳು ಅದರಲ್ಲಿ ಸೂಚಿತವಾಗಿವೆ." (ಪುಟ ೪೬೭) ಅನಂತರ ಮಹಾತ್ಮಾ ಗಾಂಧಿಯವರು ಕಂಡ 'ಸರ್ವೋದಯ ಸಮಾಜ'ದ ಸುಂದರ ಚಿತ್ರ ಬರುತ್ತದೆ. ಅವರ ದೃಷ್ಟಿಯ ರಾಮರಾಜ್ಯದ ವರ್ಣನೆಯಲ್ಲಿ ಅದು ಮುಂದುವರಿಯುತ್ತದೆ.

ಕೊನೆಯ ಎರಡು ಅಧ್ಯಾಯಗಳಲ್ಲಿ ಗಾಂಧೀಜಿಯವರ ಜೀವನವನ್ನು ಒಟ್ಟು ನೋಟದಿಂದ ನೋಡುವ ಪ್ರಯತ್ನ ಕಂಡುಬರುತ್ತದೆ. 'ಪೂರ್ಣಪುರುಷ ಗಾಂಧಿ'ಯಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ: "ಈ ಆತ್ಮಶಕ್ತಿಯ, ಧರ್ಮದ ಬೆಳವಣಿಗೆಯ ಕಾರಣದಿಂದ ಮಹಾತ್ಮಾ ಗಾಂಧಿಯವರು, ಆತ್ಮೋನ್ನತಿಯ ಸತ್ಯಶೋಧನೆಯ ಸ್ವಂತ, ಕತ್ತಿಯ ಅಲುಗಿನ ಮಾರ್ಗದಲ್ಲಿ ತೊಡಗಿದ್ದರೂ, ಅವರು ಭಾರತ ಜನತೆಯ ಪ್ರತಿನಿಧಿಗಳಾದುದರಿಂದ ಭಾರತೀಯರಿಗೆ ಎಲ್ಲಾ ಮಾರ್ಗದಲ್ಲಿಯೂ ಮಾರ್ಗದರ್ಶನ ಮಾಡುವುದು ಅವರ ಕರ್ತವ್ಯವಾಯಿತು. ಈ ದೃಷ್ಟಿಯಿಂದ ನೋಡುವಾಗ ಗಾಂಧಿಯವರು ಒಂದೆಡೆ ನಮಗೆ ದೃಷ್ಟಿಗೂ ಎಟುಕದ ಅತ್ಯಂತ ಎತ್ತರವಾದ ಹಿಮಾಚಲದ ಉನ್ನತ ಶಿಖರವಾಗಿದ್ದರು. ಮತ್ತೊಂದೆಡೆ ನಮ್ಮ ನಿತ್ಯವ್ಯವಹಾರದಲ್ಲಿ ನಿತ್ಯಜೀವನದಲ್ಲಿ ದಿನದಿನದ ಬಾಳಿನಲ್ಲಿ ಸೇರಿ, ಈ ಕ್ಷಣಿಕ ಜಗತ್ತಿನ ಸಂಸಾರದ ಕೋಟಲೆಗೆ ಅವಶ್ಯಕವಾದ ರೀತಿಯಲ್ಲಿ, ದುರ್ಬಲವ್ಯಕ್ತಿ ಹುಲು ಮಾನಿಸನಿಗೆ ಸಹ ಸಮನಾಗಿದ್ದರು. ಆತ್ಮೋನ್ನತಿಯ ಆ ಶಿಖರವನ್ನು ಏರಿದವರು ತಮ್ಮ ಮಹತ್ ಎತ್ತರದ ಮಟ್ಟದಿಂದ ಯಾವುದು ಅಲ್ಪವೆಂದು ಗಣಿಸುತ್ತಿದ್ದರೋ, ಅಷ್ಟೇ ಎತ್ತರದ ಶಿಖರವನ್ನೇರಿದರೂ, ಗಾಂಧಿಯವರು ಈ ಬಾಳನ್ನೂ ಇದರ ಸಾಧನೆಗಳನ್ನೂ ಅಲ್ಪವೆಂದು ಎಣಿಸಲಿಲ್ಲ" (ಪುಟ ೫೧೩-೧೪)—ಎಂಬ ಮುಂತಾದ ಮಾತುಗಳಿಂದ ಅವರ ಪೂರ್ಣಜೀವನವನ್ನು ಪರಿಚಯಿಸಿದ್ದಾರೆ. ಅಣುವಿನಲ್ಲಿ ಅಣುವಾಗಿ, ಮಹತ್ತಿಗಿಂತ ಮಹತ್ತಾಗಿದ್ದ ಅವರ ಆ ಪೂರ್ಣ ಜೀವನದ ಬಗ್ಗೆ

ಕೊನೆಯಲ್ಲಿ ಹೇಳುತ್ತಾರೆ: ಅದು "ಯಾವ ದೃಷ್ಟಿಯಿಂದ ನೋಡಿದರೂ, ಬ್ರಹ್ಮಚಾರಿಯಾಗಿ ಗೃಹಸ್ಥನಾಗಿ ಸರ್ವಸಂಗಪರಿತ್ಯಾಗಿಯಾಗಿ ವಿಶ್ವಪ್ರೇಮಿಯಾಗಿ ರಾಜಕಾರಣಪಟುವಾಗಿ ಆಧ್ಯಾತ್ಮ ಗುರುವಾಗಿ—ಪೂರ್ಣವೂ ದೋಷರಹಿತವೂ ಕೃತಕೃತ್ಯವೂ ಆದುದಾಗಿ ತೋರುತ್ತಿದ್ದಿತು." (ಪುಟ ೫೧೪)

ಮಹಾತ್ಮಾ ಗಾಂಧಿಯವರು ಭಾರತ ಸಂಸ್ಕೃತಿಯ ತಿರುಳೆಂಬುದನ್ನು ನಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ತೋರಿಸಿದ್ದಾರೆ: "ಮಹಾತ್ಮಾ ಗಾಂಧಿಯವರು ಭಾರತ ಸಂಸ್ಕೃತಿಯಲ್ಲಿ ಉತ್ಕೃಷ್ಟವಾದುದು ಯಾವುದೋ ಅವುಗಳೆಲ್ಲದರ ಪ್ರತೀಕ. ಇದುವರೆಗೆ ಭಾರತದಲ್ಲಿ ಯಾವುದು ಸತ್ಯವೋ ಶಿವವೋ ಸುಂದರವೋ ಅವುಗಳೆಲ್ಲದರ ಕಿರೀಟವಾಗಿ ಗಾಂಧಿಯವರು ತಲೆದೋರಿದರು. ಭಾರತ ಸಂಸ್ಕೃತಿಯನ್ನೂ, ಗಾಂಧಿಯವರ ಬಾಳನ್ನೂ ಹೋಲಿಸಿ ನೋಡಿದರೆ, ಗಾಂಧಿಯವರು ಭಾರತವಲ್ಲಲ್ಲದೆ ಮತ್ತೆಲ್ಲಿಯೂ ಸಾಧ್ಯವಾಗುತ್ತಿರಲಿಲ್ಲವೆಂಬುದು ಸ್ಪಷ್ಟ. ಈ ವಿಭೂತಿ ಬೇರಾವ ರಾಷ್ಟ್ರದಲ್ಲಾದರೂ ಜನಿಸಿದ್ದರೆ, ಪ್ರಾಯಶಃ ಕಲ್ಲಿನ ಸಂದಿಯಲ್ಲಿ ಸಿಕ್ಕಿದ ಹೂವಿನಂತೆ ಅರೆದುಹೋಗುತ್ತಿದ್ದರೇನೋ. ನಾಜಿ ಜರ್ಮನಿಯಲ್ಲಾಗಲೀ, ಆಟಂಬಾಂಬಿನ ಅಮೆರಿಕಾದಲ್ಲಾಗಲೀ, ಕೈಗಾರಿಕೆಯ ಜಪಾನಿನಲ್ಲಾಗಲೀ ಗಾಂಧಿಯವರಂತಹ ಮಹೋನ್ನತಜೀವಿ ತನ್ನ ಪೂರ್ಣ ಬೆಳವಣಿಗೆಯನ್ನು ಸಾಧಿಸುತ್ತಿರಲಿಲ್ಲ." (ಪುಟ ೫೬೩)—ಎಂದು ಹೇಳಿ ಭಾರತ ಸಂಸ್ಕೃತಿಯಿಂದ ಅವರು ಪೋಷಿತರಾದವರೆಂಬುದನ್ನು ಸೂಚಿಸಿದ್ದಾರೆ.

ಅವರು ಈ ಸಂಸ್ಕೃತಿಯ ಸಾರವನ್ನು ಹೀರಿ ಬೆಳೆದವರು ನಿಜ. ಆದರೆ ಅದನ್ನು ಅರಗಿಸಿಕೊಂಡು ಅದಕ್ಕೆ ಹೊಸ ಚೈತನ್ಯವನ್ನು ಕೊಟ್ಟವರು. ಹೊಸ ಕಣ್ಣನ್ನು ಕೊಟ್ಟವರು. 'ರಾಷ್ಟ್ರಪಿತ' ಎನಿಸಿಕೊಂಡು 'ಭಾರತ ಭಾಗ್ಯವಿಧಾತ'ರಾಗಿ ಪರಿಣಮಿಸಿದರು. ಗೊರೂರರು ಇದಕ್ಕೆ ಕೊಟ್ಟಿರುವ ಈ ಹೆಸರೂ ಅರ್ಥವತ್ತಾಗಿದೆ: ಗಾಂಧೀಜಿಯವರನ್ನು ಕುರಿತ ಅವರ ದೃಷ್ಟಿಗೆ ದ್ಯೋತಕವಾಗಿದೆ. ಆ ದೃಷ್ಟಿಯನ್ನು ಸಮರ್ಥವಾಗಿ ಪ್ರತಿಬಿಂಬಿಸಿದೆ ಈ ಕೃತಿ.

ಇದು ಸಾಂಪ್ರದಾಯಿಕವಾದ ರೀತಿಯ ಜೀವನಚರಿತ್ರೆಯಲ್ಲ; ಆದರೆ ಗಾಂಧೀಜಿಯವರ ಜೀವನದ ಬಹುಮುಖಗಳನ್ನು ಹಿಡಿದಿಟ್ಟಿರುವ ಕೃತಿ. ಅವರ ಹಿಮಾಚಲಸದೃಶವಾದ ಔನ್ನತ್ಯ ವೈಶಾಲ್ಯಗಳನ್ನು ಸರಳ ಸುಂದರವಾದ ಭಾಷೆಯಲ್ಲಿ ಹಿಡಿದಿಟ್ಟಿರುವ ಲೇಖಕರ ಪ್ರಯತ್ನ ಸಾರ್ಥಕವಾಗಿದೆ. ತಾವು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳನ್ನು ಆರಿಸಿ ಇಲ್ಲಿ ಅಳವಡಿಸಿರುವ ಕ್ರಮ ಒಂದು ರೀತಿಯ ಏಕಮುಖವಾದ ಬೆಳವಣಿಗೆಗೆ ಸಹಾಯಕವಾಗುವಂತಿದೆ. ಭಾರತದ ಭಾಗ್ಯ ಗಾಂಧೀಜಿಯವರ ಬಹುಮುಖ ಸಾಧನೆಯೊಡನೆ ಬೆರೆತುಹೋಗಿ ಕ್ರಮೇಣ ವಿಕಾಸಗೊಳ್ಳುತ್ತಾ ಸ್ವಾತಂತ್ರ್ಯದತ್ತ ಮುನ್ನಡೆದುದನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಇದು ಗೊರೂರರ ಸಾಹಿತ್ಯ ಸೃಷ್ಟಿಯ ವೈವಿಧ್ಯದಲ್ಲಿ ಸತ್ವಶಾಲಿಯಾಗಿ ಉಳಿಯುವ ವಿಶಿಷ್ಟ ಕೃತಿ.

'ಮಹಾತ್ಮಾ ಗಾಂಧಿಯವರ ದಕ್ಷಿಣ ಯಾತ್ರೆ'

ಕೆ. ವೆಂಕಟರಾಮಪ್ಪ

ಗ್ರಂಥದ ಹೆಸರೇ ಸೂಚಿಸುವಂತೆ ಇದು ಒಂದು ಪ್ರವಾಸ ಕಥನ. ಮಹಾತ್ಮರು ೧೯೪೬ರ ಏಪ್ರಿಲ್ ತಿಂಗಳ ಕೊನೆಯಲ್ಲಿ ಕೈಕೊಂಡ ದಕ್ಷಿಣ ದೇಶದ ಸಂಚಾರದ ವರ್ಣನೆ ಇದರಲ್ಲಿದೆ. ಬಂಗಾಳದಿಂದ ಹೊರಟು ಅವರು ದಕ್ಷಿಣದ ಮದರಾಸಿಗೆ ಬಂದದ್ದು ದಕ್ಷಿಣ ಭಾರತ ಹಿಂದೂಸ್ತಾನಿ ಪ್ರಚಾರಸಭೆಯ ರಜತೋತ್ಸವದ ಘಟಿಕೋತ್ಸವದಲ್ಲಿ ಭಾಗವಹಿಸಿ ಆ ಭಾಷೆಯ ಪ್ರಚಾರವನ್ನು ತೀವ್ರಗೊಳಿಸುವ ಸಲುವಾಗಿ. ಬಂಗಾಳದ ಸೋದೆಪುರದಿಂದ ಹೊರಟ ಗಾಂಧಿ ಸ್ಪೆಷಲ್ ರೈಲು ಮದರಾಸಿನ ಅಂಬತ್ತೂರು ನಿಲ್ದಾಣ ಸೇರುವವರೆಗೆ ಮಧ್ಯೆ ಎಲ್ಲೆಲ್ಲಿ ರೈಲು ನಿಂತರೂ ಅಲ್ಲೆಲ್ಲ ಸಭೆ ಸೇರಿದ್ದ ಜನರಿಗೆ ಗಾಂಧೀಜಿಯವರು ಹಿಂದೂಸ್ತಾನಿ ಭಾಷೆಯನ್ನು ಕಲಿಯಬೇಕಾದ ಅಗತ್ಯವನ್ನು ಕುರಿತು ಹೇಳಿದರು. ನಾವು ಸ್ವರಾಜ್ಯಕ್ಕೆ ಅರ್ಹರಾಗಬೇಕಾದರೆ ಮಾಡಬೇಕಾದ ಹಲವು ಕೆಲಸಗಳಲ್ಲಿ ಸಮಸ್ತ ಭಾರತಕ್ಕೂ ಹೊಂದುವಂಥ ಭಾಷೆ—ಅದೇ ಹಿಂದೂಸ್ತಾನಿ—ಯನ್ನು ಕಲಿಯುವುದೂ ಒಂದು. ದಕ್ಷಿಣ ಭಾರತ, ಉತ್ತರ ಭಾರತ ಎಂಬ ಭೇದಭಾವ ಉಳಿಯದಂತೆ ಸಮಸ್ತರೂ ಹಿಂದೂಸ್ತಾನಿ ಕಲಿತು ಪರಸ್ಪರ ತಿಳಿವಳಿಕೆಯನ್ನು ವೃದ್ಧಿಪಡಿಸಿಕೊಳ್ಳಬೇಕೆಂದೂ, ನಮ್ಮಲ್ಲಿ ಭಾಷೈಕ್ಯ ಉಂಟಾಗಬೇಕಾದರೆ ಸಮಸ್ತ ಭಾರತೀಯರಿಗೂ ಅರ್ಥವಾಗುವ ಒಂದು ಸಾಮಾನ್ಯ ಭಾಷೆ ಇರಬೇಕೆಂದೂ, ಅಂಥ ಸಂಪರ್ಕ ಭಾಷೆ ಹಿಂದೂಸ್ತಾನಿಯಲ್ಲದೆ ಬೇರೆ ಯಾವುದೂ ಆಗುವ ಸಂಭವವಿಲ್ಲವೆಂದೂ ಅವರ ನಂಬಿಕೆ. ಅದನ್ನು ಹೋದ ಕಡೆಯಲ್ಲೆಲ್ಲ ಸಂಶಯಕ್ಕೆಡೆಯಿಲ್ಲದಂತೆ ಉಪದೇಶಿಸಿದರು. ಹಲವು ಕಡೆಗಳಲ್ಲಿ ಇಂಗ್ಲಿಷ್‌ನಲ್ಲಿ ಭಾಷಣ ಮಾಡಲು ನಿರಾಕರಿಸಿ ಹಿಂದೂಸ್ತಾನಿಯಲ್ಲೇ ಮಾತನಾಡಿದರು. ಅದನ್ನು ತೆಲುಗು, ತಮಿಳು ಭಾಷೆಗಳಿಗೆ ಅನುವಾದ ಮಾಡುವ ಅವಕಾಶವನ್ನೂ ನಿರಾಕರಿಸಿದರು. ಬಹಳ ದಿನ ಇಂಗ್ಲಿಷ್ ಭಾಷೆಯನ್ನೇ

ನಂಬಿಕೊಂಡಿರದೆ ಜನ ಬೇಗ ಹಿಂದೂಸ್ತಾನಿ ಕಲಿಯಬೇಕೆಂಬ ಉದ್ದೇಶ ಗಾಂಧೀಜಿಯು ವರದು. ಆ ಕಾರಣದಿಂದಲೇ ಅವರು ಮದರಾಸಿನ ದಕ್ಷಿಣ ಭಾರತ ಹಿಂದೂಸ್ತಾನೀ ಪ್ರಚಾರ ಸಭೆಯ ಆಮಂತ್ರಣವನ್ನು ಮನ್ನಿಸಿ ಸೇವಾಗ್ರಾಮಕ್ಕೆ ಹೋಗುವ ಏರ್ಪಾಟನ್ನು ಕೈಬಿಟ್ಟು ದಕ್ಷಿಣಯಾತ್ರೆಯನ್ನು ಕೈಕೊಂಡರು.

ಮದರಾಸಿನಲ್ಲಿ ತಂಗಿ ಮಹಾತ್ಮಾ ಗಾಂಧೀಜಿಯವರು ಮಧುರೆ ಮತ್ತು ಪಳನಿ ಕ್ಷೇತ್ರಗಳಿಗೆ ಯಾತ್ರೆ ಹೋಗಿ ಬಂದರು. ಅವೆರಡೂ ಮದರಾಸು ಪ್ರಾಂತದ ಪುಣ್ಯಕ್ಷೇತ್ರಗಳು. ಮಧುರೆಯ ಮೀನಾಕ್ಷೀ ಸುಂದರೇಶ್ವರರ ದೇವಾಲಯ ಲೋಕಪ್ರಸಿದ್ಧವಾಗಿದೆ. ಪಳನಿ ಶ್ರೀ ಸುಬ್ರಮಣ್ಯಸ್ವಾಮಿ ನೆಲಸಿರುವ ಪುಣ್ಯಸ್ಥಲ. ಈ ಎರಡು ಸ್ಥಳಗಳಿಗೂ ಗಾಂಧೀಜಿಯವರು ಹೋಗಿ ಆ ದೇವಮಂದಿರಗಳಲ್ಲಿ ದೀರ್ಘಕಾಲ ನಿಂತಿದ್ದು ದೇವರ ದರ್ಶನ ಮಾಡಿ ಪೂಜೆ ಸಲ್ಲಿಸಿದರು. ವಿಗ್ರಹಾರಾಧನೆಯಲ್ಲಿ ಅವರಿಗೆ ಹಾಗೆ ಹೇಳಿಕೊಳ್ಳುವಂಥ ಉತ್ಸಾಹ ಏನೂ ಇರಲಿಲ್ಲ. ಅವರು ಸತ್ಯವೇ ದೇವರೆಂದು ಲೋಕಕ್ಕೆ ಸಾರಿದ ಮಹಾತ್ಮರು. ಆದರೂ ಅವರು ಈ ಎರಡು ದೇವಮಂದಿರಗಳಿಗೆ ಹೋಗಿ ಬಂದರು; ಅಲ್ಲಿ ಶ್ರದ್ಧೆಯಿಂದ ಪೂಜೆ ಸಲ್ಲಿಸಿದರು. ಮೀನಾಕ್ಷಿ ಅಮ್ಮನವರ ಸನ್ನಿಧಿಯಲ್ಲಿನ ಅರ್ಚಕರು ಅಷ್ಟೋತ್ತರ ನಾಮಾವಳಿಯನ್ನು ವೇಗವಾಗಿ ಹೇಳತೊಡಗಲು ಮಹಾತ್ಮರು 'ಠೇರೊ' ಎಂದು ತಡೆದು ಭಕ್ತರೂ ಅನುಸರಿಸುವುದಕ್ಕೆ ಸಾಧ್ಯವಾಗುವ ಹಾಗೆ ನಿಧಾನವಾಗಿ ಹೇಳಬೇಕೆಂದು ಆದೇಶಿಸಿದರು! ಈ ಶ್ರದ್ಧೆ ಏಕೆ? ಅದಕ್ಕೆ ಮಹಾತ್ಮರೇ ಉತ್ತರ ನೀಡಿದ್ದಾರೆ. "ಮೂರ್ತಿಯ ಮುಂದೆ ಪೂಜೆ ಮಾಡುವುದು ಹಿಂದು ಧರ್ಮದಲ್ಲಿ ಒಂದು ಮುಖ್ಯ ಭಾಗ. ಇಂತಹ ಪೂಜೆಗೆ ಪ್ರತಿಯೊಬ್ಬರ ಹೃದಯದಲ್ಲಿಯೂ ಸ್ಥಳವುಂಟು." (ಪುಟ ೧೭೩)

ಮಹಾತ್ಮಾ ಗಾಂಧೀಜಿಯವರ ಜತೆಯಲ್ಲಿ ಕೆಲವರು ಹರಿಜನ ಭಕ್ತರೂ ಮೀನಾಕ್ಷಿ ಮಂದಿರಕ್ಕೆ ಹೋಗಿದ್ದರು. ಅದಕ್ಕೆ ಮೊದಲೇ ರಾಜಾಜಿಯವರು ಸರ್ಕಾರ ನಡೆಸುತ್ತಿದ್ದಾಗ ಮೀನಾಕ್ಷಿ ಮಂದಿರಕ್ಕೆ ಹರಿಜನರ ಪ್ರವೇಶವಾಗಿತ್ತು. ಮಹಾತ್ಮರ ಉತ್ಸಾಹಕ್ಕೆ ಇದೂ ಒಂದು ಕಾರಣ. "ಅಸ್ಪೃಶ್ಯತೆ ನನ್ನ ಶತ್ರು" (ಪುಟ ೧೭೩) ಎಂಬುದು ಅವರ ಸ್ಪಷ್ಟ ಹೇಳಿಕೆ. ಆ ಶತ್ರುವಿನ ನಾಶಕ್ಕೆ ಪ್ರಯತ್ನಿಸಿದವರೆಲ್ಲ ಅವರಿಗೆ ಆಪ್ತರು. ಮೀನಾಕ್ಷಿ ಮಂದಿರ ಅಂಥ ಸಂಸ್ಥೆಗಳಲ್ಲಿ ಒಂದಾಗಿತ್ತು. ಅಸ್ಪೃಶ್ಯತಾ ನಿವಾರಣೆ, ಹರಿಜನ ಸೇವೆ—ಇದು ಸ್ವರಾಜ್ಯ ಸಂಪಾದನೆಗೆ ಭಾರತೀಯರಾದ ನಾವು ಮಾಡಿಕೊಳ್ಳಬೇಕಾದ ಸಿದ್ಧತೆಯೆಂದು ಮಹಾತ್ಮರು ಮತ್ತೆ ಮತ್ತೆ ಹೇಳಿ ಜನರಿಗೆ ಮನವರಿಕೆ ಮಾಡಿಕೊಟ್ಟರು. ಈ ಮಧುರೆ ಮತ್ತು ಪಳನಿ ಕ್ಷೇತ್ರಗಳ ಯಾತ್ರೆಯನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಸಹಜವಾದ ಸರಳ ಸುಂದರವಾದ ರಸಸ್ಯಂದಿಯಾದ ಶೈಲಿಯಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಅಂದು ಮಧುರಾ ನಗರ, ದೇವಾಲಯ, ಅರ್ಚಕರು, ಅಧಿಕಾರಿಗಳು, ಜನ, ಎಲ್ಲ ಅಪೂರ್ವವಾದ ಒಂದು ದಿವ್ಯಾನುಭವವನ್ನು ಹೊಂದಿದಂತೆ ತೋರುತ್ತಿತ್ತು. ಅಲ್ಲಿನ ಜನರ ಸಂಭ್ರಮ ಒಂದು ರಥೋತ್ಸವದ

ಸಂಭ್ರಮವನ್ನು ತೋರಿಸುತ್ತಿತ್ತು. ಪಳನಿಯಲ್ಲಿಯೂ ಇದೇ ರೀತಿ ನಡೆಯಿತು. ಮಹಾತ್ಮರ ಸಾನ್ನಿಧ್ಯದ ದೆಸೆಯಿಂದ ಯಾವ ಸ್ಥಳವಾದರೂ ಪುಣ್ಯಕ್ಷೇತ್ರವಾಗುತ್ತದೆ. ಇನ್ನು ಪುಣ್ಯಕ್ಷೇತ್ರಕ್ಕೇ ಬಂದರೆ ಹೇಳಬೇಕೆ ? ಈ ಸ್ಥಳಗಳಲ್ಲಿ ಜನ ಮಹಾತ್ಮಾಜಿಯವರ ದರ್ಶನ ಪಡೆದು ಪುಳಕಿತರಾದರು. ಮೀನಾಕ್ಷಿ ಸುಂದರೇಶ್ವರರನ್ನು ನೋಡಿ ಗಾಂಧೀಜಿಯವರಿಗೆ ಎಷ್ಟು ಸಂತೋಷವಾಯಿತೋ ಈ ಅಹಿಂಸಾವಾದಿ ಸತ್ಯವ್ರತ ಹರಿಜನೋದ್ಧಾರಕ ಗಾಂಧೀಜಿಯವರನ್ನು ಕಂಡು ಮೀನಾಕ್ಷೀ ಸುಂದರೇಶ್ವರರಿಗೂ ಅಷ್ಟೇ ಸಂತೋಷವಾಗಿರಬೇಕೆಂದು ಗೊರೂರರು ಹೇಳಿರುವುದು ಸಮುಚಿತವಾಗಿದೆ.

ಗ್ರಂಥ ಪ್ರಾರಂಭದಲ್ಲಿಯೇ ಗೊರೂರರು ಗಾಂಧೀಜಿಯವರ ಈ ದಕ್ಷಿಣಯಾತ್ರೆಯನ್ನು ಹಿಂದೆ ಪುರಾಣ ಕಾಲದಲ್ಲಿ ಅಗಸ್ತ್ಯ ಮಹರ್ಷಿಗಳು ಕೊಂಡ ಯಾತ್ರೆಗೆ ಹೋಲಿಸಿದ್ದಾರೆ. ಗ್ರಂಥದ ಉದ್ದಕ್ಕೂ ಶ್ರೀರಾಮಚಂದ್ರನ ಪ್ರವಾಸದ ಹೋಲಿಕೆಗಳು ಬಂದಿವೆ. ಗಾಂಧೀಜಿಯವರ ಸ್ಪೆಷಲ್ ಟ್ರೈನನ್ನು ನಡೆಸಿದ ಸಿಬ್ಬಂದಿಯವರನ್ನು ಹಿಂದೆ ಶ್ರೀರಾಮನನ್ನು ಗಂಗೆ ದಾಟಿಸಿದ ಗುಹನಿಗೆ ಹೋಲಿಸಿರುವುದನ್ನು ನೋಡಬಹುದು. ನಾಮವಾರ ಶಾಸ್ತ್ರಿಗಳನ್ನು ಭೇಟಿ ಮಾಡಿ ಅವರೊಡನೆ ಮಹಾತ್ಮರು ನಡೆಸಿದ ಸಂಭಾಷಣೆಯಲ್ಲಂತು ರಾಮಾಯಣ ಸಾರವೇ ಮೂಡಿಬಂದಿದೆ. ರಾಜಕೀಯದಲ್ಲಿ ತಮ್ಮಿಬ್ಬರ ನಡುವೆ ಇದ್ದ ತೀವ್ರವಾದ ಅಭಿಪ್ರಾಯ ಭೇದ ಅವರ ಮೈತ್ರಿಗೆ, ಅಭಿಮಾನಕ್ಕೆ ಕಂಟಕವಾಗಿರಲಿಲ್ಲ. ರಾಮ, ಸೀತೆ, ಗುಹ, ಮೊದಲಾದವರ ಸ್ಮರಣೆ ಬಂದಿದ್ದರೂ ಪುಣ್ಯಕ್ಕೆ ಎಲ್ಲಿಯೂ ಖರ, ದೂಷಣ, ಕಬಂಧ ಮೊದಲಾದವರ ಹೋಲಿಕೆ ಕೊಡಬೇಕಾದ ಅಗತ್ಯ ಬರಲಿಲ್ಲ!

ಮಹಾತ್ಮಾ ಗಾಂಧೀಜಿಯವರು ಮದರಾಸಿನಲ್ಲಿಯೂ ದಕ್ಷಿಣ ದೇಶದ ಇತರ ಸ್ಥಳಗಳಲ್ಲಿ ನಡೆದ ಸಭೆ ಸಮಾರಂಭಗಳಲ್ಲಿಯೂ ಮಾಡಿದ ಹಲವು ಭಾಷಣಗಳ ಸಾರಾಂಶ ಈ ಗ್ರಂಥದಲ್ಲಿ ಚೆನ್ನಾಗಿ ಮೂಡಿಬಂದಿದೆ. ಭಾರತಕ್ಕೆ ಸ್ವಾತಂತ್ರ್ಯ ಬರುವ ಮುಂಚೆ ಜನರ ಹೃದಯಗಳಲ್ಲಿ ಮನೆಮಾಡಿಕೊಂಡಿದ್ದ ದೇಶಾಭಿಮಾನ, ತ್ಯಾಗ, ಔದಾರ್ಯಗಳ ದೃಷ್ಟಾಂತಗಳು ಈ ಪ್ರವಾಸ ಕಥನದಲ್ಲಿ ನಿದರ್ಶನಕ್ಕೆ ಬಂದಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಗೆ ಹೋದವರು, ಅಸುನೀಗಿದವರು, ದೇಶದ ಹಿತಕ್ಕಾಗಿ ತಮ್ಮ ವಕೀಲಿ ವೃತ್ತಿಯನ್ನೇ ತೊರೆದು ರಚನಾಕಾರ್ಯಗಳಲ್ಲಿ ಮಗ್ನರಾದವರು ಅನೇಕರು. ಅವರು ತಮ್ಮ ತ್ಯಾಗಕ್ಕೆ ಯಾವ ಪ್ರತಿಫಲವನ್ನೂ ಕೋರಲಿಲ್ಲ, ಪಡೆದುಕೊಳ್ಳಲಿಲ್ಲ. ಅಂದು ಜನರಿಗೆ ಭಾರತದ ಜನನಾಯಕ ಮಹಾತ್ಮಾಜಿಯವರಲ್ಲಿದ್ದ ಅಪಾರವಾದ ಭಕ್ತಿ ಗೌರವಗಳ ಚಿತ್ರಣ ಈ ಗ್ರಂಥದಲ್ಲಿದೆ. ಆದ್ದರಿಂದ ಇದು ಬರಿಯ ಒಂದು ಪ್ರವಾಸ ಕಥನವಷ್ಟೇ ಆಗಿರದೆ ಅಂದಿನ ಭಾರತದ ಒಂದು ಸಣ್ಣ ಚಿತ್ರವಾಗಿದೆ. ಮಹಾತ್ಮರ ಜೀವನದ ಆದರ್ಶಗಳು, ಸ್ವರಾಜ್ಯ ಸಿದ್ಧಿಗಾಗಿ ಅವರು ರೂಪಿಸಿದ ರಾಷ್ಟ್ರನಿರ್ಮಾಣ ಕಾರ್ಯಕ್ರಮ, ದೀನದಲಿತರ ಉದ್ಧಾರಕ್ಕಾಗಿ ಅವರು ವಹಿಸಿದ ದೀಕ್ಷೆ, ತಮ್ಮ ಭಕ್ತರು, ಅನುಯಾಯಿಗಳನ್ನು ಅವರು ಈ ದೇಶಭಕ್ತಿಯ, ದೇಶಸೇವೆಯ, ಮಹಾ

ಕಾರ್ಯದಲ್ಲಿ ನಿಯೋಜಿಸಿದ ರೀತಿ, ಜನಸಾಮಾನ್ಯರೊಡನೆ ಅವರು ನಡೆದುಕೊಂಡ ಬಗೆ, ಅವರು ತಮ್ಮ ಹಲವು ಕಾರ್ಯಗಳಿಗಾಗಿ ನಿಧಿ ಸಂಗ್ರಹಿಸಿದ ರೀತಿ—ಈ ಎಲ್ಲ ವಿಚಾರಗಳ ವಿವರಣೆ ಈ ಗ್ರಂಥದಲ್ಲಿ ಬಂದಿರುವುದರಿಂದ ಇದು ಮಹಾತ್ಮಾ ಗಾಂಧೀಜಿಯವರ ಒಂದು ಜೀವನಚಿತ್ರವೇ ಆಗಿದೆಯೆಂದರೆ ತಪ್ಪಲ್ಲ. ಮಹಾತ್ಮಾಜಿಯವರ ಒಂದು ವ್ಯಕ್ತಿಚಿತ್ರ ಇಲ್ಲಿದೆ.

ತಮಗೆ ಎಷ್ಟೇ ಶ್ರಮವಾದರೂ, ಬಹಳ ಆಯಾಸವೇ ಆಗಿದ್ದರೂ ತಮ್ಮ ಭೇಟಿಗಾಗಿ ಕಾದಿದ್ದ ಜನರಿಗೆ ದರ್ಶನ ಕೊಡಲು ಹಿಂತೆಗೆಯದ ಅವರ ಅಪಾರ ಸಹನೆ, ಶಿಸ್ತು ತಪ್ಪಿ ಗಲಾಟೆ ಮಾಡಿದ ಜನರನ್ನು ತಮ್ಮ ವಾಕ್ಪ್ರಹಾರದಿಂದಲೇ ದಂಡಿಸಿ ದಾರಿಗೆ ತಂದ ಚಮತ್ಕಾರ ಇಲ್ಲಿ ಕಾಣಬಹುದು. ಹರಿಜನನಿಧಿಗೆ ಒಂದು ಹಳ್ಳಿಯ ಜನ ಹದಿನೈದು ರೂಪಾಯಿಗಳ ಕಾಣಿಕೆ ಸಲ್ಲಿಸುತ್ತಾ "ಈ ಹಣ ಅತ್ಯಲ್ಪ" ಎಂದು ಸಂಕೋಚಪಟ್ಟುಕೊಂಡಾಗ ಗಾಂಧೀಜಿಯವರು "ಹಳ್ಳಿಯ ಬಡತನ ನನಗೆ ಗೊತ್ತು. ಈ ಸಣ್ಣ ನಿಧಿಯ ಹಿಂದಿರುವ ಮೂಲ ಹೃದಯ ನಾನು ಕಂಡಿದ್ದೇನೆ" (ಪುಟ ೧೬೩-೧೬೪) ಎಂದು ಸಮಾಧಾನ ಹೇಳಿ ಸಂತೈಸಿದರು. ಆದರೆ ಮದರಾಸಿನ ಸಿಂಧಿವರ್ತಕರು ಹತ್ತು ಸಾವಿರ ರೂಪಾಯಿಗಳ ಕಾಣಿಕೆ ಸಲ್ಲಿಸಿದಾಗ ಗಾಂಧೀಜಿಯವರು ನಗುತ್ತಾ "ಇಷ್ಟೇಯೆ? ನೀವು ಎಲ್ಲೆಲ್ಲಿಯೂ ಒಳ್ಳೆ ವ್ಯಾಪಾರದಲ್ಲಿ ತೊಡಗಿರುವುದು ನನಗೆ ಕಾಣುತ್ತಿದೆ. ನಿಧಿ ಇನ್ನೂ ಹೆಚ್ಚಬೇಕು" (ಪುಟ ೧೫೯-೬೦) ಎಂದು ಆಕ್ಷೇಪಿಸಬಲ್ಲವರಾದರು. ಆದರೆ ಆ ಸಿಂಧಿವರ್ತಕರು ಸಾಮಾನ್ಯರಲ್ಲ. ಅವರು ಗಾಂಧೀಜಿಯವರಿಗೂ ಸಮಜಾಯಿಷಿ ಹೇಳುತ್ತಾ: "ನಾವು ಸಿಂಧ್‌ನಲ್ಲಿ ಪಂಡಿತ್ ನೆಹ್ರುಗಳಿಗೆ ಆಗಲೆ ಐವತ್ತುಸಾವಿರ ರೂಪಾಯಿ ಕೊಟ್ಟಿದ್ದೇವೆ" ಎಂದರು. (ಪುಟ ೧೫೯) ಆದರೆ ಗಾಂಧೀಜಿ ಅಷ್ಟಕ್ಕೆ ಸೋತಾರೆ? "ಅಂದಮೇಲೆ ನನಗೂ ಅಷ್ಟಾದರೂ ಕೊಡಬೇಕಲ್ಲ" (ಪುಟ ೧೬೦) ಎಂದರು. ಗಾಂಧೀಜಿಯವರು 'ಬನಿಯ' ಎಂದು ಹೇಳಿಕೊಳ್ಳುತ್ತಿದ್ದುದುಂಟು. ಆದರೆ ಆ 'ಬನಿಯ'ನಿಗೂ ಈ ಸಿಂಧಿಯವರು ಚೌಕಾಶಿ ಮಾಡದೆ ಬಿಡಲಿಲ್ಲ. "ಆಗಲಿ. ತಾವು ಸಿಂಧಗೆ ಬಂದಾಗ ಕೊಡುತ್ತೇವೆ" (ಪುಟ ೧೬೦) ಎಂದು ಹೇಳಿ ತಮ್ಮ ಕಾಣಿಕೆಯನ್ನು ಹತ್ತುಸಾವಿರಕ್ಕೇ ನಿಲ್ಲಿಸಿದರು! ಆಯಿತು, ವ್ಯಾಪಾರದಲ್ಲಿ, ಚೌಕಾಶಿಯಲ್ಲಿ ಸರ್ವದಾ ಒಬ್ಬರೇ ಗೆಲ್ಲುವುದು ಸಾಧ್ಯವೆ? ಈ ವಿದ್ಯೆಯಲ್ಲಿ ಅನೇಕ ಚಾಣಾಕ್ಷರಿರುತ್ತಾರೆ. ಆದರೆ ಮಹಾತ್ಮರು ಪಾತ್ರಾಪಾತ್ರವರಿತು ತಮ್ಮ ಚೌಕಾಶಿಯ ದಾಳಿಯನ್ನು ಮಾಡುತ್ತಿದ್ದರು. ಒಬ್ಬ ಬಾಲಕ ಸಭೆಯ ನಡುವೆ ನುಗ್ಗಿಬಂದು ಮೂರುಕಾಸಿನ ಕಾಣಿಕೆ ಅರ್ಪಿಸಿದಾಗ ಅದನ್ನು ಅತ್ಯಂತ ಪ್ರಸನ್ನತೆಯಿಂದ ಸ್ವೀಕರಿಸಿ ಮುಗುಳುನಗೆ ಬೀರಿ ಬಾಲಕನನ್ನು ಹರಸಿದರಂತೆ!

ಮದರಾಸಿನ ಪ್ರವಾಸದ ಅಂತ್ಯದಲ್ಲಿ ತಮಗೆ ಕಾಣಿಕೆಯಾಗಿ ಬಂದಿದ್ದ ಪದಾರ್ಥಗಳನ್ನೆಲ್ಲ ಹರಾಜು ಹಾಕಲು ಹೊರಟಾಗ ಹಿಂದೀ ಪ್ರಚಾರಸಭೆಯ ಸತ್ಯನಾರಾಯಣರು ಅವುಗಳ ಬೆಲೆ ಹತ್ತುಸಾವಿರ ರೂಪಾಯಿಗಳೆಂದು ಅಂದಾಜು ಮಾಡಿದರಂತೆ. ಆದರೆ

ಗಾಂಧೀಜಿಯವರು ಅದನ್ನು ಸುತರಾಂ ಒಪ್ಪಲಿಲ್ಲ. "ಸತ್ಯನಾರಾಯಣರಿಗೆ ಬೆಲೆ ಏನು ಗೊತ್ತು? ಅವರು ನಿಮಗೆ ಓದಿ ಕಲಿಸುತ್ತಾರೆ ಅಷ್ಟೆ. ಪದಾರ್ಥಗಳ ಬೆಲೆ ನನಗೆ ಗೊತ್ತು. ನಾನು ಬನಿಯ." (ಪುಟ ೧೫೦) ಎಂದು ಹೇಳಿಕೆ ಹಾಕಿ ಅಲ್ಲಿದ್ದ ವರ್ತಕರನ್ನು ಸಂಬೋಧಿಸಿ "ಒಂದು ಲಕ್ಷ ರೂಪಾಯಿಗಳಿಗೆ ಇವನ್ನೆಲ್ಲ ಕೊಂಡುಕೊಂಡುಬಿಡಿ. ಹಿಂದೂಸ್ತಾನಿ ಪ್ರಚಾರಕ್ಕೆ ತೊಂಬತ್ತುಸಾವಿರ, ಹರಿಜನ ನಿಧಿಗೆ ಹತ್ತುಸಾವಿರ" (ಪುಟ ೧೫೦-೫೧) ಎಂದು ತೀರ್ಮಾನಿಸಿದರಂತೆ! ಅಷ್ಟು ಬೆಲೆಬಾಳುವ ಪದಾರ್ಥಗಳೆಂದರೆ ಮೂರು ಕೈಕೋಲುಗಳು, ಒಂದು ಗಜಲಕ್ಷ್ಮಿ ವಿಗ್ರಹ, ಒಂದು ಮುರಳೀಧರ ವಿಗ್ರಹ! ಗಾಂಧೀಜಿಯವರ ಸವಾಲಿಗೆ ಸಮರ್ಪಕವಾದ ಉತ್ತರ ನೀಡಲು ಆ ಧನಿಕರು ಅಂದು ಸಂಜೆಯ ತನಕ ಅವಕಾಶ ಬೇಡಬೇಕಾಯಿತು! ಅಲ್ಲಿ ಮುಖ್ಯವಾದದ್ದು ಆ ವಸ್ತುಗಳ ಬೆಲೆಯಲ್ಲ. ಅವು ಮಹಾತ್ಮಾ ಗಾಂಧೀಜಿಯವರ ಕೈ ಮುಟ್ಟಿದ್ದವೆಂಬುದೇ ಪ್ರಧಾನ ಆಕರ್ಷಣೆ. ಅದಕ್ಕಾಗಿ ಜನ ಅತ್ಯಂತ ಸಂತೋಷದಿಂದ ಹಣ ಸುರಿಯುತ್ತಿದ್ದರು. ಆ ಹಣ ಮಹಾತ್ಮರ ಕೈಸೇರಿ ರಾಷ್ಟ್ರಹಿತಕ್ಕೆ ವಿನಿಯೋಗವಾಗುವುದೆಂಬ ದೃಢ ವಿಶ್ವಾಸ ಎಲ್ಲ ಜನರಲ್ಲಿಯೂ ಬೇರೂರಿತ್ತು. ಅನೇಕ ಸಭೆಗಳಲ್ಲಿ ಮಹಿಳೆಯರು ತಮಗೆ ಅತ್ಯಂತ ಪ್ರಿಯವಾಗಿದ್ದ ಸ್ವರ್ಣಾಭರಣಗಳನ್ನೇ ನಿರಾಲೋಚನೆಯಿಂದ ತೆಗೆದು ಕೊಟ್ಟರು. ಇಂಥ ಅಪಾರ ತ್ಯಾಗ ಬುದ್ಧಿಯನ್ನು ಮೂಡಿಸಬಲ್ಲ ಮಹಾತ್ಮನ ಸಂದರ್ಶನ ಮಾಡಿದವರೇ ಧನ್ಯರು. ಆ ನಂಬಿಕೆ, ಆ ಭಕ್ತಿ ಗೌರವಗಳು ಜನರಲ್ಲಿ ಮೂಡಿಬರಲು ಕಾರಣರಾದ ಮಹಾತ್ಮರ ತಪಸ್ಸು, ತ್ಯಾಗ ಅಸಾಧಾರಣವಾದುವು. ಗಾಂಧೀಜಿಯವರಿಗೆ ಕೊಟ್ಟದ್ದು ರಾಷ್ಟ್ರಕ್ಕೇ ಕೊಟ್ಟಂತೆ ಎಂಬುದು ಎಲ್ಲರಿಗೂ ಮನವರಿಕೆಯಾಗಿತ್ತು. ಆ ಅಗ್ನಿನಾರಾಯಣನ ವಿಚಾರದಲ್ಲಿ ಯಾರು ಸಂದೇಹ ತಾಳಬೇಕು? ಸಹನೆ, ತ್ಯಾಗ, ಶಾಂತಿ, ಧರ್ಮ, ನೀತಿಗಳನ್ನು ತಾನು ಆಚರಿಸಿ ತೋರಿಸಿ ಇತರರಿಗೆ ಉಪದೇಶ ಮಾಡಿದ ಅಂಥಾ ಜನನಾಯಕ ಬೇರೊಬ್ಬ ಯಾರು? ಸ್ವತಂತ್ರ ಭಾರತಕ್ಕೆ ಅಂಥ ನಾಯಕನೊಬ್ಬ ಅಗತ್ಯವಾಗಿ ಬೇಕಲ್ಲವೆ?

ಗಾಂಧೀ ಮಹಾತ್ಮರು ದಕ್ಷಿಣಕ್ಕೆ ಬರಲಿ, ಉತ್ತರದಲ್ಲಿರಲಿ, ಅವರು ಎಲ್ಲಿದ್ದರೆ ಅಲ್ಲಿ ರಾಷ್ಟ್ರಹಿತಚಿಂತನೆಯಲ್ಲಿ ಆಸಕ್ತರಾದ ಜನ ಗುಂಪು ಕೂಡುತ್ತಾರೆ. ಅದು ಅನಿವಾರ್ಯ. ಮಹಾತ್ಮರು ಹಿಂದೂಸ್ತಾನಿ ಪ್ರಚಾರಕ್ಕಾಗಿ ಮದರಾಸಿಗೆ ಬಂದಾಗ ಅವರ ಜತೆಯಲ್ಲಿ ರಾಷ್ಟ್ರನಿರ್ಮಾಣ ಕಾರ್ಯಗಳಲ್ಲಿ ಮಗ್ನರಾಗಿದ್ದ ಅನೇಕ ಮುಖಂಡರೂ ಬಂದಿದ್ದರು. ಬಾಬು ರಾಜೇಂದ್ರಪ್ರಸಾದ್, ಥಕ್ಕರ್ ಬಾಪ, ಕಮಲನಯನ ಬಜಾಜ್, ಕುಮಾರಪ್ಪ, ಜಿ. ರಾಮಚಂದ್ರನ್ ಮೊದಲಾದವರನೇಕರು ಬಂದಿದ್ದರು. ಗ್ರಾಮ ಸುಧಾರಣೆ, ವಯಸ್ಕರ ಶಿಕ್ಷಣ, ಸಾಕ್ಷರತಾ ಪ್ರಚಾರ, ಹರಿಜನಸೇವೆ, ಪಾನನಿರೋಧ ಮುಂತಾದ ಹಲವು ಮುಖ್ಯ ವಿಚಾರಗಳಿಗೆ ಸಂಬಂಧಪಟ್ಟಂತೆ ಗೋಷ್ಠಿಗಳು ನಡೆದು ವಿಚಾರವಿನಿಮಯವಾಯಿತು. ಖಾದಿ ಪ್ರಚಾರದ ಕೆಲಸವಂತು ಮಹಾತ್ಮರಿಗೆ ಅತ್ಯಂತ ಪ್ರೀತಿಯ ವಿಚಾರ. ದಕ್ಷಿಣ ಭಾರತದ ನಾಲ್ಕು ಭಾಷಾ ಪ್ರಾಂತಗಳಾದ

ತಮಿಳು, ಕೇರಳ, ತೆಲುಗು ಮತ್ತು ಕನ್ನಡ ನಾಡುಗಳಿಗೆ ಸೇರಿದ ಖಾದಿ ಕೆಲಸಗಾರರ ಪ್ರತಿನಿಧಿಗಳು ಗಾಂಧೀಜಿಯವರ ಸನ್ನಿಧಿಯಲ್ಲಿ ಸಭೆ ಸೇರಿ ತಮ್ಮ ಅನೇಕ ಸಮಸ್ಯೆಗಳನ್ನು ವಿವರಿಸಿ ಹೇಳಿ ಪರಿಹಾರ ಕಂಡುಕೊಂಡರು. ಹೀಗೆ ಗಾಂಧೀಜಿಯವರಿದ್ದ ಕಡೆ ಸಮಸ್ತ ಭಾರತದ ಒಂದು ಸಣ್ಣ ಪ್ರಾತಿನಿಧಿಕ ಸಭೆಯೇ ಇರುತ್ತಿತ್ತು. ಆ ವಾರ್ಧಕ್ಯದಲ್ಲಿಯೂ ಮಹಾತ್ಮಾಜಿಯವರು ನಿರಂತರವಾಗಿ ಜನ ಹಿತಚಿಂತನೆ ಮಾಡುತ್ತ, ಬದುಕಿನ ಎಲ್ಲ ಕಾರ್ಯಕ್ಷೇತ್ರಗಳಲ್ಲಿಯೂ ಸ್ವದೇಶಿ, ಸ್ವಾಭಿಮಾನ, ಸತ್ಯ, ಅಹಿಂಸೆ, ಶಾಂತಿಗಳು ನೆಲಸುವಂತಾಗಬೇಕೆಂಬ ತೀವ್ರ ಅಭಿಲಾಷೆಯಿಂದ, ಕೂಲಿಕಾರರಿಂದ ತೊಡಗಿ ಕಲೆಗಾರರವರೆಗೆ ಎಲ್ಲ ವೃತ್ತಿಗಳ, ಎಲ್ಲ ದರ್ಜೆಗಳ ಜನಕ್ಕೂ ಉಪದೇಶ ನೀಡುತ್ತಿದ್ದರು. ರಾಷ್ಟ್ರಹಿತಚಿಂತನೆಯೇ ಅವರ ಜೀವದ ಜೀವವಾಗಿತ್ತು. ಅದರಲ್ಲಿ ಪ್ರಾಂತಭೇದ, ಭಾಷಾಭೇದ, ವರ್ಣಭೇದ, ಮತಭೇದ, ಯಾವುದಕ್ಕೂ ಎಡೆಯಿರಲಿಲ್ಲ.

ಈ ಗ್ರಂಥ ಮಹಾತ್ಮಾ ಗಾಂಧೀಜಿಯವರ ಜೀವಿತ ಕಾಲದ, ಭಾರತ ಸ್ವತಂತ್ರ ರಾಷ್ಟ್ರವಾಗುವುದಕ್ಕೆ ಸ್ವಲ್ಪ ಮುಂಚೆ ರಚಿತವಾಗಿದ್ದು, ಆ ಕಾಲದ ನಮ್ಮ ಜನರ ಜೀವನ ಸಮಸ್ಯೆಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತಿದೆ. ಆ ಸಮಸ್ಯೆಗಳ ಪರಿಹಾರಕ್ಕೆ ಮಹಾತ್ಮಾಜಿ ಸೂಚಿಸಿದ ಮಾರ್ಗೋಪಾಯಗಳ ನಿರೂಪಣೆಯೂ ಇಲ್ಲಿ ಇದೆ. ಈಗ ಭಾರತ ಸ್ವತಂತ್ರವಾಗಿ ಇಪ್ಪತ್ತಾರು ವರ್ಷಗಳೇ ಆದುವು. ಇಂದಿಗೂ ಆ ಕೆಲವು ಸಮಸ್ಯೆಗಳನ್ನು ಬಿಡಿಸಲಾಗಿಲ್ಲ. ಒಂದೆರಡು ಮುಖ್ಯ ವಿಚಾರಗಳಲ್ಲಿ ನಾವು ಗಾಂಧೀಮಾರ್ಗವನ್ನು ಬಿಟ್ಟು ಬಹಳ ದೂರ ಸರಿದಿರುವೆವೆಂಬ ಸಂಶಯ ತೋರುತ್ತಿದೆ. ಮೊಟ್ಟಮೊದಲನೆಯದಾಗಿ ಅಹಿಂಸೆಯ ಸೂತ್ರ. ಇಂದು ನಮ್ಮ ರಾಷ್ಟ್ರದಲ್ಲಿ ನಾನಾ ಬಗೆಯಾಗಿ ಹಿಂಸೆ ತಾಂಡವವಾಡುತ್ತಿದೆ. ಮಹಾತ್ಮರು ನಿರೂಪಿಸಿದ ಸತ್ಯಾಗ್ರಹ ಸೂತ್ರವನ್ನು ವಿಕೃತಗೊಳಿಸುವ ಪ್ರಕರಣಗಳೂ ನಡೆದಿವೆ. "ಸತ್ಯಾಗ್ರಹಿಯ ಹೃದಯದಲ್ಲಿ ಎದುರಾಳಿಯ ಮೇಲೆ ದ್ವೇಷವಿರಬಾರದು. ಹೋರಾಟದ ಕಾರಣ ನಿಜವಾಗಿರಬೇಕು. ಅಲ್ಪವಿಷಯವಾಗಬಾರದು" (ಪುಟ ೭೩) ಎಂಬ ಸೂತ್ರಗಳ ಉಲ್ಲಂಘನೆ ಪದೇ ಪದೇ ನಡೆದಿದೆ, ನಡೆಯುತ್ತಿದೆ. ರಾಜಕೀಯದಲ್ಲಿ ಇಂದು ಅಹಿಂಸೆಯ ಸ್ಥಾನವೇನು? "ಹಿಂಸಾಕೃತ್ಯಗಳಿಂದ ರಾಮರಾಜ್ಯ ನಮಗೆ ದೊರಕುವುದಿಲ್ಲ" (ಪುಟ ೯೧) ಎಂದು ರಾಷ್ಟ್ರಪಿತನು ಹೇಳಿದ ಹಿತೋಕ್ತಿಯನ್ನು ನಾವು ನೆನಪಿನಲ್ಲಿಟ್ಟುಕೊಂಡಿರುವೆವೆ? "ಅಹಿಂಸೆಯಿಂದಲೇ ಸ್ವರಾಜ್ಯ ಸಾಧ್ಯ .... ಅಹಿಂಸೆಯೇ ಸ್ವಾತಂತ್ರ್ಯ ಮಾರ್ಗ. ಇನ್ನೇನು, ಸ್ವಾತಂತ್ರ್ಯ ನಮ್ಮ ಕರಗತವಾಗುತ್ತಿದೆ. ಆದರೆ ಹಿಂಸಾಕೃತ್ಯಗಳಿಂದ ಅದನ್ನು ನಾವು ಕಳೆದುಕೊಳ್ಳುತ್ತೇವೆ" (ಪುಟ ೯೧) ಎಂಬ ಅವರ ಉಪದೇಶ ವಾಕ್ಯವನ್ನು ಈಗ ನಾವೆಲ್ಲ ಮನನಮಾಡಬೇಕಾಗಿದೆ. ಮತ್ತೆ ನಮ್ಮ ರಾಷ್ಟ್ರಜೀವನದಲ್ಲಿ ಅಹಿಂಸೆಗೆ ಮನ್ನಣೆ ಲಭಿಸಬೇಕಾಗಿದೆ.

ಇನ್ನು ಪಾನನಿರೋಧದ ವಿಚಾರ. ಮಹಾತ್ಮಾ ಗಾಂಧೀಜಿಯವರು ಮದ್ಯಪಾನ ನಿಷೇಧಕ್ಕೆ ಎಷ್ಟು ಮಹತ್ವವನ್ನು ಕೊಟ್ಟಿದ್ದರೆಂಬುದು ಎಲ್ಲರಿಗೂ ತಿಳಿದ ವಿಚಾರ

ಹರಿಜನರ ಉದ್ಧಾರಕ್ಕೆ ಇದು ಅತ್ಯಗತ್ಯವಾದ ಕಾರ್ಯವೆಂದು ಅವರು ನಂಬಿದ್ದರು. ಅನೇಕ ವರ್ಣೀಯರಿಗೂ ಇದು ತಾರಕ ಮಾರ್ಗವೆಂಬುದನ್ನು ಅವರು ಮನಗಂಡಿದ್ದರು. ಮದ್ಯಪಾನವನ್ನಷ್ಟೇ ಅಲ್ಲದೆ ಬೀಡಿ, ಚುಟ್ಟಾ ಮುಂತಾದುವುಗಳ ಸೇವನೆಯನ್ನೂ ಅವರು ತೀವ್ರವಾಗಿ ವಿರೋಧಿಸಿದರು. ಇದರಿಂದ ಬಣ್ಣಿಸಲಾಗದಷ್ಟು ಕೆಡಕು ರಾಷ್ಟ್ರಕ್ಕೆ ಒದಗುವುದೆಂದು ಅವರು ತಿಳಿಯಹೇಳಿದರು. ದುರ್ದೈವದಿಂದ ಇಂದು ಪಾನನಿರೋಧವನ್ನು ಕಾಂಗ್ರೆಸ್ ಸರ್ಕಾರಗಳೇ ರದ್ದುಪಡಿಸಿವೆ. ಹಿಂದೆ, ಎಂದೂ ಇಲ್ಲದಿದ್ದ ಪ್ರಮಾಣದಲ್ಲಿ ಇಂದು ನಮ್ಮ ರಾಷ್ಟ್ರದಲ್ಲಿ 'ವಿದೇಶಿ' ಮದ್ಯದ ಬಳಕೆಯಾಗುತ್ತಿದೆ. ಅದನ್ನು ನಮ್ಮ ದೇಶದಲ್ಲಿಯೇ ತಯಾರಿಸಲಾಗುತ್ತಿದೆಯೆಂಬ ಸಮಜಾಯಿಷಿಯನ್ನು ಕೊಡುವುದಕ್ಕೂ ಸಂಬಂಧಪಟ್ಟವರು ಸ್ವಲ್ಪವೂ ಹಿಂತೆಗೆದಿಲ್ಲ. ಸ್ವಂತ ಇಚ್ಛೆಯಿಂದ ಪಾನನಿರೋಧವನ್ನು ಜಾರಿಗೆ ತಂದ ಜನರೂ ಇಂದು ಅದನ್ನು ಮರೆತಂತಿದೆ. ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ಚಳವಳಿ ನಡೆಸಿ ಸೆರೆಮನೆಗೆ ಹೋದವರು ಎಷ್ಟೋ ಜನ—ಸ್ವಾತಂತ್ರ್ಯ ಪೂರ್ವದಲ್ಲಿ! ಈಚಲುಮರ ಕಡಿದು ಮದ್ಯದ ಉತ್ಪತ್ತಿಗೇ ಕುಂದಕ ತರಬೇಕೆಂದು 'ಅರಣ್ಯ ಸತ್ಯಾಗ್ರಹ' ಮಾಡಿ ಲಾಠಿ ಏಟು, ಸೆರೆಮನೆವಾಸ, ಮೊದಲಾದುವನ್ನೆಲ್ಲ ಅನುಭವಿಸಿದ ದೇಶಭಕ್ತರು ಇಂದು ತಮ್ಮ ಧ್ಯೇಯನಾದವನ್ನು ಬದಿಗೊತ್ತಿದ ನಮ್ಮ ಅವಿವೇಕಕ್ಕೆ ಎಷ್ಟು ಸಂಕಟಪಟ್ಟಿರಬಹುದೆಂಬ ಕಲ್ಪನೆಯೂ ಈಗ ನಮ್ಮ ಮನಸ್ಸಿಗೆ ಬರುತ್ತಿಲ್ಲ.

ಇನ್ನು ಬೀಡಿ, ಚುಟ್ಟಾ, ಸಿಗರೇಟುಗಳ ಇಂದಿನ ಹಾವಳಿಯನ್ನು ಯಾರು ಅರಿಯರು? ಈಗ ಚಿಕ್ಕ ಹುಡುಗರೂ ನಿರಾತಂಕವಾಗಿ ರಾಜಬೀದಿಗಳಲ್ಲೇ ಹೊಗೆಸೇದುತ್ತ ವಿಹರಿಸುತ್ತಿರುವುದನ್ನು ಯಾರಾದರೂ ಗಮನಿಸಬಹುದು. ಬಾಲಕರು, ಯುವಕರು, ಈ ದುಶ್ಚಟಕ್ಕೆ ಬಲಿಬಿದ್ದು ಜನತೆಯ ದೇಹದಾರ್ಢ್ಯಕ್ಕೇ ತೀವ್ರ ಹಾನಿಯೊದಗಿದೆಯೆಂಬುದನ್ನು ನಾವು ಇನ್ನೂ ಮನಗಂಡಿಲ್ಲ. "Smoking is a dirty habit. It is worse than drink." ("ಹೊಗೆ ಸೇದುವುದು ಕೊಳಕು ಅಭ್ಯಾಸ. ಅದು ಮದ್ಯಪಾನಕ್ಕಿಂತ ಕೆಟ್ಟದ್ದು") ಎಂದು ಮಹಾತ್ಮಾ ಗಾಂಧಿಯವರು ಮೈಸೂರು ಮಹಾರಾಜ ಕಾಲೇಜಿನ ಕ್ರಿಕೆಟ್ ಬಯಲಿನಲ್ಲಿ ನಡೆದ ಮಹಾಸಭೆಯಲ್ಲಿ ಹೇಳಿದ ಮಾತು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿದೆ. ಗಾಂಧೀ ಜಯಂತಿಯನ್ನು ಭಕ್ತಿಯಿಂದ ಆಚರಿಸುವ ನಾವು ಆ ಪುಣ್ಯಪುರುಷನು ಹೇಳಿದ ಈ ಆರೋಗ್ಯಸೂತ್ರಗಳನ್ನಾದರೂ ಪರಿಪಾಲಿಸಬೇಡವೆ ?

ಹರಿಜನೋದ್ಧಾರ, ಅಲ್ಲ, ಹರಿಜನಸೇವೆ ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾದ ಕಾರ್ಯ. ಅವರು ಇದಕ್ಕಾಗಿ ಭಂಗಿಗಳ ನಿವಾಸಗಳ ನಡುವೆ ವಾಸ ಮಾಡುವುದಕ್ಕೂ ಹಿಂದೆಗೆಯಲಿಲ್ಲ. "ಹರಿಜನರೆಲ್ಲರ ಉನ್ನತಿಗಾಗಿ ಎಲ್ಲರೂ ದುಡಿಯಬೇಕು" (ಪುಟ ೧೩೧); "ಹರಿಜನರು ಅಹಿಂಸಾಮಾರ್ಗದಿಂದ ಹೋರಾಡಿ ತಮ್ಮ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಬೇಕು" (ಪುಟ ೧೩೧); "ಅಂತರ ಜಾತೀಯ ಭೋಜನ, ವಿವಾಹ ಇವು

ಸ್ವಾತಂತ್ರ್ಯವೆಂದು ನೀವು ಭಾವಿಸುವುದಾದರೆ ತಪ್ಪು" (ಪುಟ ೧೩೧-೩೨); "ಹರಿಜನನಿಧಿಗೆ ಹಣ ಕೊಡಿ. ಆದರೆ ಬರಿಯ ಹಣದಿಂದ ಏನೂ ಆಗುವುದಿಲ್ಲ. ಹೃದಯ ಪರಿವರ್ತನೆಯಾದ ಹೊರತು ಸ್ವಾತಂತ್ರ್ಯ ಸಾಧ್ಯವಿಲ್ಲ." (ಪುಟ ೧೭೪) ಎಂಬ ಇವೇ ಮೊದಲಾದ ಗಾಂಧೀಜಿ ಮತ್ತು ಅವರ ಸಹಕಾರ್ಯಕರ್ತರ ಮಹಾವಾಕ್ಯಗಳು ಈ ಪ್ರವಾಸ ಕಥನದಲ್ಲಿ ಬಂದಿವೆ. ಈ ಸೂಕ್ತಿಗಳು ಸ್ವಾತಂತ್ರ್ಯಾನಂತರದಲ್ಲಿ ಕೇವಲ ಸಮುಚಿತವಾಗಿವೆ, ಅಗತ್ಯವಾಗಿಯೇ ಇವೆ. ಈ ನಿಟ್ಟಿನಲ್ಲಿ ನಾವು ಇನ್ನೂ ಬಹುದೂರ ನಡೆಯಬೇಕಾಗಿದೆ.

ಈಗ ಅತ್ಯಂತ ವಿವಾದಕ್ಕೆ ಕಾರಣವಾಗಿರುವ ಹಿಂದುಸ್ತಾನಿ ಪ್ರಚಾರದ ಆವಶ್ಯಕತೆಯನ್ನು ಕುರಿತು ಮಹಾತ್ಮರು ಹೇಳಿದ ಅನೇಕ ವಾಕ್ಯಗಳು ಈ ಕೃತಿಯಲ್ಲಿ ಅಡಕವಾಗಿವೆ. ದಕ್ಷಿಣ ಭಾರತದವರು ಅಗತ್ಯವಾಗಿ ಹಿಂದುಸ್ತಾನಿ ಕಲಿಯಲೇಬೇಕೆಂಬುದು ಗಾಂಧೀಜಿಯವರ ನಿಶ್ಚಿತವಾದ ಅಭಿಪ್ರಾಯವಾಗಿತ್ತು. ಆದರೆ ಅದು ಕೇವಲ ಸಂಪರ್ಕ ಸಾಧನೆಗಾಗಿ; ಪರಸ್ಪರ ತಿಳಿವಳಿಕೆಗಾಗಿ. ಉತ್ತರದವರೂ ಒಂದು ದಾಕ್ಷಿಣಾತ್ಯ ಭಾಷೆಯನ್ನಾದರೂ ಕಲಿಯುವುದು ಅಗತ್ಯವೆಂಬ ಮಾತೂ ಇಲ್ಲಿ ಬಂದಿದೆ. ದಕ್ಷಿಣದಲ್ಲಿ ಹಿಂದೂಸ್ತಾನಿ ಪ್ರಚಾರವಾದಷ್ಟು ದೊಡ್ಡ ಪ್ರಮಾಣದಲ್ಲಿ ಉತ್ತರದಲ್ಲಿ ಎಲ್ಲಿಯೂ ತಮಿಳು, ತೆಲುಗು, ಕನ್ನಡ, ಮಲೆಯಾಳಿ ಭಾಷೆಗಳ ಪ್ರಚಾರ ನಡೆದಿಲ್ಲ. ಅದಕ್ಕೆ ರಾಷ್ಟ್ರನಾಯಕರು ಏನೇನೂ ಮಹತ್ವ ಕೊಟ್ಟಿಲ್ಲವೆಂಬುದು ಸುವೇದ್ಯವಾಗಿದೆ. ಈ ಕಾರಣದಿಂದಲೇ ಹಿಂದೀ ಭಾಷೆ (ಈಗ 'ಹಿಂದುಸ್ತಾನಿ' ಎಂಬ ಮಾತನ್ನು ಕೈಬಿಡಲಾಗಿದೆ)ಯನ್ನು ತಮ್ಮ ಮೇಲೆ ಬಲವಂತದಿಂದ ಹೇರಲಾಗುತ್ತಿದೆಯೆಂಬ ಭಾವನೆ ಮೂಡಿ ಅಸಮಾಧಾನ, ಅಸಂತೃಪ್ತಿಗಳುಂಟಾಗಿ ಹಿಂದೀ ಪ್ರಚಾರಕ್ಕೆ, ಶಾಲೆ ಕಾಲೇಜುಗಳಲ್ಲಿ ಹಿಂದಿ ಶಿಕ್ಷಣ ನಡೆಸುವ ವಿಚಾರಕ್ಕೆ, ವಿರೋಧ ಆಗಾಗ ವ್ಯಕ್ತವಾಗಿದೆ. ಹಿಂದೀ ಕೇವಲ ಸಂಪರ್ಕ ಭಾಷೆಯಾಗಿರಬೇಕೇ ಹೊರತು ಭಾರತದ ಮಿಕ್ಕೆಲ್ಲ ಭಾಷೆಗಳನ್ನೂ ಮೆಟ್ಟಿ ತಾನೇ ತಾನಾಗಿ ವಿಜೃಂಭಿಸುವ ಆಕಾಂಕ್ಷೆ ಸಲ್ಲದು. ಅಧಿಕಾರ ಬಲದಿಂದ, ಸಂಖ್ಯಾಬಾಹುಳ್ಯದ ಒಂದೇ ಕಾರಣವನ್ನು ಮುಂದೆ ಮಾಡಿ ಉತ್ತಮ ಸಾಹಿತ್ಯವುಳ್ಳ ಇತರ ಹಲವು ಭಾರತೀಯ ಭಾಷೆಗಳನ್ನು ಅಲಕ್ಷಿಸಿ ಸಮಸ್ತ ಭಾರತೀಯರ ಮೇಲೂ ಹಿಂದೀ ಭಾಷೆಯನ್ನು ನಿರ್ಬಂಧದಿಂದ ಹೇರಬಾರದು. ಹಾಗೆ ಮಾಡಿದರೆ ಹಿಂದೀ ಮಾತೃಭಾಷೆಯಲ್ಲದ ಜನಕ್ಕೆ ರಾಜಕೀಯ, ಶಿಕ್ಷಣ, ಆಡಳಿತ, ಮುಂತಾದ ಕ್ಷೇತ್ರಗಳಲ್ಲಿ ತೀವ್ರವಾದ ಹಾನಿ ಉಂಟಾಗುವುದೆಂದೂ ಅವರೆಲ್ಲ ರಾಷ್ಟ್ರದಲ್ಲಿ ಎರಡನೆ ವರ್ಗದ ನಾಗರಿಕರಾಗುವರೆಂದೂ ಅನೇಕ ಭಾಷಾಭಿಮಾನಿಗಳು ವಾದಿಸುವಂತೆ ಆಯಿತು. ಹಿಂದೀ ಪ್ರಚಾರ ಸಾಕಷ್ಟು ಆಗುವವರೆಗೆ, ಹಿಂದೀತರ ಪ್ರಾಂತಗಳು ತಾವಾಗಿ ಕೋರುವವರೆಗೆ ಕೇಂದ್ರ ಸರ್ಕಾರದಲ್ಲಿ ಇಂಗ್ಲಿಷ್ ಆಡಳಿತ ಭಾಷೆಯಾಗಿ ಮುಂದುವರೆಯಬೇಕೆಂದು ಪ್ರಜೆಗಳೂ ಪ್ರಜಾಪ್ರತಿನಿಧಿಗಳೂ ಸಂಸತ್ತಿನಲ್ಲಿಯೂ ಹೊರಗಡೆಯೂ ವಾದಿಸಿದ್ದು ಎಲ್ಲರಿಗೂ ತಿಳಿದ ವಿಚಾರ. ಈ ಭಾಷಾಗೊಂದಲ ರಾಷ್ಟ್ರದ ಅನೇಕ ವಿಚಾರಪರರಿಗೆ,

ತೀವ್ರವಾದ ಮನೋವೇದನೆಯನ್ನೇ ಉಂಟುಮಾಡಿವೆ. ಪ್ರಾಂತಭಾಷೆ, ಮಾತೃಭಾಷೆ, ರಾಷ್ಟ್ರಭಾಷೆ—ಇವುಗಳ ಪರಸ್ಪರ ಸಂಬಂಧ ಹೇಗಿರಬೇಕು, ಯಾವ ಭಾಷೆಗೆ ಎಷ್ಟು ಪ್ರಾಧಾನ್ಯ ಸಲ್ಲಬೇಕು ಎಂಬ ವಿಚಾರಗಳಲ್ಲಿ ಇನ್ನೂ ಏಕಾಭಿಪ್ರಾಯ ಸಿದ್ಧಿಸಿಲ್ಲ. ಈ ಗಹನವಾದ ವಿಚಾರದ ಬಗ್ಗೆ ಮಹಾತ್ಮಾ ಗಾಂಧೀಜಿಯವರು, ಅವರ ಕೆಲವರು ಅನುಯಾಯಿಗಳು, ಈ ದಕ್ಷಿಣ ಯಾತ್ರೆಯ ಸಂದರ್ಭದಲ್ಲಿ ಆಡಿದ ಮಾತುಗಳು ಈ ಗ್ರಂಥದಲ್ಲಿ ಅಲ್ಲಲ್ಲಿ ಬಂದಿವೆ. ಅವುಗಳಲ್ಲಿ ಮುಖ್ಯವಾದುವನ್ನು ಮನನಮಾಡುವುದು ಅತ್ಯಗತ್ಯವೆಂದು ನನ್ನ ಭಾವನೆ. ಅದಕ್ಕಾಗಿ ಅವುಗಳನ್ನು ಇಲ್ಲಿ ಎತ್ತಿ ಬರೆಯುತ್ತಿದ್ದೇನೆ :

"ಪ್ರಾಂತ್ಯ ವ್ಯವಹಾರಗಳನ್ನು ಪ್ರಾಂತ್ಯಭಾಷೆಯಲ್ಲಿ ಮಾಡಿಕೊಳ್ಳಬಹುದು. ಆದರೆ ಅಖಿಲ ಭಾರತ ಮತ್ತು ಅಂತರ ಪ್ರಾಂತೀಯ ವ್ಯವಹಾರಗಳಿಗೆ ಹಿಂದುಸ್ತಾನಿ ಇರಬೇಕು" (ಪುಟ ೧೩೬)

"ದಕ್ಷಿಣ ದೇಶವೆಲ್ಲಾ ಹಿಂದುಸ್ತಾನಿಮಯವಾಗುವವರೆಗೆ ನೀವು ವಿಶ್ರಾಂತಿ ಹೊಂದಕೂಡದು." (ಪುಟ ೧೫೯)

"ಈಚೆಗೆ ಹಿಂದಿ ಮತ್ತು ಉರ್ದು ಇವುಗಳ ವ್ಯತ್ಯಾಸವೂ ಹೆಚ್ಚಾಗಿದೆ. ಇವೆರಡರ ಮಿಳನದಿಂದ ನಮಗೆ ಬೇಕಾದ ರಾಷ್ಟ್ರಭಾಷೆ ಹಿಂದುಸ್ತಾನಿಯನ್ನು ನಾವು ಸೃಷ್ಟಿಸಿಕೊಳ್ಳಬೇಕಾಗಿದೆ." (ಪುಟ ೧೭೮)

"ಭಾರತಕ್ಕೆ ಒಂದು ಸಾಮಾನ್ಯ ಭಾಷೆ ಬೇಕಾಗಿದೆ. ೨೩ ಕೋಟಿ ಜನರು ಮಾತನಾಡುವ ಹಿಂದುಸ್ತಾನಿಯಲ್ಲದೆ ಮತ್ತಾವುದೂ ರಾಷ್ಟ್ರಭಾಷೆಯಾಗಲು ಸಾಧ್ಯವಿಲ್ಲ." (ಪುಟ ೧೭೭)

"ದಕ್ಷಿಣ ದೇಶದವರು ಎಲ್ಲಕ್ಕೂ ಶಕ್ತರು. ಸ್ವಾಭಾವಿಕವಾಗಿ ಬುದ್ಧಿವಂತರು ... ಇಂತಹವರಿಗೆ ಹಿಂದುಸ್ತಾನಿ ಕಲಿಯುವುದು ಕಷ್ಟವಲ್ಲ." (ಪುಟ ೧೭೭)

"ಇಂಗ್ಲಿಷ್ ಭಾಷೆ ನಮಗೆ ಚಿನ್ನದ ಸಂಕೋಲೆ. ಮಾತೃಭಾಷೆ ನಮ್ಮ ತಾಯಿಯಿದ್ದಂತೆ. ಅದನ್ನು ಬಿಟ್ಟು ಇಂಗ್ಲಿಷನ್ನು ಅನುಸರಿಸುವುದು ನಮ್ಮ ತಾಯಿಗೆ ಮೋಸ ಮಾಡಿದಂತೆ." (ಪುಟ ೧೮೬)

"ಇಂಗ್ಲಿಷನ್ನು ನಿಮ್ಮ ಭಾಷೆಯನ್ನಾಗಿ ಮಾಡಿಕೊಂಡುದರಿಂದ ಅದು ನಿಮ್ಮ ಪರಾಧೀನತೆಯನ್ನು ಬಲಪಡಿಸುತ್ತಿರುವುದೆಂಬುದನ್ನು ಮರೆಯಬೇಡಿ." (ಪುಟ ೧೭೭)

"ಭಾರತೀಯರ ಹೆಸರುಗಳು ಸಹ ಇಂಗ್ಲಿಷ್ ಆಕಾರಕ್ಕೆ ಬರುತ್ತಿವೆ. ಇದು ನಿಜವಾದ ಗುಲಾಮಗಿರಿ." (ಪುಟ ೧೭೬)

"ಹಿಂದೀ ಪ್ರಚಾರಕರು ದೇಶಭಾಷೆಯನ್ನು ಕಲಿಯಬೇಕು. ದೇಶ ಭಾಷೆಗೆ ಹಿಂದುಸ್ತಾನಿಯಿಂದ ಹಾನಿಯಾಗದಂತೆ ನೋಡಿಕೊಳ್ಳಬೇಕು." (ಪುಟ ೧೭೭)

"ರಾಷ್ಟ್ರಭಾಷೆಗೂ ಪ್ರಾಂತಭಾಷೆಗಳಿಗೂ ವಿರೋಧವಿರಬೇಕಾದುದಿಲ್ಲ. ರಾಷ್ಟ್ರಭಾಷೆ ದೇಶಭಾಷೆಗಳು ಒಟ್ಟಾಗಿ ಒಂದರ ಕೈಯನ್ನೊಂದು ಹಿಡಿದುಕೊಂಡು ಬೆಳೆಯಬೇಕು." (ಪುಟ ೧೧೩)

"ನಮ್ಮ ಪೂರ್ಣ ವಿಕಾಸಕ್ಕೆ ನಮ್ಮ ಮಾತೃಭಾಷೆಯ ಬೆಳವಣಿಗೆ ಆವಶ್ಯಕ. ನಮ್ಮ ಸಂಸ್ಕೃತಿ ಬೆಳೆಯಬೇಕಾದರೆ, ನಮ್ಮ ಹೃದಯದ ಆಂತರಂಗಿಕವಾದ ಆಲೋಚನೆಗಳನ್ನು ಪ್ರಕಟಿಸಬೇಕಾದರೆ, ನಮಗೆ ನಮ್ಮ ಮಾತೃಭಾಷೆಯೇ ಬೇಕು....ದೇಶಭಾಷೆಗಳಲ್ಲಿ ಬೇಕಾದಂತೆ ಸಾಹಿತ್ಯವಿದೆ. ಅವು ಕಾಲಚಕ್ರದ ತುಳಿತಕ್ಕೆ ಸಿಕ್ಕಿಯೂ ಉಳಿದುಕೊಂಡಿವೆ. ಈ ಸಾಹಿತ್ಯವನ್ನು ಉಳಿಸಿಕೊಳ್ಳುವುದು ಮಾತ್ರವೇ ಅಲ್ಲ, ಮುಂದೆ ಬೆಳೆಸುವುದೂ ನಮ್ಮ ಕರ್ತವ್ಯ." (ಪುಟ ೧೧೨–೧೧೩)

"ಪ್ರತಿಯೊಬ್ಬನೂ ತನ್ನ ದೇಶಭಾಷೆಯನ್ನು ಚೆನ್ನಾಗಿ ಅರಿತವನಾಗಿರಬೇಕು. ಇವರ ಜತೆಗೆ ಉತ್ತರದವರು ಯಾವುದಾದರೂ ಒಂದು ದಕ್ಷಿಣದ ಭಾಷೆಯನ್ನೂ ದಕ್ಷಿಣದವರು ರಾಷ್ಟ್ರಭಾಷೆಯನ್ನೂ ಕಲಿಯುವುದು ಒಳ್ಳೆಯದು." (ಪುಟ ೧೧೩)

ಈ ಸೂಕ್ತಿಮುಕ್ತಾವಳಿಯನ್ನು ಗಮನಿಸಿದಾಗ ರಾಷ್ಟ್ರಭಾಷೆ ಪ್ರಾಂತಭಾಷೆಗಳ ಪರಸ್ಪರ ಸಂಬಂಧ ನಿರ್ಣಯದಲ್ಲಿರುವ ತೊಡಕುಗಳ ಅರಿವಾಗುತ್ತದೆ. ಈ ಎಲ್ಲ ತೊಡಕುಗಳನ್ನೂ ಸಮಂಜಸವಾಗಿ ಬಿಡಿಸಿಕೊಳ್ಳುವುದರಲ್ಲೇ ನಮ್ಮ ಜಾಣತನವಿದೆ. ವೈಮನಸ್ಯಗಳಿಗೆ ಎಡೆಗೊಡದೆ ಈ ಗೋಜನ್ನು ಎಷ್ಟು ಬೇಗ ಬಿಡಿಸಿಕೊಂಡರೆ ಅಷ್ಟು ಮೇಲು.

ಗಾಂಧೀಜಿಯವರ ಬರಹಗಳು

'ಆತ್ಮಕಥೆ ಅಥವಾ ಸತ್ಯಾನ್ವೇಷಣೆ'

ಪ್ರಧಾನ್ ಗುರುದತ್ತ

೧

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಅವರ ಎಪ್ಪತ್ತನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಸನ್ಮಾನಿಸುವ ಸಲುವಾಗಿ ಹೊರತರಲಿರುವ ಅಭಿನಂದನ ಗ್ರಂಥಕ್ಕೆ ಗೊರೂರರು ಅನುವಾದಿಸಿರುವ ಗಾಂಧೀಜಿಯವರ 'ಆತ್ಮಕಥೆ'ಯ ವಿಮರ್ಶೆಯನ್ನೊಳಗೊಂಡಂಥ ಲೇಖನವೊಂದನ್ನು ಬರೆದುಕೊಡಬೇಕೆಂದು ಪ್ರಧಾನ ಸಂಪಾದಕರು ನನಗೆ ಸೂಚನೆ ಕೊಟ್ಟಾಗ ನಾನು ತುಂಬ ಸಂತೋಷಪಟ್ಟೆ. ಕನ್ನಡ ನಾಡು ನುಡಿಗಳಿಗೆ ಬಹುಮುಖವಾದ ಸೇವೆಯನ್ನು ಸಲ್ಲಿಸಿ ಸ್ತುತ್ಯರೂ ಪೂಜ್ಯರೂ ಆಗಿರುವ ಗೊರೂರರನ್ನು ಬಹುವಾಗಿ ಮೆಚ್ಚಿಕೊಂಡಿರುವ ಸಹಸ್ರ ಸಹಸ್ರ ಕನ್ನಡಿಗರಲ್ಲಿ ನಾನೂ ಒಬ್ಬ. ಗೊರೂರರು ಹಲವಾರು ಬಗೆಯ ಗ್ರಂಥಗಳ ಭಾಷಾಂತರಕಾರರಾಗಿ ಸೇವೆಯನ್ನು ಸಲ್ಲಿಸಿರುವ ಹಾಗೂ ಗಾಂಧೀಜಿಯವರ 'ಆತ್ಮಕಥೆ'ಯನ್ನು ಅನುವಾದಿಸಿರುವ ವಿಚಾರ ನನಗೆ ತಿಳಿದಿತ್ತು. ಇಂಗ್ಲಿಷ್ ಆವೃತ್ತಿಯನ್ನು ಓದಿದ್ದೆನಾದರೂ 'ಆತ್ಮಕಥೆ'ಯ ಕನ್ನಡ ಆವೃತ್ತಿಗಳನ್ನು ನಾನು ಈ ಮೊದಲು ಓದಿರಲಿಲ್ಲ. ಈ ನೆಪದಲ್ಲಾದರೂ 'ಆತ್ಮಕಥೆ'ಯ ಕನ್ನಡ ಆವೃತ್ತಿಗಳನ್ನು ಓದುವ ಅವಕಾಶ ದೊರೆತದ್ದು ನನಗೆ ತುಂಬ ಸಂತೋಷವನ್ನುಂಟುಮಾಡಿತು. ಈ ಅವಕಾಶ ಅನುವಾದಗಳ ತೌಲನಿಕ ಪರೀಕ್ಷೆಗೂ ಎಡೆಮಾಡಿಕೊಟ್ಟುದರಿಂದ ಈ ಅಧ್ಯಯನ ವೈಯಕ್ತಿಕವಾಗಿ ನನಗೆ ತುಂಬ ಉಪಕಾರಿಯೂ ಆಗಿ ಪರಿಣಮಿಸಿದೆ. ಇಂಥ ಅವಕಾಶವನ್ನು ಒದಗಿಸಿಕೊಟ್ಟದ್ದಕ್ಕಾಗಿ ಈ ಅಭಿನಂದನ ಗ್ರಂಥದ ಸಂಪಾದಕರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸಬೇಕು.

೨

ಭರತಖಂಡದ—ಅಷ್ಟೇ ಏಕೆ, ವಿಶ್ವದ—ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಇತಿಹಾಸ ಕಂಡು ಅರಿತಿರುವ ಮಾನವತೆಯ ಮಹಾನ್ ಆರಾಧಕರಲ್ಲಿ ಗಾಂಧೀಜಿಯವರೂ ಒಬ್ಬರು. ಬುದ್ಧ ಕ್ರಿಸ್ತರ ಜ್ಯೋತಿಶ್ರೇಣಿಯನ್ನು ಸೇರಿರುವ ಮಹಾತ್ಮರು; ಮಾನವ ಚೇತನದ ಸಾಧನೆಯ ಆಯಾಮವನ್ನು ವಿಸ್ತರಿಸಿರುವ ಮಹಾಮಾನವರು; ಜನತಾ ಜನಾರ್ಧನನ ಸೇವೆಗಾಗಿ ತಮ್ಮ ಬಾಳನ್ನು ಮುಡಿಪಾಗಿಟ್ಟು, ಸೇವೆಯ ಮೂಲಕವೇ ದೈವತ್ವದ ನೆಲೆಗೇರಿದ ಪರಮಪೂಜ್ಯರು; ಅಹಿಂಸೆಯ ಎದುರಿನಲ್ಲಿ ಹಿಂಸೆಯ ವಿಕಟಾಟ್ಟಹಾಸವೂ ಮುಗ್ಧ ಶಿಶುವಿನ ತೊದಲುಲಿಯಾಗಿ ಪರಿಣಮಿಸುತ್ತದೆಂಬುದನ್ನು ಜಗತ್ತಿಗೆ ಸಾರಿ ಹೇಳಿದ, ತೋರಿಸಿಕೊಟ್ಟ ಪ್ರವಾದಿ, ಪವಾಡಪುರುಷ; ಭಾರತೀಯರ ಪಾರತಂತ್ರ್ಯದ ಶೃಂಖಲೆಯನ್ನು ಕಿತ್ತೊಗೆದ ಸ್ವಾತಂತ್ರ್ಯ ಶಿಲ್ಪಿ; ಜೀವಿತಾವಧಿಯಲ್ಲಿಯೇ ಜಗದ್ವಂದ್ಯರಾಗಿ ಪರಿಣಮಿಸಿದ ಆದರ್ಶಜೀವಿ. ಗಾಂಧೀಜಿಯವರ ಬದುಕು ಇಷ್ಟು ಮಹಿಮಾಪೂರ್ಣವಾದುದಕ್ಕೆ ಕಾರಣವೇನೆಂಬುವನ್ನು ರವೀಂದ್ರರು ತಮ್ಮ ಒಂದು ಲೇಖನದಲ್ಲಿ ಈ ರೀತಿ ವಿಶ್ಲೇಷಿಸಿದ್ದಾರೆ: "ಎಲ್ಲ ರಾಷ್ಟ್ರಗಳಲ್ಲಿರುವಂತೆ ಭಾರತದಲ್ಲಿಯೂ ದೇಶಭಕ್ತರಿದ್ದಾರೆ. ಗಾಂಧೀಜಿ ದೇಶಕ್ಕಾಗಿ ಎಷ್ಟು ತ್ಯಾಗಮಾಡಿದರೊ ಅಷ್ಟೇ ತ್ಯಾಗಮಾಡಿದವರೂ, ಗಾಂಧೀಜಿ ಸಹಿಸಬೇಕಾಗಿ ಬಂದುದಕ್ಕಿಂತಲೂ ತೀವ್ರತರವಾದ ಶಿಕ್ಷೆಗಳನ್ನು ಅನುಭವಿಸಿದವರೂ ಇದ್ದಾರೆ. ಧಾರ್ಮಿಕ ಕ್ಷೇತ್ರವನ್ನು ತೆಗೆದುಕೊಂಡರೂ ಅಷ್ಟೆ. ಈ ದೇಶದ ಸಂನ್ಯಾಸಿಗಳ ತಪೋಜೀವನದ ಕ್ಲಿಷ್ಟತರ ಕಾರ್ಯಾಚರಣೆಗಳಿಗೆ ಹೋಲಿಸಿದರೆ ಗಾಂಧೀಜಿಯವರ ಜೀವನ ಅಷ್ಟೇನೂ ಕಷ್ಟತರವಾಗಿರಲಿಲ್ಲವೆಂದೇ ತೋರುತ್ತದೆ. ಆದರೆ, ಈ ದೇಶಭಕ್ತರೆಲ್ಲ ಕೇವಲ ದೇಶಭಕ್ತರು; ಅದಕ್ಕಿಂತ ಹೆಚ್ಚೇನೂ ಇಲ್ಲ. ಈ ಸಂನ್ಯಾಸಿಗಳು ಕೇವಲ ಆಧ್ಯಾತ್ಮಿಕ ಕ್ರೀಡಾಪಟುಗಳು; ತಮ್ಮ ವಿಶಿಷ್ಟ ಗುಣಗಳಿಂದಲೇ ಬದ್ಧರಾಗಿ ಮಾನವ ಮಾತ್ರರಾಗಿಬಿಟ್ಟಿರುವ ವ್ಯಕ್ತಿಗಳು. ಆದರೆ, ಈ ವ್ಯಕ್ತಿ ತನ್ನ ಗುಣಗಳನ್ನು ಮೀರಿ ನಿಂತಿದ್ದಾನೆ; ಆ ಗುಣಗಳಷ್ಟೇ ಹಿರಿಯನಾಗಿಬಿಟ್ಟಿದ್ದಾನೆ."[1] ಇಂಥ ವ್ಯಕ್ತಿಗಳು ಯಾವುದೇ ದೇಶಕ್ಕೆ ಹೆಮ್ಮೆಯ ಆಸ್ತಿ. ಶತಶತಮಾನಗಳ ಕಾಲ ಅವರು ನಾಡಿಗೆ ದಾರಿದೀಪವಾಗಿರುತ್ತಾರೆ. ಅವರ ಜೀವನ, ಸಾಧನೆ ಮತ್ತು ಬೋಧನೆಗಳು ಶಾಶ್ವತ ಸ್ಫೂರ್ತಿಯ ಸ್ರೋತಗಳಾಗುತ್ತವೆ. ಈ ದೃಷ್ಟಿಯಲ್ಲಿ ಗಾಂಧೀಜಿಯವರ 'ಆತ್ಮಕಥೆ' ಎಲ್ಲ ಕಾಲಕ್ಕೂ ಸ್ಫೂರ್ತಿದಾಯಕವಾಗಿ ಉಳಿಯುವಂಥ ರಚನೆ. ಜೀವನದ ಶಾಶ್ವತ ಮೌಲ್ಯಗಳ ಬಗೆಗಿನ ಶ್ರದ್ಧೆ, ನಿಷ್ಠೆ ಮತ್ತು ಅನುಷ್ಠಾನಗಳಿಂದ ಸಾಮಾನ್ಯ ಚೇತನವೂ ಯಾವ ಎತ್ತರಕ್ಕೆ ಏರಬಹುದೆಂಬುದಕ್ಕೆ ಗಾಂಧೀಜಿಯವರ 'ಆತ್ಮಕಥೆ' ಆದರ್ಶಪ್ರಾಯ ನಿದರ್ಶನವಾಗಿದೆ.

---

[1] ನೋಡಿ: 'ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ', ಪುಟ ೧೮, ಆವೃತ್ತಿ ೧೯೬೧ (ಪ್ರಧಾನ್ ಗುರುದತ್ತ ಅವರ ಅನುವಾದ)

‘ಆತ್ಮಕಥೆ’ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದ ಅವಧಿಯಲ್ಲಿ ನಡೆದುದಾಗಿ ಹೇಳಲಾಗಿರುವ ಒಂದು ಘಟನೆ ಈ ಸಂದರ್ಭದಲ್ಲಿ ಉಲ್ಲೇಖನಾರ್ಹವಾಗಿದೆ. ಗಾಂಧೀಜಿಯವರ ತಪ್ಪೊಪ್ಪಿಗೆಯ ಪ್ರಸಂಗಗಳನ್ನು ಓದಿ ಬೇಸರಗೊಂಡ ವ್ಯಕ್ತಿಯೊಬ್ಬ, "ನಿಮ್ಮನ್ನು ನಾವು ‘ಮಹಾತ್ಮ’ರೆಂದು ಭಾವಿಸಿದ್ದೇವೆ. ನೀವು ನಿಮ್ಮ ಈ ಸಣ್ಣತನದ ವಿಷಯಗಳನ್ನೆಲ್ಲ ಬಹಿರಂಗಗೊಳಿಸಿದರೆ ನಿಮ್ಮ ಬಗೆಗೆ ದುರಭಿಪ್ರಾಯ ಉಂಟಾಗುವುದಿಲ್ಲವೆ?" ಎಂದು ಪ್ರಶ್ನಿಸಿದನಂತೆ. "ನೀವು ಇಂದು ಮಹಾತ್ಮನೆಂದು ಭಾವಿಸುವ ವ್ಯಕ್ತಿ ಒಂದು ಕಾಲದಲ್ಲಿ ಎಷ್ಟು ಸಣ್ಣವನಾಗಿದ್ದ, ನೋಡಿ. ಅಂಥ ದುರ್ಗುಣಗಳನ್ನು ಹೊಂದಿದ್ದ ವ್ಯಕ್ತಿ, ನೀವು ಭಾವಿಸುವಂತೆ, ಈ ಎತ್ತರಕ್ಕೆ ಏರುವುದು ಸಾಧ್ಯವಾಗುವುದಾದರೆ, ಅಷ್ಟು ದುರ್ಗುಣ ಇಲ್ಲದ ವ್ಯಕ್ತಿಗಳು ಇನ್ನೂ ಹೆಚ್ಚಿನ ಎತ್ತರಕ್ಕೆ ಏರಬಹುದಲ್ಲವೆ? ಅಂಥ ಉದ್ದೇಶ ಸಾಧನೆಯಲ್ಲಿ ನನ್ನ ಬರೆಹ ಸಾರ್ಥಕ" ಎಂದು ಗಾಂಧೀಜಿ ಉತ್ತರಿಸಿದ್ದರಂತೆ. ಗಾಂಧೀಜಿಯವರ ಬದುಕು-ಬರೆಹಗಳು ಜನಜೀವನದ ಮೇಲೆ ಹೇಗೆ ಪ್ರಭಾವಬೀರುತ್ತಿದ್ದವೆಂಬುದಕ್ಕೆ ಈ ಪ್ರಸಂಗ ಧ್ವನಿಪೂರ್ಣ ಉದಾಹರಣೆಯಾಗಿದೆ. ಯಾವುದೇ ಬಗೆಯ ಆಡಂಬರವೂ ಇಲ್ಲದ ಅವರ ‘ಆತ್ಮಕಥೆ’, ಆತ್ಮಕಥೆಗಳ ಇತಿಹಾಸದಲ್ಲೇ ಅಭೂತಪೂರ್ವ ರಚನೆಯಾಗಿದೆ.

‘ಆತ್ಮಕಥೆ’ಯ ರಚನೆಯ ಕಥೆಯನ್ನು ಕೃತಿಯ ಪೀಠಿಕಾ ಭಾಗದಲ್ಲಿ, ಕೆಲವೊಂದು ಅಧ್ಯಾಯಗಳಲ್ಲಿಯೂ ಅವರು ವಿವರಿಸಿದ್ದಾರೆ: "ನಾಲ್ಕೈದು ವರುಷಗಳ ಕೆಳಗೆ, ನನ್ನ ನಿಕಟವರ್ತಿಗಳಾದ ಸಹಕಾರ್ಯಕರ್ತರ ಸೂಚನೆಯಂತೆ, ನನ್ನ ಆತ್ಮಕಥೆಯನ್ನು ಬರೆಯಲು ಒಪ್ಪಿದೆನು. ನಾನು ಕೆಲಸವನ್ನು ಪ್ರಾರಂಭಿಸಿ ಮೊದಲನೆಯ ಹಾಳೆಯನ್ನು ಮುಗಿಸುವುದರೊಳಗಾಗಿ ಬೊಂಬಾಯಿನಲ್ಲಿ ಹೊಡೆದಾಟ ಪ್ರಾರಂಭವಾದುದರಿಂದ ಕೆಲಸ ಅಷ್ಟಕ್ಕೇ ನಿಂತುಹೋಯಿತು. ಅನಂತರ ಅನೇಕ ಸಂಗತಿಗಳು ನಡೆದು ಕೊನೆಗೆ ಯರವಾಡಾ ಸೆರೆಮನೆಯಲ್ಲಿ ನನ್ನ ಬಂಧನವಾಯಿತು. ಅಲ್ಲಿ ನನ್ನೊಂದಿಗೆ ಕೈದಿಯಾಗಿದ್ದ ಶ್ರೀ ಜಯರಾಮದಾಸರು, ಉಳಿದುದನ್ನೆಲ್ಲ ಬಿಟ್ಟು ನನ್ನ ಆತ್ಮಕಥೆಯನ್ನು ನಾನು ಬರೆದು ಮುಗಿಸಬೇಕೆಂದು ಹೇಳಿದರು. ಇದಕ್ಕೆ ಉತ್ತರವಾಗಿ ನಾನು ಆಗಲೇ ಒಂದು ವ್ಯಾಸಂಗಕ್ರಮವನ್ನು ಏರ್ಪಡಿಸಿಕೊಂಡಿದ್ದೇನೆಂದೂ, ಅದನ್ನು ಮುಗಿಸುವವರೆಗೆ ಮತ್ತಾವುದನ್ನು ಮಾಡಲೂ ಯೋಚಿಸುವುದು ಸಾಧ್ಯವಿಲ್ಲವೆಂದೂ ಹೇಳಿದೆನು. ಯರವಾಡದಲ್ಲಿ ನನ್ನ ಶಿಕ್ಷೆಯ ಪೂರ್ಣ ಅವಧಿಯನ್ನು ಮುಗಿಸಿದ್ದರೆ, ಅಲ್ಲಿ ನನ್ನ ಆತ್ಮಕಥೆಯನ್ನು ನಿಜವಾಗಿಯೂ ಮುಗಿಸಬಹುದಾಗಿತ್ತು. ಏಕೆಂದರೆ ನನ್ನನ್ನು ಬಿಡುಗಡೆ ಮಾಡಿದಾಗ ನಾನು ಇನ್ನೂ ಒಂದು ವರ್ಷ ಸೆರೆಮನೆಯಲ್ಲಿಯೇ ಇರಬೇಕಾಗಿದ್ದಿತು. ಸ್ವಾಮಿ ಆನಂದರು ಅದೇ ವಿಷಯವನ್ನು ಈಗ ಮತ್ತೆ ನನ್ನ ಮುಂದೆ ಇಟ್ಟಿದ್ದಾರೆ. ನಾನು ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಇತಿಹಾಸವನ್ನು ಬರೆದು ಮುಗಿಸಿರುವುದರಿಂದ ‘ನವಜೀವನ’ಕ್ಕಾಗಿ ನನ್ನ ಆತ್ಮಕಥೆಯನ್ನು ಬರೆಯುವ ಮನಸ್ಸು ಉಂಟಾಗಿದೆ. ನನ್ನ ಆತ್ಮಕಥೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಬರೆಯಬೇಕೆಂದು ಸ್ವಾಮಿ ಆನಂದರು

ಬಯಸಿದರು. ಆದರೆ ನನಗೆ ಸಮಯವಿಲ್ಲ. ನಾನು ವಾರಕ್ಕೆ ಒಂದು ಅಧ್ಯಾಯವನ್ನು ಮಾತ್ರ ಬರೆಯಬಲ್ಲೆನು. ‘ನವಜೀವನ’ಕ್ಕಂತೂ ಪ್ರತಿವಾರವೂ ಏನನ್ನಾದರೂ ಬರೆಯಲೇಬೇಕು. ಅದು ಆತ್ಮಕಥೆಯೇ ಏಕೆ ಆಗಬಾರದು ? ನನ್ನ ಸಲಹೆಗೆ ಸ್ವಾಮೀ ಒಪ್ಪಿದರು. ಇದೋ ನಾನು ಬರೆಯುವ ಕಾರ್ಯದಲ್ಲಿ ತೊಡಗಿದ್ದೇನೆ.” (ಪೀಠಿಕೆ, ಪುಟ ೧) ಇದು ಆತ್ಮಕಥೆಯ ರಚನೆಯ ಹಿನ್ನೆಲೆ.

ಮುಂದುವರಿದು, ‘ಆತ್ಮಕಥೆ’ಯ ಉದ್ದೇಶ ಮತ್ತು ಸ್ವರೂಪಗಳನ್ನು ಗಾಂಧೀಜಿಯವರು ಈ ರೀತಿ ವಿವರಿಸಿದ್ದಾರೆ: “....ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ. ನನ್ನ ಜೀವನ ಈ ಪ್ರಯೋಗಗಳ ಹೊರತು ಮತ್ತೇನೂ ಅಲ್ಲ. ಆದುದರಿಂದ ಈ ಕಥೆ, ಆತ್ಮಕಥೆಯ ರೂಪವನ್ನು ಹೊಂದುವುದೂ ಸತ್ಯ.” (ಅದೇ, ಪುಟ ೨) ಮತ್ತೊಂದೆಡೆ, “ಸಹೋದ್ಯೋಗಿಗಳನ್ನು ಸಂತೈಸುವುದೂ ಮತ್ತು ಅವರಿಗೆ ಆತ್ಮಚಿಂತನಕ್ಕೆ ಸಾಮಗ್ರಿಯನ್ನು ಒದಗಿಸುವುದೂ” (ಭಾಗ ೨, ಪುಟ ೪೦) ತಮ್ಮ ಉದ್ದೇಶಗಳಲ್ಲಿ ಒಂದಾಗಿತ್ತೆಂದು ಗಾಂಧೀಜಿಯವರು ಹೇಳಿಕೊಂಡಿದ್ದಾರೆ. ಅಂತೆಯೇ, ಜೀವನದ ಶಾಶ್ವತ ಮೌಲ್ಯಗಳೆಂದು ಅವರು ಭಾವಿಸಿದ್ದ ಸತ್ಯ, ಧರ್ಮ, ಅಹಿಂಸೆ ಮೊದಲಾದುವುಗಳ ಅಂತಸ್ಸಂಬಂಧವನ್ನೂ, ಪಾರಸ್ಪರಿಕ ಮಹತ್ವವನ್ನೂ ಉದ್ಘೋಷಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಆತ್ಮಕಥೆಯ ಈ ಉದ್ದೇಶವನ್ನು ಅವರು ಈ ರೀತಿ ವಿವರಿಸಿದ್ದಾರೆ: “ಈ ಕಥೆಯ ಪ್ರತಿ ಪುಟವೂ, ‘ಅಹಿಂಸೆಯಿಲ್ಲದೆ ಸತ್ಯಸಾಕ್ಷಾತ್ಕಾರ ಸಾಧ್ಯವಿಲ್ಲ’ ಎಂಬುದನ್ನು ಸಾರಿ ಹೇಳದಿದ್ದಲ್ಲಿ ಇದನ್ನು ಬರೆಯಲು ನಾನು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತೆಂದು ಭಾವಿಸುತ್ತೇನೆ.” (ಅದೇ, ಪುಟ ೩೭೨)

ಸತ್ಯವಿಷಯಕವಾದ ಈ ಬಗೆಯ ಪ್ರಯೋಗಗಳಿಗೆ ಗಾಂಧೀಜಿಯವರು ಎಷ್ಟು ಮಹತ್ವಕೊಟ್ಟಿದ್ದರೆಂಬುದು ಅವರ ಈ ಕೆಳಗಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ: “ನನ್ನ ಪ್ರಯೋಗಗಳಿಗೆ ನಾನು ಹೆಚ್ಚು ಬೆಲೆಯನ್ನು ಕಟ್ಟುತ್ತೇನೆ. ಅವುಗಳ ಯೋಗ್ಯತೆಗೆ ತಕ್ಕಂತೆ ಅವುಗಳನ್ನು ವರ್ಣಿಸಿದ್ದೇನೆಯೋ ಇಲ್ಲವೋ ನನಗೆ ತಿಳಿಯದು. ಪ್ರಾಮಾಣಿಕ ಇತಿಹಾಸವನ್ನು ಬರೆಯಲು ನಾನು ಸರ್ವಪ್ರಯತ್ನವನ್ನೂ ಮಾಡಿದ್ದೇನೆಂದು ಮಾತ್ರ ಹೇಳಬಲ್ಲೆನು. ಸತ್ಯವನ್ನು ನನಗೆ ತೋರಿದಂತೆ, ನಾನು ಅದನ್ನು ಕಂಡುಹಿಡಿದ ಮಾರ್ಗವನ್ನು ವಿವರಿಸುವುದು ನನ್ನ ಅವಿಚ್ಛಿನ್ನ ಪ್ರಯತ್ನವಾಗಿದೆ.” (ಅದೇ) ಈ ಪ್ರಯೋಗಗಳ ಬಗ್ಗೆ ಗಾಂಧೀಜಿಯವರ ವೈಯಕ್ತಿಕ ನಿಲವೇನು ಎಂಬ ಕುತೂಹಲದ ಪ್ರಶ್ನೆ ಏಳಬಹುದಷ್ಟೆ? ಗಾಂಧೀಜಿಯವರು ಈ ಕುತೂಹಲವನ್ನು ತಣಿಸಿಬಿಟ್ಟಿದ್ದಾರೆ, ತಮ್ಮ ಈ ಮಾತುಗಳ ಮೂಲಕ : “ನನ್ನ ಪ್ರಯೋಗಗಳು ರಹಸ್ಯದಲ್ಲಿ ನಡೆದಿಲ್ಲ: ಬಹಿರಂಗವಾಗಿ ನಡೆದಿವೆ. ಹೀಗೆ ಮಾಡುವುದರಿಂದ ಅವುಗಳ ಆಧ್ಯಾತ್ಮಿಕ ಬೆಲೆ ಕಡಿಮೆಯಾಗಿದೆಯೆಂದು ನಾನು ಭಾವಿಸುವುದಿಲ್ಲ. ವ್ಯಕ್ತಿಗೂ ಅವನ ಸೃಷ್ಟಿಕರ್ತನಿಗೂ ಮಾತ್ರವೇ ತಿಳಿದಿರುವ ಕೆಲವು ವಿಷಯಗಳಿವೆ. ಇವುಗಳನ್ನು ಒಬ್ಬರು ಮತ್ತೊಬ್ಬರಿಗೆ ತಿಳಿಸುವುದು ಸಾಧ್ಯವೇ

ಇಲ್ಲ. ನಾನು ವಿವರಿಸಿರುವ ಪ್ರಯೋಗಗಳು ಅಂತಹವುಗಳಲ್ಲ. ಆದರೆ ಆಧ್ಯಾತ್ಮಿಕ ವಾದುವು ಅಥವಾ ನೈತಿಕವಾದುವ ..." (ಭಾಗ ೧, ಪೀಠಿಕೆ, ಪುಟ ೨) ಅಷ್ಟೇ ಅಲ್ಲ, "ಈ ಪ್ರಯೋಗಗಳು ಯಾವುವೇ ರೀತಿಯಲ್ಲಿ ಪೂರ್ಣವಾಗಿವೆಯೆಂದು ನಾನು ಎಂದಿಗೂ ಹೇಳಿಕೊಳ್ಳಲಾರೆ. ವಿಜ್ಞಾನಿಯೊಬ್ಬ ತನ್ನ ಪ್ರಯೋಗಗಳ ವಿಷಯದಲ್ಲಿ ಹೇಳುವುದಕ್ಕಿಂತ ಹೆಚ್ಚಾಗಿ ನಾನೂ ನನ್ನ ಈ ಪ್ರಯೋಗಗಳ ವಿಷಯದಲ್ಲಿ ಏನನ್ನೂ ಹೇಳಿಕೊಳ್ಳಲಾರೆ. ಅವನು ತನ್ನ ಪ್ರಯೋಗಗಳನ್ನು ಅತ್ಯಂತ ಎಚ್ಚರಿಕೆ, ಮುಂದಾಲೋಚನೆ ಮತ್ತು ಸೂಕ್ಷ್ಮವಿಧಾನದಿಂದ ನಡೆಸಿದರೂ, ತನ್ನ ತೀರ್ಮಾನಗಳೇ ಕೊನೆಯ ನಿರ್ಧಾರಗಳೆಂದು ಎಂದಿಗೂ ಹೇಳದೆ, ಅವುಗಳ ವಿಷಯದಲ್ಲಿ ತೆರೆದ ಮನಸ್ಸುಳ್ಳವನಾಗಿರುತ್ತಾನೆ. ನಾನು ತೀವ್ರವಾದ ಆತ್ಮಶೋಧನೆಯನ್ನು ಮಾಡಿಕೊಂಡಿದ್ದೇನೆ; ನನ್ನನ್ನು ಸಂಪೂರ್ಣವಾಗಿ ಪರೀಕ್ಷಿಸಿಕೊಂಡಿದ್ದೇನೆ. ಪ್ರತಿಯೊಂದು ಮಾನಸಿಕ ಸ್ಥಿತಿಯನ್ನೂ ಪರೀಕ್ಷಿಸಿ ವಿಮರ್ಶೆ ಮಾಡಿದ್ದೇನೆ. ಆದರೂ ಸಹ ನನ್ನ ಪ್ರಯೋಗಗಳು ಕೊನೆಯ ತೀರ್ಮಾನಗಳೆಂದಾಗಲೀ ನಿರ್ದೋಷವಾದುವೆಂದಾಗಲೀ ನಾನು ಹೇಳುವುದಿಲ್ಲ" (ಅದೇ, ಪುಟ ೪) ಎಂದೂ ಸ್ಪಷ್ಟಪಡಿಸಿದ್ದಾರೆ. ವಾಸ್ತವವಾಗಿ ಸತ್ಯವೇ ಗಾಂಧೀಜಿಯವರ ಜೀವನದ ಸಾರ್ವಭೌಮ ತತ್ತ್ವ. ಅವರ ಪ್ರಯೋಗಗಳೆಲ್ಲ ಸತ್ಯಸಾಕ್ಷಾತ್ಕಾರದ ಸೋಪಾನಗಳು. ಅವರು ಜೀವನದಲ್ಲಿ ನೆಚ್ಚಿ ನಡೆದುದು ಈ ಸತ್ಯವನ್ನೆ : "ನನಗೆ ತೋರಿದ ಬೆಳಕಿಗನುಗುಣವಾಗಿ ನಾನು ಮುಂದುವರಿದಿದ್ದೇನೆ. ಈ ಮಾರ್ಗಕ್ರಮಣದಲ್ಲಿ ಅನೇಕ ವೇಳೆ, ಪರಮಾತ್ಮನೆಂಬ ಆ ಪರಮ ಸತ್ಯದ ಕಿರುನೋಟ ಲಭಿಸಿದೆ. ಅವನೊಬ್ಬನೇ ಶಾಶ್ವತ, ಉಳಿದುವೆಲ್ಲ ಅಶಾಶ್ವತ ಎಂಬ ನಂಬಿಕೆ ನನ್ನಲ್ಲಿ ದಿನದಿನಕ್ಕೆ ಹೆಚ್ಚುಹೆಚ್ಚಾಗಿ ಬೆಳೆಯುತ್ತಿದೆ. ಈ ನಂಬಿಕೆ ನನ್ನಲ್ಲಿ ಹೇಗೆ ಬಲಗೊಂಡಿತೆಂಬುದನ್ನು, ಇಷ್ಟವುಳ್ಳವರು ಅರಿಯಲಿ. ಅವರು ನನ್ನ ಪ್ರಯೋಗಗಳಲ್ಲಿಯೂ, ಸಾಧ್ಯವಾದರೆ ನನ್ನ ನಂಬಿಕೆಗಳಲ್ಲಿಯೂ ಭಾಗಿಗಳಾಗಲಿ." (ಅದೇ, ಪುಟ ೫-೬)

ಗಾಂಧೀಜಿಯವರ ಧ್ಯೇಯಧೋರಣೆಗಳು ತಾತ್ತ್ವಿಕ ಚರ್ಚೆಯ ವಿಷಯ ಮಾತ್ರವಾಗಿ ಉಳಿಯದೆ ಜೀವನದಲ್ಲಿ ಅನ್ವಯಗೊಂಡ ಪರಮಸತ್ಯಗಳಾಗಿದ್ದುವು. ಸತ್ಯ ಸಂಬಂಧವಾದ ತಮ್ಮ ಪ್ರಯೋಗಗಳ ಇತಿಹಾಸವನ್ನು ಕಂಡರಿಸಲು ಕುಳಿತಾಗ ತಮ್ಮ ಮುಂದೆ ಸಂಬಂಧಪಟ್ಟ ದಾಖಲೆಗಳಾಗಲೀ, ವ್ಯವಸ್ಥಿತವಾದ ಯಾವುದೇ ಒಂದು ಯೋಜನೆಯಾಗಲೀ, ತಮ್ಮ ಕಾರ್ಯಾಕಾರ್ಯಗಳನ್ನು ಸಮರ್ಥಿಸಿಕೊಳ್ಳಬೇಕೆಂಬ ಉದ್ದೇಶವಾಗಲೀ, ತಮ್ಮ ಆತ್ಮಕಥೆ ಸಮಕಾಲೀನ ಚರಿತ್ರೆಯ ಪ್ರತಿಬಿಂಬವಾಗಬೇಕೆಂಬ ಹಟವಾಗಲೀ ತಮ್ಮಲ್ಲಿರಲಿಲ್ಲವೆಂಬುದನ್ನೂ ಗಾಂಧೀಜಿಯವರು ಸ್ಪಷ್ಟಪಡಿಸಿದ್ದಾರೆ: "ಇದನ್ನು ಬರೆಯಲು ಪ್ರಾರಂಭಿಸಿದಾಗ, ಇದನ್ನು ಹೇಗೆ ಬರೆಯಬೇಕೆಂಬ ವಿಷಯದಲ್ಲಿ ನನ್ನ ಮುಂದೆ ಯಾವ ಯೋಜನೆಯೂ ಇರಲಿಲ್ಲ. ನನ್ನಲ್ಲಿ, ನನ್ನ ಈ ಪ್ರಯೋಗಗಳ ಕಥೆಗೆ ಆಧಾರವಾದ ದಿನಚರಿಯಾಗಲೀ, ಕಾಗದ ಪತ್ರಗಳಾಗಲೀ ಇಲ್ಲ. ಬರೆಯಲು ಕುಳಿತಾಗ, ಅಂತರಾತ್ಮ ಪ್ರೇರಿಸಿದಂತೆ ನಾನು ಬರೆದಿದ್ದೇನೆ." (ಭಾಗ ೩, ಪುಟ ೬೯)

ಈ ಕಾರಣದಿಂದಾಗಿಯೇ 'ನವಜೀವನ' ಪತ್ರಿಕೆಗೆ ವಾರವಾರವೂ ಒದಗಿಸಿದ ಸಮಯ -ಸಾಹಿತ್ಯ ಶುದ್ಧ ಸಾಹಿತ್ಯವೂ ಶಾಶ್ವತ ಸಾಹಿತ್ಯವೂ ಆಗಿ ಪರಿಣಮಿಸಿದೆ. ಸಹಜವಾಗಿಯೇ ಬರೆವಣಿಗೆಯ ಅವಧಿಯಲ್ಲಿ ಅವರು ಧರ್ಮಸಂಕಟವನ್ನೂ ಅನುಭವಿಸಿರುವುದುಂಟು: "ಯಾವುದನ್ನು ಕುರಿತು ಹೇಳಬೇಕು ಯಾವುದನ್ನು ಬಿಡಬೇಕು ಇದು ಒಂದು ಪ್ರಬಲವಾದ ಸಮಸ್ಯೆ. ಹೇಳಬೇಕಾದುದನ್ನು ಹೇಳದೆ ಬಿಟ್ಟರೆ ಸತ್ಯದ ಕಾಂತಿಗೆ ಮಂಕು ಬಳಿದಂತೆ ಆಗುತ್ತದೆ." (ಅದೇ, ಪುಟ ೪೦) ಹೀಗಾಗಿ, ಕೆಲವೊಮ್ಮೆ "ಈ ಕಥೆಯನ್ನು ಮುಂದಕ್ಕೆ ಬರೆಯದೆ ನಿಲ್ಲಿಸಿಬಿಡುವುದೇ ಉತ್ತಮವಲ್ಲವೇ" (ಅದೇ, ಪುಟ ೪೧) ಎಂದು ಯೋಚಿಸಿದರೂ, "ಅಂತರಾತ್ಮನಿಂದ ಪ್ರತಿಬಂಧಕ ಬರುವವರೆಗೆ ನಾನು ಬರೆಯುವುದನ್ನು ನಿಲ್ಲಿಸಬಾರದು. ಒಂದು ಸಲ ಪ್ರಾರಂಭಿಸಿದುದನ್ನು, ಅದು ನೈತಿಕವಾಗಿ ತಪ್ಪು ಎಂದು ಸಿದ್ಧಾಂತವಾಗುವವರೆಗೆ ಬಿಡಬಾರದು ಎಂಬ ನ್ಯಾಯವನ್ನು ನಾನು ಅನುಸರಿಸಬೇಕು" (ಅಲ್ಲೇ) ಎಂಬ ವಿವೇಚನೆಯಿಂದಾಗಿ ಆತ್ಮಕಥೆಯನ್ನು ಮುಂದುವರಿಸಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ.

ಆತ್ಮಕಥೆ—ಅನೇಕ ವೇಳೆ, ಜೀವನಚರಿತ್ರೆಗಳೂ—ಕಾರ್ಯಾಕಾರ್ಯಗಳ ಸಮರ್ಥನೆಯ ಸಾಧನಗಳಾಗಿಬಿಡುವ ಅಪಾಯವುಂಟು. ಅಂಥ ಸಂದರ್ಭಗಳಲ್ಲಿ ಆತ್ಮಕಥೆಯಾಗಲೀ, ಜೀವನಚರಿತ್ರೆಯಾಗಲೀ ತನ್ನ ನೈಜ ಉದ್ದೇಶದಿಂದ ವಿಮುಖವಾಗಿ. ಕುಶಲ ನ್ಯಾಯವಾದಿಯ ಚಾತುರ್ಯಪೂರ್ಣವಾದ ವಾದ ಅಥವಾ ವ್ಯಾಖ್ಯಾನ ಮಾತ್ರವಾಗಿಬಿಡುತ್ತದೆ; ಆತ್ಮಸಮರ್ಥನೆಯ ಅಥವಾ ಆರಾಧ್ಯವ್ಯಕ್ತಿಯ ಸಮರ್ಥನೆ ಮಾತ್ರವಾಗಿ ಪರಿಣಮಿಸುತ್ತದೆ: ಸಾರ್ವತ್ರಿಕವಾಗಿ ವಾಚನಯೋಗ್ಯವಾಗುವ ಬದಲು ಪಂಥೀಯ ಸಾಹಿತ್ಯ ಮಾತ್ರವಾಗಿಬಿಡುತ್ತದೆ. ಆದರೆ, ಗಾಂಧೀಜಿಯವರ 'ಆತ್ಮಕಥೆ' ಇದಕ್ಕೆ ಒಂದು ಅಪವಾದ. ಅವರೇ ಈ ರೀತಿ ಹೇಳಿದ್ದಾರೆ: "ಆತ್ಮಕಥೆಗಳು ಚರಿತ್ರೆಗಳಾಗುವುದಿಲ್ಲ ಎಂಬುದಾಗಿ ಬಹಳ ಹಿಂದೆ ನಾನು ಓದಿದ್ದರ ಅರ್ಥ ಇಂದು ನನಗೆ ಚೆನ್ನಾಗಿ ಆಗುತ್ತಿದೆ....ಸತ್ಯದ ಸಲುವಾಗಿ ಎಷ್ಟನ್ನು ಹೇಳಬೇಕು. ಎಷ್ಟನ್ನು ಬಿಡಬೇಕು ಎಂಬುದನ್ನು ಹೇಳಬಲ್ಲವರಾರು? ಮತ್ತು ನನ್ನ ಜೀವಮಾನದ ಕೆಲವು ಸಂಗತಿಗಳ ವಿಷಯದಲ್ಲಿ, ನಾನು ಕೊಟ್ಟಿರುವ ಏಕಪಕ್ಷೀಯವಾದ ವಿವರಣೆಗೆ ನ್ಯಾಯಾಸ್ಥಾನದ ದೃಷ್ಟಿಯಲ್ಲಿ ಬೆಲೆಯೇನು? ಯಾರಾದರೂ ಪುರುಸತ್ತು ಇರುವವರು....ನನ್ನನ್ನು "ಪಾಟೀಸವಾಲು" ಮಾಡಿದರೆ ಇವುಗಳ ಮೇಲೆ ಪ್ರಾಯಶಃ ಹೆಚ್ಚು ಬೆಳಕನ್ನು ಬೀರಬಲ್ಲರು....ನಾನು ಟೀಕಾಕಾರರನ್ನು ಪ್ರಸನ್ನಗೊಳಿಸುವುದಕ್ಕಾಗಿ ಈ ಆತ್ಮಕಥೆಯನ್ನು ಬರೆಯುತ್ತಿಲ್ಲ. ಇದನ್ನು ಬರೆಯುತ್ತಿರುವುದೇ ಸತ್ಯದ ಪ್ರಯೋಗಗಳಲ್ಲಿ ಒಂದು.... ಸ್ವಾಮೀ ಆನಂದ್ ಮತ್ತು ಜಯರಾಮದಾಸ್ ತಮ್ಮ ಸೂಚನೆಯನ್ನು ಒತ್ತಿ ಒತ್ತಿ ಹೇಳದಿದ್ದರೆ ನಾನು ಇದನ್ನು ಬಹುಶಃ ಬರೆಯುತ್ತಲೇ ಇರಲಿಲ್ಲ." (ಅದೇ, ಪುಟ ೪೦–೪೧)

ಇಷ್ಟಾಗಿಯೂ, "ನೆನಪಿರುವುದನ್ನೆಲ್ಲ ನಾನು ಈ ಕಥೆಯಲ್ಲಿ ಬರೆಯುತ್ತಿಲ್ಲ" (ಅದೇ, ಪುಟ ೪೦) ಎಂದು ಅವರೇ ಹೇಳಿಕೊಂಡಿದ್ದಾರೆ. ಇದಕ್ಕೆ ಕಾರಣಗಳೇನೆಂಬುದನ್ನು

ಅವರೇ ಬೇರೊಂದೆಡೆ ವಿಶ್ಲೇಷಿಸಿದ್ದಾರೆ: "ನಾನು ಅನೇಕ ಮುಖ್ಯ ವಿಷಯಗಳನ್ನು ಬಿಟ್ಟುಬಿಡಬೇಕಾಗಿದೆ. ಏಕೆಂದರೆ, ಈ ನಾಟಕದ ಕೆಲವು ಪಾತ್ರಗಳು ಇನ್ನೂ ಜೀವಂತರಾಗಿದ್ದಾರೆ. ಅವರಿಗೆ ಸಂಬಂಧಪಟ್ಟ ವಿಷಯಗಳಲ್ಲಿ, ಅವರ ಅನುಮತಿಯಿಲ್ಲದೆ ಅವರ ಹೆಸರನ್ನು ಉಪಯೋಗಿಸುವುದು ಉಚಿತವಲ್ಲ. ಅವರ ಅನುಮತಿಯನ್ನು ಸಂಪಾದಿಸುವುದೂ, ಮತ್ತು ಅವರಿಗೆ ಸಂಬಂಧಪಟ್ಟ ವಿಷಯಗಳನ್ನು ಅವರು ಓದಿ, ತಿದ್ದುವಂತೆ ಮಾಡುವುದೂ ಸಾಧ್ಯವಿಲ್ಲ. ಅಂತಹ ಕ್ರಮ, ಈ ಆತ್ಮಕಥೆಯ ಮಿತಿಗೆ ಮೀರಿದುದಾಗಿದೆ. ಆದುದರಿಂದ ಈ ಕಥೆಯ ಉಳಿದ ಭಾಗವನ್ನು—ಸತ್ಯಶೋಧಕರಿಗೆ ನನ್ನ ಅಭಿಪ್ರಾಯ ತಿಳಿಯುವುದಾದರೂ—ಅನಿವಾರ್ಯವಾಗಿ ಕೆಲವು ಸಂಗತಿಗಳನ್ನು ಬಿಟ್ಟೇ ಹೇಳಬೇಕಾಗುತ್ತದೆ." (ಅದೇ, ಪುಟ ೨೨೧)

"ಸ್ವಲ್ಪ ಮಾತುಗಳಲ್ಲಿ ಅನೇಕ ವಿಷಯಗಳನ್ನು ಹೇಳುವ ಶಕ್ತಿ" (ಅದೇ, ಪುಟ ೨೨೯) ತಮಗಿತ್ತೆಂಬುದನ್ನು ಕಾಂಗ್ರೆಸ್ ಮುಖಂಡರು ಕಂಡುಕೊಂಡಿದ್ದರೆಂದು ಗಾಂಧೀಜಿ ಹೇಳಿಕೊಂಡಿದ್ದಾರೆ. ಅವರ 'ಆತ್ಮಕಥೆ'ಯನ್ನೂ, ಇನ್ನಿತರ ಬರಹಗಳನ್ನೂ ನೋಡಿದವರಿಗೆ, ವಾಸ್ತವವಾಗಿ ಗಾಂಧೀಜಿಯವರ ಬರಹದ ಪ್ರಮುಖ ಲಕ್ಷಣಗಳಲ್ಲಿ ಇದೂ ಒಂದಾಗಿದೆಯೆಂಬ ಅಂಶ ಮನದಟ್ಟಾಗುತ್ತದೆ. 'ಆತ್ಮಕಥೆ'ಯ ರಚನೆಯಲ್ಲಿ ಅವರು ವಿಧಿಸಿಕೊಂಡಿರುವ ಸಂಯಮವೂ ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಅಲ್ಲದೆ, "ಈ ಹೋರಾಟದ (ಖೇಡಾ ಸತ್ಯಾಗ್ರಹ) ವರ್ಣನೆಗಾಗಿ ಅನೇಕ ಅಧ್ಯಾಯಗಳನ್ನು ನಾನು ಬರೆಯಬಲ್ಲೆನು. ಆದುದರಿಂದ ಈ ಸಂಬಂಧವಾದ ಅನೇಕ ಸುಮಧುರ ಸ್ಮೃತಿಗಳನ್ನು ಬಿಟ್ಟುಬಿಡಬೇಕಾಗಿದೆ" (ಅದೇ, ಪುಟ ೨೭೪) ಎಂದೂ, "ಇನ್ನು ಹೆಚ್ಚು ಅಧ್ಯಾಯಗಳನ್ನು (ಖಾದಿಯ ಅಭಿವೃದ್ಧಿಯ ಮುನ್ನಡೆಗೆ) ನಾನು ಇಲ್ಲಿ ವಿನಿಯೋಗಿಸಲಾರೆನು. ನನ್ನ ನಾನಾ ಬಗೆಯ ಕಾರ್ಯಕ್ರಮಗಳು, ಜನತೆಯ ಕಣ್ಣ ಮುಂದೆ ಬಂದಮೇಲೆ, ಅವರ ಇತಿಹಾಸವನ್ನು ವಿವರಿಸುವುದು ಈ ಅಧ್ಯಾಯಗಳ ವ್ಯಾಪ್ತಿಗೆ ಹೊರಗಾದುದು. ಅದನ್ನು ನಾನು ಪ್ರಯತ್ನಿಸಬಾರದು" (ಅದೇ, ಪುಟ ೩೬೩) ಎಂದೂ ತಮ್ಮನ್ನು ತಾವೇ ನಿರ್ಬಂಧಿಸಿಕೊಂಡಿರುವುದನ್ನು ಕಾಣಬಹುದು. ಈ ಸಂಯಮ, ಈ ವೈಚಿತ್ರ್ಯಪ್ರಜ್ಞೆ ಸಿದ್ಧ ಲೇಖಕರಲ್ಲಿಯೂ ವಿರಳ.

'ಆತ್ಮಕಥೆ' ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದಾಗ ಗಾಂಧೀಜಿಯವರ ಮತ್ತು ವಾಚಕರ ನಡುವೆ ಎಂಥ ಮಧುರ ಆತ್ಮೀಯ ಸಂಬಂಧ ಏರ್ಪಟ್ಟಿತ್ತೆಂಬುದು ವಾಚಕರನ್ನು ಬೀಳ್ಕೊಳ್ಳುವಾಗಿನ ಅವರ ಮನೋವೇದನೆಯಲ್ಲಿ ವ್ಯಕ್ತವಾಗಿದೆ: "ವಾಚಕರಿಂದ ಬೀಳ್ಕೊಳ್ಳುವುದು ನನ್ನ ಮನಸ್ಸಿಗೆ ನೋವಾಗದೆ ಇಲ್ಲ." (ಅದೇ, ಪುಟ ೩೬೬) ಇದು ಗಾಂಧೀಜಿಯವರ ಅನುಭವ ಮಾತ್ರವಲ್ಲ: ವಾಚಕರ ಅನುಭವವೂ ಹೌದು. ಗ್ರಂಥ ರೂಪದಲ್ಲಿ 'ಆತ್ಮಕಥೆ'ಯನ್ನು ಓದಿದಾಗಲೂ ಈ ಅನುಭವ ವಾಚಕರಿಗೆ ಉಂಟಾಗದೆ ಇರದು. ಲೇಖಕ-ವಾಚಕರ ನಡುವೆ ಇಂಥ ತಾದಾತ್ಮ್ಯ ಏರ್ಪಡುವುದು ವಿರಳ. ಇದು ಲೇಖಕನ ಬರವಣಿಗೆಯ ಸಾರ್ಥಕ್ಯದ ಪ್ರತೀಕವೂ ಹೌದು. ಇಂಥ ಅಪೂರ್ವ

ಯಶಸ್ಸನ್ನು ಗಳಿಸಿದ ಕೃತಿಗೆ ಸಾಹಿತ್ಯಕ್ಷೇತ್ರದಲ್ಲಿಯೂ ಎಡೆ ದೊರೆಯುವುದು ಸಹಜ, ಅನಿವಾರ್ಯ.

ವೃತ್ತಿಯಿಂದಲ್ಲದಿದ್ದರೂ ಗಾಂಧೀಜಿ ಪ್ರವೃತ್ತಿಯಿಂದ ಸಾಹಿತಿಯಾಗಿದ್ದವರು. ಇಷ್ಟಾದರೂ ತಾವು ಸಾಹಿತಿಯೆಂದು ಅವರು ಎಂದೂ ಘೋಷಿಸಿಕೊಳ್ಳಲಿಲ್ಲ. ಬದಲಾಗಿ, "ನಾನು ಸಾಹಿತ್ಯಿಕ ಸೋಗು ಹಾಕಿಕೊಳ್ಳಲಾರೆ. ಗುಜರಾತಿಯೊಡನೆ, ಅಷ್ಟೇ ಅಲ್ಲ, ಯಾವುದೇ ಸಾಹಿತ್ಯದೊಡನೆ ನನ್ನ ಪರಿಚಯ ಸೊನ್ನೆ"[1] ಎಂದೂ, "ನನ್ನ ಬರೆಹ ಗಳನ್ನೆಲ್ಲ ನನ್ನ ದೇಹದೊಡನೆಯೇ ಸುಟ್ಟುಬಿಡಬೇಕು. ನಾನು ಮಾಡಿರುವ ಕೆಲಸ ಉಳಿಯುತ್ತದೆಯೇ ಹೊರತು ನಾನು ಆಡಿದ್ದು, ಬರೆದದ್ದು ಅಲ್ಲ"[2] ಎಂದೂ ಹೇಳಿ ಕೊಂಡಿದ್ದುಂಟು. ಇಷ್ಟಾದರೂ, ಗುಜರಾತಿ ಸಾಹಿತ್ಯದಲ್ಲಿ ಅವರನ್ನು ಶಕಪುರುಷರೆಂದೂ, ಶೈಲಿನಿರ್ಮಾಪಕರೆಂದೂ ಪರಿಗಣಿಸಲಾಗಿದೆ. ಅವರ ಶೈಲಿಯ ಬಗ್ಗೆ ಕೆ. ಎಂ. ಮುನ್ಷಿ ಅವರು ಈ ರೀತಿ ಹೇಳಿದ್ದಾರೆ: "ಸರಿಯಾದ ಕ್ರಮದಲ್ಲಿ ಸರಿಯಾದ ಪದವನ್ನು ಬಳಸು ವಂತೆಯೇ, ಅವರ ವ್ಯಕ್ತಿತ್ವದಿಂದಲೂ, ಅವರ ಗರ್ಜನೆ ಘನಗಾಂಭೀರ್ಯವನ್ನು ತಳೆಯು ತ್ತದೆ. ಮನವಿಯಲ್ಲಿ ಒತ್ತಾಸೆ ತುಂಬಿಕೊಳ್ಳುತ್ತದೆ: ನಿವೇದನೆಯಲ್ಲಿ ವೇಧಕತೆ ಕೂಡಿ ಕೊಳ್ಳುತ್ತದೆ. ಅವರು ಸಾಹಿತ್ಯಿಕ ಸ್ಫೈವಿಧ್ಯಕ್ಕಿಂತ ಅಭಿವ್ಯಕ್ತಿಯ ಏಕತಾನತೆಯನ್ನೆ ಇಷ್ಟ ಪಡುತ್ತಾರೆ. ಅವರಲ್ಲಿ ಅಭಿವ್ಯಕ್ತಿಯ ಸೌಂದರ್ಯ ಸತ್ಯದ ಸೇವಕಿಯಾಗಿರಬೇಕಾಗು ತ್ತದೆ. ಅವರ 'ಪ್ರತಿಯೊಂದು ಸಾಲಿನ ನಿರಲಂಕೃತ ಶುದ್ಧ ಮರ್ಮಭೇದಿಶಕ್ತಿ'ಯ ಮೋಡಿಗೆ ಪ್ರತಿಯೊಬ್ಬ ಓದುಗನೂ ಸಿಲುಕುತ್ತಾನೆ. ಈ ಬರವಣಿಗೆ ಯಾವುದೋ ಮಹತ್ತರ ಭಾವಾವೇಶದ ಒತ್ತಡದಲ್ಲಿ ಸಿಕ್ಕಿ ಜ್ವಿಬಲ್ಲಿನ ಶಕ್ತಿಯನ್ನು ಸಂಪಾದಿಸಿಕೊಳ್ಳು ತ್ತದೆ."[3] ಭಾಷೆಯನ್ನು ವಾಗಾಡಂಬರದ, ಪಾಂಡಿತ್ಯಪ್ರದರ್ಶನದ, ಅತಿ ಸಾಹಿತ್ಯಿ ಕತೆಯ ಧೃತರಾಷ್ಟ್ರಾಲಿಂಗನದಿಂದ ಮುಕ್ತಗೊಳಿಸಿ ಸಹಜತೆಯ ವಾತಾವರಣದಲ್ಲಿ ಸ್ವತಂತ್ರವಾಗಿ ವಿಹರಿಸಲು ಅದಕ್ಕೆ ಅವಕಾಶಮಾಡಿಕೊಟ್ಟದ್ದು ಗಾಂಧೀಜಿಯವರ ವಿಶಿಷ್ಟ ಕಾಣಿಕೆ. ಅವರ ಕಾರ್ಯಾತ್ಮಕ ಶೈಲಿಯ ವೈಶಿಷ್ಟ್ಯವನ್ನು ಡಾ. ಎಂ. ಕೆ. ನಾಯಕ್ ಈ ರೀತಿ ವರ್ಣಿಸಿದ್ದಾರೆ: "ಗಾಂಧೀಜಿ ಶೈಲಿಯ ಸೊಬಗನ್ನು ಉದ್ದೇಶ ಪೂರ್ವಕವಾಗಿ ದೂರವಿರಿಸಿದ್ದರೆಂದಾಗಲಿ, ಅವರ ಶೈಲಿ ಬೋಳಾದುದು, ವಿಶಿಷ್ಟಗುಣ ವಿಹೀನವಾದುದು ಎಂದೇನೂ ಅಲ್ಲ. ಅವರು ಸೊಂಟಕ್ಕೆ ಸುತ್ತಿಕೊಳ್ಳುತ್ತಿದ್ದ ಲುಂಗಿ ಹೇಗೆ ಸದಾ ಅಸ್ಖಲಿತವಾಗಿ ಚೊಕ್ಕಟವಾಗಿರುತ್ತಿತ್ತೋ ಅವರ ಮಡಿಕೆಗಳು ಹೇಗೆ ಯಾವಾಗಲೂ ಸ್ವಲ್ಪವೂ ಹೆಚ್ಚುಕಡಿಮೆ ಇಲ್ಲದಂತೆ ನೀಟಾಗಿರುತ್ತಿದ್ದವೋ ಹಾಗೆಯೇ ಅವರ ಶೈಲಿಯೂ ಒಮ್ಮೊಮ್ಮೆ ಉಪಮಾನ ಉಪಮೇಯಗಳನ್ನು ಬಳಸಿ ಅವರ ಅಭಿಪ್ರಾಯವನ್ನು ಪರಿ

[1] 'ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ', ಪುಟ ೯ (ಡಾ. ಹಾ. ಮಾ. ನಾಯಕರ ಅನುವಾದ)

[2] ಅದೇ, ಪುಟ ೬೭ (ಎಂ. ರಾಮರಾವ್ ಅವರ ಅನುವಾದ)

[3] ಅದೇ, ಪುಟ ೧೦ (ಡಾ. ಹಾ. ಮಾ. ನಾಯಕರ ಅನುವಾದ)

ಣಾಮಕಾರಿಯಾಗಿ ವ್ಯಕ್ತಪಡಿಸಲು ಸಹಾಯಕವಾಗುತ್ತದೆ. ಆದರೆ, ಅವರ ಉಪಮಾನ ಉಪಮೇಯಗಳು ಸುಮ್ಮನೆ ಅಲಂಕಾರಕ್ಕಾಗಿ ಎಲ್ಲೂ ಬರುವುದಿಲ್ಲ. ಅವುಗಳ ಕೆಲಸ ಕೇವಲ ಔಪಯೋಗಿಕ."[1]

ಇಂಥ ವಿಶಿಷ್ಟ ಶೈಲಿಯಲ್ಲಿ ರೂಪುಗೊಂಡಿರುವ 'ಆತ್ಮಕಥೆ'ಯಲ್ಲಿ ಉತ್ತಮ ಸಾಹಿತ್ಯದ ಲಕ್ಷಣಗಳೆಲ್ಲ ಮೈದಳೆದಿವೆ. ಒಟ್ಟಿನಲ್ಲಿ, 'ಆತ್ಮಕಥೆ' ಗಾಂಧೀಜಿಯವರ ಬದುಕನ್ನು ರೂಪಿಸಿದ ವ್ಯಕ್ತಿ ಮತ್ತು ಶಕ್ತಿಗಳ ಚಿತ್ರಶಾಲೆ. ಅಷ್ಟೇ ಅಲ್ಲ, ಗಾಂಧೀಜಿಯವರಂಥ ಒಂದು ಶಕ್ತಿ ಜಾಗತಿಕ ಇತಿಹಾಸದ ಮೇಲೆ ಎಂಥ ಪ್ರಭಾವ ಬೀರಿತೆಂಬುದನ್ನು ಅಸದೃಶವಾಗಿ ಮನಗಾಣಿಸುವ ಒಂದು ಅಪೂರ್ವ ದಾಖಲೆ. ಕಥನ ಕೌಶಲ, ವರ್ಣನ ಚಾತುರ್ಯ, ಔಚಿತ್ಯಪ್ರಜ್ಞೆ, ನಾಟಕೀಯಾಂಶಗಳ ಅಳವಡಿಕೆ—ಇವು ಆತ್ಮಕಥೆಯನ್ನು ಸರಸವೂ, ರಸಮಯವೂ ಆಗಿಸಿವೆ. 'ಆತ್ಮಕಥೆ'ಯ ಈ ರಂಗದಲ್ಲಿ ಸುಳಿದಾಡುವ ನೂರಾರು ಪಾತ್ರಗಳು—ಅಕಿಂಚನನಿಂದ ಮಹನೀಯರವರೆಗೆ—ಹಿನ್ನೆಲೆಯಲ್ಲಿ ಪೋಷಕ ಪಾತ್ರಗಳಾಗಿ ಉಳಿದು, ಗಾಂಧೀಜಿಯನ್ನೇ ಕೇಂದ್ರವಾಗಿಸಿಕೊಂಡು, ಆ ಭವ್ಯವ್ಯಕ್ತಿತ್ವ ರೂಪುಗೊಂಡ ಕಥೆಯನ್ನು ಮನಸೆಳೆಯುವಂತೆ ಚಿತ್ರಿಸುತ್ತವೆ. ಇಲ್ಲಿ ಬರುವ ಒಂದೊಂದು ಪಾತ್ರವೂ, ಒಂದೊಂದು ಸನ್ನಿವೇಶವೂ, ಒಂದೊಂದು ವರ್ಣನೆಯೂ 'ಮುಕ್ತಕ'ದಂತೆ ತನ್ನಿಂದ ತಾನೇ ಸುಂದರವಾಗಿದ್ದು, ಸಮಗ್ರ ಕಥೆಯನ್ನೂ ವರ್ಣರಂಜಿತವಾಗಿಸಿವೆ. ಇಂಥ ಕೃತಿ ಮೂಲ ಅಂದರೆ—ಗುಜರಾತಿ—ಭಾಷೆಯಲ್ಲಿ ಎಂಥ ಮಹತ್ವಪೂರ್ಣ ಸ್ಥಾನವನ್ನು ಗಳಿಸಿದೆ ಎಂಬುದನ್ನು ಕೆ. ಎಂ. ಮುನ್ಷಿ ಅವರು ಈ ರೀತಿ ವರ್ಣಿಸಿದ್ದಾರೆ: "ಸಾಹಿತ್ಯಕಲೆಯ ಒಂದು ಮಾದರಿಯಾಗಿ, 'ಆತ್ಮಕಥಾ' ಗುಜರಾತಿ ಗದ್ಯದ ಅತ್ಯುತ್ತಮ ಕೃತಿಗಳಲ್ಲಿ ತನ್ನ ಸ್ಥಾನ ಪಡೆದಿದೆ....ಅದರಲ್ಲಿ ಪ್ರಾಮಾಣಿಕತೆಯಿದೆ, ಪರವಶತೆಯಿಲ್ಲ. ಅದು ಪುಷ್ಕಳ ಮನೋಧರ್ಮದ ಅಭಿವ್ಯಕ್ತಿಯಲ್ಲ; ಅದರಲ್ಲಿ ಗಟ್ಟಿ ಲೋಹದ ಗುಣವಿದೆ....ಅದು ಅತ್ಯಮೂಲ್ಯ ಮಾನವೀಯ ದಾಖಲೆಗಳಲ್ಲಿ ಒಂದು."[2] ಈ ಮಾತು ಗುಜರಾತಿ ಸಾಹಿತ್ಯಕ್ಕೆ ಮಾತ್ರವಲ್ಲ, ಇತರ ಭಾಷಾ ಸಾಹಿತ್ಯಗಳಿಗೂ ಅನ್ವಯಿಸುವಂಥದು.

೨

'ಆತ್ಮಕಥೆ' ಮೊದಲಿಗೆ ಗುಜರಾತಿಯಲ್ಲಿ ರಚಿತವಾಗಿದ್ದು, ಅನಂತರ, ಬಹುಮಟ್ಟಿಗೆ ಇಂಗ್ಲಿಷ್ ಆವೃತ್ತಿಯ ಆಧಾರದ ಮೇಲೆ ಇತರ ಭಾಷೆಗಳಿಗೆ ಅನುವಾದಗೊಂಡಿತು. 'ಆತ್ಮಕಥೆ'ಯ ಐದನೆಯ ಭಾಗದ ೨೯ರಿಂದ ೪೩ರ ವರೆಗಿನ ಹದಿನೈದು ಅಧ್ಯಾಯಗಳನ್ನು ಪ್ಯಾರೇಲಾಲರು ಭಾಷಾಂತರಿಸಿದ್ದಾರೆ. ಉಳಿದ ಭಾಗವನ್ನು ಭಾಷಾಂತರಿಸಿದವರು ಮಹದೇವ ದೇಸಾಯಿ ಅವರು. ೧೯೨೫ರಿಂದ ೭೨ರ ವರೆಗಿನ ನವಜೀವನದ

1 ಅದೇ, ಪುಟ ೬೭ (ಎಂ. ರಾಮರಾವ್ ಅವರ ಅನುವಾದ)

2 ಅದೇ, ಪುಟ ೧೦ (ಹಾ. ಮಾ. ನಾಯಕರ ಅನುವಾದ)

ವರ್ಷಗಳ ಅವಧಿಯಲ್ಲಿ ಇಂಗ್ಲಿಷ್ ಭಾಷೆಯೊಂದರಲ್ಲಿಯೇ ಹನ್ನೆರಡು ಆವೃತ್ತಿಗಳು ಹೊರಬಂದಿದ್ದು, ಒಟ್ಟು ಎರಡು ಲಕ್ಷದ ಆರುಸಾವಿರ ಪ್ರತಿಗಳು ಅಚ್ಚಾಗಿವೆ. 'ಆತ್ಮಕಥೆ'ಯ ಅನುವಾದವನ್ನು ಹೊಂದಿಲ್ಲದಿರುವ ಯಾವುದೇ ಒಂದು ಜೀವಂತ ಭಾಷೆಯಿಲ್ಲ ಎಂಬ ಮಾತು ಇಂದು ಅತಿಶಯೋಕ್ತಿಯಾಗಿಲ್ಲ.[1] ಬಹುಶಃ ಭರತಖಂಡದ ಬೇರಾವ ಸಾಹಿತ್ಯ ಕೃತಿಯೂ ಇಷ್ಟೊಂದು ಭಾಷೆಗಳಿಗೆ ಅನುವಾದಿತವಾಗಿಲ್ಲ. ಈ ದೃಷ್ಟಿಯಲ್ಲಿ ಇದೊಂದು ಅಪೂರ್ವ ಸಾಹಿತ್ಯಿಕ ವಿಕ್ರಮ. ಬಹುಕಾಲದವರೆಗೆ ಈ ವಿಕ್ರಮ ಬಹುಶಃ ಅನುಲ್ಲಂಘ್ಯವಾಗಿಯೇ ಉಳಿಯುತ್ತದೆ.

ಕನ್ನಡದಲ್ಲಿ 'ಆತ್ಮಕಥೆ'ಯ ಮೊದಲ ಅನುವಾದ ಹೊರಬಂದದ್ದು ೧೯೨೭ರಲ್ಲಿ (ಪ್ರಭವ ಸಂವತ್ಸರ) ಅಂದರೆ, 'ಆತ್ಮಕಥೆ'ಯ ಇಂಗ್ಲಿಷ್ ಆವೃತ್ತಿ ಹೊರಬಂದ ತರುಣದಲ್ಲಿಯೇ. ಐದು ಪ್ರತ್ಯೇಕ ಭಾಗಗಳಾಗಿ ಇದನ್ನು ಅನುವಾದಿಸಿ ಹೊರತಂದವರು 'ಇಬ್ಬರು ಕನ್ನಡಿಗರು.' ೧೯೩೦ರಲ್ಲಿ (ಪ್ರಮೋದೂತ ಸಂವತ್ಸರ) ಅದು ಪುನರ್ಮುದ್ರಣವನ್ನು ಕಂಡಿತು. ಒಂದು ಸಂಪುಟವಾಗಿಯೂ ಅದನ್ನು ಪ್ರಕಟಿಸಲಾಯಿತು. ಗಾಂಧೀ ಸ್ಮಾರಕ ನಿಧಿಯ ಕರ್ನಾಟಕ ಶಾಖೆಯ ಆಶ್ರಯದಲ್ಲಿ 'ಆತ್ಮಕಥೆ'ಯ ಸಂಕ್ಷಿಪ್ತ ಆವೃತ್ತಿಯೊಂದನ್ನು 'ಸಮಗ್ರ ಗಾಂಧೀ ಗ್ರಂಥಮಾಲೆ'ಯ ಮೊದಲ ಪ್ರಕಟಣೆಯಾಗಿ ಬಿಡುಗಡೆ ಮಾಡಲಾಗಿತ್ತು. ೧೯೬೮ರಲ್ಲಿ ಇದೇ ಸಂಸ್ಥೆ ಈ ಮಾಲೆಯ ಕೊನೆಯ ಪ್ರಕಟಣೆಯಾಗಿ 'ಆತ್ಮಕಥೆ'ಯ ಸಮಗ್ರ ಆವೃತ್ತಿಯ ಕನ್ನಡ ಅನುವಾದವನ್ನು ಪ್ರಕಟಿಸಿತು. ಈ ಅನುವಾದವನ್ನು ಸಿದ್ಧಪಡಿಸಿದವರು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು. ಇದನ್ನು ಎರಡು ಸಂಪುಟಗಳಲ್ಲಿ ಹೊರತರಲಾಗಿದೆ. ಮೊದಲ ಸಂಪುಟ 'ಆತ್ಮಕಥೆ'ಯ ಮೊದಲ ಮೂರು ಭಾಗಗಳನ್ನೂ, ಎರಡನೆಯ ಸಂಪುಟ ನಾಲ್ಕು ಮತ್ತು ಐದನೆಯ ಭಾಗಗಳನ್ನೂ ಒಳಗೊಂಡಿದೆ. ಈ ಕನ್ನಡ ಆವೃತ್ತಿಯ ಪರಿಶೀಲನೆಯೇ ಪ್ರಸ್ತುತ ಪ್ರಬಂಧದ ಮುಖ್ಯೋದ್ದೇಶ.[2]

ಕನ್ನಡ ಅನುವಾದ—ಅಂತೆಯೇ, ಬಹುಮಟ್ಟಿಗೆ ಇತರ ಭಾಷೆಗಳ ಅನುವಾದಗಳು—ಇಂಗ್ಲಿಷ್ ಆವೃತ್ತಿಯನ್ನು ಆಧರಿಸಿರುವುದರಿಂದ ಅನುವಾದ ತತ್ತ್ವಗಳ ದೃಷ್ಟಿಯಿಂದ 'ಅನುವಾದದ ಅನುವಾದ'ವೆನ್ನಿಸಿಕೊಳ್ಳುತ್ತದೆ: ಅನುವಾದದ ಅನುವಾದವೆಂದಾಗ ಅದು ಮೂಲದಿಂದ ಎರಡು ಮಾರು ದೂರದಲ್ಲಿಯೇ ಉಳಿದಿರುತ್ತದೆ. ಇಂಥ ಸಂದರ್ಭಗಳಲ್ಲಿ ಎರಡನೆಯ ಅನುವಾದವನ್ನು ಮೊದಲನೆಯ ಮೂಲದೊಡನೆ ಹೋಲಿಸಿ ನೋಡು

---

[1] 'ಪ್ರಜಾವಾಣಿ', ಸಾಪ್ತಾಹಿಕ ಪುರವಣಿ, ದಿನಾಂಕ ೨೫ ೩.೧೯೭೩

[2] ಈ ಲೇಖನ ಅಚ್ಚಿಗೆ ಹೋಗಲಿದ್ದಾಗ, ಸಿದ್ದವನಹಳ್ಳಿ ಕೃಷ್ಣಶರ್ಮರು ಹಾಗೂ ಮತ್ತೊಬ್ಬ ವಿದ್ವಾಂಸರು ಅನುವಾದಿಸಿರುವ 'ಆತ್ಮಕಥೆ'ಯ ಮತ್ತೊಂದು ಕನ್ನಡ ಆವೃತ್ತಿಯೂ ಇದೆಯೆಂಬುದನ್ನು ಶ್ರೀ ಜಿ. ಟಿ. ನಾರಾಯಣರಾಯರು ಮತ್ತು ಶ್ರೀ ಎಚ್ಚೆಸ್ಕೆ ಅವರು ನನ್ನ ಗಮನಕ್ಕೆ ತಂದಿದ್ದಾರೆ. ಅವರ ಈ ಸೂಚನೆಗೆ ಕೃತಜ್ಞನಾಗಿದ್ದೇನೆ. ಆದರೆ ಸಮಯಾಭಾವದಿಂದಾಗಿ ತೌಲನಿಕ ಪರಿಶೀಲನೆಗೆ ಈ ಆವೃತ್ತಿಯನ್ನು ಬಳಸಿಕೊಳ್ಳಲು ಸಾಧ್ಯವಾಗಿಲ್ಲ.

ಷ್ಟು ಉತ್ತಮ ಫಲವನ್ನೇನೂ ಕೊಡುವುದಿಲ್ಲ. ಹೀಗಾಗಿ, ಭಾಷಾಂತರದ ಗುಣಮಟ್ಟಗಳನ್ನು ಗುರುತಿಸುವ ಸಂದರ್ಭದಲ್ಲಿ ಎರಡನೆಯ ಮೂಲವನ್ನೇ-ಅಂದರೆ ಮೊದಲ ಅನುವಾದವನ್ನೇ (ಇಂಗ್ಲಿಷ್ ಆವೃತ್ತಿಯನ್ನೇ)-ಆಧಾರವಾಗಿಟ್ಟುಕೊಂಡು ನೋಡಬೇಕಾಗುತ್ತದೆ. 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಇಂಗ್ಲಿಷ್ ಆವೃತ್ತಿ ಧಾರಾವಾಹಿಯಾಗಿ ಪ್ರಕಟವಾದಾಗ, ಅದು ಗಾಂಧೀಜಿಯವರ ಕಣ್ಣುಮುಂದೆಯೂ ಹಾದು ಹೋಗಿತ್ತೆಂದು ಇಂಗ್ಲಿಷ್ ಆವೃತ್ತಿಯನ್ನು ಸಿದ್ಧಪಡಿಸಿದ ಮಹದೇವ ದೇಸಾಯಿ ಅವರು ತಿಳಿಸಿದ್ದಾರೆ.[1] ಹೀಗಾಗಿ, ಪ್ರಕೃತ ಸಂದರ್ಭದಲ್ಲಿ ಕನ್ನಡ ಅನುವಾದಕ್ಕೆ ಆಧಾರವಾಗಿರುವ ಇಂಗ್ಲಿಷ್ ಆವೃತ್ತಿಯನ್ನು ವಾಸ್ತವವಾಗಿ ಮೊದಲ ಮೂಲವೆಂದು ಪರಿಗಣಿಸಬಹುದಾಗಿದೆ.

ಗಾಂಧೀ ಗ್ರಂಥಮಾಲೆಯ ಪ್ರಧಾನ ಸಂಪಾದಕರಾದ ಎಂ. ಯಾಮುನಾಚಾರ್ಯರು 'ಆತ್ಮಕಥೆ'ಯ ಕನ್ನಡ ಆವೃತ್ತಿಯ ಬಗ್ಗೆ ಈ ಮಾತುಗಳನ್ನಾಡಿದ್ದಾರೆ: "ಈ ಎರಡೂ ಸಂಪುಟಗಳ ಭಾಷಾಂತರಕಾರ್ಯವನ್ನು ಸುಪ್ರಸಿದ್ಧ ಕನ್ನಡ ಬರಹಗಾರರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಮಾಡಿದ್ದಾರೆ. ಅವರು ಹಲವಾರು ವರ್ಷಗಳಿಂದ ಗಾಂಧಿಮಾರ್ಗಾನುಯಾಯಿ ಎಂಬುದು ಗಮನೀಯ; ಭಾಷಾಂತರಕಾರ್ಯವನ್ನು ಶ್ರದ್ಧೆಯಿಂದಲೂ ಪ್ರೇಮದಿಂದಲೂ ನಿರ್ವಹಿಸಿದ್ದಾರೆ. ಭಾಷಾಂತರದ ಸಂಸ್ಕರಣಕಾರ್ಯವನ್ನು ಸಂಪಾದಕೀಯ ಮಂಡಲಿಯ ಮೂವರು ಸದಸ್ಯರು ಮಾಡಿದ್ದಾರೆ. ಶ್ರೀಮಾನ್ ಎಸ್. ಛಪ್ರಯ್ಯನವರು ಒಂದು ಮತ್ತು ಎರಡನೆಯ ಭಾಗಗಳನ್ನೂ, ಶ್ರೀಮಾನ್ ಕೋ. ಸಂಪದ್ಗಿರಿರಾಯರು ಮೂರು ಮತ್ತು ನಾಲ್ಕನೆಯ ಭಾಗಗಳನ್ನೂ, ಶ್ರೀಮಾನ್ ಸಿದ್ಧವನಹಳ್ಳಿ ಕೃಷ್ಣಶರ್ಮರು ಐದನೆಯ ಭಾಗವನ್ನೂ ಮಾಡಿದ್ದಾರೆ. ಹೀಗೆ, ಪ್ರಾಜ್ಞರೂ ಸಮರ್ಥರೂ ಆದ ಮಹನೀಯರುಗಳ ಸಂಯುಕ್ತ ಪ್ರಯತ್ನದ ಫಲವಾದ ಈ ಎರಡೂ ಸಂಪುಟಗಳು ಎಲ್ಲ ಕನ್ನಡ ಸಾಹಿತ್ಯ ವಾಚಕರಿಗೂ ಮತ್ತು ಗಾಂಧೀ ವಿಚಾರ ಪ್ರೇಮಿಗಳಿಗೂ ಬಹುದೀರ್ಘಕಾಲ ಸ್ಫೂರ್ತಿಯ ಹಾಗೂ ಆನಂದದ ಆಗರವಾಗುತ್ತವೆಂದು ಆಶಿಸಲಾಗಿದೆ."[2]

ಕನ್ನಡದಲ್ಲಿ 'ಆತ್ಮಕಥೆ'ಯ ಅನುವಾದದ ಇತಿಹಾಸದ ದೃಷ್ಟಿಯಿಂದ ಇದು ಎರಡನೆಯ ಅನುವಾದವಾಗಿರುವುದರಿಂದ[3] ಹಾಗೂ ಗಾಂಧೀ ಗ್ರಂಥಮಾಲೆಯ ಪ್ರಕಟನೆಯಾಗಿರುವುದರಿಂದ 'ಅಧಿಕೃತ ಅನುವಾದ'ವೆಂಬ ಭಾವನೆ ಮೂಡುತ್ತದೆ. ಗಾಂಧೀ ಸ್ಮಾರಕನಿಧಿಯು ಕರ್ನಾಟಕದ ಶಾಖೆ ಅನುವಾದಕ್ಕೆ ಗೊರೂರರಂತಹ ಹೆಸರಾಂತ ಲೇಖಕರನ್ನು ಆಯ್ದುದು ಮತ್ತು ಅನುವಾದದ ಪರಿಷ್ಕರಣಕ್ಕೆ ಮಾಡಿದ ವ್ಯವಸ್ಥೆ ಇವನ್ನು ಗಮನಿಸಿದರೆ 'ಆತ್ಮಕಥೆ'ಯ ಮೊದಲ ಆವೃತ್ತಿಗಿಂತ ಸಮರ್ಪಕವಾದ ಅನು-

[1] M. K. Gandhi : *An Autobiography*, Translator's Preface, p. iii

[2] **ಆತ್ಮಕಥೆ, ಭಾಗ ೧, ಸಂಪಾದಕೀಯ, ಪುಟ viii–ix**

[3] ಆತ್ಮಕಥೆಯ ಸಂಕ್ಷಿಪ್ತ ಆವೃತ್ತಿಯನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ

ವಾದವಾಗಿರಬೇಕೆಂಬ ಭಾವನೆ ಮೂಡುತ್ತದೆ. ಇಲ್ಲವಾದಲ್ಲಿ ಈ ಎರಡನೆಯ ಅನುವಾದದ ಅಗತ್ಯವೇನಿತ್ತೆಂಬ ಪ್ರಶ್ನೆಯೂ ಏಳುತ್ತದೆ.

‘ಆತ್ಮಕಥೆ’ಯ ಈ ಅನುವಾದದ ಪರಿಶೀಲನೆಯಲ್ಲಿ ನಾನು ಅನುಸರಿಸಿರುವ ವಿಧಾನವನ್ನು ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕು. ಆಮೂಲಾಗ್ರವಾಗಿ ಮೂಲದೊಡನೆ ಅನುವಾದವನ್ನು ಹೋಲಿಸಿ ನೋಡಿ, ಗುಣದೋಷಗಳನ್ನು ಪಟ್ಟಿ ಮಾಡುವ ಕೆಲಸವನ್ನು ನಾನಿಲ್ಲಿ ಮಾಡಿಲ್ಲ. ಅನುವಾದವನ್ನು ಮೊದಲಿನಿಂದ ಕೊನೆಯವರೆಗೂ ಓದಿ, ಸುಂದರವೆನಿಸಿದ ಹಾಗೂ ಅನುವಾದದ ಮೂರಿ ಹೊಡೆಯುತ್ತಿದ್ದ ಭಾಗಗಳನ್ನು ಗುರುತಿಸಿಕೊಂಡು ಸಾಗಿದೆ. ಅನುವಾದ ಪ್ರಶಂಸನೀಯವಾಗಿದೆಯೆಂಬ ಭಾವನೆಯೇ ಮನದಲ್ಲಿ ಮೂಡುತ್ತ ಹೋಯಿತು. ಅನುವಾದದ ಮೂರಿ ಹೊಡೆಯುತ್ತಿದ್ದ ಭಾಗಗಳಲ್ಲಿ ಇವೇಕೆ ಹೀಗಾಗಿವೆಯೆಂಬುದನ್ನು ಕಂಡುಕೊಳ್ಳಲು ಅಲ್ಲಲ್ಲಿ ಮಾತ್ರ ಇಂಗ್ಲಿಷ್ ಆವೃತ್ತಿಯೊಂದಿಗೆ ಹೋಲಿಸಿ ನೋಡತೊಡಗಿದೆ. ಮೊದಲಿಗೆ ಸೋಜಿಗೆನಿಸಿತು: ಅನಂತರದಲ್ಲಿ ಆಶ್ಚರ್ಯವೆನಿಸಿತು: ಮುಂದೆ ದಿಗ್ಭ್ರಮೆಯೂ ಆಯಿತು. ಕುತೂಹಲದವನಾಗಿ, ‘ಆತ್ಮಕಥೆ’ಯ ಮೊದಲ ಕನ್ನಡ ಅನುವಾದದೊಡನೆಯೂ ಅಲ್ಲಲ್ಲಿ ಹೋಲಿಸಿ ನೋಡಿದೆ. ಹೀಗಾಗಿ, ಅನುವಾದಗಳ ತೌಲನಿಕ ಪರಿಶೀಲನೆಗೂ ಅವಕಾಶವಾಯಿತು. ಮುಂದಿನ ಪುಟಗಳಲ್ಲಿರುವ ಸಮೀಕ್ಷೆ ನನ್ನ ಈ ಆನಂದ ಆಶ್ಚರ್ಯ ದಿಗ್ಭ್ರಮರೂಪವಾದ ಪ್ರತಿಕ್ರಿಯೆಗಳ ವಿಶ್ಲೇಷಣೆಯಾಗಿದೆ.

೪

ಮೂಲವನ್ನು ಬದಿಗಿರಿಸಿ, ಗಾಂಧೀಜಿಯವರ ನೇರ, ಸರಳ, ಸುಂದರ, ಸ್ವಯಂಗಮ ಶೈಲಿಯ ಪ್ರತೀಕವಾಗಿರುವ ಹಲವಾರು ಪ್ರಸಂಗಗಳ ಅನುವಾದವನ್ನು ಗಮನಿಸಿದರೆ, ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾಗಿರುವ ಕೃತಿಯೋ ಎಂಬಂತೆ ಇವು ಓದಿಸಿಕೊಳ್ಳುತ್ತವೆ: ಅನುವಾದ ಈ ದೃಷ್ಟಿಯಿಂದ ಯಶಸ್ವಿಯಾಗಿದೆ ಎಂದೆನಿಸುತ್ತದೆ. ಉದಾಹರಣೆಗೆ, ಈ ಕೆಲವು ಪ್ರಸಂಗಗಳನ್ನು ಪರಿಶೀಲಿಸಬಹುದು:

(ಅ) ಪಾಪದ ಪಾತಾಳಕ್ಕೆ ಜಾರಲಿದ್ದ ಕ್ಷಣದಲ್ಲಿ ಎಚ್ಚರಗೊಂಡು ಪ್ರಾಯಶ್ಚಿತ್ತಿಕನಾದಾಗಿನ ಕ್ಷಣದ ಮನೋವೃತ್ತಿಯನ್ನು ವರ್ಣಿಸುವ ಪ್ರಸಂಗ ಕನ್ನಡದಲ್ಲಿ ಹೀಗೆ ಮೂಡಿದೆ:

> ನನಗೆ ನಾಚಿಕೆಯಾಯಿತು. ಎಚ್ಚರಗೊಂಡೆನು. ಮನಸ್ಸಿನೊಳಗೇ ಆ ಮಿತ್ರನಿಗೆ ಕೃತಜ್ಞತೆಯನ್ನು ಅರ್ಪಿಸಿದೆನು. ನಮ್ಮ ತಾಯಿಯ ಎದುರಿಗೆ ತೆಗೆದುಕೊಂಡಿದ್ದ ಪ್ರತಿಜ್ಞೆ ಜ್ಞಾಪಕಕ್ಕೆ ಬಂದು ಸ್ಥಳವನ್ನು ಬಿಟ್ಟು ಓಡಿದೆನು. ನಾನು ನಡುಗುತ್ತಿದ್ದೆನು. ಎದೆ ಡವಡವನೆ ಬಡಿದುಕೊಳ್ಳುತ್ತಿದ್ದಿತು. ಬೇಟೆಗಾರನ ಕೈಯಿಂದ ತಪ್ಪಿಸಿಕೊಂಡ ಪ್ರಾಣಿಯಂತೆ ಓಡಿದೆನು. (ಪುಟ ೧೧೪–೧೫)

(ಆ) ಉಪಾಸನೆಯ ಮಹತ್ವವನ್ನು ವಿವರಿಸುವಾಗ ಕಾವ್ಯಲೋಕದಲ್ಲಿ ವಿಹರಿಸುವ ಅವರ ಶೈಲಿಯ ಸೊಬಗು ಒಡಮೂಡುವುದು ಹೀಗೆ :

> ಇಂತಹ ಉಪಾಸನೆಯೂ ಪ್ರಾರ್ಥನೆಯೂ ಬಾಯಿ ವಚನವೈಭವವಲ್ಲ. ಅದರ ಮೂಲ ಕಂಠವಲ್ಲ, ಹೃದಯ. ಆದುದರಿಂದ ನಾವು ಪ್ರೇಮದ ಹೊರತು ಮತ್ತೇನೂ ಇಲ್ಲದಿರುವ ಹೃದಯ ಪಾರಿಶುದ್ಧತೆಯನ್ನು ಸಂಪಾದಿಸಿಕೊಂಡರೆ, ಹೃದಯದ ತಂತಿಗಳನ್ನೆಲ್ಲ ಸುಸಂಘಟಿತವಾಗಿ ಇಟ್ಟುಕೊಂಡರೆ, ಆಗ ಹೃದಯದಿಂದ ಹೊರಡುವ ಸ್ವರ ಗಗನಗಾಮಿಯಾಗುವುದು. ಪ್ರಾರ್ಥನೆಗೆ ನಾಲಿಗೆಯ ಆವಶ್ಯಕತೆ ಇಲ್ಲ. ಅದು ಸ್ವಭಾವದಿಂದಲೇ ಅದ್ಭುತ ವಸ್ತು; ಇಂದ್ರಿಯ ವ್ಯಾಪಾರಕ್ಕೆ ಒಳಪಟ್ಟವಲ್ಲ. ಹೃದಯವನ್ನು ವಿಕಾರರೂಪದ ಕಸ್ಮಲದಿಂದ ಶುದ್ಧಿಗೊಳಿಸಬೇಕಾದರೆ, ಉಪಾಸನೆಯೇ ಜೀವನ ಧುರಿ ಎಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆದರೆ ಇದರೊಡನೆ ಪೂರ್ಣವಾದ ನಮ್ರತೆ ಬೆರೆಯಬೇಕು. (ಪುಟ ೧೧೬)

(ಇ) ತಾಂತ್ರಿಕ ಕೌಶಲದ ಒಂದು ಅದ್ಭುತ ರಚನೆಯಾಗಿರುವ ಈಫೆಲ್ ಗೋಪುರವನ್ನು ಸೂಕ್ಷ್ಮ ಕಲಾಸೌಂದರ್ಯದ ದೃಷ್ಟಿಯಿಂದ ಪರಿಶೀಲಿಸಿದಾಗ ಯಾವ ಭಾವನೆ ಮೂಡುತ್ತದೆಂಬುದನ್ನು ಕಂಡರಿಸುವ ವರ್ಣನೆ :

> ಹೊಗೆಸೊಪ್ಪು, ಮಾದಕವಸ್ತುಗಳಲ್ಲೆಲ್ಲ ಅತ್ಯಂತ ಕೆಟ್ಟದ್ದು. ಏಕೆಂದರೆ ಅದರ ಪ್ರಭಾವಕ್ಕೆ ಒಳಗಾದವನು, ಮದ್ಯಪಾಯಿ ಎಂದಿಗೂ ಮಾಡಲು ಧೈರ್ಯಗೊಳ್ಳದ ದುಷ್ಕೃತ್ಯಗಳನ್ನು ಎಸಗುತ್ತಾನೆ. ಮದ್ಯ, ಮನುಷ್ಯನಿಗೆ ಹುಚ್ಚು ಹಿಡಿಸುತ್ತದೆ. ಆದರೆ ಹೊಗೆಸೊಪ್ಪು ಮನುಷ್ಯನ ಬುದ್ಧಿಯನ್ನು ಮಂಕುಗೊಳಿಸಿ, ಅವನು ಗಾಳಿ-ಗೋಪುರ ಕಟ್ಟುವಂತೆ ಮಾಡುತ್ತದೆ. ಇಂತಹ ಪ್ರಭಾವಕ್ಕೆ ಒಳಗಾದವನೊಬ್ಬನ ಒಂದು ಸೃಷ್ಟಿ ಈಫೆಲ್ ಗೋಪುರ. ಆ ಗೋಪುರದಲ್ಲಿ ಯಾವ ಕಲೆಯೂ ಇಲ್ಲ. ಪ್ರದರ್ಶನದ ಸೌಂದರ್ಯವನ್ನು ಯಾವ ರೀತಿಯಿಂದಲೂ ಈಫೆಲ್ ಗೋಪುರ ಹೆಚ್ಚಿಸಲಿಲ್ಲ. ಅದು ಅದ್ವಿತೀಯ ಆಕಾರದ ನೂತನ ವಸ್ತುವಾದುದರಿಂದ ಜನ ಅದನ್ನು ನೋಡುವುದಕ್ಕೂ ಹತ್ತುವುದಕ್ಕೂ ಗುಂಪು ಗುಂಪಾಗಿ ಬರುತ್ತಿದ್ದರು. ಅದೇ ಪ್ರದರ್ಶನದ ಬೊಂಬೆ ಆಗಿದ್ದಿತು. ನಾವು ಎಲ್ಲಿಯವರೆಗೆ ಮಕ್ಕಳೇ ಆಗಿ ಇರುತ್ತೇವೆಯೋ ಅಲ್ಲಿಯವರೆಗೆ ಬೊಂಬೆಗಳು ನಮ್ಮನ್ನು ಆಕರ್ಷಿಸುತ್ತವೆ. ನಾವು ಬೊಂಬೆಗಳಿಂದ ಆಕರ್ಷಿತರಾದ ಮಕ್ಕಳು ಎಂಬುದನ್ನು ಸ್ಥಿರಗೊಳಿಸಲು ಈಫೆಲ್ ಗೋಪುರ ಒಳ್ಳೆಯ ನಿದರ್ಶನವಾಗಿದ್ದಿತು. ಈಫೆಲ್ ಗೋಪುರ ಸಾಧಿಸಿದ ಉದ್ದೇಶ ಅದೇ ಎಂದು ಹೇಳಬಹುದು. (ಪುಟ ೧೨೪-೫)

(ಈ) ಕೆಲವೇ ಮಾತುಗಳಲ್ಲಿ ವ್ಯಕ್ತಿ ಚಿತ್ರಗಳನ್ನು ನೀಡುವ ಗಾಂಧೀಜಿಯವರ ಲೇಖನ ಕೌಶಲದ ಕುರುಹಾಗಿರುವ ಈ ಪ್ರಸಂಗ ಅದೆಷ್ಟು ಸಹಜವಾಗಿ ಮೂಡಿದೆ :

ಸರ್ ಫಿರೋಜ್‌ಷಾ ನನಗೆ ಹಿಮಾಲಯದಂತೆ ಕಂಡಿದ್ದರು. ಲೋಕಮಾನ್ಯರು ಸಾಗರದಂತೆ ಕಂಡಿದ್ದರು. ಆದರೆ ಗೋಖಲೆ ಗಂಗಾನದಿಯಂತಿದ್ದರು. ಆ ಪವಿತ್ರವಾದ ನದಿಯಲ್ಲಿ ಯಾರು ಬೇಕಾದರೂ ಚೈತನ್ಯದಾಯಕ ಸ್ನಾನ ಮಾಡಬಹುದಾಗಿದ್ದಿತು. ಹಿಮಾಲಯವನ್ನು ಹತ್ತುವುದು ಸಾಧ್ಯವಿರಲಿಲ್ಲ; ಸಮುದ್ರದಲ್ಲಿ ಯಾನ ಮಾಡುವುದೂ ಸುಲಭವಲ್ಲ. ಆದರೆ ಗಂಗಾನದಿ ಎಲ್ಲರನ್ನೂ ತೊಡೆಯ ಮೇಲೆ ಆಡಲು, ಹೃದಯದಲ್ಲಿ ನಲಿದಾಡಲು ಆಹ್ವಾನಿಸುತ್ತಾಳೆ. ಗಂಗಾನದಿಯಲ್ಲಿ ಪುಟ್ಟ ನಾವೆಯಲ್ಲಿ ಹುಟ್ಟುಹಾಕುತ್ತಾ ಹೋಗಬಹುದು. ಅದೇ ಒಂದು ಆನಂದ. (ಪುಟ ೨೮೨)

(ಉ) ಪವಿತ್ರಕ್ಷೇತ್ರವೆಂದು ಭಾವಿಸಿರುವ ಎಡೆಯಲ್ಲಿ ಬೀಡುಬಿಟ್ಟಿರುವ ಜುಗುಪ್ಸೆಯ ವರ್ಣನೆ ಕನ್ನಡದಲ್ಲಿ ಹೀಗೆ ಮೈದಳೆಯುತ್ತದೆ:

ಎಲ್ಲಿ ಧ್ಯಾನ, ಭಗವದ್ವಿಷಯ, ಚಿಂತನೆ ಇವು ಇರುವುವೆಂದು ಜನ ನಿರೀಕ್ಷಿಸುತ್ತಾರೆಯೋ, ಅಂತಹ ಸ್ಥಳದಲ್ಲಿ ಅವುಗಳ ಹೆಸರೇ ಇರಲಿಲ್ಲ. ಆ ಶಾಂತಿಯನ್ನು ಭಕ್ತ, ತನ್ನಲ್ಲಿಯೇ ಕಂಡುಕೊಳ್ಳಬೇಕಾಗಿದ್ದಿತು. ಪರಿಸ್ಥಿತಿಯ ಗದ್ದಲವನ್ನೇ ಮರೆತು ಧ್ಯಾನದಲ್ಲಿ ಲೀನರಾಗಿದ್ದ ಅನೇಕ ಭಗಿನಿಯರನ್ನು ನಾನು ನೋಡಿದೆನು. ಆದರೆ ದೇವಸ್ಥಾನದ ಅಧಿಕಾರಿಗಳಿಗೆ ಇದರ ಕೀರ್ತಿ ಸಲ್ಲತಕ್ಕುದಲ್ಲ. ದೇವಸ್ಥಾನದ ಅಧಿಕಾರಿಗಳು ದೇವಸ್ಥಾನದಲ್ಲಿ ದೈಹಿಕ ಮತ್ತು ಆಧ್ಯಾತ್ಮಿಕವಾದ ಶುದ್ಧವಾದ, ಮಧುರವಾದ ವಾತಾವರಣವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಹೊರಬೇಕು. ಅದರ ಬದಲು ನಾನು ನೋಡಿದುದು ತಂತ್ರಿಗಳಾದ ಅಂಗಡಿಯವರು ಜನರಿಗೆ ಮಿಠಾಯಿಗಳನ್ನೂ ಆಧುನಿಕ ರೀತಿಯ ಬೊಂಬೆಗಳನ್ನೂ ಮಾರುತ್ತಿದ್ದ ಅಂಗಡಿ ಬೀದಿಯನ್ನು. (ಪುಟ ೩೭೬)

(ಊ) ಭಾರತದ ಬಡತನದ ದಾರುಣಚಿತ್ರ ಕನ್ನಡದಲ್ಲಿಯೂ ಎಷ್ಟು ಶಕ್ತಿಪೂರ್ಣವಾಗಿ ಮೂಡಿದೆ:

....ಒಂದು ಸಣ್ಣ ಹಳ್ಳಿಗೆ ನಾನು ಹೋಗಬೇಕಾಯಿತು. ಅಲ್ಲಿಯ ಕೆಲವು ಸ್ತ್ರೀಯರು ಬಹಳ ಕೊಳಕು ಬಟ್ಟೆಗಳನ್ನು ಧರಿಸಿದ್ದರು. ನಾನು ನನ್ನ ಹೆಂಡತಿಗೆ "ಅವರು ಏಕೆ ಬಟ್ಟೆಗಳನ್ನು ಒಗೆದುಕೊಳ್ಳುವುದಿಲ್ಲ ಎಂಬುದನ್ನು ವಿಚಾರಿಸು" ಎಂದು ಹೇಳಿದೆನು. ಅವಳು ವಿಚಾರಿಸಿದಾಗ ಒಬ್ಬ ಹೆಂಗಸು ನನ್ನ ಹೆಂಡತಿಯನ್ನು ತನ್ನ ಮನೆಯೊಳಕ್ಕೆ ಕರೆದುಕೊಂಡು ಹೋದಳು. "ಇಲ್ಲಿ ನೋಡಿ. ಬಟ್ಟೆಗಳನ್ನಿಡಲು ಪೆಟ್ಟಿಗೆಯಾಗಲೀ ಬೀರುವಾಗಲಿ ಇಲ್ಲ. ನಾನು ಉಟ್ಟುಕೊಂಡಿರುವ ಸೀರೆಯೊಂದೇ ನನ್ನಲ್ಲಿ ಇರುವುದು. ಇದನ್ನು ನಾನು ಹೇಗೆ ಒಗೆದುಕೊಳ್ಳಲಿ? ನನಗೆ ಇನ್ನೊಂದು ಸೀರೆಯನ್ನು ಒದಗಿಸುವುದಾದರೆ ನಾನು ನಿತ್ಯವೂ ಸ್ನಾನ ಮಾಡಿ ಶುಭ್ರವಾದ ವಸ್ತ್ರಗಳನ್ನು ಧರಿಸುವೆನು." (ಭಾಗ ೨, ಪುಟ ೨೫೫)

(೫) ಜೀವನದ ಅತ್ಯಂತ ನಾಟಕೀಯ ಪ್ರಸಂಗಗಳನ್ನು ಗುರುತಿಸಿ ವರ್ಣಿಸುವ ಗಾಂಧೀಜಿಯವರ ಕೌಶಲಕ್ಕೆ ಪ್ರತೀಕವಾಗಿರುವ ಸನ್ನಿವೇಶದ ಕನ್ನಡ ಅನುವಾದ ಹೀಗೆ ಕಾಣಿಸಿಕೊಳ್ಳುತ್ತದೆ:

> ಮಾತು ಅವಳನ್ನು ಬಾಣದಂತೆ ಚುಚ್ಚಿತು. "ನಿಮ್ಮ ಮನೆಯನ್ನು ನೀವೇ ಇಟ್ಟು ಕೊಳ್ಳಿ. ನಾನು ಹೊರಟೆ" ಎಂದು ಗಟ್ಟಿಯಾಗಿ ಪ್ರತ್ಯುತ್ತರವಿತ್ತಳು. ನನ್ನನ್ನೇ ನಾನು ಮರೆತೆ. ನನ್ನ ಹೃದಯದಲ್ಲಿ ದಯೆಯು ಸಹ ಬತ್ತಿಹೋಯಿತು. ನಾನು ಅವಳ ಕೈಯನ್ನು ಹಿಡಿದುಕೊಂಡು ಏಣಿಯ ಎದುರಿಗೆ ಇದ್ದ ಬಾಗಿಲಿಗೆ ಆ ನಿಸ್ಸಹಾಯಕ ಸ್ತ್ರೀಯನ್ನು ದರದರನೆ ಎಳೆದುಕೊಂಡು ಹೋಗಿ, ಅವಳನ್ನು ಹೊರಕ್ಕೆ ತಳ್ಳುವ ಉದ್ದೇಶದಿಂದ ಬಾಗಿಲನ್ನು ತೆರೆಯತೊಡಗಿದೆನು. ಅವಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯುತ್ತಿದ್ದಿತು. ಆಕೆ "ನಿಮಗೆ ಸ್ವಲ್ಪವೂ ನಾಚಿಕೆಯೇ ಬೇಡವೆ? ಇಷ್ಟರಮಟ್ಟಿಗೆ ನೀವು ಮೈಮರೆಯುವುದೆ? ನಾನು ಎಲ್ಲಿಗೆ ಹೋಗಲಿ? ಇಲ್ಲಿ ನಾನು ಹೋಗುವುದಕ್ಕೆ ನನ್ನ ತಂದೆ–ತಾಯಿಗಳ ಮನೆ ಇದೆಯೆ? ನಿಮ್ಮ ಹೆಂಡತಿಯಾದ ಮೇಲೆ ನಿಮ್ಮ ಹೊಡೆತ ಬಡಿತಗಳನ್ನೆಲ್ಲ ನಾನು ತಿನ್ನಬೇಕೆಂದು ನೀವು ಭಾವಿಸಿದ್ದೀರಿ. ಅಯ್ಯೋ ದೇವರೆ ಸ್ವಲ್ಪವಾದರೂ ನಾಚಿಕೆ ಬೇಡವೆ? ಬಾಗಿಲನ್ನು ಹಾಕಿ. ನಮ್ಮ ಈ ರಾದ್ಧಾಂತವನ್ನು ಯಾರಾದರೂ ಬಂದು ಕಂಡಾರು...."(ಅದೇ, ಪುಟ ೩೭)

(೬) ಸತ್ಯನಿಷ್ಠ ಹೇಳಿಕೆಯ ಗಾಂಭೀರ್ಯ, ಗುರುತ್ವ-ಮಹತ್ತ್ವಗಳು ಇನ್ನೆಷ್ಟು ಸಹಜವಾಗಿ ತಾನೇ ಮೈವೆತ್ತಿಯಾವೆಂಬ ಭಾವನೆಯನ್ನು ಮೂಡಿಸುವ ಈ ಪ್ರಸಂಗವನ್ನು ನೋಡಿ:

> ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೆಯ ಅಧಿನಿಯಮದ ಪ್ರಕಾರ ಸರಕಾರ ನನ್ನ ಮೇಲೆ ಜಾರಿ ಮಾಡಿದ ಆಜ್ಞೆಯನ್ನು ತಿರಸ್ಕರಿಸಿದಂತೆ ತೋರುವ ಈ ಗಂಭೀರವಾದ ಹೆಜ್ಜೆಯನ್ನು ನಾನು ಏಕೆ ಇಟ್ಟೆ ಎಂಬುದನ್ನು ವಿವರಿಸುವ ಹೇಳಿಕೆಯನ್ನು ನ್ಯಾಯಾಸ್ಥಾನದ ಅಪ್ಪಣೆ ಪಡೆದು, ಸಂಕ್ಷೇಪವಾಗಿ ಹೇಳಬಯಸುತ್ತೇನೆ. ಇದು ಸ್ಥಳದ ಅಧಿಕಾರಿಗಳಿಗೂ ನನಗೂ ಇರುವ ಭಿನ್ನಾಭಿಪ್ರಾಯದ ಪ್ರಶ್ನೆ ಎಂಬುದು ನನ್ನ ನಮ್ರ ಅಭಿಪ್ರಾಯ. ನಾನು ಈ ಪ್ರಾಂತ್ಯಕ್ಕೆ ಬಂದಿರುವುದು ಜನೋಪಕಾರವನ್ನೂ ರಾಷ್ಟ್ರಸೇವೆಯನ್ನೂ ಮಾಡುವುದಕ್ಕಾಗಿ. ನಾನು ಹೀಗೆ ಮಾಡಿರುವುದು ರೈತರ ಒತ್ತಾಯಪೂರ್ವಕ ಪ್ರಾರ್ಥನೆಯಂತೆ...ಆದರೆ ಯಾರಿಗೋಸ್ಕರವಾಗಿ ನಾನು ಇಲ್ಲಿ ಬಂದಿದ್ದೇನೆಯೋ ಅವರ ವಿಷಯದಲ್ಲಿ ಕರ್ತವ್ಯ ಭ್ರಷ್ಟನಾಗದೆ, ಹೀಗೆ ಮಾಡುವುದು (ಕಾನೂನು ಪಾಲನೆ) ನನ್ನಿಂದ ಸಾಧ್ಯವಿರಲಿಲ್ಲ...ಭಾರತದ ಸಾರ್ವಜನಿಕ ಜೀವನದಲ್ಲಿ, ನನ್ನಂತಹ ಸ್ಥಾನವನ್ನು ಹೊಂದಿರು

ವವನು, ಸರಿಯಾದ ಮೇಲುಪಂಕ್ತಿಯನ್ನು ಹಾಕಬೇಕೆಂಬುದು ನನಗೆ ಚೆನ್ನಾಗಿ ಅರಿವಾಗಿದೆ. ನಾವು ಇಂದು ಬಹಳ ತೊಡಕಾದ ರಾಜಕೀಯ ಸಂವಿಧಾನದಡಿಯಲ್ಲಿ ಬಾಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಆತ್ಮಗೌರವವುಳ್ಳ ನನ್ನನ್ನು ಇದಿರುಸುತ್ತಿರುವ ಪ್ರಶ್ನೆಗೆ ಉತ್ತರವಾಗಿ ನಾನು ಅನುಸರಿಸಲು ತೀರ್ಮಾನಿಸಿರುವುದೇ ನಿರಪಾಯವಾದ ಮತ್ತು ಮಾನವಾದ ಮಾರ್ಗ—ಪ್ರತಿಭಟಿಸದೆ ಆಜ್ಞೋಲ್ಲಂಘನೆಯ ಶಿಕ್ಷೆಗೆ ಒಳಗಾಗುವುದು. (ಅದೇ, ಪುಟ ೨೪೧–೪೨)

(ಎ) ಗಾಂಧೀಜಿಯವರ ವ್ಯಕ್ತಿತ್ವದ ಮಿಡಿತ ಹೆಜ್ಜೆ ಹೆಜ್ಜೆಗೂ ನಮಗೆ ಅನುಭವಕ್ಕೆ ಬರುವುದು ಅವರ ಆತ್ಮವಿಶ್ಲೇಷಣೆಗಳಿಂದ. ಅಂಥ ಒಂದು ವಿಶ್ಲೇಷಣೆ ಕನ್ನಡದಲ್ಲಿ ಹೀಗೆ ಮೂಡುತ್ತದೆ:

ಈ ಅಭಿನಂದನೆ ಮತ್ತು ಮೈಸೂರಾಯರ ಸಭೆಯಲ್ಲಿ ಹಿಂದೂಸ್ತಾನಿಯಲ್ಲಿ ಮಾತನಾಡಲು ನಾನೇ ಮೊದಲನೆಯವ ಎಂಬುದು ನನ್ನ ರಾಷ್ಟ್ರಾಭಿಮಾನಕ್ಕೆ ನೋವನ್ನುಂಟುಮಾಡಿತು. ನನ್ನಲ್ಲಿ ನಾನು ಕುಗ್ಗಿಹೋದೆನು. ಒಂದು ದೇಶದಲ್ಲಿ, ಆ ದೇಶಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ಸೇರಿದ್ದ ಸಭೆಯಲ್ಲಿ ಆ ದೇಶ ಭಾಷೆಗೇ ಬಹಿಷ್ಕಾರ! ನನ್ನಂತಹ ಯಾವನೋ ಒಬ್ಬ ಹಿಂದೂಸ್ತಾನಿಯಲ್ಲಿ ಮಾತನಾಡಿದರೆ ಅದಕ್ಕಾಗಿ ಅಭಿನಂದನೆ! ಇದು ಎಂತಹ ದುಃಖಕರ ಪ್ರಸಂಗ! ಇಂತಹ ಸಂಗತಿಗಳು ನಾವೆಷ್ಟು ಅಧೋಗತಿಗೆ ಇಳಿದಿರುವೆವೆಂಬುದನ್ನು ಜ್ಞಾಪಕಕ್ಕೆ ತರುತ್ತವೆ. (ಅದೇ, ಪುಟ ೨೮೬)

(ಏ) ಗಾಂಧೀಜಿಯವರ ವ್ಯಕ್ತಿಚಿತ್ರಗಳು ಮುನ್ನೆಲೆಯ ಹಿರಿಯ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿಲ್ಲ; ರಾಜಕೀಯವಾಗಿ ಸ್ಥಾನಮಾನ ಗಳಿಸದೆ ಇರುವ, ಆದರೂ ತಮ್ಮ ವ್ಯಕ್ತಿತ್ವದ ವೈಶಿಷ್ಟ್ಯದಿಂದ ಗಾಂಧೀಜಿಯವರ ಗಮನವನ್ನು ಸೆಳೆದ ಹಿನ್ನೆಲೆಯ ಕಿರಿಯ ಪಾತ್ರಗಳನ್ನೂ ಅವು ಒಳಗೊಳ್ಳುತ್ತವೆ. ಅಂಥ ಎರಡು ಚಿತ್ರಣಗಳನ್ನು ಇಲ್ಲಿ ಗಮನಿಸಬಹುದು:

(i) ೧೯೧೭ನೆಯ ಸಂವತ್ಸರದಲ್ಲಿ ಬರೋಚದ ಶಿಕ್ಷಣ ಸಮ್ಮೇಳನ ಅಧ್ಯಕ್ಷತೆ ವಹಿಸಲು ನನ್ನನ್ನು ನನ್ನ ಗುಜರಾತಿ ಮಿತ್ರರು ಕರೆದುಕೊಂಡು ಹೋದರು. ಅಲ್ಲಿ ನಾನು ಆ ಅದ್ವಿತೀಯಳಾದ ಶ್ರೀಮತಿ ಗಂಗಾಬಹನ್ ಮಜುಂದಾರಳನ್ನು ನೋಡಿದೆನು. ಆಕೆ ಆಗ ವಿಧವೆ. ಆದರೆ ಅವಳ ಸಾಹಸಕ್ಕೆ ಕೊನೆಯೇ ಇರಲಿಲ್ಲ. ಸಾಮಾನ್ಯ ಅರ್ಥದಲ್ಲಿ ಆಕೆಯು ಅಷ್ಟೇನೂ ಶಿಕ್ಷಿತಳಲ್ಲ. ಆದರೆ ಧೈರ್ಯ, ವಿವೇಕ ಇವುಗಳಲ್ಲಿ ಆಕೆ ನಮ್ಮ ಸಾಧಾರಣ ಸುಶಿಕ್ಷಿತ ಸ್ತ್ರೀಯರನ್ನು ಸುಲಭವಾಗಿ ಮೀರಿಸಿದಳು. ಆಕೆ ಆಗಲೇ ಅಸ್ಪೃಶ್ಯತೆಯ ಕಳಂಕವನ್ನು ತೊಲಗಿಸಿ ನಿರ್ಭಯವಾಗಿ ಅವರೊಂದಿಗೆ ಬೆರೆತು ಅವರ ಸೇವೆ ಸಲ್ಲಿಸುತ್ತಿದ್ದರು. (ಅದೇ, ಪುಟ ೬೫೪–೫೫)

(ii) ಖಾದಿಯ ಪ್ರಸಾರದಲ್ಲಿ ಈ ದಂಪತಿಗಳು (ಶೇಠ ಶ್ರೀರಾಮಜೀ ಮತ್ತು ಗಂಗಾಬಾಯಿ) ಮಾಡಿದ ಕಾರ್ಯವೇನೋ ಬಹಳ ಗಣನೀಯವಾದುದು. ಅವರು ಗುಜರಾತಿನಲ್ಲಿಯೂ ಬೇರೆ ಎಡೆಗಳಲ್ಲಿಯೂ ಅನೇಕರಿಗೆ ಕೈನೂಲಿನಿಂದ ನೇಯುವುದನ್ನು ಕಲಿಸಿದರು. ಮಗ್ಗದ ಮೇಲೆ ಕುಳಿತ ಗಂಗಾಬಾಯಿಯನ್ನು ನೋಡುವುದಂತೂ ಭಾವಪೂರಿತ ದೃಶ್ಯ. ಈ ಅನಕ್ಷರಸ್ಥ, ಆದರೆ ಆತ್ಮಪ್ರತ್ಯಯವುಳ್ಳ ಸಹೋದರಿ ತನ್ನ ಮಗ್ಗದ ಮೇಲೆ ಕುಳಿತು ನೇಯುವಾಗ, ಅವಳು ಅದರಲ್ಲಿಯೇ ಪೂರ್ಣವಾಗಿ ಲೀನವಾಗುತ್ತಾಳೆ. ಅವಳ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಲು ಸಾಧ್ಯವಿಲ್ಲ. ಹಾಗೆಯೇ ಅವಳ ದೃಷ್ಟಿಯನ್ನು ಅವಳಿಗೆ ಪ್ರಿಯವಾದ ಮಗ್ಗದಿಂದ ಸಮ್ಮಿಡೆಗೆ ಎಳೆಯುವುದೂ ಸಾಧ್ಯವಿಲ್ಲ. (ಅದೇ, ಪುಟ ೩೫೯)

ಶಾಬ್ದಿಕ ಅನುವಾದದಲ್ಲಿ ಮಾತ್ರ ತೊಡಗದೆ ಭಾವವನ್ನು ಹಿಡಿದು ಅನುವಾದ ಸಾಗುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಈ ವಾಕ್ಯವನ್ನು ಗಮನಿಸಬಹುದು :

"That is just like you." (ಪುಟ 97)

"ನೀವು ಹೇಳುವುದು ನಿಮ್ಮ ಸ್ವಭಾವಕ್ಕೆ ಅನುಗುಣವಾದ ಮಾತು." (ಪುಟ ೨೦೮)

ಕನ್ನಡದ ನುಡಿಗಟ್ಟಿಗೆ ಸಹಜವಾದ ರೀತಿಯಲ್ಲಿ ಇಂಗ್ಲಿಷ್ ಭಾಷೆಯ ನುಡಿಗಟ್ಟನ್ನು ಅನುವಾದಿಸಿಕೊಳ್ಳುವ ಜಾಣ್ಮೆಯೂ ನಮ್ಮನ್ನು ಮುಗ್ಧರನ್ನಾಗಿಸುತ್ತದೆ :

(i) "But truth is hard as adamant and tender as blossom" (ಪುಟ 110)

"ಆದರೆ ಸತ್ಯವು ವಜ್ರದಂತೆ ಕಠಿಣ, ಕಮಲದಂತೆ ಕೋಮಲ." (ಪುಟ ೨೩೧)

(ii) "What we wanted was work and not name, substance and not shadow." (ಪುಟ 310)

"ನಮಗೆ ಬೇಕಾಗಿದ್ದುದು, ಕೆಲಸ; ತಿರುಳೇ ಹೊರತು ನೆರಳಲ್ಲ." (ಭಾಗ ೨, ಪುಟ ೨೩೯)

ಗಾಂಧೀಜಿಯವರ ವೈವಿಧ್ಯಮಯ ಶೈಲಿಯ ಬಹುಮುಖಗಳನ್ನು ಪ್ರತಿನಿಧಿಸುವ ಇಂಥ ಪ್ರಸಂಗಗಳ ಅನುವಾದವನ್ನು ಗಮನಿಸಿದಾಗ, ಅನುವಾದ ಎಷ್ಟು ಸಹಜವೂ ಯಶಸ್ವಿಯೂ ಆಗಿದೆಯೆಂಬ ಸಂತೋಷ ಉಂಟಾಗುತ್ತದೆ. ಅನುವಾದಕರೂ, ಪರಿಷ್ಕರಣಕರ್ತರೂ ಅಭಿನಂದನೀಯರಾಗಿದ್ದಾರೆ ಎಂಬ ಭಾವನೆ ಮೂಡುತ್ತದೆ. ಅನುವಾದದ ಬಹುಭಾಗ ಹೀಗೆ ಹಿಡಿಸಿಕೊಳ್ಳುವ ಗುಣವನ್ನೇನೋ ಹೊಂದಿದೆ. ಆದರೆ ಇದು ಈ ಅನುವಾದದ ಒಂದು ಮುಖ ಮಾತ್ರ.

ಈ ಅನುವಾದದ ಇನ್ನೊಂದು ಮುಖ ಅಷ್ಟೇನೂ ಆಕರ್ಷಕವಾಗಿಲ್ಲ. ಈ ಅನುವಾದದಲ್ಲಿ ಕಂಡು ಬಂದಿರುವ ದೋಷಗಳು ಸುಮಾರು ಇಪ್ಪತ್ತು ಬಗೆಯವು. ಇವು

ಗಳನ್ನು ಸ್ಥೂಲವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು: ಸಂಪಾದನ ಸಂಬಂಧಿ, ಅನುವಾದ ಸಂಬಂಧಿ ಹಾಗೂ ಮುದ್ರಣ ಸಂಬಂಧಿ. ಈ ದೋಷಗಳನ್ನು ಗುರುತಿಸುವ ಸಂದರ್ಭದಲ್ಲಿ ಕೊಡಲಾಗುವ ಉದಾಹರಣೆಯಲ್ಲಿ ಒಂದರಲ್ಲಿಯೇ ಹಲವು ಬಗೆಯ ದೋಷಗಳು ಕೂಡಿಕೊಂಡಿರಬಹುದು. ಆದರೆ ಪರಿಶೀಲನ ಸಂದರ್ಭಕ್ಕೆ ಸಮರ್ಥನೆಯನ್ನು ಕೊಡುವ ಅಂಶವನ್ನು ಮಾತ್ರ, ಆಯಾ ಸಂದರ್ಭಗಳಲ್ಲಿ ಪ್ರಧಾನವಾಗಿ ಗುರುತಿಸಲಾಗುತ್ತದೆ. ಸಂದರ್ಭಾನುಗುಣವಾಗಿ ಹಾಗೂ ಅಗತ್ಯ ಕಂಡಲ್ಲಿ ಅನುವಾದಗಳ ತೌಲನಿಕ ಪರಿಶೀಲನೆಯನ್ನೂ ನಡೆಸಿರುವುದರಿಂದ, ವಿಮರ್ಶನ ಸೌಲಭ್ಯಕ್ಕಾಗಿ ಮುಂದಿನ ವಿಶ್ಲೇಷಣೆಯಲ್ಲಿ ಅಗತ್ಯವಾದ ಎಡೆಗಳಲ್ಲಿ "ಇಬ್ಬರು ಕನ್ನಡಿಗರು" ಮುಂದಿರಿಸಿರುವ ಕನ್ನಡ ಆವೃತ್ತಿಯನ್ನು 'ಇ. ಕ. ಆವೃತ್ತಿ' ಎಂದೂ, ಗಾಂಧೀ ಸ್ಮಾರಕ ನಿಧಿಯ ಆಶ್ರಯದಲ್ಲಿ ಗೊರೂರರು ಮುಂದಿರಿಸಿರುವ ಕನ್ನಡ ಆವೃತ್ತಿಯನ್ನು 'ಗಾ. ಸಾ. ಆವೃತ್ತಿ'ಯೆಂದೂ ಉಲ್ಲೇಖಿಸಲಾಗಿದೆ. ಅಂತೆಯೇ, ಮೂಲ ಉದಾಹೃತವಾಗಿರುವಲ್ಲೆಲ್ಲ ಮಹದೇವ ದೇಸಾಯಿ ಅವರ ಇಂಗ್ಲಿಷ್ ಆವೃತ್ತಿ (೧೯೭೨ರ ಆವೃತ್ತಿ) ಅಭಿಪ್ರೇತವಾಗಿದೆ.

ಸಂಪಾದನ ಸಂಬಂಧಿ ದೋಷಗಳು

ಸಂಪಾದನ ಸಂಬಂಧಿ ದೋಷಗಳು ಮುಖ್ಯವಾಗಿ ನಾಲ್ಕು ಬಗೆಯಾಗಿವೆ: (೧) ತಾರೀಖಿನ ವ್ಯತ್ಯಾಸ, (೨) ಏಕಸೂತ್ರದ ಅಭಾವ, (೩) ಉಚ್ಚಾರಣೆಯ ವ್ಯತ್ಯಾಸಗಳು, ಮತ್ತು (೪) ತಪ್ಪು ರೂಪಗಳು ಮತ್ತು ತಪ್ಪು ಉದ್ಧರಣಗಳು.

ತಾರೀಖಿನ ವ್ಯತ್ಯಾಸ

ವೈಸ್‌ರಾಯ್ ಅವರಿಗೆ ಗಾಂಧೀಜಿಯವರು ಬರೆದ ಪತ್ರದ ತಾರೀಖು ಏಪ್ರಿಲ್ ೧೩. (ಮೂಲ, ಪುಟ 338) ಇದು ಅನುವಾದದಲ್ಲಿ ಏಪ್ರಿಲ್ ೨೩ ಎಂದಾಗಿದೆ. 'ಆತ್ಮಕಥೆ'ಯಂತಹ ಮಹತ್ವಪೂರ್ಣ ಕೃತಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ದಿಕ್ಕನ್ನೇ ಬದಲಾಯಿಸಿದಂಥ ಘಟನೆಯ ತಾರೀಖೇ ತಪ್ಪಾಗಿ (?) ನಮೂದಿತವಾಗುವುದು ಖಂಡಿತವಾಗಿಯೂ ಅಪೇಕ್ಷಣೀಯವಲ್ಲ.[1]

---

[1] ಕುತೂಹಲದ ಸಂಗತಿಯೆಂದರೆ, ಇ. ಕ. ಆವೃತ್ತಿಯಲ್ಲಿ ಈ ತಾರೀಖು ಏಪ್ರಿಲ್ ೨೫ ಎಂದಿರುವುದು. (ನೋಡಿ: ಭಾಗ ೫, ಪುಟ ೧೨೯) ೧೯೨೭ರ ಇಂಗ್ಲಿಷ್ ಆವೃತ್ತಿಯಲ್ಲೇನಾದರೂ ಈ ತಾರೀಖು ೨೫ ಎಂದೇ ಇದ್ದು, ಮುಂದಿನ ಆವೃತ್ತಿಗಳಲ್ಲಿ ಇದನ್ನು ಸರಿಪಡಿಸಲಾಯಿತೋ ಅಥವಾ ೧೯೭೨ರ ಆವೃತ್ತಿಯಲ್ಲೇ ತಪ್ಪಾಗಿ ಅಚ್ಚಾಗಿದೆಯೋ ತಿಳಿಯದು. ಗಾ. ಸಾ. ಆವೃತ್ತಿಗೆ ಯಾವ ವರ್ಷದ ಇಂಗ್ಲಿಷ್ ಆವೃತ್ತಿ ಆಧಾರವಾಗಿದೆಯೋ ತಿಳಿಯದು. ಹೇಗೂ ಇತರ ಆಕರಗಳನ್ನು ನೋಡಿ ಈ ತಾರೀಖನ್ನು ಸರಿಪಡಿಸಬಹುದು.

ಏಕಸೂತ್ರದ ಅಭಾವ

ವ್ಯಕ್ತಿಗಳ ಮತ್ತು ಗ್ರಂಥಗಳ ಹೆಸರನ್ನು ಉಲ್ಲೇಖಿಸುವಾಗ ಯಾವುದೇ ಏಕಸೂತ್ರ ಅಥವಾ ಸಾಮಾನ್ಯ ನಿಯಮವನ್ನೂ ಅನುಸರಿಸಿಲ್ಲ. ಉದಾಹರಣೆಗೆ, ಗ್ರಂಥದ ಹೆಸರನ್ನು ಭಾಷಾಂತರಿಸಿಬಿಟ್ಟಿರುವುದುಂಟು :

(i) ಸಾಲ್ಟ್‌ರವರು ಬರೆದ "ಶಾಕಾಹಾರ—ಒಂದು ವಿನಂತಿ" (ಪುಟ ೭೮)

(ii) ಹವರ್ಡ್ ವಿಲಿಯಂಸ್‌ನ 'ಆಹಾರ ನೀತಿ' (ಪುಟ ೭೯)

(iii) ಡಾ. ಅನಾ ಕಿಂಗ್ಸ್‌ಫರ್ಡ್ ಎಂಬಾಕೆ ಬರೆದಿದ್ದ "ಆಹಾರದ ಅತ್ಯುತ್ತಮ ಮಾರ್ಗ" (ಪುಟ ೭೯)

ಕೆಲವೆಡೆಗಳಲ್ಲಿ ಗ್ರಂಥದ ಹೆಸರನ್ನು ಲಿಪ್ಯಂತರಿಸಿ, ಆ ಶೀರ್ಷಿಕೆಯ ಅರ್ಥವನ್ನು ಆವರಣದಲ್ಲಿ ಕೊಡುವ ಉಪಾದೇಯವಾದ ಕ್ರಮವನ್ನೂ ಅನುಸರಿಸುವುದುಂಟು :

ಎಥಿಕ್ಸ್ ಆಫ್ ಡಯಟ್ (ಆಹಾರ ನೀತಿ) (ಪುಟ ೯೮)

ಇನ್ನು ಕೆಲವೆಡೆಗಳಲ್ಲಿ ಕೇವಲ ಲಿಪ್ಯಂತರವಲ್ಲದೆ ಇಂಗ್ಲಿಷ್ ಲಿಪಿಯಲ್ಲೂ ಶೀರ್ಷಿಕೆ ನಮೂದಿತವಾಗಿದೆ :

ಸ್ನೆಲ್ (Snell) ಎಂಬುವನು ಬರೆದಿರುವ ಈಕ್ವಿಟಿ (Equity) (ಪುಟ ೧೦೮)

ಕೆಲವೊಮ್ಮೆ ಅನುವಾದ ಮಾತ್ರದಿಂದಲೂ, ಅರ್ಧ ಲಿಪ್ಯಂತರ ಅರ್ಧ ಅನುವಾದದಿಂದಲೂ ತೃಪ್ತರಾಗಿರುವುದುಂಟು: ಅನುವಾದವನ್ನು ಮೊದಲು ಕೊಟ್ಟು, ಅನಂತರ ಮೂಲ ಶೀರ್ಷಿಕೆಯನ್ನು ಇಂಗ್ಲಿಷ್ ಲಿಪಿಯಲ್ಲೂ ಕೊಟ್ಟಿರುವುದುಂಟು :

(i) ಹೊಸ ಒಡಂಬಡಿಕೆಯು (ಪುಟ ೧೧೦)

(ii) ಥಿಯಾಸಫಿಯ ಕೀಲಿಕೈ (Key to Theosophy) (ಪುಟ ೧೦೯)

(iii) 'ವಿಭೂತಿಪುರುಷರು ಮತ್ತು ಅವರ ಪೂಜೆ' (Heroes & Hero Worship) (ಪುಟ ೧೧೧)

ಮತ್ತೆ ಕೆಲವು ಸಂದರ್ಭಗಳಲ್ಲಿ ಶೀರ್ಷಿಕೆಯನ್ನು ಅಪೂರ್ಣವಾಗಿ ಇಂಗ್ಲಿಷ್ ಲಿಪಿಯಲ್ಲಿ ಕೊಟ್ಟಿರುವುದೂ, ಶೀರ್ಷಿಕೆಯನ್ನು ಅಪೂರ್ಣವಾಗಿ ಅನುವಾದಿಸಿರುವುದೂ, ಒಂದೇ ಶೀರ್ಷಿಕೆಯನ್ನು ಬೇರೆ ಬೇರೆ ಹೆಸರಿನಲ್ಲಿ ಅನುವಾದಿಸಿರುವುದೂ, ಒಂದೇ ಶಬ್ದಕ್ಕೆ ಒಂದೇ ಪುಟದ ಬೇರೆ ಬೇರೆ ಪ್ಯಾರಾಗಳಲ್ಲಿ ಬೇರೆ ಬೇರೆ ಪರ್ಯಾಯಗಳನ್ನು ಬಳಸಿರುವುದೂ ಉಂಟು :

(i) *The Song Celestial* (ಪುಟ 50) ಅನುವಾದದಲ್ಲಿ Song Celestial ಮಾತ್ರವಾಗಿದೆ. (ಪುಟ ೧೦೭)

(ii) *Life of Mahomet and His Successors* (ಪುಟ 119) ಮೊಹಮ್ಮದ್ ಮತ್ತು ಆತನ ಉತ್ತರಾಧಿಕಾರಿಗಳು (ಪುಟ ೨೫೨) ಎಂದಾಗಿದೆ.

(iii) *The Kingdom of God is Within You* (ಪುಟ 65) ಎಂಬ ಶೀರ್ಷಿಕೆ ‘ದೇವರ ಸಾಮ್ರಾಜ್ಯ ನಿಮ್ಮ ಹೃದಯದಲ್ಲಿದೆ’ (ಪುಟ ೧೪೧) ಎಂದೂ, ‘ಪರಮಾತ್ಮ ಸಾಮ್ರಾಜ್ಯ ನಿನ್ನಲ್ಲಿಯೇ ಇದೆ’ (ಪುಟ ೨೧೯) ಎಂದೂ ಅನುವಾದಿತವಾಗಿದೆ.

(iv) ‘ಓಲ್ಡ್ ಟೆಸ್ಟಮೆಂಟ್ (ಪೂರ್ವಾರ್ಧದ)’ (ಪುಟ ೧೧೦) ಎಂದೂ, ‘ಹೊಸ ಒಡಂಬಡಿಕೆಯು’ (ಅಲ್ಲೇ) ಎಂದೂ ಹೇಳಲಾಗಿದೆ.

ಮೇಲ್ಕಂಡ ಉದ್ಧರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅನುವಾದ ಹಾಗೂ ಲಿಪ್ಯಂತರಗಳ ವಿಚಾರಗಳಲ್ಲಿ ಮಾತ್ರವಲ್ಲದೆ, ಲೇಖನ ಚಿಹ್ನೆಗಳ (ಉದ್ಧರಣ ಚಿಹ್ನೆಗಳ) ಬಳಕೆಯೂ ಯಾದೃಚ್ಛಿಕವಾಗಿದೆ, ಏಕವಚನ ಬಹುವಚನಗಳ ಬಳಕೆಯೂ ಯಾದೃಚ್ಛಿಕವಾಗಿದೆ ಎಂಬ ಅಂಶಗಳೂ ಗೋಚರಿಸುತ್ತವೆ. ಅಷ್ಟೇ ಅಲ್ಲ, ಗ್ರಂಥಗಳ ಹೆಸರನ್ನು ಇಂಗ್ಲಿಷ್ ಲಿಪಿಯಲ್ಲಿ ಕೊಡುವಾಗ ಸಾಮಾನ್ಯವಾಗಿ ಓರೆ ಅಕ್ಷರಗಳಲ್ಲಿ ಕೊಡಬೇಕೆಂಬ ನಿಯಮವನ್ನೂ ಪಾಲಿಸಿಲ್ಲವೆಂಬುದು ಗೊತ್ತಾಗುತ್ತದೆ. ಇಷ್ಟಾಗಿಯೂ ಇವೆಲ್ಲ ಗೌಣವಾದ ಸಂಗತಿಗಳೇ. ಆದರೆ, ಈ ಸಾಮಾನ್ಯ ನಿಯಮಗಳನ್ನು ಅನುಸರಿಸದೆಹೋಗಿರುವುದರಿಂದ ಅನೇಕ ದೋಷಗಳಿಗೆ ಎಡೆದೊರೆತುಬಿಟ್ಟಿದೆ. ಉದಾಹರಣೆಗೆ :

(i) “**Dr. Allinson’s writings** on health and hygiene” (ಪುಟ 36) ಅನುವಾದದಲ್ಲಿ “**ಡಾ. ಆಲಿಸನ್‌ರು** ಬರೆದ “**ಆಹಾರ ನೈರ್ಮಲ್ಯ**” **ಎಂಬ ಗ್ರಂಥ** ದಿಂದಲೂ” (ಪುಟ ೭೯) ಎಂದಾಗಿದೆ, ಆಹಾರ ಮತ್ತು ನೈರ್ಮಲ್ಯದ ಬಗೆಗಿನ ಡಾ. ಅಲಿನ್‌ಸನ್ನರ ಬರೆಹಗಳಿಂದ ಎಂಬುದಕ್ಕೆ ಬದಲಾಗಿ.

(ii) “Bell’s *Standard Elocutionist*” (ಪುಟ 38) ಎಂಬುದು “**ಬೆಲ್ಸ್ ಸ್ಟ್ಯಾಂಡರ್ಡ್ ಎಲೊಕ್ಯೂಷನಿಸ್ಟ್**” ಎಂಬ ಪುಸ್ತಕ (ಪುಟ ೮೩) ಎಂದಾಗಿದೆ. Bell’s ಶಬ್ದ ನೇರ (ರೋಮನ್) ಅಕ್ಷರಗಳಲ್ಲಿ ಹಾಗೂ ಸಂಬಂಧಕಾರಕವನ್ನು ಸೂಚಿಸುವ ‘ಅಪಾಸ್ಟ್ರಫಿ’ ಸಹಿತವಾದ ‘ಎಸ್’ನೊಡಗೂಡಿ ಅಚ್ಚಾಗಿರುವುದನ್ನೂ, ಗ್ರಂಥದ ಹೆಸರು ಓರೆ ಅಕ್ಷರಗಳಲ್ಲಿ ಅಚ್ಚಾಗಿರುವುದನ್ನೂ ಗಮನಿಸಿದ್ದರೆ ಈ ತಪ್ಪು ಆಗುತ್ತಿರಲಿಲ್ಲ. ಕನ್ನಡದಲ್ಲಿ ಗ್ರಂಥಕರ್ತನ ಹೆಸರೂ ಗ್ರಂಥದ ಹೆಸರೆಂಬಂತೆ ಅಚ್ಚಾಗಿದೆ. ಜೊತೆಗೆ, ಕನ್ನಡದ ಸಂಬಂಧಕಾರಕ ಪ್ರತ್ಯಯ ಆ ಶಬ್ದಕ್ಕೆ ಸೇರದಿರುವುದು, ಇದು ಮುದ್ರಣ ದೋಷವಲ್ಲವೆಂಬುದನ್ನು ದೃಢಪಡಿಸುತ್ತದೆ.[1] ಎರಡು ಪಂಕ್ತಿ

---

[1] ಏಕಸೂತ್ರದ ಅಭಾವವನ್ನು ಸೂಚಿಸುವ ಎರಡನೆಯ ಉದಾಹರಣೆಯಲ್ಲಿ (ಪುಟ ೩೦೮) ‘ವಿಲಿಯಂಸ್’ನ’ ಎಂಬ ರೂಪವಿರುವುದನ್ನು ಗಮನಿಸಬಹುದು. ಪ್ರಮಾದದಿಂದ ‘ಬೆಲ್ಸ್’ ಎಂಬುದನ್ನೇ ಪೂರ್ಣ ಹೆಸರಾಗಿ ಭಾವಿಸಿದ್ದರೂ ‘ನ’ ಪ್ರತ್ಯಯ ಬರಬೇಕಾಗಿತ್ತು.

ಗಳ ತರುವಾಯ 'ಜೀಲ್ ಸಾಹೇಬ' ಎಂಬ ಪಾತ್ರ ಬಂದಿದ್ದಾನೆ. ಈ ಹೆಸರು ಗೋಚರಿಸದೆ ಹೋಗಿರುವುದು ಆಶ್ಚರ್ಯದ ವಿಷಯ.

ಮೊದಲ ಉದಾಹರಣೆಯನ್ನು ಮತ್ತೊಮ್ಮೆ ಪರೀಕ್ಷಿಸಿದರೆ, ಇನ್ನೊಂದು ಬಗೆಯ ತಪ್ಪುಗಳಿಗೂ ಎಡೆದೊರೆತಿರುವ ಅಂಶ ಸ್ಪಷ್ಟವಾಗುತ್ತದೆ—ಅಂದರೆ, ಅಂಕಿತನಾಮಗಳನ್ನು ಹೆಸರಿಸುವಲ್ಲಿ ಸಾಕಷ್ಟು ಗಮನ ಕೊಡದೆ ಇರುವುದು. ಈ ಉದಾಹರಣೆಯಲ್ಲಿ 'ಡಾ. ಆಲಿನ್‌ಸನ್' ಅವರು 'ಡಾ. ಅಲ್ಲಿಸನ್' ಆಗಿದ್ದಾರೆ. ಅಂತೆಯೇ, 'ಡಾ. ಅನಾ ಕಿಂಗ್ಸ್‌ಫರ್ಡ್' ಅವರು 'ಕೇಂಗ್ಸ್‌ಫರ್ಡ್' ಆಗಿದ್ದಾರೆ.[1]

ಅಂಕಿತನಾಮಗಳನ್ನು ಹೆಸರಿಸುವಾಗಲೂ ಯಾವುದೇ ಒಂದು ಸಾಮಾನ್ಯ ನಿಯಮವನ್ನು ಅನುಸರಿಸಿಲ್ಲ. ಕೆಲವೆಡೆಗಳಲ್ಲಿ ಕನ್ನಡ ಲಿಪ್ಯಂತರದ ಜೊತೆಗೆ ಆವರಣದಲ್ಲಿ ಹೆಸರನ್ನು ಇಂಗ್ಲಿಷ್ ಲಿಪಿಯಲ್ಲೂ ಕೊಟ್ಟಿದ್ದಾರೆ:

ವಿ. ಹಿಲ್ಸ್ (Hills) (ಪುಟ ೯೬); ಹೋವರ್ಡ್ (Howard) (ಪುಟ ೯೮); ಸ್ನೆಲ್ (Snell) (ಪುಟ ೧೨೮)

ಕೊನೆಯ ಉದಾಹರಣೆಯ ಪ್ರಸಂಗದಲ್ಲಿ, ಎರಡೇ ಪಂಕ್ತಿಗಳ ಅನಂತರದಲ್ಲಿ ಈ ಕ್ರಮವನ್ನು ಕೈಬಿಟ್ಟು **"ವೈಟ್ ಮತ್ತು ಟ್ಯೂಡರ್"** (ಅಲ್ಲೇ) ಎಂದು ಪಾತ್ರ ಕಾಣಿಸಿರುವುದುಂಟು.

ಉಚ್ಚಾರಣೆಯ ವ್ಯತ್ಯಾಸಗಳು

ಮೇಲ್ಕಂಡವೆಲ್ಲ ಅಂಥ ಗಮನಾರ್ಹ ದೋಷಗಳಲ್ಲವೆಂಬುದು ನಿಜ. ಆದರೆ, ಒಬ್ಬ ವ್ಯಕ್ತಿಯ ಹೆಸರೇ ಬೇರೆ ಬೇರೆ ಉಚ್ಚಾರಣೆಗಳೊಂದಿಗೆ ಕಾಣಿಸಿಕೊಂಡರೆ ಹೇಗೆ? ಉದಾಹರಣೆಗೆ, 'Howard' 'ಹವರ್ಡ್' (ಪುಟ ೬೯) ಮತ್ತು 'ಹೋವರ್ಡ್' (ಪುಟ ೯೮) ಎಂಬುದಾಗಿಯೂ, 'Maine' 'ಮೇನ್' (ಪುಟ ೧೨೯) ಮತ್ತು 'ಮೇಯಿನ್' (ಪುಟ ೧೪೮) ಎಂಬುದಾಗಿಯೂ ಕಾಣಿಸಿಕೊಳ್ಳುತ್ತಾರೆ. ಅಂತೆಯೇ 'Tyeb' ಅವರು 'ತಯ್ಯಾಬ್' (ಪುಟ ೨೦೦), 'ತಯಬ್' (ಪುಟ ೨೧೩), 'ತಯಾಬ್' (ಅಲ್ಲೇ) ಆಗಿ ಕಾಣಿಸಿಕೊಳ್ಳುತ್ತಾರೆ. ಕೊನೆಯ ಎರಡು ರೂಪಗಳಂತೂ ಒಂದೇ ಪುಟದಲ್ಲಿ ಕಾಣಿಸಿಕೊಳ್ಳುತ್ತವೆ. ನಗರಗಳ ಹೆಸರುಗಳು ಹಾಗೂ ಗುಣವಾಚಕಗಳೂ ಇದಕ್ಕೆ ಹೊರತಾಗಿಲ್ಲ. 'Johannesburg' 'ಜೋಹಾನೆಸ್ ಬರ್ಗ್' (ಭಾಗ ೨, ಪುಟ ೮೮) ಎಂದೂ, 'ಜೋಹಾನ್ಸ್‌ಬರ್ಗ್' (ಅದೇ, ಪುಟ ೧೩೩) ಎಂದೂ ಕಾಣಿಸಿಕೊಳ್ಳುತ್ತದೆ. 'Judicial' ಎಂಬುದು 'ಜುಡಿಷಿಯಲ್' (ಪುಟ ३೬೯) ಎಂದೂ, 'ಜುಡಿಶೀಯಲ್' (ಪುಟ ३೬೦) ಎಂದೂ ರೂಪುದಳೆಯುತ್ತದೆ.

[1] ಇದು ಅಚ್ಚಿನ ತಪ್ಪೂ ಆಗಿರಬಹುದು. ಆದರೂ, ಅಂಕಿತನಾಮದ ವಿಷಯದಲ್ಲಿ ಹೆಚ್ಚಿನ ಎಚ್ಚರ ಅಗತ್ಯವಷ್ಟೆ!

ತಪ್ಪು ರೂಪಗಳು ಮತ್ತು ತಪ್ಪು ಉದ್ಧರಣಗಳು

'ಪ್ರಾಯಶಃ', 'ಕ್ಲಿಷ್ಟ', 'ಅವಶ್ಯಕತೆ', 'ಯೌವ್ವನ'—ಇಂತಹ ತಪ್ಪು ರೂಪಗಳೂ ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿರುತ್ತವೆ. 'ಕಾಯೇನ ವಾಚಾ ಮನಸಾ' ಎಂಬ ಉದ್ಧರಣ 'ಕಾಯಾವಾಚಾಮನಸಾ' ಎಂದು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.[1] ಗುಜರಾತಿ ಸಂಸ್ಕೃತಾದಿ ಮೂಲಗಳಿಂದ ಉದ್ಧರಿಸುವಾಗಲೂ ಕಾಗುಣಿತ ಸಂಬಂಧವಾದ ತಪ್ಪುಗಳು ನುಸುಳಿಕೊಂಡಿವೆ. ಉದಾ: 'ಕೋಟಿ ಉಪಾಯ' ಎಂಬುದು 'ಕೋಟಿ ಉಪಾಯು'ವಾಗಿದೆ.[2] ಸಂಸ್ಕೃತದಲ್ಲಿ ಹ್ರಸ್ವ 'ಎ' ಕಾರವೇ ಇಲ್ಲದಿರುವಾಗ 'ನಿವರ್ತತೆ' ಎಂದು ಲಿಪ್ಯಂತರಗೊಳಿಸುವುದು—ಅದೂ ಅದೇ ಶ್ಲೋಕದ ಮೊದಲ ಶಬ್ದವನ್ನು 'ವಿನಿವರ್ತಂತೇ' ಎಂದು ಲಿಪ್ಯಂತರಗೊಳಿಸಿರುವಾಗ—ಅಷ್ಟೇನೂ ಅಪೇಕ್ಷಣೀಯವಲ್ಲ. ಅಂತೆಯೇ, ಸ್ವರಲೋಪವಾಗಿರುವ ಸಂದರ್ಭವನ್ನು ಸೂಚಿಸುವುದಕ್ಕಾಗಿ ಬಳಸಿರುವ ಅವಗ್ರಹ (S) ಚಿಹ್ನೆಯನ್ನು ಕೈಬಿಟ್ಟಿರುವುದೂ ಉಚಿತವಲ್ಲ. (ಪುಟ ೩೩೧)

ಸಂಪಾದನಕಾರ್ಯ ಮತ್ತಷ್ಟು ಸಮರ್ಪಕವಾಗಿ ನಡೆಯಬೇಕಾಗಿತ್ತೆಂಬುದು ಮೇಲ್ಕಾಣಿಸಿದ ವಿವರಣೆಯಿಂದ ವಿಶದವಾಗುತ್ತದೆಂದು ನಂಬಿದ್ದೇನೆ.

ಅನುವಾದ ಸಂಬಂಧಿ ದೋಷಗಳು

ಅನುವಾದ ಸಂಬಂಧಿ ದೋಷಗಳನ್ನು ಹದಿನೈದು ಬಗೆಯಾಗಿ ವರ್ಗೀಕರಿಸಬಹುದು: (1) ತಪ್ಪು ಅನುವಾದ, (2) ವಿರುದ್ಧಾನುವಾದ, (3) ಲೋಪ, (4) ವಿಸ್ತಾರ, (5) ಭಾವಶಬಲತೆ, (6) ಅವಧಾರಣ ವ್ಯತ್ಯಯ, (7) ಯಾದೃಚ್ಛಿಕ ಭಾವಾನುವಾದ, (8) ಶಬ್ದ ಪ್ರತಿನಿಧಾನ, (9) ವಾಕ್ಯರಚನೆ, (10) ಕಾಲಪರಿವರ್ತನೆ, (11) ಅನುಚಿತ ಶಬ್ದಗಳು, (12) ಆವರಣಾಂಕಿತ ಶಬ್ದಗಳು, (13) ಅಸಂತೋಷಕರ ಪರ್ಯಾಯಗಳು, (14) ವ್ಯಾಕರಣ, ಮತ್ತು (15) ಲೇಖನ ಚಿಹ್ನೆ ಸಂಬಂಧಿ

ತಪ್ಪು ಅನುವಾದಗಳು

(i) "...And the cloud **deceived** me." (ಪುಟ 10–11)

"ಅಂತರಿಕ್ಷ ಮೋಡಗಳಿಂದ ಆಚ್ಛಾದಿತವಾಗಿತ್ತು." (ಪುಟ ೨೯)

'cloud' ಶಬ್ದಕ್ಕೆ ಪರ್ಯಾಯವಾದ 'ಮೋಡ' ಎಂಬುದನ್ನು ಬಿಟ್ಟರೆ ಉಳಿದ ಯಾವ ಶಬ್ದಕ್ಕೂ ಮೂಲದಲ್ಲಿ ಆಧಾರವಿಲ್ಲ. ಮೂಲದ 'deceived' ಶಬ್ದ ಅನುವಾದದಲ್ಲಿ ಬರದೆ ಹೋಗಿರುವುದರಿಂದ ಅನುವಾದದ ಓದುಗ "ಅಂತರಿಕ್ಷ ಮೋಡಗಳಿಂದ

---

[1] ಆತ್ಮಕಥೆ, ಭಾಗ ೧, ಪುಟ ೩೩೦ ; ಭಾಗ ೨, ಪುಟ ೩೩೨, ೩೭೩, ೩೭೪

[2] ಅದೇ, ಭಾಗ ೧, ಪುಟ ೨೧. ಇದು ಅಚ್ಚಿನ ತಪ್ಪು ಆಗಿರಲೂಬಹುದು

ಆಚ್ಛಾದಿತ"ವಾಗಿದ್ದುದರಿಂದ "ಗಾಂಧೀಜಿ ಮೋಸ ಹೋದರು" ಎಂಬ ಅರ್ಥವನ್ನು ಊಹಿಸಿಕೊಳ್ಳಬೇಕಾಗುತ್ತದೆ. ಈ ಅರ್ಥವನ್ನು ಸ್ಪಷ್ಟಪಡಿಸುವ ವಾಕ್ಯವಾದರೂ ಬಂದಿದ್ದರೆ, ಇದನ್ನು ವಿಸ್ತಾರಾನುವಾದ ಎಂದು ಭಾವಿಸಬಹುದಾಗಿತ್ತು. ಹಾಗಾಗದೆ ಇರುವುದರಿಂದ ಈ ಹೇಳಿಕೆ ಅನಗತ್ಯವಾಗಿ ತೂರಿಸಿದ ವಾಕ್ಯವಾಗಿ ಪರಿಣಮಿಸಿ ಭಾವ ಗ್ರಹಣಕ್ಕೆ ಅಡ್ಡಿಯನ್ನುಂಟುಮಾಡಿದೆ; ಬೇರೊಂದು ಭಾವವನ್ನು ಮೂಡಿಸಿದೆ.

(ii) "I can well recollect those days, **including** the names and other particulars of the teachers who taught me." (ಪುಟ 3)

"ಆ ದಿನಗಳಲ್ಲಿ ನನಗೆ ಬೋಧಿಸಿದ ಉಪಾಧ್ಯಾಯರ ಹೆಸರುಗಳು, ಮೊದಲಾದ ವಿವರಗಳೆಲ್ಲ ನನಗೆ ಚೆನ್ನಾಗಿ ನೆನಪಿದೆ." (ಪುಟ ೧೫)

ಬೋಧಿಸಿದ ಉಪಾಧ್ಯಾಯರ ಹೆಸರು ಮತ್ತಿತರ ವಿವರಗಳೂ ಸೇರಿದಂತೆ ವಿದ್ಯಾಭ್ಯಾಸದ ಅವಧಿಯ ಅನೇಕ ಸಂಗತಿಗಳನ್ನು ನೆನಪು ಮಾಡಿಕೊಳ್ಳುವುದು ಗಾಂಧೀಜಿಯವರಿಗೆ ಸಾಧ್ಯವಾಗಿದೆ ಎಂಬುದು ಮೂಲದ ಅಭಿಪ್ರಾಯ. ಆದರೆ, ಅನುವಾದದಲ್ಲಿ "ಆ ದಿನಗಳಲ್ಲಿ....ಬೋಧಿಸಿದ ಉಪಾಧ್ಯಾಯರ ಹೆಸರುಗಳು ಮೊದಲಾದ ವಿವರಗಳೆಲ್ಲ ನನಗೆ ಚೆನ್ನಾಗಿ ನೆನಪಿದೆ" ಎಂದು ಈ ವಾಕ್ಯ ರೂಪುದಳೆದಿರುವುದರಿಂದ, ಉಪಾಧ್ಯಾಯ ಸಂಬಂಧಿ ಅಂಶಗಳು ಮಾತ್ರ ನೆನಪಿವೆ ಎಂಬ ಅರ್ಥ ಮೂಡುತ್ತದೆ. ಉಪವಾಕ್ಯಗಳನ್ನು ಮೊದಲು ಭಾಷಾಂತರಿಸಿಕೊಂಡು, ಅನಂತರ ಪ್ರಧಾನ ವಾಕ್ಯವನ್ನು ಯಥಾವತ್ತಾಗಿ ಭಾಷಾಂತರಿಸಿಕೊಂಡಿದ್ದರೆ ಈ ತಪ್ಪು ಆಗುತ್ತಿರಲಿಲ್ಲವೆನ್ನಬಹುದು. 'including' ಶಬ್ದಕ್ಕೆ ಈ ವಾಕ್ಯದಲ್ಲಿರುವ ಮಹತ್ವವನ್ನು ಗಮನಿಸಬೇಕು. 'those days' ಶಬ್ದಕ್ಕೆ ಸಂಬಂಧಿಸಿದಂತೆ ವಿಭಕ್ತಿ ಪಲ್ಲಟ ಮಾಡಿಕೊಂಡಿದ್ದೂ ಈ ತಪ್ಪು ಆಗಲಿಕ್ಕೆ ಮತ್ತೊಂದು ಕಾರಣವಾಗಿರಬಹುದು.

(iii) "**Those pearl-drops of love** cleansed my heart and washed my sin away." (ಪುಟ 19)

"**ಆ ಕಣ್ಣೀರಿನ ಮುತ್ತಿನ ಹನಿಗಳ ಪ್ರೇಮಬಾಣ**, ನನ್ನ ಕಲ್ಮಶವನ್ನು **ಕೊಚ್ಚಿ ಹಾಕಿತು.** ನಾನು ಶುದ್ಧನಾದೆನು." (ಪುಟ ೪೭)

'ಪ್ರೇಮದ ಮುತ್ತಿನ ಹನಿಗಳು' ಅನುವಾದದಲ್ಲಿ 'ಮುತ್ತಿನ ಹನಿಗಳ ಪ್ರೇಮಬಾಣ'ವಾಗಿ ಪರಿವರ್ತಿತವಾಗುತ್ತವೆ. ಅವು ಹೃದಯವನ್ನು ಪರಿಶುದ್ಧವಾಗಿಸಿ, ಪಾಪವನ್ನು ತೊಳೆದುಹಾಕಿದುವು ಎನ್ನುವ ಭಾವ 'ಪ್ರೇಮಬಾಣ' ಕೊಚ್ಚಿಹಾಕಬಹುದಾದ ವಸ್ತುವಾಗಿ, ಈ ಶಸ್ತ್ರಚಿಕಿತ್ಸೆಯ ಬಳಿಕ ಗಾಂಧೀಜಿ ಶುದ್ಧತೆಯನ್ನು ಪಡೆದರೆಂಬ ಪ್ರಕ್ರಿಯೆಯಾಗಿ ಬದಲಾವಣೆ ಹೊಂದುತ್ತದೆ. ಉಪಮೆಯ ಬದಲಾವಣೆಯಿಂದ ಆಗಬಹುದಾದ ಅನರ್ಥಕ್ಕೆ ಇದೊಂದು ಉದಾಹರಣೆ.

(iv) ಇದೇ ರೀತಿ, ಇನ್ನೊಂದು ಕಡೆ 'ಪ್ರೇಮಬಾಣ'ವು 'ರಾಮಬಾಣ'ವಾಗಿ ಪರಿವರ್ತನೆಗೊಂಡಿದೆ:

"Only he who is smitten with the **arrows of love** knows its power." (ಪುಟ 20)

"ರಾಮಬಾಣ ಹೊಕ್ಕವನು ಮಾತ್ರ ಅದರ ಶಕ್ತಿಯನ್ನು ಅರಿಯಬಲ್ಲ." (ಪುಟ ೪೭)

'ರಾಮಬಾಣ' ಎಂಬ ಮಾತಿಗೆ ದಿವ್ಯೌಷಧ, ಅಂತಿಮ ಪರಿಹಾರ ಇವೇ ಮೊದಲಾದ ಅರ್ಥಗಳೂ ಬಳಕೆಯಲ್ಲಿರುವಾಗ 'ಪ್ರೇಮಬಾಣ'ಕ್ಕೆ ಪರ್ಯಾಯವಾಗಿ ಅದನ್ನು ಬಳಸುವುದು ಸಂಗತವೆನಿಸುವುದಿಲ್ಲ. ಮೇಲಾಗಿ 'ರಾಮಬಾಣ'ದ ಸಂಹಾರಕಶಕ್ತಿಯು ನೆನಪು ಪ್ರಸಂಗದ ಸ್ವಾರಸ್ಯಕ್ಕೆ ಭಂಗವನ್ನುಂಟುಮಾಡುತ್ತದೆ.

(v) "I had nothing but **admiration** for it." (ಪುಟ 21)

"....ಮನಸ್ಸಿನಲ್ಲಿ ಅವರನ್ನು ಸ್ತುತಿಸಿದೆನು." (ಪುಟ ೫೦)

ರೋಗಿಯಾಗಿ ಹಾಸಿಗೆ ಹಿಡಿದಿದ್ದಾಗಲೂ ಶುಚಿತ್ವಕ್ಕೆ ತಮ್ಮ ತಂದೆ ಕೊಡುತ್ತಿದ್ದ ಪ್ರಾಧಾನ್ಯವನ್ನು ಕಂಡು, ಆ ಮನೋವೃತ್ತಿಯ ಬಗ್ಗೆ ಗಾಂಧೀಜಿಯವರು ತೋರುವ 'ಮೆಚ್ಚುಗೆ' ಅಥವಾ 'ಪ್ರಶಂಸೆ' ಅನುವಾದದಲ್ಲಿ 'ಸ್ತುತಿ'ಯಾಗಿ ಪರಿಣಮಿಸಿದೆ. 'it' ಎನ್ನುವ ನಪುಂಸಕ ಸರ್ವನಾಮವನ್ನು ಅನುವಾದಕರು ಗಮನಿಸಿದಂತಿಲ್ಲ. ಹೀಗಾಗಿ, ಶುಚಿತ್ವದ ಬಗೆಗಿನ ಪ್ರಶಂಸೆ ವ್ಯಕ್ತಿಗೆ ವರ್ಗಾವಣೆಗೊಂಡಿದೆ.

(vi) "Interpretation of pledges has been a fruitful source of strife all the world over." (ಪುಟ 43)

"ವ್ರತ ಅಥವಾ ಪ್ರತಿಜ್ಞೆಯ ಅರ್ಥವೇನು ಎಂಬುದರ **ಚರ್ಚೆಯಿಂದ** ಜಗತ್ತಿನಲ್ಲಿ ಬೇಕಾದಂತೆ **ವಾಗ್ವಾದ ನಡೆಯುತ್ತಿದೆ.**" (ಪುಟ ೯೩)

"ಚರ್ಚೆಯಿಂದ....ವಾಗ್ವಾದ ನಡೆಯುತ್ತಿದೆ" ಎಂಬ ನಿರರ್ಥಕ ವಾಕ್ಯರಚನೆಯನ್ನು ಕೊಟ್ಟಿರುವುದರ ಜೊತೆಗೆ ಈ ಅನುವಾದ, ಪ್ರತಿಜ್ಞೆಗಳ ಬಗೆಗಿನ ವ್ಯಾಖ್ಯಾನವೇ ವಿಶ್ವಾದ್ಯಂತ ಹೋರಾಟಕ್ಕೆ ಫಲವತ್ತಾದ ನೆಲೆಯಾಗಿ ಪರಿಣಮಿಸಿದೆಯೆಂಬ ಭಾವನೆಯನ್ನು ಮೂಡಿಸಲು ಅಸಮರ್ಥವಾಗಿದೆ.

(vii) "Rejection of these two rules gives rise to strife and inequality, **which are rooted in untruthfulness.**" (ಪುಟ 43)

"ಈ ಎರಡು ಉತ್ತಮ ನಿಯಮಗಳನ್ನೂ ತಿರಸ್ಕರಿಸಿ ನಡೆಯುವುದರಿಂದ ಅನ್ಯಾಯವಲ್ಲದೆ ಹೋರಾಟ, ಅಸತ್ಯ ಸಂಭವಿಸುತ್ತವೆ." (ಪುಟ ೯೪)

ಅಸತ್ಯವೇ ಹೋರಾಟ ಮತ್ತು ಅಸಮಾನತೆಗಳಿಗೆ ಮೂಲವಾಗಿದೆಯೆಂಬ ಭಾವ

ವನ್ನು ಮೂಡಿಸುವ ಬದಲು ತಪ್ಪಾದ, ಹೋರಾಟ ಮತ್ತು ಆಪತ್ತುಗಳಿಗೆ ಬೇರಾವುದೋ ಸಂಗತಿ ಕಾರಣವಾಗುತ್ತದೆಂಬ ವಿಕೃತಾರ್ಥ ಇಲ್ಲಿ ಮೂಡುತ್ತದೆ.

(viii) "Keeping terms" (ಪುಟ 58)
"ಟರ್ಮುಗಳನ್ನು ಇರಿಸುವುದು" (ಪುಟ ೧೨೫)

'ಹಾಜರಿ ಹಾಕುವುದು'[1] ಎಂಬ ಅರ್ಥದ ಬದಲಿಗೆ 'ಟರ್ಮುಗಳನ್ನು ಇರಿಸು'ವುದೂ ಉಂಟೇನೋ ಎಂಬ ಕಲ್ಪನೆಗೂ ಅವಕಾಶಮಾಡಿಕೊಡುವಂತಹ ಅನುವಾದವನ್ನು ಕೊಟ್ಟಿರುವುದು ಯಾರಿಗಾದರೂ ಆಶ್ಚರ್ಯವನ್ನು ಉಂಟುಮಾಡುತ್ತದೆ.

(ix) "For **one night**, I was the guest of Sir Charles Bruce, the Governor **of the colony**." (ಪುಟ 167)
"ನಾನು **ಒಂದು ದಿನ ಅಲ್ಲಿನ** ಗವರ್ನರ್ ಆದ ಸರ್ ಚಾರಲ್ಸ್ ಬ್ರೂಸರ ಅತಿಥಿಯಾಗಿದ್ದೆನು." (ಪುಟ ೩೪೭)

ಅನುವಾದದಲ್ಲಿ 'ಒಂದು ರಾತ್ರಿ' ಎಂಬುದು 'ಒಂದು ದಿನ'ವಾಗಿ, 'ಕಾಲನಿಯು' ಎಂಬ ನಾಮಪದ 'ಅಲ್ಲಿನ' ಎಂಬ ನಿರ್ದೇಶಕ ಸರ್ವನಾಮವಾಗಿ ಬದಲಾವಣೆ ಹೊಂದಿದೆ.

(x) "....**bracelets** on their **wrists**....." (ಪುಟ 173)
"....ಕೈಗೆ **ಬಳೆ (ಬಾಜುಬಂದ್)**...." (ಪುಟ ೩೫೯)

ಕಂಕಣಕ್ಕೂ ಬಳೆಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ರಾಜಮಹಾರಾಜರುಗಳು ಹೆಂಗಸರಂತೆ ವಸ್ತ್ರಭೂಷಣಗಳನ್ನು ಧರಿಸಿಕೊಂಡು ಕರ್ಜನ್ನನ ದರ್ಬಾರಿನಲ್ಲಿ ಕುಳಿತಿದ್ದುದನ್ನು ವರ್ಣಿಸುವ ಸಂದರ್ಭದಲ್ಲಿ 'ಬಳೆ' ಎಂಬ ಮಾತು ಉಚಿತವಾಗಿಲ್ಲವೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಮೇಲಾಗಿ ಆವರಣ ಪರ್ಯಾಯವಾಗಿ ಕೊಟ್ಟಿರುವ 'ಬಾಜುಬಂದ್' ಶಬ್ದ ತೋಳಿಗೆ ಕಟ್ಟಿಕೊಳ್ಳುವ ಆಭರಣವನ್ನು ಸೂಚಿಸುತ್ತದೆಯೇ ಹೊರತು ಮಣಿಕಟ್ಟಿನಲ್ಲಿ ಧರಿಸುವುದನ್ನಲ್ಲ. ಹೀಗಾಗಿ, ಇಲ್ಲಿ ಬಳಸಿರುವ ಯಾವ ಶಬ್ದವೂ ಮೂಲದ ಕಲ್ಪನೆಯನ್ನು ಮೂಡಿಸುವುದಿಲ್ಲ.

(xi) "....had **one or two** costly pairs" (ಪುಟ 260)
"....ಬೆಲೆಯಾದ **ಒಂದು, ಎರಡು** ಬೈನಾಕುಲರ್‌ಗಳು ಇದ್ದುವು." (ಭಾಗ ೨, ಪುಟ ೧೩೯)

---

[1] **Keep a term**, to give the regular attendance during a period of study : Chambers's *Twentieth Century Dictionary*, p. 1137. (Edn. 1954)

ವಿಕಲ್ಪಾರ್ಥಕವಾಗಿ 'ಅಥವಾ' ಶಬ್ದವನ್ನು ಇಲ್ಲವೇ 'ಓ'ಕಾರವನ್ನು (ಒಂದೋ ಎರಡೋ) ಬಳಸಬೇಕಾಗಿತ್ತು. ಹಾಗೆ ಮಾಡದಿರುವುದು ಹೇಗೆ ಎಷ್ಟು ಕಾಣುವಂಥ ತಪ್ಪಿಗೆ ಅವಕಾಶಮಾಡಿಕೊಟ್ಟಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

(xii) "But the Government **came, as it were, to my rescue,**" (ಪುಟ 359)
"ಆದರೆ ಸರಕಾರ, ನನ್ನ **ಸಹಾಯ**ಕ್ಕಾಗಿಯೋ ಎಂಬಂತೆ **ಆಚರಿಸಿತು.**" (ಭಾಗ ೨, ಪುಟ ೩೨೯)

ಪ್ರಸ್ತುತ ವಾಕ್ಯದ ಅನುವಾದದಲ್ಲಿರುವ ಕ್ರಿಯಾಪದ ಎಷ್ಟು ನಿರರ್ಥಕವಾಗಿದೆ ಯೆಂಬುದನ್ನು ವಿವರಿಸಬೇಕಾಗಿಲ್ಲ. ನುಡಿಗಟ್ಟನ್ನು ಭಾಷಾಂತರಿಸಿಕೊಳ್ಳುವಲ್ಲಿ ಇಂಥ ತಪ್ಪುಗಳಾಗುತ್ತವೆನ್ನುವುದು ಕೆಲವೊಮ್ಮೆ ಊಹೆಗೂ ನಿಲುಕದ ಸಂಗತಿ.[1]

(xiii) "**I had to experience** the effect of both these regulations." (ಪುಟ 95)
"ಈ ಎರಡೂ ಕಾನೂನುಗಳ ಪರಿಣಾಮವನ್ನು ನಾನು **ಅನುಸರಿಸಬೇಕಾಯಿತು.**" (ಪುಟ ೨೦೫)

ಇಲ್ಲಿಯೂ ಎಂಥ ಅಸಂಗತ ಕ್ರಿಯಾಪದ ಬಂದು ತೂರಿಕೊಂಡಿದೆಯೆಂಬುದನ್ನು ಗಮನಿಸಬಹುದಾಗಿದೆ. ಅರ್ಥಪೂರ್ಣ ವಾಚನದಲ್ಲಿ ಮೊದಲ ಬಾರಿಗೇ ನಮ್ಮನ್ನು ತಿವಿ ದೆಬ್ಬಿಸುವಂಥ ಈ ದೋಷಗಳು ಯಶಸ್ವಿಯಾಗಿ ಉಳಿದುಕೊಂಡು ಬಂದಿರುವುದು ನಿಜಕ್ಕೂ ಆಶ್ಚರ್ಯ.[2]

(xiv) ಅಂತೆಯೇ 'Prime Minister' 'ಮುಖ್ಯ ಮಂತ್ರಿ'ಯಾಗುವ 'ಸೆಕ್ರೆಟರಿ'ಯು 'ಜನರಲ್ ಸೆಕ್ರೆಟರಿ'ಯಾಗುವ, 'ಸಾರ್ಜೆಂಟ್' ತನ್ನ ಪದವಿಯನ್ನು ಕಳೆದುಕೊಳ್ಳುವಂತಹ ಪ್ರಸಂಗಗಳೂ ಇವೆ:

(1) "If your father was **Prime Minister** there...." (ಪುಟ 109)
"ನಿಮ್ಮ ತಂದೆ ಅಲ್ಲಿ **ಮುಖ್ಯ ಮಂತ್ರಿ**[3]ಯಾಗಿದ್ದಿದ್ದರೆ,...." (ಪುಟ ೨೩೩)

(2) "Babu Bhupendranath Basu and **Sjt**. Ghosal were the **secretaries.**" (ಪುಟ 169)

---

[1]-[2] 'ಆಗಮಿಸಿತು', 'ಅನುಭವಿಸಬೇಕಾಯಿತು', ಎಂಬ ಶಬ್ದಗಳು ತಪ್ಪಾಗಿ ಅಚ್ಚಾಗಿರುವ ಸಂಭವವೂ ಇಲ್ಲದಿಲ್ಲ. ಆದರೆ, ಎಲ್ಲ ತಪ್ಪಿಗೂ ಮುದ್ರಕರನ್ನು ದೋಷಿಯಾಗಿಸುವುದು ಸರಿಯೆ?

[3] ವಾಸ್ತವವಾಗಿ ಇಲ್ಲಿ ಕೋಶದ ಅರ್ಥ ಗ್ರಾಹ್ಯವಲ್ಲ; ಪ್ರಸಿದ್ಧ ವ್ಯಕ್ತಿಯೆಂಬ ಸೂಚ್ಯಾರ್ಥವೇ ಗ್ರಾಹ್ಯ.

"ಬಾಬು ಭೂಪೇಂದ್ರನಾಥ ಬಸು ಮತ್ತು **ಶ್ರೀ** ಘೋಷಾಲ್‌ರವರು **ಜನರಲ್ ಸೆಕ್ರೆಟರಿಗಳಾಗಿದ್ದರು."** (ಪುಟ ೬೬೧)

ವಿರುದ್ಧಾನುವಾದಗಳು

(i) "....had my love for her been absolutely untainted with lust, she would be a learned lady today;" (ಪುಟ 9)

"ನನ್ನ ಪ್ರೇಮ, ವಿಷಯವಾಸನೆಯಿಂದ ಬಿಡುಗಡೆ **ಹೊಂದಿರದಿದ್ದರೆ**, ಇಂದು ಆಕೆ ವಿದ್ಯಾವಂತೆಯಾಗಿರುತ್ತಿದ್ದಳು." (ಪುಟ ೨೬)

'ಬಿಡುಗಡೆ ಹೊಂದಿದ್ದರೆ' ಎಂಬುದಕ್ಕೆ ಬದಲಾಗಿ 'ಹೊಂದಿರದಿದ್ದರೆ' ಎಂಬ ನಿಷೇಧಾರ್ಥಕ ರೂಪ ಬಂದು ಮೂಲದ ಅರ್ಥಕ್ಕೆ—ವಿಷಯವಾಸನೆಯಿಂದ ದೂಷಿತವಾಗಿರದಿದ್ದರೆ ಕಸ್ತೂರ್ ಬಾ ವಿದ್ಯಾವತಿಯಾಗಿರುತ್ತಿದ್ದರು ಎಂಬ ಅರ್ಥಕ್ಕೆ—ಭಂಗ ಬಂದಿದೆ. ಎರಡು ನಿಷೇಧಾರ್ಥಕಗಳು ಬಂದು ಒಂದು ಇತ್ಯಾತ್ಮಕ ಅರ್ಥ ಬರಬೇಕಾಗಿದ್ದುದಕ್ಕೆ ಬದಲಾಗಿ ಒಂದೇ ಒಂದು ನಿಷೇಧಾರ್ಥಕ ಬಂದು ಅನರ್ಥವನ್ನೆಸಗಿದೆ.[1]

(ii) "For money could be freely spent if it had only to be spent **once instead of thrice."** (ಪುಟ 6)

"**ಮೂರು ಬಾರಿ ಮಾಡುವುದಾದರೆ** ಖರ್ಚನ್ನು ಧಾರಾಳವಾಗಿ ಮಾಡಬಹುದು." (ಪುಟ ೨೦)

ಮೂರು ಬಾರಿಗೆ ಬದಲಾಗಿ ಒಂದೇ ಬಾರಿ ಖರ್ಚುಮಾಡುವುದಾದಲ್ಲಿ ಧಾರಾಳವಾಗಿ ಖರ್ಚುಮಾಡಬಹುದೆಂಬ ಅರ್ಥ ಅನುವಾದದಲ್ಲಿ ಹೇಗೆ ವಿಕೃತಗೊಂಡು, ಆ ವಾಕ್ಯ ವಿರುದ್ಧಾರ್ಥವನ್ನೇ ಕೊಡುತ್ತಿದೆ ಎಂಬುದಕ್ಕೆ ಹೆಚ್ಚಿನ ವ್ಯಾಖ್ಯಾನ ಅನಗತ್ಯವಾಗಿದೆ.[2]

ಲೋಪಗಳು

ಈ ದೋಷಗಳನ್ನು ಶಬ್ದಲೋಪ, ಉಪವಾಕ್ಯಲೋಪ, ವಾಕ್ಯಲೋಪ ಎಂಬುದಾಗಿ ವರ್ಗೀಕರಿಸಬಹುದು. ಇಂಥ ಲೋಪಗಳಿಂದಾಗಿ ಅರ್ಥದ ಸ್ವಾರಸ್ಯ ಕಡಿಮೆಯಾಗಿದೆ; ಅರ್ಥ ಸಂದಿಗ್ಧವಾಗಿದೆ; ಕಥನ ನೀರಸವಾಗಿದೆ.

---

[1] ಇ. ಕ. ಆವೃತ್ತಿಯ ಅನುವಾದವನ್ನು ನೋಡಿ : "ನಾನು ಆಗ ಮೋಹದಿಂದ ದೂಷಿತನಾಗಿರದಿದ್ದರೆ ಆಕೆಯು ಇಂದು ವಿದ್ವಾಂಸಳಾಗುತ್ತಿದ್ದಳೆಂದು ನನಗೆ ನಂಬಿಕೆಯುಂಟು." (ಭಾಗ ೧, ಪುಟ ೨೧)

[2] ಇ. ಕ. ಆವೃತ್ತಿಯ ಅನುವಾದ ಹೀಗಿದೆ : "ಮೂರಾವರ್ತಿ ಖರ್ಚಿನ ಬದಲು ಒಂದೇ ಸಲ ಖರ್ಚು ಮಾಡಬೇಕಾದುದರಿಂದ ಹಣವನ್ನು ಹಿಡಿತವಿಲ್ಲದೆ ಚೆಲ್ಲಬಹುದು." (ಭಾಗ ೧, ಪುಟ ೧೨)

(ಅ) ಶಬ್ದಲೋಪ

(I) ಮಹತ್ತ್ವದ ಶಬ್ದಗಳನ್ನು ಅನುವಾದಿಸದೆ ಬಿಟ್ಟಿರುವುದು :

(i) "What we wanted was work **and not name**. . ." (ಪುಟ 310)
"ನಮಗೆ ಬೇಕಾಗಿದ್ದುದು ಕೆಲಸ...." (ಭಾಗ ೨, ಪುಟ ೨೬೯)

(ii) "Hindus **and Indians of other faiths**, whether Musalmans, Parsis, Christians or Jews." (ಪುಟ 207)
"....ಹಿಂದೂಗಳು ಮತ್ತು ಮುಸಲ್ಮಾನರು, ಪಾರಸೀಗಳು, ಕ್ರೈಸ್ತರು, ಯೆಹೂದಿಗಳು...." (ಭಾಗ ೨, ಪುಟ ೩೫)

(iii) " 'Which of the two do you prize more', asked Raychand bhai, 'the love of Mrs. Gladstone for her husband **as his wife, or her devoted service irrespective of her relation to Mr. Gladstone ?**..." (ಪುಟ 153)
"ನೀವು ಎರಡು ಪ್ರೇಮಗಳಲ್ಲಿ ಯಾವುದಕ್ಕೆ ಹೆಚ್ಚಾಗಿ ಬೆಲೆಕೊಡುತ್ತೀರಿ? ಗಂಡನಲ್ಲಿ ಶ್ರೀಮತಿ ಗ್ಲಾಡ್‌ಸ್ಟನ್‌ರ ಅಥವಾ ಆಕೆಯ ಸೇವಾಭಾವಕ್ಕೋ?...." (ಪುಟ ೩೨೧)

(iv) "*Unto This Last* made it clear as daylight for me that the second **and the third** were contained in the first." (ಪುಟ 224)
"ಎರಡನೆಯುದೂ, ಮೊದಲನೆಯುದರಲ್ಲಿ ಅಡಕವಾಗಿರುವುದನ್ನು 'ಅನ್‌ಟು ದಿಸ್ ಲಾಸ್ಟ್' ನನಗೆ ಸ್ಪಷ್ಟವಾಗಿ ಸೂರ್ಯೋದಯದಂತೆ ತೋರಿಸಿತು." (ಭಾಗ ೨. ಪುಟ ೬೦)

(II) ವಿಶೇಷಣಗಳನ್ನು ಕೈಬಿಟ್ಟಿರುವುದು :

(i) "The **melting** tune moved me deeply," (ಪುಟ 4)
"ಆ ರಾಗ, ನನ್ನ ಹೃದಯವನ್ನು ಕರಗಿಸಿತು." (ಪುಟ ೧೭)

(ii) "It took me nine months of **fairly** hard labour to read through the Common Law of England." (ಪುಟ 60)
"ಇಂಗ್ಲೆಂಡಿನ ಸಾಮಾನ್ಯ ಕಾನೂನನ್ನು ನಾನು ಒಂಬತ್ತು ತಿಂಗಳ ಕಠಿಣ ಅಭ್ಯಾಸ ಮಾಡಬೇಕಾಯಿತು." (ಪುಟ ೧೨೮)

(iii) "But I hit upon a **much simpler** plan." (ಪುಟ 126)
"ಅದಕ್ಕೆ ನಾನೊಂದು ಮಾರ್ಗವನ್ನು ಕಂಡುಹಿಡಿದೆನು." (ಪುಟ ೨೬೭)

(iv) "....the **superflous** starch continually droffed off it." (ಪುಟ 159)
"ಅದರಿಂದ ಹಿಟ್ಟು ಉದುರುತ್ತಲೇ ಇತ್ತು." (ಪುಟ ೩೩೨)

(v) "....in this **great** book of **Ruskin**,...." (ಪುಟ 224)
"ಈ ಗ್ರಂಥದಲ್ಲಿ...." (ಭಾಗ ೨, ಪುಟ ೬೯)

(vi) ...direct, definite and **special** contribution..." (ಪುಟ 340)
"....ಪ್ರತ್ಯಕ್ಷವಾದ ಮತ್ತು ಸ್ಪಷ್ಟವಾದ ಸೇವೆ..." (ಭಾಗ ೨, ಪುಟ ೨೯೪)

(ಆ) ಉಪವಾಕ್ಯಲೋಪ

(i) "An Assistant Political Agent spoke insultingly of the Rajkot Thakore Saheb, **his chief**...." (ಪುಟ 2)

"ಒಂದು ಸಲ ಒಬ್ಬ ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟರು ರಾಜಕೋಟ್ ಠಾಕೂರ್ ಸಾಹೇಬರಿಗೆ ಅವಮಾನ ಮಾಡಲು...." (ಪುಟ ೧೨)

(ii) "There is another incident. . . .**and which is worth recording.**" (ಪುಟ 3)

"....ಘಟನೆಯೊಂದನ್ನು ಹೇಳಬೇಕು." (ಪುಟ ೧೫)

(iii) "Vegetarians...abjured **the flesh of birds and beasts**,..." (ಪುಟ 42)

"....ಶಾಕಾಹಾರಿಗಳು ಮಾಂಸಾಹಾರವನ್ನು ತ್ಯಜಿಸಿದ್ದರು." (ಪುಟ ೯೨)

(ಇ) ವಾಕ್ಯವಾಕ್ಯಗಳನ್ನೇ ಕೈಬಿಟ್ಟಿರುವುದು

"**I saw that**, if animal passion had not blinded me, **I should have been spared the torture of separation from my father during his last moments.** I should have been massaging him, and he would have died in my arms." (ಪುಟ 22)

"ನಾನು ವಿಷಯಾಂಧನಾಗಿಲ್ಲದಿದ್ದರೆ ಅಂತ್ಯಕಾಲದವರೆಗೆ ನಮ್ಮ ತಂದೆಯ ಕಾಲುಗಳನ್ನು ಒತ್ತುತ್ತಲೇ ಇರುತ್ತಿದ್ದೆ. ಅವರು ನನ್ನ ಹಸ್ತಗಳ ಮೇಲೆ ಅವಸಾನ ಹೊಂದುತ್ತಿದ್ದರು." (ಪುಟ ೫೧)

ವಿಸ್ತಾರಾನುವಾದದ ದೋಷಗಳು

ಈ ಶೀರ್ಷಿಕೆಯ ಅಂತರ್ಗತವಾಗಿ ಬರುವ ದೋಷಗಳನ್ನು ಶಬ್ದವಿಸ್ತಾರ, ಭಾವ ವಿಸ್ತಾರ ಹಾಗೂ ವ್ಯಾಖ್ಯಾನರೂಪವಾಗಿ ವರ್ಗೀಕರಿಸಬಹುದು. ಅನುವಾದಕನಿಗೆ ಸೂಕ್ತ ಪರ್ಯಾಯ ಪದ ಗೋಚರಿಸದೆ ಹೋದಾಗ, ಮೂಲದ ಭಾವವನ್ನು ಸಮರ್ಪಕವಾಗಿ ಅನುವಾದಿಸಿಲ್ಲವೆಂದು ತೋರಿದಾಗ, ಭಾವವನ್ನು ಮತ್ತಷ್ಟು ವಿವರಿಸಬೇಕೆಂದೆನಿಸಿದಾಗ ಈ ಬಗೆಯ ದೋಷಗಳಿಗೆ ಎಡೆ ದೊರೆಯುತ್ತದೆ.

(ಅ) **ಶಬ್ದವಿಸ್ತಾರ**

(i) "I was married, not **betrothed.**" (ಪುಟ 5)

"ನನಗೆ ಆದುದು ಮದುವೆಯೇ ಹೊರತು, **ಮುಂದೆ ಮದುವೆಯಾಗುವ ಒಪ್ಪಂದವಲ್ಲ.**" (ಪುಟ ೧೮) ('ನಿಶ್ಚಿತಾರ್ಥ' ಎಂಬುದಕ್ಕೆ ಬದಲಾಗಿ)

(ii) "....and was called for an **interview.**" (ಪುಟ 69)

"**ಎದುರಿಗೆ ಹೋಗಿ ಸಂಧಿಸಬೇಕೆಂದು** ಕರೆ ಬಂದಿತು." (ಪುಟ ೧೫೦) ('ಸಂದರ್ಶನ' ಎಂಬುದಕ್ಕೆ ಬದಲಾಗಿ)

(iii) "So I shall **expect** you...." (ಪುಟ 89)

"ಹಾಗಾದರೆ.... ನೀವು **ಬರುವುದನ್ನು** ನಾನು **ಕಾಯುತ್ತಿರುತ್ತೇನೆ.**" (ಪುಟ ೧೯೨) ('ನಿರೀಕ್ಷಿಸು' ಎಂಬುದಕ್ಕೆ ಬದಲಾಗಿ)

(iv) "Mauritius was one of the **ports of call,**" (ಪುಟ 167)

"**ದಾರಿಯಲ್ಲಿ ಮಾರಿಷಸ್ ರೇವಿನಲ್ಲಿ ಹಡಗು ನಿಲ್ಲುವುದಾಗಿದ್ದಿತು.**" (ಪುಟ ೩೪೭) ('ಹಡಗು ನಿಲ್ದಾಣ' ಎಂಬುದಕ್ಕೆ ಬದಲಾಗಿ)

(v) "Lt. Roberts....had **received a mortal wound.**" (ಪುಟ 162)

"ಲೆ. ರಾಬರ್ಟ್ಸ್.... **ಪ್ರಾಣಾಪಾಯಕರವಾದ ಗಾಯವನ್ನು (ಗುಂಡು) ಹೊಂದಿ ಯುದ್ಧಭೂಮಿಯಲ್ಲಿ ಬಿದ್ದಿದ್ದರು.**" (ಪುಟ ೩೩೮) ('ಪ್ರಾಣಾಂತಕ ಗಾಯವಾಗಿತ್ತು' ಎಂಬುದಕ್ಕೆ ಬದಲಾಗಿ)

(ಆ) **ಭಾವವಿಸ್ತಾರ**

(i) "I know that nothing is impossible for pure love." (ಪುಟ 9)

"**ಈ ಜಗತ್ತಿನಲ್ಲಿ** ಶುದ್ಧ ಪ್ರೇಮಕ್ಕೆ ಸಾಧ್ಯವಿಲ್ಲನಾದುದು ಯಾವುದೂ ಇಲ್ಲ ವೆಂಬುದು ನನಗೆ ಗೊತ್ತು." (ಪುಟ ೨೭)

(ii) "How was he to understand the....**habits**...?" (ಪುಟ 184)

"**....ಒಳ್ಳೆಯ–ಕೆಟ್ಟ ಪದ್ಧತಿಗಳು**....ಇವೆಲ್ಲ ಹೇಗೆ ಗೊತ್ತಾಗಬೇಕು?" (ಪುಟ ೩೮೧)

(iii) "They would be deeply **shocked.**" (ಪುಟ 16)

"ಅವರು ಅತ್ಯಂತ **ಸಂಕಟಪಡುವರೆಂದೂ ವಜ್ರಾಘಾತ ಹೊಂದುವರೆಂದೂ** ನನಗೆ ಗೊತ್ತಿದ್ದಿತು." (ಪುಟ ೪೧)

(ಇ) ವ್ಯಾಖ್ಯಾನ

(i) "Renunciation of objects, without the renunciation of desires, is short lived, however hard you may try." (ಪುಟ 6)

"ಭೋಗವನ್ನು ಸವಿಯುವ ಆಸೆಯನ್ನು ಬಿಡದೆ ಭೋಗಸಾಮಗ್ರಿಯನ್ನು ಮಾತ್ರ ಬಿಟ್ಟರೆ ವೈರಾಗ್ಯ ಲಭಿಸುವುದಿಲ್ಲ. **ತ್ಯಾಗವೆಂಬುದು ಒಂದು ಮನೋವೃತ್ತಿ. ಮನಸ್ಸು ಸ್ವಾಧೀನದಲ್ಲಿಲ್ಲದೆ ಬಾಹ್ಯವರ್ತನೆಯಿಂದ ಶಾಶ್ವತ ಫಲ ದೊರೆಯುವುದಿಲ್ಲ."** (ಪುಟ ೨೧)

(ii) "...I had then passed the stage of unbelief; but the arguments in proof of Jesus being the only incarnation of God and the mediator between God and man left me unmoved." (ಪುಟ91)

"....ನನ್ನ ನಾಸ್ತಿಕತೆ ಆ ವೇಳೆಗಾಗಲೇ ಕಳೆದುಹೋಗಿದ್ದಿತು. ಆದರೆ "ಏಸು ಪ್ರಭುವೇ ದೇವರ ಅವತಾರ. ಮನುಷ್ಯನಿಗೂ ದೇವರಿಗೂ ನಡುವೆ ಅವನೇ ರಾಯಭಾರಿ: **ಅವನೊಬ್ಬನನ್ನು ಮರೆಹೊಗುವುದರಿಂದ ಮಾತ್ರವೇ ಭಗವಂತನ ಕರುಣೆ ಸಾಧ್ಯ** ಎಂಬ ವಾದ ನನ್ನ ಮನಸ್ಸಿಗೆ ಹಿಡಿಸಲಿಲ್ಲ." (ಪುಟ ೧೯೬)

(iii) "I will tell you the genesis of the franchise question." (ಪುಟ 103)

"ನಾನು ನಿಮಗೆ ಈ ಫ್ರಾಂಚೈಸ್‌ನ ಮೂಲವನ್ನು ಹೇಳುತ್ತೇನೆ. **(ಅಲ್ಲಿ ಫ್ರಾಂಚೈಸ್ ಎಂಬ ಇಂಗ್ಲಿಷ್ ಪದವನ್ನೇ ಹೇಳುತ್ತಿದ್ದರು. ಮತಾಧಿಕಾರವೆಂದರೆ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಇಂತಹ ಅನೇಕ ಇಂಗ್ಲಿಷ್ ಪದಗಳು ದೇಶಭಾಷೆಯಲ್ಲಿ ಸೇರಿಹೋಗಿದ್ದವು.")** (ಪುಟ ೨೨೨)

ಮೇಲೆ ಕಾಣಿಸಿದ ಉದಾಹರಣೆಗಳಲ್ಲಿ ಯಾವುದೇ ವಿಸ್ತಾರ ಭಾಷೆಯ ಅಗತ್ಯಗಳಿಂದಾಗಿ ಅನಿವಾರ್ಯವಾಗಿರುವಂಥದಲ್ಲವೆಂಬುದನ್ನು (amplification conditioned by the exigencies of language) ಗಮನಿಸಬಹುದಾಗಿದೆ. ಅನುವಾದಕನಲ್ಲಿರುವ ವ್ಯಾಖ್ಯಾಕಾರ ಎಚ್ಚೆತ್ತು ಕಾರ್ಯೋನ್ಮುಖನಾಗಿರುವುದಕ್ಕೆ ಬಹುಪಾಲು ಉದಾಹರಣೆಗಳು ಸಾಕ್ಷಿಯಾಗಿವೆ. ಅನುವಾದಕ ಆದಷ್ಟುಮಟ್ಟಿಗೂ ಈ ಬಗೆಯ ಅಪಾಯದಿಂದ ದೂರವಾಗಿರಬೇಕು. ಕೊನೆಯ ಉದಾಹರಣೆಯಲ್ಲಿ ಆವರಣದಲ್ಲಿ ಕೊಟ್ಟಿರುವ ವಿವರಣೆಗೆ ಮೂಲದಲ್ಲಿ ಯಾವುದೇ ಆಧಾರವಿಲ್ಲವೆಂಬುದು ಸ್ಪಷ್ಟವಾಗಿದೆ. ಈ ಅನುವಾದಕ್ಕೆ ಆಧಾರವಾಗಿರುವ ಆವೃತ್ತಿಯಲ್ಲಿ ಈ ಮಾತುಗಳಿಗೆ ಆಧಾರವಾದರೂ ಇದೆಯೋ ಎಂಬುದು ನನಗೆ ತಿಳಿಯದು. ಬಹುಶಃ ವಾಚಕರ ಸೌಲಭ್ಯಕ್ಕೋಸ್ಕರವಾಗಿ ಅನುವಾದಕರೋ, ಪರಿಷ್ಕರಣಕರ್ತರೋ, ಸಂಪಾದಕರೋ ಕೊಟ್ಟಿರುವ ವಿವರಣೆ ಇದಾಗಿರ

ಬೇಕೆಂದು ತೋರುತ್ತದೆ. ಇಂಥ ಸಂದರ್ಭಗಳಲ್ಲಿ ಪಠ್ಯಭಾಗದೊಡನೆ ಸ್ವವಿವರಣೆಯನ್ನು ಸೇರಿಸುವ ಬದಲು ಟಿಪ್ಪಣಿ ಅಥವಾ ಅಡಿಟಿಪ್ಪಣಿಯ ರೂಪದಲ್ಲಿ ಅವನ್ನು ಅಳವಡಿಸಿಕೊಳ್ಳುವುದೇ ಉತ್ತಮ ಕ್ರಮವೆಂದು ತೋರುತ್ತದೆ.

ಶಬಲೀಕರಣ

ಅನುವಾದದ ನಿಂದ್ಯ ದೋಷಗಳಲ್ಲಿ ಶಬಲೀಕರಣವೂ (dilution) ಒಂದು. ಇದು ಸೋದ್ದಿಷ್ಟವಾಗಿರಬಹುದು, ಅನುದ್ದಿಷ್ಟವಾಗಿರಬಹುದು, ಅನುವಾದಕನ ಅಸಾಮರ್ಥ್ಯದ ಫಲವೂ ಆಗಿರಬಹುದು. ಅಂಥ ಒಂದು ಉದಾಹರಣೆಯನ್ನು ಈಗ ಗಮನಿಸಬಹುದು :

"At times they were painful too, containing, as they did, **strictures** on public men." (ಪುಟ 174)

"ಕೆಲವು ವೇಳೆ ಅವು ದುಃಖದಾಯಕವೂ ಆಗಿರುತ್ತಿದ್ದುವು. ಏಕೆಂದರೆ ಅವು ಸಾರ್ವಜನಿಕ ಮುಖಂಡರ **ದೋಷಗಳಿಗೆ ಸಂಬಂಧಿಸಿದುದಾಗಿರುತ್ತಿದ್ದುವು.**" (ಪುಟ ೩೬೧)

ಮೂಲದ ತೀಕ್ಷ್ಣತೆ ಅನುವಾದದಲ್ಲಿ ಕಾಣದೊರೆಯುವುದಿಲ್ಲ. ಸ್ವತಂತ್ರ ಸಾಹಿತ್ಯ ಸೃಷ್ಟಿಯಲ್ಲಿ ಭಾವಶಬಲತೆ ದೋಷವೆಂದು ಪರಿಗಣಿತವಾಗುವಂತೆ, ಅನುವಾದದಲ್ಲಿ ಶಬಲೀಕರಣ ಕೂಡ.

ಅವಧಾರಣ ವ್ಯತ್ಯಯ ಅಥವಾ ಒತ್ತು ಬದಲಾಗುವಿಕೆ

ಮೂಲದಲ್ಲಿ ಯಾವ ಅಂಶವನ್ನು ಒತ್ತಿ ಹೇಳಲಾಗಿರುತ್ತದೆಯೋ ಅದೇ ಅಂಶಕ್ಕೆ ಅನುವಾದದಲ್ಲಿಯೂ ಅವಧಾರಣ ಅಥವಾ ಪ್ರಾಧಾನ್ಯ ದೊರೆಯಬೇಕು. ಹಾಗಿಲ್ಲದೆ ಬೇರಾವುದೋ ಅಂಶಕ್ಕೆ ಪ್ರಾಧಾನ್ಯ ದೊರೆತರೆ ಅದು ದೋಷವಾಗುತ್ತದೆ.[1]

(i) "The authors of the Smritis, as I knew even then, have laid the greatest emphasis on cleanliness both inward and outward." (ಪುಟ 128)

"ಆಗಲೇ ನನಗೆ ತಿಳಿದಿದ್ದಂತೆ, ಸ್ಮೃತಿಗಳ ಲೇಖಕರು ಅಂತರಂಗ ಬಹಿರಂಗ ಪಾವಿತ್ರ್ಯ ಶುದ್ಧತೆಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿದ್ದಾರೆ." (ಪುಟ ೨೭೦)

[1] ತಪ್ಪು ಅನುವಾದದ ಎರಡನೆಯ ಉದಾಹರಣೆಯನ್ನೂ ಈ ಸಂದರ್ಭದಲ್ಲಿ ಗಮನಿಸಬಹುದು. 'those days'ನ ಅವಧಾರಣೆ 'ಆ ದಿನಗಳಲ್ಲಿ ಬೋಧಿಸಿದ ಅಧ್ಯಾಪಕರಿಗೆ'ವರ್ಗಾವಣೆಗೊಂಡಿದೆ. (ನೋಡಿ : ಪುಟ ೩೧೨)

ಇವರಿಗೆ ತಿಳಿದಿದ್ದಂತೆ ಅವರು ಹೇಳಿಲ್ಲ; ಅವರು ಹಾಗೆ ಹೇಳಿದ್ದಾರೆ ಎಂಬುದು ಆ ಹೊತ್ತಿಗಾಗಲೇ ಇವರಿಗೆ ತಿಳಿದಿತ್ತು ಎನ್ನುವ ಅಭಿಪ್ರಾಯ ಇಲ್ಲಿ ಕಷ್ಟದಿಂದ ಮೂಡುತ್ತದೆ. ಸ್ಪಷ್ಟವಾಗಿ ಅಲ್ಲ ಎಂಬುದನ್ನು ಗಮನಿಸಬೇಕು. ಉತ್ತಮ ಅನುವಾದದಲ್ಲಿ ಅವಧಾರಣದಲ್ಲಿ ಕಿಂಚಿತ್ತೂ ವ್ಯತ್ಯಾಸವಾಗಬಾರದು ಹಾಗೂ ಅಸ್ಪಷ್ಟವಾಗಬಾರದು. ಇಂಥವೇ ಇನ್ನೊಂದು ಉದಾಹರಣೆಯನ್ನು ಗಮನಿಸಿ :

(ii) "I believe in the **Hindu theory of Guru** and **his importance** in spiritual realisation." (ಪುಟ 65)

ಹಿಂದೂ ಧರ್ಮದಲ್ಲಿ **ಗುರುವಿಗೆ ಕೊಟ್ಟಿರುವ ಮಹತ್ವಸ್ಥಾನದಲ್ಲಿಯೂ** ಧಾರ್ಮಿಕ ಸಾಕ್ಷಾತ್ಕಾರಕ್ಕೆ **ಅದರ ಪ್ರಮುಖತೆಯಲ್ಲಿಯೂ** ನನಗೆ ನಂಬಿಕೆ." (ಪುಟ ೧೪೧)

ಗುರುವಿಗೆ ಕೊಟ್ಟಿರುವ ಮಹತ್ವ (his importance) ಅನುವಾದದಲ್ಲಿ ಗುರು ಸ್ಥಾನಕ್ಕೆ ('ಅದರ ಪ್ರಮುಖತೆ') ವರ್ಗಾವಣೆಗೊಂಡಿದೆ ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಅವಧಾರಣಕ್ಕೆ ಚ್ಯುತಿಬರದಂತೆ ಈ ವಾಕ್ಯವನ್ನು ಭಾಷಾಂತರಿಸುವುದು ಕಷ್ಟಸಾಧ್ಯವಾದ ಕಾರ್ಯವೇನೂ ಅಲ್ಲ.

ಯಾದೃಚ್ಛಿಕ ಭಾವಾನುವಾದ

ಕೆಲವೆಡೆಗಳಲ್ಲಿ ಒಟ್ಟು ಒಟ್ಟಾಗಿ ಭಾವವನ್ನು ಅನುವಾದಿಸಲು ಪ್ರಯತ್ನಿಸುವುದೂ ಉಂಟು. ಭಾವ ಅತ್ಯಂತ ಸೂಕ್ಷ್ಮವಾಗಿದ್ದು, ಉದ್ದಿಷ್ಟ ಭಾಷೆ ಆ ಸೂಕ್ಷ್ಮ ಭಾವಕ್ಕೆ ವಾಹಕವಾಗಲು ಸಮರ್ಥವಾಗದೆ ಹೋದಾಗ ಭಾವಾನುವಾದ ಸಾಧ್ಯವಾಗಬಹುದು. ಆದರೆ, ಸ್ವಲ್ಪ ಹೆಚ್ಚಿನ ಪ್ರಯತ್ನದಿಂದ ಮೂಲದ ಆಶಯವನ್ನು ಯಥಾವತ್ತಾಗಿ ಬಿಂಬಿಸಬಹುದಾಗಿತ್ತೆಂಬ ಅನಿಸಿಕೆ ವಾಚಕರಿಗೆ ಉಂಟಾದಲ್ಲಿ ಆಗ ಅದು ಅನುವಾದದ ದೋಷವಾಗಿ ಪರಿಣಮಿಸುತ್ತದೆ. ಅಂಥ ಒಂದು ಉದಾಹರಣೆಯನ್ನು ಇಲ್ಲಿ ಗಮನಿಸಬಹುದು.

" ... as one of the days happened to be a Sunday, and Mr. Baker and his party would not travel on the sabbath." (ಪುಟ 100-1)

"ಏಕೆಂದರೆ ಭಾನುವಾರ (ಸಾಬತ್) ಮಿ. ಬೇಕರ್ ಮತ್ತು ಸಂಗಡಿಗರು ಪ್ರಯಾಣ ಮಾಡುತ್ತಿರಲಿಲ್ಲ." (ಪುಟ ೨೧೬)

ಪ್ರಯಾಣದ ದಿನಗಳಲ್ಲಿ "ಒಂದು ದಿವಸ ಭಾನುವಾರವಾಗಿದ್ದುದರಿಂದ ಹಾಗೂ 'ಬಿದು

ವಿನ ದಿವಸ[1] ಬೇಕರ್ ಮತ್ತು ಅವರ ಸಂಗಡಿಗರು ಪ್ರಯಾಣ ಮಾಡುತ್ತಿರಲಿಲ್ಲವಾದ್ದರಿಂದ" ಒಂದು ದಿನ ಪ್ರಯಾಣವನ್ನು ನಿಲ್ಲಿಸಬೇಕಾಯಿತು ಎಂಬ ಭಾವನೆ ಇಷ್ಟೊಂದು ಸಂಕೋಚಕ್ಕೆ ಒಳಗಾಗಬೇಕಾದ ಅಗತ್ಯವಿರಲಿಲ್ಲ. 'ಸಬತ್' ಅನ್ನು ಅನುವಾದಿಸದೆಯೇ ಆವರಣದಲ್ಲಿ ಇಡುವ ಅಗತ್ಯವೂ ಇರಲಿಲ್ಲ.

ಶಬ್ದ ಪ್ರತಿನಿದಾನ

ಅನುವಾದದಲ್ಲಿ ಶಬ್ದಕ್ಕೆ ಶಬ್ದವನ್ನು ಹಾಕುವುದು ಅನೇಕ ವೇಳೆ ಕೃತಕತೆಗೆ, ತಪ್ಪು ಅಭಿಪ್ರಾಯಕ್ಕೆ, ಸಂದಿಗ್ಧತೆಗೆ ಎಡೆಮಾಡಿಕೊಡುತ್ತದೆ. ಹೀಗಾಗಿ, ಅನುವಾದಕ ಈ ವಿಚಾರದಲ್ಲಿ ತುಂಬ ಎಚ್ಚರದಿಂದಿರಬೇಕಾಗುತ್ತದೆ. ನುಡಿಗಟ್ಟುಗಳ ಶಬ್ದಶಃ ಅನುವಾದ ಎಂಥ ಕೃತಕತೆಗೆ ಎಡೆಗೊಟ್ಟಿದೆ ಎಂಬುದಕ್ಕೆ ಉದಾಹರಣೆಯಾಗಿ ಈ ಕೆಳಗಿನವುಗಳನ್ನು ಪರಿಶೀಲಿಸಬಹುದು :

(i) "....had **earned** a name...." (ಪುಟ 1)

"....ಪ್ರಸಿದ್ಧಿಯನ್ನು **ಸಂಪಾದಿಸಿ**ದ್ದರು." (ಪುಟ ೧೨)

(ii) "....**fills** me with shame." (ಪುಟ 6)

"....ನನ್ನಲ್ಲಿ ಲಜ್ಜೆಯನ್ನು **ತುಂಬುತ್ತದೆ.**" (ಪುಟ ೨೨)

(iii) "...I may **claim a certain share** with Mr. Hume..." (ಪುಟ 170)

"....ಮಿ. ಹ್ಯೂಮನೊಂದಿಗೆ ನನ್ನ **ಭಾಗವೂ** ಸ್ವಲ್ಪ **ಇದ್ದಿತು**...." (ಪುಟ ೩೫೩)

(4) "...my work was no longer in South Africa **but** in India." (ಪುಟ 164)

"ನನ್ನ ಕೆಲಸ ಇರುವುದು ದಕ್ಷಿಣ ಆಫ್ರಿಕಾದಲ್ಲಲ್ಲ, **ಆದರೆ** ಭಾರತದಲ್ಲಿ." (ಪುಟ ೩೪೨)

(v) "....**oppose** my application..." (ಪುಟ 195)

"....ನನ್ನ ಅರ್ಜಿಯನ್ನು **ಎದುರಿಸಲಿಲ್ಲ.**" (ಭಾಗ ೨, ಪುಟ ೧೨)

(vi) "....to **do their bit** in the war..." (ಪುಟ 262)

'ಯುದ್ಧದಲ್ಲಿ **ತಮ್ಮ ಭಾಗವನ್ನು ನಿರ್ವಹಿಸಬೇಕೆಂಬುದು**" (ಅದೇ, ಪುಟ ೧೪೨)

(vii) "....**on the** Chaupati **sands**" (ಪುಟ 355)

"ಚೌಪಾತಿಯ **ಮರಳಿನ ಮೇಲೆ**..." (ಅದೇ, ಪುಟ ೩೨೧)

---

[1] ನೋಡಿ: **Sabbath**.... a time of rest; Chambers's *Twentieth Century Dictionary*, p. 968 (Edn. 1954)

ಕೆಲವೆಡೆಗಳಲ್ಲಿ ವಿವರಣೆ ಅಗತ್ಯವಾಗುತ್ತದೆ. ಇಲ್ಲದಿದ್ದಲ್ಲಿ ಸಮರ್ಪಕವಾದ ಕಲ್ಪನೆಯೇ ಮೂಡುವುದಿಲ್ಲ. ಉದಾ :

(i) **New World** (ಪುಟ 55)

ನವೀನ ಜಗತ್ತು (ಪುಟ ೧೧೯)

ವಾಸ್ತವವಾಗಿ 'New World' ಎನ್ನುವ ಶಬ್ದವನ್ನು ಬಳಸುವುದು ಉತ್ತರ ಮತ್ತು ದಕ್ಷಿಣ ಅಮೆರಿಕಾಗಳನ್ನು ಸೂಚಿಸುವುದಕ್ಕಾಗಿ[1]. ಒಮ್ಮೆಯಾದರೂ ಈ ವಿವರಣೆಯನ್ನು ಕೊಟ್ಟಲ್ಲಿ, ಮುಂದೆ ಪಾರಿಭಾಷಿಕವಾಗಿಯೇ ಬಳಸಲು ಅಡ್ಡಿಯಿಲ್ಲ.

ವಾಕ್ಯರಚನೆ

ಲೇಖಕರ ಸಹಜ, ಸಾಮಾನ್ಯ, ಜೀವಂತ ಶೈಲಿಯೂ ಏಕೋ ಅನುವಾದದ ಸಂದರ್ಭದಲ್ಲಿ ಅಲ್ಲಲ್ಲಿ ಕೃತಕವಾಗಿ ಪರಿಣಮಿಸುತ್ತದೆ. ಪ್ರಸ್ತುತ ಅನುವಾದದ ವಾಕ್ಯರಚನಾ ದೋಷಗಳನ್ನು ನಾಲ್ಕು ಬಗೆಯಾಗಿ ವರ್ಗೀಕರಿಸಬಹುದು : (ಅ) ಕೃತಕ ರಚನೆ, (ಆ) ಕರ್ತೃ–ಕ್ರಿಯೆಗಳ ಅಸಾಮಂಜಸ್ಯ, (ಇ) ದೀರ್ಘಲಂಬಿತ ವಾಕ್ಯಶೈಲಿ, ಮತ್ತು (ಈ) ಕರ್ಮಣಿ ಪ್ರಯೋಗ.

(ಅ) ಕೃತಕ ರಚನೆಗಳು :

(i) "...one Saturday, when we had school in the morning..." (ಪುಟ 10)

"ಒಂದು ಶನಿವಾರ ನಮ್ಮ ಶಾಲೆ ಬೆಳಗ್ಗೆ ಇತ್ತು." (ಪುಟ ೨೯)

(ii) "But what I failed to get there I obtained from my nurse, an old servant of the family . . ." (ಪುಟ 23)

"ಅವರಿ ದೇವಾಲಯದಿಂದ ಕಲಿಯದುದನ್ನು, ನಮ್ಮ ಕುಟುಂಬದ ಬಹುಕಾಲದ **ನೌಕರಳಾದ ಸೇವಕಿಯಿಂದ** ಅರಿತೆನು." (ಪುಟ ೫೨)

(iii) "So I decided... to remove from place to place according to the wook I had to do, thus gaining experience at the same time." (ಪುಟ 39)

ನನ್ನ ಕೆಲಸಕ್ಕೆ ಅನುಸಾರವಾಗಿಯೂ ಮತ್ತು ಅನುಭವವನ್ನು ಸಂಪಾದಿಸುವುದಕ್ಕಾಗಿಯೂ **ಕೊಠಡಿಗಳನ್ನು ಬದಲಾಯಿಸುವುದನ್ನೂ** ನಿಶ್ಚಯಿಸಿದೆನು." (ಪುಟ ೮೫)

---

[1] ನೋಡಿ : **New World**, North and South America : Chambers's *Twentieth Century Dictionary*, p. 720 (Edn. 1954)

ಅಂತೆಯೇ, "ನಾನಾದರೋ ಯಾವಾಗ **ಮನೆಯನ್ನು ಹಿಂದಕ್ಕೆ ಸೇರುತ್ತೇನೊ** ಎಂದು ಚಿಂತಿಸುತ್ತಾ ನಡೆಯುತ್ತಿದ್ದೆನು." (ಪುಟ ೧೦೩) ಹಾಗೂ "ಕಾಥೆವಾಡದ **ಪೊಲಿಟಿಕಲ್ ಏಜೆಂಟರ ಜುಡಿಷಿಯಲ್ ಅಸಿಸ್ಟೆಂಟರ ಕೋರ್ಟಿನಲ್ಲಿ** ನಡೆಯಬೇಕಾದ "**ಅಪೀಲ್.**" ಮತ್ತೊಂದು ಜಾಮನಗರದಲ್ಲಿ ನಡೆಯಬೇಕಾಗಿದ್ದ **ಒರಿಜಿನಲ್** ಮೊಕದ್ದಮೆಯಾಗಿದ್ದಿತು." (ಪುಟ ೩೭೯) ಎಂಬಂಥ ವಾಕ್ಯಗಳೂ ದೊರೆಯುತ್ತವೆ.

(ಆ) ಕರ್ತೃಕ್ರಿಯೆಗಳ ಅಸಾಮಂಜಸ್ಯ :

"ಅದನ್ನು ಧರಿಸುವ**ವನಿಗೆ,** ಹೆಚ್ಚು ಉನ್ನತವಾದ ಹೆಚ್ಚು, ಪರಿಶುದ್ಧವಾದ ಜೀವನದ ಕಡೆಗೆ ಉದ್ದೇಶಪೂರ್ವಕ ಪ್ರಯತ್ನ**ಪಡಬೇಕು.**" (ಭಾಗ ೨, ಪುಟ ೨೧೨)

(ಇ) ದೀರ್ಘಲಂಬಿತ ವಾಕ್ಯಗಳು :

ಆಧುನಿಕ ಕನ್ನಡ ತಾಳಿಕೊಳ್ಳಬಹುದಾದುದಕ್ಕಿಂತಲೂ ಭಾರವಾಗಿರುವ ದೀರ್ಘಲಂಬಿತ ವಾಕ್ಯಗಳು—ಕೆಲವೊಮ್ಮೆ ಮೂಲಕ್ಕಿಂತ ಹೆಚ್ಚು ಸುತ್ತು ಬಳಸಿನವಾಕ್ಯಗಳು—ಅನುವಾದದಲ್ಲಿ ಕಾಣದೊರೆಯುತ್ತವೆ.

(i) "Thus, whilst this movement for the preservation of non-violence was making steady though slow progress on the one hand, Government's policy of lawless repression was in full career on the other, and was mainfesting itself in the Punjab in all its nakedness." (ಪುಟ 358)

"ಹೀಗೆ ಒಂದು ಕಡೆ ಶಾಂತಿರಕ್ಷಣೆಯ ಚಳುವಳಿ ನಿಧಾನವಾಗಿಯಾದರೂ ತಪ್ಪದೆ ನಡೆಯುತ್ತಿರಲು ಮತ್ತೊಂದು ಕಡೆ ಸರಕಾರದ ಅರಾಜಕ ದಬ್ಬಾಳಿಕೆ ಪೂರ್ಣವೇಗದಲ್ಲಿ ನಡೆಯುತ್ತಾ ಪಂಜಾಬಿನಲ್ಲಿ ಮುಚ್ಚುಮರೆಯಿಲ್ಲದೆ ಕರಾಳ ರೂಪದಲ್ಲಿ ಪ್ರಕಟವಾಯಿತು." (ಭಾಗ ೨, ಪುಟ ೩೨೭)

(ii) "Please go and Inform the Police Superintendent, with my compliments, that a person living with me has misbehaved himself. I donot want to keep him in my house, but he refuses to leave. I shall be much obliged if police help can be sent me." (ಪುಟ 122)

"ದಯವಿಟ್ಟು ಹೋಗಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೇಳಿ ನನ್ನ ಜತೆಯಲ್ಲಿರುವ ಒಬ್ಬ ಮನುಷ್ಯ ವಿಶ್ವಾಸ ಘಾತಕ ತನದಿಂದ ನಡೆದಿದ್ದಾನೆಂದೂ, ನನ್ನ ಮನೆಯಲ್ಲಿ ಅವನನ್ನು ಇಟ್ಟುಕೊಳ್ಳಲು ನನಗೆ ಇಷ್ಟವಿಲ್ಲವೆಂದೂ ಆದರೆ ಅವನು ಮನೆಬಿಟ್ಟು ಹೋಗಲು ತಿರಸ್ಕರಿಸುತ್ತಿದ್ದಾನೆಂದೂ ಹೇಳಿ ಅವನನ್ನು ಮನೆಯಿಂದ ಹೊರಡಿಸಲು

ಪೋಲೀಸ್ ಸಹಾಯವನ್ನು ಕಳುಹಿಸಿದರೆ ಕೃತಜ್ಞನಾಗುವೆನೆಂದು ಹೇಳಿ." (ಪುಟ ೨೫೦)

(iii) "However serious a grievance may be in the eyes of the man who suffers from it, he will be but one of the numerous people invading the editors office, each with a grievance of his own." (ಪುಟ 136)

"ದುಃಖವನ್ನು ಅನುಭವಿಸುತ್ತಿರುವವನ ದೃಷ್ಟಿಯಲ್ಲಿ ತನ್ನ ಕಷ್ಟ ಎಷ್ಟೇ ದೊಡ್ಡದಿರಲಿ. ಪತ್ರಿಕೆಯ ಸಂಪಾದಕನಿಗೆ ಅವನೂ ಎಲ್ಲರಂತೆಯೇ ಕಷ್ಟವನ್ನು ತನ್ನಲ್ಲಿ ಬರುವ ಅನೇಕರ ಪೈಕಿ ಒಬ್ಬ ಮಾತ್ರ." (ಪುಟ ೨೮೬)

(ಈ) ಕರ್ಮಣಿ ಪ್ರಯೋಗ :

ಕನ್ನಡದ ಜಾಯಮಾನಕ್ಕೆ ಅಷ್ಟಾಗಿ ಒಗ್ಗದ ಕರ್ಮಣಿ ಪ್ರಯೋಗಗಳ ಬಳಕೆಯೂ ಅಲ್ಲಲ್ಲಿ ಕಾಣಬರುತ್ತದೆ. ಉದಾ :

(i) "ನಾನು ಪ್ರೌಢಶಾಲೆಯಲ್ಲಿ ದಡ್ಡನೆಂದು ಪರಿಗಣಿಸಲ್ಪಟ್ಟಿರಲಿಲ್ಲ." (ಪುಟ ೨೭)

(ii) "....ಮುಂದೆ ಸರಿಯಾದ ಸ್ಥಳದಲ್ಲಿ ವಿವರಿಸಲ್ಪಡುವವು." (ಪುಟ ೩೩೫)

ಅನಿವಾರ್ಯತೆಯ ಸಮರ್ಥನೆ ಇಲ್ಲದಿರುವಾಗ ಇಂಥ ವಾಕ್ಯಗಳು ಕೃತಕವಾಗಿ ತೋರುತ್ತವೆ.

ಕಾಲಪರಿವರ್ತನೆ

ಮೂಲದಲ್ಲಿರುವ ಕ್ರಿಯೆಯ ಕಾಲ ಅನುವಾದದಲ್ಲಿ ಬದಲಾಗಿರುವುದಕ್ಕೂ ಅಲ್ಲಲ್ಲಿ ಉದಾಹರಣೆಗಳು ಸಿಕ್ಕುತ್ತವೆ :

(i) "**I promised to** bless them and **give** them, as a reward used postage stamps which I had collected." (ಪುಟ 126)

"ಅದಕ್ಕೆ ಪ್ರತಿಯಾಗಿ ನಾನು ಅವರನ್ನು ಆಶೀರ್ವದಿಸಿ ನಾನು ಸಂಗ್ರಹಿಸಿದ್ದ ಉಪಯೋಗಿಸಿದ ಅಂಚೆ ಚೀಟಿಗಳನ್ನು ಅವರಿಗೆ ಬಹುಮಾನವಾಗಿ **ಕೊಟ್ಟೆನು**." (ಪುಟ ೨೬೭)

(ii) "Thus service of the Indians in South Africa ever **revealed** to me new implications of truth at every stage." (ಪುಟ 164)

"ಹೀಗೆ ದಕ್ಷಿಣ ಆಫ್ರಿಕಾದ ಭಾರತೀಯರ ಸೇವೆ. ನನಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಸತ್ಯದ ಹೊಸ ಅರ್ಥವನ್ನು ಅನಾಯಾಸವಾಗಿ **ಕಲಿಸುತ್ತಿದೆ**." (ಪುಟ ೩೪೧)

(iii) "We **knew** nothing about it." (ಪುಟ 103)

"ನಮಗೆ ಇದರ ವಿಷಯ ಏನೂ **ತಿಳಿಯದು**." (ಪುಟ ೨೨೭)

ಅನುಚಿತ ಶಬ್ದಗಳು

ಈ ಅನುವಾದದಲ್ಲಿ ಅನೇಕ ಕಡೆ ಎದ್ದು ಕಾಣುವ ದೋಷವೆಂದರೆ ಅಸೂಕ್ತ ಶಬ್ದಗಳ ಬಳಕೆ. ಅಂಥ ಕೆಲವು ಶಬ್ದಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

vow	ನಿಯಮ	income	ಉತ್ಪನ್ನ
hymn	ಗೀತೆ	interpretation	ಅರ್ಥ
arms	ಹಸ್ತಗಳು	memorial	ನಿವೇದನ ಪತ್ರಿಕೆ
pride	ಗರ್ವ		

ಬಹುಶಃ ಈ ಸಂದರ್ಭಗಳಲ್ಲಿ ಕ್ರಮವಾಗಿ ಪ್ರತಿಜ್ಞೆ, ಮಂತ್ರ, ಬಾಹು, (ಅಥವಾ ತೋಳು) ಅಭಿಮಾನ, ಆದಾಯ (ಅಥವಾ ವರಮಾನ), ವ್ಯಾಖ್ಯೆ, ಬಿನ್ನವತ್ತಳೆ ಶಬ್ದಗಳನ್ನು ಬಳಸಬಹುದಾಗಿತ್ತು.

'ವಿರುದ್ಧವಾದ' ಎಂಬ ಅರ್ಥದಲ್ಲಿ 'ವಿರೋಧವಾದ' ಎಂಬ ಶಬ್ದ ರೂಪದ ಬಳಕೆಯೂ ಇದೆ. (ಪುಟ ೩೮೫) ಮುಂದಿನ ಪುಟದಲ್ಲಿಯೇ 'ವಿರುದ್ಧವಾದ' ಎಂಬ ಸರಿಯಾದ ರೂಪವೇ ಇದೆ. (ಪುಟ ೩೮೬)

ಆವರಣಾಂಕಿತ ಶಬ್ದಗಳು

ಅನುವಾದದಲ್ಲಿ ಉದ್ದಕ್ಕೂ ಅಲ್ಲಲ್ಲಿ ಆವರಣಾಂಕಿತ ಪರ್ಯಾಯಗಳು ಕಾಣಬರುತ್ತವೆ. ಇಂಥ ಅಗತ್ಯ ಕೆಲವು ಸಂದರ್ಭಗಳಲ್ಲಿ ಉಂಟಾಗುತ್ತದೆಂಬುದು ನಿಜವಾದರೂ, ಔಚಿತ್ಯ ಮಿತಿ ಈ ವಿಧಾನವನ್ನು ಆಳವಡಿಸಿಲ್ಲವೆಂಬುವಕ್ಕೆ ಈ ಕೆಳಗಿನ ಕೆಲವು ಉದಾಹರಣೆಗಳು ಸಾಕ್ಷಿಯಾಗಿವೆ:

ಹ್ಯಾಟ್ (ಟೋಪಿ), ಪದವಿ (ಡಿಗ್ರಿ), ಟಿಪ್ಪಣಿ (ನೋಟ್ಸ್), ಕಾಲುವಾರಿ (ಫುಟ್ ಪಾತ್), ಮಿತವಾಗಿ (ತಗ್ಗಿಸಿ), ವಿದ್ಯಾರ್ಥಿನಿಲಯ (ಹಾಸ್ಟಲ್), ಸಿಸ್ಟರ್ (ಭಗಿನಿ), ಅಧಿಕಾರ (ಯೋಗ್ಯತೆ), ಜೋಡು (ಪಾದರಕ್ಷೆ), ಚೀಪೆಟ್ಟು (ಛೀಮಾರಿ), ಚಪ್ಪರ ಬದನೆ (ಟೊಮಾಟೊ), ಸೆಕ್ಷನ್ ಆಫೀಸರು (ವಿಭಾಗದ ಯಜಮಾನ), ಕಂದುರೊಟ್ಟಿ (ಬ್ರೆಡ್ಡು) ತಾರು (ಕೇಬಲ್), ಮುಖ್ಯ ಅಧಿಕಾರಿ (ಚೀಫ್ ಆಫೀಸರ್), ಪರ್‌ಫೆಕ್ಟ್ (ಸಂಪೂರ್ಣ)

ಅಸಂತೋಷಕರ ಪರ್ಯಾಯಗಳು

ಪ್ರೂಫ್, ಸ್ಮಾಲ್‌ಕಾಸ್, ಡೆಕ್, ಕ್ಯಾಬಿನ್, ಕಾಲರ್ ಇವೇ ಮೊದಲಾದ ಶಬ್ದಗಳನ್ನು ಅನುವಾದಿಸದೆಯೇ ಬಳಸಿಕೊಂಡಿರುವಾಗ ಅಥವಾ ಕೆಲವೆಡೆಗಳಲ್ಲಿ ಆವರಣಾಂಕಿತ ಪರ್ಯಾಯಗಳನ್ನು ಕೊಟ್ಟು ಬಳಸಿಕೊಂಡಿರುವಾಗ 'tie' ಶಬ್ದವನ್ನು 'ಕಂಠಬಂಧ' ಎಂದೂ, 'strecher' ಶಬ್ದವನ್ನು 'ಡೋಲಿ' ಹಾಗೂ 'ಹೆಗಲುಮಂಚ' ಎಂದೂ ಅನು

ಮಾಡಿಸಿರುವುದರ ವೈಚಿತ್ರ್ಯ ಅರ್ಥವಾಗುವುದಿಲ್ಲ. 'Appeal' ಎಂಬ ಶಬ್ದವನ್ನು ಒಂದೇ ಪುಟದಲ್ಲಿ (ಪುಟ ೨೪೧) 'ಮನವಿ' ಎಂದೂ, 'ಬಿನ್ನಹ' ಎಂದೂ ಅನುವಾದಿಸಲಾಗಿದೆ. 'propagation' ಶಬ್ದವನ್ನು 'ಶಿಶುನಿರ್ಮಾಣ' (ಭಾಗ ೨, ಪುಟ ೯೫) ಎಂದು ಅನುವಾದಿಸಿರುವುದಂತೂ ತುಂಬ ಅಸಂತೋಷಕರ.

ವ್ಯಾಕರಣ ಸಂಬಂಧಿ ದೋಷಗಳು

(i) "ನೆರೆಹೊರೆಯವರ ಶಾಂತಿಯನ್ನೂ ಸಹ ಭಂಗಪಡಿಸುತ್ತಾರೆ." (ಪುಟ ೧೯).

(ii) "ನಿಮ್ಮ ಕುಟುಂಬದವರು, ಸೇರ್ ಅಬ್ದುಲ್ಲಾರಿಗೆ ತಿಳಿದೇ ಇರುತ್ತದೆ." (ಪುಟ ೨೩೩)

(iii) "ಅವರ ಈ ಸಲಹೆ ನನಗೆ ಒಪ್ಪಲಿಲ್ಲ." (ಪುಟ ೨೮೦)

(iv) "....ಎಲ್ಲರೂ....ಸ್ವಲ್ಪಹೊತ್ತು ತೋಟದ ಕೆಲಸವನ್ನು ಮಾಡುವುದು ಎಲ್ಲರಿಗೂ ಕಡ್ಡಾಯವಾಗಿದ್ದಿತು." (ಭಾಗ ೨ ಪುಟ ೧೨೩)

(v) "ಇಂಗ್ಲೆಂಡಿನಲ್ಲಿ ಇದ್ದಾಗ ನಾನು ಅವರ ಯುದ್ಧಶಕ್ತಿಯ ಪೋಷಣೆಯಲ್ಲಿದ್ದೇನೆ (ಅದೇ, ಪುಟ ೧೪೭)

(vi) "ಅವನ್ನು ಧರಿಸುವವನಿಗೆ....ಪ್ರಯತ್ನಪಡಬೇಕು." (ಅದೇ, ಪುಟ ೨೧೨)

(vii) "ಪೋಡಾಜಿಲ್ಲೆಯವರನ್ನೂ ಇತರರನ್ನೂ ನಾನು ಸವಿನಯ ಕಾಯಿದೆ ಭಂಗವನ್ನು ಆಚರಿಸಿದರೆಂದು ಹೇಳಿದುದು ತಪ್ಪು" (ಅದೇ, ಪುಟ ೩೨೪)

ಅವಧಾರಣ ದ್ವಿರುಕ್ತಿ, ಕರ್ತೃ-ಕ್ರಿಯಾ ಅಸಾಮಂಜಸ್ಯ, ಕಾರಕವ್ಯತ್ಯಯ, ಕಾಲವ್ಯತ್ಯಯ ಮೊದಲಾದ ದೋಷಗಳಿಗೆ ಇಲ್ಲಿ ಎಡೆ ದೊರೆತಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿ.

ಲೇಖನ ಚಿಹ್ನೆಗಳು

ಲೇಖನ ಚಿಹ್ನೆಗಳ ವಿಷಯದಲ್ಲಿಯೂ ಸಾಕಷ್ಟು ಗಮನ ಹರಿದಿಲ್ಲವೆಂಬುದಕ್ಕೆ ಇಲ್ಲಿ ಸಾಕ್ಷಿ ದೊರೆಯುತ್ತದೆ. ಸಾಮಾನ್ಯ ವಾಕ್ಯ ಪ್ರಶ್ನಾರ್ಥಕವಾಗಿಯೂ, ಪ್ರಶ್ನಾರ್ಥಕ ವಾಕ್ಯ ಸಾಮಾನ್ಯ ವಾಕ್ಯವಾಗಿಯೂ ಬದಲಾವಣೆಗೊಂಡಿರುವ ಈ ಪ್ರಸಂಗಗಳನ್ನು ಇಲ್ಲಿ ಗಮನಿಸಬಹುದು :

(i) "....but the ceremony had to be gone through." (ಪುಟ 6)
"....ಆದರೆ ವಿವಾಹವನ್ನು ನಿಲ್ಲಿಸುವುದಕ್ಕಾಗಲೀ, ಬಿಡುವುದಕ್ಕಾಗಲೀ ಆಗುತ್ತದೆಯೋ ?" (ಪುಟ ೨೧)

(ii) "Settled in Bombay?" (ಪುಟ 183)
"ಬೊಂಬಾಯಿಯಲ್ಲಿ ನೆಲೆಸಿದೆನು" (ಪುಟ ೩೭೮)

ಮುದ್ರಣಸಂಬಂಧಿ ದೋಷಗಳು

ಅಚ್ಚಿನ ತಪ್ಪುಗಳು ಈ ಆವೃತ್ತಿಯಲ್ಲಿ ಸಾಕಷ್ಟು ಉಳಿದುಕೊಂಡಿವೆ. ಉದಾಹರಣೆಗೆ 'ಯಾಚಿಸಿದನು' ಎಂಬುದು 'ಯೋಚಿಸಿದನು' ಎಂದೂ (ಪುಟ ೨೦೮), 'ಹುಟ್ಟುಗುಣ', ಎಂಬುದು 'ಹುಚ್ಚುಗುಣ' ಎಂದೂ, (ಭಾಗ ೨, ಪುಟ ೭೯) 'ಅಮೃತಸರ' ಎಂಬುದು 'ಆಮೃತಸರ' (ಅದೇ ೩೪೩) ಎಂದೂ ಆಗಿದೆ. ಇಂಥ ತಪ್ಪುಗಳಿಗೆಲ್ಲ ತಲೆಮಣಿಯಾಗಿರುವಂಥ ಒಂದು ತಪ್ಪು ನಗೆಯ ಅಲೆಯನ್ನೂ ಚಿಮ್ಮಿಸುತ್ತದೆ:

"ಪರಮಗೌರವಾನ್ವಿತರಾದ ಮುಖಂಡ **ರೋಗಿಗೆ** ನನ್ನ ಅಭಿಪ್ರಾಯ ಭೇದವನ್ನು ಬಹಿರಂಗವಾಗಿ ಪ್ರಕಟಿಸುವುದು ತಪ್ಪುತ್ತದೆ...." (ಅದೇ, ಪುಟ ೩೪೫) (ಮುಖಂಡರೊಂದಿಗೆ ಎಂಬುದಕ್ಕೆ ಬದಲಾಗಿ)

ಭಾಷಾಂತರಗಳ ತೌಲನಿಕ ಅಧ್ಯಯನ

ಗಾಂಧೀ ಸ್ಮಾರಕ ನಿಧಿಯ ಆವೃತ್ತಿ ಕನ್ನಡದಲ್ಲಿ ಸಮಗ್ರ ಆತ್ಮಕಥೆಯ ಎರಡನೆಯ ಅನುವಾದವಾಗಿರುವುದರಿಂದ ಪ್ರಾಸಂಗಿಕವಾಗಿಯಾದರೂ ಭಾಷಾಂತರಗಳ ತೌಲನಿಕ ಅಧ್ಯಯನ ಅಪೇಕ್ಷಣೀಯವಾಗಿ ಪರಿಣಮಿಸುತ್ತದೆ.

ಇಂಗ್ಲಿಷ್ ಆವೃತ್ತಿಯನ್ನೂ ಗಾ. ಸಾ. ಆವೃತ್ತಿಯನ್ನೂ ಸ್ಥೂಲವಾಗಿ ಪರಿಶೀಲಿಸಿದಾಗ ಕಂಡುಬರುವ ಒಂದು ಅಂಶವೆಂದರೆ ಅಡಿ ಟಿಪ್ಪಣಿಗಳನ್ನು ಭಾಷಾಂತರಿಸದೆ ಸಂಪೂರ್ಣವಾಗಿ ಕೈಬಿಟ್ಟಿರುವುದು. ಇಂಗ್ಲಿಷ್ ಆವೃತ್ತಿಗೆ ಅಗತ್ಯವಾದ ಎಲ್ಲ ಅಡಿ ಟಿಪ್ಪಣಿಗಳೂ ಕನ್ನಡ ಆವೃತ್ತಿಗೆ ಅಗತ್ಯವೆಂಬುದು ನನ್ನ ಅಭಿಪ್ರಾಯವಲ್ಲ. ಉದಾ: 'ಮೋಕ್ಷ', 'ಚತುರ್ಮಾಸ', 'ಸಪ್ತಪದಿ', 'ಅಹಿಂಸಾ', 'ಬ್ರಹ್ಮಚರ್ಯ', 'ಏಕಾದಶಿ' 'ಮನುಸ್ಮೃತಿ', 'ಬ್ರಹ್ಮಚಾರಿ', 'ಜ್ಞಾನಿ', 'ಮಾಯಾ', 'ಸಮಾಜ್', 'ವರ್ಣಧರ್ಮ', 'ದಕ್ಷಿಣೆ', 'ಪೂಜೆ', ಇತ್ಯಾದಿ. ಆದರೆ ವಿವರಣೆ ಅಗತ್ಯವಾಗಿರುವಂಥ 'ಚಂದ್ರಾಯಣ' 'ಕನ್ಸರ್' (?), 'ನಿರ್ಬಲ ಕೇ ಬಲರಾಮ', 'ಛಾಯಾ (ಉಣ್ಣೆ)', ಮೊದಲಾದ ಶಬ್ದಗಳಿಗೆ ಸಂಬಂಧಿಸಿದ, ಉಲ್ಲಿಖಿತಗ್ರಂಥಗಳಿಗೆ ಸಂಬಂಧಪಟ್ಟ ಹೆಚ್ಚಿನ ಹಾಗೂ ನಿರ್ದಿಷ್ಟ ವಿವರಗಳನ್ನೊಳಗೊಂಡಿರುವ ಮತ್ತು ಮೂಲದಲ್ಲಿಯೇ ಅನವಧಾನದಿಂದ ಆಗಿರುವ ದೋಷವನ್ನು ತಿದ್ದಿಕೊಳ್ಳಬೇಕೆಂಬ ಸೂಚನೆಯನ್ನೊಳಗೊಂಡಿರುವ ಅಡಿ ಟಿಪ್ಪಣಿಗಳನ್ನು ಕೈಬಿಟ್ಟಿರುವುದು ಏಕೆಂಬುದು ಅರ್ಥವಾಗುವುದಿಲ್ಲ. ಇ.ಕ. ಆವೃತ್ತಿಯಲ್ಲಿಯೂ ಬಹುಮಟ್ಟಿಗೆ ಹೀಗೆಯೇ ಆಗಿದೆ.

ಈ ಆವೃತ್ತಿಯ ಮತ್ತೊಂದು ಕೊರತೆ ವಿಷಯ ಸೂಚಿಯನ್ನು ಅಳವಡಿಸಿಲ್ಲದಿರುವುದು. ಇಂಥ ಗ್ರಂಥಕ್ಕೆ ಇದರ ಉಪಯುಕ್ತತೆ ಎಷ್ಟೆಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಗಮನಾರ್ಹವಾಗಿರುವ ವಿಚಾರವೆಂದರೆ ಇ.ಕ. ಆವೃತ್ತಿಯಲ್ಲಿ ಇಂಥ ವಿಷಯ

ಸೂಚಿ ಇದೆಯೆಂಬುದು. ಓದುಗರ ಅನುಕೂಲದ ದೃಷ್ಟಿಯಿಂದ ವ್ಯಕ್ತಿಗಳಿಗೆ, ಪುಸ್ತಕಗಳಿಗೆ ಹಾಗೂ ಕೆಲವು ಗಮನಾರ್ಹ ಸಂಗತಿಗಳಿಗೆ ಸಂಬಂಧಿಸಿದ ಟಿಪ್ಪಣಿಗಳನ್ನು ಈ ಆವೃತ್ತಿಯಲ್ಲಿ ಅಳವಡಿಸಲಾಗಿದೆ. ಗಾ.ಸಾ. ಆವೃತ್ತಿ ಈ ಅನುಕೂಲ್ಯಗಳಿಂದ ವಂಚಿತವಾಗಿದೆ.

ಚಿತ್ರಗಳ ಅಳವಡಿಕೆಯ ದೃಷ್ಟಿಯಿಂದ ಗಾ.ಸಾ. ಆವೃತ್ತಿ ವೈಶಿಷ್ಟ್ಯಪೂರ್ಣವಾಗಿದೆ. ಗಾಂಧೀಜಿಯವರ ಜೀವನದ ವಿವಿಧ ಘಟನೆಗಳಿಗೆ ಸಂಬಂಧಿಸಿದ ಒಟ್ಟು ಹನ್ನೆರಡು ಚಿತ್ರಗಳನ್ನು (ಮತ್ತು ಸಂಪಾದಕ ಮಂಡಳಿಯ ಚಿತ್ರವನ್ನು!) ಈ ಆವೃತ್ತಿ ಒಳಗೊಂಡಿದೆ. ಇ.ಕ. ಆವೃತ್ತಿಯಲ್ಲಿ ಗಾಂಧೀಜಿಯವರ ಮೂರು ಚಿತ್ರಗಳು ಮಾತ್ರ ಇವೆ.

ಉದ್ಧರಣಗಳ ದೃಷ್ಟಿಯಿಂದ ಪರಿಶೀಲಿಸಿದರೆ, ಗಾ.ಸಾ. ಆವೃತ್ತಿಯಲ್ಲಿ ಹೊಸಗನ್ನಡದಲ್ಲಿಯೇ ಅನುವಾದವನ್ನು ಕೊಡಲಾಗಿದೆ. ಇತರ ಭಾಷಾ ಮೂಲಗಳಿಂದ ಉದ್ಧರಣ ಕೊಟ್ಟಿರುವಲ್ಲಿಯೂ ಕನ್ನಡ ಗದ್ಯಾನುವಾದವನ್ನು ಕೊಡಲಾಗಿದೆ. ಇ.ಕ. ಆವೃತ್ತಿಯಲ್ಲಿ ಪದ್ಯಾನುವಾದವನ್ನೂ, ಗದ್ಯ ವಿವರಣೆಯನ್ನೂ ಕೊಡಲಾಗಿದೆ.

ಅಧ್ಯಾಯದ ಶೀರ್ಷಿಕೆಗಳನ್ನು ಅನುವಾದಿಸುವಲ್ಲಿಯೂ ಕೆಲವು ಗುಣ ದೋಷಗಳು ಕಂಡುಬರುತ್ತವೆ. ಕನ್ನಡದ ನುಡಿಗಟ್ಟಿಗೆ ಸಹಜವಾದ ರೀತಿಯಲ್ಲಿ ಹಾಗೂ ಅಡಕವಾಗಿ ಶೀರ್ಷಿಕೆಗಳನ್ನು ಭಾಷಾಂತರಿಸಿಕೊಂಡಿರುವುದು—ಉದಾ : 'ನಾವೊಂದು ನೆನೆದರೆ ದೇವರು ಮತ್ತೊಂದನ್ನು ನೆನೆಯುತ್ತಾನೆ' (Man proposes, God disposes : ಹೋಲಿಸಿ : 'ಮನುಷ್ಯಪ್ರಯತ್ನವೊಂದಾದರೆ ದೈವೇಚ್ಛೆ ಇನ್ನೊಂದು'-ಇ.ಕ. ಆವೃತ್ತಿ) 'ಗೃಹಸ್ಥನಾಗಿ' (As a Householder ; ಹೋಲಿಸಿ : 'ಮನೆಯ ಯಜಮಾನನಾಗಿ'-ಇ.ಕ. ಆವೃತ್ತಿ)—ಕಾಣದೊರೆಯುವಂತೆಯೇ. ಲೋಪಕ್ಕೆ—ಉದಾ : 'ಆಫ್ರಿಕಾಕ್ಕೆ ಹೊರಡಲು ಸಿದ್ಧತೆ' (Preparing for **South** Africa ; ಹೋಲಿಸಿ : 'ದಕ್ಷಿಣ ಆಫ್ರಿಕಾಕ್ಕೆ ಹೋಗಲು ಸಿದ್ಧನಾದುದು'-ಇ.ಕ. ಆವೃತ್ತಿ), 'ನೈರ್ಮಲ್ಯ ಮತ್ತು ಕ್ಷಾಮನಿವಾರಣೆ' (Sanitary **Reform** and famine Relief ; ಹೋಲಿಸಿ : 'ನೈರ್ಮಲ್ಯ ಸುಧಾರಣೆ ಮತ್ತು ಕ್ಷಾಮ ನಿವಾರಣೆ'-ಇ.ಕ. ಆವೃತ್ತಿ). ವಿಸ್ತಾರಾನುವಾದಕ್ಕೆ—ಉದಾ : 'ತುಲನಾತ್ಮಕ ದೃಷ್ಟಿಯಿಂದ ಧರ್ಮಗಳ ಜ್ಞಾನವನ್ನು ಪಡೆದುದು' (Comparative Study of Religions ; ಹೋಲಿಸಿ : 'ಧರ್ಮಗಳ ತುಲನಾತ್ಮಕ ಅಧ್ಯಯನ'-ಇ.ಕ. ಆವೃತ್ತಿ)—ಕೂಡ ಎಡೆ ದೊರೆತಿದೆ.

ಸಂದರ್ಭಾನುಗುಣವಾದ ಅರ್ಥವನ್ನು ಆರೋಪಿಸದೆ, ಕೋಶಬದ್ಧವಾದ ಮೊದಲ ಅರ್ಥವನ್ನೇ ಗ್ರಾಹ್ಯವೆಂದು ಭಾವಿಸಿರುವ ಒಂದು ಉದಾಹರಣೆಯೂ ದೊರೆಯುತ್ತದೆ. ಆ ಪ್ರಸಂಗ ಈ ರೀತಿ ಇದೆ : ಮೊದಲ ಭಾಗದ 19ನೆಯ ಅಧ್ಯಾಯದ ಶೀರ್ಷಿಕೆ 'The Canker of Untruth' ಎಂದಿದೆ. ಇಲ್ಲಿರುವ canker ಶಬ್ದಕ್ಕೆ 'an eating sore ; a gangrene ; ...venomous' ಇತ್ಯಾದಿ ಅರ್ಥಗಳಿವೆ.[1] ಇಂಗ್ಲಿಷ್-

[1] Chambers's *Twentieth Century Dictionary*, p. 153 (Edn. 1954)

ಸಂಸ್ಕೃತ ಕೋಶದಲ್ಲಿ 'ವಿದ್ರಧಿಃ, ವ್ರಣಃ, ಫಲನಾಶೀ ಕೀಟಃ, ಕಲಂಕಃ, ವಿಷಃ' ಇತ್ಯಾದಿ ಅರ್ಥಗಳಿವೆ.[1] 'ವಿದ್ರಧಿ' ಎಂದರೂ 'ವ್ರಣ' ಎಂದೇ ಅರ್ಥ.[2] ಗಾ.ಸಾ. ಆವೃತ್ತಿಯಲ್ಲಿ 'ವ್ರಣ' ಎಂಬ ಅರ್ಥವನ್ನೇ ಸ್ವೀಕರಿಸಿ, ಶೀರ್ಷಿಕೆಯನ್ನು 'ಅಸತ್ಯವೆಂಬ ವ್ರಣ' ಎಂದು ಅನುವಾದಿಸಲಾಗಿದೆ. ಆದರೆ "I thus **purged** myself of the canker of untruth" (ಪುಟ 49) ಎಂಬ ಮೂಲವಾಕ್ಯದಲ್ಲಿನ 'purged' ಎಂಬ ಕ್ರಿಯಾಪದ ಈ ವಾಕ್ಯದಲ್ಲಿ–ಅಂತೆಯೇ, ಶೀರ್ಷಿಕೆಯಲ್ಲಿ– 'canker' ಎಂಬುದಕ್ಕೆ 'ವ್ರಣ' ಎಂಬ ಅರ್ಥವಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. "ನನ್ನ ಅಂತರಂಗದಲ್ಲಿದ್ದ ಅಸತ್ಯವೆಂಬ ವ್ರಣದಿಂದ ನಾನು ಹೀಗೆ ಮುಕ್ತನಾದೆನು" (ಪುಟ ೧೦೭) ಎಂದು ಭಾಷಾಂತರಿಸಿದಾಗ ಅದು ಒರಟು ಭಾವಾನುವಾದವಾಗುತ್ತದೆ. ಅಷ್ಟೇ ಅಲ್ಲ, 'ವ್ರಣದಿಂದ ಮುಕ್ತನಾಗು' ಎಂಬಂಥ ಅಸಹಜ ನುಡಿಗಟ್ಟಿಗೂ ಎಡೆಗೊಡುತ್ತದೆ. 'ಗಾಯ ವಾಸಿಯಾಯಿತು' ಎಂದೋ, 'ಗಾಯ ಮಾಯಿತು' ಎಂದೇ ಹೇಳುತ್ತೇವೆಯೇ ಹೊರತು 'ವ್ರಣ ಮುಕ್ತನಾದ' ಅಥವಾ 'ವ್ರಣಮುಕ್ತಿ'ಯಾಯಿತು ಎಂದಲ್ಲ. ಈ ದೃಷ್ಟಿಯಲ್ಲಿ, "ಈ ಪ್ರಕಾರವಾಗಿ ನನ್ನಲ್ಲಿದ್ದ ಅಸತ್ಯವೆಂಬ ವಿಷವನ್ನು ನಿರ್ಮೂಲಮಾಡಿಬಿಟ್ಟೆನು" (ಭಾಗ ೧, ಪುಟ ೧೨೮) ಎಂಬ ಇ.ಕ. ಆವೃತ್ತಿಯ ಅನುವಾದವೇ ಗಾ.ಸಾ. ಆವೃತ್ತಿಯ ಅನುವಾದಕ್ಕಿಂತ ಹೆಚ್ಚು ಸಹ್ಯವಾಗಿದೆ ಹಾಗೂ ಮೂಲಕ್ಕೆ ಹತ್ತಿರ ಬರುತ್ತದೆ ಎಂದು ಹೇಳಬೇಕಾಗುತ್ತದೆ. ಇ.ಕ. ಆವೃತ್ತಿಯಲ್ಲಿ ಸರಿಯಾಗಿರುವ ಶೀರ್ಷಿಕೆಗಳನ್ನೂ ಮನಸ್ಸಿಗೆ ಬಂದಂತೆ ಭಾಷಾಂತರಿಸಿಕೊಂಡಿರುವುದು ಕೊಂಚ ಅರ್ಥವಾಗದ ಸಂಗತಿ.

ಇ.ಕ. ಆವೃತ್ತಿಯಲ್ಲಿ ದೋಷಗಳಿಲ್ಲವೆಂದಲ್ಲ. ಅಲ್ಲಿಯೂ ಹಲವಾರು ದೋಷಗಳಿವೆ. ಉದಾ : 'Shyness my shield' ಎಂಬುದನ್ನು 'ಲಜ್ಜಾಶೀಲತೆ, ನನ್ನ ಆಶ್ರಯ' ಎಂದೂ, 'Experiments in Dietics' ಎಂಬುದನ್ನು 'ಆಹಾರ ವಿಷಯಕವಾದ ಶೋಧನೆಗಳು' ಎಂದೂ ಅನುವಾದಿಸಲಾಗಿದೆ.[3] 'My Choice' ಎಂಬುದು 'ನಾನು ಮನಃಪೂರ್ವಕವಾಗಿ ಶಾಖಾಹಾರಿಯಾದುದು' ಎಂದೂ, 'My Helplessness' ಎಂಬುದು 'ನನಗೆ ದಾರಿಕಾಣದೆ ಹೋದುದು' ಎಂದೂ ವಿಸ್ತಾರಾನುವಾದವಾಗಿ ಕಾಣಿಸಿಕೊಂಡಿವೆ. ಈ ಎಲ್ಲ ಸಂದರ್ಭಗಳಲ್ಲಿಯೂ ಗಾ.ಸಾ. ಆವೃತ್ತಿಯ ಅನುವಾದಗಳು— 'ಲಜ್ಜೆಯೇ ನನ್ನ ರಕ್ಷಕ', 'ಆಹಾರ ವಿಷಯದಲ್ಲಿ ಪ್ರಯೋಗಗಳು', 'ನನ್ನ ಆಯ್ಕೆ', 'ನನ್ನ ನಿಸ್ಸಹಾಯಕತೆ'—ಸಮರ್ಪಕವಾಗಿಯೇ ಇವೆ.

---

[1] V. S. Apte : *The Student's English-Sanskrit Dictionary*, p. 47 (Edn. 1963)

[2] V.S. Apte : *The Student's Sanskrit-English Dictionary*, p. 511 (Edn. 1963)

[3] ಗ್ರಂಥದ ಶೀರ್ಷಿಕೆಯಲ್ಲಿ 'Experiments with Truth' ಎಂಬ ಪದಪುಂಜವನ್ನು 'ಸತ್ಯಶೋಧನೆ' ಎಂದು ಭಾಷಾಂತರಿಸಿಕೊಂಡಿರುವುದು ಉಚಿತವೂ, ಸಮ್ಮತವೂ ಆಗಿದ್ದರೂ ಎಲ್ಲ ಸಂದರ್ಭಗಳಲ್ಲಿಯೂ ಅದೇ ಅರ್ಥವನ್ನು ಅನ್ವಯಿಸಲಾಗುವುದಿಲ್ಲ.

ಇ.ಕ. ಆವೃತ್ತಿಯನ್ನು ಅಲ್ಲಲ್ಲಿ ಪರಿಶೀಲಿಸಿದ ಸಂದರ್ಭದಲ್ಲಿ[1] ಆಕಸ್ಮಿಕವಾಗಿ ಒಂದು ಪ್ರಮಾದದ ಸಂದರ್ಭ ನನ್ನ ಗಮನಕ್ಕೆ ಬಂದಿತು. (ಇಂಥ ಪ್ರಮಾದ ಸಂಭವಿಸುವುದು ಹೇಗೆ ಸಾಧ್ಯ ಎಂದು ಆಶ್ಚರ್ಯವೂ ಉಂಟಾಗುತ್ತದೆ!) ಆ ಸಂದರ್ಭ ಈ ರೀತಿ ಇದೆ:

"**I must regard** my participation in Congress proceedings at Amritsar as my real entrance into the congress politics." (ಪುಟ 369)

ಇ.ಕ. ಆವೃತ್ತಿ: "ಅಮೃತಸರದ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಭಾಗಿಯಾದುದರಿಂದ ನಾನು ವಸ್ತುತಃ ಮಹಾಸಭೆಯ ರಾಜಕಾರಣದಲ್ಲಿ ಪ್ರವೇಶಿಸಿದೆನೆಂದು ನಾನು **ಎಣಿಸುವುದಿಲ್ಲ.**" (ಭಾಗ ೫, ಪುಟ ೨೦೩)

ಇ.ಕ. ಆವೃತ್ತಿಯ ಈ ವಾಕ್ಯ ಮೂಲಕ್ಕೆ ತದ್ವಿರುದ್ಧವಾದ ಅರ್ಥವನ್ನು ಕೊಡುತ್ತದೆ. ಮೂಲ ವಾಕ್ಯದಲ್ಲಿ ನಿಷೇಧಾರ್ಥವನ್ನು ಸೂಚಿಸುವ ಯಾವೊಂದು ಶಬ್ದವೂ ಇಲ್ಲವೆಂಬುದನ್ನು ಗಮನಿಸಬೇಕು. ಹೀಗಾಗಿ, ಇದನ್ನು ಅಜಾಗರೂಕತೆಯಿಂದ ಸಂಭವಿಸಿರುವ ಪ್ರಮಾದವೆಂದು ಭಾವಿಸಬೇಕಾಗಿದೆ.[2] ಗಾ.ಸಾ. ಆವೃತ್ತಿಯ ಅನುವಾದ ಸಮರ್ಪಕವಾಗಿಯೇ ಇದೆ:

"ಅಮೃತಸರದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದುದೇ ಕಾಂಗ್ರೆಸ್ ರಾಜಕೀಯದಲ್ಲಿ ನನ್ನ ನಿಜವಾದ ಪ್ರವೇಶವೆಂದು ನಾನು ಭಾವಿಸಬೇಕು" (ಭಾಗ ೨, ಪುಟ ೩೪೮)

ಹೀಗೆ, ಹಿಂದಿನ ಅನುವಾದದಲ್ಲಿದ್ದ ದೋಷ(ಗಳು?) ಗಾ.ಸಾ. ಆವೃತ್ತಿಯ ಅನುವಾದದಲ್ಲಿ ದೂರವಾಗಿರುವುದರಿಂದ, ಗಾ.ಸಾ. ಆವೃತ್ತಿಯ ಅನುವಾದ ಇ.ಕ. ಆವೃತ್ತಿಗಿಂತಲೂ ಉತ್ತಮವಾಗಿರಬೇಕೆಂಬ ಭಾವನೆ ಮೂಡಬಹುದು. ಆದರೆ, ಇದು ಆಕಸ್ಮಿಕವಾಗಿ, ಅನುದ್ದಿಷ್ಟವಾಗಿ ಆಗಿರುವ ಉತ್ತಮಿಕೆಯೇ ಹೊರತು, ಮೊದಲ ಆವೃತ್ತಿಯ ದೋಷಗಳನ್ನು ಗುರುತಿಸಿ ಅವನ್ನು ದೂರೀಕರಿಸುವ ಪ್ರಯತ್ನದ ಅಂಗವಾಗಿ ಈ ಉತ್ತಮಿಕೆ ಸಾಧಿತವಾಗಿಲ್ಲವೆಂಬುದು ಈ ಕೆಳಗೆ ಕಾಣಿಸಿರುವ ಒಂದೆರಡು ಪ್ರಸಂಗಗಳ ಹೋಲಿಕೆಯಿಂದ ಸ್ಪಷ್ಟವಾಗುತ್ತದೆ:

(i) "...or else, I shall have **to call a police constable to push you out.**" (ಪುಟ 82)

ಗಾ.ಸಾ. ಆವೃತ್ತಿ: "ಇಲ್ಲದಿದ್ದರೆ ಪೋಲೀಸ್ ಕಾನ್‌ಸ್ಟೇಬಲ್‌ನನ್ನು ಕರೆಯುತ್ತೇನೆ. **ನಾನೇ ಕತ್ತು ಹಿಡಿದು ದಬ್ಬುತ್ತೇನೆ**..." (ಪುಟ ೧೭೭)

[1] ಇ.ಕ. ಆವೃತ್ತಿಯನ್ನು ಕೂಲಂಕಷವಾಗಿ, ಆಮೂಲಾಗ್ರವಾಗಿ ಪರಿಶೀಲಿಸಿಲ್ಲ; ಮೂಲದೊಡನೆ ತಾಳೆ ನೋಡಿಲ್ಲ.

[2] ಎರಡನೆಯ ಆವೃತ್ತಿಯಲ್ಲಿ ಈ ದೋಷವನ್ನು ಸರಿಪಡಿಸಲಾಗಿದೆಯೋ ಎಂಬುದು ನನಗೆ ತಿಳಿಯದು. ಆ ಆವೃತ್ತಿಯನ್ನು ನಾನು ನೋಡಿಲ್ಲ.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಎದುರಿಸಬೇಕಾಗಿ ಬಂದ ಈ ಅನ್ಯಾಯದ ಪ್ರಸಂಗ ಲೋಕವಿದಿತವಾಗಿರುವಂಥದು. ಈ ವಾಕ್ಯದಲ್ಲಿ ಯಾವುದೇ ಸಮಸ್ಯೆಯಾಗಲಿ, ಸಂದೇಹವಾಗಲೀ ಇಲ್ಲ. 'call a police constable to push you out', ಎಂಬ ಗಾರ್ಡ್‌ನ ಮಾತನ್ನು "ಪೋಲೀಸ್ ಕಾನ್‌ಸ್ಟೇಬಲ್‌ನನ್ನು ಕರೆಯುತ್ತೇನೆ. ನಾನೇ ಕತ್ತು ಹಿಡಿದು ದಬ್ಬುತ್ತೇನೆ" ಎಂದು ಅನುವಾದಿಸುವುದು ಸಾಮಾನ್ಯ ತರ್ಕಕ್ಕೂ, ವಿವೇಕಕ್ಕೂ ಅಸಂಗತ. ಗಾರ್ಡ್ ಕತ್ತು ಹಿಡಿದು ದಬ್ಬುವುದಕ್ಕೆ ಪೋಲೀಸ್ ಕಾನ್ಸ್‌ಟೇಬಲ್ ಸಾಕ್ಷಿ ಮಾತ್ರವಾಗಲು ಅಲ್ಲಿಗೆ ಆಗಮಿಸಬೇಕೆ? ಈ ಸಂದರ್ಭದಲ್ಲಿ ಇ.ಕ. ಆವೃತ್ತಿಯ ಅನುವಾದ ಸಹ್ಯವಾಗಿಯೇ ಇದೆ ಎಂದೆನಿಸುತ್ತದೆ:

"ತಂಟೆ ಮಾಡಿದರೆ ಪೋಲೀಸಿನವನನ್ನು ಕರೆದು ಇಳಿಸಬೇಕಾಗುತ್ತದೆ." (ಭಾಗ ೨. ಪುಟ ೪೭)

(ii) "Badruddin Tyabji's wonderful **power of argument inspires the judge with awe.**" (ಪುಟ 68)

"ಬದ್ರುದ್ದಿನ್ ತ್ಯೆಯಬ್ಜೀಯವರ ಅದ್ಭುತವಾದ ಶಕ್ತಿ **ಜಡ್ಜಿಗಳಿಂದ ಸಹ ಅವರಿಗೆ ಗೌರವವನ್ನು ಸಂಪಾದಿಸಿಕೊಡುತ್ತದೆ.**" (ಪುಟ ೧೪೭)

'power of argument' ಅನುವಾದದಲ್ಲಿ 'ಅದ್ಭುತವಾದ ಶಕ್ತಿ'ಯಾಗಿ ಪರಿಣಮಿಸಿದೆ. ವಿಶೇಷಣ ವ್ಯಾಮೋಹದಿಂದಾಗಿ 'ಶಕ್ತಿ' ಶಬ್ದ 'ವಾದ' ಶಬ್ದವನ್ನು ವಿಶೇಷಣದತ್ತ ತಳ್ಳಿಬಿಟ್ಟಿದೆ. ವಾಸ್ತವವಾಗಿ ಇದು 'ಅದ್ಭುತ ವಾದಶಕ್ತಿ'ಯಾಗಿದ್ದು, ಅಚ್ಚಿನಲ್ಲಿ 'ಅದ್ಭುತವಾದ ಶಕ್ತಿ'ಯಾಗಿ ಪರಿಣಮಿಸಿರಬೇಕು. ಅದಲ್ಲದೆ 'inspires . . with awe' ಪದಪುಂಜವನ್ನು 'ಗೌರವವನ್ನು ಸಂಪಾದಿಸಿಕೊಡು' ಎಂದು ಅನುವಾದಿಸಿರುವುದು ಸಹ್ಯವಲ್ಲ. ಇದಕ್ಕಿಂತಲೂ ಇ.ಕ. ಆವೃತ್ತಿಯ ಕೆಳಕಂಡ ಅನುವಾದವೇ ಉತ್ತಮವಾಗಿದೆ ಎನ್ನಿಸುತ್ತದೆ:

"ಬದ್ರುದ್ದೀನ್ ತ್ಯೆಯಬ್ಜಿಯವರ ವಾದ ಕೌಶಲ್ಯದ ಮುಂದೆ ನ್ಯಾಯಾಧೀಶರೂ ಮುಗ್ಧರಾಗುತ್ತಾರೆ." (ಭಾಗ ೨, ಪುಟ ೧೩)

(iii) "Pray don't worry. Not a soul shall know anything that is confident between us. But I do intend cultivating the acquaintance of the other party." (ಪುಟ 81)

"ನಮ್ಮಿಬ್ಬರಲ್ಲಿ ರಹಸ್ಯವಾಗಿರುವ ವಿಷಯ ಮತ್ತೆ ಯಾವ ಪ್ರಾಣಿಗೂ ತಿಳಿಯುವುದಿಲ್ಲ. ಈ ವಿಷಯದಲ್ಲಿ **ಯೋಚಿಸದೇ ಸ್ನೇಹದಿಂದಿರಬೇಕೆಂಬುದು** ನನ್ನ ಇಷ್ಟ" (ಪುಟ ೧೭೫)

'ಯೋಚಿಸಬೇಡ ಸ್ವೀಕರಿಸಿದ್ದೇನೆ' ಎಂಬ ಮಾತಿಗೆ ಏನು ಅರ್ಥ? ಮೂಲದ ಮೊದಲ ಪಂಕ್ತಿಯಲ್ಲಿರುವ 'Pray don't worry' ಎಂಬುದು ಇಲ್ಲಿ ಹೇಗೆ ರೂಪು ಪಡೆದುಕೊಂಡಿದೆ ಎಂಬುದನ್ನು ಊಹಿಸುವುದೇ ಕಷ್ಟ. ಈ ಸಂದರ್ಭದಲ್ಲಿ ಇ. ಕ. ಆವೃತ್ತಿಯ ಅನುವಾದವನ್ನು ಗಮನಿಸಬಹುದು :

"ನೀವು ನಿಶ್ಚಿಂತರಾಗಿರಿ. ನಮ್ಮಿಬ್ಬರಲ್ಲಿರುವ ಯಾವ ಗುಟ್ಟನ್ನು ಒಂದು ಪ್ರಾಣಿಗೂ ಬಿಟ್ಟುಕೊಡುವುದಿಲ್ಲ. ಆದರೆ ನಾನು ಪ್ರತಿಪಕ್ಷದವರ ಸಂಚಯನ್ನಂತೂ ಮಾಡಿಕೊಳ್ಳಬೇಕೆಂದಿರುವುದೇನೋ ನಿಜ." (ಭಾಗ ೨, ಪುಟ ೪೫)

ಗಾ.ನಾ. ಆವೃತ್ತಿಯ ಅನುವಾದಕ್ಕಿಂತ ಈ ಅನುವಾದ ಖಂಡಿತವಾಗಿಯೂ ಸಹ್ಯವಾಗಿದೆ.

ಒಟ್ಟಿನಲ್ಲಿ, 'ಆತ್ಮಕಥೆ'ಯ ಅಧಿಕೃತ ಕನ್ನಡ ಆವೃತ್ತಿಯಾಗಬೇಕಾಗಿದ್ದ ಸದವಕಾಶವನ್ನು ಈ ಅನುವಾದ ಸ್ವಲ್ಪದರಲ್ಲಿ ಕಳೆದುಕೊಂಡುಬಿಟ್ಟಿದೆ. ಹೀಗಾಗಿ ಈ ಅನುವಾದ ವಿಚಕ್ಷಣೆಯುಳ್ಳ ಓದುಗರಲ್ಲಿ ಅತೃಪ್ತಿಯನ್ನೂ, ಅಸಮಾಧಾನವನ್ನೂ ಉಂಟು ಮಾಡುತ್ತದೆ.

ಅಭಿನಂದನ ಗ್ರಂಥಕ್ಕಾಗಿ ಬರೆಯುವ ಲೇಖನದಲ್ಲಿ ಇಂಥ ಟೀಕೆಯನ್ನು ಮಾಡುವುದರ ಅನೌಚಿತ್ಯ ಎಷ್ಟೆಂಬುದನ್ನು ನಾನು ಬಲ್ಲೆ. ಆದರೆ, ಮುಂದೆ ಎಂದಾದರೂ 'ಆತ್ಮಕಥೆ'ಯ ಮತ್ತೊಂದು ಆವೃತ್ತಿಯನ್ನು ಹೊರತರುವ ಸಂದರ್ಭ ಗಾಂಧೀ ಸ್ಮಾರಕ ನಿಧಿಗೆ ಒದಗಿಬಂದಲ್ಲಿ, ಸಂಬಂಧಪಟ್ಟವರು ಈ ಅನುವಾದವನ್ನು ಈ ದೃಷ್ಟಿಯಿಂದ ಆಮೂಲಾಗ್ರವಾಗಿ ಪರಿಷ್ಕರಿಸಲಾದರೂ ಸಾಧ್ಯವಾಗಲಿ ಹಾಗೂ ಹಾಗೆ ಪರಿಷ್ಕರಿಸಬೇಕಾದ ಅಗತ್ಯ ಎಷ್ಟಿದೆ ಎಂಬುದನ್ನು ಸ್ಪಷ್ಟಪಡಿಸುವುದು ನನ್ನ ಕರ್ತವ್ಯವೆಂಬ ದೃಷ್ಟಿಯಿಂದ ಈ ಆವೃತ್ತಿಯ ಲೋಪದೋಷಗಳತ್ತ ಈ ಅಭಿನಂದನ ಗ್ರಂಥದ ಓದುಗರ ಗಮನ ಸೆಳೆಯಲು ಯತ್ನಿಸಿದ್ದೇನೆ. ನನ್ನ ಸ್ತುತಿಯಿಂದ ಗೊರೂರರಿಗೆ ಉಪಕಾರವಾಗುವ ಸಂಭವವಂತೂ ಇಲ್ಲ; ನನ್ನ ಟೀಕೆಯಿಂದ ಅವರಿಗೆ ಅಪಕಾರವಾಗುವುದೂ ಅಷ್ಟರಲ್ಲಿಯೇ ಇದೆ. ವಾಸ್ತವವಾಗಿ ಇಂಥ ಸ್ತುತಿನಿಂದೆಗಳಿಗೆ ಅತೀತರಾಗಿ ನಿಂತಿರುವ ಗೊರೂರರಿಗೆ ಈ ಕಾರ್ಯ ಮೆಚ್ಚಿಗೆಯಾಗಬಹುದೆಂದೂ ನಂಬಿದ್ದೇನೆ. ಏಕೆಂದರೆ, ಅವರಷ್ಟು ಅಲಿಪ್ತ, ವಸ್ತುನಿಷ್ಠ ದೃಷ್ಟಿಯ ರಸಜ್ಞರು ಹಾಗೂ ಸ್ವಪರಿಪ್ರೇಕ್ಷ್ಯವುಳ್ಳ ಸಾಹಿತಿಗಳು ನಮ್ಮಲ್ಲಿ ವಿರಳ.

ಗಾಂಧೀಜಿಯವರ ಬರಹಗಳು

‘ಭಾಷಣಗಳು ಮತ್ತು ಹೇಳಿಕೆಗಳು’

ಎಸ್. ಲಕ್ಷ್ಮೀನಾರಾಯಣ

‘ಭಾಷಣಗಳು ಮತ್ತು ಹೇಳಿಕೆಗಳು (ಭಾಗ ೧)’ ಗಾಂಧೀ ಸ್ಮಾರಕ ನಿಧಿಯು ಗಾಂಧೀ ಗ್ರಂಥಮಾಲೆಯಲ್ಲಿ ಶೋಭಿಸುತ್ತಿರುವ ಹದಿನೇಳನೆಯ ಪುಷ್ಪ. ಈ ಕುಸುಮದ ಕಂಪು ಕೇವಲ ಜನಮನಗಳನ್ನು ರಾಷ್ಟ್ರೀಯತೆಯ ಅಪೂರ್ವ ಕಲ್ಪನೆಯೆಡೆಗೆ ಕೊಂಡೊಯ್ಯುವುದೇ ಅಲ್ಲದೆ ಕ್ರಿಯಾಶೀಲ ರಾಷ್ಟ್ರಕನ ಮನಸ್ಸಿಗೆ ಕನ್ನಡಿಯನ್ನು ಹಿಡಿದು ಅವನಲ್ಲಿ ಆತ್ಮಚೇತನದ ಬಗ್ಗೆ ದೃಢವಿಶ್ವಾಸ ಮತ್ತು ನಂಬಿಕೆಗಳನ್ನು ಮೂಡಿಸುತ್ತದೆ. ಪ್ರಧಾನ ಸಂಪಾದಕರಾಗಿದ್ದ ಪ್ರೊ. ಎಂ. ರಾಮಾನುಜಾಚಾರ್ಯರು ಹೇಳಿರುವಂತೆ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ ಸಮರ ನಡೆಸಿ, ವಿಜಯಿಯಾಗಿ, ೧೯೧೫ ರಲ್ಲಿ ಸ್ವದೇಶಕ್ಕೆ ಹಿಂದಿರುಗಿದಂದಿನಿಂದ ೧೯೩೧ರ ದ್ವಿತೀಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ವರೆಗೆ, ಕಾಲಕಾಲಕ್ಕೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಮಾಡಿದ ಭಾಷಣಗಳ ಮತ್ತು ಹೇಳಿಕೆಗಳ ಸುರಭಿಯಿಂದ ಈ ಗ್ರಂಥಮಾಲೆಯೇ ಸುವಾಸಿತವಾಗಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಭಾಷಣಗಳ ಮತ್ತು ಹೇಳಿಕೆಗಳ ಮೂಲಕ ಗಾಂಧೀಜಿಯವರ ಅದ್ವಿತೀಯ ಮತ್ತು ಚಿರಸ್ಮರಣೀಯ ವ್ಯಕ್ತಿತ್ವವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟು ಉಪಕರಿಸಿದ್ದಾರೆ. ಸತ್ಯಶೋಧನೆಯ ದಾರಿ ಕತ್ತಿಯ ಅಲಗಿನಂತೆ. ಈ ಹಾದಿಯಲ್ಲಿನ ಸಿಹಿ ಕಹಿ ಅನುಭವಗಳನ್ನು ಪ್ರಾಮಾಣಿಕವಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ತಿಳಿನುಡಿಗಳಲ್ಲಿ ತಿಳಿಯಹೇಳಿದ್ದಾರೆ. ಕಾಯೇನ ವಾಚಾ ಮನಸಾ ಸತ್ಯನಿಷ್ಠವಾಗಿ ಋಜುಮಾರ್ಗದಲ್ಲಿ ಪಯಣಿಸುತ್ತಿರುವ ಮಹಾಚೇತನಕ್ಕೆ ತನ್ನ ಸತ್ಯಾರಾಧನೆಯ ಸಾಮರ್ಥ್ಯದಲ್ಲಿ ಸಂಪೂರ್ಣವಾಗಿ ನಂಬಿಕೆಯಿದೆ. ತನ್ನ ನಿಲುವು ನಿರ್ದಿಷ್ಟವಾಗಿದೆ. ವಿಭಿನ್ನ ಸನ್ನಿವೇಶಗಳಲ್ಲಿ ಈ ಮಹಾಚೇತನ ಮಾಡಿದ ಭಾಷಣಗಳು,

ಅವರ ಹೃದಯದಿಂದ ಹೊರಬಂದ ನುಡಿಮುತ್ತುಗಳು ಭಾರತ ಸ್ವಾತಂತ್ರ್ಯ ಸಮರದ ಮೈಲಿಗಲ್ಲುಗಳೆನಿಸಿವೆ.

ಪೂಜ್ಯ ಗಾಂಧೀಜಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಸುಮಾರು ೨೫ ಭಾಷಣಗಳನ್ನು ಗೊರೂರರು ಅತ್ಯಂತ ಸಫಲವಾಗಿ ಮತ್ತು ಸಮರ್ಪಕವಾಗಿ ಕನ್ನಡಿಸಿದ್ದಾರೆ. ಈ ಭಾಷಣಗಳಲ್ಲಿನ ವಿಷಯ-ಗಾಂಭೀರ್ಯ, ಚಿಂತನಪರತೆ ಮತ್ತು ಭಾಷಾ ಶ್ರೀಮಂತಿಕೆಯನ್ನು ಬೇರೊಂದು ಭಾಷೆಯಲ್ಲಿ ಮೂಲಕ್ಕೆ ಯಾವ ರೀತಿಯಲ್ಲೂ ಅಪಚಾರವೆಸಗದಂತೆ ಕನ್ನಡಿಸುವುದು ಅಂತಹ ಸುಲಭ ಕಾರ್ಯವೇನಲ್ಲ. ಗಾಂಧೀಜಿಯವರ ಭಾಷಣಗಳ ಕೇಂದ್ರ—ಸತ್ಯ, ಧರ್ಮ, ಅಹಿಂಸೆ, ನ್ಯಾಯ ಮೊದಲಾದ ಗುಣವಿಶೇಷಗಳು. ಭಾರತಾಂಬೆಯ ಮಡಿಲಿನಲ್ಲಿ ಮೈವೆತ್ತ ಜನತೆಯಲ್ಲಿ ಈ ಗುಣವಿಶೇಷಗಳು ಮೈಗೂಡಿ ಅವರ ಸಾತ್ತ್ವಿಕ ಜೀವನಕ್ಕೆ ನಾಂದಿಯಾಗಲೆಂಬುದು ಅವರ ಪ್ರಾಮಾಣಿಕ ಅಭಿಮತ. ಅಹಿಂಸೆಯ ವಾರುಣಾಸ್ತ್ರದ ಸಿಂಚನೆಯಿಂದ ಹಿಂಸೆ, ಕ್ರೌರ್ಯ, ದಬ್ಬಾಳಿಕೆಗಳ ಅಗ್ನಿಯನ್ನು ತೋಯಿಸಿ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ದಿವ್ಯಚೇತನ ಅವರದು. ಗೊರೂರರ ಭಾಷಾಂತರದಲ್ಲಿಯೂ ಈ ತತ್ತ್ವಗಳ ನಿರೂಪಣೆ ಯಥಾವತ್ತಾಗಿ ಮೂಡಿ ಮೈದಳೆದುಬಂದಿದೆ. ಗಾಂಧೀಜಿಯವರ ಭಾಷಣಗಳ ಮತ್ತು ಹೇಳಿಕೆಗಳ ಪರಿಚಯ ಯಥೋಚಿತವಾಗಿಯೇ ಆಗಿದೆ.

ಗಾಂಧೀಜಿಯವರ ಭಾಷಣದ ವಿಧಾನವೇ ವಿಶೇಷ ಶೈಲಿಯದಾಗಿತ್ತು. ವಿಚಾರ ಪ್ರಚೋದನೆ ಅವರ ಮಾತುಗಾರಿಕೆಯ ಮುಖ್ಯ ಅಭಿಪ್ರೇತವಾಗಿತ್ತು. ಹತ್ತು ಜನರ ಜೊತೆಗಾಗಲಿ ಇಲ್ಲವೆ ಸಾವಿರಾರು ಜನರು ನೆರೆದಿರುವ ಜನನಿಬಿಡ ಸಭೆಯಲ್ಲಾಗಲಿ, ಅವರು ಮಾತನಾಡುವ ರೀತಿ ಒಂದೇ ವಿಧವಾಗಿತ್ತು. ಸರಳವಾದ, ಆಡಂಬರವಿಲ್ಲದ ಮೊನಚಾದ ಭಾಷೆ. ಉದ್ವೇಗಕ್ಕಿಂತಲೂ ವಿಚಾರಪರತೆ ಅಧಿಕವಾಗಿದ್ದು, ಶ್ರೋತೃಗಳ ವಿಮರ್ಶೆಗೆ ತೆರೆದಿಡುತ್ತಿದ್ದ ಹೃದಯ ಅವರದು. ಒಂದೊಂದು ಮಾತೂ ಕತ್ತಿಯ ಅಲಗಿನಂತೆ ಪರಿಣಾಮಕಾರಿಯಾದುದು. ಅವರ ಭಾಷಣಗಳು ಜನತೆ ಕೇವಲ ಕೇಳಿ ಮರೆಯುವಷ್ಟೇ ಪರಿಣಾಮವನ್ನುಂಟುಮಾಡದೆ, ಆಂದೋಳನದ ಕ್ಷೇತ್ರದಲ್ಲಿ ಸಕ್ರಿಯವಾಗಿ ಧುಮುಕಿ ಕಾರ್ಯತತ್ಪರರಾಗಲು ಪ್ರೇರೇಪಿಸುವಂತಿದ್ದುವು. ವೈಯಕ್ತಿಕ ಜೀವನದ ಸರಳತೆ, ಸತ್ಯಸಂಧತೆ, ತಪೋಜೀವನ ಮತ್ತು ನಿಸ್ವಾರ್ಥ ಮನೋಭಾವ ಅವರ ನುಡಿಗೆ ಮೆರುಗು ಕೊಡುತ್ತಿದ್ದುವು. ಜನತೆ ಮಂತ್ರಮುಗ್ಧವಾಗಿ, ತ್ಯಾಗವನ್ನೂ ಸೇವಾಧರ್ಮವನ್ನೂ ಅನುಸರಿಸುತ್ತಿತ್ತು. ಉಪದೇಶ ಸಲಹೆಗಳು ಕೇವಲ ವೇದಿಕೆಗೆ ಸೀಮಿತವಾಗದೆ ಮನಸ್ಸಿನಲ್ಲಿ ಬೇರೂರಿ, ಮೊಳೆತು, ಹೆಮ್ಮರವಾಗುವಷ್ಟು ಸಕ್ಷಮತೆ ಹೊಂದಿದ್ದುವು. ನಮ್ರತೆ, ನಿರ್ಭೀಕತೆ, ನುಡಿದಂತೆ ನಡೆಯುವಿಕೆ ಅವರ ವ್ಯಕ್ತಿತ್ವವನ್ನು ಆರಾಧ್ಯವನ್ನಾಗಿಸಿದುವು. ಭಾಷಾಂತರದಲ್ಲೂ ಇವೇ ಭಾವನೆಗಳು ಸಹಜವಾಗಿ ಮೂಡಿಬಂದಿವೆ. ವಿಷಯವ್ಯಾಪ್ತಿ ಅಗಾಧವಾಗಿದೆ. ಅನಾಯಾಸವಾಗಿಯೂ ಅಂತಃಪ್ರೇರಣೆಯಿಂದ ಹೊರಹೊಮ್ಮಿದ ಹೇಳಿಕೆಗಳು ಈ ಮಾಲಿಕೆಯಲ್ಲಿ ಶೋಭಿಸುತ್ತಿರುವ ಅನರ್ಘ್ಯರತ್ನಗಳಂತಿವೆ. ದೇಶದ, ಸಮಾಜದ

ಎಲ್ಲ ರೀತಿಯ ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಕುರಿತ ವಿಚಾರಗಳು ಗಾಂಧೀಜಿಯವರ ವಿಸ್ತೃತ ಅನುಭವದಿಂದ ಮೂಡಿಬಂದಿವೆ. ದಕ್ಷಿಣ ಆಫ್ರಿಕಾದಲ್ಲಿ ಪದದಲಿತರಾಗಿದ್ದ ಭಾರತೀಯರ ದೈನ್ಯಸ್ಥಿತಿಯ ಮನತಾಗುವ ವರ್ಣನೆಗಳಿಂದ ಹಿಡಿದು, ಸತ್ಯಾಗ್ರಹ, ಜಾತೀಯತೆ, ಅಸ್ಪೃಶ್ಯತೆಗಳವರೆಗೆ ರಾಷ್ಟ್ರಜೀವನದ ಎಲ್ಲ ಜ್ವಲಂತ ಸಮಸ್ಯೆಗಳ ಬಗ್ಗೆ ಕಳಕಳಿ ತೋರಿರುವ ಮನಸ್ಸಿನ ಹತ್ತಾರು ಮುಖಗಳನ್ನು ನಾವು ಕಾಣುತ್ತೇವೆ.

ಇಷ್ಟು ವ್ಯಾಪಕವಾದ, ಅನುಭವಸಿಂಚಿತ ಭಾಷಣಗಳನ್ನು ಪರಿಣಾಮಕಾರಿಯಾಗಿ ನಮ್ಮ ಭಾಷೆಗೆ ಕನ್ನಡಿಸಬೇಕೆಂದರೆ ಅದಕ್ಕೆ ವಿಶೇಷ ಪರಿಣತಿ ಆವಶ್ಯಕ. ಗಾಂಧೀಜಿಯಂಥ ರಾಷ್ಟ್ರಚೇತನವನ್ನು ಜನತೆಗೆ ಯಥಾವತ್ತಾಗಿ ಮನಮುಟ್ಟುವಂತೆ ಪರಿಚಯ ಮಾಡಿಕೊಡುವುದು ಅಂತಹ ಸುಲಭಸಾಧ್ಯವಾದ ಕಾರ್ಯವೇನಲ್ಲ. ಅದಕ್ಕೆ ವಿಸ್ತೃತ ಅನುಭವ, ಆ ಮಹಾಚೇತನದೊಂದಿಗೆ ಸಾಮರಸ್ಯ, ಪೂರ್ಣ ವಿಶ್ವಾಸ ಮತ್ತು ಅಪಾರ ಶ್ರದ್ಧೆ ಅತ್ಯಗತ್ಯ. ಇಂಥ ಭಾಷಾಂತರದಲ್ಲಿ ಜೀವ ತುಂಬುವುದು ನಾಡುನುಡಿಗಳ ಬಗ್ಗೆ ವಿಶೇಷ ಆದರವಿರುವ ಮತ್ತು ಜನತೆಯ ಏಳಿಗೆಗಾಗಿ ಸಕ್ರಿಯವಾಗಿ ಶ್ರಮಿಸಬಲ್ಲ ಸಾಹಿತ್ಯ ನಿರ್ಮಾತೃವಿಗೆ ಮಾತ್ರ ಸಾಧ್ಯ; ಅನ್ಯರಿಗೆ ಕಷ್ಟಸಾಧ್ಯದ ಮಾತಾಗುವುದು, ಎಟುಕದ ಹೂವಾಗುವುದು.

ಗಾಂಧೀಜಿಯವರು ವ್ಯಕ್ತಿಗಿಂತ ಮಿಗಿಲಾಗಿ ಸಾಮೂಹಿಕ ಜೀವನದ ಚೇತನಶಕ್ತಿಯಾಗಿದ್ದರು; ಒಂದು ಸಂಸ್ಥೆಯಾಗಿದ್ದರು. ಈ ಚೇತನದಿಂದ ತಮ್ಮ ತಮ್ಮ ಆತ್ಮಶ್ರೀಯನ್ನು ಬೆಳಗಿಸಿಕೊಂಡ ಜನರು ಸಾವಿರಾರು ಮಂದಿ. ಅವರೆಲ್ಲ ನಿಸ್ಸ್ವಾರ್ಥವಾದ, ಚೊಕ್ಕ ಋಜುಜೀವನವನ್ನು ನಡೆಸಿ ಬಾಳಿನ ಪಥದಲ್ಲಿ ಬೆಳಕು ಚೆಲ್ಲುವಂತಹವರು. ಇಂಥ ಅಧ್ವರ್ಯುಗಳಲ್ಲೊಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಗಾಂಧೀಜಿಯವರ ಶಿಷ್ಯರ ಹಿಂಬಾಲಕರು. ಗಾಂಧೀಜಿಯವರ ವಿಭಿನ್ನ ವಿಚಾರ ವಾಹಿನಿಯ ವೀಚಿಗಳಲ್ಲಿ ಮಿಂದು ನಮ್ಮನ್ನೂ ಮೀಯಿಸಿರುವ ಅವರ ಕೆಲವು ಗಾಂಧೀ ವಿಷಯಕ ಕೃತಿಗಳಾದ 'ಪೂರ್ಣ ಸ್ವದೇಶಿ', 'ಭಾರತ ಭಾಗ್ಯ ವಿಧಾತ', 'ಜೋನ್ ಆಫ್ ಆರ್ಕ್ ಮತ್ತು ಮಹಾತ್ಮ ಗಾಂಧಿ' ಮೊದಲಾದುವು ಗೊರೂರರು ಗಾಂಧೀಜಿಯವರ ಬಗ್ಗೆ ತಳೆದಿರುವ ತತ್ಪರತೆ, ಶ್ರದ್ಧೆ, ವಿಶ್ವಾಸಗಳನ್ನು ತೋರಿಸುತ್ತವೆ. ಭಾಷಾಂತರದಲ್ಲೂ ಸಹ ಅಡಿಗಡಿಗೂ ಈ ಗುಣವಿಶೇಷಗಳೆ ಮೇಲೆದ್ದು ಕಾಣುತ್ತವೆ. ಗೊರೂರರ ಭಾಷಾಂತರದಲ್ಲಿ ಸಹಜತೆಯಿದೆ, ನುಡಿಯ ಸ್ವಾಭಾವಿಕ ಓಟವಿದೆ, ಭಾಷೆಯ ಓಜಸ್ಸು ಪೂರ್ಣವಾಗಿ ಮೆರೆದಿದೆ. ಕೆಲವಾರು ಎಡೆಗಳಲ್ಲಿ ಎಂತಹ ತೀಕ್ಷ್ಣಮತಿಗೂ ತಾನು ಭಾಷಾಂತರವೊಂದನ್ನು ಓದುತ್ತಿದ್ದೇನೆಂಬ ಅರಿವಾಗದೆ, ಗಾಂಧೀಜಿಯವರು ಕನ್ನಡ ಭಾಷೆಯಲ್ಲೆ ಭಾಷಣ ಮಾಡುತ್ತಿದ್ದಾರೆಂಬ ಭಾವನೆ ಮೂಡಿಬರುವಂತಿದೆ. ಅವುಗಳ ವೈಖರಿ ಓದುಗನನ್ನು ಸೆರೆಹಿಡಿಯುವಂತಿದೆ.

ಸಾಮಾನ್ಯ ರೀತಿಯ ಕೃತಿಗಳನ್ನು ಅನುವಾದಿಸುವಾಗ ವಹಿಸಬೇಕಾದ ಎಚ್ಚರಿಕೆಗಿಂತ ವಿಶೇಷವಾದ ಎಚ್ಚರಿಕೆಯನ್ನು ಭಾಷಣಗಳನ್ನು ಭಾಷಾಂತರ ಮಾಡುವಾಗ

ಪಡಿಸಬೇಕು. ಭಾಷಣ ಮೌಲಿಕವಾದುದು. ಭಾಷಣಕಾರನ ಭಾವಸರಸ್ಸಿನಿಂದ ತರಂಗಗಳು ವಿಧವಿಧವಾಗಿ ಏಳುತ್ತಿರುತ್ತವೆ. ಹಂಸಗಮನದಂತೆ ಮೆಲ್ಲ ಮೆಲ್ಲನೆ ಏಳಬಹುದು, ಗಜಗಾಂಭೀರ್ಯದಿಂದ ಮುಂಬರುತ್ತಿರಬಹುದು, ಇಲ್ಲವೆ ಭಾವೋದ್ವೇಗದ ಸಮೀರಣ ಬೀಸಿ ಬಿರುಸುಳಿಗಳು ಹೆಮ್ಮರಗಳಂತೆ ಮೂಡಿ ಶ್ರೋತೃಗಳನ್ನು ವಿಚಾರವೀಚಿಗಳಲ್ಲಿ ತೇಲಿಸಬಹುದು, ಆಲೋಲಕಲ್ಲೋಲವನ್ನುಂಟುಮಾಡಬಹುದು, ಚಿಂತನಪರರನ್ನಾಗಿ ಮಾಡಬಹುದು. ಭಾಷಣದ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಅಭೂತಪೂರ್ವಶಕ್ತಿಯಿರುತ್ತದೆ. ಮೂಲ ಭಾಷೆಯ ಶ್ರೀಮಂತಿಕೆ, ಶಬ್ದ ಸಂಪತ್ತು, ನುಡಿಗಟ್ಟುಗಳು—ಎಲ್ಲವೂ ಭಾಷಣದ ಪರಿಣಾಮಕಾರಿ ಪರಿಕರಗಳಾಗುತ್ತವೆ. ಸಾರ್ವಜನಿಕ ಜೀವನದ ವಿವಿಧ ಮುಖಗಳಾದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಗಳ ಬಗ್ಗೆ ಗಾಂಧೀಜಿಯವರು ಎಷ್ಟು ಕಳಕಳಿಯಿಂದ ವಿಚಾರಮಾಡುತ್ತಿದ್ದರೆಂಬುವಕ್ಕೆ ಈ ಭಾಷಣಗಳು ಕುರುಹಾಗಿವೆ.

ತತ್ತ್ವಗಳನ್ನು ಹೇಳುವುದು ಬೋಧಿಸುವುದು ಬಹು ಸುಲಭ. ಆದರೆ ಅವನ್ನೇ ಅನುಷ್ಠಾನಕ್ಕೆ ತರುವುದು ಅಷ್ಟು ಸುಲಭವಲ್ಲ. ಗಾಂಧೀಜಿಯವರ ವಿಚಾರಧಾರೆಯನ್ನು ಗೊರೂರರು ಎಷ್ಟರಮಟ್ಟಿಗೆ ಮೈಗೂಡಿಸಿಕೊಂಡಿರುವರೆಂಬುದನ್ನು ಅವರ 'ಮೆರವಣಿಗೆ', 'ಹೇಮಾವತಿ', 'ಕ್ರೌಂಚವಧೆ' (ಭಾಷಾಂತರ) ಮೊದಲಾದವುಗಳಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಬಹುದು. 'ಮೆರವಣಿಗೆ'ಯ ಸುದರ್ಶನನಿಗಾದರೋ ಸಬರಮತಿ ಆಶ್ರಮದ ಮರ, ಕಲ್ಲು ಹಾಗೂ ಹುಲ್ಲಿನ ಎಸಳಿನಲ್ಲಿ ಗಾಂಧೀಜಿಯ ಹೆಜ್ಜೆಯ ಸಪ್ಪಳ ಕೇಳಿಬರುತ್ತದೆ. 'ಹೇಮಾವತಿ'ಯಲ್ಲಾದರೋ ಗೊರೂರರು ಗಾಂಧೀಜಿಯವರನ್ನೇ ಒಂದು ಚಿಕ್ಕ ಪಾತ್ರವಾಗಿ ಚಿತ್ರಿಸಿದ್ದಾರೆ. ಗಾಂಧೀಜಿಯವರ ತತ್ತ್ವಗಳು ಅವರ ಕೃತಿಗಳಲ್ಲೆಲ್ಲಾ ಎದ್ದು ಕಾಣುತ್ತವೆ. ಹೀಗೆ ತತ್ತ್ವ ಮತ್ತು ಆಚರಣೆಯಲ್ಲಿ ಗಾಂಧೀಜಿಯವರು ಸೂಕ್ಷ್ಮರೂಪಿಯಾಗಿ ಗೊರೂರರಲ್ಲಿ ವ್ಯಾಪಿಸಿಕೊಂಡಿದ್ದಾರೆ. ಅದ್ದರಿಂದಲೆ ಏನೋ ಈ ಭಾಷಣಗಳನ್ನು ಗಾಂಧೀಜಿಯವರೇ ಮಾಡುತ್ತಿರುವರೇನೊ ಎಂದು ಭಾಸವಾಗುತ್ತದೆ.

ಭಾಷಣಗಳ ಮತ್ತು ಹೇಳಿಕೆಗಳ ಈ ಮಾಲೆಯಲ್ಲಿ ಕೆಲವು ಸಾಕಷ್ಟು ದೀರ್ಘವಾಗಿಯೂ ಇನ್ನುಳಿದುವು ಚಿಕ್ಕವಾಗಿಯೂ ಚೊಕ್ಕವಾಗಿಯೂ ಇವೆ. ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಪ್ರಶ್ನೆಯನ್ನು ಕುರಿತು ೧೮೯೬ರಲ್ಲಿ ಮದರಾಸಿನಲ್ಲಿ ಮಾಡಿದ ಭಾಷಣ ೨೪ ಪುಟಗಳಷ್ಟಿದೆ. ಚಿನ್ನದ ನಾಡು ಎನಿಸಿದ್ದ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ್ದ ಒಂದು ಲಕ್ಷ ಬ್ರಿಟಿಷ್ ಭಾರತದ ಪ್ರಜೆಗಳು ಪಡುತ್ತಿದ್ದ ಬವಣೆಯನ್ನು ಸವಿಸ್ತಾರವಾಗಿ ಬಾಪೂಜಿ ವರ್ಣಿಸಿದ್ದಾರೆ. ಭಾರತೀಯರನ್ನು ಕಂಡರೆ ಅಲ್ಲಿಯವರಿಗೆ ಸ್ವಾಭಾವಿಕವಾಗಿಯೆ ವಿರೋಧವಿತ್ತು. ಕಾನೂನಿನ ಬಿಗಿಮುಷ್ಟಿಯಲ್ಲಿ ತೊಳಲಾಡಬೇಕಿದ್ದ ಅವರ ಪರಿಸ್ಥಿತಿ ಅತಿ ಶೋಚನೀಯವಾಗಿತ್ತು. ತಾರತಮ್ಯಜ್ಞಾನವಿಲ್ಲದೆ ಪ್ರತಿಯೊಬ್ಬ ಭಾರತೀಯನೂ 'ಕೂಲಿ'ಯಾಗಿದ್ದ. ಭಾರತೀಯ ಅಧ್ಯಾಪಕರು 'ಕೂಲಿ ಉಪಾಧ್ಯಾಯ'ರಾಗಿದ್ದರು. ಅಂಗಡಿಕಾರರು 'ಕೂಲಿ ಅಂಗಡಿಕಾರ'ರಾಗಿದ್ದರು. ಭಾರತೀಯರ ಒಡೆ

ತನದಲ್ಲಿದ್ದ ಹಡಗುಗಳು ಅವರ ದೃಷ್ಟಿಯಲ್ಲಿ 'ಕೂಲಿ ಹಡಗು'ಗಳಾಗಿದ್ದವು. "ಇಲಿಗಳಂತೆ ಭಾರತೀಯರನ್ನು ಗುಂಡು ಹಾರಿಸಿ ಕೊಲ್ಲಲು ಸಾಧ್ಯವಿಲ್ಲ. ಅದಕ್ಕಾಗಿ ವಿಷಾದವಾಗಿದೆ" (ಪುಟ ೬) ಎಂಬ ಮಟ್ಟಿಗೆ ರಾಜಾರೋಷವಾದ ಘೋರಣೆ ತಳೆದಿದ್ದ ಐರೋಪ್ಯರ ನಡುವೆ ಗುಲಾಮರಂತೆ ಕೆಲಸ ಮಾಡುತ್ತಿದ್ದ ಭಾರತೀಯರ ಬವಣೆಯನ್ನು ಎಷ್ಟು ವರ್ಣಿಸಿದರೂ ಕಡಮೆಯೆ. ವರ್ಣನೆ ಎಷ್ಟು ವಿಚಾರಪ್ರಚೋದಕವಾಗಿದೆಯೆಂದರೆ ಈಗಲೂ ಈ ಕಟುಸತ್ಯದ ವರ್ಣನೆಯನ್ನು ಕೇಳಿದರೆ ಚಿಂತನಪರನಾದ ಭಾರತೀಯನ ರಕ್ತ ಕುದಿಯುವಂತಾಗುತ್ತದೆ.

ಮದ್ರಾಸ್ ವಿದ್ಯಾರ್ಥಿಗಳ ಸನ್ಮಾನ ಪತ್ರಕ್ಕೆ ಉತ್ತರವಾಗಿ ೧೯೧೫ರಲ್ಲಿ ಗಾಂಧೀಜಿಯವರು ಮಾಡಿದ ಭಾಷಣದಲ್ಲಿ ಸದ್ವಿದ್ಯೆಯ ವಿವರಣೆ ಅತ್ಯಂತ ಮನೋಜ್ಞವಾಗಿದೆ. ಇಂಥ ಎಡೆಗಳಲ್ಲಿ ಭಾಷಾಂತರಕ್ಕೆ ಭಾವಸ್ಫೂರ್ತಿಯ ಮೆರುಗನ್ನು ಹೆಚ್ಚಿದಂತಿದೆ. ಉದಾಹರಣೆಗೆ, "ಭಾರತಮಾತೆ ಯಾವಾಗಲೂ ಹಸನ್ಮುಖಿ, ಮೃದುಭಾಷಿ, ಸುಗಂಧಿ, ಸರ್ವಶಕ್ತಳು, ಸತ್ಯಮಯಿ, ಮಂಗಳರೂಪಿ, ಹಾಲು ಜೇನು ಹರಿಯುತ್ತಿರುವ ನಾಡು. ಮಾಗಿದ ಪೈರಿನ ಹಣ್ಣುಗಳ ಹೊಲಗಳುಳ್ಳವಳು; ಭಾರತದ ಸುವರ್ಣ ಯುಗದಲ್ಲಿ ವರ್ಣಿತವಾಗಿರುವ, ನಮ್ಮ ದೃಷ್ಟಿಗೆ ಎಲ್ಲೋ ಒಂದೇ ಬಾರಿ ಬಿದ್ದಿರುವ ಮಹದ್ ವ್ಯಕ್ತಿಗಳು ಜೀವಿಸುತ್ತಿರುವ ನಾಡು, ಎಂದೆಲ್ಲ ವರ್ಣಿಸಿದ್ದಾನೆ. ಕವಿ ನಮ್ಮ ಮುಂದೆ ಚಿತ್ರಿಸುವ ಭಾರತ, ಪಾಶವೀಶಕ್ತಿಯಿಂದಲ್ಲ ಆತ್ಮಶಕ್ತಿಯಿಂದ ಮನುಷ್ಯ ಪ್ರಪಂಚವನ್ನು, ಅಖಿಲ ಜಗತ್ತನ್ನು ತನ್ನಲ್ಲಿ ಆಲಂಗಿಸಿಕೊಳ್ಳುವ ಭಾರತ." (ಪುಟ ೩೮) ಭಾಷಾಂತರಕಾರನ ಪ್ರತಿಭೆ ಇಂಥ ಕಡೆಗಳಲ್ಲಿ ಭಾವಸೌಂದರ್ಯವನ್ನು ಸಹಜವಾಗಿ ಉಂಟುಮಾಡಿ ಭಾಷೆಯ ಶ್ರೀಮಂತಿಕೆಯನ್ನು ಬಳಸಿಕೊಳ್ಳುವುದನ್ನು ಕಾಣಬಹುದು. ನಿಜವಾದ ವಿದ್ಯೆಯ ಬಗ್ಗೆ ಹೇಳುತ್ತಾ "ನಿಮ್ಮನ್ನೇ ಪರೀಕ್ಷಿಸಿಕೊಳ್ಳಿ. ನಿಮ್ಮ ಹೃದಯವನ್ನು ಹುಡುಕಿ ದಬ್ಬಾಳಿಕೆ ಎಲ್ಲಿದ್ದರೂ ಖಂಡಿತ ಅದನ್ನು ಎದುರಿಸಿ; ನಿಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಬರುವುದನ್ನು ಎದುರಿಸಿ. ಆದರೆ ಆ ಪ್ರಜಾಪೀಡಕನ ರಕ್ತವನ್ನು ಚೆಲ್ಲಿ ಅಲ್ಲ. ನಮ್ಮ ಧರ್ಮ ಹೇಳಿಕೊಟ್ಟಿರುವುದು ಅದಲ್ಲ. ನಮ್ಮ ಧರ್ಮದ ತಳಹದಿ ಅಹಿಂಸೆ; ಅದರ ಸಕ್ರಿಯ ರೂಪ, ಪ್ರೇಮದ ಹೊರತು ಬೇರೇನೂ ಅಲ್ಲ. ನಮ್ಮ ನೆರೆಹೊರೆ, ಮಿತ್ರರು ಇವರಲ್ಲಿ ಮಾತ್ರ ಪ್ರೇಮವಲ್ಲ. ನಮ್ಮ ಶತ್ರುಗಳಲ್ಲಿಯೂ ಪ್ರೇಮ." (ಪುಟ ೪೦) ಒಂದೊಂದು ವಾಕ್ಯವೂ ಎಷ್ಟು ಸ್ಫುಟ, ತೀಕ್ಷ್ಣ ಮತ್ತು ಅಸಂದಿಗ್ಧವಾಗಿದೆ, ಹೃದಯವನ್ನು ತಾಗುವಂತಿದೆ.

ಗಾಂಧೀಜಿಯವರಿಗೆ ಭಾಷಣ ಮಾಡುವ ಚಟ ಇರಲಿಲ್ಲ. ಸರ್ಜನಾತ್ಮಕ ಕಾರ್ಯಕ್ರಮಗಳ ಬಗ್ಗೆ ತಿಳಿಯಹೇಳಲು ಅವರು ಇಷ್ಟಪಡುತ್ತಿದ್ದರೆ ವಿನಾ ತಮ್ಮ ವಾಗ್ಝರಿಯಲ್ಲಿ ಶ್ರೋತೃಗಣ ತೊಯ್ದುಹೋಗಬೇಕೆಂಬ ಅಭೀಪ್ಸೆ ಅವರಲ್ಲಿರಲಿಲ್ಲ. ಕಾಶಿ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣವೊಂದರಲ್ಲಿ, "ಭಾಷಣಗಳು ಉಪನ್ಯಾಸಗಳು ಎಂದರೆ ನನ್ನ ತಲೆಗೆ ಚಿಟ್ಟು ಆಗುತ್ತಿದೆ....ಭಾಷಣ

ಮಾಡುವ ನಮ್ಮ ಸಾಧನಗಳು ಕೊನೆಮುಟ್ಟಿವೆ. ನಮ್ಮ ಕಿವಿಗೆ ಹಬ್ಬವಾದರೆ, ಕಣ್ಣಿಗೆ ಹಬ್ಬವಾದರೆ ಸಾಲದು, ...ನಮ್ಮ ಕೈ ಕಾಲುಗಳು ಚಲಿಸಬೇಕು...." (ಪುಟ ೪೫) ಎಂಬುದಾಗಿ ಹೇಳಿ ಕ್ರಿಯಾತ್ಮಕವಲ್ಲದ ಭಾಷಣಗಳ ಬಗ್ಗೆ ತಮ್ಮ ಅಸಮ್ಮತಿ ಸೂಚಿಸಿದ್ದಾರೆ. ಪ್ರಾಂತೀಯ ಭಾಷೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ಸೂಚಿಸಿದ್ದಾರೆ: "ಈ ವಿಶ್ವವಿದ್ಯಾನಿಲಯ, ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಅವರ ಪ್ರಾಂತಭಾಷೆಯಲ್ಲಿ ಶಿಕ್ಷಣ ದೊರೆಯುವಂತೆ ಏರ್ಪಡಿಸುವುದೆಂದು ನಾನು ನಂಬುತ್ತೇನೆ. ನಮ್ಮ ಭಾಷೆಗಳು ನಮ್ಮ ಪ್ರತಿಬಿಂಬ. ನಮ್ಮ ಭಾಷೆ ಮಹದ್ವಿಚಾರಗಳನ್ನು ಹೇಳಲು ಅಶಕ್ತವೆಂದು ನೀವು ಹೇಳುವುದಾದರೆ, ನಮ್ಮ ಜನಾಂಗ ಎಷ್ಟು ಬೇಗ ನಾಶವಾದರೆ ನಮಗೆ ಅಷ್ಟು ಒಳ್ಳೆಯದು. ....ಇಂಗ್ಲಿಷಿನ ಮೂಲಕ ಜ್ಞಾನಾರ್ಜನೆ ಮಾಡುವ ಪ್ರತಿ ಯುವಕನೂ ತನ್ನ ಜಾತಿಯ ಅಮೌಲ್ಯವಾದ ಆರು ವರುಷಗಳನ್ನು ಅನ್ಯಾಯವಾಗಿ ಕಳೆದುಕೊಳ್ಳುತ್ತಾನೆ." (ಪುಟ ೪೬)

ಕೆಲವೆಡೆಗಳಲ್ಲಿ ಗಾಂಧೀಜಿಯವರ ದಿಟ್ಟತನ ಮೆಚ್ಚತಕ್ಕದ್ದು. ಉದಾಹರಣೆಗೆ, "ವೈಸ್‌ರಾಯರು ವಾರಾಣಾಸಿಯ ರಸ್ತೆಗಳಲ್ಲಿ ಹೋಗುತ್ತಿದ್ದಾಗ ನಾವೆಲ್ಲ ತುಂಬ ಕಾತುರವಾಗಿದ್ದೆವು. ಅನೇಕ ಕಡೆಗಳಲ್ಲಿ ಗುಪ್ತ ಪೋಲೀಸರನ್ನು ನಿಯಮಿಸಿದ್ದರು. ನಾವೆಲ್ಲ ಭಯಭ್ರಾಂತರಾದೆವು. ಈ ಅಪನಂಬಿಕೆ ಯಾಕೆ? ಹೀಗೆ ಬದುಕಿ ನಾವು ಸಾಯುವುದಕ್ಕಿಂತ ಸಾಯುವುದೇ ಲಾರ್ಡ್ ಹಾರ್ಡಿಂಜ್‌ರಿಗೂ ಉತ್ತಮವಲ್ಲವೆ?" (ಪುಟ ೫೧) ಎಂಥ ನಿರ್ಭೀಕತೆಯ ಮಾತುಗಳಿವು. ಸತ್ಯ ಪರಿಪಾಲನೆಯಿಂದ ಮೂಡಿದ ಆತ್ಮವಿಶ್ವಾಸ ಈ ಮಾತುಗಳನ್ನಾಡಿಸಿದೆ. ಹೀಗೆಯೆ ಸ್ವದೇಶಿಯ ಬಗ್ಗೆ ಮಾತನಾಡುತ್ತ ಗಾಂಧೀಜಿಯವರು "ಈ ಸ್ವದೇಶಿ, ಆತ್ಮಪರೀಕ್ಷೆ (ಶೋಧನೆ) ಮತ್ತು ಸತತ ಎಚ್ಚರದೊಂದಿಗೆ ಯಾವಾಗಲೂ ಪ್ರಯೋಗಿಸಬಹುದಾದ ಚೈತನ್ಯಪೂರ್ಣಶಕ್ತಿಯೆಂದು ಭಾವಿಸಿ. ಇದು ಸೋಮಾರಿಗಳಿಗಲ್ಲ. ಅಹಿಂಸೆಗಾಗಿ ಸಂತೋಷದಿಂದ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧರಾಗಿರುವವರಿಗೆ ಅದು" (ಪುಟ ೬೧) ಎಂಬುದಾಗಿ ಸೂಚಿಸಿದ್ದಾರೆ. ಕ್ರೈಸ್ತ ಮತಾಂತರವನ್ನು ಕುರಿತು ಮದರಾಸಿನ ಮಿಷನರಿ ಸಮ್ಮೇಳನದಲ್ಲಿ ಅವರು ನುಡಿದ ಮಾತುಗಳನ್ನು ಆಡಬೇಕಾದರೆ ಬೇರಾರಿಗಾದರೂ ಬಹಳ ಎದೆಗಾರಿಕೆ ಬೇಕು. "ಮಹಾನ್ ಮಿಶನರಿ ಸಂಸ್ಥೆಗಳು, ತಮ್ಮ ಮತಾಂತರದ ಗುರಿಯನ್ನು ಬಿಟ್ಟು, ಇತರ ತಮ್ಮ ಜನೋಪಕಾರಿ ಕಾರ್ಯಗಳನ್ನು ಮುಂದುವರಿಸುವುದರಿಂದ ಅವರು ಕ್ರಿಸ್ತಮತದ ಸೇವೆಯನ್ನು ಇನ್ನೂ ಹೆಚ್ಚಾಗಿ ಮಾಡಿದಂತಾಗುವುದಿಲ್ಲವೆ?....ಯೂರೋಪಿನಲ್ಲಿ ನಡೆಯುತ್ತಿರುವ ಭಯಂಕರ ಅನ್ಯಾಯಗಳನ್ನು ನೋಡಿದರೆ, ಏಸುವಿನ ಸಂದೇಶ, ಶಾಂತಿಪುತ್ರನ ಆ ಸಂದೇಶ ಅವರಿಗೆ ಅರ್ಥವಾದಂತೆ ಇಲ್ಲ. ಪೂರ್ವದೇಶದ ಬೆಳಕು ಅಲ್ಲಿಗೆ ಬೇಗ ಬೇಕಾಗಬಹುದು." (ಪುಟ ೬೬–೬೭)

ಶಿಕ್ಷಣವನ್ನು ಪ್ರಾಂತಭಾಷೆಗಳ ಮೂಲಕ ಕೊಟ್ಟಿದ್ದರೆ ಪ್ರಾಂತಭಾಷೆಗಳೂ ವೈಭವಯುಕ್ತವಾಗಿ ಬೆಳೆಯುತ್ತಿದ್ದವೆಂಬ ಅವರ ಹೇಳಿಕೆ ನಮ್ಮ ಭಾಷೆಗಳು ಶಿಕ್ಷಣ

ಪಾಠ್ಯಪಾವಾಗುವುದಕ್ಕೆ ಅರ್ಹವಲ್ಲವೆಂದು ಪರಿಗಣಿಸುವವರ ಬಾಯನ್ನು ಮುಚ್ಚಿಸು ವಂತಿದೆ. ಜಾತಿಪತಗಳ ಬಾಹ್ಯಕಾರಕಗಳನ್ನು ಖಂಡಿಸುತ್ತಾ ಅವರು ಹೀಗೆ ಹೇಳಿ ದರು : "....ಸಾವಿರಾರು ಹಿಂದೂಗಳು ಮುಸಲ್ಮಾನರ ಮನೆಯ ನೀರನ್ನು ಕುಡಿಯುವುದರ ಬದಲು ಸಂತೋಷದಿಂದ ಸಾಯುವುದಕ್ಕೆ ಸಿದ್ಧರಾಗಿರುತ್ತಾರೆ." (ಪುಟ ೭೧) ಈ ಮಾತು ಜಾತ್ಯಂಧತೆಯ ಪರಾಕಾಷ್ಠೆಯಷ್ಟಲ್ಲದೆ ಇನ್ನೇನು ? ಆರ್ಥಿಕ ಮತ್ತು ನೈತಿಕ ಅಭಿವೃದ್ಧಿಗಳಿಗೆ ಪರಸ್ಪರ ಸಂಬಂಧ ಕಲ್ಪಿಸಿ ನೈತಿಕತೆಯ ಅಡಿಪಾಯದ ಮೇಲೆ ನಿಲ್ಲ ದಿರುವ ಆರ್ಥಿಕ ಉನ್ನತಿ ದೇಶದ ನೈಜ ಉನ್ನತಿಗೆ ಕಾರಣವಾಗಲಾರದೆಂದು ಹೇಳಿ, "ಸೂಜಿಯ ಕಣ್ಣಿನ ಮೂಲಕ ಹೋಗುವುದು ಒಂಟೆಗೆ, ಧನಿಕರು ದೇವರ ರಾಜ್ಯಕ್ಕೆ ಹೋಗುವುದಕ್ಕಿಂತ ಹೆಚ್ಚು ಸುಲಭ" (ಪುಟ ೭೫) ಎಂದು ಹೋಲಿಸಿ ನೀತಿಧರ್ಮಗಳ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಹಣ ಮತ್ತು ದೇವರು—ಎರಡನ್ನೂ ಏಕಕಾಲದಲ್ಲಿ ಸೇವೆಮಾಡಲು ಸಾಧ್ಯವಿಲ್ಲ ಎಂಬುದು ಗಾಂಧೀಜಿಯವರ ಆರ್ಥಿಕ ನಿಯಮ.

ನೈತಿಕ ತಳಹದಿಯಿಲ್ಲದ ಸಹಕಾರ ಬಡವರಿಗೆ ಶೂಲವಿದ್ದಂತೆ. "ಸಾಲಪದ್ಧತಿ ಈ ಸುಂದರವಾದ ಭೂಮಿಯನ್ನು ಹಾವಿನ ಸುರುಳಿಯಂತೆ ಸುತ್ತಿಹಾಕಿಕೊಂಡಿದೆ. ನಾವು ಎಚ್ಚರಿಕೆಯಿಂದಿರದಿದ್ದರೆ ಅದು ನಮ್ಮನ್ನು ಉಸಿರುಗಟ್ಟಿಸಿ ಸಾಯಿಸಬಹುದು" (ಪುಟ ೮೭) ಎಂಬ ಹೋಲಿಕೆ ಪರಿಸ್ಥಿತಿಯ ಭೀಕರತೆಯನ್ನು ಎಷ್ಟು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ. ಸಮಾಜಸೇವೆಯ ಬಗ್ಗೆ ಮಾತನಾಡುತ್ತ ಗಾಂಧೀಜಿಯವರು "ಧರ್ಮವಿಲ್ಲದ ಬಾಳು ನಿಷ್ಠೆಯಿಲ್ಲದ ಬಾಳು ಎಂದು ನಾನು ಭಾವಿಸುತ್ತೇನೆ. ನಿಷ್ಠೆಯಿಲ್ಲದ ಬಾಳು ಚುಕ್ಕಾಣಿ (ಮಾರ್ಗದರ್ಶಕ)ಯಿಲ್ಲದ ಹಡಗಿನಂತೆ. ಚುಕ್ಕಾಣಿಯಿಲ್ಲದ ಹಡ ಗನ್ನು,ನಾವಿಕ ನಡೆಸುವಾಗ ಹಡಗು ಸ್ಥಳದಿಂದ ಸ್ಥಳಕ್ಕೆ ಎಸೆಯಲ್ಪಟ್ಟು ಎಂದಿಗೂ ಗುರಿ ಮುಟ್ಟಲು ಸಾಧ್ಯವಾಗದಂತೆ, ಧರ್ಮವನ್ನು ಹೃದಯಕ್ಕೆ ಅಪ್ಪಿಕೊಳ್ಳದ ಮನುಷ್ಯ, ತನ್ನ ಗುರಿಯನ್ನು ಮುಟ್ಟದೆ ಭ್ರಮಿಸಿ ಅಲೆಯುತ್ತಿರುತ್ತಾನೆ" (ಪುಟ ೯೪) ಎಂಬುದಾಗಿ ಹೇಳಿ ಸಮಾಜಸೇವೆಯಲ್ಲಿ ನಿಷ್ಠೆಯನ್ನು ಎತ್ತಿ ಹಿಡಿದಿದ್ದಾರೆ.

ಸತ್ಯ, ಅಹಿಂಸೆ, ಅಸ್ವಾದ, ಬ್ರಹ್ಮಚರ್ಯ, ಸ್ವದೇಶಿವ್ರತ ಮೊದಲಾದವುಗಳ ಬಗ್ಗೆ ಮಾಡಿದ ಭಾಷಣವೊಂದರಲ್ಲಿ ಗಾಂಧೀಜಿಯವರ ಅಸ್ತೇಯ ಭಾವನೆ ಪರಾಕಾಷ್ಠೆಯನ್ನೇ ಮುಟ್ಟಿದೆ. ತತ್ಕ್ಷಣದ ಆವಶ್ಯಕತೆಗೆ ಬೇಕಾಗದ ಯಾವುದಾದರೂ ವಸ್ತುವನ್ನು ತೆಗೆದು ಕೊಂಡು ತನ್ನಲ್ಲಿಟ್ಟುಕೊಂಡರೆ, ಅವರ ದೃಷ್ಟಿಯಲ್ಲಿ ಅದೂ ಕಳ್ಳತನವೆ. "ಭಾರತದಲ್ಲಿ ಮೂವತ್ತು ಲಕ್ಷ ಸಂಖ್ಯೆಯ ಜನತೆ ದಿನಕ್ಕೆ ಒಂದೇ ಊಟದೊಂದಿಗೆ ತೃಪ್ತರಾಗಿರಬೇಕಾ ಗಿದೆ. ಅದಕ್ಕೆ ಬರಿಯ ಒಂದು ಚಿಟಿಕೆ ಉಪ್ಪು ಮಾತ್ರ; ಜಿಡ್ಡು ಇಲ್ಲವೇ ಇಲ್ಲ. ಈ ಮೂವತ್ತು ಲಕ್ಷ ಜನರಿಗೆ ಇನ್ನೂ ಉತ್ತಮವಾಗಿ ಅನ್ನ ವಸ್ತ್ರ ದೊರೆಯುವವರೆಗೆ ನಮ್ಮ ಬಳಿ ಇರುವ ಯಾವ ವಸ್ತುವಿಗೂ ನಮಗೆ ನಿಜವಾದ ಹಕ್ಕು ಇಲ್ಲ" (ಪುಟ ೧೦೫-೬)ಎಂಬ ಬಾಪೂಜಿಯವರ ಹೇಳಿಕೆ ನಾಡಿನ ದಲಿತ ಜನತೆಯ ಬಗ್ಗೆ ಅವರಲ್ಲಿದ್ದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ಸತ್ಯಾಗ್ರಹ, ಅಹಿಂಸೆ, ಪ್ರೇಮಗಳಿಂದ ಸ್ವರಾಜ್ಯ ಪಡೆಯುವುದೇ ಇವರ ಜೀವನ ಕೃತ್ಯಗಳಾಗಿದ್ದವು. ಗಾಂಧೀಜಿಯವರ ಈ ಮಾತುಗಳು ಭಾಷಾಂತರದಲ್ಲಿ ಅತ್ಯಂತ ಪ್ರಭಾವ ಪೂರ್ಣವಾಗಿ ಮೂಡಿಬಂದಿವೆ. "ಆತ್ಮಶಕ್ತಿಯಿಂದ ಪತ್ತ್ರಿಗಿನ ಬೆಂಕಿಯ ಮಳೆಗೆ ಕಲ್ಲು ಹೃದಯವು ಸಹ ಕರಗುವುದು. ಪ್ರೇಮವು ಎದುರಾದಾಗ ಹಿಟ್ಲರ್ ಕ್ರೂರಿಯಾದ ಜೇಮ್ಸ್ ಚಕ್ರವರ್ತಿ ಸಹ ಕುರಿಮರಿಯಾಗುತ್ತಾನೆ. ಇದು ಅತಿಶಯೋಕ್ತಿಯಲ್ಲ. ಇದು ಬೀಜಗಣಿತದ ಸೂತ್ರದಷ್ಟೇ ನಿಶ್ಚಯ. ಈ ಸತ್ಯಾಗ್ರಹವೇ ಭಾರತದ ವಿಶಿಷ್ಟವಾದ ಆಯುಧ." (ಪುಟ ೧೩೪) ಬೊಲ್ಶೆವಿಸಂ ಮತ್ತು ಸತ್ಯಾಗ್ರಹದ ಬಗ್ಗೆ ಮಾತನಾಡುತ್ತಾ ಎರಡರಲ್ಲಿರುವ ಭಿನ್ನತೆಯನ್ನು ನಿರ್ದಿಷ್ಟವಾಗಿ ಎತ್ತಿ ತೋರಿಸಿದ್ದಾರೆ. "ಇಂದಿನ ಐಹಿಕ ಭೋಗಪ್ರಧಾನ ನಾಗರಿಕತೆಯ ಅನಿವಾರ್ಯ ಫಲವೇ ಬೊಲ್ಶೆವಿಸಂ. ಅತಿಯಾಗಿ ಐಹಿಕ ಭೋಗವನ್ನು ಪೂಜಿಸುವ ಈ ಭಾವನೆಯಿಂದ ಒಂದು ತತ್ತ್ವಪ್ರಣಾಳಿಯುಳ್ಳ ಜನ ಸೃಷ್ಟಿಯಾಗಿದ್ದಾರೆ. ಭೌತಿಕ ಅಭಿವೃದ್ಧಿಯೊಂದೇ ಅವರ ಗುರಿ. ಬಾಳುವೆಯ ಅಂತ್ಯ ಮೌಲ್ಯಗಳೊಂದಿಗೆ ಅವರಿಗೆ ಸಂಪರ್ಕವೇ ಇಲ್ಲ. ಭೋಗವೇ ಬೊಲ್ಶೆವಿಸಂನ ಧರ್ಮ, ಸಂಯಮ ಸತ್ಯಾಗ್ರಹದ ಧರ್ಮ." (ಪುಟ ೧೩೩)

ಹೀಗೆಯೇ ೧೯೩೦ರಲ್ಲಿ ಭಟಗಾಂನಲ್ಲಿ ಮಾಡಿದ 'ನಿಮ್ಮ ಅಂತರಂಗವನ್ನು ಶೋಧನೆ ಮಾಡಿಕೊಳ್ಳಿ' ಎಂಬ ಭಾಷಣ ಅತ್ಯಂತ ಭಾವನಾಪೂರಿತವಾಗಿದೆ. "ಕದ್ದ ಆಹಾರ, ಶುದ್ಧಿಮಾಡಿದ ಪಾದರಸವನ್ನು ಸೇವಿಸಿದಂತೆ" ಎಂಬಂತೆ ಬಡದೇಶದ ಸ್ಥಿತಿಗೆ ಮೀರಿ ಜೀವನವನ್ನು ನಡೆಸುವುದು ಕದ್ದ ಆಹಾರವನ್ನು ತಿಂದಂತೆ ಎಂಬುದು ಗಾಂಧೀಜಿಯವರ ಅಭಿಮತವಾಗಿತ್ತು. ಹೋರಾಟದ ಬಗ್ಗೆ ಮಾತನಾಡುತ್ತಾ "....ಹೋರಾಟ ಮುಂದುವರಿಯುವುದು. ನಾನು ಒಬ್ಬನೆ ಆದರೂ ಸರಿಯೆ ಅಥವಾ ಸಾವಿರಾರು ಮಂದಿ ನನ್ನ ಜೊತೆ ಸೇರಿದರೂ ಸರಿಯೆ, ಈ ಚಳುವಳಿಯಿಂದ ನಾನು ವಿಮುಖನಾಗುವುದಿಲ್ಲ. ನಾನು ನಾಯಿಯಂತೆ ಸತ್ತರೂ ಸರಿ; ನಾಯಿಗಳು ನನ್ನ ಮೂಳೆಯನ್ನು ನೆಕ್ಕಿದರೂ ಸರಿ. ನಾನಂತೂ ನಿರುತ್ಸಾಹದಿಂದ ಜೀವಚ್ಛವವಾಗಿ ಆಶ್ರಮಕ್ಕೆ ಹಿಂದಿರುಗುವುದಿಲ್ಲ." (ಪುಟ ೨೪೬) ಭಾರತ ಭಾಗ್ಯ ವಿಧಾತನ ಪೌರುಷಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಮೇಲೆ ಉದಾಹರಿಸಿದ ಹೇಳಿಕೆಗಳಿಂದ ಗೊರೂರರ ಭಾಷಾಂತರ ಎಷ್ಟು ಸಹಜವಾಗಿ ಬಂದಿದೆಯೆಂಬುದು ವಿದಿತವಾಗುತ್ತದೆ. ಈ ರೀತಿಯ ಹೇಳಿಕೆಗಳು ಗ್ರಂಥದ ಉದ್ದಕ್ಕೂ ಬಹುಸಂಖ್ಯಾತವಾಗಿವೆ. ಒಂದೊಂದೂ ಒಳಚೇತನವನ್ನು ಚಾಟಿಯೇಟಿನಿಂದ ಹೊಡೆದೆಬ್ಬಿಸಿ ಚುರುಕುಮುಟ್ಟಿಸುವಂತಿವೆ. ಕನ್ನಡ ಸಾಹಿತ್ಯದಲ್ಲಾದರೋ ಗಾಂಧೀಜಿಯವರನ್ನು ಕುರಿತ ಸಾಹಿತ್ಯ ಸಾಕಷ್ಟಿದೆ. ಅವುಗಳಲ್ಲಿ ಗೊರೂರರ ಗಾಂಧೀವಿಷಯಕವಾದ ಮತ್ತಿತರ ನಿರ್ಮಿತಿಯೊಡನೆ ಈ ಸಶಕ್ತ ಭಾಷಾಂತರವೂ ತನ್ನದೇ ಆದ ಸ್ಥಾನಮಾನಗಳನ್ನು ಪಡೆದಿದೆ.

ಎರಡೂ ಭಾಷೆಗಳ (ಮೂಲಭಾಷೆ ಮತ್ತು ಉದ್ದಿಷ್ಟ ಭಾಷೆ) ಸಾಕಷ್ಟು ಜ್ಞಾನವುಳ್ಳ ಭಾಷಾಂತರಕಾರ ಎಷ್ಟೇ ಚೆನ್ನಾಗಿ ಭಾಷೆಯ ವಿಶುದ್ಧ ಜಾಯಮಾನವನ್ನು

ಸರಿಸಿ ಬರೆದರೂ ಮೂಲಭಾಷೆಯ ಮೋಡಿಯಿಂದ ಹೊರಬರಲು ಕಷ್ಟಕರವಾಗಿ, ಅದಕ್ಕೆ ಸಂವಾದಿಯಾದ ನುಡಿಗಟ್ಟುಗಳು, ಪದಗುಚ್ಛಗಳು ತನ್ನ ಭಾಷೆಯಲ್ಲಿಯೂ ಇವೆಯೆಂದು ಕಲ್ಪಿಸಿ ಪ್ರಯೋಗಿಸಿಬಿಡುತ್ತಾನೆ. ಇದರಿಂದ ಎರಡು ಭಾಷೆಗಳ ಮಧ್ಯೆ ಸಾಮರಸ್ಯ ವುಂಟಾಗಿ ಭಾಷೆಯ ಮತ್ತು ಶೈಲಿಯ ಬೆಳವಣಿಗೆಗೆ ಇದು ಅನುವಾಗುತ್ತದೆಂಬುದು ಸಮಾಧಾನದ ವಿಷಯ. ಪ್ರಸಕ್ತ ಕೃತಿಯಲ್ಲೂ ಇಂಥ ಕೆಲವಾರು ಶಬ್ದಸಮೂಹಗಳನ್ನು ನುಡಿಯ ಜಾಯಮಾನದೊಳಗೆ ಹೊಗಿಸಲಾಗಿದೆ. ಉದಾಹರಣೆಗೆ, ‘ಇಲಿ ಹೆಗ್ಗಣಗಳ ಪಿತೃಗಳು’ (ಪುಟ ೬), ‘ಭಾರತದ ಆಸೆಯಾದ ನಿಮ್ಮೊಡನೆ’ (ಪುಟ ೩೯) ಮೊದ ಲಾದುವು.

“ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ....ದೈವಸಂಪನ್ಮಾರ್ಗ ದರ್ಶಕಂ ಗಾಂಧಿಯಲ್ತೆ” ಎಂಬ ಕವಿವಾಣಿಯಂತೆ ಗಾಂಧೀಜಿಯವರ ದಿವ್ಯಚೇತನ ಭಾರತೀಯರ ಹೃನ್ಮನಗಳನ್ನು ಬೆಳಗುತ್ತಾ ದಾರಿದೀವಿಗೆಯಾಗಿದೆ. ‘ಭಾಷಣಗಳು ಮತ್ತು ಹೇಳಿಕೆಗಳು’ ಆ ದಿವ್ಯಜ್ಯೋತಿಯನ್ನು ನಮ್ಮಲ್ಲೂ ಬೆಳಗಿಸುವ ಸೊಡರುಗಳು. ಅವುಗಳ ಕಾಂತಿ ಮಸುಗದಂತೆ ಗೊರೂರರು ಅವುಗಳನ್ನು ಕನ್ನಡಿಸಿದ್ದಾರೆ.

ಗಾಂಧೀಜಿಯವರ ಬರೆಹಗಳು

‘ಸತ್ಯ-ಅಹಿಂಸೆ’

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಗಾಂಧೀ ಗ್ರಂಥಮಾಲೆಯ ಕನ್ನಡ ಪ್ರಕಟನೆಗಳಲ್ಲಿ ಸೇರಿರುವ ‘ಸತ್ಯ-ಅಹಿಂಸೆ’, ವ್ಯಕ್ತಿ ಮತ್ತು ರಾಷ್ಟ್ರಜೀವನಗಳಲ್ಲಿ ಆ ಅವಳಿ ತತ್ತ್ವಗಳ ಪಾತ್ರವೇನು, ಪ್ರಭಾವ ಎಂತಹುದು ಎಂಬುದನ್ನು ನಿರೂಪಿಸುವ ಒಂದು ಶ್ರೇಷ್ಠ ಸಂಕಲನ. ಈ ಸಂಕಲನ ಗಾಂಧೀಜಿಯವರು ಸ್ವತಃ ‘ಹರಿಜನ’, ‘ಯಂಗ್ ಇಂಡಿಯಾ’ ಮೊದಲಾದ ಪತ್ರಿಕೆಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ, ಬರೆದ ವೈಚಾರಿಕ ಲೇಖನಗಳ ಅನುವಾದ ಗ್ರಂಥವಾಗಿದೆ. ಈ ಅನುವಾದ ಕಾರ್ಯವನ್ನು ಕೈಕೊಂಡು ಯಶಸ್ವಿಯಾಗಿ ನಿರ್ವಹಿಸಿರುವ ಮಹನೀಯ ರಿಬ್ಬರೂ—ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಕೆ. ಸಂಪದ್ಗಿರಿರಾವ್—ಕನ್ನಡ ನಾಡಿನ ಗಣ್ಯ ವ್ಯಕ್ತಿಗಳ ಶ್ರೇಣಿಯಲ್ಲಿ ಸೇರಿರತಕ್ಕವರು; ಗಾಂಧೀಜಿಯವರ ಮಹನೀಯ ವ್ಯಕ್ತಿತ್ವವನ್ನು ಒಲಿದವರು, ಅವರ ಕಾರ್ಯಕ್ರಮಗಳ ಪಥವನ್ನು ಹಿಡಿದು ನಡೆದವರು. ಇಬ್ಬರೂ ಗಾಂಧೀನಿರ್ದೇಶನದ ಸ್ವಾತಂತ್ರ್ಯ ಚಳವಳಿಯ ಯೋಧರು, ‘ಸ್ವದೇಶಿ’ ವ್ರತ ದೀಕ್ಷಿತರು. ಭೋಗಸಂಪನ್ನ ಜೀವನವನ್ನು ತೊರೆದು, ಜನಸಾಮಾನ್ಯರ ಏಳಿಗೆಯನ್ನು ಕಣ್ಣಮುಂದಿಟ್ಟುಕೊಂಡು ಸೇವೆಗೆ ತಮ್ಮನ್ನು ಅರ್ಪಿಸಿಕೊಂಡವರು. ಕನ್ನಡ ನಾಡಿನ ಸಾಮಾಜಿಕ ಮತ್ತು ಸಾಹಿತ್ಯಿಕ ಜೀವನದಲ್ಲಿ ಇಬ್ಬರದೂ ಗಣ್ಯತೆ ಪಡೆದ ಹೆಸರುಗಳು.

ಪ್ರಸ್ತುತ, ‘ಸತ್ಯ-ಅಹಿಂಸೆ’ ಎಂಬ ಸಂಕಲನ ಗ್ರಂಥದಲ್ಲಿ, ಸಂಪದ್ಗಿರಿರಾಯರು ಮೊದಲ ಒಂಬತ್ತು ಅಧ್ಯಾಯಗಳನ್ನೂ ಗೊರೂರರು ನಾಲ್ಕು ಅಧ್ಯಾಯಗಳನ್ನೂ ಕನ್ನಡಿಸಿದ್ದಾರೆ ಎಂದು ‘ಪ್ರಕಾಶಕೀಯ’ ಸೂಚನೆಯಿಂದ ತಿಳಿಯುತ್ತದೆ. (ಪುಟ xxvi) ಗೊರೂರರ ೭೦ನೆಯ ಹುಟ್ಟುಹಬ್ಬದಂದು ಒಪ್ಪಿಸುತ್ತಿರುವ ಗೌರವಗ್ರಂಥಕ್ಕಾಗಿ ಬರೆ

ದಿರುವ ಈ ಸಾಮಯಿಕ ಲೇಖನದಲ್ಲಿ ಗೊರೂರರ ಅನುವಾದ ಭಾಗವನ್ನಷ್ಟೇ ವಿವೇಚನೆಗೆತ್ತಿಕೊಂಡಿದೆ. ಇಂಥ ಸಾಹಿತ್ಯೇತರ ರಚನೆಗಳಲ್ಲಿ ವಿವೇಚನೆಯ ವಿಧಾನ ಹೇಗಿರಬೇಕು ಎಂಬುದರ ನಿರ್ಣಯ ಕಷ್ಟ. ಏಕೆಂದರೆ, ಸತ್ಯ ಮತ್ತು ಅಹಿಂಸೆ ಎಂಬೆರಡು ತತ್ತ್ವಗಳ ವಿಚಾರದಲ್ಲಿ ಗಾಂಧೀಚಿಂತನೆಯೇ ಇಲ್ಲಿಯ ವಸ್ತು ; ತತ್ತ್ವನಿರೂಪಕ ತರ್ಕಬದ್ಧ ವಾಕ್ಯ ವಿನ್ಯಾಸವೇ ಇಲ್ಲಿಯ ಶೈಲಿ. ಇನ್ನು ಅನುವಾದದ ರೀತಿನೀತಿಗಳನ್ನು ಗಮನಿಸುವುದೆಂದರೆ, ಇಲ್ಲಿ ಅನುಸರಿಸಿರುವ ಮೂಲ ಕನ್ನಡ ಗಾಂಧೀ ಗ್ರಂಥಮಾಲೆಯ ಸಂಪಾದಕ ಮಂಡಲಿ ಸಂಕಲಿಸಿದ ಹಸ್ತಪ್ರತಿ. ಹೀಗಾಗಿ ಸ್ವೋಪಜ್ಞವಾದ ಕೆಲವು ಪ್ರತಿಫಲನಗಳನ್ನಷ್ಟೆ ಇಲ್ಲಿ ಕೊಡುವುದು ಶಕ್ಯ. ಇದಾದರೂ ಗಾಂಧೀ ಸಾಹಿತ್ಯದ ವ್ಯಾಪಕ ಅಭ್ಯಾಸದಿಂದ, ಗಾಂಧೀಮಾರ್ಗದ ಗಾಢ ಅನುಷ್ಠಾನದಿಂದ ಹರಿತಗೊಂಡದ್ದು ಅಲ್ಲ.

ಗೊರೂರರು ಗಾಂಧೀ ಸಾಹಿತ್ಯದ ಅನುವಾದ ಕಾರ್ಯಕ್ಕೆ ಆಯ್ಕೆಗೊಂಡಿರುವುದು ಬಹು ಉಚಿತವಾಗಿದೆ. ಗಾಂಧೀಜಿಯವರು ನೇತಾರರಾಗಿ ನಡಸಿದ ಸ್ವಾತಂತ್ರ್ಯ ಚಳವಳಿಯಲ್ಲಿ ಅವರು ನೇರವಾಗಿ ಭಾಗವಹಿಸಿದವರು; ಹೋರಾಟದ ಕಷ್ಟನಷ್ಟಗಳನ್ನು ಅನುಭವಿಸಿ ಮನಸ್ಸು ಹದಗೊಂಡವರು ; ಗಾಂಧೀ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದವರು ; ಗಾಂಧೀತತ್ತ್ವಗಳಲ್ಲಿ ನಂಬಿಕೆಯಿಟ್ಟು ನಡೆಯುತ್ತಿರುವವರು. ಬದುಕು ಸರಳವಾಗಿ ಚಿಂತನೆ ಸಂಪನ್ನವಾಗಿರಬೇಕು ಎಂಬ ಸೂಕ್ತಿಗೆ ಸಾಕ್ಷ್ಯವಾಗಿ ಎನ್ನುವಂತೆ, ಗಾಂಧೀಜಿಯವರಿಗೆ ಬಹು ಇಷ್ಟವಾಗಿದ್ದ ಗ್ರಾಮಜೀವನವಾಸ, ಆಶ್ರೀಮಂತ ಸರಳಜೀವನ, 'ಸ್ವದೇಶಿ' ವ್ರತಾನುಷ್ಠಾನ, ಪ್ರಸನ್ನಮನಸ್ಕತೆ–ಇಂಥ ಗುಣಗಳನ್ನು ಮೈಗೂಡಿಸಿಕೊಂಡು ಬರುತ್ತಿರುವವರು. ಇಂಥ ಆಚರಣೆಯನ್ನು ಬೆಳೆಸಿಕೊಂಡವರು ಎಂಬ ಕಾರಣದಿಂದಲೇ ಅವರು ಕನ್ನಡ ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿ ಸರ್ಕಾರದಿಂದ ಆಯ್ಕೆಗೊಂಡರು ಎಂಬುದನ್ನಿಲ್ಲಿ ನೆನೆಯಬಹುದು. ಹೀಗಿರುವಲ್ಲಿ, ಅವರು ಸಂತೋಷದಿಂದ ನಿರ್ವಹಿಸಿರುವ ಈ ಅನುವಾದಕಾರ್ಯ ಸಫಲವಾಗಿರುವುದರಲ್ಲಿ ಸಂದೇಹವಿಲ್ಲ.

ಗಾಂಧೀಜಿಯವರು, ಭಾರತೀಯ ಸಂಸ್ಕೃತಿಯ ಉತ್ತಮಾಂಶಗಳನ್ನು ಅಭ್ಯಾಸದಿಂದಲೂ ಅನುಷ್ಠಾನದಿಂದಲೂ ರೂಢಿಸಿಕೊಂಡ ಪುಣ್ಯಪುರುಷರು. ಆ ಉತ್ತಮಾಂಶಗಳಲ್ಲಿ ಸತ್ಯ ಮತ್ತು ಅಹಿಂಸೆ–ಈ ಎರಡು ತತ್ತ್ವಗಳು ಸರ್ವಶ್ರೇಷ್ಠವೂ ಸರ್ವವ್ಯಾಪಕವೂ ಆದವೆಂಬುದನ್ನು ಅವರು ಕಠಿನ ತಪಶ್ಚರ್ಯೆಯಂಥ ತಮ್ಮ ಸಾಧನೆಯಿಂದ ಮನಗಂಡದ್ದು, ಭಾರತದ ಉದ್ಧಾರಕ್ಕೆ ನೆಟ್ಟ ಬ್ರಹ್ಮದಂಡವಾಯಿತು. ಇವೇನೂ ಹೊಸ ವಿಷಯಗಳಲ್ಲ, ತಾವೇನೂ ಪ್ರವಾದಿಯಲ್ಲ—ಎಂದು ಅವರು ಸ್ಪಷ್ಟವಾಗಿ ಸಾರಿದರೂ, ರಾಷ್ಟ್ರಜೀವನದ ಜಾಗೃತಿಗೆ ಅವನ್ನು ಅಸ್ತ್ರಗಳಾಗಿ ಬಳಸಿದ ಅವರ ತಂತ್ರವಿಶೇಷ ದಿಟವಾಗಿ ಹೊಸತೇ ಆಗಿತ್ತು ; ಅವರಿಗೆ ರಾಷ್ಟ್ರಪಿತಪದವೂ ಕಾದಿತ್ತು.

ಸತ್ಯಸಂಧತೆ, ಅಹಿಂಸಾಮಾರ್ಗ ಎಂಬೆರಡು ತತ್ತ್ವಗಳು ವೈಯಕ್ತಿಕ ಹಾಗೂ ರಾಷ್ಟ್ರಜೀವನವನ್ನು ಶುದ್ಧಪಡಿಸುವ ಹಾಗೂ ಮೇಲೆತ್ತುವ ಮಹಾಶಕ್ತಿಗಳು ಎಂಬುದು ಗಾಂಧೀಜಿಯವರು ತಳೆದ ದೃಢವಿಶ್ವಾಸವಾಗಿತ್ತು. ಈ ವಿಶ್ವಾಸವನ್ನು ಅವರು ಹೊರೆಹೊರೆ

ಸಿದ್ಧಾಂತ ಗ್ರಂಥಗಳ ಓದಾಣಿಕೆಯಿಂದ ಪಡೆಯಲಿಲ್ಲ; ಯಾವುದೋ ಗುರುವಿನಿಂದ ಉಪದೇಶ ಪಡೆದು ಪಡೆಯಲಿಲ್ಲ: ಸ್ವಂತ ಸಾಧನೆಯಿಂದ ಗಟ್ಟಿಯಾದ್ದು ಆ ನಂಬುಗೆ. ಬುದ್ಧ ಮಹಾವೀರರು, ಗೀತೆ ಉಪನಿಷತ್ತುಗಳು ಅವರ ಮೇಲೆ ಪ್ರಭಾವ ಬೀರಲಿಲ್ಲ ಎಂದು ಇದರ ಅರ್ಥವಲ್ಲ. ಖಂಡಿತವಾಗಿ ಅವರು ಅವುಗಳಿಂದ ಪ್ರಯೋಜನ ಪಡೆದಿದ್ದಾರೆ. ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. 'ಪರ್ವತಗಳಷ್ಟೇ ಪ್ರಾಚೀನ' ಸತ್ಯಗಳನ್ನು ಐದಾರು ದಶಕಗಳ ಕಾಲದ ಚಿಂತನಮಂಥನಗಳಿಂದ ಸ್ವಸಂವೇದ್ಯ ಮಾಡಿಕೊಂಡ. ವ್ಯಾವಹಾರಿಕ ಜಗತ್ತಿನ ಒರೆಗಲ್ಲಿಗೆ ಉಜ್ಜಿ ಉಜ್ಜಿ ಅವುಗಳ ಬೆಲೆಯನ್ನು ಕಂಡುಕೊಂಡ ಮಹಾಪುರುಷರು ಅವರು. ತಮ್ಮ ಬದುಕು, ತಮ್ಮ ನಾಡಿನ ಬದುಕು ಉತ್ತಮವಾಗಬೇಕಾದರೆ, ಅದು ಋಜುಸ್ವಭಾವ ಎಂಬ 'ಸತ್ಯ', ರಾಗದ್ವೇಷವಿರಹಿತ ವರ್ತನೆಯೆಂಬ 'ಅಹಿಂಸೆ' ಈ ರೆಕ್ಕೆಗಳ ಬಲವನ್ನು ಅವಲಂಬಿಸಬೇಕಾಗುತ್ತದೆ—ಎನ್ನುವುದು ಅವರ ದೃಷ್ಟಿ. ಇದಕ್ಕಾಗಿ ಅವರು ತಮ್ಮನ್ನೇ ಅನೇಕ ಬಗೆಯ ಪ್ರಯೋಗ ಪರೀಕ್ಷೆಗಳಿಗೆ ಗುರಿ ಮಾಡಿಕೊಂಡರು, ದೇಹವನ್ನೂ ಮನಸ್ಸನ್ನೂ ಸಂತೋಷದಿಂದ ದಂಡಿಸಿದರು. ದುಡಿಸಿದರು.

"ಸತ್ಯ ನನಗೆ ಸ್ವಾಭಾವಿಕವಾಗಿ ಬಂದಿತು, ಅಹಿಂಸೆಯನ್ನು ಹೋರಾಟದಿಂದ ಗಳಿಸಿಕೊಂಡೆ" (ಪುಟ ೪೭೫)—ಎಂದು ಅವರೇ ಹೇಳಿರುವ ಮಾತಿನಲ್ಲಿ ಆ ಕ್ರಮವನ್ನು ನಾವು ಕಾಣಬಹುದು. ಸುಳ್ಳು ಹೇಳದಿರುವುದು ಸತ್ಯ, ಹಿಂಸೆ ಮಾಡದಿರುವುದು ಅಹಿಂಸೆ—ಎನ್ನುವ ಸುಲಭ ಶಬ್ದಗಳಾಗಿ ಗೋಚರಿಸುವ ಈ ಶಬ್ದಗಳು, ವೈಯಕ್ತಿಕ ಹಾಗೂ ರಾಷ್ಟ್ರಜೀವನಗಳಿಗೆ ಅನ್ವಯವಾಗುವ ಸಂದರ್ಭ ಬಂದಲ್ಲಿ, ಅಷ್ಟೇ ಅರ್ಥವ್ಯಾಪ್ತಿಯಲ್ಲಿ ಪ್ರಾಯಶಃ ನಿಲ್ಲಲಾರವು. ಅವು ಬಗೆಬಗೆಯ ಧರ್ಮಜಿಜ್ಞಾಸೆಗಳಿಗೆ ಅಥವಾ ಧರ್ಮಸೂಕ್ಷ್ಮಗಳಿಗೆ ಎಡೆಗೊಡುತ್ತವೆ ಎನ್ನುವುದು ಗ್ರಂಥದ ಪ್ರಕರಣಗಳನ್ನು ಹಾದುಹೋಗುವಾಗ ನಮಗೆ ಮನವರಿಕೆಯಾಗುತ್ತದೆ. ಈ ಅವಳಿ ತತ್ತ್ವಗಳ ತಾತ್ತ್ವಿಕ ಮಹತ್ತ್ವವನ್ನು ಒಪ್ಪಿದ ಹಾಗೂ ಗಾಂಧೀಜಿಯವರ ಹಿರಿಯ ವ್ಯಕ್ತಿತ್ವಕ್ಕೆ ಮಣಿದ ಹಲವರು, ದೇಶವಿದೇಶದವರು, ವ್ಯಾವಹಾರಿಕ ಜಗತ್ತಿನ ತತ್ಕಾಲೀನ ವಿಷಮ ಪ್ರಸಂಗಗಳಲ್ಲಿ ಆ ತತ್ತ್ವಗಳನ್ನು ಯಶಸ್ವಿಯಾಗಿ ಹೇಗೆ ಬಳಸುವುದು—ಎನ್ನುವುದು ತೋರದೆ, ಮಾರ್ಗದರ್ಶನಕ್ಕೆ ಗಾಂಧೀಜಿಯವರತ್ತ ನೋಡಿರುವುದುಂಟು. ನಡೆನುಡಿಗಳೊಂದಾದ, ನೇರ ಬದುಕಿನ ಘನತೆಗೆ ಹೆಸರಿತ್ತಿದ ಗಾಂಧೀಜಿಯವರಲ್ಲಿ ಅವರಿಗೆ ಭರವಸೆಯಿದ್ದುದು ಸಹಜವೇ. ಇವರಾದರೂ ಯಾವ ಪೂರ್ವಗ್ರಹಪೀಡೆಯೂ ಇಲ್ಲದೆ, ತಾವು ಅಚಲ ನಿಷ್ಠೆಯಿಂದ ನಂಬಿಕೊಂಡಿದ್ದ ಸತ್ಯ-ಅಹಿಂಸೆಗಳ ಸಿದ್ಧಾಂತಗಳನ್ನೇ ಅನುಪಾನವಾಗಿ ಸೂಚಿಸುತ್ತ ಇದ್ದರು. ಅವನ್ನು ಯಾವಾಗ, ಹೇಗೆ ಬಳಸಬೇಕೆಂಬ ವಿಧಿವಿಧಾನಗಳನ್ನು ತಿಳಿಸುತ್ತಿದ್ದರು. ಸಮಸ್ಯೆಗಳನ್ನು ಪರಿಶೀಲಿಸುವಾಗ, ಅವಕ್ಕೆ ಪರಿಹಾರಗಳನ್ನು ಸೂಚಿಸುವಾಗ, ಅವರು ತಮ್ಮ ಸ್ಫಟಿಕ ಶುದ್ಧ ನಿರ್ಮಲಾಂತಃಕರಣದಲ್ಲಿ ಪ್ರತಿಫಲನಗೊಳ್ಳುತ್ತಿದ್ದ 'ಸತ್ಯ'ದ ಪ್ರೇರಣೆಯನ್ನೋ 'ಮೌನವಾದ ಅಂತರ್ವಾಣಿ'ಯ ಅಪ್ಪಣೆಯನ್ನೋ ಮುಖ್ಯವಾಗಿ ಆಶ್ರಯಿ

ಸುತ್ತಿದ್ದರು. ತಮ್ಮ ಸಾಧನೆಯ ಕಷ್ಟಸುಖಗಳನ್ನು ಇತರರೊಡನೆ ಮುಕ್ತಮನಸ್ಸಿನಿಂದ ಹಂಚಿಕೊಳ್ಳುತ್ತಿದ್ದರು. ಎಂದೂ ತಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೇರುತ್ತಿರಲಿಲ್ಲ; ಇತರರ ನಂಬುಗೆ ಸಿದ್ಧಾಂತಗಳನ್ನು ಹಾಳುಗೆಡಹಿ ತಮ್ಮದನ್ನು ಸ್ಥಾಪಿಸುವ ಛಲ ತೋರುತ್ತಿರಲಿಲ್ಲ. ಆದರೆ ತಾವೊಪ್ಪಿದ ಮಾರ್ಗದಲ್ಲಿ ತಾವೊಬ್ಬರೇ ಒಬ್ಬರಾಗಿ ನಡೆಯುವ ಸಮಯ ಬಂದಾಗ ಖಂಡಿತ ಛಲವಾದಿಯಾಗಿಯೇ ಎಲ್ಲವನ್ನೂ ಎದುರಿಸಿ ನಿಲ್ಲುತ್ತಿದ್ದರು. ಸತ್ಯ-ಅಹಿಂಸೆಗಳಲ್ಲಿ ಅವರಿಗಿದ್ದ ಅನನ್ಯ ಶ್ರದ್ಧೆ, ಅವುಗಳ ಶಕ್ತಿ ಪ್ರಯೋಜನಗಳಲ್ಲಿ ಅವರಿಗಿದ್ದ ಅಸೀಮ ವಿಶ್ವಾಸ ಇವೇ ಆ ದಾರ್ಢ್ಯದ ಮೂಲ.

ಹಾಗಾದರೆ ಈ ಶಕ್ತಿಗಳ ಸ್ವರೂಪವೇನು? ಪ್ರಸ್ತುತ, ಅಹಿಂಸೆಯ ವಿಷಯ ನೋಡೋಣ:

'ಅಹಿಂಸೆ' ಎಂದರೆ ಹಿಂಸೆಮಾಡದಿರುವುದು. ಕಾಯಿಕ ಹಿಂಸೆಯೇ ಹಿಂಸೆಯಲ್ಲ, ವಾಚಿಕ ಮಾನಸಿಕ ಹಿಂಸೆಯೂ ಹಿಂಸೆಯೇ. ಎಂದರೆ ಇನ್ನೊಬ್ಬರ ದೇಹಕ್ಕೆ ಬಾಧೆಯಾಗುವಂತೆ ಪೆಟ್ಟುಕೊಡುವುದು, ಕೊಲ್ಲುವುದು ಕಾಯಿಕ ಹಿಂಸೆ. ಇನ್ನೊಬ್ಬರ ಮನಸ್ಸು ನೋಯುವಂತೆ, ಅವರಿಗೆ ಮುಖಭಂಗವಾಗುವಂತೆ ಮಾತನಾಡುವುದು ಹಾಗೂ ಅಂಥ ಕೃತ್ಯಗಳನ್ನು ನೆನೆಯುವುದು ವಾಚಿಕ ಮತ್ತು ಮಾನಸಿಕ ಹಿಂಸೆ. ಈ ಹಿಂಸೆಯ ಭಾವನೆ ವ್ಯಕ್ತಿಯಲ್ಲಿ ಏಕೆ ಹುಟ್ಟುತ್ತದೆ? ಪ್ರೀತಿಯಿಂದ ಪ್ರೀತಿ ಹುಟ್ಟುವಂತೆ ಹಿಂಸೆಯಿಂದ ಹಿಂಸೆ ಹುಟ್ಟುತ್ತದೆ ಎಂದು ಸುಲಭವಾಗಿ ಹೇಳಬಹುದು. ಇಬ್ಬರ ವ್ಯವಹಾರದಲ್ಲಿ, ಸಮಾನವಾದ ಭಾವನೆ ಆಚರಣೆಗಳಿರುತ್ತಿದ್ದರೆ, ವ್ಯವಹಾರ ಸುಮುಖವಾಗಿರುತ್ತದೆ; ಅಲ್ಲಿ ಸ್ನೇಹವಿರುತ್ತದೆ. ಇದಕ್ಕೆ ವಿರುದ್ಧವಾದ ಪರಿಸ್ಥಿತಿ ಒದಗಿದರೆ ಪರಸ್ಪರರಲ್ಲಿ ಅಸಹಕಾರ ತಲೆದೋರಿ, ಅದು ವಿರಸ ವೈಮನಸ್ಯಗಳಿಗೆ ರೋಷದ್ವೇಷಗಳಿಗೆ ಎಡೆ ಮಾಡುತ್ತದೆ. ಆಗ ವ್ಯವಹಾರ ವಿಮುಖವಾಗುತ್ತದೆ; ಅಲ್ಲಿ ಹಿಂಸೆ ಮೊಳೆಯುತ್ತದೆ. ಈ ಭಾವನೆ ಹುಟ್ಟಿತೆಂದರೆ ವ್ಯಕ್ತಿಯ ತಿಳಿಯಾದ ಮನಸ್ಸು ಕದಡಿ ಘಾತಕ ಪ್ರವೃತ್ತಿ ಜಾಗ್ರತವಾಗುತ್ತದೆ. ಈ ಪ್ರವೃತ್ತಿಗೆ ಪಾತ್ರನಾದ ವ್ಯಕ್ತಿ ಪ್ರಬಲನಾಗಿದ್ದರೆ ಆತನಿಗೆ ಇಷ್ಟನಾಗದ ವ್ಯಕ್ತಿ ಘಾತಿಸಲ್ಪಡುತ್ತಾನೆ; ದುರ್ಬಲನಾಗಿದ್ದರೆ, ಎದುರುನಿಂತ ವ್ಯಕ್ತಿಯೇ ಆತನನ್ನು ಘಾತಿಸುತ್ತಾನೆ. ನೀಚವಾದ ಭಾವನೆಗಳು ಮನುಷ್ಯ ಪ್ರಾಣಿಗೆ ಸಹಜ ವಾಸನೆಗಳಾದ್ದರಿಂದ ಬಹು ಬೇಗ ಘಾತಕ ಪ್ರವೃತ್ತಿ ಉದ್ರಿಕ್ತಗೊಂಡು, ಅದಕ್ಕೆ ಗುರಿಯಾದವರು ತ್ರಿವಿಧ ಹಿಂಸೆಯಲ್ಲಿ ಯಾವುದಾದರೊಂದರ ಪೀಡೆಗೆ ಸಿಕ್ಕುತ್ತಾರೆ. ಈ ಹಿಂಸೆ ಮತ್ಸರದಿಂದ ಹಿಡಿದು ಮಹಾಯುದ್ಧದವರೆಗೆ ವಿವಿಧ ಆಯಾಮಗಳಲ್ಲಿ ತನ್ನ ಕೋರೆದಾಡೆಗಳನ್ನು ವಿಕಟವಾಗಿ ತೆರೆಯಲು ಸಮರ್ಥವಾಗಿದೆ. ಹಾವಾಗಿ ಹೆದರಿಸಿದ್ದು ಹೂವಾಗಿ ಮುಡಿಯುವಂತಾಗುವುದು ಹೇಗೆ?

ಗಾಂಧೀಜಿಯವರ ಎದುರು ನಿಂತ ಯಕ್ಷ ಪ್ರಶ್ನೆ ಇದು. ಹಿಂಸೆಯನ್ನು ಎದುರಿಸಬೇಕು, ಹೆದರಿಸಬೇಕು; ಹೇಗೆ? ಇದಕ್ಕೆ ಎರಡು ಮಾರ್ಗಗಳುಂಟು: ಒಂದು, ಶರಣಾಗತಿ; ಇನ್ನೊಂದು, ಪ್ರತಿಹಿಂಸಾಪ್ರಯೋಗ. ದುರ್ಬಲನು ಮೊದಲನೆಯ ದಾರಿ ಹಿಡಿಯು

ತ್ರಾಸ. ಹಿಂಸೆಗೆ ತೊಡಗದ ಈತ 'ಅಹಿಂಸಕ' ಎನ್ನಿಸಲಾರ. ಪ್ರತಿಕಕ್ಷಿಯನ್ನು ಎದುರಿಸಲು ಕೈಯಲ್ಲಾಗದೆ ರೋಷದ್ವೇಷಗಳನ್ನು ಹೊಟ್ಟೆಯಲ್ಲೇ ಅಡಗಿಸಿಟ್ಟುಕೊಂಡು ದಾಸ್ಯವನ್ನೋ ಸ್ನೇಹವನ್ನೋ ಮುಂದೊಡ್ಡುವವನು ಈತ. ಈತ ಹೇಡಿ, ಆತ್ಮಬಲವಿಲ್ಲದವನು. ಅವಕಾಶ ಸಿಕ್ಕಾಗ ಹಿಂಸೆಗೆ ತೊಡಗುವವನು. ಆದ್ದರಿಂದ ಇವನ ಅಹಿಂಸೆ ಅಶಕ್ತರ ಅಹಿಂಸೆ, ದುರ್ಬಲರ ಸಹಿಷ್ಣುತೆ. ಇದು ಅವಮಾನಕರ, ಆತ್ಮನಾಶಕರ. ಎರಡನೆಯದು ಪ್ರತಿಹಿಂಸಾಪ್ರಯೋಗಮಾರ್ಗ. ಇದು ಯಾವಾಗಲೂ ಬಲಿಷ್ಠರ ನಡುವಣ ಹೋರಾಟ. ಅನಿವಾರ್ಯವಾಗಿ ಮತ್ಸ್ಯನ್ಯಾಯ ಇಲ್ಲಿ ಪ್ರವರ್ತಿಸುತ್ತದೆ. ಅವಿರಾಮವಾಗಿ ಕ್ಲೇಶಪರಂಪರೆಯನ್ನು ಉಭಯಪಕ್ಷಗಳೂ ಇಲ್ಲಿ ಎದುರಿಸುತ್ತವೆ. ಹೊತ್ತಿದ ಬೆಂಕಿ ಒಮ್ಮೆ ತೆಕ್ಕೆಗೆ ಬಂದ ಎಲ್ಲವನ್ನೂ ಸುಟ್ಟು ಕರಿಕುಮಾಡುತ್ತದೆ, ಇನ್ನೊಮ್ಮೆ ಒಳಗೇ ಹೊಗೆಯಾಡುತ್ತದೆ. ಹಲ್ಲಿಗೆ ಹಲ್ಲು, ನೆತ್ತರಿಗೆ ನೆತ್ತರು, ಮುಯ್ಯಿಗೆ ಮುಯ್ಯಿ—ವ್ಯಕ್ತಿಯನ್ನೂ ಮಾನವಸಂತಾನವನ್ನೂ ಬಿಡದೆ ಕಾಡುವ ಶಾಪವಾಗಿರುವ ಪ್ರತಿಜ್ಞಾ ವಾಕ್ಯಗಳು. "ಜಗತ್ತಿನ ನಿರ್ಬಲ ರಾಷ್ಟ್ರಗಳನ್ನು (ಹಾಗೆನ್ನಿಸಿಕೊಳ್ಳುವವರನ್ನು) ಲೂಟಿಮಾಡುವ ಅಮಾನುಷ ಸ್ಪರ್ಧೆಯೇ ಇಂದಿನ ಯುದ್ಧಗಳಿಗೆ ಮುಖ್ಯ ಕಾರಣವಲ್ಲವೇ ?" (ಪುಟ ೪೩೭)—ಎಂಬ ಗಾಂಧೀಜಿಯವರ ಸೂಕ್ತಿಯೊಂದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಹಾಗಾದರೆ ಹಿಂಸೆಯನ್ನೆದುರಿಸುವ ಬೇರೆ ಮಾರ್ಗವಿದೆಯೇ ? ಅಹಿಂಸೆಯೆಂಬ ತಾರಕಮಂತ್ರವೇ ಅದು ಎಂದರು ಗಾಂಧೀಜಿ. ಇದರ ಸ್ವರೂಪವೇನು ? ಹಿಂಸೆಯನ್ನು ಹಿಂಸೆಯಿಂದ ದಮನಮಾಡುವ ಶಕ್ತಿಯಿದ್ದೂ ಹಾಗೆ ಮಾಡದೆ ಸಬಲರ ಅಹಿಂಸೆಯಿಂದ ಎದುರಿಸಬೇಕು. ಎಂಥ ವಿಷಮ ಸಂದರ್ಭ ಬಂದಾಗಲೂ ವ್ಯಕ್ತಿಯಾಗಲಿ ರಾಷ್ಟ್ರವಾಗಲಿ ಹಿಂಸಕನನ್ನು ನಿಷ್ಕಲಂಕ ಪ್ರೇಮ ಮೂಲವಾದ ಸದ್ಭಾವನೆಯಿಂದ ಒಲಿಸಿಕೊಳ್ಳುವುದೇ. ಅವನ ವಿಕೃತವಾದ ಮನಸ್ಸು ಕೂಡ ಪರಿವರ್ತನೆಗೊಂಡು ಕರಗುವ ಹಾಗೆ ಕೊರಗುವ ಹಾಗೆ ಮಾಡಲು ಪ್ರಯತ್ನಿಸುವುದೇ ಆ ಬಗೆಯ ಅಹಿಂಸೆಯ ಲಕ್ಷಣ. ಇದನ್ನು ಪ್ರಯೋಗಿಸುವಲ್ಲಿ ಪ್ರಾಣವನ್ನೇ ಪಣವಾಗಿಡಬೇಕಾಗಬಹುದು, ಕ್ರೋಧಕಷಾಯವನ್ನು ಪೂರ್ತಿಯಾಗಿ ನುಂಗಿಕೊಂಡು ಮರಣಮುಖದಲ್ಲಿಯೂ ಯೇಸುವಿನ ಹಾಗೆ ಅಕ್ಷುಬ್ಧ ಪ್ರಸನ್ನ ಕಾಂತಿಯನ್ನು ತೋರಬೇಕಾಗಬಹುದು. "ಅಹಿಂಸೆಯ ಭಕ್ತ ಭಯದಿಂದ ಬಿಡುಗಡೆಹೊಂದಲು, ಅತ್ಯುನ್ನತ ತ್ಯಾಗದ ಶಕ್ತಿಯನ್ನು ಬೆಳಸಿಕೊಳ್ಳಬೇಕಾದರೆ ತನ್ನ ಭೂಮಿ ತನ್ನ ಐಶ್ವರ್ಯ ತನ್ನ ಪ್ರಾಣ–ಇವನ್ನು ಕಳೆದುಕೊಳ್ಳುವುದೂ ಅವನಿಗೆ ಲೆಕ್ಕವಿಲ್ಲ. ಎಲ್ಲ ಭಯವನ್ನೂ ಜಯಿಸದೆ ಇರುವವನು ಅಹಿಂಸೆಯನ್ನು ಪೂರ್ಣವಾಗಿ ಆಚರಿಸಲಾರ." (ಪುಟ ೪೦೯) ಇದು ಗಾಂಧೀವಾಣಿ. ಇಂಥ ನಡವಳಿಕೆಗೆ ಉನ್ನತ ಮಟ್ಟದ ಆತ್ಮಶಕ್ತಿ, ನೈತಿಕ ಧೈರ್ಯ ಬೇಕು. ಆದರೆ ಇದು ಸಾಧ್ಯವೇ ?—ಎಂಬುದು ಪ್ರಶ್ನೆ. ಈ ಬಗ್ಗೆ ಗಾಂಧೀಜಿಯವರೊಡನೆ ವಿಚಾರವಿನಿಮಯಮಾಡಿದ ಸಕಲರನ್ನೂ ಈ ಜಟಿಲವಾದ ಪ್ರಶ್ನೆ ಕಾಡಿದೆ. ಅಹಿಂಸೆಯ ಶಕ್ತಿ–ಪ್ರಯೋಜನಗಳಲ್ಲಿ ಅದಮ್ಯವೂ

ಪೂರ್ಣವೂ ಆದ ನಂಬುಗೆಯುಳ್ಳ ಸಾಧಕರಿಗೆ ಖಂಡಿತವಾಗಿ ಅದು ಸಾಧ್ಯ. ಈ ನಂಬುಗೆ ಹುಟ್ಟುವಂತೆ ಜನರಿಗೆ ಶಿಕ್ಷಣ ಕೊಡಬೇಕು. ಅಹಿಂಸಾಯೋಧರನ್ನು ನಾವು ತಯಾರಿಸಬೇಕು. ಇಲ್ಲಿ ಇಂಥವರ ಸಂಖ್ಯಾಬಲ ಮುಖ್ಯವಲ್ಲ, ಅಲ್ಪವಾದ ಆದರೆ ಸಬಲವಾದ ಅಹಿಂಸಾಬಲ ಮಹತ್ತಾದ ಹಾಗೂ ಪ್ರಬಲವಾದ ಹಿಂಸೆಯ ಬಲವನ್ನು ಹುಟ್ಟಡಗಿಸುವುದು ಸಾಧ್ಯ. ಭಾರತದ ಬಿಡುಗಡೆಗೆ ನಡಸಿದ ಅಹಿಂಸಾ ಪ್ರಯೋಗ ಗಳಿಸಿದ ಯಶಸ್ಸು ಜಾಗತಿಕ ರಂಗದ ಎಲ್ಲ ಕ್ಷೇತ್ರಗಳಿಗೂ ಯಶಸ್ಸು ದೊರಕಿಸಿಕೊಡ ಬಲ್ಲುದು—ಇದು ಗಾಂಧೀಜಿಯವರ ಆಶ್ವಾಸನೆ.

ಅಹಿಂಸೆ ಜೀವನಧರ್ಮ ಎಂಬುದು ಗಾಂಧೀಜಿಯವರು ತಮ್ಮ ಸತತ ಸಾಧನೆಯಿಂದ ಮನಗಂಡ ಸತ್ಯ. ಆ ಬಳಿಕವೇ ಅವರು ಜಗತ್ತಿಗೆ ಅದನ್ನು ಸಾರಿದ್ದು. ಪ್ರೇಮ, ವಿನಯ, ಅನಸೂಯತೆ, ಅಕ್ರೋಧ, ರಾಗದ್ವೇಷವಿರಹಿತತೆ, ಸರ್ವಸಮಭಾವ, ಪ್ರಾರ್ಥನೆ, ಚರಖದಲ್ಲಿ ನೂಲುವುದು—ಇವು ಅಹಿಂಸೆಯ ಉಪಕರಣಗಳು, ವ್ಯಕ್ತಿಯ ಶೀಲವನ್ನು ಅಹಿಂಸೆಯೊಡನೆ ಬೆಸೆಯತಕ್ಕ ಗುಣಗಳು. ಹೀಗೆ ಗಟ್ಟಿಗೊಂಡ ಅಹಿಂಸೆ ದ್ವೇಷ, ಗರ್ವ, ಮಾತ್ಸರ್ಯ ಮುಂತಾದ ವಿರುದ್ಧ ಪ್ರಕೃತಿಗಳನ್ನು ಪೂರ್ತಿಯಾಗಿ ತೊಡೆದುಬಿಡುತ್ತದೆ. ಹಿಂಸಕನು ಹಿಂಸೆಯನ್ನು ಗಾಢವಾಗಿ ಒಲಿಯುವಂತೆ, ಅಹಿಂಸಕನು ಅಹಿಂಸೆಯನ್ನು ಒಲಿಯುವುದಾದರೆ ಅದರಲ್ಲಿ ಸಜೀವ ನಂಬುಗೆಯನ್ನು ತಳೆಯುವು ದಾದರೆ, ವಿಕೃತಿಯಾದ ಹಿಂಸೆ ನೆಲೆಗೆಟ್ಟು ಪ್ರಕೃತಿಯಾದ ಅಹಿಂಸೆ ನೆಲೆಗೊಂಡು ವ್ಯಕ್ತಿ ಮತ್ತು ರಾಷ್ಟ್ರಜೀವನದ ಕಲ್ಯಾಣ ಸಾಧ್ಯವಾಗುತ್ತದೆ. "ನಾವು ಅಹಿಂಸೆಯಲ್ಲಿಯೇ ಬಾಳಬೇಕು, ಅಹಿಂಸೆಯಲ್ಲಿಯೇ ಚಲಿಸಬೇಕು, ಅಹಿಂಸೆಯಲ್ಲಿಯೇ ಇರಬೇಕು." (ಪುಟ ೩೬೪) ಸಂಸಾರದ ಪಾಠಶಾಲೆಯಲ್ಲಿ ಕಲಿತ ಅಹಿಂಸೆಯ ಪಾಠ ಸಾರ್ವಜನಿಕ ಜೀವನದಲ್ಲಿ ಪ್ರಯೋಜನಕ್ಕೆ ಬರುತ್ತದೆ. "ಈ ಅಣುಬಾಂಬಿನ ಯುಗದಲ್ಲಿ ಕೂಡ ಹಿಂಸೆಯ ಎಲ್ಲ ಒಟ್ಟುಗೂಡಿದ ತಂತ್ರವನ್ನೂ ಚಕಿತಗೊಳಿಸುವ ಶಕ್ತಿ—ಶುದ್ಧವಾದ ಅಹಿಂಸೆಯೊಂದೇ." (ಪುಟ ೪೬೧) ಇದು ಗಾಂಧೀವಾದದ ಶ್ರುತಿ.

ಇವೆಲ್ಲ ಪ್ರಯೋಗ ಸಾಧ್ಯವೆ? ವ್ಯಾವಹಾರಿಕ ಜಗತ್ತಿನಲ್ಲಿ ಇದು ಗುರಿ ತಪ್ಪದೆ ಫಲಕಾರಿಯಾಗಬಹುದೆ?—ಎಂಬ ಪ್ರಶ್ನೆಗಳನ್ನು ಗಾಂಧೀಜಿಯವರ ಮನಸ್ಸನ್ನು ತಿಳಿದಿರು ವವರು ಕೂಡ ಕೇಳಿರುವುದುಂಟು. ಗಾಂಧೀಜಿಯವರು ಇಂತಹ ಪ್ರಶ್ನೆಗಳಿಗೆ ಆಗಾಗ ಉತ್ತರ ಕೊಟ್ಟಿದ್ದಾರೆ: ತಮಗೆ ಅಹಿಂಸೆಯ ಶಕ್ತಿ-ಪ್ರಯೋಜನಗಳಲ್ಲಿ, ಅದು ಜಗತ್ತಿನ ಮೇಲೆ ಬೀರುವ ಸಾತ್ತ್ವಿಕ ಪ್ರಭಾವದಲ್ಲಿ ಪರಿಪೂರ್ಣ ವಿಶ್ವಾಸವುಂಟು. ಎಲ್ಲರೂ ಸಂದೇಹವಾದಿಗಳಾಗಿ ಹಿಂದೆ ನಿಂತರೂ ತಾವೊಬ್ಬರೇ ಆ ಪಥದಲ್ಲಿ ಮುನ್ನಡೆಯಲು ಸಿದ್ಧ. ಕೆಲವೊಮ್ಮೆ ಅಹಿಂಸೆಯ ಪ್ರಯೋಗದಲ್ಲಿ, ಅದರ ಮಹತ್ತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡುವುದರಲ್ಲಿ ತಾವು ಸೋತಿರಬಹುದು, ಪ್ರಯತ್ನಗಳಲ್ಲಿ ದೋಷ ವಿರಬಹುದು. ಆದರೆ ಅದು ಆ ತತ್ತ್ವದ ತಪ್ಪಲ್ಲ, ತಮ್ಮ ದೌರ್ಬಲ್ಯದ ತಪ್ಪಿರ ಬಹುದು. ಭರತಖಂಡ ಅಹಿಂಸಾಮಾರ್ಗದಲ್ಲಿ ಬಿಡುಗಡೆ ಪಡೆಯುತ್ತಿರುವುದೇ ಆ

ತತ್ತ್ವದ ಉನ್ನತಿಗೆ ಸಾಕ್ಷ್ಯವಾಗಿದೆ. ಅದೇ ಭಾವೀ ಸ್ವತಂತ್ರ ಭಾರತದ ತಾರಕ ಶಕ್ತಿಯಾಗಿದೆ—ಇದು ಅವರ ನಿಲುವು.

ಈಚಿನ ದಶಕಗಳಲ್ಲಿ ಭಾರತದ ಒಲವು ನಿಲವುಗಳು ಯಾವುವು ಎಂಬುದನ್ನು ಇಲ್ಲಿ ಪ್ರಸ್ತಾಪಿಸಬೇಕಾದ್ದಿಲ್ಲ, ಅದು ಎಲ್ಲರಿಗೂ ತಿಳಿದದ್ದೇ. ಗಾಂಧೀಜಿಯವರು ತಮ್ಮನ್ನು 'ವ್ಯಾವಹಾರಿಕ ಧ್ಯೇಯವಾದಿ' ಎಂದು ಕರೆದುಕೊಂಡು ಅದನ್ನು ಸಮರ್ಥಿಸಿದ್ದರೂ ಭಾರತಕ್ಕೆ ಹಾಗೂ ಅವರನ್ನು ಅರಿತ ಲೋಕಕ್ಕೆ ಅವರೊಬ್ಬ 'ಧ್ಯೇಯವಾದಿ', ಅವರ ಮಾತು ಬರಿಯ 'ಧ್ಯೇಯವಾದ', ಅವರು 'ವ್ಯವಹಾರಿ'ಯಲ್ಲ, ಅವರ ಮಾತು 'ವ್ಯವಹಾರ್ಯ'ವಲ್ಲ ಎಂದು ಕಂಡಿದ್ದರೆ—ಅದಕ್ಕೆ ಯಾರೂ ಸೋಜಿಗಪಡಬೇಕಾದ್ದಿಲ್ಲ. ಲೋಕ ಲೋಕವೇ !

ಗಾಂಧೀಜಿಯವರ ಈ ಮಾತು ನೋಡಿ: "ಪ್ರವಾದಿಗಳೂ ಅವತಾರ ಪುರುಷರೂ ಹೆಚ್ಚು ಕಡಮೆ ಅಹಿಂಸೆಯ ಪಾಠಗಳನ್ನೇ ಬೋಧಿಸಿದ್ದಾರೆ. ಹಿಂಸೆಯನ್ನು ಕಲಿಸುತ್ತೇನೆ ಎಂದು ಅವರಾರೂ ಹೇಳಿಕೊಳ್ಳಲಿಲ್ಲ. ಹಾಗಲ್ಲದೆ ಮತ್ತೇನು ತಾನೆ ಸಾಧ್ಯ? ಹಿಂಸೆಯನ್ನು ಕಲಿಸಬೇಕಾದ ಅಗತ್ಯವಿಲ್ಲ. ಮನುಷ್ಯ ಪ್ರಾಣಿಯಾಗಿ ಹಿಂಸೆ; ಆತ್ಮವಾಗಿ ಅಹಿಂಸೆ. ಒಳಗಿರುವ ಆತ್ಮ ಜಾಗೃತವಾದ ಕೂಡಲೇ ಅವನು ಹಿಂಸಕನಾಗಿ ಉಳಿಯಲಾರ. ಅವನು ಅಹಿಂಸೆಯ ಎಡೆಗೆ ಮುಂದುವರಿಯುತ್ತಾನೆ; ಇಲ್ಲವೇ ತನ್ನ ನಾಶಕ್ಕೆ ನುಗ್ಗುತ್ತಾನೆ. ಆದುದರಿಂದಲೇ ಪ್ರವಾದಿಗಳೂ ಅವತಾರಗಳೂ, ಅಹಿಂಸೆಯ ಲಕ್ಷಣಗಳಾದ ಸತ್ಯ—ಸಾಮರಸ್ಯ—ಭ್ರಾತೃತ್ವ—ನ್ಯಾಯ ಮುಂತಾದುವನ್ನು ಬೋಧಿಸಿದ್ದಾರೆ." (ಪುಟ ೩೯೦-೯೧)

ತಮ್ಮ ಬಾಳನ್ನು ಅಹಿಂಸಾಧರ್ಮದ ಮೂಲಕವಾಗಿ ಭಾರತ ಸೇವೆಗೆ ಅರ್ಪಿಸಿಕೊಂಡ ಗಾಂಧೀಜಿಯವರು, ತಮಗಿಷ್ಟವಿಲ್ಲವಾದರೂ ತಾವೂ ಒಬ್ಬ ಪ್ರವಾದಿಯೂ ಅವತಾರ ಪುರುಷನೂ ಆಗಿ ಪರಿವರ್ತಿತವಾದ್ದು, ಲೋಕ ಲೋಕವಾಗಿಯೇ ಉಳಿದದ್ದು ಕೂಡ ಸೋಜಿಗದ ವಿಷಯವಲ್ಲ. ಮಾನವ್ಯದ ಮುಂದೆ ಅದು ಎಂದಿನ ಶೀವಿಯ ವಿಧಿಯ ವಿಕಟಾಟ್ಟಹಾಸ !

‘ಸ್ವಾತಂತ್ರ್ಯವೇ ಧರ್ಮ’

ಶಂಸ ಐತಾಳ

‘ಸ್ವಾತಂತ್ರ್ಯವೇ ಧರ್ಮ’ ಹಳೆಯ ತಲೆಮಾರಿನ ಲೇಖಕರಲ್ಲಿ ಒಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಇತರರ ಜೊತೆಗೂಡಿ ಸಂಪಾದಿಸಿದ ಲೇಖನಗಳ ಸಂಕಲನ. ಹದಿನೈದು ತಿಂಗಳು ಸೆರೆಮನೆಯಲ್ಲಿದ್ದಾಗ, ಬೇಸರಿಕೆ ಹೋಗಲಾಡಿಸಿಕೊಳ್ಳಲು ಅಲ್ಲಿ ಓದಿದ ಹಳೆಯ ಪತ್ರಿಕೆ ಮತ್ತು ಪುಸ್ತಕಗಳಿಂದ ಗುರುತುಹಾಕಿಟ್ಟುಕೊಂಡ ಕೆಲವು ಲೇಖನಗಳು ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ದೀನಬಂಧು ಸಿ. ಎಫ್. ಆಂಡ್ರೂಸ್, ಲಾಲಾ ಲಜಪತರಾಯ್, ಜವಾಹರಲಾಲ್ ನೆಹರೂ, ಲಿನ್ ಯು ಟಾಂಗ್ ಮತ್ತು ಟಾಗೋರ್ ಬರೆದ ಹಾಗೂ ‘ಮರಾಠಾ’ ಪತ್ರಿಕೆಯಲ್ಲಿ ಅಚ್ಚಾದ ಕೆಲವು ಪ್ರಬಂಧಗಳು ಇಲ್ಲಿ ಅನುವಾದಗೊಂಡಿವೆ.

ಪುಸ್ತಕದಲ್ಲಿ ಪ್ರಕಟಣೆಯ ವರ್ಷ ಅಚ್ಚಾಗಿಲ್ಲ. ಆದರೂ ಲೇಖನಗಳೆಲ್ಲ ಸ್ವಾತಂತ್ರ್ಯಪೂರ್ವದಲ್ಲಿಯೇ ಬರೆಯಲಾದುವೆಂಬುದು ನಿರ್ವಿವಾದ. ಆ ಕಾಲ ಜನತೆಯಲ್ಲಿ ಅಶಾಂತಿ ಅಸಹನೆ ದುಃಖ ದಾರಿದ್ರ್ಯಗಳು ತಾಂಡವವಾಡುತ್ತಿದ್ದ ಕಾಲ. ಬ್ರಿಟಿಷರ ದಬ್ಬಾಳಿಕೆಯಿಂದ ಪಾರಾಗಲು ಜನಕೋಟಿ ಹಂಬಲಿಸುತ್ತಿದ್ದ ಕಾಲ. ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಹೋರಾಡುತ್ತಿದ್ದ ಕಾಲ. ಎಲ್ಲೆಡೆಯಲ್ಲೂ ಸ್ವಾತಂತ್ರ್ಯದ ಬಯಕೆಯ ಕಿಡಿ ಪ್ರಜ್ವಲಿಸುತ್ತಿದ್ದ ಕಾಲ. ಆ ಕಾಲದಲ್ಲಿ ಭಾರತೀಯರು ಬರೆದ ಎಲ್ಲ ಬರಹಗಳಲ್ಲೂ ಸ್ವಾತಂತ್ರ್ಯಾಪೇಕ್ಷೆಯ ಮನೋಭಾವ, ಪಾಶ್ಚಾತ್ಯರ ಕುರಿತು ಘೃಣೆ, ಹೋರಾಟಕ್ಕೆ ಜನರನ್ನು ಸಿದ್ಧಗೊಳಿಸಲು ಅವರಲ್ಲಿ ತುಂಬುವ ಉತ್ಸಾಹ—ಇವು ಕಾಣಿಸಿಕೊಳ್ಳುವುದು ಸಹಜ. ಈ ಮಾತಿಗೆ ‘ಸ್ವಾತಂತ್ರ್ಯವೇ ಧರ್ಮ’ ಸಂಕಲನದ ಹೆಚ್ಚಿನ ಲೇಖನಗಳೂ ಹೊರತಾಗಿಲ್ಲ.

ಒಟ್ಟು ಹದಿಮೂರು ಲೇಖನಗಳಿರುವ ಈ ಸಂಗ್ರಹದ ಮೂರು ಲೇಖನಗಳು ನೇರವಾಗಿ ಚರಿತ್ರೆಗೆ ಸಂಬಂಧಿಸಿವೆ.

ಸಂಕಲನದ ಹೆಸರಿಗೆ ಕಾರಣವಾದ 'ಸ್ವಾತಂತ್ರ್ಯ ಎಲ್ಲಾದಕ್ಕಿಂತ ಹೆಚ್ಚು' ಎಂಬ ಲೇಖನದಲ್ಲಿ ವಿದೇಶೀಯನೊಬ್ಬನು ಭಾರತೀಯರಿಗೆ ಸ್ವಾತಂತ್ರ್ಯದ ಬೆಲೆಯನ್ನು ಮನದಟ್ಟುಮಾಡುತ್ತಿರುವ ಚಿತ್ರಣವಿದೆ. ಬ್ರಿಟಿಷರ ಅರ್ಥವಿಲ್ಲದ ಠಕ್ಕಿನ ಬೂಟಾಟಿಕೆಯ ಮಾತುಗಳನ್ನು ನಂಬಬಾರದೆಂದೂ, ಅವರ ಯುದ್ಧದ ಗುರಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದಲ್ಲವೆಂದೂ ಸ್ಪಷ್ಟಪಡಿಸಿದ ಲಿನ್ ಯು ಟಾಂಗ್ ಪೂರ್ವದೇಶಗಳಲ್ಲಿಯೇ ಅತ್ಯಂತ ದೊಡ್ಡ ರಾಷ್ಟ್ರವಾದ, ೪೦ ಕೋಟಿ (೮೧) ಭಾರತೀಯರಿರುವ, ಈ ರಾಷ್ಟ್ರ ಸ್ವತಂತ್ರವಾಗದೆ ಏಷ್ಯಾ ಸ್ವತಂತ್ರವಾಗದೆಂದು ಭವಿಷ್ಯ ನುಡಿಯುತ್ತಾನೆ. ಲಿನ್ ಯು ಟಾಂಗ್ "ನನ್ನ ಪಾಡು ನನಗೆ. ಹೊರಗಿನ ಪ್ರಪಂಚಕ್ಕೂ ನನಗೂ ಏನೂ ಸಂಬಂಧವಿಲ್ಲ." (ಪುಟ ೨೫೭) ಎನ್ನುವ ಮನೋಭಾವದವನಲ್ಲವಾದ್ದರಿಂದ ಅವನಿಗೆ ಭಾರತದ ಬಗ್ಗೆ ಕುತೂಹಲ. ಇಷ್ಟು ದೊಡ್ಡ ರಾಷ್ಟ್ರವನ್ನು ಉದಾಸೀನ ಮಾಡಿ ಜಗತ್ತಿನ ಭವಿಷ್ಯವನ್ನು ನಿರ್ಧರಿಸುವುದು ಎಂದಿಗೂ ಸಾಧ್ಯವಿಲ್ಲವೆಂದು ನಂಬಿದವರಲ್ಲಿ ಅವನೂ ಒಬ್ಬ. ಪಶ್ಚಿಮ ಮತ್ತು ಪೂರ್ವದೇಶಗಳು ಸ್ನೇಹದಿಂದ ಸಮಾನವಾಗಿ ಬಂದಾದ ಹೊರತು ಲೋಕದಲ್ಲಿ ಶಾಂತಿ, ಸುಖ, ಸಮಾಧಾನಗಳು ನೆಲೆಗೊಳ್ಳಲಾರವೆಂಬುದು ಅವನ ದೃಢವಾದ ಅಭಿಪ್ರಾಯ. ಆದ್ದರಿಂದ ಭಾರತ ಸ್ವತಂತ್ರವಾಗಬೇಕಾದ್ದು ಅವಶ್ಯವೆಂದು ತಿಳಿಯಪಡಿಸಿದ ಅವನು ಜನತೆಗೆ ರಾಷ್ಟ್ರೀಯವಾಗಿ ಒಗ್ಗಟ್ಟಾಗಲು ಕರೆನೀಡುತ್ತಾನೆ.

ಆಂಡ್ರೂಸರ ಮೂರು ಲೇಖನಗಳಲ್ಲಿ 'ಬೃಂದಾವನ' ಚಿಕ್ಕದಾದ ಒಂದು ಲಘು ಪ್ರಬಂಧ. ಯಮುನಾ ನದೀ ತೀರದ ಸೆರಗಿನಲ್ಲಿರುವ ಬೃಂದಾವನದ ಲತಾಕುಂಜ ಉಪವನಗಳ ವರ್ಣನೆ ಮಾಡಿಕೊಡುವ ಈ ಲೇಖನದಲ್ಲಿ ಲೇಖಕರು ಪೂರ್ವ-ಪಶ್ಚಿಮ ರಾಷ್ಟ್ರಗಳನ್ನು ಸಾಮಯಿಕವಾಗಿ ತುಲನೆಮಾಡಲು ಪ್ರಯತ್ನಿಸಿದ್ದಾರೆ. ಆಂಡ್ರೂಸ್ ಗಾಂಧೀಜಿಯವರ ಜೊತೆಯಲ್ಲಿದ್ದು ಬಡವರ ಸೇವೆಮಾಡಿ ಕಷ್ಟದ ಅನುಭವ ಸಂಪಾದಿಸಿದವರು. ಅವರದು ಸಮರಸವಿಲ್ಲದ ಬದುಕು. ಯೂರೋಪೀಯ ರಾಷ್ಟ್ರಗಳ "ಆತ್ಮ ಹೋದರೆ ಹೋಗಲಿ, ರಾಜಕೀಯಕ್ಕೆ ಜಯವಾಗಲಿ" (ಪುಟ ೧೦) ಎಂಬ ಪೈಶಾಚಿಕ ಮನೋವೃತ್ತಿಯ ಬಗ್ಗೆ ಅವರಿಗೆ ಜುಗುಪ್ಸೆ. ಭಾರತೀಯರ ಅಂತಿಮಗುರಿ ಸಮಸ್ತ ಬಂಧನಗಳಿಂದಲೂ ಬಿಡುಗಡೆ ಪಡೆದು ಭಗವಂತನಲ್ಲಿ ತನ್ನ ಆತ್ಮವನ್ನು ವಿಶ್ರಾಂತಿ ಪಡಿಸುವುದು ಎಂಬುದು ಅವರ ಅಭಿಪ್ರಾಯ. ಸ್ವಾತಂತ್ರ್ಯ ಸಮರದಲ್ಲಿ ಬಹು ಕಾಲ ಜನರು ಪಟ್ಟ ದುಃಖಗಳನ್ನೂ, ಬೃಂದಾವನಕ್ಕೆ ಬಂದಾಗ ಆ ಶಾಂತಿವನದಲ್ಲಿ, ಅವರು ಪಡೆದ ಸೌಂದರ್ಯಾನುಭವವನ್ನೂ ನೆನಪಿಗೆ ತಂದುಕೊಳ್ಳುತ್ತಾ ಲೇಖಕರು "ಬಾಳು ಬರಿಯ ಕಾದಾಟ, ಪ್ಲೇಗು, ಕ್ಷಾಮಗಳ ಚಕ್ರವಲ್ಲ....ದುಃಖ ಎಲ್ಲೆಲ್ಲೂ ಇದೆ ಎಂಬ ಮಾತು ನಿಜ....ಆದರೆ ಜಗತ್ತಿನಲ್ಲಿ ನಗೆಯೂ, ಆನಂದವೂ, ಮಕ್ಕಳ ಧ್ವನಿಯೂ ಇರುವುದೂ ನಿಜ....ಬಾಳಿಗೂ ಬೃಂದಾವನವಿದೆ" (ಪುಟ ೧೪) ಎಂಬ ಚಿರಸತ್ಯವನ್ನು ಅರುಹಿ ಜನರ ಹೃದಯದಲ್ಲಿ ಉತ್ಸಾಹವನ್ನು ತುಂಬುತ್ತಾರೆ.

ಆಂಡ್ರೂಸರ ಎರಡನೆಯ ಲೇಖನ 'ಗಾಂಧೀಜಿ ಮತ್ತು ಆಧುನಿಕ ನಾಗರಿಕತೆ.'

ಗಾಂಧೀಜಿಯವರನ್ನು ಕುರಿತು ಓರ್ವ ಲೇಖಕನ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಲೇಖನವನ್ನು ಬರೆಯಲಾಗಿದೆ. ಗಾಂಧೀಜಿಯವರ ಸರಳ ಜೀವನ ಸುಖವಾದ ಕಾಡು ಪ್ರಾಣಿಯ ಜೀವನವೆಂದೂ, ಗಾಂಧೀಜಿಯವರು ತಂದುಕೊಡುವ ಸ್ವರಾಜ್ಯದಲ್ಲಿ ಮನುಷ್ಯನ ಬಾಳು ನಾಯಿಬಾಳಿನಂತಾಗುವುದೆಂದೂ, ಗಾಂಧೀಜಿಯವರು ನಾಗರಿಕತೆ ಮತ್ತು ನಾಗರಿಕತೆ ಕೊಡುವ ಎಲ್ಲ ಸುಖ ಸೌಕರ್ಯಗಳಿಗೆ ನಿಜವಾದ ಶತ್ರುವೆಂದೂ ಅಭಿಪ್ರಾಯಪಟ್ಟ ಲೇಖಕನ ಕುರಿತು ಕನಿಕರಪಡುತ್ತಾ ಆಂಡ್ರೂಸ್ ಕೇವಲ ಸುಖಸೌಲಭ್ಯಗಳೇ ಮಾನವಜೀವನದ ಉದ್ದೇಶವಲ್ಲ. ಇಂಥ ಭಾವನೆ ವಿದ್ಯಾವಂತರೆನಿಸಿಕೊಳ್ಳುವವರಲ್ಲೂ ಬೆಳೆಯುತ್ತಿರುವುದು ದುರದೃಷ್ಟಕರ ಎನ್ನುತ್ತಾರೆ. ಒಂದು ಕಡೆ ಮೋಟಾರು ಕಾರು, ರೈಲು, ಶ್ರೀಮಂತ ಡಾಕ್ಟರು ಲಾಯರುಗಳು. ಇನ್ನೊಂದು ಕಡೆ ಅರೆಬೆತ್ತಲೆ ದರಿದ್ರರು. ಕೆಲವರ ಸುಖ ಉಳಿದ ಲಕ್ಷಾಂತರ ಮಂದಿಯ ಕಷ್ಟಕೋಟಲೆಗಳಿಗೆ ಕಾರಣವಾಗುವುದು. ಶ್ರೀಮಂತ ಮತ್ತು ದರಿದ್ರರ ನಡುವಿರುವ ಮಹಾ ಅಂತರ. ಇದೇ ನಾಗರಿಕತೆಯಲ್ಲ. ಆಧುನಿಕ ನಾಗರಿಕತೆಯ ಪೂರ್ಣ ಅರ್ಥವನ್ನೂ ಫಲವನ್ನೂ ಗಮನಿಸಬೇಕಾದರೆ ನಾವು ಸ್ಲಮ್ಸ್ ಎನ್ನಿಸಿಕೊಳ್ಳುವ ಕಾರ್ಖಾನೆಗಳ ಕೂಲಿಗಾರರಿರುವ ಬಡವರ ಗುಡಿಸಲುಗಳನ್ನು ನೋಡಬೇಕು. ಶ್ರೀಮಂತರು ಅನುಭವಿಸುವ ಸುಖಭೋಗಲು ಜತೆಗೆ ಬಹುಮಂದಿ ಹಸಿವವರು ಮಡಿಯುವ ಈ ದುರಂತಕ್ಕೆ ಎಂದು ಕೊನೆ? ಇದೇ ನಾಗರಿಕತೆಯಾದರೆ ಇಂಥ ನಾಗರಿಕತೆ ನಮಗೆ ಬೇಡ. ಈ ಆರ್ಥಿಕ ವೈಷಮ್ಯ ಭಾರತದಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ರಾಷ್ಟ್ರಗಳಲ್ಲೂ, ಈಗಷ್ಟೇ ಅಲ್ಲ, ಹಿಂದಿನಿಂದಲೂ ಇತ್ತು ಎಂಬುದನ್ನು ಈಜಿಪ್ಟ್, ರೋಮ್, ಬಿಜಾಂಟೈನ್ ಮುಂತಾದ ನಾಗರಿಕತೆಗಳ ಉದಾಹರಣೆಗಳೊಡನೆ ತಿಳಿಸಿದ ಲೇಖಕರು ಜನರು ಗಾಂಧೀಜಿಯವರ 'ಸರಳ ಜೀವನ–ಉನ್ನತ ವಿಚಾರ' ಮಾರ್ಗವನ್ನು ಅನುಸರಿಸಬೇಕೆಂದು ಅಪೇಕ್ಷಿಸುತ್ತಾರೆ.

'ಬಡವರ ಮೇಲೆ ದಬ್ಬಾಳಿಕೆ' ಆಂಡ್ರೂಸರ ಮತ್ತೊಂದು ಲೇಖನ. ಇಲ್ಲಿಯೂ ಆರ್ಥಿಕ ಅಸಮಾನತೆಯ ಬಗ್ಗೆ ಅವರಿಗಿರುವ ಜುಗುಪ್ಸೆ ವ್ಯಕ್ತವಾಗಿದೆ. ಚಾಂದ್‌ಪುರದ ಟೀ ತೋಟಗಳಲ್ಲಿ ದುಡಿಯುವ ಕೆಲಸಗಾರರ ಮೇಲೆ ಸರಕಾರ ನಡೆಸುತ್ತಿದ್ದ ದಬ್ಬಾಳಿಕೆಯಿಂದ ರೊಚ್ಚಿಗೆದ್ದ ಆಂಡ್ರೂಸ್ ಇಂಥ ದಬ್ಬಾಳಿಕೆಯೇ ಭಾರತದ ಪ್ರಮುಖ ಸಮಸ್ಯೆಯೆಂದೂ ಇದಕ್ಕೆ ಅಂತ್ಯ ಸ್ವಾತಂತ್ರ್ಯದಿಂದಲೇ ಎಂದೂ ಒತ್ತಿ ಹೇಳುತ್ತಾರೆ. ಗಾಂಧೀಜಿಯವರು ಹೋದಲ್ಲೆಲ್ಲ ಅವರ ಸುತ್ತ ಜನರು ಒಟ್ಟುಗೂಡುವ, ಅವರ ಬೋಧನೆಯನ್ನು ಅಕ್ಷರಶಃ ಅನುಮೋದಿಸುವ, ಅನುಸರಿಸುವ, 'ಗಾಂಧೀಜಿ ಕೀ ಜೈ' ಎಂಬ ಘೋಷಣೆಯೇ ಎಳೆಯ ಮಕ್ಕಳಲ್ಲೂ ಉತ್ಸಾಹವನ್ನು ತುಂಬುವ ಚಿತ್ರ ಕಂಡಾಗ ನಮಗೆ ಗಾಂಧೀಜಿಯವರು ನಿಜವಾಗಿಯೂ ಪವಾಡ ಪುರುಷರು ಎನ್ನಿಸುತ್ತದೆ. ಜನರು ಗಾಂಧೀಜಿಯವರಿಂದಲೇ ತಮ್ಮ ಮುಕ್ತಿ ಎಂದು ದೃಢವಾಗಿ ನಂಬಿದ್ದರು. ಒಂದು ಪ್ರದೇಶದ ಜನ ಮಾತ್ರವಲ್ಲ, ಅಖಿಲ ಭಾರತದ ಎಲ್ಲರೂ.

ಈ ಸಂಕಲನದ ಮೂರು ಉತ್ತಮ ಲೇಖನಗಳು—ಲಾಲಾ ಲಜಪತರಾಯ್ ಅವರು

೧೯೦೬ರಲ್ಲಿ ಮಾಂಡಲೆ ಸೆರೆಮನೆಯಲ್ಲಿದ್ದಾಗ ಬರೆದ 'ಭಗವದ್ಗೀತೆಯ ಸಂದೇಶ', ರವೀಂದ್ರನಾಥ್ ಟಾಗೋರ್ ಅವರ 'ಬಿಹಾರ ವಾಣಿ' ಮತ್ತು ಜವಾಹರಲಾಲ್ ನೆಹ್ರೂ ಅವರ 'ಜಟ್ಟಿಯ ಮನಸ್ಸು.'

'ಭಗವದ್ಗೀತೆಯ ಸಂದೇಶ' ಎಂಬ ಲೇಖನದಲ್ಲಿ ಸಂಸ್ಕೃತದ ಸರ್ವಶ್ರೇಷ್ಠ ಗ್ರಂಥವೂ, ಜಗತ್ತಿನಲ್ಲಿ ಸರ್ವಜನಾದರಣೀಯತೆಯನ್ನು ಗಳಿಸಿದ ಗ್ರಂಥವೂ ಆದ 'ಗೀತೆ'ಯ ಸಂದೇಶವೇನೆಂಬುದನ್ನು ಆ ಕಾಲದ ಪರಿಸ್ಥಿತಿಗನುಸರಿಸಿ ವಿವರಿಸಲಾಗಿದೆ. ಲೇಖಕರು 'ಗೀತೆ'ಯ ಮುಖ್ಯ ಸಂದೇಶವನ್ನು ಹೀಗೆ ಕೊಟ್ಟಿದ್ದಾರೆ:

> ಜೀವನದಲ್ಲಿ ಯಾವಾಗಲೂ ಪರಸ್ಪರ ಬಡಿದಾಟ, ಹೊಡೆದಾಟ, ಪಾಪ, ದುಃಖಗಳು ಸುಖ ಸತ್ಯಗಳಿಂದ ಹೆಚ್ಚಾಗಿ ತಾಂಡವವಾಡುತ್ತವೆ. ನಿರುತ್ಸಾಹ, ಅಲ್ಪತೆ, ತುಚ್ಛತೆಗಳು ನಮ್ಮನ್ನು ಸುತ್ತುಗಟ್ಟಿವೆ. ಜಗತ್ತಿನಲ್ಲಿ ಹೃದಯ ವೈಶಾಲ್ಯ, ಸೌಹಾರ್ದಗಳು ತೋರುವುದು ಎಲ್ಲೋ ಅಪರೂಪವಾಗಿ ಆಗೊಮ್ಮೆ ಈಗೊಮ್ಮೆ ಮಾತ್ರ....ಜೀವನದಲ್ಲಿ ತೋರುವ ಈ ಪರಸ್ಪರ ವಿರುದ್ಧಗಳ ಸಮಸ್ಯೆಯನ್ನು ಎಲ್ಲರಿಗಾಗಿ ಎಂದೆಂದಿಗೂ ಪರಿಹರಿಸುವುದೇ ಗೀತೆಯ ಗುರಿ....(ಪುಟ ೧೮–೧೯)

> ಜೀವನದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮನುಷ್ಯನು ಬೀಳುವಂಥ ಗುಂಡಿಗಳನ್ನು ಗೀತೆ ಊಹಿಸಿ ಅವನನ್ನು ನಿಧಾನವಾಗಿ ಆ ಸಂಶಯದ ಮುಳ್ಳು ಪೊದೆಯಿಂದ ಬಿಡುಗಡೆ ಮಾಡುತ್ತದೆ....(ಪುಟ ೨೩)

> ಜೀವನವೊಂದು ಯಜ್ಞ. ಧರ್ಮವೇ ಅದರ ಮೂಲತತ್ತ್ವ. ಇದು ಶಾಶ್ವತವಾದ ಸತ್ಯ. ಯಾವ ಸಂದರ್ಭದಲ್ಲೂ ಇದು ಬದಲಾವಣೆಯಾಗುವುದಿಲ್ಲ. ಈ ಯಜ್ಞವನ್ನು ಮಾಡುವುದರಿಂದಲೂ, ಧರ್ಮವನ್ನು ಅನುಸರಿಸುವುದರಿಂದಲೂ, ಮೋಕ್ಷವೂ ಆನಂದವೂ ಉಂಟಾಗುತ್ತದೆ. ಈ ಧರ್ಮವನ್ನು ಅನುಸರಿಸಲು ನಮಗೆ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ನಮ್ಮ ಬಾಳು ಉತ್ತಮವಾಗುತ್ತದೆ. ಕೊನೆಯಲ್ಲಿ ಜನನ ಮರಣಗಳಿಂದ ಬಿಡುಗಡೆಯೂ ಆನಂದವೂ ಉಂಟಾಗುತ್ತದೆ... (ಪುಟ ೨೭)

> ಜಗತ್ತಿನಲ್ಲಿ ಕಣ್ಣಿಗೆ ಕಾಣುವಂತೆ ಪರಸ್ಪರ ವಿರುದ್ಧಗಳಿದ್ದರೂ ಅವು ವಿರುದ್ಧಗಳಲ್ಲ ಎಂಬುದನ್ನು ತೋರಿಸುವುದೇ ಗೀತೆಯ ಉದ್ದೇಶ....(ಪುಟ ೧೯)

ಲಾಲಾ ಲಜಪತ್‌ರಾಯ್ ಅವರು 'ಗೀತೆ'ಯ ಹಿರಿಮೆಯನ್ನು ಘೋಷಿಸುವುದರೊಂದಿಗೆ, 'ಗೀತೆ'ಯಲ್ಲಿ ಹೇಳಿರುವುದೆಲ್ಲ 'ಮಹಾಭಾರತ'ಕ್ಕಿಂತಲೂ, ಶ್ರೀಕೃಷ್ಣನ ಜನನಕ್ಕಿಂತಲೂ ಮುಂಚೆ ಹುಟ್ಟಿದ ಗ್ರಂಥಗಳಲ್ಲೂ, ತತ್ತ್ವಜ್ಞಾನಗಳಲ್ಲೂ ಅಡಕವಾಗಿಲ್ಲವೇ? ಹಿಂದೆ ತಿಳಿಯದೆ ಇದ್ದ ಯಾವುದಾದರೂ ಹೊಸತನ್ನು 'ಗೀತೆ' ಬೋಧಿಸುವುದೇ

ಎಂದೂ ಪ್ರಶ್ನಿಸಿಕೊಂಡು ಅದಕ್ಕೆ ಉತ್ತರ ಹುಡುಕುವ ಪ್ರಯತ್ನ ಮಾಡಿದ್ದಾರೆ. 'ಗೀತೆ'ಯು ಹೊಸತೇನನ್ನೂ ಬೋಧಿಸಿಲ್ಲ, ನಿಜ. ಆದರೆ ಪ್ರತಿ ಕಾಲಕ್ಕೂ ಹೊಂದಿಕೊಂಡು 'ಗೀತೆ'ಯು ಹೊಸ ಹೊಸ ಸಂದೇಶಗಳನ್ನು ನೀಡಬಲ್ಲದು. ಏಕೆಂದರೆ 'ಗೀತೆ'ಯ ಕತೆ ಸ್ವಾಭಾವಿಕವಾಗಿದ್ದು ಎಲ್ಲ ಮನುಷ್ಯರಿಗೂ ಎಲ್ಲ ಕಾಲದಲ್ಲೂ ಅನ್ವಯಿಸತಕ್ಕದ್ದೇ ಆಗಿದೆ. 'ಗೀತೆ'ಯ ಸಂದೇಶ ಎಲ್ಲ ಸತ್ಯಾನ್ವೇಷಿಗಳ ಮನಸ್ಸನ್ನೂ ಕೂಡಲೇ ಮುಟ್ಟುತ್ತದೆ.

ಈ ಪೀಠಿಕೆಯೊಂದಿಗೆ ಪ್ರಾರಂಭವಾಗುವ ಲೇಖನದಲ್ಲಿ ಮೊದಲ ಮೂರು ಅಧ್ಯಾಯಗಳ ಸಂಕ್ಷಿಪ್ತ ಸಾರಾಂಶವಿದೆ. ಜ್ಞಾನಯೋಗ ಮತ್ತು ಕರ್ಮಯೋಗಗಳ ಬಗ್ಗೆ ಚರ್ಚಿಸಿದ ಲೇಖಕರು ಕೊನೆಯಲ್ಲಿ, 'ಭಗವದ್ಗೀತೆ'ಗೆ ವ್ಯಾಖ್ಯಾನ ಬರೆಯುವ ಎಲ್ಲರೂ ಮಾಡುವಂತೆ, ಅದರ ಸಂದೇಶವನ್ನು ತಮ್ಮ ಕಾಲದ ಸಮಸ್ಯೆಗಳಿಗೆ ಅಳವಡಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಹೋರಾಟವನ್ನೇ ಮಹಾಭಾರತ ಯುದ್ಧವೆಂದು ಪರಿಗಣಿಸಿ, ಜನತೆ ಸ್ವಾತಂತ್ರ್ಯವನ್ನು ಪಡೆಯಲು ಅನಾಸಕ್ತ ಕರ್ಮವನ್ನು ಮಾಡಬೇಕೆಂದೂ, ಯಾವ ಕಷ್ಟವೇ ಎದುರಾದರೂ ತಮ್ಮ ಕರ್ಮವನ್ನು ಬಿಡಬಾರದೆಂದೂ ಎಚ್ಚರಿಸಿದ್ದಾರೆ. ಲೇಖನದ ಮುಕ್ತಾಯವೂ ತುಂಬ ಚೆನ್ನಾಗಿದೆ:

> ದೇಶದ ಏಳಿಗೆಗೂ ವೈಭವಕ್ಕೂ ಶ್ರೀಕೃಷ್ಣನಂಥ ಜ್ಞಾನಿಯೂ ಅರ್ಜುನನಂಥ ಧೀರನೂ ಬೇಕು.... (ಗೀತೆಯ) ಸಂದೇಶ ಈಗ ಮುಖ್ಯವಾಗಿ ಕೃಷ್ಣಾರ್ಜುನರ ಸಂತತಿಯವರಾದ ಭಾರತೀಯರಿಗೆ. ಈಗ ನಾವು ಅಜ್ಞಾನ, ಮೂಢನಂಬಿಕೆಗಳಿಗೆ ತುತ್ತಾಗಿದ್ದೇವೆ. ಧರ್ಮಕರ್ಮದ ಜ್ಞಾನವಿಲ್ಲದೆ ಹೇಡಿಗಳಾಗಿದ್ದೇವೆ. ಕರ್ಮ ಮಾಡು. ನಿನ್ನ ಕರ್ತವ್ಯ ಮಾಡು. ಬಂದದ್ದು ಬರಲಿ. ಆದದ್ದು ಆಗಲಿ ಎಂಬ ಸತ್ಯವನ್ನು ಪೂರ್ಣವಾಗಿ ಅನುಸರಿಸುವುದರಲ್ಲಿಯೇ ಇಂದಿನ ಭಾರತೀಯರ ಮುಕ್ತಿ ಅಡಗಿದೆ. ಕೃಷ್ಣನ ಅನುಯಾಯಿಗಳಾದ ನಮಗೆ ಈಗ ಅಧೋಗತಿ, ನಿರಾಶೆ, ನಿರುತ್ಸಾಹ, ಧೈರ್ಯಹೀನತೆ, ಸುಖಾಭಿಲಾಷೆ, ಹೇಗಾದರೂ ಜೀವಿಸಿದ್ದರೆ ಸಾಕು ಎಂಬ ಭಾವವೂ, ಭಯವೂ ಹಿಂದೆಂದೂ ಇಲ್ಲದಿದ್ದಷ್ಟು ಪ್ರಾಪ್ತವಾಗಿದೆ. ಈ ಸಂದೇಶ ಈಗ ನಮಗೆ ಬೇಕು. ಈಗ ಗೀತೆಯ ಸಂದೇಶವನ್ನು ನಾವು ಧ್ಯಾನಿಸೋಣ. ನಮ್ಮ ಹೇಡಿತನ ಪಲಾಯನವಾಗುವುದು. ಧೈರ್ಯ ಸಾಹಸಗಳು ನಮ್ಮ ಮೈಗೂಡುವುವು. ನಮ್ಮ ದೇಶ ಹಿಂದಲ ವೈಭವವನ್ನು ಹೊಂದುವುದು. ಕೃಷ್ಣನ ಅನುಯಾಯಿಗಳು ಯೋಗದ ವಿಷಯದಲ್ಲಿ ಯಾವ ಅನರ್ಹವಾದ ತಪ್ಪು ಅರ್ಥವನ್ನೂ ಮಾಡಿಕೊಳ್ಳಕೂಡದು. ಸನ್ಯಾಸ, ತ್ಯಾಗದ ವಿಷಯಗಳಲ್ಲಿ ತಪ್ಪು ಅರ್ಥವನ್ನು ಮಾಡಿಕೊಂಡು ತಮ್ಮ ಪುರುಷ ಪ್ರಯತ್ನವನ್ನು ಬಿಡಕೂಡದು. ಧರ್ಮವನ್ನು ಕುರಿತ ಯಾವ ಹೇಡಿತನದ ಭಾವಗಳೂ ಭಾರತೀಯರ ಶಕ್ತಿಗಳನ್ನು ಕುಗ್ಗಿಸದಿದ್ದರೆ ನಮ್ಮ ಭವಿಷ್ಯ ಅರ್ಜುನನ ಜಯದಂತೆ ಮಂಗಳದಾಯಕವಾಗು

> ವುದು. ನನ್ನ ಶತ್ರುಗಳು ಎಷ್ಟೇ ಬಲಶಾಲಿಗಳಾಗಿದ್ದರೂ ಭಯವಿಲ್ಲ. ಹೀಗೆ ದುರ್ಬಲನಂಥ ಅತಿರಥ ಮಹಾರಥರು ಅರ್ಜುನನನ್ನು ಎದುರಿಸಬಲ್ಲರೆ? (ಪುಟ ೪೮–೪೯)

'ಜಡ್ಜಿಯ ಮನಸ್ಸು' ಲೇಖನದಲ್ಲಿ ಜವಾಹರಲಾಲ್ ನೆಹರೂ ಅವರು, ಕ್ರಿಮಿನಲ್ ಕೋರ್ಟುಗಳಲ್ಲಿ ಅಪರಾಧಿಗೆ ಮರಣದಂಡನೆಯನ್ನು ನೀಡುವಾಗ, ನ್ಯಾಯಾಧಿಪತಿಗೆ ಆಗುವ ಹೃದಯದ ತುಮುಲಗಳನ್ನು ತುಂಬ ಭಾವನಾತ್ಮಕವಾಗಿ ತೋರಿಸಿಕೊಟ್ಟಿದ್ದಾರೆ. ಅಪರಾಧಿಗಳಿಗೆ ನೀಡಿದ ಶಿಕ್ಷೆಯ ವಿವರದ ಕೆಲವು ದಾಖಲೆಗಳನ್ನು ಕೊಟ್ಟು ನೆಹರೂ ಕೆಲವೊಮ್ಮೆ ಚಿಕ್ಕ ತಪ್ಪುಗಳಿಗೂ ಹೇಗೆ ದೊಡ್ಡ ಶಿಕ್ಷೆಗಳು ಆಗುತ್ತವೆಂದು ತಿಳಿಸಿದ್ದಾರೆ. ಅಪರಾಧಿಗೆ ಶಿಕ್ಷೆ ಕೊಡಬೇಕಾದುದು ಸರಿ. ಆದರೆ ಅಪರಾಧಿಯ ಮನಸ್ಸಿನ ಒಳತೋಟಿಯನ್ನು ಅರಿಯಲು ನ್ಯಾಯಾಧೀಶ ಸಮರ್ಥನಾಗಿರಬೇಕು. ಶಿಕ್ಷಾ ವಿಧಾನಗಳಲ್ಲಿ ಮಾನವೀಯ ಅಂಶವಿರಬೇಕು. "ಪ್ರತಿಯೊಬ್ಬ ನ್ಯಾಯಾಧಿಪತಿಯೂ, ಮ್ಯಾಜಿಸ್ಟ್ರೇಟೂ ಸಾಮಾನ್ಯ ಕೈದಿಯಾಗಿ ಕೆಲವು ಕಾಲ ಜೈಲಿನಲ್ಲಿ ಕಳೆಯಬೇಕು" (ಪುಟ ೧೩೯) ಎಂಬ ಬರ್ನಾರ್ಡ್ ಷಾ ಅವರ ಸೂಚನೆಯನ್ನು ನೆಹರೂ ಸ್ವಲ್ಪಮಟ್ಟಿಗೆ ಒಪ್ಪುತ್ತಾರೆ. ಅಲ್ಲದೆ ಅವರು ಮರಣದಂಡನೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಆದರೆ ಛಡಿ ಏಟು, ಚಿತ್ರಹಿಂಸೆಗಳಿಂದ ಕೂಡಿದ ಆಜನ್ಮ ಕಾರಾಗೃಹವಾಸಕ್ಕಿಂತ ಮರಣದಂಡನೆ ಉತ್ತಮವೆನ್ನುವ ನೆಹರೂ, ಮರಣದಂಡನೆಯ ಈಗಿನ ವಿಧಾನ ಬದಲಾಗಬೇಕು ಎನ್ನುತ್ತಾರೆ. ಸಾಯುವ ಕಾಲದಲ್ಲಿ ಅಪರಾಧಿಗೆ ಹಿಂಸೆಯಾಗದಂಥ ವಿಧಾನವನ್ನು ಜಾರಿಗೆ ತರಬೇಕು: ವಿಷಪಾನ ನಿದ್ರೆ ಉತ್ತಮ ಎನ್ನುತ್ತಾರೆ ನೆಹರೂ.

ಅವರು ಹೇಳುತ್ತಾರೆ:

> ಉದ್ದೇಶಪೂರ್ವಕವಾಗಿ ಹಿಂಸೆಕೊಟ್ಟು ದೇಹಕ್ಕೂ ಮನಸ್ಸಿಗೂ ನೋವನ್ನು ಉಂಟು ಮಾಡುವುದು ಯಾರನ್ನೂ ತಿದ್ದುವ ದಾರಿಯಲ್ಲ. ಅಪರಾಧಿಯನ್ನು ತಿರುಚಿ ಅವನ ಬೆನ್ನುಮೂಳೆ ಮುರಿಯಬಹುದು. ಅದು ಅವನನ್ನು ತಿದ್ದುವುದಿಲ್ಲ. ಅದರ ಬದಲು ಈ ಶಿಕ್ಷೆ, ಶಿಕ್ಷೆ ಕೊಡುವವನನ್ನೇ ಪಶುವಾಗಿ ಕುರೂಪ ಮಾಡುತ್ತದೆ. ಯಾಕೆಂದರೆ ಕ್ರೌರ್ಯ ಮತ್ತು ಹಿಂಸೆಗಳ ಅನಿವಾರ್ಯವಾದ ಫಲಗಳೇನೆಂದರೆ ಅವು ಹಿಂಸೆಗೆ ಒಳಗಾದವನನ್ನೂ, ಹಿಂಸೆ ಕೊಡುವವನನ್ನೂ, ಇಬ್ಬರನ್ನೂ ನೀಚರನ್ನಾಗಿ ಮಾಡುತ್ತವೆ. (ಪುಟ ೧೪೭)

ಅಲ್ಲದೆ, ತಪ್ಪು ಮಾಡಿದವನನ್ನು ಶಿಕ್ಷಿಸುವುದರಿಂದ ಯಾವಾಗಲೂ ತಪ್ಪು ಮಾಡುವ ಚಾಳಿ ಗುಣವಾಗುವುದಿಲ್ಲ. ಜೈಲು ಇರುವುದು ಕೈದಿಗಳನ್ನು ತಿದ್ದಿ ಸುಧಾರಣೆ ಮಾಡುವುದಕ್ಕೆ, ಅವರನ್ನು ಶಿಕ್ಷಿಸುವುದಕ್ಕೆ ಅಲ್ಲ. ಈ ಮಾತುಗಳು ಇಂದೂ ಸಹ ನ್ಯಾಯಾಂಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಮನನ ಮಾಡಬೇಕಾದುದೇ ಆಗಿದೆ. ಒಟ್ಟಿನಲ್ಲಿ 'ಜಡ್ಜಿಯ

ಮನಸ್ಸು' ಲೇಖನ ಮೃದುಹೃದಯಿ ನೆಹರೂ ಅವರ ವ್ಯಕ್ತಿತ್ವದ ಒಂದು ಮುಖದ ಸಮಗ್ರದರ್ಶನವನ್ನು ಓದುಗರಿಗೆ ಮಾಡಿಕೊಡುತ್ತದೆ ಎನ್ನಬಹುದು.

ರವೀಂದ್ರನಾಥ ಟಾಗೋರರ ಲೇಖನಗಳಲ್ಲಿಯೂ ವ್ಯಕ್ತವಾಗುವುದು ರಣಹದ್ದುಗಳಂತೆ ಭಾರತದ ಸುಭಿಕ್ಷ ಪ್ರದೇಶಗಳನ್ನೆಲ್ಲ ಆಕ್ರಮಿಸಿಕೊಂಡ ಪಾಶ್ಚಾತ್ಯರ ದರ್ಪ ಮತ್ತು ಶ್ರೀಮಂತಿಕೆಯನ್ನು ಕುರಿತು ತಿರಸ್ಕಾರ. ಪಾಶ್ಚಾತ್ಯರ ಪ್ರಬಲವಾದ ಧ್ಯೇಯ ಸೃಷ್ಟಿಸುವುದಲ್ಲ, ಕೊಲ್ಲುವುದು ಎನ್ನುತ್ತಾರೆ ಟಾಗೋರ್. ಪಾಶ್ಚಾತ್ಯ ದೇಶಗಳು ತಮಗಿಂತ ನೂರಾರು ಶತಮಾನಗಳ ಹಿಂದಿನ ದೊಡ್ಡ ದೇಶಗಳ ಜನರ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರ ಮನುಷ್ಯತ್ವವನ್ನೇ ಅಪಹರಿಸಿವೆ. ಪಾಶ್ಚಾತ್ಯ ನಾಗರಿಕತೆಯಲ್ಲಿ ಸಮಾನತೆಯನ್ನು ಉಂಟುಮಾಡುವ ಆತ್ಮಶಕ್ತಿ ಇಲ್ಲ. ವ್ಯಕ್ತಿತ್ವವೆಂಬುದು ಇಲ್ಲವೇ ಇಲ್ಲ ಎಂದ ಟಾಗೋರ್ ಭಾರತವನ್ನು ಮನುಷ್ಯನಿಗೂ ಪಶ್ಚಿಮ ರಾಷ್ಟ್ರಗಳನ್ನು ಯಂತ್ರಗಳಿಗೂ ಹೋಲಿಸಿ, ಭಾರತದಲ್ಲಿರುವ ವಿದ್ಯಾಸಂಸ್ಥೆಗಳೆಲ್ಲ ಪರರ ಊಟದ ಎಂಜಲುಗಳು. ನಮಗೆ ಭಿಕ್ಷೆ ಸ್ವಭಾವವಾಗುತ್ತಾ ಇದೆ. ಹೀಗಾಗಬಾರದು ಎನ್ನುತ್ತಾರೆ. ಇದಕ್ಕೆ ನಾವು ಮಾಡಬೇಕಾದುದೇನು? ಉತ್ತರ ಒಂದೇ: 'ಹೋರಾಟ.'

ಟಾಗೋರರ ಒಂದು ಮಾತು ಹೀಗಿದೆ:

> ರೇಶಿಮೆ ಹುಳುವು ಗೂಡಿನಲ್ಲಿ ಎಷ್ಟುಕಾಲ ಬೇಕೋ ಅಷ್ಟಕ್ಕಿಂತ ಹೆಚ್ಚಾಗಿ ಇದ್ದಾಗ ಮಾತ್ರವೇ ಅದು ಸೆರೆಯಾಳಾಗುತ್ತದೆ....(ಪುಟ ೨೫೭)

ಈಗ ಭಾರತೀಯರ ರೆಕ್ಕೆಗಳು ಬೆಳೆದಿವೆ; ಆದುದರಿಂದ ನಾವು ಸ್ವತಂತ್ರರಾಗಲು ಕಾತರಪಡಬೇಕು ಎನ್ನುತ್ತಾರೆ ಟಾಗೋರ್.

'ಗುಂಡುಸೂಜಿ' ಹದಿನಾಲ್ಕು ಚಿಕ್ಕ ಚಿಕ್ಕ ಲೇಖನಗಳ ಸಂಗ್ರಹ. ಇಲ್ಲಿ ರಾಜಾರಾಮ ಮೋಹನರಾಯ್, ಏಳನೆ ಎಡ್ವರ್ಡ್ ರಾಜರ ದುಂದುವೆಚ್ಚ, ಶಿಕ್ಷೆಗೆ ಸಂಬಂಧಿಸಿದ ಕಾನೂನುಗಳು, ಕುದುರೆ ಜೂಜು, ಭಾರತೀಯರ ಯೋಗ್ಯತೆ, ಪ್ರಾಚೀನ ಭಾರತದ ಆರ್ಥಿಕ ಸ್ಥಿತಿ, ಪಂಜಾಬಿನಲ್ಲಿ ನಡೆದ ಅತ್ಯಾಚಾರ—ಈ ಮೊದಲಾದ ವಿಚಾರಗಳಿಗೆ ಸಂಬಂಧಿಸಿದ ಲೇಖನಗಳಿವೆ. 'ಗುಂಡುಸೂಜಿ'ಯ ಎಲ್ಲ ಲೇಖನಗಳಲ್ಲೂ ಎದ್ದುಕಾಣುವ ಗುಣ ವಿಡಂಬನ. ಲೇಖನಗಳು ಚಿಕ್ಕವಾದರೂ ವಸ್ತು ಗಂಭೀರವಾಗಿದ್ದು ಶೈಲಿ ಹಿತವಾಗಿದೆ. ಕೆಲವು ಉದಾಹರಣೆಗಳನ್ನು ನೋಡಿ:

> ಜೈಲುಗಳೇ ಇರಬಾರದು. ಜೈಲುಗಳನ್ನೆಲ್ಲ ಆಸ್ಪತ್ರೆಗಳಾಗಿ ಬದಲಾಯಿಸಬೇಕು. (ಪುಟ ೨೦೧)
>
> ಬೆಂಕಿಯನ್ನು ಪೆಟ್ರೋಲಿನಿಂದ ಆರಿಸುವ ಪ್ರಯತ್ನವನ್ನು ಬಿಟ್ಟುಬಿಡಿ. (ಪುಟ ೨೦೩)
>
> ಸ್ತ್ರೀಯರು ಯಾವುದನ್ನು ಮಾಡಿದರೆ ಕೆಟ್ಟದ್ದು, ಅಕ್ರಮ, ಅವಮರ್ಯಾದೆ

ಎಂದು ಪುರುಷರು ತಿಳಿಯುತ್ತಾರೆಯೋ, ಅಂತಹವನ್ನು ಪ್ರಕಟಿಸಲು ಬಿಡಬಾರದು. (ಪುಟ ೨೦೪)

ಕುದುರೆ ಜೂಜಿನ ರೂಪವನ್ನು ಇತರ ಜೂಜುಗಳಂತೆ ಕಾನೂನು ಮೂಲಕವಾಗಿಯೇ ತಪ್ಪಿಸಬೇಕು. ಲಾರ್ಡ್‌ಗಳೂ ಲೇಡಿಗಳೂ ಏನಾದರೂ ಹೇಳಲಿ. ಏನಾದರೂ ಮಾಡಲಿ. (ಪುಟ ೨೦೫)

ಎಲ್ಲಿಯವರೆಗೆ ಪೋಲಿಸರು ನೋಡಿದರೂ ನೋಡದವರಂತೆ ಕಣ್ಣು ಮುಚ್ಚಿಕೊಂಡಿರುತ್ತಾರೋ, ಅಲ್ಲಿಯವರೆಗೆ ಅಪಪ್ರಚಾರವೇ ನಡೆಯಬೇಕು. (ಪುಟ ೨೦೬)

ಹೀಗೆ ಸಂಕಲನದ ಬಹುತೇಕ ಲೇಖನಗಳು, ಒಂದಿಲ್ಲೊಂದು ರೀತಿಯಲ್ಲಿ, ಸ್ವಾತಂತ್ರ್ಯಕ್ಕಾಗಿ ತಹತಹಿಸುತ್ತಿರುವ, ಬ್ರಿಟಿಷರ ಕಟುವಾದ ಆಡಳಿತ ಕ್ರಮದ ಬಗೆ ಬೆಂಕಾರುತ್ತಿರುವ ಜನರ ಮೇಲೆ ವಿಶೇಷ ಪರಿಣಾಮವನ್ನು ಉಂಟುಮಾಡುವಂತೆ ಇವೆ. ಚರಿತ್ರೆಗೆ ಸಂಬಂಧಿಸಿದ ಲೇಖನಗಳನ್ನು ಈ ಸಂಕಲನದಲ್ಲಿ ಸೇರಿಸಿರುವುದರ ಔಚಿತ್ಯ ಅರ್ಥವಾಗುತ್ತಿಲ್ಲ. 'ಸ್ತ್ರೀ ಯೋಧರ ಪ್ರವೇಶ' ಎಂಬ ಲೇಖನ ರಷ್ಯಾದಲ್ಲಿ ನಡೆದ ಕಮ್ಯೂನಿಸ್ಟ್ ಸ್ತ್ರೀಯರ ಮೊದಲ ಮೂರು ಸಮ್ಮೇಳನಗಳ ವರದಿಯಾಗಿದ್ದರೆ ಕೊನೆಯ ಲೇಖನ ಪಠಾಣ್ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಬೇಕೆಂದು ಸೈನ್ಯಾಧಿಕಾರಿ ಆಜ್ಞೆ ಮಾಡಿದಾಗ, ಅದನ್ನು ಉಲ್ಲಂಘಿಸಿ, ಅಧಿಕಾರವನ್ನೂ ಕಳೆದುಕೊಂಡು, ಹನ್ನೊಂದು ವರ್ಷದ ಸೆರೆಮನೆವಾಸದ ಶಿಕ್ಷೆಗೆ ಗುರಿಯಾದ, ದೇಶಪ್ರೇಮಿಯಾದ ಚಂದ್ರಸಿಂಗ್ ಅವರ ಆತ್ಮಕಥೆಯ ಒಂದು ಭಾಗವಾಗಿದೆ.

ಕನ್ನಡ ಪುಸ್ತಕಗಳ ಪ್ರಕಟಣೆ, ಮಾರಾಟದ ವ್ಯವಸ್ಥಿತ ಕಾರ್ಯಕ್ರಮಗಳು ಇನ್ನೂ ಆರಂಭದ ಹಂತದಲ್ಲಿರುವಾಗಲೇ ಇಂಥದೊಂದು ಪುಸ್ತಕವನ್ನು ಪ್ರಕಟಿಸುವ ಧೈರ್ಯ ಮಾಡಿದ ಗೊರೂರರು ಅಭಿನಂದನಾರ್ಹರಾಗಿದ್ದಾರೆ.

'ಮಹಾದೇವ ದೇಸಾಯಿಯವರ ಕೃತಿಗಳು'

ರಾಗೌ

ಗೊರೂರರು ಸ್ವಾತಂತ್ರ್ಯ ಚಳವಳಿ ಹೋರಾಟಗಾರರೆಂದೂ ಹೆಸರಾಗಿದ್ದಾರೆ. ಈ ಹೋರಾಟ ಎರಡು ಬಗೆಯದು: ನೇರವಾಗಿ ಭಾಗವಹಿಸುವುದು ಒಂದು, ಬರೆಹಗಳ ಮೂಲಕ ಪ್ರಚೋದಿಸುವುದು ಮತ್ತೊಂದು. ಗೊರೂರರು ಇವೆರಡರಲ್ಲಿಯೂ ಇದ್ದಾರೆ. ಸ್ವಾತಂತ್ರ್ಯಸಮರದ ಬಗೆಬಗೆಯ ಪರಿಚಯವನ್ನು ತಮ್ಮ ಸ್ವಂತ ಬರವಣಿಗೆಯ ಮೂಲಕವೂ ಅನುವಾದದ ಮೂಲಕವೂ ಅವರು ಕೈಗೊಂಡಿದ್ದಾರೆ. ಇಂತಹ ಅವರ ಒಂದು ಅನುವಾದದ ಕೃತಿ 'ಮಹಾದೇವ ದೇಸಾಯಿಯವರ ಕೃತಿಗಳು.'

ಇದು ಗಾಂಧೀಜಿಯವರ ಅಂತರಂಗ ಶಿಷ್ಯರೂ ಆಪ್ತಕಾರ್ಯದರ್ಶಿಯೂ ಮಹಾಮೇಧಾವಿಯೂ ಆದ ಮಹಾದೇವ ದೇಸಾಯಿಯವರ ಲೇಖನಗಳ ಅನುವಾದ ಸಂಗ್ರಹ. ೧೯೫೪ರಲ್ಲಿ ಪ್ರಕಟಗೊಂಡ ಇದರಲ್ಲಿ ಇಪ್ಪತ್ತನಾಲ್ಕು ಬರೆಹಗಳಿವೆ. ಮೂಲತಃ 'ನವಜೀವನ', 'ಯಂಗ್‌ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳಲ್ಲಿ ಪ್ರಕಾಶಿತವಾದ ದೇಸಾಯಿಯವರ ಅಸಂಖ್ಯಾತ ಲೇಖನಗಳಲ್ಲಿ ಈ ಕೆಲವನ್ನು ಆಯ್ದು ಕನ್ನಡಕ್ಕೆ ಅನುವಾದಿಸಿ ಕೊಡಲಾಗಿದೆ. ಇವು ಸ್ವರೂಪದಲ್ಲಿ ಶುದ್ಧ ಸಾಹಿತ್ಯಕ್ಕೆ ಸಂಬಂಧಿಸಿದವು ಗಳಲ್ಲ, ರಾಷ್ಟ್ರೀಯ ಸಾಹಿತ್ಯಕ್ಕೆ ಸಂಬಂಧಿಸಿದವುಗಳು; ಇಲ್ಲಿರುವುದೆಲ್ಲ ರಾಷ್ಟ್ರೀಯ ಚಳವಳಿಯ ಕಥೆಯೇ. ಮುಖಗಳು ಬೇರೆ ಬೇರೆಯಂತೆ ಕಂಡರೂ, ಉದ್ದೇಶಿತ ವಿಷಯ ಒಂದೇ. ಆದ್ದರಿಂದಲೇ ಈ ಎಲ್ಲ ಲೇಖನಗಳ ಒಡಲಿನಲ್ಲಿ ಏಕಸೂತ್ರತೆಯೊಂದು ಕಾಣಿಸಿಕೊಂಡಿದೆ.

ಗಾಂಧೀಜಿಯವರ ದೈನಂದಿನ ಸಂಭಾಷಣೆಗಳನ್ನೂ ವ್ಯವಹಾರಗಳನ್ನೂ ಕುರಿತು ದೇಸಾಯಿ ಅವರು ಸತತವಾಗಿ ಬರೆಯುತ್ತಿದ್ದರು. ಗಾಂಧೀಜಿಯವರ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ವಿಚಾರಧಾರೆಗಳನ್ನು ಈ ಲೇಖನಗಳ ಮೂಲಕ ಹಿಡಿದಿಡುತ್ತಿದ್ದರು. "ಗಾಂಧಿಯವರು ಯೋಚಿಸಿ ನಿರ್ಣಯಿಸುತ್ತಿದ್ದರು; ದೇಸಾಯಿ

ಈ ಯೋಜನೆಗೆ ಆಕಾರಕೊಟ್ಟು, ಜಗತ್ತಿನ ಮುಂದೆ ಅದನ್ನು ಇಡುತ್ತಿದ್ದರು" ಎಂಬ ಮಾತು ಸತ್ಯವಾದುದು. ಇದಕ್ಕೆ ಒಂದು ಉಜ್ವಲ ನಿದರ್ಶನವಾಗಿದೆ ಪ್ರಕೃತ ಕೃತಿ.

ಇಲ್ಲಿ ಪ್ರಸ್ತಾಪಿತವಾಗಿರುವ ವಿಷಯಗಳು ಹಲವು ಬಗೆಯವು: ದೇಶದ ಪ್ರಮುಖ ಆಗುಹೋಗುಗಳನ್ನು ಕುರಿತವು. ಆದರೆ ಇವುಗಳಲ್ಲಿ ಗಾಂಧೀಜಿಯವರ ವಿಚಾರಗಳು ಹಾಸು ಹೊಕ್ಕಾಗಿವೆ: ಸ್ವಾತಂತ್ರ್ಯ ಸಂಗ್ರಾಮದ ಸಂಗತ ಘಟನೆ ವ್ಯಕ್ತಿಯೋಜನೆಗಳ ವಿವರಣೆ ಇದೆ. ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯ ಸಾಧನೆಯ ಜೊತೆಯಲ್ಲಿಯೇ ಸಾಮಾಜಿಕ, ಆರ್ಥಿಕ ಹಾಗೂ ಬೌದ್ಧಿಕ ಕ್ರಾಂತಿಗಳನ್ನು ತಂದರು. ಈ ಸಂಬಂಧವಾದ ಹಲವಾರು ವಿಚಾರಗಳು ಇಲ್ಲಿನ ಲೇಖನಗಳಲ್ಲಿ ನಿರೂಪಿತವಾಗಿವೆ. ಇದಲ್ಲದೆ ಗಾಂಧೀಜಿಯವರ ವ್ಯಕ್ತಿತ್ವದ ಪ್ರಭಾವಶಾಲಿಯಾದ ಚಿತ್ರವೊಂದನ್ನು ಕಣ್ಣಿಗೆ ಕಟ್ಟುವುದರಲ್ಲಿಯೂ ಕೃತಿ ಸಾರ್ಥಕವಾಗಿದೆ.

ಇಲ್ಲಿನ ಕೆಲವು ಲೇಖನಗಳಲ್ಲಿ ವ್ಯಕ್ತಿ–ವ್ಯಕ್ತಿತ್ವಗಳ ಪರಿಚಯವಿದೆ. ಮೊದಲನೆಯ ಲೇಖನದಲ್ಲಿಯೇ ಇಂಥದೊಂದು ಹೃದ್ಯ ಚಿತ್ರವಿದೆ. ಚೀನೀ ದಂಡನಾಯಕ ಕೈ ಷೇಕರ ಮತ್ತು ಗಾಂಧೀಜಿಯವರ ಭೇಟಿ, ಕೈ ಷೇಕ ದಂಪತಿಗಳ ಜೀವನದರ್ಶನ ಮತ್ತು ಕೈ ಷೇಕರ ನಾಯಕತ್ವ–ಕಾರ್ಯನೀತಿಗಳು ಈ ಬರೆಹದ ಮೂರು ಮುಖಗಳು. 'ಸಿಯಾಮ್ ಪ್ರಸಂಗ' ಒಂದು ಸ್ಮರಣೀಯ ಉಲ್ಲೇಖ. ಈ ಬಗೆಯ ಮತ್ತೊಂದು ಲೇಖನವಾದ 'ಜಮನಾಲಾಲಜಿ'ಯಲ್ಲಿ, ಜಮನಲಾಲರ ತ್ಯಾಗಜೀವನ, ಔದಾರ್ಯ, ಸತ್ಯನಿಷ್ಠೆ, ಸೇವಾಮನೋಭಾವ ಮೊದಲಾದವುಗಳ ರಮ್ಯ ಚಿತ್ರಣವಿದ್ದು, ಲೇಖನ ಒಂದು ಸಣ್ಣಕಥೆಯಂತೆ ಸಾಗುತ್ತದೆ. ಡಾಕ್ಟರ್ ಕಗಾವ ಮತ್ತು ಡಾಕ್ಟರ್ ಮಾಟ್‌ರ ಭೇಟಿಗೆ ಸಂಬಂಧಿಸಿದ ಎರಡು ಲೇಖನಗಳು ಚೆನ್ನಾಗಿವೆ. ಇವೆರಡರಲ್ಲಿಯೂ ಆಯಾಯ ವ್ಯಕ್ತಿಗಳನ್ನು ಕುರಿತ ಜೀವನ ಚರಿತ್ರೆಯ ಪಾರ್ಶ್ವಿಕ ನೋಟವಿದೆ; ಅವರಿಬ್ಬರೂ ಗಾಂಧೀಜಿಯವರೊಡನೆ ನಡೆಸಿದ ಸಂಭಾಷಣೆ ಒಂದು ಮನೋಹರ ಭಾಗ. ಇಂಥದೇ ಮಗುದೊಂದು ಲೇಖನ 'ಒಬ್ಬ ಬೌದ್ಧನೊಂದಿಗೆ ಸಂಭಾಷಣೆ.' ಇದರಲ್ಲಿ ಪ್ರಾರ್ಥನೆ, ಧ್ಯಾನ, ಕರ್ಮ ಮುಂತಾದ ಆತ್ಮವಿಕಾಸಕ ವಿಷಯಗಳನ್ನು ಕುರಿತಂತೆ ಡಾ. ಫಾಬ್ರಿಯವರು ಗಾಂಧೀಜಿಯವರೊಡನೆ ನಡೆಸಿದ ಸಂವಾದದ ಸಾರವಿದೆ. ಹಿಂದಿನ ಎರಡು ಲೇಖನಗಳಂತೆ ಇದೂ ಹೃದಯಸ್ಪರ್ಶಿಯಾಗಿದೆ, ಅಷ್ಟೇ ತಲಸ್ಪರ್ಶಿಯಾಗಿದೆ ಕೂಡ. 'ಕವಿಯ ಭೇಟಿ' ಸಾಬರಮತಿ ಆಶ್ರಮಕ್ಕೆ ರವೀಂದ್ರರು ಕೊಟ್ಟ ಭೇಟಿಯ ಬಗೆಗಿನ ಲೇಖನ. ಇದರಲ್ಲಿ ಟಾಗೂರರ ಮತ್ತು ಗಾಂಧೀಜಿಯವರ ನಡುವೆ ನಡೆದ ಸಂಭಾಷಣೆ, ಕವಿ ಮಾತಾಡಿದ ಬಗೆಬಗೆಯ ವಿಷಯಗಳೂ ನಿರೂಪಿತವಾಗಿವೆ. ನೆಲ–ಬಾನಿನ ಅಪ್ಪುಗೆಯನ್ನಿಲ್ಲಿ ಕಾಣುತ್ತೇವೆ: ಲೇಖನ ಕೆಲವೊಮ್ಮೆ ಭಾವಗೀತದಂತೆ ಭಾಸವಾಗುತ್ತದೆ. ಮೇಲೆ ಹೇಳಿದ ಲೇಖನಗಳು ಜೀವನ ಚರಿತ್ರೆಯ ಮಾದರಿಯವು. ಆದರೆ ಬಗೆಬಗೆಯ ಭಾಗಗಳು: ಇವರಲ್ಲಿ ದೇಸಾಯಿಯವರ ನಿರೂಪಕ ಶಕ್ತಿ, ಕಥನಕಲೆ, ಸಂವಾದ ಚತುರತೆಗಳು ಸೊಗಸಾಗಿ ವ್ಯಕ್ತಗೊಂಡಿವೆ.

ಕ್ಷೇತ್ರಗಳು ಅಥವಾ ಸ್ಥಳಗಳನ್ನು ಕೇಂದ್ರವಾಗಿಟ್ಟುಕೊಂಡ ಲೇಖನಗಳು ಕೆಲವು

ಇಲ್ಲಿವೆ. ಇವುಗಳಲ್ಲಿ ಒಂದೊಂದರಲ್ಲಿಯೂ ಪರಿಸರದ ಚಿತ್ರಣದೊಡನೆ ಸಮಸ್ಯೆಯ ಚರ್ಚೆಯೂ ಇರುತ್ತದೆ. ‘ಕಾಶೀ ವಿಶ್ವವಿದ್ಯಾಲಯ’, ‘ಋಷಿಕೇಶದ ಒಂದು ನೋಟ’, ‘ಹೊಸ ಡೆಲ್ಲಿಯ ಒಂದು ನೋಟ’ ಮತ್ತು ‘ಸಿಮ್ಲಾದಲ್ಲಿಯ ಬಡವರು’—ಈ ರೀತಿಯ ಲೇಖನಗಳಾಗಿವೆ. ಮೊದಲ ಲೇಖನದಲ್ಲಿ ಕಾಶಿಯ ಆಧ್ಯಾತ್ಮಿಕ ವಾತಾವರಣ, ಮಾಳವೀಯರ ದರ್ಶನ, ವಿದ್ಯಾಪೀಠದ ಸ್ಥಿತಿಗತಿ, ವಿದ್ಯಾರ್ಥಿಗಳ ಶಿಸ್ತು–ಐಕ್ಯ–ಕಾರ್ಯಶೀಲತೆ, ವಿದ್ಯಾವಿಧಾನ ಮೊದಲಾದ ವಿಚಾರಗಳ ಪ್ರಸ್ತಾಪವಿದೆ. ಆದರೆ ಇಲ್ಲಿ ನಮ್ಮ ಗಮನ ಸೆಳೆವ ಒಂದು ವಿಷಯವೆಂದರೆ, ಗಾಂಧೀಜಿಯವರು ಶಿಕ್ಷಣ ಮಾಧ್ಯಮವನ್ನು ಕುರಿತು ಹೇಳಿದ ಮಾತು: “ನಮಗೆ ನಮ್ಮ ಭಾಷೆಗಳ ಮೂಲಕ ಶಿಕ್ಷಣ ದೊರೆತಿದ್ದರೆ ಇಂದು ನಾವು ಏನಾಗಿರುತ್ತಿದ್ದೆವು? ಇಂದು ನಮ್ಮ ದೇಶ ಸ್ವತಂತ್ರವಾಗಿರುತ್ತಿದ್ದಿತು. ನಮ್ಮ ವಿದ್ಯಾವಂತರು ಈ ದೇಶದಲ್ಲಿ ಪರಕೀಯರಂತೆ ಇರಬೇಕಾಗುವದಿರಲಿಲ್ಲ.” (ಪುಟ ೧೮) ಇದು ಅಂದು ಎಷ್ಟು ಸತ್ಯವಾಗಿತ್ತೊ ಆವಶ್ಯಕವಾಗಿತ್ತೊ ಇಂದೂ ಅಷ್ಟೇ ಸತ್ಯವಾಗಿದೆ ಮತ್ತು ಆವಶ್ಯಕವಾಗಿದೆ. ಎರಡನೆಯದರಲ್ಲಿ ಲೇಖಕರು ಸಾಧು ಸನ್ಯಾಸಿಗಳ ನಿಷ್ಕ್ರಿಯತೆ ಮತ್ತು ಯಜ್ಞದ ನಿರರ್ಥಕತೆಯ ಕಡೆಗೆ ಗಮನ ಸೆಳೆಯುತ್ತಾರೆ. ಋಷಿಕೇಶದಲ್ಲಿ ನಡೆದ ಯಜ್ಞವೊಂದರಲ್ಲಿ ಭಾಗವಹಿಸಿದ್ದ ವಿವರಣೆ ಕೊಡುತ್ತ ದೇಸಾಯಿಯವರು “ಈಗ ಮಾಡುತ್ತಿರುವ ಯಜ್ಞ ಪೂರ್ಣವಾಗಿ ಅಪ್ರಯೋಜಕವಾದ ಪ್ರಾಚೀನ ಅವಶೇಷ” (ಪುಟ ೩೦) ಎಂದು ಹೇಳಿದುದಲ್ಲದೆ, “ಆ ಯಜ್ಞದಲ್ಲಿ ಭಾಗವಹಿಸಿದ್ದವರೂ ಪ್ರೇಕ್ಷಕರೂ ಧರ್ಮವೆಂಬ ಹೆಸರಿನಲ್ಲಿ ತಮ್ಮನ್ನೇ ತಾವು ಮೋಸಪಡಿಸಿಕೊಳ್ಳುತ್ತಿದ್ದರು.” (ಪುಟ ೩೧) ಎಂದೂ ಬರೆಯುತ್ತಾರೆ. ಮೂರನೆಯದರಲ್ಲಿ, ಲೇಖಕರು ಹೊಸಡೆಲ್ಲಿಯ ಗುಡಿಸುವವರ ಕೇರಿಗಳನ್ನು ಸಂದರ್ಶಿಸಿದಾಗ ಕಂಡ ಹೃದಯವಿದ್ರಾವಕ ದುಃಸ್ಥಿತಿಯ ಚಿತ್ರಣವಿದೆ. ಇಂದಿಗೂ ಇದು ಜೀವಂತ ಸಮಸ್ಯೆಯಾಗಿಯೇ ಉಳಿದಿದೆ. ಇದಕ್ಕೆ ಪರಿಸ್ಥಿತಿಗೆ ಹೊಂದಿಕೊಂಡಿರುವ ಅವರ ದೋಷ ಒಂದು ಕಾರಣವಾದರೆ, ಅವರನ್ನು ಸರಿಯಾಗಿ ನೋಡಿಕೊಳ್ಳದ ಇತರರ ಕರ್ತವ್ಯ ವಿಮುಖತೆ ಮತ್ತೊಂದು ಕಾರಣವಾಗುತ್ತದೆ. ಕಡೆಯದರಲ್ಲಿ ಸಿಮ್ಲಾದಲ್ಲಿನ ಬಡವರ, ಬಡತನದ ಚಿತ್ರವಿದೆ. ಇಲ್ಲಿನ ಇಬ್ಬರು ಮಿತ್ರರ ಕಥೆ ಭಾರತೀಯ ಬಡತನದ ಒಂದು ಪ್ರತಿನಿಧಿ ಮಾತ್ರ. ಒಬ್ಬ ಹೇಳುವ “ನಮ್ಮ ಅನಾರೋಗ್ಯದಿಂದ ನಿಮಗೆ ಆರೋಗ್ಯ ದೊರೆಯುತ್ತದೆ” (ಪುಟ ೧೬೩) ಎಂಬ ಮಾತು ಕಟುವಾದರೂ ಸತ್ಯವಾದುದಾಗಿದೆ. ಲೇಖನದ ಕೊನೆಯಲ್ಲಿ ಉದಾಹರಿಸಲಾಗಿರುವ ಸ್ಯಾಮುಯೆಲ್ ಜಾನ್‌ಸನ್‌ರ ಮಾತು ಇದಕ್ಕೊಂದು ಅರ್ಥವಂತಿಕೆಯನ್ನು ತಂದಿದೆ. ಅವರು ಬರೆಯುತ್ತಾರೆ: “ಜೀವನ ಕಹಿ. ಆ ಗುಳಿಗೆಗೆ ಸಕ್ಕರೆ ಸವರದೆ ನುಂಗುವುದು ಯಾರಿಗೂ ಸಾಧ್ಯವಿಲ್ಲ. ಆದರೆ ಬಡವರ ವಿಚಾರದಲ್ಲಿ ಆ ಸಕ್ಕರೆ ಪೂರ್ತ ತೆಗೆಯುವುದರಲ್ಲಿಯೇ ನಮಗೆ ಆನಂದ. ಅವರಿಗೆ ಕಹಿ ಸ್ವಲ್ಪ ಕಡಿಮೆಯಾದರೂ, ನಾವು ನಮ್ಮ ಅಸಮಾಧಾನ ತೋರಿಸುತ್ತೇವೆ. ನಮಗೆ ನಾಚಿಕೆಯೇ ಇಲ್ಲ.” (ಪುಟ ೧೬೪)

ಗ್ರಂಥದ ಇನ್ನು ಲೇಖನಗಳು ವಿಶೇಷ ಸಮಸ್ಯೆಗಳನ್ನು ಕುರಿತ ಬರೆದಂಥವುಗಳು. ಇವತ್ತಿಗೂ ಜ್ವಲಂತವಾಗಿಯೇ ಇರುವ ವರ್ಣದ್ವೇಷ ಇವುಗಳಲ್ಲಿ ಒಂದು. ‘ಅಮೇರಿಕನರ ವರ್ಣದ್ವೇಷ’, ‘ಬ್ರಿಟಿಷ್ ಮತ್ತು ಅಮೇರಿಕನರ ನಾಚಿಕೆ’—ಇವು ಈ ಬಗೆಯ ಎರಡು ಲೇಖನಗಳು. ಮೊದಲನೆಯದನ್ನು ನೀಗ್ರೋದವರನ್ನು ಅಮೇರಿಕ ನಡೆಸಿಕೊಂಡ ನಿದರ್ಶನದಿಂದಲೂ, ಎರಡನೆಯದನ್ನು ಡಾ. ಕಾರ್ವರ್ ಅವರ ಉದಾಹರಣೆಯಿಂದಲೂ ಬರೆಯಲಾಗಿದೆ. ಹರಿಜನ ಸಮಸ್ಯೆ ಮತ್ತೊಂದು. ಅಸ್ಪೃಶ್ಯತಾ ನಿವಾರಣೆಗಾಗಿ ಗಾಂಧೀಜಿಯವರು ಬಹಳ ಹೋರಾಡಿದರು. ಅವರ ಈ ಹೋರಾಟ ಸಾಮಾಜಿಕ ಕ್ರಾಂತಿಗೆ ಹೊಸ ಮುಖವನ್ನು ಜೋಡಿಸಿತು. ಇದನ್ನು ಕುರಿತ ‘ಒಂದು ವಿಷಾದದ ಪ್ರಸಂಗ’ ಎಂಬ ಲೇಖನದಲ್ಲಿ ಗಾಂಧೀಜಿಯವರು ಚರ್ಚಿಸಿದ ಕೆಲವು ವಿಚಾರಗಳ ಉಲ್ಲೇಖವಿದೆ. ಗಾಂಧೀಜಿಯವರು ಹೇಳುತ್ತಾರೆ: “ಅಸ್ಪೃಶ್ಯತಾ ನಿವಾರಣೆಯು ಅಹಿಂಸೆಯ ಅತ್ಯಂತ ದೊಡ್ಡ ಪ್ರಕಟನೆ. ಅಸ್ಪೃಶ್ಯತೆ ನಾಶವಾಗದಿದ್ದಲ್ಲಿ, ಹಿಂದೂ ಧರ್ಮವೇ ನಾಶವಾಗುವುದು ಒಳ್ಳೆಯದೆಂದು ನನ್ನ ನಿತ್ಯದ ಪ್ರಾರ್ಥನೆ.” (ಪುಟ ೧೦೮) ಇದರಲ್ಲಿ ಗಾಂಧೀಜಿಯವರ ಆತ್ಮಶಕ್ತಿಯನ್ನೂ ನೈತಿಕ ಸ್ಥೈರ್ಯವನ್ನೂ ಕಳಕಳಿಯ ಭಾವವನ್ನೂ ಉದಾರೇಚ್ಛೆಯನ್ನೂ ಪ್ರಬಲತರವಾಗಿ ಕಾಣಬಹುದು. ಈ ಲೇಖನದಲ್ಲಿ ಹೆಚ್ಚು ಪ್ರಸ್ತಾಪಿತವಾಗಿರುವುದು ಹರಿಜನರ ದೇವಾಲಯ ಪ್ರವೇಶವನ್ನು ಕುರಿತು. ದೇಸಾಯಿಯವರ ಪತ್ನಿ ಹರಿಜನ ಪ್ರವೇಶವಿರದ ಪುರಿ ದೇವಾಲಯಕ್ಕೆ ಹೋದುದರಿಂದ ಗಾಂಧೀಜಿಯವರಿಗೆ ಆದ ನೋವು, ದೇಸಾಯಿಯವರ ಪಶ್ಚಾತ್ತಾಪ—ಈ ಘಟನೆಯ ಮೇಲೆ ಬೆಳಕು ಬೀರಿವೆ. ಬಾಲ್ಯವಿವಾಹವನ್ನು ಕುರಿತ ವಿವರ ಪೂರ್ಣವಾದ ಲೇಖನವೊಂದು ಇದರಲ್ಲಿದೆ.

ಇವುಗಳಲ್ಲದೆ ಬಾಂಬು ಹಾಕುವುದು, ಅಪನಂಬಿಕೆಯ ಯುವಜನ, ತ್ಯಾಗದ ಬೆಲೆ, ಗ್ರಾಮಸಂಸ್ಕೃತಿಗೆ ವೇಗದಿಂದಾಗುವ ಪರಿಣಾಮ ಮೊದಲಾದವುಗಳನ್ನು ಕುರಿತ ಲೇಖನಗಳೂ ಇದರಲ್ಲಿವೆ. ಬ್ರಿಟಿಷರು ೧೯೪೨ರಲ್ಲಿ ಭಾರತದ ಗಡಿನಾಡಿನಲ್ಲಿ ಬಾಂಬು ಹಾಕಿದ ವರ್ತನೆಯನ್ನು ಕುರಿತು ಟೀಕಿಸಿ ಬರೆದ ಲೇಖನ ‘ಬಾಂಬು ಹಾಕಲು ಹಕ್ಕು’ ಎನ್ನುವುದು. ‘ಶ್ರದ್ಧೆ ನಂಬಿಕೆಗೆ ಸಂಚಕಾರ’ ಎಂಬ ಲೇಖನದಲ್ಲಿ ಶ್ರದ್ಧಾರಹಿತ ವಿದ್ಯಾರ್ಥಿ ಸಮೂಹದೊಂದಿಗೆ ನಡೆಸಿದ ಮಾತುಕತೆಯ ಸಾರವಿದೆ: ಚರ್ಚೆಯಲ್ಲಿ ಬಂದ ವಿಷಯಗಳನ್ನು ಕುರಿತ ವಿಶ್ಲೇಷಣಾತ್ಮಕ ವಿವರಣೆಗಳೊಡನೆ ಸತ್ಯ, ಅಹಿಂಸೆ, ಸರಳ ಜೀವನ ಮುಂತಾದವುಗಳ ಅರ್ಥವ್ಯಾಪ್ತಿಯನ್ನು ಕೊಡಲಾಗಿದೆ. ಸ್ವಾತಂತ್ರ್ಯ ಚಳವಳಿಯ ಕರೆಗೆ ಒಮ್ಮೆ ತ್ಯಾಗ ಮಾಡಿ, ಮತ್ತೊಮ್ಮೆ ಅದಕ್ಕೆ ಪ್ರತಿಫಲ ಕೇಳುವವರ ಸಮಸ್ಯೆಯನ್ನು ಕುರಿತು ‘ಹಿಂದಿನ ತ್ಯಾಗಕ್ಕೆ ಇಂದು ಬೆಲೆ’ ಎಂಬ ಲೇಖನದಲ್ಲಿ ಚೆನ್ನಾಗಿ ಆಲೋಚಿಸಿದ್ದಾರೆ. ಈ ವಿಚಾರವಾಗಿ ಬರೆಯುತ್ತ, “ತ್ಯಾಗವನ್ನು ಹಿಂದಕ್ಕೆ ತೆಗೆದು ಕೊಳ್ಳಲು ಸಾಧ್ಯವಿಲ್ಲ. ಇಂತಹ ಹಿಂದಕ್ಕೆ ತೆಗೆದುಕೊಳ್ಳುವ ತ್ಯಾಗದಿಂದ ಸ್ವಾತಂತ್ರ್ಯ ಬರುವುದಿಲ್ಲ” (ಪುಟ ೮೭) ಎಂದು ಹೇಳಿರುವುದು ಯಥೋಚಿತವಾಗಿದೆ: ಮಾತ್ರವಲ್ಲ, ಪರಿಸ್ಥಿತಿಯೊಂದರ ಕಡೆಗೆ ಗಮನ ಸೆಳೆಯುತ್ತದೆ. ಗ್ರಾಮಸಂಸ್ಕೃತಿಗೆ ವೇಗದಿಂದಾಗುವ

ಅಪಾಯವನ್ನು ‘ವೇಗವು ಗ್ರಾಮಸಂಸ್ಕೃತಿಗೆ ವಿರೋಧವಾದುದು’ ಎಂಬ ಲೇಖನದಲ್ಲಿ ವರ್ಣಿಸಲಾಗಿದೆ. ಬಡವರಿಗಾಗಿ ವಿಜ್ಞಾನದ ಉಪಯೋಗ ಮತ್ತು ಯಂತ್ರ ವಿಜ್ಞಾನ ದಿಂದ ಭೂಮಿಯ ಸಂಪರ್ಕವನ್ನು ಕಡಿದುಕೊಳ್ಳದೆ ಅದರ ನಿರಂತರ ಸಂಬಂಧವನ್ನು ಹೊಂದಿರಬೇಕಾದ ಅಗತ್ಯ—ಇವೆರಡು ಪ್ರಸ್ತುತ ಲೇಖನದ ಪ್ರಮುಖ ವಿಚಾರಗಳು.

ಮಹಾತ್ಮರ ಸಂಪರ್ಕದಿಂದ, ಅಂದಿನ ವಾತಾವರಣದ ಪ್ರಭಾವದಿಂದ ತಮ್ಮ ಪ್ರವೃತ್ತಿಗಳನ್ನು ಪರಿವರ್ತಿಸಿಕೊಂಡವರ ಕಥೆಗಳು ಹಲವಾರಿವೆ. ಈ ದೃಷ್ಟಿಯಿಂದ ‘ಒಂದು ಬದಲಾವಣೆಯ ಕಥೆ’ ಎಂಬ ಲೇಖನದಲ್ಲಿನ ವ್ಯಕ್ತಿಯೊಬ್ಬನ ಪರಿವರ್ತಿತ ಇತಿಹಾಸ ತುಂಬ ರೋಚಕವಾಗಿದೆ; ಸಣ್ಣ ಕಥೆಯ ಜಾಯಮಾನ ಅದಕ್ಕಿದೆ. ‘ಸೇವಾ ಗ್ರಾಮದ ಸುದ್ದಿಗಳು’ ಎಂಬ ಲೇಖನದಲ್ಲಿನ ಗೋರಕ್ಷಕ ಹರಿಜನ ವಿದ್ಯಾರ್ಥಿಯ ಜೀವನವೂ ಒಂದು ಅದ್ಭುತ ಕಥೆ. ಪ್ರಕೃತ ಕೃತಿಯ ರಮಣೀಯತೆಗೆ ಅಲ್ಲಲ್ಲಿ ಬರುವ ಹಾಸ್ಯ ಪ್ರಸಂಗಗಳೂ ಕಾರಣವಾಗುತ್ತವೆ. ‘ವಾರ್ಧಾಕ್ಕೆ ಅರ್ಹವಾದುದಲ್ಲ’ ಎಂಬ ಲೇಖನದ ಸಿಕ್–ಪಾರಸಿಯ ಸಂಭಾಷಣೆಗಳನ್ನು ಉದಾಹರಿಸಬಹುದು. ಜೊತೆಗೆ, ಡಾ. ಫಾಬ್ರಿ ಮತ್ತು ಗಾಂಧೀಜಿಯವರ ಸಂಭಾಷಣೆಯ ಕಡೆಯ ಭಾಗ ಮತ್ತು ಕಸ್ತೂರಿ ಬಾ ಹಾಗೂ ಗಾಂಧೀಜಿಯವರ ನಡುವಣ ಒಂದು ಸಂವಾದ, ಇವುಗಳನ್ನೂ ಗಮನಿಸಬಹುದು. ಹಾಸ್ಯದ ಹಿಂದೆಯೇ ಜೀವನದ ತಿಳಿವನ್ನೂ ಇವು ತಂದುಕೊಡುತ್ತವೆ. ಈ ಕೃತಿಯ ಕಡೆಯ ಲೇಖನವಾದ ‘ಸಾಮ್ರಾಜ್ಯವಾದಿಗಳ ಗ್ಯಾಂಗು’ ೧೯೪೨ರ ಆಗಸ್ಟ್ ೯ರ ‘ಹರಿಜನ’ ಪತ್ರಿಕೆಯಲ್ಲಿ ಪ್ರಕಟವಾದ ದೇಸಾಯಿಯವರ ಕೊನೆಯ ಲೇಖನವೆಂದು ಪ್ರಸಿದ್ಧವಾಗಿದೆ.

ಈ ಎಲ್ಲ ಲೇಖನಗಳಲ್ಲಿ ಗಾಂಧೀಜಿಯವರ ವಿಷಯ ಹಾಸುಹೊಕ್ಕಾಗಿರುವಂತೆ, ಮಹಾದೇವ ದೇಸಾಯಿಯವರೂ ವೈಯಕ್ತಿಕವಾಗಿ ಭಾಗವಹಿಸುವುದು ಕಂಡುಬರು ತ್ತದೆ. ಕೆಲವು ಲೇಖನಗಳಲ್ಲಂತು ಅವರ ಜೀವನ ಚಿತ್ರವೇ ಪ್ರಧಾನವಾಗುತ್ತದೆ. ‘ಒಂದು ವಿಷಾದದ ಪ್ರಸಂಗ’ ಮತ್ತು ‘ನಮ್ಮ ಕಾಲಕ್ಕೆ ನಾವು ದೇವರಿಗೆ ಹೊಣೆಗಾರರು’— ಎಂಬೆರಡು ಲೇಖನಗಳು ಈ ಬಗೆಯ ಬರೆಹಗಳಾಗಿದ್ದು, ಅತ್ಯಂತ ಸ್ವಾರಸ್ಯವಾಗಿ ಚಿತ್ರಿತವಾಗಿವೆ. ಇವೆರಡರಲ್ಲಿಯೂ ಗಾಂಧೀಜಿ ಮತ್ತು ದೇಸಾಯಿಯವರ ಹೃದಯ ಚೆನ್ನಾಗಿ ಮಿಡಿದಿದೆ. ಇಡೀ ಕೃತಿಯಲ್ಲಿ ಗಾಂಧೀಜಿಯವರ ಕಥೆ ಒಂದು ಕಡೆ ಕಂಡರೆ, ದೇಸಾಯಿಯವರ ಆತ್ಮಕಥೆಯೂ ಒಂದು ಕಡೆ ಬಿಚ್ಚಿಕೊಳ್ಳುತ್ತದೆ. ಒಟ್ಟಾರೆ, ದೇಶದ ಅಂದಿನ ಆಗುಹೋಗಿನ ಕಥೆಯಾಗುತ್ತದೆ. ಈ ಕಾರಣದಿಂದ ಪ್ರಕೃತ ಕೃತಿಯನ್ನು ಜೀವನ ಚರಿತ್ರೆಯ ಪ್ರಕಾರಕ್ಕೂ ಸೇರಿಸಬಹುದಾಗಿದೆ.

ಕೃತಿಯ ಉದ್ದಕ್ಕೂ ಉಕ್ತಗೊಂಡಿರುವ ಹಲವಾರು ಚಿಂತನೆಗಳು ಮುಕ್ತಕರೂಪದ ಮಾತುಗಳಾಗಿ ಕೃತಿಯ ಮಹತ್ತನ್ನು ಸಾರುತ್ತವೆ; ಲೇಖಕರ ಸೃಷ್ಟ್ಯಾತ್ಮಕ ಶಕ್ತಿಗೂ ಸಾಕ್ಷಿಯಾಗಿವೆ. ಇಂತಹ ಮಾತುಗಳಲ್ಲಿ ಕೆಲವನ್ನಿಲ್ಲಿ ಉದಾಹರಿಸಬಹುದು: “ಸಾವಿರ ಜನ ಬೇಕಾದರೂ ಸಾಯಲಿ ಆದರೆ ಆ ಸಾವಿರ ಜನರ ಪೋಷಕ ಸಾಯುವುದು ಬೇಡ.”:

"ಅಹಿಂಸೆಯಲ್ಲಿ ಅಲ್ಲ ಸತ್ಯಾಗ್ರಹವು, ಸತ್ಯದಲ್ಲಿದೆ ಅಹಿಂಸೆ": "ಪ್ರಯತ್ನದ ರಾಜ್ಯಕ್ಕೆ ನಾವೇ ರಾಜರು, ಫಲದ ರಾಜ್ಯಕ್ಕೆ ದೇವರೇ ರಾಜ": "ಹಣದ ಬಲ ಕೊನೆಯ ಗಳಿಗೆಯಲ್ಲಿಯೇ ಆತ್ಮಶಕ್ತಿಯ ದಿವಾಳಿಯಾಗುವುದು"; "ಪ್ರಾರ್ಥನೆ ಬಾಯಿನ ಸ್ವಗತ ಭಾಷಣವಲ್ಲ, ಅದು ಈಶ್ವರ ಸಂಭಾಷಣೆ." "ಇವುಗಳಲ್ಲಿ ಕೆಲವು ಗಾಂಧೀಜಿಯವರ ಸಂಭಾಷಣೆಯಿಂದ ಉದಾಹರಿಸಿದವುಗಳಾಗಿವೆ. ಗಾಂಧೀಜಿಯವರ ಸಂಭಾಷಣೆಗಳನ್ನು ಯಥಾವತ್ತಾಗಿ ಚಿತ್ರಿಸುವುದರಲ್ಲಿ ದೇಸಾಯಿಯವರಿಗಿಂತ ಮಿಗಿಲಾದವರು ಇರಲಾರರು. ಅವರ ಹಾಗೆ ಗಾಂಧೀಜಿಯವರನ್ನು ಅರಿತವರೂ ಸೇವಿಸಿದವರೂ ವಿರಳ.

ದೇಸಾಯಿಯವರ ಈ ಲೇಖನಗಳು ಪ್ರಾಸ್ತಾವಿಕ ಪತ್ರಿಕೆಗಳಲ್ಲಿ ಬರುತ್ತಿದ್ದಂತೆಯೇ ಅಸಂಖ್ಯಾತ ಓದುಗರನ್ನು ಆಕರ್ಷಿಸುತ್ತಿದ್ದುವಲ್ಲದೆ, ವಿಚಾರಪರರನ್ನಾಗಿಯೂ ಮಾಡುತ್ತಿದ್ದುವು. ಸ್ವಾತಂತ್ರ್ಯೋತ್ತರ ಪೀಳಿಗೆಯ ಜನರಿಗೆ ಸ್ವಾತಂತ್ರ್ಯಪೂರ್ವದ ಸಂಸ್ಕೃತಿಯನ್ನು ಪರಿಚಯಿಸಿಕೊಡುವುದರಲ್ಲಿ ಕೃತಿ ಪರಿಣಾಮಕಾರಿಯಾಗುತ್ತದೆ. ದೇಸಾಯಿಯವರ ಸ್ಮರಣಶಕ್ತಿ, ಬರವಣಿಗೆ ಕಲೆ ಅಗಾಧವಾದುದು. ಶುದ್ಧವಾದ ಇಂಗ್ಲಿಷ್ ಬರವಣಿಗೆ ಅವರದು. ಸರಳವಾದ ಭಾಷೆ; ಹೃದ್ಯವೂ ಮೋಹಕವೂ ಆದ ಶೈಲಿ: ಸ್ಥೂಲ ರೇಖೆಯಲ್ಲಿಯೇ ಸಮಸ್ತ ವಸ್ತುವನ್ನು ತುಂಬುವ ಚಿತ್ರಕಶಕ್ತಿಗಳು ಇವುಗಳಲ್ಲಿ ಇರುತ್ತಿದ್ದು, ಒಟ್ಟಾರೆ ಸಾಹಿತ್ಯಿಕ ಪರಿಣಾಮವನ್ನು ಉಂಟುಮಾಡುತ್ತಿದ್ದುವು. ಕನ್ನಡದ ಅನುವಾದದಲ್ಲಿಯೂ ಇವು ಯಥೋಚಿತವಾಗಿ ಒಡಮೂಡಿವೆ.

ಈ ಗ್ರಂಥದ ಕೆಲವು ಲೇಖನಗಳು ಮೂಲದ ಯಥಾವತ್ತಾದ ಅನುವಾದಗಳಾದರೆ, ಇನ್ನು ಕೆಲವು ಭಾವಾನುವಾದಗಳೆನಿಸಿವೆ. ಕನ್ನಡದಲ್ಲಿಯೆ ಮೊದಲು ಬರೆದಂತೆನಿಸುವಷ್ಟರಮಟ್ಟಿಗೆ ಇವು ಮೂಲಾನುಸಾರಿಯಾಗಿವೆ, ಮೂಲವನ್ನು ಓದಿದಷ್ಟೇ ಅನುಭವವಾಗುತ್ತದೆ. ಅಲ್ಲಿನ ಸರಳತೆ, ಖಚಿತತೆ, ನಿರರ್ಗಳತೆಗಳು ಕನ್ನಡ ಭಾಷಾಂತರದಲ್ಲಿಯೂ ಕಂಡುಬರುತ್ತವೆ. ಇದರಲ್ಲಿ ಬಳಕೆಗೊಂಡಿರುವ ಭಾಷಾಶೈಲಿಗಳು ಓದಿಸಿಕೊಂಡು ಹೋಗುವ ಗುಣವನ್ನು ಪಡೆದಿದ್ದು, ಗೊರೂರರು ಶ್ರೇಷ್ಠ ಅನುವಾದಕರೆನ್ನುವುದನ್ನು ಸಾಬೀತು ಪಡಿಸುತ್ತವೆ. ಒಟ್ಟು ಸ್ವರೂಪದಲ್ಲಿ ಅನುವಾದ ಯಶಸ್ವಿಯಾಗಿದೆ: ಈ ಬಗೆಯ ಸಾಹಿತ್ಯ ಪ್ರಕಾರಕ್ಕೆ ಇದೊಂದು ಉತ್ತಮ ಕೊಡುಗೆಯಾಗಿದೆ. ಗೊರೂರರ ಅಸ್ಖಲಿತ ಬರವಣಿಗೆ ಅನುವಾದದಲ್ಲಿಯೂ ಶಕ್ತಿಯುತವಾಗಿ ಪ್ರವಹಿಸಿದೆ.

‘ಮದ್ಯಪಾನದಿಂದ ವಿಮೋಚನೆ’

ಹ. ಕ. ರಾಜೇಗೌಡ

ಮದ್ಯಪಾನ ಪ್ರಾಯಃ ಮಾನವನ ಉಗಮದ ಚರಿತ್ರೆಯಷ್ಟೇ ಹಳೆಯದೆಂದು ತೋರುತ್ತದೆ. ಈಗ ಉಪಲಬ್ಧವಿರುವ ಅತ್ಯಂತ ಪ್ರಾಚೀನ ಕೃತಿಗಳಲ್ಲಿ, ಸಂಸ್ಕೃತಿ ಸ್ವರೂಪವಾದ ಪ್ರಾಚೀನ ದೇವಾಲಯಗಳಲ್ಲಿ ಕೆತ್ತಲಾಗಿರುವ ಚಿತ್ರಗಳಲ್ಲಿ ಕಡೆಗೆ ಶಾಸ್ತ್ರ ಪುರಾಣಗಳಲ್ಲಿ ಕುಡಿತದ ಕೆಡಕುಗಳ ಬಗ್ಗೆ ಉದಾಹರಣೆಗಳು ದೊರೆಯುತ್ತವೆ. ಅಂದ ಮೇಲೆ ಮದ್ಯಪಾನದಿಂದ ಆಗುತ್ತಿದ್ದ ಕೆಡಕುಗಳು ಎಷ್ಟು ಮೊತ್ತದಲ್ಲಿದ್ದಿರಬೇಕೆಂದು ಊಹಿಸಬಹುದು. ಯಾವುದೇ ಪ್ರಸಂಗ ಅತಿಯಾದಾಗ ಮಾತ್ರ ಅದರಿಂದ ವಿಮೋಚನೆಯ ಮಾರ್ಗ ಹುಡುಕುವುದು ಅದರಿಂದ ಉಂಟಾಗುವ ತೊಂದರೆ ಅನುಭವಿಸುವವರ ಪದ್ಧತಿ ಎಂದು ಕಾಣುತ್ತದೆ. ಈ ಮದ್ಯಪಾನ ಮೊದಲು ಹುಟ್ಟಿದ ಸ್ಥಳ ಯಾವುದು ಎಂಬ ಬಗ್ಗೆ ನಿಖರವಾಗಿ ಹೇಳುವಂತಿಲ್ಲ. ಇದು ಚೀನಾ, ಈಜಿಪ್ಟ್, ಪರ್ಶಿಯ, ಭಾರತ ಹೀಗೆ ಅತ್ಯಂತ ಪ್ರಾಚೀನ ಸಂಸ್ಕೃತಿಯುಳ್ಳ ಎಲ್ಲಾ ದೇಶಗಳಲ್ಲಿ ಬೇರುಬಿಟ್ಟುಕೊಂಡಿರುವಂತೆ ತೋರುತ್ತದೆ. ಭಾರತದಲ್ಲಿಯಂತೂ ಅತ್ಯಂತ ಪ್ರಾಚೀನ ಕಾಲದಿಂದ ಮದ್ಯಪಾನ ಜಾರಿಯಲ್ಲಿತ್ತು ಎಂಬುದಕ್ಕೆ ವಿಪುಲವಾದ ಉದಾಹರಣೆಗಳುಂಟು. ಹುಡುಕುತ್ತಾ ಹೊರಟರೆ ಪಾನಮತ್ತ ದೇವತೆಗಳೇ ನಮಗೆದುರಾಗುತ್ತಾರೆ. ಇನ್ನು ಮನುಷ್ಯನ ಮಾತೇಕೆ! ಆದರೆ ಉದ್ದಕ್ಕೂ ಸಾತ್ವಿಕರು ಈ ಕೆಟ್ಟ ಪದ್ಧತಿಯನ್ನು ತಪ್ಪಿಸಲು ಜತೆ ಜತೆಗೇ ಹೋರಾಟ ನಡೆಸಿರುವುದನ್ನು ಗಮನಿಸಬಹುದು.

ಮದ್ಯಪಾನ ಏಕೆ? ಹೇಗೆ? ಆರಂಭವಾಯಿತೆನ್ನುವ ಬಗ್ಗೆ ನಿಖರವಾದ ಆಧಾರಗಳು ದೊರೆಯುವುದಿಲ್ಲ. ಈ ಹೊತ್ತಿಗೂ ಅದನ್ನು ಪಾನ ಮಾಡುವ ಜನರ ಅಧ್ಯಯನದ ಆಧಾರದಿಂದ ಹೇಳುವುದಾದರೆ ಮನಶ್ಶಾಂತಿಯನ್ನು ಕಳೆದುಕೊಂಡವರು ಒಟ್ಟಿನಲ್ಲಿ ಈ ದುರಭ್ಯಾಸಕ್ಕೆ ಬಲಿಯಾಗಿರುವುದೇ ಹೆಚ್ಚು. ಆದುದರಿಂದ ಎಂದೋ ಒಂದು ದಿನ ತನ್ನ ಲೌಕಿಕ ತೊಂದರೆಗಳನ್ನು ಮರೆಯಲು ಮನುಷ್ಯನೊಬ್ಬ ಇಂಥದೊಂದು ಮಾಧ್ಯಮ

ವನ್ನು ಕಂಡುಕೊಂಡಿದ್ದಾನೆ. ಅನಂತರ ಅದರ ಸೋಂಕು ಕ್ರಮೇಣ ಅನೇಕರಿಗೆ ಹಬ್ಬಿತು. ಇದು ರಹಸ್ಯವಾಗಿ ಆರಂಭವಾಗಿ, ಕ್ರಮೇಣ ಸಮಾಜದ ಅನೇಕ ಅಂಗಗಳಲ್ಲಿ ಬೇರುಬಿಟ್ಟು ಅನಾಹುತ ಪರಂಪರೆಗಳು ಆರಂಭವಾದಾಗ ಸರ್ಕಾರ, ಸಮಾಜ ಎಚ್ಚತ್ತು ಕಣ್ಣು ಹಾಯಿಸಿ ಅದನ್ನು ತಡೆಗಟ್ಟಲು ಯತ್ನಿಸಬೇಕು. ಅಂತಹ ಉದಾಹರಣೆಗಳು ನಮಗೆ ಋಗ್ವೇದದಿಂದ ಹಿಡಿದು ಇಲ್ಲಿಯವರೆಗೆ ಲೆಕ್ಕವಿಲ್ಲದಷ್ಟು ದೊರೆಯುತ್ತವೆ. ಒಂದು ಕಡೆ ಮದ್ಯಪಾನ ನಿರೋಧದ ಕಾನೂನು ಆಡಳಿತಾಂಗದಿಂದ ಇದನ್ನು ತಡೆಯುವ ಯತ್ನವಾದರೆ ಮತ್ತೊಂದು ಕಡೆ ಸಾಹಿತಿ, ಸಾತ್ವಿಕ, ಉದಾರ ಈ ಕೆಟ್ಟ ಚಟದ ಅನಾಹುತ ಪರಂಪರೆಗಳನ್ನೆಲ್ಲಾ ವಿವರಿಸಿ ಅದರಿಂದ ಜನರು ದೂರವಿರುವಂತೆ ಮಾಡಲು ಪ್ರಯತ್ನಿಸುತ್ತಾನೆ. ಅಂತಹ ಒಂದು ಪ್ರಾಮಾಣಿಕ ಪ್ರಯತ್ನ ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಮದ್ಯಪಾನದಿಂದ ವಿಮೋಚನೆ' ಎಂಬ ಕೃತಿ.

ಭಾರತಕ್ಕೆ ಪಾಶ್ಚಾತ್ಯರ ಆಗಮನ ಮದ್ಯಪಾನಾಸಕ್ತರಿಗೆ ಒಂದು ರೀತಿಯಲ್ಲಿ ವರವಾಯಿತೆನ್ನಬೇಕು. ನಮ್ಮಲ್ಲಿದ್ದ ಒರಟು ರೀತಿಯ ಮದ್ಯಗಳ ಜೊತೆಗೆ ಅವರ ಅತ್ಯಾಧುನಿಕ ಬೀರ್, ರಮ್, ವಿಸ್ಕಿ, ಬ್ರಾಂದಿಗಳೂ ಸೇರಿಕೊಂಡವು. ಇದರಿಂದ ಅವರಿಗೆ ಆದಾಯ ಬರತೊಡಗಿತು. ಭಾರತದ ಹಣ ಚಿನ್ನದ ರೂಪದಲ್ಲಿ ವಿದೇಶಗಳಿಗೆ ಗುಳೇ ಹೋಯಿತು. ಆದರೆ ಇದನ್ನು ತಡೆಯುವವರು ಯಾರು? ಬ್ರಿಟಿಷರಿಗೆ ಇದನ್ನು ತಡೆಯುವ ಯೋಚನೆ ಇರಲಿಲ್ಲ. ಕಾರಣ ಅವರಿಗೆ ಭಾರತೀಯರ ಆರೋಗ್ಯಕ್ಕಿಂತ ಆದಾಯ ಮುಖ್ಯವಾಗಿತ್ತು. ಹೀಗಾಗಿ ಮದ್ಯಪಾನ ಭಾರತದಲ್ಲಿ ಸರ್ವತೋಮುಖವಾಗಿ ಬೆಳೆಯಲಾರಂಭಿಸಿತು. ಬೆಳಗಿನಿಂದ ಸಂಜೆಯವರೆಗೆ ಬೆವರು ಸುರಿಸಿ ದುಡಿದ ಕೂಲಿಯನ್ನು ಹೆಂಡದ ಅಂಗಡಿಗೆ ಹಾಕಿ ಮನೆಗೆ ಹೋಗಲಾರಂಭಿಸಿದ ಕಾರ್ಮಿಕ. ಅವನ ಹೆಂಡತಿ ಮಕ್ಕಳಿಗೆ ಉಪವಾಸ. ಅಷ್ಟೇ ಆಗಿದ್ದರೆ ಬಾಧಕವಿರಲಿಲ್ಲ. ಕುಡಿದು ಬಂದವನಿಂದ ಮನೆಯಲ್ಲಿ ಅನಾಹುತ. ಹೆಂಡತಿಯನ್ನು ಕೊಂದ, ಮಕ್ಕಳನ್ನು ಕತ್ತು ಹಿಸುಕಿ ಕೊಂದ ಪಾನಮತ್ತರ ಕಥೆ ಭಯಂಕರ. ಇಂತಹ ಪರಿಸ್ಥಿತಿಯ ಬಗ್ಗೆ ವ್ಯವಸ್ಥಿತವಾದ ಹೋರಾಟ ನಡೆಸಲು ಟೊಂಕ ಕಟ್ಟಿದವರು ಗಾಂಧೀಜಿ. ಅವರು ಮದ್ಯಪಾನದಿಂದ ಆಗುವ ವಿಪತ್ ಪರಂಪರೆಯನ್ನು ಕುರಿತು ಭಾಷಣ ಮಾಡಿದರು, ಲೇಖನ ಬರೆದರು. ಈ ಮಹತ್ಕಾರ್ಯದಲ್ಲಿ ಅನೇಕರು ಗಾಂಧೀಜಿಯವರನ್ನು ಅನುಸರಿಸಿದರು. ಮದ್ಯಪಾನದ ಕೆಡುಕುಗಳನ್ನು ಕುರಿತ ಪುಸ್ತಕಗಳು ಪ್ರಕಟವಾದುವು.

ಬಂಗಾಳದ ಗೌರ್ನರ್ ಆಗಿದ್ದ ಎಚ್. ಸಿ. ಮುಖರ್ಜಿಯವರ *Prohibition Why?* ಎಂಬ ಇಂಗ್ಲಿಷ್ ಗ್ರಂಥದ ಆಧಾರದ ಮೇಲೆ 'ಮದ್ಯಪಾನದಿಂದ ವಿಮೋಚನೆ' ಎಂಬ ತಮ್ಮ ಕೃತಿ ರಚಿಸಿರುವುದಾಗಿ ಗೊರೂರರು ಹೇಳಿಕೊಂಡಿದ್ದಾರೆ. ಮುಖರ್ಜಿಯವರ ಕೃತಿ ಗಾತ್ರದಲ್ಲಿ ಇದಕ್ಕಿಂತ ದೊಡ್ಡದು. ಅವರು ಪ್ರಪಂಚದ ದೊಡ್ಡ ದೊಡ್ಡ ವೈದ್ಯರ, ಸಾಹಿತಿಗಳ, ರಾಜಕಾರಣಿಗಳ, ಸಮಾಜ ಸುಧಾರಕರ ಅಭಿಪ್ರಾಯಗಳನ್ನೆಲ್ಲಾ ಸಂಗ್ರಹಿಸಿ ಕೃತಿ ರಚಿಸಿದ್ದಾರೆ. ಮದ್ಯಪಾನದ ಬಗೆಗಿನ ಎಲ್ಲ ರೀತಿಯ ವಾದ ವಿವಾದ

ಗಳಿಗೂ ಆಯಾ ವಿಷಯದಲ್ಲಿ ಪರಿಣತರಾದವರ ಹೇಳಿಕೆಗಳೊಂದಿಗೆ ಉತ್ತರ ಕೊಡಲಾಗಿದೆ. ಇಂತಹ ಒಂದು ಗ್ರಂಥದ ಸಾರ ಸಂಗ್ರಹ ಮಾಡಿಕೊಟ್ಟು ಗೊರೂರರು ಕನ್ನಡಿಗರಿಗೆ ಉಪಕರಿಸಿದ್ದಾರೆ. ಗಾಂಧೀಜಿಯವರ ಕೃತಿಗಳ ಅನುವಾದಗಳನ್ನು ಬಿಟ್ಟರೆ, ಮದ್ಯಪಾನದ ಅನಾಹುತಗಳನ್ನು ವಿವರಿಸುವ ಮತ್ತೊಂದು ಕೃತಿ ಕನ್ನಡದಲ್ಲಿ ಇಲ್ಲವೆಂದೇ ಹೇಳಬಹುದು. ಈ ದೃಷ್ಟಿಯಿಂದ ಗೊರೂರರ ‘ಮದ್ಯಪಾನದಿಂದ ವಿಮೋಚನೆ’ ಕನ್ನಡದಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತದೆ. ಕನ್ನಡ ಓದಬಲ್ಲವನಿಗೆ ಮದ್ಯದಿಂದ ಆಗುವ ಅನಾಹುತ ಪರಂಪರೆಗಳನ್ನು ಮನಮುಟ್ಟುವಂತೆ ವಿವರಿಸುತ್ತದೆ.

ಗೊರೂರರು ಕಟ್ಟಾ ಗಾಂಧೀವಾದಿ. ಭಾರತೀಯ ಸಂಸ್ಕೃತಿಯ ಸಕಲ ಉತ್ತಮ ಗುಣಗಳನ್ನು ಹೊಂದಿರುವವರು. ಹೀಗಾಗಿ ಈ ಕೃತಿಯಲ್ಲಿ ಅವರು ಮದ್ಯಪಾನ ನಮ್ಮ ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಜೀವನದ ಮೇಲೆ ಬೀರಬಹುದಾದ ದುಷ್ಪರಿಣಾಮಗಳನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿಕೊಟ್ಟಿದ್ದಾರೆ. ನಿಜಲಿಂಗಪ್ಪನವರು ಹೇಳಿರುವಂತೆ, “ಬರಿಯ ಕಾನೂನಿನಿಂದ ಮಾತ್ರವೇ ಈ ಕಾರ್ಯ ಸಾಧ್ಯವಲ್ಲ. ಮಾದಕವಸ್ತು ಸೇವನೆಯಿಂದ, ಮನುಷ್ಯನಿಗೆ ಉಂಟಾಗುವ ನಾನಾ ಅಪಾಯಗಳು ನಮ್ಮ ಜನತೆಗೆ ಚೆನ್ನಾಗಿ ಮನವಟ್ಟಾಗಬೇಕು. ಇದು ಸಮಾಜ ಕಲ್ಯಾಣ ಕಾರ್ಯದ ಬಹು ದೊಡ್ಡ ಭಾಗ. ಇಂತಹ ಮನಃಪರಿವರ್ತನೆಗೆ ಈ ಗ್ರಂಥ ತುಂಬಾ ಸಹಾಯವಾಗುವುದು.” (ಎರಡು ಮಾತು, ಪುಟ ೧) ಈ ದೃಷ್ಟಿಯಿಂದ ಈ ಕೃತಿ ಸಮಾಜ ಕಲ್ಯಾಣ ಕಾರ್ಯಕರ್ತರಿಗೆ ಕೈಪಿಡಿಯಂತಿದೆ. ಅನೇಕ ಮಟ್ಟದ ಮಕ್ಕಳು ಸಹ ಓದಿ ಮದ್ಯದಿಂದಾಗುವ ಅನೇಕ ರೀತಿಯ ಕೆಡಕುಗಳನ್ನು ಅರಿಯಲು ಸಹಾಯಕವಾಗಿದೆ. ಇದರ ಉಪಯೋಗ ಪಡೆದುಕೊಳ್ಳುವುದು ಕನ್ನಡಿಗರ ಕರ್ತವ್ಯವಾಗಿದೆ.

ಮದ್ಯಪಾನ ಸಮಾಜಕ್ಕೆ ಉಂಟುಮಾಡುವ ಕೆಡಕುಗಳು ಅನೇಕ. ಮದ್ಯವನ್ನು ಸೇವಿಸಿದ ವ್ಯಕ್ತಿ ತನ್ನ ಮನಸ್ಸಿನ ಮೇಲಿನ ಹಿಡಿತ ಕಳೆದುಕೊಂಡು ಸಮಾಜಕಂಟಕನಾಗುತ್ತಾನೆ. “ಮದ್ಯಪಾನ ಸಮಸ್ಯೆಯು ಒಂದು ಬೆಳೆಯುತ್ತಿರುವ ಸಾಮಾಜಿಕ ದುಷ್ಟ ಪದ್ಧತಿ. ರಾಜ್ಯವು ತನಗೆ ಅವಕಾಶ ಸಿಕ್ಕಿದಾಗ ಇದನ್ನು ತೊಡೆದುಹಾಕಲು ಪ್ರಯತ್ನಮಾಡಲೇಬೇಕು. ಇದರ ಉದ್ದೇಶ ಸರ್ವವಿದಿತ. ಇದರ ಹಾನಿಯಿಂದ ಕೂಲಿಗಾರರನ್ನೂ ಮತ್ತು ಹರಿಜನರನ್ನೂ ತಪ್ಪಿಸಬೇಕೆಂಬುದು ನಮ್ಮ ಉದ್ದೇಶ. ಇದೊಂದು ಮಹಾ ಸಮಸ್ಯೆ.”[1] ಈ ಮಹಾ ಸಮಸ್ಯೆಯ ನಿವಾರಣೆಗೆ ಗಾಂಧೀಜಿ ಸತತವಾಗಿ ಹೋರಾಡಿದರು. ಮದ್ಯಪಾನದಿಂದಾಗುವ ಕೆಡಕುಗಳು ರಾಷ್ಟ್ರವನ್ನೇ ನಾಶಮಾಡಬಹುದು. “ಯಾವ ದೇಶ ಕುಡಿತದ ಅಭ್ಯಾಸಕ್ಕೆ ತುತ್ತಾಗಿದೆಯೊ ಆ ದೇಶಕ್ಕೆ ವಿನಾಶವಲ್ಲದೆ ಬೇರೆ ಗತಿಯಿಲ್ಲ. ಈ ಅಭ್ಯಾಸಕ್ಕೆ ತುತ್ತಾದ ಚಕ್ರಾಧಿಪತ್ಯಗಳು ನಾಶವಾಗಿರುವುದನ್ನು ಚರಿತ್ರೆ ತೋರಿಸುತ್ತದೆ. ನಮ್ಮ ದೇಶದಲ್ಲಿಯೇ ಶ್ರೀಕೃಷ್ಣನ ಕುಲದವರಾದ

[1] ‘ಸಮಾಜ ಧರ್ಮ’, ಪುಟ ೨೫೧

ಬಡವರು ಇದರಿಂದ ನಾಶ ಹೊಂದಿದರು. ಈ ಪ್ರಾಚೀನ ದುಶ್ಚಟವು ಹಲವು ದೇಶದ ವಿನಾಶ ಕಾರಣಗಳಲ್ಲಿ ಒಂದೆಂಬುದು ನಿಸ್ಸಂದೇಹ."[1] ಹೀಗೆ ಮದ್ಯಪಾನ ಸಮಾಜಕ್ಕೆ ಕೆಡಕನ್ನುಂಟುಮಾಡುತ್ತದೆ.

ಗೊರೂರರು ಗ್ರಂಥದ ಆದಿ ಭಾಗದಲ್ಲಿ ಗಾಂಧೀಜಿ, ನೆಹರೂ, ರಾಜಾಜಿ, ಸಿ. ಪಿ. ರಾಮನ್ ಮುಂತಾದವರು ಮದ್ಯಪಾನದ ಬಗ್ಗೆ ನುಡಿದಿರುವ ಹೇಳಿಕೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. "ನಾನೊಂದು ಗಂಟೆ ಅಖಿಲ ಭಾರತದ ಸರ್ವಾಧಿಕಾರಿಯಾದರೆ, ನಾ ಮಾಡುವ ಪ್ರಥಮ ಕಾರ್ಯ ಈ ರೀತಿ ಇದ್ದೀತು: ಯಾವ ಪರಿಹಾರವನ್ನೂ ಕೊಡದೆ ಎಲ್ಲಾ ಪಾನಮಂದಿರಗಳನ್ನೂ ನಿಲ್ಲಿಸುವೆನು. ಗುಜರಾತಿನಲ್ಲಿ ಇರುವಂಥ ಹೆಂಡ ಕೊಡುವ ತಾಳೆವೃಕ್ಷಗಳನ್ನು ನಾಶ ಮಾಡಿಸುವೆನು. ಎಲ್ಲ ಗಿರಣಿ ಮಾಲೀಕರೂ ತಮ್ಮ ಕಾರ್ಮಿಕರಿಗೆ ಮನೋರಂಜನೆ ಮತ್ತು .... ವಿನೋದಗಳನ್ನು ಒದಗಿಸಲು ಒತ್ತಾಯ ಮಾಡುತ್ತೇನೆ. ಗಿರಣಿ ಮಾಲೀಕರು ಧನಾಭಾವದ ಕಾರಣವನ್ನು ಎತ್ತಿದರೆ, ಗಿರಣಿಗಳನ್ನೇ ಮುಚ್ಚಿಬಿಡುತ್ತೇನೆ. ನಾನೇ ಸಂಪೂರ್ಣವಾಗಿ ಪಾನವರ್ಜಕನಾದುದರಿಂದ, ಒಂದೇ ಗಂಟೆಯ ಕಾಲ ಸರ್ವಾಧಿಕಾರಿಯಾದರೂ ನನ್ನ ಅಸ್ವಸ್ಥ ಸ್ಥಿತಿಯನ್ನು ಕಾಪಾಡಿಕೊಂಡು ವೈದ್ಯಕೀಯ ಕಾರಣಗಳಿಗಾಗಿ ಬ್ರಾಂದಿ ಮುತ್ತಿತರ ಪಾನೀಯಗಳನ್ನು ಅಪೇಕ್ಷಿಸುವ ನನ್ನ ಯುರೋಪ್ಯ ಮತ್ತು ಇತರ ರೋಗಗ್ರಸ್ತ ಗೆಳೆಯರಿಗೆ ಅವು ಸರ್ಕಾರದ ವೆಚ್ಚದಿಂದಲೇ ಪರಿಣತ ವೈದ್ಯರಿಂದ ದೊರೆಯುವಂತೆ ಮಾಡುವೆನು."[2] ಗಾಂಧೀಜಿಯವರ ಈ ಒಂದೊಂದು ಮಾತಿನಲ್ಲಿಯೂ ಮದ್ಯಪಾನ ಉಂಟು ಮಾಡುತ್ತಿರುವ ತೀವ್ರ ಹಾನಿಯ ಬಗ್ಗೆ ಕಳಕಳಿ ತುಂಬಿದೆ. ಗೊರೂರರು ಇಂತಹ ಉಪಯುಕ್ತವಾದ ಅನೇಕ ಹೇಳಿಕೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಉದಾಹರಣೆಗೆ ಪ್ರಸಿದ್ಧ ವಿಜ್ಞಾನಿ ಸರ್. ಸಿ. ವಿ. ರಾಮನ್ ಅವರ "ಆಲ್ಕೊಹಾಲ್ ಮತ್ತು ನಿಕೋಟಿನ್ ಇವು ಮನುಷ್ಯನಿಗೆ ಈ ವರೆಗೆ ತಿಳಿದಿರುವ ವಿಷಗಳಲ್ಲಿ ಅತ್ಯಂತ ಕ್ರೂರವಾದುವು. ಇವನ್ನು ನಾವು ಎಂದೂ ಮರೆಯಬಾರದು" (ಪುಟ ೯) ಎಂಬ ಹೇಳಿಕೆಯನ್ನು ನೋಡಬಹುದು. ಈ ದೃಷ್ಟಿಯಿಂದ ಸಾಮಾನ್ಯರ ಮಾತಿರಲಿ ವಿದ್ಯಾವಂತರಿಗೂ ಈ ಕೃತಿ ಮದ್ಯಪಾನದಿಂದುಂಟಾಗುವ ಸಾಮಾಜಿಕ ಅನಾಹುತಗಳನ್ನು ಪರಿಚಯಮಾಡಿಕೊಡುತ್ತದೆ.

ಆರ್ಥಿಕವಾಗಿ ಮದ್ಯಪಾನ ದೇಶದ ಸ್ಥಿತಿಗತಿಯ ಮೇಲೆ ಮಹತ್ತರವಾದ ಪ್ರಭಾವ ಬೀರುತ್ತದೆ. ಈಗ ಇದರಿಂದ ದೇಶದ ಭಂಡಾರಕ್ಕೆ ಕೋಟ್ಯಂತರ ರೂಪಾಯಿಗಳ ಆದಾಯ ಬರುತ್ತಿದೆ. ಮದ್ಯಪಾನ ನಿರೋಧ ಜಾರಿಗೆ ಬಂದರೆ ದೇಶದ ಆದಾಯ ಕುಂಠಿತವಾಗುತ್ತದೆ ಎಂಬುದು ಕೆಲವರ ವಾದ. ಆದರೆ ಮದ್ಯಪಾನದಿಂದ ರಾಷ್ಟ್ರದ ಪ್ರಜೆಗಳ ಆರ್ಥಿಕ ಸ್ಥಿತಿಯ ಮೇಲೆ ಅದು ಉಂಟುಮಾಡುವ ದುಷ್ಪರಿಣಾಮಗಳನ್ನು ದೇಶ ಅದರಲ್ಲೂ ಪ್ರಜಾಪ್ರಭುತ್ವವಾದಿ ರಾಷ್ಟ್ರ ತೀವ್ರವಾಗಿ ಗಮನಿಸಬೇಕಾಗುತ್ತದೆ.

---

1 'ಸಮಾಜ ಧರ್ಮ', ಪುಟ ೨೫೩

2 'ಸಮಾಜ ಧರ್ಮ', ಪುಟ ೨೮೬-೭

ಪ್ರಜೆಗಳಿಂದ, ಪ್ರಜೆಗಳಿಗಾಗಿ ಎಂಬ ಘೋಷಣೆ ಹೊತ್ತ ಸರ್ಕಾರಗಳು ಹಣ ಸಂಪಾದನೆಗಿಂತ ಪ್ರಜೆಗಳ ಕ್ಷೇಮಾಭಿವೃದ್ಧಿಗಳನ್ನು ಗಮನಿಸಬೇಕಾಗುತ್ತದೆ. ಮದ್ಯಪಾನದಿಂದ ಬರುವ ರಾಜಾದಾಯವನ್ನು ಬೇರೆ ಮೂಲಗಳಿಂದ ತುಂಬಿಕೊಳ್ಳುವುದು ಕಷ್ಟವೇನಲ್ಲ. ಏಕೆಂದರೆ ತೆರಿಗೆ ಕೊಡುವವರು ಪ್ರಜೆಗಳು ತಾನೆ. ಆದುದರಿಂದ ಇಲ್ಲಿ ಬೀಳುವ ಕಡಿತವನ್ನು ಬೇರೆಯ ಕಡೆ ತುಂಬಿಸಿಕೊಳ್ಳಬಹುದು. ಪ್ರಪಂಚದ ಯಾವುದೇ ರಾಷ್ಟ್ರ ಮದ್ಯಪಾನದಿಂದ ಬರುವ ಆದಾಯವನ್ನೇ ಪ್ರಧಾನವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಗಾಂಧೀಜಿಯವರು ಹೇಳಿರುವಂತೆ, "ಆದಾಯ ನಷ್ಟವಾಗುತ್ತದೆಂಬುದು ಕೇವಲ ತೋರಿಕೆ. ಅವನತಿಗೆ ಕಾರಣವಾಗುವ ಈ ತೆರಿಗೆಯನ್ನು ತೆಗೆದುಹಾಕಿದರೆ, ಕುಡುಕ, ಎಂದರೆ ತೆರಿಗೆ ಕೊಡುವವನು ಸಂಪಾದಿಸುವುದಕ್ಕೂ ಉತ್ತಮವಾಗಿ ವೆಚ್ಚಮಾಡುವುದಕ್ಕೂ ಸಹಾಯವಾಗುತ್ತದೆ. ಈ ಅಮೋಘ ಲಾಭದ ಜೊತೆಗೆ ರಾಷ್ಟ್ರಕ್ಕೆ ದೊಡ್ಡ ಪ್ರಮಾಣದ ಆರ್ಥಿಕ ಲಾಭವೂ ಆಗುತ್ತದೆ."[1] ಕೆಟ್ಟ ಅಭ್ಯಾಸವೊಂದನ್ನು ತಪ್ಪಿಸಿ ದೇಶದ ಪ್ರಜೆ ಋಜುಮಾರ್ಗದಲ್ಲಿ ನಡೆಯುವಂತೆ ಮಾಡುವುದು ದೇಶೋನ್ನತಿಯ ಕ್ರಮವೇ ವಿನಾ ಆರ್ಥಿಕ ಹಾನಿಯಂತೂ ಖಂಡಿತ ಅಲ್ಲ.

ಇಂದು ನಮ್ಮ ದೇಶದ ಕಾರ್ಮಿಕರ ಸ್ಥಿತಿ ಏನಾಗಿದೆ? ಬೆಳಗಿನಿಂದ ಸಂಜೆಯವರೆಗೆ ತಾನು ದುಡಿದ ಕೂಲಿಯ ಹಣವನ್ನು ಅವನು ಕುಡಿತಕ್ಕೆ ದುಂದುಮಾಡಿ ತಾನು ಹಾಳಾಗುವುದರ ಜೊತೆಗೆ ತನ್ನ ಇಡೀ ಸಂಸಾರವನ್ನು ಆರ್ಥಿಕ ಅವನತಿಗೆ ಕೊಂಡೊಯ್ಯುತ್ತಾನೆ. ಈ ಮದ್ಯಪಾನದ ಚಟ ದೊಡ್ಡಸ್ತಿಕೆಯ ಹೆಸರಿನಲ್ಲಿ ಹಣವಂತರು ವಿದ್ಯಾವಂತರನ್ನೂ ಆವರಿಸಿಕೊಂಡಿದೆ. ಇತ್ತೀಚೆಗೆ ಅದು ಸಮಾಜದ ಎಲ್ಲಾ ಅಂಗಗಳಿಗೂ ಹಬ್ಬಿದಂತೆ ಕಾಣುತ್ತದೆ. ಇದರಿಂದ ಮನೆ ಮಠ ಕಳೆದುಕೊಂಡವರುಂಟು. ಹೆಂಡತಿ, ಮಕ್ಕಳನ್ನು ಕುಡಿತದ ಅಮಲಿನಲ್ಲಿ ಕೊಂದವರುಂಟು. ಆದುದರಿಂದ ಯಾವುದೇ ಸಮಾಜ, ಯಾವುದೇ ದೇಶ ಇದರಿಂದ ವಿಮೋಚನೆ ಪಡೆಯುವುದು ಪ್ರಗತಿಯ ಸಂಕೇತ. ಈ ದಿಸೆಯಲ್ಲಿ ಗೊರೂರರ ಕೃತಿಗೆ ವಿಶೇಷ ಮಹತ್ವ ಉಂಟು. ಮದ್ಯಪಾನದಿಂದಾಗುವ ಆರ್ಥಿಕ ಹಾನಿಯನ್ನು ಜನರಿಗೆ ಮನದಟ್ಟುಮಾಡಿಕೊಡುವಲ್ಲಿ ಅದು ಯಶಸ್ವಿಯಾಗಿದೆ. ಪರಿಣಾಮದ ಅರಿವಿಲ್ಲದೆ ವಾತಾವರಣದ ಒತ್ತಡದಿಂದ ಕುಡಿತವನ್ನು ಕಲಿಯುವುದರತ್ತ ಒಲಿಯುವವರಿಗೆ ಈ ಹೊತ್ತಗೆ ಮಾರ್ಗದರ್ಶಕವಾಗಿ ಅವರನ್ನು ಆ ಕೆಟ್ಟ ದಾರಿಯಿಂದ ವಿಮುಖರನ್ನಾಗಿಸಲು ನೆರವಾಗುತ್ತದೆ.

ಕುಡಿತ ಮತ್ತು ಆರೋಗ್ಯ ಈ ವಿಚಾರ ಕುರಿತು ಗೊರೂರರು ಸುದೀರ್ಘ ವಿವರಣೆ ನೀಡಿದ್ದಾರೆ. ಅನೇಕರು ತಮ್ಮ ಈ ಕೆಟ್ಟ ಅಭ್ಯಾಸವನ್ನು ಪ್ರತಿಪಾದಿಸಲು ಆರೋಗ್ಯದ ಕಾರಣ ಹೇಳುವುದುಂಟು. ಅಂಥವರಿಗೆ ಈ ಕೃತಿ ವೈದ್ಯರ ಅಭಿಪ್ರಾಯಗಳೊಂದಿಗೆ ಸೂಕ್ತ ಉತ್ತರ ನೀಡುತ್ತದೆ. "ಪ್ರಾಣಿಗಳ ಮೇಲೆ ಪ್ರಯೋಗದಿಂದಲೂ, ಬದುಕಿರುವಾಗಲೂ, ಸಾವಿನಲ್ಲಿಯೂ ಮನುಷ್ಯರ ಪರೀಕ್ಷೆಯಿಂದಲೂ ಮುಂದಲ ವಿಷಯಗಳು

[1] 'ಸಮಾಜ ಧರ್ಮ', ಪುಟ ೨೭೭

ಸ್ಪಷ್ಟವಾಗಿದೆ—ಮಾದಕವಸ್ತು ಅವಯವವನ್ನು ಬಲಹೀನಗೊಳಿಸುತ್ತದೆ. ದೇಹವನ್ನು ದಪ್ಪ ಮಾಡುತ್ತದೆ, ಸ್ನಾಯುಗಳನ್ನು ಸಡಿಲಗೊಳಿಸಿ ಅವುಗಳಲ್ಲಿ ಕೊಬ್ಬನ್ನು ಬೆಳೆಸುತ್ತದೆ. ವೃದ್ಧಾಪ್ಯದಲ್ಲಿ ಮೊದಲೇ ದುರ್ಬಲವಾಗಿರುವ ಹೃದಯ ಇವುಗಳಿಂದ ಇನ್ನೂ ಶಕ್ತಿಹೀನವಾಗುತ್ತದೆ. ಇದರಿಂದ ಸಶಕ್ತವಾದ ಹೃದಯಗಳುಳ್ಳವರಿಗಿಂತ ದುರ್ಬಲ ಹೃದಯದವರು ನ್ಯೂಮೋನಿಯಾ ಇನ್‌ಫ್ಲುಯೆನ್ಜಾ ಮುಂತಾದ ರೋಗಗಳಿಗೆ ತುತ್ತಾಗುತ್ತಾರೆ.” (ಪುಟ ೪೭–೪೮) ಹೀಗೆ ಕುಡಿತದಿಂದ ದೇಹದ ಮೇಲೆ ಉಂಟಾಗುವ ಅನಾರೋಗ್ಯಕರವಾದ ಪರಿಣಾಮಗಳ ಪೂರ್ಣ ವಿವರ ಆಯಾ ವಿಷಯದಲ್ಲಿ ಪರಿಣತರಾದವರ ಪ್ರಯೋಗ ಮತ್ತು ತೀರ್ಮಾನಗಳೊಂದಿಗೆ ಸಂಗ್ರಹವಾಗಿರುವುದು ಈ ಕೃತಿಯ ಘನತೆಯನ್ನು ಹೆಚ್ಚಿಸಿದೆ.

ಈ ಕೃತಿಗೆ ಮುನ್ನುಡಿ ಬರೆದಿರುವವರು ವೈದ್ಯರು. ಈ ಕೃತಿಯಲ್ಲಿ ಬರುವ ಪ್ರತಿಯೊಂದು ಹೇಳಿಕೆಯೂ ವೈದ್ಯರ ಪ್ರಯೋಗದ ಫಲಿತಾಂಶವಾಗಿದೆ. ಇದರಿಂದ ಗೊರೂರರ ಅಧ್ಯಯನದ ಮಹತ್ವ ನಮಗರಿವಾಗುತ್ತದೆ. ವಿಷಯ ಪ್ರವೇಶ ಮಾಡಿಸಿರುವ ಡಾ. ಎಸ್. ಎ. ಐಯಂಗಾರ್ ಅವರು ಹೇಳಿರುವಂತೆ “ಶ್ರೀಮಾನ್ ರಾಮಸ್ವಾಮಿ ಐಯ್ಯಂಗಾರ್ಯರು ಈ ವಿಷಯವನ್ನು ನಾನಾ ಮುಖಗಳಿಂದ ಅಧ್ಯಯನ ಮಾಡಿದ್ದಾರೆ. ಅವರ ಪರಿಶ್ರಮವನ್ನು ಕುರಿತು ಎಷ್ಟು ಹೇಳಿದರೂ ಕಡಿಮೆಯೇ. ಸಾಮಾನ್ಯರಿಗೂ ಅರ್ಥವಾಗುವಂತಹ ಸುಲಭವಾದ ಭಾಷೆಯನ್ನು ಬಳಸಿದ್ದಾರೆ. ಅವರ ವಾದಗಳು ಚೆನ್ನಾಗಿ ಪರಿಣಾಮಕಾರಿಯಾಗಿ ಮನ ಮುಟ್ಟುತ್ತವೆ.” (ಪುಟ ೫) ಕಳ್ಳಭಟ್ಟಿಯಿಂದ ಹಿಡಿದು ಅತ್ಯಾಧುನಿಕ ಯಂತ್ರೀಕೃತ ಪಾನೀಯ ತಯಾರಿಕೆ ವಿಧಾನಗಳ ಬಗೆಗೆ ಕೊಟ್ಟಿರುವ ಅನೇಕ ವಿವರಗಳನ್ನು ಗಮನಿಸಿದಾಗ ಗೊರೂರರ ಅಧ್ಯಯನಶೀಲತೆ ಯಾರಿಗಾದರೂ ಆಶ್ಚರ್ಯವನ್ನುಂಟುಮಾಡದಿರದು.

ಕಡೆಯದಾಗಿ ಮದ್ಯಪಾನದಿಂದ ಪೂರ್ಣ ವಿಮೋಚನೆ ಸಾಧ್ಯವೆ? ಎಂಬ ಜಟಿಲ ಪ್ರಶ್ನೆ ತಲೆ ಎತ್ತುತ್ತದೆ. ಸ್ವಾತಂತ್ರ್ಯ ಬಂದ ಇಪ್ಪತ್ತೈದು ವರ್ಷಗಳ ನಂತರವೂ ನಮ್ಮ ಸರ್ಕಾರಗಳು ಜನತೆಯನ್ನು ಈ ಘೋರ ಮಾರ್ಗದಿಂದ ವಿಮುಕ್ತರನ್ನಾಗಿ ಮಾಡಲು ಪ್ರಯತ್ನಿಸಿಲ್ಲ. ಗಾಂಧೀಜಿಯವರ ಮನವೊಲಿಸಲೊ, ಜನತೆಗೆ ತಾವೂ ಏನಾದರೂ ಮಾಡುತ್ತಿದ್ದೇವೆಂದು ತೋರಿಸಲೊ ಮದ್ಯಪಾನ ನಿರೋಧ ಜಾರಿಗೆ ತಂದ ರಾಜ್ಯ ಸರ್ಕಾರಗಳೂ ಮತ್ತೆ ಮೊದಲ ಸ್ಥಿತಿಗೇ ಬಂದಿವೆ. ಹೀಗಾಗಿ ಇಂತಹ ಗ್ರಂಥಗಳಿಂದ ಏನು ಪ್ರಯೋಜನ ಎಂಬ ಪ್ರಶ್ನೆ ಸಹಜವಾಗಿಯೇ ಏಳಬಹುದು. ಆದರೆ ಇಷ್ಟು ಮಾತ್ರ ಸತ್ಯ. ಈ ಕೃತಿಯನ್ನು ಓದಿದ ಕೆಲವರಾದರೂ ಮದ್ಯಪಾನದಿಂದ ಆಗುವ ಅನಾಹುತ ಪರಂಪರೆಗಳನ್ನು ಅರಿತು ಅದರಿಂದ ದೂರವಿದ್ದಾರು, ಮದ್ಯಪಾನ ಮಾಡುವ ಒಬ್ಬಿಬ್ಬರಾದರೂ ಈ ಭಯಂಕರ ಶಾಪದಿಂದ ವಿಮೋಚನೆ ಪಡೆದು ಸತ್ಪ್ರಜೆಗಳಾದಾರು. ಇಷ್ಟುಮಟ್ಟಿಗೆ ಈ ಗ್ರಂಥ ಉಪಯುಕ್ತ. ಭಯಂಕರ ಸಾಮಾಜಿಕ ಪೀಡೆಯೊಂದರ ಬಗ್ಗೆ ಸರಳ ಕನ್ನಡದಲ್ಲಿ ವಿವರಿಸಿ ಜನರನ್ನು ಎಚ್ಚರಿಸಿರುವ ಗೊರೂರು ಅಭಿನಂದನಾರ್ಹರು.

'ಪೂರ್ಣ ಸ್ವದೇಶಿ' ಮತ್ತು 'ಭಕ್ತಿಯೋಗ'

ಎಂ. ರಾಮಕೃಷ್ಣ

೧

ಜೀವನ ಯಾವಾಗಲೂ ಒಂದು ಸೂತ್ರಕ್ಕೆ ಈಡಾಗುವುದಿಲ್ಲ. ಜೀವಂತವಾದುದು ನಿರಂತರ ಬದಲಾವಣೆಗೆ ಒಳಗಾಗುತ್ತದೆ. ಮನುಷ್ಯ ಎಂದರೇನು ಎಂದಾಗ ವೈದ್ಯ ಶಾಸ್ತ್ರರೀತ್ಯಾ ವಿಭಜಿಸಿ, ವಿಂಗಡಿಸಿ, ಭೌತಿಕ ಸೂತ್ರವೊಂದನ್ನು ಅನ್ವಯಿಸಿಬಿಡು ವುದು ಅಸಾಧು, ಅಸಾಧ್ಯ. ಒಂದು ಪರಮಾಣುವಿನ ನ್ಯೂಕ್ಲಿಯಸ್ಸಿನ ಸುತ್ತ ನಿರಂತರ ಪರಿಭ್ರಮಣದಲ್ಲಿರುವ ಎಲೆಕ್ಟ್ರಾನುಗಳನ್ನು ಹಿಡಿದು ನಿಲ್ಲಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಮನುಷ್ಯನ ಭೌತಿಕ ದೇಹದಲ್ಲಿ ಪರಿಭ್ರಮಿಸುತ್ತಿರುವ ಮನಸ್ಸನ್ನು ಹಿಡಿದಿ ಡಲು ಸಾಧ್ಯವಿಲ್ಲ. ಲೋಕದ ಪ್ರಗತಿ ಬಾಹ್ಯಗತಿಯಿಂದ ನಿರ್ಧರಿತವಾಗುವುದಿಲ್ಲ. ಆದುದರಿಂದ ವರ್ತಮಾನ ಸಮಸ್ಯೆಗಳಿಗೆ ನಾವು ಕೊಡುವ ಪರಿಹಾರ, ನೀಡುವ ಸಮಾ ಧಾನ, ತೋರುವ ಮಾರ್ಗ, ಪೂರ್ಣ ದೃಷ್ಟಿಗೆ ಅಸಮಂಜಸ, ಅಸಮರ್ಪಕ, ಅಸಹಜ ವಾಗಿ ಕಂಡರೆ ಆಶ್ಚರ್ಯವಿಲ್ಲ. ಜೀವನ ಸರಳವಾಗಿರುವಾಗ ಪರಿಹಾರವೂ ಸರಳವಾಗಿರು ತ್ತದೆ. ಬದುಕು ಸಂಕೀರ್ಣವಾದಾಗ ಸರಳ ಪರಿಹಾರಗಳು ನಗೆಗೀಡಾಗುತ್ತವೆ. ನಗೆ ಗೀಡು ಮಾಡುವುದೇ ಮೇಧಾವಿಗಳ ಕರ್ತವ್ಯವಲ್ಲ. ಸಂಕೀರ್ಣವಾಗದಂತೆ ನೋಡಿಕೊಳ್ಳು ವುದರಲ್ಲಿ ಉಂಟಾದ ಸೋಲು ಬುದ್ಧಿಜೀವಿಗೆ ಸವಾಲು.

ಮಾನವ ವಿಜ್ಞಾನ ಕ್ಷೇತ್ರದಲ್ಲಿ ಎಷ್ಟೇ ಪ್ರಗತಿ ಹೊಂದಿದರೂ ದೈಹಿಕ ವ್ಯಾಪಾರ ಗಳಿಂದ ಮುಕ್ತನಾಗಿಲ್ಲ. ಹಸಿವು ತೃಷೆಗಳುಂಟು; ಕಾಮ ಕ್ರೋಧಗಳಿವೆ; ನೋವು ನಲಿವುಗಳಿಗೆ ದೂರನಲ್ಲ; ಶೌಚಾದಿಗಳಿಂದ ಮುಕ್ತನೂ ಅಲ್ಲ. ಸಾವಿರ ವರ್ಷದ ಹಿಂದೆ ನಗುತ್ತಿದ್ದಂತೆ ನಗುವುದಾಗಲೀ, ಅತ್ತರೆ ಕಣ್ಣೀರು ಬರುವುದಾಗಲೀ, ಜರಾಮರಣ ಗಳಿಗೆ ಪಕ್ಕಾಗುವುದಾಗಲೀ ಥಕ್ಕನೆ ಮಾಯವಾಗಿಲ್ಲ. ಅಂದಮೇಲೆ ಮೂಲಭೂತ

ಅಂಶಗಳೂ ಬದಲಾವಣೆ ಹೊಂದಿಲ್ಲ. ಮನುಷ್ಯನ ಜೀವನದಲ್ಲಿ ಎರಡು ಆಯಾಮಗಳನ್ನು ಗುರುತಿಸಬಹುದು. ಒಂದು ಸುಲಭ ಜೀವನ. ಮತ್ತೊಂದು ಸುಖ ಜೀವನ. ಮೊದಲನೆಯದಕ್ಕೆ ಅವಶ್ಯಕವಾದ ವಸ್ತುವಿಷಯಗಳು ಎರಡನೆಯದಕ್ಕೆ ಅನಿವಾರ್ಯವಾಗಿರುವುದಿಲ್ಲ. ಅವೆರಡೂ ಹೊಂದಾಣಿಕೆಯಿಂದಲೂ ಇರಬಹುದು. ಬಿಡಿಯು ದೂರವಿರಲೂ ಸಾಧ್ಯ. ಮೊದಲನೆಯದನ್ನು ಬಯಸಿ ಪ್ರೀತಿಸಿದವನು ಎರಡನೆಯದರ ಭ್ರಮೆಯಲ್ಲಿರುತ್ತಾನೆ. ಎರಡನೆಯದನ್ನು ಇಚ್ಛಿಸಿದವನು ಇತರರ ತಾತ್ಸಾರ ಕುಹಕಗಳಿಗೆ ಪಾತ್ರನಾದರೂ ತನ್ನಷ್ಟಕ್ಕೆ ತಾನು ನೆಮ್ಮದಿ ಹೊಂದುತ್ತಾನೆ. ತ್ಯಾಗರಾಜರು ಹೇಳಿರುವಂತೆ "ಶಾಂತಮುಲೇಕ ಸೌಖ್ಯಮುಲೇದು." ಸುಲಭ ಜೀವನಕ್ಕೆ ಯಾಂತ್ರಿಕ ಪ್ರಗತಿ ಪ್ರೇರಕ, ಪೋಷಕ. ಸುಖಜೀವನ ಬಾಹ್ಯವಸ್ತು ನಿರಪೇಕ್ಷಕ.

ಗಾಂಧೀಜಿಯವರಿಗೆ ಪ್ರಪಂಚ ಹೇಗೆ ಕಾಣಿಸಿತೋ ಹಾಗೆಯೇ ಇತರರಿಗೂ ಕಂಡುಬರದಿದ್ದರೆ ಅದರಲ್ಲಿ ಯಾರ ತಪ್ಪೂ ಇಲ್ಲ. ದೃಷ್ಟಿಯಂತೆ ಸೃಷ್ಟಿ. ಗಾಂಧೀಜಿಯವರಿಗೆ ಸುಲಭ ಜೀವನಕ್ಕಿಂತ ಸುಖ ಜೀವನದ ಕಡೆಗೇ ಒಲವು. ಅವರು ಬಹಳವಾಗಿ ಯೋಚಿಸುವಾಗ ತಮ್ಮದೇ ಆದರ್ಶವನ್ನು ಸ್ಪಷ್ಟಪಡಿಸುತ್ತಾರೆ. ಅವರು ಯಾವ ಮಟ್ಟವನ್ನು ಮುಟ್ಟಿ ಮಾತನಾಡುವರೋ ಆ ಮಟ್ಟಕ್ಕೆ ಏರದಿರುವವರಿಗೆ ವಾದ ವಿಲಕ್ಷಣವಾಗಿ ತೋರುತ್ತದೆ. ಗಾಂಧೀಜಿಯವರೂ ತಮಗೆ ಬಹು ಸಲೀಸಾಗಿರುವಂಥದು ಇತರರಿಗೂ ಸಾಧ್ಯವಾಗುತ್ತದೆಂದೇ ನಂಬಿಬಿಡುತ್ತಾರೆ. ಅಂಥ ನಂಬಿಕೆಯಿಂದಲೇ ಸ್ವದೇಶಿ ವಾದವೂ ಮೂಡಿ ಬಂದಿತು. ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಭಾರತೀಯರು ಸ್ವದೇಶಿ ಮಂತ್ರವನ್ನು ಜಪಿಸಬೇಕು. ಸ್ವದೇಶಿ ಎಂದರೇನು? ಗಾಂಧೀಜಿಯವರ ದೃಷ್ಟಿಯಲ್ಲಿ ಸ್ವದೇಶಿ ಎನ್ನುವುದು ಹೆಚ್ಚು ವ್ಯಾಪಕವಾದ ಅರ್ಥವನ್ನುಳ್ಳದ್ದು. ಸ್ವದೇಶಿಗೆ ಇನ್ನೊಂದು ಹೆಸರೆಂದರೆ ಸ್ವಾವಲಂಬನೆ ಎನ್ನಬಹುದು. ಗಾಂಧೀಜಿಯವರು ಕಂಡ ಕನಸು ಪಂಚಾಯತಿ ರಾಜ್ಯ. ಆ ರಾಜ್ಯದಲ್ಲಿ ಗ್ರಾಮ ಪಂಚಾಯತಿಗೆ ಹೆಚ್ಚು ಅಧಿಕಾರವಿರುತ್ತದೆ. ಸರ್ಕಾರದ ಜವಾಬ್ದಾರಿ ಕಡಿಮೆ. ಅಧಿಕಾರದ ವಿಕೇಂದ್ರೀಕರಣವೇ ಅಂತರಾರ್ಥ. ಆದರೆ ಅಧಿಕಾರದ ಕೇಂದ್ರೀಕರಣವಾಗುತ್ತಲೇ ಇರುವ ಈ ಕಾಲದಲ್ಲಿ ಗಾಂಧೀಜಿಯವರ ಅಭಿಪ್ರಾಯಕ್ಕೆ ಮಾನ್ಯತೆ ದೊರೆಯುತ್ತದೆಯೆ?

ಗಾಂಧೀಜಿಯವರು ಭಾರತವನ್ನು ಮತ್ತೊಮ್ಮೆ ಅನಾಗರಿಕಸ್ಥಿತಿಗೆ ಕೊಂಡೊಯ್ಯಲು ಯತ್ನಿಸಿದ್ದಾರೆ ಎಂದವರುಂಟು. ಗಾಂಧೀಜಿಯವರ ಯೋಜನಾಲಹರಿಯನ್ನು ಕೇಳಿದವರಿಗೆ ತಟ್ಟನೆ ಹಾಗೆನ್ನಿಸಿದರೆ ಆಶ್ಚರ್ಯವೇನೂ ಇಲ್ಲ. ನಿಧಾನವಾಗಿ ಆಲೋಚಿಸಿದರೆ ಅವರ ಅಭಿಪ್ರಾಯಗಳು ಸರಿ ಎನ್ನಿಸುತ್ತವೆ. ಆಧುನಿಕ ಜಗತ್ತಿನ ನಾಗಾಲೋಟದಲ್ಲಿ ಭವಿಷ್ಯವನ್ನು ಯಾರು ಕಾಣಬಲ್ಲರು? ಓಟ ಅರ್ಥರಹಿತವಾದಾಗ ಜೀವನ ಭ್ರಮನಿರಸನವಾಗುತ್ತದೆ. "ಮೇಲೆ ಆಸಕ್ತನಾದರೂ ಒಳಗೆ ಶಾಂತನಾಗಿರುವವನ ಸ್ವತ್ತು ಈ ಜಗತ್ತು" ಎಂಬ ಮಾತು ಸ್ವಾರಸ್ಯಪೂರ್ಣವಾದುದು. ಜಗತ್ತಿನ ಗಡಿಬಿಡಿ ಆತನ ಶಾಂತಿಯನ್ನೇ ನಾಶಮಾಡುವುದಾದರೆ ಸುಖವನ್ನು ಅನುಭವಿಸುವಂತೆಯೇ.

ಗಾಂಧೀಜಿಯವರ ಸ್ವದೇಶಿವಾದದಲ್ಲಿ ಚರಕ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಖಾದಿಗೆ ಅವರು ಪ್ರಾಮುಖ್ಯ ಕೊಟ್ಟದ್ದು ನಿರುದ್ಯೋಗವನ್ನು ನಿವಾರಿಸಬೇಕೆಂಬ ನಿರ್ಧಾರದಿಂದ. ಯಂತ್ರಗಳನ್ನು ಗಾಂಧೀಜಿಯವರು ಮೆಚ್ಚದಿದ್ದರೂ, ನಿರುದ್ಯೋಗವನ್ನುಂಟು ಮಾಡದ ಯಂತ್ರಗಳನ್ನು ಒಪ್ಪುತ್ತಾರೆ. ಆದರೆ ಎಲ್ಲಿ ಯಂತ್ರಗಳು ಅನಾವಶ್ಯಕವೋ ಅಂತಹ ಕಡೆಗಳಲ್ಲಿ ಅವುಗಳನ್ನು ಬಿಡಬೇಕೆಂಬುದೇ ಅವರ ಆಶಯ. ಒಂದು ಯಂತ್ರ ಸಹಸ್ರಾರು ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುವುದಾದರೆ ಅದು ಪಾಪವೆಂಬುದು ಅವರ ನಂಬಿಕೆ. ಕಾರ್ಖಾನೆಗಳು ಹೆಚ್ಚಿದಂತೆಲ್ಲ ಗ್ರಾಮಗಳಿಂದ ಜನರು ನಗರಗಳಿಗೆ ಬಂದು ಕಾರ್ಮಿಕರಾಗಿ ನಿಲ್ಲುತ್ತಾರೆ. ಅವರ ಮೂಲ ಕಸುಬು ಮರೆತುಹೋಗುತ್ತದೆ. ಅವರ ಕಲೆಯೂ ಕಣ್ಮರೆಯಾಗುತ್ತದೆ. ಸಾವಿರಾರು ಜನರಿಗೆ ಉದ್ಯೋಗ ಒದಗಿಸುವ ಕಾರ್ಖಾನೆ ಇನ್ನೊಂದು ಕಡೆಯಲ್ಲಿ ಲಕ್ಷಾಂತರ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಅಷ್ಟೇ ಅಲ್ಲದೆ ಸ್ವಾತಂತ್ರ್ಯಪೂರ್ವದಲ್ಲಿ ಕಾರ್ಖಾನೆಗಳು ಬ್ರಿಟನ್ನಿನಲ್ಲಿದ್ದರೂ ಭಾರತದಿಂದ ಕಚ್ಚಾ ಪದಾರ್ಥ ಹೋಗುತ್ತಿತ್ತು. ಇಲ್ಲಿನ ಕಚ್ಚಾ ಪದಾರ್ಥವನ್ನು ಸುಲಭ ಬೆಲೆಗೆ ಪಡೆದು ಸಿದ್ಧ ಪದಾರ್ಥಗಳನ್ನು ದುಬಾರಿ ಬೆಲೆಗೆ ಮಾರುತ್ತಿದ್ದರು. ಇದು ಬಡ ಜನರನ್ನು ಶೋಷಿಸಿದಂತಾಗುತ್ತಿತ್ತು. ಗಾಂಧೀಜಿಯವರ ಆಲೋಚನೆ ಈ ದಿಕ್ಕಿನಲ್ಲಿ ಹರಿದುದರಿಂದ ಯಂತ್ರಗಳನ್ನೇ ನಿವಾರಿಸಲು ಯತ್ನಿಸಿದರು. ಆದರೆ ಯಂತ್ರರಹಿತ ಸಮಾಜವನ್ನು ಮಾತ್ರ ಅವರು ಸ್ವೀಕರಿಸಲಿಲ್ಲ.

ಗ್ರಾಮ ಕೈಗಾರಿಕೆಗಳು ಅವರ ಇನ್ನೊಂದು ಮೆಚ್ಚಿನ ವಿಷಯ. ಗ್ರಾಮಗಳಲ್ಲಿ ಕುಶಲ ಕಲಾವಿದರು, ಚತುರ ಉದ್ಯೋಗಿಗಳು ನಿರಾಶರಾಗಬಾರದು. ಚರಕದಿಂದ ನೂಲು ತೆಗೆಯುವುದು, ಕೊಟ್ಟಣದ ಅಕ್ಕಿಯನ್ನು ತಯಾರಿಸುವುದು, ಗಾಣದ ಎಣ್ಣೆಯನ್ನು ತೆಗೆಯುವುದು, ಚರ್ಮ ಹದಮಾಡುವುದು ಮೊದಲಾದ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ವಾದಿಸಿದರು. ಚಾಪೆ ಬುಟ್ಟಿ ಹೆಣೆಯುವುದು, ಮಡಕೆ ತಯಾರಿಸುವುದು ಇವುಗಳು ಕುಶಲ ಕರ್ಮಿಗಳಿಗೆ ಜೀವನೋಪಾಯವನ್ನು ಕಲ್ಪಿಸಿ ಕೊಡುತ್ತವೆ. ಇವರಿಂದ ತಯಾರಾದ ಪದಾರ್ಥಗಳನ್ನು ಜನಗಳು ಕೊಂಡರೆ ಆ ಜನರಿಗೆ ಜೀವನೋಪಾಯವನ್ನು ತೋರಿಸಿದಂತಾಗುತ್ತದೆ, ಇದರಿಂದ ಹೊರದೇಶದ ಪದಾರ್ಥಗಳಿಗೆ ಇರುವ ಬೇಡಿಕೆ ಕಡಿಮೆಯಾಗುತ್ತದೆ. ಹಣದ ಚಲಾವಣೆ ದೇಶದ ಒಳಗೇ ಇರುವುದರಿಂದ ಏರುಪೇರುಗಳು ಉಂಟಾಗುವುದಿಲ್ಲ. ದೇಶದಲ್ಲಿ ನಿರುದ್ಯೋಗ ಪರಿಹಾರವಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಜನರಲ್ಲಿ ನೆಮ್ಮದಿ ನೆಲೆಗೊಳ್ಳುತ್ತದೆ. ಅಲ್ಲದೆ ವ್ಯವಸಾಯ ಕಾರ್ಯ ಇಲ್ಲದ ವರ್ಷದ ಆರು ತಿಂಗಳ ಕಾಲವನ್ನು ಉಪಕಸುಬುಗಳಿಂದ ತುಂಬಬಹುದು. ಸೋಮಾರಿತನವೂ, ಅದರ ಫಲವಾದ ದುರ್ವ್ಯವಹಾರಗಳೂ ಇಲ್ಲವಾಗುತ್ತವೆ. ಇದರಿಂದ ನೈತಿಕ ಸುಧಾರಣೆಯೂ ಸಾಧಿತವಾದಂತಾಗುತ್ತದೆ. ಗ್ರಾಮಗಳಲ್ಲಿಯೇ ಜನರು ನೆಲಸುವುದರಿಂದ ನಗರಗಳಲ್ಲಿ ಜನಸಂಖ್ಯೆ ಮಿತಿಮೀರದೆ, ವಸತಿ, ನೀರು, ಮೊದಲಾದ ಅಗತ್ಯಗಳ ಅಭಾವವಿರದೆ, ಬೆಲೆಯ ಏರಿಕೆ ತಪ್ಪಿ, ಆರ್ಥಿಕ ಪರಿಸ್ಥಿತಿ ಹದ

ಗೆಡುವುದು ತಪ್ಪುತ್ತದೆ. ಕಾರ್ಖಾನೆಗಳ ಸಂಖ್ಯೆ ಕಡಿಮೆಯಾಗಿದ್ದು ಸುವ್ಯವಸ್ಥಿತ ವಾದುದಾಗಿ, ಅಲ್ಲೋಲಕಲ್ಲೋಲ ತಪ್ಪಿ ನಗರ ಜನರೂ ಗ್ರಾಮಜನರೂ ಶಾಂತವಾದಾಗ ರಾಜಕೀಯ ಸುಸ್ಥಿತಿಯೂ ಉತ್ತಮಗೊಳ್ಳುತ್ತದೆ. ಇದೆಲ್ಲ ಎಂಥ ಹುಚ್ಚು ಕಲ್ಪನೆ ಎನ್ನುವಿರಾ? ಹುಚ್ಚರು ಯಾರೆಂಬುದೇ ಇನ್ನೂ ನಿರ್ಧಾರವಾಗದೆ ಉಳಿದಿದೆ.

"Industrialise or perish" ಎಂದಿದ್ದಾರೆ ಸರ್ ಎಂ. ವಿ. ಅವರು. ಆದರೆ ಈ ಘೋಷಣೆಯ ಮಡಿಲಲ್ಲಿ ಹೂವೂ ಇದೆ. ಹಾವೂ ಇದೆ. ಪ್ರಪಂಚದಲ್ಲಿ ಸುಭಿಕ್ಷ ನೆಲೆಸಬೇಕಾದರೆ ಕೇವಲ ಕಾರ್ಖಾನೆಗಳು ಸಾಲದು. ಮನುಷ್ಯ ಜೀವನ ಸುಖಮಯ ವಾಗಲೂ ಆಂತರಿಕ ಆವಶ್ಯಕತೆಗಳು ಅನೇಕವಿವೆ. ಗಾಂಧೀಜಿಯವರ ಕನಸಿನ ಲೋಕ ಯುದ್ಧರಹಿತ ಲೋಕವಾದುದರಿಂದ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆ ಗಳು ಅನಗತ್ಯವಾಗುತ್ತವೆ. ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಯಿಂದ, ಬಟ್ಟೆಯ ಗಿರಣಿ, ಎಣ್ಣೆ ಗಿರಣಿ, ಮೊದಲಾದ ಕಾರ್ಖಾನೆಗಳು ಇಲ್ಲವಾಗುತ್ತವೆ. ಗಾಂಧೀಜಿಯವರು ಆಯುರ್ವೇದ, ಹೋಮಿಯೋ ವಿಧಾನಗಳನ್ನು ಮೆಚ್ಚುವುದರಿಂದ ಔಷಧ ತಯಾರಿಸುವ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮುಚ್ಚಬೇಕಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಗಾಂಧೀಜಿಯವರ 'ರಾಮರಾಜ್ಯ'ದಲ್ಲಿ ರಾಕ್ಷಸಗಾತ್ರದ ಕಾರ್ಖಾನೆಗಳು ಮರೆಯಾಗಿ ಸಣ್ಣ ಸಣ್ಣ ಗ್ರಾಮ ಕೈಗಾರಿಕೆಗಳು ಏಳುತ್ತವೆ.

ಆಧುನಿಕ ಪ್ರಪಂಚ ಗಾಂಧೀವಾದವನ್ನು ಸ್ವೀಕರಿಸುವುದಿಲ್ಲ. ಅವುಗಳ ಅನುಷ್ಠಾನ ಕೇವಲ ಸ್ವಾತಂತ್ರ್ಯ ಸಾಧನೆಗಾಗಿ ಮಾತ್ರವೆಂದು ತಿಳಿಯಲಾಗುತ್ತಿದೆ. ಇದು ಸಂಪೂರ್ಣ ಹುಸಿಯೂ ಅಲ್ಲ. ಕೆಲವು ವಾದಗಳು ಕೆಲವು ಕಾರಣಗಳಿಗಾಗಿ ಕೆಲವು ಕಾಲ ಆದರ್ಶ ವಾಗಿ ನಮ್ಮ ಮುಂದೆ ನಿಂತು ಅನಂತರ ಮರೆಯಾಗುತ್ತವೆ. ಹೂವು ಹೂವೇ ಆಗಿ ಸದಾಕಾಲ ಇರದೆ ಕಾಯಿಗೆ, ಹಣ್ಣಿಗೆ ಸ್ಥಳ ಕೊಡುತ್ತದೆ. ಆದರೆ ಇದು ಮಾತ್ರ ಸತ್ಯ —ಯಂತ್ರ ನಾಗರಿಕತೆಯ ಫಲವಾದ, ವೇಗ, ಸದ್ದು, ಸ್ಪರ್ಧೆಗಳಿಂದ ಮಾನವ ನುಚ್ಚು ನೂರಾಗುತ್ತಿದ್ದಾನೆ. ನಿರಾಶೆ ಹಿಪ್ಪೀ ರೂಪದಲ್ಲಿ ಇಣುಕು ಹಾಕುತ್ತಿದೆ. ಇದು ಸುಖವೋ ಅಸುಖವೋ ಅವನಿಗೇ ತಿಳಿಯದು. ಗಾಂಧೀವಾದ ಇಂದಿನ ಪ್ರಪಂಚಕ್ಕೆ ಹಿಡಿಸದಿದ್ದರೆ ಅದು ಆ ವಾದದ ತಪ್ಪಲ್ಲ. ಆವಶ್ಯಕತೆಗಳನ್ನು ಆದಷ್ಟು ಕಡಿಮೆಮಾಡಿ ಕೊಳ್ಳುವುದರಲ್ಲಿಯೇ ನೈಜವಾದ ಸುಖ ಅಡಗಿದೆ ಎಂಬ ಸತ್ಯ ಮನಸ್ಸಿಗೆ ತಟ್ಟಿದಂದು ಗಾಂಧೀವಾದ ಮರುಹುಟ್ಟು ಪಡೆದೀತು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಗಾಂಧೀಜಿಯವರ ಲೇಖನ ಗಳನ್ನು ಅನುವಾದಿಸಿ ಒಂದು ಪುಸ್ತಕರೂಪದಲ್ಲಿ ಪ್ರಕಟಿಸಿರುವುದರಿಂದ ಹಲವಾರು ಪುನರುಕ್ತಿಗಳನ್ನು ಕಾಣುತ್ತೇವೆ. ಖಾದಿ, ಚರಕ, ಗ್ರಾಮಕೈಗಾರಿಕೆಗಳ ವಿಷಯ. ವಾದ ಮೇಲಿಂದ ಮೇಲೆ ಬರುತ್ತವೆ. ಇಂಗ್ಲಿಷ್ ಮೂಲದ ಕೃತಿಯೂ ಸಹ ಸಂಕಲನ ಕೃತಿಯೇ ಆಗಿದೆ. ಗೊರೂರರು ಅನುವಾದಿಸಿರುವ ಕೃತಿಯ ಹೆಸರು *Cent per Cent Swadeshi*

or The Economics of Village Industries. ಇದನ್ನು ಸಂಕಲಿಸಿ ಪ್ರಕಟ ಪಡಿಸಿದವರು ಅಹಮದಾಬಾದಿನ ನವಜೀವನ ಬುಕ್ ಹೌಸ್‌ನವರು. ಮೂಲ ಕೃತಿಯ ಲ್ಲಿರುವ ಒಂದೆರಡು ಶೀರ್ಷಿಕೆಗಳು ಅನುವಾದದಲ್ಲಿ ಸೇರಿಲ್ಲ. ಮೂಲ ಕೃತಿಯ ಶೀರ್ಷಿಕೆ ಗಳು ಎಲ್ಲವೂ ಕುಳಿತು ಬರೆದ ಲೇಖನಗಳಲ್ಲ. ಕೆಲವು 'ಹರಿಜನ' ಪತ್ರಿಕೆಗಾಗಿ ಬರೆದ ಲೇಖನಗಳು. ಉಳಿದುವು ಗಾಂಧೀಜಿಯವರ ಭಾಷಣಗಳನ್ನು ಬರೆದುಕೊಂಡ ಮಹದೇವ ದೇಸಾಯಿ, ಚಂದ್ರಶೇಖರ ಶುಕ್ಲ ಇವರ ಟಿಪ್ಪಣಿ ಪುಸ್ತಕಗಳಿಂದ ದೊರೆತ ಸಾಹಿತ್ಯ. ಇಂಗ್ಲಿಷ್ ಕೃತಿಯಲ್ಲಿನ 'Swadeshi', 'Village Industries', 'No Disappointment', 'Great Experiment'. 'Unique Exhibition', 'True Patriotism', 'Giant and Dwarf', 'Village Tanning' ಮೊದಲಾದ ಶೀರ್ಷಿಕೆ ಗಳು 'ಸ್ವದೇಶಿ', 'ಗ್ರಾಮ ಕೈಗಾರಿಕೆಗಳು', 'ನಿರಾಶೆ ಇಲ್ಲ', 'ದೊಡ್ಡ ಪ್ರಯೋಗ', 'ಹೊಸ ಬಗೆಯ ಪ್ರದರ್ಶನ', 'ನಿಜವಾದ ದೇಶಪ್ರೇಮ', 'ದೈತ್ಯ ಮತ್ತು ಗುಜ್ಜಾರಿ', 'ಚರ್ಮ ಹದಮಾಡುವುದು' ಎಂಬಂತೆ ಭಾಷಾಂತರ ಹೊಂದಿವೆ. ಗ್ರಂಥಕರ್ತರು ಗೊರೂರಿನ ಮೈಸೂರು ಗ್ರಾಮ ಸೇವಾ ಸಂಘದ ಕಾರ್ಯದರ್ಶಿಗಳೂ ಆಗಿದ್ದುದರಿಂದ ಕೃತಿಯ ಅನುವಾದಕಾರ್ಯವನ್ನು ಕೇವಲ ಸಾಹಿತ್ಯಿಕ ಉದ್ದೇಶದಿಂದಲೇ ಮಾಡಿಲ್ಲ ವೆಂಬುದು ಸ್ಪಷ್ಟವಿದೆ. ತಮ್ಮ ಸಂಘದ ಚಟುವಟಿಕೆಗಳಿಗೆ ಇದರಿಂದ ಸಮರ್ಥನೆಯೂ ದೊರೆಯಬೇಕು, ಸ್ವದೇಶಿ ಎಂಬುದರ ಅರ್ಥ ಎಲ್ಲರಿಗೂ ತಿಳಿಯಬೇಕು ಎಂಬ ಪ್ರಚಾರದ ಉದ್ದೇಶ ಇದರಲ್ಲಿ ಸೇರಿದೆ. ಮೂಲತಃ ಗಾಂಧೀಜಿಯವರೂ ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸಿದವರಲ್ಲ. ಜನತೆಯ ಉದ್ಧಾರ, ಸ್ವಾತಂತ್ರ್ಯ ಪ್ರಾಪ್ತಿ ಮೊದಲಾದ ಉದ್ದೇಶ ಸಾಧನೆಗಾಗಿ ಬರೆದರು, ಭಾಷಣ ಮಾಡಿದರು. ಬಸವಣ್ಣನವರು ಹೇಗೆ ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸಲಿಲ್ಲವೋ ಹಾಗೆಯೇ ಗಾಂಧೀಜಿಯವರು ಸಹ. ಆದರೆ ಇಬ್ಬರೂ ಸಮಾಜ ಸುಧಾರಕರಾದುದರಿಂದ, ಕವಿಹೃದಯವುಳ್ಳವರಾದುದರಿಂದ, ಅವರು ಬರೆದದ್ದು ಸಾಹಿತ್ಯವೂ ಆಯಿತು. ಆದ್ದರಿಂದ ಗೊರೂರರ ಅನುವಾದ ಕೃತಿ ಸಹ ಪ್ರಚಾರ ಮಾಧ್ಯಮವೂ ಆಗಿರುವುದು ದೋಷವೇನಲ್ಲ.

ಗಾಂಧೀಜಿಯವರು ಪ್ರಚಂಡ ವಾಗ್ಮಿಗಳೂ ಅಲ್ಲ, ಉದ್ದಾಮ ಸಾಹಿತಿಯೂ ಅಲ್ಲ. ಅವರ ಭಾಷೆ ಸರಳ, ವಿಷಯವೂ ಸರಳ. ಓದುವವರಿಗೆ ಸುಲಭವಾಗಿ ಅರ್ಥವಾಗು ವಂತೆಯೇ (ಮಾತನಾಡುತ್ತಾರೆ) ಬರೆಯುತ್ತಾರೆ. ವಿಷಯಪ್ರಸಾರವೇ ಪ್ರಧಾನ ಉದ್ದೇಶವಾದುದರಿಂದ ಅಲಂಕೃತ ಶೈಲಿಯನ್ನು ಬಳಸಿಕೊಂಡಿಲ್ಲ. ಬರವಣಿಗೆಯಲ್ಲಿ ಉಪಮೆ, ರೂಪಕ ಮೊದಲಾದ ವಿಶೇಷ ಅಂಶಗಳನ್ನು ಕಾಣಲಾರೆವು. ಅವರ ಉಡುಪು, ಅವರ ಆಹಾರ, ಅವರ ಮನೋರಂಜನೆ ಎಷ್ಟು ಸರಳವೋ ಬರವಣಿಗೆಯೂ ಅಷ್ಟೇ.

ಗೊರೂರರೂ ಸಹ ಸರಳ ಜೀವನ ನಡೆಸುವ ವ್ಯಕ್ತಿಗಳಾದುದರಿಂದ ಗಾಂಧೀಜಿಯವರ ಶೈಲಿ ಇವರಲ್ಲಿಯೂ ಕಾಣಿಸಿಕೊಂಡಿದೆ. ತಿಳಿಯಾದ ಶೈಲಿಯಲ್ಲಿ ಅನುವಾದ ಮಾಡಿ ದ್ದಾರೆ. 'ಪೂರ್ಣ ಸ್ವದೇಶಿ'ಯನ್ನು ಓದುವಾಗ ಎಲ್ಲಿಯೂ ಅದು ಭಾಷಾಂತರ ಕೃತಿ

ಯೆಂದು ಅನ್ನಿಸುವುದಿಲ್ಲ. ವಸ್ತು ಸಂಪೂರ್ಣ ಮನದಟ್ಟಾದರೆ ಓದುಗನಿಗೆ ಅನುವಾ ಗಲೂ ಸುಲಭವೇ. ವಸ್ತು, ವಿಷಯಗಳು ಅರ್ಥವಾಗದಿದ್ದಾಗ ಭಾಷೆಯನ್ನೇ ಬಲವಾಗಿ ಹಿಡಿದು ಒಂದಕ್ಷರವನ್ನೂ ಬಿಡದೆ ಯಥಾವತ್ತಾಗಿ ತರುವುದು ಸೋಲಿಗೆ ಕಾರಣವಾಗುತ್ತದೆ. ಭಾವ ಸಮತಾನದಲ್ಲಿ ಹಿಡಿಯುವಾಗ ಎಲ್ಲವೂ ಸರಿಯಾಗಿ ಕಾಣುತ್ತದೆ. ಇಂಗ್ಲಿಷ್ ಮತ್ತು ಕನ್ನಡ ಕೃತಿಗಳ ಒಂದೆರಡು ಭಾಗಗಳನ್ನು ನೋಡಿದರೆ ಮೇಲಿನ ಮಾತು ಸ್ಪಷ್ಟವಾಗುತ್ತದೆ:

(i) I hope I have given enough illustrations to show how best and uncultivated this field of true Swadeshi is. It is capable of limitless expansion and of producing without any capital outlay, new wealth in the country and providing honourable employment to those who are today starving for want of it. (ಪುಟ 13–14)

ಈ ಸ್ವದೇಶಿ ಬಯಲು ಎಷ್ಟು ಉತ್ತಮವಾದುದು ಮತ್ತು ವ್ಯವಸಾಯವಿಲ್ಲದುದು ಎಂಬುದನ್ನು ತೋರಿಸಲು ನಾನು ಬೇಕಾದಷ್ಟು ಉದಾಹರಣೆಗಳನ್ನು ಕೊಟ್ಟಿರುವೆನೆಂದು ಊಹಿಸುತ್ತೇನೆ. ಅದರಲ್ಲಿ ಮಿತಿಯಿಲ್ಲದ ಬೆಳವಣಿಗೆಗೆ ಅವಕಾಶವಿದೆ. ಮೂಲಧನದ ಆವಶ್ಯಕತೆಯಿಲ್ಲದೆ ಈ ಹೊಸ ಐಶ್ವರ್ಯವನ್ನು ನಾವು ಗಳಿಸಬಹುದು ಮತ್ತು ಉದ್ಯೋಗವಿಲ್ಲದೆ ಸಾಯುತ್ತಿರುವ ಜನರಿಗೆ ಗೌರವವಾದ ಉದ್ಯೋಗವನ್ನು ಒದಗಿಸಿಕೊಡಬಹುದು. (ಪುಟ ೧೩)

(ii) You are right, but the world is not governed entirely by logic. Life itself involves some kind of violence and we have to choose the path of least violence. (ಪುಟ 16)

ನಿನ್ನ ಮಾತು ನಿಜ. ಆದರೆ ಪ್ರಪಂಚದಲ್ಲಿ ಬರಿಯ ವಿವೇಕ ಮಾತ್ರವೇ ಆಳುತ್ತಿಲ್ಲ. ಜೀವನದಲ್ಲಿ ಒಂದು ಬಗೆಯಾದ ಹಿಂಸೆ ಇದ್ದೇ ಇದೆ. ಅತ್ಯಲ್ಪವಾದ ಹಿಂಸೆಯ ದಾರಿಯನ್ನು ನಾವು ಆರಿಸಿಕೊಳ್ಳಬೇಕಾಗಿದೆ. (ಪುಟ ೧೬)

(iii) Birth Control to me is a dismal abyss. (ಪುಟ 49)

'ನನಗೆ ಸಂತಾನ ನಿಯಮ'ವು ಕತ್ತಲು ತುಂಬಿರುವ ಭಯಂಕರವಾದ ಪಾತಾಳದಂತಿದೆ. (ಪುಟ ೮೦)

(iv) Our tastes have been so debased that miracles happening before our very eyes appear like so much dust or clay and trifles coming from abroad become exquisite pieces of art ; water from a spring in far off Europe with the witchery of an unintelligble name becomes invested with miraculous

quality while the water of the holy Ganges which is said to be a purifier and a natural disinfectant seems to be no better than water from a dirty pool. (ಪುಟ 60–61)

ನಮ್ಮಲ್ಲಿ ರಚಬೇಕಾದ ಅಭಿರುಚಿಗಳೆಲ್ಲ ಕೀಳಾಗಿ ಕ್ಷೀಣವಾಗಿವೆ. ನಮ್ಮ ಕಣ್ಣ ಮುಂದೆ ಇರುವ ಸಜೀವವಾದ ಆಶ್ಚರ್ಯದ ಪದಾರ್ಥಗಳೆಲ್ಲ ಅಷ್ಟು ಮಣ್ಣು ಮತ್ತು ಧೂಳಿನಂತೆ ಕಾಣುತ್ತವೆ. ಹೊರಗಿನಿಂದ ಬರುವ ಕೆಲಸಕ್ಕೆ ಬಾರದ ಸಣ್ಣ ಸಾಮಾನುಗಳೆಲ್ಲ ಅತ್ಯಂತ ಶ್ರೇಷ್ಠವಾದ ಕಲಾಪ್ರತಿಮೆಗಳಂತೆ ನಮಗೆ ಕಾಣುತ್ತವೆ. ದೂರ ದೇಶವಾದ ಯೂರೋಪಿನ ಯಾವುದೋ ಒಂದು ಬುಗ್ಗೆಯ ನೀರು ನಮಗೆ ಅರ್ಥವಾಗದ ಒಂದು ಮೋಸದ ಹೆಸರಿನಿಂದ ಆಶ್ಚರ್ಯಗುಣಗಳಿಂದ ಕೂಡಿರುವುದೆಂದು ಪ್ರಖ್ಯಾತವಾಗುವುದು. ಇಲ್ಲಿಯ ಪವಿತ್ರವಾದ ಗಂಗೆಯ ನೀರನ್ನಾದರೋ—ದೇಹವನ್ನು ಶುದ್ಧಿಮಾಡುವುದೆಂದೂ ಕ್ರಿಮಿನಾಶಕವೆಂದೂ ತಿಳಿದಾಗ್ಯೂ—ನಾವು ಅಶುದ್ಧವಾದ ಕೊಳದ ನೀರಿನಂತೆ ಕಾಣುವೆವು. (ಪುಟ ೧೨೪)

ಮೇಲಿನ ಅನುವಾದಗಳಲ್ಲಿ ಒಂದೆರಡು ಶಬ್ದಗಳ ವಿನಾ ಉಳಿದ ಭಾಗ ಸರಿಯಾಗಿ ಕನ್ನಡಕ್ಕೆ ಬಂದಿರುವುದನ್ನು ಕಾಣುತ್ತೇವೆ. ಮೂಲದಲ್ಲೇ *Cent per Cent Swadeshi* ಎನ್ನುವುದರ ಬದಲು *Poorna Swadeshi* ಎಂದಿದ್ದರೆ ಸರಿಯಾಗುತ್ತಿತ್ತು. 'ಸ್ವದೇಶಿ' ಎನ್ನುವುದು ಹೇಗೆ ತಾಂತ್ರಿಕ ಶಬ್ದವೋ 'ಪೂರ್ಣ'ವೂ ತಾಂತ್ರಿಕ ಶಬ್ದ. ಆದ್ದರಿಂದ ಗೊರೂರರು 'ನೂರಕ್ಕೆ ನೂರು ಸ್ವದೇಶಿ' ಎನ್ನದೆ 'ಪೂರ್ಣ ಸ್ವದೇಶಿ' ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ.

೨

'ಭಕ್ತಿಯೋಗ' ಎನ್ನುವ ಪುಸ್ತಕ ಸ್ವಾಮಿ ವಿವೇಕಾನಂದರ 'ಭಕ್ತಿಯೋಗ' ಎನ್ನುವ ಇಂಗ್ಲಿಷ್ ರಚನೆಯ ಅನುವಾದ. 'ಭಕ್ತಿಯೋಗ' ಸ್ವಾಮೀಜಿಯವರ ಕುಶಲನಿರೂಪಣ ಶಕ್ತಿಗೆ ದ್ಯೋತಕವಾಗಿದೆ. ಅದರಲ್ಲಿ ಇಪ್ಪತ್ತು ಅಧ್ಯಾಯಗಳೂ ಜತೆಗೆ ಉಪಸಂಹಾರವೂ ಸೇರಿದೆ. ಭಕ್ತಿ ಎಂದರೇನು ಎನ್ನುವುದರಿಂದ ಪ್ರಾರಂಭಿಸಿ, ಅದರ ವಿವಿಧ ಸ್ವರೂಪಗಳನ್ನು ವಿವರಿಸಿ, ಅದರ ಗುರಿಯನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರರು 'ಭಕ್ತಿಯೋಗ'ವನ್ನು ಅನುವಾದಿಸಲು ಯೋಚಿಸುವಷ್ಟರಲ್ಲಿ ಆ ಭಾಗವನ್ನು ಒಳಗೊಂಡಿರುವ ಹೊತ್ತಗೆಯು ಇಂಗ್ಲಿಷ್ ಭಾಷೆಯಲ್ಲಿ ಅನೇಕ ಆವೃತ್ತಿಗಳನ್ನು ಕಂಡಿದ್ದಿತು. ಸ್ವಾಮೀಜಿಯವರ 'ಕೃತಿಶ್ರೇಣಿ' ಕನ್ನಡದಲ್ಲಿ ಮೊದಲನೆ ಸಾರಿ ಬಂದದ್ದು ಹತ್ತು ವರುಷಗಳ ಹಿಂದೆ ಮಾತ್ರ. ಅಂದರೆ 'ಕೃತಿಶ್ರೇಣಿ' ಕಾಣಿಸಿಕೊಳ್ಳಲು ಇನ್ನೂ ಇಪ್ಪತ್ತೆರಡು ವರ್ಷಗಳಿದ್ದಂತೆಯೇ ಗೊರೂರರು ಅನುವಾದ ಮಾಡಲು ಯತ್ನಿಸಿರುವುದು ಶ್ಲಾಘನೀಯ ಕಾರ್ಯ. ಗೊರೂರರು ಅನುವಾದಿಸಿರುವ

‘ಭಕ್ತಿಯೋಗ’ ಸಂಪೂರ್ಣವಾಗಿ ದೊರೆತಿಲ್ಲ. ಸುಮಾರು ಹದಿನೆಂಟು ಅಧ್ಯಾಯಗಳಿಗೆ ತುಸು ಕಡಿಮೆ ದೊರೆತಿದೆ. ಗೊರೂರರ ಅನುವಾದ ಕೃತಿಯಲ್ಲಿ ಪ್ರಾರಂಭದಲ್ಲಿ ‘ಭಕ್ತಿಯ ಲಕ್ಷಣಗಳು’ ಎಂಬ ಅಧ್ಯಾಯವಿದೆ. ಇದರಲ್ಲಿ ಭಕ್ತಿ ಹೇಗೆ ಅಭಿವ್ಯಕ್ತಗೊಳ್ಳುತ್ತದೆಂಬುದರ ವಿವರಣೆಯನ್ನು ಕಾಣುತ್ತೇವೆ. “ದೇವರಲ್ಲಿ ಮನುಷ್ಯನಿಗಿರುವ ಅತ್ಯಂತ ತೀವ್ರವಾದ ಪ್ರೇಮವೇ ಭಕ್ತಿ.” ಭಕ್ತಿಯಲ್ಲಿ ಎರಡು ದರ್ಜೆಗಳಿವೆ. ಅವು ಪರಸ್ಪರ ಭಿನ್ನವೂ ಅಲ್ಲ, ವಿರುದ್ಧವೂ ಅಲ್ಲ. ಒಂದರ ವಿಸ್ತೃತ ರೂಪವೇ ಇನ್ನೊಂದು. ಸಾಧಕನ ದಾರಿಯಲ್ಲಿ ಇರುವ ಮಜಲುಗಳು. ಮೊದಲನೆಯದು ಗೌಣಭಕ್ತಿ; ಎರಡನೆಯದು ಪರಾಭಕ್ತಿ. ಗೌಣಭಕ್ತಿ ಮಜಲಿನಲ್ಲಿ ಭಕ್ತ ಇನ್ನೂ ಪ್ರಾರಂಭದ ದೆಸೆಯಲ್ಲಿರುತ್ತಾನೆ. ಆತನಿಗೆ ವಿಗ್ರಹಗಳು ಬೇಕು. ಪೂಜಾವಸ್ತುಗಳು ಅವಶ್ಯಕ. ಮಾನವ ದೇಹದ ಗುರು ಅತ್ಯಗತ್ಯ. ಮಂತ್ರಗಳ ಪಠನ, ಮೂರ್ತಿಗಳ ಆರಾಧನೆ, ಮೊದಲಾದುವು ಅನಿವಾರ್ಯವಾಗುತ್ತವೆ. ಭಕ್ತ ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಿ ನಡೆದಂತೆಲ್ಲ ಹಿಂದಿನ ಅಗತ್ಯಗಳು ಅನಾವಶ್ಯಕವಾಗುತ್ತವೆ. ಇದನ್ನೇ ವಿಕಾಸ ಎನ್ನುವುದು. ಮನುಷ್ಯ ಬಾಲ್ಯದಿಂದ ಪ್ರೌಢಾವಸ್ಥೆಗೆ ತಲುಪಿದಾಗಲೂ ಸಹ ಶೈಶವಾವಸ್ಥೆಯ ವಿನೋದ, ಕ್ರೀಡೆಗಳಲ್ಲಿ ತೀವ್ರವಾಗಿ ತೊಡಗುವುದು ಆತನ ಮಾನಸಿಕ ಕುಬ್ಜತೆಯನ್ನು ತೋರಿಸುತ್ತದೆ. ಆದರೆ ಮೂರು ವರ್ಷದ ಮಗು ಆಟವಾಡಿದರೆ ಹಾಸ್ಯಾಸ್ಪದವಾಗುವುದಿಲ್ಲ; ಹಾಸ್ಯಪೂರ್ಣವಾಗಿರುತ್ತದೆ.

ಭಕ್ತಿಯೋಗಕ್ಕೆ ಹೆಚ್ಚು ಪ್ರಾಧಾನ್ಯ ಕೊಡಲು ಕಾರಣವೇನು? ಕರ್ಮಯೋಗ, ಜ್ಞಾನಯೋಗ ಹಾಗೂ ರಾಜಯೋಗಗಳಿಗಿಂತ ಇದು ಹೇಗೆ ಜನಪ್ರಿಯವಾಯಿತು? ಮನುಷ್ಯ ಯಾವಾಗಲೂ ಸೌಲಭ್ಯಾಕಾಂಕ್ಷಿ. ಹೊಳೆ ಹೇಗೆ ತನ್ನ ಮಾರ್ಗವನ್ನು ಹುಡುಕಿಕೊಂಡು ಹರಿಯುವುದೋ ಹಾಗೆಯೇ ಮಾನವಚೇತನವೂ ತನ್ನ ದಾರಿಯನ್ನು ಕಂಡುಹಿಡಿಯುತ್ತದೆ. ರಾಜಯೋಗವೆನ್ನುವುದು ದೈಹಿಕಸಂಯಮಕ್ಕೆ ಹೆಚ್ಚು ಒತ್ತನ್ನೀಯುತ್ತದೆ. ಏಕಾಂತವಾಸ, ಅಹರ್ನಿಶಿ ಧ್ಯಾನ, ಆಹಾರ ವಿಹಾರಗಳಲ್ಲಿ ವೈಚಿತ್ರ್ಯ ಮೊದಲಾದ ಒಂದೊಂದೂ ಶ್ರೀಸಾಮಾನ್ಯನನ್ನು ಗಾಬರಿಪಡಿಸುತ್ತವೆ. ಶೀಘ್ರವಾಗಿ ಫಲ ದೊರೆಯುವುದಾದರೆ ಆ ತೀವ್ರತೆಗೆ ಮಾನವ ಚೇತನ ತಡೆಯಲಾರದು. ಜ್ಞಾನಯೋಗವೂ ಸಹ ಸುಲಭವಲ್ಲ. ಜ್ಞಾನಖಡ್ಗದಿಂದ ಅಜ್ಞಾನವನ್ನು ಸೀಳುತ್ತಾ ನಡೆಯಬೇಕು. ಜ್ಞಾನಯೋಗಿ ಒಬ್ಬ ಮಹಾಯೋಧ. ಶಾಶ್ವತ–ಅಶಾಶ್ವತಗಳನ್ನು ಪೃಥಕ್ಕರಿಸಿ ನೋಡುತ್ತ ಹೆಜ್ಜೆ ಹೆಜ್ಜೆಗೂ ವಿಶ್ಲೇಷಿಸಿ ಪರೀಕ್ಷಿಸುತ್ತಾ, ಜಗತ್ತನ್ನೇ ತೃಣಪ್ರಾಯವಾಗಿ ಕಂಡು “ಬ್ರಹ್ಮ ಸತ್ಯ ಜಗನ್ಮಿಥ್ಯಾ” ಎಂಬ ತತ್ತ್ವವನ್ನು ಹಿಡಿದು ನಿರಂತರವೂ ಪರಬ್ರಹ್ಮನ ಸ್ಮರಣೆಯಲ್ಲಿಯೇ ಕಾಲಕಳೆಯುವುದು ಕಠಿನ. ಕರ್ಮಯೋಗ ಮೇಲೆ ಹೇಳಿದ ಎರಡು ಯೋಗಗಳಿಗಿಂತ ಭಿನ್ನವಾದುದು. ಆ ಎರಡು ಯೋಗಗಳ ಅನುಷ್ಠಾನಕ್ಕೆ ಸಂಸಾರಿ ಅರ್ಹನಾಗುವುದು ದುಸ್ಸಾಧ್ಯ. ಇನ್ನು ಕರ್ಮಯೋಗ ಸಂಸಾರಿಗಳಿಗೆ ಸಾಧ್ಯವಾದುದೇ. ‘ಗೀತೆ’ಯಲ್ಲಿ ಹೇಳಿರುವಂತೆ “ಕರ್ಮಣಿ ಏವ ಅಧಿಕಾರಸ್ತೇ ಮಾ

ಫಲೇಷು ಕದಾಚನ" ಎಂಬ ಆದರ್ಶ ವಾಕ್ಯದ ಬೆಳಕಿನಲ್ಲಿ ದುಡಿಯುತ್ತ ದುಡಿಮೆಯ ಫಲವನ್ನು ದೈವಕ್ಕೆ ಬಿಟ್ಟು ಬದುಕಬೇಕು. ಮನುಷ್ಯ ಫಲವನ್ನು ಬಯಸಿಯೇ ಉದ್ಯೋಗಿಯಾಗುವುದು. ಅನಾಸಕ್ತನಾಗಿ ಸಂಸಾರದಲ್ಲಿದ್ದು ಸೇವಾ ಮನೋಭಾವದಿಂದ ಮನೆ–ಜಗತ್ತುಗಳನ್ನು ಒಂದಾಗಿ ಭಾವಿಸಿ ಜೀವನ ನಡೆಸುವುದು ಕರ್ಮಯೋಗಿಯ ಲಕ್ಷಣ. "ಅನಾಸಕ್ತನಾಗಿರಬಲ್ಲೆ....ಆದರೆ ಕೆಲಸಕಾರ್ಯಗಳಲ್ಲಿ ತೊಡಗಿದರೆ ಅಶಾಂತನಾಗುವೆ" ಎನ್ನುವುದು ಇಲ್ಲಿ ಸಲ್ಲದು. ಹಗಲಿರುಳು ದುಡಿಯುತ್ತಿದ್ದರೂ ವಿಚಲಿತನಾಗದೆ ಮನಸ್ಸನ್ನು ದೇವರಲ್ಲಿ ನ್ಯಾಸವಾಗಿಟ್ಟು ಬದುಕಬೇಕು. ಅರಿಯದವರ ಕಣ್ಣಿಗೆ ಆತ ತೀರ ಲೌಕಿಕ. ಅರಿತವರ ಕಣ್ಣಿಗೆ ಮಾತ್ರ ಸತ್ಯಗೋಚರ. ಭಕ್ತಿಯೋಗ ಕಡೆಯದೆಂದು ಭಾವಿಸಬಾರದು. ಸಂಸಾರಿಗಳಿಗೆ ಭಕ್ತಿಮಾರ್ಗ ಶ್ರೇಷ್ಠವಾದುದರಿಂದ ಅದನ್ನು ಸ್ವಾಮೀಜಿ ಒತ್ತಿ ಹೇಳಿದ್ದಾರೆ. ಇಪ್ಪತ್ತನೆ ಶತಮಾನದ ಸಂಸಾರಿ ತೀವ್ರ ಆಕರ್ಷಣೆಗಳ ಮಧ್ಯೆ ಬಾಳು ಸಾಗಿಸಬೇಕು. ವಿಜ್ಞಾನದ ಪ್ರಗತಿಯಿಂದ ಭೂಲೋಕವೇ ದೇವಲೋಕವೇನೋ ಎಂಬ ಭ್ರಮೆಯೂ ಮೂಡಿದೆ. ಏಕಾಂತ ಜೀವನವಂತೂ ಅಸಾಧ್ಯವಾಗಿದೆ. ಸದ್ದುಗದ್ದಲಗಳ ಮುದ್ದೆಯಾಗಿದೆ ಲೋಕ. ಸಂಕೀರ್ಣವಾಗಿದೆ ಜೀವನ. ಕಾಣದ ಕೈಗಳು ನಿಯಂತ್ರಿಸುತ್ತವೆ. ಒಂದಕ್ಕೊಂದಕ್ಕೆ ವಿಚಿತ್ರವಾದ ಸಂಬಂಧಗಳೇರ್ಪಟ್ಟು ಯಾರು ಯಾರಿಗೆ ಯಾವಾಗ ಏಕೆ ಬೇಕಾಗುವರೆಂದು ಕೂಡಲೇ ಹೇಳಬರುವಂತಿಲ್ಲ. ಇಂತಹ ಸಮಾಜದಲ್ಲಿ ಜೀವಿಸುವ ಮನುಷ್ಯ ತನ್ನ ಸಾಧನೆಯನ್ನು ಭಕ್ತಿಮಾರ್ಗದಲ್ಲಿ ನಡೆಸುವುದು ಶ್ರೇಯಸ್ಕರವೆಂಬುದು ಸಂತರ ಅಭಿಪ್ರಾಯ. ಆದ್ದರಿಂದಲೇ ಆಧುನಿಕ ಜಗತ್ತಿನಲ್ಲಿ ಭಕ್ತಿಯೋಗಕ್ಕೆ ಪುರಸ್ಕಾರ. ಉಳಿದ ಮಾರ್ಗಗಳು ಒಂದೊಂದು ದಿಕ್ಕಿನಲ್ಲಿ ಕಷ್ಟವೆಂದ ಮಾತ್ರಕ್ಕೆ ಭಕ್ತಿಮಾರ್ಗ ಸುಲಭವೆಂದು ತಿಳಿಯುವುದು ತಪ್ಪು. ದಾಸರು "ಭಕುತಿ ಸುಲಭವಲ್ಲ ಶ್ರೀಹರಿ ಭಕುತಿ ಸುಲಭವಲ್ಲ" ಎಂದರು. ಬಸವಣ್ಣನವರು "ಭಕ್ತಿಯೆಂಬುದ ಮಾಡಬಾರದು; ಗರಗಸದಂತೆ ಹೋಗುತ್ತ ಕೊಯ್ಯುವುದು ಬರುತ್ತ ಕೊಯ್ಯುವುದು" ಎಂದು ಹೇಳಿರುವುದನ್ನು ಗಮನಿಸಬೇಕು. ಭಕ್ತಿಮಾರ್ಗ ಸಂಸಾರಿ ಜೀವಕ್ಕೆ ಹಿತಕರವಾದುದು ಎಂದಾಗ ಎಲ್ಲಾ ಸಂಸಾರಿಗಳಿಗೂ, ಎಲ್ಲಾ ಮನುಷ್ಯರಿಗೂ ಎಂದಲ್ಲ; ಅದರಲ್ಲಿಯೂ ಅಧಿಕಾರಿ ಭೇದವಿದೆ.

ಗುರುವಿನ ಮಹತ್ವವೂ ಕಡೆಗಣಿಸಲಾಗದ ಅಂಶ. ದೇಹವನ್ನು ಪಡೆದಿರುವ ಆತ್ಮ ನಿರಾಕಾರ ನಿರ್ಗುಣ ಪರಬ್ರಹ್ಮೋಪಾಸನೆಗೆ ಒಲಿಯುವುದು ಸುಲಭವಲ್ಲ. ಅಗೋಚರ ಗುರುವಿನ ಮಾರ್ಗದರ್ಶನವೂ ಕಷ್ಟವೇ. ಆದ್ದರಿಂದಲೇ ಅರ್ಹತೆಯುಳ್ಳ ಯೋಗ್ಯ ಗುರು ದೊರೆತಾಗ ಮುಮುಕ್ಷುವಾದ ಶಿಷ್ಯನಿಗೆ ಉತ್ತಮ ನಿರ್ದೇಶನ ದೊರೆಯುತ್ತದೆ. ಭಕ್ತನಿಗೆ ಹೇಗೆ ಗುರು ಬೇಕೋ ಹಾಗೆಯೇ ಇಷ್ಟವಿಗ್ರಹವೂ ಬೇಕು. ಆ ಮೂರ್ತಿಯ ಆರಾಧನೆಯ ಮೂಲಕ ದೇವರನ್ನು ಮುಟ್ಟುತ್ತಾನೆ.

ಗೌಣೀ ಭಕ್ತಿಯ ಮಟ್ಟದಲ್ಲಿ ಭಕ್ತ ಎಷ್ಟೋ ವಿಚಾರಗಳಲ್ಲಿ ಸೀಮಿತನಾಗಿಯೂ, ಸೂತ್ರಬದ್ಧನಾಗಿಯೂ, ಸ್ವ–ಪರ ಭಾವವುಳ್ಳವನಾಗಿಯೂ ಇರುತ್ತಾನೆ. ಆದರೆ ಸಾಧನೆ

ಮುಂದುವರೆದು ಸಾಧಕ ಪರಾಭಕ್ತಿಯ ಹಂತದೊಳಗೆ ಬಂದಾಗ ವೈರಾಗ್ಯ-ಪ್ರೇಮಗಳೆಂಬ ಎರಡು ನೂತನ ಕಣ್ಣುಗಳಿಂದ ಜಗತ್ತನ್ನು ಕಾಣುತ್ತಾನೆ. ಒಂದು ನಿಷೇಧಾತ್ಮಕ (Negative); ಇನ್ನೊಂದು ವಿಧಾಯಕಾತ್ಮಕ (Positive). ಎಲ್ಲವನ್ನು ಬಿಟ್ಟು ಎಲ್ಲವನ್ನು ಪಡೆಯುತ್ತಾನೆ. ತನ್ನ ಸುತ್ತುಮುತ್ತು ಇರುವ ಕಟ್ಟೆಯನ್ನು ತಾನೇ ಮುರಿದು ವಿಶಾಲ ವಿಶ್ವದಲ್ಲಿ ಸೇರಿಕೊಳ್ಳುತ್ತಾನೆ. ಆಗ ತನ್ನ ದೇಶ, ತನ್ನ ಮತ, ತನ್ನ ಧರ್ಮ ಮೊದಲಾದ ನುಡಿಗಳು ಅರ್ಥರಹಿತವಾಗುತ್ತವೆ. ಅವನಿಗೆ ಸರ್ವಭೂತಗಳಲ್ಲಿಯೂ ದೇವರೇ ಕಾಣುವುದರಿಂದ ವಿಶ್ವವನ್ನೇ ಪ್ರೀತಿಸುತ್ತಾನೆ. ಆತನ ಹೃದಯದಲ್ಲಿ ಪ್ರೇಮ ಕಡಲಾಗುತ್ತದೆ. ಆ ಪ್ರೇಮದ ಲಕ್ಷಣಗಳೆಂದರೆ ವ್ಯಾಪಾರೀ ಮನೋಭಾವವಿಲ್ಲದಿರುವಿಕೆ, ನಿರ್ಭಯತೆ, ಪ್ರತಿಕಕ್ಷಿಯ ಅಭಾವ. ಇಂತಹ ಪ್ರೇಮವನ್ನು ಹೊಂದಿರುವ ಸಾಧಕ ಮುಕ್ತನೆಂದೇ ಹೇಳಬಹುದು.

ಸ್ವಾಮೀಜಿಯವರ ಎಲ್ಲಾ ಕೃತಿಗಳೂ ಹತ್ತು ವರ್ಷಗಳ ಹಿಂದೆ ಹತ್ತು ಭಾಗಗಳಲ್ಲಿ ಕನ್ನಡ ಭಾಷೆಯಲ್ಲಿ ಅವತರಿಸಿದುವು. ಅವುಗಳಲ್ಲಿ ಇರುವ 'ಭಕ್ತಿಯೋಗ'ದ ಅನುವಾದ, ಗೊರೂರರ ಅನುವಾದಗಳೆರಡನ್ನೂ ನೋಡಿದಾಗ ಶೈಲಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಶೈಲಿ ಎನ್ನುವುದು ಸಾಹಿತಿಯ ಸ್ವಂತ ರೀತಿ. "Style is man" ಎನ್ನುವುದೂ ಉಂಟು. ಸ್ವಾಮೀಜಿಯವರ ಶೈಲಿ ಓಜಸ್ಸಿನಿಂದ ಕೂಡಿದುದು. ಗೌಡೀ ಶೈಲಿ. ವಾಕ್ಯದ ಓಟ, ಶಬ್ದಗಳ ನಾದಮಾಧುರ್ಯ ಅಪೂರ್ವವಾದುದು. 'ಕೃತಿಶ್ರೇಣಿ'ಯ ಶೈಲಿಯೂ ಮೂಲದ ಶೈಲಿಯನ್ನು ಅನುಸರಿಸಲು ಯತ್ನಿಸಿದೆ. ಆದ್ದರಿಂದ ವಾಕ್ಯದ ಬಿಗಿಯಾದ ಬಂಧ, ಸಂಸ್ಕೃತ ಶಬ್ದಗಳ ಪ್ರಯೋಗ ಕಂಡುಬರುತ್ತದೆ. ಸೌಂದರ್ಯದ ದೃಷ್ಟಿಯಿಂದ ನೋಡಿದರೆ 'ಕೃತಿಶ್ರೇಣಿ'ಯ ಅನುವಾದ ಗೊರೂರರ ಅನುವಾದಕ್ಕಿಂತ ಸಮರ್ಪಕವಾಗಿರುವುದನ್ನು ಕಾಣಬಹುದು. ಗೊರೂರರ ಅನುವಾದ ಸರಳವಾಗಿದೆ. ಕನ್ನಡ ಕಾವ್ಯಗಳ ಪರಿಚಯವಿಲ್ಲದ ಸಾಮಾನ್ಯ ಓದುಗರಿಗೆ ಸುಲಭವಾಗಿ ಅರ್ಥವಾಗುವಂತಿದೆ. ಸಂಸ್ಕೃತ ಶಬ್ದಗಳು ಕಡಿಮೆ. ವಾಕ್ಯವೂ ಸರಳವಾಗಿದೆ. ಕೆಲವೊಮ್ಮೆ ಶಿಥಿಲವೂ ಆಗಿಬಿಡುತ್ತದೆ. ಉದಾ :

> 'ಕೃತಿಶ್ರೇಣಿ' ಅನುವಾದ : 'ಸ್ಮರಿಸಲ್ಪಡುವ ವಸ್ತುವಾದ ಪರಮಾತ್ಮನಿಗೆ ಬಹಳ ಪ್ರಿಯವಾಗಿರುವುದೆಂಬ ಕಾರಣದಿಂದ ಆ ಧ್ರುವಾನುಸಂಧಾನ ಪ್ರತ್ಯಕ್ಷ ಅನುಭವದಂತೆ ಯಾರಿಗೆ ಪರಮಪ್ರಿಯವಾಗಿರುವುದೋ ಅವರಿಗೆ ಪರಮಾತ್ಮನ ಲಾಭವಾಗುವುದು. (ಪುಟ ೭–೮)
>
> ಗೊರೂರರ ಅನುವಾದ : ಆದುದರಿಂದ ಯಾರಿಗೆ ಧ್ಯಾನದ ದೇವರನ್ನು ಪ್ರತ್ಯಕ್ಷವಾಗಿ ಕಂಡಷ್ಟು ಇಷ್ಟವಾಗುತ್ತದೋ ಅವನೇ ಆತ್ಮಕ್ಕೆ ಬೇಕಾದವನಾಗುತ್ತಾನೆ. ಅಂದರೆ ಅವನಿಗೆ ಮಾತ್ರ ಆತ್ಮವು ಸಿದ್ಧಿಸುತ್ತದೆ. (ಪುಟ ೬)

ಸ್ವಾಮೀಜಿಯವರ ಭಾವಾವೇಶದಿಂದ ಕಾವ್ಯಗೊಂಡು ಸಿಡಿದು, ಸಿಡಿಲಾಗಿ ಬಡಿದು

ಬಲವಾಗಿ ಎಚ್ಚರಿಸುವ ಡಮರು ಧ್ವನಿಯ ಪ್ರತಿಧ್ವನಿಯನ್ನು 'ಕೃತಿಶ್ರೇಣಿ'ಯಲ್ಲಿ ಕಾಣಬಹುದು :

ಸುಂದರವಾಗಿರುವ ಭವ್ಯವಾಗಿರುವ ಕಾವ್ಯಮಯವಾಗಿರುವ ಭಾಗವನ್ನೆಲ್ಲ, ದೇವರೆಡೆಗೆ ತಪ್ಪು ಹೆಜ್ಜೆಯನ್ನಿಟ್ಟುಕೊಂಡು ನಡೆಯುತ್ತಿರುವ ಹಸುಗೂಸಿಗೆ ಸಹಾಯಕವಾಗುವ ಭಾಗವನ್ನೆಲ್ಲ ನಾಶಮಾಡಲು ಯತ್ನಿಸುವ ಶುಷ್ಕ ಮತಭ್ರಾಂತಿಯಿಂದ ಪ್ರೇರಿತವಾದ ಧರ್ಮಗಳು—ಆಧ್ಯಾತ್ಮಿಕ ಚಾವಣಿಗೆ ಆಧಾರಭೂತವಾದ ಮೂಲಸ್ತಂಭಗಳನ್ನೇ ಕಿತ್ತೊಗೆಯಲು ಹವಣಿಸುತ್ತಿರುವ ಧರ್ಮಾಂಧರು ತಮ್ಮ ಅಜ್ಞಾನವಲ್ಲಿ ಮೌಢ್ಯತೆಯಿಂದ ಯಾವುದೋ ಒಂದನ್ನು ಸತ್ಯವೆಂದು ಭ್ರಮಿಸಿ, ಜೀವಪೋಷಕವಾದುದನ್ನೆಲ್ಲ ಜೀವಿಯಲ್ಲಿ ವಿಕಾಸವಾಗುತ್ತಿರುವ ಆಧ್ಯಾತ್ಮಿಕ ತರುವಿಗೆ ಸಾರಭೂತವಾದ ಪೋಷಕ ದ್ರವ್ಯವನ್ನೆಲ್ಲ ನಾಶಮಾಡಲೆತ್ನಿಸುವ ಧರ್ಮಗಳು—ಇವುಗಳಿಗೆ ಕೊನೆಗೆ ತಮಗುಳಿಯುವುದೆಲ್ಲ ತಿರುಳಿಲ್ಲದ ಬರಿಯ ಕರಟ, ಅಸಂಖ್ಯಾತ ಹುರುಳಿಲ್ಲದ ಶಬ್ದಜಾಲ ಮತ್ತು ವಿತಂಡವಾದವೆಂದು ಬಹಳ ಬೇಗ ಗೊತ್ತಾಗುವುದು." (ಪುಟ ೧೫)

ಗೊರೂರರ ಅನುವಾದ :

ಮತಗಳಲ್ಲಿರತಕ್ಕ ಕಾವ್ಯಭಾವಗಳನ್ನೂ ಅವುಗಳಲ್ಲಿ ಮಹತ್ತಾದುದು, ಗಂಭೀರವಾದುದು ದೇವರ ದಾರಿಯನ್ನು ಹುಡುಕಿಕೊಂಡು ಹೋಗ ತಕ್ಕ ಮಕ್ಕಳಂತಹ ಮನಸ್ಸುಳ್ಳವರಿಗೂ ತಿಳಿಯತಕ್ಕುದು ಯಾವುದೋ ಅವುಗಳನ್ನೆಲ್ಲ ತೊಡೆದು, ಒಟ್ಟಿನಲ್ಲಿ ಮತಗಳ ಸೂರಿನ ಕಂಬಗಳನ್ನೇ ಮುರಿದು ಸತ್ಯವೆಂಬುದನ್ನೇ ಅಪಾರ್ಥಮಾಡಿಕೊಂಡು ಮನುಷ್ಯನ ಮನಸ್ಸಿನ ಬೆಳವಣಿಗೆಗೂ ಆತ್ಮದ ವಿಕಾಸಕ್ಕೂ ಅಡ್ಡವಾಗಿ ಬರತಕ್ಕ ಮತಭ್ರಾಂತರ ತತ್ವಗಳಲ್ಲಿ ಬರಿಯ ಮಾತಿನ ಬಯಲುತನವೂ ಆತ್ಮಗಳ ಸುಧಾರಣೆ ಸಮಾಜಗಳ ಸುಧಾರಣೆ ಎಂಬ ಒಣಪದಗಳೂ ಮಾತ್ರ ಕಾಣುತ್ತವೆ. (ಪುಟ ೧೫)

ಗೊರೂರರ ಅನುವಾದ ತಿಳಿಯಾದುದು, ಪಾಮರರಿಗೂ ತಿಳಿಯುವಂತಹುದು. ಆದರೆ ಸಾಹಿತ್ಯಕ ಕಾರಣಗಳಿಗಾಗಿ ಮೇಲಿನ ಭಾಗವನ್ನು ಮೆಚ್ಚುತ್ತೇವೆ. ಸಂಸ್ಕೃತ ಶಬ್ದಗಳು ಮೂಲದ ಸೊಬಗನ್ನು ತಂದುಕೊಡುತ್ತವೆ. ಇನ್ನೊಂದು ಕಾರಣವೆಂದರೆ ವೇದಾಂತಾದಿ ವಸ್ತುಗಳಿಗೂ ಸಂಸ್ಕೃತಕ್ಕೂ ಇರುವ ಸಂಬಂಧ. ವೇದ ಉಪನಿಷತ್ತುಗಳು ಸಂಸ್ಕೃತದಲ್ಲಿ ಹುಟ್ಟಿಬಂದುದರಿಂದ ಆಧ್ಯಾತ್ಮ ವಿಚಾರಕ್ಕೆ ಸಂಸ್ಕೃತ ಹೇಳಿಮಾಡಿಸಿದಂತಹ ಭಾಷೆಯಾಗಿಯೇ ಉಳಿದಿದೆ.

ಗೊರೂರರ ಅನುವಾದದಲ್ಲಿ ಕಂಡುಬರುವ ವೈಶಿಷ್ಟ್ಯವೆಂದರೆ ಮೂಲದಲ್ಲಿಯೂ ಕೊಟ್ಟಿಲ್ಲದ ಕೆಲವು ಉದ್ಧರಣ ಭಾಗಗಳು. 'ಕೃತಿಶ್ರೇಣಿ'ಯಲ್ಲಿ ಕೈಬಿಡಲಾದ ಆಕರ ಶ್ಲೋಕಗಳನ್ನು ಗೊರೂರರ ಅನುವಾದದಲ್ಲಿ ಕಾಣಬಹುದು. ತಮ್ಮ ಮಾತಿಗೆ ಪೋಷಕವಾಗುವ ಶ್ಲೋಕಗಳನ್ನು ಹುಡುಕಿ ಆರಿಸಿಕೊಟ್ಟಿದ್ದಾರೆ. 'ಭಕ್ತಿಯ ಲಕ್ಷಣಗಳು' ಎಂಬಲ್ಲಿ

ಪ್ರಣಿಧಾನಂ ತತ್ರ ಭಕ್ತಿವಿಶೇಷಾ ವಿಶಿಷ್ಟಮುಪಾಸನಂ
ಸರ್ವಕ್ರಿಯಾಣಾಮಪಿ ತತ್ರಾರ್ಪಣಂ ವಿಷಯ ಸುಖಾದಿಕಂ
ಫಲಮನಿಚ್ಛನ್ ಸರ್ವಾಃ
ಕ್ರಿಯಾಸ್ತಸ್ಮಿನ್ ಪರಮ ಗುರಾವರ್ಪಯತಿ (ಪತಂಜಲಿ ಸೂತ್ರ ೧-೨೩) (ಪುಟ ೭)

‘ಇಷ್ಟನಿಷ್ಠೆ’ ಎಂಬ ಭಾಗದಲ್ಲಿ,

ನಾಮ್ನಾಮಕಾರಿ ಬಹುಧಾ ನಿಜಸರ್ವಶಕ್ತಿ-
ಸ್ತತ್ರಾರ್ಪಿತಾ ನಿಯಮಿತಃ ಸ್ಮರಣೇನ ಕಾಲಃ ।
ಏತಾದೃಶೀ ತವ ಕೃಪಾ ಭಗವನ್ ಮಮಾಪಿ-
ದುರ್ದೈವಮೀದೃಶಮಿಹಾಜನಿನಾನುರಾಗಃ ॥ (ಶ್ರೀಕೃಷ್ಣ ಚೈತನ್ಯ) (ಪುಟ ೪೨)

ಇಂತಹ ಅನೇಕ ಮೂಲಗ್ರಂಥಗಳಿಂದ ಆಯ್ದ ಶ್ಲೋಕಗಳನ್ನು ಕಾಣಬಹುದು. ಅಡಿ ಟಿಪ್ಪಣಿಯಲ್ಲಿ ಕಾಣುವ ಈ ಶ್ಲೋಕಗಳಿಂದ ಓದುವವರಿಗೆ ತುಂಬಾ ಅನುಕೂಲ ವುಂಟು. ‘ಕೃತಿಶ್ರೇಣಿ’ ಅನುವಾದಕರು ಆಕರಗಳಿಂದ ಆರಿಸಿಕೊಟ್ಟಿಲ್ಲವಲ್ಲದೆ ಮೂಲ ಇಂಗ್ಲಿಷ್ ಕೃತಿಯಲ್ಲಿರುವ ಅನೇಕ ಸಂಸ್ಕೃತ ಶ್ಲೋಕಗಳನ್ನೂ ಬಿಟ್ಟುಬಿಟ್ಟಿದ್ದಾರೆ.

ಗೊರೂರರ ಅನುವಾದವನ್ನೂ ಮತ್ತು ‘ಕೃತಿಶ್ರೇಣಿ’ಯನ್ನೂ ನೋಡಿದಾಗ ಕೆಲವು ಅಧ್ಯಾಯಗಳಿಗೆ ಕೊಟ್ಟಿರುವ ಶೀರ್ಷಿಕೆಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಇಂತಹ ಕಡೆಗಳಲ್ಲಿ ಮೂಲಕೃತಿಯಲ್ಲಿರುವ ಶೀರ್ಷಿಕೆಗಳಿಗೂ ‘ಕೃತಿಶ್ರೇಣಿ’ಯ ಶೀರ್ಷಿಕೆಗಳಿಗೂ ಸಾಮ್ಯವಿದೆ. ಗೊರೂರರ ಅನುವಾದವೇ ಬೇರೆಯಾಗಿದೆ. ಅರ್ಥದ ದೃಷ್ಟಿಯಿಂದ ಯಾವ ಅಪರಾಧವೂ ಆಗಿಲ್ಲ. ರಚನೆ ಮತ್ತು ರೂಪದಲ್ಲಿ ಮಾತ್ರ ವ್ಯತ್ಯಾಸ. ಉದಾಹರಣೆಗೆ :

ಗೊರೂರರು—‘ಗುರುವಿನ ಮತ್ತು ಶಿಷ್ಯನ ಯೋಗ್ಯತೆಗಳು’
‘ಕೃತಿಶ್ರೇಣಿ’—‘ಗುರುಶಿಷ್ಯರ ಲಕ್ಷಣಗಳು’

ಗೊರೂರರು—‘ಪ್ರತಿಮಾರಾಧನೆ’
‘ಕೃತಿಶ್ರೇಣಿ’—‘ಪ್ರತೀಕ ಮತ್ತು ಪ್ರತಿಮಾಪೂಜೆ’

ಗೊರೂರರು—‘ಸಾಧಕನ ತ್ಯಾಗ’
‘ಕೃತಿಶ್ರೇಣಿ’—‘ಪೂರ್ವಭಾವೀ ವೈರಾಗ್ಯ’

ಹಲವು ಕಡೆ ಇಂಗ್ಲಿಷಿನ ‘devotion’ ಶಬ್ದಕ್ಕೆ ಗೊರೂರರು ‘ಪ್ರೇಮ’ ಎಂದೂ ‘ಕೃತಿಶ್ರೇಣಿ’ಕಾರರು ‘ಭಕ್ತಿ’ ಎಂದೂ ಪ್ರಯೋಗಿಸಿದ್ದಾರೆ.

೩

ಗೊರೂರರ ಎರಡೂ ಅನುವಾದ ಕೃತಿಗಳನ್ನು ನೋಡಿದರೆ, ಅವರು ವಿಷಯವನ್ನು ತಿಳಿಸುವ ಕಡೆ ಗಮನ ಕೊಟ್ಟಿರುವುದೂ, ಶೈಲಿ, ಅಲಂಕಾರಗಳ ಬಗ್ಗೆ ಅಷ್ಟಾಗಿ ಹಚ್ಚಿಕೊಳ್ಳದಿರುವುದೂ ಕಂಡುಬರುತ್ತದೆ.

'ಶರೀರ ಸಾಧನಯೋಗ ಅಥವಾ ಸೌಖ್ಯದ ಗುಟ್ಟು'

ಉ. ಕಾ. ಸುಬ್ಬರಾಯಾಚಾರ್

ಎಸ್. ಸುಂದರಮ್ ಅವರು ರಚಿಸಿದ *Yogic Physical Culture* ಎಂಬ ಪುಸ್ತಕವನ್ನು 'ಶರೀರ ಸಾಧನಾಯೋಗ ಅಥವಾ ಸೌಖ್ಯದ ಗುಟ್ಟು' ಎಂಬ ಶೀರ್ಷಿಕೆಯಲ್ಲಿ ಭಾಷಾಂತರ ಮಾಡಿ ಕನ್ನಡಿಗರಿಗೆ ನೀಡಿದವರು ಜಿ. ಕೆ. ರಾಮಸ್ವಾಮಿ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಮೊದಲ ವರ್ಷಗಳಲ್ಲಿ ಜಿ. ಕೆ. ರಾಮಸ್ವಾಮಿ ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ಅವರು ಯುವಕರಾಗಿದ್ದಾಗಲೆ ಯೋಗಾಸನ ಮತ್ತು ಪ್ರಾಣಾಯಾಮಗಳ ಅಭ್ಯಾಸ ಮಾಡಿದವರು. ಯೌವನದಲ್ಲಿ ಬ್ರಹ್ಮಚರ್ಯ, ಯೋಗಗಳತ್ತ ಮನಸ್ಸು ಹರಿಸಿದವರು ಶರೀರವ ಹಾಗೂ ಮನಸ್ಸಿನ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ರಕ್ಷಿಸಿಕೊಳ್ಳುತ್ತಾರೆ. ಗೊರೂರರನ್ನು ನೋಡಿದಾಗ ಅವರ ಮನಸ್ಸಿನ ಶಾಂತಿ ಹಾಗೂ ದೇಹದಾರ್ಢ್ಯ ಸುಪ್ರಕಟ.

'ಶರೀರ ಸಾಧನಾಯೋಗ'—ಈ ಪುಸ್ತಕದಲ್ಲಿ ಹದಿನಾರು ಆಸನಗಳ ವಿಧಾನ, ಅವುಗಳಿಂದಾಗುವ ಪ್ರಯೋಜನ, ಪ್ರಾಣಾಯಾಮದ ರೂಪರೇಷೆಗಳು ನಿರೂಪಿತವಾಗಿವೆ. ಈ ಪುಸ್ತಕವನ್ನು ಪ್ರತಿಯೊಬ್ಬ ಕನ್ನಡಿಗರೂ ಆವಶ್ಯಕವಾಗಿ ಓದಿ, ಸಾಧ್ಯವಾದಷ್ಟು ಜೀವನದಲ್ಲಿ ರೂಢಿಸಲು ಯತ್ನಿಸಬೇಕು. ಈ ಪುಸ್ತಕ ಜೀವನಕ್ಕೆ ಉತ್ತಮವಾದ ದೀಪಧಾರಿ.

ಶರೀರ ಸಾಧನೆ, ಪಾಶವಿಕ ಶಕ್ತಿಯನ್ನು ಬೆಳೆಸಿ, ಮೆರೆಯುವುದಕ್ಕಲ್ಲ. "ಶರೀರಮಾದ್ಯಂ ಖಲು ಧರ್ಮಸಾಧನಂ"—ಎಂಬುದು ಪ್ರಾಚೀನ ಆರ್ಯೋಕ್ತಿ. ನಮ್ಮ ಪ್ರಾಚೀನ ಮಹರ್ಷಿಗಳು ಅಪಾರವಾದ ಆಧ್ಯಾತ್ಮಿಕ ಸಂಪತ್ತನ್ನು ನಮಗೆ ಬಿಟ್ಟು ಹೋಗಿದ್ದಾರೆ. ಯೋಗಾಸನ ಮತ್ತು ಪ್ರಾಣಾಯಾಮಗಳಿಂದ ದೇಹವು ಆರೋಗ್ಯಪೂರ್ಣವೂ ಸುಂದರವೂ ಬಲಯುತವೂ ಆಗುತ್ತದೆ. ಯೋಗಾಸನವನ್ನು ಯುವಕರೂ ವಯಸ್ಕರೂ

ವಿವಾಹಿತರೂ ಅವಿವಾಹಿತರೂ ಸ್ತ್ರೀಪುರುಷರೂ ಅಭ್ಯಾಸ ಮಾಡಬಹುದು. ಅತಿಮೂತ್ರ, ಮೂಲವ್ಯಾಧಿ ಮನೋದೌರ್ಬಲ್ಯ, ವೀರ್ಯನಷ್ಟ, ನಪುಂಸಕತ್ವ, ಅಪಸ್ಮಾರ—ಮೊದಲಾದ ಅನೇಕ ರೋಗಗಳನ್ನು ಪರಿಹರಿಸಲು ಯೋಗಾಸನಗಳು ಸಮರ್ಥವಾಗಿವೆ. ಸುಮಾರು ಹದಿನಾಲ್ಕು ಆಸನಗಳನ್ನಾದರೂ ದಿನವೂ ಅಭ್ಯಾಸ ಮಾಡಿದರೆ, ಆರೋಗ್ಯ ಉತ್ತಮವಾಗಿರಲು ಸಹಾಯಕ. ಅಭ್ಯಾಸ ಮಾಡುವಾಗ, ಆಸನಗಳನ್ನು ಕೆಳಗಿನ ಕ್ರಮದಲ್ಲಿ ಅಭ್ಯಾಸ ಮಾಡುವುದು ಉತ್ತಮ.

(೧) ಭುಜಂಗಾಸನ, (೨) ಶಲಭಾಸನ, (೩) ಧನುರಾಸನ, (೪) ಪಶ್ಚಿಮೋತ್ತಾನಾಸನ, (೫) ಹಲಾಸನ, (೬) ಮಯೂರಾಸನ, (೭) ಸರ್ವಾಂಗಾಸನ, (೮) ಮತ್ಸ್ಯಾಸನ, (೯) ಅರ್ಧಮತ್ಸ್ಯೇಂದ್ರಾಸನ, (೧೦) ತ್ರಿಕೋಣಾಸನ, (೧೧) ಉಡ್ಡೀಯನ, (೧೨) ನೌಲಿ, (೧೩) ಶೀರ್ಷಾಸನ, (೧೪) ಶವಾಸನ.

ಆಸನಗಳ ಅಭ್ಯಾಸಕ್ಕೆ ಪ್ರಾತಃಕಾಲವೆ ಪ್ರಶಸ್ತವಾದ ಕಾಲ. ಸಂಜೆಯ ವೇಳೆಯಲ್ಲಿಯೂ ಅಭ್ಯಾಸ ಮಾಡಬಹುದು. ಮೇಲೆ ಹೇಳಿದ ಆಸನಗಳ ವಿಧಾನವನ್ನು ತಿಳಿಯೋಣ.

೧. ಭುಜಂಗಾಸನ

ನೆಲದ ಮೇಲೆ ಹಾಸಿದ ಜಮಖಾನ ಅಥವಾ ಯುಕ್ತ ಹಾಸಿನ ಮೇಲೆ ಮಾಂಸಖಂಡಗಳನ್ನು ಸಡಿಲವಾಗಿ ಬಿಟ್ಟು ಮೊಗವಡಿಯಾಗಿ ಮಲಗಿಕೊಳ್ಳಬೇಕು. ಅನಂತರ ಎರಡು ಅಂಗೈಗಳನ್ನು ಹೆಗಲ ಕೆಳಗೆ ಬರುವಂತೆ ಪಕ್ಕದಲ್ಲಿ ಇಟ್ಟುಕೊಳ್ಳಬೇಕು. ಅನಂತರ ಕೈಗಳ ಮೇಲೆ ಭಾರಹಾಕಿ, ತಲೆಯನ್ನು ಸಾಧ್ಯವಾದಷ್ಟು ಮೇಲಕ್ಕೆತ್ತಿ, ಕೆನ್ನೆಗಳನ್ನು ಸಾಧ್ಯವಾದಷ್ಟು ಹಿಂದಕ್ಕೆ ಬಗ್ಗಿಸಲು ಯತ್ನಿಸಬೇಕು. ಹೊಕ್ಕಳು ಸಾಧ್ಯವಾದಷ್ಟು ನೆಲಕ್ಕೆ ಹತ್ತಿರವಾಗಿರಬೇಕು. ಎರಡು ಮೂರು ನಿಮಿಷಗಳ ಕಾಲ ಈ ಸ್ಥಿತಿಯಲ್ಲಿದ್ದು ಅನಂತರ ನಿಧಾನವಾಗಿ ಬೆನ್ನುಮೂಳೆಯನ್ನು ತಗ್ಗಿಸಿ, ಬೆನ್ನನ್ನು ನೆಲಕ್ಕೆ ನೇರವಾಗಿರಿಸಿ, ಮೊದಲಿದ್ದ ಸ್ಥಿತಿಗೆ ಬರಬೇಕು.

ಈ ಆಸನದಿಂದ ಬೆನ್ನೆಲುಬಿನ ಆರೋಗ್ಯ ಉತ್ತಮವಾಗುತ್ತದೆ. ಮಲಬದ್ಧತೆಯು ನಿವಾರಣೆಯಾಗುತ್ತದೆ. ಹೆಡೆಯೆತ್ತಿದ ನಾಗರಹಾವಿನ ನಿಲುವಿನಂತೆ ಈ ಆಸನ ಕಾಣ-ಸುವುದರಿಂದ ಈ ಆಸನಕ್ಕೆ ಭುಜಂಗಾಸನವೆಂದು ಹೆಸರಾಗಿದೆ.

೨. ಶಲಭಾಸನ

ಜಮಖಾನದ ಮೇಲೆ ಮೊಗವಡಿಯಾಗಿ ಮಲಗಿಕೊಂಡು, ಎರಡು ಕೈಗಳನ್ನು ಎರಡು ಪಕ್ಕಕ್ಕೆ ಚಾಚಬೇಕು. ಅಂಗೈಗಳನ್ನು ಮೇಲ್ಮುಖವಾಗಿಡಬೇಕು. ಅನಂತರ ಉಸಿರನ್ನು ಒಳಕ್ಕೆ ಎಳೆದುಕೊಂಡು, ದೇಹವನ್ನು ಬಿಗಿ ಹಿಡಿದು, ಕಾಲು ತೊಡೆ ಮತ್ತು ಕಿಬ್ಬೊಟ್ಟೆಯನ್ನು ಮೇಲೆತ್ತಬೇಕು. ಎರಡು ಕಾಲುಗಳನ್ನು ಮೇಲೆತ್ತಿ, ಮೊಣ

ಕಾಲುಗಳನ್ನು ನೇರವಾಗಿ ನೀಡಿ, ಕಾಲಿನ ಹೆಬ್ಬೆರಳುಗಳು ಮೊನೆಯಾಗುವಂತೆ ಚಾಚ ಬೇಕು. ಎರಡು ನಿಮಿಷಗಳ ಕಾಲ ಈ ಸ್ಥಿತಿಯಲ್ಲಿದ್ದು, ನಿಧಾನವಾಗಿ ಉಸಿರನ್ನು ಬಿಡುತ್ತ ಮೊದಲಿನ ಸ್ಥಿತಿಗೆ ಬರಬೇಕು.

ಈ ಆಸನದಿಂದ ಮಲಬದ್ಧತೆ ನಿವಾರಣೆಯಾಗುತ್ತದೆ. ಸೊಂಟದ ಬೆನ್ನು ಮೂಳೆಗೂ ಬೆನ್ನಿನ ಮಾಂಸಖಂಡಗಳಿಗೂ ಹೆಚ್ಚಿನ ಶಕ್ತಿ ಬರುತ್ತದೆ. ಈ ಆಸನದ ಆಕಾರ ಮಿಡತೆ ಯಂತೆ ಕಾಣುವುದರಿಂದ ಶಲಭಾಸನವೆಂದು ಹೆಸರಾಗಿದೆ.

೩. ಧನುರಾಸನ

ಜಮಖಾನದ ಮೇಲೆ ಮೊಗವಡಿಯಾಗಿ ಮಲಗಿಕೊಂಡು, ಎರಡು ತೋಳುಗಳನ್ನು ಎರಡು ಪಕ್ಕಗಳಿಗೆ ಒರಗಿಸಿ, ಮಲಗಿಕೊಳ್ಳಬೇಕು. ಕಾಲುಗಳನ್ನು ಹಿಂದಕ್ಕೆ ಚಾಚಿ, ಎರಡು ಕೈಗಳಿಂದ ಎರಡು ಮೊಣಕಾಲುಗಳನ್ನು ಹಿಡಿದುಕೊಳ್ಳಬೇಕು. ಕಾಲುಗಳನ್ನು ಅಗಲಿಸದಂತೆ ನೋಡಿಕೊಳ್ಳಬೇಕು. ಒಂದೆರಡು ನಿಮಿಷಗಳ ಕಾಲ ಈ ಸ್ಥಿತಿಯಲ್ಲಿದ್ದು ಹಿಂದಿನ ಸ್ಥಿತಿಗೆ ಬರಬೇಕು. ಈ ಆಸನವನ್ನು ಮಾಡುವಾಗ ನಿಧಾನವಾಗಿ ಉಸಿರಾಡು ತ್ತಿರಬೇಕು.

ಈ ಆಸನದಿಂದ ಬೆನ್ನುಮೂಳೆಗೆ ವಿಶೇಷವಾದ ಶಕ್ತಿ ಬರುತ್ತದೆ. ಹೊಟ್ಟೆಯ ಡೊಳ್ಳು ಈ ಆಸನದಿಂದ ಕರಗುತ್ತದೆ. ಮೈ ಬಿಲ್ಲಿನಂತೆ ಬಗ್ಗಿ, ಕೈಗಳು ಬಿಲ್ಲಿನ ಹಗ್ಗ ದಂತೆ ಕಾಣುವುದರಿಂದ ಈ ಆಸನಕ್ಕೆ ಧನುರಾಸನವೆಂದು ಹೆಸರಾಗಿದೆ.

೪. ಪಶ್ಚಿಮೋತ್ತಾನಾಸನ

ಜಮಖಾನದ ಮೇಲೆ ಬೆನ್ನು ನೆಲಕ್ಕೆ ತಗುಲುವಂತೆ ಮಲಗಿಕೊಳ್ಳಬೇಕು. ಕೈಗಳು ತಲೆಯ ಹಿಂದೆ ಹೋಗುವಂತೆ ಚಾಚಬೇಕು. ಉಸಿರನ್ನು ಎಳೆದುಕೊಳ್ಳಬೇಕು. ಅನಂತರ ಕಾಲುಗಳನ್ನು ಚಾಚಿ, ದೇಹವನ್ನು ಮೇಲಕ್ಕೆತ್ತಿ, ಉಸಿರುಬಿಡುತ್ತ ಮೈಯನ್ನು ಬಗ್ಗಿಸಿ ಕೈಗಳಿಂದ ಎರಡು ಉಂಗುಷ್ಠಗಳನ್ನು ಹಿಡಿದುಕೊಳ್ಳಬೇಕು. ಒಂದು ನಿಮಿಷ ಈ ಸ್ಥಿತಿಯಲ್ಲಿದ್ದು, ಉಸಿರನ್ನು ಎಳೆದುಕೊಳ್ಳುತ್ತ ಪುನಃ ಹಿಂದಿನ ಸ್ಥಿತಿಯಲ್ಲಿ ಮಲಗಿ ಕೊಳ್ಳಬೇಕು.

ಎರಡನೆ ಸಾರಿ ಮೊದಲಿನಂತೆಯೆ ಮೇಲೆದ್ದು ಉಸಿರನ್ನು ನಿಧಾನವಾಗಿ ಬಿಡುತ್ತ, ಎರಡು ಕೈಗಳಿಂದ ಎರಡು ಕಾಲುಗಳ ಹೆಬ್ಬೆರಳುಗಳನ್ನು ಹಿಡಿದುಕೊಳ್ಳಬೇಕು. ತಲೆ ಯನ್ನು ಮೊಣಕಾಲಿಗೆ ಮುಟ್ಟಿಸಲು ಯತ್ನಿಸಬೇಕು. ಒಂದು ನಿಮಿಷ ಈ ಸ್ಥಿತಿ ಯಲ್ಲಿದ್ದು, ಪುನಃ ಮೊದಲಿನ ಸ್ಥಿತಿಯಲ್ಲಿ ಮಲಗಿಕೊಳ್ಳಬೇಕು.

ಮೂರನೆಯ ಸಾರಿ, ಮೊದಲಿನಂತೆಯೆ ಮೇಲೆದ್ದು, ನಿಧಾನವಾಗಿ ಉಸಿರುಬಿಡುತ್ತ, ಎರಡು ಕಾಲುಗಳ ಹೆಬ್ಬೆರಳುಗಳನ್ನು ಹಿಡಿದುಕೊಳ್ಳಬೇಕು. ಅನಂತರ ತಲೆಯನ್ನು ಮೊಣಕಾಲುಗಳ ಮೇಲಿಟ್ಟು, ಮೊಣಕೈಗಳನ್ನು ಕೆಳಕ್ಕೆ ತಗ್ಗಿಸಿ, ನೆಲವನ್ನು ಮುಟ್ಟಲು

ದುತ್ತಿಸಬೇಕು. ಈ ಸಂದರ್ಭದಲ್ಲಿ ಹೊಟ್ಟೆಯನ್ನು ಸಂಕುಚಿತಗೊಳಿಸಬೇಕು. ಒಂದೆರಡು ನಿಮಿಷ ಈ ಸ್ಥಿತಿಯಲ್ಲಿದ್ದು ಹಿಂದಿನ ಸ್ಥಿತಿಗೆ ಬರಬೇಕು.

ನಾಲ್ಕನೆಯ ಸಾರಿ, ಹಿಂದಿನಂತೆಯೇ ಮಲಗಿದ್ದು, ಉಸಿರುಬಿಡುತ್ತ ಕೈಗಳಿಂದ ಎರಡು ಕಾಲುಗಳ ಹೆಬ್ಬೆರಳನ್ನು ಹಿಡಿದು, ಮೊಣಕಾಲನ್ನು ಮೇಲೆತ್ತಬೇಕು. ಅದರ ಮಧ್ಯೆ ತಲೆಯನ್ನಿರಿಸಿ, ಮೊಣಕೈಗಳನ್ನು ನೆಲದ ಮೇಲಿಡಬೇಕು. ಅನಂತರ ನಿಧಾನವಾಗಿ ಉಸಿರನ್ನು ಎಳೆದುಕೊಳ್ಳುತ್ತ ಮೊದಲಿನ ಸ್ಥಿತಿಗೆ ಬರಬೇಕು.

ಈ ಆಸನವನ್ನು ಒಂದೇ ಬಾರಿಗೆ ಅಭ್ಯಾಸ ಮಾಡುವುದು ಕಷ್ಟ. ಹಲವು ದಿನಗಳ ಸಾಧನೆಯ ಬಳಿಕ ಈ ಆಸನವನ್ನು ಮಾಡುವುದು ಸಾಧ್ಯ. ಒಂದೆರಡು ದಿನಗಳಲ್ಲಿಯೇ ಸಾಧಿಸುವೆನೆಂಬ ಹಠಮಾಡದೆ, ಈ ಆಸನವನ್ನು ಸಾವಕಾಶವಾಗಿ ಅಭ್ಯಾಸ ಮಾಡಬೇಕು.

ಈ ಆಸನದಿಂದ ಮಲಬದ್ಧತೆ ಪರಿಹಾರವಾಗುತ್ತದೆ. ಅಜೀರ್ಣ, ಪಿತ್ತಕೋಶದ ಮಾಂದ್ಯ, ಮೂತ್ರಕೋಶದ ದೌರ್ಬಲ್ಯ—ಇವೆಲ್ಲ ಪರಿಹಾರವಾಗುತ್ತವೆ. ಈ ಆಸನವನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿದರೆ, ಮೂಲವ್ಯಾಧಿ ಬಹುಮೂತ್ರ ರೋಗಗಳನ್ನೂ ಗುಣಪಡಿಸಬಹುದು. ಈ ಆಸನದಿಂದ ಡೊಳ್ಳುಹೊಟ್ಟೆ ಕರಗಿ ಮಾಯವಾಗುತ್ತದೆ.

೫. ಹಲಾಸನ

ಜಮಖಾನದ ಮೇಲೆ ಬೆನ್ನು ನೆಲಕ್ಕೆ ಮುಟ್ಟುವಂತೆ ಮಲಗಿಕೊಂಡು, ಕೈಗಳನ್ನು ಎರಡು ಮಗ್ಗುಲಲ್ಲಿ ಚಾಚಿ, ಅಂಗೈಗಳನ್ನು ನೆಲದ ಮೇಲಿಡಬೇಕು. ಮೊದಲನೆಯ ಹಂತದಲ್ಲಿ ಎರಡು ಕಾಲುಗಳನ್ನೂ ಸೇರಿಸಿ, 90 ಡಿಗ್ರಿಗೆ ಬರುವಂತೆ ಮೇಲೆತ್ತಬೇಕು. ಕೈಗಳನ್ನು ಮೊದಲಿನ ಸ್ಥಾನದಿಂದ ಎತ್ತದೆ, ದೇಹದ ಮೇಲುಗಡೆ ಕಾಲುಗಳನ್ನು ಬಗ್ಗಿಸಿ, ಹೆಬ್ಬೆಟ್ಟುಗಳಿಂದ ನೆಲವನ್ನು ಮುಟ್ಟಬೇಕು. ಕಾಲುಗಳನ್ನು ಬಗ್ಗಿಸದೆ, ತಲೆಯ ಹತ್ತಿರಕ್ಕೆ ಎಷ್ಟು ಹತ್ತಿರ ತರಲು ಸಾಧ್ಯವೋ ಅಷ್ಟು ಹತ್ತಿರ ತರಬೇಕು.

ಎರಡನೆಯ ಹಂತದಲ್ಲಿ ಮೊದಲ ಹಂತಕ್ಕಿಂತ ಕಾಲಿನ ಹೆಬ್ಬೆಟ್ಟುಗಳನ್ನು ಮುಂದಕ್ಕೆ ಚಾಚಬೇಕು. ಮೊಣಕಾಲುಗಳನ್ನು ತಲೆಗೆ ತಗುಲಿಸಬೇಕು.

ಮೂರನೆ ಹಂತದಲ್ಲಿ ಮೊಣಕಾಲುಗಳನ್ನು ಬಗ್ಗಿಸದೆ, ಕಾಲು ಬೆರಳುಗಳನ್ನು ಎಷ್ಟು ಸಾಧ್ಯವೋ ಅಷ್ಟು ಮುಂದಕ್ಕೆ ಚಾಚಬೇಕು.

ಈ ಆಸನದಿಂದ ಹೊಟ್ಟೆಯ ಬೊಜ್ಜು ಕರಗುತ್ತದೆ. ಮಲಬದ್ಧತೆ ದೂರವಾಗುತ್ತದೆ. ಈ ಆಸನದ ಆಕೃತಿ ನೇಗಿಲಿನಂತೆ ಕಾಣುವುದರಿಂದ ಹಲಾಸನ ಎಂಬ ಹೆಸರು ಪಡೆದಿದೆ. ಈ ಆಸನದಿಂದ ಬೆನ್ನುಮೂಳೆಗೂ ಶಕ್ತಿ ಬರುತ್ತದೆ.

೬. ಮಯೂರಾಸನ

ಈ ಆಸನವನ್ನು ಆರಂಭಿಸುವ ಮೊದಲು, ಜಮಖಾನದ ಮೇಲೆ ಮೊಣಕಾಲೂರಿ,

ಬಗ್ಗಿ ಎರಡು ಹಿಂಗಾಲುಗಳ ಆಧಾರದ ಮೇಲೆ ಕುಳಿತುಕೊಳ್ಳಬೇಕು. ಅನಂತರ ಮುಂಗೈಗಳೆರಡನ್ನು ಒಟ್ಟಿಗೆ ಸೇರಿಸಿ ಕೈಬೆರಳುಗಳು ಕಾಲಿನಕಡೆ ತಿರುಗುವಂತೆ ನೆಲದ ಮೇಲೂರಿ, ಉಸಿರನ್ನು ಸ್ವಲ್ಪ ಎಳೆದುಕೊಂಡು, ಹೊಟ್ಟೆಯನ್ನು ಮೊಣಕೈಗಳ ಮೇಲಿಟ್ಟು, ಎರಡು ಕಾಲುಗಳನ್ನು ಹಿಂದಕ್ಕೆ ಚಾಚಿ, ಭೂಮಿಗೆ ಸಮಾನಾಂತರವಲ್ಲಿ ದೇಹವು ಮೊಣಕೈಗಳ ಆಶ್ರಯದಲ್ಲಿ ನಿಲ್ಲುವಂತೆ ಮಾಡಬೇಕು. ಈ ಆಸನವನ್ನು ಮಾಡುವಾಗ, ಮೂಗು ನೆಲಕ್ಕೆ ತಗುಲಿ ಪೆಟ್ಟಾಗದಂತೆ ನೋಡಿಕೊಳ್ಳಬೇಕು. ಈ ಆಸನವನ್ನು ಅಭ್ಯಾಸ ಮಾಡಲು ಹಲವು ದಿನಗಳ ಸಾಧನೆ ಬೇಕು.

ಈ ಆಸನದಿಂದ ಅನ್ನಕೋಶ ಮತ್ತು ಪಿತ್ತಕೋಶ ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಆರಂಭಿಸುತ್ತವೆ. ಈ ಆಸನದಿಂದ ಜೀರ್ಣಶಕ್ತಿ ಉತ್ತಮವಾಗುತ್ತದೆ. ಅತಿಮೂತ್ರ, ಮೂತ್ರಪಿಂಡದ ದೌರ್ಬಲ್ಯ—ಇವುಗಳನ್ನು ವಾಸಿಮಾಡಲು ಈ ಆಸನ ಯುಕ್ತವಾದುದು.

೭. ಸರ್ವಾಂಗಾಸನ

ಜಮುಖಾನದ ಮೇಲೆ, ಬೆನ್ನು ನೆಲ ಮುಟ್ಟುವಂತೆ, ಮಲಗಿಕೊಳ್ಳಬೇಕು. ತೊಡೆಗಳನ್ನು ಹೊಟ್ಟೆಯ ಮೇಲುಗಡೆ ಮಡಿಸಬೇಕು. ಅನಂತರ ಕಾಲುಗಳನ್ನೂ ಮೇಲಕ್ಕೆ ನೀಡಿ ಮೊಣಕೈಗಳನ್ನು ನೆಲದ ಮೇಲೆ ಊರಿ, ಕೈಗಳಿಂದ ಬೆನ್ನಿಗೆ ಆಶ್ರಯ ಕೊಡಬೇಕು. ಕೆನ್ನೆಯನ್ನು ಎದೆಗೆ ಬಲವಾಗಿ ಒತ್ತಬೇಕು. ಕತ್ತಿನ ಹಿಂಭಾಗ ನೆಲದ ಮೇಲಿರಬೇಕು. ಒಂದೆರಡು ನಿಮಿಷವಾದರೂ ಈ ಸ್ಥಿತಿಯಲ್ಲಿರಬೇಕು. ಈ ಸ್ಥಿತಿಯಲ್ಲಿ ನಿಧಾನವಾಗಿ ಉಸಿರಾಡುತ್ತಿರಬೇಕು.

ಈ ಆಸನದಿಂದ ಕಂಠಪ್ರದೇಶದ ಗ್ರಂಥಿಗಳಲ್ಲಿ ಹೆಚ್ಚು ರಕ್ತ ಸಂಚಾರವಾಗುತ್ತದೆ. ಥೈರಾಯಿಡ್ ಗ್ರಂಥಿ ಮತ್ತು ಕಂಠ ಪ್ರದೇಶದ ಮಾಂಸಖಂಡಗಳ ಆರೋಗ್ಯ ವರ್ಧಿಸುತ್ತದೆ.

೮. ಮತ್ಸ್ಯಾಸನ

ಪದ್ಮಾಸನದಲ್ಲಿ ಕುಳಿತು, ಅನಂತರ ಬೆನ್ನನ್ನು ಕೆಳಕ್ಕೆ ಮಾಡಿಕೊಂಡು ಮಲಗಿಕೊಳ್ಳಬೇಕು. ಹೀಗೆ ಮಲಗಿಕೊಳ್ಳುವಾಗ ತಲೆಯನ್ನೂ ಪೃಷ್ಠವನ್ನೂ ಮೆಲ್ಲಗೆ ನೆಲದ ಮೇಲಿಡಬೇಕು. ಕೈಗಳನ್ನು ತೊಡೆಯ ಮೇಲಿರಿಸಿ, ಬಲಗೈಯಿಂದ ಎಡಕಾಲಿನ ಹೆಬ್ಬೆರಳನ್ನೂ, ಎಡಗೈಯಿಂದ ಬಲಗಾಲಿನ ಹೆಬ್ಬೆರಳನ್ನೂ ಹಿಡಿದುಕೊಳ್ಳಬೇಕು. ಬಳಿಕ ತಲೆಯನ್ನು ಹಿಂದಕ್ಕೆ ತಳ್ಳಿ ಬೆನ್ನು ನೆಲದಿಂದ ಮೇಲಕ್ಕೇರುವಂತೆ ಮಾಡಿ, ಪೂರ್ವ ಸ್ಥಿತಿಗೆ ಬರಬೇಕು.

ಈ ಆಸನದಿಂದ ಪ್ಯಾರಾ ಥೈರಾಯಿಡ್ ಗ್ರಂಥಿಗಳು ಆರೋಗ್ಯವಾಗಿರುತ್ತವೆ. ಈ ಆಸನ ತಾರುಣ್ಯವನ್ನು ಹೆಚ್ಚಿಸುತ್ತದೆ.

೯. ಅರ್ಧಮತ್ಸ್ಯೇಂದ್ರಾಸನ

ಪದ್ಮಾಸನದಲ್ಲಿ ಕುಳಿತು, ಅನಂತರ ಬಲಗಾಲನ್ನು ಎತ್ತಿ ಎಡತೊಡೆಯ ಹಿಂಭಾಗಕ್ಕೆ ಚಾಚಬೇಕು. ಎಡಗೈಯನ್ನು ಬಲ ಮೊಣಕಾಲ ಮೇಲಿರಿಸಿ. ಎಡಗೈಯಿಂದ. ಎಡ ಮೊಣಕಾಲನ್ನು ಹಿಡಿದುಕೊಳ್ಳಬೇಕು. ಮುಖವನ್ನು ಬಲಗಡೆ ತಿರುಗಿಸಿ, ಬಲಗೈಯಿಂದ ಬಲಗಾಲಿನ ಬಳಿಯ ಎಡತೊಡೆಯನ್ನು ಮುಟ್ಟಬೇಕು. ಇದೇ ರೀತಿ ಎಡಗಾಲನ್ನು ಎತ್ತಿ ಬಲತೊಡೆಯ ಹಿಂಭಾಗಕ್ಕೆ ತಂದು ಬಲಗೈಯನ್ನು ಎಡಮೊಣಕಾಲ ಮೇಲಿರಿಸಿ. ಬಲಗೈಯಿಂದ ಬಲಮೊಣಕಾಲನ್ನು ಹಿಡಿದುಕೊಳ್ಳಬೇಕು. ಮುಖವನ್ನು ಎಡಗಡೆ ತಿರುಗಿಸಿ. ಎಡಗೈಯಿಂದ ಎಡಗಾಲಿನ ಬಳಿ ಇರುವ ಬಲತೊಡೆಯನ್ನು ಮುಟ್ಟಬೇಕು.

ಈ ಆಸನದಿಂದ ಬೆನ್ನಿನ ಮಾಂಸಖಂಡಗಳಲ್ಲಿ ಹೆಚ್ಚಿನ ರಕ್ತ ಸಂಚಾರವಾಗುತ್ತದೆ; ಬೆನ್ನೆಲುಬಿಗೆ ನವಚೈತನ್ಯ ಬರುತ್ತದೆ.

೧೦. ತ್ರಿಕೋಣಾಸನ

ಕಾಲುಗಳನ್ನು ಎರಡೂವರೆ ಅಡಿಗಳ ದೂರದಲ್ಲಿಟ್ಟು, ನೆಟ್ಟಗೆ ನಿಲ್ಲಬೇಕು. ಅನಂತರ ಎಡಗೈ ಬೆರಳು ಎಡ ಪಾದವನ್ನು ಮುಟ್ಟುವಂತೆ ಚಾಚಿ. ಬಲಗೈಯನ್ನು ಮೇಲೆ ಚಾಚಿ, ಎರಡು ಕೈಗಳು ಹೆಗಲಿಗೆ ಒಂದೇ ರೇಖೆಯಲ್ಲಿರುವಂತೆ ಮಾಡಬೇಕು. ಅಂದರೆ ಎರಡು ಕೈಗಳೂ ಎರಡು ಭುಜಗಳೂ ಒಂದೇ ರೇಖೆಯಲ್ಲಿರುವಂತೆ ಮಾಡಬೇಕು. ಕತ್ತನ್ನು ಹೆಗಲಿನ ಮೇಲೆ ಚೆನ್ನಾಗಿ ಬಾಗಿಸಿ, ಬಲಗೈ ತುದಿಯನ್ನು ನೋಡಬೇಕು. ಅನಂತರ ಸಮಸ್ಥಿತಿಗೆ ಬಂದು ಬಲಗೈಯನ್ನು ಬಲ ಪಾದದ ಬಳಿಗೆ ಚಾಚಿ. ಬಲಗೈ ಬೆರಳು ಬಲಪಾದವನ್ನು ಮುಟ್ಟುವಂತೆ ಚಾಚಿ, ಎಡಗೈಯನ್ನು ಮೇಲಕ್ಕೆ ಚಾಚಿ. ಎರಡು ಕೈಗಳೂ ಎರಡು ಭುಜಗಳೂ ಒಂದೇ ರೇಖೆಯಲ್ಲಿ ಬರುವಂತೆ ಮಾಡಬೇಕು. ಕತ್ತನ್ನು ಹೆಗಲಿನ ಮೇಲೆ ಚೆನ್ನಾಗಿ ಬಾಗಿಸಿ. ಎಡಗೈ ತುದಿಯನ್ನು ನೋಡಬೇಕು.

ಈ ಆಸನದಿಂದ ದೇಹದ ಎಡ ಬಲ ಪಾರ್ಶ್ವದ ಮಾಂಸಖಂಡಗಳ ಹಾಗೂ ಬೆನ್ನು ಮೂಳೆಯ ಆರೋಗ್ಯ ವರ್ಧಿಸುತ್ತದೆ.

೧೧. ಉಡ್ಡೀಯನ

ಪಾದಗಳನ್ನು ಸ್ವಲ್ಪ ದೂರವಾಗಿಟ್ಟು, ನೆಟ್ಟಗೆ ನಿಲ್ಲಬೇಕು. ಅನಂತರ ದೇಹವನ್ನು ಸ್ವಲ್ಪ ಮಾತ್ರ ಮುಂದೆ ಚಾಚಿ. ಸೊಂಟದ ಮೇಲೆ ಕೈಗಳನ್ನಿಡಬೇಕು. ಹೊಟ್ಟೆಯ ಮುಂಭಾಗವನ್ನು ಸಡಿಲವಾಗಿ ಬಿಟ್ಟು, ವಾಂತಿ ಮಾಡುವ ರೀತಿಯಲ್ಲಿ ಹೊಟ್ಟೆಯ ಮಾಂಸಖಂಡಗಳನ್ನು ಒಳಕ್ಕೆ ತಳ್ಳಬೇಕು. ಈ ಸಮಯದಲ್ಲಿ ಉಸಿರನ್ನು ಹೊರಗೆ ಬಿಡುತ್ತಿರಬೇಕು. ತೊಡೆಗಳ ಮೇಲಿಟ್ಟ ಕೈಗಳನ್ನು ಬಲವಾಗಿ ಕೆಳಕ್ಕೆ ಅಮುಕುತ್ತಿರಬೇಕು. ಕರುಳನ್ನು ಮೇಲಕ್ಕೆತ್ತಲು ಯತ್ನಿಸುತ್ತಿರಬೇಕು.

ಈ ಆಸನವನ್ನು ಹದಿನೈದು ವರ್ಷಗಳಿಗಿಂತ ಚಿಕ್ಕವರು ಅಭ್ಯಾಸ ಮಾಡಬಾರದು.

ಈ ಆಸನವನ್ನು ಸಮರ್ಪಕವಾಗಿ ಮಾಡಲು ಹಲವು ದಿನಗಳ ಅಭ್ಯಾಸ ಅವಶ್ಯಕ. ಈ ಆಸನದಿಂದ ಮಲಬದ್ಧತೆ ನಿರ್ಮೂಲವಾಗಿ, ಹೊಟ್ಟೆಯ ಮಾಂಸಖಂಡಗಳು ಆರೋಗ್ಯವಾಗಿರುತ್ತವೆ.

೧೨. ನೌಲಿ

ಉಡ್ಡೀಯಸಕ್ಕೆ ನಿಂತುಕೊಳ್ಳುವಂತೆ ನಿಂತುಕೊಂಡು ಉಸಿರನ್ನು ಬಿಡುತ್ತ, ಗುದ ಪ್ರದೇಶದ ಮಾಂಸಖಂಡಗಳನ್ನು ಸಂಕುಚಿತಪಡಿಸಿ, ಹೊಟ್ಟೆಯ ಮಾಂಸಖಂಡಗಳನ್ನು ಮುಂದಕ್ಕೆ ಚಾಚಬೇಕು. ಕೈಗಳನ್ನು ತೊಡೆಯ ಮಧ್ಯೆ ಇಟ್ಟು ಒತ್ತಬೇಕು. ಹೊಟ್ಟೆಯ ಮಾಂಸಖಂಡಗಳು ಮುಂದಕ್ಕೆ ಬಂದಾಗ, ಆ ಮಾಂಸಖಂಡಗಳನ್ನು ಎಡಕ್ಕೂ ಬಲಕ್ಕೂ ತಿರುಗಿಸಬೇಕು. ಈ ಆಸನವನ್ನು ಯುಕ್ತ ರೀತಿಯಲ್ಲಿ ಮಾಡಲು, ಬಹು ದಿನಗಳ ಅಭ್ಯಾಸ ಬೇಕು.

ಈ ಆಸನದಿಂದ ಅಜೀರ್ಣ ರೋಗಗಳೆಲ್ಲ ವಾಸಿಯಾಗುತ್ತವೆ. ಕರುಳಿನ ಆರೋಗ್ಯ ವರ್ಧಿಸುತ್ತದೆ.

೧೩. ಶೀರ್ಷಾಸನ

ತಲೆಯನ್ನು ನೆಲದ ಮೇಲಿರಿಸಲು, ಮೃದುವಾದ ದಪ್ಪ ಬಟ್ಟೆಯನ್ನು ಮಡಿಸಿ, ಗೋಡೆಯ ಬಳಿ ಹಾಸಿಕೊಂಡು, ಜಮಖಾನದ ಮೇಲೆ ಮಂಡಿಯೂರಿ ಕುಳಿತು, ಕೈ ಬೆರಳುಗಳನ್ನು ಹೆಣೆದು ಗೋಡೆಯ ಬಳಿ ಇರುವ ಬಟ್ಟೆಯ ಮೇಲಿಟ್ಟು, ನಿಧಾನವಾಗಿ ಬಗ್ಗಬೇಕು. ಮೊಣಕೈಗಳನ್ನು ನೆಲದ ಮೇಲೆ ಊರಿ, ಹೆಣೆದ ಕೈಬೆರಳುಗಳಿಗೆ ತಲೆ ತಗಲುವಂತೆ, ತಲೆಯನ್ನು ಮೃದುವಾದ ಬಟ್ಟೆಯ ಮೇಲಿಡಬೇಕು. ಅನಂತರ, ತಲೆ ಮತ್ತು ಕತ್ತು ನೇರವಾಗಿರುವಂತೆ ಮಾಡಿ, ತಲೆಯ ಹಿಂಭಾಗ ಹೆಣೆದ ಕೈಬೆರಳುಗಳಿಗೆ ಒರಗಿಸಿ, ಎರಡೂ ಮೊಣಕೈಗಳ ಮೇಲೆ ಭಾರಬಿಟ್ಟು, ನಡುವನ್ನು ಮಂಡಿಯಿಂದ ಮೇಲಕ್ಕೆತ್ತಿ ತಲೆ, ಕತ್ತು, ಬೆನ್ನು ಕಾಲುಗಳು ಒಂದೇ ಸಾಲಿಗೆ ಬರುವಂತೆ ದೇಹವನ್ನು ಮೇಲಕ್ಕೆತ್ತಬೇಕು. ಪ್ರಾರಂಭದಲ್ಲಿ ಸ್ನೇಹಿತರ ನೆರವನ್ನು ಪಡೆದು ಈ ಆಸನವನ್ನು ಅಭ್ಯಾಸ ಮಾಡುವುದು ಉತ್ತಮ. ಈ ಆಸನವನ್ನು ಸರಿಯಾದ ರೀತಿಯಲ್ಲಿ ಮಾಡಲು ಕೆಲವು ದಿನಗಳ ಅಭ್ಯಾಸ ಬೇಕು.

ಈ ಆಸನದಿಂದ ಮೆದುಳಿನಲ್ಲಿ ರಕ್ತ ಸಂಚಾರ ಉತ್ತಮವಾಗಿ, ಮೆದುಳು ಆರೋಗ್ಯವಾಗಿರಲು ಸಹಾಯವಾಗುತ್ತದೆ. ಬುದ್ಧಿ ಜೀವಿಗಳಿಗೆ ಈ ಆಸನದಿಂದ ಮಹತ್ತರ ಪ್ರಯೋಜನ.

೧೪. ಶವಾಸನ

ಜಮಖಾನದ ಮೇಲೆ ಬೆನ್ನನ್ನು ಕೆಳಕ್ಕೆ ಮಾಡಿ ಮಲಗಿಕೊಳ್ಳಬೇಕು. ಮಗ್ಗುಲಲ್ಲಿ ಕೈಗಳು ನೆಲದ ಮೇಲಿರಲಿ. ಕಾಲುಗಳನ್ನು ಕೂಡಿಸಿ, ಉದ್ದಕ್ಕೆ ನೀಡಬೇಕು.

ಹಿಮ್ಮಡಿಗಳೆರಡೂ ಕೂಡಿದ್ದು, ಎರಡು ಪಾದಗಳ ಹೆಬ್ಬೆರಳುಗಳು ಎರಡು ಪಕ್ಕಕ್ಕೂ ತಿರುಗಿರಲಿ. ತೊಡೆಗಳು ಸಡಿಲವಾಗಿರಲಿ. ದೇಹದ ಯಾವ ಭಾಗದಲ್ಲಿಯೂ ಭಾರವಿಲ್ಲದಂತಾಗಲಿ. ದೇಹದ ಯಾವ ಭಾಗದಲ್ಲಿಯೂ ಉದ್ವೇಗವಿಲ್ಲದಂತೆ ಮಾಡಿ ನಿಧಾನವಾಗಿ ಉಸಿರಾಡುತ್ತಿರಬೇಕು. ಶವದ ಅನುಭವವನ್ನು ಮಾನಸಿಕವಾಗಿ ಮಾಡಿಕೊಳ್ಳಬೇಕು.

ಈ ಆಸನದಿಂದ ನರಗಳಿಗೂ ರಕ್ತನಾಳಗಳಿಗೂ ಹೃದಯಕ್ಕೂ ಶರೀರದ ಎಲ್ಲ ಅಂಗಗಳಿಗೂ ವಿಶ್ರಾಂತಿ ದೊರಕುತ್ತದೆ. ಈ ಆಸನ ಶಾಂತಿ ಹಾಗೂ ಶಕ್ತಿಗಳನ್ನು ನೀಡುತ್ತದೆ.

೧೫. ಪ್ರಾಣಾಯಾಮ

ಯೋಗಾಸನಗಳೊಡನೆ ಪ್ರಾಣಾಯಾಮವೂ ಆವಶ್ಯಕ. ಪ್ರಾಣವೆಂಬುದು ಜೀವದ ಉಸಿರು. ಇದನ್ನು ನಿಯಮಿತಗೊಳಿಸುವ ಸಾಧನವನ್ನು ಹಲವು ವರ್ಷಗಳ ಕಾಲ ಋಷಿಗಳು ನಡೆಸಿದರು. ಪ್ರಾಣಾಯಾಮದ ರೇಖಾ ಪರಿಚಯವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಗುರುವಿನ ಮಾರ್ಗದರ್ಶನದಲ್ಲಿಯೇ ಪ್ರಾಣಾಯಾಮವನ್ನು ಅಭ್ಯಾಸ ಮಾಡುವುದು ಉತ್ತಮ.

ಪ್ರಾಣಾಯಾಮಕ್ಕೆ ಮೊದಲು ಕೈಕಾಲು ಮುಖ ಹಾಗೂ ಮೂಗಿನ ಹೊಳ್ಳೆಗಳನ್ನು ಶುಭ್ರವಾಗಿ ತೊಳೆದುಕೊಂಡು ಶುಭ್ರವಾದ ಮೃದು ಬಟ್ಟೆಯ ಮೇಲೆ ಪದ್ಮಾಸನದಲ್ಲಿ ಕುಳಿತುಕೊಳ್ಳಬೇಕು. ಬೆನ್ನು ನೆಟ್ಟಗಿರುವಂತೆ ನೋಡಿಕೊಳ್ಳಬೇಕು. ಎಡಗೈಯನ್ನು ಎಡ ತೊಡೆಯ ಮೇಲಿಟ್ಟು, ಬಲಗೈಯನ್ನು ಮೂಗಿನ ಬಳಿಗೆ ಕೊಂಡೊಯ್ದು, ಉಸಿರನ್ನು ಸಂಪೂರ್ಣವಾಗಿ ಹೊರಬಿಟ್ಟು, ಬಲ ಮೂಗಿನ ಹೊಳ್ಳೆಯನ್ನು ಬಲಗೈ ಹೆಬ್ಬೆಟ್ಟಿನಿಂದ ಮುಚ್ಚಿ, ಎಡ ಮೂಗಿನ ರಂಧ್ರದಿಂದ ಗಾಳಿಯನ್ನು ಒಳಕ್ಕೆ ಎಳೆದುಕೊಳ್ಳಬೇಕು. ಅನಂತರ ಬಲ ಮೂಗಿನ ಹೊಳ್ಳೆಯನ್ನು ಮುಚ್ಚಿದ್ದ ಹೆಬ್ಬೆಟ್ಟನ್ನು ತೆರೆದು, ಮಧ್ಯದ ಬೆರಳು ಮತ್ತು ಉಂಗುರದ ಹಾಗೂ ಕಿರುಬೆರಳುಗಳ ನೆರವಿನಿಂದ ಎಡ ಹೊಳ್ಳೆಯನ್ನುಮುಚ್ಚಿ ಬಲ ಮೂಗಿನ ಹೊಳ್ಳೆಯಿಂದ ನಿಧಾನವಾಗಿ ಉಸಿರನ್ನು ಬಿಡಬೇಕು. ಇದು ಒಂದು ಪ್ರಾಣಾಯಾಮ. ಮೂರು ನಾಲ್ಕು ಪ್ರಾಣಾಯಾಮಗಳ ಬಳಿಕ ಒಂದು ಸಾರಿ ಎರಡು ಹೊಳ್ಳೆಗಳಿಂದ ಸಾಮಾನ್ಯ ರೀತಿಯಲ್ಲಿ ಉಸಿರಾಡಿ, ಪುನಃ ಪ್ರಾಣಾಯಾಮವನ್ನು ಮುಂದುವರಿಸಬೇಕು. ಉಸಿರನ್ನು ಎಡಹೊಳ್ಳೆಯಿಂದ ಎಳೆದುಕೊಳ್ಳುವ ಕಾಲಕ್ಕಿಂತ ಎರಡರಷ್ಟು ಕಾಲ ಉಸಿರು ಬಿಡುವುದಕ್ಕಿರಬೇಕು. ಉಸಿರು ಎಳೆದುಕೊಳ್ಳುವುದಕ್ಕೆ ಆರು ಸೆಕೆಂಡುಗಳೂ, ಬಿಡುವುದಕ್ಕೆ ಹನ್ನೆರಡು ಸೆಕೆಂಡುಗಳೂ ಬೇಕು.

ಪ್ರಾರಂಭದಲ್ಲಿ ಹತ್ತು ಪ್ರಾಣಾಯಾಮಗಳ ಅಭ್ಯಾಸ ಮಾಡುತ್ತ ಐವತ್ತಕ್ಕೆ ಏರಿಸಬಹುದು. ಪ್ರಾಣಾಯಾಮದ ಬಾಲಪಾಠವಿದು. ಇನ್ನೂ ಹೆಚ್ಚಿನ ವಿಷಯಗಳನ್ನು ಗುರುಮುಖೇನ ತಿಳಿದು ಅಭ್ಯಾಸ ಮಾಡುವುದು ಉತ್ತಮ.

'ಶರೀರ ಸಾಧನ ಯೋಗ ಅಥವಾ ಸೌಖ್ಯದ ಗುಟ್ಟು'

ಗೊರೂರು ರಾಮಸ್ವಾಮಿ ಅಯ್ಯಂಗಾರರು ೧೯೩೦ರಲ್ಲಿ ಅಂದರೆ ೪೩ ವರ್ಷಗಳ ಹಿಂದೆ ಸುಂದರಮ್ ಅವರು ರಚಿಸಿದ *Yogic Physical Culture* ಎಂಬ ಪುಸ್ತಕವನ್ನು ಸರಳ ಕನ್ನಡದಲ್ಲಿ ಅನುವಾದ ಮಾಡಿ, ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಈ ಪುಸ್ತಕದ ಪ್ರತಿಗಳು ಮುಗಿದು ಎಷ್ಟೋ ವರ್ಷಗಳಾಗಿವೆ. ಈ ಪುಸ್ತಕವನ್ನು ಪರಿಷ್ಕರಿಸಿ, ಅವರು ಪ್ರಕಟಿಸಿದರೆ, ವಿದ್ಯಾರ್ಥಿ ವೃಂದಕ್ಕೆ ಮಹತ್ತರ ಪ್ರಯೋಜನವಾಗುತ್ತದೆ. ಕನ್ನಡ ನಾಡು, ಜನತೆ ಹಾಗೂ ವಿದ್ಯಾರ್ಥಿಗಳು ಈ ಪುಸ್ತಕವನ್ನು ಓದಿ ಪ್ರಯೋಜನ ಪಡೆಯುವಂತಾಗಲಿ.

'ಮಕ್ಕಳ ಪೋಷಣೆ'

ಅನುಪಮಾ ನಿರಂಜನ

ಚಕ್ರವರ್ತಿ ರಾಜಗೋಪಾಲಾಚಾರ್ಯರು ಭಾರತದ ಒಂದು ಅಪೂರ್ವ ಚೇತನ. ಪ್ರಾಚೀನ ಕಾಲದ ಋಷಿಗಳಂತೆ ಒಂದು ಧ್ಯೇಯಕ್ಕೆ ಜೀವನವನ್ನು ಮುಡಿಪಾಗಿಟ್ಟು ಬದುಕಿದವರು. ಸತ್ಯಕ್ಕೆ ಅಂಟಿಕೊಂಡು ಬೆಳೆದ ಸಾಹಸಿ. ಮಹಾ ರಾಜಕಾರಣಿ, ದೇಶಭಕ್ತ, ಚಿಂತನ ಶೀಲ, ಜೊತೆಗೆ ಬರಹಗಾರ. ತಮಿಳು ಹಾಗೂ ಇಂಗ್ಲಿಷ್ ಭಾಷೆಗಳೆರಡರಲ್ಲೂ ಪ್ರಭುತ್ವ. ಮಕ್ಕಳು, ವೃದ್ಧರಾದಿಯಾಗಿ ದೇಶಾದ್ಯಂತ ಎಲ್ಲರೂ ಅವರ ಬರಹವನ್ನು ಮೆಚ್ಚುವವರೇ.

ರಾಜಾಜಿಯವರು ರಾಮಾಯಣವನ್ನು ರಚಿಸಿದರು. ಅದೇ ಕೈ 'ಮಕ್ಕಳ ಪೋಷಣೆ' ಕುರಿತ ಪ್ರಬಂಧಗಳನ್ನು ಬರೆಯಿತು. ಇವು ಸುಮಾರು ೨೦ ವರ್ಷಗಳ ಹಿಂದೆ ತಮಿಳು ನಾಡಿನ ಜನಪ್ರಿಯ ಪತ್ರಿಕೆ 'ಕಲ್ಕಿ'ಯಲ್ಲಿ ಪ್ರಕಟವಾದುವು. ಅವುಗಳನ್ನು ಓದಿ ಮೆಚ್ಚಿದ ಕನ್ನಡದ ಹಿರಿಯ ಬರಹಗಾರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 'ಮಕ್ಕಳ ಪೋಷಣೆ'ಯನ್ನು ಕನ್ನಡಕ್ಕೆ ಅನುವಾದಿಸಿದರು.

ರಾಜಾಜಿಯವರ 'ಮಕ್ಕಳ ಪೋಷಣೆ' ಕಿರು ಹೊತ್ತಿಗೆಯಾದರೂ ಹಿರಿಯ ವ್ಯಾಪ್ತಿಯುಳ್ಳದ್ದು. ಮಗುವನ್ನು ವಿಶಿಷ್ಟ ವ್ಯಕ್ತಿಯಾಗಿ ಪರಿಗಣಿಸಿ ಅವನ ಸರ್ವತೋಮುಖ ಬೆಳವಣಿಗೆಗೆ ತಂದೆ ತಾಯಿ, ಸಮಾಜ, ಯಾವ ರೀತಿ ಶ್ರಮಿಸಬೇಕೆಂಬುದರ ಸುಂದರ ಚಿತ್ರಣ ಈ ಹೊತ್ತಗೆಯಲ್ಲಿದೆ. ಹನ್ನೆರಡು ಅಧ್ಯಾಯಗಳಲ್ಲಿ ಮೊದಲ ಹನ್ನೊಂದು, ಮಕ್ಕಳ ಮನಸ್ಸಿಗೆ ಹಾಗೂ ದೇಹಕ್ಕೆ ಸೂಕ್ತ ಪರಿಸರವನ್ನು ಹೇಗೆ ಒದಗಿಸುವುದು ಎಂಬ ವಿವೇಕಯುಕ್ತ ಪರಿಶೀಲನೆಯನ್ನು ಒಳಗೊಂಡಿದೆ. ಹನ್ನೆರಡನೆಯ ಅಧ್ಯಾಯ ಕಥಾರೂಪದಲ್ಲಿ ಆರಂಭವಾಗಿದೆ. ಊರೊಂದರ ಕೇರಿಯ ಜನ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಹೇಗೆ ಬಾಲಮಂದಿರಗಳನ್ನು, ಬೃಂದಾವನಗಳನ್ನು ನಿರ್ಮಿಸಿ ಯಶಸ್ಸು ಹೊಂದಿದರು ಎಂಬ ರೋಮಾಂಚಕಾರೀ ನಿರೂಪಣೆ ಇದರಲ್ಲಿದೆ.

ಮಗುವಿಗಿರುವ ಸ್ವಾಭಾವಿಕ ಗುಣಗಳು ಪರಂಪರೆಯ ಸ್ವತ್ತು. ಆದರೆ ಅವು ಪೂರ್ಣ ವಿಕಸಿಸಿ, ಮಗು ಉಪಯುಕ್ತ ಪ್ರಜೆಯಾಗಿ ಬೆಳೆಯಬೇಕಾದರೆ ತಂದೆತಾಯಿಯರ ಜವಾಬ್ದಾರಿ ಬಹು ಹಿರಿದು. ಮಗುವಿನ ಮೊದಲ ಐದು ವರ್ಷಗಳು ಅವನ ಗುಣಗಳನ್ನು ರೂಪಿಸಲು, ತಿದ್ದಲು, ಅತ್ಯಂತ ಒಳ್ಳೆಯ ಸಮಯ. ಆದುದರಿಂದ ತಾಯಿ ತಂದೆಯರು, "ಮಗು ಹ್ಯಾಗೋ ಬೆಳೆಯುತ್ತಾನೆ" ಎಂಬ ಧೋರಣೆಯನ್ನು ಬಿಟ್ಟು ಅವನಿಗಾಗಿ ಸ್ವಲ್ಪ ಸಮಯ ಮುಡಿಪಾಗಿಡಬೇಕು ಎಂದು ಲೇಖಕರು ಒತ್ತಿ ಹೇಳಿದ್ದಾರೆ. "ಬಾಳಿನಲ್ಲಿ ಸಂಭವಿಸುವ ಅನೇಕ ದುಃಖಗಳಿಗೆ ಹೆತ್ತವರ ಅಲಕ್ಷ್ಯವೂ ವಿವೇಕ ಹೀನತೆಯೂ ಕಾರಣವಾಗುವುದು" (ಪುಟ ೭) ಎಂಬುದು ಎಲ್ಲ ತಾಯಿತಂದೆಯರೂ ಗಮನಿಸಬೇಕಾದ ಮಾತು.

ಮಗುವನ್ನು ತಾಯಿ ತಂದೆ ಪ್ರೀತಿಸಬೇಕು, ಹ್ಯಾಗೆ?

"ಪ್ರೀತಿ ಎಂದರೆ ಬೇಕಾದ ಹಾಗೆ ಮುತ್ತು ಕೊಡುವುದೂ ಬಾಚಿ ತಬ್ಬಿಕೊಳ್ಳುವುದೂ, ಅಮುಕುವುದೂ ಅಲ್ಲ. ಪ್ರೀತಿಯ ಮಾರ್ಗವೆಂದರೆ ಮಗುವಿನಲ್ಲಿ ನಂಬಿಕೆ ತೋರುವುದು, ಮಗು ಏನಾದರೂ ಒಳ್ಳೆಯ ಕೆಲಸ ಮಾಡಿದರೆ ಸಂತೋಷಪಡುವುದು; ತಪ್ಪು ಮಾಡಿದರೆ ಭಯವುಂಟಾಗದಂತೆ ಧೈರ್ಯದ ಮಾತನ್ನು ಆಡುವುದು. ಮಗುವಿಗೆ ಆತ್ಮಾವಲಂಬನೆ—ತನ್ನಲ್ಲಿ ತನಗೆ ನಂಬಿಕೆಯುಂಟಾಗುವಂತೆ—ಮಾಡುವುದು. ಇದೇ ಪ್ರೀತಿಯ ಮಾರ್ಗ" (ಪುಟ ೧೦) ಎಂದು ಬಹು ಸರಳವಾದ. ಆದರೆ ಬಹು ಅಮೂಲ್ಯವಾದ ಪ್ರೀತಿಯ ವ್ಯಾಖ್ಯೆಯನ್ನು ಲೇಖಕರು ನೀಡಿದ್ದಾರೆ.

ಮಗುವನ್ನು ಹೊಡೆಯುವುದರಿಂದ ಬಡಿಯುವುದರಿಂದ ಅವನಲ್ಲಿ ಒಳ್ಳೆಯ ಗುಣಗಳನ್ನು ಮೂಡಿಸಲು ಸಾಧ್ಯವಿಲ್ಲ. ಸ್ವತಃ ತಂದೆ ತಾಯಿಗಳ ವರ್ತನೆಯೇ ಮಗುವಿಗೆ ಮಾರ್ಗದರ್ಶಿ. ಮಗುವಿನಲ್ಲಿ ಸುಪ್ತವಾಗಿರುವ ಕಲೆಗಳು ಅರಳಲು ಮಾತಾಪಿತೃಗಳು ಅನುವು ಮಾಡಿಕೊಡಬೇಕು. ಕಷ್ಟಪಟ್ಟರೆ ಫಲವುಂಟು ಎಂಬುದನ್ನು ಮಗುವಿನ ಮನಸ್ಸಿನ ಮೇಲೆ ಬಿಂಬಿಸಬೇಕು. ಮಗು ನೆರೆಹೊರೆಯ ಮಕ್ಕಳೊಂದಿಗೆ ಸೌಹಾರ್ದತೆಯಿಂದ ಆಡಲು ಪ್ರೇರೇಪಿಸಬೇಕು. ಮಗುವನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವ ಚಪಲದಿಂದ, 'ಗುಮ್ಮ ಬಂತು, ಪೋಲೀಸ್ ಬಂದ' ಎಂದು ಹೆದರಿಸಬಾರದು. ಮಗುವಿಗೆ ಅತಿ ರಕ್ಷಣೆಯೂ ಸಲ್ಲದು. ಅವನು ಬಿದ್ದು ಎದ್ದು ಗಾಯ ಮಾಡಿಕೊಂಡು ಕಷ್ಟಸಹಿಷ್ಣುವಾಗಿ ಬೆಳೆದರೇ ಚೆನ್ನು.

ಈ ರೀತಿ ಮಾರ್ಗದರ್ಶನ ನೀಡುವ ಅಧ್ಯಾಯಗಳು ಬಹಳ ಸರಳವಾಗಿದ್ದು ಸಾಮಾನ್ಯ ಓದುಗರಿಗೂ ವಿವೇಚನಾ ಜ್ಞಾನವನ್ನು ನೀಡುತ್ತವೆ. ಕಡೆಯ ಅಧ್ಯಾಯದ ಕಥಾರೂಪವಂತೂ ನಮ್ಮೂರಿನ ಕೇರಿಗಳಲ್ಲಿ ನಡೆಯುವ ಘಟನೆಯಷ್ಟೇ ಸಹಜವಾಗಿದೆ. ಆದರ್ಶದ ಹುಚ್ಚು ಹತ್ತಿದ ವ್ಯಕ್ತಿಗಳಿಂದ ಮಾತ್ರ ಸಮಾಜದ ಉದ್ಧಾರವಾಗುತ್ತದೆ ಎಂಬ ಸತ್ಯ ಈ ಕಥಾಂಕದಿಂದ ಮತ್ತೆ ಸ್ಪಷ್ಟವಾಗುತ್ತದೆ.

ಕನ್ನಡದ ಖ್ಯಾತ ಲೇಖಕರಾದ ಗೊರೂರರ ತಿಳಿಗನ್ನಡ ಈ ಪುಸ್ತಕಕ್ಕೆ ಕಳಸವಾಗಿದೆ.

ನಮ್ಮ ನಾಡಿನ ಎಲ್ಲ ತಾಯಿ ತಂದೆಯರೂ ಓದಿ, ಮನನಮಾಡಬೇಕಾದ ಪುಸ್ತಕ 'ಮಕ್ಕಳ ಪೋಷಣೆ'. ಇದನ್ನು ಕನ್ನಡದಲ್ಲಿ ಪ್ರಕಟಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಕನ್ನಡದ ಜನ ಕೃತಜ್ಞರು.

‘ಜಗದ್ಗುರುಗಳ ದಿವ್ಯಬೋಧೆ’

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಪ್ರಬಂಧ, ಸಣ್ಣಕತೆ, ಕಾದಂಬರಿ, ಜೀವನಚರಿತ್ರೆ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಸಿದ್ಧ ಪ್ರಸಿದ್ಧರಾಗಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸನಾತನ ಧರ್ಮದಲ್ಲಿ ವಿಶೇಷವಾದ ಅಭಿಮಾನ ಉಳ್ಳವರು. ಸಂಪ್ರದಾಯದ ಹೆಸರಿನಲ್ಲಿ ಬೆಳೆದು ಬಂದಿರುವ ಅಜ್ಞಾನ ಅಂಧಶ್ರದ್ಧೆಗಳಿಗೆ ಬೆಲೆ ಕೊಡದೆ, ಜೀವನದ ಮೂಲ ಸತ್ತ್ವವನ್ನೇ ಅರಸುತ್ತಿರುವವರು. ಅರ್ಥವಿಲ್ಲದ ಆಚಾರ ಗಳನ್ನು ತಮ್ಮದೇ ಆದ ರೀತಿಯಲ್ಲಿ ಗೊರೂರರು ವಿಡಂಬನೆಗೆ ಗುರಿಮಾಡಿರುವುದನ್ನು ಅವರ ಪ್ರಬಂಧಗಳಲ್ಲಿ ಕಾಣಬಹುದು. ವೇದ ಉಪನಿಷತ್ತುಗಳಲ್ಲಿ ಉಕ್ತವಾಗಿರುವ, ರಾಮಾಯಣ ಭಾರತಗಳಲ್ಲಿ ಮೈದಳೆದಿರುವ ಉದಾರವೂ ಉದಾತ್ತವೂ ಆದ ಭಾವನೆ ಗಳ ತವರು ಅವರು.

ಗೊರೂರರು ಶ್ರದ್ಧಾನ್ವಿತ ಶ್ರೀವೈಷ್ಣವರು. ಆಚಾರ್ಯಪ್ರೋಕ್ತವಾದ ಸೂತ್ರ ಸಿದ್ಧಾಂತಗಳಲ್ಲಿ ಅವರಿಗೆ ವಿಶೇಷವಾದ ಅಭಿಮಾನವುಂಟು. ಅವರ ಮಾತು ನಡತೆ ಗಳಲ್ಲಿ ಈ ಲಕ್ಷಣ ತುಂಬುತುಳುಕು. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದ ಗೊರೂರರು ಹಳ್ಳಿಯ ಹತ್ತು ಸಮಸ್ತರೊಂದಿಗೆ ನಡಸುತ್ತಿರುವ ಸಮರಸದ ಬಾಳು ಆದರ್ಶಪ್ರಾಯ ವಾದದ್ದು. ಸನಾತನ ಧರ್ಮದ ಮೂರು ಕವಲುಗಳಾದ ದ್ವೈತಾದ್ವೈತ ವಿಶಿಷ್ಟಾದ್ವೈತ ಗಳು ಒಂದೇ ಸತ್ಯದ ಮೂರು ಪ್ರಭೇದಗಳೆಂಬುದನ್ನು ಬಲ್ಲವರು ಗೊರೂರರು. ಪ್ರತಿ ಯೊಂದು ಧರ್ಮದ ಶಕ್ತಿಯೂ ಆಯಾ ಧರ್ಮದ ಗುರುಗಳ ಮತ್ತು ಅವರ ಅನು ಯಾಯಿಗಳ ಆತ್ಮಶಕ್ತಿ, ವಿವೇಕ, ಇವುಗಳನ್ನೇ ಅವಲಂಬಿಸಿರುತ್ತದೆಯೆಂಬುದು ಅವರ ದೃಢನಂಬುಗೆ. ಸನಾತನಧರ್ಮದಲ್ಲಿಯ ತ್ರಿಮತಗಳಿರಲಿ, ಇಸ್ಲಾಂ, ಕ್ರೈಸ್ತ ಮುಂತಾದ ಮತಗಳೂ ಸತ್ಯಾನ್ವೇಷಣೆಯ ಸಾಧನಗಳೆಂಬುದೂ ಅವರ ಅರಿವು. ಇಂಥ ಉದಾರವಾದ ದೃಷ್ಟಿ ತಳೆದಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರರು ಅದ್ವೈತ

ಸಿದ್ಧಾಂತ ಪ್ರತಿಪಾದಕರಾದ ಆದಿಶಂಕರ ಸ್ಥಾಪಿತ ಕಂಚಿ ಕಾಮಕೋಟಿ ಪೀಠಾಧಿಪತಿ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳ ಬೋಧನೆಗಳಲ್ಲಿ ಆಸಕ್ತಿ ತಳೆದದ್ದು ಆಶ್ಚರ್ಯವೇನೂ ಅಲ್ಲ, ಆಕಸ್ಮಿಕವೂ ಅಲ್ಲ. ಡಿ.ವಿ.ಜಿ. ಅವರು ಹೇಳುವಂತೆ "ಈ ಆಚಾರ್ಯರು ವೇದವೇದಾಂತ ಪಾರಂಗತರು. ನಾನಾ ಶಾಸ್ತ್ರ ಪರಿಣತರು. ಮಹಾ ತಪಸ್ವಿಗಳು. ಅವರು ಲೋಕವನ್ನು ತುಚ್ಛವೆಂದೂ ಜನವನ್ನು ನಾಸ್ತಿಕವೆಂದೂ ಹೇಳಿದ ಮಾತ್ರದಿಂದ ಗುರುಗಳು ಕೃತಕೃತ್ಯರಾದರೆಂದು ಭಾವಿಸಿಕೊಂಡವರಲ್ಲ. ಇಂದಿನ ಲೋಕದ ಕಷ್ಟಕಾರ್ಪಣ್ಯಗಳನ್ನು ತಳಮುಟ್ಟಿ ಅರಿತವರು ಅವರು; ಮತ್ತು ಆಳವಾದ ಅನುಕಂಪೆಯುಳ್ಳವರು. ಅಂಥವರು ಮಾಡುವ ಉಪದೇಶ ಕೇವಲ ಗ್ರಂಥವಾಕ್ಯವಾಗದು. ಗ್ರಂಥಸ್ಥವಾದ ತತ್ತ್ವವನ್ನು ಇಂದಿನ ಜನಜೀವನಕ್ಕೆ ಹೇಗೆ ಅನ್ವಯಿಸಬಹುದೆಂದು ವಿಚಾರ ಮಾಡಿ ಉಪದೇಶಿಸುವವರು ಅವರು. ಪ್ರಪಂಚದ ಇಂದಿನ ಸಂಮಿಶ್ರಿತ ಸಂದರ್ಭಗಳಲ್ಲಿ ನಮ್ಮ ಪುರಾತನ ಶಾಸ್ತ್ರಗಳನ್ನು ಅಕ್ಷರಶಃ ಪರಿಪಾಲಿಸುವುದು ಎಷ್ಟು ಕಷ್ಟವೆಂಬುದನ್ನು ಅವರು ಬಲ್ಲರು. ಆದರೂ ಶಾಸ್ತ್ರಗಳಲ್ಲಡಗಿರುವ ಮೂಲತತ್ತ್ವಗಳು ಸಾರ್ವಕಾಲಿಕವಾದವು—ಎಂಬ ನಂಬಿಕೆ ಅವರಲ್ಲಿ ಸ್ಥಿರವಾಗಿ ನೆಲಸಿರುವುದರಿಂದ ಆ ತತ್ತ್ವಗಳನ್ನು ಇಂದಿನ ಸಂದರ್ಭಗಳಲ್ಲಿ ಹೇಗೆ ಹೇಗೆ, ಎಷ್ಟು ಮಾತ್ರ ಆಚರಣೆಯಲ್ಲಿರಿಸಿ ಕೊಳ್ಳುವುದು ಯುಕ್ತವೆಂಬುದನ್ನು ಈ ಆಚಾರ್ಯರು ಪರಾಮರ್ಶೆಯಿಂದ ಬೋಧಿಸುತ್ತಿದ್ದಾರೆ." (ಮುನ್ನುಡಿ, ಪುಟ ೧–೨)

ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳು ಹನ್ನೊಂದು ವರ್ಷಗಳ ಹಿಂದೆ ಮದ್ರಾಸಿನಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾಡಿದ ಪ್ರವಚನಗಳ ಕನ್ನಡ ರೂಪವೇ 'ಜಗದ್ಗುರುಗಳ ದಿವ್ಯಬೋಧೆ'ಯೆಂಬ ಪುಸ್ತಕ. ಗುರುಗಳ ಪ್ರವಚನಗಳನ್ನು ಕೇಳುವ ಅವಕಾಶವಿಲ್ಲದ, ಕೇಳಿದರೂ ಅವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕೆಂಬ, ಧರ್ಮ ಸಂಬಂಧವಾಗಿ ತಲೆದೋರುವ ಯಾವುದೇ ಸಂದೇಹವನ್ನು ಸುಲಭವಾಗಿ ಪರಿಹರಿಸಿಕೊಳ್ಳ ಬಯಸುವ, ಆಧುನಿಕ ಆವಶ್ಯಕತೆಗಳಿಗೆ ತಕ್ಕಂಥ ಧರ್ಮಜಿಜ್ಞಾಸೆಯ ಕೈಪಿಡಿಯೊಂದನ್ನು ತಮ್ಮ ಕಪಾಟಿನಲ್ಲಿ ಸರ್ವದಾ ಇಟ್ಟುಕೊಳ್ಳುವ ಇಚ್ಛೆ ಇರುವ ಜನಕ್ಕೆಲ್ಲ 'ದಿವ್ಯಬೋಧೆ' ಉಪಯುಕ್ತ.

ಗುರುಗಳ ಪ್ರವಚನಗಳ ಕನ್ನಡ ಅನುವಾದ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದಾಗ ಅನೇಕ ಓದುಗರ ಮೆಚ್ಚುಗೆ ಗಳಿಸಿತು. ಇದು ನಾಲ್ಕಾರು ವಾರ ಪ್ರಕಟವಾಗಿ ನಿಂತಾಗ ಇದನ್ನು ಮುಂದುವರಿಸಬೇಕೆಂದು ಹಲವು ವಾಚಕರು ಆಶಿಸಿದರು. ಅವರ ಕೋರಿಕೆಯಿಂದಲೂ ಪತ್ರಿಕೆಯ ಸಂಪಾದಕರ ಪ್ರೋತ್ಸಾಹದಿಂದಲೂ ಈ ಅನುವಾದ ಸಂಪೂರ್ಣವಾಗಿ ವಾರವಾರ ಪ್ರಕಟವಾಯಿತು. ಬಿಡಿಬಿಡಿಯಾಗಿ ಬಂದ ಪ್ರವಚನಗಳು ಒಟ್ಟಾಗಿ ಪುಸ್ತಕರೂಪದಲ್ಲಿ ಪ್ರಕಟವಾಗುವ ಅವಕಾಶವೂ ಒದಗಿ ಬಂತು. ಡಾ. ಟಿ. ಎಂ. ಪಿ. ಮಹದೇವನ್ ಅವರಂಥ ವಿದ್ವಾಂಸರು ಈ ಪುಸ್ತಕಕ್ಕೆ ಜಗದ್ಗುರುಗಳ ಉಪದೇಶ ಸಾರದ ಪೀತಾಂಬರ ಹೊದಿಸಿದರು. ಡಿ. ವಿ. ಜಿ.

ಅವರು ಮುನ್ನುಡಿಯ ತಿಲಕವಿಟ್ಟರು. ಇಷ್ಟೆಲ್ಲ ಶೋಭೆಯಿಂದ ಹೊರ ಬಂದ ಪುಸ್ತಕವನ್ನು ಕಂಡು ಗೊರೂರರು ಸಂತೋಷಪಟ್ಟರು. ತಮ್ಮ ಸ್ವಂತ ಕೃತಿಯೊಂದರ ಬಗ್ಗೆ ಸಹಜವಾಗಿ ಎಷ್ಟು ಅಭಿಮಾನ ಇದ್ದೀತೋ, ಅಷ್ಟೇ ಅಭಿಮಾನ ಅವರಿಗೆ ಈ ಅನುವಾದದ ಬಗ್ಗೆ ಕೂಡ. "ಗುರುಂ ಪ್ರಕಾಶಯೇತ್" ಎಂಬ ಸಂಸ್ಕೃತ ನುಡಿಯಂತೆ, ಗುರುವನ್ನು ಪ್ರಕಾಶಪಡಿಸುವ ಕಾರ್ಯ ತಮ್ಮದು ಎಂದು ಅವರಿಗೆ ತೃಪ್ತಿ.

'ಜಗದ್ಗುರುಗಳ ದಿವ್ಯಬೋಧೆ'ಯ ಅನುವಾದ ಇದಾದ್ದರಿಂದ ಗೊರೂರರ ಬರವಣಿಗೆಯ ಗುಣದರ್ಶನ ವಿವೇಚನೆ ಮಾಡುವ ಮುನ್ನ ಪ್ರವಚನಕಾರರ ಬೋಧನೆಯ ಸಾರವನ್ನು ಕುರಿತ ವಿವೇಚನೆ ನಡಸುವುದು ಉಚಿತ, ಅವಶ್ಯ. ಅರುವತ್ತು ಅಧ್ಯಾಯಗಳಿಂದ ಕೂಡಿ, ಇನ್ನೂರೆಪ್ಪತ್ತು ಪುಟಗಳ ವಿಸ್ತಾರದಲ್ಲಿ ಹಬ್ಬಿರುವ ಈ ಬೋಧೆಯಲ್ಲಿ ಧರ್ಮ, ನೀತಿ, ಆಚಾರ, ಆದರ್ಶಗಳನ್ನು ಕುರಿತ ಆಲೋಚನೆ ಹರಿದಿದೆ. ಕ್ರೈಸ್ತ, ಇಸ್ಲಾಂ ಮುಂತಾದ ಮತಗಳ ಹಾಗೆ ಅಲ್ಲ ಸನಾತನ ಧರ್ಮ. ನಮ್ಮ ಧರ್ಮಕ್ಕೆ ಹಿಂದೂ ಎಂಬ ಹೆಸರು ಬಂದದ್ದಾದರೂ ಇತ್ತೀಚೆಗೆ. ವಾಸ್ತವವಾಗಿ ಇದು ಸನಾತನ ಧರ್ಮ. ಶಾಶ್ವತವಾದ ತತ್ವಗಳನ್ನು ಬೋಧಿಸುವ ಧರ್ಮವೇ ಸನಾತನ ಧರ್ಮ ಎನ್ನುವುದು ಗುರುವಿನ ನುಡಿ. ಇದರ ಶಕ್ತಿ ಇರುವುದು ಈ ಧರ್ಮದ ನಿಯಮಗಳನ್ನು ಪಾಲಿಸುವ ವ್ಯಕ್ತಿಗಳು ಇರುವುದರಿಂದಲೇ. ತಮ್ಮ ಬಾಳಿನಲ್ಲಿ ಅತ್ಯುನ್ನತ ಅಧ್ಯಾತ್ಮ ಮಟ್ಟವನ್ನು ಮುಟ್ಟಿದವರು ಈ ಧರ್ಮದಲ್ಲಿ ಇದ್ದುದರಿಂದ ಈ ಧರ್ಮ ಅಮೃತತ್ವವನ್ನು ಪಡೆದಿದೆ. "ಹಿಂದೂ ಧರ್ಮ, ಇತರ ಮತಗಳಿಂದ ತನ್ನ ಮತಕ್ಕೆ ಜನರನ್ನು ಮತಾಂತರಗೊಳಿಸುವುದನ್ನು ಒಪ್ಪಲಿಲ್ಲ, ಈ ಕಾರಣದಿಂದಲೇ ಹಿಂದೂ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ಮತಾಂತರದ ಪ್ರಸ್ತಾಪವಿಲ್ಲ" (ಪುಟ ೧೩-೧೪) ಎಂಬ ಅವರ ಮಾತನ್ನು ಮೊದಲನೆಯ ಸಲ ಓದಿದಾಗ ಅದನ್ನು ಒಪ್ಪುವುದು ಸಾಮಾನ್ಯರಿಗೆ ಕಷ್ಟವಾಗಬಹುದು. ಆದರೆ ಜಗದ್ಗುರುಗಳ ವಿಚಾರಸರಣಿ ಇಲ್ಲಿಗೆ ನಿಲ್ಲುವುದಿಲ್ಲ. ಅದು ಈ ವಿಷಯದ ಮೂಲವನ್ನೇ ಅರಸಿ ನಡೆಯುತ್ತದೆ. ಹಿಂದೂ ಧರ್ಮವನ್ನು ಸನಾತನ ಧರ್ಮವೆಂದು ಹೇಳುವುದಕ್ಕೆ ಕಾರಣವೇನೆಂದರೆ ಅದು ಎಂದಿಗೂ ನಿಂತ ನೀರಾಗಿಲ್ಲದಿದ್ದದ್ದು ; ಸದಾ ವಿಕಸನಶೀಲವಾಗಿರುವುದು. "ವೇದ ಧರ್ಮವೇ ಅತ್ಯಂತ ಪ್ರಾಚೀನವಾದುದು ಎಂಬುದಕ್ಕೆ ಆಧಾರವಿದೆ. ಅದು ಜಗತ್ತಿನ ಇತರ ಭಾಗಗಳಿಗೂ ವ್ಯಾಪಿಸಿದ್ದಿತು. ಈಚೆಗೆ ಆ ದೇಶಗಳಲ್ಲಿ ಇತರ ಮತಗಳೂ ಹರಡಿವೆ. ಹಿಂದೂ ಧರ್ಮ ಈಗ ಭಾರತದಲ್ಲ ಮಾತ್ರ ಪ್ರಚಾರದಲ್ಲಿದೆ. ಈ ಹೊಸ ಧರ್ಮಗಳು ಹೇಗೆ ಹುಟ್ಟಿದುವು? ಹೇಗೆ ಬೆಳೆದುವು? ಇವಕ್ಕೆ ಕಾರಣ, ಹಿಂದೂ ಮತದಲ್ಲಿ ಹಿಂದುಗಳಿಗೆ ಶ್ರದ್ಧೆ ಇಲ್ಲದಿರುವುದೇ, ಮತ್ತು ಹಿಂದೂ ಧರ್ಮಾನುಯಾಯಿಗಳು ಕರ್ಮಾನುಷ್ಠಾನ ಮತ್ತು ಧಾರ್ಮಿಕ ಆಚರಣೆಗಳನ್ನು ಕ್ರಮವಾಗಿ ಮಾಡದೆ ಇರುವುದೇ ಆಗಿದೆ. ನಮ್ಮ ಧರ್ಮ ಸತ್ವಹೀನವಾದುದಕ್ಕೆ ಅಥವಾ ಅಶಕ್ತವಾದುದಕ್ಕೆ ಕಾರಣ, ನಾವು ಧರ್ಮವನ್ನು ಹೊರಗೆ ಅಥವಾ ಬೇರೆ ದೇಶಗಳವರಿಗೆ ಪ್ರಚಾರ ಮಾಡಲಿಲ್ಲ ಎಂಬುವಲ್ಲ. ಆದರೆ

ಹಿಂದುಗಳಿಗೆ ಅವರ ಧರ್ಮದಲ್ಲಿ ಶ್ರದ್ಧೆ ಕಡಿಮೆಯಾದುದು ಮತ್ತು ಆ ಧರ್ಮದ ತತ್ತ್ವಗಳಂತೆ ಅವರು ಆಚರಿಸದೆ ಇದ್ದುದು. ಧರ್ಮಕ್ಕೆ ಪ್ರಚಾರ ಅವಶ್ಯಕವಿಲ್ಲ. "ಕೇಳಿದರೆ ಕೇಳು" ಎಂಬುದು ಹಿಂದೂ ಧರ್ಮದ ನಿಯಮ. ಶ್ರದ್ಧೆಯಿಲ್ಲದವನಿಗೆ ಹೇಳಿ ಫಲವಿಲ್ಲ ....ಧರ್ಮದ ಶಕ್ತಿ ಇರುವುದು ಅದರ ಅನುಯಾಯಿಗಳ ಸಂಖ್ಯೆ ಎಷ್ಟು ಎಂಬುದರ ಮೇಲೆ ಅಲ್ಲ. ಅನುಯಾಯಿಗಳ ಆಚರಣೆಯ ಮೇಲೆ. ಹಿಂದೂ ಧರ್ಮದ ಅತ್ಯಂತ ಶ್ರೇಷ್ಠ ಪ್ರಚಾರಕ ಯಾರೆಂದರೆ, ಆ ಧರ್ಮದ ತತ್ತ್ವಗಳಿಗನುಸಾರವಾಗಿ ಯಾರು ಜೀವಿಸುತ್ತಾನೆಯೋ ಅವನೇ. ಅಂತಹ ಮಹಾನ್‌ಗಳು ಕಡಿಮೆ ಸಂಖ್ಯೆಯಲ್ಲಿದ್ದರೂ ಚಿಂತೆಯಿಲ್ಲ. ಇಂದಿಗೂ ಹಿಂದೂ ಧರ್ಮ ಉಳಿದಿರುವುದು ಇಂತಹ ಸಂತರಿಂದಲೇ" (ಪುಟ ೧೮) ಎನ್ನುತ್ತಾರೆ ಸ್ವಾಮೀಜಿ.

ಸನಾತನ ಧರ್ಮದ ಈ ವ್ಯಾಪಕ ಚಿತ್ರವನ್ನು ನೀಡಿರುವ ಸ್ವಾಮಿಗಳಿಗೆ ಹಿಂದೂಗಳು ಇತರ ಮತಗಳೊಂದಿಗೆ ಸ್ಪರ್ಧಿಸುವ ಮನೋಭಾವ ಒಪ್ಪಿಗೆಯಾಗುವುದಿಲ್ಲ. "ತಾನು ಬೆಳೆಯಲು ಹಣ ಮತ್ತು ಶಕ್ತಿಗಳ ಮೇಲೆ ಅವಲಂಬಿಸುವ ಮತ, ಇನ್ನೂ ಹೆಚ್ಚು ಹಣ ಅಥವಾ ಶಕ್ತಿಯು ಎದುರಿಗೆ ಬಂದಾಗ ನಾಶವಾಗುವುದು ಸಹಜ. ಆದರೆ ಹಿಂದೂ ಧರ್ಮ ತನ್ನ ಸತ್ವವನ್ನು ವ್ಯಕ್ತಿ ಜೀವನದ ಪಾರಿಶುದ್ಧತೆಯಿಂದ ಸಂಪಾದಿಸಿದ್ದಿತು. ಆದುದರಿಂದ ಈ ಮತಕ್ಕೆ ಆ ಬಗೆಯ ಭಯವಿರಲಿಲ್ಲ. ನಮಗೆ ಸ್ಫೂರ್ತಿ ಬೇಕಾಗಿರುವುದು, ಇತರರನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅಲ್ಲ: ನಮ್ಮನ್ನೇ ರಕ್ಷಿಸಿಕೊಳ್ಳುವುದಕ್ಕಾಗಿ; ಅಂದರೆ ನಮ್ಮನ್ನು ಪರಿಶುದ್ಧರನ್ನಾಗಿ ಮಾಡುವುದಕ್ಕಾಗಿ." (ಪುಟ ೨೦)

ತಮ್ಮ ಮತಗಳನ್ನು ನಂಬಿದವರು ಮಾತ್ರವೇ ಸ್ವರ್ಗಕ್ಕೆ ಹೋಗುತ್ತಾರೆಂದು ಇತರ ಮತಗಳು ಬೋಧಿಸುತ್ತವೆ. ಎಂದರೆ ಆ ಮತಗಳು ಪ್ರಚಾರಕ್ಕೆ ಬರುವುದಕ್ಕೆ ಮುಂಚೆ ಜನಿಸಿದವರಿಗೆ ಮೋಕ್ಷವೇ ಇಲ್ಲವೆಂದು ಹೇಳಿದಂತಾಗುತ್ತದೆ. ಇದೊಂದು ಆಭಾಸ. ಹಿಂದೂ ಧರ್ಮ ಅಂಥ ತಪ್ಪನ್ನು ಮಾಡುವುದಿಲ್ಲ. ಪ್ರತಿಯೊಬ್ಬನೂ ತಾನು ನಡೆಯಬೇಕಾದ ಹಾದಿಯನ್ನು ಗುರುತಿಸಿಕೊಳ್ಳಬೇಕು. ಆದ್ದರಿಂದ ಎಷ್ಟು ಬಗೆಯ ಜನರುಂಟೋ ಅಷ್ಟು ಧರ್ಮಗಳುಂಟು ಎಂದು ಹೇಳಬಹುದು. ಇಂಥ ವಿಶಾಲ ದೃಷ್ಟಿ ಹಿಂದೂಗಳದು. ವೇದ, ಉಪನಿಷತ್ತು, ಗೀತೆ, ರಾಮಾಯಣ, ಭಾರತ ಇವೆಲ್ಲ ಈ ದೃಷ್ಟಿಯನ್ನು ಎತ್ತಿ ಹಿಡಿಯುತ್ತವೆ; ವಿವಿಧ ಸಂಕೀರ್ಣ ಸನ್ನಿವೇಶಗಳಲ್ಲಿ ವಿಚಾರಪರನಾದ ಮನುಷ್ಯ ಅನುಸರಿಸಬೇಕಾದ ಹಾದಿಯನ್ನು ತೋರಿಸುತ್ತವೆ. ಅವೆಲ್ಲ ನಮ್ಮ ಜೀವನ ಸಂಹಿತೆಗಳು. ಜ್ಞಾನ ನಮ್ಮ ಧರ್ಮದ ಅಸ್ತಿಭಾರ. ಇದನ್ನು ಸಂಪಾದಿಸಲು ಎಲ್ಲರೂ ಶ್ರಮಿಸಬೇಕು. ಜ್ಞಾನಿಯಾದವನಿಗೆ ಎಂಥ ದುಃಖ ಕಷ್ಟಗಳನ್ನಾದರೂ ಸಹಿಸಲು ಶಕ್ತಿ ಉಂಟಾಗುತ್ತದೆ. ಭಾರವಾದ ಮರದ ತುಂಡು ನೀರಿನಲ್ಲಿ ಹಗುರವಾಗಿ ತೋರುವ ಹಾಗೆ, ಜ್ಞಾನದ ಬಲದಿಂದ ಬಾಳು ಹಗುರವಾಗುತ್ತದೆ. ಇದಕ್ಕೆ ಅನುವಾಗಿರತಕ್ಕಂಥವು ದೈವಭಕ್ತಿ, ಆಚಾರ್ಯ ಪೂಜೆ. ದೈವ ಕೋಪದಿಂದ ಕೂಡ ಮಾನವನನ್ನು ರಕ್ಷಿಸುವವನು ಗುರು. ವಿವಿಧ ಆಚಾರ್ಯರು ತಮ್ಮ ತಮ್ಮ ಅನುಭವಗಳಿಗೆ ಅನುಗುಣವಾಗಿ ಮಾನವರಿಗೆ ನಿರ್ದೇಶನ

ನೀಡುತ್ತಾರೆ. ಇವರೆಲ್ಲರ ಗುರಿ ಒಂದೇ ಎಂಬುದನ್ನು ಮರೆಯಬಾರದು. ಇಂಥ ವಿಶಾಲ ಭಾವತಳೆದಿರುವ ಸನಾತನ ಧರ್ಮದಲ್ಲಿ ಹಲವು ದೇವರುಗಳೂ ಹಲವು ಮಾರ್ಗಗಳೂ ಇರುವುದು ಮಾತ್ರವೇ ಅಲ್ಲ. ನಾಸ್ತಿಕರನ್ನೂ ಅದು ಸಹಿಸುತ್ತದೆ. ಬೌದ್ಧ ಜೈನ ಮತಗಳನ್ನೂ ಅದು ಆದರಿಸುತ್ತದೆ. ಶಂಕರಾಚಾರ್ಯರು ಇಂಥ ವಿಶಾಲವಾದ ವೈದಿಕ ಧರ್ಮದ ಪ್ರತಿಪಾದಕರು. ಅವರು ಬೋಧಿಸಿದ ಅದ್ವೈತ ನಿರೀಶ್ವರವಾದವಲ್ಲ. ಮೂರ್ತಿಪೂಜೆಯನ್ನೂ ಅವರು ಅಲ್ಲಗಳೆದವರಲ್ಲ. ಮಾನವಾಭ್ಯುದಯಕ್ಕೆ ದೈವಾನುಗ್ರಹ ಅಗತ್ಯವೆಂಬುದನ್ನು ಅವರು ನಂಬಿದರು. ಎಲ್ಲ ದೃಷ್ಟಿಗಳೂ ಅಂತಿಮವಾಗಿ ಅದ್ವೈತದಲ್ಲಿ ಪರ್ಯವಸಾನವಾಗುತ್ತವೆಯೆಂಬುದು ಆಚಾರ್ಯರ ಬೋಧನೆ. ತನಗೆ ಬೇಕಾದ್ದನ್ನು ಕೊಡಬೇಕೆಂದು ಕೇಳುವುದು ಪ್ರಾರ್ಥನೆಯ ಉದ್ದೇಶವಲ್ಲ. ವಿನಯ ಸಂಪಾದನೆಗಾಗಿ ಪ್ರಾರ್ಥನೆ. ಅದು ಬೇರೊಬ್ಬರಿಗೆ ಹಾಕುವ ಅರ್ಜಿಯಲ್ಲ. ಹೀಗೆ ಧರ್ಮಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ವಿವೇಚನೆಯೂ ಇಲ್ಲುಂಟು.

ಶ್ರೀಸಾಮಾನ್ಯರನ್ನು ಉದ್ದೇಶಿಸಿ ಜಗದ್ಗುರುಗಳು ಈ ಪ್ರವಚನ ನೀಡಿರುವುದರಿಂದ ಇದು ನಮ್ಮ ಧರ್ಮವನ್ನು ಕುರಿತ ಒಂದು ಸಾಮಾನ್ಯ ಕೋಶದಂತಿದೆ. ಆಧುನಿಕ ಸನ್ನಿವೇಶಗಳಿಗೆ ತಕ್ಕಂಥ ಅನೇಕ ಉಪಮಾನಗಳಿಂದಲೂ ಉಪಕಥೆಗಳಿಂದಲೂ ಕೂಡಿದೆ. "ದೇವರು ನಮ್ಮ ಮೂಲ ಮತ್ತು ಅಂತ್ಯ ವಿಶ್ರಾಂತಿ ಧಾಮ." "ನಮ್ಮನ್ನು ನಮ್ಮಿಂದ ರಕ್ಷಿಸಿಕೊಳ್ಳುವುದಕ್ಕಾಗಿಯೇ ಧಾರ್ಮಿಕ ನಿಯಮಗಳು ಇರುವುದು." "ಪ್ರಯಾಣಿಕ ರೈಲಿನಿಂದ ಇಳಿದ ಕೂಡಲೇ ಎಲ್ಲ ಬಗೆಯ ವಾಹನಗಳ ಒಡೆಯರೂ ಅವನ ಗಂಟನ್ನು ಕಿತ್ತುಕೊಂಡು ತಮ್ಮ ವಾಹನಗಳಲ್ಲಿ ಕೂರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಪ್ರತಿಯೊಂದು ಸಂಪ್ರದಾಯದವರೂ ಪರಮಾತ್ಮ ಸಾಕ್ಷಾತ್ಕಾರಕ್ಕೆ ತಮ್ಮ ಮಾರ್ಗ ಸುಲಭ, ಶೀಘ್ರ ಎಂದು ಸಾಧಕರನ್ನು ಆಕರ್ಷಿಸುತ್ತಾರೆ. ಎಲ್ಲ ಮಾರ್ಗಗಳೂ ಒಂದೇ ಗುರಿಗೆ ತೆಗೆದುಕೊಂಡು ಹೋಗುತ್ತವೆ ಎಂಬುದನ್ನು ತಿಳಿದರೆ, ತಾನು ಅನುಸರಿಸುತ್ತಿರುವ ಮಾರ್ಗವನ್ನು ಸಾಧಕ ಬದಲಾಯಿಸಬೇಕಾಗುವುದಿಲ್ಲ." "ಇಲ್ಲಿ ನಾವು ಸಂಪಾದಿಸಿರುವ ಐಶ್ವರ್ಯ, ನಾವು ಹೋಗುವ ರಾಜ್ಯದಲ್ಲಿ ಸಹ ಚಲಾವಣೆಯಾಗುವ ನಾಣ್ಯವಾಗುವಂತೆ ಬದಲಾಯಿಸಿಕೊಳ್ಳುವುದು ನಮಗೆ ಸಾಧ್ಯ." "ಕೆಲವು ನಿಯಮಗಳನ್ನು ಪಾಲಿಸಿ ಎಂದು ನಾವು ಜನರಿಗೆ ಹೇಳಬಹುದು. ಆದರೆ ಅದರಂತೆ ನಡೆಯುವುದನ್ನು ಅವರ ವಿವೇಕ ಬುದ್ಧಿಗೆ ಬಿಡಬೇಕು." ಇಂಥ ಹಲವಾರು ನುಡಿಗಳು ಪ್ರವಚನಗಳಲ್ಲಿ ಅಲ್ಲಲ್ಲಿ ಮಿಂಚುತ್ತವೆ.

ಆದರೆ ಇಂಥ ಪ್ರವಚನಗಳಲ್ಲಿ ಜನದ ಮನಸ್ಸನ್ನು ತಮ್ಮತ್ತ ಸೆಳೆದುಕೊಳ್ಳಲು ಅನೇಕ ಸಾರಿ ವಿಚಿತ್ರವಾದ ತರ್ಕ, ಯುಕ್ತಿವಾದ, ಪರಸ್ಪರ ಸಂಬಂಧವಿಲ್ಲದ ವಿಷಯಗಳನ್ನು ಒಂದರ ಪಕ್ಕದಲ್ಲೊಂದು ಇಟ್ಟು ತೋರಿಸುವ ಚಮತ್ಕಾರ, ಗಂಭೀರ ವಿಚಾರಗಳ ಸರಳೀಕರಣ, ಇರುವ ದೋಷಗಳನ್ನು ಇಲ್ಲವೆಂದೋ ಅವನ್ನೂ ಗುಣಗಳೆಂದೋ ತೋರಿಸುವ ಪ್ರವೃತ್ತಿ—ಇಂಥ ಅಪಾಯಗಳೂ ಉಂಟು. ಅದ್ವೈತಕ್ಕೆ ಯಾರೊಡನೆಯೂ

ಜಗಳವಿಲ್ಲ: ಇತರ ದರ್ಶನಗಳಿಗೆ ಅವರೊಂದಿಗೆ ವಿವಾದ. ಹೋರಾಟ—ಎಂಬ ಮಾತು ಸರಳೀಕರಣಕ್ಕೆ ಒಂದು ಉದಾಹರಣೆ. 'ಗೀತೆಯ ಸಂದೇಶ ಮೊದಲ ಶ್ಲೋಕದಲ್ಲಿಯೇ!' ಎಂಬ ಅಧ್ಯಾಯದಲ್ಲಿ 'ಭಗವದ್ಗೀತೆ'ಯ ಮೊದಲ ಶ್ಲೋಕವನ್ನು ಅರ್ಥಮಾಡಿರುವ ರೀತಿಯಲ್ಲಿ ಚಮತ್ಕಾರವಿದೆಯಾದರೂ ಅದು ಸಹಜವೆನಿಸುವುದಿಲ್ಲ. ಅಷ್ಟೊಂದು ಜಗ್ಗಾಟ ಅಗತ್ಯವಿಲ್ಲ. "ಕ್ರಿಸ್ತ, ಗಾಂಧಿ ಈ ಮಹನೀಯರು ಜನರ ಸ್ವಭಾವ ಶಕ್ತಿಗಳನ್ನು ಗಮನಿಸಿದರೆ, ಎಲ್ಲರಿಗೂ ಅಹಿಂಸೆಯ ಆಚರಣೆಯನ್ನು ಸೂಚಿಸಿದಂತೆ ತೋರುತ್ತದೆ"—ಎಂಬ ಮಾತನ್ನು ಓದುಗರು ಒಂದು ಚಿಟಿಕೆ ಉಪ್ಪಿನೊಂದಿಗೆ ಸ್ವೀಕರಿಸಬೇಕಾಗುತ್ತದೆ.

ಜನಸಾಮಾನ್ಯರನ್ನು ಉದ್ದೇಶಿಸಿ ಹಲವು ದಿನಗಳ ಕಾಲ ಮಾಡಿದ ಪ್ರವಚನಗಳು ಇವಾದ್ದರಿಂದ, ಆಯಾ ಸಂದರ್ಭಕ್ಕೆ ಅನುಗುಣವಾಗಿ ಪ್ರವಚನಕಾರರ ಮನಸ್ಸಿನಲ್ಲಿ ಹಾಯ್ದು ಹೋದ ವಿಚಾರಗಳಾದ್ದರಿಂದ, ಇವುಗಳ ಕೆಲವು ಭಾಗಗಳು ಜಾಳಾಗಿಯೂ ಮತ್ತೆ ಕೆಲವು ಒತ್ತಾಗಿಯೂ ಇರುವುದು ಅನಿವಾರ್ಯ. ಅನೇಕ ವಿಷಯಗಳು ಪದೇ ಪದೇ ಮರುಕೊಳಿಸುತ್ತವೆ. ಪುಸ್ತಕದಲ್ಲಿ ಈ ಪುನರಾವರ್ತನೆಗಳನ್ನು ತಪ್ಪಿಸುವುದು ಬಹುಶಃ ಸಾಧ್ಯವಾಗಿದ್ದಿರಲಾರದು. ಆದರೆ ಇದು ರಟ್ಟಿನಿಂದ ರಟ್ಟಿಗೆ ಒಂದೇ ಬಾರಿಗೆ ಓದಿ ಮುಗಿಸುವಂಥ ಪುಸ್ತಕವಲ್ಲ. 'ದಿವ್ಯಬೋಧೆ' ಒಳಗೊಂಡಿರುವ ನಾನಾ ವಿಷಯಗಳ ಸೂಚಿಯೊಂದನ್ನು ಪುಸ್ತಕದ ಕೊನೆಯಲ್ಲಿ ಕೊಟ್ಟಿದ್ದಿದ್ದರೆ ಇದು ಹೆಚ್ಚು ಉಪಯುಕ್ತವಾಗುತ್ತಿತ್ತು.

ಈ ಪ್ರವಚನಗಳನ್ನು ಅನುವಾದಿಸಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರರು ಇಂಥ ವಿಚಾರಗಳಲ್ಲಿ ಆಸಕ್ತರಾದವರಿಗೆಲ್ಲ ಉಪಕಾರ ಮಾಡಿದ್ದಾರೆಂಬುದು ನಿಸ್ಸಂದೇಹ. ಅನುವಾದದ ಭಾಷೆ ನೇರವೂ ಸರಳವೂ ಶುಚಿಯುಕ್ತವೂ ಆದ್ದು. ಮೊದಮೊದಲ ಪುಟಗಳಲ್ಲಂತೂ ಅದು ಪಾದರಸದಂತೆ ಪುಟಿಯುತ್ತದೆ. ಇಂಥ ಹಲವು ಪ್ರವಚನಗಳನ್ನು ಆಲಿಸಿರುವ, ಅಧ್ಯಾತ್ಮ ವಿಚಾರವನ್ನು ಕುರಿತು ಅಭ್ಯಾಸ ಮಾಡಿರುವ, ಚಿಂತನೆ ಹರಿಸಿರುವ ಗೊರೂರರು ಜಗದ್ಗುರುಗಳ ದಿವ್ಯಬೋಧೆಗೆ ಅಲ್ಲಲ್ಲಿ ತಮ್ಮ ಸ್ವಂತಿಕೆಯ ಮೆರುಗನ್ನೂ ನೀಡಿದ್ದಾರೆ.

‘ತಾಯ್ನುಡಿಯಲ್ಲಿ ಶಿಕ್ಷಣ’

ಹಾ. ಮಾ. ನಾಯಕ

೧

‘ತಾಯ್ನುಡಿಯಲ್ಲಿ ಶಿಕ್ಷಣ’ ೩೮ ಪುಟಗಳ ಒಂದು ಚಿಕ್ಕ ಹೊತ್ತಗೆ. [ಮೂಲ : *The Medium of Instruction*] ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅನುವಾದಿಸಿರುವ ಈ ಪುಸ್ತಿಕೆಯ ಮೂಲ ಲೇಖಕರು ಸುಪ್ರಸಿದ್ಧ ಗಾಂಧೀವಾದಿಗಳಾದ ಶ್ರೀಮನ್ನಾರಾಯಣ ಅಗರ್‌ವಾಲ ಅವರು. ಶ್ರೀಮನ್ನಾರಾಯಣ ಅವರು ಇಂದು ಜೀವಂತರಾಗಿರುವ ಬೆರಳೆಣಿಕೆಯ ಅಪ್ಪಟ ಗಾಂಧೀವಾದಿಗಳಲ್ಲಿ ಒಬ್ಬರು. ಅವರು ಅರ್ಥಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಯೋಜಕರು, ಆಡಳಿತಗಾರರು. ಸಾರ್ವಜನಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿ ತಮ್ಮದೇ ಆದ ಹೆಚ್ಚುಗಾರಿಕೆಯನ್ನು ತೋರಿದವರು ; ಚಿಂತನಶೀಲರು. ನಡೆ–ನುಡಿಗಳ ನಡುವೆ ಅಂತರವಿಲ್ಲದ ರಾಜಕಾರಣಿಯಾದ ಅವರು ನೇಪಾಳದಲ್ಲಿ ನಮ್ಮ ರಾಯಭಾರಿಯಾಗಿದ್ದರು ; ಮೊನ್ನೆ ಮೊನ್ನೆಯವರೆಗೆ ಗುಜರಾತಿನ ರಾಜ್ಯಪಾಲರಾಗಿದ್ದರು. ಗಾಂಧೀವಾದಕ್ಕೆ ಒಂದು ಶಾಸ್ತ್ರೀಯ ಅಡಿಪಾಯ ಹಾಕಿ ಸಿದ್ಧಾಂತದ ಚೌಕಟ್ಟನ್ನು ನಿರ್ಮಿಸಿದ ಮೇಧಾವಿಗಳಲ್ಲಿ ಶ್ರೀಮನ್ನಾರಾಯಣರು ಮುಖ್ಯರು. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿಯೇ ನಮ್ಮ ರಾಷ್ಟ್ರೀಯ ಶಿಕ್ಷಣದ ಧೋರಣೆ ಯಾವ ಬಗೆಯದಾಗಿರಬೇಕು ಎಂಬುದನ್ನು ಆಳವಾಗಿ ಯೋಚಿಸಿದ್ದ ಶ್ರೀಮನ್ನಾರಾಯಣ ಅವರು ತಮ್ಮ ಈ ಕಿರು ಹೊತ್ತಗೆಯಲ್ಲಿ ತಾಯ್ನುಡಿಯಲ್ಲಿನ ಶಿಕ್ಷಣದ ಮಹತ್ವವನ್ನು ಪರಿಣಾಮಕಾರಿಯಾಗಿ ಚರ್ಚಿಸಿದ್ದಾರೆ. ಈ ಹೊತ್ತಗೆಗೆ ಮುನ್ನುಡಿ ಬರೆದಿರುವ ಮಹಾತ್ಮ ಗಾಂಧಿಯವರು ಹೇಳುತ್ತಾರೆ :

ಪ್ರಿನ್ಸಿಪಾಲ್ ಶ್ರೀಮನ್ನಾರಾಯಣ ಅಗರ್‌ವಾಲರ ಪುಸ್ತಕ ಸಕಾಲದಲ್ಲಿ ಬಂದಿದೆ. ಮಾತೃಭಾಷೆಯಲ್ಲಿ ಅತ್ಯುಚ್ಚ ಶಿಕ್ಷಣ ಕೊಡಬಹುದೇ, ಸಾಧ್ಯವೇ ಎಂದು ಸಂಶಯ

ಪಡುವವರ ಭಯವನ್ನು ಹೋಗಲಾಡಿಸುವುದರಲ್ಲಿ ಈ ಪುಸ್ತಕ ಬಹಳ ಫಲದಾಯಕವಾಗುತ್ತದೆ.

ತಮ್ಮ ಮಟ್ಟಿಗೆ "ಹೀಗೆ ಬೆಳ್ಳಂಬೆಳಕಾದ ಸತ್ಯಕ್ಕೆ ವಾದ ಅವಶ್ಯಕವಲ್ಲ ಎಂದು ವಿಷಾದ"ಪಡುವ ಗಾಂಧೀಜಿಯವರು ಮುಂದುವರಿದು ಅಗರ್‌ವಾಲರ ಬಗೆಗೆ ಹೀಗೆ ಹೇಳುತ್ತಾರೆ:

> ಪ್ರಿನ್ಸಿಪಾಲ್ ಅಗರ್‌ವಾಲ ಇಂಗ್ಲಿಷ್ ಭಾಷೆಯಿಂದ ತಮಗೆ ಬೇಕಾದುದನ್ನೆಲ್ಲ ಹೀರಿಕೊಂಡಿದ್ದಾರೆ. ಆದರೆ ಮಾತೃಭಾಷೆಯಲ್ಲಿ ತಮಗಿರುವ ಪ್ರೇಮ, ಇಂಗ್ಲಿಷಿನ ಮೋಹದಿಂದ ಕಡಿಮೆಯಾಗಲು ಅವರು ಅವಕಾಶಕೊಟ್ಟಿಲ್ಲ. ಆದುದರಿಂದ ಅವರು ತಮ್ಮದನ್ನಾಗಿ ಮಾಡಿಕೊಂಡಿರುವ ಈ ಕೆಲಸಕ್ಕೆ ಚೆನ್ನಾಗಿ ಅರ್ಹರಾಗಿದ್ದಾರೆ. ಎಲ್ಲಾ ಪ್ರಾಂತಗಳಲ್ಲಿಯೂ ಮಾತೃಭಾಷೆಗಳು ತಮ್ಮ ಸ್ವಸ್ಥಾನವನ್ನು ಹೊಂದುವ ವರೆಗೆ ಅವರು ವಿಶ್ರಮಿಸುವುದಿಲ್ಲವೆಂದು ನಾನು ನಂಬುತ್ತೇನೆ.

೨

> ಭಾರತದಲ್ಲಿ ಈಗ ಪ್ರಚಲಿತವಾಗಿರುವ ಶಿಕ್ಷಣ ಕ್ರಮ ಭಾರತದ ರಾಷ್ಟ್ರ ಜೀವನದ ಆವಶ್ಯಕತೆಗಳನ್ನು ಪೂರೈಸಲು ಸಮರ್ಥವಾಗಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ವಿದ್ಯಾಭ್ಯಾಸದ ಪದ್ಧತಿಗೂ ಭಾರತದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಿಗೂ ಸಂಬಂಧವೇ ಇಲ್ಲ. ಇದರ ಮುಂದೆ ಯಾವ ಜೀವದಾತ್ಮವಾದ ಹೊಸ ಸೃಷ್ಟಿಯ ಧ್ಯೇಯವೂ ಇಲ್ಲ. ರಾಷ್ಟ್ರದ ಪರಿಸ್ಥಿತಿಗಳೂ ಸಮಸ್ಯೆಗಳೂ ಗಳಿಗೆ ಗಳಿಗೆಗೂ ಬದಲಾಯಿಸುತ್ತಿವೆ. ಸೂಕ್ಷ್ಮವಾಗಿ ಬೆಳೆಯುತ್ತಿವೆ. ಆದರೆ ವಿದ್ಯಾಭ್ಯಾಸ ಕ್ರಮ ಮಾತ್ರ ಹೊಸ ಆವಶ್ಯಕತೆಗಳಿಗೂ ಪರಿಸ್ಥಿತಿಗಳಿಗೂ ಹೊಂದಿಕೊಂಡು ಬೆಳೆಯದೆ ಮೊದಲಿನಂತೆಯೇ, ಕುರುಡ ಸರ್ಪ ಹೊಸೆದಂತೆ, ಹೋದ ದಾರಿಯಲ್ಲಿಯೇ ಹೋಗುತ್ತಿದೆ. ಭಾರತದ ವಿದ್ಯಾರ್ಥಿಗಳು ಅನೇಕ ವರುಷ ಕಷ್ಟಪಟ್ಟು ಬುದ್ಧಿಯ ಕೆಲಸ ಮಾಡಿ ವಿಶ್ವವಿದ್ಯಾನಿಲಯಗಳಿಂದ ಪದವೀಧರರಾಗಿ ಹೊರಬೀಳುತ್ತಾರೆ. ಅವರ ಎದುರಿಗೆ ಕಾಣುವುದು ವಿಕಾರವಾದ ನಿರುದ್ಯೋಗ. ವಿದ್ಯಾವಂತನಾದ ಯುವಕ ಜೀವನದ ಕಠಿಣವಾದ ಸಮಸ್ಯೆಗಳನ್ನು ಎದುರಿಸಲು ತಾನು ಅಸಮರ್ಥನೆಂಬುದನ್ನು ಕಂಡುಕೊಳ್ಳುತ್ತಾನೆ. ಅವನು ತಪ್ಪು ಹೆಜ್ಜೆಗಳನ್ನಿಡುತ್ತಾನೆ. ಬೀಳುತ್ತಾನೆ. ಆದರೆ ಪ್ರಾಜ್ಞರಾದ ಪ್ರೊಫೆಸರುಗಳು ತಮ್ಮ ಪದ್ಧತಿಯ ಪಾಠಕ್ರಮಗಳನ್ನು ಬದಲಾಯಿಸುವುದಿಲ್ಲ. ಮತ್ತು ಪರೀಕ್ಷಕರು ತಮ್ಮ ವಿದ್ಯಾರ್ಥಿಗಳ ಉತ್ತರ ಪುಸ್ತಕಗಳಲ್ಲಿ ಕೆಂಪು ಸೀಲಿ ಗುರುತು ಮಾಡುವುದನ್ನು ಬಿಡುವುದೇ ಇಲ್ಲ. (ಪು. ೧)

ಕಾಲು ಶತಮಾನಕ್ಕೂ ಹಿಂದೆ (೧೯೪೨) ಶ್ರೀಮನ್ನಾರಾಯಣ ಅವರು ಬರೆದ ಈ ಮಾತುಗಳು ಯಾವ ಬದಲಾವಣೆಯೂ ಇಲ್ಲದೆ ಇಂದಿಗೂ ಅನ್ವಯವಾಗುತ್ತವೆ. ಇಂದಿನ ಶಿಕ್ಷಣ ತಜ್ಞರಾಗಲಿ, ರಾಜಕಾರಣಿಗಳಾಗಲಿ ಈಗ ಅಸ್ತಿತ್ವದಲ್ಲಿರುವ ಶಿಕ್ಷಣ ಕ್ರಮವನ್ನು

ಟೀಕಿಸುವಾಗ ವಿಮರ್ಶಿಸುವಾಗ ಶ್ರೀಮನ್ನಾರಾಯಣರ ಮಾತಿಗೆ ಹೊಸದಾಗಿ ಸೇರಿಸುವಂಥದೇನೂ ಇರುವುದಿಲ್ಲ. ಸ್ವಾತಂತ್ರ್ಯಪೂರ್ವದ ಶಿಕ್ಷಣ ಕ್ಷೇತ್ರದ ದುರವಸ್ಥೆ ಸ್ವಾತಂತ್ರ್ಯ ಬಂದು ಇಪ್ಪತ್ತೈದು ವರ್ಷಗಳಾದರೂ ಬದಲಾಗದೆ ನಿಂತಿದೆ. ಹಾಗೆ ನೋಡಿದರೆ ಅದು ಇನ್ನೂ ಕೆಟ್ಟಿದೆ; ಯಾರೂ ಸರಿಪಡಿಸಲಾಗದ ವಿಷಮ ಹಂತಕ್ಕೆ ಬಂದು ಮುಟ್ಟಿದೆ. ರಾಷ್ಟ್ರ ನಿರ್ಮಾಣದ ಅಡಿಗಲ್ಲು ಶಿಕ್ಷಣ ಎಂಬುದನ್ನು ನಮ್ಮ ನಾಯಕರು ಮರೆತದ್ದೇ ಈ ಅವಸ್ಥೆಗೆ ಮೂಲಕಾರಣವಾಗಿದೆ. ಇಲ್ಲದಿದ್ದರೆ ಇಪ್ಪತ್ತೈದು ವರ್ಷಗಳಾದರೂ ಒಂದು ರಾಷ್ಟ್ರೀಯ ಧೋರಣೆಯನ್ನು ರೂಪಿಸಿ ಅದನ್ನು ಅನುಷ್ಠಾನಕ್ಕೆ ತರಲು ಒಂದು ಸ್ವತಂತ್ರ ರಾಷ್ಟ್ರಕ್ಕೆ ಸಾಧ್ಯವಾಗದೆ ಇರುತ್ತಿರಲಿಲ್ಲ. ಬೇರೆ ಸಮಸ್ಯೆಗಳತ್ತ ಹರಿಸಿದ ಗಮನದ ಸ್ವಲ್ಪ ಭಾಗವನ್ನಾದರೂ ಶಿಕ್ಷಣ ರಂಗದತ್ತ ತಿರುಗಿಸಿದ್ದರೆ ಇಂದಿನ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಜವಾಹರಲಾಲ್ ನೆಹರೂ ಅವರಂಥ ಹಿರಿಯ ನಾಯಕರೇ ಶಿಕ್ಷಣ ಹಾಗೂ ಭಾಷೆಗಳಿಗೆ ಸಂಬಂಧಿಸಿದ ತಮ್ಮ ಸ್ವಂತ ಅಭಿಪ್ರಾಯಗಳಿಗೆ ಅಧಿಕಾರ ಗದ್ದುಗೆಯಿಂದ ಮಾನ್ಯತೆ ಕೊಡದೆ ಹೋದದ್ದು ಒಂದು ರಾಷ್ಟ್ರೀಯ ದುರಂತವಾಯಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿಯೇ ಶಿಕ್ಷಣ ಕ್ರಮದ ವಿಚಾರದಲ್ಲಿ ಒಂದು ದೃಢವಾದ ತೀರ್ಮಾನವನ್ನು ಕೈಗೊಂಡಿದ್ದರೆ ಅದು ಈ ಹೊತ್ತಿಗೆ ಬಲವಾಗಿ ಬೇರೂರಿ ಫಲ ಕೊಡಲು ಸಾಧ್ಯವಾಗುತ್ತಿತ್ತು. ಆದರೆ ಶಿಕ್ಷಣ ಯಾರಿಗೂ ಮಹತ್ವದ ವಿಷಯವಾಗಿ ತೋರಲಿಲ್ಲ. ಮಂತ್ರಿಮಂಡಳದಲ್ಲಿ ಗೃಹಶಾಖೆ, ಅರ್ಥಶಾಖೆ, ರಕ್ಷಣಾಶಾಖೆ ಮೊದಲಾದವುಗಳಿಗಿರುವ ಸ್ಥಾನಮಾನ ಎಂದೂ ಶಿಕ್ಷಣ ಶಾಖೆಗೆ ಒದಗಲಿಲ್ಲ. ಯಾರೂ ಶಿಕ್ಷಣ ಸಚಿವರಾಗಬಹುದು ಎಂಬ ಧೋರಣೆ ಮೊದಲಿನಿಂದಲೂ ಬೆಳೆದು ಬಂತು. ರಾಷ್ಟ್ರೀಯ ಶಿಕ್ಷಣ ಪದ್ಧತಿ ಹಾಗೂ ಭಾರತೀಯ ಭಾಷೆಗಳಿಗೆ ಅನುಕೂಲವಾದ ಶಿಕ್ಷಣ ಸಚಿವರು ನೆಹರೂರವರ ಕಾಲದಲ್ಲಿ ಇಲ್ಲದಿದ್ದುದು ಐತಿಹಾಸಿಕ ಸತ್ಯ. ಆಮೇಲೆ ಅಂಥವರು ಒಬ್ಬಿಬ್ಬರು ಬಂದರೂ ಸವೆದ ಜಾಡನ್ನು ಬದಲಾಯಿಸಲು ಅವರಿಗೆ ಸಾಧ್ಯವಾಗಲಿಲ್ಲ. ಸ್ವತಃ ನೆಹರೂ ಅವರ ಬೇರುಗಳು ಈ ನೆಲದಲ್ಲಿಲ್ಲದ್ದರಿಂದ ಅವರು ಶಿಕ್ಷಣದ ವಿಚಾರದಲ್ಲಿ, ಭಾರತೀಯ ಭಾಷೆಗಳ ವಿಚಾರದಲ್ಲಿ ಆಡಿದ ಮಾತುಗಳು ಕೇವಲ ತುಟಿ ಸಹಾನುಭೂತಿಯ ಮಾತುಗಳಾಗಿದ್ದವು. ರಾಜ್ಯ ಮಟ್ಟದ ನಾಯಕರುಗಳಾದರೂ 'ರಾಷ್ಟ್ರೀಯ' ಎಂಬ ಮಾತಿಗೆ ಮರುಳಾಗಿ ರಾಜ್ಯದ ಹಿತವನ್ನು ಕಡೆಗಾಣಿಸಿದರು. ಇಂಥ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯಪೂರ್ವದ ಶಿಕ್ಷಣ ಸಮಸ್ಯೆಗಳು ಇಂದಿಗೂ ಸಮಸ್ಯೆಗಳಾಗಿಯೇ ಉಳಿದಿವೆ. ಮಾತ್ರವಲ್ಲ, ಚಿಕ್ಕ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿವೆ. ಶ್ರೀಮನ್ನಾರಾಯಣರಂಥವರ ಹಿತವಚನಗಳನ್ನು ಕೇಳದಿದ್ದುದರಿಂದ ರಾಷ್ಟ್ರ ಇಂಥ ಪರಿಸ್ಥಿತಿಗೆ ಸಿಕ್ಕಿಕೊಂಡಿದೆ.

ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಅನೇಕ. ಒಂದೊಂದನ್ನೇ ಕುರಿತು ಪ್ರತ್ಯೇಕ ಪುಸ್ತಕವನ್ನೇ ಬೇಕಾದರೂ ಬರೆಯಬಹುದು. ಈ ಸಮಸ್ಯೆಗಳಲ್ಲಿ ತುಂಬ ಮಹತ್ವದ್ದು ಭಾಷೆಗಳ ಸ್ಥಾನವನ್ನು ಕುರಿತದ್ದು. ಮಿಕ್ಕ ಸಮಸ್ಯೆಗಳಿಗಿಂತ ಇದು ಮೂಲಭೂತವಾದದ್ದು. ಎಲ್ಲ ಶಿಕ್ಷಣದ ತಿರುಳು ಎಂದರೆ ಅರಿವು ಮತ್ತು ಅಭಿವ್ಯಕ್ತಿ. ಇದು ಭಾಷೆಯ ಮೂಲಕ

ಮಾತ್ರ ಸಾಧ್ಯವಾಗುವಂಥದು. ಆದುದರಿಂದ ಶಿಕ್ಷಣದ ಯಶಸ್ಸೆಲ್ಲ ಅದರ ಮಾಧ್ಯಮವನ್ನೇ ಅವಲಂಬಿಸಿರುತ್ತದೆ. ಹಾಗಾಗಿ ಭಾಷೆ ಶಿಕ್ಷಣ ಸಮಸ್ಯೆಯ ಕೇಂದ್ರ ಬಿಂದು. ಶ್ರೀಮನ್ನಾರಾಯಣರ ಪುಸ್ತಿಕೆಗೆ ಬರೆದ ಮುನ್ನುಡಿಯಲ್ಲಿ ಗಾಂಧೀಜಿ ಹೇಳುತ್ತಾರೆ:

> ಮಗುವಿನ ದೇಹದ ಬೆಳವಣಿಗೆಗೆ ತಾಯಿಯ ಹಾಲು ಹೇಗೆ ಅವಶ್ಯಕವೋ ಹಾಗೆಯೇ ಮನುಷ್ಯನ ಬುದ್ಧಿಯ ಬೆಳವಣಿಗೆಗೆ ಮಾತೃಭಾಷೆ ಅವಶ್ಯಕ. ಈ ದೇಶದ ಯುವಕರ ಶಿಕ್ಷಣಕ್ಕೆ ಜವಾಬ್ದಾರರಾದವರು ಮನಸ್ಸು ಮಾಡಿದರೆ ಅವರಿಗೆ ಇದು ಗೊತ್ತಾಗುವುದರಲ್ಲಿ ನನಗೆ ಅನುಮಾನವಿಲ್ಲ. ಮಗು ತಾಯಿಯಿಂದ ಮೊದಲ ಮಾತನ್ನು, ಪಾಠವನ್ನು ಕಲಿಯುತ್ತದೆ. ದೇಶದ ಮಕ್ಕಳ ಬುದ್ಧಿಯ ಬೆಳವಣಿಗೆಗೆ ಮಾತೃಭಾಷೆಯ ಹೊರತು ಬೇರೆ ಭಾಷೆಯನ್ನು ಬಲಾತ್ಕರಿಸುವುದು ಮಾತೃಭೂಮಿಯ ದ್ರೋಹ; ಪಾಪವೆಂದೇ ನಾನು ಪರಿಗಣಿಸುತ್ತೇನೆ.

ಇಷ್ಟು ಆರೋಗ್ಯಕಾರಿಯಾದ ಸಹಜವಾದ ಸರಳವಾದ ವಿಷಯ ಕೂಡ ಈ ದೇಶದಲ್ಲಿ ಚರ್ಚಾಸ್ಪದವಾಗುತ್ತದೆ; ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಶ್ರೀಮನ್ನಾರಾಯಣರು ಹೇಳುವಂತೆ "ಭಾರತ ವಿಚಿತ್ರವಾದ ದೇಶ. ಎಲ್ಲ ಸಂಸ್ಕೃತಿಗಳ ಸಮ್ಮೇಳನ. ಬೇರೆ ಬೇರೆ ಜಾತಿಗಳವರ ಆಳುವವರ ಗೊಂದಲ. ಇಲ್ಲಿ ಸ್ವಾಭಾವಿಕವಾದ ಸರಳವಾದ ವಿಚಾರಗಳು ಸಹ ಗಾಬರಿಯಾಗಿ ಕ್ರಾಂತಿಯಾಗಿ ಕಾಣುತ್ತವೆ; ನಾಸ್ತಿಕವಾಗಿ ಕಾಣುತ್ತವೆ. ಇಲ್ಲಿಗೆ ಅನ್ವಯಿಸುವಾಗ ಶಾಶ್ವತವಾದ ಸತ್ಯಗಳನ್ನು ಸಹ ಚರ್ಚೆಯ ಪ್ರಪಂಚಕ್ಕೆ ಎಳೆದು ಹೋರಾಡುತ್ತಾರೆ" (ಪುಟ ೩). ಆದುದರಿಂದ ತಾಯ್ನುಡಿಯಲ್ಲಿ ಶಿಕ್ಷಣ ಎಂಬುದೂ ಇಲ್ಲಿ ಒಂದು ಜ್ವಲಂತ ಸಮಸ್ಯೆ! ನಮ್ಮ ಭಾಷೆಗಳಲ್ಲಿಯೇ ಶಿಕ್ಷಣ ನೀಡಬೇಕು ಎಂದೊಡನೆಯೇ ಈ ದೇಶದಲ್ಲಿ ಅದು 'ಅರಾಷ್ಟ್ರೀಯ'ವಾಗುತ್ತದೆ ಇಂಗ್ಲಿಷನ್ನುಳಿದು ಶಿಕ್ಷಣವಿಲ್ಲ ಎಂದು ಬಹುಪಾಲು ಭಾರತೀಯರ ದೃಢವಾದ ನಂಬಿಕೆ. ಈ "ಇಪ್ಪತ್ತನೆಯ ಶತಮಾನದಲ್ಲಿ ಸಹ ಇಂಗ್ಲಿಷ್ ಮಾಧ್ಯಮದ ಮೂಲಕ ತಮ್ಮ ಮಕ್ಕಳಿಗೆ ಶಿಕ್ಷಣ ದೊರಕಬೇಕೆಂದು ಹೇಳುವ ಪೋಷಕರು ಭಾರತದಲ್ಲಿರುವುದಕ್ಕೆ ನಗಬೇಕೋ, ಅಳಬೇಕೋ ಕಾಣೆ" (ಪುಟ ೩) ಎಂದು ಶ್ರೀಮನ್ನಾರಾಯಣರೇನೋ ಹೇಳುತ್ತಾರೆ. ಆದರೆ ಇಪ್ಪತ್ತೊಂದನೆಯ ಶತಮಾನದಲ್ಲೂ ಅಂಥವರ ಪೀಳಿಗೆ ಇದ್ದೇ ಇರುತ್ತದೆ. ಇದಕ್ಕೆ ಕಾರಣ, ಭಾಷೆಯ ಸಮಸ್ಯೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡವರ ಸಂಖ್ಯೆ ಕಡಿಮೆ ಇರುವುದೇ ಆಗಿದೆ. ತಾಯಿ ನುಡಿ ಶಿಕ್ಷಣ ಮಾಧ್ಯಮವಾಗಬೇಕು ಎಂದರೆ ಇಂಗ್ಲಿಷನ್ನು ಕಲಿಯಬಾರದು ಎಂದಲ್ಲ. ಶ್ರೀಮನ್ನಾರಾಯಣರ ಈ ಮಾತುಗಳನ್ನು ಕೇಳಿ:

> ನನ್ನನ್ನು ತಪ್ಪಾಗಿ ತಿಳಿಯಬೇಡಿ. ಇಂಗ್ಲಿಷ್ ಭಾಷೆಯಲ್ಲಿ ನನಗೆ ದ್ವೇಷವಿಲ್ಲ. ತಿರಸ್ಕಾರವಿಲ್ಲ. ಇಂಗ್ಲಿಷ್ ಭಾಷೆ ಅಂತರರಾಷ್ಟ್ರ ವ್ಯಾಪಾರ ವ್ಯವಹಾರದ ಭಾಷೆ

ಯಾಗಿರುವುದನ್ನು ಪರಿಗಣಿಸದಿರುವುದು ಮೂರ್ಖತನ. ಇಂಗ್ಲಿಷು ಚೆನ್ನಾಗಿ ಬೆಳೆದ ವೈಭವಯುಕ್ತವಾದ ಭಾಷೆ. ಅದರ ಸಾಹಿತ್ಯದಲ್ಲಿ ಅಮೌಲ್ಯವಾದ ರತ್ನಗಳಿವೆ. ಭಾರತದಲ್ಲಿಯ ವಿದ್ಯಾವಂತರನ್ನೆಲ್ಲಾ ಒಂದು ಮಾಡಲು ಇಂಗ್ಲಿಷು ಸಹಾಯ ಮಾಡಿದೆ ಎಂದು ಒಪ್ಪಲೇಬೇಕು. ಆದರೆ ಒಂದು ಪರಭಾಷೆಯನ್ನು ಕಲಿಯುವುದು ಒಂದು ಸಂಗತಿ. ಆದರೆ ಆ ಭಾಷೆಯನ್ನು ಬಲಾತ್ಕಾರವಾಗಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಮತ್ತೊಂದು ಸಂಗತಿ. (ಪು ೧೫)

ಇಲ್ಲಿ ಸಮಸ್ಯೆಯ ಸ್ವರೂಪವನ್ನು ಶ್ರೀಮನ್ನಾರಾಯಣರು ಸಮರ್ಪಕವಾಗಿ ಗ್ರಹಿಸಿದ್ದಾರೆ. ಭಾಷೆಯ ಕಲಿಕೆ, ಭಾಷೆಯ ಮೂಲಕ ಕಲಿಕೆ ಎರಡೂ ಬೇರೆಬೇರೆಯಾದವು. ಬೇರೆ ಭಾಷೆಗಳನ್ನು—ಇಂಗ್ಲಿಷ್ ಒಂದನ್ನೇ ಅಲ್ಲ, ಇನ್ನೂ ಬೇರೆಯವನ್ನು—ನಮ್ಮ ನಮ್ಮ ಅಗತ್ಯಕ್ಕೆ ತಕ್ಕಂತೆ ಕಲಿಯುವುದಕ್ಕೆ ಯಾರ ತಕರಾರೂ ಇಲ್ಲ. ಆದರೆ ಕಲಿಕೆ ಎನ್ನುವುದು ಮಾತ್ರ ನಮ್ಮ ಸ್ವಂತ ಭಾಷೆಯ ಮೂಲಕವೇ ಇರಬೇಕೆನ್ನುವುದು ಮುಖ್ಯವಾದ ಮಾತು. ಯಾವುದೇ ವಿಷಯವನ್ನಾದರೂ,—ಭೌತ ವಿಜ್ಞಾನವಾಗಲಿ, ತತ್ವಶಾಸ್ತ್ರವಾಗಲಿ—ನಮ್ಮ ಭಾಷೆಯ ಮೂಲಕ ಗ್ರಹಿಸುವುದು, ಹೀಗೆ ಗ್ರಹಿಸಿದ್ದನ್ನು ಅಭಿವ್ಯಕ್ತಗೊಳಿಸುವುದು ಸುಲಭ. ಬೇರೊಂದು ಭಾಷೆಯ ಮೂಲಕ—ಪ್ರಕೃತ ಇಂಗ್ಲಿಷ್—ಎಂದರೆ ವಿದ್ಯಾರ್ಥಿಯ ಶಕ್ತಿಯೆಲ್ಲ ಭಾಷೆಯ ಚಿಪ್ಪನ್ನು ಒಡೆಯುವುದರಲ್ಲಿಯೇ ವ್ಯಯವಾಗಿ ಹೋಗುತ್ತದೆ. ಇಂಗ್ಲಿಷಿನ ಬೇಲಿಯನ್ನು ದಾಟಿ ಭೌತಶಾಸ್ತ್ರಕ್ಕೆ ತಲಪುವ ವೇಳೆಗೆ ಅವನಿಗೆ ಇಂಗ್ಲಿಷು ಭೌತಶಾಸ್ತ್ರ ಎರಡೂ ಬೇಡದವಾಗುತ್ತವೆ. ಅವನ ಕಲಿಕೆ ವ್ಯರ್ಥವಾಗುತ್ತದೆ. ಈ ಸೂಕ್ಷ್ಮವಾದ ವ್ಯತ್ಯಾಸವನ್ನು ಶಿಕ್ಷಣ ತಜ್ಞರು ಎನ್ನಿಸಿಕೊಂಡವರೂ ಗುರುತಿಸದಿರುವುದರಿಂದಲೇ 'ಮಾತೃಭಾಷೆಯಲ್ಲಿ ಶಿಕ್ಷಣ' ಎಂಬ ತತ್ವವನ್ನು 'ಇಂಗ್ಲಿಷಿಗೆ ವಿರೋಧ' ಎಂಬ ಕಲ್ಪನೆಯೊಡನೆ ಸಮೀಕರಿಸಲಾಗುತ್ತಿದೆ. ಶ್ರೀಮನ್ನಾರಾಯಣರು ಇದನ್ನು ಸಮರ್ಥವಾಗಿ ಗುರುತಿಸಿರುವುದರಿಂದಲೇ ಹೇಳುತ್ತಾರೆ:

ನಮ್ಮ ವಿದ್ಯಾಭ್ಯಾಸಕ್ರಮದಿಂದ ಇಂಗ್ಲಿಷನ್ನು ಪೂರ್ಣವಾಗಿ ಬಹಿಷ್ಕರಿಸಲು ಸಾಧ್ಯವಿಲ್ಲ. ಅದು ಸಾಧ್ಯವೂ ಅಲ್ಲ, ಇಷ್ಟವೂ ಅಲ್ಲ. ಚೀಣ ಮತ್ತು ಜಪಾನಿನ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯ ಜೊತೆಗೆ ಇನ್ನೂ ಎರಡು ಪರಭಾಷೆಗಳನ್ನು ಕಲಿಯುವಂತೆ ಭಾರತದ ವಿದ್ಯಾರ್ಥಿಗಳೂ ಹೈಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಇಂಗ್ಲಿಷ್ ಕಲಿಯಬಹುದು. ಫ್ರೆಂಚ್ ಜರ್ಮನ್ ಜಪಾನೀ ಮೊದಲಾದ ಇತರ ಪರಭಾಷೆಗಳ ವ್ಯಾಸಂಗಕ್ಕೂ ಅವಕಾಶ ಮಾಡಿಕೊಡಬೇಕು. ಆದರೆ ಇಂಗ್ಲಿಷ್ ಭಾಷೆ ಅದಕ್ಕೆ ಅರ್ಹವಾದ ಮತ್ತು ನ್ಯಾಯವಾದ ಸ್ಥಳವನ್ನು ಆಕ್ರಮಿಸಬೇಕು. ಭಾರತದ ಭಾಷೆಗಳ ಗಂಟಲನ್ನು ಅದು ಹಿಚಕಿ ಅವುಗಳನ್ನು ತುಳಿಯಲು ಇಂಗ್ಲಿಷಿಗೆ ಇನ್ನು ಆಸ್ಪದಕೊಡಕೂಡದು. (ಪು ೧೫–೧೬)

ಇಂಗ್ಲಿಷ್ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತಂದ ಮೂಲ ಉದ್ದೇಶವನ್ನು, ಸಂದರ್ಭವನ್ನು ಸ್ಥೂಲವಾಗಿ ನಿರೂಪಿಸಿರುವ ಶ್ರೀಮನ್ನಾರಾಯಣ ಅವರು, ಇಂದು ಇದು ಸಾಗ್ತಿರುವ ಸ್ಥಿತಿಯನ್ನು ಗೇಲಿ ಮಾಡಿದ್ದಾರೆ. "ಭಾರತದ ಭಾಷೆ ಸಾಹಿತ್ಯಗಳನ್ನು ಕುರಿತ ಪ್ರಶ್ನಪತ್ರಿಕೆ ಇಂಗ್ಲಿಷಿನಲ್ಲಿರುತ್ತದೆ. ಇದಕ್ಕಿಂತ ಹೆಚ್ಚು ಅಪಹಾಸ್ಯ ಯಾವುದುಂಟು! ಹಾಸ್ಯ ಗ್ರಂಥದಲ್ಲಿಯೂ, ನಂಬುವರೆ ನಂಬಿ ಬಿಟ್ಟರೆ ಬಿಡಿ ಸಂಗ್ರಹದಲ್ಲಿಯೂ ಸೇರಲು ಇವು ಅರ್ಹವಾದವು" (ಪುಟ ೭). ಇವತ್ತು ಈ ಸ್ಥಿತಿ ಪೂರ್ಣವಾಗಿ ಬದಲಾಗಿಲ್ಲ. ಬೇರೆಲ್ಲಿಯ ಮಾತೂ ಬೇಡ. ತಮಿಳು ನಾಡಿನ ಒಂದು ಉದಾಹರಣೆ ಸಾಕು. ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಯಾರಾದರೂ ತಮಿಳು ಸಾಹಿತ್ಯವನ್ನು ಕುರಿತು ಪಿ.ಎಚ್.ಡಿ. ಪ್ರಬಂಧ ಬರೆದರೂ ಅದನ್ನು ಇಂಗ್ಲಿಷಿನಲ್ಲಿಯೇ ಬರೆಯಬೇಕು! ಇಪ್ಪತ್ತನೆ ಶತಮಾನದ ಮುಕ್ಕಾಲು ಭಾಗ ಮುಗಿದಿದೆ. ಆದರೆ ಪರಿಸ್ಥಿತಿ ಹಾಗೆಯೇ ಇದೆ. ನಂಬುವರೆ ನಂಬಿ ಬಿಟ್ಟರೆ ಬಿಡಿ! ಇಂಗ್ಲಿಷಿಗೆ ನಾವು ಕೊಟ್ಟಿರುವ ಸಾಮಾಜಿಕ ಸ್ಥಾನಮಾನವನ್ನು ಶ್ರೀಮನ್ನಾರಾಯಣರು ಹೀಗೆ ವರ್ಣಿಸಿದ್ದಾರೆ:

> ನಮ್ಮ ಶಿಕ್ಷಣ ಕ್ರಮದಲ್ಲಿ ಇಂಗ್ಲಿಷ್ ಭಾಷೆಗಿರುವ ಅಸ್ವಾಭಾವಿಕವಾದ ಸ್ಥಾನದಿಂದ ನಮ್ಮ ರಾಷ್ಟ್ರಜೀವನದಲ್ಲಿಯೂ ಅಸ್ವಾಭಾವಿಕವಾದ ಮತ್ತು ಅಪಹಾಸ್ಯಕರವಾದ ಫಲಗಳುಂಟಾಗಿವೆ. ತಮ್ಮ ವಿದ್ಯಾರ್ಥಿಗಳೊಂದಿಗೆ ದೇಶ ಭಾಷೆಯಲ್ಲಿ ಮಾತನಾಡುವುದು ತಮ್ಮ ಯೋಗ್ಯತೆಗೆ ಕಡಿಮೆ ಎಂದು ಪ್ರೊಫೆಸರ್‌ಗಳು ತಿಳಿದಿದ್ದಾರೆ. ವಿದ್ಯಾರ್ಥಿಗಳು ಅವರೊಂದಿಗೆ ದೇಶ ಭಾಷೆಗಳಲ್ಲಿ ಮಾತನಾಡುವ ಧೈರ್ಯ ಮಾಡಿದರೆ ಅವರಿಗೆ ನಿಜವಾಗಿಯೂ ಬೇಸರಿಕೆಯುಂಟಾಗುತ್ತದೆ. ಉತ್ತರ ಭಾರತದಲ್ಲಿಯಂತೂ ಇಂದಿಗೂ ಮಗನಿಗೂ ತಂದೆಗೂ ಯೋಗಕ್ಷೇಮ ಪತ್ರವ್ಯವಹಾರ ನಡೆಯುವುದು ಇಂಗ್ಲಿಷಿನಲ್ಲಿಯೇ. ಹೆಂಡತಿಯಿಂದ ಇಂಗ್ಲಿಷಿನಲ್ಲಿ ಕಾಗದ ಬಂದರೆ ಹುಚ್ಚರಂತೆ ಆನಂದದಿಂದ ಕುಣಿಯುವವರನ್ನು ನಾನು ನೋಡಿದ್ದೇನೆ. ಇಂಗ್ಲಿಷ್ ತಿಳಿಯದವರಿಗೆ ಸಮಾಜದ ಉನ್ನತ ಸ್ಥಾನದಲ್ಲಿ ಜಾಗವಿಲ್ಲ. (ಪುಟ ೯–೧೦)

ನಮ್ಮ ಶಿಕ್ಷಣ ವ್ಯವಸ್ಥೆ ಕ್ರಿಯಾತ್ಮಕವಾಗಿಲ್ಲದಿರುವುದಕ್ಕೆ, ನಮ್ಮ ವಿದ್ಯಾವಂತರು ಜನ ಸಾಮಾನ್ಯರಿಂದ ದೂರವಾಗಿರುವುದಕ್ಕೆ, ಅನ್ಯ ಭಾಷಾ ಮಾಧ್ಯಮವೇ ಮುಖ್ಯ ಕಾರಣವೆಂಬುವನ್ನು ಶ್ರೀಮನ್ನಾರಾಯಣ ಅವರು ಖಚಿತವಾಗಿ ತೋರಿಸಿದ್ದಾರೆ. ಪರೀಕ್ಷೆಗಳಲ್ಲಿ ತೇರ್ಗಡೆಯಾಗದವರ ಅಂಕೆ ಸಂಖ್ಯೆಗಳನ್ನು ಕೊಟ್ಟು ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಜಗತ್ತಿನ ಯಾವ ದೇಶದಲ್ಲಿಯೂ ಜನರ ಬುದ್ಧಿಶಕ್ತಿ ಹೀಗೆ ವ್ಯಯವಾಗುತ್ತಿಲ್ಲ ಎನ್ನುವುದನ್ನು ಎತ್ತಿ ಹೇಳಿದ್ದಾರೆ. ದೇಶ ಭಾಷೆಗಳಲ್ಲಿ ಶಿಕ್ಷಣ ಮಾಧ್ಯಮವಾದರೆ ಇಂಗ್ಲಿಷಿನ ಮಟ್ಟ ಇನ್ನೂ ಕುಸಿಯುತ್ತದೆ ಎಂಬುದು ಒಂದು ವರ್ಗದ ಸಾಮಾನ್ಯ ಅಭಿಪ್ರಾಯ. ಆದರೆ ಶ್ರೀಮನ್ನಾರಾಯಣರು ಹೇಳುತ್ತಾರೆ:

ತಮ್ಮ ಮಾತೃಭಾಷೆಯಲ್ಲಿ ಉಂಟಾಗುವ ಪ್ರಾವೀಣ್ಯದಿಂದ ಅವರು (ವಿದ್ಯಾರ್ಥಿಗಳು) ಇಂಗ್ಲಿಷನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳುವರು. ಆಗ ಇಂಗ್ಲಿಷ್ ಭಾಷೆಯ ಉಪಯೋಗ ಅವರಿಗೆ ಸರಳವೂ ಸುಲಭವೂ ಆಗುವುದು. ಅದರ ಬದಲು ಇಂಗ್ಲಿಷು ಮಾತೃಭಾಷೆಯನ್ನು ತುಳಿದು ಅದರ ಸ್ಥಳವನ್ನು ಅಪಹರಿಸಿದರೆ ಭಾರತದ ವಿದ್ಯಾರ್ಥಿ ಒಂದು ಸಮಸ್ಯೆಯಾಗಿ ವಿಚಿತ್ರ ಪ್ರಾಣಿಯಾಗಿಯೇ ಉಳಿಯುವನು. (ಪು. ೧೨)

ಇಂಗ್ಲಿಷಿನ ವಿಷಯದಲ್ಲಿ ಮಾತ್ರವಲ್ಲ, ಭಾರತದ ಸರ್ವಸಾಮಾನ್ಯವಾದ ಭಾಷೆಯ ಬಗೆಗೂ ಶ್ರೀಮನ್ನಾರಾಯಣರು ಎಚ್ಚರಿಕೆಯ ಮಾತು ಹೇಳಿದ್ದಾರೆ. "ಭಾರತದ ಸರ್ವ ಸಾಮಾನ್ಯ ಭಾಷೆಗೆ, ಪ್ರಾಂತಭಾಷೆಯ ಸ್ಥಳವನ್ನು ಆಕ್ರಮಿಸಲು ಅಧಿಕಾರವಿಲ್ಲ" (ಪುಟ ೧೮) ಎಂದು ಅವರು ಘೋಷಿಸುತ್ತಾರೆ. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಅವರು ಈ ಮಾತನ್ನು ಉರ್ದು ಭಾಷೆಯನ್ನು ಉದ್ದೇಶಿಸಿ ಹೇಳಿದ್ದರೂ, ಇದು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಹಿಂದೀ ಭಾಷೆಗೂ ಒಪ್ಪುತ್ತದೆ. ಭಾಷೆ ಇಂಗ್ಲಿಷಾಗಲಿ, ಹಿಂದಿಯಾಗಲಿ ಸಾಮಾನ್ಯವಾದ ಒಂದು ಶಿಕ್ಷಣ ತತ್ವ ಬದಲಾಗುವುದು ಸಾಧ್ಯವಿಲ್ಲ. ಅನ್ಯಭಾಷೆ ಎಂದಿಗೂ ಅನ್ಯಭಾಷೆಯೆ.

ಶ್ರೀಮನ್ನಾರಾಯಣರು ಈ ಪುಸ್ತಿಕೆಯನ್ನು ರಚಿಸಿದಾಗ ದೇಶಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲ; ಭಾಷಾವಾರು ಪ್ರಾಂತಗಳು ರಚನೆಯಾಗುತ್ತವೆ ಎನ್ನುವ ನಂಬಿಕೆ ಇರಲಿಲ್ಲ. ಆದುದರಿಂದ ಈಗ ಈ ಪುಸ್ತಕವನ್ನು ಓದಿದರೆ ಕೆಲವು ವಿಷಯಗಳು ಹಳೆಯವಾಗಿ ತೋರುತ್ತವೆ. ಆದರೆ ಆ ಸಮಸ್ಯೆಗಳು ಮಾತ್ರ ಹಾಗೆಯೇ ಉಳಿದಿವೆ ಎಂಬುದನ್ನು ನಾವು ಮರೆಯುವಂತಿಲ್ಲ. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ದೇಶಭಾಷಾ ಮಾಧ್ಯಮವನ್ನು ಸಮರ್ಥವಾಗಿ ಜಾರಿಗೆ ತರಲು ಭಾಷಾನುಗುಣ ಪ್ರಾಂತರಚನೆ ಸಹಾಯ ಮಾಡುತ್ತದೆ ಎಂದು ಲೇಖಕರು ವಾದಿಸಿದ್ದಾರೆ. ನಿಜದಲ್ಲಿ ಅದು ಸರಿ. ಈಗ ಭಾಷಾನುಗುಣ ಪ್ರಾಂತ್ಯಗಳ ರಚನೆಯಾಗಿದೆ. ಆದರೆ ವಿಶ್ವವಿದ್ಯಾನಿಲಯಗಳ ಶಿಕ್ಷಣ ಮಾಧ್ಯಮದಿಂದ ಪ್ರಾಂತ ಭಾಷೆಗಳು ದೂರವೇ ಉಳಿದಿವೆ. ಎಂಥ ವಿರೋಧಾಭಾಸ! ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ದೇಶಭಾಷೆಗಳ ಸ್ಥಾನಮಾನ ಹೆಚ್ಚುತ್ತದೆ ಎಂದು ಅವರ ಒಂದು ಊಹೆ. ವಾಸ್ತವವಾಗಿ ಇದು ಘೋಷಣೆಯಲ್ಲಿ ಹೆಚ್ಚಿದೆ, ಕಾರ್ಯರೂಪದಲ್ಲಿ ಅಲ್ಲ! ಈ ಹೊತ್ತಗೆಯನ್ನು ಬರೆದಾಗ ಭಾರತದಲ್ಲಿ ಕೇವಲ ೧೯ ವಿಶ್ವವಿದ್ಯಾನಿಲಯಗಳಿದ್ದವು. ಈಗ ಅವುಗಳ ಸಂಖ್ಯೆ ೯೧ನ್ನೂ ಮೀರಿದೆ. ಆದರೆ ಸಾಧಿಸಿರುವುದೇನನ್ನು? ಶ್ರೀಮನ್ನಾರಾಯಣರು ತಮ್ಮ ಹೊತ್ತಗೆಯಲ್ಲಿ ಮಾಡಿದ ಸೂಚನೆಗಳು ಹಾಗೆಯೇ ಇವೆ. ದೇಶಭಾಷೆಗಳಲ್ಲಿ ಶಿಕ್ಷಣಕೊಡಲು ಉದ್ದೇಶಿಸಿದ ಹೊಸ ವಿಶ್ವವಿದ್ಯಾನಿಲಯಗಳು 'ಹತ್ತರ ಕೊಡೆ ಹನ್ನೊಂದು' ಎಂದಾಗಿವೆ.

ಶಿಕ್ಷಣ ಕ್ಷೇತ್ರದ ಭಾಷಾ ಸಮಸ್ಯೆಯ ಎಲ್ಲ ಮುಖಗಳನ್ನೂ ಶ್ರೀಮನ್ನಾರಾಯಣರು ಯಾವ ಮುಚ್ಚುಮರೆಯೂ ಇಲ್ಲದೆ ಚರ್ಚಿಸಿದ್ದಾರೆ. ಒಂದು ಕಡೆ ಅವರು ಹೇಳುತ್ತಾರೆ:

> ತಮ್ಮ ಮಾತೃಭಾಷೆಯಲ್ಲಿ ಪಾಠ ಹೇಳಲು ಯಾವ ಉಪಾಧ್ಯಾಯರಿಗೆ ಕಷ್ಟವೋ, ಅಥವಾ ಯಾರು ಅದು ತಮ್ಮ ಗೌರವಕ್ಕೆ ಕಡಿಮೆ ಎಂದು ತಿಳಿದಿದ್ದಾರೆಯೋ ಅಂಥವರು ಗೌರವದಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಬಹುದು. ಅಂಥವರು ನಿವೃತ್ತರಾಗುವುದರಿಂದ ದೇಶಕ್ಕೆ ಲಾಭವೇ ಹೊರತು ನಷ್ಟವಿಲ್ಲ (ಪು. ೨೯).

ಅಂದಮಾತ್ರಕ್ಕೆ, ದೇಶಭಾಷೆಗಳನ್ನು ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಮಾಧ್ಯಮವನ್ನಾಗಿಸುವುದರಲ್ಲಿ ತೊಂದರೆಗಳು ಇಲ್ಲ ಎಂದು ಶ್ರೀಮನ್ನಾರಾಯಣರು ಭಾವಿಸಿಲ್ಲ. ಅಂಥವನ್ನು ಅವರೇ ಎತ್ತಿ ಅವುಗಳಿಗೆ ಸಮಾಧಾನ ಹೇಳಿದ್ದಾರೆ. ತಾವು ಗುರುತಿಸಿದವಷ್ಟೇ ಕಷ್ಟಗಳೆಂದೂ ಅವರು ಹೇಳುವುದಿಲ್ಲ. ಕೊನೆಯಲ್ಲಿ ಅವರೆನ್ನುತ್ತಾರೆ:

> ಇನ್ನೂ ಕೆಲವು ಕಷ್ಟಗಳಿರಬಹುದು. ಆದರೆ ಹೋರಾಟವಿಲ್ಲದೆ ಯಾವ ಮುಖ್ಯ ಕಾರ್ಯದಲ್ಲಿಯೂ ಜಯ ಲಭಿಸಿಲ್ಲ. ಸುಲಭವಾಗಿ ದೊರೆತುದಕ್ಕೆ ಬೆಲೆ ಇಲ್ಲ. ಇಂಗ್ಲಿಷ್ ಮಾಧ್ಯಮವನ್ನು ತೆಗೆದು ದೇಶಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂಬುದು ನಮ್ಮ ಧ್ಯೇಯವಾದಮೇಲೆ ಆ ಸಾಧನೆಯಲ್ಲಿ ಬಂದ ಕಷ್ಟಗಳನ್ನೆಲ್ಲ ಎದುರಿಸಲೇಬೇಕು (ಪು ೨೩).

೩

ಇಂಥದೊಂದು ವಿಚಾರವತ್ತಾದ ಪುಸ್ತಿಕೆಯನ್ನು ದಶಕಗಳ ಹಿಂದೆಯೇ ಕನ್ನಡಕ್ಕೆ ತಂದು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಉಪಯುಕ್ತವಾದ ಪರಿಶಿಷ್ಟಗಳನ್ನು ಸೇರಿಸಿ, ಮೂಲವನ್ನು ಅನೇಕ ಕಡೆ ವಿಸ್ತರಿಸಿ ಪುಸ್ತಕವನ್ನು ಕೇವಲ ಅನುವಾದವನ್ನಾಗಿಸದೆ ಪ್ರಕಟಿಸಿರುವುದು, ವಿಷಯಕ್ಕೆ ಸಂಬಂಧಿಸಿದಂತೆ ಗೊರೂರರ ಆಸಕ್ತಿಯನ್ನೂ ಕಾಳಜಿಯನ್ನೂ ತೋರಿಸುತ್ತದೆ. ವಾಸ್ತವವಾಗಿ, ಶಿಕ್ಷಣ ಮತ್ತು ಭಾಷೆಗಳಿಗೆ ಸಂಬಂಧಿಸಿದ ಸಮಸ್ಯೆಯನ್ನು ವಿವೇಚಿಸುವ ಪುಸ್ತಕ ಕನ್ನಡದಲ್ಲಿ ಇದೇ ಮೊದಲನೆಯದು. ಇದು ಪ್ರಕಟವಾಗಿ ಕಾಲು ಶತಮಾನವಾಗುತ್ತಾ ಬಂದಿದ್ದರೂ ಇಂಥ ಸಾಹಿತ್ಯ ನಮ್ಮಲ್ಲಿ ಬೆಳೆದೇ ಇಲ್ಲ ಎನ್ನಬಹುದು. ದೇಜಗೌ ಅವರ 'ಕನ್ನಡಿಗರೆ, ಎಚ್ಚರಗೊಳ್ಳಿ !' (೧೯೫೧), ಸಿ.ಪಿ.ಕೆ. ಅವರ 'ಭಾಷಾ ಮಾಧ್ಯಮವನ್ನು ಕುರಿತು' (೧೯೭೦) ಮತ್ತು ಎಚ್ಚೆಸ್ಕೆ ಅವರ 'ಭಾರತದ ಭಾಷಾ ಸಮಸ್ಯೆ' (೧೯೭೩)—ಈ ಮೂರು ಪುಸ್ತಿಕೆಗಳು ಮಾತ್ರ 'ತಾಯ್ನುಡಿಯಲ್ಲಿ ಶಿಕ್ಷಣ'ದೊಂದಿಗೆ ಹೋಲಿಸಬಹುದಾದಂಥವು. ಶ್ರೀಮನ್ನಾರಾಯಣರ ಪುಸ್ತಿಕೆ ಸ್ವಾತಂತ್ರ್ಯಪೂರ್ವದ ರಚನೆಯಾದರೂ ಇಂದೂ ಅದರ ಉಪಯೋಗವಿದೆ. ಅನುಬಂಧಗಳಲ್ಲಿಯಾದರೂ ಹೊಸ ಅಂಕೆ ಸಂಖ್ಯೆಗಳನ್ನು ಕೊಟ್ಟು ಅದನ್ನು ಪರಿಷ್ಕರಿಸಿ ಪ್ರಕಟಿಸುವುದರಿಂದ ಕನ್ನಡ ವಾಚಕರಿಗೆ ಖಂಡಿತವಾಗಿಯೂ ಲಾಭವಾಗುತ್ತದೆ. ಗೊರೂರರೇ ಆ ಕೆಲಸವನ್ನು ಮಾಡಿಯಾರೆಂದು ಆಶಿಸೋಣ.

ಜಾನಪದ ಕೃತಿಗಳು

ಜೀ. ಶಂ. ಪರಮಶಿವಯ್ಯ

೧

ಕನ್ನಡದ ಅಗ್ರಗಣ್ಯ ಲೇಖಕರಲ್ಲಿ ಗೊರೂರರೂ ಒಬ್ಬರು. ಕನ್ನಡ ಗದ್ಯಸಾಹಿತ್ಯಕ್ಕೆ ಹಳ್ಳಿಯ ಬಾಳಿನ ಬನಿಯನ್ನೂ ಸೊಗಡನ್ನೂ ತುಂಬಿ ವೈವಿಧ್ಯವನ್ನು ಸಾಧಿಸಿದವರಲ್ಲಿ ಅವರು ಆದ್ಯರು, ಆಚಾರ್ಯರು. ಗ್ರಾಮಜೀವನದ ದಟ್ಟವಾದ ಅನುಭವ, ಜಾನಪದತ್ವದ ಸೊನೆಯನ್ನು ಅವರ ಎಲ್ಲ ಕೃತಿಗಳಿಗೂ ಲೇಪಿಸಿದೆ. ಇದರ ಜೊತೆಗೆ ಜಾನಪದ ಸಂಬಂಧಿಯಾದ ಕೃತಿಗಳನ್ನು ಪ್ರತ್ಯೇಕವಾಗಿಯೇ ಪ್ರಕಟಿಸಿ ಅವರು ಆ ಕ್ಷೇತ್ರದಲ್ಲಿಯೂ ಒಂದು ಪ್ರಮುಖ ಸ್ಥಾನವನ್ನು ಕಾಪಾಡಿಕೊಂಡಿರುವುದು ಗಮನಾರ್ಹ ವಿಷಯವಾಗಿದೆ.

ಗೊರೂರರು ಜನಪದ ಸಾಹಿತ್ಯದೊಡನೆ ಜೀವಂತ ಸಂಬಂಧವನ್ನು ತಮ್ಮ ಬಾಳಿನುದ್ದಕ್ಕೂ ಇಟ್ಟುಕೊಂಡವರು; ಅದರ ಸಂರಕ್ಷಣೆಯ ಹುಚ್ಚನ್ನು ಬಹಳವಾಗಿ ಹಚ್ಚಿಕೊಂಡವರು. ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ಅಭ್ಯಸಿಸಿ ಹಲವು ರೀತಿಯಲ್ಲಿ ಅವರು ಜಾನಪದ ಪ್ರಚಾರಕಾರ್ಯವನ್ನು ನಡೆಸುತ್ತ ಬಂದಿದ್ದಾರೆ. ಕರ್ನಾಟಕದಾದ್ಯಂತ ಜನಪದ ಸಾಹಿತ್ಯದ ಬಗ್ಗೆ, ಸಂಸ್ಕೃತಿಯ ಬಗ್ಗೆ ಉಪನ್ಯಾಸವನ್ನು ನೀಡಿ ಜಾನಪದ ಸಂರಕ್ಷಣೆಗೆ ಹೊಸ ಶಕ್ತಿಯನ್ನು ಸಂಚಯ ಮಾಡಿದ ಹಿರಿಯರಲ್ಲಿ ಗೊರೂರರು ಮುಖ್ಯರು. ಗೊರೂರರಂಥ ಹಿರಿಯ ಸಾಹಿತಿಗಳು ನಮ್ಮ ಜಾನಪದ ಕ್ಷೇತ್ರಕ್ಕೆ ಕಾಲಿರಿಸಿ ಜನಪದ ಸಾಹಿತ್ಯದ ಮೌಲ್ಯವನ್ನು ಎತ್ತಿ ಹಿಡಿದದ್ದು ವಿದ್ವಾಂಸರು ನವೋದಯ ಕಾಲದಿಂದಲೂ ಈ ನಿಟ್ಟಿನಲ್ಲಿ ತಮ್ಮ ಆಸಕ್ತಿಯನ್ನು ಉಳಿಸಿಕೊಂಡು ಬರಲು ಪ್ರೇರಕವಾಯಿತು ಎಂಬ ಅಂಶವನ್ನು ಮರೆಯುವಂತಿಲ್ಲ.

ವೈಜ್ಞಾನಿಕ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನ ಕ್ರಮಬದ್ಧವಾಗಿ ನಡೆಯುತ್ತಿರುವ ಈ ದಿನಗಳಲ್ಲಿಯೂ ಆ ಸಂಬಂಧವಾದ ಎಲ್ಲ ಚಟುವಟಿಕೆಗಳಲ್ಲಿಯೂ ಗೊರೂರರಿಗೆ ಅಗ್ರ

ತಾಂಬೂಲ ವಿಶೇಷವಾಗಿಯೇ ಇರುತ್ತದೆ. ೧೯೬೬ರಲ್ಲಿ ನಡೆದ ಆಕಾಶವಾಣಿಯ ಪ್ರಥಮ ಜಾನಪದ ಸಮ್ಮೇಳನದ ಪ್ರಮುಖ ಪ್ರತಿನಿಧಿಗಳಲ್ಲಿ ಗೊರೂರರೂ ಒಬ್ಬರಾಗಿದ್ದರು: ೧೯೬೬ರ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಜಾನಪದ ಗೋಷ್ಠಿಯ ಗಣ್ಯ ಉಪನ್ಯಾಸಕರೂ ಆಗಿದ್ದರು: ೧೯೬೮ರ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು: ೧೯೭೧ರ ತೃತೀಯ ಜಾನಪದ ಸಮ್ಮೇಳನದ ಜನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರೂ ಆಗಿದ್ದರು. ಜನಪದ ಕಲೆ, ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಮೇಲಿಂದ ಮೇಲೆ ಉಪನ್ಯಾಸಗಳನ್ನು ನೀಡುತ್ತಿರುವ, ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸುತ್ತಿರುವ ಉತ್ಸಾಹಿಗಳಿಗೂ ಗೊರೂರರು ತಮ್ಮ ಎಪ್ಪತ್ತರ ಮುಪ್ಪಿನಲ್ಲಿಯೂ ಹಿಂದೆ ಬಿದ್ದಿಲ್ಲ. ಅವರು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನೀಡಿರುವ ಉಪನ್ಯಾಸಗಳು, ಜಾನಪದ ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನಗಳು ಅವರ ಜಾನಪದಾಸಕ್ತಿಯನ್ನು ಸಮರ್ಥಿಸುತ್ತವೆ: ಅವರ ಆಳವಾದ ಅಭ್ಯಾಸವನ್ನೂ, ಅಪಾರವಾದ ಅನುಭವವನ್ನೂ ಪರಿಚಯಿಸುತ್ತವೆ.

ಗೊರೂರರು ಕೇವಲ ಒಬ್ಬ ಸಂಗ್ರಹಕರಾಗಿ ಮಾತ್ರ ಹೆಸರಾದವರಲ್ಲ: ನಮ್ಮ ಜನಪದ ಸಾಹಿತ್ಯವನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲವರಲ್ಲಿ ಅವರೂ ಒಬ್ಬರು: ಆ ಸಾಹಿತ್ಯದ ಜೀವಾಳವನ್ನೆಲ್ಲ ದಕ್ಕಿಸಿಕೊಂಡವರು. ಜಾನಪದವನ್ನು ಕುರಿತು ಗೊರೂರರು ಸೊಗಸಾಗಿ ಬರೆಯಬಲ್ಲರು: ಮಾತನಾಡಬಲ್ಲರು ಎನ್ನುವಾಗ ಜಾನಪದ ಗೀತೆಗಳನ್ನು ರಸವತ್ತಾಗಿ ಹಾಡಲೂ ಬಲ್ಲರು ಎಂಬುದನ್ನೂ ಮರೆಯುವಂತಿಲ್ಲ. ಅವರದು ಗಂಡು ದನಿ. ಬಂಡಿಯ ಪದಗಳನ್ನು ಹಾಡುವುದರಲ್ಲಿ ಪಳಗಿದ ಗಂಭೀರ ಧ್ವನಿ.

> ಬಂಡಿ ಕಾರಣ್ಣನ ಬಂಡಾಟ ನೋಡಿರೊ
> ಬಾರುಕೋಲವನ ಬಲಗೈಲಿ ಹಿಡಕೊಂಡು
> ಬೊರ‍್ರಾಡಿ ಬಂಡಿ ಹೊಡೆದವನೆ [1]
>
> ಗಟ್ಟಕೆ ಹೋಗೋವು ಎತ್ತೆಲ್ಲ ನಮ್ಮೋವು
> ಗಟ್ಟದ ಕೆಳಗೀನ ಕೊಡಗಾರು ಹೆಣ್ಮಕ್ಕ
> ಎತ್ತಿಗಾರತಿ ಬೆಳಗ್ಯಾರು[2]

ಯೌವನದ ಹೊಸ್ತಿಲ ಹಳ್ಳಿಯ ಪಡ್ಡೆಗೆ ಮಾತ್ರ ಒಗ್ಗಿದ ಹಾಡಿದಲ್ಲ: ಗೊರೂರರು ಹಾಡಿದಾಗಲೂ ಈ ಹಾಡುಗಳಲ್ಲಿ ಸಹಜ ಸತ್ವ ತುಂಬಿ ಬರುತ್ತದೆ: ಚೈತನ್ಯ ಉಕ್ಕಿ ಹರಿಯುತ್ತದೆ. ಆ ಹಾಡುಗಳನ್ನು ಅನುಭವಿಸಿ, ಕಣ್ಣಿನಲ್ಲಿ ಆನಂದಾಶ್ರುವನ್ನು ತಂದುಕೊಂಡು, ರೋಮಾಂಚನವನ್ನು ತುಂಬಿಕೊಳ್ಳುತ್ತ ಮೈಮರೆತು ಹಾಡುವ ಗೊರೂರರನ್ನು ಪ್ರತ್ಯಕ್ಷವಾಗಿ ಕಂಡವರು, ಯಾವುದೋ ಆವೇಶದ ಎತ್ತರದಲ್ಲಿ ಅವರನ್ನು ಗುರುತಿಸಿ

---

[1] ಹಳ್ಳಿಯ ಹಾಡುಗಳು, ಪುಟ ೪೮

[2] ಅದೇ, ಪುಟ ೪೯

ಬೆರಗಾಗುತ್ತಾರೆ. ಜನಪದ ಸಾಹಿತ್ಯ ಅವರ ಪಾಲಿಗೆ ಹಳ್ಳಿಯ ಮುಗ್ಧರು ಹಾಡುವ ಯಾವುದೋ ಕಗ್ಗವಲ್ಲ, ಎಂಥ ಪ್ರಾಜ್ಞರನ್ನೂ ಬೆರಗುಗೊಳಿಸಿ ಅವರನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ತನ್ನ ಉಪಾಸಕನನ್ನಾಗಿ ಮಾಡಿಕೊಳ್ಳುವ ಒಂದು ಶಕ್ತಿಯ ಸೆಲೆ.

೨

ಗೊರೂರರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈವರೆಗೆ ಪ್ರಕಟಿಸಿರುವ ಕೃತಿಗಳು ಎರಡು ಮಾತ್ರ : 'ಹಳ್ಳಿಯ ಹಾಡುಗಳು', ಮತ್ತು 'ಹಳ್ಳಿಯ ಬಾಳು.' 'ಹಳ್ಳಿಯ ಹಾಡುಗಳು' ೧೯೩೮ರಲ್ಲೇ ಪ್ರಕಟಗೊಂಡ ಒಂದು ಉತ್ತಮ ಗೀತಸಂಕಲನ. ೧೯೫೩ರಲ್ಲಿ ಮತ್ತೆ ಇದರ ಪರಿಷ್ಕೃತ ಆವೃತ್ತಿ ಪ್ರಕಟವಾಯಿತು.

೧೯೩೦–೧೯೪೦ರವರೆಗಿನ ಅವಧಿ ಕನ್ನಡ ಜನಪದ ಗೀತ ಸಂಗ್ರಹದ ಸುವರ್ಣಯುಗ ಎನ್ನಬಹುದು. ಕನ್ನಡ ಸಾಹಿತ್ಯದ ನವೋದಯ ಕಾಲದ ಪ್ರಮುಖ ಘಟ್ಟವನ್ನೂ ಈ ಅವಧಿಯಲ್ಲಿ ಗುರುತಿಸಬಹುದು. ಜನಪದ ಸಾಹಿತ್ಯ ಸಂಗ್ರಹಣೆಯ ಮುಂಗೋಳಿ ಕೂಗಿದುದೂ ಈ ದಿನಗಳಲ್ಲಿ. ನವೋದಯ ಕಾಲದ ಅನೇಕ ಗಣ್ಯ ಸಾಹಿತಿಗಳು ವಿದ್ವಾಂಸರು ಜನಪದ ಸಾಹಿತ್ಯದತ್ತಲೂ ಆಗ ತಮ್ಮ ದೃಷ್ಟಿಯನ್ನು ಹರಿಸಿದುದು ಗಮನಾರ್ಹವಾಗಿದೆ. ಮಧುರ ಚೆನ್ನ, ದ. ರಾ. ಬೇಂದ್ರೆ, ಸಿಂಪಿ ಲಿಂಗಣ್ಣ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅರ್ಚಕ ರಂಗಸ್ವಾಮಿ, ಬಿ. ಎಸ್. ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪಿ. ಧೂಲಾ, ಕಾಪಸೆ ರೇವಪ್ಪ, ವಿ. ವೆ. ತೊರ್ಕೆ, ದೇವುಡು ನರಸಿಂಹಶಾಸ್ತ್ರಿ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದವರು ಒಂದಲ್ಲ ಒಂದು ವಿಧದಲ್ಲಿ ಜನಪದ ಸಾಹಿತ್ಯದ ಸಂಬಂಧವನ್ನು ಆ ದಶಕದಲ್ಲಿ ಉಳಿಸಿಕೊಂಡು ಸಂಗ್ರಹಗಳನ್ನೋ, ವಿಮರ್ಶಾ ಗ್ರಂಥಗಳನ್ನೋ, ಲೇಖನಗಳನ್ನೋ ಪ್ರಕಟಿಸಿದರು ; ಜನಪದ ಸಾಹಿತ್ಯದ ಸಾಹಿತ್ಯಿಕ ಮೌಲ್ಯವನ್ನು ಎತ್ತಿ ಹಿಡಿದು ಅದರ ಶ್ರೀಮಂತಿಕೆಯ ಕಡೆ ಕನ್ನಡಿಗರ ದೃಷ್ಟಿಯನ್ನು ಸೆಳೆದರು. ೧೯೩೧ರಲ್ಲಿ 'ಗರತಿಯ ಹಾಡು' ಕನ್ನಡದ ಪ್ರಥಮ ಜನಪದ ಗೀತ ಸಂಕಲನವಾಗಿ ಪ್ರಕಟಗೊಂಡ ಮೇಲೆ, ಉತ್ತರ ಕರ್ನಾಟಕದ ವೈವಿಧ್ಯಮಯ ಸಾಹಿತ್ಯವನ್ನು ಪರಿಚಯಿಸುವ 'ಮಲ್ಲಿಗೆ ದಂಡೆ', 'ಜೀವನ ಸಂಗೀತ'ಗಳೂ ೧೯೩೫ರ ಅವಧಿಯಲ್ಲೇ ಪ್ರಕಟಗೊಂಡವು. ಜನಪದ ಸಾಹಿತ್ಯ ಚಟುವಟಿಕೆಗಳಿಗೆ ವಿಶೇಷವಾಗಿ ಧಾರವಾಡದ ಕಡೆ ನೋಡುವಂತಾಯಿತು. ಆದರೆ ಆ ಅವಧಿಯಲ್ಲೇ ದಕ್ಷಿಣ ಕರ್ನಾಟಕದಿಂದ ಪ್ರಕಟಗೊಂಡ ಶ್ರೀ ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' (೧೯೩೩) ಹೆಚ್ಚು ಪ್ರಚಾರಕ್ಕೆ ಬರದೆ ಅಜ್ಞಾತವಾಗಿಯೇ ಉಳಿದುಹೋಯಿತು. ೧೯೩೮ರ ವೇಳೆಗೆ 'ಹಳ್ಳಿಯ ಹಾಡುಗಳು' ಪ್ರಕಟವಾದ ಮೇಲೆ ಮೈಸೂರು ಭಾಗದ ಜನಪದ ಸಾಹಿತ್ಯದ ಅತ್ಯುತ್ತಮ ಸಂಕಲನವೊಂದನ್ನು ಪ್ರಥಮ ಬಾರಿಗೆ ಪ್ರಕಟಿಸಿದವರು ಗೊರೂರರು. 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಪ್ರಕಟವಾಗಿ ಆ ವೇಳೆಗೆ ಐದು ವರ್ಷಗಳು ಸಂದಿದ್ದವು. ಅವು

ಗ್ರಾಮ ಸಂಸ್ಕೃತಿಯನ್ನು ಪರಿಚಯಿಸುವ, ವ್ಯಾಪಕವಾದ ಹಿನ್ನೆಲೆಯಲ್ಲಿ ರಚಿತವಾದ ಒಂದು ಪರಿಚಯಾತ್ಮಕ ಕೃತಿ. ಜನಪದ ಗೀತೆಗಳನ್ನೂ ಆ ಕೃತಿಯ ಒಂದು ಭಾಗವಾಗಿ ಮಾತ್ರ ಅಳವಡಿಸಲಾಗಿತ್ತು. ಗೊರೂರರ ಸಂಕಲನ ಜನಪದ ಗೀತೆಗಳಿಗೇ ಮೀಸಲಾದಂತೆ ಸಿದ್ಧಗೊಂಡ ಕೃತಿಯಾದುದರಿಂದ, ಉತ್ತರ ಕರ್ನಾಟಕದ ಮೂರು ಸಂಕಲನಗಳಂತೆ, ದಕ್ಷಿಣ ಕರ್ನಾಟಕದ ಪ್ರಾತಿನಿಧಿಕ ಸಂಕಲನವಾಗಿ ಆ ಅವಧಿಯಲ್ಲಿ ಪರಿಗಣಿತವಾಯಿತು.

‘ಗರತಿಯ ಹಾಡು’, ‘ಹಳ್ಳಿಯ ಹಾಡು’ ಮತ್ತು ‘ನಾಡ ಪದಗಳು’ ಸ್ವಾತಂತ್ರ್ಯಪೂರ್ವದ ಅತ್ಯುತ್ತಮ ಜನಪದ ಗೀತ ಸಂಕಲನಗಳು. ಆಕಸ್ಮಿಕವೋ ಎಂಬಂತೆ ಈ ಮೂರು ಸಂಕಲನಗಳ ಸಂಗ್ರಹಕಾರ್ಯ ಮೂರು ಮೂರು ಮಂದಿ ಉತ್ಸಾಹಿಗಳಿಂದ ನಡೆದಿರುವುದು ಗಮನಾರ್ಹ. ‘ಗರತಿಯ ಹಾಡಿ’ನ ಹಲಸಂಗಿಯ ಸೋದರರಂತೆ, ‘ನಾಡ ಪದಗಳ’ ಮತಿಘಟ್ಟ ಸೋದರರಂತೆ ‘ಹಳ್ಳಿಯ ಹಾಡುಗಳು’ ಸಂಕಲನಕ್ಕೂ ಮೂವರು ವಿದ್ವಾಂಸರು ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಗೊರೂರರು ಕೃತಿಯ ಸಂಪಾದಕರು, ಪ್ರಧಾನ ಸಂಗ್ರಹಕರು. ಗೊರೂರು ಕೃಷ್ಣಯ್ಯಂಗಾರರು ಗೊರೂರರ ಸೋದರರು. ಮತ್ತೊಬ್ಬ ಸಂಗ್ರಹಕರಾದ ಬಿ. ಎನ್. ರಂಗಸ್ವಾಮಿಯವರು ಗೊರೂರರಂತೆಯೇ ಖಾದಿ ಗ್ರಾಮೋದ್ಯೋಗದೊಡನೆ ಸಂಬಂಧವನ್ನು ಇಟ್ಟುಕೊಂಡವರು. ಮುಂದೆ ಅವರು ೧೯೪೦ರಲ್ಲಿ ‘ಹಳ್ಳಿಯ ಪದಗಳು’ ಎಂಬ ಸ್ವತಂತ್ರ ಕೃತಿಯನ್ನು ಹೊರತಂದರು.

‘ಹಳ್ಳಿಯ ಹಾಡುಗಳು’ ಸಂಕಲನದಲ್ಲಿ ಕನ್ನಡ ಜನಪದ ಗೀತೆಗಳ, ಅದರಲ್ಲೂ ಸ್ತ್ರೀ ಸಾಹಿತ್ಯದ ಸಮಸ್ತ ಪರಿಚಯವೂ ಆಗುತ್ತದೆ. ಇಲ್ಲಿ ಸಂಕಲಿತವಾಗಿರುವ ಹಾಡುಗಳೆಲ್ಲ ಭಾವಗೀತೆಗಳೇ. ಎಲ್ಲವೂ ತ್ರಿಪದಿಗಳೇ. ಕನ್ನಡ ಜನಪದ ಗೀತೆಗಳೆಲ್ಲ ಬಹುಮಟ್ಟಿಗೆ ತ್ರಿಪದಿ ರೂಪದಲ್ಲಿ ಲಭ್ಯವಾಗುತ್ತಿದ್ದುದು ಆ ವೇಳೆಗೆ ‘ಗರತಿಯ ಹಾಡು’ ಮುಂತಾದ ಸಂಕಲನಗಳಿಂದ ವೇದ್ಯವಾಗಿತ್ತು. ಆ ಅಂಶವನ್ನು ‘ಹಳ್ಳಿಯ ಹಾಡುಗಳು’ ಸಂಕಲನವೂ ದೃಢಪಡಿಸಿತು.

ಸಂಗ್ರಹಿತವಾದ ಗೀತೆಗಳನ್ನೆಲ್ಲ ಈ ಸಂಕಲನದಲ್ಲಿ ಕ್ರಮಬದ್ಧವಾಗಿ ವಿಂಗಡಿಸಿಕೊಂಡು, ದೇವರು, ವರ್ಣನೆ, ಸಂಸಾರ ಎಂಬ ಮೂರು ಮುಖ್ಯ ಶೀರ್ಷಿಕೆಗಳಲ್ಲಿ ಅಳವಡಿಸಿರುವುದು ಉಚಿತವಾಗಿದೆ. ಮೈಸೂರು ಹಾಗೂ ಹಾಸನ ಜಿಲ್ಲೆಯ ಹಾಡುಗಳನ್ನೊಳಗೊಂಡ ಈ ಸಂಕಲನದಲ್ಲಿ ಬಹುಮಟ್ಟಿಗೆ ಬಯಲು ಸೀಮೆಯ ದೈವಗಳಿಗೆಲ್ಲ ಸಂಬಂಧಿಸಿದ ಗೀತೆಗಳನ್ನು ಕಾಣಬಹುದು. ‘ಏಳುಮಲೆ ಮಾದೇಶ್ವರ’, ‘ಬಿಳಿಗಿರಿರಂಗ’, ‘ನಂಜುಂಡ’, ‘ತಿರುಪತಿ ತಿಮ್ಮಪ್ಪ’ ಮುಂತಾದ ಸುಪ್ರಸಿದ್ಧ ದೈವಗಳ ಸಾಲಿನಲ್ಲಿ, ಅನೇಕ ಗ್ರಾಮದೇವತೆಗಳಿಗೆ ಸಂಬಂಧಿಸಿದ ಹಾಡುಗಳೂ ಬರುತ್ತವೆ. ಹಳ್ಳಿಗರ ಮುಗ್ಧ ಭಕ್ತಿ, ದೈವಗಳೊಡನೆ ಅವರು ಇಟ್ಟುಕೊಳ್ಳುವ ಹತ್ತಿರ ಸಂಬಂಧ, ಪೂಜೆ ಉತ್ಸವಗಳ ವರ್ಣನೆ—ಹೀಗೆ ಈ ಭಾಗದ ಗೀತೆಗಳು ಕನ್ನಡ ಜನಪದ ಗೀತೆಗಳ ಭಕ್ತಿಗೀತೆಗಳ ವಿಭಾಗಕ್ಕೆ ಉತ್ಕೃಷ್ಟ ಕೊಡುಗೆಗಳಾಗಿವೆ.

'ಸಂಸಾರ' ಮತ್ತು 'ವರ್ಣನೆ'ಯ ಭಾಗಗಳಲ್ಲಿ ಹಳ್ಳಿಯ ಬದುಕಿನ ವಿವಿಧ ಸ್ತರಗಳಿಗೆ ಸಂಬಂಧಿಸಿದ, ಅಪೂರ್ವ ಗೀತೆಗಳು ಸಂಕಲಿತವಾಗಿವೆ. ಜನಪದ ಕವಿಗಳು ವಾಸ್ತವಿಕ ಬದುಕಿನ ಬಗ್ಗೆ ತೋರಿರುವ ಸಂವೇದನೆ ಇಲ್ಲಿನ ಭಾವಗೀತೆಗಳಲ್ಲಿ ನಾನಾ ರೀತಿಯಲ್ಲಿ ಮೈಗೂಡಿ ನಿಂತಿದೆ. ನಿರ್ಮಲ ಬದುಕಿನ, ನಿಷ್ಠಾವಂತ ದುಡಿಮೆಯ, ಪ್ರಾಮಾಣಿಕ ಸ್ವಭಾವದ ರಸಮಯ ದೃಷ್ಟಿಯ ನಾನಾ ರಾಗಭಾವಗಳು ಮನೋಜ್ಞ ತ್ರಿಪದಿಗಳ ರೂಪದಲ್ಲಿ ಇಲ್ಲಿ ಅಭಿವ್ಯಕ್ತಿಯನ್ನು ಸಾಧಿಸಿಕೊಂಡು ಹಳ್ಳಿಗರ ಭಾವ ಪ್ರಪಂಚವನ್ನು ಅತ್ಯಂತ ಸಾರ್ಥಕವಾದ ರೀತಿಯಲ್ಲಿ ಪರಿಚಯಿಸುತ್ತವೆ. ಬದುಕಿನ ಎಲ್ಲ ಸಂದರ್ಭ ಗಳಿಗೂ, ಅನ್ವಯಿಸುವ ಹಾಡುಗಳು ಇಲ್ಲಿವೆ. 'ಎಣ್ಣೆಮಜ್ಜನ', 'ಬಸುರಿ', 'ನಲ್ಲ', 'ತೌರು', 'ಜೋಗುಳ' 'ಗಟ್ಟದ ಬಂಡಿ' ಹೀಗೆ ಹತ್ತಾರು ಬಗೆಯ, ಚಿತ್ತಾರದ ಕುಸು ರಿಯ ವೈವಿಧ್ಯಮಯ ತ್ರಿಪದಿಗಳು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತವೆ. ಗೊರೂ ರರು ಕವಿಹೃದಯದ ಗದ್ಯ ಶಿಲ್ಪಿಗಳು. ಸಾಹಿತ್ಯಿಕ ದೃಷ್ಟಿಯಿಂದ ಅತ್ಯುತ್ತಮವೆನ್ನ ಬಹುದಾದ ಗೀತೆಗಳನ್ನೆಲ್ಲ ಇಲ್ಲಿ ಸಂಕಲಿಸಿದ್ದಾರೆ. ಕವನಗಳ ಆಯ್ಕೆಯಲ್ಲಿ ಅವರ ರುಚಿ ಶುದ್ಧಿ, ಜನಪದ ಸಾಹಿತ್ಯದ ಬಗ್ಗೆ ಅವರಿಗಿರುವ ನಿಷ್ಠೆ ಸುಸ್ಪಷ್ಟವಾಗುತ್ತವೆ.

ಕೃತಿಗೆ ಹದಿನಾಲ್ಕು ಪುಟಗಳ ಒಪ್ಪವಾದ ಮುನ್ನುಡಿ ಇದೆ. ಹಳ್ಳಿಯ ಸಾಹಿತ್ಯದ ಬಗ್ಗೆ ಆವೇಶಪೂರಿತ ಮಾತುಗಳಾಗಲೀ, ಅಪಕ್ವ ಬರವಣಿಗೆಯಾಗಲೀ ಯಾವ ಪುಟ ದಲ್ಲೂ ಕಾಣುವುದಿಲ್ಲ. ಗೊರೂರರು ಗಾಇಲರ ವೇಳೆಗೇ 'ಆಧುನಿಕ ಜಾನಪದ ವಿಜ್ಞಾನಿ' ನಿರೀಕ್ಷಿಸಬಹುದಾದ ಗುಣಗಳನ್ನೆಲ್ಲ ಈ ಕೃತಿಯ ಸಂಪಾದನೆಯಲ್ಲಿ ತೋರಿ ದ್ದಾರೆ. ತಮ್ಮ ಮುನ್ನುಡಿಯಲ್ಲಿ ಆ ಅಂಶಗಳನ್ನೆಲ್ಲ ಸ್ಪಷ್ಟಪಡಿಸಿದ್ದಾರೆ. ಸಂಗ್ರಹಿಸಿದ ಪ್ರದೇಶ, ಹಾಡಿದವರು ಪುರುಷರೋ, ಸ್ತ್ರೀಯರೋ, ಗಾಯಕರೋ, ಹಿರಿಯ ತಲೆಮಾರಿ ನವರೋ, ಕಿರಿಯರೋ ಎಂಬೆಲ್ಲ ಅಂಶಗಳನ್ನು ಪ್ರಸ್ತಾಪಿಸಿರುವುದು ಅವರ ಶಾಸ್ತ್ರೀಯ ದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ಕ್ಷೇತ್ರ ಕಾರ್ಯಕರ್ತನಿಗೆ ಇರಬೇಕಾದ ವಿಶಿಷ್ಟ ಲಕ್ಷಣಗಳನ್ನು ಅವರು ಹೀಗೆ ನಿರೂಪಿಸುತ್ತಾರೆ :

> ಹಳ್ಳಿಯ ಹಾಡುಗಳನ್ನು ಸಂಗ್ರಹಿಸಲು ಹೊರಡುವವರಿಗೆ ಸ್ಥಳ ಪುರಾಣಗಳೂ ಕಟ್ಟುಕಥೆಗಳೂ ರೈತನಲ್ಲಿ ಬಳಕೆಯಲ್ಲಿರುವ ಎಲ್ಲಾ ಮಾತುಗಳೂ ಚೆನ್ನಾಗಿ ಗೊತ್ತಿರ ಬೇಕು. (ಪುಟ ೭)

ಕ್ಷೇತ್ರ ಕಾರ್ಯಕರ್ತನಿಗೆ ಉತ್ಸಾಹವೊಂದೇ ಊರೆಗೋಲಾದರೆ ಸಾಲದು. ಅವನು ಜಾನಪದ ಸಂಗ್ರಹಕ್ಕೆ ತನ್ನನ್ನು ಹೇಗೆ ಅಣಿಗೊಳಿಸಿಕೊಳ್ಳಬೇಕು ಎಂಬುದೂ ಮುಖ್ಯ. ತಾನು ಆರಿಸಿಕೊಂಡ ಪ್ರದೇಶದ ಜನರ ನಡೆನುಡಿಗಳ ಪರಿಚಯ ಅವನಿಗೆ ಸರಿಯಾಗಿಲ್ಲ ದಿದ್ದರೆ ಸಂಗ್ರಹಕಾರ್ಯದಲ್ಲಿ ಅವನು ಸೋಲನ್ನು ಅನುಭವಿಸುತ್ತಾನೆ. ಒಂದೊಂದು ಸ್ಥಳದ ಜಾಯಮಾನವನ್ನೂ, ಜನರ ರೀತಿನೀತಿಯನ್ನೂ ಅಭ್ಯಾಸ ಮಾಡಿಕೊಂಡು ಅವನು ಕ್ಷೇತ್ರವನ್ನು ಪ್ರವೇಶಿಸಬೇಕು. ಅಲ್ಲಿನ ಭಾಷೆಯ ಸಮರ್ಪಕ ಪರಿಚಯವಂತೂ ಅವನಿಗೆ ಅತ್ಯಗತ್ಯ ಎಂಬ ಅಂಶವನ್ನು ಗೊರೂರರು ಸರಿಯಾಗಿಯೇ ಇಲ್ಲಿ ಗುರ್ತಿಸಿದ್ದಾರೆ.

ಸಂಗ್ರಹಿತ ಸಾಹಿತ್ಯದ ಬಗ್ಗೆ ವಹಿಸಬೇಕಾದ ಎಚ್ಚರವನ್ನು ಅವರು ಸ್ಪಷ್ಟಪಡಿಸುತ್ತಾರೆ:

> ...ರೈತನ ಬಾಯಿಯಿಂದ ಪದಗಳನ್ನು ಕೇಳದೆ ಇದ್ದರೆ ಹಾಡುಗಳ ಸರಿಯಾದ ರೂಪವು ನಮಗೆ ತಿಳಿಯುವುದು ತೊಡಕಾಗುತ್ತದೆ.
>
> ಈ ಕಾರಣದಿಂದ ನಮಗೆ ಅರ್ಥವಾಗಲಿಲ್ಲವೆಂದು ನಾವು ಹಾಡುಗಳನ್ನು ಈ ಸಾಹಿತ್ಯ ತಿದ್ದುವುದೂ ಕೂಡ ನಮಗೆ ಅಪಾಯಕರವಾದುದು. ಆದುದರಿಂದ ನಾವು ಅರ್ಥವಾಗಲಿ ಆಗದಿರಲಿ ಹಾಡುಗಳನ್ನು ಅವು ದೊರೆತಂತೆಯೇ ಪ್ರಕಟಿಸಿದ್ದೇವೆ... (ಪುಟ ೭)

ಗೊರೂರರು ಆಡಿರುವ ಈ ಮಾತುಗಳು ಎಲ್ಲ ಕಾಲದ, ಎಲ್ಲ ದೇಶದ ಜಾನಪದ ಸಂಗ್ರಹಕರಿಗೂ ಅನ್ವಯಿಸುತ್ತವೆ. ಅಲ್ಲದೆ ಪ್ರಕೃತ ಸಂಕಲನ ಸಂಶೋಧಕನ ದೃಷ್ಟಿಯಿಂದ ಎಷ್ಟು ಗಣ್ಯವಾದುದು, ಅಧಿಕೃತವಾದುದು (authentic) ಎಂಬುದು ವೇದ್ಯವಾಗುತ್ತದೆ.

ಗ್ರಾಮಜೀವನ, ಬದಲಾಗುತ್ತಿರುವ ಗ್ರಾಮೀಣ ಸಂಸ್ಕೃತಿ, ಹಾಡುಗಾರರ ವೈಖರಿ, ಹಾಡು ಕಟ್ಟುವ ಅವರ ಪ್ರತಿಭಾಶಕ್ತಿ, ಮುಂತಾದ ವಿಷಯಗಳನ್ನು ಸಾಕಷ್ಟು ವಿಸ್ತಾರವಾಗಿಯೇ ಇಲ್ಲಿ ಪ್ರಸ್ತಾಪಿಸಿದ್ದಾರೆ. ಕೃತಿಯ ಮುನ್ನುಡಿಯೂ ಸಾಹಿತ್ಯದಷ್ಟೇ ರಸವತ್ತಾಗಿದ್ದು, ಜನಪದ ಸಾಹಿತ್ಯದ ಅಭ್ಯಾಸಿಗಳಿಗೆ ಉತ್ತಮ ಪ್ರವೇಶಿಕೆಯಾಗಿದೆ.

೩

ಜಾನಪದ ಸಂಬಂಧವಾದ ಗೊರೂರರ ಎರಡನೆಯ ಕೃತಿ 'ಹಳ್ಳಿಯ ಬಾಳು'. ಇದು ಪ್ರಕಟವಾದುದು ೧೯೪೩ರಲ್ಲಿ. ಎರಡನೇ ಮಹಾಯುದ್ಧದ ಕಾವು ಕಡಮೆಯಾಗುತ್ತಿದ್ದ ದಿನಗಳವು. ನಮ್ಮ ಸ್ವಾತಂತ್ರ್ಯ ಹೋರಾಟ ಉತ್ಕಟತೆಯನ್ನು ಎಟುಕಿಸಿಕೊಂಡ ಸಂದರ್ಭ. ಲೇಖಕರು ಸೆರೆಮನೆಯಲ್ಲಿದ್ದಾಗ ಅಜ್ಜಿನ ಮನೆಯಲ್ಲಿ ಈ ಕೃತಿ ಸಿದ್ಧವಾಗುತ್ತಿತ್ತು. ಆ ಮೊದಲೇ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜು ಹಾಗೂ ಇಂಟರ್‌ಮಿಡಿಯೇಟ್ ಕಾಲೇಜಿನಲ್ಲಿ ನೀಡಿದ್ದ ಉಪನ್ಯಾಸಗಳನ್ನೇ ಗ್ರಂಥರೂಪಕ್ಕೆ ಅಳವಡಿಸಿ, ಅದರ ಕರಡನ್ನು ತಿದ್ದುವ ವೇಳೆಗೆ ಸ್ವಾತಂತ್ರ್ಯ ಹೋರಾಟದ ಫಲವಾಗಿ ಶಿವಮೊಗ್ಗೆಯ ಸಬ್‌ಜೈಲನ್ನು ಸೇರಬೇಕಾಯಿತು. ತೀನಂಶ್ರೀ ಹಾಗೂ ಕೂಡಲಿ ಚಿದಂಬರಂ ಅವರು ಕರಡು ತಿದ್ದುವ ಹೊಣೆಯನ್ನು ಹೊತ್ತರು.

'ಹಳ್ಳಿಯ ಬಾಳು' ನಮ್ಮ ದೇಶದ ರೈತನ ಬದುಕಿನ ಮೇಲೆ ಬೆಳಕು ಚೆಲ್ಲುವ ಕೃತಿ. ರೈತನ ಬದುಕು-ಬಾಳನ್ನು ತೆರೆದ ಕಣ್ಣಿನಿಂದ ನೋಡಿ, ಉನ್ನತ ಗ್ರಾಮೀಣ ಸಂಸ್ಕೃತಿಯೇ ಹೇಗೆ ಸಮಗ್ರ ಭಾರತದ ನೈಜ ಸಂಸ್ಕೃತಿ ಎಂಬ ಅಂಶವನ್ನು ಮನಗಂಡು, ಈ ಸಂಸ್ಕೃತಿಯ ಅಡಿಗಲ್ಲಾಗಿ ಜನಪದ ಸಾಹಿತ್ಯದ ಸ್ಥಾನ, ರೈತನ ಬದುಕಿನಲ್ಲಿ ಅದು ಹಾಸುಹೊಕ್ಕಾಗಿ ಬೆರೆತ ಬಗೆ ಮುಂತಾದ ಅಂಶಗಳನ್ನು ಸವಿವರವಾಗಿ, ಅರ್ಥಪೂರ್ಣ

ವಾಗಿ, ಆಕರ್ಷಕವಾಗಿ ಇಲ್ಲಿ ಚರ್ಚಿಸಿದ್ದಾರೆ. ರೈತನನ್ನೂ ಅವನ ಜೀವನವನ್ನೂ ಕುರಿತು ಗೊರೂರರು ತಮ್ಮ ಪ್ರಬಂಧದ ಆರಂಭದಲ್ಲಿ ಆಡಿರುವ ಮಾತುಗಳಿವು :

> ನಮ್ಮ ದೇಶದ ರೈತ ನಮ್ಮ ದೇಶದ ಬೆನ್ನುಮೂಳೆ. ಅವನೇ ನಮ್ಮ ಜನತೆಯ ಜೀವಾಳ. ಅವನಲ್ಲಿ ಅಡಗಿರುವ ಸಂಸ್ಕೃತಿಯೇ ನಮ್ಮ ಪ್ರಾಣವಾಯು. ಪರದೇಶದ ನಾಗರಿಕತೆಯ ಪ್ರಭಾವಕ್ಕೆ ಒಳಗಾದ ನಾವು ನಮ್ಮದೆನ್ನುವುದನ್ನೆಲ್ಲ ಕಳೆದುಕೊಂಡಿದ್ದೇವೆ. ಆಧುನಿಕ ಪ್ರಪಂಚದಲ್ಲಿ, ನಮಗೆ ಜೀವವನ್ನೂ ಚೈತನ್ಯವನ್ನೂ ಕೊಡುವ ಭಾಗಗಳನ್ನು ಬಿಟ್ಟು, ಶುಷ್ಕರಾದ, ಪ್ರವಾಹ ಮಾತ್ರದಲ್ಲಿ ತೇಲಿಕೊಂಡು ಹೋಗುತ್ತಿರುವ ನಮಗೆ ನಮ್ಮಲ್ಲಿಯ ಕಾಳು ಜಳ್ಳು ಎರಡೂ ಬೇಡವಾಗಿದೆ. (ಪುಟ ೫)

ನಮ್ಮ ದೇಶದ ನಿಜವಾದ ಸಮಸ್ಯೆಯ ಮೂಲ ಎಲ್ಲಿದೆ, ಪರದೇಶದ ನಾಗರಿಕತೆಯ ಅನುಕರಣೆಯಲ್ಲಿ ನಾವೆಷ್ಟು ಅಂಧರಾಗಿದ್ದೇವೆ, ನಮ್ಮ ನಾಡಿನ ಒಳ್ಳೆಯದನ್ನೆಲ್ಲ ಮರೆತು ನಮ್ಮ ಅವನತಿಯ ಕೂಪವನ್ನು ನಾವೇ ಹೇಗೆ ತೋಡಿಕೊಳ್ಳುತ್ತಿದ್ದೇವೆ—ಎಂಬ ಅಂಶಗಳನ್ನು ಈ ಚಿಂತನ ಶೀಲ ಲೇಖಕರು ವಿಶ್ಲೇಷಿಸಿ ತೋರಿದ್ದಾರೆ. ಮುಂದಿನ ಪುಟಗಳಲ್ಲಿ ರೈತನ ಜೀವನದ ಸವಿ ಸೊಗಸುಗಳನ್ನೂ, ಅವನ ಜೀವನ ಹಾಗೂ ಜನಪದ ಸಾಹಿತ್ಯದ ಗಂಟು-ನಂಟನ್ನೂ, ಜನಜೀವನವನ್ನು ರೂಪಿಸುವಲ್ಲಿ, ಆ ಸಾಹಿತ್ಯದ ಪಾತ್ರವನ್ನೂ ಕುರಿತು ಸ್ವಾರಸ್ಯವಾಗಿ ಚರ್ಚಿಸಿದ್ದಾರೆ. 'ದೇವರೊಂದಿಗೆ ಗೆಳೆತನ', 'ಬೆವರಿನ ಆಳು', 'ಲೋಕದ ಬಂಧು', 'ಗಂಡ, ಹೆಂಡತಿ, ಪ್ರೇಮ, ಸಂಸಾರ', 'ಈ ಸಾಹಿತ್ಯದ ಸೊಗಸು' ಮುಂತಾದ ಅಧ್ಯಾಯಗಳಲ್ಲಿ ಗೊರೂರರು ನಮ್ಮ ಜನಪದ ಸಾಹಿತ್ಯದ ವಿಸ್ತಾರವಾದ ಒಂದು ವಿವೇಚನೆಯನ್ನೇ ನಡೆಸಿದ್ದಾರೆ. ಆ ಸಾಹಿತ್ಯದ ಮೂಲಕ ರೈತನ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ವಿಶ್ಲೇಷಣೆಗೆ ಹೇರಳವಾಗಿ ಜನಪದ ಗೀತೆಗಳನ್ನು ಅವರು ಬಳಸಿಕೊಂಡಿದ್ದಾರೆ. ನಮ್ಮ ಜನಪದ ಸಾಹಿತ್ಯದ ಅರ್ಥ ವೈಶಾಲ್ಯದ ಮೇಲೆ ಬೆಳಕು ಚೆಲ್ಲುವ ಕೃತಿಗಳಲ್ಲಿ 'ಹಳ್ಳಿಯ ಹಾಡು' ಪ್ರಥಮ ಶ್ರೇಣಿಯಲ್ಲಿ ನಿಲ್ಲುತ್ತದೆ.

ಗೊರೂರರ ಮೂರನೆ ಜಾನಪದ ಗ್ರಂಥ 'ಜನಪದ ಜೀವನ ಮತ್ತು ದರ್ಶನ' ಇನ್ನೂ ಅಚ್ಚಿನ ಮನೆಯ ಹೊಸ್ತಿಲಲ್ಲಿರುವ ಕೃತಿ. ಮೂರು ನಾಲ್ಕು ದಶಕಗಳ ಕಾಲ ಜಾನಪದವನ್ನು ಕುರಿತ ಅವರ ಚಿಂತನ-ಮಂಥನ ಈ ಕೃತಿಯಲ್ಲಿ ನವನೀತವಾಗಿ ಲಭ್ಯವಾಗುವುದರಲ್ಲಿ ಅನುಮಾನವಿಲ್ಲ. ಆಳವಾದ ಅನುಭವ, ಮಾಗಿದ ವಿಚಾರಶಕ್ತಿ, ಬುದ್ಧಿಯ ಪ್ರಖರತೆಗಳು ಮುಪ್ಪುರಿಗೊಂಡು ಈ ಕೃತಿಯ ಹಿರಿಮೆಯನ್ನು ಸ್ಥಾಪಿಸುವುವೆಂದು ಆಶಿಸಬಹುದಾಗಿದೆ.

ಮೇಲಿನ ಕೃತಿಗಳ ಜೊತೆಗೆ ಗೊರೂರರು ಜಾನಪದವನ್ನು ಕುರಿತ ಅನೇಕ ಸಂಶೋಧನಾತ್ಮಕ ಲೇಖನಗಳನ್ನೂ ಅಲ್ಲಲ್ಲಿ ಪ್ರಕಟಿಸಿದ್ದಾರೆ. ಅವರ ಲೇಖನಗಳ–ಭಾಷಣಗಳ ಒಂದು ಬೃಹತ್ ಸಂಕಲನ ಪ್ರಕಟವಾಗುವುದಾದರೆ, ಕನ್ನಡ ಜಾನಪದ ಭಂಡಾರ ಸಂಪದ್ಯುಕ್ತವಾಗುತ್ತದೆ; ಸತ್ವಯುತವಾಗುತ್ತದೆ.

ಗೊರೂರರ ಕೃತಿಗಳಲ್ಲಿ ಹಾಸ್ಯ

ಎಚ್. ಕೆ. ರಾಮಚಂದ್ರಮೂರ್ತಿ

ನ ಪ್ರಾಪ್ನುವಂತಿ ಯತಯೋ ರುದಿತೇನ ಮೋಕ್ಷಂ ।
ಸ್ವರ್ಗಾಯತಿಂ ನ ಪರಿಹಾಸ ಕಥಾ ರುಣದ್ಧಿ ॥

ನಮ್ಮ ಸಾಹಿತ್ಯದಲ್ಲಿ ದಿನಕ್ಕೊಂದು ಹೊಸ ಫ್ಯಾಷನ್ನಿನ ಗಾಳಿ ಬೀಸಿ ಇದ್ದುದೆಲ್ಲವನ್ನೂ ಕೊಚ್ಚಿಕೊಂಡು ಹೋಗಬೇಕೆನ್ನುತ್ತಿರುವ ಈ ಕಾಲದಲ್ಲೂ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪ್ರಬಂಧಗಳು, ಹಾಸ್ಯ ಚಿತ್ರಗಳು ನಮಗೆ ಅತ್ಯಂತ ಪ್ರಿಯವಾಗಿ ಉಳಿದಿವೆ. ಯಾಂತ್ರಿಕ ಬದುಕಿನ ದುಗುಡ ದುಮ್ಮಾನಗಳ ಹಿನ್ನೆಲೆಯಲ್ಲಿ ನಿತ್ಯಜೀವನದ ತುಡಿತ ಬಡಿತಗಳೇ ಹೆಚ್ಚು ಅಬ್ಬರ ಮಾಡುತ್ತಿರುವ ಈ ಕಾಲದಲ್ಲಿ ಯಾರಿಗೂ ಹಾಸ್ಯಕ್ಕೆ ಪುರಸತ್ತಿಲ್ಲ—ನಗುವ ಪರಿಪಾಟವನ್ನು ನಾವು ಮರೆಯುತ್ತಿದ್ದೇವೇನೋ ಎಂಬ ಭಯವಾಗುತ್ತಿದೆ. ಆದ್ದರಿಂದಲೇ ಏನೋ, ಗೊರೂರರ ಹಾಸ್ಯಚಿತ್ರಗಳನ್ನು ಮತ್ತೆ ಓದುವಾಗ ಅಲ್ಲಿ ಪಡಿಮೂಡಿರುವ ಲೋಕ ಕನಸಿನ ರಾಜ್ಯವೇನೋ. ಅಲ್ಲಿನ ವ್ಯಕ್ತಿಗಳು ಹುಚ್ಚು ಆದರ್ಶದ ಗೊಂಬೆಗಳೇನೋ ಎಂದು ಅನಿಸುತ್ತದೆ. ತಮ್ಮ ಜೀವನದ ಬಹುತೇಕ ಭಾಗವನ್ನು ಹಳ್ಳಿಯ ಕಡು ಕಷ್ಟಕಾರ್ಪಣ್ಯಗಳ ನಡುವೆ ಕಳೆದರೂ ಇಂದಿಗೂ ಇಳಿವಯಸ್ಸಿನಲ್ಲಿ ತಮ್ಮ ಸತತವಾದ ಜೀವನೋತ್ಸಾಹವನ್ನು ಉಳಿಸಿಕೊಂಡಿರುವ ಗೊರೂರರನ್ನು ಕಂಡರೆ ತರುಣರೂ ಮಧ್ಯವಯಸ್ಕರೂ ನಾಚಿಕೆಪಡಬೇಕು. ಜೀವನದ ಬಗೆಗೆ ಅವರು ತಾಳಿರುವ ಆಸಕ್ತಿ, ಹರ್ಷೋತ್ಕರ್ಷಗಳು ಇವತ್ತಿಗೆ ಅಷ್ಟು ವಿರಳ. ಅವರ ಬರವಣಿಗೆಯೆಲ್ಲವೂ ಈ ಔತ್ಸುಕ್ಯದ ಅಭಿವ್ಯಕ್ತಿ. ಆದ್ದರಿಂದಲೇ ನಾಲ್ಕು ಕಾಲ ತಾಳಬಲ್ಲ, ಬೆಲೆಬಾಳಬಲ್ಲ ಯೋಗ್ಯತೆ ಇದೆ ಅವರ ಬರಹಗಳಿಗೆ.

'ಹಳ್ಳಿಯ ಚಿತ್ರಗಳು', 'ನಮ್ಮೂರಿನ ರಸಿಕರು', 'ಬೈಲಹಳ್ಳಿಯ ಸರ್ವೆ'—ಇವು ಮೂರೂ ಸೇರಿ ಗೊರೂರರ ಹಾಸ್ಯ ಪುರಾಣದ ಒಂದು ಚಕ್ರವನ್ನು ಸೃಷ್ಟಿಸಿವೆ.

ಹಾಸ್ಯದ ಒಂದು ವಿಚಿತ್ರ ಲೋಕವೇ ಅಲ್ಲುಂಟು. ಅಲ್ಲಿ ಅವರು ಸೃಷ್ಟಿಸಿರುವ ಘಟನೆಗಳು, ಪಾತ್ರಗಳು, ಹಾಸ್ಯದ ಹತ್ತು ಮುಖಗಳನ್ನೂ, ನಗೆಯ ನಾನಾ ಸ್ತರಗಳನ್ನೂ ತೋರಿಸುತ್ತವೆ. ನಮ್ಮ ಕಾದಂಬರಿಕಾರರನ್ನು ಬಿಟ್ಟರೆ, ಇನ್ನಾರೂ ಅವರು ಸೃಷ್ಟಿಸಿರುವಷ್ಟು ವೈವಿಧ್ಯಪೂರ್ಣ, ರಸಮಯ ವ್ಯಕ್ತಿಗಳನ್ನು ಸೃಷ್ಟಿಸಿಲ್ಲ. ಭಾವನವರು, ನಾಣಿ, ಗುಂಡ, ಜೋಡಿದಾರರು, ಶೀನಪ್ಪ, ಜೋರ, ನಾರಾಯಣಭಟ್ಟ, ವಾಸ್ಕೋಡಿಗಾಮ, ಶಾಲುಸಾಬಿ, ಪೂಜಾರಿ ನಾರಣಯ್ಯ, ಬಾವುಟದ ಮಣೆಗಾರ್ರು, ಗಾಸೆ ಗಿಡ್ಡ. ಕುರಿ ತಿಮ್ಮ, ಪೇಷ್ಟಿ ಕುಬ್ಜ—ಇವು ಮರೆಯಲಾಗದ ವ್ಯಕ್ತಿ ವಿಶೇಷಗಳು. ನಮ್ಮ ತಲೆಮಾರಿನಲ್ಲಿ ನಮಗೆ ಅತ್ಯಂತ ನಿರ್ದುಷ್ಟವಾದ ಹಾಸ್ಯವನ್ನು ಒದಗಿಸಿ ನಮ್ಮ ಕೃತಜ್ಞತೆಗೆ ಪಾತ್ರರಾಗಿರುವ ಹಿರಿಯರಲ್ಲಿ ಗೊರೂರರದು ಪ್ರಮುಖ ಸ್ಥಾನ.

ಗೊರೂರರ ಹಾಸ್ಯವನ್ನು ವಿಶ್ಲೇಷಿಸುವುದು ಪ್ರಯಾಸದ ಮಾತು. ಜೀವನದ ಅನೇಕ ರಸಮಯ ವಿಚಾರಗಳನ್ನು ನಾವು ನೋಡಿ ಗ್ರಹಿಸಿ ಖುಷಿಪಡುತ್ತೇವೆ. ಸುಖವನ್ನು ಅನುಭವಿಸುತ್ತೇವೆ. ಆದರೆ ಅವುಗಳನ್ನು ವಿಭಜಿಸಿ, ವಿಶ್ಲೇಷಿಸ ಹೊರಟಾಗ ಮೂಕರಾಗುತ್ತೇವೆ. ಅಕಸ್ಮಾತ್ತಾಗಿ ನಾವು ಯಾವುದೋ ಒಂದು ಊರಿನ ಬಳಿ ಬಂದೆವೆಂದು ಇಟ್ಟುಕೊಳ್ಳೋಣ. ಇದ್ದಕ್ಕಿದ್ದಂತೆ ಬಣ್ಣಬಣ್ಣದ ವೇಷಗಳನ್ನುಟ್ಟ ಚಿತ್ರವಿಚಿತ್ರದ ನೂರೆಂಟು ನಗುಮುಖಗಳು ಗುಜುಗುಟ್ಟುತ್ತಾ ಬಂದು ಸುತ್ತುಗಟ್ಟಿದಾಗ ನೀವೇನು ಮಾಡಬಹುದು. ಕೊರಳೆತ್ತಿ ಕೂಗಿ, ಮಾತನಾಡಲು ಸೋತು, ಕೈಸನ್ನೆ, ಬಾಯಿಸನ್ನೆ ಮಾಡುತ್ತಾ ನಿಲ್ಲಬೇಕಾದೀತು. ಗೊರೂರರ ಹಾಸ್ಯಪ್ರಪಂಚವನ್ನು ವರ್ಣಿಸ ಹೊರಟವನ ಗತಿಯೂ ಅಷ್ಟೆ. ಈ ಅಪಾಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ಅವರ ಹಾಸ್ಯವನ್ನು ಕುರಿತು ನಾಲ್ಕು ಮಾತು ಹೇಳಬಹುದು.

ಹಾಸ್ಯದ ಸ್ವರೂಪವನ್ನು ವಿಶ್ಲೇಷಿಸುವಾಗ ಸಾಮಾನ್ಯವಾಗಿ, ಹಾಸ್ಯ ಮತ್ತು ಚತುರೋಕ್ತಿಗಳ ನಡುವಣ ವ್ಯತ್ಯಾಸವನ್ನು ಗುರುತಿಸುವುದುಂಟು. ಹಾಸ್ಯ ಮನುಷ್ಯನ ಒಂದು ಸ್ಥಾಯೀ ಪ್ರವೃತ್ತಿ. ಹಾಸ್ಯಪ್ರವೃತ್ತಿ ಇದ್ದವರು ಲೋಕದ ವಿವಿಧ ವಸ್ತುಗಳನ್ನು, ವ್ಯಕ್ತಿಗಳನ್ನು ಅವರವರ ಆವರಣದಿಂದಾಚೆಗೆ ಎಳೆದು ಅವುಗಳ ಸಹಜ ಸ್ವರೂಪದ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಮರ್ಥರಾಗುತ್ತಾರೆ. ವ್ಯಕ್ತಿಗಳ, ವಸ್ತುಗಳ, ನಡುವಣ ಪರಸ್ಪರ ವಿರೋಧ ವೈಚಿತ್ರಗಳನ್ನು ಗುರುತಿಸಿ ಪರಸ್ಪರ ವಿರೋಧವಾಗಿರುವ ಅಂಶಗಳನ್ನು ಅಕ್ಕಪಕ್ಕದಲ್ಲಿಡಬಲ್ಲ ಮನೋಧರ್ಮವನ್ನು ಚತುರೋಕ್ತಿ, 'ವ್ಹಿಟ್' ಎನ್ನುವುದುಂಟು. ಹಾಸ್ಯ ನಿರರ್ಗಳವಾದುದು, ತಾನೇ ತಾನಾಗಿ ಉದ್ಭವಿಸುವಂಥದು. ಚತುರೋಕ್ತಿ ಬುದ್ಧಿಯ ಕಸರತ್ತಿನಿಂದ ಬರುವಂಥದು. ಆದರೆ ಎರಡಕ್ಕೂ ಸಾಮ್ಯವಿದೆ. ಅವು ತೀರಾ ಭಿನ್ನವಲ್ಲ. ಹಾಸ್ಯಕ್ಕೆ ಬುದ್ಧಿವಂತಿಕೆಯ ಚುರುಕು ಬೇಕಾಗುವಂತೆ ಚತುರೋಕ್ತಿಗೆ ಸಹಜತೆಯ ಬೆಳಕು ಬೇಕು. ಅದು ತಿಣುಕಿ ತಿಣುಕಿ ಹೊಸೆಯುವ ಶಬ್ದಜಾಲವಲ್ಲ. ಎರಡರ ಗುರಿ ನಗೆ. ಎರಡೂ ಅನಿರೀಕ್ಷಿತ ಪರಿಣಾಮವನ್ನುಂಟುಮಾಡಲು ಹೊರಟು ಯಶಸ್ವಿಯಾದಾಗ ಹೊಮ್ಮುವುದು ನಗೆ. ಅವು ಚಕ್ಕಲಗುಳಿ ಇಡುವಂಥ

ಅನುಭವವನ್ನುಂಟುಮಾಡಿದರೂ ಗಂಭೀರವಾದ ಚಿಂತನೆಯನ್ನು ಹೊಳಲಿಸುವುವು. ನಾವು ಕೆಲವು ವಿನೋದೋಕ್ತಿಗಳನ್ನು ಕೇಳಿದಾಕ್ಷಣ ಗಹಗಹಿಸಿ ನಕ್ಕು ಆಮೇಲೆ ಗಂಭೀರವಾದ ಮೆಚ್ಚುಗೆ ವ್ಯಕ್ತಪಡಿಸಿ ಕೊಂಡಾಡುವುದಿಲ್ಲವೇ? ಹಾಗೆ.

ಹಾಸ್ಯ ಚತುರೋಕ್ತಿಗಳೆರಡೂ ನಮ್ಮ ಸುತ್ತಲಿನ ಬದುಕಿನ ಅವಿಭಾಜ್ಯ ಅಂಗವಾಗಿದ್ದು ವಾಸ್ತವ ಜೀವನದ ಸಂಗತಿಗಳಿಂದಲೇ ಮೂಡಿ ಬರುವಂಥವು. ನಿತ್ಯವೂ ನಾವು ನೂರೆಂಟು ವಿನೋದ ಪ್ರಸಂಗಗಳನ್ನೂ, ಚತುರೋಕ್ತಿಗಳನ್ನೂ ಕೇಳಿ ಹರ್ಷ ಪುಲಕಿತರಾಗುತ್ತೇವೆ. ಅವುಗಳ ಸ್ವಾರಸ್ಯವಿರುವುದು ನಿರೂಪಣೆಯ ಚತುರತೆಯಲ್ಲಿ, ಸಹಜತೆಯಲ್ಲಿ. ಒಂದು ಪ್ರಸಂಗವನ್ನು ಮತ್ತೆ ಮತ್ತೆ ಬೇರೆಬೇರೆ ಬಾಯಿಂದ ಕೇಳುವಾಗ ಅವು ಬೇರೆ ಬೇರೆ ರೂಪದಲ್ಲಿ ಹೆಚ್ಚು ಹೆಚ್ಚು ಸ್ವಾರಸ್ಯ ಪಡೆದು ಹೊರಬೀಳುತ್ತವೆ. ಹೀಗೆ ನಿರೂಪಿತವಾಗುವ ಪ್ರಸಂಗ, ಘಟನೆಗಳು ಕಥೆಯ ಕೈಕಾಲು ಪಡೆದಾಗ ಕಲಾತ್ಮಕವಾದ ಆಕಾರ ಪಡೆದಾಗ ಅವಕ್ಕೆ ಹೊಸ ಜೀವ ಬರುತ್ತದೆ. ಅದರ ನಿರೂಪಣೆ ಸಂತೋಷವನ್ನೂ ಮನರಂಜನೆಯನ್ನೂ ಒದಗಿಸುತ್ತದೆ. ಅಂಥ ಕಲೆಯ ಸಂಸ್ಕೃತಿಯನ್ನು ನಾವು ಗೊರೂರರಲ್ಲಿ ಕಾಣಬಹುದು.

ಗೊರೂರರ ವಿನೋದ ಪುರಾಣದಲ್ಲಿ ಬರುವ ರಸಮಯ ಘಟನೆಗಳಿಗೆ, ಹಾಸ್ಯೋಕ್ತಿಗಳಿಗೆ, ವರ್ಣನೆಗಳಿಗೆ, ವ್ಯಕ್ತಿಚಿತ್ರಗಳಿಗೆ ಲೆಕ್ಕವಿಲ್ಲ—ಅಸಂಬದ್ಧವಾದ ಆದರೆ ಸಹಜವಾದ ಲಘುಕಲ್ಪನೆಯ ಸನ್ನಿವೇಶದಿಂದಲೇ ಅವರು ಹೇಗೆ ಸರಳ ಹಾಸ್ಯವನ್ನು ಸೃಷ್ಟಿಸಬಲ್ಲರು ಎಂಬುದಕ್ಕೆ ಕೆಲವು ಉದಾಹರಣೆ ಕೊಡಬಹುದು. ರತ್ನಳ ಮದುವೆಗೆ ಹೊರಟಾಗ ಬನ್ನೂರ ಬಳಿ ಸಂಭವಿಸಿದ ಒಂದು ಘಟನೆಯನ್ನು ನೆನಪು ಮಾಡಿಕೊಳ್ಳಬಹುದು. ಒಬ್ಬಳು ಯೂರೋಪಿಯನ್ 'ದೊರೆಸಾನಿ' ಹೋಗುತ್ತಿದ್ದ ಕಾರು ದಾರಿಯಲ್ಲಿ ಆಕಸ್ಮಿಕಕ್ಕೆ ಒಳಗಾಗಿ, ಒಬ್ಬ ಹಳ್ಳಿಯ ಹುಡುಗನಿಗೆ ಸ್ವಲ್ಪ ಪೆಟ್ಟು ಬಿದ್ದಿದೆ. ಮುಂದಿನ ಕಥೆಯನ್ನು ಗೊರೂರರೇ ಹೇಳಬೇಕು: "ಇದರಲ್ಲಿ ವಿನೋದವೇನು ಬಂತು" ಎಂಬುದಾಗಿ ನೀವು ಕೇಳಬಹುದು. ಲೇಡಿಯು ಇಂಗ್ಲಿಷಿನಲ್ಲಿ ರೈತರನ್ನು ಕುರಿತು, "ಡ್ರೈವರನು ಗಾಡಿ ನಡೆಸುತ್ತಿದ್ದ, ಆದರೆ ತಪ್ಪು ಅವನದಲ್ಲ. ಗಾಡಿಯ ಕೊಂಬನ್ನು ಎಷ್ಟು ಸಲ ಕೂಗಿಸಿದರೂ ನಿಮ್ಮ ಹುಡುಗ ಮಗ್ಗುಲಾಗಲೇ ಇಲ್ಲ. ಆದರೂ ಕೂಡಲೇ ನಿಲ್ಲಿಸಿದ. ನಿಮ್ಮ ಹುಡುಗನಿಗೆ ಏನೂ ಪೆಟ್ಟಾಗಿಲ್ಲ. ಈ ಕಷ್ಟಕ್ಕೋಸ್ಕರ ನಿಮಗೆ ನಾನು ಪ್ರತಿಫಲ ಕೊಡುತ್ತೇನೆ" ಎನ್ನುತ್ತಿದ್ದಳು. ಇಂಗ್ಲಿಷ್ ತಿಳಿಯದ ಹಳ್ಳಿಯವರು, "ಹುಡುಗನ ತಲೆ ಒಡೆದುದಲ್ಲದೆ ಉಪನ್ಯಾಸಕ್ಕೆ ಬೇರೆ ಪ್ರಾರಂಭಿಸಿದ್ದಾಳೆ" ಎಂದರು. ಡ್ರೈವರನು ಹಳ್ಳಿಯವರನ್ನು ಕುರಿತು "ದೊರೆಸಾನಿಯು ಹೇಳಿದುದು ಗೊತ್ತಾಯಿತೆ? ಗಾಡಿಯನ್ನು ಅವರೇ ನಡೆಸುತ್ತಿದ್ದರು. ಆದರೆ ತಪ್ಪು ಅವರದಲ್ಲ. ನಿಮ್ಮ ಹುಡುಗನದೇ. ಆದರೆ ಏನೂ ಪೆಟ್ಟಾಗಿಲ್ಲ. ದೊರೆಸಾನಿಯು ಬಹಳ ಒಳ್ಳೆಯವರು. ನಿನಗೆ ಸಹಾಯ ಮಾಡಿಸುತ್ತೇನೆ" ಎನ್ನುತ್ತಿದ್ದನು. ಲೇಡಿಗೆ ಕನ್ನಡ ಬಾರದು. ಅವಳು ಡ್ರೈವರನಿಗೆ ಇಂಗ್ಲಿಷಿನಲ್ಲಿ "ಏನು ಹೇಳಿದೆ ಅವರಿಗೆ" ಎಂದಳು. ಡ್ರೈವರನು "ಒಡತಿಯೇ, ನಾನು ಗಾಡಿ

ಯನ್ನು ನಡೆಸುತ್ತಿದ್ದೆ. ಆದರೆ ತಪ್ಪು ನನ್ನದಲ್ಲ...." ಎಂದನು.[1]

ಇಂಗ್ಲಿಷ್ ಬಾರದ ಹಳ್ಳಿಯವರು, ಕನ್ನಡ ಗೊತ್ತಿಲ್ಲದ ದೊರೆಸಾನಿ, ಇಬ್ಬರ ಅಜ್ಞಾನವನ್ನೂ ಆತ್ಮರಕ್ಷಣೆಗಾಗಿ ಬಳಸಿಕೊಂಡ ಚಾಣಾಕ್ಷ ಡ್ರೈವರು ಒಂದು ಸೊಗಸಾದ ಸನ್ನಿವೇಶವನ್ನು ಸೃಷ್ಟಿಸುತ್ತಾರೆ. ರತ್ನಳ ಮದುವೆಗೆ ಹೊರಟಾಗ ಹೊಳೆಯನ್ನು ದಾಟಲಾರದೆ ಹೆದರಿ ಹೈರಾಣಾಗಿ ಆಚೆ ದಡದಿಂದಲೇ ದಂಪತಿಗಳನ್ನು ಹರಸಿದ ಮುದುಕರು, ಹಳೆಯ ಬೀಡಿಗೆ ಹೋಗಿದ್ದಾಗ ಬ್ರಾಹ್ಮಣತನ ಉಳಿಸಿಕೊಳ್ಳಲು ಅಡಿಗೆ ಕೆಲಸಕ್ಕೆ ಸಿಕ್ಕಿಬಿದ್ದು ಹಳೇ ಬೀಡಿನ ದೇವಸ್ಥಾನವನ್ನೇ ನೋಡದೆ ಬಂದ ಸ್ವಾಟಿನ ಅನುಭವ, ಶೀನಪ್ಪನ ವಾಕಿಂಗ್ ದುರಂತ, ಬೈಲಾಟದ ವರ್ಣನೆ, ಭಾವನ ಮನೆಯಲ್ಲಿ ಶ್ರಾದ್ಧದ ದಿನ ಬ್ರಾಹ್ಮಣರು ಪಟ್ಟ ಪಾಡು, ಮೋಜಿನಿದಾರರು ಹೇಳಿದ ಸಿಡಿಲು ಹಿಡಿಯುವ ಕಥೆ—ಇವು ಗೊರೂರರ ಸಾಹಿತ್ಯದಲ್ಲಿ ಬರುವ ರಸನಿಮಿಷಗಳು.

ಮನುಷ್ಯಸ್ವಭಾವದ ಅಂಕುಡೊಂಕುಗಳ ಮೇಲೆ ಭೂತಗನ್ನಡಿ ಹಿಡಿದು ಉತ್ಪ್ರೇಕ್ಷೆಯಿಂದಲೇ ಹಾಸ್ಯ ಸೃಜಿಸುವುದರಲ್ಲಿ ಗೊರೂರರದು ಮೇಲುಗೈ. ಸಾಮಾನ್ಯವಾಗಿ ಅವರ ಪಾತ್ರಗಳಲ್ಲಿ ಯಾವುದೋ ವಿಶಿಷ್ಟ ವೈಚಿತ್ರ್ಯವನ್ನೇ ಹೆಚ್ಚಾಗಿ ಮೆರೆಸುವ ಮಾಮೂಲು ಪಾತ್ರಗಳೇ (types) ಹೆಚ್ಚು. ಮೇಲುನೋಟಕ್ಕೆ ಕಾಣುವ ರೂಪವೇಷಗಳನ್ನೂ, ಚಲನವಲನಗಳನ್ನೂ, ದೈಹಿಕ ಚಹರೆಗಳನ್ನೂ ಪಟ್ಟಿಮಾಡಿ ಕೇವಲ ಎರಡೇ ಆಯಾಮಗಳಿರುವ ನುಡಿಚಿತ್ರಗಳನ್ನು ಮಿಡಿದು ತೋರಿಸುವುದರಲ್ಲಿ ಗೊರೂರರು ನಿಸ್ಸೀಮರು. 'ಬೈಲಹಳ್ಳಿಯ ಸರ್ವೆ'ಯಲ್ಲಿ ಬರುವ ಪಾತ್ರಗಳೆಲ್ಲವೂ ಹೆಚ್ಚು ಕಡಿಮೆ ಈ ರೀತಿಯವೇ. ಅವುಗಳನ್ನು ಸುಮ್ಮನೆ ವರ್ಣಿಸಿ, ವರದಿ ಮಾಡಿದಾಗ ಹೆಚ್ಚು ಪರಿಣಾಮ ಸಾಧಿತವಾಗುವುದಿಲ್ಲ. ಆದರೆ ವಿಶಿಷ್ಟ ವಿಲಕ್ಷಣಗಳಿಂದ ತುಂಬಿದ ಈ ವಿನೋದಕರ ಪಾತ್ರಗಳನ್ನು ನಾಟಕೀಯವಾದ ಸನ್ನಿವೇಶದ ಹಿನ್ನೆಲೆಯಲ್ಲಿ ವಿನ್ಯಾಸಗೊಳಿಸಿದಾಗ ತೀರಾ ವಿರಳವಾದ ಉತ್ತಮ ಹಾಸ್ಯ ಹೊಮ್ಮುತ್ತದೆ. 'ನಮ್ಮ ಜೋಡಿದಾರರ ಕೆಲವು ಚಿತ್ರಗಳು' ಇದಕ್ಕೆ ಒಳ್ಳೆಯ ಉದಾಹರಣೆ. ಪಾತ್ರಕಲ್ಪನೆಯೇ ವಿನೋದಭರಿತವಾಗಿರುವುದರಿಂದ ಘಟನೆಗಳೂ ವಿನೋದಕರವಾಗಿ ಪರಿಣಮಿಸಿ ಆಭಾಸದ ಹಾಸ್ಯಕ್ಕೆಡೆಮಾಡುತ್ತವೆ. ಜೋಡಿದಾರರು ಕುದುರೆಯಿಂದ ಬಿದ್ದದ್ದು, ಕೆರೆದಾಟುವಾಗ ಗಂಗಡಿಕಾರ ಹೆಣ್ಣಿನ ವಕ್ರನೋಟಕ್ಕೆ ಸಿಕ್ಕಿದ್ದು, ಜೋಡಿದಾರರ ಬ್ರಹ್ಮಾಸ್ತ್ರ, ಈಜು ಕಲಿತದ್ದು—ಇವೆಲ್ಲವೂ ಗೊರೂರರ ರಸಮಯವಾದ ವಿನೋದ ಕಲ್ಪನೆಗೆ ಸಾಕ್ಷಿಯಾಗಿವೆ. ಕುದುರೆಯಿಂದ ಬಿದ್ದ ಜೋಡಿದಾರರ ವರ್ಣನೆ ಇದು: "ಅವರ ಮುಖವು ಗಾಳಿ ತುಂಬಿದ "ಫುಟ್‌ಬಾಲ್ ಬ್ಲಾಡರ್"ನಂತೆ ಇದ್ದಿತು. ಆ "ಬ್ಲಾಡರಿನ" ಯಾವುದೋ ಕಡೆಯಿಂದ, ಚಿಕ್ಕ ತೂತಿನಿಂದ ಗಾಳಿ ಹೊರಡುವಂತೆ, ಒಂದು ಧ್ವನಿಯು ಹೊರಡುತ್ತಲಿದ್ದಿತು."[2] ತಮ್ಮೂರಿನ ಒಕ್ಕಲಿಗನು ಅಡಕೆಲೆ ಹಾಕಿಕೊಳ್ಳುವ ವರ್ಣನೆಯ ವೈಖರಿ ಇದು:

[1] 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು', ಪುಟ ೧೫

[2] ಅದೇ, ಪುಟ ೭೫

ಅವನು "ಒಂದೊಂದು ಸಲಕ್ಕೆ ಹಾಕಿಕೊಳ್ಳುವ ಎಲೆ ಅಡಕೆ ಎಷ್ಟು ಗೊತ್ತೆ? ಆರು ಎಲೆ, ಅರ್ಧ ಗೋಟು ಅಡಕೆ, ಮುಖಿ ಅಡಕೆ. ಆ ಅಡಕೆಯನ್ನು ಒಂದು ಕಲ್ಲಿನ ಮೇಲಿಟ್ಟು ಇನ್ನೊಂದು ಕಲ್ಲಿನಿಂದ ಶಕ್ತಿಯನ್ನೆಲ್ಲಾ ಬಿಟ್ಟು ಹೊಡೆಯುತ್ತಾನೆ. ಒಂದೆ ನಾಲ್ಕಾರು ಸುತ್ತಿಗೆಯ ಪೆಟ್ಟು ಕೊಟ್ಟ ನಂತರ ಆ ಅಡಕೆಯು ಅರ್ಧವಾಗುತ್ತದೆ. ಆ ಅರ್ಧವನ್ನು ಬಾಯಿಗೆ ಹಾಕಿಕೊಂಡು, ಕಣ್ಣನ್ನು ಮುಚ್ಚಿ ಹಲ್ಲುಗಳನ್ನು ಬಲವಾಗಿ ಕಡಿದ ಒಡನೆಯೇ ಗೆಜ್ಜುಗವನ್ನು ಒಡೆದಂತೆ ಶಬ್ದವಾಗುತ್ತದೆ. ಅವನ ಕಣ್ಣುಗುಡ್ಡೆಯು ಹಾರಿ ಹೋಯಿತೇನೋ ಎಂದು ನಮಗೆ ಅನಿಸುತ್ತದೆ....ಎಷ್ಟೋ ಸಲ ಆ ಶಬ್ದವನ್ನು ಕೇಳಿ ನಾನು ಗಾಬರಿಯಿಂದ ಸುತ್ತಲೂ ನೋಡಿದುದುಂಟು."[1]

ಜೈಲುವಕ್ಕಿಯ ಸ್ತಬ್ಧ ನೀರಸ ಜೀವನದಲ್ಲೂ ಆಗಾಗ ನಗೆಯ ಅಲೆಗಳು ಸುಳಿಯುವುದುಂಟು. ಅಂಥ ಒಂದು ಮೋಜಿನ ಪ್ರಸಂಗವೆಂದರೆ ಮೋಜಿನಿದಾರರ ಆಗಮನ. ಅವರ ವಿಚಿತ್ರ ವೇಷಭೂಷಣಗಳು, ಅವರ ಸವಾರಿ ಊರಿಗೆ ಬಂದಿದ್ದಾಗ ಉಂಟಾದ ಕೋಲಾಹಲ ಇದು: "ಹುಡುಗರೆಲ್ಲಾ ಊರುಬಾಗಿಲಿನ ಅರಳಿಮರದ ಹತ್ತಿರ ಬಂದು ನೋಡಲು ಪ್ರಾರಂಭಿಸಿದರು. ಊರುಬಾಗಿಲಿನ ತಿಪ್ಪೆಯಲ್ಲಿ ಮೂರು ಜನ ರೈತರು ಕೆಲಸ ಮಾಡುತ್ತಿದ್ದರು. ಅವರು ಗೊಬ್ಬರವನ್ನು ಗಾಡಿಗೆ ತುಂಬುತ್ತಿದ್ದರು. ಕದಗಿದ ಗೊಬ್ಬರದಿಂದ ವಾಸನೆ ಬರುತ್ತಿದ್ದಿತು.... ಅವರು ಗೊಬ್ಬರದ ಕೆಲಸವನ್ನು ಅಲ್ಲಿಗೇ ಬಿಟ್ಟು ಮೋಜಿನಿದಾರರ ಕಡೆ ನೋಡುತ್ತಾ ನಿಂತುಕೊಂಡರು. ಅವರ ಕಾಲಿನಿಂದ ಗೊಬ್ಬರದ ರಸ ಕೆಳಕ್ಕೆ ಸೋರುತ್ತಿದ್ದಿತು. ಕೆರೆಯಿಂದ ಆರು ಏಳು ಜನ ಹೆಂಗಸರು ತಲೆಗಳ ಮೇಲೆ ಗಡಿಗೆಗಳಲ್ಲಿ ನೀರು ಹೊತ್ತುಕೊಂಡು ಬರುತ್ತಿದ್ದವರು ಮೋಜಿನಿದಾರರನ್ನು ಕಂಡು, ನೋಡುತ್ತಾ ಅಲ್ಲೆ ನಿಂತರು. ಊರೊಳಗಿನಿಂದ ಗೊಬ್ಬರದ ಮಂಕರಿಗಳನ್ನು ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿದ್ದ ಐದು ಜನ ಹೆಂಗಸರು ಮಂಕರಿಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮೋಜಿನಿದಾರರನ್ನು ನೋಡುತ್ತಾ ನಿಂತುಕೊಂಡರು. ಅನೇಕ ಹೆಂಗಸರು ತಲೆಯ ಮೇಲೆ ಗಂಡಂದಿರಿಗೆ ಕುಕ್ಕೆಯಲ್ಲಿ ಬುತ್ತಿಯನ್ನೂ, ಕೈಯಲ್ಲಿ ಚೆಂಬಿನಲ್ಲಿ ನೀರನ್ನೂ ತೆಗೆದುಕೊಂಡು ಹೊರಟಿದ್ದವರು ಮುಂದಕ್ಕೆ ಹೋಗದೆ ಅಲ್ಲೇ ಮೋಜಿನಿದಾರರನ್ನು ನೋಡುತ್ತಾ ನಿಂತುಬಿಟ್ಟರು."[2] ಈ ಸ್ತಬ್ಧ ಚಿತ್ರ (still picture) 'ಪಂಚ್' ವ್ಯಂಗ್ಯಚಿತ್ರಗಳನ್ನೂ, ಚಿತ್ರಕಾರ ಹೊಗಾರ್ತ್‌ನ (Hogarth) ಅತಿರೇಕದ ಹಾಸ್ಯ ಚಿತ್ರಗಳನ್ನೂ ನೆನಪಿಗೆ ತರುತ್ತದೆ.

ಹಲವೊಮ್ಮೆ ಗೊರೂರರು ತಾವು ಟಂಕಿಸುವ ವಿಚಿತ್ರ ಅಸಂಬದ್ಧ ಹಾಸ್ಯಾಸ್ಪದ ಶಬ್ದಗಳಿಂದ ನಗೆ ಹುಟ್ಟಿಸುತ್ತಾರೆ. ಕಾಲುಸಾಬಿಯಂತೂ ನಿಘಂಟು ಬ್ರಹ್ಮ. ಅವನ ಪರಿಭಾಷೆಯಲ್ಲಿ 'ಕರ್ನಾಟ್ಕಿ ಜನ'ವೆಂದರೆ ಅವಿದ್ಯಾವಂತರು, ಹಿಂದುಗಳೆಂದರೆ ಹಿಂದುಳಿದವರು ಎಂದು ಅರ್ಥ. ಜೈಲಾಟದಲ್ಲಿ ಹರಿಶ್ಚಂದ್ರನ ಮಾತನ್ನು ಟೀಕಿಸುತ್ತಾ ಗುಂಡ,

---

[1] 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು', ಪುಟ ೧೫೬

[2] ಅದೇ, ಪುಟ ೩೦೯–೩೧೦

"ಅತಳ ವಿತಳ ರಸಾತಳ ಪಾತಾಳಾದಿಗಳು ಲೋಕಗಳಲ್ಲವೇ? ಅವುಗಳನ್ನು ಛಪ್ಪನ್ನೈವತ್ತಾರು ದೇಶಗಳು ಎಂದು ಹರಿಶ್ಚಂದ್ರನು ಹೇಳಿಬಿಟ್ಟನಲ್ಲಾ"[1] ಎಂದನು. ಸಾಹೇಬನು ಸ್ವಲ್ಪವೂ ಯೋಚಿಸದೆ "ಹಿಂದೆ ಅವು ಲೋಕಗಳಾಗಿದ್ದುವು; ಈಗ ಅವು ಛಪ್ಪನ್ನೈವತ್ತಾರು ದೇಶಗಳಾಗಿವೆ!"[2] ಎನ್ನುತ್ತಾನೆ. ನಮ್ಮೂರಿನ ರಸಿಕರಲ್ಲಿ ವ್ಯಾಕರಣ ಪಂಡಿತ ರಂಗೇಗೌಡನಂಥವರಿದ್ದರೂ, ಊರಿನ ಅಕ್ಷರಸ್ಥ ಮಹನೀಯರ ಹಸ್ತಲಿಪಿ ದೇವರಿಗೇ ಪ್ರೀತಿ. ಶಂಖಪುರದ ನರಸಿಂಹ ಜೋಯಿಸರ ರುಜು "ಪಂಕಜ ಸರೋಜಿನಿ ಸಖೀ"[3] ಆದುದೇನೂ ಆಶ್ಚರ್ಯವಲ್ಲವೆಂದರೂ ಶ್ಯಾಮಯ್ಯಂಗಾರ್ರ ಮಗ ಗುಂಡಪ್ಪನ ರುಜು "ಶವಣನ ಮಂಗ ಗುಡಪನ ಹುಂಜ"[4] ವಾದದ್ದು ಉತ್ಪ್ರೇಕ್ಷೆ ಅನಿಸಬಹುದು. ಆದರೆ ನಮ್ಮೂರಿನ ರಸಿಕರ ವಾತಾವರಣದಲ್ಲಿ ನಾವು ಒಂದು ಗಂಟೆ ಕಳೆದರೆ ಸತ್ಯಕ್ಕೂ ಉತ್ಪ್ರೇಕ್ಷೆಗೂ ಇರುವ ವ್ಯತ್ಯಾಸವನ್ನೇ ನಾವು ಮರೆತುಬಿಡಬಹುದಷ್ಟೆ.

'ಬೈಲಹಳ್ಳಿಯ ಸರ್ವೆ'ಯ ಕೊನೆಯ ಭಾಗದಲ್ಲಿ ಕೆಲವು ಮಾತುಗಳು ಬರುತ್ತವೆ. ಸರ್ವೆ ಮುಗಿದ ಮೇಲೆ ಊರಿಗೆ ಹೊರಟುಹೋದ ಮೋಜಿಣಿದಾರರು ನಾಣಿಗೆ ಬರೆದ ಕಾಗದದ ಕೊನೆಯಲ್ಲಿ ಹೀಗೆನ್ನುತ್ತಾರೆ: "ನನ್ನ ಇಷ್ಟು ವರ್ಷದ ಅನುಭವದಲ್ಲಿ ನೂರಾರು ಹಳ್ಳಿಗಳನ್ನು ನೋಡಿದ್ದೇನೆ, ಆಳಿದಿದ್ದೇನೆ. ಎಲ್ಲಾ ಕಡೆಯೂ ಒಂದೇ ಸಮ ಒಂದೇ ಗೋಳು, ಒಂದೇ ದಾರಿದ್ರ್ಯ, ಒಂದೇ ಕೊಳಕು, ಅಜ್ಞಾನ. ಬೈಲಹಳ್ಳಿಯಲ್ಲೂ ಅದೇ ಅಜ್ಞಾನ, ಅದೇ ಗೋಳು. ಆದರೆ ನಿಮ್ಮ ಉತ್ಸಾಹದಿಂದ ಆ ಗೋಳು ಸ್ವಲ್ಪ ತಲೆತಗ್ಗಿಸಿತು. ಅಳುವುದಕ್ಕೆ ಸಾವಿರ ಕಾರಣವಿದ್ದು ನಗುವುದಕ್ಕೆ ಒಂದು ಕಾರಣವಿದ್ದರೆ ಆ ಕಾರಣವನ್ನೇ ನೀವು ಬಲಪಡಿಸಿ ನಗುತ್ತಿದ್ದಿರಿ. ನೋವು ಗೋಳುಗಳ ಹಿಂದೆ ಹೊಂಚುಹಾಕುತ್ತಿರುವ ನಗೆಯನ್ನು ಹಿಡಿಯುವುದೇ ಜೀವನದ ತಿರುಳು. ಅದೇ ನಮ್ಮ ಮುಂದಲ ಉತ್ಸಾಹಕ್ಕೆ ಕಾರಣ."[5] ಸರ್ವೆ ಮಾಡಲು ಬಂದ ಮೋಜಿಣಿದಾರ ಒಂದಿಷ್ಟೂ ಹಾಸ್ಯಪ್ರವೃತ್ತಿಯಿಲ್ಲದ, ಬದುಕಿನಲ್ಲಿ ಹೆಚ್ಚು ಉತ್ಸಾಹವಿಲ್ಲದ, ಸರ್ಕಾರಿ ಅಧಿಕಾರಿ. 'ಸರ್ಕಾರಿ ಯಂತ್ರ'ವೆಂದರೂ ಸರಿ. ಆದರೆ ಹಳ್ಳಿಯ ಏರುಪೇರಿನ, ಮೂಗು ಬ್ಬಸದ ಬದುಕಿನ ಹಿನ್ನೆಲೆಯಲ್ಲಿ, ಅವನು ಬಹು ಬೇಗ ಹಣ್ಣಾಗುತ್ತಾನೆ, ಎಲ್ಲರಂತೆ ಅವನೂ ಒಬ್ಬ ಮನುಷ್ಯನಾಗುತ್ತಾನೆ. ಊರಿಗೆ ಹೋದ ಮೇಲೆ ನಾಣಿಗೆ ಬರೆದ ಪತ್ರದಲ್ಲಿ ಆತನ ಚಿತ್ರ ಸೊಗಸಾಗಿ ಪಡಿಮೂಡಿದೆ. ಆ ವಾಕ್ಯಗಳು ಗೊರೂರರ ಹಾಸ್ಯ ಸಾಹಿತ್ಯಕ್ಕೂ ಚೆನ್ನಾಗಿ ಅನ್ವಯಿಸುತ್ತವೆ. ಗೊರೂರರ ಹಾಸ್ಯ ಬದುಕಿನ ವಾಸ್ತವ ಘೋರ ಸತ್ಯಕ್ಕೆ ಬೆನ್ನು ತಿರುಗಿಸುವ ಪಲಾಯನ ವಾದದಿಂದ ಹುಟ್ಟಿದುದಲ್ಲ, 'ಅಳು

---

1 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು' ಪುಟ ೧೪೯

2 ಅಲ್ಲೇ,

3 ಅದೇ, ಪುಟ ೨೨೧

4 ಅದೇ, ಪುಟ ೨೨೧–೨೨೨

5 ಅದೇ, ಪುಟ ೩೮೮

ಸುಗ್ಗಿ ನಗು ಒನ್ಸ್ಕ್' ಎಸ್ಸ್ಕಿನ ಅಂತಃಕರಣ ಕಾವ್ಯಮಯ ಸಹಜ ವ್ಯಕ್ತಿಯಿಂದ ರೂಪ ಪಡೆದವು. ಶಾಸ್ತ್ರಿಯವರು ಹೇಳುವಂತೆ ಗೊರೂರರ ಹಾಸ್ಯ “ಕೋಟಲೆಯ ಸಾರುವ ವ್ಯವಹಾರದ ನಿಲುವಿನಿಂದ ನಮ್ಮ ಮನಸ್ಸು ಬೇರೆ ವಿಷಯದಲ್ಲಿ ಹೊಸದಾದ ನಿಲುವಿಗೆ ತಿರುಗು”[1]ವಂತೆ ಮಾಡುತ್ತದೆ.

ವೊಡೆನಿವಾತರು ಜ್ಬಿಲುಹಳ್ಳಿಯನ್ನು ‘ಸಮೇ’ ಮಾಡಿಕೊಂಡು ಹೇಳುವಂತೆ ಇದ ತ್ತಿನ ಪ್ರಪಂಚದಲ್ಲಿ ವಿಜ್ಞಾನವು ಲೋಕದ ಸರ್ವಸ್ವವನ್ನು ಅಳೆದು, ತರ್ಕವಾದಿ ಗ್ರಹಿಸಿ, ಅರ್ಥ ಕಂಡುಹಿಡಿಯಲು ಯತ್ನಿಸುತ್ತಿದೆ. ಆದರೆ ಮನುಷ್ಯ ಸ್ವಭಾವದ ನೂರೆಂಟು ಹಾಸ್ಯಾಸ್ಪದ ವೈಚಿತ್ರ್ಯಗಳು ವಿಜ್ಞಾನದ ಲೆಕ್ಕಾಚಾರಕ್ಕೆ ಸಿಕ್ಕದೆ. ನಗುವಿನ ಕೊಂಡು ಅವ್ಯಕ್ತ ಮೌಲ್ಯಗಳಾಗಿ ಉಳಿದು ತಾತ್ವಿಕ ಚಿಂತನೆಗೆ ಗ್ರಾಸ ಒದಗಿಸ ಬಹುದು. ಅಂಥ ಅವ್ಯಕ್ತ ಮೌಲ್ಯಗಳತ್ತ ನಮ್ಮ ಚಿಂತನೆಯನ್ನು ತಿರುಗಿಸುವ ನಗೆ ತನ್ನ ಉಪಯುಕ್ತತೆಯನ್ನು ಎಂದೆಂದಿಗೂ ಕಳೆದುಕೊಳ್ಳುವುದಿಲ್ಲ.

[1] ‘ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು’ ಮುನ್ನುಡಿ, ಪುಟ ೪

ಗೊರೂರರ ಕೃತಿಗಳಲ್ಲಿ ಗ್ರಾಮಜೀವನ

ಸುಧಾಕರ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕೃತಿಗಳು ಕನ್ನಡ ನವೋದಯ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ—ವಸ್ತುವಿನ ಆಯ್ಕೆಯಲ್ಲೂ ಅಷ್ಟೆ; ಬರವಣಿಗೆಯ ಧಾಟಿಯಲ್ಲೂ ಅಷ್ಟೆ. ಆದರೂ ಅವರ ಕೃತಿಗಳ ಬಗ್ಗೆ ನಡೆಯಬೇಕಾದಷ್ಟು ವಿಚಾರವಿಮರ್ಶೆ ನಡೆದಿಲ್ಲ; ಅವು ಒಂದು ರೀತಿಯ ಅವಜ್ಞೆಗೆ ಒಳಗಾಗಿವೆ ಎಂದರೂ ಒಪ್ಪುತ್ತದೆ. 'ನಡೆದು ಬಂದ ದಾರಿ'ಯಲ್ಲಿ ಕುರ್ತಕೋಟಿಯವರು ಅಡ್ಡೇಟಿಗೆ ಒಂದು ಗುಡ್ಡೇಟು ಎನ್ನುವಂತೆ ತೇಲಿಸಿ ಒಂದೆರಡು ಮಾತಾಡಿದ್ದಾರೆಯೇ ಹೊರತು ಅವರ ಸಮಗ್ರ ಕೃತಿಗಳ ಆಳವಾದ ವಿವೇಚನೆಯನ್ನು ನಡೆಸಿಲ್ಲ. ಉದಾಹರಣೆಗೆ, ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯುಳ್ಳ, ಸುಮಾರು ಎಂಟುನೂರು ಪುಟಗಳಷ್ಟು ಹರವುಳ್ಳ 'ಮೆರವಣಿಗೆ' ಎಂಬ ಕಾದಂಬರಿಯನ್ನು ಕಾಟಾಚಾರಕ್ಕೆ ಹೆಸರಿಸಿ ಕೈತೊಳೆದು ಕೊಂಡಿದ್ದಾರೆಯೇ ಹೊರತು, ಅದರ ವಸ್ತುವಿನ್ಯಾಸದ ಬಗ್ಗೆ, ಗುಣವಿಶೇಷ ಅಥವಾ ಲೋಪದೋಷಗಳ ಬಗ್ಗೆ ಚಕಾರವೆತ್ತಿಲ್ಲ. ಅಷ್ಟೇ ಅಲ್ಲದೆ ಗ್ರಾಮಜೀವನದ ಸಮಗ್ರ ಮುಖಗಳನ್ನು—ಮುಖ್ಯವಾಗಿ ಸಂಸ್ಕೃತಿ ಮುಖವನ್ನು—ಅವರ ಕೃತಿಗಳು ಹೇಗೆ ಪ್ರತಿಬಿಂಬಿಸುತ್ತವೆ; ಜಾನಪದ ಸತ್ತ್ವವನ್ನು ಹೇಗೆ ಮೈದುಂಬಿಕೊಂಡಿವೆ; ದೈನಂದಿನ ಜೀವನದ ಸಾಮಾನ್ಯ ಘಟನೆಗಳ ವಿವರದಲ್ಲಿಯೇ ಹೇಗೆ ಸಹಜ ಹಾಸ್ಯದ ಚಿಲುಮೆಯನ್ನು ಗರ್ಭೀಕರಿಸಿಕೊಂಡು ಪುಟಿಸುತ್ತವೆ; ಹೇಗೆ ಅವರ ಭಾಷಾಶೈಲಿ ಬನಿ-ತನಿಯುಳ್ಳ ವಿಶಿಷ್ಟವರ್ಗದ್ದು—ಇತ್ಯಾದಿಗಳ ಬಗ್ಗೆ ಹೆಚ್ಚಿಗೆ ಹೇಳುವ ಗೋಜಿಗೆ ಹೋಗಿಲ್ಲ.

ನಗರ ಜೀವನ ಚಿತ್ರಣದ ಕಥೆಕಾದಂಬರಿಗಳೇ ನವ್ಯ ಎಂಬ ತಪ್ಪು ಗ್ರಹಿಕೆ ತಾಂಡವ ವಾಡುತ್ತಿರುವ ಪ್ರಸ್ತುತ ಸಮಯದಲ್ಲಿ ಹಳ್ಳಿಗಾಡಿನ ಜೀವನವನ್ನು ಕುರಿತ ಗೊರೂರರ

ಕೃತಿಗಳು ಅವರ ಅವಜ್ಞೆಗಳಿಗೆ ಗುರಿಯಾದುದರಲ್ಲಿ ಆಶ್ಚರ್ಯವಿಲ್ಲ. ಗ್ರಾಮಜೀವನದ ವಸ್ತು, ಅದನ್ನುಸರಿಸಿದ ಶೈಲಿ ಎಂದಾಕ್ಷಣವೇ ಮೂಗು ಮುರಿಯುವ ಮಾತಿನಂತ ನಮ್ಮ ವಿಮರ್ಶಕವರೇಣ್ಯರ ಹಾಸ್ಯಾಸ್ಪದ ಆರೋಪಗಳ ಮಧ್ಯೆಯೂ ಗೊರೂರರಂಥವರು ತಮ್ಮ ಕೆಲಸವನ್ನು ತಾವು ಮೌನವಾಗಿ ಮಾಡಿಕೊಂಡು ಬಂದದ್ದು, ಬರುತ್ತಿರುವುದು ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸುವುದರಲ್ಲಿ ಅವರಿಗಿರುವ ಆಸಕ್ತಿಯನ್ನು ಸೂಚಿಸುತ್ತದೆ. ಏಕೆಂದರೆ ಯಾವುದೇ ಸಾಹಿತ್ಯ ಶ್ರೀಮಂತವಾಗಬೇಕಾದರೆ ನಗರ ಜೀವನ, ಗ್ರಾಮ ಜೀವನ ಎಂಬ ತಾರತಮ್ಯವಿಲ್ಲದೆ ಎಲ್ಲ ಕ್ಷೇತ್ರಗಳ ಅನುಭವವೂ ಚಿತ್ರಣಗೊಳ್ಳಬೇಕು. ಅದರಲ್ಲೂ ಭಾರತದಲ್ಲಿ ಗ್ರಾಮಜೀವನಕ್ಕೆ ಹೆಚ್ಚು ನಿಗಾ ಕೊಡಬೇಕಾದದ್ದು ಅನಿವಾರ್ಯ ಅಂಶ. ಕಾರಣ, ಭಾರತವೆಂದರೆ ಬಹುತೇಕ ಗ್ರಾಮಭಾರತ. ಆದ್ದರಿಂದ ಯಥೇಚ್ಛವಾಗಿ ತಾಯಿಬೇರಿನಂತಿರುವ ಗ್ರಾಮಜೀವನವನ್ನು ವಸ್ತುವಾಗುಳ್ಳ ಸಾಹಿತ್ಯ ಸೃಷ್ಟಿಯಾಗಬೇಕು. ಆದರೆ ಗ್ರಾಮಜೀವನದ ಒಳಹೊರಗುಗಳನ್ನು ಆಳ ಅಗಲಗಳನ್ನು ಬಲ್ಲ ಅಥವಾ ಹತ್ತಿರದಿಂದ ಆತ್ಮೀಯವಾಗಿ ನೋಡಿದ, ಅವರ ನಡುವೆಯೇ ಬಾಳಿದ, ಕಷ್ಟಸುಖಗಳನ್ನು ಅನುಭವಿಸಿದ ಲೇಖಕರಿಂದ ಸತ್ವಯುತವಾದ ಸಾಹಿತ್ಯ ಸೃಷ್ಟಿಯಾಗಬಹುದೇ ವಿನಾ ನಗರದಲ್ಲಿ ನಾಲ್ಕು ಗೋಡೆಯ ನಡುವಿನ ಕೊಠಡಿಯಲ್ಲಿ ಕುಳಿತು ಗ್ರಾಮಜೀವನಾನುಭವದ ಗಂಧವೇ ಇಲ್ಲದೆ ಬರೆಯಲು ಹೊರಟರೆ ಅದು ನಿರ್ಜೀವವಾಗೂ ಕೃತಕವಾಗುವುದರಲ್ಲಿ ಸಂದೇಹವಿಲ್ಲ. ಉದಾಹರಣೆಗೆ ಗ್ರಾಮಜೀವನವನ್ನು ಕುರಿತ ಅನಕೃ ಅವರ ಕಾದಂಬರಿಗಳು ಪ್ರತ್ಯಕ್ಷಾನುಭವದ ಪ್ರಖರತೆಯಿಲ್ಲದೆ, ನೆಲದ ಸೊಗಡಿಲ್ಲದೆ ರಸದ ಬಟ್ಟೆಯಂತೆ ಪೇಲವವಾಗಿರುವುದನ್ನು ಕಾಣಬಹುದು. ಅದೇ ಕುವೆಂಪು, ಕಾರಂತ ಇವರ ಸಾಹಿತ್ಯ ಸಜೀವವಾಗಿರಲು ಕಾರಣ, ಗ್ರಾಮಜೀವನದ ಪ್ರತ್ಯಕ್ಷಾನುಭವದ ದಟ್ಟ ಪ್ರಭಾವದಿಂದ ಗಟ್ಟಿಯಾಗಿರುವುದು.

ರಾಮಸ್ವಾಮಿ ಅಯ್ಯಂಗಾರರು ಹಳ್ಳಿಯಲ್ಲೇ ನೆಲಸಿರುವವರು; ಅಲ್ಲಿಯೇ ಬೆಳೆದವರು; ಹಳ್ಳಿಯ ಹತ್ತಾರು ಸಮಸ್ಯೆಗಳನ್ನು ಬಲ್ಲವರು. ಪ್ರಕೃತಿ ಪ್ರಾಣಿಪ್ರಪಂಚದ ನಿಕಟ ಪರಿಚಯವನ್ನು ಉಳ್ಳವರು. ಮಳೆ-ಬೆಳೆ, ನದಿ-ಬೆಟ್ಟ, ಕೆರೆ-ನೆರೆ, ತೇರು-ಪರಿಷೆ, ಹಬ್ಬ-ಹರಿದಿನ, ಬಯಲಾಟ-ಕೋಲಾಟ, ಸೂತ್ರದ ಬೊಂಬೆ-ತೊಗಲು ಬೊಂಬೆಯಾಟ—ಇಂಥ ಹತ್ತಾರನ್ನು ಕಂಡವರು; ಉಂಡವರು; ಕೊಂಡವರು. ಈ ಎಲ್ಲದರ ಪರಿಣಾಮವಾಗಿ ತಮ್ಮ ಸಾಹಿತ್ಯ ಕೃತಿಗಳ ಮುಖಾಂತರ ಉಳಿದವರಿಗೆ ಕೊಡುವ ತಾಕತ್ತನ್ನು ಪಡೆದುಕೊಂಡವರು. ಅವರನ್ನು ನೋಡಿದ ಯಾರಿಗಾದರೂ ಇವರೊಬ್ಬ ಲೇಖಕರು ಎನ್ನಿಸುವುದಕ್ಕಿಂತ ಒಬ್ಬ ಹಳ್ಳಿಯ ರೈತನನ್ನು ನೋಡಿದ ಭಾವನೆ ಬರುತ್ತದೆ. ಅಷ್ಟು ಸರಳ ನಡೆಯಲ್ಲಿ; ಅಷ್ಟು ಸಹಜ ನುಡಿಯಲ್ಲಿ. ಬಹುಶಃ ನಮ್ಮ ಲೇಖಕರು ವೇಷದಲ್ಲಿಲ್ಲದಿದ್ದರೂ ನಡೆನುಡಿ ಮನೋಧರ್ಮದಲ್ಲಾದರೂ ರೈತಗುಣವನ್ನು ರಕ್ತಗತ ಮಾಡಿಕೊಂಡರೆ ಹಳ್ಳಿಯ ಸಾಹಿತ್ಯವನ್ನು ನೀಡದಿದ್ದರೂ ಹಳ್ಳಿಯ ಬದುಕನ್ನು-ಅನುಕರಣ ಅಥವಾ ಸೋಗಿನ ಬದುಕನ್ನು ಬಿಟ್ಟು ಪ್ರಾಮಾಣಿಕ ಸಹಜ ಬದುಕನ್ನು-

ಬದುಕಬಲ್ಲರು ಎನ್ನಿಸುತ್ತದೆ, ಗೊರೂರರಂಥವರನ್ನು ಕಂಡಾಗಲೆಲ್ಲ. ಆದ್ದರಿಂದಲೇ ಅವರ ಸಾಹಿತ್ಯವೂ ಸಹ ಸೋಗಿನದಲ್ಲ; ಅನುಕರಣವಲ್ಲ; ಸಹಜವಾದದ್ದು ; ಸರಸವಾದದ್ದು ; ನಮ್ಮ ನೆಲದ ಸಂಸ್ಕೃತಿಯು ಕೆನೆಯಂತೆ ಇರುವಂಥದು.

'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು', 'ಹಳ್ಳಿಯ ಹಾಡುಗಳು', 'ಬೈಲಹಳ್ಳಿ ಸರ್ವೆ', 'ಗರುಡಗಂಬದ ದಾಸಯ್ಯ', 'ಹಳ್ಳಿಯ ಬಾಳು', 'ಬೆಸ್ತರ ಕರಿಯ', 'ಶಿವರಾತ್ರಿ', 'ಮೆರವಣಿಗೆ', 'ಪುನರ್ಜನ್ಮ'. 'ಕನ್ಯಾರ ವೀರಭದ್ರಾಚಾರಿ', 'ಊಸಬು', 'ಗೋಪುರದ ಬಾಗಿಲು', 'ಹೇಮಾವತಿಯ ತೀರದಲ್ಲಿ' ಮೊದಲಾದ ಗೊರೂರರ ಕೃತಿಗಳು ಗ್ರಾಮಜೀವನ ಚಿತ್ರಣಕ್ಕೆ ಮೀಸಲಾದಂಥವು. ತಮ್ಮೆಲ್ಲ ಕೃತಿಗಳಲ್ಲೂ ಗ್ರಾಮಜೀವನದ ನೂರೆಂಟು ಮುಖಗಳನ್ನು ಚಿತ್ರಿಸಿದ್ದರೂ ಅವರ ಮುಖ್ಯ ಕಾಳಜಿ ಇರುವುದು ಅದರ ಸಂಸ್ಕೃತಿಯ ಮುಖವನ್ನು ಚಿತ್ರಿಸುವುದರಲ್ಲಿ:

> ಜಗಲಿಗಳ ಮೇಲೆ ಮಹಿಳೆಯರು ಕುಳಿತುಕೊಂಡು ಚರ್ಚಿಸುತ್ತಿದ್ದರು. ಉಪಾಧ್ಯಾಯರು ತಿರುಗಾಡಲು ಹೋಗಿದ್ದವರು ಬಂದುದನ್ನು ಕಂಡು, ಚಿಕ್ಕವಯಸ್ಸಿನ ಮಹಿಳೆಯರು ಎದ್ದು ನಿಂತರು ; ಸ್ವಲ್ಪ ವಯಸ್ಸಾಗಿದ್ದವರು ನೀಡಿದ ಕಾಲುಗಳನ್ನು ಮುದುರಿಕೊಂಡರು. ಆದರೂ ಅದೊಂದೂ ಉಪಾಧ್ಯಾಯರಿಗೆ ಕತ್ತಲೆಯಲ್ಲಿ ಕಾಣಲಿಲ್ಲ. ಅವರು ಕಾಣುತ್ತಾರೆಂದುಕೊಂಡೂ ಸ್ತ್ರೀಯರು ಹಾಗೆ ಮಾಡಲಿಲ್ಲ. ಪುರುಷರು ಬೀದಿಯಲ್ಲಿ ಹೋಗುತ್ತಿದ್ದರೆ ಅವರು ಹೀಗೆ ನಡೆದುಕೊಳ್ಳುವುದು ಅವರ ಸ್ವಭಾವವಾಗಿತ್ತು.[1]

ಇಲ್ಲಿ ಗೊರೂರರು ಗ್ರಾಮೀಣ ಸಂಸ್ಕೃತಿಯನ್ನು ಸಾಮಾನ್ಯ ಸಂಗತಿಯೊಂದರ ಮೂಲಕ ದಿಗ್ದರ್ಶಿಸಿರುವುದನ್ನು ಕಾಣಬಹುದು. ಗ್ರಾಮಜೀವನದ ಆಳವಾದ ಅನುಭವವಿಲ್ಲದವರು ಇಂಥ ಚಿತ್ರವನ್ನು ಕೊಡಲು ಸಾಧ್ಯವಾಗುವುದಿಲ್ಲ :

> ಒಂದೊಂದು ಸಮಯದಲ್ಲಿ ರೈತರಿಗೆ ಹೆಚ್ಚು ಕಿರುಕುಳ ಈ ಶ್ಯಾನುಭೋಗರಿಂದಲೋ ಅಥವಾ ಅಧಿಕಾರಿಗಳಿಂದಲೋ ಎಂದು ರೈತರಿಗೆ ಗಾಬರಿಯಾಗುತ್ತದೆ. ಇಂತಹ ಶ್ಯಾನುಭೋಗರು ಅಧಿಕಾರಿಗಳ ಮುಂದೆ ನವರಸ ನಾಟಕವನ್ನು ಪ್ರದರ್ಶಿಸುತ್ತಾರೆ. ಕುಳವಾಡಿಗಳ ಮೇಲೆ ಜೋರು ಮಾಡುತ್ತಾರೆ. ಕಂದಾಯ ಬಾಕಿ ಸಿಕ್ಕಿಸಿಕೊಂಡಿರುವ ರೈತನ ಮುಂದೆ ರುದ್ರರಾಗುತ್ತಾರೆ. ಗಂಡ ಸತ್ತವಳ ಹಸುವನ್ನು ಕಂದಾಯದ ಬಾಕಿಗಾಗಿ ಹಿಡಿಯಬೇಕೆಂದು ಅಮಲ್ದಾರರು ಘರ್ಜಿಸಿದಾಗ ಅವಳ ಸ್ಥಿತಿಗತಿಗಳನ್ನು ಅವಳಿಗಿಂತ ಕರುಣಾಜನಕವಾಗಿ ಮಾತನಾಡಿ ಅಮಲ್ದಾರರಿಂದ ವಾಯಿದೆ ಕೊಡಿಸುತ್ತಾರೆ.[2]

ಇಲ್ಲಿ ಶ್ಯಾನುಭೋಗನ ವ್ಯವಹಾರ ಕೌಶಲ್ಯವನ್ನು, ಕಿಲಾಡಿತನವನ್ನು, ಜೊತೆಗೇ

---

1 'ಮೆರವಣಿಗೆ' ಪುಟ ೧೮೦

2 ಅದೇ, ಪುಟ ೪

ತನ್ನಲ್ಲಿ ಸುಮ್ಮಕ್ಕೆ ಕಾರಣರಾದ ಜನರ ಕಷ್ಟವನ್ನು ಸಕಾಲದಲ್ಲಿ ಅರಿತುಕೊಳ್ಳುವ ಜಾಣನ ನಾಟಕವನ್ನು ಚೆನ್ನಾಗಿ ಅರಿತು ನಿರೂಪಿಸಿದ್ದಾರೆ:

> ಹಳ್ಳಿಗಳಿಗೆ ಶ್ಯಾನುಭೋಗನೇ ದಣಿ. ಅವನಿಗೆ ತಿಳಿದ ತಾಯಿ ಎಂದು ಹೆಸರು. ಗ್ರಾಮಕ್ಕೆ ಸಂಬಂಧಪಟ್ಟ ವಿಚಾರಗಳು ಅವನಿಗೆ ತಿಳಿಯದವು ಯಾವೂ ಇಲ್ಲ. ಅವನ ಹಳೆಯ ಕಾಗದದಲ್ಲಿ ಅಡಕವಾಗಿರುವ ಹಳ್ಳಿಯ ಸಮಾಚಾರಗಳು ಸರ್ಕಾರದ ಯಾವ ರೆಕಾರ್ಡಿನಲ್ಲೂ ಇಲ್ಲ. ಅವನ ಹಳೆಯ ಕಾಗದಗಳಲ್ಲಿ ಕೂಡ ಇಲ್ಲದ ಅನೇಕ ವಿಚಾರಗಳು ಅವನ ಜ್ಞಾಪಕಶಕ್ತಿಯಲ್ಲಿ ಅಡಕವಾಗಿರುತ್ತವೆ. ಹಳ್ಳಿಗೆ ಅವನೇ ವಿಶ್ವಕೋಶ.... ಅನೇಕ ಹಳ್ಳಿಗಳಲ್ಲಿ ಗಂಡಹೆಂಡಿರ, ತಂದೆಮಕ್ಕಳ, ಅಣ್ಣತಮ್ಮಂದಿರ ಯಾವ ವ್ಯಾಜ್ಯವೂ ಶ್ಯಾನುಭೋಗನಿಲ್ಲದೆ ತೀರ್ಮಾನವಾಗುವುದಿಲ್ಲ. ಏಕೆಂದರೆ ತನ್ನ ವಿಚಾರದಲ್ಲಿ ಅವನಿಗೆ ತಿಳಿಯದ ಅನೇಕ ವಿಷಯಗಳು ಶ್ಯಾನುಭೋಗನಿಗೆ ತಿಳಿದಿರುತ್ತವೆ[1].

ಗ್ರಾಮಜೀವನದಲ್ಲಿ ಶ್ಯಾನುಭೋಗನ ಸ್ಥಾನವೇನು? ಅವನಿಲ್ಲದೆ ಹಳ್ಳಿಯ ವ್ಯವಹಾರದ ಮುನ್ನಡೆ ಹೇಗೆ ಅಸಾಧ್ಯ ಎಂಬುದನ್ನು ಮೇಲಿನ ವಿವರ ತಿಳಿಸುತ್ತದೆ. ಇದು ಇನ್ನೂ ಕ್ರಿಯಾತ್ಮಕವಾಗಿ 'ಮೆರವಣಿಗೆ' ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಮಂತ್ರಿಗಳಿಗಾಗಿ ಚಪ್ಪರ ಹಾಕಿಸಲು ಶೇಕದಾರರು ಅಮಲ್ದಾರರು ಮಲ್ಲಿಗೆಹಳ್ಳಿಗೆ ಬಂದು ತಿಪ್ಪರಲಾಗ ಹಾಕಿದರೂ ಜಪ್ಪಯ್ಯ ಅನ್ನದ ಜನ, ಶ್ಯಾನುಭೋಗ ಹುಂ ಎಂದಾಕ್ಷಣವೇ ರಾತ್ರೋರಾತ್ರಿ ಚಪ್ಪರ ಹಾಕುವುದು ಶ್ಯಾನುಭೋಗ ಗ್ರಾಮದಲ್ಲಿ ಎಷ್ಟು ಗಟ್ಟಿಗ. ಖದೀಮ ಎಂಬುದನ್ನು ಸೂಚಿಸುತ್ತದೆ.

> ಶ್ಯಾನುಭೋಗನೆಂದರೆ ಒಂದು ಬಡಪ್ರಾಣಿ. ಅವನು ಹಳ್ಳಿಯ ಬಾಗಿಲಿಗೆ ಕಂದಾಯ ವಸೂಲ್ಮಾಡಲು ಹೋದಕೂಡಲೇ ಮೊದಲು ಅವನನ್ನು ನಾಯಿಗಳು ಹಿಡಿಸಿಕೊಂಡು ಬಗುಳುತ್ತಾ ಸ್ವಾಗತಿಸುತ್ತವೆ. ಹೋದಮೇಲೆ ಆ ಚಾವಡಿಯಲ್ಲಿ ಬಿದ್ದಿರುವ ಒಂದು ಬಂಡಿ ಕಸವನ್ನು ಅತ್ತ ಕಾಲಿನಿಂದಲೋ ಕೈಯಿಂದಲೋ ತಾನೇ ಗುಡಿಸಿಕೊಂಡು ಒಂದು ಚಾಪೆ ಬೇಡಲು ಪ್ರಾರಂಭಿಸುತ್ತಾನೆ. ಅರ್ಧ ಘಂಟೆ ಗದ್ದಲ ಮಾಡಿದ ಮೇಲೆ, ಅರೆಗು ಹರಿದ ಜಲ್ಲುಜಲ್ಲಾದ ಒಂದು ಹರಕು ಚಾಪೆ ದೊರೆಯುತ್ತದೆ. ಅದರ ಮೇಲೆ ಅವನು ಕುಳಿತುಕೊಂಡ ಕೂಡಲೇ ಸುತ್ತಾ ಗ್ರಾಮದ ಮುಖಂಡರೆಲ್ಲಾ ಬಂದು ಬೀಡಿ ಸೇದುತ್ತಾ ಹೊಗೆಸೊಪ್ಪು ಎಲೆಯಡಿಕೆ ಅಗಿಯುತ್ತಾ ಕುಳಿತುಬಿಡುತ್ತಾರೆ. ಒಬ್ಬನು ಶ್ಯಾನುಭೋಗನ ಮುಖಕ್ಕೆ ಹೊಗೆ ಬಿಡುತ್ತಾನೆ. ಶ್ಯಾನುಭೋಗ ಸಂಚಿಯ ಸರಗಿಸಿದ ಹೊಗೆಯನ್ನು ಓಡಿಸುತ್ತಾನೆ. ಒಬ್ಬ ಎಲೆ ಅಡಿಕೆ ಹಾಕಿಕೊಂಡು ಹೊಗೆಸೊಪ್ಪು ಅಗಿಯುತ್ತಿರುವವನು ಪಿತೃಗಳಿಗೆ ಪಿಂಡವನ್ನು

1 'ಗರುಡಗಂಬದ ದಾಸಯ್ಯ', ಪುಟ ೮೭

ಕೊಡುವ ವೀರಾಸನದಲ್ಲಿ ಕುಳಿತು ತುಟಿಯ ಮೇಲೆ ಎರಡು ಬೆರಳಿಟ್ಟು ಅದರ ನಡುವಿನಿಂದ ಕೆಂಪು ರಸವನ್ನು ಪಿಚಕಾರಿಯಿಂದ ಬಿಡುವಂತೆ ಹೊರಕ್ಕೆ ಬಿಡುತ್ತಾನೆ. ಅದರ ತುಂತುರು ಹಾರಿದ ಶ್ಯಾನುಭೋಗ ಅವನ್ನು ಬಟ್ಟೆಯಿಂದ ಒರಸಿಕೊಳ್ಳುತ್ತಾನೆ.[1]

ಕಂದಾಯ ವಸೂಲಿಗಾಗಿ ಚಾವಡಿಗೆ ಶ್ಯಾನುಭೋಗ ಬಂದಾಗಿನ ಈ ವರ್ಣನೆ ನೈಜವಾದದ್ದು. ಗ್ರಾಮಜೀವನದಲ್ಲಿ ಸಾಧು ಜಡ ಶ್ಯಾನುಭೋಗನ ಅವಸ್ಥೆಯನ್ನು ಅನುಭವಕ್ಕೆ ತರುವಂಥದು. ಅಷ್ಟೇ ಅಲ್ಲದೆ ರೈತರ ತೆವಲು ಸ್ವಭಾವಗಳ ಚಿತ್ರವನ್ನು ನೀಡುವಂಥದು.

ಅಲ್ಲಿ ನೆರೆಯುವ ವಿದ್ವಾಂಸರೆಲ್ಲ ಸರಸ್ವತಿಯ ಅವತಾರಗಳೇ. ಒಬ್ಬನು ನಿಶಾಕ್ಷರಿ, ಒಬ್ಬನು ಹತಾಕ್ಷರಿ, ಒಬ್ಬನು ಅಕ್ಷರಲಂಬಕ, ಒಬ್ಬನು ಅಕ್ಷರ ಹಿಂಸಕ, ಇನ್ನೊಬ್ಬನು ಅಕ್ಷರ ಭಕ್ಷಕ. ಯಾರ ಬಾಯಲ್ಲೂ ಮಾತುಗಳು ಸರಿಯಾಗಿ ಹೊರಡುವುದಿಲ್ಲ. ಒಬ್ಬನ ಕೈಯಲ್ಲಿ ರುಜು ಹಾಕು ಎಂದು ಕಡ್ಡಿ ಕೊಟ್ಟರೆ ತೀರಿತು. ಮುಖವನ್ನು ವಿಕಾರ ಮಾಡಿಕೊಂಡು ಕಾಗದ ಹರಿಯುವಂತೆ ಕಡ್ಡಿಯಿಂದ ಸದ್ದು ಮಾಡುತ್ತಾ ರೊಯ್ ಶಬ್ದ ಹೊರಡಿಸುತ್ತಾನೆ.[2]

ಮೇಲಿನ ಚಿತ್ರಣ ಹಳ್ಳಿಯ ಅವಿದ್ಯೆ ಅಜ್ಞಾನಗಳನ್ನು ಲೇವಡಿ ಮಾಡಿದಂತೆ ಮೇಲು ನೋಟಕ್ಕೆ ತೋರಿದರೂ ಅವಿದ್ಯೆ ಅಜ್ಞಾನ ತಾಂಡವವಾಡುತ್ತಿರುವ ಗ್ರಾಮೀಣ ಜನರ ಬಗ್ಗೆ ಮುಖ್ಯವಾಗಿ ವ್ಯಕ್ತವಾಗಿರುವಂಥದು, ಲೇಖಕರ ಅನುಕಂಪೆ ಎಂಬುದು ಸತ್ಯ.

ಹೀಗೆಯೇ ಹಳ್ಳಿಯವರ ಬಡತನವನ್ನು—ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಎಂಬ ದಾರುಣ ಸ್ಥಿತಿಯನ್ನು—ಗೊರೂರರು 'ಮೆರೆವಣಿಗೆ' ಕಾದಂಬರಿಯಲ್ಲಿ ತುಂಬ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಹಳ್ಳಿಯಲ್ಲಿ ಸರ್ಕಾರದವರಿಂದ ಏರ್ಪಾಡಾಗಿದ್ದ ಜೇಬಿ ಷೋಗೆ ಮಕ್ಕಳನ್ನು ಕರೆದುಕೊಂಡು ಬಂದು ಅಮಲ್ದಾರ್ ಸಾಹೇಬರಿಂದ ಬಹುಮಾನ ಈಸಿಕೊಳ್ಳಲು ಯಾವ ತಾಯಂದಿರೂ ಮುಂದೆ ಬರದಿದ್ದುದರಿಂದ ತಳವಾರನೇ ಮನೆಮನೆಗೂ ಹೋಗಿ ಹೊರಡಿಸಲು ಪ್ರಯತ್ನಿಸುತ್ತಾನೆ. ಆಗ ಒಬ್ಬಾಕೆ "ಮಗುವಿಗೆ ಹಾಕೋಕೆ ಅಂಗಿ ಇಲ್ಲ. ನೀನೇ ಕರಕೊಂಡು ಹೋಗು"[3] ಎನ್ನುತ್ತಾಳೆ. ಆಕೆಯ ಮಾತಿನ ಮುಖಾಂತರ ಗೊರೂರರು ಗ್ರಾಮಜೀವನದಲ್ಲಿ ತಾಂಡವವಾಡುತ್ತಿರುವ ಕಡುಬಡತನವನ್ನು ಕಣ್ಣೆದುರು ನಿಲ್ಲಿಸುತ್ತಾರೆ.

ಗ್ರಾಮಗಳಲ್ಲಿರುವ ಶಾಲೆಗಳು ಹೇಗೆ ನಡೆಯುತ್ತವೆ; ವಿದ್ಯಾಭ್ಯಾಸ ಎಷ್ಟು ಭರ್ಜರಿಯಾಗಿ ಪ್ರಸಾರವಾಗುತ್ತದೆ ಎಂಬುದನ್ನು 'ಮೆರೆವಣಿಗೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ

---

1 'ಮೆರೆವಣಿಗೆ', ಪುಟ ೭

2 'ಮೆರೆವಣಿಗೆ', ಪುಟ ೭

3 ಅದೇ, ಪುಟ ೬೮

—ತಿಪ್ಪಜ್ಜಿ ಉಪಾಧ್ಯಾಯಿನಿ ಪಾತ್ರದ ಮುಖಾಂತರ. ಆ ಉಪಾಧ್ಯಾಯ ರಜಾ ಚೀಟಿ ಬರೆದು ರಿಜಿಸ್ಟರ್‌ನಲ್ಲಿಟ್ಟು ತನ್ನ ಗೃಹಕೃತ್ಯ ಸಂಬಂಧವಾದ ಕೆಲಸಕಾರ್ಯಗಳಿಗೆ ಪಟ್ಟಣಕ್ಕೆ ಹೋಗುತ್ತಾನೆ. ಸಂಜೆ ಹಿಂದಿರುಗಿ ಬಂದಾಗ ಇನ್‌ಸ್ಪೆಕ್ಟರ್ ಬಾರದೂ ಬಂದಿಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡು ರಜೆ ಚೀಟಿ ಹರಿದುಹಾಕಿ ರುಜು ಹಾಕುತ್ತಾನೆ. ಇತ್ಯಾದಿ ಮಾಡುತ್ತಿರುತ್ತಾನೆ. ಅವನು ಎಷ್ಟು ದಿನ ತರಗತಿಗಳಲ್ಲಿ ಪಾಠ ಮಾಡುತ್ತಾನೆ ಎನ್ನುವುದಕ್ಕಿಂತ ಎಷ್ಟು ದಿನ ಶಾಲೆಯ ಬಾಗಿಲು ತೆಗೆಯುತ್ತಾನೆ ಎಂದು ಹೇಳುವುದೂ ಕಷ್ಟ. ಇದು ಕೇವಲ ಮಲ್ಲಿಗೆಹಳ್ಳಿಯೊಂದರ ಶಾಲಾಸ್ಥಿತಿಯಲ್ಲ: ಸಾಮಾನ್ಯವಾಗಿ ಸರ್ವ ಗ್ರಾಮಗಳ ಶಾಲಾಸ್ಥಿತಿ. ಇದು ಹೋದ ಹೊರತು ಗ್ರಾಮಾಂತರ ಪ್ರದೇಶದ ವಿದ್ಯಾಭ್ಯಾಸ ಬರೀ ನಾಟಕ: ಗ್ರಾಮೋದ್ಧಾರ ಬರೀ ಬಾಯಿ ಮಾತು ಎಂಬುದನ್ನು ಈ ಚಿತ್ರಣದ ಮೂಲಕ ಧ್ವನಿಸಿದ್ದಾರೆ.

‘ಹಳ್ಳಿಯ ಚಿತ್ರಗಳು’ ಎಂಬ ಕೃತಿಯ ‘ನಮ್ಮ ಜೋಡಿದಾರರ ಕೆಲವು ಚಿತ್ರಗಳು’ ಎಂಬುದರಲ್ಲಿ ಬರುವ ಕಾಮನ ಹಬ್ಬದ ಪ್ರಸಂಗ: ಜೋಡಿದಾರರು ಕೂಡಿಕೊಂಡು ಕೆರೆ ದಾಟುವಾಗ ಬಟ್ಟೆ ಒಗೆಯುತ್ತಿದ್ದ ಗೌಡರ ಹೆಣ್ಣೊಂದು ಹಾರುವಯ್ಯ ನನ್ನನ್ನು ಹಿಡಿದುಕೊಳ್ಳಲು ಬರುತ್ತಿದ್ದಾನೆ ಎಂದು ಬಾಯಿ ಬಡಿದುಕೊಂಡದ್ದು; ಕ್ಷಣಾರ್ಧದಲ್ಲಿ ಜೇನು ಹುಳುಗಳು ಬೆನ್ನು ಹತ್ತಿ ಬರುವಂತೆ ಉಳುವವರು ಬಾರುಗೋಲನ್ನು ಹಿಡಿದು, ಅಗೆಯುವವರು ಹಾರೆಗುದ್ದಲಿಗಳನ್ನು ಹಿಡಿದು ನೂರಾರು ಜನ ಓಡಿಬರುತ್ತಿರುವುದನ್ನು ಕಂಡು ಜೋಡಿದಾರರು ತಮ್ಮ ಮೈಮೂಳೆ ಒಂದೂ ಉಳಿಯುವುದಿಲ್ಲವೆಂದು ಕಾಲಿಗೆ ಬುದ್ಧಿ ಹೇಳಿದ ಪ್ರಸಂಗ: ಬುದ್ಧಿ ಎನ್ನುತ್ತಿದ್ದ ಹನುಮ ಹೆಂಡ ಕುಡಿದು ಬಂದು ಜೋಡಿದಾರರನ್ನು "ಏನ್ಲಾ ಹೊಗ ಅಲ್ಲಿ ನಿಂತ್ಕೊ, ಒಂದು ಬೀಡಿ ಕೊಟ್ಟಿನಂತೆ"[1] ಎಂದು ತೂರಾಡುತ್ತಾ ಉದ್ಧಟತನದ ಮಾತಾಡತೊಡಗಿದಾಗ ಜೋಡಿದಾರರು ಕಂಬಿಕಿತ್ತದ್ದು. ಹನುಮ ಹಿಂಬಾಲಿಸಿದ್ದು. ಹೊಳೆಯ ದಡಕ್ಕೆ ಹನುಮ ಬಂದಾಗ ಜೋಡಿದಾರರು ಅವನನ್ನು ನೀರೊಳಕ್ಕೆ ತಳ್ಳಿದ್ದು. ತಣ್ಣೀರಿನಲ್ಲಿ ಮುಳುಗೆದ್ದುದರಿಂದ ಹನುಮನ ನೆತ್ತಿಗೇರಿದ್ದ ಪಿತ್ತ ಇಳಿದು ಮತ್ತೆ ಭಯಭಕ್ತಿಯಿಂದ ಬುದ್ಧಿ ಎಂದು ಸಂಬೋಧಿಸಿದ ಪ್ರಸಂಗ—ಇವುಗಳ ಮುಖಾಂತರ ಗ್ರಾಮಜೀವನದ ನಡೆನುಡಿ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸಿದ್ದಾರೆ.

‘ನಮ್ಮ ಊರಿನ ರಸಿಕರು’ ಕೃತಿಯಲ್ಲಿ ಸುಂದರಿಯೊಬ್ಬಳು ಘಟ ಒಗೆದಾಗ, ಸ್ಮಶಾನದಲ್ಲಿ ಅವಳ ಬಾಳಿನ ಹೃದಯವಿದ್ರಾವಕ ಕಥೆಯನ್ನು ಪಾತ್ರಗಳ ಸಂಭಾಷಣೆಯ ಮುಖಾಂತರ ಚಿತ್ರಿಸಿದ್ದಾರೆ. ಅವಳು ಹನ್ನೊಂದನೆಯ ವಯಸ್ಸಿನಲ್ಲಿ ವಿಧವೆಯಾದಳು. ವೈದಿಕ ತಂದೆ ಅವಳ ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿ, ಸಂಸಾರಸುಖಕ್ಕೆ ನೀನು ಹೊರತು ಎಂದು ಅಸ್ಪೃಶ್ಯಳನ್ನಾಗಿ ಮಾಡಿ ಕೂಡಿಸಿದ್ದು. ಸಮಾಜದ ಕ್ರೂರ ವರ್ತನೆಯಲ್ಲಿ ಅವಳು ಚಿತ್ರಹಿಂಸೆ ಅನುಭವಿಸಿದ್ದು—ಮುಂತಾದ ವಿವರವನ್ನು ಬ್ರಾಹ್ಮಣ

[1] ‘ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು’, ಪುಟ ೮೧

ಪಾತ್ರಗಳ ಮುಖೇನ ಮುಂದಿಟ್ಟು, ಸೌದೆ ಒಡೆಯುತ್ತಿದ್ದ ಶೂದ್ರ ಆಳಿನ ಬಾಯಿಂದ "ಅದ್ಯಾಕ ಬುದ್ಧಿ ಹನ್ನೊಂಧು ವರ್ಷದ ಹಸುಗೂಸ್ಗೆ ಇನ್ನೊಂದು ಮದ್ವೆ ಮಾಡೋ ಕಾಗ್ದಿತ್ರ?"[1] ಎಂಬ ಮಾತನ್ನಾಡಿಸಿದ್ದಾರೆ. ಇಲ್ಲಿ ಬರೀ ಯಾಂತ್ರಿಕವಾದ ನಿಯಮ ಪರಿಪಾಲನೆಗೆ ನೇತುಬಿದ್ದ ಮುಂದುವರಿದವರ ನಿರ್ಮಾನವೀಯತೆಯನ್ನೂ, ಯಾವ ನೇಮನೀತಿಗೂ ನೇತುಬೀಳದ ಹಿಂದುಳಿದವರ ಮಾನವೀಯತೆಯನ್ನೂ ಏಕಕಾಲದಲ್ಲಿ ತಕ್ಕಡಿಗಿಟ್ಟು ತೂಗಿದ್ದಾರೆ. ಹೀಗೆ ಅರ್ಥಹೀನವಾದ ಆಚರಣೆಗಳ ಬಗೆಗೆ ಸೂಚಿಸುವುದನ್ನು ಕೊಡುತ್ತಲೇ ನಿರ್ಲಿಪ್ತವಾಗಿ ಗ್ರಾಮಜೀವನದ ಅರ್ಥಪೂರ್ಣ ಸಂಪ್ರದಾಯ ರೀತಿನೀತಿ ರಿವಾಜುಗಳನ್ನು ಚಿತ್ರಿಸುತ್ತಾರೆ. ಉದಾಹರಣೆಗೆ 'ನಮ್ಮ ಊರಿನ ರಸಿಕರು' ಕೃತಿಯಲ್ಲಿನ ಹರಿಶ್ಚಂದ್ರ ನಾಟಕ ಪ್ರಸಂಗ, ಆಲೆಮನೆ ವರ್ಣನೆಗಳನ್ನು ನೆನೆಸಬಹುದು. ಕಬ್ಬಿನ ಹಾಲು, ಬೆಲ್ಲ, ಕಬ್ಬು ಬಂದಬಂದವರಿಗೆಲ್ಲ ಅರ್ಥಕ್ಕಿಂತ ಹೆಚ್ಚು ವೆಚ್ಚವಾಗುವುದನ್ನು ಲೆಕ್ಕಾಚಾರದ ವಿದ್ಯಾವಂತರು ಪ್ರಶ್ನಿಸಿದಾಗ, ಜೋರೇಗೌಡನು ಹೀಗೆನ್ನುತ್ತಾನೆ :

> ಹಾಗಲ್ಲ ದೇವರು, ಇದು ಪೂರ್ವೀಕರಿಂದ ಬಂದ 'ಪರ್ದಿಷ್ಟ.' ಆಲೆಮನೆಗೆ ಬಾಯಾರಿ ಬಂದವನಿಗೆ ಒಂದು ತುಂಡು ಕಬ್ಬನ್ನೂ ಒಂದು ಲೋಟ ಹಾಲನ್ನೂ ಕೊಡಲೇಬೇಕು. ನಾವು ಆಲೆ ಕಟ್ಟೋ ಹೊತ್ತಿಗೆ ಜನ ಬರ್ತಾರೇ ಹೊರ್ತು ಕಬ್ಬಿಣದ ಅಂಗಡಿಗೆ ಹೋಗ್ತಾರ್ಯೆ? ಕೊಟ್ಟು ಕೆಟ್ಟೋನ್ನ ನಾನ್ಕಂಡಿಲ್ಲ. ದಾನ ಮಾಡಿದ್ರೆ ಕೊಡೋ ಭಗವಂತ ಒಂದ್ಕೆರಡು ಕೊಡ್ತಾನೆ....ಕಣಕ್ಕಂದೋನಿಗೆ ಒಂದ್ಹಿಡಿ ರಾಗಿ ಹಾಕ್ಬೇಕು. ಇದ್ರಿಂದ ಯಾರೂ ಕೆಟ್ಟಿಲ್ಲ[2]

ಮೇಲಿನ ಮಾತುಗಳ ಮುಖಾಂತರ ಗೊರೂರರು ರೈತರ ಮನೋಧರ್ಮವನ್ನು ತುಂಬ ಮನೋಜ್ಞವಾಗಿ ಸೆರೆ ಹಿಡಿದಿದ್ದಾರೆ. ಅನ್ನ ಹಾಕಿದ ಮನೆ ಕೆಡಲ್ಲ : ಗೊಬ್ಬರ ಹಾಕಿದ ಹೊಲ ಕೆಡಲ್ಲ ಎಂಬುದೇ ರೈತರ ಜೀವನದ ತಾರಕಮಂತ್ರ. ಅದನ್ನಿಲ್ಲಿ ಸುಂದರವಾಗಿ ನಿರೂಪಿಸಲಾಗಿದೆ.

ಉಗಾದಿ ಹಬ್ಬದಂದು ಹುಡುಗರು ಮುದುಕರು ಎಲ್ಲ ಸೇರಿ ಲಗ್ಗೆ ಚೆಂಡಾಡುತ್ತಾ ಸಂತೋಷದಲ್ಲಿ ಕಾಲಕಳೆಯುವುದು ಇಂದಿಗೂ ಗ್ರಾಮಗಳಲ್ಲಿ ನಡೆದುಕೊಂಡು ಬಂದಿರುವ ಪದ್ಧತಿ. ಕಾಮನ ಹಬ್ಬದಲ್ಲಿ ಪ್ರತಿಯೊಂದು ಮನೆಯಿಂದ ಸೌದೆ ಹಳೆಮೊರ ತೊಟ್ಟಿಲು ಇತ್ಯಾದಿಗಳನ್ನು ಹೊತ್ತು ತರುವಂತೆ, ಚೆಂಡು ತಯಾರು ಮಾಡಲು ಬಟ್ಟೆಚೆಂಡಿಗಾಗಿ ಉಗಾದಿಯಂದು ಯಾರ ಮನೆಯ ಮುಂದೆ ಯಾವ ಬಟ್ಟೆಯನ್ನು ಕಂಡರೂ ಬಿಡದೆ ಹಾರಿಸಿಕೊಂಡು ಬರುತ್ತಾರೆ. ಅಂಥ ಒಂದು ಸ್ವಾರಸ್ಯದ ವರ್ಣನೆ ಇದು :

> ಶಾಸ್ತ್ರಿಗಳ ಹಿತ್ತಿಲ ಬೇಲಿಯ ಮೇಲೆ ಒಂದು ಸೀರೆಯ ತುಂಡನ್ನು ಒಣಗಿ ಹಾಕಿದ್ದರು. ಅಲ್ಲೇ ಶಾಸ್ತ್ರಿಯ ಸೊಸೆಯೂ ನಿಂತಿದ್ದಳಂತೆ. ಅವಳು "ತೆಗೆದುಕೊಂಡ ಹೋಗಬೇಡಿ"

---

1 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು', ಪುಟ ೧೭೦

2 ಅದೇ, ಪುಟ ೨೫೫-೫೬

ಎಂದಳಂತೆ. ತಿಮ್ಮಪ್ಪನು "ಈ ದಿವಸ ಅದೆಲ್ಲ ಹೇಳ್ಬೇಡ. ನನ್ನ ಕಣ್ಣಿಗೆ ಬೀಳುವಂತೆ ಇಟ್ಟಿದ್ದು ನಿನ್ನ ತಪ್ಪು" ಎಂದು ಹೇಳಿ ಅವಳಿಗೆ ಒಂದುಸಲ ಕ್ಷಮಿಸಿಬಿಟ್ಟನಂತೆ. ಅವನು ನಾಚಿಕೆಯಿಂದ ಒಳಕ್ಕೆ ಹೊರಟುಹೋದಮೇಲೆ ಆ ಬಟ್ಟೆಯನ್ನು ತಂದನಂತೆ.[1]

ಬಟ್ಟೆ ಯಾರದು? ಯಾವುದು? ಎಂಬುದನ್ನು ಕಿಂಚಿತ್ತೂ ಯೋಚಿಸದೆ ಬಾಚಿಕೊಂಡು ಹೋಗುವ, ಸಾಮೂಹಿಕ ಸಂತೋಷಕೂಟದಲ್ಲಿ ಭಾಗವಹಿಸುವ ಅವನ ಉತ್ಸಾಹ ಹೇಗೆ ಮನುಷ್ಯನಿಗೆ ಪ್ರಜ್ಞೆಯನ್ನು ಮೀರಿ ನಿಲ್ಲುತ್ತದೆ ಎಂಬುದನ್ನು ಮೇಲಿನ ವಿವರದ ಪಟಾಂತರ ಮನದಟ್ಟು ಮಾಡಿಕೊಟ್ಟಿದ್ದಾರೆ.

ಹಳ್ಳಿಯಲ್ಲಿ ಭೂಮಿತಾಯಿ, ನದಿಯ ನೀರು, ಮಳೆ ಇವುಗಳನ್ನು ನೆಚ್ಚಿಕೊಂಡಿರತಕ್ಕವರಿಗೆ ದೇವರ ಹೊರತು ಮತ್ತಾರ ಭಯವೂ ಪ್ರಸನ್ನತೆಯ ಅವಶ್ಯಕತೆಯೂ ತೋರುವುದಿಲ್ಲ. ರೈತನಿಗೆ ಬೋರೆಯ ಮೇಲೆ ತಮಟೆಯಗಲ ಜಮೀನಿದ್ದರೂ, ನಿತ್ಯವೂ ಮಳೆಗಾಗಿ ಆಕಾಶದ ಕಡೆ ನೋಡುತ್ತಿದ್ದರೂ, ಅವನ ಎದೆಗಾರಿಕೆಯೂ ದೇವರಲ್ಲಿ ಅವನಿಗಿರುವ ಭಕ್ತಿಯೂ, ಮತ್ತಾವ ಅನುಕೂಲವಿದ್ದರೂ ಅವನಂತಹ ಮನೋಧೈರ್ಯವಿಲ್ಲದವರಿಗೆ ನಾಚಿಕೆಯನ್ನು ಉಂಟುಮಾಡುವುದು.[2]

ಗೊರೂರರು ರೈತರ ಮನೋಧರ್ಮವನ್ನು ಹೇಗೆ ನಾಡಿ ಹಿಡಿದು ನೋಡಿದ್ದಾರೆ, ಅರ್ಥಮಾಡಿಕೊಂಡಿದ್ದಾರೆ ಎಂಬುದಕ್ಕೆ ಮೇಲಿನ ವರ್ಣನೆ ನಿದರ್ಶನವಾಗಿದೆ. ಗ್ರಾಮಜೀವನದ ಆಳವಾದ ಅನುಭವವಿಲ್ಲದವರು ಈ ರೀತಿಯ ಹೇಳಿಕೆ ರೂಪದ ಮಾತುಗಳನ್ನು ಹೇಳಲು ಸಾಧ್ಯವಿಲ್ಲ. ಅಧಿಕಾರವಾಣಿ ಪ್ರಾಪ್ತವಾಗುವುದು ಸ್ವಾನುಭವ ಸಾಂಪ್ರತ ಇದ್ದಾಗಲೇ. ಅದನ್ನು ಇವರಲ್ಲಿ ಹೇರಳವಾಗಿ ಕಾಣುತ್ತೇವೆ.

ಅವರು ರಂಗವಲ್ಲಿಗಳನ್ನು ಎಷ್ಟು ಚುರುಕಾಗಿ ಎಷ್ಟು ಶ್ರದ್ಧೆಯಿಂದ ಬೇಜಾರಿಲ್ಲದೆ ಇಡುತ್ತಾರೆ! ಅದರಲ್ಲಿ ಒಬ್ಬೊಬ್ಬರಿಗೂ ಹುರುಪು. ಒಬ್ಬಳು ನಮ್ಮೂರ ತೇರಿನಂತೆ ರಂಗವಲ್ಲಿ ಇಡುತ್ತಾಳೆ. ಮತ್ತೊಬ್ಬಳು ನರಸಿಂಹಸ್ವಾಮಿಯ ದೇವಸ್ಥಾನದಂತೆ; ಇನ್ನೊಬ್ಬಳು ಪ್ರಭಾವಳಿ ಗರುಡನಂತೆ; ಒಬ್ಬಳು ಸಾವಿರ ದಳದ ಪದ್ಮದಂತೆ; ಮತ್ತೊಬ್ಬಳು ಕಲ್ಕಿಯಂತೆ; ಚಿಗುರೆನೋಟದಿಯಲ್ಲಿರುವ ಅವರ ಬೆರಳುಗಳು ನಾದರಸದಂತೆ ಚಲಿಸುತ್ತವೆ....ಎರಡು ಮನೆಗಳ ರಂಗವಲ್ಲಿಗಳೂ ನಡುಬೀದಿಯಲ್ಲಿ ಸೇರುವಂತೆ ಬರೆಯುತ್ತಾರೆ. ಆ ಬೆಳುದಿಂಗಳಲ್ಲಿ ಅದು, ಬೀದಿಗೆಲ್ಲ ಮಲ್ಲಿಗೆ ಹೂಗಳನ್ನು ಹಾಸಿದಂತೆ ತೋರುತ್ತದೆ. ನಮ್ಮ ಹೆಂಗಸರಿಗೆ—ಹಳ್ಳಿಯ ಈ ಮುಸುರೆ ತಿಕ್ಕುವ ಒರಟರಿಗೆ ವಿದ್ಯಾಭ್ಯಾಸ ಇಲ್ಲದವರಿಗೆ—ರಂಗವಲ್ಲಿಯನ್ನು ಇಂತಹ ಚಿತ್ರವಿಚಿತ್ರ ರೀತಿಯಲ್ಲಿ ಬರೆಯುವ ಶಕ್ತಿ ಇರುವುದನ್ನು ನೋಡಿ ನಾವು ಮಂಕಾಗುತ್ತೇವೆ.[3]

---

1 'ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು' ಪುಟ ೨೬೪

2 'ಗರುಡಗಂಬದ ದಾಸಯ್ಯ' ಪುಟ ೪೭

3 ಅದೇ, ಪುಟ ೫೭

ಮೇಲಿನ ರಂಗವಲ್ಲಿಯ ವರ್ಣನೆಯ ಮುಖಾಂತರ ಹಳ್ಳಿಯವರು ಯಾವುದೇ ಕೆಲಸದಲ್ಲಿ ವಹಿಸುವ ನಂಬಿಕೆ, ಶ್ರದ್ಧೆ, ಉತ್ಸಾಹ ಮೊದಲಾದುವುಗಳನ್ನು ಸೆರೆಹಿಡಿದಿದ್ದಾರೆ. ಅಷ್ಟೇ ಅಲ್ಲದೆ ಅದು ಹೇಗೆ ಸಂಸ್ಕೃತಿಯ ಒಂದು ಅಂಗವೂ ಹೌದು ಎಂಬುದನ್ನು ಮನದಟ್ಟುಮಾಡಿಕೊಟ್ಟಿದ್ದಾರೆ.

> ತೇರು ನಮ್ಮೂರಿನಲ್ಲಿ "ಏನೋ ಆಗುತ್ತೆ" ಎಂಬ ಸಮಾಚಾರವಲ್ಲ. ಅದು ಜನರ ರಕ್ತದ ರಕ್ತ, ಜೀವದ ಜೀವ, ಎಲ್ಲರನ್ನೂ ಒಟ್ಟುಗೂಡಿಸುವ, ಸಣ್ಣಪುಟ್ಟ ವ್ಯಾಜ್ಯಗಳನ್ನೆಲ್ಲ ಪರಿಹರಿಸುವ ರಾಷ್ಟ್ರೀಯ ಹಬ್ಬ.[1]

ಗ್ರಾಮಜೀವನದಲ್ಲಿ ಹಬ್ಬ–ಹರಿದಿನ, ತೇರು–ಉತ್ಸವ ಇತ್ಯಾದಿಗಳು ಹೇಗೆ ಭಿನ್ನಾಭಿಪ್ರಾಯ ಉಳ್ಳವರನ್ನೆಲ್ಲ ಒಟ್ಟಿಗೆ ಬೆಸೆಯುವ ಬೇಗಾರ ಎಂಬುದನ್ನು ಮೇಲಿನ ವಿವರದಲ್ಲಿ ಸೂಚಿಸಿದ್ದಾರೆ.

ಬಿಸಿಲಿನಲ್ಲಿ ಸುಸ್ತಾದ ಅಮಲ್ದಾರರು ಬಾಳೆಹಣ್ಣು ಎಳನೀರು ಪಪ್ಪಾಯ ಮುಂತಾದುವುಗಳನ್ನು ಅವರ ಗೌರವಾರ್ಥ ಆಳುಗಳ ಕೈಯಲ್ಲಿ ಹೊರಿಸಿಕೊಂಡು ಬಂದ ಪಟೇಲರಿಗೆ "ನಿನ್ನಂಥವನ ಕೈಗೆ ಊರಿನ ಯಜಮಾನಿಕೆ ಸಿಕ್ಕಿದರೆ ಊರು ಹಾಳಾಗುವುದರಲ್ಲಿ ಸಂದೇಹವಿಲ್ಲ. ನೀನು ಶುದ್ಧ ನಾಲಾಯಕ್ಕು ಅಯೋಗ್ಯ"[2] ಎಂದು ಛೀಮಾರಿ ಮಾಡಿದರು. ಆತ್ಮಗೌರವವುಳ್ಳ ಪಟೇಲ ಆಳುಗಳನ್ನು ಕರೆದು, "ಅವನ್ನೆಲ್ಲಾ ಮನೆಗೆ ಕೊಟ್ಟುಬಿಡಿ. ಈ ದಣಿಗಳಿಗೆ ಬೇಕಾಗಿರೋದು ನಮ್ಮ ಲೆಕ್ಕಪತ್ರ"[3] ಎಂದು ಹೇಳಿ, ದಪ್ತರದ ಗಂಟನ್ನು ಸಾಹೇಬರ ಮುಂದಿಟ್ಟು ಒಪ್ಪಿಸಿಕೊಳ್ಳಿ ಎಂದನಂತೆ.

ಇಲ್ಲಿ ಹಳ್ಳಿಯವರು ತಗ್ಗಿ ನಡೆಯುವವರಿಗೆ ಬಗ್ಗಿ ನಡೆಯುವಂತೆಯೇ, ಸೊಕ್ಕೇರಿದವರಿಗೆ ಸೊಕ್ಕಿಳಿಸುವುದರಲ್ಲಿಯೂ ಹಿಂದೇಟು ಹಾಕುವುದಿಲ್ಲ ಎಂಬುದನ್ನೂ, ಅವರು ಎಂಥ ಸ್ವಾಭಿಮಾನಿಗಳು ಎಂಬುದನ್ನೂ ತುಂಬ ಸೊಗಸಾಗಿ ಸೆರೆ ಹಿಡಿದಿದ್ದಾರೆ.

'ಕಥೆಗಳು ಮತ್ತು ವಿನೋದ ಚಿತ್ರಗಳು' ಎಂಬ ಕೃತಿಯ 'ಕತ್ತೆಗಮೃತಪಾನ' ಎಂಬ ಕಥೆ ಗೊರೂರರ ಗ್ರಾಮಜೀವನ ಚಿತ್ರಣಕ್ಕೆ ಸಾಕ್ಷಿಯಾಗಿದೆ. ಇದರಲ್ಲಿ ಒಬ್ಬ ಮುಸಲ್ಮಾನ ಹರಿಕಥೆ ಮಾಡುವುದೂ, ವೈದಿಕರೆಲ್ಲ ಕುಳಿತು ಕೇಳುವುದೂ ಮತ್ತು ಸಣ್ಣಮ್ಮ ಎಂಬ ನಿತ್ಯ ಸುಮಂಗಲಿ ಕಿರಿಸ್ತಾನದವರ ಚರ್ಚು, ಮುಸಲ್ಮಾನರ ಮಸೀದಿ, ಹಿಂದೂಗಳ ಗುಡಿ—ಎಲ್ಲಕ್ಕೂ ಒಂದೇ ಭಕ್ತಿಭಾವದಿಂದ ಭೇಟಿ ಕೊಟ್ಟು ಕೈ ಮುಗಿಯುವುದು ಮೊದಲಾದ ವಿವರ ಹಳ್ಳಿಯ ಸಂಸ್ಕೃತಿ ಮುಖವನ್ನು ಸೂಚಿಸುವುದರಲ್ಲಿ ಸಾರ್ಥಕವಾಗಿದೆ.

---

[1] 'ಗರುಡಗಂಬದ ದಾಸಯ್ಯ', ಪುಟ ೬೯

[2] ಅದೇ, ಪುಟ ೯೨

[3] ಅದೇ, ಪುಟ ೯೩

ಕ್ರೈಸ್ತರು ಅವರು ಉಪನ್ಯಾಸವನ್ನು ನಾಟಕದ ಮೂಲಕ ಬೋಧಿಸುವಂತೆ ನಮ್ಮ ಜನರಿಗೆ ಯಾವುದನ್ನೂ ಹರಿಕಥೆಯ ಮುಖಾಂತರ ಹೃದಯಂಗಮವಾಗಿ ತಿಳಿಸಬಹುದು.[1]

ಮೇಲಿನ ಹೇಳಿಕೆ, ಗ್ರಾಮ ಜೀವನದಲ್ಲಿ ಹರಿಕಥೆ ಹೇಗೆ ಬಾಳನ್ನು ಹಸನು ಮಾಡುವುದರಲ್ಲಿ ಹಾಗೂ ಅಜ್ಞಾನವನ್ನು ನಿವಾರಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ ಎಂಬುದನ್ನು ಗೊರೂರರು ಅರ್ಥ ಮಾಡಿಕೊಂಡಿರುವುದರ ಪ್ರತೀಕವಾಗಿ ಬಂದಿದೆ ಎನ್ನಬಹುದು.

ಒಕ್ಕಲಿಗರ ಕಟ್ಟೆ ಬ್ರಾಹ್ಮಣರ ಕಟ್ಟೆಯಿಂದ ಮೇಲಕ್ಕೆ ಇದೆ. ಅಂದರೆ ಅವರು "ಉಪಯೋಗಿಸಿ ಬಿಟ್ಟ" ನೀರು ನಮ್ಮ ಕಟ್ಟೆಗೆ ಬರುತ್ತದೆ. ಇದರಿಂದ ಅನೇಕ ಬ್ರಾಹ್ಮಣರಿಗೆ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಜುಗುಪ್ಸೆಯೂ ಮನಸ್ಸಿನ ಶಾಂತಿ ಭಂಗವೂ ಆಗಿದೆ. ನಮ್ಮೂರ ಪುರೋಹಿತರು ಹೊಳೆಯಲ್ಲಿ ಸ್ನಾನಕ್ಕೆ ಇಳಿಯುವುದಕ್ಕೂ ಮೇಲುಗಡೆ ಒಕ್ಕಲಿಗರ ಕಟ್ಟೆಯಲ್ಲಿ ಹೆಂಗಸರು ಬಾಳೆ ಕುಕ್ಕುವುದಕ್ಕೂ ಸರಿಹೋಗಿದೆ. ಅವರು ಸಂಕಲ್ಪವನ್ನು ಹೇಳಿಕೊಂಡು ಮುಳುಗಿ ತಾವು ಮೇಲಕ್ಕೆ ತಲೆ ಎತ್ತುವ ವೇಳೆಗೆ, ಮೇಲಿನಿಂದ ಹೊರಟ ಮೈಲಿಗೆ ನೀರು ಅವರ ಎದೆಯನ್ನು ಮುಟ್ಟಿಕೊಂಡು ಮುಂದಕ್ಕೆ ಹೋಗಿಬಿಡುತ್ತದೆ.[2]

ಈ ವರ್ಣನೆ ಗ್ರಾಮ ಜೀವನದ ಸಹಜ ಚಿತ್ರವೊಂದನ್ನು ಕೊಡುವಂತೆಯೇ ದೇಹದ ಮಡಿಗಿಂತ ಮನಸ್ಸಿನ ಮಡಿ ಬಹು ಮುಖ್ಯ ಎಂಬ ಲೇಖಕರ ಒಲವು-ನಿಲುವನ್ನು ಕೊನೆಯ ವಾಕ್ಯದಲ್ಲಿ ಸೂಚಿಸಿಬಿಡುತ್ತದೆ.

ಇದೇ ಪ್ರಬಂಧದಲ್ಲಿ ಬರುವ ಮುತ್ತುಗದ ಎಲೆ ಕೊಯ್ಯಲು ಹೊರಟ ರಾಮಯ್ಯಂಗಾರಿ, ಶೀನಪ್ಪ, ಸಂಪತ್ತು, ಬಚ್ಚ—ಇವರ ವಿಚಾರ ಗೊರೂರರಿಗಿರುವ ಗ್ರಾಮಜೀವನದ ದಟ್ಟ ಅನುಭವಕ್ಕೆ ಸಾಕ್ಷಿಯಾಗಿದೆ.

ದೊಡ್ಡನಕಲ್ಲಿನಲ್ಲಿ ಈಜುವಾಗ ಬ್ರಾಹ್ಮಣ, ಜೈನ, ಬೇಡ, ತುರುಕ, ಒಡ್ಡ ಇವೇ ಮುಂತಾದ ವ್ಯತ್ಯಾಸಗಳು ಮರೆಯಾಗುತ್ತವೆ. ಅಲ್ಲಿ ಮುಖ್ಯವಾದುದು ಸಾಹಸ, ಧೈರ್ಯ, ಶಕ್ತಿ ಪ್ರದರ್ಶನ. ಅಲ್ಲಿ ಸೇರುವುದು ಹುಡುಗರ, ಯುವಕರ ಕೂಟ. ಸಾಹಸಿಗಳು ಸಾಹಸವನ್ನು ಎಲ್ಲಿ ಕಂಡರೂ ಮೆಚ್ಚುತ್ತಾರೆ.[3]

—ಎಷ್ಟೇ ಜಾತಿಮತಗಳ ಬಗ್ಗೆ ಕಟ್ಟುನಿಟ್ಟಾಗಿ ವರ್ತಿಸಿದರೂ ಹಬ್ಬ ಹರಿದಿನ ಉತ್ಸವ ಶಕ್ತಿಪ್ರದರ್ಶನ ಮೊದಲಾದ ಸಾಮೂಹಿಕ ಕಾರ್ಯಕ್ರಮಗಳಲ್ಲಿ ಅವನ್ನು ಮರೆ

1 'ಕಥೆಗಳು ಮತ್ತು ವಿನೋದ ಚಿತ್ರಗಳು', ಪುಟ ೨೬೨

2 ಅದೇ, ಪುಟ ೮

3 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೨

ನಿಂತುಬಿಡುವ ಹಳ್ಳಿಯವರ ಮನೋಧರ್ಮವನ್ನು ಮೇಲಿನ ವರ್ಣನೆ ಸೂಚಿಸುತ್ತದೆ. ಇದೆಲ್ಲವೂ ಗೊರೂರರು ಗ್ರಾಮ ಜೀವನವನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂಬುದಕ್ಕೆ ಉತ್ತಮ ನಿದರ್ಶನ.

ಹೀಗೆ ಇವರು ತಮ್ಮ ಕೃತಿಗಳಲ್ಲಿ ಗ್ರಾಮ ಜೀವನದ ಯಥಾರ್ಥ ಚಿತ್ರಗಳನ್ನು ಕೊಡುವುದಲ್ಲದೆ ಅದರ ಅಂತರಂಗ ದರ್ಶನವನ್ನು ಮಾಡಿಸುವುದರಲ್ಲಿ ಮುಖ್ಯವಾಗಿ ಮಗ್ನರಾಗುವುದು ಕಂಡುಬರುತ್ತದೆ. ಸಾಮಾಜಿಕ ಆರ್ಥಿಕ ಧಾರ್ಮಿಕ ಏರುಪೇರುಗಳ ಚಿತ್ರಣದ ಜೊತೆ ಜೊತೆಗೆ ಅದನ್ನು ಮೀರಿ ನಿಲ್ಲುವ ಹಳ್ಳಿಗರ ಹೃದಯ ವೈಶಾಲ್ಯವನ್ನು ಬೆಳಕಿಗೊಡ್ಡುತ್ತಾರೆ. ಹಬ್ಬ–ಹರಿದಿನ, ತೇರು–ಪರಿಷೆ, ಹರಿಕಥೆ–ಬಯಲಾಟ, ಸೂತ್ರದ ಬೊಂಬೆ–ತೊಗಲುಬೊಂಬೆಯಾಟ—ಇತ್ಯಾದಿಗಳ ಚಿತ್ರಣದ ಮುಖಾಂತರ ಗ್ರಾಮ ಜೀವನದ ಸಂಸ್ಕೃತಿ ಮುಖವನ್ನು ಪರಿಚಯ ಮಾಡಿಕೊಡುವುದರಲ್ಲಿ ಗೊರೂರರಿಗೆ ಇನ್ನಿಲ್ಲದ ಉತ್ಸಾಹ. 'ಹಳ್ಳಿಯ ಬಾಳು', 'ಹಳ್ಳಿಯ ಹಾಡು' ಎಂಬ ಅವರ ಕೃತಿಗಳಲ್ಲಿ ಗ್ರಾಮೀಣ ಜನರ ದೈವಭಕ್ತಿ. ಸಾಹಿತ್ಯ, ಕುಟುಂಬ ಪ್ರೇಮ, ಅವಿಶ್ರಾಂತ ದುಡಿಮೆ ಮೊದಲಾದುವುಗಳನ್ನು ಚಿತ್ರಿಸಿದ್ದಾರೆ. ಅದನ್ನು ಮತ್ತೆ ಮತ್ತೆ ಚಿತ್ರಿಸಿದರೂ, ಹಾಡಿ ಹೊಗಳಿದರೂ ಅವರಿಗೆ ತೃಪ್ತಿ ಇಲ್ಲ. ಕಾರಣ ನಗರದ ಸೋಗಿನ ಜೀವನಕ್ಕಿಂತ ಹಳ್ಳಿಯ ಅಕೃತ್ರಿಮ ಜೀವನ ಗೊರೂರರಿಗೆ ತುಂಬ ಪ್ರಿಯವಾಗಿರುವುದೇ ಆಗಿದೆ.

ಅವರ ಕೃತಿಗಳನ್ನು ಓದುವಾಗ ಒಬ್ಬೊಬ್ಬರೇ ಹುಚ್ಚರಂತೆ ಪದೇ ಪದೇ ನಗಬೇಕಾಗುತ್ತದೆ. ಅಂಥ ಹಾಸ್ಯದ ಲೇಪ ಅವರ ಲೇಖನಿಗಿದೆ. ನೆಲದ ಸೊಗಡುಳ್ಳ ಅವರ ಶೈಲಿ ಎಂಥವರನ್ನೂ ಮರುಳು ಮಾಡುತ್ತದೆ; ಮೋಡಿ ಹಾಕುತ್ತದೆ. ಅನುಭವದ ರಸ ಘಟ್ಟಿಯಂತಿರುವ ಗಾದೆ ಮಾತುಗಳನ್ನೂ ನುಡಿಗಟ್ಟುಗಳನ್ನೂ ತಮ್ಮ ಬರವಣಿಗೆಯಲ್ಲಿ ಅಪಾರವಾಗಿ ಬಳಸುವುದೂ ಸಹ ಓದುಗರ ಮನಸ್ಸನ್ನು ಸೆರೆ ಹಿಡಿಯುವ ಸಾಧನಗಳಲ್ಲೊಂದು ಎನ್ನಿಸುತ್ತದೆ.

"ಎತ್ತು ಉಚ್ಚೆ ಹುಯ್ದಂತೆ", "ಕುರುವಿನ ಮೇಲೆ ಬರೆ ಎಳೆದಂತೆ". "ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು", "ಮಧ್ಯಸ್ಥಗಾರರಿಲ್ಲದ ಊರಲ್ಲಿ ಮಧ್ಯಾಹ್ನವೂ ಇರಬಾರದು", "ಹೆಡ್ಡನಾದರೂ ಮೊಡ್ಡೋನು ವಾಸಿ", "ಅಜ್ಜಿ ಸೂತದ್ದೆಲ್ಲ ಅಜ್ಜನ ಉಡಿದಾರಕ್ಕೆ ಸಮ". "ಹಾರುವರ ಹೊಲಕ್ಕೆ ಹಾರಕ ದೇವರ ಹೊಲಕ್ಕೆ ಹುಚ್ಚೆಳ್ಳು", "ಹೆಡ್ಡನ ಆರಂಭ ಗೊಬ್ಬರದಲ್ಲಿ", "ಹೊಸ ಪೂಜಾರಿ ನಾಯಿ ತುಳಸಿ ಕುಯ್ದ"—ಇಂತಹ ನೂರಾರು ಗಾದೆಗಳು ಅವರ ಶೈಲಿಗೆ ಮೊನಚನ್ನೂ ಬನಿಯನ್ನೂ ತಂದುಕೊಟ್ಟಿರುವಂತೆಯೇ ಗ್ರಾಮೀಣ ವಾತಾವರಣವನ್ನು ಮೂಡಿಸುವುದರಲ್ಲಿ ನೆರವಾಗಿವೆ. ಮೇಲಾಗಿ ಅನುಭವ ಸಾಂದ್ರತೆಯನ್ನೂ ಅರ್ಥವಂತಿಕೆಯನ್ನೂ ಧ್ವನಿಸುವುದರಲ್ಲಿ ಸಾರ್ಥಕವಾಗಿವೆ. ಇವರ ಶೈಲಿಯಲ್ಲಿ ಸುಳಿದಾಡುವ ಉಪಮಾನಗಳೂ ಸಹ ಗ್ರಾಮಜೀವನ ವಾತಾವರಣವನ್ನು ಕಣ್ಣೆದುರು ನಿಲ್ಲಿಸುವಂತಹುವುಗಳೇ. ಉದಾಹರಣೆಗೆ "ವೈದೇಹಿ ಹೊಡೆಯ ಕಾಲದ ಪೈರಿನಂತೆ ಒಳ್ಳೆಯ ಸೌಂದರ್ಯವನ್ನೂ

ತುಂಬಿದ ಮೈಬಣ್ಣವನ್ನೂ ಹೊಂದಿದವರಾದರು"[1] ಎಂಬಲ್ಲಿನ ಹೋಲಿಕೆ ಗ್ರಾಮಜೀವನ ಪರಿಸರವನ್ನು ಅಲಕ್ಕನೆ ಓದುಗರ ಕಣ್ಣೆದುರು ತಂದು ನಿಲ್ಲಿಸುತ್ತದೆ.

ಒಟ್ಟಿನಲ್ಲಿ ಉದ್ಧೃತ ಭಾಗಗಳ ಪಟ್ಟಿಯನ್ನು ಮುಂದುವರಿಸದೆ ಇಷ್ಟು ಹೇಳ ಬಹುದು: ಗೊರೂರರ ಕೃತಿಗಳಲ್ಲಿ ಕೆನೆಗಟ್ಟಿರುವ ಗ್ರಾಮಜೀವನದ ಸೊಗಸನ್ನು ಓದಿ ಸವಿಯಬೇಕೇ ವಿನಾ ಹೇಳಿ ಮುಗಿಸಲು ಸಾಧ್ಯವಿಲ್ಲ. ಈ ಅಸಾಧ್ಯತೆಯು ಸಹಾತು ಯಾವುದೇ ವಿಮರ್ಶಕನ ಅಶಕ್ತಿಯ ಪ್ರತೀಕವಲ್ಲ; ಬದಲಾಗಿ ಗೊರೂರರ ಕೃತಿಗಳ ಲ್ಲಿರುವ ಗ್ರಾಮಜೀವನದ ಅಗಾಧತೆಯ ಪ್ರತೀಕ.

---

1 'ಮೆರವಣಿಗೆ', ಪುಟ ೩೧೭

ಗೊರೂರರ ಕೃತಿಗಳಲ್ಲಿ ಜೀವನ ದರ್ಶನ

ಮಿರ್ಜಿ ಅಣ್ಣಾರಾಯ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕೃತಿಗಳಲ್ಲಿ ಮೈವೆತ್ತಿ ನಿಂತಿರುವುದು 'ಹಳ್ಳಿಯ ಬಾಳು.' ಅದೂ 'ಹೇಮಾವತಿ ತೀರದಲ್ಲಿ' ಬಾಳುತ್ತಿರುವ ಜನರ ಜೀವನ. ಅದರಲ್ಲಿಯೂ ಮಲ್ಲಿಗೆಹಳ್ಳಿ, ಹಾಗೂ ಅದರ ಸುತ್ತಲಿನ 'ಹಳ್ಳಿಯ ಚಿತ್ರಗಳು' ಬಹು ಸೊಗಸಾಗಿ ಮೂಡಿವೆ. ಒಂದಲ್ಲ, ಸಾವಿರಾರು ಚಿತ್ರಗಳ ಪ್ರದರ್ಶನಾಲಯವೀ ಸಾಹಿತ್ಯ. ಇದರಲ್ಲಿ ಸಾಂಕೇತಿಕ ರೂಪದಿಂದ ಚಿತ್ರಣಗೊಂಡ ನದಿಯ ತೀರದ 'ಉಸುಬು' ಮೊದಲುಗೊಂಡು, ನದಿಯ ಎರಡೂ ಮಗ್ಗುಲಿಗಿರುವ ಹೊಲ ಗದ್ದೆ ತೋಟ ಕಾಡುಗಳೆಲ್ಲ ಎಷ್ಟು ಸುಂದರವಾಗಿ ಕಂಗೊಳಿಸುತ್ತಿವೆ! ಹೂ, ಹಣ್ಣುಗಳೇನು? ಮೃಗಪಕ್ಷಿಗಳೇನು! ಇಲ್ಲಿ ಬರುವ ಜನರೋ! 'ನಮ್ಮ ಊರಿನ ರಸಿಕರು', 'ಮೈಯ್ಯಾರಿ'ಯಾದ ಲಲಿತೆ, ಬೂತಯ್ಯನ ಮಗ ಅಯ್ಯು, ಹಾವಿನ ಅಯ್ಯು, ಹೊಸಬಿ, ಕಾಲುಸಾಬಿ, 'ಬೆಸ್ತರ ಕರಿಯ', ಗುಂಡ, ನಾಣಿ, ಸೀತಾಲಕ್ಷ್ಮಿ, ಪುಟ್ಟಮಲ್ಲಿಗೆ, 'ಗರುಡಗಂಬದ ದಾಸಯ್ಯ', ಗ್ರಾಮ ಪಂಚಾಯತಿಯ ಅಧ್ಯಕ್ಷ ಗೌಡ—ಹೀಗೆ ಜನ ಜಾತ್ರೆಯಂತೆ ಸೇರಿ, 'ಕನ್ಯಾಕುಮಾರಿ'ಯಿಂದ 'ಮೆರವಣಿಗೆ' ಹೊರಟವರನ್ನು ಲೆಕ್ಕ ಇಡಲಿಕ್ಕೆ ಆದೀತೋ? ಗಮನಕ್ಕೆ ಬಂದವರನ್ನು ಮರೆಯಲಿಕ್ಕೆ ಸಾಧ್ಯವೋ? ಪೆನ್ಶನ್ ದಫ್ತರ ಬಂದಿಯು ತನ್ನ ಅನುಭವಗಳ ಕಣಜದಿಂದ ಎತ್ತಿ ತೋರಿಸುವ ವ್ಯಕ್ತಿಗಳೆಷ್ಟು? ಶಾನುಭೋಗರು, ಗೌಡರು, ಅಮಲದಾರರು! ಅವರವರಲ್ಲಿಯೂ ವ್ಯಕ್ತಿತ್ವದ ವೈವಿಧ್ಯವೆಷ್ಟು! ಗೊರೂರರ ಅಪಾರ ಅನುಭವದ ಸಾಗರವೇ ಇಲ್ಲಿದೆ. ಅದರ ಎದುರಿಗೆ ನಿಂತಾಗ ಯಾರೂ ದಿಗ್‌ಭ್ರಾಂತರಾಗದೆ ಇರಲು ಸಾಧ್ಯವೇ ಇಲ್ಲ. ಆಗ ಮಾತು ನಿಂತು, ಮೌನವೇ ತಾನೇ ತಾನಾಗಿ ಮುತ್ತಿ, ಅಂತಃಕರಣದ ಕಣ್ಣು ತೆರೆಯುವುದು, ಈ ಸಾಹಿತ್ಯ ಸೃಷ್ಟಿಯಿಂದ. ಅದರಿಂದ ಜೀವನ ದರ್ಶನದ ಅರಿವೂ ಆಗುವುದು.

ಹೀಗೆ ಗೊರೂರರ ಕೃತಿಗಳಿಂದ ನಮಗೆ ಆದ ಜೀವನ ದರ್ಶನದ ಅರಿವನ್ನು ನುಡಿಗಳಲ್ಲಿ ವ್ಯಕ್ತಪಡಿಸುವುದೂ ಕಷ್ಟದ ಕೆಲಸವೇ. ಅವರು, ಅವರ ಸಾಹಿತ್ಯ, ಆ ಸಾಹಿತ್ಯದಲ್ಲಿ ಮೂಡಿದ ಜನ ಎಲ್ಲವೂ ತ್ರಿವೇಣೀ ಸಂಗಮವೇ. ಅವರಲ್ಲಿ ಭಿನ್ನತೆ ಎಂಬುದೇ ಇಲ್ಲ. ಜೀವನಾನುಭವದಲ್ಲಿ, ಅವನ್ನು ಚಿತ್ರಿಸುವಲ್ಲಿ ಅಂಥ ತನ್ಮಯತೆ ಇದೆ ಗೊರೂರರಿಗೆ. ನಕ್ಕು ನಗಿಸುತ್ತ ಜೀವನದ ರಮ್ಯತೆಯನ್ನೂ ಅದರ ಓರೆಕೋರೆಗಳನ್ನೂ ತೋರಿಸುವ ಚಾತುರ್ಯವು ಆತ್ಮೀಯತೆಯ ಸತ್ವದಿಂದ ಕೂಡಿದೆ. ಇಲ್ಲಿ ನೆರವೇರುವ ಕೃತಿ ರಚನೆಯ ಕಸರತ್ತಿಲ್ಲ, ಸಹಜಾನಂದದ ಸ್ಫೂರ್ತಿಯ ಸ್ಫುರಣಲೀಲೆ. ಅದರಿಂದ ಅವರ ಜೀವನ ದರ್ಶನವು ಸಾಹಿತ್ಯದ ಸಾಲು ಸಾಲಿನಲ್ಲಿಯೂ ಹಾಸುಹೊಕ್ಕಾಗಿ ವ್ಯಾಪಿಸಿದೆ. ಹಾಲಿನಲ್ಲಿ ಸಕ್ಕರೆಯ ಸವಿಯು ಸೇರಿದಂತೆ ಅಡಗಿದೆ. ಅದಕ್ಕಾಗಿ ಇದನ್ನು ಗುರುತಿಸಿ ಹೇಳುವುದೂ ವಿವರಿಸುವುದೂ ಕಷ್ಟಸಾಧ್ಯವಾದ ಕಾರ್ಯವೇ ಸರಿ.

ಗೊರೂರರು ಎಪ್ಪತ್ತು ವರ್ಷಗಳ ತುಂಬು ಬಾಳನ್ನು ಬಾಳಿದವರು. ಮಹಾತ್ಮ ಗಾಂಧೀಜಿಯವರ ಮಾರ್ಗದಲ್ಲಿ ನಡೆದು ದೇಶ ಸೇವೆ ಮಾಡಿದವರು. ಅದರಲ್ಲಿ ದೇಶ ಹಿತದ ಹೊರತಾಗಿ ಇನ್ನಾವ ಸ್ವಾರ್ಥ ಸಾಧನೆಗಾಗಿಯೂ ಇಚ್ಛೆಪಟ್ಟವರಲ್ಲ. ಯಾವ ಸ್ಥಾನಮಾನಗಳ ಅಪೇಕ್ಷೆಯಿಲ್ಲದೆ ಜನರಿಗಾಗಿ, ಜನರ ಒಳಿತಿಗಾಗಿ ದುಡಿದವರು. ಹಾಗೆ ದುಡಿಯುವಾಗ ಒದಗಿದ ಕಷ್ಟ-ನಷ್ಟಗಳನ್ನೆಲ್ಲ ಸಂತೋಷದಿಂದ ಸ್ವೀಕರಿಸಿದವರು. ಮೂರು-ನಾಲ್ಕು ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಹೋರಾಡಿದ ಸ್ವಾತಂತ್ರ್ಯ ಸೈನಿಕರು ಸಹ ಅವರು. ಆಗ ಸೆರೆಮನೆ ವಾಸ, ಪೋಲೀಸರ ಸಹವಾಸಗಳನ್ನೂ ಹೊಂದಿದವರು. ಅಂಥ ಸಂದರ್ಭಗಳಲ್ಲೂ ತಮ್ಮ ನಿತ್ಯದ ಬಾಳಿನಲ್ಲಿಯೂ ವಿವಿಧ ರೀತಿಯ ಜನರ ಸಹಜ ಸಂಪರ್ಕವನ್ನು ಹೊಂದಿದರು. ಒಳ್ಳೆಯ ಬಾಳನ್ನು ಬಾಳಬೇಕು, ಸುತ್ತಲಿನ ಜನರಲ್ಲಿ ಬೆರೆಯಬೇಕು, ಅವರ ಕಷ್ಟ-ಸುಖಗಳಲ್ಲಿ ಒಂದಾಗಿ ಅನುಭವಿಸಬೇಕು—ಎನ್ನುವ ಸಹಜ ಪ್ರವೃತ್ತಿಯ ಸಾಹಿತಿಗಳವರು. ಅದರಿಂದ ಇವರ ಬರವಣಿಗೆಯಲ್ಲಿ ಸಹಜತೆಯು ಸ್ವಾಭಾವಿಕವಾಗಿಯೇ ವ್ಯಕ್ತವಾಗುತ್ತದೆ. ಅವರ ರಸಿಕ ಮನೋಧರ್ಮವು ಉನ್ನತವಾದ ಹಾಸ್ಯದ ಬಣ್ಣ ಬಣ್ಣಗಳ ಕಾರಂಜಿಗಳನ್ನು ನಿರ್ಮಿಸುತ್ತ ಮುಂದುವರಿಯುತ್ತದೆ.

ಅವರ ಸಾಹಿತ್ಯ ಸೇವೆಯು ದೇಶಭಕ್ತಿಯಿಂದ ಪ್ರೇರಿತವಾದುದು. ಅದರಿಂದ ಕಥೆ, ಕಾದಂಬರಿ, ಹಳ್ಳಿಯ ಚಿತ್ರಗಳಿಗೆ ಮಾತ್ರ ಅದು ಸೀಮಿತವಾಗಿಲ್ಲ. ಮಹಾತ್ಮರನ್ನು ಅವರ ವಿಚಾರಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡಲೆಂದು 'ಭಾರತ ಭಾಗ್ಯ ವಿಧಾತ', 'ಪೂರ್ಣ ಸ್ವದೇಶಿ', 'ಸ್ವಾತಂತ್ರ್ಯವೇ ಧರ್ಮ', 'ಮಹಾತ್ಮ ಗಾಂಧಿಯವರ ದಕ್ಷಿಣ ಯಾತ್ರೆ' ಇತ್ಯಾದಿ ಕೃತಿಗಳನ್ನು ಇವರು ರಚಿಸಿದ್ದಾರೆ. ಅದರ ಜೊತೆಗೇನೇ 'ಸತಿ ಕಸ್ತೂರಿ ಬಾ', 'ಮೌಲಾನಾ ಅಬುಲ್ ಕಲಾಂ ಆಜಾದ್'ರಂಥ ಹಿರಿಯ ವ್ಯಕ್ತಿಗಳ ವ್ಯಕ್ತಿತ್ವವನ್ನು ಸುಂದರವಾಗಿ ಚಿತ್ರಿಸಿದ್ದಾರೆ. 'ಮಹದೇವ ದೇಸಾಯಿ ಅವರ ಕೃತಿಗಳು' ಎಂಬುದಂತೂ ರಾಷ್ಟ್ರೀಯ ಭಾವನೆಗಳ ಬುಗ್ಗೆಯಂತಿದೆ. ಬಹು ದಿನಗಳ ಹಿಂದೆಯೇ 'ತಾಯ್ನುಡಿಯಲ್ಲಿ ಶಿಕ್ಷಣ'ವಾಗಬೇಕೆಂದು ಪ್ರತಿಪಾದಿಸಿದ ಪುರಸ್ಕರ್ತರಿವರು. ಹಳ್ಳಿಗರನ್ನೂ

ಹಳ್ಳಿಯ ಜೀವನವನ್ನೂ ಮೆಚ್ಚಿದ ಇವರು ಕನ್ನಡ ನಾಡಿನ ಜಾನಪದ ಕವಿಯನ್ನು ಕುರಿತು 'ಸರ್ವಜ್ಞನು ತೋರಿದ ದಾರಿ'ಯನ್ನು ರೂಪಿಸಿದ್ದಾರೆ. 'ಹಳ್ಳಿಯ ಹಾಡುಗಳು' ಮೊದಲುಗೊಂಡು 'ಭಕ್ತಿಯೋಗ'ದವರೆಗೂ ಇವರ ಸಾಹಿತ್ಯದ ವ್ಯಾಪ್ತಿಯು ಪಸರಿಸಿದೆ. 'ಸಾಹಿತ್ಯಾನುಭವ'ದಿಂದ ಪರಿಪಕ್ವವಾದ ಇವರ ಪ್ರತಿಭೆಯು 'ಸಾಹಿತ್ಯದ ಜೀವಾಳ'ವನ್ನು ತಂದುಕೊಂಡಿದೆ. 'ಸಾಹಿತ್ಯ ರಶ್ಮಿ'ಯನ್ನು ಪ್ರತಿಫಲಿಸಿದೆ. ಸುಂದರ, ಸಫಲ ಜೀವನದಲ್ಲಿ ನಿಷ್ಠೆಯುಳ್ಳ ಗೊರೂರರು 'ಮಕ್ಕಳ ಘೋಷಣೆ'ಯ ವಿಷಯದಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬರೆದ ಗ್ರಂಥವನ್ನು ಕನ್ನಡಿಸಿದ್ದಾರೆ. ಟಾಲ್‌ಸ್ಟಾಯ್ ಅವರ ಕಾದಂಬರಿಯನ್ನು 'ಮಲೆನಾಡವರು' ಎಂಬುದಾಗಿ ಕನ್ನಡಕ್ಕೆ ನೀಡಿದ್ದಾರೆ. ಹೀಗೆ ಹಲವು ವಿಧದ ಗ್ರಂಥಗಳನ್ನು ರಚಿಸಿ ಕನ್ನಡ ವಾಗ್ದೇವಿಯನ್ನು ಅಲಂಕರಿಸಿದ್ದಾರೆ. ಇವೆಲ್ಲ ವಿಚಾರ ಸಾಹಿತ್ಯ ವಿಭಾಗಕ್ಕೆ ಸೇರಿದ ಕೃತಿಗಳಾದರೂ ಗೊರೂರರ ವ್ಯಕ್ತಿತ್ವ, ಜೀವನದೃಷ್ಟಿಗಳನ್ನು ಅರಿತುಕೊಳ್ಳಲು ಸಾಧನಗಳಾಗಿವೆ. ಒಬ್ಬ ವ್ಯಕ್ತಿಯ ಜೀವನ ದರ್ಶನವು ರೂಪುಗೊಳ್ಳುವುದಕ್ಕೆ ಅವನ ಜೀವನದ ಅನುಭವದ ಜೊತೆಯಲ್ಲಿ ಅವನಿಗೆ ಒದಗಿದ ಜನರ ಸಹವಾಸ, ಅವನು ಓದುವ ಗ್ರಂಥಗಳು, ಅವನ ವಿಚಾರ ಪದ್ಧತಿ, ಅವನು ರಚಿಸಿದ ಕೃತಿಗಳು ಇವೆಲ್ಲವುಗಳೂ ಕಾರಣವಾಗಿರುತ್ತವೆ. ಅದರಿಂದ ಇವುಗಳ ಅವಲೋಕನವೂ ವಿಷಯದ ಸಮಗ್ರತೆಗೆ—ಅದರಂತೆ ಸಮರ್ಪಕತೆಗೂ—ಆವಶ್ಯಕವಾಗಿದೆ. ಗೊರೂರರೇ ಒಂದೆಡೆಗೆ ('ರೋಡ್ ಎಂಜಿನ್' ಎಂಬ ಕತೆಯಲ್ಲಿ) ಹೇಳಿರುವಂತೆ[1]—"ಎಂಜಿನ್ ಡ್ರೈವರನ ಮಾತಿನಿಂದ ನನಗೆ ಹಾಗೆ ಜ್ಞಾನೋದಯವಾಯಿತು. ಇದು ನನಗೆ ಇಷ್ಟು ದಿವಸ ಹೊಳೆಯಲಿಲ್ಲ ಎಂದುಕೊಂಡೆ. ಈತ ಹೇಳಿದ ಒಂದು ಸಾಮಾನ್ಯವಾದ ಮಾತಿನಿಂದ ನನ್ನ ಮೇಲೆ ಇಷ್ಟು ಪರಿಣಾಮವಾಗಬೇಕಾದರೆ ಇವನ ಅನುಭವ ಆಳವಾದುದಾಗಿರಬೇಕು. ಸಂಸ್ಕೃತಿ ಹಿರಿದಾದುದಾಗಿರಬೇಕು ಎಂದು ನನಗೆ ಎನ್ನಿಸಿತು."[2] ಅವರ ಸಾಹಿತ್ಯವು ನಮ್ಮ ಮೇಲೆ ಬೀರಿದ ಪ್ರಭಾವ ಕಥನದಿಂದಲೇ ಅವರ ಕೃತಿಗಳಲ್ಲಿಯ ಜೀವನ ದರ್ಶನದ ರೂಪರೇಖೆಯನ್ನು ಕೊಡಲು ಯತ್ನಿಸಬೇಕಾಗುತ್ತದೆ.

ಗೊರೂರರ ಹತ್ತಿರದ ಸಹವಾಸವನ್ನು ಒದಗಿಸಿದ ಸುಯೋಗದ ಶ್ರೇಯವು ನಾಗಮಂಗಲದ ಜಾನಪದ ಸಮ್ಮೇಳನದ ಸಂಯೋಜಕರಿಗೆ ಸಲ್ಲಬೇಕು. ಅಲ್ಲಿ ಒಂದೇ ಕೋಣೆಯಲ್ಲಿ ನಮ್ಮಿಬ್ಬರನ್ನು ಇಳಿಸಲಾಗಿತ್ತು. ಇಬ್ಬರೂ ಸ್ವಲ್ಪ ಹೆಚ್ಚು ವಯಸ್ಸಾದವರೆಂದೋ,

---

[1] ಹೀಗೆ ಉಲ್ಲೇಖಗೊಂಡ ಅಭಿಪ್ರಾಯಗಳು ಅವರ ಲಲಿತ ಸಾಹಿತ್ಯದಲ್ಲಿ ಬರುವ ವ್ಯಕ್ತಿಗಳ ವಿಚಾರಗಳೇ ಸರಿ. ಆದರೂ ಲೇಖಕರ ಮನೋಭಾವವನ್ನು ವ್ಯಕ್ತಪಡಿಸಲು ಇಲ್ಲಿ ಉಪಯೋಗಿಸಿಕೊಂಡಿದೆ. ಪಂಪನ ನಾಡೊಲುಮೆಯು 'ವಿಕ್ರಮಾರ್ಜುನ ವಿಜಯ'ದ ಅರ್ಜುನನ ಮಾತಿನಲ್ಲಿ ಮೂಡಿದುದುಂಟಷ್ಟೆ. ಜೀವನದರ್ಶನವೆಂಬುದು ಹೀಗೆಯೇ ಎಲ್ಲೆಡೆಗೂ ಅವರವರ ಸಾಹಿತ್ಯದಲ್ಲಿ ಮೂಡಿರುವುದು ಸ್ವಾಭಾವಿಕ.

[2] 'ಶಿವರಾತ್ರಿ', ಪುಟ ೭೩

ಖದ್ದರ ಧಾರಿಗಳಾದ ಧೋತರ ಜುಬ್ಬದ ಪಕ್ಕಾ ಗಾಂಧೀವಾದಿಗಳೆಂದೋ. ಹೊಸ ನಾಗರಿಕತೆಯ ಶಿಸ್ತು ಸಂಯಮಗಳನ್ನು ಅಳವಡಿಸಿಕೊಳ್ಳುವ ಹಂಬಲದಿಂದೋ ಹೇಗೋ ಏನೋ ನಮ್ಮಿಬ್ಬರಿಗೂ ಗಂಟುಹಾಕಿದ್ದರು. ಆದರೂ ಗೊರೂರರು ನನಗಿಂತ ಹದಿನೈದು ವರ್ಷ ಹಿರಿಯರು. ಯಾರನ್ನೂ ಬಹು ಬೇಗನೆ ವಿಶ್ವಾಸದಲ್ಲಿ ತಕ್ಕೊಂಡು ಸಲಿಗೆಯಿಂದ ಮಾತನಾಡುವ ಸಹಜ ಸ್ವಭಾವದ ಸಾಹಿತಿಗಳು. ಮಾತೇನು! ಹರಟೆಯಂತಿದ್ದರೂ ವಿವಿಧ ಜೀವನ ಪ್ರಸಂಗಗಳ ಕಥನ: ಅನುಭವಪೂರ್ಣ ಕಥನ. ಹಾಸ್ಯರಸ ಪರಿಪೂರ್ಣ ಪ್ರವಾಹ. ಸ್ನಾನ ಮಾಡಿ ಬಂದಮೇಲೆ ಇಬ್ಬರಿಗೂ ಎದುರಾದುದು ಒದ್ದೆಯಾದ ಧೋತರಗಳನ್ನು ಆರಲು ಹಾಕುವ ಸಮಸ್ಯೆ. ಕೂಡಲೇ ಗೊರೂರರು ತಮ್ಮ ಹಾಸಿಗೆಯ ಗಂಟನ್ನು ಬಿಚ್ಚಿ, ಅದಕ್ಕೆ ಬಿಗಿದ ಕತ್ತದ ಹಗ್ಗವನ್ನು ಕಿಡಿಕಿಯ ಕಂಬಿಗೆ ಕಟ್ಟಿ ಸಾಧನವನ್ನು ಏರ್ಪಡಿಸಿದರು. ನಾವು ತಂದ ಹಾಸಿಗೆಗಳನ್ನು ಹಾಸಿಕೊಳ್ಳುವ ಪ್ರಮೇಯವೇನೂ ಅಲ್ಲಿ ಇರಲಿಲ್ಲ. ಒಳ್ಳೆಯ ಗಾಳಿ, ಶುಭ್ರವಾದ ಮಗ್ಗಲು ಹಾಸಿಗೆ, ತಲೆದಿಂಬುಗಳೆಲ್ಲ ಮಂಚಗಳ ಮೇಲೆ ಸುಸಜ್ಜಿತವಾಗಿದ್ದುವು. ಅದರಿಂದ ನಮ್ಮ ಧೂಳು ತಿಂದ ಹಾಸಿಗೆಯ ಸುರುಳಿಗಳು ಮಂಚಗಳ ಬುಡದಲ್ಲಿ ಅಡಗಿಕೊಂಡಿದ್ದುವು. ನಮ್ಮ ಮೈ ಮೇಲಿನ ಖಾದೀ ಬಟ್ಟೆಗಳೂ ಕೂಡ ಆ ಹಾಸಿಗೆಗಳ ಮೇಲುಹೊದಿಕೆಯ ಸ್ವಚ್ಛತೆಯ ಮುಂದೆ ಮಂಕಾಗಿ ತೋರುತ್ತಿದ್ದುವು! ಆದರೆ ಆ ಕೋಣೆಯಲ್ಲಿ ಇರುವವರು ನಾವಿಬ್ಬರೂ ಅಂಥವರೇ ತಾನೆ? ಅದರಿಂದ ಪರಸ್ಪರರಲ್ಲಿ ಸಲಿಗೆ ಇನ್ನಷ್ಟು ಹೆಚ್ಚಿತು. ಆತ್ಮೀಯತೆ ಬೆಳೆಯಿತು. ಮುಂದೆ ತಿಂಡಿಗೆ ಹೋಗಲಿ, ತೀರ್ಥಕ್ಕೆ ಹೋಗಲಿ. ಊಟಕ್ಕೆ ಹೋಗಲಿ. ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದಕ್ಕೆ ಹೋಗಲಿ ಎಲ್ಲೆಲ್ಲಿಯೂ ನಾವಿಬ್ಬರೂ ಜೊತೆಜೊತೆಯಾಗಿಯೇ ಇರುತ್ತಿದ್ದೆವು. ಪರಸ್ಪರ ಮಾತನಾಡಿಕೊಳ್ಳದೆಯೂ ಒಬ್ಬರಿಗೊಬ್ಬರು ಅನುಕೂಲರಾಗಿ ವರ್ತಿಸತೊಡಗಿದೆವು. ಆಗೆಲ್ಲ ಅವರು ನನ್ನ ಮೇಲೆ ಬೀರಿದ ಪ್ರಭಾವ ಅಷ್ಟಿಷ್ಟಲ್ಲ. ಅವರ ಸಾಹಿತ್ಯಕ್ಕಿಂತಲೂ ಅವರ ವ್ಯಕ್ತಿತ್ವದ ಘನತೆ ಹೆಚ್ಚಿನದೆಂದು ಆಗಲೇ ನನ್ನ ಅನುಭವಕ್ಕೆ ಬಂದುದು. ಅದೊಂದು ದರ್ಶನವೇ ಸರಿ. ಸರಳ. ಸ್ವಾಭಾವಿಕ. ನಿರಾಡಂಬರ ಜೀವನವದು. ಪರರಿಗೆ ನೆರವು ನೀಡುವುದು ಅವರ ಸಹಜ ಸ್ವಭಾವ. ರಸಿಕತೆ ಅವರ ಲಕ್ಷಣ.ಹಾಸ್ಯ ಅವರ ವೃತ್ತಿ, ಪ್ರವೃತ್ತಿ. ಇದನ್ನೇ ನಾವು ಅವರ ಸಾಹಿತ್ಯದಲ್ಲಿಯೂ ಕಾಣುತ್ತೇವೆ.

ಇದೊಂದು ಇತ್ತೀಚಿಗೆ ಅವರಿಂದ ನನಗೆ ಒದಗಿದ ಪ್ರಯೋಜನ. ಆದರೆ ಇದರ ಪೂರ್ವದಲ್ಲಿ ಬಹು ದಿನಗಳ ಹಿಂದೆಯೇ ನಮ್ಮ ಮನೆಯವರ ಮೇಲೆ ಗೊರೂರರು ಬೀರಿದ ಪ್ರಭಾವ ಇನ್ನೂ ಗಾಢತರವಾದುದು; ಗೂಢತರವೂ ಆದುದು. ಆಗ ನನ್ನ ಹೆಂಡತಿ ಚಿಕ್ಕವಳು ಬಸುರಿ. ಆಗ ತಾನೇ ಗೊರೂರರ 'ಸತೀ ಕಸ್ತೂರ ಬಾ' ಪ್ರಕಟವಾಗಿತ್ತು. ಗರ್ಭಿಣಿಯರಿಗೆ ಒಳ್ಳೆಯ ಕಥೆ, ಚರಿತ್ರೆಗಳನ್ನು ಓದಿ ಹೇಳಿದರೆ ಹೊಟ್ಟೆಯಲ್ಲಿ ಇರುವ ಕೂಸಿನ ಮೇಲೆಯೂ ಅವರ ಪ್ರಭಾವ ಆಗುವುದೆಂದು ನನ್ನ—ಆಗ ನಮ್ಮ ಅಲ್ಪ-ನಂಬುಗೆ. ಅವಳಿಗೆ ಆಗ ಓದಲೂ ಬರುತ್ತಿರಲಿಲ್ಲ. ಅದರಿಂದ ನಾನೇ 'ಸತೀ ಕಸ್ತೂರ ಬಾ'

ಅವಳ ಹತ್ತಿರ ಓದಿ ಹೇಳುತ್ತಿದ್ದೆ. ಅವಳು ತನ್ಮಯಳಾಗಿ ಆಸ್ಥೆಯಿಂದ ನನ್ನ ಓದನ್ನು ಕೇಳುತ್ತಿದ್ದಳು. ನಡುನಡುವೆ ಏನಾದರೂ ಸ್ವಲ್ಪ ಅರ್ಥವನ್ನೋ ಭಾವವನ್ನೋ ವಿವರಿಸಲು ನಾನು ತೊಡಗುತ್ತಿದ್ದೆ. ಆಗ ಅವಳು ನನ್ನನ್ನು ತಡೆದು, “ನೀವು ಹೇಳುವುದೇನೂ ಬೇಡ; ಹಾಗೇ ಓದುತ್ತ ಹೋಗಿರಿ” ಎಂದು ಸೂಚಿಸುತ್ತಿದ್ದಳು. ಅದರಿಂದ ನನಗೂ ಒಂದಿಷ್ಟು ಹೆಮ್ಮೆಯೇ. ನನ್ನವಳು ಅಷ್ಟೇನು ‘ದಡ್ಡಿ’ಯಲ್ಲವೆಂದು. ಅದೇನೋ! ಒಮ್ಮೆಯಲ್ಲ, ನಾಲ್ಕಾರು ಸಲ ಆ ಪುಸ್ತಕವನ್ನು ಓದಿಸಿ ಕೇಳಿಯೇ ಕೇಳಿದಳು, ನನ್ನವಳು. ಅದಕ್ಕೆ ತಕ್ಕಂತೆ ನಮ್ಮ ಮಗಳೂ ಸುಗುಣಿಯೇ ಆಗಿ ಜನಿಸಿದಳು! ಆಗ ಅದು ನನಗೆ ಗೊತ್ತಾಗಿರಲಿಲ್ಲ. ಇತ್ತೀಚೆಗೆ ಮಗಳು ದೊಡ್ಡವಳಾಗಿ ಗಂಡನ ಮನೆಯಲ್ಲಿ ಸಂಸಾರ ಮಾಡುತ್ತಿರುವಾಗ ಹೆಚ್ಚು ಹೆಚ್ಚಿಗೆ ಅನುಭವಕ್ಕೆ ಬರುತ್ತ ಹೋಯಿತೆನ್ನಿ. ಆದರೆ ನನ್ನ ಹೆಂಡತಿಗೆ ಮಾತ್ರ ಮೊದಲಿನಿಂದಲೂ ಇಂಥ ನಂಬಿಕೆ ಇರಬೇಕು. ಮುಂದೆ ಅವಳು ನನ್ನಿಂದ ಓದು ಕಲಿತು, ಮನೆಯಲ್ಲಿ ತನ್ನದೇ ಆದ ಒಂದು ಗ್ರಂಥಭಂಡಾರ—ತನ್ನ ತವರು ಮನೆಯಿಂದ ತಂದ ಟ್ರಂಕಿನಲ್ಲಿ—ರೂಪಿಸಿಕೊಂಡಾಗ ‘ಮಲ್ಲಿಗೆ ದಂಡೆ’, ‘ಗರತಿಯ ಹಾಡು’ಗಳ ಜೊತೆಯಲ್ಲಿ ಗೊರೂರರ ‘ಹಳ್ಳಿಯ ಹಾಡುಗಳು’, ‘ಸತೀ ಕಸ್ತೂರಿ ಬಾ’ಗಳನ್ನೂ ಜೋಪಾನವಾಗಿ ಇಟ್ಟುಕೊಂಡಿದ್ದಾಳೆ. ಆಗಾಗ ಹೊರಗೆ ತೆಗೆದು ಓದುವುದೂ ಕಂಡುಬರುತ್ತದೆ. ಈಗೀಗ ನಾನು ಮನೆಗೆ ಹಲವಾರು ಪುಸ್ತಕಗಳನ್ನು ತಂದು ಹಾಕಿದರೂ ಅವುಗಳ ಮಹತ್ವ ಅವಳಿಗಿಲ್ಲ. ಆ ‘ಸತೀ ಕಸ್ತೂರಿ ಬಾ’, ‘ಹಳ್ಳಿಯ ಹಾಡು’ಗಳೇ ಅವಳ ಆರಾಧ್ಯ ಗ್ರಂಥಗಳು! ಪಾರಾಯಣ ಪುಸ್ತಕಗಳು! ಅವಳಿಗೆ ಅವೇ ಪುರಾಣ. ಅವೇ ಗೀತೆಗಳು, ಬ್ರಹ್ಮಸೂತ್ರಗಳು. ಬೆಳೆಯುತ್ತಿರುವ ನಮ್ಮ ಸಂಸಾರದಲ್ಲಿ ಇವಿಷ್ಟನ್ನೇ ಓದುತ್ತಿದ್ದರೂ ಸಾಕೆಂದು ಭಾವಿಸಿದಂತಿದೆ, ಅವಳು. ಇದು ನಮ್ಮವಳ ಮೇಲೆ ಆದ ಗೊರೂರರ ಸಾಹಿತ್ಯದ ಪ್ರಭಾವ. ‘ರೋಡ್ ಎಂಜಿನ್’ ಡ್ರೈವರನ ಮಾತಿನ ಪರಿಣಾಮವನ್ನು ನೆನೆದಾಗ ನನಗೆ ಈ ಸಂಗತಿಯೆಲ್ಲ ನೆನಪಾಗುವುದು. ಗೊರೂರರ ಅನುಭವದ ಆಳ, ತೀಕ್ಷ್ಣತೆಗಳ ಅರಿವಾಗುವುದು. ಆ ಜೀವನ ದರ್ಶನದ ಕಲ್ಪನೆಯುಂಟಾಗುವುದು.

ಗೊರೂರರ ಕೃತಿಗಳಲ್ಲಿ ಅವರ ವ್ಯಕ್ತಿತ್ವವು ಹಾಲಿನ ಮೇಲಿನ ಕೆನೆಯಂತೆ ನವುರಾಗಿ ವ್ಯಕ್ತವಾಗುತ್ತದೆ. ಅವರ ಸಾಹಿತ್ಯದಲ್ಲಿ ರೂಪುಗೊಂಡ ಯಾವುದೋ ಒಂದು ಪಾತ್ರದ ಬಾಯಿಂದ ಹೊರಟ ಒಂದು ವಾಕ್ಯದಿಂದಾಗಲಿ, ಸುತ್ತಲಿನ ಸೃಷ್ಟಿಯಲ್ಲಿ ನಡೆದ ಒಂದು ಘಟನೆಯಿಂದಾಗಲಿ ಅವರ ಜೀವನದರ್ಶನವು ಅಭಿವ್ಯಕ್ತಿಯನ್ನು ಪಡೆಯುತ್ತದೆ. ಆ ಮಾತು, ಆ ಘಟನೆಗಳು ಹಾಲಿಗೆ ಉಷ್ಣತೆಯನ್ನು ಕೊಟ್ಟಂತೆ. ಹಾಲನ್ನು ಚೆನ್ನಾಗಿ ಕೆನೆ ಬರುವಂತೆ ಕಾಯಿಸುವುದು ಅದರಿಂದ ಹೆಚ್ಚಿನ ಪ್ರಯೋಜನವನ್ನು ಹೊಂದಲಿಕ್ಕೆಂದೇ ಅಲ್ಲವೆ? ಅದರಂತೆ ಸಾಹಿತ್ಯ ಕೃಷಿಯು ಇವರ ಜೀವನ ಮಥನಕ್ಕೊಂದು ಸಾಧನವಾಗಿ ಏರ್ಪಟ್ಟಿದೆ. ‘ಒಂದು ಸಂಜೆ’ಯಲ್ಲಿ ಅದೂ ಸುಂದರವಾದ ಸಂಜೆ; ಆ ದೃಷ್ಟಿಯಿದ್ದವರಿಗೆ ಎಲ್ಲ ಸಂಜೆಗಳೂ ಸುಂದರವೇ. ಗೊರೂರರಂತೂ “ಪ್ರತಿಯೊಂದು ಮರವೂ ನಮ್ಮ

ಮಿತ್ರನೇ. ಲತೆಗಳು ಪುಷ್ಪ ತುಟಿಗಳಿಂದ ನಮ್ಮೊಡನೆ ನಗುತ್ತವೆ. ಪ್ರತಿಯೊಂದು ಗುಡ್ಡೆಯೂ ಬಂಡೆಯೂ ನಮ್ಮೊಂದಿಗೆ ಒಂದೊಂದು ಕತೆ ಹೇಳುತ್ತದೆ. ಸಣ್ಣ ಕಲ್ಲುಗಳ ಮೇಲೆ ಜುಳುಜುಳನೆ ಹರಿಯುವ ಝರಿ ನಮ್ಮೊಂದಿಗೆ ಸರಸ ಸಂಭಾಷಣೆ ಮಾಡುತ್ತದೆ"[1] ಎನ್ನುತ್ತಾರೆ. ಇಂಥ ಸನ್ನಿವೇಶದಲ್ಲಿ ಹಸುಗಳೂ ಆಡುಗಳೂ ಬೋರಯ್ಯನ ಪಿಳ್ಳಂಗೋವಿಯ ಧ್ವನಿಯನ್ನು ಕೇಳುತ್ತ ಸುಖವಾಗಿದ್ದುವು. "ಎಲ್ಲಿ ನೋಡಿದರೂ ಪ್ರಕೃತಿಯಲ್ಲಿ ಆನಂದ. ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟ ಎಲ್ಲವೂ ಸುಖವಾಗಿರುವುದನ್ನು ಬಲ್ಲವು. ಆದರೆ ಮನುಷ್ಯನಿಗೆ ಬಾಳುವುದೇ ತಿಳಿಯಲಿಲ್ಲವಲ್ಲ!"[2] ಎಂದುಕೊಳ್ಳುತ್ತಾರೆ. ಬೋರಯ್ಯನೊಡನೆ "ಆಡಿಗೆ ಕೂಡ ಬಾಳುವುದು ಗೊತ್ತು. ಮನುಷ್ಯನಿಗೆ ಗೊತ್ತಿಲ್ಲವಲ್ಲ!"[3] ಎನ್ನುತ್ತಾರೆ. ಆಗ ಬೋರಯ್ಯನಾಡಿದ ಸ್ವಾಭಾವಿಕವಾದ ಒಂದು ಮಾತಿನಿಂದ ಮಾನವನ ಸಾಧನೆಯ ಮೇಲೆಯೇ ಇವರ ದೃಷ್ಟಿಯು ಹರಿಯುತ್ತದೆ. "ಅದು ನೂರಾರು ವರ್ಷಗಳಿಂದ ಹೀಗೆ ಬದಲಾವಣೆ ಇಲ್ಲದೇ ಇದೆ"[4] ಎಂದು ಆರಂಭವಾಗಿ ಇವರ ವಿಚಾರ ಚಕ್ರವು ಮುಂದುರುಳುತ್ತದೆ. "....ಮನುಷ್ಯನೋ? ಮನುಷ್ಯ ಒಂದು ಆತ್ಮ, ತೇಜಸ್ಸು, ಚೈತನ್ಯ, ಬುದ್ಧಿ. ಉನ್ನತಿಗೇರಲು ಸಾಧನೆ ಮಾಡುವುದೇ ಈ ಚೈತನ್ಯದ ಗುರಿ. ಜಡತ್ವವನ್ನಳಿದು ಅಮೃತತ್ವವನ್ನು ಸಂಪಾದಿಸುವ ಕಾರ್ಯವೇ ಇದರ ಲಕ್ಷಣ. ಅತೃಪ್ತಿಯೇ ಬುದ್ಧಿಯ ಕುರುಹು....ಗಳಿಗೆ ಗಳಿಗೆಗೂ ದಿನದಿನಕ್ಕೂ ಮನುಷ್ಯ ಜ್ಞಾನದ ಹೊಸ ಹೊಸ ಮೆಟ್ಟಿಲನ್ನು ಏರುತ್ತಲೇ ಇದ್ದಾನೆ....ಜಡವಾದ ದೇಶ ಕಾಲಗಳ ಮಿತಿಗಳನ್ನು ಮೀರಿ ಮಾನವ ಜನಾಂಗವೆಲ್ಲ ಒಂದೇ ಕುಟುಂಬ ಎಂಬ ಸತ್ಯದ ಸಾಕ್ಷಾತ್ಕಾರವನ್ನು ಹೊಂದಿ ಆಚರಣೆಯಲ್ಲಿ ತರಲು ಮಾನವ ಹೋರಾಡುತ್ತಿದ್ದಾನೆ.

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ

ಈ ಋಷಿವಾಣಿಯನ್ನೇ ಇಂದಿನ ವಿಜ್ಞಾನವಾಣಿ ನಿಜವಾಗಿಸುತ್ತಿದೆ....ಮಹಾಘನ್ಯಗಳಾದ ಶಕ್ತಿಗಳು ಇವನ ಕೈವಶವಾಗುತ್ತಿವೆ....ಋಷಿವಾಣಿಯ ಉತ್ತರಾಧಿಕಾರಿಗಳು ವಿಜ್ಞಾನಿಗಳು. ಆದರೆ ವಿಜ್ಞಾನಿಗಳ ಗುರಿಯು ಆ ಋಷಿವಾಣಿಯ ಗುರಿಯೇ ಆಗಿರಬೇಕು....ಸರ್ವರಿಗೂ ಸುಖವಾಗಲಿ. ಎಲ್ಲರೂ ನಿರೋಗಿಗಳಾಗಲಿ. ಸರ್ವರಿಗೂ ಮಂಗಳ ದರ್ಶನವಾಗಲಿ. ಯಾರಿಗೂ ದುಃಖ ಬೇಡ."[5] ಇದು ಭಾರತೀಯ ಸಂಸ್ಕೃತಿ. ಗೊರೂರರ ಜೀವನ ದರ್ಶನ.

---

[1] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು,' ಪುಟ ೧೨೮

[2] ಅದೇ.

[3] ಅದೇ, ಪುಟ ೧೨೯

[4] ಅದೇ.

[5] ಅದೇ, ಪುಟ ೧೨೯-೩೦

ಮಾನವತೆಯ ಮಹಿಮೆಯನ್ನು ಗುರುತಿಸಿದ ಗೊರೂರರು ಉಳಿದ ಪ್ರಾಣಿವರ್ಗದ ಶಕ್ತಿಯನ್ನು ಅಲ್ಲಗಳೆದಿಲ್ಲ. 'ನಮ್ಮ ಎಮ್ಮೆಗೆ ಮಾತು ತಿಳಿಯುವುದೆ ?' ಎಂದು ನಗೆ ಬರೆಹವೊಂದನ್ನು ಬರೆಯುತ್ತ ತಮ್ಮ ವಿಶಿಷ್ಟ ಹಾಸ್ಯ ಶೈಲಿಯಲ್ಲಿಯೇ "ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ವ್ಯಕ್ತಿಯಾಗಿದೆ. ಭಗವಂತ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಎಮ್ಮೆ ಮೂಕ ಪ್ರಾಣಿಯಾದರೂ ನಮ್ಮ ಆಚರಣೆ ಮಾತುಗಳಿಗೆ ಒಂದು ವಿಘಾತವ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕ ಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲ ಎಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೆ ?"[1]—ಎಂದು ನಮಗೇ ಪ್ರಶ್ನೆ ಹಾಕಿ ಕೊನೆಗೆ "ಆ ಎಮ್ಮೆಯ ಹಾಲನ್ನು ಕುಡಿದ ನಮ್ಮನ್ನೇ ನೋಡಿ !"[2] ಎಂದು ಹಾಸ್ಯದಲ್ಲಿ ತೇಲಿಸಿ ಬಿಡುತ್ತಾರೆ. ಗುಡ್ಡ-ಬೆಟ್ಟ, ಹೊಳೆ-ಹಳ್ಳ, ಗಿಡ-ಮರ, ಆಡು-ಕುರಿ ಮೊದಲಾದ ಸೃಷ್ಟಿಯ ಎಲ್ಲ ಹಂತಗಳಲ್ಲಿಯೂ ಇರುವ ದೈವಿಕ ಶಕ್ತಿಯನ್ನು ಗುರುತಿಸಿದೆ ಗೊರೂರರ ದೃಷ್ಟಿ. ಈ ದೃಷ್ಟಿಯು ಅವರ ಸಾಹಿತ್ಯ ಸೃಷ್ಟಿಗೆ ಮೂಲ ಪ್ರೇರಕಶಕ್ತಿಯಾಗಿರುವುದನ್ನು ನಾವು ಎಲ್ಲೆಡೆಗೂ ಕಾಣಬಹುದಾಗಿದೆ.

ಇದೇ ಧ್ವನಿಯನ್ನು ಕುರೂಪಿಯಾದ ಮಲ್ಲಮ್ಮನಿಂದ—ಮಲ್ಲಮ್ಮನ ಸುತ್ತ—ಸಂಘಟಿತವಾದ 'ಶಿವರಾತ್ರಿ'ಯ ಉತ್ಸವವನ್ನು ವಿವರಿಸುವುದರಲ್ಲಿಯೂ ನಾವು ಕಾಣುತ್ತೇವೆ. "ಅವಳಿಗಿಂತ ಹೆಚ್ಚು ಕುರೂಪಿಯಾದವಳನ್ನು ನಾನು ನೋಡಿಲ್ಲ...." ಎಂಬುದನ್ನು ಸೂಚಿಸಿ "ಯಾವುದಕ್ಕೂ ಅನುಪಯುಕ್ತವಾದ, ಪೂರ್ಣ ತಿರಸ್ಕಾರಕ್ಕೆ ಅರ್ಹವಾದ ವಸ್ತುವಿನಲ್ಲಿ ಕೂಡ ಭಗವಂತ ಒಂದು ಗುಣವನ್ನು ಇಟ್ಟಿರುತ್ತಾನೆ. ಆ ಗುಣವನ್ನು ಅರಿತವರಿಗೆ ಆ ವಸ್ತುವಿನ ಯೋಗ್ಯತೆ ಗೊತ್ತಾಗುತ್ತದೆ. ಉಳಿದವರಿಗೆ ಬರಿ ಶೂನ್ಯ. ಆ ಗುಣದಿಂದ ಭಗವಂತ ಅಲ್ಲಿ ತನ್ನ ಅಂಶವನ್ನು ತೋರಿಸಿಕೊಳ್ಳುತ್ತಾನೆ. "ನನ್ನ ಸೃಷ್ಟಿ ಯಾವುದೂ ವ್ಯರ್ಥವಲ್ಲ. ಪ್ರತಿಯೊಂದಕ್ಕೂ ಉದ್ದೇಶವಿದೆ, ಪ್ರತಿಯೊಂದಕ್ಕೂ ಕೆಲಸವಿದೆ, ಉಪಯೋಗವಿದೆ. ಉದ್ಧತನಾದ ನೀನು ಇದು ಯಾಕೆ ಎಂದು ಕೇಳಬಹುದು. ನಿನಗೆ ತಿಳಿಯುವ ಬುದ್ಧಿಯಿದ್ದರೆ, ನೋಡುವ ಕಣ್ಣು ಇದ್ದರೆ ಗೊತ್ತಾಗುತ್ತದೆ...."[3] ಎಂದು ಎಚ್ಚರಿಸುತ್ತಾರೆ. ಹಾಗೆಯೇ ಈಗಿನ ಹುಡುಗರ ಬುದ್ಧಿಯು ಎಲ್ಲಿಯವರೆಗೆ ಬಂದು ನಿಂತಿದೆಯೆಂದು ಸೂಚಿಸುತ್ತ "ಶಿವರಾತ್ರಿ ಎಂದರೆ ಅದೊಂದು ಹಬ್ಬ ;—ಕೊಬ್ರಿ ಸಕ್ರೆ"[4] ಎಂದು ಹೇಳುವರು. ಇಷ್ಟೇ ಅಲ್ಲ, ಅದು ಹೇಗೆ

1 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೮೨

2 ಅದೇ.

3 'ಶಿವರಾತ್ರಿ', ಪುಟ ೧೪೨–೪೩

4 ಅದೇ, ಪುಟ ೧೩೮

ಮುಂದುವರಿಯುತ್ತಿರುವುದನ್ನು ನಮ್ಮ ಗಮನಕ್ಕೆ ತರುವರು. "ಆಗ ಆನೆ ಕಟ್ಟಿ-ಕೊಂಡು ಬಂದರೂ ಆಲಯವನ್ನು ಹೋಗಬೇಡ ಎಂದು ಹೇಳುತ್ತಿದ್ದ ಮುತ್ತಣ್ಣ ಪಾಧ್ಯಾರರೂ, ನರಸಿಂಹ ದೇವಾಲಯಕ್ಕೆ ಬಂದರೂ ಅರ್ಚಕ ಕೊಟ್ಟ ತೀರ್ಥವನ್ನು ಬೆನ್ನಿಗೆ ಬಿಟ್ಟುಕೊಳ್ಳುತ್ತಿದ್ದ ಶಾಸ್ತ್ರಿಗಳೂ ಬೀದಿ ಬೀದಿಗಳಲ್ಲಿ ಮೂಲೆ ಮೂಲೆಗಳಲ್ಲಿ ಶಿವಾಧಿಕ್ಯ ವಿಷ್ಣ್ವಾಧಿಕ್ಯಗಳನ್ನು ಕುರಿತು ತೀವ್ರವಾಗಿ ಚರ್ಚಿಸುತ್ತಾ ನಿಂತಿರುತ್ತಿದ್ದರು. ಮುಷ್ಟಾಮುಷ್ಟಿ ಹಣಾಹಣಿ ಜಟ್ಟಾಜಟ್ಟಿ ಗುದ್ದಾಗುದ್ದಿ ಎಂದು ನಾವು ಹುಡುಗರೆಲ್ಲರೂ ಸುತ್ತ ಕಾದುಕೊಂಡು ನಿಂತಿರುತ್ತಿದ್ದೆವು. ಶಾಸ್ತ್ರಿಗಳ ಮುಖ ಕೆಂಪಗಾಗುತ್ತಿದ್ದಿತು. ಮುತ್ತಣ್ಣ ಪಾಧ್ಯಾರರಿಗೆ ಕೋಪದಿಂದ ಬಾಯಿ ತೊದಲುತ್ತಿದ್ದಿತು. ಹೀಗೆ ಸ್ವಲ್ಪ ಹೊತ್ತು ವಾಗ್ವಾದ ಮಾಡಿದ ನಂತರ ಶಾಸ್ತ್ರಿಗಳೂ ಪಾಧ್ಯಾರರೂ ಅವರವರ ದಾರಿ ಹಿಡಿದುಕೊಂಡು ಹೋಗುತ್ತಿದ್ದರು. ಇನ್ನು ಇವರಿಬ್ಬರೂ ನಾಲ್ಕಾರು ವರ್ಷಗಳಾದರೂ ಒಬ್ಬರೊಂದಿಗೆ ಒಬ್ಬರು ಮಾತನಾಡುವುದಿಲ್ಲವೆಂದು ನಾವು ಊಹಿಸುತ್ತಿದ್ದೆವು. ಆದರೆ ಆ ರಾತ್ರಿ ಶಿವದೇವಾಲಯದಲ್ಲಿ ಅವರಿಬ್ಬರೂ ಒಟ್ಟಿಗೇ ನಿಂತಿರುತ್ತಿದ್ದರು."[1] ಹೀಗೆ ನಮ್ಮ ಹಿರಿಯರಲ್ಲಿ ದೈವಭಕ್ತಿ, ತತ್ತ್ವಾನ್ವೇಷಣೆಗಳಿಗಾಗಿ ಬಿಸಿಬಿಸಿಯಾದ ಚರ್ಚೆಗಳು ನಡೆದರೂ ಅವು ಅವರ ಸ್ನೇಹದ ಮೇಲಾಗಲಿ, ಪರಸ್ಪರ ಸಹಜೀವನದ ಮೇಲಾಗಲಿ ಪರಿಣಾಮವನ್ನು ಮಾಡುತ್ತಿರಲಿಲ್ಲ. ಅಂಥ ಸುಸಂಸ್ಕೃತ ಮನೋವೃತ್ತಿ ನಮ್ಮ ಹಿಂದಿನದು. ಅದನ್ನು ಮಾತ್ರ ನಾವು ಅರಿಯದೆ ಅವರ ವಾದ-ವಿವಾದವನ್ನು ಜಗಳದ ಮಟ್ಟಕ್ಕೆ ಇಳಿಸಿ ನೋಡುವ ಹುಡುಗ ಬುದ್ಧಿ ನಮ್ಮದು.

ಫಲಾಪೇಕ್ಷೆಯಿಲ್ಲದೆ ತನ್ನ ಕರ್ತವ್ಯವನ್ನು ತಾನು ನೆರವೇರಿಸಬೇಕು—ಎಂಬುದು ಭಾರತೀಯ ಸಂಸ್ಕೃತಿಯ ಜೀವನಸೂತ್ರವೆನಿಸಿದೆ. ಇದನ್ನು ಹೇಳುವುದರಿಂದ ಮಾತ್ರ ಆ ಸೂತ್ರವನ್ನು ಅನುಸರಿಸಿದಂತೆ ಆಗುವುದಿಲ್ಲ. ಅದರಂತೆ ಬಾಳಬೇಕಾಗುತ್ತದೆ. ಅಂಥ ಬಾಳನ್ನು ಬಾಳುವವರಿಗೇನೇ. ಜನಜೀವನದಲ್ಲಿ ಸದ್ದಿಲ್ಲದೆ ಆ ಸೂತ್ರವನ್ನು ಅರಿತೋ ಅರಿಯದೆಯೋ. ಸ್ವಾಭಾವಿಕವೆನ್ನುವಂತೆ ಆಚರಣೆಯಲ್ಲಿ ತರುವ ವ್ಯಕ್ತಿಗಳು ದೃಷ್ಟಿಗೆ ಬೀಳುವುದುಂಟು. ತನ್ನ ಕರ್ತವ್ಯದಲ್ಲಿ ತಾನು ಲೀನನಾದ ಬೆಸ್ತರ ಕರಿಯನೊಬ್ಬನು ಗೊರೂರರಿಗೆ ಯೋಗಿಯಂತೆ ಕಂಡಿದ್ದರೆ ಆಶ್ಚರ್ಯಪಡುವ ಕಾರಣವಿಲ್ಲ. ಬೆಸ್ತರ ಕರಿಯ ಯೋಗಿಯೇ ? ಎಂಬ ಪ್ರಶ್ನೆಯಿಂದಲೇ ಕರಿಯನ ಚಿತ್ರಣವನ್ನು ಆರಂಭಿಸುತ್ತಾರೆ. ಅವನ ಜೀವನದ ವಿವಿಧ ಘಟ್ಟ ಹಾಗೂ ಪ್ರಸಂಗಗಳನ್ನು ವರ್ಣಿಸುತ್ತ "ಕರಿಯನಿಗೆ ಬಾಲ್ಯವೂ ಇಲ್ಲ ಮುಪ್ಪೂ ಇಲ್ಲ"[2]; "ಕರಿಯನ ಆರೋಗ್ಯಕ್ಕೆ ಅವನ ಕಸುಬೇ ಕಾರಣ"[3]; "ಕರ್ಮದಲ್ಲಿ ಕುಶಲನಾಗಿರುವುದು ಯೋಗ"[4]; "ಮನುಷ್ಯನಿಗೆ

---

[1] 'ಶಿವರಾತ್ರಿ', ಪುಟ ೧೩೮

[2] 'ಬೆಸ್ತರ ಕರಿಯ', ಪುಟ ೭

[3] ಅದೇ, ಪುಟ ೬

[4] ಅದೇ, ಪುಟ ೯

ಭಯವಿರಬಾರದು. ಅದರಂತಹ ರೋಗ ಬೇರೆ ಯಾವುದೂ ಇಲ್ಲ. ಕರಿಯನಿಗೆ ಭಯವೆಂಬುದೇ ಇಲ್ಲ"[1] ಇತ್ಯಾದಿ ಮಾತುಗಳನ್ನು ಸ್ಪಷ್ಟಪಡಿಸುತ್ತಾರೆ. ಕೊನೆಗೆ ಒಮ್ಮೆ ಅವನ ಮನೆಯ ಮುಂದೆ ಹೋಗಿ ನಿಂತಾಗ "ಕರಿಯ ನಿಜವಾಗಿಯೂ ಯೋಗಿಯೇ ಎಂಬ ಪ್ರಶ್ನೆ ನನಗೆ ತೋರಿತು"[2] ಎಂದು ಸೂಚಿಸುತ್ತಾರೆ. ಇಷ್ಟೇ ಅಲ್ಲ, "ಕರಿಯನಿಗೆ....ಶತ್ರುಗಳೂ ಇಲ್ಲ, ಮಿತ್ರರೂ ಇಲ್ಲ. ಹಳೆಯ ಹೆಂಡತಿ ಸತ್ತ ದುಃಖವೂ ಇಲ್ಲ : ಹೊಸ ಹೆಂಡತಿ ಬಂದ ಆನಂದವೂ ಇಲ್ಲ. ಅವನನ್ನು ಬಯ್ಯುವವರೂ ಇಲ್ಲ, ಹೊಗಳುವವರೂ ಇಲ್ಲ. ಅವನ ಕಸಬೇ ಅವನ ದೇವರು. ದೊರೆಯಲಾರದ ಸುಖವನ್ನು ಅವನು ಹುಡುಕಿಕೊಂಡು ಹೋಗುವವನೂ ಅಲ್ಲ. ತನ್ನನ್ನು ಹುಡುಕಿಕೊಂಡು ಬಂದ ದುಃಖದಿಂದ ತಪ್ಪಿಸಿಕೊಂಡು ಓಡಿಹೋಗುವವನೂ ಅಲ್ಲ. ಎಲ್ಲಾ ನೀರನ್ನು ತನ್ನಲ್ಲಿ ಒಳಗೊಂಡ ಸಮುದ್ರ ಹೇಗೆ ಶಾಂತವಾಗಿರುತ್ತದೋ, ಹಾಗೆ ಕರಿಯ ಲೋಕದ ಹೊಡೆತ ಒದೆತಗಳನ್ನು ಸಹಿಸಿಕೊಂಡು ಅವಕ್ಕಾಗಿ ಯಾರ ಮೇಲೆಯೂ ಅಸಮಾಧಾನ ಅಸೂಯೆ ಪಡದೆ ಶಾಂತನಾಗಿರುತ್ತಾನೆ."[3] ಇದು ಯೋಗಿಯ ಲಕ್ಷಣವಲ್ಲದೆ ಇನ್ನೇನು ? ಇದು ಭಾರತೀಯರ ಆದರ್ಶ ಜೀವನದ ಲಕ್ಷಣವೇ ಆಗಿದೆ.

ಇದೇ ದರ್ಶನವನ್ನು 'ಪೂಜೆ'ಯೆಂದು ತಾಲ್ಲೂಕು ಕಚೇರಿಯಲ್ಲಿ ಮೂವತ್ತೈದು ವರ್ಷ ಕೆಲಸ ಮಾಡಿ, ನಿವೃತ್ತರಾದ ವೆಂಕಟರಾಯರ ಕೃಷಿಕ ಜೀವನವನ್ನು ಚಿತ್ರಿಸುವುದರಲ್ಲಿ ಇನ್ನೂ ವಿವರವಾಗಿಯೂ ಸ್ಫುಟವಾಗಿಯೂ ಗೊರೂರರು ವ್ಯಕ್ತಪಡಿಸಿದ್ದಾರೆ. "ಮಲ್ಲಿಗೆ ಹಳ್ಳಿಗೆ ಬಂದ ಮೇಲೆ, ವ್ಯವಸಾಯವೆಂಬ ದೇವರು ಅವರನ್ನು ಆಕರ್ಷಿಸಿದ ಕೂಡಲೇ, ಆ ಹಿಂದಲ ಹಳೆಯ ದೇವರನ್ನು ಅವರೇ ಕೈಬಿಟ್ಟರು. ಆದರೆ ಅವರು ದೇವರನ್ನೂ ಕಾಯಕವನ್ನೂ ಒಂದಾಗಿ ಮಾಡಿಕೊಂಡಿದ್ದುದರಿಂದ ತಾನು ಉದ್ದಕ್ಕೂ ಭಗವದ್ಧ್ಯಾನದಲ್ಲಿಯೇ, ಭಗವತ್ ಕೈಂಕರ್ಯದಲ್ಲಿಯೇ ಇರುವುದು ಅವರಿಗೆ ಅನುಭವವಾಗುತ್ತಿದ್ದಿತು"[4] ; "ಕೆಲವರು ಹಾಸಿಗೆಯಿಂದ ಎದ್ದ ಕೂಡಲೇ ದೇವರನ್ನು ಧ್ಯಾನಿಸುವಂತೆ ವೆಂಕಟರಾಯರು ಎದ್ದ ಕೂಡಲೇ ತೋಟದಲ್ಲಿ ಏನು ಕೆಲಸ ಎಂದು ಯೋಚಿಸುತ್ತಿದ್ದರು...."[5] ; "ರಸಬಾಳೆಯ ಗೊನೆಯಲ್ಲಿಯೇ ಭಗವಂತ ಪ್ರತ್ಯಕ್ಷನಾದಂತೆ ಅವರ ಮನಸ್ಸು ಧ್ಯಾನಪರವಾಗಿತ್ತು."[6] ಹೀಗೆ ಕಾಯಕದಲ್ಲಿ ನಿರತರಾಗಿ ವೆಂಕಟರಾಯರು ಮನೆಯಲ್ಲಿ ದೇವರ ಪೂಜೆಯನ್ನು ಮಾಡುವುದನ್ನೂ ಸಹ ಮರೆತರು. ಅವರಿಗೆ ಕಾಯಕವೇ ಕೈಲಾಸವಾಗಿತ್ತು. ಇದನ್ನು ಅರ್ಥಮಾಡಿಕೊಳ್ಳದ ಅವರ ಹೆಂಡತಿಯು ಗಂಡನಿಗೆ ಪೂಜೆ

---

1 'ಬೆಸ್ತರ ಕರಿಯ', ಪುಟ ೧೨

2 ಅದೇ, ಪುಟ ೧೩

3 ಅದೇ, ಪುಟ ೧೩–೧೪

4 'ವೈಯ್ಯಾರಿ', ಪುಟ ೧೯೬

5 ಅದೇ, ಪುಟ ೧೯೭

6 ಅದೇ.

ಮಾಡಲು ಒತ್ತಾಯಿಸುತ್ತಾಳೆ. "ಕುಳಿತುಕೊಂಡು ಪೂಜೆಮಾಡಿ" ಎಂದು ಒತ್ತಾಯಿಸುತ್ತಾಳೆ. ಆಗ ವೆಂಕಟರಾಯರು "ಭಗವಂತನ ಊಳಿಗವನ್ನು ಮಾಡಬೇಕು. ಪೂಜೆ ನನ್ನಿಂದ ಸಾಧ್ಯವಿಲ್ಲ"[1] ಎಂದು ಮನಸ್ಸಲ್ಲಿಯೇ ಎಂದುಕೊಳ್ಳುತ್ತಿದ್ದರು. ಭೂಮಿಯನ್ನು ಉಳುತ್ತಿದ್ದ ಅವರಿಗೆ "ಮಳೆಯಿಂದ ತೋಯಿದ ನೆಲ, ಶುಭ್ರವಾಗಿ ಗೆಲುವಾಗಿ ಸ್ವಚ್ಛವಾಗಿ ಸುಗಂಧಯುಕ್ತವಾಗಿ, ಆಗ ತಾನೇ ಸ್ನಾನ ಮಾಡಿದ ಸುಂದರಿಯಂತೆ ಕಣ್ಣಿಗೆ ಇಂಪಾಗಿತ್ತು. ಬಿಸಿಲು ಏರುತ್ತಾ ಏರುತ್ತಾ ಭೂಮಿ ಗಳಿಗೆ ಗಳಿಗೆಗೂ ಹೊಸ ಹೊಸ ರೂಪದಿಂದ ರಮಣೀಯವಾಗುತ್ತಿದ್ದಿತು. ಉಳುವುದರಿಂದ ಪ್ರಸನ್ನವಾಗುವುದರ ಬದಲು ವೆಂಕಟರಾಯರಿಗೆ ಅದೇ ಒಂದು ಕೇಳಿಯಾಯಿತು....ಇಂದು ಅವರಿಗೆ ತನ್ನ ಭೂಮಿ. ಭಗವಂತನ ಪ್ರತಿರೂಪವಾಗಿಯೇ ಕಂಡಿತು. ಅವರಿಗೆ ದೇವರ ಪೂಜೆ ಮಾಡಿದ ಭಾವವುಂಟಾಯಿತು."[2] ಆ ಕಾರ್ಯಕ್ಕೆ ಆತಂಕವನ್ನು ಒಡ್ಡಿದಾಗ "ಅವರ ಹೆಂಡತಿ ಆಗಿನಷ್ಟು ಕುರೂಪಳಾಗಿ ಅವರಿಗೆ ಮತ್ತಾವಾಗಲೂ ಕಂಡಿರಲಿಲ್ಲ."[3] ಇಂಥ ನೇಗಿಲ ಯೋಗಿಯೂ ಹೆಂಡತಿಯ ಆಗ್ರಹದಿಂದ ಕಾಯಕದಿಂದ ಚ್ಯುತಗೊಳ್ಳಬೇಕಾಯಿತು. "ಊರವರಿಗೆಲ್ಲ ಒಂದು ಅನಾಸಕ್ತಿಯ ಭಾವದಿಂದ ಹಾಲು ಹಣ್ಣು ತರಕಾರಿಗಳನ್ನು ಒದಗಿಸುತ್ತಿದ್ದ ಒಬ್ಬ ಕರ್ಮಯೋಗಿ, ದೈವಪೂಜೆಯ ಗೀಳಿಗೆ ಬಲಿಯಾದುದರಿಂದ ಗ್ರಾಮಜೀವನದ ಜೀವಾಳವೇ ಮರೆಯಾಯಿತು."[4] ತೋಟ ಹಾಳುಬಿದ್ದಿತು. ಊರ ಜನರಿಗೆ ಹೂವು ಹಣ್ಣು ಹಾಲುಗಳೂ ಇಲ್ಲದಂತಾದುವು. ಒಂದು ವರ್ಷವೇ ಉರುಳಿತು. ದೇವರ ಅರ್ಚಕನು ಕೂಡ ಹೊಳೆಯ ಆಚೆಯ ವೆಂಕಟರಾಯರ ಪಾಳುಬಿದ್ದ ಜಮೀನನ್ನು ನೋಡಿ, "ಹೋದ ವರ್ಷ, ನಿಮ್ಮ ಜಮೀನನ್ನು ನೀವು ಮಾಡಿದ್ದಿರಿ. ಈ ವರ್ಷ ಬರಿಯ ದೇವರೇ ಮಾಡಿದ್ದಾನೆ ನೋಡಿ. ಪಾಳುಬಿದ್ದು ಗೋಳು ಸುರಿಯುತ್ತಿದೆ...."[5] ಎಂದನು. ಆ ಮಾತನ್ನು ವೆಂಕಟರಾಯರು ಕೇಳದಂತೆಯೇ ಇದ್ದರೂ ಊರಲ್ಲಿ ಹಾಲಿಲ್ಲದೆ ಕೊರಗುವ ಮಕ್ಕಳನ್ನೂ ಉತ್ತಮ ಹೂವುಗಳಿಲ್ಲದ ದೇವಪೂಜೆಯನ್ನೂ ಗಮನಿಸಿದಾಗ ಅವರ ಮನಸ್ಸು ಮತ್ತೆ ಕರ್ತವ್ಯದ ಕಡೆಗೆ ಹರಿಯಿತು. ತಮ್ಮ ಮನಸ್ಸಿನಲ್ಲಿ "ತಾನೇ ಅಪರಾಧಿ, ಕರ್ತವ್ಯವಿಮುಖನಾದೆ, ಕರ್ಮಭ್ರಷ್ಟನಾದೆ. ಕರ್ಮಯೋಗವನ್ನೂ ಅರಿಯಲಿಲ್ಲ, ಕರ್ಮಸನ್ಯಾಸವನ್ನೂ ಅರಿಯಲಿಲ್ಲ. "ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಂ" (ತಿಳಿದವರು ಸಂತೋಷವನ್ನುಂಟು ಮಾಡಬೇಕು. ಅದೇ ಈಶ್ವರ ಪೂಜೆ) ಎಂಬುದನ್ನು ತಿಳಿದೂ ತಿಳಿದೂ ಆಚರಿಸಲಿಲ್ಲ. ಕೋಪಕ್ಕೆ ಆಳಾದೆ. ನಿರುತ್ಸಾಹಕ್ಕೆ ಆಳಾದೆ. ಸುಲಭವಾಗಿ ಸಿಕ್ಕಿದ್ದ ಸೇವೆಯ ಅವ

---

1 ‘ವೈಯ್ಯಾರಿ’, ಪುಟ ೧೯೯

2 ಅದೇ, ಪುಟ ೨೦೨

3 ಅದೇ, ಪುಟ ೨೦೪

4 ಅದೇ, ಪುಟ ೨೦೮

5 ಅದೇ, ಪುಟ ೨೧೪

ಕಾಶವನ್ನೂ ಕಳೆದುಕೊಂಡೆ"[1] ಎಂಬ ಕೊರಗುಂಟಾಯಿತು. ಪುನಃ ತಮ್ಮ ಕಾಯಕದಲ್ಲಿ ನಿರತರಾದರು. ಕರ್ಮಯೋಗಿ ಒಬ್ಬನಿಂದ ಊರಿಗೆ ಊರೇ ಸುಖದಲ್ಲಿ ಬಾಳತೊಡಗಿತು. ಇದು ವೆಂಕಟರಾಯರ ಜೀವನದ ಮೂಲಕ ವ್ಯಕ್ತಗೊಂಡ ಗೊರೂರರ ಜೀವನ ನಿಷ್ಠೆಯಾಗಿದೆ, ಕಾಯಕದಲ್ಲಿ ಅವರಿಗಿರುವ ಶ್ರದ್ಧೆಯ ದ್ಯೋತಕವಾಗಿದೆ.

ಗೊರೂರರು ತಮ್ಮ ಕೃತಿಗಳಿಂದ ಬಹು ಮಹತ್ವಪೂರ್ಣವಾದ ಒಂದು ಸೇವೆಯನ್ನು ನಾಡಿಗೆ ಸಲ್ಲಿಸಿದ್ದಾರೆ. ಜಾನಪದವೆಂದರೆ ಜನಪದ ಸಾಹಿತ್ಯ, ಹಾಡು ಲಾವಣಿಗಳು ಎಂದಿಷ್ಟೇ ಕೆಲವು ದಿನ ನಮ್ಮಲ್ಲಿ ಭಾವನೆಯಿತ್ತು. ಆದರೆ ಜನಪದ ಸಾಹಿತ್ಯದ ಆಚೆಗೂ ಜನಜೀವನದ ರೀತಿನೀತಿಗಳೆಲ್ಲವೂ ಜಾನಪದವೆಂಬ ಅರಿವನ್ನು ಉಂಟುಮಾಡಿದವರೇ ಗೊರೂರರು. ಮಲ್ಲಿಗೆ ಹಳ್ಳಿ, ಹೇಮಾವತೀ ತೀರದ ಜನಪದದ ಜೀವನದ ವಿವಿಧ ಮುಖಗಳನ್ನು ಸ್ವಾನುಭವದಿಂದಲೂ ಸಹೃದಯತೆಯಿಂದಲೂ ಚಿತ್ರಿಸಿ ಕನ್ನಡದ ಸಿರಿಯನ್ನು ಹೆಚ್ಚಿಸಿದ್ದಾರೆ. ಅವರು ನಾವು ಆಧುನಿಕ ನಾಗರಿಕತೆಯಿಂದ, ಸುಖ ಸೌಲಭ್ಯಗಳಿಂದ ಪ್ರಕೃತಿಯಿಂದ ಹೇಗೆ ದೂರವಾಗುತ್ತಲಿದ್ದೇವೆ, ನೈಸರ್ಗಿಕ ಸುಖದಿಂದ ಹೇಗೆ ವಂಚಿತರಾಗುತ್ತಿದ್ದೇವೆ ಎಂಬುವನ್ನು ಬಹು ಸೊಗಸಾಗಿ ನಮ್ಮ ಒಳಗಣ್ಣು ಅರಳುವಂತೆ ಸೂಚಿಸಿದ್ದುಂಟು. "ಈಚೆಗೆ ನಮ್ಮೂರ ಬಳಿ ಹೇಮಾವತೀ ನದಿಗೆ ಸೇತುವೆಯನ್ನು ಕಟ್ಟಿದ್ದಾರೆ"[2] ಎಂದು 'ಸೇತುವೆ'ಯಿಂದಾದ ಅನುಕೂಲತೆಗಳನ್ನು ವಿವರಿಸುತ್ತ ಸಾಗಿದಂತೆ ಪ್ರಾರಂಭದಲ್ಲಿ ಕಂಡರೂ ಬರಬರುತ್ತ "ನಮ್ಮ ಊರ ಮುಂದೆ ನದಿ ಹರಿಯುತ್ತಿದ್ದರೂ ಸೇತುವೆ ಬಂದುದರಿಂದ ನಮಗೆ ಅದು ಸ್ವಲ್ಪ ದೂರವಾದಂತೆ ಆಗಿದೆ"[3] ಎಂದು ಮುಂದರಿಯುತ್ತಾರೆ. "ಆಗ—ಸೇತುವೆ ಇಲ್ಲದಾಗ—ಮಳೆಗಾಲದಲ್ಲಿ ಹೊಳೆಯ ದಡದಲ್ಲಿ ಹೋಗಿ, ಆ ಗಾಳಿ ಚಳಿಗಳನ್ನು ಹೊಡೆಸಿಕೊಂಡು ಬೆಸ್ತರು ದೋಣಿಯನ್ನು ತರುವವರೆಗೆ ಕಾಯುತ್ತಿರುವಾಗಲಂತೂ "ನಮಗೆ ಇನ್ನೂ ಚೆನ್ನಾಗಿ ಈಜು ಬಂದಿದ್ದರೆ?" ಎಂಬ ಭಾವ ಬರುತ್ತಿತ್ತು. ಬೇಸಿಗೆಯಲ್ಲೆಲ್ಲ ಈಜು ಕಲಿಯುವುದೇ ಒಂದು ಆನಂದವಾಗಿರುತ್ತಿತ್ತು. ಈಗಿನ ಹುಡುಗರಿಗೆ ಈ ಭಾವ ಬರುವುದೇ ಇಲ್ಲ. ನಮ್ಮಂತೆ ಈಜಲೂ ಬರುವುದಿಲ್ಲ. ಆ ಕಾಲದಲ್ಲಿ ವರುಷಕ್ಕೆ ಒಂದೊಂದು ಸಲ ಯಾರಾದರೂ ಧೀರರು ಪೂರ್ಣಪ್ರವಾಹ, ಮುಕ್ಕಾಲು ಪ್ರವಾಹಗಳಲ್ಲಿ ಹೊಳೆಯನ್ನು ಈಜಿ ದಾಟಿಯೇ ದಾಟುತ್ತಿದ್ದರು. "ಪ್ರವಾಹ ಎಷ್ಟೆಷ್ಟು ಬರುತ್ತಿದೆ—ಇವತ್ತು ಎಷ್ಟು—ನಿನ್ನೆ ಎಷ್ಟು—ಈಗ ಈಜಬಹುದೇ ಇಲ್ಲವೆ?—ಹೀಗೆ ಹೊಳೆ ನಮ್ಮ ಬಾಳಿಗೆ ಸೇರಿಕೊಂಡು ಗೆಳೆಯನಾಗಿ ನಾವು ಅದರೊಂದಿಗೆ ನಿತ್ಯ ಸಂಭಾಷಣೆ ನಡೆಸುತ್ತಿದ್ದೆವು....ಈಗ ಹೊಳೆಯಲ್ಲಿ ಬೇಸಗೆಯಲ್ಲಿ ಸಹ ಯಾರೂ ಇಳಿಯುವುದು ಕಾಣುವುದಿಲ್ಲ. ಮರಳಿನ ಮೇಲೆ ನಡೆದು ನೀರಿನಲ್ಲಿ ಹಾಯುವುದರಲ್ಲಿರುವ ನಿಜವಾದ ಆನಂದ ನಮ್ಮವರಿಗೆ ಮರೆಯುತ್ತ ಬಂತು. ಆಗ

---

1 'ವೈಯ್ಯಾರಿ', ಪುಟ ೨೧೮

2 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೩೨

3 ಅದೇ, ಪುಟ ೧೩೩

ಶಾಂಗುಡು ಆಗಿದ್ದಾಗ ಹೊಳೆ ಉಸುರಾಡುವುದೂ ಕೂಡ ನಮಗೆ ತಿಳಿಯುತ್ತಿದ್ದಿತು.
"ಇವತ್ತು ಬಣ್ಣ ಬದಲಾಯಿಸಿದೆ, ಮೇಲೆ ಎಷ್ಟೋ ಸ್ವಲ್ಪ ಮಳೆ ಆಗಿರಬೇಕು. ರಾತ್ರಿ
ನಾಲ್ಕು ಬೆರಳು ನೀರು ಬಂದು ಮತ್ತೆ ಇಳಿದಿದೆ." ಹೇಮಾವತಿ ನಮಗೆ ತಿಳಿಯುವಂತೆ
ಆಗ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಈಗ ಅವಳು ನಮ್ಮ ಲಕ್ಷ್ಯವನ್ನು ಸೆಳೆ
ಯಲು ಎಷ್ಟು ಬಗೆಯಿಂದ ನಲಿದರೂ ನಾವು ಅವಳ ಕಡೆ ನೋಡುವುದೇ ಇಲ್ಲ."[1]
ಹೀಗೆ ನಾವು ಸುತ್ತಲಿನ ಪ್ರಕೃತಿ ಸುಖದಿಂದ ಹೇಗೆ ವಂಚಿತರಾಗುತ್ತಿದ್ದೇವೆಂಬುದನ್ನು
ತುಂಬ ಸ್ವಾರಸ್ಯವಾಗಿ ನಿರೂಪಿಸಿದ್ದನ್ನು ಕಾಣುತ್ತೇವೆ. ಇಷ್ಟೇ ಅಲ್ಲ, ಈ ಸುಖದಿಂದ
ಮನುಷ್ಯ ತಾನೊಬ್ಬನೇ ವಂಚಿತನಾಗಲಿಲ್ಲ. ಪಶುಗಳನ್ನೂ ಕೂಡ ವಂಚನೆಗೆ ಈಡು
ಮಾಡಿದ. "ಈಚೆಗೆ ಸೇತುವೆಯ ಮೇಲೆ ಗಾಡಿಗಳು ಹೋಗುವಾಗ ಎತ್ತುಗಳು ಆಸೆ
ಯಿಂದ ನೀರಿನ ಕಡೆ ನೋಡುವುದನ್ನು ನೋಡಿದ್ದೇನೆ—ಬಹುಶಃ ಅವುಗಳಿಗೂ ಈಜುವುದು
ಮರೆತು ಹೋಗಿರಬಹುದೇನೋ!"[2] ಎಂದು ಕರುಳಿನ ಕಳವಳದ ನಿಟ್ಟುಸಿರನ್ನು ಸೂಸು
ತ್ತಾರೆ. ಇಲ್ಲಿದೆ, ಗೊರೂರರ ಜೀವನದರ್ಶನ.

ಇಷ್ಟಕ್ಕೇ ನಿಲ್ಲುವುದಿಲ್ಲ ಗೊರೂರರ ಭಾವನೆ. ಹೇಮಾವತಿಯ ತೀರದಲ್ಲಿಯ
ಜೀವನದ ಚಿತ್ರಗಳನ್ನು ಬಿಡಿಸುತ್ತ ನಾಗರಿಕತೆಗೆ ಒಳಗಾದ ಹೆಡ್‌ಮಾಸ್ತರು ಹೇಗೆ
ಮಾನವತೆಯಿಂದಲೇ ದೂರ ನಿಲ್ಲುತ್ತಾರೆಂಬುದನ್ನೂ ಹೇಳುತ್ತಾರೆ. "ನಮ್ಮ ಊರು
ಮಿಡಲ್ ಸ್ಕೂಲಿನ ಹೆಡ್‌ಮಾಸ್ಟರು, ತಾವು ತಮ್ಮ ಆಳಿನೊಂದಿಗೆ ಮಾತನಾಡುವಾಗ
ಎಲ್ಲಿ ಅವನಿಗೆ ಹೆಚ್ಚು ಪುರಸ್ಕಾರವನ್ನು ಕೊಟ್ಟುಬಿಡುತ್ತೇನೋ ಎಂದು ಹೆದರುತ್ತಾರೆ.
ಆಳು ಮಾತನಾಡುವಾಗ ಎಲ್ಲಿ ಅವನು ತಮ್ಮ ವಿಷಯದಲ್ಲಿ ಗೌರವವನ್ನು ಸೂಚಿ
ಯಷ್ಟಾದರೂ ಕಡಿಮೆ ಮಾಡಿ ತಪ್ಪಿಗೆ ಸಿಕ್ಕಿಹಾಕಿಕೊಳ್ಳುತ್ತಾನೋ ಎಂದು ಕಾಯು
ತ್ತಾರೆ. ಹೀಗಾಗಿ ಅವರಿಗೂ ಅವರ ಆಳಿಗೂ ವ್ಯವಹಾರ ಎಂದಿಗೂ ಸುಗಮವಾಗಿ
ನಡೆಯುವುದಿಲ್ಲ. ಅವರಿಬ್ಬರೂ "ಹೆಡ್‌ಮಾಸ್ಟರು, ಆಳು" ಹೊರತು ಎಂದಿಗೂ
"ಮನುಷ್ಯ ಮನುಷ್ಯ"ರಾಗುವುದು ಸಾಧ್ಯವಿಲ್ಲ."[3] ಆದರೆ ಅವರ ಮಗ ಹದಿನೈದು
ವರ್ಷದ ನಾಣಿ ಅವರ ಆಳಿನ ಹುಡುಗನ ಕೂಡ ನಿಜವಾದ ಆನಂದದಲ್ಲಿ ಕಳೆದು ಸುಖ
ವನ್ನು ಅನುಭವಿಸುತ್ತಾನೆ. ಈ ಮಾತನ್ನು ಹೇಳಿದರೆ ಹೆಡ್‌ಮಾಸ್ಟರರು ನಂಬುವುದಿಲ್ಲ.
ಹುಡುಗರು ಪ್ಯಾಸು ಮಾಡುತ್ತಾರೆ. ಡಿಗ್ರಿಗಳನ್ನು ಸಂಪಾದಿಸುತ್ತಾರೆ. "ಅಭಿವೃದ್ಧಿ"ಗೆ
ಬರುತ್ತಾರೆ. ಆದರೆ ಅವರು ನಿಜವಾಗಿಯೂ ಸುಖಿಗಳಾಗಿದ್ದಾರೆಯೋ ? ಬಾಲ್ಯದಲ್ಲಿರುವ
ಸುಖಪಡುವ ಶಕ್ತಿಯು ಅವರಲ್ಲಿದೆಯೆ? ಅವರು "ಮುಂದಕ್ಕೆ ಬಂದರೂ ಸುಖಿಗಳಾಗು
ವುದು ಪ್ರಾಯಶಃ ಈ ಬಾಲ್ಯವನ್ನು ಜ್ಞಾಪಿಸಿಕೊಂಡಾಗ ಮಾತ್ರವೆಂದು ಕಾಣು

---

1 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೩೪ ೧೩೬

2 ಅದೇ, ಪುಟ ೧೩೬

3 ಅದೇ, ಪುಟ ೯

ತ್ತದೆ."[1] ಹೀಗೆ ನಿಜವಾದ ಸುಖವು ಯಾವುದರಲ್ಲಿದೆಯೆಂಬುದನ್ನು ಸೂಚಿಸುತ್ತಾರೆ.

ಇಷ್ಟಕ್ಕೇನೆ ಅವರು ಸಮ್ಮ ಕೈಬಿಡುವುದಿಲ್ಲ. ಈ ಆಧುನಿಕ ನಾಗರಿಕತೆಯ ಸಂಸ್ಕಾರವನ್ನೂ ಸಹ ಒಂದು ದಿನ ನಮ್ಮ ಪ್ರಕೃತಿದೇವಿ ತನ್ನ ನಿಜವಾದ ಸೊಬಗಿನಿಂದ, ಸುಖದಿಂದ ಗೆದ್ದೇ ತೀರುತ್ತಾಳೆಂಬುದನ್ನೂ 'ಈಡಿಗರ ಹೆಣ್ಣು' ಎಂಬ ಲಲಿತ ಪ್ರಬಂಧದಲ್ಲಿ ಸುಂದರವಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಬೆಂಗಳೂರಿನ ಶ್ರೀಮಂತರ ಮಗನಾದ ಮಾಧುವು ನವನಾಗರಿಕತೆಯ ಪ್ರತಿನಿಧಿಯು. ಬಸ್ ನಿಲ್ದಾಣದಿಂದ ಹತ್ತು ಮೈಲಿ ದೂರ ಕಾಡಿನಲ್ಲಿರುವ ತನ್ನ ಸ್ನೇಹಿತನ ಹಳ್ಳಿಯಾದ ವಡ್ಯಾಣಕ್ಕೆ ಒಂದು ಸಲ ಹೋಗಿ ಬರಲಿಕ್ಕೂ ಸಿದ್ಧನಿಲ್ಲದ ಮನೋವೃತ್ತಿ ಅವನದು. ಶ್ಯಾಮನ ಒತ್ತಾಯಕ್ಕೆ ಎಂಬಂತೆ ಹಳ್ಳಿಗೆ ಹೋದ. ಅಲ್ಲಿ ಅವನ ಅವಸ್ಥೆ ಏನಾಯಿತೆಂಬುದನ್ನು ಗೊರೂರರ ಮಾತುಗಳಿಂದಲೇ ನಾವು ತಿಳಿಯಬೇಕು. "ಮಗುವು ಹೊಸ ಸಂಗತಿಗಳನ್ನು ಕುತೂಹಲದಿಂದ ನೋಡುವಂತೆ ಮಾಧುವು ಆ ಕಾಡಿನಲ್ಲಿ ಪ್ರಕೃತಿಯಲ್ಲಿ ಒಂದಾಗಿ ಸೇರಿಕೊಂಡನು. ಆ ಮಳೆನಾಡಿನ ಗಾನಕ್ಕೆ ತಾನೂ ಒಂದು ಶ್ರುತಿ ಎಂಬ ಭಾವನೆ ಅವನಿಗೆ ಆಗ ಚೆನ್ನಾಗಿ ಮನವರಿಕೆಯಾಯಿತು. ಆ ವಿಸ್ತಾರವಾದ ಕಾಡು, ಅದರಲ್ಲಿಯ ಅಂತರಿಕ್ಷ ಚುಂಬಿತಗಳಾದ ಮರಗಳು, ಎಲ್ಲೆಲ್ಲೂ ಮಾಲೆಗಳನ್ನು ಪೋಣಿಸಿದಂತೆ ತೋರುತ್ತಿದ್ದ ಬೆಟ್ಟಗಳ ಸಾಲು, ಅಂತರ್ಧಾರೆಯಾಗಿ ಕುಂಭದ್ರೋಣವಾಗಿ ಸುರಿಯುತ್ತಿದ್ದ ಮಳೆ, ಅವನು ಹಿಂದೆ ಕಾಣದಿದ್ದ, ಹೆಸರನ್ನು ಸಹ ಕೇಳದಿದ್ದ ಹಕ್ಕಿಗಳು, ಹುಳುಗಳು, ಚಿತ್ರ ವಿಚಿತ್ರವಾದ ಲತೆಗಳು ಕಾಡುಮೃಗಗಳು ಇವುಗಳನ್ನು ಕಂಡು ಆ ಪ್ರಕೃತಿಯ ಸ್ವಾಭಾವಿಕ ಮನೋಹರವಾದ ಮತ್ತು ರುದ್ರವಾಗಿದ್ದ ಜಿಡಗುಗಳ ಎದುರಿಗೆ, ಮಾಧುವಿಗೆ ತಾನು, ತನ್ನ ಅಧಿಕಾರ, ತನ್ನ ಬೆಂಗಳೂರು, ತನ್ನ ನಾಗರಿಕತೆ ಇವೆಲ್ಲಾ ಮಹತ್ತಾದುದರ ಎದುರಿಗೆ ಕ್ಷುದ್ರವಾದುದಂತೆ ಕಂಡಿತು. ತಿರುಗುತ್ತಿರಬೇಕು, ಇಲ್ಲವೇ ಓದುತ್ತಿರಬೇಕು, ಅಥವ ಸಿನೇಮಾ ನಾಟಕ ನೋಡಬೇಕು. ಇಲ್ಲದಿದ್ದರೆ ಸ್ನೇಹಿತರೊಂದಿಗೆ ಹರಟುತ್ತ ಕಾಫಿ ಟೀ ಕುಡಿಯುತ್ತಿರಬೇಕು, ಇಲ್ಲದಿದ್ದರೆ ಹೊತ್ತು ಹೋಗುವುದಿಲ್ಲವೆಂದುಕೊಂಡಿದ್ದ ಮಾಧುವಿಗೆ ಶ್ಯಾಮನ ಮನೆಯಲ್ಲಿ ಒಂದು ಹೊಸ ಅನುಭವವುಂಟಾಯಿತು. ಆದ್ಯಂತರಹಿತವಾದ ಪ್ರಕೃತಿಯಲ್ಲಿ ತಲ್ಲೀನನಾಗಿ ಸುಮ್ಮನೇ ಕುಳಿತಿರುವುದು ಒಂದು ವಿಧವಾದ 'ಟಾನಿಕ್' ಎಂದು ಅವನಿಗೆ ಭಾಸವಾಯಿತು. ಎಳ್ಳಿನಷ್ಟಾದರೂ ಬೇಸರಿಕೆ ಇಲ್ಲದೆ ಹೀಗೆ ನಿಶ್ಯಬ್ದವಾಗಿ ಒಂದೇ ಸಮನಾಗಿ ಉತ್ಸಾಹದಿಂದ ಕುಳಿತಿರುವುದು ಸಾಧ್ಯವೆಂದು ಮಾಧುವು ಭಾವಿಸಿರಲಿಲ್ಲ. ಎಂತಹ ಆಪ್ತ ಗೆಳೆಯನ ಸ್ನೇಹವಾದರೂ ಸಾನಿಧ್ಯವಾದರೂ ಒಂದೊಂದು ಸಲ ಬೇಸರಿಕೆಯನ್ನುಂಟುಮಾಡಬಹುದು. ಆದರೆ ಪ್ರಕೃತಿಯ ಸಾನಿಧ್ಯದಲ್ಲಿ ಮನುಷ್ಯನಿಗೆ ಎಂದಿಗೂ ಬೇಸರಿಕೆಯಾಗುವುದಿಲ್ಲವೆಂಬುದು ಮಾಧುವಿಗೆ ಆಗ ಮನದಟ್ಟಾಯಿತು."[2]

---

[1] 'ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು', ಪುಟ ೧೦

[2] 'ವೈಯ್ಯಾರಿ', ಪುಟ ೪೦

ಮಾಧುವಿನ ತಂದೆ ಭಾಸ್ಕರರಾಯರು ತಮ್ಮ ಮಗನಿಗೆ ನಿವೃತ್ತ ನ್ಯಾಯಾಧೀಶರ ಮಗಳಾದ ಮಣಿಯನ್ನು ತರಬೇಕೆಂದು ಆಲೋಚಿಸುತ್ತಿದ್ದರು. "ಮಣಿಗೆ ಹದಿನಾರು ವಯಸ್ಸಾಗಿತ್ತು. ತೆಳ್ಳಗೆ ಬೆಳ್ಳಗೆ ಎತ್ತರವಾಗಿದ್ದಳು. ಬಹಳ ವೈಯ್ಯಾರದ ಹುಡುಗಿಯಾಗಿದ್ದಳು. ಇಂಗ್ಲಿಷೂ ತಕ್ಕಮಟ್ಟಿಗೆ ಬರುತ್ತಿದ್ದಿತು. ಬಹಳ ಚೆನ್ನಾಗಿ ಅಲಂಕಾರ ಮಾಡಿಕೊಳ್ಳುತ್ತಿದ್ದಳು. ಅವಳನ್ನು ಕಂಡಕೂಡಲೆ ಜನರ ಲಕ್ಷ್ಯವು ಮೊದಲು ಅವಳ ಸೀರೆ, ರವಿಕೆ, ಕಾಲಿನ ಜೋಡು, ಕೈಚೀಲ, ಕೈಯಲ್ಲಿರುವ ಕರವಸ್ತ್ರ ಇವುಗಳ ಕಡೆಗೆ ಹೋಗಿ ಅನಂತರ ಮುಖದ ಕಡೆಗೆ ತಿರುಗುತ್ತಿದ್ದಿತು....ಎಷ್ಟು ಬಗೆಯ 'ಫೇಸ್ ಪೌಡರು' ಸುಗಂಧದ್ರವ್ಯಗಳು ದೊರಕುತ್ತಿದ್ದುವೋ ಅವುಗಳನ್ನೆಲ್ಲ ಮೈಗೆ ಹಚ್ಚಿಕೊಳ್ಳುತ್ತಿದ್ದಳು. ಯಾವ ಸಿನಿಮಾ ನಟಿಯರೂ ಅಲಂಕಾರ ಮಾಡಿಕೊಳ್ಳುವುದರಲ್ಲಿ ಅವಳಿಂದ ಪಾಠಗಳನ್ನು ಕಲಿಯಬೇಕಾಗಿದ್ದಿತು."[1] ಇಂಥವಳ ಕೂಡ ಮಾಧುವಿನ ಲಗ್ನ ನಿಶ್ಚಯವೂ ಆಗಿತ್ತು. ಮಾಧುವು ವಡ್ಯಾಣದ ಹಳ್ಳಿಗೆ ಸೇರಿದ ಈಡಿಗರ ಹೆಣ್ಣು ಲಕ್ಷ್ಮಿಯನ್ನು ಮೊದಲ ಬಾರಿಗೆ ನೋಡಿದ. ನದಿಯ ಮಡುವಿನಲ್ಲಿ ಸ್ನಾನ ಮಾಡಿ ಮೇಲೆದ್ದ ಅವಳನ್ನು ಒದ್ದೆಬಟ್ಟೆಯಲ್ಲಿ ನೋಡಿದ. "ಅವಳ ಸೀರೆಯಿಂದ ನೀರು ಧಾರೆ ಧಾರೆಯಾಗಿ ಕೆಳಕ್ಕೆ ಸುರಿಯುತ್ತಿದ್ದಿತು. ಬಿಚ್ಚಿಕೊಂಡಿದ್ದ ಜಡೆಯಿಂದ ನೀರಿನ ಕಣಗಳು ಕೆಳಕ್ಕೆ ಉದುರುತ್ತಿದ್ದುವು. ಕುರುಳಿನ ಮೇಲೂ, ಹುಬ್ಬುಗಳ ಮೇಲೂ, ತುಟಿಗಳ ಮೇಲೂ ನೀರಿನ ಹನಿಗಳು ಮಂಜಿನ ಹನಿಗಳಂತೆಯೂ ಮುತ್ತಿನ ಹರಳುಗಳಂತೆಯೂ ಹೊಳೆಯುತ್ತಿದ್ದುವು. ತೋಯ್ದಿದ್ದ ಸೀರೆಯು ಅವಳ ಮೈಯಿನ ಆಕೃತಿಯನ್ನು ಅನುಸರಿಸಿ ಅದಕ್ಕೆ ಅಂಟಿಕೊಂಡಿತ್ತು. ಆರೋಗ್ಯ ದೃಢಕಾಯಳಾದ ಪುಷ್ಟಳಾದ ಗೆಲುವಾದ ಅಂತಹ ಹುಡುಗಿ ಯಾರನ್ನೂ ಮಾಧುವು ಅಷ್ಟು ಹತ್ತಿರದಲ್ಲಿ ಆ ಸ್ಥಿತಿಯಲ್ಲಿ ನೋಡಿರಲಿಲ್ಲ. ಆ ದೇಹದ ಕಟ್ಟನ್ನು ನೋಡಿ ಅವನು ಪೂರ್ಣವಾಗಿ ಮಂಕಾದನು. ಅವನು ಮನಸ್ಸಿನಲ್ಲಿ "ಇದೀಗ ನಿಜವಾದ ಹುಡುಗಿ. ಭರ್ಜರಿ ಹೆಣ್ಣು" ಎಂದುಕೊಂಡನು."[2] ಬೆಂಗಳೂರಿನ ಅಧಿಕಾರ, ದರ್ಪಗಳನ್ನೆಲ್ಲ ತೊರೆದು. ಅವಳ ಕೂಡ ಮಲೆನಾಡಿನ ಆ ಹಳ್ಳಿಯಲ್ಲಿಯೇ ನಿಂತುಬಿಟ್ಟನು. ಎಂಥ ಅಧಿಕಾರದ ಹುದ್ದೆಗಳು ದೊರೆತರೂ ಅದರಲ್ಲಿ ಸುಖ ಶಾಂತಿಗಳು ಇಲ್ಲ. ಅವು ಅವನಿಗೆ ಆ ಪ್ರಕೃತಿಯ ಮಡಿಲಲ್ಲಿ ಲಭಿಸಿದುವು. ಅವನು ತನ್ನ ಸ್ನೇಹಿತನಿಗೆ–ಮರಳಿ ಬೆಂಗಳೂರಿಗೆ ಕರೆಯಲು ಬಂದ ಸ್ನೇಹಿತನಿಗೆ–"ಅಲ್ಲಿ ನೋಡು. ಆ ಎತ್ತು ಹೇಗೆ ಸ್ವೇಚ್ಛೆಯಿಂದ ಮೇಯುತ್ತಿದೆ. ನಾನೂ ಹಾಗೇ ಇದ್ದೇನೆ. ನನ್ನ ಜೀವ ಪೂರ್ಣವಾಗಿದೆ. ನಿನ್ನ ನಗರ, ನಿನ್ನ ನಡವಳಿಕೆ, ನಿನ್ನ ಕಾತರತೆ, ನಿನ್ನ ಜೀವನದ ಕೃತಕತೆ ಇವುಗಳನ್ನು ನಾನೂ ಅನುಭವಿಸಿ ಸಾಕಾಗಿ ಈ ಭೂಮಿ, ಈ ಬಯಲು, ಈ ಕಾಡು, ಈ ನದಿ, ಈ ಆಕಾಶ. ಈ ಮೋಡಗಳು. ಈ ಶಾಂತಿ ಇವುಗಳ ಮಡಿಲಲ್ಲಿ

1 'ವೈಯ್ಯಾರಿ', ಪುಟ ೮೫-೮೬

2 ಅದೇ, ಪುಟ ೯೨-೯೩

ಆಶ್ರಯವನ್ನು ಹೊಂದಿದ್ದೇನೆ"[1] ಎಂದು ಸ್ಪಷ್ಟವಾಗಿ ಹೇಳುವನು. ತಂದೆ ಭಾಸ್ಕರ ರಾಯರು "ಮೂರ್ಖ! ನಿನಗೆ ದೇವರು ಕೂಡ ಇಲ್ಲವೆ?"[2] ಎಂದು ಕೆರಳಿ ನುಡಿದಾಗ ಮಾಧುವು ಕೋಪಿಸಿಕೊಳ್ಳದೆ ಲಕ್ಷ್ಮಿಯನ್ನೂ ವಿಸ್ತಾರವಾಗಿ ಹರಡಿದ್ದ ಭೂಮಿಯನ್ನೂ ತೋರಿಸಿ "ಇದೇ ದೇವರು; ಇದೇ ದೇವಾಲಯ"[3] ಎಂದನು. ಹೀಗೆ ನವನಾಗರಿಕತೆಯ ಮೇಲೆ ಪ್ರಕೃತಿಯು ತನ್ನ ಪ್ರಭಾವವನ್ನು ಬೀರಿ, ವಿಜಯವನ್ನು ಸಂಪಾದಿಸಿದ ಬಗೆಯನ್ನು ಬಹು ಸುಂದರವಾಗಿ ಗೊರೂರರು ಚಿತ್ರಿಸಿದ್ದಾರೆ. ಅದರಲ್ಲಿ ತಮ್ಮದೊಂದು ಜೀವನ ದರ್ಶನವನ್ನೂ ಬಿತ್ತರಿಸಿದ್ದಾರೆ.

ಗೊರೂರರು ಗಾಂಧೀಜಿಯವರ ಮಾರ್ಗದಲ್ಲಿ ನಡೆದವರು. ಹಳ್ಳಿಯ ಜನರಲ್ಲಿ ಕೂಡಿ ಬಾಳಿದವರು. ಅವರ ಸುಖದುಃಖಗಳಲ್ಲಿ ಒಂದಾದವರು. ಅವರ ಸ್ವಭಾವವನ್ನು ಅರಿತವರು. ಆದ್ದರಿಂದ ಅವರು "ಭಾರತ ದೇಶದ ಅಶಿಕ್ಷಿತರಾದ ಹಳ್ಳಿಯ ಜನ ಜೀವಿಸಿರುವುದು ತ್ಯಾಗದಿಂದಲೇ. ಫಲಕ್ಕಾಗಿ ತಾನು ನಾಶವಾಗುವುದು ಬೀಜದ ಹೊಣೆಗಾರಿಕೆಯಾದಂತೆ, ಮುಂದಿನವರಿಗಾಗಿ ತಾನು ಸಾಯುವುದು ನಮ್ಮವರ ಸ್ವಭಾವ"[4] ಎಂಬುದನ್ನು ಮನಗಂಡಿದ್ದಾರೆ. "ಜೀವನದ ಸ್ವಾರಸ್ಯಗಳು ಅನುಭವವಾಗುವುದು ಆ ಜೀವನವನ್ನು ಅದರ ಪೂರ್ಣತೆಯಲ್ಲಿ ಬಾಳುವವರಿಗೆ. ಹಳ್ಳಿಯವರು ಬಾಳಿನಿಂದ ಎಂದಿಗೂ ವಿಮುಖರಾದವರಲ್ಲ"[5] ಎಂಬುದನ್ನವರು ಅರಿತಿದ್ದಾರೆ. "ನಮ್ಮ ರೈತನು ಸ್ವಾಭಾವಿಕವಾಗಿ ಸುಸಂಸ್ಕೃತನಾದವನು. ಅವನ ಹೃದಯವು ವಿಶಾಲವೂ ಕೋಮಲವೂ ಆದುದು. ಅವನಿಗೆ ಸ್ವಲ್ಪ ಸಹಾನುಭೂತಿ ಸ್ವಲ್ಪ ಸ್ನೇಹ ಸ್ವಲ್ಪ ಸಮಾನತೆ ಇವೂ ಸಿಕ್ಕಿದರೆ ಸಾಕು. ಅವನು ಇತರ ದೇಶದ ರೈತರಿಗೆ ಸಮಾನವಾಗುವುದಂತೂ ಸರಿಯೆ. ಎಲ್ಲರನ್ನೂ ಮೆಟ್ಟಿ ನಿಲ್ಲುವ ಶಕ್ತಿ ಅವನಿಗೆ ಬರುವುದು"[6] ಎಂಬ ಗುಟ್ಟನ್ನು ಅವರೂ ತಿಳಿದಿದ್ದಾರೆ. ರೈತನ ಪ್ರೇಮ ಜೀವನ, ಸಾವಿನ ಬಗ್ಗೆ ಇರುವ ಅವನ ತಿಳಿವಳಿಕೆಗಳನ್ನೆಲ್ಲ ಅವರು ಗಮನಿಸಿದ್ದಾರೆ. "ಪ್ರೇಮವು ಜೀವನದಲ್ಲಿ ಹೆಚ್ಚು ಭಾಗ, ಮುಖ್ಯ ಭಾಗವೂ ಹೌದು. ಆದರೆ ಪ್ರೇಮವೇ ಪೂರ್ಣ ಜೀವನವಲ್ಲ. ಸ್ತ್ರೀಪುರುಷರ ಪರಸ್ಪರ ಸಂಬಂಧದಲ್ಲಿ ಜೀವನ ನಿಷ್ಠೆಯಿದೆ ಧರ್ಮಪ್ರವೃತ್ತಿ ಇದೆ."[7] "ಸಾವು ಜೀವನದ ಮತ್ತೊಂದು ಕೊನೆ, ಅಥವಾ ಮತ್ತೊಂದು ಬಾಳಿಗೆ ಪ್ರವೇಶ ಎಂದು ತಿಳಿದರೆ ಸಾವಿನ ಭಯವು ಹೋಗುತ್ತದೆ."[8] ರೈತನ ಜೀವನದ ಸಫಲತೆಯ ಸಲುವಾಗಿ ಅವರು ನಿಶ್ಚಿತವಾಗಿ ನುಡಿಯುತ್ತಾರೆ: "ಹುಟ್ಟಿ

---

1 'ವೈಯ್ಯಾರಿ', ಪುಟ ೧೦೨

2 ಅದೇ.

3 ಅದೇ.

4 'ಹಳ್ಳಿಯ ಬಾಳು', ಪುಟ ೧೪೬

5 ಅದೇ, ಪುಟ ೧೨೨

6 ಅದೇ, ಪುಟ ೧೫೪

7 ಅದೇ, ಪುಟ ೫೭

8 ಅದೇ, ಪುಟ ೧೪೩-೪

ನಾಯಕನವರಿಗೆ ಭೂಮಿ ತಾಯಿಯ ಸೇವೆ ಸಾಕು. ಲೋಕಕ್ಕೆಲ್ಲಾ ದುಡಿದು ಹಾಕುವ ಆ ಕರ್ಮಯೋಗಿ ಸ್ವರ್ಗಕ್ಕೆ ಹೋಗದೆ ಮತ್ತೆಲ್ಲಿಗೆ ತಾನೆ ಹೋದಾನು!"[1] ಹಳ್ಳಿಗರ ಸಾಹಿತ್ಯ, ಸಂಸ್ಕೃತಿಗಳನ್ನು ಅರಿತುಕೊಂಡು, ಅವರಲ್ಲೊಬ್ಬರಾಗಿ ಬಾಳಿ ಬೆಳಗಿದ ಗೊರೂರರು ತಮ್ಮ ಜೀವನದಲ್ಲಿಯೂ ಒಂದು ನಿಜವಾದ ಸೊಗಸನ್ನು ಅನುಭವಿಸಿದ್ದಾರೆ. ಪೂರ್ಣ ಜೀವನವನ್ನು ಬಾಳಿದ್ದಾರೆ. ಅದರಿಂದ ಒಂದು ಜೀವನದರ್ಶನ ರೂಪುಗೊಂಡಿದೆ.

ಮಾನವನ ಜೀವನದಲ್ಲಿ ವ್ಯಕ್ತಿ ವ್ಯಕ್ತಿಗಳ ಸಂಬಂಧದ ವಿಷಯದಲ್ಲಿ ಪ್ರಕೃತಿ ನಿಯಮವೊಂದಿದೆ. ಇದನ್ನು ಅರಿತು ಅನುಭವಿಸುವುದು ಪ್ರಾಮಾಣಿಕ ಜೀವನವನ್ನು ಜೀವಿಸುವವರಿಗೆ ಮಾತ್ರ ಸಾಧ್ಯವಿದೆ. ಪೆನ್ಸನ್ ದಫ್ತರಿಂದಿಯ ಅನುಭವಗಳನ್ನು ವಿವರಿಸುತ್ತ "ಒಬ್ಬ ಮನುಷ್ಯನ ವಿಚಾರದಲ್ಲಿ ನಮಗೆ ಯಾವ ಭಾವನೆಯಿದೆಯೋ ಅವನಿಗೂ ನಮ್ಮ ವಿಚಾರದಲ್ಲಿ ಅದೇ ಭಾವವಿರುವುದು ಸಹಜ"[2] ಎಂಬ ಸೂತ್ರವೊಂದನ್ನು ಸೂಚಿಸುತ್ತಾರೆ. ನಿಜವಾಗಿಯೂ "ನಮ್ಮ ಜನರಲ್ಲಿ ನಮಗೆ ನಂಬಿಕೆಯಿಲ್ಲ. ನಮ್ಮ ಸಂಸ್ಕೃತಿಯಲ್ಲಿ ಗೌರವವಿಲ್ಲ. ನಮ್ಮ ಜೀವನವನ್ನು ಮುಟ್ಟಿ ಅದನ್ನು ರೂಪಗೊಳಿಸತಕ್ಕ ಯಾವ ಪದ್ಧತಿಯೂ ನಮಗೆ ಬೇಕಿಲ್ಲ. ನಮ್ಮ ವಿದ್ಯೆ, ನಮ್ಮದನ್ನು ಕಂಡು ಆನಂದಿಸುವ ನಮ್ಮ ಹಕ್ಕನ್ನು ಕಸಿದುಕೊಂಡಿದೆ. ಇತರರ ಅನುಕರಣವೇ ನಮ್ಮ ಗುರಿಯಾಗಿದೆ. ನಮ್ಮ ಜೀವನ ಬಹಳ ಅಸ್ವಾಭಾವಿಕವಾಗಿದೆ"[3] ಎಂದು ನೊಂದುಕೊಂಡಿದ್ದಾರೆ. ನಮ್ಮದನ್ನು, ನಮ್ಮವರನ್ನು ನಾವು ಸರಿಯಾಗಿ ಅರಿತುಕೊಂಡು ಜೀವಿಸುತ್ತಿಲ್ಲ. ಅದರಿಂದ ಬಾಳಿನಲ್ಲಿ ನಿಜವಾದ ಸುಖದಿಂದ ವಂಚಿತರಾಗಿದ್ದೇವೆ. ಇಂಥ ಸಂಗತಿಗಳನ್ನು ಗೊರೂರರ ಸಾಹಿತ್ಯದುದ್ದಕ್ಕೂ ನಾವು ಕಾಣುತ್ತೇವೆ. ತಾಲ್ಲೂಕ್ ಕಛೇರಿಯ ಗುಮಾಸ್ತ ಸೂರಪ್ಪನ ಜೀವನದಲ್ಲಿ ಒದಗಿದ ಒಂದು ಸಂದರ್ಭವು ಅವನಿಗೆ, ಅವನ ಹೆಂಡತಿ ತಿರುಮಲ್ಲಮ್ಮ 'ಮುಳ್ಳುಗಿಡ'[4]ವೆನ್ನಿಸಿದ್ದು ಮಾಯವಾಗಿ ಅವಳ ಸಂಸ್ಕೃತಿಯ ಮಹಿಮೆಯನ್ನೂ, ಹೃದಯದ ಉದಾತ್ತತೆಯನ್ನೂ, ಭಾರತೀಯ ಗೃಹಿಣಿಯ ಜೀವನದ ತಿರುಳನ್ನೂ ತಿಳಿಸಿಕೊಡುವುದುಂಟು. ಅದರಂತೆಯೇ 'ಕನ್ಯಾಕುಮಾರಿ'ಯ[5] ಶ್ರೀಧರ ಸನ್ಯಾಸಿಯು ನಿಜವಾದ ಸಂನ್ಯಾಸ ಭಾವನೆಯನ್ನೂ ಸರಿಯಾದ ವೈರಾಗ್ಯವನ್ನೂ ಹೊಂದಿದುದು ಅವನು ಪ್ರೀತಿಸಿದ್ದ ಕಲ್ಯಾಣಿಯ ಸಾವಿನಿಂದ—ಅದೂ ಅವನ ಕಣ್ಣೆದುರಿಗೇ ನಡೆದ ಸಾವಿನಿಂದ—ಎಂಬ ಅರ್ಥವನ್ನು ಸೂಚಿಸುವ ಸ್ವಾರಸ್ಯಪೂರ್ಣ ಕಥೆಯಲ್ಲಿ

---

1 'ಹಳ್ಳಿಯ ಬಾಳು', ಪುಟ ೧೦೩
2 'ಗರುಡಗಂಬದ ದಾಸಯ್ಯ', ಪುಟ ೮೫
3 ಅದೇ, ಪುಟ ೧೫೩–೪
4 'ಕನ್ಯಾಕುಮಾರಿ ಮತ್ತು ಇತರ ಕಥೆಗಳು', ಪುಟ ೪೭–೫೬
5 ಅದೇ, ಪುಟ ೧–೨೮

ಒಂದು ಸೂಕ್ಷ್ಮವಾದ ಜೀವನ ದರ್ಶನ ವ್ಯಕ್ತವಾಗಿದೆ. ಬಾಳಿನ ನಿಜವಾದ ಅರ್ಥ ಅಭಿವ್ಯಕ್ತಿಯನ್ನು ಹೊಂದಿದೆ.

ನಾವು ಆಧುನಿಕ ಶಿಕ್ಷಣವನ್ನು ಹೊಂದಿದವರು. ಅರ್ಥಶಾಸ್ತ್ರ, ಮಾನವ ಸಂತಾನ ಶಾಸ್ತ್ರ ಇತ್ಯಾದಿಗಳನ್ನು ಓದಿದವರು. ತುಂಬ ಹಿಂದು ಮುಂದುಗಳನ್ನು ವಿಚಾರ ಮಾಡಿ, ನಮ್ಮ ಜೀವನವನ್ನು ರೂಪಿಸಿಕೊಳ್ಳುವ ಶಕ್ತಿ ನಮ್ಮ ಕೈಯಲ್ಲಿದೆಯೆಂದು ಭಾವಿಸಿ ಬಾಳು ವವರು. ಇಂಥವರ ಜೀವನವೂ ಕೂಡ ಹೇಗೆ ಹದಗೆಡುತ್ತದೆಂಬುದನ್ನು ಗೊರೂರರು ಸಹಜವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. 'ಮುಂಗುಸಿ ಪ್ರತಿಷ್ಠೆ'ಯ ಶೀನುವು ಇತಿಹಾಸ, ತರ್ಕ, ಅರ್ಥಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಇಟ್ಟುಕೊಂಡು ಓದಿದ ಕಾಲೇಜು ವಿದ್ಯಾರ್ಥಿ, ಆತ ತನ್ನ ತರ್ಕಸರಣಿಗೆ ಅನುಸರಿಸಿ, ಆಧುನಿಕ ವಿಚಾರ ಗಳ ತುಮುಲಗಳಲ್ಲಿ ತೇಲಿ, ತನ್ನ ಸೋದರ ಮಾವನ ಮಗಳಾದ, ಅತ್ಯಂತ ಸುಂದರಿ ಯಾದ ಅಂಬುಜಳನ್ನು ಬಹು ಸಂತಾನವುಳ್ಳವಳೆಂದು ಮದುವೆಯಾಗಲು ನಿರಾಕರಿಸು ತ್ತಾನೆ. ಭಾರತದ ಜನಸಂಖ್ಯೆಯ ಸಮಸ್ಯೆಯನ್ನು ಅಷ್ಟರಮಟ್ಟಿಗೆ ಬಿಡಿಸಿದೆನೆಂದು ಆಗ ಭಾವಿಸುತ್ತಾನೆ. ಅದೇ ಅಂಬುಜಳನ್ನು ಮದುವೆಯಾದ ಅವನ ಕಾಲೇಜಿನ ಸಹ ಪಾಠಿ ರಾಘವ ಅವಳಿಂದ ಮಕ್ಕಳನ್ನು ಪಡೆಯದೆ, ಹುಚ್ಚನಂತಾಗಿ ಯಾತ್ರಾರ್ಥಿಯಾಗಿ ಸಂಚರಿಸುತ್ತ ಕನ್ಯಾಕುಮಾರಿಗೆ ಬರುತ್ತಾನೆ. ಶೀನುವು ಕಮಲೆಯನ್ನು ವರಿಸಿ, ಐದಾರು ಮಕ್ಕಳನ್ನು ಹೆತ್ತು, ಸಂಸಾರಕ್ಕೆ ಬೇಜಾರುಪಟ್ಟುಕೊಂಡು ಕಿರಚುವ ಸ್ಥಿತಿಯಲ್ಲಿ ನಮ್ಮ ಮುಂದೆ ವ್ಯಕ್ತವಾಗುತ್ತಾನೆ, ಅದೇ ಕನ್ಯಾಕುಮಾರಿಯ ಧರ್ಮಶಾಲೆಯಲ್ಲಿ. ಆದರೆ ತನ್ನ ತಪ್ಪನ್ನು ಅರಿತು, "ನನ್ನನ್ನು ಮನ್ನಿಸು ಕಮಲಾ, ಏನೋ ದೊಡ್ಡ ಅರ್ಥಶಾಸ್ತ್ರಜ್ಞ ನೆಂದುಕೊಂಡಿದ್ದೆ. ನನ್ನ ಕಣ್ಣು ಮುಂದೆ ಇದ್ದ ತೆರೆ ಇಂದು ತೆರೆಯಿತು"[1] ಎಂದು ಹೆಂಡತಿಯನ್ನು ಅಪ್ಪಿಕೊಳ್ಳುವನು. ಇಲ್ಲಿ ಗೊರೂರರು ಸಾಕ್ಷಿಪುರುಷರಂತೆ ರಾಘವ, ಶೀನು ಇವರ ಸ್ನೇಹಿತನಂತೆ ವ್ಯಕ್ತವಾಗಿ, ಕಥೆಯ ಒಂದು ಪಾತ್ರದ ರೂಪದಲ್ಲಿ ವರ್ತಿಸಿ ದಂತೆ ನಿರೂಪಣೆಯಿದೆ. ಉಚ್ಚ ಕಥನ ಕಲೆಯ ಜೊತೆಯಲ್ಲಿಯೇ ಸುಶಿಕ್ಷಿತರೆನಿಸುವ ನಮ್ಮ ತರ್ಕ, ನಿರ್ಧಾರಗಳು ಎಷ್ಟು ನಿರಾಧಾರವಿರುತ್ತವೆ, ಪ್ರಕೃತಿಧರ್ಮ ಹೇಗೆ ಎಲ್ಲವನ್ನೂ ತಲೆಕೆಳಗು ಮಾಡುತ್ತದೆಂಬ ಜೀವನದರ್ಶನವನ್ನು ಸೂಚಿಸುತ್ತಾರೆ. ಈ ಸೂಚನೆಯು ಬಹು ಕಲಾತ್ಮಕ ರೀತಿಯಲ್ಲಿ ಇಲ್ಲಿ ವ್ಯಕ್ತವಾಗಿದೆ.

'ಊರ್ವಶಿ' ಕಾದಂಬರಿಯಲ್ಲಿ ಸೀತಾಲಕ್ಷ್ಮಿಯ ಪಾತ್ರವನ್ನು ಸೃಷ್ಟಿಸುವಲ್ಲಿಯಂತೂ ಗೊರೂರರು ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಜೀವನ ಎಷ್ಟು ಸೂಕ್ಷ್ಮವಾಗಿದೆ ಯೆಂಬುದನ್ನು ಬಹು ಕರುಣಾಪೂರ್ಣವಾಗಿ ಚಿತ್ರಿಸಿದ್ದಾರೆ. ಹೆಣ್ಣು ತಾನು ವರಿಸಿದ ಪತಿಗಾಗಿ, ಅವನಿಂದ ಏನೂ ಪ್ರಯೋಜನ ಸುಖಗಳಿಲ್ಲದಿದ್ದರೂ ಸಹ, ಎಂಥ ತ್ಯಾಗಕ್ಕೂ ಸಿದ್ಧಳೆಂಬುದನ್ನು ಅಲ್ಲಿ ನಿರೂಪಿಸಿದ್ದಾರೆ. ಸೀತಾಲಕ್ಷ್ಮಿಯಲ್ಲಿ ಸುಗುಣಗಳಿಗೇನೂ ಕೊರತೆ ಯಿಲ್ಲ. ಆದರೆ ಭ್ರಷ್ಟಳೆನಿಸಿದ ಅವಳಿಗೆ ಸಮಾಜದಲ್ಲಿ ಸ್ಥಾನವಿಲ್ಲ. ಅವನನ್ನು ಈ

[1] 'ಉಸುಬು', ಪುಟ ೧೫೩

ದುರಂತಕ್ಕೆ ಈಡುಮಾಡುವ ಪ್ರಸಂಗಗಳಿಗೆ ಯಾವ ಶಿಕ್ಷೆಯಾಯಿತೆ? ಇಲ್ಲ. ಇಂಥ ಸಾಮಾಜಿಕ ಕಟ್ಟುಪಾಡುಗಳನ್ನು, ಪರಂಪರಾಗತ ಮನೋವೃತ್ತಿಯನ್ನು ಚಿತ್ರಿಸಿದ ಅವರು ಆ ವಿಷಯದಲ್ಲಿ ತಮ್ಮ ಯಾವ ಅಭಿಪ್ರಾಯವನ್ನು ಸೂಚಿಸುವುದಿಲ್ಲ. ಅದನ್ನು ಓದುಗರೇ ನಿರ್ಣಯಿಸಲೆಂದು ಬಿಡುತ್ತಾರೆ. ಅದರಲ್ಲಿಯೇ ಕತೆಯು ಮುಗಿಯುತ್ತದೆ. ಆದರೆ ಹಳ್ಳಿಯ ಬಾಳಿನಲ್ಲಿರುವ ಗಂಡ, ಹೆಂಡತಿ, ಪ್ರೇಮ, ಸಂಸಾರಗಳನ್ನು ಜಾನಪದ ಗೀತಗಳ ಆಧಾರದಿಂದ ಚಿತ್ರಿಸಿ ತೋರಿಸುವಾಗ "ಕೃತಕ ಸಮಾಜದ ಕಟ್ಟುಗಳು ಹಳ್ಳಿಯ ಕಟ್ಟುಗಳಲ್ಲ. ಮನುಷ್ಯ ಸ್ವಭಾವಕ್ಕೆ ಅನುಸಾರವಾಗಿದೆ. ಮದುವೆಯಾಗದಿದ್ದರೆ ತಾವೇ ಕಟ್ಟಿಕೊಳ್ಳಲಿ. ಅದೂ ಆಗದಿದ್ದರೆ ಸೀರುಡಿಕೆ ಮಾಡಿಕೊಳ್ಳಲಿ. ಅಂತೂ ಸಮಾಜವನ್ನು ಒಪ್ಪಿಸಿ ಹೆಣ್ಣು ಗಂಡು ಸುಖವಾಗಿ ಬಾಳಲಿ, ಎಂಬುದೇ ಅವರ ಸಂಸ್ಕೃತಿಯ ಗುರಿ. ಈ ಸಡಿಲವಾದ ಕಟ್ಟಿನಿಂದ ಎಷ್ಟೋ ಸಂಸಾರಗಳು ಉದ್ಧಾರವಾಗಿವೆ."[1] ಇಲ್ಲಿ ಗೊರೂರರು ಸ್ಪಷ್ಟವಾಗಿಯೇ ತಮ್ಮ ಅಭಿಪ್ರಾಯವನ್ನು ಹೇಳಿಬಿಡುತ್ತಾರೆ. ಇವೆರಡೂ ಚಿತ್ರಗಳಿಂದ ಅವರ ಜೀವನದೃಷ್ಟಿಯ ಒಲವು ಯಾವುದರತ್ತ ಎಂಬುದು ತೋರಿಬರದೆ ನಿಲ್ಲುವುದಿಲ್ಲ.

ಇನ್ನು 'ಸೀತಮ್ಮನ ಸಾಹಸ'ದಲ್ಲಿಯಂತೂ ವಿಧವೆಯಾದ ಸೀತಮ್ಮನು ದುಃಖವನ್ನು ನುಂಗಿಕೊಂಡು "ಜಗತ್ತು ಜೀವನವೂ ನಶ್ವರವೂ ಹೌದು. ಶಾಶ್ವತವೂ ಹೌದು. ಸಂಸಾರದಲ್ಲಿಯೇ ಮೃತ್ಯುವೂ ಇದೆ; ಅಮೃತವೂ ಇದೆ. ದುಃಖವೂ ಇದೆ. ಆನಂದವೂ ಇದೆ. ಗಂಡ ಇದ್ದ, ತೀರಿಕೊಂಡ. ತೀರಿಕೊಂಡುದು ದುಃಖ : ಮೃತ್ಯು. ಅಶಾಶ್ವತ. ಆದರೆ ಪ್ರಾತಃಕಾಲದ ಸೂರ್ಯನಂತೆಯೂ ತಂಗಾಳಿಯಂತೆಯೂ ಆನಂದವನ್ನೂ ಚೈತನ್ಯವನ್ನೂ ಹಿತವನ್ನೂ ಉಂಟುಮಾಡುವ ಪ್ರಕಾಶಮಾನರಾದ ಮಕ್ಕಳೂ ಇವೆ. ಇದು ಶಾಶ್ವತ, ಅಮೃತ. ಸಂಸಾರದ ಬೇಸರಿಕೆಯ ತುದಿಯಲ್ಲಿ ಈ ನಿತ್ಯ ನೂತನತೆಯು ಬೆಳ್ಳಿಯ ರೇಖೆಯೂ ಹೊಳೆಯುತ್ತಿದೆ. ಆದಿ ಅಂತ್ಯವಿಲ್ಲದ ಈ ಜಗತ್ತಿನಲ್ಲಿ ನಾವು ಕಾಣುವುದು ಈ ಮಧ್ಯವೊಂದನ್ನೇ (ಮಕ್ಕಳು). ಮೃತ್ಯುವನ್ನು ಜಯಿಸಿ ಅದುದು ಅಮೃತತ್ವ ಮುಂದುವರಿಯುತ್ತಿರುವುದಕ್ಕೆ, ಅವಿಚ್ಛಿನ್ನವಾಗಿ ಸಾಗುತ್ತಿರುವ ಈ ಆನಂದ ಮೂಲ ಆನಂದದಾಯಕ ಜಗತ್ ಸೃಷ್ಟಿಯೇ ಗುರುತು. ಇದನ್ನು ನಾವು ಕರ್ತವ್ಯಭಾವದಿಂದ ನಿರ್ವಹಿಸುವುದರಿಂದ ನಾವೂ ಪರಮಾತ್ಮನ ಕಾರ್ಯದಲ್ಲಿ ಸೇರಿದಂತೆ ಆಗುತ್ತದೆ"[2] ಎಂದು ನಿಶ್ಚಯಿಸಿ, ಮನೆಯ ಸಂಪ್ರದಾಯವನ್ನು ಮೀರಿ, ಗೋಕುಲಾಷ್ಟಮಿಯ ಉತ್ಸವವನ್ನು ವೈಭವದಿಂದ ನಡೆಸುತ್ತಾಳೆ. ಇಲ್ಲಿ ಸಂಪ್ರದಾಯವೆಲ್ಲ ಸುವರ್ಣ, ಹಳೆಯದೆಲ್ಲ ಹೊನ್ನು ಎನ್ನುವ ಮನೋಭಾವಕ್ಕೇ ಅಂಟಿಕೊಂಡುದು ಕಾಣುವುದಿಲ್ಲ. ಸಂಪ್ರದಾಯವನ್ನು ಮೀರಿ, ಒಳ್ಳೆಯದನ್ನು ಸ್ವೀಕರಿಸಿ ಮುನ್ನಡೆಯುವುದಕ್ಕೆ ಪ್ರಚೋದನೆಯಿದೆ.

---

1 'ಹಳ್ಳಿಯ ಬಾಳು', ಪುಟ ೧೦೫

2 'ಕಥೆಗಳು ಮತ್ತು ವಿನೋದ ಚಿತ್ರಗಳು', ಪುಟ ೧೧-೧೩

ಗೊರೂರರಿಗೆ ಹಳ್ಳಿಯ ಜೀವನ, ಹಳ್ಳಿಯ ಜನ ಎಂದರೆ ಅತ್ಯಂತ ಪ್ರಿಯವಾದವು ಗಳು. ಆ ಜೀವನದ ಒಳ್ಳೆಯ ಸಂಪ್ರದಾಯಗಳನ್ನೆಲ್ಲ ಉಳಿಸಿಕೊಂಡು, ನಾವು ಅಭಿವೃದ್ಧಿಯನ್ನು ಹೊಂದಬೇಕೆಂಬುದು ಅವರ ಆಶಯ. ಹಿಂದೆ ಹಳ್ಳಿಯ ಜೀವನದಲ್ಲಿ ಹಣಕ್ಕೆ ಅಷ್ಟು ಪ್ರಾಧಾನ್ಯವಿರಲಿಲ್ಲ. ರೈತನು ತನ್ನ ನಿತ್ಯ ಜೀವನದ ಆವಶ್ಯಕತೆಗಳನ್ನೆಲ್ಲಾ ತಾನು ಬೆಳೆಯುವ ವಸ್ತುಗಳ ವಿನಿಮಯದಿಂದ ಪೂರೈಸಿಕೊಳ್ಳುತ್ತಿದ್ದನು. ಬಡಗಿ, ಕಂಬಾರ, ಕುಂಬಾರ, ಕೆಲಸಿಗ, ಅಗಸ ಇವರೆಲ್ಲರೂ ಆಯಗಾರರು. ರೈತರಿಂದ ಧಾನ್ಯರೂಪದಿಂದ ಸುಗ್ಗಿಯಲ್ಲಿ ಆಯ ಪಡೆದು ಅವನ ಕಾರ್ಯಗಳನ್ನೆಲ್ಲ ಪೂರೈಸುತ್ತಿದ್ದರು. ಈ ರೀತಿಯನ್ನು ಗೊರೂರರು ಸಂದರ್ಭ ಒದಗಿದಾಗಲೆಲ್ಲ ಎತ್ತಿ ಹಿಡಿಯುವರು. ಸೀತಾಲಕ್ಷ್ಮಿಯು ವೈದ್ಯಕೀಯ ಸೇವೆಯನ್ನು ರೈತರಿಗೆ ಸಲ್ಲಿಸಿದಾಗ ಅವರು ಯುಗಾದಿಯ ಉಡುಗೊರೆಯೆಂದು ಸೌತೇಕಾಯಿ, ಒಳ್ಳೆಯ ರಸಬಾಳೆಯ ಗೊನೆ, ಬೂದುಗುಂಬಳಕಾಯಿ, ಕಬ್ಬು ಇತ್ಯಾದಿಗಳನ್ನು ತಂದುಕೊಡುವರು. ಆಗ ಅವಳು "ನನಗೆ ಪ್ರತಿಫಲ ಹೀಗೆ ಕೊಟ್ಟರೆ ಸಾಕು. ಫೀಜು ಹೀಗೆ ಪದಾರ್ಥದ ರೂಪದಲ್ಲಿ ಬರಬೇಕು. ನಾನು ಸೇವೆ ಮಾಡಿದೆ. ನನಗೆ ಪ್ರತಿಫಲ ಅವರು ಬೆಳೆದ ಪದಾರ್ಥ. ಇಬ್ಬರಿಗೂ ಸುಲಭ. ಅದನ್ನು ಬಿಟ್ಟು ಹಣ ಹಣ ಅಂತ ವೈದ್ಯರೆಲ್ಲ ಫೀಜ್‌ಗೆ ಬಡಕೊಂಡು ಈ ಕಾರ್ಯದ ಪಾವಿತ್ರ್ಯತೆಯನ್ನೇ ಹಾಳುಮಾಡಿದ್ದಾರೆ"[1] ಎಂದುಕೊಳ್ಳುವಳು. ಇದು ಸೀತಾಲಕ್ಷ್ಮಿಯ ಮೂಲಕ ವ್ಯಕ್ತವಾದ ಗೊರೂರರ ಜೀವನದರ್ಶನವೆಂದರೆ ತಪ್ಪಾಗಲಾರದು.

ಗೊರೂರರ ಕೃತಿಗಳಲ್ಲಿರುವುದು ಜನತಾ ಜನಾರ್ದನನ ಪೂಜೆ, ಪ್ರಕೃತಿಯ ಪ್ರಾರ್ಥನೆ, ಜನಹಿತ ಚಿಂತನೆ, ಜೀವನ ನಿಷ್ಠೆ, ದೈವಭಕ್ತಿ. ಇವುಗಳ ಜೊತೆಯಲ್ಲಿಯೇ ಇನ್ನೊಂದು ಅಂಶ ಧ್ವನಿತವಾಗುತ್ತದೆ. ಅದೇ ಉಚ್ಚಮಟ್ಟದ ಹಾಸ್ಯರಸೋಪಾಸನೆ! ಗೊರೂರರು ಹೆಚ್ಚಾಗಿ ನಗೆಗಾರರೇ ಹೊರತು ಜೋಲು ಮುಖ ಮಾಡಿ ಯಾವಾಗಲೂ ಕುಳಿತವರಲ್ಲ. ಬದುಕು ಅವರಿಗೆ ಎಂದೂ ಸಮಸ್ಯೆಯಾಗಿಲ್ಲ. ಆದರೆ ಆ ಬದುಕಿಗೆ ಬಹು ಮುಖ್ಯವಾಗಿ ಬೇಕಾಗಿದ್ದ ಜ್ಞಾನ, ಸುತ್ತಲಿನ ಜನರೊಡನೆ ಸಮರಸತೆ, ಅದನ್ನು ಪಡೆಯಲು ಶುದ್ಧ ಸಾತ್ವಿಕ ಮುಕ್ತ ಮನಸ್ಸು ಇವೆಲ್ಲವೂ ಅವರಿಗೆ ದೈವದತ್ತವಾದ ಸ್ವತ್ತುಗಳು. ಅವರ 'ಮೆರವಣಿಗೆ' ರಾಷ್ಟ್ರೀಯ ಜೀವನದ–ರಾಜಕೀಯ ಜೀವನವಲ್ಲ–ಚಿತ್ರಪಟ. ಗಾಂಧೀ ಸಾಹಿತ್ಯ ಅವರ ದೇಶಹಿತ ದೃಷ್ಟಿಗೊಂದು ಸೃಷ್ಟಿ. ಜನಪದ ಸಾಹಿತ್ಯ, ಸಾಹಿತ್ಯ ವಿಮರ್ಶೆಗಳು ಅವರ ರಸೋಪಾಸನೆಯ ಪ್ರತೀಕ. ಕಥೆ, ಲಲಿತ ಪ್ರಬಂಧ, ಸಮಾಜ ಚಿತ್ರಗಳು ಅವರ ವಿಶಾಲ ಅನುಭವಗಳ ನಿಧಿ. ನಮ್ಮ ಗೊರೂರರು ಬದುಕಿದ್ದು ಶುಷ್ಕ ಬದುಕಲ್ಲ, ನೀರಸ ಜೀವನವಲ್ಲ. ಸ್ವಾರ್ಥ ದೃಷ್ಟಿಯ ಸಾಧಕ ಜೀವನವೂ ಅಲ್ಲ. ಮೊದಲು ಅವರು ಗುರುತಿಸಿದ್ದು, ಜೀವನದ ಆನಂದವನ್ನು. ಅವರು ಸಾಧಿಸಿದ್ದೂ ಅದನ್ನೇ—ಇದು ಅವರ ಅನೇಕ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿದೆ. ಅವರ ಜೀವನ ರಸಿ

[1] 'ಊರ್ವಶಿ', ಪುಟ ೩೨೭

ಕತೆಯು ಎಲ್ಲ ಕೃತಿಗಳಲ್ಲಿಯೂ ಪ್ರಕಟವಾಗಿದೆ. ಅವರ ಸುಸಂಸ್ಕೃತ ಮನಸ್ಸು ಸಂಪತ್ಕೃತಿಯನ್ನಷ್ಟೇ ಅಲ್ಲ. ವ್ಯಕ್ತಿತ್ವವನ್ನೂ ಪಡೆದಿದೆ. ಅವರೊಂದ ಕವಿ ಹೃದಯವನ್ನು ಹೊಂದಿದ್ದಾರವರು. ಗೊರೂರರು ತಪಸ್ವಿಗಳು, ಕ್ರಾಂತದರ್ಶಿಗಳು, ದ್ರಷ್ಟಾರರು. ಅಷ್ಟೇ ಮಟ್ಟದಲ್ಲಿ ಜೀವನವನ್ನೂ ಕಂಡವರು; ಭವ್ಯ ಬಾಳನ್ನು ಬಾಳಿದ ರಸಋಷಿಗಳು; ಬದುಕಿನಲ್ಲಿ ಬೆರೆತು ಅದನ್ನು ಬೆಳಗಿಸಿದವರು.

"ಶತಂ ಜೀವ ಶರದೋ ವರ್ಧಮಾನಃ"

ಅಮರರು

ಕುವೆಂಪು

ಚಾರ್ಲ್ಸ್ ಡಿಕನ್ಸ್, ಆಲಿವರ್ ಗೋಲ್ಡ್ ಸ್ಮಿತ್, ಎ. ಜಿ. ಗಾರ್ಡಿನರ್ ಮುಂತಾದ ಇಂಗ್ಲಿಷ್ ಲೇಖಕರ ಬರವಣಿಗೆಯನ್ನು ಓದಿ ಅಲ್ಲಿನ ವಿವಿಧ ರೀತಿಯ ಹಾಸ್ಯವನ್ನು ಚಪ್ಪರಿಸಿದ್ದ ನಮಗೆ ಕನ್ನಡದಲ್ಲಿ ಅಂಥ ಹಾಸ್ಯದ ಅರಕೆ ದೊಡ್ಡ ಕೊರಗನ್ನೇ ಉಂಟು ಮಾಡಿತ್ತು. ಆ ಅರಕೆಯನ್ನು ಹೋಗಲಾಡಿಸಿದ ಕೆಲವೇ ಲೇಖಕರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ನಿಶ್ಚಯವಾಗಿಯೂ ಅಗ್ರಸ್ಥಾನದಲ್ಲಿದ್ದಾರೆ.

ಹತ್ತಿರ ಹತ್ತಿರ ನಲವತ್ತು ವರ್ಷಗಳ ಕಾಲ ಶ್ರೀ ಗೊರೂರರ ಬರೆಹಗಳನ್ನು ಓದಿ ಅವುಗಳ ಸ್ವಾರಸ್ಯವನ್ನು ಸವಿಯುತ್ತಾ ಬಂದಿದ್ದೇನೆ. ಎಂಥ ಸ್ಫಟಿಕ ಸ್ವಚ್ಛವಾದ ಹಾಸ್ಯ ಅವರದು! ಅಲ್ಲಿ ಯಾವ ಬಗೆಯ ಕೊಂಕೂ ಇಲ್ಲ, ಯಾವ ವಿಷದ ಬಾಲದ ಕುಟುಕೂ ಇಲ್ಲ, ಮೊನಚಾಗಿ ಒಳಹೊಕ್ಕು ಅಲ್ಲೇ ಮುರಿದುಕೊಳ್ಳುವ ಮುಳ್ಳೂ ಇಲ್ಲ. ಕೃತಕತೆ ಇಲ್ಲದ, ಬದುಕಿನ ಘಟನೆಗಳಿಂದ ತನಗೆ ತಾನೇ ಒಡೆದುಮೂಡುವ, ಮೂಡಿ ಮನದುಂಬುವ, ಮನದುಂಬಿ ನಕ್ಕು ನಲಿಸುವ ಶುದ್ಧವಾದ ಹಾಸ್ಯ ಅವರದು.

ಅವರ ಬರವಣಿಗೆಯಲ್ಲಿ ನಾನು ಮನಸಾರ ಮೆಚ್ಚಿರುವ ಮತ್ತೊಂದು ಅಂಶ ಹೆಚ್ಚು ಕಡಮೆ ಈಗ ಸಂಪೂರ್ಣವಾಗಿ ಕಣ್ಮರೆಯಾಗಿ ಹೋಗಿರುವ ನಮ್ಮ ಗ್ರಾಮೀಣ ಜೀವನದ ವಿವಿಧ ಮುಖಗಳ ನಿರ್ಮಲವಾದ ವರ್ಣನೆ. ಅಲ್ಲಿನ ಬದುಕಿನೊಂದಿಗೆ ಅನಿವಾರ್ಯವಾಗಿ ಲೀನವಾಗಿಯೂ ಅಲ್ಲಿಂದ ಹೊರನಿಂತು ಬದುಕಿನ ವಿವಿಧ ಘಟನೆಗಳನ್ನು ಅವರಂತೆ ಅಲಿಪ್ತವಾಗಿ ನೋಡಿರುವ ಲೇಖಕರು ವಿರಳ. ನೀರಸ ಎಂದು ತೋರುವ ಗ್ರಾಮೀಣ ಜೀವನದ ಸ್ವಾರಸ್ಯಕರ ಅಂಶಗಳನ್ನು ಎತ್ತಿ ತೋರಿಸಿ ಗೊರೂರರು ಅವುಗಳನ್ನು ಅಮರಗೊಳಿಸಿದ್ದಾರೆ, ತನ್ಮೂಲಕ ತಾವೂ ಅಮರರಾಗಿದ್ದಾರೆ.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಶತಾಯುಷಿಗಳಾಗಲಿ, ಕನ್ನಡ ಸಾಹಿತ್ಯವನ್ನು ಇನ್ನೂ ಶ್ರೀಮಂತಗೊಳಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಸರಸಿ-ಸ್ನೇಹಪ್ರಿಯ

ಡಿ. ವಿ. ಜಿ.

ಶ್ರೀ ಗೊರೂರ್ ಅವರನ್ನು ಅವರು ಮುಸುಕು ಓರೆಮಾಡಿಕೊಂಡು ರಂಗಕ್ಕೆ ಇಣಿಯಲೋ ಬೇಡವೋ ಎಂದು ಸಂಕೋಚ ಪಡುತ್ತಿದ್ದ ಕಾಲದಿಂದ ನಾನು ಬಲ್ಲೆ. ಎಪ್ಪತ್ತು ವಯಸ್ಸಾದರೂ ಇನ್ನೂ ಆ ಸಂಕೋಚ ಮುಗಿದಂತಿಲ್ಲ. ೧೦-೧೫ ದಿನಗಳ ಹಿಂದೆ ನನಗೆ ಬರೆದ ಒಂದು ಕಾಗದದಲ್ಲಿ—"ನೀವು ಹೇಳಿರುವ ಕೆಲಸ ಮಾಡಲು ತಕ್ಕ ಶಕ್ತಿ ನನಗೆ ಉಂಟೋ ಇಲ್ಲವೋ" ಎಂದು—ಸಂದೇಹ ತೋರಿಸಿದ್ದಾರೆ. ಆಗ—ಈಗ್ಗೆ ೫೦ ವರ್ಷಗಳ ಹಿಂದೆ—ಅವರು ಮಾಸ್ತಿ ವೆಂಕಟೇಶ ಅಯ್ಯಂಗಾರರ ಮನೆಯಲ್ಲಿ ಒಂದು ಸಾರಿ ಬಿಡಾರ ಮಾಡಿದ್ದರು. ಆವಾಗಲೇ ನಮ್ಮ ಪರಿಚಯ. ಅವರ ಮೊದಲನೆಯ ಕೃತಿ—ಬಹುಶಃ 'ನಮ್ಮ ಊರಿನ ರಸಿಕರು'—ಪ್ರಕಟವಾಗಿತ್ತು. ಅವರ ಎರಡನೆಯ ಕೃತಿಗೆ ನನ್ನನ್ನು ಮುನ್ನುಡಿ ಬರೆಯಬೇಕೆಂದು ಕೋರಿದರು. ಪುಸ್ತಕಗಳೆರಡೂ ಕನ್ನಡ ಸಾಹಿತ್ಯದಲ್ಲಿ ಹೊಸ ದಾರಿ ಹಿಡಿದಿದ್ದುವು; ಸೊಗಸಾದ ದಾರಿ.

ನಮ್ಮ ಜನ ಸಾಮಾನ್ಯವಾಗಿ ಮುನಿಸು-ಅಳುವುಗಳ ಸ್ವಭಾವದವರು. ನಾನೂ ಈ ಟೀಕೆಯಿಂದ ಹೊರಗಾಗಿಲ್ಲ. ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ ಇವರೂ ಅಂಥವರೇ. ವಿ. ಸೀತಾರಾಮಯ್ಯ ಸಹ ಹಾಗೆಯೇ ಎಂದು ನನಗನಿಸುತ್ತದೆ. ನಮಗೆ ಒಪ್ಪಿತವಾಗದ ಮಾತನ್ನು ಯಾರಾದರೂ ಆಡಿದರೆ ಶೀಘ್ರ ಕೋಪ ಬಂದುಬಿಡುತ್ತದೆ; ನಮ್ಮ ಕೈಯಿಂದ ಪ್ರತೀಕಾರ ಸಾಧ್ಯವಿಲ್ಲವೆಂದು ತಿಳಿದಾಗ ಅಳುವು. ಇಂಥ ಮುನಿಸು—ಅಳುವುಗಳ ಸ್ವಭಾವದ ಜನಕ್ಕೆ ಆಗಾಗ ನಗುವ ಅವಕಾಶವನ್ನು ಕಲ್ಪಿಸಿದವರು ನಮಗೆ ಉಪಕಾರಿಗಳು. ಅವರ ಆ ಹಾಸ್ಯದ ಪ್ರಭಾವದಿಂದ ಕೆಂಗಣ್ಣಿನ ಬಿಸಿಯೂ ಕಂಬನಿಯ ತಣಿವೂ ಕೊಂಚ ಕಡಿಮೆಯಾಗುತ್ತವೆ. ಹೀಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮನ್ನು ನಾಗರಿಕರನ್ನಾಗಿ ಮಾಡುತ್ತಾರೆ.

ಅವರು ನಮ್ಮ ರಾಷ್ಟ್ರೀಯ ಚಳವಳಿಗೆ ಇಳಿದದ್ದೂ ದೊಡ್ಡ ಪೆಟ್ಟು ತಿಂದದ್ದೂ

ನನಗೆ ಜ್ಞಾಪಕವಿದೆ. ಅವರು ಆ ಹೊಟ್ಟೆಯ ದುಃಖವನ್ನು ಮರೆತುಕೊಂಡವರಂತೆ ನಡೆಯುತ್ತಿರುವುದನ್ನು ನೋಡಿ ನನಗೆ ಅಪಾರವಾದ ವಿಶ್ವಾಸ, ಮೆಚ್ಚುಗೆ. ಅವರು ನಮ್ಮ ಶಾಸನ ಸಭೆಯಲ್ಲಿದ್ದದ್ದೂ ನನಗೆ ಜ್ಞಾಪಕವಿದೆ. ಅವರು ಎಷ್ಟು ಹಾಸ್ಯ ಪ್ರವೃತ್ತಿಯುಳ್ಳವರಾದರೂ ಗಾಂಭೀರವನ್ನೂ ಸೌಜನ್ಯವನ್ನೂ ಮರೆತವರಲ್ಲ.

ಇಂಥ ಸಾರ್ವಜನಿಕರು ನಿಜವಾದ ಜನಸೇವೆ ಮಾಡಬಲ್ಲವರು. ನಮ್ಮ ಈಚಿನ ರಾಜಕೀಯವು ಇಂಥವರಿಗೆ ಆಕರ್ಷಕವಾಗಿಲ್ಲವೆಂಬುದು ವಿಷಾದದ ಮಾತು. ಅದನ್ನು ನಾನು ಇಲ್ಲಿ ವಿಸ್ತರಿಸಲಾರೆ.

೬–೮ ತಿಂಗಳ ಕೆಳಗೆ ಒಂದು ದಿನ ಅವರು ನನ್ನ ಮನೆಗೆ ದಯಮಾಡಿಸಿದ್ದರು. ಸಮಯ ಬೆಳಗ್ಗೆ ೯–೧೦ ಘಂಟೆ. ನಾನು "ಏನು ಸಮಾಚಾರ?" ಎಂದು ಕೇಳಿದೆ. ಅವರು "ಹಿಪ್ಪೀಗಳು, ಸಾರ್. ಒಬ್ಬ ಬಂಧುಗಳ ಮನೆಗೆ ಮದುವೆಗಾಗಿ ಬಂದಿದ್ದೆ, ಹತ್ತಿರದವರು. ಲಗ್ನವೇನೋ ಆಯಿತು. ಆದರೆ ಆ ಮುಖಗಳ ನಡುವೆ ಊಟಕ್ಕೆ ನಿಲ್ಲಲು ಮನಸ್ಸಾಗಲಿಲ್ಲ. ಎಲ್ಲ 'ಹಿಪ್ಪೀ' ಪ್ರಪಂಚ. ನಮ್ಮಂಥ ಹಳೆ ಪ್ರಪಂಚದವರಿಗೆ ಅಲ್ಲಿ ಸ್ಥಳವಿಲ್ಲ" ಎಂದರು. ಮುಂದಿನ ಮಾತನ್ನು ವಿವರವಾಗಿ ಹೇಳಿದರೆ ಕೆಲವರಿಗೆ ಕೋಪ ಬಂದೀತು.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಾತು ಕಥೆಯಲ್ಲಿ ಸರಸಿಗಳು. ಸ್ನೇಹಪ್ರಿಯರು.

ಭಗವಂತನು ಅವರಿಗೆ ಆಯುರಾರೋಗ್ಯಾದಿ ಸಮಸ್ತ ಸಂಪತ್ತುಗಳನ್ನೂ ಅನುಗ್ರಹಿಸಲಿ.

ಸಹಜತ್ವ

ಎಸ್. ವಿ. ರಂಗಣ್ಣ

ಸುಮಾರು ಮೂವತ್ತೈದು ವರ್ಷಗಳ ಹಿಂದೆ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಒಂದು ಉಪನ್ಯಾಸ ಏರ್ಪಟ್ಟಿತ್ತು. ಖಾದಿ ಪಂಚೆ ಜುಬ್ಬ ತೊಟ್ಟಿದ್ದ ಉಪನ್ಯಾಸಕರ ವ್ಯಕ್ತಿವರ್ಚಸ್ಸು ಹೆಚ್ಚಾಗಿ ಅವರ ನಿರ್ಬಂಧರಹಿತ ಸ್ವಾಭಾವಿಕ ಸರಳ ವಚನ ವಿನ್ಯಾಸದಲ್ಲೂ, ಇನ್ನೂ ಹೆಚ್ಚಾಗಿ ಅವರ ಪದೋಚ್ಚಾರಣೆಯ ವಿಶಿಷ್ಟ ಕಾಕುವಿನಲ್ಲೂ ಒಡೆದು ಮೂಡಿತ್ತು. ಹೀಗಿದ್ದರೂ ಸಭಿಕರ ಗಮನವನ್ನು ತಮ್ಮ ಕಡೆಗೆ ಆಕರ್ಷಿಸಬೇಕೆಂಬ ಹಂಬಲ ಅವರಲ್ಲಿ ಕೊಂಚವೂ ಕಂಡುಬರಲಿಲ್ಲ: "ನಾನು ನಿರೂಪಿಸುತ್ತಿರುವ ಸಂಗತಿಗಳ ಸ್ವಾರಸ್ಯವನ್ನು ಗ್ರಹಿಸಿ" ಎಂಬುವೇ ಅವರ ಅಂದಿನ ಹಂಗು. ಗ್ರಾಮಾಂತರದ ವಾಸ್ತವ ಘಟನೆಗಳೂ ಚಕಕೆ ನುಡಿಗಳೂ ಗಾದೆಗಳೂ ಪುನಃ ಪುನಃ ಹೃದಯಂಗಮವಾಗಿ ಕಥಿತಗೊಂಡು ಆಹ್ಲಾದ ಉಂಟುಮಾಡಿದುವು. ಎಲ್ಲವೂ ಅಕೃತಕ, ಆಡಂಬರಬಾಹಿರ, ನೇರ, ಸಹಜ. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಪರಿಚಯ ನನಗೆ ಮೊದಲು ಲಭ್ಯವಾದದ್ದು ಅಂದು. ಕ್ರಮೇಣ ಅವರ ಸ್ವಲ್ಪ ಸಂಪರ್ಕ ಅಧಿಕ ಸಂಪರ್ಕ ನಿಕಟ ಸಂಪರ್ಕ ಒದಗಿಬಂದು ಈಚೆಗೆ ಅವರ ಮಿತ್ರಗಡಣದಲ್ಲಿ ನನಗೂ ಸ್ಥಾನ ಸಿಕ್ಕಿರುವುದು ನನ್ನೊಂದು ಸೌಭಾಗ್ಯ. ಮನುಷ್ಯನನ್ನು ಅದುಮಿ ಒತ್ತಿ ಸಂಕುಚಿಸಿ ಎಳೆದು ಪಟ್ಟಿ ಹಿಗ್ಗಲಿಸಿ ಪರಿವರ್ತನಗೊಳಿಸುವುದಕ್ಕೆ ಕಾಲಪುರುಷನಿಗೆ ಮೂವತ್ತು ಮೂವತ್ತೈದು ಸಂವತ್ಸರದ ಅವಧಿ ಸಾಕಲ್ಲವೆ? ಗೊರೂರರ ಮೇಲಾದರೊ ಆ ಮಹಾಶಕ್ತನ ಪ್ರಭಾವ ಅಷ್ಟೊಂದಾಗಿ ಆಗಿಲ್ಲವೆಂದೇ ನನ್ನ ಅಭಿಪ್ರಾಯ. ನಡೆ ನುಡಿ ಸ್ನೇಹಪರತೆ ಘಾರಾಳ ಮನೋಭಾವಗಳ ಮಾತು ಹಾಗಿರಲಿ, ದೈಹಿಕವಾಗಿಯೂ ಅವರಲ್ಲಿ ಬದಲಾವಣೆ ಅಷ್ಟೇನೂ ಕಾಣ ಬರುವುದಿಲ್ಲ. ಅದು ಅವರ ಋಜುಜೀವನದ ತಪಃಫಲ, ನಮಗೊಂದು ವಿಸ್ಮಯಾನಂದ. ಭಗವಂತ ಅವರನ್ನು ಇದೇ ರೀತಿ ಗೆಲವು ಕೊಟ್ಟು ಅನುಗ್ರಹಿಸಲಿ!

ಸ್ತ್ರೀ ಪುರುಷ ಚಿತ್ರಣಕ್ಕಾಗಲಿ ಸಮೂಹ ಸನ್ನಿವೇಶ ವರ್ಣನೆಗಾಗಲಿ ಆರಿಸಿದ ಯಥಾರ್ಥ ಘಟನೆಯಿಂದ ಬಹಳ ಉಪಯೋಗ. ಅಂಥ ಒಂದು ನಿದರ್ಶನ ಹತ್ತಾರು ಶುಷ್ಕವಾಕ್ಯ ಸಮುಚ್ಚಯಕ್ಕಿಂತ ಹೆಚ್ಚು ಅರ್ಥವತ್ತು. ಹೆಚ್ಚು ಬೋಧಕ, ಹೆಚ್ಚು ರಂಜಕ. ಆದರೆ ಅವನ್ನು ಇತರರಿಗೆ ತಿಳಿಯಹೇಳುವಾಗ ಒಂದು ದೊಡ್ಡ ಎಚ್ಚರಿಕೆ ಅಗತ್ಯ. ಒಂದು ಅಪೂರ್ವ ಚಾತುರ್ಯ ಅಗತ್ಯ. ಸುಳ್ಳು ಆಖ್ಯಾನಗಳ ನಿರ್ಮಾಣ, ಶಬ್ದಾಡಂಬರದಲ್ಲಿ ಆಸಕ್ತಿ, "ನನ್ನ ಭಾಷಣ ವೈಭವವನ್ನು ಮೆಚ್ಚಿ!" ಎನ್ನುವ ಬಡಾಯಿ, ಇತ್ಯಾದಿ ರೋಗಕ್ಕೆ ಪಕ್ಕಾಗದಿರುವುದೇ ಆ ಎಚ್ಚರಿಕೆ; "ನಡೆದ ವಿದ್ಯಮಾನ ಮುಖ್ಯ. ಅವನ್ನು ವಿವರಿಸುತ್ತಿರುವವನು ನಾನಲ್ಲ, ನನ್ನ ವಿವರಣೆಯ ವೈಖರಿಯೂ ಅಲ್ಲ" ಎಂಬ ಆಶಯದ ಮೌನ ಸಂದೇಶವೇ ಆ ಚಾತುರ್ಯ, ಅರ್ಥಾತ್ ಚಾತುರ್ಯವೆನ್ನಿಸದ ಸಹಜ ಚಾತುರ್ಯ. ಗೊರೂರರಿಗೆ ಅದರ ಪಾಠ ನಿಸರ್ಗ ಶಕ್ತಿಯಿಂದಲೇ ಚೆನ್ನಾಗಿ ಅರಿವಾಗಿದೆಯೆಂಬುದು ನಿಸ್ಸಂದೇಹ. ಇಂಚಲು ಮಳೆಯ ರಾತ್ರಿ ಮಾವಿನಕೆರೆ ರೈಲ್ವೇ ಸ್ಟೇಷನ್ನಿನಲ್ಲಿ ಒಳಗೆ ಮಲಗಿರಲು ಅವರಿಗೆ ಆಸ್ಪದ ಕೊಡದೆ, ಜೇಗ್ಗ ಹೊರಟಾಗ "ನಿಮ್ಮದು ಗೊರೂರೆ? ಗೊರೂರು ರಾಮಸ್ವಾಮಿ ಅಯ್ಯಂಗಾರರು ನಿಮಗೆ ಗೊತ್ತೆ? ಒಳ್ಳೆಯ ಲೇಖಕರು ಕಣ್ರೀ!" ಎಂದು ನುಡಿದ ಸ್ಟೇಷನ್ ಮೇಸ್ಟ್ರರ ನಡೆವಳಿಕೆ: ಕದ್ದ ಮಾಲು ಸಿಕ್ಕಿದರೂ ಅವನ್ನು ಮಾಲಿಕ ಉಪಯೋಗಿಸುವಂತಿಲ್ಲ ಎಂಬ ಸೂತ್ರಕ್ಕೆ ಎರಡು ಉದಾಹರಣೆ: ಮುಂತಾದವುಗಳನ್ನು ಅವರ ಬಾಯಿಂದಲೇ ಕೇಳಬೇಕು: ನೂರು ಬಾರಿ ಕೇಳಿದರೂ ಬೇಸರ ಬರಲಾರದು.

ಘನ ಆಲೋಚನೆ ಗಾಢ ಭಾವ ನಿರ್ಮಲ ಚಿತ್ರಗಳ ಸಂಯೋಗವೇ ಗೊರೂರರ ವಿನೋದಕ್ಕೆ ತಳಪಾಯ: ಪ್ರತ್ಯಕ್ಷ ಅನುಭವವೇ ಅದರ ಕಟ್ಟಡ. ಆದ್ದರಿಂದ ಅದು ಸರಸ, ಸಭ್ಯ, ಸೊಗಸು. ಅವರ ಮಾತುಕಥೆಯಲ್ಲೂ ಬರವಣಿಗೆಯಲ್ಲೂ ಸತ್ಯಕ್ಕೆ ನೆಮ್ಮಿಕೊಂಡ ಪ್ರಾಮಾಣಿಕತೆ, ಪಾರಮಾರ್ಥಿಕ ಬಗೆಯ ನಮ್ರತೆ, ಅನ್ಯಾದೃಶ ಸ್ವಂತಿಕೆ. ಸಹಿಷ್ಣುತೆ ಔದಾರ್ಯಗಳಿಂದಾದ ಆಶಾಭಾವನೆ, ಗೆಲವು—ಇವು ತುಂಬಿಕೊಂಡಿವೆಯಾಗಿ ಯಾವ ಸಾಹಿತ್ಯಪ್ರೇಮಿ ತಾನೆ ಅವರನ್ನು ನುತಿಸದೇ ನಿಂತಾನು, ಅವರಿಗೆ ದೀರ್ಘಾಯುರಾರೋಗ್ಯವನ್ನು ಹರಸದೇ ಹೋದಾನು?

ಜಾನಪದ ತಜ್ಞ

ಶಂಬಾ ಜೋಶಿ

ಆಧುನಿಕ ಸಾಹಿತ್ಯದೊಳಗೆ ಆವಿಷ್ಕಾರ ಪಡೆದ ವಿನೋದದ ವಿವಿಧ ಪ್ರಕಾರಗಳನ್ನು ಒಂದೆಡೆಗೆ ಸಂಗ್ರಹಿಸಿ ಅವುಗಳ ಮೌಲ್ಯಮಾಪನದ ಪ್ರಯತ್ನ ಇನ್ನೂ ಆದಂತಿಲ್ಲ. ಇಂತಹ ಒಂದು ಸಂಗ್ರಹವು ಆದಲ್ಲಿ, ಗೊರೂರರ ತಿಳಿನಗೆ, ಮುಗುಳುನಗೆ ನಕ್ಕುನಗಿಸುವ ನಗೆ, ಮನುಷ್ಯನೊಳಗಿನ ವಿಶಿಷ್ಟ ಸ್ವಭಾವದರ್ಶನ ಮಾಡಿಸುವ ನಗೆ ಇಂತಹ ಸೂಕ್ಷ್ಮ ವಿವಿಧ ಪ್ರಕಾರಗಳನ್ನು ಒಂದೆಡೆಗೆ ನೋಡಿ ಹಿಗ್ಗಲು ಅನುಕೂಲವಾಗಲಿದೆ.

ನಾನು ಧಾರವಾಡ ಬಿಟ್ಟು ವಿಶೇಷ ಅಲೆದಾಡದವನಲ್ಲವಾದ್ದರಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಹತ್ತಿರದಿಂದ ಆಗಾಗ ಕಾಣಲು ದೊರೆತಿಲ್ಲವಾದರೂ ನಮ್ಮ ಸ್ನೇಹ 25–30 ವರ್ಷಗಳಿಂದಲೂ ಉಂಟು. ಮೈಸೂರು–ಕೊಡಗಿನ ಪ್ರವಾಸಕ್ಕೆ ಹೊರಟ ಡಾ. ಇರಾವತಿ ಬಾಯಿ ಕರ್ವೆ ಅವರು, ಈ ಭಾಗದ ಪ್ರಯಾಣದಲ್ಲಿ ಸಹಕರಿಸಲು ನನ್ನನ್ನೂ ಕೇಳಿಕೊಂಡಿದ್ದರು. ಈ ಸಂದರ್ಭದಲ್ಲಿ ನಾವು ಹಾಸನದ ಪ್ರವಾಸಿಕರ ತಂಗುಮನೆಯಲ್ಲಿ ಉಳಿದಿದ್ದೆವು. ಆಗ ಗೊರೂರು ರಾಮಸ್ವಾಮಿ ಅಯ್ಯಂಗಾರರ ಭೆಟ್ಟಿಯ ಯೋಗ ಲಭಿಸಿತು.

ನಮ್ಮ ಜನಪದ, ವಿವಿಧ ಜಾತಿ–ಜನಗಳ ಬಗೆಗೆ ಅವರಿಗಿದ್ದ ಮಾಹಿತಿ. ಡಾ. ಇರಾವತಿ ಬಾಯಿಯವರಿಗೂ ಸೋಜಿಗವನ್ನುಂಟುಮಾಡಿತು. ಡಾ. ಕರ್ವೆ ಅವರು ಸಮಾಜಶಾಸ್ತ್ರದ ವ್ಯಾಸಂಗಿಗಳು: ಅದರಿಂದ ಗೊರೂರರು ಅಂದು ಹಕ್ಕಿಪಿಕ್ಕರು ಮುಂತಾದ ಹಲವು ಪಂಗಡಗಳ ಬಗೆಗೆ ಹೇಳಿದ ಕುತೂಹಲ ಕೆರಳಿಸುವ ಮಾಹಿತಿ ಕರ್ವೆ ಅವರಿಗೆ ಉದ್ಬೋಧಕವೆನಿಸಿತು. ಜಾನಪದ ಸ್ವರೂಪವನ್ನು ಲೋಕಸ್ವಭಾವವನ್ನು ಇವರಷ್ಟು ಆಳವಾಗಿ ಅರಿತ ಸಾಹಿತ್ಯಿಕರು ನಮ್ಮಲ್ಲಿ ಕಡಿಮೆ.

ಗೊರೂರರನ್ನು ಅರಿತ ನನಗೆ ಒಟ್ಟಿನಲ್ಲಿಯೇ ನಮ್ಮ ಭಾಗದ ಜಾನಪದದ ವ್ಯಾಸಂಗಿಗಳಲ್ಲಿ ಸಾಹಿತ್ಯಿಕ ಹಾಗೂ ಕಲಾತ್ಮಕ ದೃಷ್ಟಿಯೊಡನೆ ಸಮಾಜಶಾಸ್ತ್ರೀಯ ದೃಷ್ಟಿಯೂ

ಪ್ರಭಾವಶಾಲಿಯಿದ್ದರೆ ಎಷ್ಟು ಲೇಸಾಗಬಹುದಿತ್ತಲ್ಲ. ಎಂಬ ವಿಷಾದ. ಮಹಾರಾಷ್ಟ್ರದಲ್ಲಿಯೂ ಈ ಕೊರತೆಯಿಲ್ಲದಿಲ್ಲ. ಮಹಾಮಹೋಪಾಧ್ಯಾಯ ಡಾ. ಕಾಣೆ ಅವರ 'ಧರ್ಮಶಾಸ್ತ್ರ'ದ ಇತಿಹಾಸದ ಮಹಾಸಂಪುಟಗಳ ಬಗೆಗೇ, ಇನ್ನೊಬ್ಬ ಮೇಧಾವಿ ವಿಷಾದ ವ್ಯಕ್ತಪಡಿಸಿದ್ದಾರೆ. ಈ 'ಧರ್ಮಶಾಸ್ತ್ರ'ದ ಮಹಾಸಂಪುಟಗಳಿಂದ ಡಾ. ಕಾಣೆಯವರಿಗೆ ಜಾಗತಿಕ ಕೀರ್ತಿ ದೊರೆತಿದೆ. ಅವರು ಮಾಡಿರುವ ಕಾರ್ಯವೂ ಅಪೂರ್ವ. ಆದರೆ ಈ ಡಾ. ಕಾಣೆ ಸಂಗ್ರಹಿಸಿರುವ ಮಾಹಿತಿ ಗಡಿಗೆಯಲ್ಲಿ ತುಂಬಿದ ವಸ್ತುಗಳಂತಾಗಿದೆ. ಸಮಾಜೇತಿಹಾಸದ, ಮಾನವೇತಿಹಾಸದ ಹಿನ್ನೆಲೆಯಿದ್ದರೆ ಶತಮಾನ ಶತಮಾನಗಳ ಸಾಂಸ್ಕೃತಿಕ ಸ್ಥಿತ್ಯಂತರಗಳ ಸುಸಂಗತ ಇತಿಹಾಸ ಬೆಳಕಿಗೆ ಬರಬಹುದಿತ್ತು. ಡಾ. ಕಾಣೆಯವರ ಗ್ರಂಥಗಳ ಉಪಯುಕ್ತತೆ ಇನ್ನೂ ಹೆಚ್ಚಾಗುತ್ತಿತ್ತು ಎಂದು ಡಾ. ಡಿ. ಡಿ. ಕೊಸಾಂಬಿ ಅವರು ನಿಸ್ಪೃಹವಾಗಿ ಹೇಳದೆ ಬಿಡಲಿಲ್ಲ.

ಶ್ರೀ ಗೊರೂರರಿಗೆ ಗೌರವ ಸಲ್ಲಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಡಾ. ಹಾ. ಮಾ. ನಾಯಕ ಅವರಿಗೆ ಧನ್ಯವಾದಗಳು ಮತ್ತು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮಲ್ಲಿರುವ ಜಾನಪದದ ವಿವಿಧ ತಂಡ, ಪಂಗಡಗಳ ಬಗೆಗಿನ, ನಡೆನುಡಿ, ಆಚಾರ–ಧರ್ಮ ಇಂತಹ ವಿಷಯಗಳ ಬಗೆಗಿನ ಜ್ಞಾನವನ್ನು ಮುಂದಿನ ತಲೆಮಾರಿನವರಿಗೂ ಉಪಯುಕ್ತವಾಗಲೆಂದು ಬರೆದಿಡುವರಾಗಿ ನಂಬಿದ್ದೇನೆ.

ರುಚಿ ಮತ್ತು ಶುಚಿ ಇವೆರಡರ ಸುಂದರ ಸಂಗಮವಿರುವ ಸುಂದರ ಸಾಹಿತ್ಯಕೃತಿ ರಚಿಸಿರುವ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಾರ್ವಜನಿಕರಿಂದ ಸತ್ಕರಿಸಲ್ಪಡುತ್ತಿರುವಲ್ಲಿಯೆ ಅವರ ಕೃತಿಯ ಕೃತಾರ್ಥತೆ ಸ್ವಯಂ ಸಿದ್ಧ ಎಂಬುದು ಸಿದ್ಧವಾಗುತ್ತದೆ.

ಮೈತ್ರಿಯ ವಜ್ರೋತ್ಸವ

ಪು.ತಿ.ನ

ಪ್ರಿಯ ಮಿತ್ರ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಸಾರ್ಥಕ ಜೀವನದ ಎಪ್ಪತ್ತನೆಯ ಹರೆಯದಲ್ಲಿ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಒಂದು ಮಹೋತ್ಸವವನ್ನು ಏರ್ಪಡಿಸಿ ಒಂದು ಅಭಿನಂದನ ಗ್ರಂಥವನ್ನು ಅವರಿಗೆ ಸಮರ್ಪಿಸುತ್ತಿರುವುದು ಬಹು ಹರ್ಷದಾಯಕವಾಗಿದೆ, ಅಭಿನಂದನೀಯವಾಗಿದೆ. ನಾನು ಈ ಉತ್ಸವದಲ್ಲಿ ಪಾಲುಗೊಳ್ಳುವಂತಾಗಿರುವುದು ದೇವರ ಕೃಪೆಯ ಒಂದು ನಿದರ್ಶನ. ಏಕೆಂದರೆ ಈ ಉತ್ಸವದ ಒಂದೆಳೆಯಲ್ಲಿ ನಮ್ಮ ಸ್ನೇಹದ ವಜ್ರೋತ್ಸವವೂ ಸೇರಿದೆ. ನಮ್ಮ ಮೈತ್ರಿ ಅರವತ್ತಕ್ಕೂ ಹೆಚ್ಚಿನ ವರ್ಷಗಳಷ್ಟು ಹಳೆಯದು. ಅದು ಇಂದಿನವರೆಗೂ ಎಳ್ಳಷ್ಟು ಸಡಿಲವಾಗಿಲ್ಲ; ಅದರ ಬಳವಿಗೂ ದಾರ್ಢ್ಯಕ್ಕೂ ಎಂದೂ ಕುಂದು ಬಂದಿಲ್ಲ. ಇದೊಂದು ದೈವಾನುಗ್ರಹವೆಂದೇ ಹೇಳಬೇಕು. ನನ್ನ ಇತ್ತೀಚಿನ ದೇಹಪ್ರಕೃತಿ ಮೊದಲಿನಷ್ಟು ಹಗುರವಾಗಿಲ್ಲ. ನಾನೂ ಗೊರೂರರೂ ಮೊದಲಿನ ಹಾಗೆ ಪದೇ ಪದೇ ಸೇರಿ ಸಲ್ಲಾಪಿಸಲು ಅವಕಾಶ ದೊರೆಯದೇ ಇರುವುದೂ ಒಂದು ಕಾರಣವಿದ್ದೀತು. ಅದನ್ನೀಡೆ ಗೆಲಿಪ್ಪ ಹರ್ಷ. 'ಜಗತಿ ಹಿ ಬಹು ದುಃಖೇ ದುರ್ಲಭಃ ಪ್ರೀತಿಯೋಗಃ'....ಎಂಬ ಆರ್ಯೋಕ್ತಿ ಒಂದುಂಟು. ಈ ದುರ್ಲಭವಾದ ಪ್ರೀತಿಯೋಗ ನನಗೆ ರಾಮಸ್ವಾಮಿ ಅಯ್ಯಂಗಾರರಿಂದ ಹಿಡಿಹಿಡಿಯಾಗಿ ದೊರೆತು ನಾನು ಸುಖಿ ಎನ್ನಿಸಿದೆ.

ನಮ್ಮ ಸ್ನೇಹ ಗೊರೂರಿನಲ್ಲಿ ಮೊಳೆತು ಮೈಸೂರು ಬೆಂಗಳೂರುಗಳಲ್ಲಿ ಬಲಿತು ಪ್ರವೃದ್ಧವಾಯಿತು. ಗೊರೂರು ನನ್ನ ತಾಯಿಯ ತವರುಮನೆ. ನನ್ನ ಎಳೆತನದ ಸ್ವಲ್ಪ ಸ್ವಲ್ಪ ಕಾಲವನ್ನು ಆಗಾಗ ಅಲ್ಲಿ ಕಳೆಯುತ್ತಿದೆ. ಈಗ ಮುಪ್ಪಿಗೇರುತ್ತಿರುವ ನನಗೆ ಆ ಎಳೆತನದ ದಿನಗಳು ತುಂಬ ಹತ್ತಿರವಿರುವಂತೆ ವಿಶದವಾಗಿ ಸ್ಮರಣೆಗೆ ಬರುತ್ತಿವೆ. ಈ ಶೀತಲವೂ ಸೌರಭಯುಕ್ತವೂ ಆದ ಸ್ಮರಣೆಯು ಕೇಂದ್ರವಾಗಿರ

ರಾಮಸ್ವಾಮಿ ಅಯ್ಯಂಗಾರರು. ಶೀತಲ ಮತ್ತು ಸೌರಭಯುಕ್ತ ಎಂಬ ಪದಗಳು ಬರಿ ಅಲಂಕಾರಕ್ಕಾಗಿ ನಾನು ಬಳಸಿರುವ ಮಾತುಗಳಲ್ಲ. ಗೊರೂರು ಹೊಳೆಯಂಚಿನ ಊರು. ಊರಿನ ಸುತ್ತಲೂ ಕಾಲುವೆ ಬಳಸಿದೆ. ಹತ್ತಿರದ ಜನಾರ್ದನ ಗುಡಿಯ ಹಿಂಭಾಗದಲ್ಲಿ ಹೂಗಳ ಶೃಂಗಾರ ತೋಟವೊಂದಿತ್ತು. ಅದರಲ್ಲಿ ಅನನ್ಯ ಪರಿಮಳದ ಕಸಿಸಂಪಿಗೆ ಮರಗಳಿದ್ದವು. ಕಾಲುವೆಯ ಏರಿಯ ಮೇಲೆ ಸುರಗಿಯ ದೊಡ್ಡ ಮರವೊಂದಿತ್ತು. ಹೊಳೆಯಂಚಿನ ನರಸಿಂಹ ದೇವಸ್ಥಾನದ ಹಿಂದಿನ ತೋಪಿನಲ್ಲಿ ಜಾಲಾರಿ ಹೂವಿನ ಮರಗಳು ಬೃಹದಾಕಾರವಾಗಿ ಬೆಳೆದಿದ್ದವು. ಆ ಬಿಳಿ ಹೂತೊಂಗಲುಗಳ ಮೇಲೆ ಮುಂಜಾವದ ತೊಳೆಗಾಳಿ ಬೀಸಿಬಂದು ಈ ಸಂಪಗೆ ಈ ಸುರಗಿಯ ಮರಗಳ ಮೇಲಿ ಹೊ ಕುಯ್ಯುವ ಹುರುಡಿನಿಂದ ಬೆಳಕು ಹರಿಯುವ ಮುಂಚೆಯೇ ಯಾರ ಬಲವಂತವೂ ಇಲ್ಲದೆ ನಿದ್ದೆಯನ್ನು ಕಡಿದೆದ್ದು ಬಂದು ಏರುತ್ತಿದ್ದ ನಮ್ಮನ್ನು ಬಹು ವಾತ್ಸಲ್ಯದಿಂದ ಆಲಿಂಗಿಸುತ್ತಿತ್ತು. ಜತೆಗೆ ಈ ಹೂಗಳನ್ನು ಆರಿಸಿ ತರುತ್ತ ಮನೆ ಹೊಕ್ಕರೆ ನನ್ನ ತಾತನ ಮನೆಯ ಹಿತ್ತಿಲಿನ ಕಾಲುವೆಯಂಚಿನ ತೋಟದ ನರುಗಂಪು ನನಗೆ ಕಾದಿರುತ್ತಿತ್ತು. ಚಕ್ಕೋತನ ಹೂಗಳ ಕಟುಗಂಧಮಿಶ್ರಿತ ಮಲ್ಲಿಗೆ ನೆಲಸಂಪಿಗೆಗಳ ಆ ತನಿಗಂಪಿನ ಸುಖ ಸ್ಪರ್ಶವನ್ನು ವರ್ಣಿಸಲಸಾಧ್ಯ. ಮುಂಬೆಳಗಿನ ಇಂಥ ತಣ್ಣನೆ ನರುಗಂಪು ನಮ್ಮ ಸ್ನೇಹದೊಂದಿಗೆ ಅಂದು ಬೆರೆತುದರಿಂದಲೇ ಅದು ಯಾವ ತರದ ವಿರಸ ಬೇಸರಗಳಿಗೂ ಈಡಾಗದೆ ಇದುವರೆಗೂ ಪ್ರೀತಿವರ್ಧಕವಾಗಿಯೇ ಬೆಳೆದುಬಂದಿರುವುದು.

ಅಂದಿನ ಗೊರೂರು ರಸಿಕರ ಊರು. ಬಹುವಾಗಿ ಎಲ್ಲರೂ ನೆಮ್ಮದಿವಂತರು. ಬಹಳ ಲವಲವಿಕೆಯುಳ್ಳ ಜನ. ಮಾತಿನಲ್ಲಿ ಬಹಳ ಹಿತ. ವ್ಯಂಗ್ಯ, ಕಟಕಿ, ಹಾಸ್ಯ ಗಾಂಪಗೊಳಿಸುವ ಪ್ರವೃತ್ತಿ ಇವೆಲ್ಲವೂ ಬಹು ನಯವಾಗಿ ಅವರ ಮಾತಿನಲ್ಲಿ ಬೆರೆತಿದ್ದವು. ಜತೆಗೆ ಅವರಲ್ಲಿ ವೈದಿಕವೂ ಲೌಕಿಕವೂ ಒಳ್ಳೆ ಹದದಲ್ಲಿ ಹಾಳತವಾಗಿ ಮೇಳೈಸಿದ್ದವು. ಇಂದಿನ ನಿಲವಿನಲ್ಲಿ ಅಂದನ್ನು ನೋಡಿದಾಗ ಅದು ಆ ಊರಿನ ಬಾಳುವೆಯ ರಾಗಯುಕ್ತವೂ ಮನೋಹರವೂ ಉಲ್ಲಾಸಕರವೂ ಆದ ಸಂಜೆಯ ದಿನದಂತೆ ತೋರುತ್ತದೆ. ಈಗ ರಾಮಸ್ವಾಮಿ ಅಯ್ಯಂಗಾರರ ಹರವಾದ ಬೀದಿಯಲ್ಲಿ ಮಕ್ಕಳು ಲಗ್ಗೆ ಚೆಂಡಾಡುತ್ತಿಲ್ಲ. ಆಗಿನ ದಿನಗಳಲ್ಲಿ ಸಂಜೆ ವೇಳೆಗೆ ಹೊಳೆಯಿಂದ ವಿಷ್ಣು ಸಹಸ್ರನಾಮದ ಗೋಷ್ಠಿ ನರಸಿಂಹನ ಗುಡಿಯ ಪ್ರದಕ್ಷಿಣೆಯಾಗಿ ಊರನ್ನು ಒಂದು ಸುತ್ತು ಹಾಕಿ ಅವರ ಮನೆಯ ಪಕ್ಕದಲ್ಲೇ ಇರುವ ವಾಸುದೇವ ದೇವಸ್ಥಾನದಲ್ಲಿ ನೆರೆದು ಮಂಗಳಾರತಿ ಶಾತ್ತುಮೊರೆ ಚರಪಿನ ವಿತರಣೆಯಿಂದ ಜರುಗುತ್ತಿತ್ತು. ಆ ಗೋಷ್ಠಿಯಲ್ಲಿ ನಾವೂ ಬೆರೆದು ಊದುಬತ್ತಿಯ ಪರಿಮಳವನ್ನು ಎಳೆಯುತ್ತಾ ನಮ್ಮ ಎಳಕಂಠವನ್ನೂ ಹಿರಿಯರದರೊಂದಿಗೆ ಬೆರೆಸುತ್ತಿದ್ದೆವು. ಈಗ ಅದರ ಸದ್ದಡಗಿದೆ. ಅಂದಿನ ಹಾಗೆ ಇಂದಿನ ಹುಡುಗರು ಮಧ್ಯಾಹ್ನದವರೆಗೂ ಹೊಳೆಯ ಚಿಕ್ಕನಕಲ್ಲು ದೊಡ್ಡನ ಕಲ್ಲು ಪೊಟ್ಟಿಕಲ್‌ಮಡು ಈ ದಿವ್ಯ ತೀರ್ಥಸ್ಥಲಗಳಲ್ಲಿ ತೊಳಲಾಡುವರೋ ಏನೋ ನನಗೆ ಗೊತ್ತಿಲ್ಲದ ವಿಷಯ. ಪ್ರಾಯಃ ನಮ್ಮ ಹಾಗೆ ತಾವೇ

ತಿಂಡಿಗಳನ್ನು ತಯಾರಿಸಿ ಹೇಮಾವತೀ ಯಾಗಲೀ ನದಿಗಳ ಸಂಗಮವನ್ನು ಆ ದೊಡ್ಡ ಬಂಡೆಗಳ ನೆರಳಲ್ಲಿ ಮರಳ ಮೇಲೆ ಕುಳಿತು ಭಕ್ಷಿಸುತ್ತಾರೆ: ಅದೂ ಸಂತೋಷಾಸ್ಪದವಾದ ವಿಷಯವೇ. ಹುಡುಗರು ನಾವು ನಾವೇ ಕೆಲ ತೆಂಗಿನಕಾಯಿ ಚಟ್ನಿ ಅಕ್ಕಿ ರೊಟ್ಟಿಯನ್ನು ತಯಾರಿಸಿ ಆ ಸಂಗಮದಲ್ಲಿ ತಿಂದು ಬಹು ಹರ್ಷಪಟ್ಟ ಆ ಒಂದು ದಿನ ನನಗಿನ್ನೂ ಮರೆತುಹೋಗಿಲ್ಲ. ಏಕೆಂದರೆ ಆ ರೊಟ್ಟಿ ಆ ಚಟ್ನಿಯ ರುಚಿ ಇನ್ನೂ ನಾಲಗೆಯ ಮೇಲೆಯೇ ಇದೆ. ಅದನ್ನು ಎಟುಕಿಯೋ, ಅದಕ್ಕೆ ಸಮನಾಗಿಯೋ ಇರುವ ಮತ್ತೊಂದು ಅಂಥ ರುಚಿ ಅದಕ್ಕೆ ಸಿಕ್ಕದೇ ಹೋಗಿರುವುದರಿಂದ ಆ ರುಚಿಯನ್ನು ನನ್ನ ರಸನೆ ಜೋಪಾನವಾಗಿ ಕಾದಿರಿಸಿಕೊಂಡಿದೆ. ಇವೆಲ್ಲ ಮಧುರ ಸ್ಮೃತಿಗಳು, ಮರುಕಳಿಸುವಂಥ ಅನುಭವಗಳು. ಆಗಿನ ಗೊರೂರು ಬೇರೆ, ಈಗಿನದು ಬೇರೆ. ಆಗಿನ ಆ ಊರು ತನ್ನ ರಸಿಕತೆ ಮತ್ತು ವಿಲಕ್ಷಣತೆ ತನ್ನಲ್ಲಿಯೇ ಮುಗಿದುಹೋಗಬಾರದೆಂದೂ ನಾಡನ್ನೆಲ್ಲ ವ್ಯಾಪಿಸಿ ಸಂತೋಷವನ್ನು ಹರಡಬೇಕೆಂದೂ ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಹಡೆಯಿತೆನ್ನಬೇಕು. ಇದೊಂದು ನಿಸರ್ಗದ ಮಾಟ. ತನ್ನ ಅನುಭವಗಳವನ್ನು ಎಲ್ಲೋ ನಿಧಿಗೊಳಿಸಿಯೋ ಅದು ವಿಕೃತಿ ಪರಂಪರೆಯ ಸೃಷ್ಟಿಸಲ್ಲಿ ಮುಂದುವರಿಯುತ್ತದೆ. ಇವರು ಆ ಊರಿನ ಪ್ರಮುಖ ಪಂಗಡಕ್ಕೆ ಸೇರಿದವರಲ್ಲ. ಸ್ವಲ್ಪ ಹೊರತಾಗಿರುವ ಹೆಮ್ಮಿಗೆ ವೈದಿಕ ಪರಂಪರೆಗೆ ಸೇರಿದವರು: ಏಳ ಹರೆಯದಲ್ಲೇ ಆ ಊರನ್ನು ಬಿಟ್ಟು ತಾರುಣ್ಯ ಕಳೆದ ಮೇಲೆ ಮರಳಿ ಅಲ್ಲಿಗೆ ಬಂದು ನೆಲಸಿದವರು. ಹೀಗೆ ಸೇರುವುದಕ್ಕೆ ಮುಂಚೆಯೇ ಅವರ ಅನ್ಯ ಕೃತಿಗಳೆಲ್ಲ ನಿರ್ಮಿತವಾಗಿದ್ದುವು. ಆದರೂ, ಹೀಗೆ ಹಿಂತಿರುಗಿಯೇ ಅವರಿಗೆ ಎಲ್ಲ ಶ್ರೇಷ್ಠ ಕೃತಿಗಳಿಗೂ ಅಗತ್ಯವಾಗಿ ಬೇಕಾದ ರಸ-ಮೂಲವನ್ನು ಕಲ್ಪಿಸಿತ್ತು. ಅವರ "ಮಲ್ಲಿಗೆ ಹಳ್ಳಿ" ಮುಕ್ತಾಯವಾದ ಗೊರೂರು ಮತ್ತು ಸಂಸ್ಕಾರವಾಗಿದ್ದರೂ ಅವರಲ್ಲಿ ಸ್ವಲ್ಪ ಅಂಶ ಹೆಮ್ಮಿಗೆಯದೂ ಬೆರೆತಿದೆ. ಹೆಮ್ಮಿಗೆ ಅವರ ತಾಯಿಯ ತವರೂರು. ಅವರ ಧರ್ಮಪತ್ನಿಯದೂ ಆ ಅಗ್ರಹಾರವೇ. ಅದೊಂದು ವಿಲಕ್ಷಣವಾದ ವೈದಿಕ ಅಗ್ರಹಾರ. ಅವರ ರಸವಂತಿಕೆ ಗೊರೂರಿನದಕ್ಕಿಂತ ತೀರ ಭಿನ್ನವಾದದ್ದು. ರಾಮಸ್ವಾಮಿ ಅಯ್ಯಂಗಾರರ ಮೊದಮೊದಲ ಬರವಣಿಗೆಯಲ್ಲಿ ಅದರ ಒಂದಿಷ್ಟು ಸಿಕ್ಕುತ್ತದೆ. ಈ ರಸಿಕತೆ ಈಗಿನ ಪಾಶ್ಚಾತ್ಯ ವಿಜ್ಞಾನದಲ್ಲಾಗಲೀ ಬೇರೆ ಮತಗಳಲ್ಲಾಗಲೀ ಕಾಣಸಿಗದು. ನಮ್ಮ ಸಂತೋಷದಲ್ಲಿ ಅವರಿಗೆ ವಿಚಾರವನ್ನು ತಮ್ಮ ಬರವಣಿಗೆಯಲ್ಲಿ ಕಲ್ಪಿಸಿದ ರಾಮಸ್ವಾಮಿ ಅಯ್ಯಂಗಾರರು ಧನ್ಯ ಜೀವಿ. "ನಾನು ಜನಗಳಿಗೆ ಕೊಟ್ಟಿದ್ದ ದಿವ್ಯಶಕ್ತಿಯನ್ನು ಹೇಗೆ ಬಳಸಿಕೊಳ್ಳಬಲ್ಲರು ತಿಳಿಯದು" ಎಂದು ದೇವರೇನಾದರೂ ಕೇಳಿದರೆ ಈ ತರದ ವ್ಯಕ್ತಿಗಳತ್ತ ಇವರು ಕೈತೋರಿಸಿ ಅತನನ್ನು ಮರುಮಾತಿಲ್ಲದಂತೆ ಧಾರಾಳವಾಗಿ ನಗಿಸುವರು.

ನಿಜವಾಗಿ ರಾಮಸ್ವಾಮಿ ಅಯ್ಯಂಗಾರರು ಅಪೂರ್ವ ವ್ಯಕ್ತಿಗಳು. ಸಹಜವಾಗಿ ಗ್ರಾಮಜೀವನದ ಪ್ರವಾಹವನ್ನು ನೋಡಿ ಅನುಭವಿಸಿ ಅದನ್ನು ಹರಡುವುದರ ಜತೆಗೆ ಅನೇಕ ಸಮಸ್ಯೆಗಳು ಅವರಲ್ಲಿ ಹುಟ್ಟಿವೆ. ಅವುಗಳಲ್ಲಿ ಮುಖ್ಯವಾಗಿ ನಾನು ಅವು

ಭವಿಸಿ ಹೇಳುವಂಥವು ಯಾವುವೆಂದರೆ: ಧೈರ್ಯ, ಉತ್ಸಾಹ, ಸಹನೆ, ಸಹಾನುಭೂತಿ, ಗೂಢವಾದರೂ ಗಾಢವಾದ ದೈವವಿಶ್ವಾಸ, ವಾತ್ಸಲ್ಯಪೂರ್ಣವೂ ಮಮಕ ತಳೆದಂಥದೂ ಆದ ಹೃದಯ ಮತ್ತು ಕಾಪಟ್ಯವಿಲ್ಲದ ನೈಜತೆ. ಪಾಪಿಯೆಂದು ಎಂಥ ವ್ಯಕ್ತಿಯನ್ನೂ ಈತ ಕ್ರುದ್ಧನಾಗಿ ಜರಳಿಟ್ಟು ತೋರಿದವನಲ್ಲ. "ಕಾರ್ಯಂ ಕಾರುಣ್ಯಮಾರ್ಗೇಣ ನ ಕಶ್ಚಿನ್ನಾಪರಾಧ್ಯತಿ" ಎಂಬ ಸೀತಾಮಾತೆಯ ವಾಕ್ಯವನ್ನು ಈತ ಗರ್ಭದಲ್ಲಿರುವಾಗಲೇ ತಮ್ಮ ಹೃದಯದಲ್ಲಿ ಬರೆದಿಟ್ಟುಕೊಂಡರೋ ಏನೋ ಎನಿಸುತ್ತದೆ. ಇವರ ಕತೆಗಳಲ್ಲಿ ಈ ಮರುಕವನ್ನು ಕಾಣಬಹುದು. ಈ ಗುಣಗಳ ಜತೆಗೆ ರಾಮಸ್ವಾಮಿ ಅಯ್ಯಂಗಾರರಲ್ಲಿ ಯಾವ ಲೌಕಿಕ ವಿಷಯಕ್ಕೂ ಹೆಚ್ಚಾಗಿ ಅಂಟಿಕೊಳ್ಳದ "ಅನಿಕೇತನ" ಪ್ರವೃತ್ತಿಯಿದೆ. ಅವರೆಂದಿಗೂ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡವರಲ್ಲ. ದಾಕ್ಷಿಣ್ಯಪರರು, ನಿಜ. ತಮ್ಮ ಮಡದಿ ಮಕ್ಕಳು ನಂಟರು ಸ್ನೇಹಿತರಲ್ಲಿ ಅಮಿತವಾದ ಮಮತೆಯುಳ್ಳವರೂ ನಿಜ, ಯಾರಲ್ಲೂ ಹಗೆತನವನ್ನು ಕಟ್ಟಿಕೊಂಡವರಲ್ಲ: ಹೀಗಿದ್ದರೂ ತಾವು ಬೆಲೆಯುಳ್ಳದೆಂದು ಪರಿಗಣಿಸಿದ ಯಾವ ಧ್ಯೇಯವನ್ನಾಗಲಿ ಆಧ್ಯಾತ್ಮಿಕ ಮೌಲ್ಯವನ್ನಾಗಲಿ ಕೈಬಿಟ್ಟವರಲ್ಲ. ಅದರ ಅನುಸರಣೆಯಲ್ಲಿ ಯಾವ ತ್ಯಾಗಕ್ಕಾಗಲಿ ಅಂಜಿದವರೂ ಅಲ್ಲ. ಕುಟುಂಬಪ್ರೀತಿ ಮತ್ತು ಈ ಧ್ಯೇಯಾನುಸರಣೆ ಇವೆರಡು ವಿರುದ್ಧ ದಿಕ್ಕಿಗೆಳೆಯುವ ಪ್ರವೃತ್ತಿಗಳನ್ನು ಈತ ಹೇಗೆ ಸಮತೂಗಿಸಿಕೊಂಡು ಹೋಗುತ್ತಿದ್ದಾರೋ ಅದು ನನಗೆ ಆಶ್ಚರ್ಯವನ್ನುಂಟುಮಾಡಿದೆ.

ರಾಮಸ್ವಾಮಿ ಅಯ್ಯಂಗಾರರು ಬಹಳ ಮರ್ಯಾದಾವಂತ ಗಂಭೀರ ಸುಸಂಸ್ಕೃತ ಮನುಷ್ಯರು: ಆದರೆ ಅತ್ಯಂತ ಸರಳರು. ಈ ಸರಳತನ ಬುದ್ಧಿಮಾಂದ್ಯದ ಸರಳತೆಯಲ್ಲ, ಕುಶಾಗ್ರಬುದ್ಧಿಯ ನೈಜತಾಪ್ರೀತಿಯಿಂದ ಹುಟ್ಟಿದುದು. ಅವರ ದೊಡ್ಡತನ ಅವರನ್ನು ಯಾವ ವೇಳೆಯಲ್ಲೂ ಕೈಬಿಟ್ಟದ್ದನ್ನು ನಾನು ಕಾಣೆ: ಆದರೆ ಅದರ ಅರಿವು ಅವರಿಗೆ ಸುತಾರಾಂ ಇಲ್ಲ. ಸಿರಿಯಿರಲಿ ಇಲ್ಲದಿರಲಿ, ಕಷ್ಟ ಬರಲಿ ಸುಖ ಬರಲಿ, ಜೈಲುವಾಸವೇ ಆಗಲಿ ಶಾಸನಸಭಾ ಸದಸ್ಯತ್ವವೇ ಲಭಿಸಲಿ, ನೌಕರನಾಗಿರಲಿ ಒಡೆಯನಾಗಿರಲಿ ಎಲ್ಲ ಸ್ಥಿತಿಯಲ್ಲೂ ಅವರ ಸ್ವಭಾವ ತನ್ನ ಸಮತೆಯನ್ನು ಕಳೆದುಕೊಂಡಿಲ್ಲ. ಹಿಗ್ಗು ಕುಗ್ಗುಗಳಲ್ಲಿ ಹೀಗೆ ಯಾವ ಕ್ರಮವೂ ಇಲ್ಲದೆ ನೈಜತೆ ಸಾರಳ್ಯ ಹರ್ಷೋತ್ಸಾಹಗಳನ್ನು ಕಾಪಿಟ್ಟುಕೊಂಡಿರುವ ಮಂದಿ ಬಹಳ ಅಪರೂಪ.

ರಾಮಸ್ವಾಮಿ ಅಯ್ಯಂಗಾರರಲ್ಲಿ ಮತ್ತೊಂದು ಅಪೂರ್ವ ಗುಣವುಂಟು. ಅವರ ಸಾನ್ನಿಧ್ಯದಲ್ಲಿ ಎಂಥವನಿಗೂ ತನ್ನ ಸಹಜತೆ ಪ್ರಾಪ್ತವಾಗುತ್ತದೆ, ವೇಷಗಳು ಜಾರಿ ಹೋಗುತ್ತವೆ. ಅನೇಕ ಆವೇಶಗಳು ಈಗಿನ ನಾಗರಿಕ ವಿದ್ಯಾವಂತರನ್ನು ಮುಸುಕಿಕೊಂಡು ಅವರ ಭಾರತೀಯತೆಯನ್ನು ಮರೆಸಿಬಿಡುತ್ತವೆ. ವೇಷಧಾರಿಗಳಾಗದಿದ್ದರೆ ಅವರಿಗೆ ಬದುಕೇ ಇಲ್ಲವೋ ಏನೋ ಎಂಬ ಪರಿಸ್ಥಿತಿ. ಆದರೆ ರಾಮಸ್ವಾಮಿ ಅಯ್ಯಂಗಾರರ ಹತ್ತಿರ ಕುಳಿತುಕೊಂಡು ಮಾತನಾಡುತ್ತಿದ್ದರೆ, ಅಥವಾ ಅವರ ಹೃಷ್ಟವೂ ಸರಸವೂ ಆದ ಸಂಭಾಷಣೆಗಳನ್ನೂ ಸಂಗತಿಗಳ ವರ್ಣನೆಗಳನ್ನೂ ಕೇಳುತ್ತಿದ್ದರೆ ನಮಗೆ

ತನುಮನಸ್ಸಿಗೆ ಬಂದಷ್ಟು ಹಾಯಾಗುತ್ತದೆ. ಸ್ನೇಹ ನಟನೆಗಳಿಲ್ಲ ಕಳೆಮುಖವಾಗಿ ಬಿಡುವಿನ ಉಲ್ಲಾಸ ನಮ್ಮಲ್ಲಿ ಮೂಡಿಕೊಳ್ಳುತ್ತದೆ. ಅವರ ಸರಸ ಬರವಣಿಗೆಗಳಲ್ಲೂ ಈ ಗುಣ ವಿಶೇಷವಾಗಿ ಉಂಟು. ಅವರು ವಿಶ್ವವಿದ್ಯಾನಿಲಯದ ಗರ್ಭದಲ್ಲಿ ತೊಳಲಿ ಹೊರಬೀಳದಿದ್ದುದು ನಾಡಿನ ಮಹಾಭಾಗ್ಯ ಎನ್ನಬೇಕು. ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಪರಭಾಷೆಯ ಅಮಿತ ಸಂಪರ್ಕದಿಂದ ನಮ್ಮ ವ್ಯಕ್ತಿತ್ವವೇ ಬದಲಾಯಿಸಿಬಿಡುತ್ತದೆ. ನಮ್ಮ ಬುದ್ಧಿ ಹಾಗೂ ಭಾವನೆ ಪರಾನ್ನಪುಷ್ಟ. ಈ ದೋಷಕ್ಕೆ ರಾಮಸ್ವಾಮಿ ಅಯ್ಯಂಗಾರರು ಪಕ್ಕಾಗಲಿಲ್ಲ; ಅವರ ಉಜ್ವಲ ದೇಶಭಕ್ತಿ ಮತ್ತು ಗಾಂಧೀಪ್ರೀತಿ ಅವರನ್ನು ಕಾಪಾಡಿತು. ತಮಗೆ ಬೇಕಾದ ಜ್ಞಾನಸಂಪದವನ್ನೆಲ್ಲಾ ಅವರು ವಿದ್ವನ್ಮಣಿಗಳ ಸ್ನೇಹದಿಂದ ಸಂಪಾದಿಸಿಕೊಂಡು ತೇಜಸ್ವಿಗಳಾದರು: ಸ್ವಭಾವ ಮಾತ್ರ ತಿಳಿಯಾಗಿ ಉಳಿಯಿತು. ಅವರ ಬರವಣಿಗೆಯನ್ನು ಕುರಿತು ದಿವಂಗತ ಗುರು ಶ್ರೀ ಬಿಂಯಣ್ಣನವರ ಮಾತು ಈಗ ಸ್ಮರಣೆಗೆ ಬರುತ್ತದೆ: "ಚಿನ್ನ ಎಂದಿಗೂ ಚಿನ್ನವೇ. ಅದರ ಬೆಲೆ ಅದಕ್ಕಿದ್ದೇ ಇದೆ. ಸರ್ಕಾರದ ಛಾಪನ್ನು ಒತ್ತುವುದರಿಂದ ಅದರ ನೈಜ ಮೌಲ್ಯಕ್ಕೆ ತುಸುವೂ ಹಿಗ್ಗಿಲ್ಲ, ಅಥವಾ ಕುಗ್ಗೂ ಇಲ್ಲ. ಹಾಗೆ, ರಾಮಸ್ವಾಮಿ ಅಯ್ಯಂಗಾರರ ಬರಹ." ನಿಜ, ಡಿಗ್ರಿ ಮೊದಲಾದುವುಗಳು ಬೆಲೆ ಕಡಿಮೆಯಾದುದಕ್ಕೆ ಒಂದು ಪಕ್ಷ ಹೆಚ್ಚು ಬೆಲೆಯನ್ನು ಕೊಡಬಹುದು. ನೈಜ ಪ್ರತಿಭೆಗೆ ಅವು ಏನನ್ನೂ ಮಾಡಲಾರವು. ರಾಮಸ್ವಾಮಿ ಅಯ್ಯಂಗಾರರ ಬರವಣಿಗೆಯಲ್ಲಿ ಈ ನೈಜ ಪ್ರತಿಭೆಯು ಹೊಳೆಯಿದೆ. ಅದಕ್ಕೆಯೇ ಅದು ಪಂಡಿತರೆನ್ನದೆ ಪಾಮರರೆನ್ನದೆ ಎಲ್ಲರನ್ನೂ ಆಕರ್ಷಿಸಿ ಸಂತೋಷಪಡಿಸುತ್ತದೆ. ಏಕೆಂದರೆ ಪ್ರತಿಭೆ ಪರಮಾತ್ಮನ ಹೊಳಪಲ್ಲದೆ ಮತ್ತೇನು? ರಾಮಸ್ವಾಮಿ ಅಯ್ಯಂಗಾರರ ವ್ಯಕ್ತಿತ್ವದ ಸ್ವಲ್ಪ ಅಂಶ ಮಾತ್ರ ಅವರ ಬರವಣಿಗೆಯಲ್ಲಿ ತುಂಬಿಕೊಂಡಿದೆ: ರಾಮಸ್ವಾಮಿ ಅಯ್ಯಂಗಾರರು ಅದಕ್ಕಿಂತ ದೊಡ್ಡವರು. ಎತ್ತರದ ವ್ಯಕ್ತಿ.

ರಾಮಸ್ವಾಮಿ ಅಯ್ಯಂಗಾರರಿಗೆ ವಿನೋದಪೂರ್ಣವಾಗಿ ಗ್ರಾಮಜೀವನವನ್ನು ಚಿತ್ರಿಸುವ ರಸಿಕರೆಂದು ಜನ ಪಟ್ಟಗಟ್ಟಿದ್ದಾರೆ. ನಿಜ, ಅವರ ಚಿತ್ರಗಳಲ್ಲಿ ಬರುವ ಹಾಸ್ಯರಸ ಅದ್ವಿತೀಯವಾದುದು. ಹಾಸ್ಯವನ್ನು ರಸದ ನೆಲೆಯಲ್ಲಿ ನಿಲ್ಲಿಸುವುದು ಸಾಮಾನ್ಯವಾದ ಕೆಲಸವಲ್ಲ. ಅದು ಸುಲಭವಾಗಿ ಲೌಕಿಕ ಸ್ವಾರ್ಥಗ್ರಹಜನ್ಯ ಉದ್ವೇಗಗಳಿಗೆ ಬಲಿಯಾಗುತ್ತದೆ ಇಲ್ಲವೆ ಚಮತ್ಕಾರ ಚತುರೋಕ್ತಿಗಳಲ್ಲಿ ಮುಗಿದುಹೋಗುತ್ತದೆ. ಮನಸ್ಸನ್ನು ತೊಳೆದು ಹಾಸದಿಂದ ಬೆಳಗಿ ಸಂತೋಷದಿಂದ ಅರಳಿಸುವ ಬರಹಗಳು ನಮ್ಮ ಸಾಹಿತ್ಯದಲ್ಲೇಕೆ ಎಲ್ಲ ಸಾಹಿತ್ಯಗಳಲ್ಲೂ ಅಪೂರ್ವ. ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯದಲ್ಲಿ ಈ ಅನರ್ಘ್ಯ ಗುಣವಿದೆ. ಅದರಿಂದ ಸೋಲುವವರು ಇಲ್ಲ ಎನ್ನಬೇಕು. ನಮ್ಮ ಚಿತ್ತಕ್ಕೆ ಅದರಿಂದ ಪ್ರಾಪ್ತವಾಗುವುದು ಒಂದು ಬಗೆಯ ಹಗುರತೆ, ಲಘಿಮಾಭೂತಿ. ಈ ಮನೋಲ್ಲಾಸ ರಸಸ್ಯಂದಿಯಾದ ಕಾವ್ಯದಿಂದ ಲಭಿಸುವ ಗುಣ. ಇವರ ಮನಸ್ಸು ನಿಜವಾಗಿ ಕವಿಯ ಮನಸ್ಸು. ಇವರ ನಗೆಬರಹಗಳಲ್ಲಿ ಈ

ಕಾವ್ಯದ "ಧ್ವನಿ" ಇದ್ದರೆ, ಇವರ ಹೊಳೆ ಕಡಲು ಮಳೆಗಾಳಿಗಳ ಅದ್ವಿತೀಯ ವರ್ಣನೆಗಳಲ್ಲಿ ಆ ಗುಣ ನೇರವಾಗಿ ನಮ್ಮ ಹೃದಯವನ್ನು ಸೋಕುತ್ತದೆ. ಕೊಲ್ಲಡರಿ ಕಾವೇರಿ, ಹೇಮಾವತಿ, ಕನ್ಯಾಕುಮಾರಿಯ ಕಡಲು, ಬಿಂದಿಗಮ್ಮನ ಜಾತ್ರೆ, ಶಿವರಾತ್ರಿ—ಈ ವರ್ಣನೆಗಳಲ್ಲಿ ಇವರ ಕಾವ್ಯಶಕ್ತಿ ಅತ್ಯುನ್ನತ ಸ್ತರಗಳನ್ನು ಮುಟ್ಟಿರುವುದನ್ನು ಸಹೃದಯರು ಕಾಣಬಹುದು. (ರಾಮಸ್ವಾಮಿ ಅಯ್ಯಂಗಾರರ ಪುಸ್ತಕಗಳನ್ನು ರಕ್ಷಿಸಿಟ್ಟುಕೊಳ್ಳುವುದು ಅತ್ಯಂತ ಕಠಿಣಕಾರ್ಯ, ಯಾವ ಪೆಟ್ಟಿಗೆಯೂ ಬೀಗವೂ ಅವನ್ನು ದಕ್ಕಿಸಿಕೊಳ್ಳಲಾರವು—ನಾನೀಗ ನೆನಪಿನಿಂದ ಮಾತ್ರ ಹೇಳಬಹುದಷ್ಟೆ.) ಕತೆಗಳನ್ನು ಹೇಳುವುದರಲ್ಲೂ ಇವರು ಎತ್ತಿದ ಕೈ. ಅಲ್ಲಿ ಇವರು ರೇಖಿಸಿರುವ ಪಾತ್ರಗಳೂ ಪ್ರಸಂಗಗಳೂ ಬಹು ವಿಧವಾಗಿವೆ. ನನ್ನ ಮನಸ್ಸಿನ ನಾಲಗೆಯಲ್ಲಿ ಈಗಲೂ ರಸ ಊರಿಸುತ್ತಿರುವುದು 'ರೋಡ್ ಇಂಜಿನ್' ಅಲ್ಲಿನ ಪ್ರಣಯ ಪ್ರಸಂಗ ಮತ್ತು 'ನಾಯಿ ಬಾಲ' ಎಂಬ ಕಥೆಯಲ್ಲಿ ಬರುವ ದನಗಾಹಿ ತೂರನ ಚಿತ್ರ. ಯಾವ ಕೆಲಸಕ್ಕೂ ಬಾರದ ದಡ್ಡನೆಂದು ಸಮಾಜ ಕಡೆಗಣಿಸಿರುವವನು ತಾನೆರಡು ಮೂರು ದಿನ ಕಣ್ಣಿಗೆ ಬೀಳದಿದ್ದಾಗ ಅದೇ ಸಮಾಜ ಎಂಥ ಕಿರುಕುಳಕ್ಕೀಡಾಯಿತು, ಈ ಅದೃಶ್ಯ ವ್ಯಕ್ತಿ ಎಷ್ಟು ಘನತೆಗೆ ಏರಿ ಹೇಗೆ ತ್ರಿವಿಕ್ರಮನಾಗಿ ಬೆಳೆದು ಕತೆಯೆಲ್ಲವನ್ನೂ ತುಂಬಿ ನಿಂತ ಎಂಬುದನ್ನು ಆ ಕತೆಯನ್ನು ಓದಿಯೇ ಅರಿಯಬೇಕು. ನಮ್ಮ ಕತೆಗಾರರ ಪೈಕಿ ಗೊರೂರರು ಶ್ರೀನಿವಾಸರನ್ನು ಬಿಟ್ಟರೆ ಎರಡನೆಯ ಎಣಿಕೆಗೆ ತಕ್ಕವರು ಎಂದು ನನ್ನೆಣಿಕೆ. ಕಾಲಕ್ರಮೇಣ ಪ್ರಾಯಃ ಸಹೃದಯರು ಇದನ್ನು ಕಂಡುಕೊಂಡಾರೆಂದು ನನ್ನ ಭಾವನೆ. ನೈಸರ್ಗಿಕ ಮಾರ್ಗಗಳಲ್ಲಿ ಹೊಳೆ ಹರಿಯುವಂತೆ ಇವರ ಕತೆಗಳೂ ಹರಿಯುತ್ತವೆ. ಪಾಶ್ಚಾತ್ಯ ಕತೆಗಳ ಕಲೆಗಾರಿಕೆಯ ತಂತ್ರಗಳ ಒರೆಯನ್ನು ಇವಕ್ಕೆ ಹಚ್ಚಿ ಬಣ್ಣ ನೋಡುವುದರಿಂದ ಯಾರಿಗೂ ಸುಖವಿಲ್ಲ. ರಾಮಸ್ವಾಮಿ ಅಯ್ಯಂಗಾರರ ಗ್ರಂಥಗಳನ್ನು ಕುರಿತ ಈ ಸಂಭಾವನಾ ಗ್ರಂಥದಲ್ಲಿ ಅವರ ಕಥನಕ್ರಮದ ಎಲ್ಲ ಗುಣಗಳನ್ನು ತಜ್ಞ ಸಹೃದಯರು ವಿಮರ್ಶಿಸಿರಬಹುದು. ಆದರೆ ಜನ ಒಂದು ಪಟ್ಟಗಟ್ಟಿದ ಮೇಲೆ ಲೇಖಕ ಆ ಹಣೆಬರಹವನ್ನು ಹೊತ್ತೇ ಆ ಬಗೆಯಲ್ಲಿಯೇ ಅವರ ಮನಸ್ಸನ್ನು ರಮಿಸಬೇಕೇ ಹೊರತು ಬೇರೆ ಮಾರ್ಗವಿದ್ದಂತೆ ಕಾಣುವುದಿಲ್ಲ. ಕವಿ ತನ್ನ ಕಾಲದ ಸಹೃದಯರ ಮನೋಧರ್ಮಕ್ಕೆ ಕಟ್ಟುಬಿದ್ದವನು. ಬೇರೆ ಉಪಾಯವಿಲ್ಲ.

ಗೊರೂರರ ಈ ಅಪೂರ್ವ ಹಾಸ್ಯರಸಸ್ಯಂದೀ ಪ್ರತಿಭೆಯ ರಹಸ್ಯವೇನು ಎಂದು ಬಹುಕಾಲ ಆಲೋಚಿಸಿದ್ದೇನೆ. ನಮಗೆ ಕಾಣದಿರುವ ಪ್ರಸಂಗ ಮತ್ತು ವ್ಯಕ್ತಿಗಳ ವೈಲಕ್ಷಣ್ಯಗಳು ಆತನ ಸೂಕ್ಷ್ಮದೃಷ್ಟಿಗೆ ವಿಶದವಾಗಿ ಎದ್ದುಕಾಣುತ್ತವೆ. ಅವಕ್ಕೆ ದುರ್ಬೀನು ಹಿಡಿದು ನಮಗೆ ಆತ ತೋರಿಸಿ ನಮ್ಮನ್ನು ನಗಿಸಿ ತಿದ್ದುತ್ತಾನೆ. ವ್ಯಕ್ತಿ ಸಮಾಜದಲ್ಲೇ ತನ್ನ ನೆಮ್ಮದಿ ಸುಖಸಂತೋಷಗಳನ್ನು ಪಡೆದು ಬಾಳಬೇಕು. ಯಾವ ಅತಿಯಿಂದಲೂ ತನಗೂ ಕ್ಷೇಮವಿಲ್ಲ, ಸಮಾಜಕ್ಕೂ ಕುಶಲವಿಲ್ಲ. ಆದ್ದರಿಂದ ತಮ್ಮ ತಮ್ಮ ಸ್ವಭಾವಗಳ ಸಾಕ್ಷಾತ್ಕಾರವನ್ನು ಪಡೆದು ಓರೆಕೋರೆಗಳನ್ನು ತಿದ್ದಿಕೊಂಡು

ವ್ಯಕ್ತಿಗಳು ಬದುಕಬೇಕು. ಈ ಬಿರುಕೋಟೆಗಳನ್ನು ಗಳಿಸಿರುವುದೆ ಶಾಂತಸ್ವಾಮಿ ಎಂಬ ಮಾರ್ಗದಲ್ಲೇ ಗೊರೂರರ ನಗೆಬರಹಗಳು ಎತ್ತಿ ತೋರಿಸುತ್ತವೆ. ಅತಿ ಸುಖಸಂತಿಕೆ, ಅತಿ ಬುದ್ಧಿವಂತಿಕೆ, ಅತಿ ನಾಜೂಕು, ಅತಿ ಗ್ರಾಮೀಣತೆ, ಅತಿ ಒಳ್ಳೆತನ, ಅತಿ ಧ್ಯೇಯನಿಷ್ಠೆ ಯಾವುದೂ ಇವರ ಹಾಸ್ಯದಿಂದ ಮುಕ್ತವಾಗಿಲ್ಲ. "ಪಪಪ್ಲಿದೆ ಪಪಪ್ಲಿದೆ" ಎಂದು ಉರುಹೊಡೆಯುವ ಹುಡುಗನಿಂದ ನಮ್ಮ ವಿದ್ಯಾಭ್ಯಾಸ ಕ್ರಮಕ್ಕೆ ಇವರು ಬಾರುಕೋಲು ಬೀಸಿದ್ದಾರೆ. "ಉಗ್ನಿ ಉಗ್ನಿ" ಎಂಬ ರೈತನ ವಾಕ್ಯದಲ್ಲಿ ನಮ್ಮ ಶ್ರೀಮಂತದ ಬುದ್ಧಿವಂತಿಕೆಯನ್ನು ನಕ್ಕಿದ್ದಾರೆ. ಮಾವಿನ ತೋರಣವನ್ನೇ ಮೈಗೆ ಕಂಬಳಿಯಂತೆ ಸುತ್ತಿಕೊಂಡು ಅಧಿಕಾರಿಯ ಮುಂದೆ ನಡೆಯುವ ಮೆರವಣಿಗೆಯ ಪ್ರಸಂಗದಲ್ಲಿ ನಮ್ಮ ಜನ ಅಧಿಕಾರಿಗಳಿಗೆ ತೋರುವ ಅತಿಮರ್ಯಾದೆಯ ವಿಡಂಬನವಿದೆ. ಜನಕ್ಕೆಂದಾದರೂ ಪರೋಪಕಾರ ಮಾಡಬೇಕೆಂಬ ಸ್ಕೌಟಿನ ಧ್ಯೇಯಕ್ಕೆ ಸಿಕ್ಕಿಕೊಂಡ ಹುಡುಗ ಕಂಡವರ ಸಾಮಾನು ಹೊತ್ತು ಪೇಚಿಗೆ ಸಿಕ್ಕಿದ ವೈನೋದಿಕದಲ್ಲಿ ಅತಿಧ್ಯೇಯ ಪರತೆಯನ್ನು ನಕ್ಕಿದ್ದಾರೆ. ಹೀಗೆಯೇ ಇವರ ಚಿತ್ರಗಳು ಅನಂತ. ಇವೆಲ್ಲ ಕೇವಲ ವಿನೋದವಲ್ಲ, ಯಾವುದೋ ಒಂದು "ಇಜಮ್ಮಿನ" ಪಾಲನಾತತ್ತ್ವ. ಶಿಕ್ಷಾವಲ್ಲ: ನಮ್ಮ ಸ್ವಭಾವದ ದರ್ಶನ. ಒಳ್ಳೆಯ ವೈನೋದಿಕ ಎಲ್ಲ ಸಾಹಿತ್ಯದ ಅಂತಿಮ ಗುರಿಯೂ ಇದೇ ಆಗಿದೆ—ಎಂದರೆ ಆತ್ಮಸಾಕ್ಷಾತ್ಕಾರ ಸಾಧನ ಸಾಹಿತ್ಯ. ರಾಮಸ್ವಾಮಿ ಅಯ್ಯಂಗಾರರು ಕ್ಷೇಮವಾದಿಗಳು, ಕ್ರಾಂತಿವಾದಿಗಳಲ್ಲ. ಸತ್ಯಮಾರ್ಗದಲ್ಲಿ ಗಣ್ಯನಾಗಿಯೂ ನೆಮ್ಮದಿಯಿಂದಲೂ ಬಾಳಬೇಕೆಂಬಾಸೆ ಅವರದು. ಎಲ್ಲ ಪ್ರಬುದ್ಧ ಸಮಾಜಕ್ಕೂ ತಾನು ಕ್ಷೇಮದಿಂದ ಬಾಳಬೇಕಾದರೆ ತಾನು ಹೇಗೆ ನಡೆದುಕೊಳ್ಳಬೇಕು ಎಂಬುದರ ಅಂತಃಪ್ರಜ್ಞೆಯಿರುತ್ತದೆ. ಈ ಅಂತಃಪ್ರಜ್ಞೆ ಅತಿಮಿತಿಗಳನ್ನು, ವಕ್ರವಿಕಾರಗಳನ್ನು, ಹೆಮ್ಮೆಬಿಮ್ಮುಗಳಿಂದುಂಟಾಗುವ ವೈಪರೀತ್ಯಗಳನ್ನು ಸಹಿಸದು. ತನ್ನ ಆರೋಗ್ಯಕ್ಕೆ ಇವೆಲ್ಲ ಕುಂದುಗಳು. ಗೊರೂರರಂಥವರಲ್ಲಿ ಈ ಸಾಮಾಜಿಕ ಕ್ಷೇಮಪ್ರಜ್ಞೆ ಜಾಗೃತವಾಗಿ ಈ ವಕ್ರವಿಕಾರ ವೈಪರೀತ್ಯಗಳನ್ನು ಹಾಸ್ಯದ ಬೆಳಕಿನಲ್ಲಿ ತೋರಿಸಿ ನಮ್ಮನ್ನು ಜಾಗರಿಸುತ್ತದೆ. ರಾಮಸ್ವಾಮಿ ಅಯ್ಯಂಗಾರರು ಕ್ಷೇಮಂಕರ ಹಾಸ. ಅವರಿಗೆ ಯಾವ "ಇಜಮ್ಮು"ಗಳಿಂದಲೂ ಸಾಮಾಜಿಕ ಕುಲಘಾತಕಗಳಾದ ಯಾವ ಮತಿ ಸೋಗುಗಳಿಂದಲೂ ಆಪಿಷ್ಟರಾಗುವ ಬಯಕೆಯಿಲ್ಲ. ಯಾವ ನೆಪದಿಂದಲಾಗಲಿ ಅವರು ಇತರರಿಗಾಗಲೀ ತಮಗೇ ಆಗಲಿ ಟೋಪಿ ಹಾಕಿಲ್ಲ. ಮುಚ್ಚುಮರೆಯಿಲ್ಲದ ಸರಳ ಅಚ್ಚ ಭಾರತೀಯರವರು. ಮಾತ್ರವಲ್ಲ ಅಚ್ಚ ದ್ವಿಜರು. ಏಕೆಂದರೆ, ನಾನು ತಿಳಿದಮಟ್ಟಿಗೆ, 'ವಿಷ್ಣುಪುರಾಣೋ'ಕ್ತವಾದ ಈ ಬ್ರಾಹ್ಮಣ ಧರ್ಮವನ್ನು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿರುವವರು :

ಸರ್ವಭೂತ ಹಿತಂ ಕುರ್ಯಾತ್ ನಾ ಹಿತಂ ಕಸ್ಯಚಿತ್ ದ್ವಿಜ
ಮೈತ್ರೀ ಸಮಸ್ತ ಭೂತೇಷು ಬ್ರಾಹ್ಮಣಸ್ಯೋತ್ತಮಂ ಧನಂ

ಈ ಧನವನ್ನು ಕಳಲೂ ಕಡಮೆಮಾಡಲೂ ಅವರು ಯಾವ ಮಡಿಮೋಹಗಳಿಗೂ ಅವಕಾಶ ಕೊಡರು. ಹೀಗೆ ಮೈತ್ರೀಸಂಪದ್ಯುಕ್ತರಾದ ನನ್ನ ಪ್ರಿಯ ಮಿತ್ರರನ್ನು ನನ್ನಿಂದ ಪ್ರತ್ಯೇಕಿಸಿ ವರ್ಣಿಸುವುದು ನನಗೆ ದುಸ್ಸಾಧ್ಯ. ಅವರನ್ನು ನೆನೆದಾಗಲೆಲ್ಲ ನನ್ನ ಮನಸ್ಸು ಪ್ರಫುಲ್ಲವಾಗುತ್ತದೆ. ಬೆಂಗಳೂರಿನಲ್ಲಿ ಅವರಿದ್ದಷ್ಟು ದಿನ ಅವರನ್ನು ನೋಡದ ದಿನ ನನಗಿಲ್ಲ. ಒಳ್ಳೆ ಹೋಟಲುಗಳು, ಒಳ್ಳೆ ಸಿನಿಮಾಗಳು–ಮುಖ್ಯವಾಗಿ ಕನ್‌ಟೋನ್ಮೆಂಟಿನವು—ನಾಟಕಗಳು (ಅವರ ಜತೆ ನಾನು ನೋಡಿದ 'ವಲ್ಲೀ ಪರಿಣಯ'ವೆಂಬ ತಮಿಳಿನ ಸಂಗೀತ ನಾಟಕ ಮತ್ತು 'Spring in Paris' ಎಂಬ ಮಾರಿಸ್ ಷೆವಲಿಯರ್ ಪಾತ್ರ ವಹಿಸಿದ್ದ ಅಪೇರಾ ನನ್ನ ಗೀತನಾಟಕಗಳಿಗೆ ತುಂಬ ಪ್ರೇರಣೆಯಿತ್ತವು), ಹಣ್ಣಿನ ಅಂಗಡಿಗಳು , ಎಲ್ಲೂ ನಾವೇ. ನಮ್ಮ ಜತೆಗೆ ಅವರು ಬೆಂಗಳೂರಿನಲ್ಲಿದ್ದಷ್ಟು ದಿನವೂ ಶಿವರಾಮ ಶಾಸ್ತ್ರಿಗಳೂ (ಈಗ ಇವರೂ ನಮ್ಮನ್ನು ತೊರೆದು ಹೋಗಿದ್ದಾರೆ—ದೈವ ವಿಲಾಸ) ಇರುತ್ತಿದ್ದರು. ನಾವು ಯಾವಾಗಲೂ ಒಟ್ಟಿಗೆ ಇರುವುದನ್ನು ಕಂಡು ನಮ್ಮನ್ನು "ತ್ರಿಥಿಬ್ರಾಹ್ಮಣರಂತೆ ಯಾವಾಗಲೂ ಕೂಡಿಯೇ ಇದ್ದಾರಲ್ಲ ಇವರು" ಎಂದವರುಂಟು. ಗೊರೂರರು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರ ಮನೆಯಲ್ಲಿ ನೆರೆದಿದ್ದ ಸಹೃದಯ ರಸಿಕಗೋಷ್ಠಿಯಲ್ಲಿ ಆಗತಾನೆ ಪ್ರಕಟವಾಗಿದ್ದ 'ಹಳ್ಳಿಯ ಚಿತ್ರ'ದಿಂದಲೂ ಅಪ್ರಕಟಿತ 'ನಮ್ಮ ಊರಿನ ರಸಿಕ'ರಿಂದಲೂ ಆಯ್ದ ಭಾಗಗಳನ್ನು ಓದಿದಾಗ ಅಲ್ಲಿ ಎದ್ದ ನಗೆಯ ಕೋಲಾಹಲ ನನ್ನ ಕಿವಿಯಲ್ಲಿ ಇಂದಿಗೂ ಮೊರೆಯುತ್ತಿದೆ. ಹಾಸದೀಪ್ತವಾದ ಆ ಸಭೆಯ ನಡುವೆ ಏನೂ ತಿಳಿಯದವರಂತೆ ತಾವೂ ನಗುತ್ತಿದ್ದ ರಾಮಸ್ವಾಮಿ ಅಯ್ಯಂಗಾರರ ಮುಖ ಎಷ್ಟು ಶೋಭಾಯಮಾನವಾಗಿತ್ತು ಆ ದಿನ! ಅಲ್ಲದೆ ಅದೇ ತರುಣದಲ್ಲಿ ಬೆಂಗಳೂರಿನ ಕರ್ನಾಟಕ ಸಂಘದವರು ಆಗಿನ ಯೂನಿಯನ್—ಈಗಿನ ಲಾ ಕಾಲೇಜು—ಸಭಾಂಗಣದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ರಾಮಸ್ವಾಮಿ ಅಯ್ಯಂಗಾರರು ವರ್ಣಿಸುತ್ತಿದ್ದ ಪ್ರಸ್ತದ ರಾತ್ರಿ—ಕಗ್ಗತ್ತಲ ಕೋಣೆಯಲ್ಲಿ ವಧುವಿನ ಜತೆಗಿದ್ದ ವರ ಎಲ್ಲೋ ಮೂಲೆಯಲ್ಲಿ ಹುದುಗಿಕೊಂಡಿದ್ದ ಆ ಹೆಣ್ಣನ್ನು ಪತ್ತೆಮಾಡಲಾಗದೆ ಕೊನೆಗೆ ತಾನು ಮರೆಸಿಟ್ಟುಕೊಂಡಿದ್ದ ಮೆಣಸಿನಕಾಯಿಯನ್ನು ಬೆಂಕಿಕಡ್ಡಿ ಗೀಚಿ ಹಚ್ಚಿ ಆ ಘಾಟಿನಿಂದ ಆ ಹೆಣ್ಣು ಕೆಮ್ಮುವಂತೆ ಮಾಡಿ ಆ ಕೆಮ್ಮಿನ ಜಾಡನ್ನು ಹಿಡಿದೇ ಪಕ್ಕನೆ ಹೋಗಿ ಹಿಡಿದುಕೊಂಡ—ಪ್ರಸಂಗ ಆ ಸಭೆಯನ್ನೇ ನಗುವಿನ ಕೋಲಾಹಲದಿಂದ ತುಂಬಿತಲ್ಲವೆ ? ಹೀಗೆ ಎಷ್ಟೋ ಪ್ರಸಂಗಗಳು ನೆನಪಿಗೆ ಮುತ್ತಿಕೊಳ್ಳುತ್ತವೆ. ಆಗಿನ ರಾಮಸ್ವಾಮಿ ಅಯ್ಯಂಗಾರರನ್ನೂ, ಅವರಿಗೂ ನನಗೂ ಇದ್ದ ಮಧುರವಾದ ಮೈತ್ರಿಯನ್ನೂ ನಾನು ನನ್ನ 'ಧ್ವಜರಕ್ಷೆ' ಎಂಬ ಕಥಾಸಂಕಲನದಲ್ಲಿ 'ವಿಷಾದಯೋಗ' ಎಂಬ ಬಂಧದಲ್ಲಿ ವರ್ಣಿಸಿದ್ದೇನೆ. ಕುತೂಹಲವುಳ್ಳವರು ಪ್ರಾಯಃ ಅದನ್ನು ಓದಿಯಾರಾದರೆ ರಾಮಸ್ವಾಮಿ ಅಯ್ಯಂಗಾರರು ಎಂಥ ವ್ಯಕ್ತಿ, ಅವರ ಹೃದಯ ಎಷ್ಟು ಕೋಮಲವಾದುದು ಆರ್ದ್ರವಾದುದು ಎಂಬುದರ ಅರಿವಾದೀತು. ಇಂಥವರಿಗೆ ಗುಣಗ್ರಾಹಿಯಾದ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಸಹೃದಯ ವಿದ್ವತ್

ನ್ನುಂದ ಈ ಮಹೋತ್ಸವವನ್ನು ಏರ್ಪಡಿಸಿ ತಮ್ಮ ರಸಿಕತೆಯನ್ನೂ ಸಜ್ಜನ ಪ್ರೀತಿಯನ್ನೂ ಪ್ರಕಾಶಗೊಳಿಸುವುದರ ಜತೆಗೆ ನನ್ನಂಥ ಅವರ ಮಿತ್ರರೆಲ್ಲರನ್ನೂ ಹರ್ಷಗೊಳಿಸುತ್ತಿರುವುದು ಅತ್ಯಂತ ಅಭಿನಂದನೀಯವೂ ಅಭಿಮಾನಾಸ್ಪದವೂ ಆದ ಸಂಗತಿ. ನನ್ನ ಈ ಮಿತ್ರರು ಆರೋಗ್ಯಾದಿ ಸಕಲ ಭಾಗ್ಯಗಳೊಡಗೂಡಿ ನಮ್ಮ ಹರ್ಷವರ್ಧಕರಾಗಿ ಚಿರಕಾಲಬಾಳಲೆಂದು ನಾನು ದೇವರಿದಿರು ನಮ್ರನಾಗಿ ಪ್ರಾರ್ಥಿಸುತ್ತೇನೆ. ದೇವರ ಕರುಣೆ ಮಿತ್ರಮುಖೇನ ನಮಗೆ ಮುಟ್ಟುವಂತೆ ಮತ್ತೇತರಿಂದಲೂ ಇಲ್ಲ.

ಮಾನವ ವ್ಯಕ್ತಿ

ವಿ. ಸೀತಾರಾಮಯ್ಯ

ಶ್ರೀ ಗೊರೂರರು ತುಂಬಾ ಸಜ್ಜನರು. ಅವರ ಲೇಖನಗಳು ಬಂದ ಕಾಲದಿಂದಲೂ ಅವನ್ನು ಓದಿ ಸಂತೋಷಿಸುತ್ತಿದ್ದೇನೆ. ಅವರ ಒಂದೆರಡು ಪುಸ್ತಕಗಳನ್ನು ವಿಶ್ವಾಸದಿಂದ ತರಗತಿಗಳಲ್ಲಿ ಪಾಠ ಹೇಳಿದ್ದೇನೆ. ಮೂರು ನಾಲ್ಕನ್ನು 'ಹಿಂದೂ' ಪತ್ರಿಕೆಯಲ್ಲಿ 'ಅವಲೋಕನ' ಮಾಡಿದ್ದೇನೆ. ನಾನು ೧೯೪೩ರಲ್ಲಿ 'ಪ್ರಬುದ್ಧ ಕರ್ಣಾಟಕ'ದ ಸಂಪಾದಕನಾದಾಗ, ಕೆಲವು ಕಾಲದಿಂದ ಏಕೋ ಏನೊ ಅವರ ಬರಹದ ಕೊಡುಗೆ ನಿಂತು ಹೋಗುತ್ತಿದ್ದಾಗ ಅವರಿಂದ ಲೇಖನ ತರಿಸಿಕೊಂಡು, ಅವನ್ನು ಪ್ರಕಟಿಸಿದ್ದೇನೆ. ನಾಲ್ಕಾರು ಸಂದರ್ಭಗಳಲ್ಲಿ ಒಂದೇ ವೇದಿಕೆಯಿಂದ ನಾವು ಮಾತನಾಡಿದ್ದೇವೆ.

ಹಳ್ಳಿಯ ಬದುಕಿನ ವಿನೋದವನ್ನು, ಸಹಜ ಸೌಂದರ್ಯವನ್ನು ಅವರು ಕಾಣಿಸಿರುವಂತೆ ಹಿಂದೆ ಮಾಡಿರಲಿಲ್ಲ. ಅವರ ಅಯ್ಯಂಗಾರಿ, ಸೀನಪ್ಪ, ಡೊಂಬರೊಡನೆ ಓಡಿಹೋದ ಹುಡುಗ, ಪಟ್ಟಣದ ನಾಗರಿಕರು ಸೂಟು ಹಾಕಿಕೊಂಡು ಗದ್ದೆಗಳ ಬದುವಿನ ಮೇಲೆ ತಿರುಗಾಡ ಹೋಗಿ ವಿಚಿತ್ರ ಗತಿಗೆ ಬಂದದ್ದು, ಅಲ್ಲಿನ ಹಾರ್ದವಾದ ಗೋಷ್ಠಿಗಳು, ಗೆಳೆಯವರ್ಗ ಎಷ್ಟು ತೆರ! ನಮ್ಮ ಕಾಲದ ಇಂದಿನ ಹಳ್ಳಿಯ ಬದುಕು ಹೇಗೇ ಮಾರ್ಪಡುತ್ತಿರಲಿ ೧೯೩೦ರ ದಶಕದಲ್ಲಿನ ಬಾಳಚಿತ್ರಗಳನ್ನು ಅವರು ರೂಪಿಸಿದಂತೆ ಪ್ರೀತಿಯಿಂದ ಬೇರೆ ಯಾರೂ ಚಿತ್ರಿಸಿಲ್ಲವೆನಿಸುತ್ತದೆ. ಜನಪದ ಸಾಹಿತ್ಯವನ್ನೂ ಅವರು ಪ್ರೀತಿಯಿಂದ ಸಂಗ್ರಹಿಸಿಕೊಟ್ಟಿದ್ದಾರೆ.

ಅವರು ಗಾಂಧೀಜಿಯವರ ಕಾರ್ಯಕ್ರಮ ಸಾಧನೆಯಲ್ಲಿಯೂ, ಆಮೇಲಿನ ಕಾಲದಲ್ಲಿ ನಮ್ಮ ರಾಜಕೀಯ ಜೀವನಕ್ಕೆ ಸ್ವಾತಂತ್ರ್ಯ ಬಂದು ನಾವೊಂದು ಹೊಸ ಮೈಸೂರು ರಾಜ್ಯವಾದಾಗ ನಮ್ಮ ಶಾಸನ ಮಂಡಲಿಯಲ್ಲಿಯೂ ದಕ್ಷರಾಗಿ ನಾಡಸೇವೆ ಸಲ್ಲಿಸಿದ್ದಾರೆ. ಎಲ್ಲಕ್ಕೂ ಹಿರಿದಾಗಿ ಮಾನವ ವ್ಯಕ್ತಿಯಾಗಿ ಅವರ ಸ್ನೇಹ ಸಂಪತ್ತು ದೊಡ್ಡದು. ಇಂಥವರ ೭೦ಕ್ಕೆ ನೀವು ಉತ್ಸವ ನೆರವೇರಿಸುವುದು ತುಂಬಾ ಸೂಕ್ತವಾದ್ದು. ಇದಕ್ಕಾಗಿ ಕನ್ನಡದ ಜನತೆ ನಿಮಗೆ ಕೃತಜ್ಞವಾಗಿರುತ್ತದೆ.

ಎಪ್ಪತ್ತರ ಹೊಂಗೂಸು

ಶಿವರಾಮ ಕಾರಂತ

ನಾನು ಕನ್ನಡ ಭಾಷೆಯಲ್ಲಿ ಆಸಕ್ತಿ ವಹಿಸಿ ಆ ನಾಡಿನ ಒಂದು ತುದಿಯಿಂದ ಇನ್ನೊಂದು ತುದಿಗೆ ಸಂಚರಿಸುತ್ತಿದ್ದ ಹಿಂದಣ ಕಾಲದಲ್ಲಿ, ನನ್ನ ಪಾಲಿಗೆ ಬಂದ ಅನೇಕ ಮಿತ್ರರನ್ನು—ಅವರವರು ಹುಟ್ಟಿ, ಬೆಳೆದು ವಿಖ್ಯಾತಿ ಗಳಿಸಿದ ಕನ್ನಡನಾಡಿನ ವಿವಿಧ ಭಾಗಗಳ ಹೆಸರುಗಳೊಂದಿಗೆ ಜತೆಗೊಳಿಸಿ ನೆನೆಯಬೇಕಾಗುತ್ತಿತ್ತು: ಆ ಕಾಲಕ್ಕೆ ಮದ್ರಾಸು ಕನ್ನಡ ಬೇರೆ; ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದರೂ ಬಳ್ಳಾರಿಯ ತುಣುಕು ಬೇರೆ. ಮುಂಬಯಿ ಪ್ರಾಂತ್ಯದ ಕನ್ನಡ ಭಾಗಗಳು: ಮೈಸೂರು ಬೇರೆ ಇನ್ನೊಂದೇ ನಾಡು: ನಿಜಾಮರ ಮೊಗಲಾಯಿ ಮತ್ತೊಂದೇ ಪ್ರದೇಶ. ಇನ್ನು ಸಾಲದೆಂಬುದಕ್ಕೆ ಶಿರಹಟ್ಟಿ, ಜಮಖಂಡಿ, ರಾಮದುರ್ಗದಂತಹ ಅನೇಕ ಸಂಸ್ಥಾನಗಳೂ ಕರ್ನಾಟಕದಲ್ಲಿದ್ದುವು. ಆ ಕಾಲದಲ್ಲಿ ಕನ್ನಡ ನಾಡು ಒಂದು ಎಂದು—ನನಗೆ ನೆನೆಯಲು ಕಷ್ಟವಾಗುತ್ತಿತ್ತು. ದೇಶೀಯ ಸ್ವಾತಂತ್ರ್ಯ ಆಂದೋಲನದಿಂದಾಗಿ ನಾಡಿನ ಸೀಮೆಯ ಗಡಿಗಳು ಕರಗುತ್ತ ಬಂದಿದ್ದರೂ, ನಮ್ಮ ಮನಸ್ಸಿನಲ್ಲಿ ಅದೃಶ್ಯವಾಗಿ ಇರುವ ಹಲವು ಬೇಲಿಗಳು ಇನ್ನೂ ಉಳಿದಿದ್ದುವು.

ಬ್ರಿಟಿಷ್ ಪ್ರಾಂತವಾದ ಮದ್ರಾಸು ಸಂಸ್ಥಾನಕ್ಕೆ ಸೇರಿದ ನನಗೆ—ಮೈಸೂರು ಅನ್ಯ ಪ್ರದೇಶವಾಗಿತ್ತು. ಅದು ಸಮೀಪವಾಗತೊಡಗಿದ್ದು ಗಾಂಧೀಜಿಯ ಅಸಹಕಾರ ಚಳವಳಿ ತೊಡಗಿದ ಮೇಲೆ; ಅನಂತರ, ಬೆಂಗಳೂರಿನ ಸಾಹಿತ್ಯ ಪರಿಷತ್ತಿನಿಂದಾಗಿ. ಅದರೊಳಗೆ ದುಡಿಯುತ್ತಿದ್ದ ಬೆಳ್ಳಾವೆಯವರು, ಡಿ.ವಿ.ಜಿ.ಯವರು, ಶ್ರೀಯವರು, ಮಾಸ್ತಿಯವರು, ವೆಂಕಣ್ಣಯ್ಯನವರು ಮತ್ತು ಬಿ.ಸಿ.ಯವರು—ಇಂಥವರ ಕೆಲಸಗಳಿಂದ ಕನ್ನಡ ಭಾಷೆಯ ಜನಗಳೊಳಗೆ ಸೋದರ ಸಂಬಂಧ ಉಂಟಾಗುತ್ತಿದ್ದ ಕಾಲವದು. ಈ ಮೇಲಿನವರೆಲ್ಲರೂ ಮೈಸೂರು, ಬೆಂಗಳೂರು ನಗರವಾಸಿಗಳು. ನನ

ಗಿಂತಲೂ ಹೆಚ್ಚಿಗೆ ಓದಿದವರು; ಹಿರಿಯರು. ಆದುದರಿಂದ ಆ ಕಾಲಕ್ಕೆ ನನಗೆ ಒಂದಿಷ್ಟು ದೂರದವರು. ಅದೇ ಕಾಲದಲ್ಲಿ—ಈ ಸ್ವಾತಂತ್ರ್ಯ ಚಳವಳಿ ಆ ಮೈಸೂರು ಸೀಮೆಯ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿದ್ದಪ್ಪನಹಳ್ಳಿ ಕೃಷ್ಣಶರ್ಮರಂತಹ ಮೇಲಂತಸ್ತಿನಲ್ಲಿಲ್ಲದ ಹಳ್ಳಿಯ ಜನರನ್ನೂ ಬೆಳಕಿಗೆ ತಂದುದುಂಟು. ಗಾಂಧೀಜಿಯ ಅಸಹಕಾರ ಚಳವಳಿ ಇದಕ್ಕೊಂದು ಕಾರಣವಾದರೆ, ಸ್ವಶಕ್ತಿಯಿಂದ ಕನ್ನಡದ ಬದುಕನ್ನು ಕುರಿತು ಕನ್ನಡದ ನುಡಿಯಲ್ಲಿ ಈ ವ್ಯಕ್ತಿಗಳು ಬರೆಯತೊಡಗಿದ್ದು ಇನ್ನೊಂದು ಕಾರಣ. ಈ ಎರಡು ಕಾರಣಗಳಿಂದಾಗಿ—ನನಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರ ಪರಿಚಯ ಈ ಶತಮಾನದ ಮೂರನೆಯ ದಶಕದಲ್ಲಿ ಉಂಟಾಯಿತು. ಅವರು ಆಗ ನನ್ನಂತೆ ಖಾದಿ ವಸನಧಾರಿಗಳಾಗಿದ್ದರು. ಕನ್ನಡ ಭಾಷೆಯಲ್ಲಿ ಚೆನ್ನಾಗಿ ಬರೆಯತೊಡಗಿದ್ದರು. ಆ ಕಾಲಕ್ಕೆ ಮಹಾ ಮಹಾ ಪಂಡಿತರ ಸಾಲಿಗೆ ಅವರನ್ನು ಎಣಿಸದೆ, ನನ್ನಂತಿರುವ ಒಬ್ಬ ಬರಹಗಾರ ಮತ್ತು ಸ್ವಾತಂತ್ರ್ಯಪ್ರೇಮಿ—ಎಂದು ತಿಳಿಯುವುದು ನನಗೆ ಹಿತವಾಗಿ ಕಂಡಿತ್ತು.

ನನ್ನ ಅವರ ಪರಸ್ಪರ ಭೇಟಿ ಒಮ್ಮೊಮ್ಮೆ ಬೆಂಗಳೂರಿಗೆ ಹೋದಾಗಲೋ, ಸಾಹಿತ್ಯ ಸಮ್ಮೇಳನ ಸೇರಿದಲ್ಲೋ ಆದುದುಂಟು. ಪುತ್ತೂರಿನಲ್ಲಿ ನಡೆಯುತ್ತಿದ್ದ ದಸರಾ ಉತ್ಸವಕ್ಕೆ ನಾವು ಅವರನ್ನು ಕರೆಸಿಕೊಂಡುದುಂಟು. ಅವರ ಉತ್ಸಾಹಭರಿತ ಮಾತನ್ನು ಮೋಹವಶನಾಗಿ ಕೇಳಿದುದುಂಟು.

ತಮ್ಮ ಊರಿನ ಬದುಕನ್ನೂ, ಊರ ಜನರನ್ನೂ ಬಲು ಮುದ್ದಾಗಿ ಮತ್ತು ಸುಂದರವಾಗಿ ಸುತ್ತಣ ಜನಕ್ಕೆ ಪರಿಚಯಮಾಡಿಕೊಟ್ಟ ಕನ್ನಡಿಗರಲ್ಲಿ ಅವರು ನನ್ನ ಕಣ್ಣಿಗೆ ಹೊಡೆದು ಕಾಣಿಸುತ್ತಾರೆ. ಅವರ ಊರಿನ ರಸಿಕರನ್ನೂ, ರಾಮಾಚಾರಿಯನ್ನೂ, ರಹಮಾಪ್ಪನೋ ಹೆಸರಿನ ಸಾಬಿಗಳನ್ನು—ತಮ್ಮ ಬರವಣಿಗೆಯಲ್ಲಿ ಅವರು ನಮಗೆ ಗಾಢವಾಗಿ ಗುರುತುಮಾಡಿಕೊಟ್ಟಿದ್ದಾರೆ. ಮಲೆನಾಡು ಬಯಲು ಸೀಮೆಯ ನಡುವಣ ಹೇಮಾವತಿಯ ದಂಡೆಯ ಗೊರೂರನ್ನು ನಾನು ಕಂಡದ್ದು — ಕೇವಲ ಮೂರು ನಾಲ್ಕು ವರ್ಷಗಳ ಹಿಂದೆ. ಆದರೆ—ಆ ನೆಲದಲ್ಲಿ ಹುಟ್ಟಿ ಬೆಳೆದ ಜನಗಳ ಬದುಕಿನ ಸವಿಯನ್ನು ಕಣ್ಣಿಗೆ ಕಟ್ಟುವಂತೆ ಓದಲು ಸಾಧ್ಯವಾದದ್ದು ಈ ಶತಮಾನದ ಮೂರು, ನಾಲ್ಕನೆಯ ದಶಕಗಳಲ್ಲಿ. ಅದು ಈ ಮಿತ್ರರ ಬರವಣಿಗೆಯಿಂದ. ಅವರ ಬರವಣಿಗೆಯೂ ಸರಳ; ಅವರ ಮನಸ್ಸೂ ಅದರಂತಿರಬೇಕು. ತಮ್ಮ ಆ ಬರವಣಿಗೆಯಲ್ಲಿ ಅವರು ಜನಸಾಮಾನ್ಯರ ಬದುಕು ಎಷ್ಟು ರಸವತ್ತಾಗಿರಬಲ್ಲದು, ಎಷ್ಟು ಸುಂದರವಾಗಿರಬಲ್ಲದು; ಅವರ ನೋವು ನಗುಗಳು ಎಂಥವು—ಎಂಬುವನ್ನು ದೀರ್ಘ ಕಾಲದ ಹಿಂದೆಯೇ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ ಗೊರೂರು ಕನ್ನಡ ನಾಡಿನ ಅಂಗ—ಎಂದು ಅವರು ನನಗೆ ತೋರಿಸಿಕೊಟ್ಟರು. ಅವರಂತೆ ಶ್ರೀವೈಷ್ಣವರಾಗಿ—ಮೂರು ನಾಮ ಹಾಕುವ ಅಯ್ಯಂಗಾರಿಗಳು ಕೂಡ ಕನ್ನಡದ ಜನರು—ಎಂದು ಅವರ ಪುಸ್ತಕದ ಒಳಗೂ, ಬದುಕಿನ ಹೊರಗೂ ಒಳಗೂ, ಅವರೇನೇ ತೋರಿಸಿಕೊಟ್ಟ

ದ್ದಾರೆ. ಹಳ್ಳಿಯ ಬಾಳಿನ ಸೊಗಸು, ದುಃಖ, ದಾರಿದ್ರ್ಯಗಳನ್ನು ಕಂಡು ಬರೆದಿದ್ದು ನಮ್ಮ ಅವನ್ನೆಲ್ಲ ನೋಡಲು ಕಲಿಸಿಕೊಟ್ಟವರೂ ಅವರೇ.

ತಮ್ಮ ೭೦ನೇ ವಯಸ್ಸಿಗೆ ಅವರು ಕಾಲಿಡುತ್ತಿರುವ ಈ ಹೊತ್ತಿನಲ್ಲಿ, ಅವರನ್ನು, ಅವರ ಬರವಣಿಗೆಯನ್ನು ಜ್ಞಾಪಿಸಿಕೊಂಡು, ಹೇಮಾವತಿ ದಂಡೆಯ ಈ ಹಿರಿಯ ಕೂಸು ಹೊನ್ನಿನಷ್ಟು ಸುಂದರವೂ ಬೆಲೆಯುಳ್ಳದೂ ಆಗಿ ದೀರ್ಘಕಾಲ ಮೆರೆಯಲಿ ಎಂದು ಹಾರೈಸುತ್ತೇನೆ.

ವಿನೋದಿ

ವಿ. ಕೃ. ಗೋಕಾಕ್

‘ಗೊರೂರು ಗೌರವಗ್ರಂಥ’ದ ವಿಷಯ ತಿಳಿದು ಸಂತೋಷವಾಯಿತು. ನಾನು ಸುಮಾರು ೪೦ ವರ್ಷಗಳ ಹಿಂದೆ ಗೊರೂರರವರ ಎರಡು ಕೃತಿಗಳನ್ನು ‘ಜಯ ಕರ್ಣಾಟಕ’ದಲ್ಲಿ ವಿಮರ್ಶಿಸಿದ್ದೆ.

ನನ್ನ ಹತ್ತಿರ ಇದ್ದ ಅವರ ಒಂದು ಕಟಿಂಗ್ ಇಲ್ಲಿ ಇಟ್ಟಿದ್ದೇನೆ. ೭೦ನೇ ವರ್ಷದ ಈ ವರ್ಧಂತಿಯಲ್ಲಿ ೪೦ ವರ್ಷದ ಹಿಂದಿನ ಈ ವಿಮರ್ಶೆ ಅವರಿಗೆ ಸವಿನೆನಪುಗಳನ್ನು ತರಬಹುದು. ಕಾರಣ ಇದನ್ನೇ ಬಳಸಿಕೊಂಡು ಬಿಡಿರಿ. ಈ ಕಾಗದವನ್ನು ಅದರ ಜೊತೆಗೆ ಅಚ್ಚು ಹಾಕಿಸಿದರೂ ಪರವಾಯಿಲ್ಲ. ಜೀವನದಲ್ಲಿ ಅವರಿಗೆ ದೀರ್ಘಾಯುಷ್ಯ–ಆರೋಗ್ಯ–ಶಾಂತಿ–ತುಷ್ಟಿಗಳಿರಲಿ.

* * *

ಭಾವನಾಚಿತ್ರಗಳೂ ಸಾಹಿತ್ಯದ ಉದ್ದೇಶಗಳನ್ನು ಹೇಗೆ ಸಾಧಿಸಬಲ್ಲವೆಂಬುದನ್ನು ನಾವು ‘ರಾಮಾಚಾರಿಯ ನೆನಪಿ’ನಲ್ಲಿ ಕಂಡಿದ್ದೇವೆ. ‘ಹಳ್ಳಿಯ ಚಿತ್ರ’ಗಳಲ್ಲಿಯ ಇಂತಹ ದೃಶ್ಯಗಳು ವಿನೋದಿಯ (humourist) ನಿಪುಣತೆಯೊಡನೆ ಬೆರೆತುಕೊಂಡಿವೆ. ಶ್ರೀನಿವಾಸರ ಮುನ್ನುಡಿಯಿಂದ ಅಲಂಕೃತವಾದ ಈ ಗ್ರಂಥದ ಯೋಗ್ಯತೆಯು ಬಹು ಘನವಾದುದೆಂದು ಹೇಳಬಹುದು. ಇದರಲ್ಲಿ ನಡೆದಿರುವುದು ಸಾಹಿತ್ಯದ ಸಮಾರಂಭ. ಎಲ್ಲೆಲ್ಲಿಯೂ ಆನಂದವೇ ಆನಂದ, ನಗೆಯೋ ನಗೆ. ದೇವರನ್ನು ಕಾಣಲು ತಪಸ್ಸನ್ನು ಮಾಡುತ್ತಿರುವ ಮುನಿವರ್ಯರೂ ಕೂಡ ‘ನಾನು ರತ್ನಳ ಮದುವೆಗೆ ಹೋದುದು’ ‘ನಮ್ಮೂರ ಬಸ್ಸು’ ಮೊದಲಾದ ಸರಸ ಪ್ರಬಂಧಗಳನ್ನು ಕೇಳಿದರೆ, ನಗದೆ ಇರರೆಂದು ನಮಗೆ ಮನದಟ್ಟಾಗಿದೆ. ಬಾಹ್ಯಪ್ರಪಂಚವೇ ಲೇಖಕರ ವಸ್ತುಸಾರವಾಗಿದೆ. ಅದರಲ್ಲಿ ಸಂಭವಿಸುವ ಸಾಮಾನ್ಯ ಸಂಗತಿಗಳಲ್ಲಿ ಅವರಿಗೆ ತೋರಿಬರುವ ಅಸಾಮಾನ್ಯವಾದ ಸೌಂದರ್ಯ, ಪಂಚತಂತ್ರ, ಹಿತೋಪದೇಶ—ಇವೇ ಮೊದಲಾದುವು ಗ್ರಂಥದಲ್ಲಿಯ

ವಿನೋದದ ಮೂಲಧನವಾಗಿದೆ. ಕೊರಗುವ ಮಾನವನನ್ನು ಪ್ರಸನ್ನಚಿತ್ತನನ್ನಾಗಿ ಮಾಡಲು ಹಾಸ್ಯರಸದಂತಹ ಸಾಧನವು ಬೇರೊಂದಿಲ್ಲ. ಹೊಟ್ಟೆನೋವು, ತಲೆನೋವು, ಅಜೀರ್ಣ ಮೊದಲಾದ ಸಣ್ಣಪುಟ್ಟ ಬೇನೆಗಳಿಂದ ಕೊರಗುತ್ತಿರುವ ಜನರಾಶಿಯ ಮನವನ್ನು ಸ್ವಸ್ಥವಾಗಿ ಮಾಡಲು ಹಾಸ್ಯವೇ ಪರಮೌಷಧ. ಇಂಥ ಔಷಧದ ಒಂದು ದೊಡ್ಡ ಬಾಟಲಿಯನ್ನು ಲೇಖಕರು ನಮಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಅದಾದರೋ —ಅಷ್ಟು ತಕ್ಕಂತೆ ಬಿಲ್ಲು! ಇದಕ್ಕಾಗಿ ಅವರನ್ನು ಎಷ್ಟು ಅಭಿನಂದಿಸಿದರೂ ಸಾಲದು. ಹಾಸ್ಯಪ್ರೇರಕ ಸಾಹಿತ್ಯದಲ್ಲಿ ಅನೇಕ ಭೇದಗಳಿರುವುದುಂಟು. ವಿನೋದಿ ಬೇರೆ, ವಿಡಂಬನವೇಷಕಾರ (satirist). ಇವರೆಲ್ಲ ಹಾಸ್ಯಜೀವಿ (comedian)ಗಳಲ್ಲವು. ಆದರೆ ವಿಡಂಬನದಲ್ಲಿ ಮಾನವೀಯ ಜೀವನವನ್ನು ಉಚ್ಚತರವಾಗಿಸುವ ಹಂಬಲ ಹಾಸ್ಯಪ್ರವೃತ್ತಿಗಿಂತ ಹೆಚ್ಚಾಗಿರುವುದು. ಅಲ್ಲಿ ವಿನೋದದ ವಿದಗ್ಧತೆಗಳು. [illegible] ವನ್ನು ನೆಲಗೊಳಿಸುವ ಧ್ವಂಸಕ್ಕೆ ಪ್ರಧಾನವಾಗುತ್ತವೆ. ಇದಲ್ಲದೆ ಅನೇಕ ಸಲ ಟೀಕೆಯಲ್ಲಿ ದ್ವೇಷವು ಕಲೆತು, ನಗುವವರನ್ನು ಮಂಗಬುದ್ಧಿಗೊಳಿಸುವುದು.

[illegible] ದಾರಿಯು ಬೇರೆಯಾಗಿದೆ. ಅವನಲ್ಲಿ ರಸಿಕತೆ ಹೆಚ್ಚು. ಜಗತ್ತಿನಲ್ಲಿ ರಸವಂತಿಕೆಯೇ ಶ್ರೇಷ್ಠವೆಂದು ಅವನ ಭಾವನೆಯಾಗಿರುವುದುಂಟು. ಅದಾಗಿ ಜನರನ್ನು ದೂರ ಹೋಗಬೇಕೆಂದೇನಿಲ್ಲ. ಇದರಲ್ಲಿ ತನ್ನ ನುಡಿಯನ್ನು ಪ್ರತಿಧ್ವನಿಸುವಂತೆ ಹೇಳುವನು. ನಿಷ್ಠುರ ಬೇರೆ ಇರಲಿ, ಹೇಳುವ ರೀತಿಯಲ್ಲಿ ತನ್ನ ಬುದ್ಧಿ ಚಾತುರ್ಯವನ್ನು ಅವನು ವ್ಯಕ್ತಪಡಿಸುವನು. ಒಂದು ಸುಂದರವಾದ ನುಡಿಯು ದೊರೆತಾಗ ಅವನು ತನ್ನ ಜೀವವನ್ನೇ ಮಾರಿಕೊಳ್ಳುವನು. ಅವನ ಬುದ್ಧಿಯು ಬಹು ಕುಶಾಗ್ರ ವಾದುದು: ಬುದ್ಧಿವಂತರನ್ನು ಮಾತ್ರ ಮೆಚ್ಚಿಸುವಂಥದು. ಹೃದಯವನ್ನು ಬಹಳ ತಟ್ಟದ ಅವನ ಸರಸ ಸಲ್ಲಾಪಗಳು 'ಬುದ್ಧಿಪ್ರಸ್ಥದ ಗುಮ್ಮಟ'ವನ್ನು ಪ್ರವೇಶಿಸಿ, ಅಲ್ಲಿಯ ನಾಟಕರಂಗವನ್ನು ನಡೆಸಿ, ನಾಟಕೀಯವಾಗುವವು. ಹೀಗೆ ಮೊದಲನೆಯಲ್ಲಿ ನಗೆಯಾಡುವಂತಹ ಸುಂದರವಾಕ್ಯಗಳನ್ನು, ಬುದ್ಧಿಯನ್ನು ಬೆರಗುಗೊಳಿಸುವ ಕಲ್ಪನೆ ಗಳನ್ನು ಕಾಣುವುದರಲ್ಲಿ ವಿದಗ್ಧನು ತನ್ನ ನೈಪುಣ್ಯತೆಯನ್ನು ಮೆಚ್ಚುಮಾಡುವನು. ಕಲಕಾಡುವಲ್ಲದ ಕೈಕಾಲು ಕುಣಿತಗಳನ್ನು ಬಿಡುಗಡೆಮಾಡಿ "ಬಡಿದಾಟದ ಕೈಗಳ ಕೇಡು. ಸುಣ್ಣದಬ್ಬಣದ ಕೇಡು. ಗೋಮೆದಾಳ್ಪಾದ ಕೇಡು" ಎಂದು ಹೇಳಿ ತಾನು ತನ್ನ ಚಾತುರ್ಯವನ್ನು ವಿದಗ್ಧತೆಯನ್ನು ತೋರಿಸುತ್ತಾನೆ.

ಆದರೆ ಶ್ರೀ ರಾಮಸ್ವಾಮಿ ಅಯ್ಯಂಗಾರರು ವಿನೋದಿಯ ವರ್ಗಕ್ಕೆ ಸೇರಿದವರು. ವಿನೋದಿಯೆಂದರೆ "ಸಹಜ ಸಹೃದಯ ರಸಿಕನಾದ ಮಾನವ"ನವನು. "ಜಗತ್ತನ್ನು ಕುರಿತು ವಿನೋದದಿಂದಾಗಿ ವಿಚಾರಿಸುವನು. ಜಗತ್ತಿನ ವಿಷಯವಾಗಿ ತನ್ನ ಭಾವನೆ ಗಳು (feelings) ಹಾಸ್ಯತವಾಗಿ. ಇತರ ಭಾವನೆಗಳನ್ನು ಹಾಸ್ಯತಗೊಳಿಸುವವನೇ" ವಿನೋದಿಯೆಂದು ಹೇಳುತ್ತಾರೆ. ವಿನೋದಿಗೆ ಜಗತ್ತಿನಲ್ಲಿಯ ಕುಂದುಕೊರತೆಗಳು ಹೆಜ್ಜೆಹೆಜ್ಜೆಗೆ ಗೋಚರವಾಗುವವು; ಆದರ ಸ್ವಭಾವಗಳ ವೈಚಿತ್ರ್ಯಗಳು ಕ್ಷಣಕ್ಷಣಕ್ಕೆ

ಕಣ್ಣಿಗೆ ಬೀಳುವುವು. ಆದರೆ ಟೀಕಾಕಾರನಂತೆ ಇವುಗಳನ್ನು ನೋಡಿ, ಅವನು ವಿಪರೀತವಾಗಿ ಸಂತಾಪಗೊಳ್ಳುವುದಿಲ್ಲ. ಮನುಷ್ಯನ ದೌರ್ಬಲ್ಯವನ್ನೂ ಅಪೂರ್ಣತೆಯನ್ನೂ ನೋಡಿ, ಒಂದು ಮೆಲುನಗೆಯನ್ನು ನಗುತ್ತಾನೆ. ತಾನಾದರೂ ಮರ್ತ್ಯನಾಗಿರುವುದನ್ನು ಚೆನ್ನಾಗಿ ನೆನಪಿನಲ್ಲಿಡುತ್ತಾನೆ. ಪೈರಿನ ನಡುವೆ 'ವಾಕಿಂಗ್' ಮಾಡುವ ಶೀನಪ್ಪ, ಏಜಂಟನಾದ ವಾಸ್ಕೋಡಿಗಾಮ, ರತ್ನಳ ಮದುವೆಗೆ ಹೋದ ಮಾವಂದಿರು,—ಇವರ ಸ್ವಭಾವ ವೈಚಿತ್ರ್ಯವನ್ನು ಲೇಖಕರು ಹೀಯಾಳಿಸುವುದಿಲ್ಲ. ಮಧುರವಾಗಿ ನಕ್ಕು ಬಿಡುತ್ತಾರೆ. ಆದರೆ ಈ ನಗೆಯೇ ಇಂತಹ ಸಣ್ಣಪುಟ್ಟ ದೋಷಗಳ ಬಗ್ಗೆ ಎಚ್ಚರವನ್ನು ಕೊಡುತ್ತದೆ.

ವಿನೋದದಲ್ಲಿಯೂ ಅನೇಕ ಪ್ರಕಾರಗಳಿರುವುದುಂಟು. ಅವುಗಳಲ್ಲಿ ಸನ್ನಿವೇಶ ವಿನೋದ (the humour of incident) ಶಬ್ದವಿನೋದ (the humour of words) ಹಾಗೂ ಸ್ವಭಾವನಿರೂಪಣವಿನೋದ (the humour of character)—ಇವು ಮೂರು ಮುಖ್ಯವಾದುವು. 'ನಾನ್ನ ಮಾಡಿದ ಒಂದು ಯಾತ್ರೆ', 'ಬಲವಂತದ ಮದುವೆ', 'ಜೋಡಿದಾರರ ಕೆಲವು ಚಿತ್ರಗಳು' ಮುಂತಾದುವುಗಳಲ್ಲಿ ಸನ್ನಿವೇಶ ವಿನೋದವು ವಿಶೇಷವಾಗಿ ಗೋಚರವಾಗುವುದು. ಅಂದರೆ ಇಲ್ಲಿ ನಗೆಯು ಬರುವುದು ಸ್ವಭಾವವೈಚಿತ್ರ್ಯದಿಂದಲ್ಲ, ಸನ್ನಿವೇಶವೈಚಿತ್ರ್ಯದಿಂದ. ಶೀನಪ್ಪನು ಮದುವೆಯಾಗಿಯೇ ಆಗುತ್ತಿದ್ದನು: ಆದರೆ ಬಲವಂತದಿಂದ ಅವನ ಮದುವೆಯಾಯಿತೆಂಬುದೇ ಹಾಸ್ಯಾಸ್ಪದವಾಗಿದೆ. ಶಬ್ದವಿನೋದವು ಅನೇಕ ಕಡೆಗೆ ದೊರಕುತ್ತಿದ್ದರೂ ಭಾವನವರು ಮೇವ ಭಾಷೆಯಲ್ಲಿ ಆಡಿದ 'ವಿಧವಾಪತಿ' ಮೊದಲಾದ ಬರುಗಳಲ್ಲಿ ಸ್ಪಷ್ಟವಾಗಿ ಕಾಣುವುದು. 'ನಮ್ಮ ಊರಿನ ಬಸ್ಸಿನ' ಭಟ್ಟನ ಹಾಗು ವಾಸ್ಕೋಡಗಾಮಾನ ಚಿತ್ರಗಳಲ್ಲಿ ಸ್ವಭಾವ ನಿರೂಪಣವಿನೋದವು ಪ್ರಕಟವಾಗುವುದು. ಎಲ್ಲ ಚಿತ್ರಗಳಿಗಿಂತ ಮನೋರಂಜಕವಾದ 'ರತ್ನಳ ಮದುವೆ'ಯಲ್ಲಿ ಸ್ವಭಾವ-ಸನ್ನಿವೇಶಗಳ ವೈಚಿತ್ರ್ಯಗಳು ಬೆರೆತು, ವಿನೋದದ ಪ್ರಭಾವವನ್ನು ತೋರಿಸುವುವು.

'ಹಳ್ಳಿಯ ಚಿತ್ರ'ಗಳಲ್ಲಿ ತಮ್ಮ ಸಾಮರ್ಥ್ಯವನ್ನು ಕಂಡುಕೊಂಡ ಲೇಖಕರು 'ನಮ್ಮ ಊರಿನ ರಸಿಕ'ರನ್ನು ಬರೆದದ್ದು ವಿನಾಶ್ಚರ್ಯ? ಈ ಎರಡನೆಯ ಗ್ರಂಥದಲ್ಲಿ ಹಳ್ಳಿಯ ಸಣ್ಣ ಸಣ್ಣ ಚಿತ್ರಗಳನ್ನು ಬರೆಯದೆ, ಹಳ್ಳಿಗಾಡಿನ ಜೀವನವನ್ನೇ ಬಣ್ಣಿಸಲು ಉಪಕ್ರಮಿಸಿದ್ದಾರೆ. ಸಾಮಾನ್ಯ ಜನಜೀವನದಲ್ಲಿಯೂ ಸ್ವಾರಸ್ಯವನ್ನು ತೋರಿಸುವ ಈ ಗ್ರಂಥವನ್ನು ಒಂದು ಕಾವ್ಯವೆಂದೇ ಕರೆಯಬಹುದಲ್ಲವೆ? ಹಳ್ಳಿಯಲ್ಲಿಯ ಮಳೆ, ಗುಡಿ, ಹರಿಸೇವೆ, ಸ್ಮಶಾನ ಯಾತ್ರೆ, ಯಕ್ಷಗಾನ,—ಇವೆಲ್ಲ ಹೃದಯಂಗಮವಾಗಿ ವರ್ಣಿತವಾಗಿವೆ. 'ಹಳ್ಳಿಯ ಚಿತ್ರ'ದಷ್ಟು ಕೆಲವರಿಗೆ ಈ ಪುಸ್ತಕವು ರುಚಿಸಲಿಕ್ಕಿಲ್ಲ. ಆದರೆ ಕಲೆಯ ದೃಷ್ಟಿಯಿಂದ ಇದೇ ಹೆಚ್ಚು ಒಳ್ಳೆಯದಾಗಬಹುದು. ಬದ್ಧಕಂಕಣರಾಗಿ ಅಲ್ಲ, ಮುಕ್ತಹಸ್ತರಾಗಿ ಲೇಖಕರು ಇದನ್ನು ಬರೆದಿದ್ದಾರೆ. ಮೊದಲಿನಿಂದ ಕೊನೆಯವರೆಗೆ ಇಲ್ಲಿ ಒಂದೇ ಒಂದು ಕಲ್ಪನೆಯು ಮೂರ್ತಿಮಂತವಾಗಿ ನಿಂತಿರು

ನವಲ್ಲದೆ, ಸ್ವಭಾವನಿರೂಪಣವಿನೋದವು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತವೆ. ಈ ಗ್ರಂಥಕ್ಕೆ ಶ್ರೀ ಡಿ. ವಿ. ಗುಂಡಪ್ಪನವರು ಬರೆದ ಮುನ್ನುಡಿಯು ನಿಜವಾಗಿಯೂ ಅದರ ಕಾಂತಿಯನ್ನು ಹೆಚ್ಚಿಸುತ್ತಿದೆ.

ಚೈತನ್ಯದಾಯಕ ನೆನಪು

ಶ್ರೀರಂಗ

ನಲವತ್ತು ವರುಷಗಳ ಮುಂಚಿನ ನೆನಪು ಮಿಂಚುತ್ತಿದೆ, ಗೆಳೆಯ ಗೊರೂರು ರಾಮಸ್ವಾಮಿ ಅಯ್ಯಂಗಾರರ ಬಗ್ಗೆ ಮಾತನಾಡಬೇಕೆಂದರೆ. ನಮ್ಮಿಬ್ಬರದೂ ಮೊದಲ ಭೆಟ್ಟಿ ಹೇಗೆ, ಎಲ್ಲಿ ಆಯಿತೆಂಬುವರ ಒಂದೂ ನೆನಪಿಲ್ಲ. ಆದರೂ ಆ ಬಗ್ಗೆ ಇಂದಿಗೂ ಮರೆಯದೆ ಹೇಳಲೇಬೇಕೆಂಬ ವಿಶಿಷ್ಟ ಅನುಭವವೊಂದಿದೆ. ಆ ಅನುಭವವು ಇಬ್ಬರು ಗೆಳೆಯರನ್ನು ಕುರಿತಾಗಿದೆ; ಗೊರೂರರು ಒಬ್ಬರು, ಅಜ್ಜಂಪುರ ಸೀತಾರಾಮ್ (ಆನಂದ) ಇನ್ನೊಬ್ಬರು. 'ಆನಂದ' ಇಲ್ಲದಂತಾಗಿದ್ದರೂ ಆ ಅನುಭವ ಹಾಗೆಯೆ ಉಳಿದಿದೆ. ಅದೆಂದರೆ ಇವರಿಬ್ಬರನ್ನು ಮೊದಲ ಸಲ ಭೆಟ್ಟಿಯಾದಾಗ ಇದು ಹೊಸ ಪರಿಚಯವಲ್ಲ, ಅನೇಕ ವರ್ಷಗಳಿಂದ ಕೂಡಿ ಬೆಳೆದವರು ನಾವು ಎನ್ನುವ ಭಾವನೆ ಪರಸ್ಪರರಲ್ಲಿ ಮೂಡಿತ್ತು. ಧಾರವಾಡದ ಸರಕಾರೀ ಕಾಲೇಜದಲ್ಲಿ ದುಡಿಯುತ್ತಿದ್ದ ನನಗೆ ಇನ್ನು ಕೆಲ ನನ್ನ ಸಮವಯಸ್ಕರಿಗಿದ್ದಂತೆ ಊರೂರು ಅಲೆದಾಡಲು ಬಿಡುವಿರುತ್ತಿರಲಿಲ್ಲ. ಇದಲ್ಲದೆ ಧಾರವಾಡದಲ್ಲಿಯು ನನ್ನ ಚಟುವಟಿಕೆಗಳಿಗಾಗಿ ಮತ್ತು ಬರೆಹಗಳಿಗಾಗಿ ಆ ಕಾಲದಲ್ಲಿ ಒಂದಿಯುಂಗೆ ನಾನು 'ಅಸ್ಪೃಶ್ಯ'ನಂತಿದ್ದೆ, ಮಿಕ್ಕ ಅನೇಕರು ದೂರದಿಂದಲೆ ನನ್ನೊಡನೆ ವರ್ತಿಸುತ್ತಿದ್ದರು. ಅಂತಹ ವಾತಾವರಣದಲ್ಲಿ 'ನೀನು' ಎಂಬ ಸಂಬೋಧನೆಯಿಂದ ನನ್ನೊಡನೆ ಮೊದಲ ಭೆಟ್ಟಿಯಿಂದಲೆ ಮಾತನಾಡಲು ತೊಡಗಿದ ಹಳೆ ಮೈಸೂರಿನವರೆಂದರೆ ಗೊರೂರು ರಾಮಸ್ವಾಮಿ, ಆನಂದ ಮತ್ತು ಚೌಡಪ್ಪ ಈ ಮೂವ್ವರೆ. ಇದರಿಂದ ಈ ಮೂವ್ವರ ವ್ಯಕ್ತಿತ್ವ ಸರಳತೆ ಹೆಚ್ಚು ಸ್ಪಷ್ಟವಾಗುತ್ತಿದೆ ಎಂಬುದು ಖಂಡಿತ.

ಈ ಸಂದರ್ಭದಲ್ಲಿ ೧೯೩೪ರ ಮಾರ್ಚ್–ಏಪ್ರಿಲ್‌ಗಳ ಸಂದರ್ಭದಲ್ಲಿ ನಡೆದ ಒಂದು ಘಟನೆಯನ್ನು ನೆನೆಯಬಹುದು. ನನ್ನ ಮದುವೆಯಾಗಿ ಅದೇ ಎರಡು ತಿಂಗಳುಗಳಾಗಿದ್ದುವು. ನಾನು ಸಪತ್ನೀಕನಾಗಿ ಬೆಂಗಳೂರಿಗೆ ಬಂದಿದ್ದೆ. ಗೆಳೆಯ ರಾಮಸ್ವಾಮಿಯು

ಒಂದು ರಾತ್ರಿ ಭೋಜನಕ್ಕೆ ಆಮಂತ್ರಿಸಿದನು. ಅವನ ವೇಷ ಶುದ್ಧ ಖಾದಿ, ಒಂದು ಉಟ್ಟ ಪಂಚೆ, ಒಂದು ಜುಬ್ಬ ಎನ್ನಿಸುವಂತಹ ಅಂಗಿ, ಒಂದು ಟವೆಲ್; ಆಗ ನಾನು ೨೪ ಗಂಟೆ ಕೋಟು-ಪ್ಯಾಂಟು ತೊಡುತ್ತಿದ್ದೆ. ನಮ್ಮನ್ನು ಮನೆಗೆ ಕರೆದೊಯ್ಯಲು ಗೆಳೆಯನು ಬಂದನು. "ಕಾಲು ಮಡಚಿಕೊಂಡು ನೀನು ಜಟಕಾದಲ್ಲಿ ಕೂತುಕೋಬೇಕು" ಎಂದನು ನನಗೆ. ಜಟಕಾ ನನಗೆ ಹೊಸ ರೀತಿಯ ವಾಹನ. ಆ ಸಂದರ್ಭದಲ್ಲಿ ತೊಟ್ಟ ಬಟ್ಟೆಯಂತೆ ಶುದ್ಧವಾದ ಹೃದಯದ ಗೊರೂರನಿಗೆ ನನ್ನೊಡನೆ ಡಾಂಭಿಕ ದಾಕ್ಷಿಣ್ಯದಿಂದ ವರ್ತಿಸಬೇಕೆಂಬ ವಿಚಾರ ಹೊಳೆಯದಿದ್ದುದು ನನಗಾಗಿ ಆ ಹೃದಯದಲ್ಲಿದ್ದ ನಿರ್ವ್ಯಾಜ ಸ್ನೇಹದ ಸಂಕೇತವಾಗಿತ್ತೆಂಬುದು ನನಗೆ ಹೆಮ್ಮೆಯನ್ನುಂಟುಮಾಡಿತು.

ಗೊರೂರು ರಾಮಸ್ವಾಮಿಯವರ (ಇಂದಿನ ವಯಸ್ಸಿಗಾಗಿ ಬಹುವಚನವನ್ನು ಬಳಸುತ್ತಿದ್ದೇನೆ) ಬಗ್ಗೆ ನನ್ನಲ್ಲಿ ಸ್ನೇಹಭಾವ ಮೂಡಿದ್ದು ಅವರನ್ನು ಕಾಣುವುದಕ್ಕೆ ಮುಂಚೆ; ಅವರ 'ಹಳ್ಳಿಯ ಚಿತ್ರಗಳ'ನ್ನು ಓದಿ. ಆದರ್ಶ ಪಾತ್ರಗಳ 'goody-goody' ಕತೆಗಳನ್ನು ಕೆಣಕಿ ತಂದುಕೊಂಡ ಭಾವನೆಗಳನ್ನು ಕೃತಕಶೈಲಿಯಲ್ಲಿ ಬರೆಯುತ್ತಿದ್ದ ಅಂದಿನ ಅನೇಕ ಕವಿ-ಕತೆಗಾರರ ಹಿನ್ನೆಲೆಯಲ್ಲಿ ಗೊರೂರು ಅವರ ಬರೆಹಗಳು ಪ್ರಾತಃಕಾಲದ ನಿರ್ಮಲ ಹವೆಯಂತೆ ಉತ್ಸಾಹದಾಯಕವಾಗಿದ್ದುವು. ಸಹಜವಾದ ಭಾಷೆ, ಸರಳವಾದ ಶೈಲಿ, ದಿನನಿತ್ಯದ ವ್ಯವಹಾರಗಳು, ಸಾಮಾನ್ಯವೆನ್ನಿಸುವಂತಹ ಪಾತ್ರಗಳು—ಇವೆಲ್ಲವುಗಳಿಗಾಗಿ ಗೊರೂರು ಅವರು ಚಿತ್ರಿಸಿದ್ದ ವ್ಯಕ್ತಿಗಳ ಬಗ್ಗೆ ನಮ್ಮಲ್ಲಿ ಆತ್ಮೀಯತೆ ಮೂಡುತ್ತಿತ್ತು. ಎಲ್ಲ ಪಾತ್ರಗಳೂ ನಮ್ಮ ನೆರೆಹೊರೆಯವರೆ. ಇದನ್ನು ಮೇಲ್ಮಟ್ಟದ ಸಾಹಿತ್ಯ ಎಂದು ಒಪ್ಪಲು ಅನೇಕರು ಸಿದ್ಧರಿರಲಿಲ್ಲ, ಆದರೂ ಇದು ಸಾಹಿತ್ಯ ಅಲ್ಲ ಎನ್ನುವ ಧೈರ್ಯ ಅವರಿಗಿದ್ದಿರಲಿಲ್ಲ. "ಏನೊ ಹರೆಯದ ಹುಡುಗತನ" ಎಂದು ಸರ್ಟಿಫಿಕೇಟನ್ನು ಒಪ್ಪಿಸುತ್ತಿದ್ದರು. ನಮ್ಮಿಬ್ಬರ ಸಾಹಿತ್ಯದ ಹಿನ್ನೆಲೆ ಏಕರೂಪವಾದ್ದರಿಂದ ನಮ್ಮಲ್ಲಿ ಅವ್ಯಾಜಸ್ನೇಹವು ಬೆಳೆದುಬಂದಿರಬಹುದು.

ನನ್ನ ಸ್ವಭಾವಕ್ಕೂ ಅಭಿರುಚಿಗೂ ಒಪ್ಪಿದ ಇನ್ನೊಂದು ವಿಷಯವೆಂದರೆ ಗೊರೂರರ ಹಾಸ್ಯಪ್ರವೃತ್ತಿ. ನನ್ನಲ್ಲೂ ಅವರಲ್ಲೂ ಮುಖ್ಯ ವ್ಯತ್ಯಾಸವೆಂದರೆ ಮಾತಿನಲ್ಲಿ ನನ್ನಂತೆಯೇ ಅವರು ಕಟುಹಾಸ್ಯವನ್ನು ಬಳಸಿದರೂ ಬರವಣಿಗೆಯಲ್ಲಿ ಬೇರೆಯಾಗಿ ತಿಳಿಹಾಸ್ಯವನ್ನು ಬಳಸುತ್ತಿದ್ದರು. ಅವರಲ್ಲಿದ್ದ ಈ ಕೌಶಲ್ಯವನ್ನು ನಾನು ತೀರ ಕಡಮೆ ಬರೆಹಗಾರರಲ್ಲಿ ಕಂಡಿದ್ದೇನೆ. ವೈಯಕ್ತಿಕ ಜೀವನದಲ್ಲಿಯ ಕಷ್ಟ-ನಷ್ಟಗಳನ್ನು ಸ್ಥಿತಪ್ರಜ್ಞನಂತೆ ಮೈಗೂಡಿಸಿಕೊಂಡು ಬರವಣಿಗೆಯ ಸಹಾನುಭೂತಿಯ ತಿಳಿಹಾಸ್ಯವನ್ನು ಬಳಸುವುದೆಂದರೆ ಅದೊಂದು ಯೋಗಸಾಧನೆ: ಮುವ್ವತ್ತು ವರ್ಷಗಳ ಹಿಂದೆಯೇ ಅದನ್ನು ಗೊರೂರರು ಸಾಧಿಸಿಕೊಂಡಿದ್ದರು.

ಗಾಂಧೀಜಿಯವರ ಪ್ರಭಾವದಿಂದ ಪ್ರೇರಿತರಾದ ನನ್ನ ವಯಸ್ಸಿನ ಕೆಲವು ಕನ್ನಡ ಲೇಖಕರಲ್ಲಿ ಗೊರೂರರು ಸಾಹಿತ್ಯದಲ್ಲಿ ಮಾತ್ರವಲ್ಲದೆ ಜೀವನದಲ್ಲಿಯೂ ಆ ಪ್ರಭಾವದ ಆದರ್ಶವನ್ನು ಇಟ್ಟುಕೊಂಡ ಕೆಲವೇ ಕೆಲವರಲ್ಲಿ ಮೇಲಿನ ಸ್ಥಾನವನ್ನು ಪಡೆದು

ಕೊಂಡವರು. ಸಂಯಮದ ಜೊತೆಯಲ್ಲಿಯೆ ರಸಿಕತೆ ಇದೆ, ಸತ್ಯಾಗ್ರಹದ ಪಕ್ಕದಲ್ಲಿಯೆ ಸಹಾನುಭೂತಿ ಇದೆ, ಪ್ರಗತಿಯ ಹಟದೊಡನೆ ಪರಂಪರೆಗಾಗಿ ಆದರವಿದೆ.

ಗೊರೂರು ಅವರ ಸಮವಯಸ್ಕರಾದ ನಾವು ನಮ್ಮ ಯೌವನಕಾಲದ ಪರಿಸ್ಥಿತಿಯನ್ನೂ ಕ್ರಾಂತಿಯ ವಾತಾವರಣವನ್ನೂ ಆದರ್ಶಸಾಧನೆಯ ಸತ್ಯಾಗ್ರಹಪ್ರವೃತ್ತಿಯನ್ನೂ ನೆನೆದುಕೊಂಡಾಗ ಸಂಸ್ಕೃತ 'ಉತ್ತರ ರಾಮಚರಿತ' ನಾಟಕದಲ್ಲಿಯ ರಾಮನಂತೆ "ತೇ ಹಿ ನೋ ದಿವಸಾ ಗತಾಃ" ಆ ದಿವಸಗಳು ಹೋದುವಲ್ಲದೆ, ಅಂತಹ ಒಳ್ಳೆಯ ದಿವಸಗಳು ಎಂದಿಗೂ ಬಾರದಂತೆ ಹೋದುವು ಎಂದೆನ್ನಬೇಕೆನ್ನಿಸುವುದು. ಆದರೆ ಹಾಗೆನ್ನದೆ "ಒಳ್ಳೆಯ ದಿನಗಳು ಮುಂದಿನವರಿಗೆ ಬರಲಿ" ಎನ್ನುವ ಸ್ನೇಹದ ಹೃದಯ ಗೊರೂರು ರಾಮಸ್ವಾಮಿ ಅಯ್ಯಂಗಾರರದು.

ಹೇಮಾವತಿ ಕರುಣಿಸಿದ ಚೇತನ

ದೇಜಗೌ

ಹೇಮಾವತಿ ಅನಾದಿಕಾಲದಿಂದ ಸರ್ವಸಂಪತ್ತುಗಳಿಗೆ ಆಗರವಾಗಿ ಲೋಕಕಲ್ಯಾಣಕಾರತೆಯಿಂದ ನಿರಂತರವಾಗಿ ಹರಿಯುತ್ತಿದ್ದಾಳೆ: ಎರಡೂ ದಡಗಳಲ್ಲಿನ ಎಷ್ಟೆಷ್ಟೊ ಊರುಗಳು ಅವಳ ಸತ್ವ ಪೀಯೂಷವನ್ನೀಂಟುತ್ತ ಅವಳ ಹರಕೆಯ ಆಸರೆಯಲ್ಲಿ ಏನೇನೊ ಕನಸುಗಳನ್ನು ಕಾಣುತ್ತ ಬಹುಕಾಲದಿಂದ ಕರ್ಮನಿರತವಾಗಿವೆ; ಅಂಥ ಊರುಗಳಲ್ಲಿ ಗೊರೂರು ಒಂದು. ಆದರೆ ಇಂದು ಗೊರೂರಿಗಿರುವ ಪ್ರತಿಷ್ಠೆ ಬೇರೆ ಊರುಗಳಿಗಿಲ್ಲ. ಗೊರೂರನ್ನು ನೆನೆದ ಕೂಡಲೆ ಹೇಮಾವತಿಯ ನೆನಪೂ, ಹೇಮಾವತಿಯನ್ನು ನೆನೆದ ಕೂಡಲೆ ಗೊರೂರಿನ ನೆನಪೂ ಚಿಗುರಿ ಅವೆರಡರ ನಡುವೆ ಅವಿನಾಭಾವಸಂಬಂಧ ಬೆಳೆದುಬಿಟ್ಟಿದೆ. ಗೊರೂರು ಮತ್ತು ಹೇಮಾವತಿಗಳು ಬರಿಯ ಹೆಸರುಗಳಲ್ಲ: ಅವು ಮಹಾಜೀವನವಾಹಿನಿಗಳು: ಅವುಗಳ ಸಂಬಂಧವನ್ನು ಪ್ರಗಾಢಗೊಳಿಸಿ, ಅವುಗಳೊಡನೆ ಒಂದಾಗಿ ಹರಿಯುತ್ತಿರುವ ಮತ್ತೊಂದು ಜೀವನವಾಹಿನಿ ರಾಮಸ್ವಾಮಿ ಅಯ್ಯಂಗಾರ್. ಗೊರೂರೆನ್ನಿ, ಹೇಮಾವತಿಯೆನ್ನಿ, ರಾಮಸ್ವಾಮಿ ಅಯ್ಯಂಗಾರ್ ಎನ್ನಿ ಎಲ್ಲವೂ ಒಂದೇ. ಇವುಗಳಲ್ಲಿ ಒಂದಿಲ್ಲದೆ ಮತ್ತೊಂದಿರುವಂತಿಲ್ಲ: ಇವು ಪರಸ್ಪರ ಪೂರಕ. ಒಂದನ್ನು ಬಿಟ್ಟು ಮತ್ತೊಂದನ್ನು ಕಲ್ಪಿಸಿಕೊಳ್ಳುವುದೇ ಕಷ್ಟ.

ಗೊರೂರು ಮತ್ತು ಹೇಮಾವತಿಗಳು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಪಡೆದ ಶಿವಶಕ್ತಿಯರು: ಅವನ್ನು ಪುನಸ್ಸೃಷ್ಟಿಸಿ, ಅವುಗಳ ಘನತೆ ಮಹಿಮೆಗಳನ್ನು ಡಂಗುರಿಸಿ, ಸಾಹಿತ್ಯಲೋಕದಲ್ಲಿ ಅವುಗಳ ಹೆಸರನ್ನು ಚಿರಸ್ಥಾಯಿಗೊಳಿಸಿ ಆ ಮೂಲಕ ತಮ್ಮ ಹೆಸರನ್ನೂ ಸಾರ್ಥಕಗೊಳಿಸಿಕೊಂಡವರು ರಾಮಸ್ವಾಮಿ ಅಯ್ಯಂಗಾರ್ ಅವರು. ಅವರ ಹೆಸರನ್ನು ಪಡೆದ ಜನ ಎಷ್ಟೋ ಮಂದಿ ಇದ್ದಾರೆ: ಆದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಒಬ್ಬರೇ: ಬೇರೊಬ್ಬರಿಲ್ಲ. ಸಹಸ್ರ ಸಹಸ್ರ ವರ್ಷಗಳ

ಹಿಂದೆಯೇ ತಾಯಿ ಹೇಮಾವತಿ ಗಾಂಧೀಜಿ ಅನುಯಾಯಿ ನಗೆಗಾರ ಸಾಹಿತಿ ಗೊರೂರ್ ಅವರು ಮುಂದೆ ಉದಯಿಸುವ ಕನಸನ್ನು ಕಂಡಿದ್ದಂತೆ ತೋರುತ್ತದೆ. ಮೂರು ಕಾಲಗಳಲ್ಲಿಯೂ ಅವಳ ಜೋಗುಳದಲ್ಲಿ ಕೇಳಿಬರುವ ಧ್ವನಿ ಗೊರೂರ್ ಮಾತ್ರ; ಸುತ್ತಮುತ್ತಣ ಪ್ರದೇಶದ ಚೇತನಾಚೇತನ ವಸ್ತುಗಳಲ್ಲೆಲ್ಲ ಅವರ ಹೆಸರಿನ ಮಿಡಿತವನ್ನು ಕೇಳಬಹುದು.

ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರಂತೆ ತಾವು ಹುಟ್ಟಿದ ನೆಲದ ಬಾಳನ್ನೆಲ್ಲ ಸಾಹಿತ್ಯದಲ್ಲಿ ಛಟ್ಟಿಯಿಳಿಸಿದ ಸಾಹಿತಿಗಳು ತೀರ ವಿರಳ. ಗೊರೂರಿನ ಸುತ್ತಮುತ್ತಣ ಪ್ರದೇಶದಲ್ಲಿ, ಸುಮಾರು ಐದಾರು ಮೈಲಿ ಫಾಸಲೆಯ ವಿಸ್ತೀರ್ಣದಲ್ಲಿ ಅವರು ಇಡೀ ಜಗತ್ತಿನ ಪ್ರತಿಬಿಂಬವನ್ನು ಕಂಡರು. ಅವರು ಕಂಡದ್ದೆಲ್ಲ ಅನುಭವವಾಯಿತು, ಅನುಭವವೆಲ್ಲ ಸಾಹಿತ್ಯವಾಯಿತು. ಪ್ರಹ್ಲಾದನಿಗೆ ಕಂಬದಲ್ಲಿಯೂ ವಿಷ್ಣು ಕಾಣಿಸಿಕೊಂಡಂತೆ ಪ್ರತಿಯೊಂದು ವಸ್ತುವಿನಲ್ಲಿಯೂ ಇವರ ಕಣ್ಣಿಗೆ ವಿಶೇಷಾನುಭವ ಹೊಳೆದಿದೆ. ಅವರ ಪ್ರಾತಿಭ ಚಕ್ಷುವಿನಿಂದ ತಪ್ಪಿಸಿಕೊಂಡ ವಸ್ತುವಿಲ್ಲ. ಅವರು ಬರೆದದ್ದು ಭಾರತವಲ್ಲ, ಡಿಳ್ಳಿಯ ಕೃತಕ ಜನಜೀವನವಲ್ಲ; ಶೀನಪ್ಪ ರಂಗೇಗೌಡರ ಭಾರತ, ಹಳ್ಳಿಯ ಸದ್ದುಗದ್ದಲಗಳಿಲ್ಲದ ಸಹಜವಾದ ಬಾಳು. ನಾಗರಿಕನ ದೃಷ್ಟಿಗೆ ಯಾವುದು ಕ್ಷುದ್ರವಾಗಿ ತೋರುತ್ತಿತ್ತೊ ಅವೆಲ್ಲ ಇವರ ದೃಷ್ಟಿಯಲ್ಲಿ ಭದ್ರವಾಗಿ ಕಂಡಿವೆ. ಸಾಮಾನ್ಯರ ದೃಷ್ಟಿಯಲ್ಲಿ ನೀರಸವಾಗಿ ಕಾಣಬಹುದಾಗಿದ್ದ ಜೀವನ ಇವರ ದೃಷ್ಟಿಯಲ್ಲಿ ರಸದ ಊಟೆಯಾಗಿದೆ. ಇವರಿಗೆ ಗೊರೂರೇ ಹಸ್ತಿನಾವತಿ ಹಾಗೂ ಇಂದ್ರಪ್ರಸ್ಥ; ಅಲ್ಲಿಯ ಜನಜೀವನದ ಕತೆಯೇ ಭಾರತ: ಶೀನಪ್ಪ ರಂಗೇಗೌಡ ವೀರಭದ್ರಾಚಾರಿ ಶಾಲುಸಾಬಿ ಮೊದಲಾದವರೇ ಅಲ್ಲಿ ಬರುವ ಪಾತ್ರವರ್ಗ. ಹಳ್ಳಿಯ ಬದುಕಿನ ವಿಶ್ವರೂಪ ಇವರ ಕೃತಿಗಳಲ್ಲಿ ಪಡಿಮೂಡಿದೆ.

ಇದು ಗೊರೂರ್ ಅವರ ಸಾಹಿತ್ಯದ ವೈಶಿಷ್ಟ್ಯ. ಅವರ ನಗೆಗಾರಿಕೆ ಆ ವೈಶಿಷ್ಟ್ಯವನ್ನು ಮುಮ್ಮಡಿಸುತ್ತದೆ. ಹಳ್ಳಿಯ ಬದುಕಿನಲ್ಲಿ ಇಷ್ಟು ವೈವಿಧ್ಯವನ್ನಾಗಲಿ ಇಷ್ಟು ವಿಸ್ತಾರವನ್ನಾಗಲಿ ಕಂಡ ಸಾಹಿತಿಗಳು ಕಡಮೆ; ಇಲ್ಲವೆಂದರೂ ತಪ್ಪಾಗಲಾರದು. ಆ ಬದುಕಿನ ಕೆನೆಗೆ ಸಕ್ಕರೆಯಂತಿರುವ ಹಾಸ್ಯರಸವಂತು ಇಡೀ ಕನ್ನಡ ಸಾಹಿತ್ಯದಲ್ಲಿಯೇ ಅಪರೂಪ. ಗೊರೂರರವರು ಬಾಯಿತೆರೆದರೆ ಸಾಕು ಹಾಸ್ಯಲಹರಿ ಸೂಸುತ್ತದೆ, ನಗೆಯು ಜೇನಿನಿಂದ ಸುಡಿ ಗಮಗಮಿಸುತ್ತದೆ. ಮಾತಿನ ಜಾಮೂನನ್ನು ನಗೆಯ ಪಾಕವಲ್ಲದ್ದಿ ತೆಗೆದಂತೆ ಕಂಗೊಳಿಸುತ್ತದೆ. ಅವರ ಬದುಕೇ ಸಾಹಿತ್ಯವಾಗಿ, ಹಾಸ್ಯ ಅವೆರಡರ ಜೀವಾಳವಾಗಿದೆ. ಸಾತ್ವಿಕತೆ, ಸಹಾನುಭೂತಿ, ಸಹಜತೆ, ಋಜುತೆ, ನಿಷ್ಕಾಪಟ್ಯ, ನಿಷ್ಕಲ್ಮಷತೆ ಅವರ ಹಾಸ್ಯದ ಪ್ರಮುಖ ಲಕ್ಷಣಗಳು. ಇವುಗಳಿಂದಾಗಿ ಅವರ ಹಾಸ್ಯದಲ್ಲಿ ಮಲಿನತೆ ಮೊಗದೋರುವುದಿಲ್ಲ. ಒಂದು ರೀತಿಯಲ್ಲಿ ಹಾಸ್ಯ ಅವರ ಅನುಭವದ ಹಾಗೂ ಸಾಹಿತ್ಯದ ಮಾಧ್ಯಮವಾಗಿದೆ. ಸಮಾಜದ ಓರೆಕೋರೆಗಳನ್ನಂತೊ ರುಚಿಶುಚಿಗಳನ್ನು ವಿವರಿಸುವಾಗಲೂ ಹಾಸ್ಯ ಸಮೃದ್ಧವಾಗಿ ಹೊರಹೊಮ್ಮುತ್ತದೆ.

ಶುಚಿಜೀವನ, ಶುದ್ಧಮನೋಭಾವ ಮತ್ತು ಲೋಕದ ಬಗೆಗಿನ ಅನುಕಂಪೆಯ ದೃಷ್ಟಿಯಿಂದ ಮಾತ್ರ ಇಂಥ ಸಾಹಿತ್ಯ ಉಗಮಗೊಂಡಿತು. ಪೂರ್ವಾರ್ಜಿತವಾದ ಸಂಸ್ಕಾರದ ಜತೆಗೆ ಗಾಂಧೀಜಿಯ ಪ್ರಭಾವ ಗಾಢವಾಗಿ ಮುದ್ರೆ ಒತ್ತಿದ್ದರಿಂದ ಅವರ ಬಾಳು ಹಸನಾಗಿ ಅವರ ಚೇತನ ಶುದ್ಧವಾಗಲು ಸಾಧ್ಯವಾಯಿತು. ಅವರ ನಡೆನುಡಿಗಳಲ್ಲಿ ಹೊಂದಾಣಿಕೆಯೂ ಚೊಕ್ಕಟತನವೂ ಕಾಣುವಂತಾಯಿತು. ಸರಳತೆ ಮುಗ್ಧತೆಗಳು ಅವರ ವ್ಯಕ್ತಿತ್ವದ ಅಂತೆಯೇ ಅವರ ಶೈಲಿಯ ಪ್ರಧಾನ ಗುಣಗಳು.

ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರು ಹುಟ್ಟಿದ್ದು ೧೯೦೪ರಲ್ಲಿ. ಸಂಸ್ಕೃತ ವಿದ್ವಾಂಸರೂ ವೈದಿಕರೂ ಆದ ತಂದೆಗೆ ಮಗನಾಗಿ. ಅವರು ಅಕ್ಷರ ಕಲಿತದ್ದು ಮರಳಿನ ಮೇಲೆ, ಪುರಾಣದ ರುಚಿ ಸವಿದದ್ದು ತಂದೆಯಿಂದ. "ಸ್ಕೂಲಿಗೆ ಹೋಗಿ ಯಾವ ಮಗನೂ ಪಾಠ ಕಲಿಯಲಿಲ್ಲ" ಎಂದು ರಂಗೇಗೌಡನ ತಂದೆ ಹೇಳಿದರೂ ಅವರು ಶಾಲೆ ಸೇರಿ, ಮಾಸ್ತರ ಹೊಡೆತಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹಣ ಕದ್ದು ಎಲೆಯಡಿಕೆ ತಂದುಕೊಟ್ಟು, ಅಷ್ಟೋ ಇಷ್ಟೋ ಪಾಠ ಕಲಿತು ಕನ್ನಡ ಹಾಗೂ ಇಂಗ್ಲಿಷ್ ಲೋಅರ್ ಸೆಕಂಡರಿ ಪಾಸು ಮಾಡಿದ್ದಾಯಿತು. ಪ್ರಾಥಮಿಕ ತರಗತಿಯಲ್ಲಿದ್ದಾಗಲೆ ವೆಂಕಟಾಚಾರ್ಯರ ಗಳಗನಾಥರ ಕಾದಂಬರಿಗಳನ್ನೋದುವ ಹುಚ್ಚು, ಹಾಸನದ ಹೈಸ್ಕೂಲಿನಲ್ಲಿದ್ದಾಗ ಗಾಂಧೀಜಿ ಹಾಗೂ ಸ್ವಾತಂತ್ರ್ಯ ಚಳುವಳಿಯ ಹುಚ್ಚು. ಹೈಸ್ಕೂಲು ವ್ಯಾಸಂಗ ಮುಗಿಸದೆಯೆ ವಿದ್ಯಾಭ್ಯಾಸಕ್ಕೆ ಸಲಾಮು ಹಾಕಿ, ಗಾಂಧೀಜಿ ಆಶ್ರಮವನ್ನು ಸೇರಿ ಗುಜರಾತ್ ವಿದ್ಯಾಪೀಠದಲ್ಲಿ ವ್ಯಾಸಂಗಕ್ಕೆಂದು ದಾಖಲಾದದ್ದುಂಟು. 'ನವಜೀವನ'ದ ಕಚೇರಿಯಲ್ಲಿ ಮೊಳೆ ಜೋಡಿಸಿದ್ದೂ ಉಂಟು. ಗಾಂಧೀಜಿ ಅವರ ಹೃದಯದ ಜ್ಯೋತಿಯಾದರು. ರಾಷ್ಟ್ರನಾಯಕರೆಲ್ಲರ ಸಂಪರ್ಕ ದೊರೆಯಿತು. ಗಾಂಧೀಜಿಯ ಪ್ರವಾಸಕಾಲದಲ್ಲಿ ಅವರ ಜತೆ ಹೋಗುತ್ತಿದ್ದುದೂ ಉಂಟು. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿ ಕಲಿಯುವುದಕ್ಕಿಂತ ಹೆಚ್ಚಿನ ವಿದ್ಯೆಯನ್ನು ವ್ಯವಹಾರದ ಮೂಲಕ ಓದಿನ ಮೂಲಕ ಮಹಾಪುರುಷರ ಸಹವಾಸದ ಮೂಲಕ ಕಲಿತರು.

ಹೈಸ್ಕೂಲಿನಲ್ಲಿದ್ದಾಗಲೆ ಅವರಲ್ಲಿ ಬರೆಯುವ ಚಟ ಪ್ರಾರಂಭವಾಗಿತ್ತು. ಮಾಸಪತ್ರಿಕೆಯನ್ನು ಪ್ರಾರಂಭಿಸಬೇಕೆಂಬ ಅವರ ಬಯಕೆ ಮದರಾಸಿನ 'ಜನಮಿತ್ರ'ದ ಕಚೇರಿಗೆ ಎಳೆದೊಯ್ದಿತು. ಅಲ್ಲಿ ಕೆಲವು ದಿನ ಉಪಸಂಪಾದಕರಾಗಿ ಕೆಲಸಮಾಡಿ ಯಶಸ್ಸನ್ನು ಗಳಿಸಿದರು. ಆಮೇಲೆ 'ಆಂಧ್ರ ಪತ್ರಿಕೆ' ಮತ್ತು 'ಭಾರತಿ' ಪತ್ರಿಕೆಗಳ ಕಚೇರಿಯಲ್ಲಿ ಅನುಭವ ಗಳಿಸಿದರು. ಅನಂತರ ಸಬರಮತಿ ಆಶ್ರಮದ ಮಾದರಿಯನ್ನನುಸರಿಸಿ ಸ್ಥಾಪಿಸಲಾಗಿದ್ದ ಕೆಂಗೇರಿ ಗುರುಕುಲಾಶ್ರಮ ಸೇರಿ, ಗ್ರಾಮಪುನರುಜ್ಜೀವನ, ಖಾದಿ ಪ್ರಚಾರ ಮತ್ತು ಹರಿಜನೋದ್ಧಾರ ಕಾರ್ಯಗಳಲ್ಲಿ ನಿರತರಾದರು. ಕೊನೆಗೆ ಖಾದಿ ವಸ್ತ್ರಾಲಯದ ಜವಾಬ್ದಾರಿ ಹೊತ್ತುಕೊಂಡು ವ್ಯಾಪಾರಿಯೂ ಆದರು.

ಎಂಟು ಹತ್ತು ವರ್ಷಗಳ ನಂತರ ಗೃಹಕೃತ್ಯನಿಮಿತ್ತವಾಗಿ ಬೆಂಗಳೂರು ಬಿಟ್ಟು ಹಳ್ಳಿ ಸೇರಿದರು. ಅಲ್ಲಿಯೂ ಅವರು ಗಾಂಧೀಜಿಯ ನಿರ್ದೇಶನವನ್ನು ಪಾಲಿಸುವ

ಸಲುವಾಗಿ ಮೈಸೂರು ಗ್ರಾಮಸೇವಾ ಸಂಘವನ್ನು ಸ್ಥಾಪಿಸಿಕೊಂಡರು, "ಭಾರತ ಬಿಟ್ಟು ತೊಲಗಿರಿ" ಎಂಬ ನಿರ್ಣಯ ಅಂಗೀಕೃತವಾದಾಗ ಅವರು ಅಖಿಲ ಭಾರತೀಯ ಕಾಂಗ್ರೆಸ್ಸಿನ ಮುಂಬಯಿ ಅಧಿವೇಶನದಲ್ಲಿ ಹಾಜರಿದ್ದರು. ಅಲ್ಲಿಂದ ಬಂದನಂತರ ಚಳುವಳಿಯಲ್ಲಿ ಧುಮುಕಿ ಸೆರೆಮನೆ ವಾಸವನ್ನನುಭವಿಸಿದರು. ಅವರ ಮಗ ಪೋಲೀಸರ ಗುಂಡೇಟಿಗೆ ಬಲಿಯಾದನು. ಸ್ವಾತಂತ್ರ್ಯನಂತರ ವಿಧಾನಪರಿಷತ್ತು, ವಿಶ್ವವಿದ್ಯಾನಿಲಯದ ಸೆನೆಟ್ಟು, ಮೂಲಶಿಕ್ಷಣ ಸಮಿತಿ ಮೊದಲಾದುವುಗಳಲ್ಲಿ ಸದಸ್ಯರಾಗಿ ಬಹುಮುಖವಾದ ಸೇವೆ ಸಲ್ಲಿಸಿದರು.

ಇಷ್ಟೆಲ್ಲ ಅನುಭವ ಸಂಪತ್ತನ್ನು ಅಪೂರ್ವಪ್ರಮಾಣದಲ್ಲಿ ಪಡೆದು ಬೆಳೆದಿರುವ ವ್ಯಕ್ತಿತ್ವ ಬಹುರಂಜಕವಾದದ್ದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಖಾದಿಕಚ್ಚೆ ಜುಬ್ಬಗಳನ್ನು ಧರಿಸಿರುವ, ಪಿಳ್ಳೆ ಜುಟ್ಟನ್ನು ಹೊಂದಿರುವ, ಪೀನವಕ್ಷದ, ಆಜಾನುಬಾಹುವಿನ, ವಿಶಾಲಫಾಲದ, ಮಿಂಚುಗಣ್ಣಿನ, ನೀಟಾದ ನಾಸಿಕದ, ತುಸು ಬಗ್ಗಿ ನಡೆಯುವಂತೆ ಕಾಣುವ, ಸರಳತೆ ಸೌಜನ್ಯಗಳೇ ಮೂರ್ತಿವೆತ್ತಂತೆ ತೋರುವ, ನಡೆನುಡಿಗಳಲ್ಲಿ ಸನಾತನತೆ ಮತ್ತು ನೂತನತೆಗಳೂ, ಋಜುತೆ ಮತ್ತು ಮುಗ್ಧತೆಗಳೂ ಸಂಗಮಗೊಂಡಂತೆ ಭಾಸವಾಗುವ ಈ ವ್ಯಕ್ತಿಯ ಮುಂದೆ ನಿಂತಾಗ ಇಲ್ಲವೆ ಕುಳಿತಾಗ ಮನಸ್ಸು ಪ್ರಸನ್ನವಾಗುತ್ತದೆ, ಸ್ನೇಹ ಕೊನರುತ್ತದೆ, ಸಲುಗೆ ಬುಗ್ಗೆಯಾಡುತ್ತದೆ; ಅವರು ತುಟಿಬಿಚ್ಚಿದರೆಂದರೆ ಇಡೀ ವಾತಾವರಣವೇ ನಗುತ್ತದೆ. ಹಸನಾದ ಹಾಗೂ ಪೂರ್ಣವಾದ ಬಾಳಿನಿಂದಲ್ಲದೆ ನಗೆ ಹೊರಹೊಮ್ಮಲಾರದು. ಅಪ್ಪಟ ಗಾಂಧೀ ಅನುಯಾಯಿಯಾಗಿ, ಸರಸ್ವತೀ ಶಕ್ತಿಯ ನಿತ್ಯೋಪಾಸಕರಾಗಿ, ಕನ್ನಡ ಸಾಹಿತ್ಯಕ್ಕೊಂದು ಹೊಸ ತಿರುವನ್ನೂ ನೆಲೆಯನ್ನೂ ಬೆಲೆಯನ್ನೂ ಕರುಣಿಸಿದ ಈ ಹಿರಿಯ ಚೇತನಕ್ಕೆ ಅನಂತಾನಂತ ಪ್ರಣಾಮಗಳು.

ಸಜೀವ ಹಳ್ಳಿಯ ಚಿತ್ರಕಾರ

ರಾವ ಬಹಾದ್ದೂರ

ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಪ್ರತ್ಯಕ್ಷ ಕಾಣುವ ಅದೆಷ್ಟೋ ವರ್ಷಗಳ ಹಿಂದೆಯೆ ನಾನು ಅವರ ಸಾಹಿತ್ಯವನ್ನು ಓದಿ ಅರಗಿಸಿಕೊಂಡು ಅವರ ನಿಕಟ ಪರಿಚಿತನಾದ ಅನುಭವ ಹೊಂದಿದವನು. ಮೈಸೂರಿನಲ್ಲಿ ಗಾಂಧೀ ಸ್ಮಾರಕ ನಿಧಿಯ ಕಾರ್ಯಕರ್ತರ ಸಭೆಯಲ್ಲಿ ಅವರನ್ನು ಪ್ರತ್ಯಕ್ಷ ಕಾಣುವ ಭಾಗ್ಯ ಒದಗಿದ್ದು ೧೯೫೮ರಲ್ಲಿ. ನಾನು ಮನಸ್ಸಿನಲ್ಲಿ ಚಿತ್ರಿಸಿಕೊಂಡ ಗೊರೂರು ರಾಮಸ್ವಾಮಿ ಅಯ್ಯಂಗಾರರು ಪ್ರತ್ಯಕ್ಷರಾದ ಸಂತೃಪ್ತಿ ನನ್ನಲ್ಲಿ ಅಂದು ಒಡಮೂಡಿತು. ಈ ಬಗೆಯ ಅನುಭವ ಇನ್ನಿತರ ಸಾಹಿತಿಗಳನ್ನು ಪ್ರತ್ಯಕ್ಷ ಸಂದರ್ಶಿಸಿದಾಗ ಬಂದ ನೆನಪು ನನಗಿಲ್ಲ. ರಾಮಸ್ವಾಮಿಯವರ ಸಾಹಿತ್ಯ ಓದಿದವರ ಮನಸ್ಸಿನ ಮೇಲೆ ಮೂಡುವ ಅವರ ವ್ಯಕ್ತಿತ್ವದ ಚಿತ್ರಕ್ಕೂ ಅವರ ವ್ಯಕ್ತಿತ್ವಕ್ಕೂ ವ್ಯತ್ಯಾಸ ಕಂಡುಬರದು. ಇದಕ್ಕೆ ಕಾರಣ ಅವರ ಸಾಹಿತ್ಯ ಅವರು ಕಂಡು ಉಂಡ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿಯಾಗಿರುವದೇ ಕಾರಣವೆಂದು ನನ್ನ ಭಾವನೆ.

ಹಳ್ಳಿಯ ಚಿತ್ರ ಬರೆಯಬಲ್ಲವರು ಹಲವರು. ಕೆಲವರು ಬಣ್ಣದ ಬಟ್ಟಲು ತುಂಬಿ ಇಟ್ಟುಕೊಂಡು ಬೆಲೆಬಾಳುವ ಕುಂಚಗಳನ್ನು ಝಳಪಿಸುವವರು. ಕೆಲವರ ಚಿನ್ನದ ತಗಡಿನಲ್ಲಿ ಚಿತ್ರ ಕೆತ್ತಿದರು; ಹಾಲುಗಲ್ಲಿನಲ್ಲಿ ಹಳ್ಳಿಯ ಪ್ರತಿಕೃತಿ ಕಡೆಯಲು ಹವಣಿಸಿದರು. ಯತ್ನ ನೂರು ಮುಖದಿಂದ ನಡೆಯುತ್ತಿತ್ತು. ಒಂದೊಂದು ಕೃತಿಗೆ ಒಂದೊಂದು ವೈಖರಿ! ರಾಮಸ್ವಾಮಿಯವರಿಗೆ ಇಂಥ ವೈಖರಿ ಅಪರಿಚಿತ. ಹಳ್ಳಿಯ ಚಿತ್ರ ಬರೆಯಲು ತಗ್ಗು ದಿಣ್ಣೆಯಾದ ಗೋಡೆಯಾದರೂ ಸಾಕು. ಇದ್ದಲು ಬಳಪ ಇದ್ದರೆ ತೀರಿತು. ನೂರುಕಾಲ ನೋಡಬಹುದಾದ ಜೀವಂತ ಚಿತ್ರ ಮೂಡಿಸಬಲ್ಲ ಗಾರುಡಿಗರವರು! ಇವರು ಬರೆದ 'ಹಳ್ಳಿಯ ಚಿತ್ರಗಳು' ಓದುಗನ ಮನಸ್ಸಿನಲ್ಲಿ ಮೂಡಿ ಅವನ

ಹೃದಯವನ್ನು ತಟ್ಟಿ ಹಳ್ಳಿಯ ಗಾಳಿ, ಬಿಸಿಲುಗಳಲ್ಲಿ ಆಡ್ಡಾಡಿದ ಸುಖಾನುಭವವನ್ನು ನೀಡುವಂಥವು. ಇದಕ್ಕೆ ಕಾರಣ ಅವರ ಕಲ್ಪನಾಶಕ್ತಿಯೆ? ಆದರ್ಶವಾದವೆ? ಇವು ಅಲ್ಲವೆಂದು ನನ್ನ ಪ್ರಾಮಾಣಿಕ ಮತ.

ಚಿತ್ರಗಳಲ್ಲಿ ಕಲ್ಪನೆಯ ಕೆತ್ತನೆ ಜಾಸ್ತಿ. ಆದರ್ಶಗಳ ಆಡಂಬರವೇ ಹೆಚ್ಚು. ನಾಟಕದ ರಾಜರ ಹಾಗೆ. ಪುರಾಣಗಳ ದೇವತೆಗಳ ರೀತಿಯಂತೆ! ಎಲ್ಲರ ಮೂಗು ಸಂಪಿಗೆಯನ್ನು ನಾಚಿಸಬೇಕು. ತುಟಿ ತೊಂಡೆಯನ್ನು ಹಳಿಯಬೇಕು. ಹಲ್ಲು ದಾಳಿಂಬವನ್ನು ಹುಲ್ಲಿಗೆ ಒಗೆಯಬೇಕು. ಇಂಥ ಕಲ್ಪನೆಯ ಬೆನ್ನು ಹತ್ತದೆ ಆದರ್ಶದ ಜಂಜಾಟಕ್ಕಿಳಿಯದೆ ಚಿತ್ರವನ್ನು ಸೃಷ್ಟಿಸಿದ ಶಬ್ದಬ್ರಹ್ಮರು ರಾಮಸ್ವಾಮಿ ಅಯ್ಯಂಗಾರರು.

ಬರೆಯುವವ 'ಕಾಣ' (ಮೆಳ್ಳಗಣ್ಣಿನವ) ನಾಗಿದ್ದರೆ ಚಿತ್ರ ಇನ್ನೊಬ್ಬರ ಚಿತ್ತಕ್ಕೆ ತಾಗೀತೆ? ದೂರನಿಂತು ಹುಬ್ಬು ಕೈಹಚ್ಚಿ ಹಳ್ಳಿಯನ್ನು ನೋಡುವವರಿಗೆ ಅದು ಸರಿಯಾಗಿ ಕಾಣುವುದೇ ಇಲ್ಲ. ಮನಸ್ಸಿನ ಒಂದು ಮೂಲೆಯಲ್ಲಿರುವ ಒಂದು ಸಾಹಸ ಸುಳ್ಳನ್ನು ಸತ್ಯ ಎಂದು ಸಾಧಿಸುವ ಚಪಲ ತೀರಿಸಿಕೊಳ್ಳಲು ತಾನು ಕಂಡದ್ದೇ ಹಳ್ಳಿಯ ವಾಸ್ತವ ಚಿತ್ರ ಎಂದು ಸಾಧಿಸುವ ಪ್ರಯತ್ನದ ಫಲವಾಗಿ ಚಿತ್ರ ಮೂರ್ತ ಸ್ವರೂಪ ತಳೆಯಬಹುದು. ಈ ಸ್ವೈರಿ ಹಳ್ಳಿಯದನ್ನೇಕೆ ಯಾವ ಚಿತ್ರವನ್ನೂ ಬರೆಯದು. ಮಕ್ಕಳ ಕೈಯಲ್ಲಿಯ ಪೆನ್ಸಿಲ್ ಮಾಡಿದ ಕೆಲಸ, ಮುದ್ದಿಗೆ ವ್ಯಾಮೋಹಕ್ಕೆ ಚಿತ್ರ ವೆಂಬ ಭ್ರಾಂತಿಯನ್ನುಂಟುಮಾಡಬಹುದು. ಆದರೆ ಸಮೀಕ್ಷಕನ ಕಣ್ಣಿಗೆ ಇದು ಹುಚ್ಚಾಟ ಅಷ್ಟೆ.

ಹಳ್ಳಿಗೊಂದು ಸಂಕೀರ್ಣ ಬದುಕಿದೆ. ಜಗತ್ತಿನಲ್ಲಿ ಮಹಾಯುದ್ಧ ಶತಮಾನ ಗಳಿಗೊಮ್ಮೆ ಆಗುತ್ತವೆ. ಹಳ್ಳಿಯಲ್ಲಿ ನಾಲ್ಕೈಂಟು ವರ್ಷದಲ್ಲಿ ಒಮ್ಮೆಯಾದರೂ ಇಂಥ ಮಹಾಯುದ್ಧದ ಮಾನಸಿಕ ಹಿನ್ನೆಲೆ ಇರುವ ವೈಯಕ್ತಿಕ ಇಲ್ಲವೆ ಸಾಮೂಹಿಕ ಕೊಲೆಗಳಾಗುವದುಂಟು. ವಿಶ್ವದಲ್ಲಿ ಶಾಂತಿಯ ದಿನ ಇನ್ನೂ ಬಂದಿಲ್ಲ. ಹಳ್ಳಿ ಅನುಭವಿಸಿದ ಹಲವು ಶಾಂತಿಯ ಕ್ಷಣಗಳನ್ನು ವಿಶ್ವ ಕಂಡಿದ್ದರೆ ತೃಪ್ತಿಪಡಬಹುದಿತ್ತು.

ಕರುಣೆ, ಕ್ರೌರ್ಯಗಳ ನಗ್ನಸತ್ಯ ಹಳ್ಳಿಗಳಲ್ಲಿ ಕಣ್ಣಿಗೆ ಕಾಣಸಿಗುತ್ತಿದೆ.

ಸಾಹಿತಿಗೆ, ವೇದಾಂತಿಗೆ, ಸಿಕ್ಕದ ಸತ್ಯ ಹಳ್ಳಿಯಲ್ಲಿ ಹಾದಿಗುಂಟ ಮುಂದೆ ಕರೆಯು ವವರಿಲ್ಲದೆ ಬಿದ್ದಿರುತ್ತದೆ. ಸತ್ಯ ಹುಡುಕುತ್ತ ಹತ್ತು ದಿಕ್ಕಿಗೆ ಹಾರಾಡಿ ಬಣ್ಣದ ಅಸತ್ಯ ವನ್ನೇ ಸತ್ಯವೆಂದು ಭಾವಿಸಿ ಭ್ರಾಂತರಾಗುವವರು ಹಳ್ಳಿಗೆ ಬರಬೇಕು. ಅದರ ಕ್ರೌರ್ಯದ ವಿಷ ನುಂಗಿದ ದೇವತೆಗಳೇ ಹಳ್ಳಿಯ ಕರುಣೆಯ ಅಮೃತ ಉಂಡು ತೇಗುತ್ತಾರೆ.

ಶ್ರೀ ರಾಮಸ್ವಾಮಿ ಅಯ್ಯಂಗಾರರು ಹಳ್ಳಿಯನ್ನು ಸ್ವೈರಿಯಿಂದ ಕಾಣಲಿಲ್ಲ. ಪಶ್ಯಂತಿಯಿಂದ ಅನುಭವಿಸಿದವರು. ಹಳ್ಳಿಯ ಬಗ್ಗೆ ಅವರದು ಬರಿ ಕಾಣ್ಕೆಯಲ್ಲ; ಮಾಣ್ಕೆ, ಬಾಳ್ಕೆ; ಅಂತೆಯೇ ಅವರ 'ಹಳ್ಳಿಯ ಚಿತ್ರ' ಮಾಸಲಿಲ್ಲ.

ಸಾಹಿತ್ಯ ಸಹಭಾವವಿಲ್ಲದೆ ಮೈತಾಳದು. ರಕ್ತ ರಕ್ತದಲ್ಲಿ ಬೆರೆಯಬೇಕು; ಮನಸ್ಸು ಮನಸ್ಸಿನಲ್ಲಿ ಕೂಡಬೇಕು. ಕಣ್ಣು ಕಣ್ಣೆದಿರು ಬರಬೇಕು.

ಶ್ರೀ ರಾಮಸ್ವಾಮಿ ಅಯ್ಯಂಗಾರರು ಹಳ್ಳಿಯ ನೆತ್ತರದಲ್ಲಿ ತಮ್ಮ ರಕ್ತ ಹನಿಸಿದರು. ತಮ್ಮ ರಕ್ತದಲ್ಲಿ ಹಳ್ಳಿಯನ್ನು ತೋಡಿಕೊಂಡರು. ಅಂತೆಯೇ ಅವರು ತೋರಿಸಿದ್ದು ಹಳ್ಳಿಯ ನೈಜ ಚಿತ್ರವಾಯಿತು.

ಸಾಹಿತ್ಯ ಬರಿಕಣ್ಣಿನ ವಸ್ತುವೆಂದರೆ ಕಣ್ ಕಟ್ಟಾದೀತು. ಸಾಹಿತ್ಯವು ಯಾವುದೇ ಒಂದು ಇಂದ್ರಿಯದ ವಿಷಯವೂ ಅಲ್ಲ. ರಾಮಸ್ವಾಮಿ ಅಯ್ಯಂಗಾರರಿಗೆ 'ಹಳ್ಳಿಯ ಚಿತ್ರ' ಬರೆಯುವಾಗ ಈ ಅತೀಂದ್ರಿಯ ಪ್ರಜ್ಞೆ ನೆರವಾಯಿತೆಂದೇ ಅದು ಸಾಹಿತ್ಯವಾಯಿತು. ಇಲ್ಲದಿದ್ದರೆ ಅದೂ ಒಂದು ವಿಷಯವಾಗುತ್ತಿತ್ತು. ಈ ಚಿತ್ರಗಳು ಜನಕ್ಕೆ ವಿಷಯ ಸುಖ ಮಾತ್ರ ಕೊಡದೆ, ವಿಷಯಾಸಕ್ತಿಯನ್ನು ಕೆರಳಿಸದೆ ಹಳ್ಳಿಯ ಸಮಗ್ರ ಜೀವನವನ್ನು ಅರಳಿಸಿದ್ದು ಅವುಗಳ ವೈಶಿಷ್ಟ್ಯ. ದಿಲ್ಲಿಯನ್ನು ನೋಡುವವನಿಗೂ ಈ ವಿಷಯ ತಿಳಿಯ ಬೇಕು. ಕಂಡದ್ದನ್ನು ಬರೆಯುವವನೂ ಸಿಕ್ಕಿದ್ದನ್ನು ಗೀಚುವವನೂ ಎಚ್ಚರದಿಂದ ಇರುವದು ವಾಸಿ.

ಕೃತಿ ಬದುಕಬೇಕಿದ್ದರೆ ಅದರಲ್ಲಿ ಪ್ರಾಣಪ್ರತಿಷ್ಠಾಪನೆಯಾಗಬೇಕು. ಇದಕ್ಕೆ ಲೇಖಕನ ತಪೋಬಲ ಅಗತ್ಯ. ಇದು ರಾಮಸ್ವಾಮಿ ಅಯ್ಯಂಗಾರರಿಗೆ ಕಂಡಿತು. ಅಂತೆಯೇ ಅವರು ಸಾಹಿತ್ಯದ ಅರ್ಚಕರಾದರು.

ಹಳ್ಳಿಯ ಒಗರು. ಮಾಧುರ್ಯದ ಉಷೆ! ಅದರ ಕ್ರೌರ್ಯ ಕರುಣೆಯ ತಾಯಿ! ಇದನ್ನು ಉಂಡವ ನೀಡಬಲ್ಲ. ಸೃಷ್ಟಿ—ಹಳ್ಳಿಯಲ್ಲಿದ್ದಷ್ಟು ದಿಲ್ಲಿಯಲ್ಲಿಲ್ಲ.

ಹಳ್ಳಿಯಲ್ಲಿ ನನ್ನನ್ನು ತೇದು ಸವೆಸಿದ್ದೇನೆ. ಹಳ್ಳಿಯೂ ನನ್ನನ್ನು ಅರೆದು ಕುಡಿದಿದೆ. ಅಂತೆಯೇ ರಾಮಸ್ವಾಮಿ ಅಯ್ಯಂಗಾರರ ಕೃತಿ, ಕೃತಕೃತ್ಯತೆಯ ಬಗ್ಗೆ ನನಗೆ ಅಭಿಮಾನ. ಈ ಅಭಿಮಾನವೇ ನನ್ನನ್ನು ಈ ನಾಲ್ಕು ಮಾತು ಬರೆಯಲು ಪ್ರೇರೇಪಿಸಿದ್ದು.

ರಸಿಕಯೋಗಿ

ಕೃಷ್ಣಮೂರ್ತಿ ಪುರಾಣಿಕ

ಗೊರೂರು ರಾಮಸ್ವಾಮಿ ಅಯ್ಯಂಗಾರ್—ಈ ವ್ಯಕ್ತಿಯನ್ನು ಎಲ್ಲಿಯೇ ನೋಡಲಿ. ಅದು ಯಾವ ಸಂದರ್ಭವೇ ಇರಲಿ ಮೊದಲು ಮಾತನಾಡಿಸಬೇಕೆನ್ನಿಸುತ್ತದೆ. ಆಮೇಲೆ ಈ ಮಾತುಗಳು ಮುಗಿಯಲೇಬಾರದೆನ್ನಿಸುತ್ತದೆ. ಮುಗಿಯುವ ಹೊತ್ತಿಗೆ ಸ್ನೇಹ ಮಾಧುರ್ಯ ಹೃದಯ ತುಂಬಿರುತ್ತದೆ. ಪರಸ್ಪರ ಬೀಳ್ಕೊಡುವಾಗ ಅಚ್ಚಳಿಯದ ಸ್ನೇಹ ವಾತ್ಸಲ್ಯ ಸೂಸಿ ಬಂದು ಸ್ನೇಹಿತರಾಗಿ ಕೈ ಕುಲುಕುತ್ತಾರೆ.

ಅಂದು ಕುಲುಕಿದ ಕೈಸ್ಪರ್ಶ ಇಂದಿಗೂ ನನ್ನಲ್ಲಿ ನವಿರನ್ನು ಏಳಿಸುತ್ತದೆ. ಆ ಹಸ್ತ ಸ್ಪರ್ಶದಲ್ಲಿರುವ ಸ್ನೇಹಸಂಪನ್ನತೆ ಇಂದಿಗೂ ನನ್ನ ಹೃದಯ ಮನಸ್ಸುಗಳನ್ನು ತುಂಬಿವೆ. ಇದು ನಡೆದದ್ದು ೧೯೬೬ನೆಯ ಡಿಸೆಂಬರ್ ೮ನೆಯ ದಿನಾಂಕದಂದು. ಮಾನಸ ಗಂಗೋತ್ರಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವಗಳ ಅಂಗ ವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನದ ಕಾರ್ಯಕಲಾಪಗಳು ನಡೆದ ಸಮಯದಲ್ಲಿ. ಪರಸ್ಪರ ಪರಿಚಯದ ಸಮಯದಲ್ಲಿ,

"ನೀವು ಕೃಷ್ಣಮೂರ್ತಿ ಪುರಾಣಿಕರು. ಅಲ್ಲವೆ ?"

"ಓ ! ನನಗೆ ಗೊರೂರು ರಾಮಸ್ವಾಮಿಯವರ ಪರಿಚಯವಿಲ್ಲವೇನು ?"

ಇಬ್ಬರೂ ಮನಃಪೂರ್ವಕವಾಗಿ ಆಲಿಂಗಿಸಿದೆವು.

ಇನ್ನೊಬ್ಬ ಸ್ನೇಹಿತನಲ್ಲಿರುವ ಯೋಗ್ಯತೆ ಅದೆಷ್ಟೇ ಸಣ್ಣದಿದ್ದರೂ ದೊಡ್ಡದು ಮಾಡಿ ಹೇಳುವ ಉದಾರಬುದ್ಧಿ ಈ ಹಿರಿಯ ಲೇಖಕನದು. "ಏನ್ರಿ ! ನಿಮ್ಮ ಕಾದಂಬರಿ ಬಂದರೆ ಊಟವೇ ಇಲ್ಲ ಮಹಾರಾಯರೆ! ಮನೆಯಲ್ಲಿ ಆ ಪುಸ್ತಕಕ್ಕಾಗಿ ಕಚ್ಚಾಟವೋ ಕಚ್ಚಾಟ." ಈ ಹೊಗಳುವ ರೀತಿಯಲ್ಲಿ ಆ ದೊಡ್ಡ ಹೃದಯಕುಂಭದಲ್ಲಿ ತುಂಬಿದ ರಸಜೇನನ್ನು ಕಂಡು ಪುನೀತನಾದೆ.

ಇನ್ನೊಂದು ಸಂದರ್ಭ ಉದಾಹರಿಸುವೆ. ಸಮುದ್ರದ ದಂಡೆಯ ಮೇಲೆ ಈ ಸಾಹಿತಿ ದಂಪತಿಗಳ ಪರಿಚಯವನ್ನು ನನ್ನ ಧರ್ಮಪತ್ನಿಗೆ ಮಾಡಿಕೊಟ್ಟ ಸಂದರ್ಭ ಅದು. ಶ್ರೀ ಶ್ರೀ ಪೇಜಾವರ ಮಹಾಸ್ವಾಮಿಗಳು ವಸಂತ ಸಾಹಿತ್ಯೋತ್ಸವಕ್ಕೆ ಕರೆಯಿಸಿದ ಸಂದರ್ಭ. ವ್ಯಾಸಪೀಠದ ಮೇಲೆ ಶ್ರೀ ಶ್ರೀ ವಿಶ್ವೇಶ್ವರತೀರ್ಥರು ಅಧ್ಯಕ್ಷರಾಗಿದ್ದರು. ನನ್ನ ಭಾಷಣ ಮುಗಿದ ಮೇಲೆ ತ.ರಾ.ಸು. ಆ ಕೂಡಲೆ ರಾಮಸ್ವಾಮಿ ಅಯ್ಯಂಗಾರರದು. ಆ ದಿನ ಅವರು ಹೇಳಿದ ಮಾತು ಅವರ ಸಾಹಿತ್ಯ ತಪಸ್ಸನ್ನೇ ಕಣ್ಣೆದುರು ತಂದಿತು. ಅವರು ಸ್ವಾಮಿಗಳಿಗೆ ಕೇಳಿದರು; "....ಬೇರೆ ಬೇರೆ ಪ್ರದೇಶಗಳಲ್ಲಿ ಪಾಪ ಮಾಡಿದ ಜನರು ಅದನ್ನು ಕಳೆದುಕೊಳ್ಳಲು ಪುಣ್ಯಕ್ಷೇತ್ರಗಳಿಗೆ ಬರುತ್ತಾರೆ. ಆದರೆ ಮಹಾಸ್ವಾಮಿ! ಪುಣ್ಯಕ್ಷೇತ್ರದಲ್ಲಿ ಮಾಡಿದ ಪಾಪವನ್ನು ಯಾವ ಕ್ಷೇತ್ರದಲ್ಲಿ ಕಳೆದುಕೊಳ್ಳಬೇಕು....?"

ಇಂತಹ ಆಳವಿಚಾರದ ಮಾತುಗಳಿಂದ ವ್ಯಕ್ತಿಯ ಹಿರಿಮೆ ಗೊತ್ತಾಗುತ್ತದೆ. ಈ ವ್ಯಕ್ತಿಯ ಧರ್ಮದಲ್ಲಿ ಮಾನವೀಯತೆ ಎದ್ದು ಕಾಣುತ್ತದೆ. ಧರ್ಮದ ರೂಢ ಶಾಸ್ತ್ರ ಸಂಕುಚಿತ ದೃಷ್ಟಿಗೆ ಇಲ್ಲಿ ಅವಕಾಶವಿಲ್ಲ. ಹೃದಯದ ವಿಶಾಲ ಮಾರ್ಗದಲ್ಲಿ ಅಮೃತ ಸಿಂಪಡಿಸುತ್ತದೆ.

ಗೊರೂರರನ್ನು ಅವರ 'ಹಳ್ಳಿಯ ಚಿತ್ರಗಳ'ಲ್ಲಿ ಕಂಡಿದ್ದೆ. ಅವರ ಅಧ್ಯಕ್ಷ ಗೌಡರೊಡನೆ ನಾನು ಸಮರಸವಾಗಿ ಬೆರೆತಿದ್ದೆ, ನಕ್ಕಿದ್ದೆ. ಅವರ 'ಹಳ್ಳಿಯ ಬಾಳು' ಶ್ರೇಷ್ಠ ಪ್ರಬಂಧಗಳಲ್ಲಿ ಅವರ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದ್ದೆ. ಅವರ ಬಾಳುವುದು ಹೇಗೆಯೋ ಇರಬೇಕೆಂದು ರೂಪರೇಷೆ ಕೊರೆದುಕೊಂಡಿದ್ದೆ. ಪ್ರತ್ಯಕ್ಷ ಸ್ನೇಹವಾದ ಮೇಲೆ ನನ್ನ ಊಹೆ ನಿಜವೆನ್ನಿಸಿತು.

ಹಾಸ್ಯ ಸಾಹಿತ್ಯದಲ್ಲಿ ರಾಮಸ್ವಾಮಿ ಅಯ್ಯಂಗಾರರಿಗೆ ವಿಶಿಷ್ಟ ಸ್ಥಾನವಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಇವರದು ಹಾಸ್ಯಕ್ಕಾಗಿ ಹಾಸ್ಯವಲ್ಲ. ಎಳೆದು ತಂದ ಹಾಸ್ಯವೂ ಅಲ್ಲ. ಅದೊಂದು ಸಹಜಪ್ರವೃತ್ತಿ. ಮಾನವನಲ್ಲಿರುವ ಒಂದು ಗುಣ. ಒಬ್ಬರಲ್ಲಿ ಇದು ಹೆಚ್ಚಾಗಿ ಕಾಣಬಹುದು. ಇನ್ನೊಬ್ಬರಲ್ಲಿ ತುಸು ಕಡಿಮೆಯಾಗಿರಬಹುದು. ಇದು ಜೀವಗುಣವನ್ನೆ ಅವಲಂಬಿಸಿದೆ. ಜೀವನದಲ್ಲಿ ಹಾಸ್ಯಕ್ಕೆ ಯಾವ ಸ್ಥಾನವಿದೆಯೋ ಅಷ್ಟೇ ಸ್ಥಾನ ಸಾಹಿತ್ಯದಲ್ಲಿಯೂ ಹಾಸ್ಯರಸಕ್ಕೆ ಇದೆ. ಇದನ್ನು ಬಲ್ಲವರು ರಾಮಸ್ವಾಮಿ ಅಯ್ಯಂಗಾರರು. ಸಹಜವಾದ ಹಾಸ್ಯವು ತಿಳಿನಗೆಯ ತೆರೆಗಳನ್ನು ಎಬ್ಬಿಸುತ್ತದೆ. ಈ ತೆರೆಗಳ ಮೇಲೆ ತಂಗಾಳಿ ಬೀಸುತ್ತದೆ. ಮನಸ್ಸಿಗೆ ಆಹ್ಲಾದವಾಗುತ್ತದೆ. 'ಹಳ್ಳಿಯ ಚಿತ್ರ'ದಲ್ಲಿ ಬರುವ ಹಾಸ್ಯ ಇಂತಹದು. ಅದರ ಅಭಿವ್ಯಕ್ತಿಯಲ್ಲಿ ಪ್ರೀತಿ ಕೆಲಸ ಮಾಡುತ್ತದೆ. ಅನುಕಂಪ ಕಂಪನ್ನು ಸೂಸುತ್ತದೆ. ಈ ಪ್ರೀತಿ ಅನುಕಂಪಗಳನ್ನು ಜೇನಸೊನೆಯಂತೆ ಚಿಮ್ಮುವ ಗೊರೂರರ ಹಾಸ್ಯಚಿತ್ರಣದಲ್ಲಿ ಹಾಲಿನ ಹೊಳೆ ಹರಿಯುತ್ತದೆ.

ಗೊರೂರರು ಶ್ರೇಷ್ಠ ಕತೆಗಾರರೂ ಆಹುದು. ಈ ಕತೆಗಳಲ್ಲಿಯೂ ಜೀವನದ ಅನೇಕ ಮುಖಗಳನ್ನು ತೋರಿಸುತ್ತವೆ. ರೋಗದ ವಿಕಾರಗಳನ್ನು ಕಂಡು ಇವರು

ನಗುವುದಿಲ್ಲ. ತುಟಿ ಬಿಗಿ ಹಿಡಿಯುತ್ತಾರೆ. ದುಡಿಯುವ ಜನರೊಡನೆ ಒಂದಾಗುತ್ತಾರೆ. ದುಡಿತದ ಹಿರಿಮೆಯನ್ನು ತೋರಿಸುತ್ತಾರೆ. ಅವರ ಕಷ್ಟಕಾರ್ಪಣ್ಯಗಳ ಅನುಕಂಪದಲ್ಲಿ ಇವರ ಸಾಹಿತ್ಯಶಕ್ತಿ ದೃಗ್ಗೋಚರವಾಗುತ್ತದೆ. ಕಷ್ಟದ ಮಧ್ಯದಲ್ಲಿ ಹೇಗೆ ನಕ್ಕು ಬಾಳಬೇಕೆಂಬುದನ್ನು ತಿಳಿಸುತ್ತಾರೆ. ವಿಶ್ವಜೀವನದ ಜೀವಾಂತರಂಗದಲ್ಲಿ ನಗುತ್ತ ನಗುತ್ತ ಬಾಳೆಂದು ನೇರವಾಗಿ ಹೇಳದೆ ಅಂಥ ಪಾತ್ರವನ್ನು ಸೃಷ್ಟಿಸುತ್ತಾರೆ.

ನಗಿಸಬೇಕೆಂದು ಇವರು ನಗಿಸುವುದಿಲ್ಲ. ನಗಿಸುವುದೊಂದೇ ಉದ್ದೇಶವಲ್ಲ. ಒಳ ಬಂಡವಾಳವಿಲ್ಲದ ಸಾಹಿತಿ ಸುಮ್ಮಸುಮ್ಮನೆ ತಾನೂ ನಕ್ಕು ಇನ್ನೊಬ್ಬರನ್ನು ನಗಿಸಲು ಕಷ್ಟಪಟ್ಟು ನಗೆಪಾಟಲಿಗೆ ಗುರಿಯಾಗುತ್ತಾನೆ. ಸಾಹಿತ್ಯವೊಂದು ದಂದುಗವೂ ಅಲ್ಲ: "ಧಂದೆ"ಯೂ ಅಲ್ಲ. ಅದೊಂದು ಜೀವನದ ವಿವಿಧ ಮುಖಗಳನ್ನು ತೆರೆದು ತೋರಿಸುವ ಶಕ್ತಿ. ಈ ಶಕ್ತಿಯನ್ನು ನನ್ನ ಸ್ನೇಹಿತ ಗೊರೂರರು ಪಡೆದುಕೊಂಡಿದ್ದಾರೆ. ಅಪಾರ ಅನುಭವದ ಜೀವನದಲ್ಲಿ ಜೀವನದ ವಿವಿಧ ಮುಖಗಳನ್ನೂ ರೀತಿಯನ್ನೂ ಕಂಡ ಇವರು ಜೀವನದ ಸಂದೇಶವನ್ನು ಹೇಳುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ.

ಮಾತಿನ ಚಕಮಕಿಯಲ್ಲಿ ಕಿಡಿಹಾರುವ ಚುಚ್ಚು ಹಾಸ್ಯಕ್ಕೆ ಇವರ ಸಾಹಿತ್ಯದಲ್ಲಿ ಸ್ಥಾನವಿಲ್ಲ. "ಇದು ನಗೆ ಮಾತು: ನಗಬೇಕು" ಎಂದು ತಿವಿದು ಹೇಳಿ ನಗಿಸುವ ಹವ್ಯಾಸವೂ ಇವರಿಗಿಲ್ಲ. ಇವರ ಕಥಾಪ್ರಪಂಚದಲ್ಲಿ ಸಜೀವ ಪಾತ್ರಗಳು ತಮ್ಮತಮ್ಮ ಕೆಲಸವನ್ನು ಸಂದರ್ಭೋಚಿತವಾಗಿ ಯೋಗ್ಯತೆಗೆ ತಕ್ಕಂತೆ ಮಾಡಿ ಕಥೆಗೆ ಸಹಜತೆಯನ್ನು ಕೊಡುತ್ತಾರೆ. ಕೃತ್ರಿಮತೆ ತೋರುವುದಿಲ್ಲ.

ತುಂಬು ಜೀವನದ ಸಂತೃಪ್ತ ಭಾವದ ಸಾಹಿತ್ಯಗಂಗೆಯ ದರ್ಶನ ಈ ಸಾಹಿತ್ಯದಲ್ಲಿ ನಮಗಾಗುತ್ತದೆ. ಲೇಖಕನ ದಿವ್ಯ-ಭವ್ಯ ಜೀವನ ಅವನ ಸಾಹಿತ್ಯದಲ್ಲಿ ವ್ಯಕ್ತವಾಗುತ್ತದೆ—'ಕುವೆಂಪು' ಜೀವನದಲ್ಲಿ 'ರಾಮಾಯಣ ದರ್ಶನ'ವಾಗುತ್ತಿರುವಂತೆ. ಕೃತಿಯಂತೆ ಕರ್ತೃ.

ಅರವತ್ತು ವರುಷಗಳ ಮೇಲೆ ಹತ್ತು ವರುಷಗಳ ಚೈತನ್ಯವನ್ನು ನಾವು ಗೊರೂರು ಅವರಲ್ಲಿ ಇನ್ನು ಮೇಲೆಯೂ ಕಾಣುತ್ತೇವೆ. ಅರವತ್ತಕ್ಕೆ ಅರಳು ಮರಳೆಂಬುದು ಬರಿಯ ಗಾದೆಯ ಮಾತು. ಅರವತ್ತಕ್ಕೆ ಅರಿವು ಮರಳುವದೆಂಬುದು ಗೊರೂರವರಲ್ಲಿ ಯಥಾರ್ಥ. ಈ ಮಾತು ಸತ್ಯವಾಗಿ ಈ ಹಿರಿಯ ಸಂಪನ್ನ ಸ್ನೇಹಿತ ನೂರು ವರುಷ ಬಾಳಲಿ.

ಡಿ. ವಿ. ಜಿ.ಯವರು ಮುತ್ತಿನಂತಹ ನಾಲ್ಕು ಮಾತು ಹೇಳಿದ್ದಾರೆ:

ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು
ಅಸಮಂಜಸದಿ ಸಮನ್ವಯಸೂತ್ರ ನಯವ ॥
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ
ರಸಿಕತೆಯೆ ಯೋಗವೆಲೊ—ಮಂಕುತಿಮ್ಮ ॥

('ಮಂಕುತಿಮ್ಮನ ಕಗ್ಗ'-೨೪೧)

ಈ ಯೋಗವನ್ನು ಸಾಧಿಸಿದವರು ಗೊರೂರು ರಾಮಸ್ವಾಮಿ ಅಯ್ಯಂಗಾರರು.

ಹಾಸ್ಯಯೋಗಿ

ಸಿಂಪಿ. ಲಿಂಗಣ್ಣ

ಕನ್ನಡ ಸಾಹಿತ್ಯದಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ತಮ್ಮದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವುದಕ್ಕೆ ಅವರು ಯಥಾರ್ಥವಾದ ಗಾಂಧಿ ಅನುಯಾಯಿಯಾಗಿರುವುದೇ ಕಾರಣವೆನ್ನಬೇಕು. "ಹಳ್ಳಿಯತ್ತ ಹೊರಳಿರಿ" ಎನ್ನುವ ಗಾಂಧಿ ಸಂದೇಶವನ್ನು ಅಕ್ಷರಶಃ ತ್ರಿಕರಣಪೂರ್ವಕವಾಗಿ ಪಾಲಿಸಿದ್ದರಿಂದ ಅವರಿಗೆ ಸಾಹಿತ್ಯದ ತಾಯಿ ಬೇರೇ ಹಸ್ತಗತವಾಗಿದೆ. ಜಾನಪದ ಜೀವನದೊಡನೆ ಜಾನಪದ ಸಾಹಿತ್ಯವನ್ನೂ ಅಳವಡಿಸಿಕೊಳ್ಳುವ ಎತ್ತುಗಡೆಗೆ ಅವರು ಹಾಸ್ಯಯೋಗವನ್ನೇ ಸಾಧನೆ ಮಾಡಿಕೊಂಡಿರುವಂತೆ ತೋರುತ್ತದೆ.

ಸಕಲ ಜನರಿಗೆ ಲೇಸನೆ ಬಯಸುವ ಗಾಂಧಿ–ಅನುಯಾಯಿ ನಕ್ಕುನಗಿಸುವ ಲೇಸು ನಗೆಯನ್ನೇ ಆಯ್ದುಕೊಳ್ಳುವುದು ಕ್ರಮಪ್ರಾಪ್ತವಲ್ಲವೇ ? ಮನ–ಪ್ರಾಣ–ಶರೀರಗಳ ಸ್ಥಿತಿ ಸಮಾನ ಎತ್ತರಕ್ಕೆ ತಂದುಕೊಳ್ಳದಿದ್ದರೆ ಲೇಸುನಗೆಯು ಅಧಿಕಾರಿಯಾಗಲು ಸಾಧ್ಯವಿಲ್ಲ. ಅವನಿಗೆ ಅಳಿಸಿ ನಗುವ ಹುಸಿನಗೆಯೇ ದಾರಿಬುತ್ತಿ. ಜೀವನ ಜ್ವಾಲಾಮುಖಿಯು ಉಲ್ಬಣಗೊಳ್ಳದಂತೆ, ಅಂಕೆಯಲ್ಲಿರಿಸಿಕೊಳ್ಳಲು ಹಾಸ್ಯವೇ ಸಮರ್ಥವಾದ ಉಪಾಯವೆಂದು ಬಲ್ಲವರು ಹೇಳುತ್ತಾರೆ. ಹಾಸ್ಯಯೋಗವೆಂದರೆ, ಶ್ರೀ ಅರವಿಂದರು ಹೇಳಿದಂತೆ, ಕಂಬನಿಯನ್ನು ನಗೆಯನ್ನಾಗಿ ಪರಿವರ್ತಿಸುವ ಕರ್ಮಕೌಶಲ. ಅಂಥ ಕುಶಲ ಕರ್ಮವನ್ನು ಲೀಲಾಜಾಲವಾಗಿ ನಿರ್ವಹಿಸುತ್ತ ಬಂದ ಗೊರೂರರು ಹಾಸ್ಯಯೋಗಿಯಲ್ಲದೆ ಮತ್ತೇನು ?

ಬಾಳಿನ ನೋವುಗಳನ್ನು ನಕ್ಕು ಕಳಕೊಳ್ಳುವವರಿರುವಂತೆ, ಅತ್ತು ಕಳಕೊಳ್ಳುವವರೂ ಇದ್ದಾರೆ. "ಅತ್ತು ಕಳೆದ ನೋವ ದಾಟಿ ಕಳೆಯಬೇಕಯ್ಯ" ಎಂದು ಹೇಳುತ್ತಾರೆ ಸತ್ಯಕ್ಕ ಎಂಬ ಶರಣೆ. ಹಾಡಿಗೆ ಉಗ್ಗಿದ ಬುಗ್ಗೆಯೇ ನೆಲೆಯಾದಂತೆ, ಹಾಸ್ಯಕ್ಕೆ ಹಿಗ್ಗಿನ ಬುಗ್ಗೆಯೇ ನೆಲೆಯಾಗಿದೆ.

ಗಾಂಧಿಯವರ ಆದೇಶವನ್ನು ಪ್ರಾಮಾಣಿಕವಾಗಿ ಅನುಸರಿಸಿ, ಋಜು ಜೀವನವನ್ನು ಮೈಗೂಡಿಸಿಕೊಂಡವನಿಗೆ ಆನುಷಂಗಿಕವಾದ ಮುಂದಿನ ಹೆಜ್ಜೆಯೆಂದರೆ "ನಾಳಿನ ಮಗು" ಆಗುವಿಕೆ. ಶ್ರೀ ಗೊರೂರರಲ್ಲಿ "ನಾಳಿನಮಗು"ವಿನ ಅನೇಷ್ಟೋ ಲಕ್ಷಣಗಳು ಕಂಡುಬರುತ್ತವೆ. ಅವರು ಹಾಸ್ಯಯೋಗ ಸಾಧನೆಯ ಮಾರ್ಗವಾಗಿಯೇ ಅದರ ಸಕಲ ಲಕ್ಷಣಗಳನ್ನು ಅಳವಡಿಸತೊಡಗಿದ್ದಾರೆಂದು ಹೇಳಬಹುದಾಗಿವೆ. ಹಾಗಾದರೆ "ನಾಳಿನ ಮಗು"ವಿನ ಅದಾವ ಲಕ್ಷಣಗಳು ಅವರಲ್ಲಿ ಕಂಗೊಳಿಸುತ್ತಿವೆ ?

ಮೊಗದಲ್ಲಿ ನಗೆಯು, ಎದೆ ಸೊಗದ ಬಗೆಯು
ಸ್ಥಿತಿಬರಲಿ ಎಂತೊ ಮಸಗಿ।
ಪರಗುಣದ ರಸಿಕ ಸಹಕಾರಿಯವನು ಸತ್
ಕೃತ್ಯಕೆಲ್ಲಕೂನು॥

ಕಂಬನಿಯನ್ನು ನಗೆಯನ್ನಾಗಿ ಪರಿವರ್ತಿಸುವ ಕುಶಲಕರ್ಮವನ್ನು ಅವರು, ಜೀವನ ದಲ್ಲಿಯಂತೆ ಸಾಹಿತ್ಯದಲ್ಲಿಯೂ ನಿರಂತರವಾಗಿ ಮುಂದುವರಿಸಿದ್ದಾರೆ. ಜೇನುನೊಣವು ಬೇರೆ ನೊಣದಂತೆ ಹೇಸಿಕೆಯತ್ತ ಎಳಸದೆ, ಜೇನನ್ನೇ ಅರಸುವಂತೆ ಶ್ರೀ ಗೊರೂರರ ಕಣ್ಣು ಹೊರಳಿದಲ್ಲೆಲ್ಲ ಅರಳಿದಲ್ಲೆಲ್ಲ ಹಾಸ್ಯದ ಜೊಕ್ಕಾಸನನ್ನೇ ಕಾಣುತ್ತಿವೆ. ಇನ್ನಾವ ಭಾವನೆಗಳಾಗಲಿ ಅನಿಸಿಕೆಗಳಾಗಲಿ ಅವರ ಹತ್ತಿರ ಸುಳಿಯಲಾರವೆಂದೇನೂ ಅಲ್ಲ. ಅವೆಲ್ಲ ಧಾರಾಳವಾದ ಬೆಂಬಲ ನೀಡುತ್ತ ಹಿನ್ನೆಲೆಯಲ್ಲಿ ಇರುತ್ತವೆಂದು ಹೇಳಬಹುದು. ಅವರು, ತೊಗಲ ಗೊಂಬೆಯಾಟದ ರಾಮನೆಂಬವನ ಕಲೆಯನ್ನು ಕುರಿತು ಬರೆದ ವಿವರಣೆಯನ್ನು ಇಲ್ಲಿ ಉದಾಹರಿಸಬಹುದು.

"ಅರ್ಧರಾತ್ರಿಯ ನಂತರ, ಶ್ರೋತೃಗಳು ಕುಳಿತಲ್ಲಿಯೇ ಗೊರಕೆ ಹೊಡೆಯುವುದನ್ನು ಕಂಡು, ಅವನು ಅದೆಂಥದೋ ಹಾಸ್ಯಪಟಾಸುಗಳನ್ನು ಸಿಡಿಸುತ್ತಿದ್ದನು. ಅವನ್ನು ಕೇಳಿ ಜನ ಘೊಳ್ಳೆಂದು ಸಾವಿರಾರು ಚೆಳ್ಳುಳ್ಳಿ ಪಟಾಸುಗಳ ಸದ್ದು ಆಗಿ, ತೂಕಡಿಸುತ್ತಿದ್ದವ ರನ್ನು ಜಗ್ಗಿ ಎಬ್ಬಿಸುತ್ತಿತ್ತು."

"ಇನ್ನೊಂದು ಸಂದರ್ಭದಲ್ಲಿ ರಾವಣನ ಭಯಂಕರ ಕ್ರೋಧಪೂರಿತ ಚೀತ್ಕಾರಾದಿ ಗಳನ್ನು ಆ ಗೊಂಬೆಯಾಟದ ರಾಮನು, ಬ್ರಹ್ಮಾಂಡ ಕಟಾಹವೇ ಒಡೆದು ಹೋಗುವಂತೆ ಶಬ್ದ ಮಾಡಿದನು. ರಾವಣನ ಆಸ್ಥಾನದಲ್ಲಿ ಹೇಗೆ ಸ್ತಂಭಿತರಾದರೋ ಆಟದ ಬಯಲಿ ನಲ್ಲಿಯೂ ಜನ ಹಾಗೆ ಹೆದರಿ ಜರ್ಜರಿತರಾದರು. ನಿದ್ರೆ ಮಾಡುತ್ತಿದ್ದ ಮಕ್ಕಳು ಚಿಟ್ಟನೆ ಚೀರುತ್ತ ಎದ್ದರು. ಅಳ್ಳೆದೆಯುಳ್ಳ ಹೆಂಗಸರು, ಗಂಡಸರು ಸಹ ಪರದೆಯೊಳಗೆ ಗೊಂಬೆಗಳು ಆರ್ಭಟಿಸುತ್ತಿದ್ದುದನ್ನು ಕಂಡು ಬೆಚ್ಚಿಬಿದ್ದರು."

ಗಾದೆಗಳನ್ನು ಕುರಿತು ಅವರು ಹೇಳುವ ರೀತಿಯಲ್ಲಿ ಹಾಸ್ಯವು ಹಾಸುಹೊಕ್ಕು ಅಷ್ಟೇ ಅಲ್ಲ, ಬಣ್ಣ ಸಹ ತೊಟ್ಟು ನಿಲ್ಲುತ್ತದೆ.

"ಜನಜೀವನದ ಎಲ್ಲ ಸಂದರ್ಭಗಳಲ್ಲಿ, ಎಲ್ಲ ಕಾರ್ಯಗಳಲ್ಲಿ, ಎಲ್ಲ ಕ್ಷೇತ್ರಗಳಲ್ಲಿ ಗಾದೆ "ನಾನೂ ಇಲ್ಲೊಬ್ಬ" ಎಂದು ನಿಲ್ಲುತ್ತದೆ."

"ಕಿರಿದರಲ್ಲಿ ಹಿರಿದರ್ಥವನ್ನು ಕೊಂಡು ಗಾತ್ರದಲ್ಲಿ ವಾಮನನಾದರೂ ಅದು ಅರ್ಥ ವ್ಯಾಪ್ತಿಯಲ್ಲಿ ತ್ರಿವಿಕ್ರಮನಾಗುತ್ತದೆ."

"ಸತ್ಯ, ಗಾದೆ, ಮೂರ್ಖ ಈ ಮೂರನ್ನೂ ಎದುರಿಸಲಾಗದು."

"ಗಾದೆ ಶಾಶ್ವತ ನಾಣ್ಯ, ಅಹುದು. ಆದರೆ ಸರ್ಕಾರದ ನಾಣ್ಯದಂತೆ "ನಡೆವಸ್ತು ದಿಸ ನಾಣ್ಯ" ಎಂಬಷ್ಟು ಅನಿಷ್ಟವು ಇದಕ್ಕಿಲ್ಲ."

"ಗಾದೆ ಜನಜೀವನದ ಸ್ವಯಂಪೂರ್ಣ ಖಂಡಕಾವ್ಯದ ತುಣುಕು. ಅಜ್ಜಿಯ ಮನೆಗೆ ಅಜ್ಜ ಹೋದ ಹಾಗೆ ಅದು ಬಾಳಿಗೆ ಸರಿಯಾಗಿ ಹೊಂದಿಕೊಂಡುಬಿಟ್ಟು. ಅಸಂಖ್ಯಾತ ಜನರ ಉಪಯೋಗದಿಂದ ನಿರ್ಜರವೂ ಅಮರವೂ ಆಗಿಬಿಟ್ಟಿದೆ. ಉದಾ–ಹಬ್ಬದ ದಿನವೂ ಹಳೆಯ ಗಂಡನೇ?"

ಗೊರೂರರು ರೈತನ ಬಗೆಯನ್ನು ವಿವರಿಸುವ ಬಗೆ ಹೇಗೆಂದರೆ :

"ದಾರಿಯಲ್ಲಿ ರೈತನು ನಡೆಯುತ್ತಿರುವಾಗ ಛತ್ರಿ ಕೈಯಲ್ಲಿದ್ದರೂ ದುಪಟಿ–ಹದದ ಮಳೆಗೆ ಛತ್ರಿಯನ್ನು ಬಿಚ್ಚುವುದೇ ಇಲ್ಲ. ಹಾಗೂ ಬಿಚ್ಚಬೇಕಾದರೆ ದುಪಟಿ ನೆನೆದು, ತೇವ ಒಳಕ್ಕೆ ವ್ಯಾಪಿಸಿದ ಮೇಲೆಯೇ ಬಿಚ್ಚುತ್ತಾನೆ. ಮಳೆಹನಿ ಮೈಮೇಲೆ ಬೀಳುವುದನ್ನು ಅನುಭವಿಸುವುದು ಅವನಿಗೊಂದು ಸೊಗಸು. ಅದು ಅವನಿಗೆ ದೇವೇಂದ್ರರಾಯನ ಸ್ಪರ್ಶ."

ನಿಜವಾದ ಹಾಸ್ಯದಲ್ಲಿ ಅಮೃತತತ್ವ ಹಾಗೂ ನೂತನತೆಗಳಿರುವುದನ್ನು ಗೊರೂರರು ಕಂಡುಂಡುದು ಎಲ್ಲಿ?

"ಅನಿಶ್ಚಯದ ಬಾಳಿನಲ್ಲಿಯೂ ನಿರುತ್ಸಾಹಿಯಾಗದೆ, ಎಂಥ ಕಷ್ಟಕ್ಕೂ ತನ್ನ ಹಾಸ್ಯ ವಿನೋದ ಎಂಬ ಗುರಾಣಿಯನ್ನು ಒಡ್ಡಿ ಯಮನೊಂದಿಗೆ ಸಹ ಸರಸವಾಡುತ್ತ, ತೃಪ್ತಿ ಶಾಂತಿಗಳಿಂದ ಎಲ್ಲರೊಂದಿಗೂ ಬಂಧುಪ್ರೇಮದಿಂದ ಬಾಳನೂಕುವ ಹಾಗೂ ದೇವರನ್ನು ಸಹ ಹಾಸ್ಯವದನ ಎಂದು ಸಂಬೋಧಿಸುವ ರೈತ ಕಾರ್ಮಿಕರಲ್ಲಿ" ಹಾಸ್ಯವನ್ನು ಕಲಿತು ಅನುಭವಕ್ಕೆ ತಂದುಕೊಂಡಿರುವುದರಲ್ಲಿ ಸಂಶಯವಿಲ್ಲ. ಅದು ಹಸಿದ ಕರುವಿಗೆ ತೊಡಿಸಿದ ಬಟ್ಟೆ ಅಷ್ಟು ತಕ್ಕಂತಾಗಿದೆ. ಅಂತೆಯೇ ಗೊರೂರರು ರೈತನ ಆಳ ಕರುಳಿನಂತೆ ಉತ್ಸಾಹದ ನೆಲೆಯಾಗಿ ನಮಗೆ ಕಾಣಿಸಿಕೊಂಡಿದ್ದಾರೆ.

ನನ್ನ ಗೊರೂರಿನ ನೆನಪು

ಎಸ್. ಎಲ್. ಭೈರಪ್ಪ

ನಾನು ನುಗ್ಗೆಹಳ್ಳಿಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದೆ. ಗೊರೂರು ಹತ್ತಿರದ ಬನವಾಸೆಯ ಸ್ವಾಮಿಗೌಡರು ಎಂಬ ಉಪಾಧ್ಯಾಯರು ಆ ಶಾಲೆಯಲ್ಲಿದ್ದರು. ನನ್ನ ಮೇಲೆ ಅವರಿಗೆ ಪ್ರೀತಿ ವಾತ್ಸಲ್ಯ ಬೆಳೆದು ನನ್ನನ್ನು ಅವರ ಮನೆಯಲ್ಲಿಯೇ ಇರಿಸಿಕೊಂಡಿದ್ದರು. ೧೯೪೭ರ ಮೇ ತಿಂಗಳಿನಲ್ಲಿ ಅವರಿಗೆ ಗೊರೂರಿಗೆ ವರ್ಗವಾಯಿತು. ನನ್ನ ಟಿ.ಸಿ. ತೆಗೆಸಿ ನನ್ನನ್ನೂ ಸಂಗಡ ಕರೆದುಕೊಂಡು ಗೊರೂರಿಗೆ ಹೋದರು. ಹೀಗೆ ೪೭–೪೮ರಲ್ಲಿ ಮಾಧ್ಯಮಿಕ ಶಾಲೆಯ ಕೊನೆಯ ವರ್ಷವನ್ನು ನಾನು ಗೊರೂರಿನಲ್ಲಿ ಓದಿದೆ.

ಅದುವರೆಗೆ ನಾನು ರಾಮಸ್ವಾಮಿ ಅಯ್ಯಂಗಾರರ ಹೆಸರನ್ನು ಕೇಳಿರಲಿಲ್ಲ. ಗೊರೂರು ಮಾಧ್ಯಮಿಕ ಶಾಲೆಯಲ್ಲಿ ಅರಕಲಗೂಡು ಶ್ರೀಕಂಠಯ್ಯ ಎಂಬ ಉಪಾಧ್ಯಾಯರಿದ್ದರು. ಒಂದು ದಿನ ಅವರು ತರಗತಿಯಲ್ಲಿ ರಾಮಸ್ವಾಮಿ ಅಯ್ಯಂಗಾರರಿಂದ ಸಂಗ್ರಹಿತ 'ಹಳ್ಳಿಯ ಹಾಡುಗಳು' ಪುಸ್ತಕದಿಂದ ಕೆಲವು ಪದಗಳನ್ನು ರಾಗವಾಗಿ ಹಾಡಿದರು. ನನಗೆ ರುಚಿ ಹತ್ತಿತು. ಅವರಿಂದ ಹೇಳಿಸಿಕೊಂಡು ಇಪ್ಪತ್ತು ಮೂವತ್ತು ಪ್ರಸಂಗಗಳನ್ನು ಅಭ್ಯಾಸ ಮಾಡಿದೆ. ಅಲ್ಲಿಯೇ ನಾನು ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯ ಕೃತಿಗಳನ್ನು ಓದಲು ಆರಂಭಿಸಿದೆ.

ನಮ್ಮ ಸ್ವಾಮಿಗೌಡರು ಬಾಡಿಗೆಗಿದ್ದ ಮನೆಯ ಬಲಕ್ಕೆ ನಾಲ್ಕನೆಯದೋ ಐದನೆಯದೋ ರಾಮಸ್ವಾಮಿ ಅಯ್ಯಂಗಾರರದು. ದಿನಾ ಬೆಳಿಗ್ಗೆ ನದಿಗೆ ಹೋಗಿ ಈಜುವುದು ನನ್ನ ಹವ್ಯಾಸವಾಗಿತ್ತು. ನಾನು ಜೋರಾಗಿ ಈಜುತ್ತೇನೆಂದು ನನ್ನ ಜೊತೆಗಾರರು ಸರ್ಟಿಫಿಕೇಟ್ ಕೊಟ್ಟಿದ್ದರು. ರಾಮಸ್ವಾಮಿ ಅಯ್ಯಂಗಾರರು ಚೆನ್ನಾದ ಈಜುಗಾರರೆಂದು ಊರಿನ ಹಿರಿಯರು ಮಾತನಾಡಿಕೊಳ್ಳುವುದನ್ನು ಕೇಳಿದ್ದೆ. ಒಂದು ದಿನ ನನ್ನ ಈಜನ್ನು ಅವರು ನೋಡಿದರು. "ಬರೀ ದಡಾಬಡಾ ಅಂತ ಸದ್ದು ಮಾಡ್ಕಂಡು ಈಜಬಾರದೋ

ಹುಡುಗ. ನೀನು ಹೋಗುತ್ತೆ ನೋಡು, ಸರ್ಪ ಇಲ್ಲಿದೆ, ಹಾಗೆ ಹೋಗಬೇಕು. ಇಲ್ಲಿ ನೋಡು"—ಎಂದು ಅವರು ಈಜು ಬಿಟ್ಟರು. ಹರಿಯುವ ಹೊಳೆಯಲ್ಲಿ ಎಳೆತದ ಎದುರಿಗೆ ಈಜಿದರೂ ಕೂಡ ಸದ್ದಾಗದಂತೆ ಮೇಲೆ ಹೋದರು. ಆದರೆ ಹದಿಮೂರು ವರ್ಷದ ನನಗೆ ಅಂತಹ ನಿಶ್ಶಬ್ದ ಚಲನೆಯಲ್ಲಿ ಮಜಾ ಕಾಣಲಿಲ್ಲ.

ಗೊರೂರು ಹೊಳೆಯಲ್ಲಿ ಪೊಟ್ಟಿಕಲ್ಲು ಮಡು ಎನ್ನುವ ಜಾಗವಿದೆ. ಮಧ್ಯೆ ಪೊಟ್ಟಿಯಂತೆ ಉಬ್ಬಿನಿಂತ ಬಂಡೆ. ಸುತ್ತಲೂ ಆಳವಾಗಿ ಹರಿಯುವ ನೀರು. ಹತ್ತಿರ ಬೇರೆ ಕಲ್ಲು ಬಂಡೆಗಳಿಲ್ಲವಾದುದರಿಂದ ನೀರಿನ ಸೆಳೆತ ಕಡಿಮೆ. ಆದರೆ ಅಲ್ಲಿ ಮೊಸಳೆಗಳಿವೆ. ಒಮ್ಮೊಮ್ಮೆ ಪೊಟ್ಟಿಕಲ್ಲಿನ ಮೇಲೆ ಏರುತ್ತಿದ್ದ ಮೊಸಳೆಗಳನ್ನು ದೂರದ ದಡದಿಂದ ನೋಡಬಹುದಾಗಿತ್ತು. ಹುಡುಗರಾರೂ ಅಲ್ಲಿಗೆ ಈಜಲು ಹೋಗುತ್ತಿರಲಿಲ್ಲ. ಹತ್ತು ಹದಿನೈದು ಜನ ದೊಡ್ಡವರು ಗುಂಪುಗೂಡಿ ಒಟ್ಟಿಗೆ ದಡಬಡನೆ ನೀರು ಬಡಿದುಕೊಂಡು ಗಲಭೆ ಎಬ್ಬಿಸುತ್ತಾ ಈಜಿ ಪೊಟ್ಟಿಕಲ್ಲು ತಲುಪಿ ನಂತರ ಅದೇ ಗದ್ದಲದಿಂದ ಹಿಂತಿರುಗುತ್ತಿದ್ದರು. ಸಾಧಾರಣವಾಗಿ ರಾಮಸ್ವಾಮಿ ಅಯ್ಯಂಗಾರರು ಅಂತಹ ಗುಂಪಿನ ಮುಂದಾಳಾಗಿರುತ್ತಿದ್ದರು. ನಾನು ಹೇಗೂ ಗದ್ದಲವೆಬ್ಬಿಸುವ ಈಜುಗಾರನಾಗಿದ್ದೆ. ನಾನೂ ಜೊತೆಯಲ್ಲಿ ಬರುವುದಾಗಿ ಒಂದು ದಿನ ಕೇಳಿಕೊಂಡೆ. ಎಷ್ಟು ದೂರವಾದರೂ ಈಜುವ ಶಕ್ತಿ ನನಗಿದೆ ಎಂದು ತೋಳನ್ನು ಎತ್ತಿ ತೋರಿಸಿದೆ. ಅವರೂ "ಅದು ಚಿಕ್ಕ ಹುಡುಗರಿಗಲ್ಲ. ಎಳೆಮಾಂಸ ಅಂದರೆ ಮೊಸಳೆ ಹುಡಿಕ್ಕೊಂಡು ಬರುತ್ತೆ. ಮೆಜಾರಿಟಿಗೆ ಬರೂತನಕ ನೀನು ಅಲ್ಲಿಗೆ ಬರಕೂಡದು"—ಎಂದು ಕೈ ಅಲ್ಲಾಡಿಸಿದರು. ಕರೆದುಕೊಂಡು ಹೋಗಲಿಲ್ಲ. "ನಾನೂ ಜೊತೇಲಿ ಈಜಿದ್ದರೆ ಈ ಮುದುಕನ ಗಂಟೇನು ಹೋಗ್ತಿತ್ತು" ಎಂದು ನಾನು ಸದ್ದಿಲ್ಲದೆ ಬೈದುಕೊಂಡೆ. ಇಂದಿಗೂ ನನಗೆ ಅವರ ಬಗೆಗಿನ ಆ ಅಸಮಾಧಾನ ಹೋಗಿಲ್ಲ.

ಹೊರಗೆಲ್ಲ ಸ್ವಾತಂತ್ರ್ಯ ಬಂದಿದ್ದರೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕೆಂದು ಹೋರಾಟ ನಡೆಯುತ್ತಿತ್ತು. ಸ್ವಾತಂತ್ರ್ಯ ಚಳವಳಿಗಾರರಲ್ಲಿ ರಾಮಸ್ವಾಮಿ ಅಯ್ಯಂಗಾರರು ಪ್ರಮುಖರು. ಒಂದು ದಿನ ಅವರ ಮನೆಯ ಮುಂದೆ ಮೂವತ್ತು ನಲವತ್ತು ಜನ ಸೇರಿದ್ದರು. ಕುತೂಹಲಹುಟ್ಟಿ ನಾನೂ ಅಲ್ಲಿಗೆ ಹೋಗಿ ಏನು ಕಾರಣವೆಂದು ವಿಚಾರಿಸಿದೆ. ತುಮಕೂರಿನಲ್ಲಿ ಅಥವಾ ಹಾಸನದಲ್ಲೋ ನನಗೆ ಸರಿಯಾಗಿ ನೆನಪಿಲ್ಲ ಓದುತ್ತಿದ್ದ ಅವರ ಮಗ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ. ಗೋಲೀಬಾರ್ ಆಯಿತು. ಗುಂಡಿಗೆ ಸಿಕ್ಕಿ ಸತ್ತ—ಎಂದು ತಿಳಿಯಿತು. ನಾನು ಗುಂಪಿನಲ್ಲಿ ಜಾಗ ಬಿಡಿಸಿಕೊಂಡು ಜಗುಲಿಯ ಹತ್ತಿರಕ್ಕೆ ಹೋದೆ. ಜಗುಲಿಯ ಮೇಲೆ ನಿಂತಿದ್ದ ರಾಮಸ್ವಾಮಿ ಅಯ್ಯಂಗಾರರು ಜನರಿಗೆ ಹೇಳುತ್ತಿದ್ದರು : ಹೊಳೆಯಲ್ಲಿ ಮುಳುಗಿಯೋ, ಹಾವು ಕಡಿದೋ ಸತ್ತಿದ್ದರೆ ದುರ್ಮರಣವಾಗ್ತಿತ್ತು. ದೇಶದ ಸ್ವಾತಂತ್ರ್ಯಕ್ಕೆ ಜೀವಕೊಟ್ಟಿದ್ದು ಒಳ್ಳೆಯ ಸಾವೇ. ಅದಕ್ಕೆಲ್ಲಾ ಕಣ್ಣೀರು ಹಾಕ್ತಾ ಕೂರಬಾರದು. ಈಗ ನೀವೆಲ್ಲ ಸೇರಿ ನಮ್ಮ ಸುತ್ತಮುತ್ತ ಚಳವಳೀನ ಜೋರುಮಾಡಬೇಕು."

ಅವರ ಕಣ್ಣಿನಲ್ಲಿ ನೀರಿರಲಿಲ್ಲ. ಸಮಾಧಾನ ಹೇಳಲು ಬಂದಿದ್ದವರ ಕಣ್ಣುಗಳೇ ತುಂಬಿಕೊಂಡಿದ್ದವು.

ಮಹಾತ್ಮಾಗಾಂಧಿಯವರ ಚಿತಾಭಸ್ಮವನ್ನು ರಾಮಸ್ವಾಮಿ ಅಯ್ಯಂಗಾರರು ಗೊರೂರಿಗೂ ತಂದರು. ಇನ್ನೂರು ಮುನ್ನೂರು ಜನರ ಮೆರವಣಿಗೆಯ ಮುಂದಾಳಾಗಿ ಅವರು ಚಿತಾಭಸ್ಮ ಪಾತ್ರೆಯನ್ನು ತಲೆಯ ಮೇಲೆ ಹೊತ್ತು ಬರಿಗಾಲಿನಲ್ಲಿ ನಡೆಯುತ್ತಾ ಹೋಗಿ ಹೇಮಾವತಿ ಮತ್ತು ಯಗಚಿಗಳ ಸಂಗಮದಲ್ಲಿ ವಿಸರ್ಜಿಸಿ ತಾವೂ ಮುಳುಗುಹಾಕಿ ಒದ್ದೆಬಟ್ಟೆಯಲ್ಲಿ ಹಿಂತಿರುಗಿದರು. ಮೆರವಣಿಗೆಯಲ್ಲಿ ನಾನೂ ಇದ್ದೆ. ಅನಂತರ ಎಲ್ಲರೂ ಆಸ್ಪತ್ರೆಯ ಹತ್ತಿರದ ಬಯಲಿಗೆ ಬಂದೆವು. ಊರಿನ ಇತರರೂ ಸೇರಿದರು. ಉಟ್ಟ ಒದ್ದೆ ಪಂಚೆ, ಹೆಗಲಮೇಲೆ ಹಿಂಡಿ ಹಾಕಿಕೊಂಡಿದ್ದ ಇನ್ನೊಂದು ಒದ್ದೆ ಪಂಚೆಯಲ್ಲಿ ರಾಮಸ್ವಾಮಿ ಅಯ್ಯಂಗಾರರು ನಿಂತು ಭಾಷಣ ಮಾಡಿದರು. ಶುರುವಿನಲ್ಲಿ ಮಾತು ತೋಚದೆ ತಡಕಾಡಿದರು. ಸ್ವಲ್ಪಹೊತ್ತಿಗೆ ಆವೇಶ ಬಂದವರಂತೆ ಭಾಷಣ ಆರಂಭಿಸಿದರು. ಅನಂತರ ಇದ್ದಕ್ಕಿದ್ದಂತೆಯೇ ಮತ್ತೆ ತಡಕಾಡತೊಡಗಿದರು. ಕಣ್ಣೀರು ಒರೆಸಿಕೊಂಡರು. ಬಿಕ್ಕಿಬಿಕ್ಕಿ ಅಳುತ್ತಾ ನಿಂತುಬಿಟ್ಟರು. ಕೊನೆಗೆ 'ನಂಗೇನೂ ತಿಳಿಯಲಿಲ್ಲ'—ಎಂದು ಪಕ್ಕಕ್ಕೆ ಸರಿದು ಹುಲ್ಲಿನ ಮೇಲೆ ಕುಸಿದು ಕುಳಿತರು.

ನಾನು ಗೊರೂರಿನಲ್ಲಿ ಓದಿದುದು ಒಂದು ವರ್ಷ ಮಾತ್ರ. ಅನಂತರ ರಾಮಸ್ವಾಮಿ ಅಯ್ಯಂಗಾರರನ್ನು ಕಾಣುವ ಅವಕಾಶ ಒದಗಿರಲಿಲ್ಲ. ಕಳೆದ ವರ್ಷ ಚನ್ನರಾಯಪಟ್ಟಣದಲ್ಲಿ ನಡೆದ ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಕಂಡೆ. ನಿಮ್ಮೂರಿನಲ್ಲಿ ನಾನು ಒಂದು ವರ್ಷ ಓದಿದೆ—ಎಂದು ಅವರಿಗೆ ವಿವರಗಳನ್ನು ತಿಳಿಸಿದಾಗ ಅವರ ಮುಖದಲ್ಲಿ ನಿಜವಾದ ಸಂತೋಷ ಕಾಣುತ್ತಿತ್ತು.

"ಹಾಗಾದರೆ ನಿಮ್ಮ ಸಾಹಿತ್ಯಕ್ಕೂ ನಮ್ಮ ಹೇಮಾವತಿಯೇ ಸ್ಫೂರ್ತಿ ಎಂದರು" ತಮ್ಮ ಚೂಪುಗಣ್ಣನ್ನು ಮಿನುಗಿಸುತ್ತಾ.

ರಸಿಕ ಶಿರೋಮಣಿ

ಬಿ. ಶಿವಮೂರ್ತಿ ಶಾಸ್ತ್ರಿ

ಕನ್ನಡ ಸಾಹಿತ್ಯದಲ್ಲಿ ತಿಳಿಯಾದ ಹಾಸ್ಯವನ್ನು ಪ್ರತಿಪಾದಿಸುವ ಬರೆಹಗಾರರ ಸಂಖ್ಯೆ ಬಹಳ ಕಡಿಮೆ. ಮಿಗಿಲಾದ ಲೋಕಾನುಭವ, ಉತ್ತಮ ಚಿತ್ತ ಸಂಸ್ಕಾರ, ತಕ್ಕಷ್ಟು ಸಾಹಿತ್ಯ ಪರಿಜ್ಞಾನ, ಸಾಹಿತಿಗಳಿಗೆ ಅಗತ್ಯವಾದ ಪ್ರತಿಭೆ ಹಾಗೂ ಜನಜೀವನವನ್ನು ತನ್ನದನ್ನಾಗಿ ನೋಡುವ ಸಹೃದಯ ಪ್ರವೃತ್ತಿ, ಇವುಗಳು ಇಲ್ಲದವರು ತಮ್ಮ ಬರೆಹದಲ್ಲಿ ಹಾಸ್ಯರಸವನ್ನು ಚಿತ್ರಿಸುವುದು ಆಗದ ಮಾತು.

ಕನ್ನಡ ಓದುಗರಿಗೆ ಸುಪರಿಚಿತರಾಗಿರುವ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಅನೇಕ ಮಹತ್ವದ ಗ್ರಂಥಗಳನ್ನು ಬರೆದು, ತಮ್ಮದೇ ಆದ ಸರಸ ಶೈಲಿಯನ್ನು ಅಳವಡಿಸಿಕೊಂಡು ಹಾಸ್ಯರಸ ಪ್ರತಿಪಾದಕವಾದ ಸಾಹಿತ್ಯವನ್ನು ಸೃಷ್ಟಿಸಿ ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹಲವು ಬಾರಿ ಸೆರೆಮನೆ ವಾಸವನ್ನು ಅನುಭವಿಸಿದ ಅವರು ಕರ್ನಾಟಕದ ಏಕೀಕರಣಕ್ಕೂ ತಮ್ಮ ನೈತಿಕ ಬೆಂಬಲವನ್ನು ಕೊಟ್ಟಿದ್ದಾರೆ. ಅವರು ಕನ್ನಡ ಜನಪದ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ತಮ್ಮ ಗ್ರಂಥಗಳಲ್ಲಿ ಜಾನಪದ ಸಾಹಿತ್ಯವನ್ನು ಹಾಸುಹೊಕ್ಕಾಗಿ ಬಳಸಿಕೊಂಡಿದ್ದಾರೆ. ವಿಶೇಷವಾಗಿ ಅವರು ಗ್ರಾಮಜೀವನವನ್ನು ಕುರಿತು ಅನುಭವಪೂರ್ಣವಾದ ಲೇಖನಗಳನ್ನೂ ಹಾಗೂ ಗ್ರಂಥಗಳನ್ನೂ ಬರೆದಿದ್ದಾರೆ. ಈ ದೃಷ್ಟಿಯಿಂದ ಅವರ ಹೆಸರು ಕನ್ನಡನಾಡಿನಲ್ಲಿ ಮನೆಮಾತಾಗಿದೆ. ಅಲಂಕಾರ ಗ್ರಂಥಗಳಲ್ಲಿ ಕಾವ್ಯಗಳಲ್ಲಿ ನವರಸಗಳು ಇರಬೇಕೆಂದು ಹೇಳಿದೆ. ಆದರೆ ಹಾಸ್ಯರಸವನ್ನು ಪ್ರಧಾನವಾಗಿ ಇಟ್ಟುಕೊಂಡು ಕಾವ್ಯವನ್ನು ಅಥವಾ ಕತೆ ಕಾದಂಬರಿಗಳನ್ನು ಬರೆದವರ ಸಂಖ್ಯೆ ನಿಜಕ್ಕೂ ಕಡಿಮೆ ಎನ್ನಬಹುದು.

ಸುಮಾರು ೩೦-೩೫ ವರ್ಷಗಳಿಂದ ನಾನು ಶ್ರೀ ಗೊರೂರು ರಾಮಸ್ವಾಮಿ

ಅಯ್ಯಂಗಾರರನ್ನು ಬಲ್ಲವನಾಗಿದ್ದೇನೆ. ಅವರಲ್ಲಿ ಅನೇಕ ಸಂದರ್ಭದಲ್ಲಿ ಮಾತುಕತೆ ನಡೆಸಿದ್ದೇನೆ. ಅವರ ಕೆಲವು ಗ್ರಂಥಗಳನ್ನು ಅಕ್ಕರೆಯಿಂದ ಓದಿದ್ದೇನೆ. ಅವರು ವಿಶೇಷ ವಾಗಿ ಸಾಹಿತ್ಯ ಸಮ್ಮೇಳನ ಅದರಲ್ಲಿಯೂ ಜಾನಪದ ಸಾಹಿತ್ಯ ಸಮ್ಮೇಳನ, ನಾಡ ಹಬ್ಬ ಮೊದಲಾದ ಸಂದರ್ಭಗಳಲ್ಲಿ ಕನ್ನಡ ನಾಡ ಜನರಿಗೆ ಸಂದರ್ಶನವೀಯುತ್ತಾರೆ. ಒಟ್ಟಿನಲ್ಲಿ ಸರಸಸಾಹಿತಿ, ಗೊರೂರು ರಾಮಸ್ವಾಮಿ ಅಯ್ಯಂಗಾರರು ಆಧುನಿಕ ಸಾಹಿತಿ ಗಳ ಪಂಕ್ತಿಯಲ್ಲಿ ಪ್ರಮುಖರಾಗಿದ್ದಾರೆ.

ಅವರು ಬರೆದಿರುವ 'ನಮ್ಮ ಊರಿನ ರಸಿಕರು' ತುಂಬಾ ಸ್ವಾರಸ್ಯವಾದ ಗ್ರಂಥ. ಹಾಸನ ಜಿಲ್ಲೆಗೆ ಸೇರಿದ ಹೇಮಾವತಿ ತೀರದ ಗೊರೂರು ಶ್ರೀ ರಾಮಸ್ವಾಮಿ ಅಯ್ಯಂ ಗಾರರ ಜನ್ಮಸ್ಥಳ. ಅದು ಅವರ ಪಾಲಿಗೆ ಸ್ವರ್ಗಲೋಕ. ಅವರು ಆ ಗ್ರಾಮದ ಜನಜೀವನವನ್ನು ಕುರಿತು ಈ ಗ್ರಂಥವನ್ನು ರಚಿಸಿದ್ದಾರೆ. ನಗರಜೀವನದಲ್ಲಿ ಇರತಕ್ಕ ಜನರಿಗೆ 'ನಮ್ಮ ಊರಿನ ರಸಿಕರು' ಎಂಬ ಪುಸ್ತಕವು ನವರಸದ ರಸಾಯನದಂತಿದೆ. ಈ ಗ್ರಂಥಗಳಲ್ಲಿ ಬರುವ ಪಾತ್ರಗಳು ಡ್ರೈವರ್ ರಾಜಯ್ಯಂಗಾರ್, ರಂಗೇಗೌಡ, ಅರ್ಚಕ ಲಕ್ಷ್ಮೀಪತಿ, ರಾಮಣ್ಣ ಜೋಡಿದಾರರು, ರಾಮಯ್ಯಂಗಾರರು, ನಾಣಿ, ಶಾಲು ಸಾಬಿ, ಶೀನಪ್ಪ, ನಾರಾಯಣ ಭಟ್ಟ, ಜಡೇಮುನಿ ದೆವ್ವ ಇತ್ಯಾದಿಗಳು ನಿಜಕ್ಕೂ ಜೀವಂತ ಪಾತ್ರಗಳು. ಈ ಪಾತ್ರಗಳ ಮಾತುಕತೆಗಳು ಓದುಗರ ಮನಸ್ಸಿಗೆ ಸಂತೋಷ ವನ್ನೂ, ಸ್ಫೂರ್ತಿಯನ್ನೂ ಉಂಟುಮಾಡುತ್ತವೆ. ಆನಂದಬಾಷ್ಪವನ್ನು ಸುರಿಸುವಂತೆ ಮಾಡುತ್ತವೆ. ಇಂಥ ಸಾಹಿತ್ಯಸೃಷ್ಟಿಯನ್ನು ಮಾಡುವ ಲೇಖಕನು ನಿಜವಾದ ಲೋಕಾನುಭವಿಯೂ, ಸಹೃದಯನೂ, ರಸಋಷಿಯೂ ಆಗಿರಬೇಕಲ್ಲವೆ?

'ಹಳ್ಳಿಯ ಬಾಳು' ಎಂಬ ಶ್ರೀ ಅಯ್ಯಂಗಾರರ ಇನ್ನೊಂದು ಗ್ರಂಥವನ್ನೂ ನಾನು ಓದಿದ್ದೇನೆ. ಇದು ಸುಮಾರು ೩೦ ವರ್ಷಗಳ ಹಿಂದೆ ಅವರು ಬರೆದದ್ದು. ಇದರಲ್ಲಿ 'ದೇವ ರೊಂದಿಗೆ ಗೆಳೆತನ', 'ಗಂಡ, ಹೆಂಡತಿ, ಪ್ರೇಮ' 'ಸಂಸಾರ', ಈ 'ಸಾಹಿತ್ಯದ ಸೊಗಸು', 'ಲೋಕದಬಂಧು' ಎಂಬ ಪ್ರಕರಣಗಳಿವೆ. ರೈತರು ಮಾದೇಶ್ವರನ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ನಂಜನಗೂಡು ಮೊದಲಾದ ಕ್ಷೇತ್ರಗಳಿಗೆ ಯಾತ್ರೆ ಹೋಗಿ ಬರುವ ವಿಚಾರವು ಇಲ್ಲಿ ನಿರೂಪಿತವಾಗಿದೆ. ನಿರ್ಮಲ ಮನಸ್ಸಿನ ನೇಗಿಲಯೋಗಿ ಎನಿಸಿದ ರೈತನು ಸೃಷ್ಟಿಕರ್ತನಾದ ಭಗವಂತನ ವಿಷಯದಲ್ಲಿ ಹೇಗೆ ಸಮರಸಭಾವದಿಂದ ನಡೆದುಕೊಳ್ಳುತ್ತಾ ನೆಂಬುದನ್ನು ಇಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. 'ನಮ್ಮ ಊರಿನ ರಸಿಕರು' ಎಂಬ ಗ್ರಂಥದಲ್ಲಿ, ಶಾಲುಸಾಬಿಯ ನೇತೃತ್ವದಲ್ಲಿ ಹರಿಶ್ಚಂದ್ರನ ಬಯಲು ನಾಟಕವನ್ನು ಆಡಿದ ವಿಧಾನವನ್ನು ಕುರಿತು ಬರೆದಿರುವುದು ಅಯ್ಯಂಗಾರರು ಹುಟ್ಟು ರಸಿಕರೆಂಬುದಕ್ಕೆ ಸಾಕ್ಷಿಯಾಗಿದೆ. ಶಿವರಾತ್ರಿ ಎಂಬ ಗ್ರಂಥದಲ್ಲಿರುವ 'ಇಬ್ಬರು ಹೆಂಡಿರು', 'ಶಿವರಾತ್ರಿ', 'ಬಿಸಿಲ್ಗುದುರೆ' ಎಂಬ ಪ್ರಬಂಧಗಳೂ, 'ಗರುಡಗಂಬದ ದಾಸಯ್ಯ' ಎಂಬ ಗ್ರಂಥದಲ್ಲಿ 'ಹಾರುವಯ್ಯ ಹಜಾಮನಾದುದು', ಮತ್ತು 'ಹೇಮಾವತಿಯ ತೀರದಲ್ಲಿ' ಎಂಬ ಪ್ರಬಂಧಗಳು ವಿಶೇಷವಾಗಿ ಸಹೃದಯರು ಮೆಚ್ಚತಕ್ಕವಾಗಿವೆ.

"ಕವಿಯ ಮನೋಧರ್ಮ ಕಾವ್ಯದಲ್ಲಿ" (ಕವೇಃ ಕರ್ಮಂ. ಕಾವ್ಯಂ) ಎಂಬ ಹಿರಿಯರ ಮಾತೊಂದಿದೆ. ಶ್ರೀ ಅಯ್ಯಂಗಾರರ ಮನೋಧರ್ಮ, ಜೀವನಾದರ್ಶ ಮತ್ತು ಬಾಳಿನ ಗುಟ್ಟು ಗುಣಗಳನ್ನು ತಿಳಿಯಲು ಅವರು ಬರೆದಿರುವ ಗ್ರಂಥಗಳು ಸಾಧನವಾಗಿವೆ. ನಾನು ಅವರ ಎಲ್ಲ ಗ್ರಂಥಗಳನ್ನೂ ಓದಿಲ್ಲ. ಪ್ರತಿಯೊಂದು ಗ್ರಂಥವನ್ನೂ ಆದ್ಯಂತವಾಗಿ ಓದಿಲ್ಲ. ನನ್ನ ಪುಸ್ತಕಾಲಯದಲ್ಲಿ ಅವರ ಕೆಲವು ಗ್ರಂಥಗಳನ್ನು ಸಂಗ್ರಹಿಸಿದ್ದೇನೆ. ನನ್ನ ಬಿಡುವಿಲ್ಲದ ಕಾರ್ಯಕ್ರಮದಲ್ಲಿ ಯಾವ ಗ್ರಂಥವನ್ನಾದರೂ ಅಥೇತಿ ಪರ್ಯಂತವಾಗಿ ಓದುವುದು ಸಾಧ್ಯವಾಗುವುದಿಲ್ಲ. ಸ್ಥಾಲೀಪುಲಾಕನ್ಯಾಯದಂತೆ ಒಂದು ಗ್ರಂಥದ ಆದ್ಯಂತ ಭಾಗಗಳನ್ನು ಓದಿ, ಆ ಹೊತ್ತಗೆಯ ಬಗೆಗೆ ತೀರ್ಮಾನಕ್ಕೆ ಬರುವುದು ನನ್ನ ಸಂಪ್ರದಾಯ. ಆ ದಿಸೆಯಲ್ಲಿ ಜನಪ್ರಿಯ ಲೇಖಕರಾದ ಶ್ರೀ ಗೊರೂರರ ಗ್ರಂಥಗಳನ್ನು ಕುರಿತು ಇಲ್ಲಿ ಸಂಗ್ರಹವಾಗಿ ಹೇಳಿರುತ್ತೇನೆ.

ಶ್ರೀ ರಾಮಸ್ವಾಮಿ ಅಯ್ಯಂಗಾರರು ದೇಶಭಕ್ತಿಸಂಪನ್ನರೆಂದೂ, ಸ್ವಾತಂತ್ರ್ಯ ಸಾಧನೆಗಾಗಿ, ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದವರೆಂದೂ ನಾನು ತಿಳಿದಿದ್ದೇನೆ. ಅವರು ಬರೆದಿರುವ 'ಭಾರತ ಭಾಗ್ಯವಿಧಾತ' ಮತ್ತು 'ಸತೀ ಕಸ್ತೂರಿ ಬಾ' ಎಂಬ ಗ್ರಂಥಗಳು ಇದಕ್ಕೆ ಸಾಕ್ಷಿಯಾಗಿವೆ. ಅವರು ಬಹುಭಾಷಾ ವಿಶಾರದರೆಂಬುದಕ್ಕೆ ಅವರು ಬರೆದು ಪ್ರಕಟಿಸಿರುವ 'ಮಹದೇವ ದೇಸಾಯಿಯವರ 'ಕೃತಿಗಳು' 'ಕೊನಸ್ಟೈ ಕತೆಗಳು' 'ನಾಳೆ ನಾಡವರು' (ಟಾಲ್‌ಸ್ಟಾಯ್ ಗ್ರಂಥದ ಭಾಷಾಂತರ) ನಿದರ್ಶನವಾಗಿವೆ. ಅವರು ಬಹುಶ್ರುತರೆಂಬುದಕ್ಕೆ 'ಗರುಡಗಂಬದ ದಾಸಯ್ಯ', 'ಬೆಸ್ತರ ಕರಿಯ', 'ಶಿವರಾತ್ರಿ', 'ಹೇಮಾವತಿಯ ತೀರದಲ್ಲಿ', 'ಹಳ್ಳಿಯ ಚಿತ್ರಗಳು' ಮೊದಲಾದ ಗ್ರಂಥಗಳು ಸಾಕ್ಷಿಯಾಗಿವೆ. ಅವರು ಒಳ್ಳೆ ಕತೆಗಾರರೆಂಬುದಕ್ಕೆ ಅವರು ಬರೆದಿರುವ 'ಮೈಸ್ಯಾರಿ'. 'ಕನ್ಯಾಕುಮಾರಿ ಮತ್ತು ಇತರ ಕತೆಗಳು' ನಿದರ್ಶನವಾಗಿವೆ. ಅವರು ಗುರುಭಕ್ತಿಸಂಪನ್ನರೆಂಬುದಕ್ಕೆ 'ಜಗದ್ಗುರುಗಳ ದಿವ್ಯಬೋಧೆ' ಎಂಬುದು ನಿದರ್ಶನವಾಗಿದೆ. ಅವರು ಜಾನಪದ ಸಾಹಿತ್ಯದಲ್ಲಿ ಪರಿಣತರೆಂಬುದಕ್ಕೆ ಅವರು ಸಂಗ್ರಹಿಸಿ ಪ್ರಕಟಿಸಿರುವ 'ಹಳ್ಳಿಯ ಹಾಡುಗಳು' ಸಾಕ್ಷಿಯಾಗಿದೆ. ಅವರ ಸಾಹಿತ್ಯ ಪ್ರಿಯತೆಗೆ 'ಸಾಹಿತ್ಯ ಜೀವಾಳ' ಎಂಬ ಅವರ ಗ್ರಂಥವು ಒರೆಗಲ್ಲಾಗಿದೆ.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಜೀವನವನ್ನು ದೇಶಸೇವೆಗಾಗಿ, ಸಾಹಿತ್ಯಸೇವೆಗಾಗಿ, ಮೀಸಲು ಮಾಡಿ ಸಾರ್ಥಕ ಬಾಳನ್ನು ನಡೆಸಿದ್ದಾರೆ. ನಮ್ಮ ಘನ ಸರ್ಕಾರದವರು ಅವರ ಈ ತ್ಯಾಗವನ್ನು ಗೌರವಿಸಿ, ಅವರನ್ನು ವಿಧಾನ ಪರಿಷತ್ತಿಗೆ ಹನ್ನೆರಡು ವರ್ಷಕಾಲ ಸದಸ್ಯರನ್ನಾಗಿ ನೇಮಿಸಿ, ಅವರ ವಿದ್ವತ್ತನ್ನು ಗೌರವಿಸಿರುವುದು ನ್ಯಾಯವಾಗಿಯೇ ಇದೆ. ಶ್ರೀ ಗೊರೂರರು ಪ್ರಕೃತಿ ಸೌಂದರ್ಯವನ್ನು ಚೆನ್ನಾಗಿ ಗ್ರಹಿಸಿದ್ದಾರೆ. ಅದರಲ್ಲಿಯೂ ಗ್ರಾಮೀಣ ಜೀವನವನ್ನು ಅತ್ಯಂತ ಸೂಕ್ಷ್ಮ ದೃಷ್ಟಿಯಿಂದ ವಿಮರ್ಶಿಸಿದ್ದಾರೆ. ಅವರ ಭಾವನೆಯಲ್ಲಿ ಹೇಮಾವತಿಯು ಗಂಗಾನದಿಗೆ ಸಮಾನವಾದುದು. ಹೇಮಾವತಿ ಮತ್ತು ಯಗಚಿ ನದಿಗಳ ಸಂಗಮವು ಗಂಗಾ-

ಯಮುನಾ, ಕಪಿನಿ–ಕಾವೇರಿ, ತುಂಗಭದ್ರಾ, ಮತ್ತು ಕೃಷ್ಣ–ಮಲಪ್ರಭಾ ನದಿಗಳ ಸಂಗಮದಂತೆ ಸುಪ್ರಸನ್ನವಾದ ಸ್ಥಳ. ಅದು ಪರಮೇಶ್ವರನ ತಪ್ಪಸಿಗೆ ಅರ್ಹವಾದ ಸ್ಥಳ. ಹೇಮಾವತಿಯ ತೀರದ ತೋಪುಗಳು ಅವರಿಗೆ ಸ್ವರ್ಗದ ನಂದನವನಕ್ಕೆ ಸಮಾನ. ಗೊರೂರಿನ ಒಬ್ಬ ಸಾಮಾನ್ಯ ಮನುಷ್ಯನಲ್ಲಿಯೂ ಅವರು ಆತ್ಮೀಯಭಾವವನ್ನು ಹೊಂದಿದ್ದಾರೆ. ಅವನಲ್ಲಿ ದೈವಾಂಶವನ್ನು ಕಾಣುತ್ತಾರೆ. ಹೀಗೆ ಅವರು ಉತ್ತಮ ದೃಷ್ಟಿಯನ್ನೂ, ಹದವಾದ ಚಿತ್ತ ಸಂಸ್ಕಾರವನ್ನೂ ಒಳ್ಳೆಯ ಗುಣಗ್ರಾಹಗತಿಯನ್ನೂ ಅಳವಡಿಸಿಕೊಂಡಿರುವುದರಿಂದಲೇ ಅವರು ನಾಡಿನ ಉತ್ತಮ ಲೇಖಕರೂ ಗ್ರಂಥಕಾರರೂ ಆಗಿದ್ದಾರೆ.

ನಾವು ಭಾಗ್ಯಶಾಲಿಗಳು

ಸಿದ್ಧಯ್ಯ ಪುರಾಣಿಕ

ನಮ್ಮ ಹಿರಿಯ ಬರಹಗಾರರಲ್ಲೊಬ್ಬರೂ, ಕೀರ್ತಿವಂತ ಕನ್ನಡಿಗರೂ, ಪವಿತ್ರ ಜೀವನದ ಪುರಸ್ಕರ್ತರೂ, ನಿಸ್ಸೀಮ ಕನ್ನಡ ಭಕ್ತರೂ, ಸ್ನೇಹಪರರೂ, ಸಾತ್ವಿಕ ಶಿರೋಮಣಿಗಳೂ ಆದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಎಪ್ಪತ್ತು ತುಂಬುತ್ತಿರುವುದೂ, ಆ ಸಂದರ್ಭದಲ್ಲಿ ಅವರಿಗೆ ಗೌರವಗ್ರಂಥ ಸಮರ್ಪಿತವಾಗುತ್ತಿರುವುದೂ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಮರಣೀಯ ಸಂಗತಿ. ಕನ್ನಡದಲ್ಲಿ ಬರೆಯುವುದೇ ಅಗೌರವದ ಕೆಲಸವೆಂಬ ಭಾವನೆ ಪ್ರಚಲಿತವಾಗಿದ್ದ ಕಾಲದಲ್ಲಿ, ಕನ್ನಡದ ಬರವಣಿಗೆ ವೃತ್ತಿಯಾಗದೆ ಬರೆಯುವವರಿಗೆ ಕುತ್ತಾಗಿದ್ದ ಕಾಲದಲ್ಲಿ ಕನ್ನಡಿಗರಲ್ಲಿ ಕನ್ನಡ ಪುಸ್ತಕಗಳನ್ನು ಓದಬೇಕೆಂಬ ಅಭಿರುಚಿ ಉದ್ಭವಿಸುವಂತಹ ಕೃತಿಗಳನ್ನು ಬರೆದು, ತಮಗೆ ವೈಯಕ್ತಿಕವಾಗಿ ವಿಶೇಷ ಪ್ರಯೋಜನವಾವುದೂ ಆಗದಿದ್ದರೂ ಇಂದು ಕನ್ನಡಿಗರಲ್ಲಿ ಕನ್ನಡ ಸಾಹಿತ್ಯದ ವಾಚನಾಭಿರುಚಿ ಸಾಸಿರ ಪಾಲು ಬೆಳೆದಿರುವುದನ್ನು ನೋಡುತ್ತಿರುವ ಭಾಗ್ಯಶಾಲಿಗಳು ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು: ಅವರನ್ನು ಇನ್ನೂ ನಮ್ಮ ಮಧ್ಯದಲ್ಲಿ ಕಾಣುತ್ತಿರುವ ಭಾಗ್ಯಶಾಲಿಗಳು ನಾವು.

ಹೂ ತನ್ನ ಸುಗಂಧವನ್ನು ಸುತ್ತು ಹರಡುತ್ತದೆ—ತುಂಬಿಗಳನ್ನು ತಮ್ಮಟೆ ಹೊಡೆದು ಕರೆಯುವುದಿಲ್ಲ: ದೀಪ ತನ್ನ ಪ್ರಕಾಶವನ್ನು ಸುತ್ತು ಪಸರಿಸುತ್ತದೆ–ಶಲಭಗಳಿಗೆ ಕರೆಯೋಲೆ ಕಳಿಸಿ ಕರೆಸುವುದಿಲ್ಲ. ಅಂತೆಯೇ ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಸುಗಂಧಯುಕ್ತ, ಪ್ರಕಾಶಮಾನ, ಸುಮಧುರ ಸಾಹಿತ್ಯ ಕೃತಿಗಳನ್ನು ರಚಿಸಿದರು. ಅವುಗಳ ಪರವಾಗಿ ಪ್ರಚಾರ ಕಾರ್ಯ ಕೈಕೊಳ್ಳಲಿಲ್ಲ: ಕೈಕೊಳ್ಳುವ ಅಗತ್ಯವೂ ಇರಲಿಲ್ಲ. ಕೈಕೊಳ್ಳದಿದ್ದರೂ ಅವರ ಕೃತಿಗಳಿಗೆ ಬೇಡಿಕೆ ಕಡಿಮೆಯಾಗಲಿಲ್ಲ. ಪ್ರಚಾರದ ಕಟ್ಟಿಗೆಯ ಕುದುರೆಯನ್ನೇರಿ ಪ್ರತಿಭೆಯ ಪೈಪೋಟಿಯಲ್ಲಿ ಗೆಲ್ಲಬೇಕೆಂಬ ಹುಚ್ಚು ಹವ್ಯಾಸವನ್ನಿಂಪಿ

ಕೊಂಡವರು ಶ್ರೀ ಗೊರೂರರ ನೇರದಾರಿಯತ್ತ ತಿರುಗುವುದು ಶ್ರೇಯಸ್ಕರವೆನಿಸೀತು.

ಪುಟಪೂರಣ ವಿದ್ಯೆ ಪ್ರಚುರಗೊಳ್ಳುತ್ತಿದೆ ಇತ್ತೀಚೆಗೆ. ಏನಾದರೂ ಬರೆದು ಪುಟ ತುಂಬುತ್ತ ಹೋಗುವುದು, ಪುಸ್ತಕ ಪ್ರಕಟಿಸುತ್ತ ಹೋಗುವುದು, ಸಂಖ್ಯೆ ಬೆಳೆಸುತ್ತ ಹೋಗುವುದು. ಇನ್ನಾವ ಕ್ಷೇತ್ರದಲ್ಲಾದರೂ ಇದ್ದೀತು, ಸಾಹಿತ್ಯದಲ್ಲಿ ಮಾತ್ರ ಕೇವಲ ಸಂಖ್ಯೆಗೆ ಬೆಲೆಯಿಲ್ಲ. ಸತ್ವಕ್ಕೆ ಬೆಲೆಯಿದೆ, ಸಂಖ್ಯೆಗಲ್ಲ. ಸಂಖ್ಯೆ, ಸತ್ವಗಳೆರಡರಲ್ಲಿಯೂ ವಿಕ್ರಮ ಮೆರೆವವರೂ ಇಲ್ಲದಿಲ್ಲ. ಅಂಥವರ ಹುಟ್ಟು ಆಗೊಮ್ಮೆ, ಈಗೊಮ್ಮೆ. ಉಳಿದವರು ಸಂಖ್ಯೆಯನ್ನು ಮರೆತು ಸತ್ವದತ್ತ ಗಮನವಿತ್ತರೆ ಹೊತ್ತಿಗೆ ತುತ್ತಾಗದೆ ನಾಲ್ಕು ಕಾಲ ನಿಲ್ಲಬಲ್ಲ ಕೆಲವು ಕೃತಿಗಳನ್ನಾದರೂ ರಚಿಸಬಲ್ಲರು. ಇದೂ ನಾವು ಶ್ರೀ ಗೊರೂರರಿಂದ ಕಲಿಯಬೇಕಾದ ಪಾಠ.

ಇನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಸಾಹಿತ್ಯ ರಚನೆಯಲ್ಲಿಯೂ ಸಮಾನ ಸ್ಥಾನಗಳಿಸಿದ ಅವರ ವ್ಯಕ್ತಿತ್ವದ ಬಗ್ಗೆ ಏನು ಹೇಳುವುದಿದೆ? ಇದೊಂದು ವಿರಳ ಸಂಯೋಗ, ಅಸಾಧಾರಣ ಸಾಧನೆ—ಎಂದು ಮಾತ್ರ ಹೇಳಿ ವಿರಮಿಸಬೇಕಾಗಿದೆ. ಕನ್ನಡ ತಾಯಿ ಅವರನ್ನು ಶತಾಯುಗಳನ್ನಾಗಿ ಮಾಡಲಿ, ಅವರಿಗೆ ಆಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನು ನೀಡಲಿ !

ಒಂದು ಸವಿನೆನಪು

ಕೆ. ಎಸ್. ನರಸಿಂಹಸ್ವಾಮಿ

ನಾನು ವಿದ್ಯಾರ್ಥಿಯಾಗಿದ್ದ ಕಾಲದಲ್ಲೇ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕೆಲವು ಲೇಖನಗಳನ್ನು ಓದಿದ್ದೆ. ಹಳ್ಳಿಯ ಚಿತ್ರಗಳನ್ನು ಹಳ್ಳಿಯ ಮಾತಿನಲ್ಲೇ ಸರಸವಾಗಿ ಮೂಡಿಸುವುದರಲ್ಲಿ ಅವರಿಗಿರುವ ಅಸಾಮಾನ್ಯ ಕೌಶಲಕ್ಕೆ ಬೆರಗಾಗಿದ್ದೆ.

ಆದರೂ ಅವರನ್ನು ಕಂಡದ್ದು ೧೯೩೭ರಲ್ಲಿ, ಶ್ರೀ ಪುತಿನ ಅವರ ಕೃಪೆಯಿಂದ. ಅದು ನಡೆದದ್ದು ಹೀಗೆ: ಆ ವರುಷದಲ್ಲೊಂದು ದಿನ ಪುತಿನ ಮತ್ತು ಗೊರೂರರೊಂದಿಗೆ ಶಿವಗಂಗೆಗೆ ಹೋಗುವ ಸುಯೋಗ ನನಗೆ ಒದಗಿತು. ಮೂವರೂ ಅಲ್ಲಿಗೆ ಹೋದೆವು: ಬಿಸಿಲಿನಲ್ಲಿ ಬೆಟ್ಟ ಹತ್ತಿದೆವು; ತುದಿಬಂಡೆಯನ್ನು ಬಳಸಿ ಬಂದದ್ದಾಯಿತು. ಮೈ ಬೆವರಿತು. ಗಾಳಿ ಜೋರಾಗಿ ಬೀಸುತ್ತಿತ್ತು. ನಾನೂ ಪುತಿನ ಬಂಡೆಯೊಂದರ ನೆರಳಲ್ಲಿ ಕೂತೆವು: ನನ್ನ ಹಸ್ತಪ್ರತಿಯನ್ನು ಎತ್ತಿಕೊಂಡು ಪುತಿನ ಕೆಲವು ಪದ್ಯಗಳನ್ನು ಓದುತ್ತಿದ್ದರು. ನನ್ನಿಂದಲೂ ಒಂದೆರಡನ್ನು 'ಹಾಡಿಸಿದರೂ', ಬೆನ್ನುತಟ್ಟಿದರು. ಕಾವ್ಯಮಗ್ನರಾಗಿದ್ದ ನಮ್ಮನ್ನು ನೋಡಿ ನಗುತ್ತ ಗೊರೂರರು ಎಲ್ಲಿಗೋ ಹೋಗಿ ಪಾತ್ರೆ ಸಾಟಿ ತಂದು, ತರಕಾರಿ ಹೆಚ್ಚಿ, ಒಲೆ ಹೂಡಿದರು. ಹೊಗೆಯನ್ನು ಕಂಡು ನಮಗೆ ಇನ್ನಷ್ಟು ಹಸಿವಾಯಿತು. ಸ್ವಲ್ಪ ಹೊತ್ತಿನ ಮೇಲೆ ಗೊರೂರರು ಮತ್ತೆ ನಗುತ್ತ ಬಂದು "ನಮ್ಮೂರು ಚೆಂದವೋ" ಎಂದು ತಾವೂ ದನಿಯೆತ್ತಿ, "ಅಡುಗೆ ಸಿದ್ಧವಾಗಿದೆ, ಬನ್ನಿ! ಬನ್ನಿ!" ಎಂದು ಕರೆದರು. ನನಗೆ ಆಗ ಎಷ್ಟು ಸಂತೋಷವಾಯಿತೆನ್ನುವುದನ್ನಾಗಲೀ, ಅಂದಿನ ಊಟದ ರುಚಿಯನ್ನಾಗಲೀ ನಾನು ವರ್ಣಿಸಲಾರೆ. ಒಂದಂತೂ ನಿಜ : ಅವರ ಹದ ವಿಶಿಷ್ಟ ರೀತಿಯದು ; ಆ ಹದ, ಆ ನಗೆ ಅವರ ಲೇಖನಗಳಲ್ಲೂ ಸುಳಿಯುತ್ತವೆ ; ಪರಿಶುದ್ಧವಾದ, ಧಾರಾಳವಾದ, ಸರಳವಾದ ನಗೆ.

ಒಂದು ಸವಿನೆನಪು

ಹಿರಿಯ ಸಾಹಿತಿಯೂ, ಸ್ವಾತಂತ್ರ್ಯದ ಹೋರಾಟಗಾರರೂ ಆದ ನಮ್ಮ ಗೊರೂರು ರಾಮಸ್ವಾಮಿ ಅಯ್ಯಂಗಾರರು ಎಪ್ಪತ್ತನೆಯ ವಯಸ್ಸಿಗೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಈ ಸವಿ ನೆನಪಿನ ನನ್ನ ಕಿರಿಯ ಕಾಣಿಕೆಯು ಗೌರವ ಪುರಸ್ಸರ ಅರ್ಪಣೆ. ನನ್ನ ನಮಸ್ಕಾರಗಳೊಡನೆ.

ಸಾಹಿತ್ಯ ಗೊಮ್ಮಟ

ನಿರಂಜನ

೧೯೩೫ ಅಂತ ಕಾಣುತ್ತದೆ. ಪುತ್ತೂರಿನಲ್ಲಿ ಕಾರಂತರ ವೈಭವದ ದಸರೆ. ಸುಮಾರು ಹನ್ನೊಂದು ಹನ್ನೆರಡರ ಹುಡುಗನಾಗಿದ್ದ ನನಗೆ ಬಾಹ್ಯ ಜಗತ್ತಿನ ಮೊದಲ ಮಾಯಾ ನಗರಿ ಆ ಊರು. ಅಲ್ಲಿಗೆ ಹೋಗಿದ್ದೆ ಮುಖ್ಯೋಪಾಧ್ಯಾಯರಿಗೆ ಅಂಟಿಕೊಂಡು.

ಹಗಲು ಕಲರವ, ಅರ್ಥವಿಲ್ಲದ ಓಡಾಟ. ಸಂಜೆ ಉಪನ್ಯಾಸ—ಒಂಟಿ ಅಥವಾ ಜೋಡಿ. ರಾತ್ರಿ ವಿವಿಧ ವಿನೋದಾವಳಿ. ಒಟ್ಟು, ಸರಸ್ವತಿಯ ಹೆಸರಲ್ಲಿ ಮರುಳು ಜಾತ್ರೆ.

ಒಂದು ಸಂಜೆ ಕಿಕ್ಕಿರಿದ ಸಭಾ ಭವನದಲ್ಲಿ ಭಾಷಣ. ಮೇಜಿನ ಮೇಲೆ ಪೆಟ್ರೊಮ್ಯಾಕ್ಸ್ ದೀಪ. ಅಧ್ಯಕ್ಷರು ಯಾರೊ? ಇದ್ದರೊ, ಇಲ್ಲವೊ? ಅಡ್ಡಪಂಚೆ ಉಟ್ಟು, ನೀಳ ಜುಬ್ಬದ (ಬಿಳಿ. ಬಿಳಿ), ನುಣುಪುಗೊಳಿಸಿದ ತಲೆಯ (ಹಿಂದೆ ಪಿಳ್ಳಂಜುಟ್ಟು ಅಥವಾ ಸಾಲ್ಕಾರು ಗಾಂಧಿ ಕೂದಲು ?) ಉಪನ್ಯಾಸಕಾರ. ತುಸು ತೆಳ್ಳಗೆ ಎತ್ತರದ ದೇಹ. ಅವರು ಒಂದೇ ಸಮನೆ ಮಾತನಾಡುತ್ತಿದ್ದರು; ಜನ ಮೌನವಾಗಿ ಕೇಳುತ್ತಿದ್ದರು.

ಎಷ್ಟು ಹೊತ್ತಾಯಿತೊ ಹಾಗೆ? ಒಮ್ಮೆಲೆ ಮಾತು ನಿಂತಿತು. ಉಪನ್ಯಾಸಕಾರರ ನಡು ಬಾಗಿತು. ಒಂದು ಕೈ ಅಡ್ಡಪಂಚೆಯ ಒಂದು ತುದಿಯನ್ನೆತ್ತಿತು. ಬೆವರು ಮುತ್ತಿದ್ದ ಮುಖವನ್ನು ಅವರು ಒರೆಸಿಕೊಂಡರು, ಯಾವ ಅವಸರವೂ ಇಲ್ಲದೆ. ಪಂಚೆಯನ್ನು ಇಳಿ ಬಿಟ್ಟು ತಲೆಯೆತ್ತಿ ನೆಟ್ಟಗೆ ನಿಂತರು. ಭಾಷಣ ಮುಂದುವರಿಯಿತು.

ಸಂಸ್ಕೃತಿಯೊಂದಿಗೆ ನಾಗರಿಕತೆಯೂ ಕುಳಿತಿತ್ತು ಆ ಸಭೆಯಲ್ಲಿ. ಕಾಲು ಕಾಣಿಸುವಂತೆ ಪಂಚೆ ಎತ್ತಿ ಮುಖ ಒರೆಸಿಕೊಳ್ಳುವುದೆ? ಆದರೆ ಇದನ್ನು ಅರ್ಥ ಮಾಡಿಕೊಳ್ಳುವ ಸಹೃದಯತೆಯೂ ಅಲ್ಲಿತ್ತು. ನನ್ನ ಹತ್ತಿರದಿಂದ ಯಾರೋ ಒಬ್ಬರೆಂದರು:

“ಎಂಥ ಸರಳ ಮನುಷ್ಯ !”

ಆ ಸಂಜೆಯ ವಿಷಯ ನನ್ನ ಮನಸ್ಸಿನಲ್ಲಿ ಮೂಡಿರುವುದು ಇಷ್ಟೆ :

ಉಪನ್ಯಾಸಕಾರರು ಗೊರೂರು ರಾಮಸ್ವಾಮಿ ಅಯ್ಯಂಗಾರ್; ಅವರದು ನಯ ನಾಜೂಕಿಲ್ಲದ ಸರಳತೆ; ಇತರರಿಗಿಂತ ಭಿನ್ನವಾದ ವ್ಯಕ್ತಿತ್ವ.

* * *

‘ನಾನು’ ಬೆಳೆಯುತ್ತಿದ್ದ ವೇಳೆ. ‘ಹಳ್ಳಿಯ ಚಿತ್ರಗಳು’ ಓದಲು ದೊರೆಯಿತು. ಸರಳ ಮನುಷ್ಯ ರಚಿಸಿದ ಕಲಾಕೃತಿ.

ಎಂಥ ಚಿತ್ರಮಾಲೆ !

ಓದಿ ವರ್ಷಗಳೇ ಸಂದಿವೆ. ಆದರೂ, ಹೇಮಾವತಿಯಲ್ಲಿ ಪ್ರವಾಹ ಬಂದ ಚಿತ್ರವನ್ನು ಸ್ಮರಿಸಿಕೊಂಡು ಈಗಲೂ ಮೈ ಜುಮ್ಮೆನ್ನುತ್ತದೆ.

* * *

೧೯೪೫. ಮಂಗಳೂರಿನ ವಾಸ ಮುಗಿಸಿ ಬೆಂಗಳೂರಿಗೆ ಬಂದಿದ್ದೆ, ಪತ್ರಿಕೋದ್ಯೋಗಿಯಾಗಿ. ‘ಪ್ರಜಾಮತ’ ಪತ್ರಿಕೆಯಲ್ಲಿ ದುಡಿಮೆ (ಖ್ಯಾತ ಪತ್ರಿಕೋದ್ಯಮಿ ಬಿ. ಎನ್. ಗುಪ್ತರ ಹಿರಿತನ). ಆ ಸಾಪ್ತಾಹಿಕಕ್ಕೆ ನಾನು ‘ಹೆಸರಿಲ್ಲದ’ ಸಂಪಾದಕ.

ಆ ಸಂದರ್ಭದಲ್ಲಿ, ಹೆಸರಾಂತ ಸಾಹಿತಿ ಗೊರೂರರ ಹೆಚ್ಚಿನ ಪರಿಚಯವಾಯಿತು ನನಗೆ.

ಆ ವೇಳೆಗೆ ಅವರು ತುಸು ಮೈತುಂಬಿದ ಗೊಮ್ಮಟ. ಮಾಂಸಖಂಡಗಳ ಬಗೆಗೆ ವಿಶೇಷ ಗಮನ ನೀಡಿದ್ದರೆ ವಿಶ್ವ ಕ್ರೀಡಾಂಗಣದಲ್ಲಿ ಮೆರೆಯುತ್ತಿದ್ದರೇನೋ. ಹತ್ತು ವರ್ಷಗಳಿಗೆ ಹಿಂದೆ ನನಗೆ ಪರಿಚಿತವಾಗಿದ್ದ ಸರಳತೆಯೇ ಈಗಲೂ. ಆದರೆ ಅವರ ವ್ಯಕ್ತಿತ್ವದ ಆಳ ಮಾತ್ರ ನುರಿತ ಮುಳುಗುಗಾರರ ಅರಿವಿಗೇ ಮೀಸಲು.

ಗೊರೂರರ ಸಾಹಿತ್ಯ ಮುಖ ಒಂದು; ರಾಜಕೀಯ ಮುಖ ಇನ್ನೊಂದು. ಆದರೆ ವಾಸ್ತವವಾಗಿ ಅವರ ಬದುಕಿನಲ್ಲಿ ಅವೆರಡೂ ಒಮ್ಮುಖಗೊಂಡದ್ದು, ಒಂದು ವಿಶೇಷ.

ಆ ನಾಲ್ಕೈದು ವರ್ಷಗಳಿಂದ ಸಣ್ಣ ಕತೆಗಳನ್ನು ಬರೆಯತೊಡಗಿ ಪ್ರಗತಿಶೀಲತೆಯ ಗುರುತು ಚೀಟಿಯನ್ನು ಗಳಿಸಿಕೊಂಡಿದ್ದೆ. ಕೆಲವು ಕತೆಗಳನ್ನು ಕಲೆಹಾಕಿ ಅಚ್ಚಿಗೆ ಕೊಟ್ಟೆ. ಇಂಡಿಯನ್ ನ್ಯಾಷನಲ್ ಆರ್ಮಿಯನ್ನು (ಐ.ಎನ್.ಎ.) ಕುರಿತ ಒಂದು ಕತೆ ಆ ಸಂಗ್ರಹದಲ್ಲಿತ್ತು. ಪುಸ್ತಕಕ್ಕೆ ‘ಅಯ್ಯನ್ಯೈ’ ಎಂದು ಹೆಸರಿಟ್ಟೆ.

ಕಥಾ ಸಂಕಲನ ಮೋದಿ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದಾಗ ಗೊರೂರರು ಅಲ್ಲಿಗೆ ಬಂದರು. ತಮ್ಮದೊಂದು ಪುಸ್ತಕದ ಮುದ್ರಣದ ಏರ್ಪಾಟಿಗೆ ಬಂದಿದ್ದರೆಂದು ನೆನಪು.

“ಅಯ್ಯನ್ಯೈ ಎಂದರೇನು ?” ಎಂದು ಕೇಳಿದರು.

ವಿವರಿಸಿದೆ.

“ಬೇಡಿ—ಅರ್ಥವಾಗದ ಹೆಸರು ಬೇಡಿ” ಎಂದು ಸಲಿಗೆಯ ಸಲಹೆ ಕೊಟ್ಟರು.

ಆ ವೇಳೆಗಾಗಲೇ 'ತ್ರಿಪ್ರಸ್ಥ' ಹೆಸರು ಹೊತ್ತ ಪ್ರತಿಗಳು ಅಚ್ಚಾಗಿದ್ದುವು. ಬದಲಾವಣೆ ಸಾಧ್ಯವಾಗಲಿಲ್ಲ.

ಮುಂದೆ ೧೯೮೭ರಲ್ಲಿ ಆ ಸಂಗ್ರಹದ ಪುನರ್ಮುದ್ರಣ ಅಗತ್ಯವಾಯಿತು. ಆಗ ಗೊರೂರರನ್ನು ಸ್ಮರಿಸಿಕೊಂಡು, ಆ ಸಂಕಲನಕ್ಕೆ 'ಸಂಧಿಕಾಲ' ಎಂದು ಹೆಸರಿಟ್ಟೆ.

* * *

ದೇಶ ಸ್ವತಂತ್ರವಾಗಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಚಳವಳಿ ತೀವ್ರವಾದಾಗ ನಾನು ಹುಬ್ಬಳ್ಳಿಯಲ್ಲಿದ್ದೆ—ಕಮ್ಯೂನಿಸ್ಟ್ ಸಾಪ್ತಾಹಿಕ 'ಜನಶಕ್ತಿ'ಯ ಸಂಪಾದಕನಾಗಿ.

ಆ ದಿನಗಳಲ್ಲಿ ನಾನು ಓದಿದ ವಾರ್ತೆಯೊಂದು ತುಂಬ ಕಹಿಯಾಗಿತ್ತು.

ಅದು, ಗೊರೂರರ ಚಿರಂಜೀವ ಪೋಲೀಸರ ಗುಂಡಿಗೆ ಬಲಿಯಾದ—ಎಂಬುದು.

ಆ ವರ್ಷದ ಕೊನೆಯಲ್ಲಿ ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಅದರ ಜೊತೆಯಲ್ಲೇ ಕರ್ನಾಟಕ ಏಕೀಕರಣ ಸಮ್ಮೇಳನವೂ ಸೇರಿತು. ಮೈಸೂರು ಅರಸೊತ್ತಿಗೆಯ ವಿರುದ್ಧ ಆಕ್ರೋಶದ ಭಾಷಣಗಳಾದುವು. ಮೈಸೂರು ಅರಸರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸ್ಥಾಪನೆಯಾಗಲಿ ಎಂಬ ವಾದಕ್ಕೆ ತೀವ್ರ ವಿರೋಧ ವಿತ್ತು, ಸ್ವಲ್ಪ ಬೆಂಬಲವೂ ಇತ್ತು.

ಅದನ್ನು ಬೆಂಬಲಿಸಿ ಮಾತನಾಡಿದವರಲ್ಲೊಬ್ಬರು ಗೊರೂರು ರಾಮಸ್ವಾಮಿ ಅಯ್ಯಂಗಾರ್. ಅವರ ಪಾಲಿಗೆ ವೈಯಕ್ತಿಕ ಕೊರಗು ಬೇರೆ, ಸಾರ್ವಜನಿಕ ನಿಲುವು ಬೇರೆ!

ಗೊರೂರಿನ ಗೊಮ್ಮಟನಿಗಿಂದು ಎಪ್ಪತ್ತು ತುಂಬಿದೆ. "ತೇರನೆಳೆಯೋಣ. ಬನ್ನಿ."

ದೂರದ ನೋಟವೂ ಸೊಗಸಿನದೇ. ಆದರೆ ನನ್ನ ಬಳಿ ಬದುಕಿನ ದಾರಿಯುದ್ದಕ್ಕೂ ಕಲೆ ಹಾಕಿದ ಗೊರೂರು ಸುರಗಿ ಕೆಲವಿವೆ. ಇವನ್ನು ನಾನು ಅವರಿಗೆ ಅರ್ಪಿಸಬೇಕು.

ಗೌರವಪೂರ್ವಕ ವಂದನೆ

ಚೆನ್ನವೀರ ಕಣವಿ

"ನನ್ನ ವೇಷವೇನೊ ಸ್ವಲ್ಪಮಟ್ಟಿಗೆ ಜಾಗಟೆ ಜೋಳಿಗೆಯ ಗುರುವಿಗೆ ಸಮಾನವಾಗಿಯೇ ಇದ್ದಿತು. ಮಾಸಿದ ಒಂದು ಬಿಳಿಯ ಖಾದಿ ಪಟ್ಟೆ, ಮಿತಿಮೀರಿ ಬೆಳೆದ ದೇಹಕ್ಕೆ ಬಿಗಿಯಾಗಿ ಮೇಲಕ್ಕಾಗಿದ್ದ ಒಂದು ಅಂಗಿ ಅವರ ಮೇಲೆ ಹೊದೆದುಕೊಂಡಿದ್ದ ಕೊಳೆಯಾದ ಅಂಗವಸ್ತ್ರ. ಹೆಗಲ ಮೇಲೆ ನೇತಾಡುತ್ತಿದ್ದ ಅದರ ತುದಿಯಲ್ಲಿ ಕಟ್ಟಿದ್ದ ಸೌತೆಕಾಯಿಯ ಗಂಟು. ವೈದಿಕರಾದ ನಮ್ಮ ತಂದೆಯವರು ಬೆಂಗಳೂರಿಗೆ ಬರುವ ರೆಂದು ವದಂತಿ ಇದ್ದುದರಿಂದ ಮುಖಕ್ಷೌರ ಮಾಡಿಸದೆ ಬೆಳೆಸಿದ್ದ, ಚೂಪಾದ, ಅರ ದಂತಿದ್ದ ಕರಿಯ ಗಡ್ಡ, ಇವು ಆಗಿನ ನನ್ನ ವೇಷದ ಕೆಲವು ವೈಚಿತ್ರ್ಯಗಳು." 'ಗರುಡ ಗಂಬದ ದಾಸಯ್ಯ' ಪ್ರಬಂಧದಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ವೇಷವನ್ನು ಬಣ್ಣಿಸಿಕೊಂಡಿರುವ ರೀತಿಯನ್ನು ನೋಡಿದರೆ ಅವರೆಂಥ ನಿರ್ಮಲ ಹಾಸ್ಯಗಾರರೆಂಬುದು ತಟ್ಟನೆ ಹೊಳೆಯುತ್ತದೆ. ಅವರ ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ ಶ್ರೀ ಬೇಂದ್ರೆಯವರು 'ಈ ನಾಡ ದಾಸಯ್ಯನೆದಿರು ನನ್ನ ಮುನ್ನುಡಿ ಶಂಖ ಊದುವದೇಕೆ ?' ಎಂದು ಕೇಳಿರುವುದು ಸಹಜವೇ ಆಗಿದೆ.

ಇವರ 'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು' ಮೊದಲಾದ ಕೃತಿಗಳನ್ನು ನಾನು ಹಾಯ್‌ಸ್ಕೂಲಿನಲ್ಲಿದ್ದಾಗಲೆ ಓದಿ, ಇತರರಿಗೂ ಓದಿ ತೋರಿಸಿ ಸಂತೋಷ ಪಟ್ಟಿದ್ದೆ. ನಾನೂ ಹಳ್ಳಿಯಿಂದಲೇ ಬಂದವನಾದುದರಿಂದ ಅವರ ಕೃತಿಗಳು ನನಗೆ ವಿಶೇಷ ಆಕರ್ಷಣೆಯನ್ನೊದಗಿಸಿದ್ದವು. ವಿದ್ಯಾರ್ಥಿದೆಸೆಯಿಂದಲೂ, ನಾನು ಅವರನ್ನು ನೋಡಬೇಕು, ಸಾಧ್ಯವಾದರೆ ಮಾತನಾಡಿಸಬೇಕು ಎಂದು ಬಯಸಿದ್ದೆ. ಆದರೆ ಆಶ್ಚರ್ಯದ ಮಾತೆಂದರೆ ನಾನು ಅವರನ್ನು ಪ್ರತ್ಯಕ್ಷವಾಗಿ ಕಂಡದ್ದು ತೀರ ಇತ್ತೀಚೆಗೆ, ೧೯೬೬ನೆಯ ಡಿಶಂಬರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ

ಸಮಾರಂಭಗಳ ಅಂಗವಾಗಿ ಮಾನಸಗಂಗೋತ್ರಿಯಲ್ಲಿ ನಡೆದ ಕನ್ನಡ ಲೇಖಕರ ಸಮ್ಮೇಳನದ ಕಾಲಕ್ಕೆ. ಕನ್ನಡ ಜನಪದ ಸಾಹಿತ್ಯ ಗೋಷ್ಠಿಯಲ್ಲಿ 'ಗಾದೆಗಳು, ಒಗಟಿಗಳು' ಎಂಬ ವಿಷಯವನ್ನು ಕುರಿತು ಅವರು ಅಂದು ಸಾದರಪಡಿಸಿದ ಪ್ರಬಂಧವನ್ನು ನಾನು ತುಂಬ ಮೆಚ್ಚಿಕೊಂಡೆ. ಆಗಲೂ ಅವರೊಡನೆ ವಿಶೇಷ ಮಾತುಕತೆಯಾಡುವ ಪ್ರಸಂಗ ಒದಗದೆ ಪರಿಚಯ ಬೆಳೆಯಲಿಲ್ಲ. ಆದರೆ ತಮ್ಮ ಸಾಹಿತ್ಯಕೃತಿಗಳ ಮೂಲಕ ಅವರು ನನಗೆ ಎಂದೋ ಆತ್ಮೀಯರಾಗಿದ್ದಾರೆ.

'ಹಳ್ಳಿಯ ಹಾಡುಗಳ'ನ್ನು ಸೊಗಸಾಗಿ ಸಂಗ್ರಹಿಸಿಕೊಟ್ಟ ಗೊರೂರರವರ ಸಾಹಿತ್ಯ ಸೃಷ್ಟಿಗೆ ಅವರ ಜಾನಪದ ಪ್ರಜ್ಞೆ ಮುಖ್ಯ ಪ್ರೇರಣೆಯಾಗಿರುವುದನ್ನು ಕಾಣುತ್ತೇವೆ. ಪ್ರಬಂಧ, ಚಿತ್ರ, ವ್ಯಕ್ತಿಚಿತ್ರ, ಸಣ್ಣಕಥೆ, ದೊಡ್ಡಕಥೆ, ಕಾದಂಬರಿ ಹೀಗೆ ಯಾವ ಪ್ರಕಾರದಲ್ಲಿ ಕೈಹಾಕಿದರೂ ಅಲ್ಲಿ ಈ ಸತ್ತ್ವ ತಲೆಯೆತ್ತಿ ನಿಂತಿದೆ. ನಮ್ಮ ನಾಡಿನ ಜಾನಪದ ಜೀವನವನ್ನು ಪ್ರೇಮಾದರಗಳಿಂದ, ಸ್ಫೂರ್ತಿ ಸಹಾನುಭೂತಿಗಳಿಂದ ರಮ್ಯವಾಗಿ ರಸವತ್ತಾಗಿ ಕಣ್ಣಮುಂದೆ ಕಟ್ಟುವಂತೆ ಚಿತ್ರಿಸಿ ಇವರು ಕೃತಾರ್ಥರಾಗಿದ್ದಾರೆ. ಕಥೆಯನ್ನು ಹೇಳಿದ ಹಾಗೆ ಪ್ರಬಂಧವನ್ನು ರೂಪಿಸಿದ್ದಾರೆ. ಪ್ರಬಂಧಕ್ಕೆ ತನ್ನದೇ ಆದ ಕಥೆಯಿರುವುದನ್ನು ಕಾಣಿಸಿದ್ದಾರೆ. ಗಂಭೀರವಾದ ವಸ್ತುವನ್ನಾರಿಸಿಕೊಂಡು ಚೆಲುವಾದ, ಹಿತವಾದ ವರ್ಣನೆಯಿಂದ, ನೈಜವಾದ ಪಾತ್ರ ಸೃಷ್ಟಿಯ ಮೂಲಕ ತಮ್ಮ ಲೋಕಜ್ಞಾನಸಂಪತ್ತನ್ನು ಸೂರೆಗೊಂಡು ಬೋಧಪ್ರದವಾಗುವಂತೆ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಅನುವಾದಿತ ಕೃತಿಗಳೂ ತಮ್ಮದೇ ಆದ ಬೆಡಗನ್ನು ಪಡೆದಿರುತ್ತವೆ. ಕೈಗೆ ತೆಗೆದುಕೊಂಡರೆ ಓದಿ ಮುಗಿಸಿಯೇ ಬಿಡುವಷ್ಟು ಸ್ವಾರಸ್ಯಪೂರ್ಣವಾದ, ಸ್ವಂತ ವ್ಯಕ್ತಿತ್ವದ ಮೆರುಗನ್ನು ಪಡೆದ ಬರೆವಣಿಗೆ ಇವರದು. ಸಾಹಿತ್ಯ ಪ್ರಪಂಚದಲ್ಲಿ ಅದರಲ್ಲೂ ಹಾಸ್ಯದ ಕ್ಷೇತ್ರದಲ್ಲಿ ಅವರು ಗೈದ ಗೈಮೆ, ನೀಡಿದ ಕಾಣಿಕೆ ವಿಶಿಷ್ಟವಾದದ್ದು. ಕನ್ನಡಿಗರು ಕೃತಜ್ಞತೆಯಿಂದ ನೆನೆಯಬೇಕಾದದ್ದು.

ಗೊರೂರರವರ ಹಾಸ್ಯಕ್ಕೆ ಅವರದೇ ಆದ ಮೆರುಗಿದೆ. ನವಿರಾಗಿ, ಯಾವ ಮನಸ್ಸನ್ನೂ ನೋಯಿಸದೆ, ಗುಣದೋಷಗಳನ್ನು ವ್ಯಂಗ್ಯಸರಣಿಯಲ್ಲಿ, ಕಟಕಿಯ ಮಾತಿನಲ್ಲಿ ಉಪಾಯವಾಗಿ ಎತ್ತಿ ತೋರಿಸಿದಾಗಲೂ ಅದು ಮನಸ್ಸಿನಲ್ಲಿ ಪ್ರಿಯವಾಗಿ ಉಳಿಯುವಂತೆ ಮಾಡುವುದು ಅವರ ಕಲಾವೈಶಿಷ್ಟ್ಯ. ಅವರ ತಿಳಿಹಾಸ್ಯದ ಹೇಮಾವತಿಯಲ್ಲಿ ಮಿಂದು ಮನಸ್ಸಿನ ಕೊಳೆಯನ್ನು ತೊಳೆದುಕೊಳ್ಳದ ಕನ್ನಡಿಗ ಹತಭಾಗ್ಯನೆಂದೇ ಹೇಳಬೇಕು. "ಭಾವನೆಯ ಉನ್ನತ ಸ್ಥಾನಗಳಲ್ಲಿ ಕುಳಿತು ಓದುವವರನ್ನು ಜೊತೆಯಲ್ಲಿ ಕರೆದುಕೊಂಡು ಅವರಿಗೆ ಶೀಲದ ಸೌಂದರ್ಯವನ್ನು ತೋರಿಸುವ ಶಕ್ತಿ ಅಪೂರ್ವವಾದದ್ದು" ಎನ್ನುವ ಶ್ರೀ ಮಾಸ್ತಿಯವರು ಗೊರೂರರವರಲ್ಲಿ ಈ ಶಕ್ತಿ ಚೆನ್ನಾಗಿರುವುದನ್ನು ಎತ್ತಿ ಹೇಳಿದ್ದಾರೆ. ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗೊರೂರರದು ವಿಶಿಷ್ಟವಾದ ಸ್ಥಾನ.

"ಹೇಮಾವತಿ ನದಿ ನಮ್ಮ ಉಸಿರು. ನಮ್ಮ ನಾಡಿಯ ರಕ್ತ....ಅದರ ಮೇಲೆ ಬೀಸಿ

ಬರುವ ಗಾಳಿ ಜೀವನದಿಂದ ತುಂಬಿರುತ್ತದೆ" ಎಂದು 'ಹೇಮಾವತಿಯ ತೀರದಲ್ಲಿ' ಅವರು ಹೇಳಿದ ಮಾತುಗಳನ್ನು ಅವರ ಕೃತಿಗಳಿಗೂ ಅನ್ವಯಿಸಿ ಹೇಳಬಹುದು. ಅವು ಜೀವನದಿಂದ ತುಂಬಿರುವುದಲ್ಲದೆ ನಮ್ಮ ಜೀವನದಲ್ಲೂ ಉತ್ಸಾಹವನ್ನೂ, ಉಲ್ಲಾಸವನ್ನೂ, ಬದುಕಿನ ನಿಷ್ಠೆಯನ್ನೂ ಹೆಚ್ಚಿಸಬಲ್ಲಂಥವು. ಎಷ್ಟೋ ಲೇಖಕರಿಗಿರಲಾರದ ಇಂಥ ಭಾಗ್ಯವನ್ನು ಗೊರೂರರ ಲೇಖನಿ ಪಡೆದಿದೆ. ನಮ್ಮ ಸಾಹಿತ್ಯದಲ್ಲಿ ನವೋದಯವನ್ನು ನಿರ್ಮಿಸಿದ ಹಿರಿಯರಲ್ಲಿ ಒಬ್ಬರಾಗಿ, ನಿರಂತರವಾದ ಶ್ರದ್ಧೆಯಿಂದಲೂ, ನಿರಪೇಕ್ಷ ಭಾವನೆಯಿಂದಲೂ ದುಡಿದು ಹಣ್ಣಾಗಿರುವ, ಹಾಸ್ಯರಸದ ಕಣ್ಣಾಗಿರುವ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಗೌರವಪೂರ್ವಕವಾದ ವಂದನೆ ಸಲ್ಲಿಸುತ್ತೇನೆ.

ಗೊರೂರರ ವಿಶಿಷ್ಟತೆ

ಎಸ್. ವಿ. ಪರಮೇಶ್ವರಭಟ್ಟ

ಕನ್ನಡ ಸಾಹಿತ್ಯಕ್ಕೆ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಕೊಡುಗೆ ವಿಶಿಷ್ಟವಾದದ್ದು. ಗುಣದಲ್ಲಿಯೂ, ಗಾತ್ರದಲ್ಲಿಯೂ ಹಿರಿದಾಗಿರುವ ಬರಹಗಳನ್ನು ಶ್ರೀಮತರ ಹಾಗೆ ಕನ್ನಡಕ್ಕೆ ನೀಡಿ, ಕನ್ನಡ ಗದ್ಯ ಸಾಹಿತ್ಯಕ್ಕೆ ಒಂದು ನವೀನ ಕಾಂತಿಯನ್ನು ತಂದವರು ನಮ್ಮಲ್ಲಿ ವಿರಳರೇ ಸರಿ. ಆ ವಿರಳರಲ್ಲಿ ಮೊದಲ ಮಣೆಯ ಗೌರವಕ್ಕೆ ಗೊರೂರರು ಪಾತ್ರರಾಗಿದ್ದಾರೆ. ಶುದ್ಧವೂ, ಸಹಜವೂ, ಸುಂದರವೂ ಆದ ಹಾಸ್ಯರಸವನ್ನು ತಮ್ಮ ಬರಹದಲ್ಲಿ ವಿಪುಲ ಪ್ರಮಾಣದಲ್ಲಿ ತಂದವರೂ ಗೊರೂರರೇ ಸರಿ. ಇದರ ಜೊತೆಗೆ ತಾವು ಹುಟ್ಟಿ ಬೆಳೆದುಬಂದ ಹಳ್ಳಿಯ ಪರಿಸರದ ಜನಜೀವನವನ್ನು ಸುಂದರವಾಗಿ ಚಿತ್ರಿಸಿ ಆ ಜನರ ಖೇದ-ಪ್ರಮೋದಗಳನ್ನು, ಸಂತೋಷ-ಸಂಕಷ್ಟಗಳನ್ನು, ಆಸೆ-ನಿರಾಸೆಗಳನ್ನು ಇಲ್ಲಿ ಕಥೆಯಾಗಿ, ಅಲ್ಲಿ ಕಾದಂಬರಿಯಾಗಿ, ಇಲ್ಲಿ ಲಲಿತ ಪ್ರಬಂಧವಾಗಿ, ಅಲ್ಲಿ ಚಿಂತನಶೀಲ ವಿಮರ್ಶೆಯಾಗಿ ಚಿತ್ರಿಸಿಕೊಟ್ಟವರು ಶ್ರೀ ಗೊರೂರರು. ನಮ್ಮ ಕನ್ನಡ ಕಾವ್ಯಕಾವೇರಿಗೆ ಶ್ರೀ ಗೊರೂರರು ತಮ್ಮ ಭಾವ ಹೇಮಾವತಿಯನ್ನು ಕೂಡಿಸಿ ಕಾವೇರಿಯ ಸೌಭಾಗ್ಯವನ್ನು ಹೆಚ್ಚಿಸಿ ಎಲ್ಲ ಕನ್ನಡಿಗರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ.

ಸ್ವಜನವಾತ್ಸಲ್ಯ, ಸ್ವಭಾಷಾಪ್ರೇಮ, ಸ್ವದೇಶಭಕ್ತಿ ಇವು ಗೊರೂರರ ವ್ಯಕ್ತಿತ್ವವನ್ನು ಸುಂದರತಮವನ್ನಾಗಿ ಮಾಡಿವೆ. ಬೆಲ್ಲವನ್ನು ಸಿಹಿ ಎನ್ನುವುದು ಸುಲಭ. ಬೇವನ್ನು ಸಿಹಿ ಎಂದು ಭಾವಿಸುವುದು ಕಠಿಣ. ಇಂತಹ ಭಾವನೆ ವಿಶ್ವಕವಿಗಳೊಡನೆ ನಡೆಸಿದ ಹೃತ್ಸಂವಾದದಿಂದ ಬರತಕ್ಕದ್ದು. ಈ ಸಂಸ್ಕಾರವಿದ್ದವರು ಸಂಸಾರದ ಕಷ್ಟ-ಕಾರ್ಪಣ್ಯ, ಕಸ-ಮುಸುರೆಗಳನ್ನು ಸಹನೀಯವನ್ನಾಗಿಸಿಕೊಂಡು ತಮ್ಮ ಸಂಸ್ಕಾರ ವಿಶೇಷದಿಂದ ಆ ನೋವುಗಳ ಗೊಬ್ಬರದಿಂದಲೇ ತಮ್ಮ ನಗೆಯ ಕಾವ್ಯಮಲ್ಲಿಗೆಯನ್ನು

ಅರಳಿಸುವ ತೋಟಗಾರಿಕೆಯ ಕಲೆಯನ್ನು ಮೆರೆಯುತ್ತಾರೆ. ಈ ಕಲೆ ಸಿದ್ಧಿಸಿದೆ ಗೊರೂರರಿಗೆ. ಇದೇ ಇವರ ವಿಶಿಷ್ಟಗುಣ.

ಇಂತಹ ಹಿರಿಯ ಸರಸ ವಿದ್ವತ್ಕವಿಯನ್ನು, ರಸಿಕ ಕುಲಮಣಿಯನ್ನು ನಿಷ್ಕಪಟವಾದ, ನಿರಾಡಂಬರವೂ, ನಿರ್ಮಲವೂ, ನಿರ್ವ್ಯಾಜವೂ ಆದ ಸ್ನೇಹಶೀಲದಿಂದ ಕನ್ನಡಿಗರೆಲ್ಲರ ಪ್ರೀತಿವಿಶ್ವಾಸಗಳಿಗೆ ಪಾತ್ರರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ಸಂಭಾವನಾ ಗ್ರಂಥ ಪ್ರಕಟಣೆಯ ಮೂಲಕವಾಗಿ ಗೌರವಿಸುವ ಸಂದರ್ಭದಲ್ಲಿ ನನ್ನದೂ ಒಂದು ಬಿಡಿನುಡಿ ಮಲ್ಲಿಗೆಯನ್ನು ಹೀಗೆ ಗೊರೂರರಿಗೆ ಅರ್ಪಿಸುತ್ತಿದ್ದೇನೆ.

ಶ್ರೀ ಗೊರೂರರ ಕೃತಿಗಳು ಕನ್ನಡೇತರ ಭಾಷೆಗಳಿಗೆ ಸಮರ್ಥರಿಂದ ಅನುವಾದವಾಗಲೆಂಬ ಆಶಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಶ್ರೀಯುತರ ಅಪೂರ್ವವಾದ ಕೊಡುಗೆಗಳಿಂದ ನಮ್ಮ ವಾಗ್ದೇವಿಯ ಭಂಡಾರ ದಿನದಿನವೂ ಶ್ರೀಮಂತವಾಗಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತೇನೆ.

ನಮ್ಮ ಪುಣ್ಯ

ಜಿ. ನಾರಾಯಣ

ಸಾವಿರ ಜನರ ಮಧ್ಯೆ ಇದ್ದರೂ ಶ್ರೀ ಗೊರೂರ್ ಅವರನ್ನು ಸುಲಭವಾಗಿ ಗುರುತಿಸಬಹುದು. ಇವರ ವ್ಯಕ್ತಿತ್ವದ ಪರಿಚಯ ಇವರ ಜಿಲ್ಲೆಯ 'ಗೋಮಟೇಶ್ವರ' ವಿಗ್ರಹವನ್ನು ನೋಡಿದವರಿಗೆ ಹೊಸದಾಗಿ ಮಾಡಿಕೊಡಬೇಕಾಗಿಲ್ಲ. ಆ ವಿಗ್ರಹದ ಗುಣವಿಶೇಷಗಳನ್ನು ಔನ್ನತ್ಯವನ್ನು ಇವರಲ್ಲಿ ಕಾಣಬಹುದು. ಮೈಮೇಲೆ ಶುಭ್ರವಾದ ಖಾದಿ ಜುಬ್ಬ, ಕಚ್ಚೆ ಪಂಚೆ, ಹೆಗಲ ಮೇಲೆ ಶಲ್ಯ, ಕಾಲಲ್ಲಿ ಸಾಮಾನ್ಯರು ಮೆಟ್ಟಲಾರದಂಥ ಬಲವಾದ ಚರ್ಮದ ಪಾದುಕೆಗಳು, ತಲೆಯಮೇಲೆ ಗಾಂಭೀರ್ಯವನ್ನು ಸೂಚಿಸುವ ಹಿಂದಿನ ಕಾಲದ ಪಿಳ್ಳುಜುಟ್ಟು ಇವನ್ನು ನೋಡಿದರೆ ಮತ್ತೆ ಮತ್ತೆ ಅವರನ್ನು ನೋಡಬೇಕೆನಿಸುತ್ತದೆ. ಇಂದಿನ ಸಂಪ್ರದಾಯ ಎಷ್ಟೋ ಅಷ್ಟು. ಹಿಂದಿನ ಸಂಪ್ರದಾಯಗಳೇ ಅವರಿಗೆ ಹೆಚ್ಚು ಪ್ರಿಯವಾಗಿರುವಂತೆ ಕಾಣುತ್ತದೆ. ಹೃದಯ ತುಂಬಿ ಬರುವ ಅವರ ಮಾತುಗಳು, ಮಾತಿನ ಶೈಲಿ ಎಂಥವರನ್ನೂ ಹಿಡಿದು ನಿಲ್ಲಿಸುತ್ತವೆ. ಪರಿಚಯವಿಲ್ಲದವರು ಅವರೊಡನೆ ಒಮ್ಮೆ ಮಾತನಾಡಿದರೆ ಸಾಕು, ಶ್ರೀ ಗೊರೂರ್ ಅವರು ನಮ್ಮವರೇ ಎಂಬ ನೈಜ ಪ್ರೇಮವನ್ನು ತೋರಿಸುತ್ತಾರೆ. ಆದ್ದರಿಂದಲೇ ಶ್ರೀ ಗೊರೂರ್ ಅವರಿಗೆ ಎಲ್ಲ ಕ್ಷೇತ್ರಗಳಲ್ಲೂ ಸಾಕಷ್ಟು ಜನ ಮಿತ್ರರಿದ್ದಾರೆ. ಅವರೆಲ್ಲರಿಗೂ ಇವರು ಬೇಕಾದವರಾಗಿದ್ದಾರೆ.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ಗೊರೂರು ಎಂಬ ಹೆಸರಿನಿಂದಲೇ ಪ್ರಸಿದ್ಧರು. ಸಾಹಿತ್ಯ ಪ್ರಪಂಚದಲ್ಲಿ ಅವರು ಅಮರವಾದ ಹೆಸರನ್ನು ಸಂಪಾದಿಸಿದ್ದಾರೆ. 'ಹಳ್ಳಿಯ ಚಿತ್ರ'ಗಳಿಂದ ಆರಂಭವಾದ ಅವರ ಸಾಹಿತ್ಯರಚನೆ ಕಥೆ ಕಾದಂಬರಿಗಳ ಮೂಲಕ ಸರ್ವವ್ಯಾಪಕವಾಗಿದೆ. ಹಳ್ಳಿಗರ ಜೀವನದ ರಸಸ್ಯಂದಿ ಘಟ್ಟಗಳನ್ನು ಸರಸ ಮನೋಭಾವದಿಂದ ಹಾಸ್ಯಸ್ವರೂಪದಲ್ಲಿ ಕಂಡು ಚಿತ್ರಿಸಿರುವ ಚಾತುರ್ಯ ಅವರಿಗೇ ಮೀಸಲಾದುದು.

ಶ್ರೀಯುತರು ಹಳ್ಳಿಯಲ್ಲೇ ನೆಲೆಸಿ ಸುತ್ತುಮುತ್ತಲಿನ ಜೀವನವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆಂದೇ ಹೇಳಬಹುದು. ಜನರ ಸ್ವಭಾವ ವೈಚಿತ್ರ್ಯಗಳನ್ನೂ, ಸಂಪ್ರದಾಯ ಆಚರಣೆಗಳನ್ನೂ, ಮೂಢನಂಬಿಕೆಗಳನ್ನೂ ಅರಿತು ಅವುಗಳ ಹಿನ್ನೆಲೆಯ ಗ್ರಾಮಜೀವನವನ್ನೂ ಆ ಜೀವನದಲ್ಲಿ ಪಾಲುಗೊಂಡ ಜನರನ್ನೂ ಚಿತ್ರಿಸಿದ್ದಾರೆ. ಗೊರೂರು ಎಂದರೆ ಹಳ್ಳಿಯವರು ಎಂದೇ ಹೇಳಬಹುದು. ಈ ಮಾತು ಎಲ್ಲ ಅರ್ಥದಲ್ಲೂ ಅನ್ವಯಿಸುತ್ತದೆ. ಅವರ ವಸ್ತ್ರಭೂಷಣಗಳೇನೋ ಹಳೆಯ ಕಾಂಗ್ರೆಸ್ ಕೈಕೊಂಡ ದೇಶಭಕ್ತಿಯ ಕುರುಹಾಗಿದೆ. ಆದರೆ ಅವರ ಸಂಸ್ಕಾರ, ನಡವಳಿಕೆ, ಮನಸ್ಸಿನ ಔನ್ನತ್ಯ, ನಿಷ್ಕಲ್ಮಷತೆ, ಸರಳತೆ, ಮಾತಿನ ನಿರಾಡಂಬರತೆ ಇವೆಲ್ಲವೂ ನಮ್ಮ ಪುರಾತನ ಸಂಸ್ಕೃತಿಯ ಪ್ರತಿರೂಪವೇ ಆಗಿವೆ. ಎಂದರೆ ಅವರು ನಾಗರಿಕ ಜೀವನವನ್ನು ತಿರಸ್ಕರಿಸುತ್ತಾರೆ ಎಂದಾಗಲಿ, ಅಲಕ್ಷ್ಯ ಮಾಡುತ್ತಾರೆ ಎಂದಾಗಲಿ ಅಲ್ಲ. ಅದನ್ನೂ ಅವರು ಚೆನ್ನಾಗಿ ಬಲ್ಲರು. ಮನುಷ್ಯನ ಒಂದು ನಿಷ್ಠೆ ಹೇಗೆ ಪರಿವರ್ತನೆಗೆ, ಕಾಲಕಾಲದ ವೈಪರೀತ್ಯಕ್ಕೆ ಒಳಗಾಗದೆ ನಡೆದುಕೊಂಡು ಬಂದಿದೆ ಎಂಬುದನ್ನು ಇವರ ಚರ್ಯೆಯಿಂದ ಗುರುತಿಸಬಹುದು.

ಶ್ರೀ ಗೊರೂರರನ್ನು ನಾನು ಸಾಹಿತಿಯಾಗಿ ಮಾತ್ರ ಪರಿಚಯ ಮಾಡಿಕೊಡುತ್ತಿಲ್ಲ. ಅವರನ್ನು ನಾನು ಸ್ವಾತಂತ್ರ್ಯ ಹೋರಾಟಗಾರರನ್ನಾಗಿ ಚೆನ್ನಾಗಿ ಬಲ್ಲೆ. ಸ್ವಾತಂತ್ರ್ಯ ಚಳವಳಿಯ ವೀರ ಸ್ವಯಂಸೇವಕನಾಗಿ ಅಪೂರ್ವವಾದ ನಿಷ್ಠೆಯಿಂದ ದುಡಿದಿದ್ದಾರೆ. ದೇಶದ ಸ್ವಾತಂತ್ರ್ಯ ಸಾಧನೆಗೆ ಅವರು ಮಾಡಿದ ತ್ಯಾಗ, ಅನುಭವಿಸಿದ ಕಷ್ಟ, ಆಶ್ಚರ್ಯಕರವಾದುದು. ತಾವು ಮಾತ್ರವಲ್ಲದೆ ತಮ್ಮ ಕುಟುಂಬವನ್ನೂ ದೇಶಸೇವೆಗಾಗಿ ಮುಡಿಸಿದರು. ಅವರ ಕೈಗೆ ಬಂದ ಮಗ ಸ್ವಾತಂತ್ರ ಹೋರಾಟದ ದಂಗೆಯಲ್ಲಿ ಪೋಲೀಸರ ಗುಂಡಿಗೆ ತುತ್ತಾದ ವಿಷಯ ಮರೆಯುವಂಥದೇ ಅಲ್ಲ. ಮಗನನ್ನು ಕಳೆದುಕೊಂಡರೂ ಸ್ವತಃ ದೈಹಿಕವಾಗಿ ಆರ್ಥಿಕವಾಗಿ ಕಷ್ಟನಷ್ಟಗಳನ್ನು ಅನುಭವಿಸಿದರೂ ತಮ್ಮ ನಿಸ್ವಾರ್ಥ ಸೇವೆಯನ್ನು ಯಾವ ರೀತಿಯಲ್ಲೂ ಕುಂಠಿತಗೊಳಿಸಲಿಲ್ಲ. ಒಮ್ಮೆ ಗಾಂಧಿ ತತ್ತ್ವವನ್ನು ಸ್ವೀಕರಿಸಿದ ಮೇಲೆ ಅದನ್ನು ಆರಂಭದಿಂದ ಇಂದಿನವರೆಗೂ ಜೀವನದಲ್ಲಿ, ಕಾರ್ಯದಲ್ಲಿ, ಅನುಷ್ಠಾನಕ್ಕೆ ತಂದ ಮಹಾವ್ಯಕ್ತಿಗಳಲ್ಲಿ ಇವರೊಬ್ಬರು. ರಾಜಕೀಯ ನೇತಾರರಲ್ಲಿ ಕಾಲಕಾಲಕ್ಕೆ ಧ್ಯೇಯ ನಿಷ್ಠೆಗಳಲ್ಲಿ ಬದಲಾವಣೆಯಾಗಿರುವುದು ಕಂಡುಬಂದರೂ ಶ್ರೀ ಗೊರೂರರಲ್ಲಿ ಅಂಥ ಭಿನ್ನಭಾವ ಎಂದೂ ತಲೆದೋರಿಲ್ಲ. ತಾನು ಮಾಡಿದ ಸೇವೆಗೆ ಯೋಗ್ಯ ಪ್ರತಿಫಲವನ್ನು ಬಯಸಿದವರೂ ಅಲ್ಲ. ಅಧಿಕಾರ, ಸ್ಥಾನ, ಆರ್ಥಿಕಫಲ ಯಾವುದಕ್ಕೂ ಆಸೆಪಟ್ಟವರಲ್ಲ. ಇಂಥ ನಿಸ್ಪೃಹ ಸೇವಾಕರ್ತರೇ ದೇಶದ ಸ್ವಾತಂತ್ರ್ಯಕ್ಕೆ ಕಾರಣರು. ದೇಶದ ಮಹತ್ವಕ್ಕೆ ಭೂಷಣರು.

ಶ್ರೀಯುತರು ಕೆಲವು ಕಾಲ ರಾಜ್ಯ ವಿಧಾನ ಪರಿಷತ್ತಿನ ನಾಮಕರಣ ಸದಸ್ಯರೂ ಆಗಿ ತಮ್ಮ ಕೈಲಾದ ಸೇವೆ ಸಲ್ಲಿಸಿದ್ದಾರೆ. ರಾಜಕೀಯ ನಿರ್ಮಾಣದಲ್ಲಿ ಅವರ ಪಾತ್ರ

ಗಾಂಧಿ ತತ್ತ್ವಾನುಸರಣೆಯ ಮಾರ್ಗವೇ. ಶ್ರೀ ಗೊರೂರರು ಗಾಂಧೀಜಿಯವರ 'ಸತ್ಯಶೋಧನೆ'ಯನ್ನು ಕನ್ನಡಕ್ಕೆ ತಂದು ತಮ್ಮ ಸಾಹಿತ್ಯಕ್ಷೇತ್ರವನ್ನು ವಿಶಾಲಗೊಳಿಸಿದ್ದಾರೆ.

ಸಾಹಿತಿಯಾಗಿ, ದೇಶಭಕ್ತನಾಗಿ, ನಿಸ್ವಾರ್ಥ ಸೇವಕನಾಗಿ, ಆದರ್ಶ ಗ್ರಾಮೀಣನಾಗಿ, ನಾಗರಿಕತೆಯ ಅಂದ ಪಡೆದ ಸುಸಂಸ್ಕೃತ ಪ್ರಜೆಯಾಗಿ, ಕರ್ನಾಟಕದ ಮಹಾವ್ಯಕ್ತಿಯಾಗಿ ಇಂದು ನಮ್ಮ ಕಣ್ಣ ಮುಂದೆ ಪ್ರಜ್ವಲಿಸುತ್ತಿರುವುದು ನಮ್ಮ ಪುಣ್ಯ ಮತ್ತು ಭಾಗ್ಯ.

ಬದುಕನ್ನು ಓದಿದವರು

ಹಾ. ಮಾ. ನಾಯಕ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನಮ್ಮ ಶ್ರೇಷ್ಠ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಅವರು ಇಂದಿನ ಸೀಮಿತ ಅರ್ಥದ 'ವಿದ್ಯಾವಂತ'ರಲ್ಲ. ಶಾಲಾಕಾಲೇಜುಗಳಲ್ಲಿ ಓದಿ ಪರೀಕ್ಷೆಗಳನ್ನು ತೆಗೆದುಕೊಂಡು ಪದವೀಧರರಾದವರಲ್ಲ. ಅವರು ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾನ್ ಪರೀಕ್ಷೆಯೊಂದರಲ್ಲಿ ಮಾತ್ರ ತೇರ್ಗಡೆಯಾಗಿದ್ದಾರೆ.

ಸುಮಾರು ೧೯೩೦–೩೧ರ ಸಮಯ. ಆಗಷ್ಟೇ ಅವರ 'ಹಳ್ಳಿಯ ಚಿತ್ರಗಳು' ಪ್ರಕಟವಾಗಿತ್ತು. ಹೊಸ ಬಗೆಯ ಆ ಕೃತಿ ಅನೇಕರ ಗಮನಸೆಳೆದು ಮೆಚ್ಚುಗೆ ಗಳಿಸಿತ್ತು. ಅದನ್ನು ಓದಿದ್ದ ಶ್ರೀ ಎನ್. ಎಸ್. ಸುಬ್ಬರಾಯರು ಆ ವರ್ಷ ಗೊರೂರರನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪರೀಕ್ಷಕರನ್ನಾಗಿ ನೇಮಿಸಿದರು. ಗೊರೂರರು ಯಾವ ಪರೀಕ್ಷೆಯನ್ನೂ ಮಾಡಿಲ್ಲ ಎಂದು ತಿಳಿದಿದ್ದ ಮೇಲಿನ ಪರೀಕ್ಷಾಧಿಕಾರಿಗಳು ಹೊಟ್ಟೆಯುರಿದುಕೊಂಡು ಸುಬ್ಬರಾಯರಲ್ಲಿ ದೂರುಕೊಟ್ಟರು. "ಅವರು ಯಾವ ಪರೀಕ್ಷೆ ಮಾಡದಿದ್ದರೇನಂತೆ. 'ಹಳ್ಳಿಯ ಚಿತ್ರಗಳು' ಪುಸ್ತಕ ಬರೆದಿಲ್ಲವೆ? ಸಾಕು" ಎಂದು ಸುಬ್ಬರಾಯರು ದೂರುತಂದವರ ಬಾಯಿ ಮುಚ್ಚಿಸಿದರು. ಆಮೇಲೆ ಗೊರೂರರನ್ನು ಕರೆಸಿ ಕೇಳಿದರು :

"ಏನ್ರಿ ನೀವು ಬಿ.ಎ. ಮಾಡಿಲ್ಲವೆ ?"

"ಇಲ್ಲ."

"ಇಂಟರ್ ಮೀಡಿಯೆಟ್ ಮಾಡಿಲ್ಲವೆ ?"

"ಇಲ್ಲ."

"ಎಸ್. ಎಸ್. ಎಲ್. ಸಿ. ಮಾಡಿಲ್ಲವೆ ?"

"ಇಲ್ಲ, ಸರ್. ನಾನು ಯಾವ ಪರೀಕ್ಷೆಯನ್ನೂ ಮಾಡಿಲ್ಲ" ಗೊರೂರರು ಸ್ಪಷ್ಟಪಡಿಸಿದರು.

ಸುಬ್ಬರಾಯರು ಬೇಸರದ ದನಿಯಲ್ಲಿ ಹೇಳಿದರು : "ನಿಮ್ಮಂಥವರನ್ನು ಕಟ್ಟಿಕೊಂಡು ಏನು ಮಾಡುವುದು ? ಹೋಗಿ. ಯಾವುದಾದರೂ ಪರೀಕ್ಷೆಗೆ ಕಟ್ಟಿ ಪಾಸುಮಾಡಿ."

"ಆಗಲಿ" ಎಂದು ಗೊರೂರರು ಹೊರಟರು. ಈಗ ತಮಗಾಗಿಯಲ್ಲ ಸುಬ್ಬರಾಯರಿಗಾಗಿ ಅವರೊಂದು ಪರೀಕ್ಷೆಗೆ ಕಟ್ಟಬೇಕಾಯಿತು.

ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆಗೆ ಕಟ್ಟಿದರು. ಸ್ವಾರಸ್ಯವೆಂದರೆ ಅವರು ತಮ್ಮದೇ ಪುಸ್ತಕ 'ನಮ್ಮ ಊರಿನ ರಸಿಕರ'ನ್ನು ಪಠ್ಯವಾಗಿ ಓದಬೇಕಾಗಿ ಬಂತು. ಪರೀಕ್ಷೆ ಮುಗಿಯಿತು. ತೇರ್ಗಡೆಯಾಯಿತು. ಪರೀಕ್ಷಕರಾಗಿದ್ದ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಹೇಳಿದರಂತೆ: "ನಿಮ್ಮ ಪುಸ್ತಕದ ಮೇಲೆ ನೀವು ಬರೆದ ಉತ್ತರಗಳಿಗೆ ಇನ್ನೂ ಕಡಿಮೆ ಅಂಕಗಳು ಬರಬೇಕಾಗಿತ್ತು !"

ಇದು ಗೊರೂರರು ಕನ್ನಡ ವಿದ್ವಾನರಾದ ಕಥೆ. ಆದರೆ ಈ ಪರೀಕ್ಷೆಯಿಂದ ಅವರಿಗೆ ಲಾಭವೇನೂ ಆಗಿಲ್ಲ. ಅವರಿಗೆ ಆದ ಲಾಭವೆಲ್ಲ ಬದುಕನ್ನು ಓದಿದ್ದರಿಂದ ಲಭಿಸಿದ್ದು.

ಪೂಜನೀಯ ವ್ಯಕ್ತಿತ್ವ

ಪ್ರಧಾನ್ ಗುರುದತ್ತ

ತಪಸ್ಸು, ಸಾಧನೆ ಇವೇ ಮೊದಲಾದ ಶಬ್ದಗಳು ತಮ್ಮ ಮೂಲಾರ್ಥದಲ್ಲಿ ಕೆಲವರಿಗಾದರೂ ಒಮ್ಮೊಮ್ಮೆ ಅನ್ವಯವಾಗುತ್ತವೆಂಬುದಕ್ಕೆ ಸಾಕ್ಷಿಯಾಗುವಂಥ ವಿರಳಚೇತನಗಳಲ್ಲಿ ಶ್ರೀ ಗೊರೂರರೂ ಒಬ್ಬರು. ನಾಡು-ನುಡಿಗಳ ಬಗೆಗಿನ ಅಸ್ಖಲಿತ ಪ್ರೇಮ, ಜಾತ್ಯತೀತ ದೃಷ್ಟಿ, ರಾಷ್ಟ್ರೀಯತಾಪ್ರಜ್ಞೆ, ಸಾಮಾಜಿಕ ಹಿತಸಾಧನಾಪ್ರವೃತ್ತಿ, ಅರ್ಧಶತಮಾನಕ್ಕೂ ಮೀರಿದ ವಾಙ್ಮಯತಪಸ್ಸು—ಇವು ಅವರನ್ನು ಸರ್ವಜನಪ್ರಿಯರನ್ನಾಗಿ, ಅಜಾತಶತ್ರುವನ್ನಾಗಿ ಮಾಡಿವೆ. ಇಂಥವರ ೭೦ನೆಯ ಹುಟ್ಟುಹಬ್ಬ ನಾಡಿಗೇ ಉತ್ಸವದ, ಉತ್ಸಾಹದ ವಿಷಯವಾಗಿದ್ದಲ್ಲಿ ಆಶ್ಚರ್ಯವೇನು?

ನಮ್ಮ ನಾಡಿನ ಅದ್ವಿತೀಯ ಜಲವರ್ಣಚಿತ್ರಕಾರ ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಕೆಲವು ದಿನಗಳ ಹಿಂದೆ, 'ಗೊರೂರು ಗೌರವಗ್ರಂಥ'ದಲ್ಲಿ ನನ್ನ ಚಿತ್ರವನ್ನಾದರೂ ಹಾಕಿ ಎಂದು ನಾಯಕರಿಗೆ ಕೊಡಬೇಕೆಂದಿದ್ದೇನೆ" ಎಂದರು. "ಯಾವ ಚಿತ್ರ ಸಿದ್ಧಪಡಿಸಿದ್ದೀರಿ" ಎಂದಾಗ, "ಇನ್ನೂ ಯಾವುದನ್ನೂ ಸಿದ್ಧಪಡಿಸಿಲ್ಲ. ಅವರು ಆಗಲಿ ಎಂದರೆ ಗೊರೂರಿಗೇ ಹೋಗಿ, ಕೆಲವೇ ಗಂಟೆಗಳಲ್ಲಿ ಗೊರೂರರ ಮನೆಯ ಪೈಂಟಿಂಗನ್ನೇ ಸಿದ್ಧಪಡಿಸಿಕೊಂಡು ಬರುತ್ತೇನೆ" ಎಂದರು. ಎಂಥ ಅನುಪಮ ಶ್ರದ್ಧೆ! ಎಂಥ ಅನುಕರಣೀಯ ಉತ್ಸಾಹ!! ಎನಿಸಿತು. "ತುಂಬ ಸಂತೋಷ. ಹಾಗೇ ಮಾಡಿ" ಎಂದೆ. ಸಂಪಾದಕರೂ ಒಪ್ಪಿಗೆ ಕೊಟ್ಟರು. ಆ ಚಿತ್ರ ಈ ಸಂಪುಟದಲ್ಲಿಯೂ ಸೇರಿದೆ.

ಈ ಘಟನೆ ಗೊರೂರರ ವ್ಯಕ್ತಿತ್ವ ಎಷ್ಟು ಮಹಿಮಾನ್ವಿತವಾಗಿ ಪರಿಣಮಿಸಿದೆ ಎಂಬುದನ್ನು ಶೃತಪಡಿಸುತ್ತದೆಂದು ನಂಬಿದ್ದೇನೆ. ಇಂಥ ವ್ಯಕ್ತಿಗೆ ಶುಭಕೋರುವ, ನಾಡಿನ ಒಲುಮೆಯ ಪೂರದ ಪ್ರತಿಬಿಂಬವಾಗಿರುವ ಉತ್ಸವದಲ್ಲಿ ತಮ್ಮ ಭಕ್ತಿಕುಸುಮವೂ ಅರ್ಪಿತವಾಗಲಿ ಎಂಬುದು ಎಲ್ಲ ನಾಡವರ ಸದಿಚ್ಛೆ. ತಿಪ್ಪೇಸ್ವಾಮಿಯವರ ಇಚ್ಛೆ ನಾಡವರೆಲ್ಲರ ಇಂಥ ಹಾರೈಕೆಯ ಸಂಕೇತವೂ ಹೌದು; ಗೊರೂರರ ಪೂಜನೀಯ ವ್ಯಕ್ತಿತ್ವದ ಪ್ರತೀಕವೂ ಹೌದು.

ಹಿರಿಯ ಸಾಹಿತ್ಯ ನಿರ್ಮಾತ

ರಂ. ಶ್ರೀ. ಮುಗಳಿ

ನಮ್ಮ ನಾಡಿನ ಹಿರಿಯ ಸಾಹಿತ್ಯ ನಿರ್ಮಾತರಲ್ಲಿ ಒಬ್ಬರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಗೌರವಗ್ರಂಥವನ್ನು ಸಮರ್ಪಿಸುವ ವಿಚಾರ ತಿಳಿದು ಸಂತೋಷವಾಯಿತು.

ಸ್ವಾತಂತ್ರ್ಯಸಮರದಲ್ಲಿ ನಿಷ್ಠೆಯಿಂದ ಭಾಗವಹಿಸಿ ಕಷ್ಟನಷ್ಟಗಳನ್ನು ಅನುಭವಿಸಿದರೂ ತಮ್ಮ ಧೀರಗಂಭೀರವಾದ ನಿಲವನ್ನು ಅವರು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಹಳ್ಳಿಯಲ್ಲಿಯೇ ವಾಸವಾಗಿದ್ದುಕೊಂಡು ಅಲ್ಲಿಯ ಜೀವನದ ವಿವಿಧ ಮುಖಗಳನ್ನು ಅರಿತುಕೊಂಡು ಅವನ್ನು ತಮ್ಮ ಸಾಹಿತ್ಯಸೃಷ್ಟಿಗೆ ಸಾಮಗ್ರಿಯನ್ನಾಗಿಸಿಕೊಂಡ ಕೆಲವೇ ಕೆಲವು ಕನ್ನಡ ಲೇಖಕರಲ್ಲಿ ಅವರು ಗಣ್ಯಸ್ಥಾನವನ್ನು ಪಡೆದಿರುತ್ತಾರೆ. ಗ್ರಾಮೀಣ ಸಂಪ್ರದಾಯ-ಸಂಸ್ಕೃತಿಗಳ ರಸಚಿತ್ರವನ್ನು ಅವರು ತಮ್ಮ ಪ್ರಬಂಧಗಳಲ್ಲಿ ಮತ್ತು ಕತೆಗಳಲ್ಲಿ ಸಮೃದ್ಧಿಯಾಗಿ ನೀಡಿದ್ದಾರೆ, ಕನ್ನಡ ಸಾರಸ್ವತಕ್ಕೆ ಚಿರಂತನವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ಗ್ರಾಮೀಣ ಹಾಸ್ಯಕ್ಕೆ ಒಂದು ಹೊಸ ಸಂಸ್ಕಾರವನ್ನು ಕೊಟ್ಟು ಉನ್ನತವಾದ ಹಾಸ್ಯ ಸಾಹಿತ್ಯ ನಿರ್ಮಾಣ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಗೊರೂರು ಅವರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಕನ್ನಡ ರಸಿಕಪ್ರಪಂಚವು ನಿಮಗೆ ಅತ್ಯಂತ ಋಣಿಯಾಗಿದೆ ಎಂದು ತಿಳಿಸಲು ಬಯಸುತ್ತೇನೆ.

ತುಂಬು ಜೀವನ

ಸಿದ್ದವನಹಳ್ಳಿ ನಿಜಲಿಂಗಪ್ಪ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಹೆಸರು ಕರ್ನಾಟಕದಲ್ಲಿ ಮನೆಮಾತು. ಅವರು ಬರೆದಿರುವ ಹಳ್ಳಿಗಳಿಗೆ ಸಂಬಂಧಿಸಿದ ಕತೆಗಳು ವಿಚಾರಪೂರಿತ ಪ್ರಬಂಧಗಳು ಕನ್ನಡ ಬಲ್ಲವರೆಲ್ಲರನ್ನೂ ಆಕರ್ಷಿಸಿವೆ. ಹಸನ್ಮುಖಿಗಳನ್ನಾಗಿ ಮಾಡಿವೆ. ಸಂತೋಷಪಡಿಸಿವೆ. ತೃಪ್ತಿಪಡಿಸಿವೆ. ಶ್ರೀ ರಾಮಸ್ವಾಮಿ ಅಯ್ಯಂಗಾರರು ಬರೆದ ಸಾಹಿತ್ಯ ತನ್ನಷ್ಟಕ್ಕೆ ತಾನೇ ಹೊರಹೊಮ್ಮಿದ್ದು. ತಿಣಿಕಿ ಬರೆದದ್ದಲ್ಲ. ಸ್ವಾಭಾವಿಕವಾಗಿಯೇ ಒಳಗೆ ಉಳಿಯಲಾರದೆ ಹರಿದು ಬಂದದ್ದು. ಆದುದರಿಂದಲೇ ಅದರ ಶ್ರೇಷ್ಠತೆ ಬಹುಕಾಲ ಜನರನ್ನು ತಣಿಸುವ ಉಳಿದು ಬಾಳುವ ಗುಣ ಉಳ್ಳದ್ದು. ರಾಮಸ್ವಾಮಿ ಅಯ್ಯಂಗಾರರ ಚಿತ್ರಗಳು ಬರೀ ಊಹೆಯಲ್ಲ. ಕೃತ್ರಿಮವಲ್ಲ. ಸಾರ್ವಜನಿಕರಲ್ಲಿ ಅವರಿಗಿರುವ ಸಹಾನುಭೂತಿ, ಮೈತ್ರಿ, ಅವರ ಜೀವನದಲ್ಲಿ ಇವರದೂ ಹಾಸುಹೊಕ್ಕಾಗಿ ಬೆಳೆದು ಬಂದ ಅನುಭವದ ನೈಜಚಿತ್ರಗಳು. ಅಂತೆಯೇ ಅವುಗಳನ್ನು ಮತ್ತೆ ಮತ್ತೆ ಓದಬೇಕೆಂಬ ಹಂಬಲ.

ಈಗಂತೂ ನಾನಾ ರೀತಿಯ ಕತೆಗಳು ಕಾದಂಬರಿಗಳು ಲೆಕ್ಕವಿಲ್ಲದೆ ಬರುತ್ತಿವೆ. ಹೆಚ್ಚು ವೇಳೆ ಅವುಗಳಲ್ಲಿ ತುಂಬಿರುವ ಲೈಂಗಿಕ ವ್ಯಾಪ್ತಿಗಳೇ ಅವುಗಳ ಆಕರ್ಷಣೀಯ ಗುಣ. ನನ್ನ ಅಭಿಪ್ರಾಯದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಹೇಳ ಹೆಸರಿಲ್ಲದೆ ಅವು ಮಾಯವಾಗುತ್ತವೆ. ಹಾಗಾಗುವುದೂ ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದೇ. ಆದರೆ ಯೋಗ್ಯ ಸಾಹಿತ್ಯ ಬದುಕುತ್ತದೆ, ಬೆಳೆಯುತ್ತದೆ, ಹರಡುತ್ತದೆ, ಚಿರಂಜೀವಿಯಾಗುತ್ತದೆ.

ಶ್ರೀ ಗೊರೂರರ ಸಾಹಿತ್ಯದಲ್ಲಿ ಈ ಗುಣಗಳನ್ನು ಕಾಣುತ್ತೇವೆ. ಅವರಿಂದ ಇನ್ನೂ ಹೆಚ್ಚು ಕೃತಿಗಳು ಬರಲಿ. ಕೈ ಪಳಗಿದೆ. ಮನಸ್ಸು ಪಕ್ವವಾಗಿದೆ. ಅಂತಃಕರಣ ಕಲಕಿದೆ. ದೃಷ್ಟಿ ವಿಶಾಲವಾಗಿದೆ. ನಡೆಯುವ ದಾರಿ ಒಳ್ಳೆಯದೇ ಎಂದು ಹೇಳಬಹುದು.

ಶ್ರೀ ರಾಮಸ್ವಾಮಿ ಅಯ್ಯಂಗಾರರು ದೇಶದ ಸ್ವಾತಂತ್ರ್ಯಕ್ಕೂ ದುಡಿದವರು. ಅವರ ಕಹಿಯನ್ನು ಬಹಳ ಜನರಿಗಿಂತಲೂ ಹೆಚ್ಚಾಗಿಯೇ ಸವಿದಿದ್ದಾರೆ. ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಕಾರಾಗೃಹವಾಸ ಸಾಧಾರಣ ಕೆಲಸ. ಅಷ್ಟು ಕಷ್ಟವಾದದ್ದೇನೂ ಅಲ್ಲ. ಮಡದಿ ಮಕ್ಕಳನ್ನೂ ಬಿಟ್ಟು ಇರಬೇಕಲ್ಲಾ ಅನ್ನುವ ಒಂದೇ ಕೊರತೆ. ಆದರೆ ಶ್ರೀ ರಾಮಸ್ವಾಮಿ ಅಯ್ಯಂಗಾರರ ಕೈಗೆ ಬಂದ, ತುಮಕೂರು ಕಾಲೇಜಿನಲ್ಲಿ ಓದುತ್ತಿದ್ದ, ಮಗ ಪೋಲೀಸರ ಗುಂಡಿಗೆ ತುತ್ತಾದ. ರಾಮಸ್ವಾಮಿ ಅಯ್ಯಂಗಾರರು ಕುಗ್ಗಲಿಲ್ಲ. ರಾಷ್ಟ್ರಕ್ಕಾಗಿ ಸತ್ಯಾಗ್ರಹಿಯಾಗಿ ಸೇವೆ ಸಲ್ಲಿಸುತ್ತಲೇ ಬಂದರು. ಸ್ಥಿತಪ್ರಜ್ಞರಾಗಿ ಕಾರಾಗೃಹ ವಾಸವನ್ನೂ ಅನುಭವಿಸಿದರು. ಕಾರಾಗೃಹ ವಾತಾವರಣವೇ ಒಂದು ವಿಶಿಷ್ಟ ರೀತಿಯದು. ಅನೇಕ ಪಾಠಗಳನ್ನು ಕಲಿತಿವೆ. ಕೆಲವನ್ನು ಮರೆತಿದ್ದಿವೆ. ಅಲ್ಲಿಯೂ ರಾಮಸ್ವಾಮಿ ಅಯ್ಯಂಗಾರರು ಹಸನ್ಮುಖಿಗಳಾಗಿಯೇ ಎಲ್ಲರನ್ನೂ ಹೊಂದಿಕೊಂಡು ತಮ್ಮದೇ ಆದ ಹಾಸ್ಯದಿಂದ ಸಂತೋಷಪಡಿಸಿದರು.

ಅವರದು ತುಂಬು ಜೀವನ. ಸಂಪತ್ತಿನ ಜೀವನವೆಂದೇ ಹೇಳಬೇಕು. ಸಂಪತ್ತು ಎಂದರೆ ಹಣಕಾಸಿನ ಆಸ್ತಿಪಾಸ್ತಿಯ ಸಂಪತ್ತೇ ನನ್ನ ದೃಷ್ಟಿಯಲ್ಲಿ ಸಂಪತ್ತೆನಿಸಲಾರದು. ಸಮಾಜದಲ್ಲಿ ಸಾಧ್ವ ಗೃಹಸ್ಥರಾಗಿ ನಡೆಸುವ ರೀತಿನೀತಿಗಳು ಮನಸ್ಸಿನ ಶಾಂತಿ ತೃಪ್ತಿ ಇದಕ್ಕೆ ಬುನಾದಿ. ಇದರ ಜೊತೆಗೆ ಸರ್ವಜ್ಞ ಹೇಳುವಂತೆ ಸ್ನೇಹಿತಳಾಗಿ, ಮಾರ್ಗದರ್ಶಿಯಾಗಿ, ಕಷ್ಟ ಸುಖಗಳಲ್ಲಿ ಭಾಗಿಯಾಗಿ, ಸರ್ವವಿಧದಲ್ಲಿಯೂ ಸಹಾನುಭೂತಿ, ಸಹಕಾರ ನೀಡುವ ಹೆಂಡತಿ ಪಕ್ಕದಲ್ಲಿದ್ದರೆ, ಸುತ್ತಮುತ್ತಲೂ ಯೋಗ್ಯರಾದ ತಂದೆ ತಾಯಿಗಳು ಹೆಮ್ಮೆಪಡುವಂತಹ ಮಕ್ಕಳಿದ್ದರೆ ಅದಕ್ಕಿಂತಲೂ ಹೆಚ್ಚಿನ ಸಂಪತ್ತು ಬೇರೆ ಇಲ್ಲ. ಈ ಸಂಪತ್ತು ಗೊರೂರರಿಗೆ ಎಷ್ಟು ಬೇಕೋ ಅದಕ್ಕಿಂತಲೂ ಹೆಚ್ಚಾಗಿದೆ. ಅವರದೇ ಆದ ನಿರಾಡಂಬರದ ಅಭಿಮಾನಪೂರ್ಣವಾದ ಆತಿಥ್ಯವನ್ನು ಸವಿದ ನನ್ನಂತಹವರು ಮರೆಯಲಾರರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮಿತ್ರರು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ೭೦ನೇ ವಯಸ್ಸಿಗೆ ಕಾಲಿಡುವ ಶುಭ ಸಂದರ್ಭದಲ್ಲಿ ಅವರಿಗೆ ಗೌರವ ಗ್ರಂಥವನ್ನು ಅರ್ಪಿಸುತ್ತಿರುವುದು ಸಂತೋಷದ ಸಂಗತಿ. ಒಪ್ಪತಕ್ಕ ಮಾತು. ಮೆಚ್ಚತಕ್ಕ ವಿಚಾರ. ಇದಕ್ಕಾಗಿ ಸಂಸ್ಥೆಯವರಿಗೆ ಅಭಿನಂದನೆಗಳು. ಕಾರ್ಯ ಯಶಸ್ವಿಯಾಗಲಿ. ರಾಮಸ್ವಾಮಿ ಅಯ್ಯಂಗಾರರು ಇನ್ನೂ ೩೦ ವರ್ಷಗಳವರೆಗೂ ಬದುಕಿ ಹೆಚ್ಚು ಸಾಹಿತ್ಯದಿಂದ ಕನ್ನಡಿಗರನ್ನು ಸಂತೋಷಪಡಿಸಲಿ.

ಸಂಸ್ಕೃತಿ ಸಂಪನ್ನ

ವೀರೇಂದ್ರ ಪಾಟೀಲ್

ಹೇಮಾವತಿಯ ಸೊಬಗು ಸೌಭಾಗ್ಯದ ಸವಿಯನ್ನುಂಡು, ಆ ಸುವರ್ಣ ನದಿಯ ಮುಗ್ಧ ಸೌಂದರ್ಯಕ್ಕೆ ಮಾರುಹೋಗಿ, ರಸಸಾಹಿತ್ಯದ ಆರಾಧಕರಾಗಿ ಕನ್ನಡ ನುಡಿಗೆ ಮೇಲ್ಮೆಯನ್ನು ತಂದ ನನ್ನ ಪರಮ ಮಿತ್ರರಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ೮೦ ವರ್ಷ ವಯಸ್ಸು ತುಂಬುವುದೆಂದು ಕೇಳಿ ಸಂತೋಷಪಟ್ಟವರಲ್ಲಿ ನಾನೂ ಒಬ್ಬ. ಗೊರೂರು ಗ್ರಾಮದಲ್ಲಿ ೧೯೦೪ರಲ್ಲಿ ಜನಿಸಿದ ಅವರು, ನನಗಿಂತ ೨೦ ವರ್ಷ ದೊಡ್ಡವರು. ನೂರು ಪಾಲು ನನಗಿಂತ ಹೆಚ್ಚಿನ ಸಾರಸ್ವತ ಕೀರ್ತಿ ಪಡೆದವರು. ನನ್ನಂತೆಯೇ ಅವರೂ ಸಹ, ಹಳ್ಳಿಯ ವಾತಾವರಣದಲ್ಲಿ ಬೆಳೆದು, ಗ್ರಾಮ ಬಾಂಧವರ ನೋವು ಸಂಕಟಗಳನ್ನು ಬಲ್ಲವರು. ಶ್ರೀ ರಾಮಸ್ವಾಮಿ ಅಯ್ಯಂಗಾರರು ನುಡಿ ಸೇವೆಯಲ್ಲಿ ಎಷ್ಟು ಉದ್ದಾಮ ಪಂಡಿತರೋ, ದೇಶದ ಸ್ವಾತಂತ್ರ್ಯದ ಹೋರಾಟದಲ್ಲೂ ಅಷ್ಟೇ ಯಶಸ್ಸಿನ ಪಾತ್ರವನ್ನು ವಹಿಸಿದವರು. ಅವರ ಸೇವಾರಂಗ ಅನೇಕ ಕಡೆ ಪ್ರಸರಿಸಿದೆ. ಗ್ರಾಮದ ಏಳಿಗೆ, ಗ್ರಾಮದ ಮಕ್ಕಳ ಪುರೋಭಿವೃದ್ಧಿ, ಸ್ಥಳೀಯ ಸಂಸ್ಥೆ, ಶಾಸಕಾಂಗ ಈ ಎಲ್ಲ ಕಡೆಗಳಲ್ಲೂ ಅವರು ಪ್ರಬುದ್ಧಾವಸ್ಥೆಗೆ ಬಂದಿದ್ದಾರೆ.

ರಾಷ್ಟ್ರೀಯ ವಿಕಾಸವು ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಬಾಲ್ಯದ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಿನಲ್ಲಿ ಮುಗಿಸಿ, ಅನಂತರ ಕವಿ ರವೀಂದ್ರರ ವಾಣಿಗೆ ಓಗೊಟ್ಟು ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿ ಸಂಸ್ಕೃತಿ ಸಂಪನ್ನರಾದರು. ಅಂದಿಗೆ ಗಾಂಧಿಯುಗ ಆರಂಭವಾಗಿತ್ತು. ಬಾಪೂಜಿಯವರ ಅಮರ ತತ್ವಗಳ ಕಡೆ ಅವರ ಮನಸ್ಸು ವಾಲಿತು. ಸಬರಮತಿ ಆಶ್ರಮದತ್ತ ಸಾಗಿ ಅಲ್ಲಿನ ರಚನಾತ್ಮಕ ಧ್ಯೇಯಗಳ ಕಡೆ ಬದ್ಧರಾದರು. ಸಬರಮತಿಯ ಸರಳ ವಾತಾವರಣದಿಂದ ಅವರಲ್ಲಿಯೂ ಸರಳ ವ್ಯಕ್ತಿತ್ವ ಮೂಡಿತು. ಬೆಂಗಳೂರಿಗೆ ಹಿಂತಿರುಗಿದ ಬಳಿಕ ಕೆಂಗೇರಿಯ

"ಗುರುಕುಲ"ದಲ್ಲಿ ಉಪಾಧ್ಯಾಯ ವೃತ್ತಿಯನ್ನವಲಂಬಿಸಿ ಮಹಾತ್ಮಾಜಿಯವರ ಆದರ್ಶಗಳನ್ನು ಬೆಳಸಿದರು.

ಬಾಲ್ಯದಿಂದಲೂ ಅವರಿಗೆ ದೇಶ ಸ್ವಾತಂತ್ರ್ಯದ ಹಂಬಲ ಹೆಚ್ಚು. ಕಾಯೇನ ವಾಚಾ ಮನಸಾ ಭಾರತದ ಬಿಡುಗಡೆ, ಸತ್ಯಾಗ್ರಹಾದಿ ಸಂಕಲ್ಪ ಈ ಕ್ಷೇತ್ರಗಳಲ್ಲಿ ಅವಿಶ್ರಾಂತವಾಗಿ ದುಡಿದರು. ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ಸಿನ ಚಳವಳಿ ಹಬ್ಬಿದಾಗ ತುರಂಗವಾಸವನ್ನನುಭವಿಸಿ ವೀರಾಗ್ರಣಿಗಳಾದರು. ಸ್ವಾತಂತ್ರ್ಯಾನಂತರ ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿ. ರಾಜ್ಯದ ಆಗುಹೋಗುಗಳಿಗೆ ತಮ್ಮ ಸಂಸ್ಕೃತಿ ಸಂಪನ್ನವಾದ ಸಹಕಾರವನ್ನು ನೀಡಿದರು.

ರಾಜಕಾರಣಿಗಳಾಗಿ. ಗ್ರಾಮಸೇವಾಸಂಪನ್ನರಾಗಿ. ಗುರುಕುಲಧ್ಯೇಯಬದ್ಧರಾಗಿ, ಉಪಾಧ್ಯಾಯರಾಗಿ ಶ್ರಮಿಸಿದರೂ, ಅವರು ಸಾಹಿತ್ಯ ಸೇವೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಸಂಪಾದಿಸಿದರು. ಅವರ ಕೃತಿ ಒಂದಲ್ಲ, ಎರಡಲ್ಲ. ಹಲವಾರು ದಾರಿಗಳಲ್ಲಿ ಪ್ರವಹಿಸಿದೆ. ಮುಖ್ಯವಾಗಿ ಹಳ್ಳಿಯ ಚಿತ್ರಗಳ ಕಡೆ ಅವರ ಮನಸ್ಸೊಲಿದಿದೆ. 'ಗರುಡಗಂಬದ ದಾಸಯ್ಯ', 'ಹಳ್ಳಿಯ ಹಾಡುಗಳು', 'ನಮ್ಮ ಊರಿನ ರಸಿಕರು', 'ವೈಯ್ಯಾರಿ', 'ಊರ್ವಶಿ', 'ಭಾರತ ಭಾಗ್ಯವಿಧಾತ', ಮುಂತಾದ ಗ್ರಂಥಗಳ ಮೂಲಕ ಅವರು ನಮ್ಮ ರಾಜ್ಯದ ಗ್ರಾಮ ಬಾಂಧವರ ಸಂಸ್ಕೃತಿಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ತಿಳಿಗನ್ನಡದ ಭಾಷೆಯಲ್ಲಿ ನಿರೂಪಿಸಲ್ಪಟ್ಟಿರುವ ಅವರ ಈ ಕೃತಿಗಳಲ್ಲಿ ಸರಳತೆಯ ರೂಪ ಎದ್ದು ಕಾಣುತ್ತದೆ. ಸರಳ, ಮುಗ್ಧರೂಪದ ಗ್ರಾಮಬಾಂಧವರೂ. ಬೆವರು ಸುರಿಸಿ, 'ದುಡಿದು ನಾಡಿನ ಮೇಲ್ಮೆಗಾಗಿ ಯಾವ ರೀತಿ ದುಡಿಯುತ್ತಿದ್ದಾರೆಂಬುವನ್ನು ಸರಸ ಶೈಲಿಯಲ್ಲಿ ನಿರೂಪಿಸಿದ್ದಾರೆ. ಗ್ರಾಮಾಂತರ ವಾಸಿಗಳ ನಿಜಬಂಧುಗಳಾಗಿ ಅವರಂತೆಯೇ ಸರಳವಾದ ಜೀವನಕ್ಕೆ ಮಾರುಹೋಗಿದ್ದಾರೆ. ಅವರ ಕೃತಿಗಳನ್ನು ಓದಿದರೆ ನಮ್ಮ ಗ್ರಾಮಗಳ ನೈಜ ಚಿತ್ರ ಓದುಗರ ಮನಸ್ಸಿನಲ್ಲಿ ಮೂಡಿ. ನಮ್ಮ ಹಳ್ಳಿಗಳು ಯಾವ ರೀತಿ ಸಂಸ್ಕೃತಿ ಆಗರಗಳಾಗಿವೆ ಎಂಬುದು ತಿಳಿಯುತ್ತದೆ.

ನಡೆನುಡಿಗಳಲ್ಲಿ ಅವರು ಅತ್ಯಂತ ಸರಳರು. ಮತ್ತೊಬ್ಬರ ಮನಸ್ಸನ್ನು ಎಂದೂ. ಯಾವ ಬಗೆಯಲ್ಲೂ ನೋಯಿಸಿದವರಲ್ಲ. ಸದಾ ಹಸನ್ಮುಖಿಗಳಾಗಿ, ಸ್ನೇಹಪರರಾಗಿ, ನಿರಾಡಂಬರ ಜೀವಿಗಳಾಗಿ ಕನ್ನಡ ನಾಡಿನ ಸಾಹಿತ್ಯ ಭಕ್ತರಾಗಿದ್ದಾರೆ. ಹಾಸನ ಜಿಲ್ಲೆಯ ಹೆಸರಾಂತ ಲೇಖಕರಾದ ಅ.ನ.ಕೃ.. ಎಸ್. ವಿ. ರಂಗಣ್ಣ. ಎಲ್. ಗುಂಡಪ್ಪ. ರಾಜಾರಾವ್. ಇವರಂತೆಯೇ ಹೆಸರು ಗಳಿಸಿ ನಮ್ಮ ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ. ಇಂತಹವರ ಬಗೆ ಪ್ರಶಂಸಾಪೂರ್ವಕವಾದ ನಾಲ್ಕು ಮಾತುಗಳನ್ನು ಬರೆಯುವುದು ನನ್ನ ಪಾಲಿನ ಭಾಗ್ಯ. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ನೂರು ವರ್ಷಗಳ ಕಾಲ ಬದುಕಿ. ಬಾಳಿ. ನಮ್ಮ ನುಡಿ ಸೇವೆಯನ್ನು ಅಖಂಡವಾಗಿ ಬೆಳೆಸಲಿ. ಪರಮಾತ್ಮನು ಅವರಿಗೆ ಸಕಲ ಸನ್ಮಂಗಳಗಳನ್ನುಂಟುಮಾಡಲಿ.

ಅಪ್ಪಟ ಗಾಂಧೀವಾದಿ

ಕಡಿದಾಳ್ ಮಂಜಪ್ಪ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಎಪ್ಪತ್ತನೆಯ ಹುಟ್ಟುಹಬ್ಬದ ಸವಿ ನೆನಪಿಗಾಗಿ ಅವರಿಗೊಂದು ಗೌರವಗ್ರಂಥವನ್ನು ಅರ್ಪಿಸುವ ನಿಮ್ಮ ಕಾರ್ಯ ಶ್ಲಾಘನೀಯವಾದುದು. ಅವರು ಎಲ್ಲ ದೃಷ್ಟಿಯಿಂದಲೂ ಆ ಗೌರವಕ್ಕೆ ಪಾತ್ರರಾಗಿರುತ್ತಾರೆ.

ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರು ಉತ್ತಮ ಸಾಹಿತಿಗಳು, ಉದ್ದಾಮ ದೇಶಭಕ್ತರು ಮತ್ತು ಅಪ್ಪಟ ಗಾಂಧೀವಾದಿಗಳು. ನಾಡಿನ ಬಿಡುಗಡೆಯ ಹೋರಾಟದಲ್ಲಿ ಅವರು ಮಾಡಿದ ತ್ಯಾಗ ಚಿರಸ್ಮರಣೀಯವಾದುದು. ಅವರು ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆಯಲ್ಲಿದ್ದಾಗ, ವಿದ್ಯಾರ್ಥಿಯಾಗಿದ್ದ ಅವರ ಪುತ್ರ ತಂದೆಯ ಮೇಲ್ಪಂಕ್ತಿಯನ್ನನುಸರಿಸಿ ತಾನೂ ಚಳವಳಿಯಲ್ಲಿ ಧುಮುಕಿ, ಪೊಲೀಸರ ಗುಂಡಿಗೆ ಬಲಿಯಾಗಿ ರಾಷ್ಟ್ರಕ್ಕಾಗಿ ಪ್ರಾಣವನ್ನರ್ಪಿಸಿದ ಹೃದಯವಿದ್ರಾವಕ ಘಟನೆಯನ್ನು ನಾವೆಂದೂ ಮರೆಯುವಂತಿಲ್ಲ.

ಶ್ರೀ ರಾಮಸ್ವಾಮಿ ಅಯ್ಯಂಗಾರರು ಸಾಮಾನ್ಯ ವ್ಯವಸಾಯಗಾರರಾಗಿ, ಚಳವಳಿಗಾರರಾಗಿ, ಶಾಸಕರಾಗಿ ಜೀವನದ ನಾನಾ ಕ್ಷೇತ್ರಗಳಲ್ಲಿ ಅಪಾರವಾದ ಅನುಭವ ಪಡೆದವರು. ತಮ್ಮ ಅಪಾರ ಅನುಭವವನ್ನು ಸಾಹಿತ್ಯದ ಮೂಲಕ ಜನತೆಗೆ ನೀಡುತ್ತಿದ್ದಾರೆ. ಅವರ ಸ್ವಭಾವವೂ ಸರಳ. ಅವರ ಸಾಹಿತ್ಯ ಶೈಲಿಯೂ ಸರಳ. ಅವರ ಗ್ರಂಥಗಳನ್ನು ಜನಸಾಮಾನ್ಯರು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಸಾಹಿತ್ಯ ಮಾನಸಿಕ ಸಂತುಷ್ಟಿಯನ್ನುಂಟುಮಾಡುವುದರ ಜೊತೆಗೆ ಸತ್ಯ, ಮಾನವೀಯತೆ ಮುಂತಾದ ಮೂಲ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಈ ಮೂಲ ಮೌಲ್ಯಗಳಿಗೆ ವ್ಯತಿರಿಕ್ತವಾದುದೆಲ್ಲವೂ ಕ್ರಾಂತಿಕಾರಕವೆಂಬ ಭ್ರಾಂತಿಯನ್ನು ತಾಳಿರುವ ಈ ಕಾಲದಲ್ಲಿ ಶ್ರೀ ರಾಮಸ್ವಾಮಿ ಅಯ್ಯಂಗಾರರು ತಮ್ಮ ಕೃತಿಗಳಲ್ಲಿ ಈ ಮೌಲ್ಯಗಳನ್ನು ಎತ್ತಿ ಹಿಡಿದಿರುತ್ತಾರೆ. ಅವರ ಕೃತಿಗಳಲ್ಲಿ ಆದರ್ಶವಿದೆ ಮತ್ತು ಓದುಗರಿಗೆ ಸಂದೇಶವಿದೆ. ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರು ಶತಾಯುವಾಗಿ ಬಾಳಿ ಇನ್ನೂ ಹೆಚ್ಚಿನ ಸಾಹಿತ್ಯಸೇವೆಯನ್ನು ಮಾಡಲೆಂದು ಹಾರೈಸುತ್ತೇನೆ.

ಶುಭಾಶಯಗಳು

ಬಿ. ಡಿ. ಜತ್ತಿ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರ ಎಪ್ಪತ್ತನೆಯ ಜನ್ಮದಿನದ ಸಮಾರಂಭದ ಸಂಗತಿಯನ್ನು ತಿಳಿದು ನನಗೆ ಸಂತೋಷವಾಯಿತು.

ಶ್ರೀ ರಾಮಸ್ವಾಮಿ ಅಯ್ಯಂಗಾರರು ಮೇಧಾವಿಯಾದ ಪ್ರತಿಭಾವಂತರು : ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅವರ ಕೊಡುಗೆ ದೊಡ್ಡದು. ಅವರ ಸಾಹಿತ್ಯ ಅನೇಕರಿಗೆ ಸ್ಫೂರ್ತಿಯನ್ನೊದಗಿಸಿದೆ.

ಅವರಿಗೆ ನನ್ನ ಶುಭಾಶಯಗಳು.

ಅನುಬಂಧ

ಗೊರೂರರ ಜೀವನದ ಕೆಲವು ಮುಖ್ಯ ವರ್ಷಗಳು

೧೯೦೪ ಜನನ : ಜುಲೈ, ೪

೧೯೨೧ ಗಾಂಧೀಜಿಯವರೊಡನೆ ಭೇಟಿ

೧೯೨೩ ಮದುವೆ

೧೯೩೦ 'ಭಾರತದ ಸ್ವಾತಂತ್ರ್ಯ' ಮೊದಲ ಪುಸ್ತಕದ ಪ್ರಕಟಣೆ
'ಹಳ್ಳಿಯ ಚಿತ್ರಗಳು' ಪ್ರಕಟಣೆ

೧೯೩೨ 'ನಮ್ಮ ಊರಿನ ರಸಿಕರು' ಪ್ರಕಟಣೆ

೧೯೩೮ 'ಹಳ್ಳಿಯ ಹಾಡುಗಳು' ಮತ್ತು
'ಹಳ್ಳಿಯ ಬಾಳು' ಗ್ರಂಥಗಳ ಪ್ರಕಟಣೆ

೧೯೪೦ ಮದ್ರಾಸ್ ವಿಶ್ವವಿದ್ಯಾನಿಲಯದ ವಿದ್ವಾನ್ ಪರೀಕ್ಷೆ

೧೯೪೨ ಜೈಲು

೧೯೪೭ 'ಮೆರವಣಿಗೆ' ಕಾದಂಬರಿ ಪ್ರಕಟಣೆ
ಮತ್ತೆ ಜೈಲು
ಮಗ ಶ್ರೀ ರಾಮಚಂದ್ರ ಪೊಲೀಸರ ಗುಂಡಿನೇಟಿನಿಂದ ತೀರಿಕೊಂಡದ್ದು

೧೯೫೨ ವಿಧಾನ ಪರಿಷತ್ತಿನ ಸದಸ್ಯತ್ವ

೧೯೫೪ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯತ್ವ

೧೯೬೭ ಮೊದಲನೆ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ (ತರೀಕೆರೆ)ದ ಅಧ್ಯಕ್ಷತೆ

೧೯೬೯ ರಾಜ್ಯ ಸಾಹಿತ್ಯ ಅಕಾದೆಮಿ ಗೌರವ

೧೯೭೧ ಹಾಸನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

೧೯೭೩ 'ಗೊರೂರು ಗೌರವಗ್ರಂಥ'ದ ಪ್ರಕಟಣೆ

ಗೊರೂರರ ಗ್ರಂಥಗಳು*

ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ: ಮೋ. ಕ. ಗಾಂಧಿ; ಭಾಗ ೧. xvi + ೩೯೧; ಭಾಗ ೨. viii + ೩೭೪ ; ೧೯೬೨. ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಶಾಖೆ, ಮೈಸೂರು
ಅನುವಾದ

ಉಸುಬು: iv + ೧೮೫ ; ೧೯೫೪. ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ
ಹದಿನೈದು ಕಥೆಗಳು

ಊರ್ವಶಿ (ಎರಡನೆಯ ಮುದ್ರಣ): vi + ೩೨೫ + ೭ ; ೧೯೭೧. ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು
ಕಾದಂಬರಿ

ಕಥೆಗಳು ಮತ್ತು ವಿನೋದ ಚಿತ್ರಗಳು: viii + ೪೧೦ ; ೧೯೭೨ ; ಜನಮಿತ್ರ ಪ್ರಕಾಶನ, ಹಾಸನ
ಮೂವತ್ತು ಕಥೆಗಳು ಮತ್ತು ಪ್ರಬಂಧಗಳು

ಕನ್ಯಾಕುಮಾರಿ ಮತ್ತು ಇತರ ಕಥೆಗಳು: vi + ೧೪೫ ; ೧೯೬೬. ಶ್ರೀ ಲಕ್ಷ್ಮೀ ಬುಕ್ ಹೌಸ್, ಕೃಷ್ಣಮೂರ್ತಿಪುರಂ, ಮೈಸೂರು-೪
ಹತ್ತು ಕಥೆಗಳು

ಕಮ್ಮಾರ ವೀರಭದ್ರಾಚಾರಿ: iv + ೨೯೭ : ಸತ್ಯಶೋಧನ ಪ್ರಕಟಣ ಮಂದಿರ, ಕೋಟೆ, ಬೆಂಗಳೂರು ನಗರ
ಮೂವತ್ತು ಕಥೆಗಳು

ಕೊನಷ್ಟು ಕತೆಗಳು: iv + ೨೧೧ ; ೧೯೫೨. ಸತ್ಯಶೋಧನ ಪ್ರಕಟಣ ಮಂದಿರ, ಕೋಟೆ, ಬೆಂಗಳೂರು ನಗರ
ಅನುವಾದಿತ ಹದಿನೆಂಟು ಕಥೆಗಳು

ಕ್ರೌಂಚಪಥ: ವಿ. ಎಸ್. ಖಾಂಡೇಕರ್ ; viii + ೩೨೪ ; ೧೯೫೭. ಸತ್ಯಶೋಧನ ಪ್ರಕಟಣ ಮಂದಿರ, ಕೋಟೆ, ಬೆಂಗಳೂರು
ಅನುವಾದಿತ ಕಾದಂಬರಿ

* ಈ ಪಟ್ಟಿ ಸಂಪೂರ್ಣವಾದುದಲ್ಲ

ಗರುಡಗಂಬದ ದಾಸಯ್ಯ : ೧೮೪ ; ೧೯೬೫. ಸತ್ಯಶೋಧನ ಪ್ರಕಟಣ ಮಂದಿರ, ಕೋಟೆ, ಬೆಂಗಳೂರು
ಹನ್ನೆರಡು ಪ್ರಬಂಧಗಳು

ಗೋಪುರದ ಬಾಗಿಲು : iv+೨೩೮; ೧೯೬೪. ರಾವ್ ಅಂಡ್ ಸನ್ಸ್, ೨೯ನೆಯ ಕ್ರಾಸ್, ೮ನೆಯ ಬ್ಲಾಕ್, ಜಯನಗರ, ಬೆಂಗಳೂರು-೧೧
ಹತ್ತೊಂಬತ್ತು ಕಥೆಗಳು

ಜಗತ್ತಿನ ಮಹದ್ವ್ಯಕ್ತಿಗಳು : iv+೧೨೪ ; ೧೯೫೫. ಮಾರುತಿ ಪುಸ್ತಕ ಮಂದಿರ, ಅವೆನ್ಯೂ ರಸ್ತೆ, ಬೆಂಗಳೂರು-೨
ಜೀವನಚಿತ್ರಗಳು

ಜಗದ್ಗುರುಗಳ ದಿವ್ಯಬೋಧೆ: (ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಅವರ ಪ್ರವಚನಗಳ ಭಾಷಾಂತರ) ; xvii+೨೭೦ ; ೧೯೬೭. ಹೇಮಾವತೀ ಪ್ರಕಾಶನ, ಗೊರೂರು, ಹಾಸನ ಜಿಲ್ಲೆ
ಅನುವಾದ

ತಾಯ್ನುಡಿಯಲ್ಲಿ ಶಿಕ್ಷಣ : ಶ್ರೀಮನ್ ನಾರಾಯಣ ಅಗರ್‌ವಾಲ ; iv+೩೭ ; ? ; ರಾಷ್ಟ್ರೀಯ ಸಾಹಿತ್ಯ ಸಮಿತಿ, ಗೊರೂರು
ಅನುವಾದ

ಪಾಶ್ಚಾತ್ಯರ ಪುರಾತನ ಕಥೆಗಳು : iv+೧೩೭+೮; ೧೯೩೬. ಪ್ರೊಗ್ರೆಸ್ ಬುಕ್ ಸ್ಟಾಲ್, ಮೈಸೂರು
ಆರು ಅನುವಾದಿತ ಕಥೆಗಳು

ಪುನರ್ಜನ್ಮ (ಮೊದಲ ಆವೃತ್ತಿಯ ಹೆಸರು 'ವತ್ಸಲೆ' ; ಪ್ರಕಾಶಕರು : ಕರ್ನಾಟಕ ಸಂಘ, ಶಿವಮೊಗ್ಗ, ಪ್ರಕಟಣೆಯ ವರ್ಷ : ೧೯೪೪ ಅಥವಾ ೪೫ (ಲೇಖಕರ ನೆನಪಿನ ಆಧಾರದ ಮೇಲೆ) : iv+೧೧೪ ; ೧೯೫೦ ಅಥವಾ ೫೧ (ಲೇಖಕರ ನೆನಪಿನ ಆಧಾರದ ಮೇಲೆ) ; ಮಾರುತಿ ಪುಸ್ತಕ ಮಂದಿರ, ಅವೆನ್ಯೂ ರಸ್ತೆ, ಬೆಂಗಳೂರು
ಕಾದಂಬರಿ

ಪೂರ್ಣ ಸ್ವದೇಶಿ : ಮಹಾತ್ಮಾ ಗಾಂಧಿ ; xv+೨೦೪ ; ೧೯೪೧. ಮೈಸೂರು ಗ್ರಾಮಸೇವಾ ಸಂಘ, ಗೊರೂರು
ಅನುವಾದ

ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು : ೧೬೦ ; ೧೯೭೨. ಹೇಮಾವತೀ ಪ್ರಕಾಶನ, ಗೊರೂರು
ಒಂಬತ್ತು ಪ್ರಬಂಧಗಳು

ಚಿತ್ರ ಕವನ : ೧೫೨ ; ೧೯೪೭, ೧೯೫೨ ; ೧೯೬೦. ಕಾವ್ಯಾಲಯ, ಮೈಸೂರು
ಹದಿಮೂರು ಕಥೆಗಳು

ಭಕ್ತಿಯೋಗ : ಸ್ವಾಮಿ ವಿವೇಕಾನಂದ ; ೮೦ ಪುಟಗಳು ಮಾತ್ರ ಲಭ್ಯವಾಗಿವೆ. ಗೊರೂರರ ಬಳಿ ಇರುವ ಏಕೈಕ ಉಪಲಬ್ಧ ಪ್ರತಿಯಲ್ಲಿ ; ೧೯೪೦ (ಟೀಕಾಕರ ನೆನಪಿನ ಆಧಾರದ ಮೇಲೆ).
ಲಲಿತ ಸಾಹಿತ್ಯಮಾಲೆ, ಧಾರವಾಡ
ಅನುವಾದ

ಭಗವಾನ್ ಕೌಟಿಲ್ಯ : ಕೆ. ಎಂ. ಮುನ್ಷಿ ; iv+೨೮೫ ; ೧೯೫೨, ೧೯೬೦. ಭಾರತಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪
ಅನುವಾದಿತ ಕಾದಂಬರಿ

ಭಾರತ ಭಾಗ್ಯವಿಧಾತ : xii+೫೬೧+೨೩ ; ೧೯೫೬. ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು-೨
ಗಾಂಧೀಜಿಯನ್ನು ಕುರಿತ ಲೇಖನಗಳು

ಭಾಷಣಗಳು ಮತ್ತು ಹೇಳಿಕೆಗಳು (ಭಾಗ ೧) : ಮೋ.ಕ. ಗಾಂಧಿ ; xxviii+೩೫೫ ; ೧೯೬೨. ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಶಾಖೆ, ಮೈಸೂರು
ಅನುವಾದ

ಮಕ್ಕಳ ಪೋಷಣೆ : ಚಕ್ರವರ್ತಿ ರಾಜಗೋಪಾಲಾಚಾರ್ಯರು ; ಪುಟ ii+೩೮ ; ೧೯೫೨. ರಾಮಚಂದ್ರ ಸ್ಮಾರಕ ಗ್ರಂಥಮಾಲೆ, ಗೊರೂರು
ಅನುವಾದ

ಮದ್ಯಪಾನದಿಂದ ವಿಮೋಚನೆ : xviii+೧೬೦ ; ೧೯೫೭. ಹೇಮಾವತೀ ಪ್ರಕಾಶನ ಮಂದಿರ, ಗೊರೂರು
ಸಂಗ್ರಹ-ಅನುವಾದ

ಮಲೆನಾಡವರು : ಕೌಂಟ್ ಲಿಯೋ ಟಾಲ್‌ಸ್ಟಾಯ್ ; iv+೨೧೪+೬ ; ೧೯೪೭. ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು
ಅನುವಾದಿತ ಕಾದಂಬರಿ

ಮಹಾತ್ಮಾ ಗಾಂಧಿಯವರ ದಕ್ಷಿಣಯಾತ್ರೆ (೨೧ ೧ ೧೯೪೬ರಿಂದ ೫ ೨ ೧೯೪೬) : vi+೧೮೨ ; ೧೯೪೯. ಮಿಂಚಿನಬಳ್ಳಿ, ಧಾರವಾಡ
ಪ್ರವಾಸ-ಚರಿತ್ರೆ

ಮಹಾದೇವ ದೇಸಾಯಿಯವರ ಕೃತಿಗಳು : iv+೧೮೦ ; ೧೯೫೪. ಮಾರುತಿ ಪುಸ್ತಕ ಮಂದಿರ, ಅವೆನ್ಯೂ ರಸ್ತೆ, ಬೆಂಗಳೂರು-೨
ಅನುವಾದ

ಮೆರೆವಣಿಗೆ: viii+೭೯೯ ; ೧೯೪೭. ಸತ್ಯಶೋಧನ ಪ್ರಕಟನಾಲಯ, ಕೋಟೆ, ಬೆಂಗಳೂರು
ಕಾದಂಬರಿ

ಮೌಲಾನಾ ಅಬುಲ್ ಕಲಾಂ ಆಜಾದ್: ೧೦೮; ೧೯೫೩ (ಎರಡನೆಯ ಮುದ್ರಣ). ಮಾರುತಿ ಪುಸ್ತಕ ಮಂದಿರ, ಅವೆನ್ಯೂ ರಸ್ತೆ, ಬೆಂಗಳೂರು-೨
ಜೀವನ ಚಿತ್ರ

ರಾಜನರ್ತಕಿ: ರಾಮಚಂದ್ರ ಠಾಕೂರ್; xxiv+೨೬೨; ೧೯೬೦. ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪
ಅನುವಾದಿತ ಕಾದಂಬರಿ

ವೈಯ್ಯಾರಿ xii+೨೬೧; ೧೯೬೬ (ನಾಲ್ಕನೆಯ ಮುದ್ರಣ): ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು
ಹದಿಮೂರು ಕಥೆಗಳು

ಸತೀ ಕಸ್ತೂರಿ ಬಾ: vi+೫೦, ೧೯೪೪. ರಾಷ್ಟ್ರೀಯ ಸಾಹಿತ್ಯ ಸಮಿತಿ, ಗೊರೂರು
ಜೀವನಚಿತ್ರ

ಸತ್ಯ-ಅಹಿಂಸೆ: ಮೋ. ಕ. ಗಾಂಧೀ; xxviii+೪೮೨; ೧೯೫೮. ಗಾಂಧೀ ಸ್ಮಾರಕ ನಿಧಿ, ಕರ್ನಾಟಕ ಶಾಖೆ, ಮೈಸೂರು
ಅನುವಾದ

ಸಾಹಿತ್ಯದ ಜೀವಾಳ (ಷೋಪನ್‌ಹಾರನ ಪ್ರಬಂಧಗಳು): ಡೆಮಿ iv+೪೭; ೧೯೪೨. ಕಾವ್ಯಾಲಯ, ಮೈಸೂರು
ಅನುವಾದ

ಸಾಹಿತ್ಯ ರಶ್ಮಿ: iv+೩೯೪; ೧೯೬೩. ಸುದರ್ಶನ ಪ್ರಕಾಶನ, ತಾರಾ ನಿವಾಸ, ತಿಪಟೂರು
ಇಪ್ಪತ್ತನಾಲ್ಕು ಸಾಹಿತ್ಯ ವಿಮರ್ಶೆಯ ಪ್ರಬಂಧಗಳು

ಸ್ವಾತಂತ್ರ್ಯವೇ ಧರ್ಮ: iv+೩೦೦; ?. ರಾಷ್ಟ್ರೀಯ ಸಾಹಿತ್ಯ ಸಮಿತಿ, ಗೊರೂರು
ಅನುವಾದಿತ ಲೇಖನಗಳು

ಶರೀರ ಸಾಧನಾ ಯೋಗ ಅಥವಾ ಸೌಖ್ಯದ ಗುಟ್ಟು: ಎಸ್. ಸುಂದರಂ; viii+೧೫೪; ೧೯೩೧. ಬ್ರಹ್ಮಚರ್ಯ ಪ್ರಕಟನಾಲಯ, ಗುರುಕುಲಾಶ್ರಮ, ಕೆಂಗೇರಿ, ಬೆಂಗಳೂರು
ಅನುವಾದ

ಶಿವರಾತ್ರಿ: iv+೧೫೦; ೧೯೪೭, ೧೯೪೮, ೧೯೬೮. ಕಾವ್ಯಾಲಯ, ಮೈಸೂರು
ಹನ್ನೆರಡು ಕಥೆಗಳು

ಹಳ್ಳಿಯ ಚಿತ್ರಗಳು ಮತ್ತು ಇತರ ಪ್ರಬಂಧಗಳು (ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು ಮತ್ತು ಬೈಲಹಳ್ಳಿ ಸರ್ವೆ — ಈ ಮೂರು ಕೃತಿಗಳನ್ನು ಒಳಗೊಂಡಿದೆ): iv + ೩೪೮ ; ೧೯೭೧. ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು
ಪ್ರಬಂಧಮಾಲೆ

ಹಳ್ಳಿಯ ಬಾಳು: iv + ೧೫೬ ; ೧೯೪೩, ೧೯೪೮, ೧೯೫೩, ೧೯೬೩. ಕಾವ್ಯಾಲಯ, ಮೈಸೂರು
ಒಂದು ವಿವೇಚನೆ

ಹಳ್ಳಿಯ ಹಾಡುಗಳು: ೧೮೦ ; ೧೯೩೮, ೧೯೫೩ ; ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು
ಜನಪದ ತ್ರಿಪದಿಗಳ ಸಂಗ್ರಹ

ಹೇಮಾವತಿ (ಮೊದಲ ಮುದ್ರಣ ೧೯೪೮ ; ಉಷಾ ಸಾಹಿತ್ಯ ಮಾಲೆ) : iv + ೩೪೪ ; ೧೯೬೩. ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು
ಕಾದಂಬರಿ

ಹೇಮಾವತಿಯ ತೀರದಲ್ಲಿ ಮತ್ತು ಇತರ ಪ್ರಬಂಧಗಳು : viii + ೧೩೮ ; ೧೯೬೬. ಶ್ರೀ ಲಕ್ಷ್ಮೀ ಬುಕ್ ಹೌಸ್, ಕೃಷ್ಣಮೂರ್ತಿಪುರಂ, ಮೈಸೂರು-೪
ಒಂಬತ್ತು ಪ್ರಬಂಧಗಳು

‘ಗೊರೂರು ಗೌರವಗ್ರಂಥ’ದ ಲೇಖನದಾರರು

ಎಂ. ವಿ. ಸೀತಾರಾಮಯ್ಯ : ಯು.ಜಿ.ಸಿ. ಸಂಶೋಧನ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ

ದೇ. ಜವರೇಗೌಡ : ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪ್ರಭುಶಂಕರ (ಡಾ) : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ನಂ. ತಪಸ್ವೀಕುಮಾರ್ : ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎನ್. ಬೋರಲಿಂಗಯ್ಯ : ಕನ್ನಡ ಅಧ್ಯಾಪಕರು, ಯುವರಾಜ ಕಾಲೇಜು, ಮೈಸೂರು

ಪ. ವಿ. ಚಂದ್ರಶೇಖರ: ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಚ್. ಎಂ. ಶಂಕರನಾರಾಯಣ ರಾವ್ : ಕನ್ನಡ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯರು, ಶಾರದಾವಿಲಾಸ ಕಾಲೇಜು, ಮೈಸೂರು

ಎಚ್. ಜಿ. ಸೂರ್ಯನಾರಾಯಣ ರಾವ್ : ಸಂಪಾದಕರು, ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ವಿಭಾಗ, ಪ್ರಸಾರಾಂಗ, ಮೈಸೂರು

ಬಿ. ನಂ. ಚಂದ್ರಯ್ಯ : ಕನ್ನಡ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

ಮ. ಸು. ಕೃಷ್ಣಮೂರ್ತಿ (ಡಾ) : ಅಧ್ಯಾಪಕರು, ಹಿಂದೀ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಎಸ್. ಪಿ. ಪಾಟೀಲ : ಸಂಶೋಧನ ಸಹಾಯಕರು, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಎಲ್. ಎಸ್. ಶೇಷಗಿರಿ ರಾವ್ : ಅಧ್ಯಾಪಕರು, ಇಂಗ್ಲಿಷ್ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಬಿ. ಎಸ್. ರುಕ್ಕಮ್ಮ : ಕನ್ನಡ ಅಧ್ಯಾಪಕರು, ಸರ್ಕಾರೀ ಕಾಲೇಜು, ಮಂಡ್ಯ

ಎಂ. ಸಿ. ವಸಂತಕುಮಾರ್ : ಕನ್ನಡ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

ಎನ್. ಪ್ರಹ್ಲಾದ ರಾವ್ : ಸಂಯೋಜಕ ಸಂಪಾದಕರು, ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಜಿ. ವರದರಾಜ ರಾವ್ (ಡಾ) : ರೀಡರ್, ಕನ್ನಡ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಪಿ. ವಿ. ಕೆ. (ಪಿ. ವಿ. ಕೃಷ್ಣಕುಮಾರ್) : ರೀಡರ್, ಕನ್ನಡ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಎಚ್. ಎಂ. ಚನ್ನಯ್ಯ : ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಎಚ್. ತಿಪ್ಪೇರುದ್ರಸ್ವಾಮಿ (ಡಾ): ನಿರ್ದೇಶಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕೆ. ವೆಂಕಟರಾಮಪ್ಪ : ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ರೀಡರ್, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ, ಮೈಸೂರು

ಪ್ರಧಾನ್ ಗುರುದತ್ತ : ರೀಡರ್, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಎಸ್. ಲಕ್ಷ್ಮೀನಾರಾಯಣ : ಅಧ್ಯಾಪಕರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಟಿ. ವಿ. ವೆಂಕಟಾಚಲ ಶಾಸ್ತ್ರೀ (ಡಾ) : ಅಧ್ಯಾಪಕರು, ಕನ್ನಡ ವಿಭಾಗ. ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಶಾಸ ಐತಾಳ (ಎಚ್. ಗಣೇಶ ಐತಾಳ) : ಉಪಸಹಾಯಕ ಭಾಷಾಂತರಕಾರರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ರಾಗೌ (ರಾಮೇಗೌಡ) : ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಹ. ಕ. ರಾಜೇಗೌಡ : ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಎಂ. ರಾಮಕೃಷ್ಣ : ಕನ್ನಡ ಅಧ್ಯಾಪಕರು, ಯುವರಾಜ ಕಾಲೇಜು, ಮೈಸೂರು

ಉ. ಕಾ. ಸುಬ್ಬರಾಯಾಚಾರ್ : ವಿದ್ಯಾರ್ಥಿ ಕ್ಷೇಮಪಾಲರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅನುಪಮಾ ನಿರಂಜನ (ಡಾ) : ಕಥೆಗಾರರು, ಕಾದಂಬರಿಕಾರರು, ವೈದ್ಯರು, ಬೆಂಗಳೂರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ : ಮಾನಸಿಕ ಸಂಪಾದಕರು, ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಹಾ. ಮಾ. ನಾಯಕ (ಡಾ) : ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ; ಪ್ರಾಧ್ಯಾಪಕರು ಮತ್ತು ಕನ್ನಡ ಹಾಗೂ ಭಾಷಾವಿಜ್ಞಾನ ವಿಭಾಗ ಮುಖ್ಯರು

'ಗೊರೂರು ಗೌರವಗ್ರಂಥ'ದ ಲೇಖನದಾರರು

ಜೀ. ಶಂ. ಪರಮಶಿವಯ್ಯ (ಡಾ): ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಚ್. ಕೆ. ರಾಮಚಂದ್ರಮೂರ್ತಿ: ಸಂಪಾದಕರು, ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ವಿಭಾಗ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

ಸುಧಾಕರ: ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ಮಿರ್ಜಿ ಅಣ್ಣಾರಾಯ: ಶಾಂತಿಸೇವಾಸದನ, ಸೇಡಬಾಳ, ಬೆಳಗಾವಿ ಜಿಲ್ಲೆ

ಕುವೆಂಪು: ಕರ್ಣಾಟಕದ ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು, 'ಉದಯರವಿ', ವಿ. ವಿ. ಮೊಹಲ್ಲಾ, ಮೈಸೂರು

ಡಿ. ವಿ. ಗುಂಡಪ್ಪ (ಡಾ): ಡಾ. ಡಿ.ವಿ.ಜಿ. ರಸ್ತೆ, ಬೆಂಗಳೂರು

ಎಸ್. ವಿ. ರಂಗಣ್ಣ (ಡಾ): ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಕೃಷ್ಣಮೂರ್ತಿಪುರಂ, ಮೈಸೂರು

ಶಂಬಾ ಜೋಷಿ (ಡಾ): ಸಾಧನಕೇರಿ, ಧಾರವಾಡ

ಪು. ತಿ. ನರಸಿಂಹಾಚಾರ್ (ಡಾ): ಜಯಲಕ್ಷ್ಮೀಪುರಂ, ಮೈಸೂರು

ವಿ. ಸೀತಾರಾಮಯ್ಯ: ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರು, ಚಾಮರಾಜಪೇಟೆ, ಬೆಂಗಳೂರು

ಶಿವರಾಮ ಕಾರಂತ (ಡಾ): ಪುತ್ತೂರು, ದ.ಕ.

ವಿ. ಕೃ. ಗೋಕಾಕ (ಡಾ): ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿಗಳು, ಬೃಂದಾವನ, ವೈಟ್‌ಫೀಲ್ಡ್, ಬೆಂಗಳೂರು

ಶ್ರೀರಂಗ: ನಾಟಕಕಾರ ಆದ್ಯ ರಂಗಾಚಾರ್, ಮಲ್ಲೇಶ್ವರಂ, ಬೆಂಗಳೂರು

ರಾವ ಬಹಾದ್ದೂರ: ಕಾದಂಬರಿಕಾರ ಆರ್. ಬಿ. ಕುಲಕರ್ಣಿ, ಜಮಖಂಡಿ

ಕೃಷ್ಣಮೂರ್ತಿ ಪುರಾಣಿಕ: ಸಾಹಿತ್ಯಸೇವಾಮಂದಿರ, ಗೋಕಾಕ, ಬೆಳಗಾಮ್ ಜಿಲ್ಲೆ

ಸಿಂಪಿ ಲಿಂಗಣ್ಣ: ಅರವಿಂದ ಗ್ರಂಥಮಾಲೆ, ಚಡಚಣ, ಬಿಜಾಪುರ ಜಿಲ್ಲೆ

ಎಸ್. ಎಲ್. ಭೈರಪ್ಪ (ಡಾ): ರೀಡರ್, ಪ್ರಾದೇಶಿಕ ಶಿಕ್ಷಣ ಕಾಲೇಜು, ಮೈಸೂರು

ಬಿ. ಶಿವಮೂರ್ತಿಶಾಸ್ತ್ರಿ: ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು, ರಾಜಾಜಿ ನಗರ, ಬೆಂಗಳೂರು

ಸಿದ್ಧಯ್ಯ ಪುರಾಣಿಕ: ಲೇಬರ್ ಕಮಿಷನರ್, ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು

ಕೆ. ಎಸ್. ನರಸಿಂಹಸ್ವಾಮಿ: ಜಯನಗರ, ಬೆಂಗಳೂರು

ನಿರಂಜನ: 'ಜ್ಞಾನಗಂಗೋತ್ರಿ' ಮಕ್ಕಳ ವಿಶ್ವಕೋಶದ ಪ್ರಧಾನ ಸಂಪಾದಕರು, ಬೆಂಗಳೂರು

ಚೆನ್ನವೀರ ಕಣವಿ: ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ

ಎಸ್. ವಿ. ಪರಮೇಶ್ವರಭಟ್ಟ: ಪ್ರಾಧ್ಯಾಪಕರು ಮತ್ತು ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಮಂಗಳಗಂಗೋತ್ರಿ, ಮಂಗಳೂರು

ಜಿ. ನಾರಾಯಣ: ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರು, ಬೆಂಗಳೂರು

ರಂ. ಶ್ರೀ ಮುಗಳಿ (ಡಾ): ಬೆಂಗಳೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರು, ರಾಜಾಜಿನಗರ, ಬೆಂಗಳೂರು

ಸಿದ್ದವನಹಳ್ಳಿ ನಿಜಲಿಂಗಪ್ಪ: ಮೈಸೂರು ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು

ವೀರೇಂದ್ರ ಪಾಟೀಲ: ರಾಜ್ಯಸಭಾ ಸದಸ್ಯರು; ಮೈಸೂರು ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು

ಕಡಿದಾಳ್ ಮಂಜಪ್ಪ: ಮೈಸೂರು ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು

ಬಿ. ಡಿ. ಜತ್ತಿ: ಒರಿಸ್ಸಾದ ರಾಜ್ಯಪಾಲರು; ಮೈಸೂರು ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು

ಕನ್ನಡ ಸಾಹಿತ್ಯಕ್ಕೆ ಆಕರ್ಷಕವಾದ ಹಾಸ್ಯ ಮುಖವನ್ನು ಜೋಡಿಸಿದ್ದು ಗೊರೂರರ ಒಂದು ಅದ್ಭುತ ಸಾಧನೆ. 'ಮುಟ್ಟಿದರೆ ಮುನಿ'ಯುವ ನಮ್ಮ ಸಾಮಾಜಿಕ ಪರಿಸರದಲ್ಲಿ ಗೊರೂರರು ಎಲ್ಲರನ್ನೂ ಕಂಡು ನಕ್ಕಿದ್ದಾರೆ; ಎಲ್ಲರೂ ಒಬ್ಬರನ್ನೊಬ್ಬರು ನೋಡಿಕೊಂಡು ನಗುವಂತೆ ಮಾಡಿದ್ದಾರೆ. ತಮ್ಮದೇ ಸಮಾಜವನ್ನೂ ಗೇಲಿ ಮಾಡಲು ಗೊರೂರರು ಹಿಂದೆಗೆಯಲಿಲ್ಲ. ಗೊರೂರರ ತಿಳಿಹಾಸ್ಯಕ್ಕೆ ಗೇಲಿಯೊಂದೇ ಕಾರಣವಲ್ಲ. ಅದರ ಹಿಂದೆ ಯಾವಾಗಲೂ ಸಹಾನುಭೂತಿ, ಮರುಕ, ಅನುಕಂಪೆಗಳಿರುತ್ತವೆ. ಅವರು ಸೃಷ್ಟಿಸಿರುವ ರಸಿಕ ಪ್ರಪಂಚದಲ್ಲಿನ ವ್ಯಕ್ತಿಗಳು ಬಗೆಬಗೆಯವರು : ಹಜಾಮರು, ಹಾರುವರು, ಬೆಸ್ತರು, ಸಾಬರು, ದಾಸರು, ವಿದ್ಯಾವಂತರು, ಅನಕ್ಷರಸ್ಥರು, ಉದಾರಿಗಳು, ಲೋಭಿಗಳು. ಎಷ್ಟೊಂದು ಜನ, ಎಷ್ಟೊಂದು ಥರ. ಇವರೆಲ್ಲರನ್ನೂ ನಾವು ದಿನವೂ ನೋಡುತ್ತೇವೆ. ಪ್ರತಿಯೊಂದು ಊರಿನಲ್ಲೂ ಇಂಥವರು ಗುಂಪು ಗುಂಪಾಗಿದ್ದಾರೆ. ಆದರೆ ಅವರನ್ನು ನಾವು ಗೊರೂರರ ಕಣ್ಣಿಂದ ಕಾಣುವುದು ಸಾಧ್ಯವಾಗದಿರುವುದರಿಂದ ಅವರೆಲ್ಲ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳುತ್ತಾರೆ. 'ಗೊರೂರುತನ' ಒಂದು ಮಂತ್ರಶಕ್ತಿ. ಅದು ಸಾಮಾನ್ಯರನ್ನೂ ಅಸಾಮಾನ್ಯರನ್ನಾಗಿಸುತ್ತದೆ.

ಪ್ರತಿಗಳು ದೊರೆಯುವ ಸ್ಥಳ :

ಶಾರದಾ ಮಂದಿರ
ರಾಮಯ್ಯರ್ ರಸ್ತೆ
ಮೈಸೂರು–೪

